ನಂ. 13802—ಲೋ. ಬೋ. ಪಿ. 645, ಸನ್ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ IIನೇ ನಂಬರ್ ರೆಗ್ಯುಲೇಷನಿನ 2ನೇ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ, 1898ನೇ ಫೆಬ್ರವರಿ 10ನೇ ಮರ್ಸ್ಕಂ 9384—ಮಿ. ಫೈ. 21—96ನೇ ನಂಬರ್ ಇಸ್ತಿಹಾರ್ನಾಮೆಯೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ನಿಯಮಗಳಲ್ಲಿ ವಿಧಿಸಿರುವ ಅಜಮಾಯಿಷಿ ಪದ್ಧತಿಯು 1903ನೇ ಏಪ್ರೈಲ್ ಗುರ್ರೇ ತಾರೀಖಿನಾರಭ್ಯ ಮೈಸೂರ ಷಹರಿನಲ್ಲಿ ಜಾರೀಲಿ ಬರತಕ್ಕದ್ದು.

ತಾರೀಖು 31ನೇ ಮಾರ್ಚಿ 1903.

ನಂ. 14473—ಲೋ. ಬೋ. (ಪಿ) 686, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ಮತ್ತು ಉತ್ಸವಗಳಿಗೆ ರೋಗತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟನವರು ಅಡ್ಡಿಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವಲಾಗಾಯತು.	ಯಾವ ವರಿವಿಗೆ.	
ಮೊಹರಂ ಉತ್ಸವ.	ವಾನಿಯಂಬಾಡಿ	ತಿರುಪತ್ತೂರು.	ಸೇಲಂ ..	24—3—03	9—4—03	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 310 ಪಿ., ತಾ|| 20-3-03
ಮಾರ್ಗಬಂಧುಸ್ವಾಮಿಯ ಬ್ರಹ್ಮೋತ್ಸವ.	ವಿರಿಂಚಿಪುರಂ	ವೇಲೂರು	ಉತ್ತರ ಆರ್ಕಾಡ	26—3—03	10—4—03	ಡಿಟೋ ನಂ. 312—ಪಿ., ತಾ|| 24—3—03.
ಅಮೃತವಲ್ಲಿ ಕಾರ್ಜನಸ್ವಾಮಿಯ ರಥೋತ್ಸವ.	ಮುತ್ತುಗಾನಪಲ್ಲಿ	ಹೊಸೂರು	ಸೇಲಂ ...	3—4—03	13—4—03	ಡಿಟೋ ನಂ. 314-ಪಿ., ತಾ|| 24—3—03.

ತಾರೀಖು 31ನೇ ಮಾರ್ಚಿ 1903.

ನಂ. 14474—ಲೋ. ಬೋ. (ಪಿ) 687, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರ ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನಮೆಂಟನವರು ಅಡ್ಡಿಪಡಿಸುತ್ತಾರೆ:—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ಮತ್ತು ಸ್ಟೇಷನ್‌ಗಳು.			ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	ಸ್ಟೇಷನ್‌ಗಳು.	
ಮಾರ್ಗಬಂಧುಸ್ವಾಮಿಯ ಬ್ರಹ್ಮೋತ್ಸವ.	ವಿರಿಂಚಿಪುರಂ	ವೇಲೂರು	ಉತ್ತರ ಆರ್ಕಾಡು	26—3—03	10—4—03	ಮದರಾಸು ರೈಲ್ವೆಯಲ್ಲಿರುವ ಕಾಟಪಾಡಿ, ವಾಲಾಜಾ ರೋಡು, ತಿರುವಲಂ, ಲಟ್ಟೇರಿ, ವಿರಿಂಚಿಪುರಂ, ಕಾವನೂರು, ಗುಡಿಯಾತಂ, ವಲತೂರು ಮತ್ತು ಮೈಲಪಟ್ಟಿ, ದಕ್ಷಿಣ ಇಂಡಿಯನ್ ರೈಲ್ವೆಯಲ್ಲಿರುವ ಕಾಟಪಾಡಿ, ಚಿತ್ತೂರು, ರಾಮಪುರಂ, ವೇಲೂರು, ಕನಿಯಾಂಬಾಡಿ, ಕನ್ನಮಂಗಲಂ ಮತ್ತು ಕಲಂಬೂರು	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 312—ಪಿ., ತಾ|| 24-3-03

ತಾರೀಖು 31ನೇ ಮಾರ್ಚಿ 1903.

ನಂ. 14486—ಲೋ. ಬೋ. ಪಿ. 699, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೇ ಫೆಬ್ರುವರಿ 10ನೇ ಮುರ್ಕ್ಕಂ 9383—ಮಿ. ಫೈ. 21—96ನೇ ಮತ್ತು 9384 ಮಿ. ಫೈ. 21—96ನೇ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಕೊಪ್ಪ ಟವನ್ ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ತಾರೀಖು 31ನೇ ಮಾರ್ಚಿ 1903.

ನಂ. 14479—ಲೋ. ಬೋ. (ಪಿ) 690, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದ ರಡೀ ಕಂಡ ಉತ್ಸವಕ್ಕೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದ್ರಾಸ ಗವರ್ನಮೆಂಟನವರು ಅಡ್ಡೀಪಡಿಸುತ್ತಾರೆ:—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೇ ಇರುವ ತಾರೀಖುಗಳು ಮತ್ತು ಸ್ಟೇಷನಗಳು.			ಅಥಾರಿಟಿ.
				ಯಾವ ಲಾಗಾಯತು	ಯಾವ ವರಿವಿಗೆ	ಸ್ಟೇಷನಗಳು.	
ಚಿತ್ರೈ ಉತ್ಸವ ಮತ್ತು ದನಗಳ ಪರಸೆ	ಮದುರ	..	ಮದುರ	20—4—03	14—5—03	ದಕ್ಷಿಣ ಇಂಡಿಯಾ ರೈಲ್ವೆಯಲ್ಲಿರುವ ಅಯ್ಯಲೂರು, ವಾಡಮದುರೆ, ಡಿಂಡಿಗಲ್, ಅಂಬತ್ತೂರೆ, ಅಮ್ಮಯನಾಯಿಕನೂರು, ವಾಡಿಪಟ್ಟಿ, ಷೋಲವಂದನ, ಸಾಮಾಯನಲ್ಲೂರು, ಮದುರೆ, ತಿರುಪ್ಪರಂಕುಣ್ರಂ, ತಿರುಮಂಗಲಂ, ಕಲ್ಲಿಗುಡಿ, ಸಿಲಯಮಾನ್, ತಿರುಪ್ಪುವನಂ, ತಿರುಪ್ಪಚೆಟ್ಟಿ, ಮನಮದುರೆ, ಪರ್ತಿಬಾನೂರು ರೋಡು, ಪರಮಗುಡಿ, ಪಂಡಿಕನ್ನೈ, ಸಟ್ಟಿರಕ್ಕೋಡಿ, ರಾಮನಾಡ್, ವಲಂದರೈ, ಉಚಿಪ್ಪುಳ್ಳಿ ಮತ್ತು ಮಂಡಪಂ.	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ ಎಂಡಾರ್ಸಮೆಂಟ ನಂ. 327—ಪಿ., ತಾ|| 26-3-03.

ತಾರೀಖು 31ನೇ ಮಾರ್ಚಿ 1903.

ನಂ. 14480—ಲೋ. ಬೋ. (ಪಿ) 691, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ಮತ್ತು ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವ ಲಾಗಾಯತು.	ಯಾವ ವರಿವಿಗೆ.		
ಚಿತ್ರೈ ಉತ್ಸವ ಮತ್ತು ದನಗಳ ಪರಸೆ	ಮದುರ..	..	ಮದುರ	20—4—03	14—5—03	ಫಸ್ಟ್ ಅಸಿಸ್ಟೆಂಟ ರೆಸಿಡೆಂಟರವರ ಎಂಡಾರ್ಸಮೆಂಟ ನಂ. 327 ಪಿ., ತಾ||26-3-03	ದನಗಳ ಪರಸೆ ನಡೆಯುವದು ಅಡ್ಡೀಪಡಿಸಲ್ಪಟ್ಟಿರುತ್ತದೆ.
ಕುತ್ತಂಡರ ಸ್ವಾಮಿಯ ಉತ್ಸವ ಮತ್ತು ದನಗಳ ಪರಸೆ	ಕೂರಗಂ.	ತಿರುಕ್ಕೋಯಿಲೂರು	ದಕ್ಷಿಣ ಆರ್ಕಾಡ್	21—4—03	16—5—03	ಡಿಟ್ಟೋ ನಂ. 329—ಪಿ., ತಾ|| 26-3-03	ಡಿಟ್ಟೋ
ಶ್ರೀ ನರಸಿಂಹಸ್ವಾಮಿಯ ಉತ್ಸವ ಮತ್ತು ದನಗಳ ಪರಸೆ	ಪರಿಕ್ಕಲ್.	ಡಿಟ್ಟೋ	ಡಿಟ್ಟೋ	3—5—03	19—5—03	ಡಿಟ್ಟೋ ನಂ. 325—ಪಿ., ತಾ|| 26-3-03	ಡಿಟ್ಟೋ
ಕಾಳಿಯಮ್ಮನ ಜಾತ್ರೆ ಮತ್ತು ದನಗಳ ಪರಸೆ	ನಾತಪಟ್ಟಿ	ಧರ್ಮಪುರಿ	ಸೇಲಂ	5—5—03	23—5—03	ಡಿಟ್ಟೋ ನಂ. 331—ಪಿ., ತಾ|| 26-3-03	ಡಿಟ್ಟೋ

ತಾರೀಖು 31ನೇ ಮಾರ್ಚಿ 1903.

ನಂ. 14484—ಲೋ. ಜೋ. (ಪಿ) 697, ಸೆ 1897ನೇ ಇಸವಿಯು ಸಾಂಕ್ರಾಮಿಕ ರೋಗಗಳ IIನೇ ನಂಬರ್ ರೆಗ್ಯುಲೇಷನಿನ 2ನೇ ಸೆಕ್ಷನಿಗೆ ಸೇರಿದ 1ನೇ ಸಬ್ ಸೆಕ್ಷನ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಇದರಡೀ ಕಂಡ ಜಾತ್ರೆಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿಪಡಿಸುತ್ತಾರೆ :—

ಜಾತ್ರೆಯ ಹೆಸರು.	ಎಲ್ಲಿ ನಡೆಯತಕ್ಕದ್ದು	ತಾಲ್ಲೂಕು.	ಯಾವ ತಾರೀಖಿನ ಲಾಗಾಯಿತು.	ಯಾವ ವರಿವಿಗೆ.
ಕೋಲಾರ ಡಿಸ್ಟ್ರಿಕ್ಟು.				
ಶ್ರೀ ವೆಂಕಟರಮಣ ಸ್ವಾಮಿಯ ರಥೋತ್ಸವ.	ಆಲಂಗಿರಿ	ಚಿಂತಾಮಣಿ	11—4—1903	23—4—1903
ಚಿತ್ರದುರ್ಗ ಡಿಸ್ಟ್ರಿಕ್ಟು.				
ಕಲ್ಲೇಶ್ವರದೇವರ ರಥೋತ್ಸವ ...	ಕಲ್ಲೇದೇವರಪುರ	ಜಗಲೂರು	15—4—1903	18—4—1903

ತಾರೀಖು 26ನೇ ಮಾರ್ಚಿ 1903.

ನಂ. 14282—ಮಿ. 2168, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ ಚಿಕ್ಕಮಗಳೂರಲ್ಲಿರುವ ಅಸಿಸ್ಟೆಂಟ್ ಸರ್ಜ್ಜನರಾದ ಮ|| ಟಿ. ಪಿ. ಕುಪ್ಪುಸಾಮಿ ಮೊದಲಿಯರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 3 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 26ನೇ ಮಾರ್ಚಿ 1903.

ನಂ. ಜು. 1524, ಪೋಲೀಸು ಇಲಾಖೆಯಲ್ಲಿನ ಆಫಿಸರುಗಳ ಇದರಡೀ ಕಂಡ ವರ್ಗಾವರ್ಗಿ, ಮೊಕರರಾತಿ ಮತ್ತು ನೇಮಣೂಕಿಯು ಹುಕುಂ ಮಾಡಲ್ಪಟ್ಟಿರುತ್ತವೆ :—

1. ಎರಡನೇ ಕ್ಲಾಸಿನ ಪೋಲೀಸು ಸೂಪರ್ಇಂಟೆಂಡೆಂಟರಾದ ಮ|| ಎನ್. ಸುಬ್ಬರಾಯರು, ಮೈಸೂರು ಸೀಮೆಯ ಪೋಲೀಸು ಇನ್ಸ್ಪೆಕ್ಟರ್ ಜನರಲ್ ಯವರಿಗೆ ಹೆಡ್ ಕ್ವಾರ್ಟರ್ ಆಫೀಸು ಅಸಿಸ್ಟೆಂಟರಾಗಿ ಕಡೂರಿನಿಂದ ಬೆಂಗಳೂರಿಗೆ.

2. ಆಕ್ಟಿಂಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರಾದ ಮ|| ಸಿ. ಡಿ. ರಾಮಸ್ವಾಮಯ್ಯನವರು, ಹೆಡ್ ಕ್ವಾರ್ಟರ್ಸಿಗೆ ವರ್ಗ ಮಾಡಲ್ಪಟ್ಟ ಮ|| ಎನ್. ಸುಬ್ಬರಾಯರಿಗೆ ಬದಲಾಗಿ, ಕಡೂರು ಡಿಸ್ಟ್ರಿಕ್ಟಿನ ಪೋಲೀಸ್ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 27ನೇ ಮಾರ್ಚಿ 1903.

ನಂ. ಜು. 1537, ಕ್ರಿಮಿನಲ್ ಪ್ರೊಸೀಜರ್ ಕೋಡು 357ನೇ ಸೆಕ್ಷನಿನ ನಿಯಮಗಳನುಸರಿಸಿ ಹಾಸನದ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ್ ವ ಮೊದಲನೇ ಕ್ಲಾಸು ಮ್ಯಾಜಿಸ್ಟ್ರೇಟರಾದ ಮ|| ಬಿ. ರಾಮಸ್ವಾಮಯ್ಯನವರಿಗೆ ತಮ್ಮಿಂದ ದರ್ಯಾಫ್ತು ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲೀಷ್ ಭಾಷೆಯಲ್ಲಿ ಸ್ವದಸ್ತೂರಿ ತೆಗೆದುಕೊಳ್ಳುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟಿರುತ್ತೆ.

ತಾರೀಖು 27ನೇ ಮಾರ್ಚಿ 1903.

ನಂ. ಜು. 1539, ಕ್ರಿಮಿನಲ್ ಪ್ರೊಸೀಜರ್ ಕೋಡು 357ನೇ ಸೆಕ್ಷನಿನ ನಿಯಮಗಳನುಸರಿಸಿ ಹಾಸನದ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ್ ವ ಮೊದಲನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾದ ಮ|| ಕೆ. ಚಾಂಡಿಯವರಿಗೆ ತಮ್ಮಿಂದ ದರ್ಯಾಫ್ತು ಮಾಡಲ್ಪಟ್ಟ ಮೊಕದ್ದಮೆಗಳಲ್ಲಿ ಸಾಕ್ಷಿಗಳ ಸಾಕ್ಷ್ಯವನ್ನು ಇಂಗ್ಲೀಷ್ ಭಾಷೆಯಲ್ಲಿ ಸ್ವದಸ್ತೂರಿ ತೆಗೆದುಕೊಳ್ಳುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟಿರುತ್ತೆ.

ತಾರೀಖು 27ನೇ ಮಾರ್ಚಿ 1903.

ನಂ. ಜು. 1541, ಮೈಸೂರ ಸಿಟಿ ಮ್ಯಾಜಿಸ್ಟ್ರೇಟರಾದ ಮ|| ಪಿ. ಎಫ್. ಬೌರಿಂಗ್ ಯವರಿಗೆ 1903ನೇ ಮಾರ್ಚಿ 6ನೇ ಮರ್ಕೂಂ ಜು. 1383ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 11 ದಿನಗಳ ಪ್ರಿವಿಲೇಜ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 27ನೇ ಮಾರ್ಚಿ 1903.

ನಂ. ಜು. 1544, ಮೈಸೂರ ಸರ್ವಿಸ್ ರೆಗ್ಯುಲೇಷನ್ಗಳ 188ನೇ ಆರ್ಟಿಕಲ್ ಅನುಸರಿಸಿ ಬೆಂಗಳೂರ ಡಿಸ್ಟ್ರಿಕ್ಟು ಪೋಲೀಸು ಸೂಪರ್ಇಂಟೆಂಡೆಂಟರಾದ ಮ|| ಸಿ. ಹಾರ್ಡಿ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಬೆಂಗಳೂರ ಷಹರಿನ ಪೋಲೀಸು ಇನ್ಸ್ಪೆಕ್ಟರಾದ ಮ|| ಸೈದ್‌ಉದ್ದೀನ್‌ಯವರು, ಮ|| ಸಿ. ಹಾರ್ಡಿ ಯವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಬೆಂಗಳೂರಲ್ಲಿರುವ ಡಿಸ್ಟ್ರಿಕ್ಟು ಸೂಪರ್ಇಂಟೆಂಡೆಂಟವರ ಆಫೀಸಿನ ಚಾರ್ಜಿನಲ್ಲಿರತಕ್ಕದ್ದು.

ಈ ಇಸ್ತಿಹಾರ್ನಾಮೆಯು 1903ನೇ ಮಾರ್ಚಿ 18ನೇ ಮರ್ಕೂಂ ಜು. 1463ನೇ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯನ್ನು ರದ್ದು ಪಡಿಸುತ್ತದೆ.

ತಾರೀಖು 31ನೇ ಮಾರ್ಚಿ 1903.

ನಂ. 14443—ಎಜ್ಯು. 375, ಬೆಂಗಳೂರಲ್ಲಿರುವ ಸೆಂಟ್ರಲ್ ಕಾಲೇಜಿನ ಪ್ರಿನ್ಸಿಪಲ್‌ರಾದ ಮ|| ಜೆ. ಕುಕ್, ಎಂ. ಎ. ಯವರಿಗೆ 1902ನೇ ಏಪ್ರೈಲ್ 12ನೇ ಮರ್ಕೂಂ 16711—ಎಜ್ಯು. 351ನೇ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟ $1\frac{1}{3}$ ತಿಂಗಳುಗಳ ಪ್ರಿವಿಲೇಜ್ ಮತ್ತು ಇದರ ಜೊತೆಗೆ $10\frac{1}{3}$ ತಿಂಗಳುಗಳ ಫರ್ಲೋ ಇವೆರಡು ಸೇರಿರುವ ರಜಾವನ್ನು ಅವರು 1902ನೇ ಏಪ್ರೈಲ್ 3ನೇ ತಾರೀಖಿನಾರಭ್ಯ ಉಪಯೋಗಿಸಿಕೊಂಡು 1903ನೇ ಮಾರ್ಚಿ 23ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ಫರ್ಲೋ ರಜಾವಂದರೆ 11 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ತಾರೀಖು 31ನೇ ಮಾರ್ಚಿ 1903.

ನಂ. 14468—ಜಿ. ಫೈ 285—92, ಮೈಸೂರಲ್ಲಿರುವ ಸಿವಿಲ್ ಸರ್ಜನರಾದ ಮ|| ಪಿ. ಎಸ್. ಅಚ್ಯುತರಾಯರಿಗೆ 1902ನೇ ಸೆಪ್ಟಂಬರ್ 17ನೇ ಮರ್ಕೂಂ 4092—ಮಿ. 655ನೇ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ರಜಾ 1902ನೇ ಜನವರಿ 8ನೇ ತಾರೀಖಿನ ಪೂರ್ವಾಹ್ನದ ಲಾಗಾಯತು 4 ತಿಂಗಳುಗಳು ಮೆಡಿಕಲ್ ಸರ್ಟಿಫಿಕೇಟಿನ ಮೇಲಣ ರಜಾದೊಂದಿಗೆ ಸೇರಿರುವ 62 ದಿನಗಳ ಪ್ರಿವಿಲೇಜ್ ರಜಾಕ್ಕೆ ಬದಲಾಯಿಸಲ್ಪಟ್ಟಿರುತ್ತದೆ.

ಮ|| ಅಚ್ಯುತರಾಯರು ಕೆಲಸಕ್ಕೆ ವಾಪಸು ಕರೆಯಿಸಲ್ಪಟ್ಟು 1902ನೇ ಜುಲೈ ಗುರ್ರೆ ತಾರೀಖಿನ ಮಧ್ಯಾಹ್ನಾತ್ಪರ ತಮ್ಮ ಕೆಲಸದ ಮೇಲೆ ಹಾಜರಾಗಿರುತ್ತಾರೆ.

ತಾರೀಖು 23ನೇ ಮಾರ್ಚಿ 1903.

ನಂ. 14[illegible], ಲೋ. ಫಂ. 80-02, ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಮನೆ ವ ಖಾಲಿ ನಿವೇಶನಗಳು ಸರ್ಕಾರ ಕೆಲಸಕ್ಕೆ ಅಂದರೆ, ಶಿಕ್ಷೇರಿಯಲ್ಲಿ ರಸ್ತೆಯನ್ನು ಹಾಕುವ ಬಗ್ಗ್ಯೆ ಮತ್ತು ಖಜಾನೆ ವೆಂಕಟಅಯ್ಯಂಗಾರ್ರ ಮನೆಯ ಉತ್ತರಕ್ಕೆ ಇರುವ ಗಲ್ಲಿಯ ಅನುಸಾರವಾಗಿ ಗಲ್ಲಿಯನ್ನು ಹಾಕುವ ಬಗ್ಗ್ಯೆ ಬೇಕಾಗಿರುತ್ತವೆ. 1894ನೇ ಇಸವಿಯ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 7ನೇ ಕ್ಲಾಜ್ ಅನುಸರಿಸಿ ತುಮಕೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ ವ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರಾದ ಮ|| ಎಂ. ಎಸ್. ನಾರಾಯಣರಾಯರು ಸದರೀ ಮನೆ ವ ಖಾಲಿ ನಿವೇಶನಗಳನ್ನು ಹೊಂದುವ ಬಗ್ಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬರು.	ಮನೆಯ ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ	ಸ್ಕ್ವೇರ್ ಯಾರ್ಡ್ ಗಳು.	ಮನೆ ಯಾ ನಿವೇಶನದ ತರಹೆ.	ಚಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.						
1	ಚಿಕ್ಕ ಹನುಮಯ್ಯ ... ಸರ್ವೆ ನಂ. 305	141	24	376	ಖಾಲಿ ನಿವೇಶನ	ಹೊಸರಸ್ತೆ	ಹೊನ್ನೂರಯ್ಯನ ಖಾಲಿ ಜಮೀನು ಮತ್ತು ದೊಡ್ಡಲಕ್ಷ್ಮಯ್ಯನ ಖಾಲಿಜಮೀನು	ತಿಗಳರ ಚಿಕ್ಕಹನುಮಯ್ಯನ ತೋಟ	ಚಿಕ್ಕಹನುಮಯ್ಯನ ತೋಟ
2	ದೊಡ್ಡಲಕ್ಷ್ಮಯ್ಯನ ನಿವೇಶನ ನಂ. 135, 136 ..	50	8	$44\frac{4}{9}$	ಡಿಟೋ	ಚಿಕ್ಕಹನುಮಯ್ಯನ ಖಾಲಿ ಜಮೀನು	ಲಕ್ಷ್ಮಿನರಸಿಹ್ಮಯ್ಯನ ಖಾಲಿ ಜಮೀನು	ಹೊನ್ನೂರಯ್ಯನ ಖಾಲಿ ಜಮೀನು	ದಾಸಪ್ಪನ ಮತ್ತು ಅವರ ಸ್ವಂತ ಖಾಲಿ ಜಮೀನುಗಳು
3	ಲಕ್ಷ್ಮಿನರಸಯ್ಯ ... ಖಾನೇಷುಮಾರಿ ನಂ. 1866	22	8	$19\frac{5}{9}$	ಡಿಟೋ	ತಿಗಳರ ದಾಸಪ್ಪನ ಖಾಲಿ ಜಮೀನು	ಸರ್ಕಾರ ಮೋಹರಿ	ನರಸಂಣನ ಮನೆ	ಲಕ್ಷ್ಮಿನರಸಯ್ಯನ ಸ್ವಂತ ಮನೆ
	ಡಿಟೋ ...	12	8	$10\frac{2}{3}$	ಹೆಂಚಿನ ಮಾಳಿಗೆ				
4	ಚಿಕ್ಕನರಸಯ್ಯ .. ಖಾನೇಷುಮಾರಿ ನಂ. 1868, 1869, 1870.	26	12	$34\frac{2}{3}$	ಡಿಟೋ	ಹೊನ್ನೂರಯ್ಯನ ಖಾಲಿ ಜಮೀನು	ಡಿಟೋ	ನರಸಿಮ್ಮಯ್ಯನ ಗಲ್ಲಿ	ಸರ್ಕಾರ ಗಲ್ಲಿ
5	ಹೊನ್ನೂರಯ್ಯ	50	$10\frac{1}{2}$	$58\frac{1}{3}$	ಖಾಲಿ ನಿವೇಶನ	ಚಿಕ್ಕಹನುಮಯ್ಯನ ಖಾಲಿ ಜಮೀನು	ನರಸಿಮ್ಮಯ್ಯನ ಮನೆ	ಹೊನ್ನೂರಯ್ಯನ ದೇವರ ಮನೆ	ತಿಗಳರ ದೊಡ್ಡಲಕ್ಷ್ಮಯ್ಯನ ಮತ್ತು ದಾಸಪ್ಪನ ಖಾಲಿ ಜಮೀನು
	ಡಿಟೋ ಖಾನೇಷುಮಾರಿ ನಂ. 1871	50	4	$22\frac{2}{9}$	ಮಂಣಿನ ಮಾಳಿಗೆ				

ನಂಬರು.	ಮನೆಯು ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ವಿಸ್ತೀರ್ಣ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು	ಅಡಿಗಳು.						
6	ನರಸಿಹ್ಮಯ್ಯ ಡಿಟೋ ಖಾನೇಷುಮಾರಿ ನಂ. 2114	27 27	$7\frac{1}{2}$ 15	$22\frac{1}{2}$ 45	ಖಾಲಿ ನಿವೇಶನ ಮಣ್ಣಿನ ಮತ್ತು ಹೆಂಚಿನ ಮಾಳಿಗೆ	ಸರ್ಕಾರ ರಸ್ತೆ	ವೆಂಕಟಮ್ಮನ ಮನೆ	ರಸ್ತೆ	ನರಸಿಹ್ಮಯ್ಯನ ಸ್ವಂತ ಮನೆ
7	ವೆಂಕಟಮ್ಮ ಡಿಟೋ ಖಾನೇಷುಮಾರಿ ನಂ. 2115	12 45	$4\frac{1}{2}$ $4\frac{1}{2}$	6 $22\frac{1}{2}$	ಖಾಲಿ ನಿವೇಶನ ಮಣ್ಣಿನ ಮತ್ತು ಹೆಂಚಿನ ಮಾಳಿಗೆ	ನರಸಿಹ್ಮಯ್ಯನ ಮನೆ ಮತ್ತು ಹಿತ್ತಲು	ಹುಸೇನಸಾಹೇಬರ ಮನೆ	ರಸ್ತೆ	ವೆಂಕಟಮ್ಮನ ಸ್ವಂತ ಮನೆ
8	ಹೊಸಹಾಳಿಪ್ಪ ಡಿಟೋ ಡಿಟೋ ಖಾನೇಷುಮಾರಿ ನಂ. 2113	15 43 15	21 11 21	35 $52\frac{5}{9}$ 35	ಹೆಂಚಿನ ಮಾಳಿಗೆ ಖಾಲಿ ನಿವೇಶನ ಡಿಟೋ	ಸರ್ಕಾರ ರಸ್ತೆ	ಚಿಕ್ಕಹನುಮಯ್ಯನ ಖಾಲಿ ಜಮೀನು	ಹೊಸಹಾಳಿಪ್ಪನ ಸ್ವಂತ ಮನೆ	ಸರ್ಕಾರ ರಸ್ತೆ
9	ಚಿಕ್ಕಹನುಮಯ್ಯ ಖಾನೇಷುಮಾರಿ ನಂ. 2109	46	10	$51\frac{1}{9}$	ಖಾಲಿ ನಿವೇಶನ	ಹೊಸಹಾಳಿಪ್ಪನ ಮನೆ	ಗಂಗಮ್ಮನ ಮನೆ	ಚಿಕ್ಕಹನುಮಯ್ಯನ ಖಾಲಿ ಜಮೀನು	ರಸ್ತೆ
10	ನೇಯಿಗೆಗಾರ ಗಂಗಣ್ಣ ಡಿಟೋ ಖಾನೇಷುಮಾರಿ ನಂ. 2182	45 14	8 8	40 $12\frac{4}{9}$	ಹೆಂಚಿನ ಮಾಳಿಗೆ ಖಾಲಿ ನಿವೇಶನ	ಚಿಕ್ಕಹನುಮಯ್ಯನ ಖಾಲಿ ಜಮೀನು	ರಸ್ತೆ	ಗಂಗಣ್ಣನ ಸ್ವಂತ ಮನೆ	ಡಿಟೋ
11	ನೇಯುಗೆಗಾರ ಹರ್ಸಸಾಬಿ ಖಾನೇಷುಮಾರಿ ನಂ. 2081	24 6	5 5	$13\frac{1}{3}$ $3\frac{1}{3}$	ಹೆಂಚಿನ ಮಾಳಿಗೆ ಖಾಲಿ ನಿವೇಶನ	ಸಾತಾನಿ ವೆಂಕಟಮ್ಮನ ಖಾಲಿ ಜಮೀನು	ಚನ್ನಯ್ಯನ ಮನೆ ಮತ್ತು ಹಿತ್ತಲು	ರಸ್ತೆ	ಹರ್ಸಸಾಬಿಯ ಸ್ವಂತ ಮನೆ
12	ನೇಯುಗೆಗಾರ ಸಂಜೀವಯ್ಯ ಖಾನೇಷುಮಾರಿ ನಂ. 2080	36	5	20	ಡಿಟೋ	ಹರ್ಸಸಾಬಿಯ ಮನೆ	ರಸ್ತೆ	ಡಿಟೋ	ಸಂಜೀವಯ್ಯನ ಸ್ವಂತ ಮನೆ

13	ಸಿದ್ಧಲಿಂಗಯ್ಯನ ಮಗ ನೀಲಕಂಠಪ್ಪ ಖಾನೇಷುಮಾರಿ ನಂ. 2061 ...	40	7	$31\frac{1}{9}$	ಹೆಂಚಿನ ಮಾಳಿಗೆ	ರಸ್ತೆ	ನೀಲಕಂಠಪ್ಪನ ಸ್ವಂತ ಮನೆ	ಡಿಟೋ	ನೀಲಕಂಠಪ್ಪನ ಸ್ವಂತ ಮನೆ
14	ಡಿಟೋ ಖಾನೇಷುಮಾರಿ ನಂ. 2063 ...	26	7	$20\frac{2}{9}$	ಡಿಟೋ	ಸರ್ಕಾರ ಗಲ್ಲಿ	ರಸ್ತೆ	ಡಿಟೋ	ಡಿಟೋ
15	ನೇಯಗೆಗಾರ ಸೂರಯ್ಯ ಖಾನೇಷುಮಾರಿ ನಂ. 2059 .	14	7	$10\frac{8}{9}$	ಡಿಟೋ	ರಸ್ತೆ	ಸಂಜೀವಯ್ಯನ ಮನೆ ಮತ್ತು ಹಿತ್ತಲು	ಸೂರಯ್ಯನ ಸ್ವಂತ ಮನೆ	ರಸ್ತೆ
16	ಸೆಟ್ಟಿಲಯ್ಯನ ಮಗ ಸಂಜೀವಯ್ಯ ಖಾನೇಷುಮಾರಿ ನಂ. 2060 ...	13	$7\frac{1}{2}$	$10\frac{5}{6}$	ಹೆಂಚಿನ ಮಾಳಿಗೆ	ಸೂರಯ್ಯನ ಮನೆ	ತಿಮ್ಮಣ್ಣನ ಮನೆ	ಸಂಜೀವಯ್ಯನ ಸ್ವಂತ ಮನೆ	ಡಿಟೋ
	ಡಿಟೋ .	16	$7\frac{1}{2}$	$13\frac{1}{3}$	ಖಾಲಿ ನಿವೇಶನ				
17	ಚನ್ನಯ್ಯನ ಮಗ ತಿಮ್ಮಯ್ಯ .	35	9	35	ಹೆಂಚಿನ ಮಾಳಿಗೆ	ಸಂಜೀವಯ್ಯನ ಮನೆ	ರಸ್ತೆ	ತಿಮ್ಮಯ್ಯನ ಸ್ವಂತ ಮನೆ	ಡಿಟೋ
	ಖಾನೇಷುಮಾರಿ ನಂ. 2030 .	4	9	4	ಖಾಲಿ ನಿವೇಶನ				
18	ತಿಮ್ಮಸೆಟ್ಟಿಯ ಮಗಳು ಚನ್ನಮ್ಮ ಖಾನೇಷುಮಾರಿ ನಂ. 2027 ...	30	3	10	ಹೆಂಚಿನ ಮಾಳಿಗೆ	ರಸ್ತೆ	ಕುಂಬಾರ ಲಕ್ಕಪ್ಪನ ಖಾಲಿ ನಿವೇಶನ	ಸರ್ಕಾರ ಮೊಹರಿ	ಚನ್ನಮ್ಮನ ಸ್ವಂತ ಮನೆ
	ಡಿಟೋ .	8	3	$2\frac{2}{3}$	ಖಾಲಿ ನಿವೇಶನ				
19	ನಾಜಿ ದಲಾಯತ್ ಉಮರ್ ಸಾಬಿ .	35	17	$66\frac{1}{9}$	ಜೋಡು ಮಾಳಿಗೆ	ಡಿಟೋ	ದೊಂಬರ ಲಕ್ಷ್ಮಯ್ಯನ ಮನೆ ಮತ್ತು ಗಲ್ಲಿ	ಮಹಬೂಬ್‌ಖಾನರ ಮನೆ	ಹರ್ಸಸಾಬಿಯ ಮನೆ
	ಡಿಟೋ .	17	9	17	ಹೆಂಚಿನ ಮಾಳಿಗೆ				
	ಖಾನೇಷುಮಾರಿ ನಂ. 2000 ...	23	4	$10\frac{2}{3}$	ಖಾಲಿ ನಿವೇಶನ				
20	ಸೆಟ್ಟಿಲಯ್ಯನ ಮಗ ಚನ್ನಪ್ಪ ಖಾನೇಷುಮಾರಿ ನಂ. 1099 ..	42	7	$32\frac{2}{3}$	ಡಿಟೋ	ಉಮರ್ ಸಾಬಿಯ ಮನೆ	ಲಕ್ಷ್ಮಯ್ಯನ ಮನೆ	ಚನ್ನಪ್ಪನ ಸ್ವಂತ ಮನೆ	ಉಮರ್ ಸಾಬಿಯ ಮನೆ
21	ನಬೀಸಾಬಿಯ ಮಗ ಹರ್ಸಸಾಬಿ ..	24	$7\frac{1}{2}$	20	ಹೆಂಚಿನ ಮಾಳಿಗೆ	ಡಿಟೋ	ಯಲ್ಲೋಜಿಯ ಮನೆ	ಉಮರ್‌ಸಾಬಿಯ ಖಾಲಿ ಜಮೀನು	ಹರ್ಸಸಾಬಿಯ ಸ್ವಂತ ಮನೆ
	ಖಾನೇಷುಮಾರಿ ನಂ. 201 ಡಿಟೋ ...	14	$7\frac{1}{2}$	$11\frac{2}{3}$	ಖಾಲಿ ನಿವೇಶನ				
22	ದೊಂಬರ ಲಕ್ಷ್ಮಯ್ಯ ಮತ್ತು ಈತನ ಮಗ ಹುಚ್ಚಯ್ಯ.	15	10	$16\frac{2}{3}$	ಹೆಂಚಿನ ಮಾಳಿಗೆ	ಉಮರ್‌ಸಾಬಿಯ ಮತ್ತು ಮಹಬೂಬ್‌ಖಾನನ ಖಾಲಿ ನಿವೇಶನಗಳು	ಫುಟ್ಟ ಹುಚ್ಚಯ್ಯನ ಮನೆ	ಗಾರೆ ಸುಬ್ಬನ ಖಾಲಿ ಜಮೀನು	ಪಟ್ವಾರಿ ಹರ್ಸಸಾಬಿಯ ಮನೆ ಮತ್ತು ದೊಂಬರ ಯಲ್ಲೋಜಿಯ ಖಾಲಿ ಜಮೀನು
	ಖಾನೇಷುಮಾರಿ ನಂ. 223 ಡಿಟೋ ...	22	14	$31\frac{7}{9}$	ಡಿಟೋ				
	ಡಿಟೋ .	24	14	$37\frac{1}{3}$	ಖಾಲಿ ನಿವೇಶನ				

ನಂಬರು.	ಮನೆಯ ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ವಿಸ್ತೀರ್ಣ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚಕ್ಕು ಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.						
23	ಪುಟ್ಟ ಹುಚ್ಚಯ್ಯನ ಮಗ ದೊಂಬರ ಹುಚ್ಚಯ್ಯ. ಖಾನೆಷುಮಾರಿ ನಂ. 2238	17	13	$24\frac{5}{9}$	ಹೆಂಚಿನ ಮಾಳಿಗೆ	ದೊಂಬರ ಲಕ್ಷ್ಮಯ್ಯ ಮತ್ತು ಹುಚ್ಚಯ್ಯನ ಸ್ವಂತ ಮನೆ	ದೊಂಬರ ಕರೆಯಲ್ಲಪ್ಪನ ಮನೆ	ಅಂಗಳ	ದೊಂಬರ ಮುತ್ತನ ಮನೆ
24	ಯಲ್ಲೋಜಿಯ ಮಗ ದೊಂಬರ ಯಲ್ಲಪ್ಪ . . ಖಾನೇಷುಮಾರಿ ನಂ. 2248	14	9	14	ಖಾಲಿ ನಿವೇಶನ	ರಸ್ತೆ	ಯಲ್ಲಪ್ಪನ ಸ್ವಂತ ಗಲ್ಲಿ ಮತ್ತು ಖಾಲಿ ಜಮೀನು	ಲಕ್ಷ್ಮಯ್ಯನ ಮತ್ತು ಹುಚ್ಚಪ್ಪನ ಖಾಲಿ ಜಮೀನುಗಳು	ದೊಂಬರ ಯಲ್ಲೋಜಿಯ ಮನೆ
25	ದೊಂಬರ ಯಲ್ಲಪ್ಪ ... ಖಾನೆಷುಮಾರಿ ನಂ. 2242	40	8	$35\frac{5}{9}$	ಡಿಟೋ	ದೊಂಬರ ಯಲ್ಲೋಜಿಯ ಖಾಲಿ ನಿವೇಶನ	ದೊಂಬರ ಗುಡ್ಡಪ್ಪನ ಮನೆ	ದೊಂಬರ ಹುಚ್ಚಪ್ಪನ ಮತ್ತು ಪುಟ್ಟಹುಚ್ಚಪ್ಪನ ಮನೆ	ದೊಂಬರ ಯಲ್ಲಪ್ಪನ ಮನೆ
26	ದೊಂಬರ ಕರೆಯಲ್ಲಪ್ಪ .... ಖಾನೇಷುಮಾರಿ ನಂ. 2245	18	15	30	ಹೆಂಚಿನ ಮಾಳಿಗೆ	ದೊಂಬರ ಹುಚ್ಚನ ಮತ್ತು ಪುಟ್ಟಹುಚ್ಚಯ್ಯನ ಮನೆ	ಅಂಗಳ	ದೊಂಬರ ವೆಂಕಟರಮಣನ ಮನೆ	ದೊಂಬರ ಮತ್ತಿ ವೆಂಕಟರಮಣನ ಮನೆ
27	ದೊಂಬರ ವೆಂಕಟರಮಣ ... ಖಾನೇಷುಮಾರಿ ನಂ. 2249	20	7	$15\frac{5}{9}$	ಹೆಂಚಿನ ಮಾಳಿಗೆ	ದೊಂಬರ ಪುಟ್ಟಹುಚ್ಚಯ್ಯನ ಅಂಗಳ	ಡಿಟೋ	ದೊಂಬರ ಯಲ್ಲೋಜಿಯ ಮನೆ.	ದೊಂಬರ ಕರಿಯಲ್ಲಪ್ಪನ ಮನೆ
28	ವೆಂಕಟಗಿರಿಯಪ್ಪನ ಮಗ ತಿಮ್ಮಯ್ಯ ... ಖಾನೇಷುಮಾರಿ ನಂ. 2253	8	6	$5\frac{1}{3}$	ಮಣ್ಣಿನ ಮಾಳಿಗೆ	ರಸ್ತೆ	ಸರ್ಕಾರ ಗಲ್ಲಿ	ವೆಂಕಟಗಿರಿಯಪ್ಪನ ಹೆಂಚಿನ ಮನೆ	ದೊಂಬರ ಸಿದ್ದಪ್ಪನ ಹೆಂಚಿನ ಮನೆ
	ಡಿಟೋ ..	12	6	8	ಖಾಲಿ ನಿವೇಶನ				

29	ಸಿದ್ದನ ಮಗ ದೊಂಬರ ಸಿದ್ದ ಕೆ. ನಂ. 2249 ...	17	12	$22\frac{2}{3}$	ಹೆಂಚಿನ ಮಾಳಿಗೆ	ಅಂಗಳ	ಡಿಟೋ	ದೊಂಬರ ವೆಂಕಟಗಿರಿಯನ ಮಂಣಿನ ಮನೆ	ದೊಂಬರ ವೆಂಕಟರಮಣನ ಹೆಂಚಿನ ಮನೆ
30	ದೊಂಬರ ವೆಂಕಟರಮಣ ಕೆ. ನಂ. 2249 ...	17	4	$7\frac{5}{9}$	ಹೆಂಚಿನ ಮಾಳಿಗೆ	ರಸ್ತೆ	ಡಿಟೋ	ವೆಂಕಟರಮಣನ ಸ್ವಂತಮನೆ	ದೊಂಬರ ಸಿದ್ದಪ್ಪನ ಮನೆ
31	ರಹಿಮಾನ್ ಖಾನ್ ಸಾಬಿಯ ಮಗ ಅಬ್ದುಲ್ ರಹಿಮಾನ್ ಖಾನ್. ಕೆ. ನಂ. 889	61	20	$135\frac{5}{9}$	ಖಾಲಿ ನಿವೇಶನ	ಸರ್ಕಾರ ರಸ್ತೆ	ಯತಿರಾಜುಲು ನಾಯಿಡುವಿನ ಜಮೀನು	ಸ್ಕೂಲ್ ಮ್ಯಾಸ್ಟರ್ ಚನ್ನಬಸವಯ್ಯನ ಮನೆ	ಸ್ವಂತ ಮನೆ
32	ಮ್ಯುನಿಸಿಪಾಲಿಟಿಗೆ ತೆಗದುಕೊಂಡ ಯತಿರಾಜುಲು ನಾಯಿಡುವಿನ ಜಮೀನು. ಕೆಂ. ನಂ. 893	66	26	$190\frac{2}{3}$	ಡಿಟೋ	ಅಬ್ದುಲ್ ರಹಿಮಾನ್ ಸಾಬಿಯ ಖಾಲಿ ನಿವೇಶನ	ಕಿಟ್ಟಸಾನಿಯ ಮನೆ	ರಸ್ತೆ	ವೆಂಕಟಯ್ಯಂಗಾರರ ಹಿತ್ತಲು
33	ಕಿಟ್ಟಸಾನಿ ಕೆ. ನಂ. 2510 ...	28	11	$34\frac{2}{9}$	ಹೆಂಚಿನ ಮಾಳಿಗೆ	ಯತಿರಾಜುಲು ನಾಯಿಡುವಿನ ಖಾಲಿ ಜಮೀನು	ಸರ್ಕಾರ ಗಲ್ಲಿ	ಗಲ್ಲಿ	ಕಿಟ್ಟಸಾನಿಯ ಸ್ವಂತ ಮನೆ
	ಡಿಟೋ .	7	11	$8\frac{5}{9}$	ಖಾಲಿ ನಿವೇಶನ				
34	ಪೂಜಾರಿ ನಂಜುಂಡಯ್ಯ ಕೆ. ನಂ. 59 ..	34	15	$56\frac{2}{3}$	ಡಿಟೋ	ರಸ್ತೆ	ನಂಜುಂಡಯ್ಯನ ಹಿತ್ತಲು	ಗುರುಸಿದ್ದಯ್ಯನ ಮನೆ	ಮಾರಿಯಮ್ಮನ ಹಿತ್ತಲು
35	ಪೂಜಾರಿ ನಂಜುಂಡಪ್ಪ ಕೆ. ನಂ. 902, 903 ...	28	15	$46\frac{2}{3}$	ಡಿಟೋ	ನಂಜುಂಡಪ್ಪನ ಸ್ವಂತ ಖಾಲಿ ಜಮೀನು	ಕೋಡಿ ಬಸವಂಣನ ಪೂಜಾರಿಯ ಹಿತ್ತಲು	ಗುರುಸಿದ್ದಪ್ಪನ ಹಿತ್ತಲು	ನಂಜುಂಡಪ್ಪನ ಹಿತ್ತಲು

ನಂಬರು.	ಮನೆಯು ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಸ್ಕ್ವೇರ್ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.		ಖಾಲಿನಿವೇಶನ				
36	ಪೂಜಾರಿ ಚನ್ನಮಲ್ಲಯ್ಯ ...	30	16	$53\frac{1}{3}$		ಪೂಜಾರಿ ನಂಜುಂಡಪ್ಪನ ಹಿತ್ತಲು	ರಸ್ತೆ	ಚನ್ನಮಲ್ಲಯ್ಯನ ಸ್ವಂತ ಹಿತ್ತಲು	ಅಂಣಯಪ್ಪನ ಮನೆ ಹಿತ್ತಲು
37	ಮುನ್ಸೀಫ್ ಕೋರ್ಟಿನ ಪೀಯೆನ್ ಸಕರಪ್ಪ. ಕೆ. ನಂ. 916 ಡಿಟೋ ..	17 6	11 11	$20\frac{7}{9}$ $7\frac{1}{3}$	ಹೆಂಚಿನ ಮಾಳಿಗೆ ಖಾಲಿ ನಿವೇಶನ	ರಸ್ತೆ	ನರಸೀಯು ಮನೆ	ಸಿದ್ದಪ್ಪನ ಮನೆ	ಗಲ್ಲಿ
38	ನರಸಿ .. ಕೆ. ನಂ. 919 ಭಾಗ ಡಿಟೋ ..	9 9	12 12	12 12	ಹೆಂಚಿನ ಮಾಳಿಗೆ ಖಾಲಿ ನಿವೇಶನ	ಸಕರಪ್ಪನ ಮನೆ	ಮಿರಾಬೀಯಹಿತ್ತಲು	ಗಲ್ಲಿ	ರಸ್ತೆ
39	ಮಿರಾಬೀ .. ಕೆ. ನಂ. 918 ಡಿಟೋ ...	14 13	20 11	$31\frac{1}{9}$ $15\frac{8}{9}$	ಖಾಲಿ ನಿವೇಶನ	ನರಸೀಯು ಮನೆ	ರಸ್ತೆ	ಯತಿರಾಜಯ್ಯನ ಖಾಲಿ ಜಮೀನು	ಮಿರಾಬೀಯು ಸ್ವಂತ ಮನೆ
40	ಯತಿರಾಜಯ್ಯ .. ಡಿಟೋ ಕೆ. ನಂ. 924 . ಡಿಟೋ ...	9 20 13	8 12 9	8 $26\frac{2}{3}$ 13	ಹೆಂಚಿನ ಮಾಳಿಗೆ ಮಂಣಿನ ಮಾಳಿಗೆ ಖಾಲಿ ನಿವೇಶನ	ರಸ್ತೆ	ಡಿಟೋ	ಡಿಟೋ	ಹಜಾಂ ವೆಂಕಟರಮಣನ ಮನೆ
41	ಮಾಲಗದ ವೆಂಕಟರಮಣ ... ಕೆ. ನಂ. 925	24	7	$18\frac{2}{3}$	ಮಂಣಿನ ಮತ್ತು ಹೆಂಚಿನ ಮಾಳಿಗೆ	ಗಲ್ಲಿ	ರಸ್ತೆ	ಯತಿರಾಜಯ್ಯನ ಮನೆ	ವೆಂಕಟರಮಣನ ಸ್ವಂತ ಮನೆ
42	ಹರುವಿನ ರಂಗಣ್ಣ ... ಕೆ. ನಂ. 920	8	24	$21\frac{1}{3}$	ಖಾಲಿ ನಿವೇಶನ	ರಸ್ತೆ	ರಂಗಣ್ಣನ ಸ್ವಂತಮನೆ	ರಸ್ತೆ	ರಸ್ತೆ

ತಾರೀಖು 9ನೇ ಮಾರ್ಚಿ 1903.

ನಂ. 13500—ಲೋ. ಫಂ. 101–02, ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀಕಂಡ ಮನೆಗಳು ವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹೆಗ್ಗಡದೇವನಕೋಟೆಯಲ್ಲಿ ಪಾಕೀಜಾವನ್ನು ಅಭಿವೃದ್ಧಿಪಡಿಸುವ ಬಗ್ಯೆ ಬೇಕಾಗಿರುತ್ತವೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬೀದಿಯ ಹೆಸರು.	ಹಿಡುವಳೀದಾರರ ಹೆಸರು.	ತಪಶೀಲ್.			ಚಕ್ಕುಬಂದಿ.			
					ಜಮೀನಿನ ವಿವರ.	ವಿಸ್ತೀರ್ಣ. ಗಜಗಳು.	ಅಡಿಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹೆಗ್ಗಡದೇವನಕೋಟೆ.	ಹೆಗ್ಗಡದೇವನಕೋಟೆ.	ಹೆಗ್ಗಡದೇವನಕೋಟೆ.	(a) ದೊಡ್ಡಬೀದಿಗೂ ಮತ್ತು ರಂಗಯ್ಯಂಗಾರರ ಬೀದಿಗೂ ಮಧ್ಯೆ ಇರುವ ಗಲ್ಲಿ.	(1) ಶೇಷಯ್ಯ ...	ಹೆಂಚಿನ ಮನೆ	7	...	ಗಲ್ಲಿ	ಮನೆ	ದೊಡ್ಡ ಬೀದಿ	ಅಂಗಳ
					ಖಾಲಿ ನಿವೇಶನ	5	...	ಡಿಟ್ಟೋ	ಖಾಲಿ ನಿವೇಶನ	ಮನೆ	ಹುಲ್ಲಿನ ಹಸುವಿನ ಕೊಟಗೆ
					ಹುಲ್ಲಿನ ಹಸುವಿನ ಕೊಟಗೆ	3	...	ಡಿಟ್ಟೋ	ಹುಲ್ಲಿನ ಹಸುವಿನ ಕೊಟಗೆ	ಖಾಲಿ ನಿವೇಶನ	ಖಾಲಿ ನಿವೇಶನ
				(2) ದಾಸಸೆಟ್ಟಿ	ಖಾಲಿ ನಿವೇಶನ	3	...	ಮನೆ	ಗಲ್ಲಿ	ಗಲ್ಲಿ	ಮನೆ
					ಹೆಂಚಿನ ಮನೆ	8	...	ಡಿಟ್ಟೋ	ಡಿಟ್ಟೋ	ಜಗಲಿ	ಖಾಲಿ ನಿವೇಶನ
			(b) ದೊಡ್ಡಬೀದಿಗೂ ಮತ್ತು ತೊರಗೆರೆಬೀದಿಗೂ ಮಧ್ಯೆ ಇರುವ ಗಲ್ಲಿ.	(3) ಚಲುವನಾಯಿಕ.	ಹೆಂಚಿನ ಮನೆ	36	...	ಗಲ್ಲಿ	ಮನೆ ನಿವೇಶನ	ರಸ್ತೆ	ಹಸುವಿನ ಕೊಟಗೆ
					ಹುಲ್ಲಿನ ಹಸುವಿನ ಕೊಟಗೆ	15	...	ಖಾಲಿ ನಿವೇಶನ	ಮನೆ	ಮನೆ	ಹಿತ್ತಲು
					ಖಾಲಿ ನಿವೇಶನ	44	...	ಗಲ್ಲಿ	ಮನೆ ಮತ್ತು ಹಸುವಿನ ಕೊಟಗೆ	ರಸ್ತೆ	ಡಿಟ್ಟೋ
			(c) ತೊರಗೆರೆಯಲ್ಲಿರುವ ದೊಡ್ಡಬೀದಿ.	(4) ದೊಡ್ಡಮ್ಮನ ಬೀರ	ಖಾಲಿ ನಿವೇಶನ	10	...	ಹನುಮಿಯ ಹುಲ್ಲಿನ ಮನೆ	ಚವುಡನ ಖಾಲಿ ನಿವೇಶನ	ಖಾಲಿ ನಿವೇಶನ	ರಸ್ತೆ
				(5) ಚವುಡ ...	ಖಾಲಿ ನಿವೇಶನ	3	...	ಬೀರನ ಖಾಲಿ ನಿವೇಶನ	ಮನೆ	ಡಿಟ್ಟೋ	ಡಿಟ್ಟೋ
					ಹುಲ್ಲಿನ ಮನೆ	5	....	ಖಾಲಿ ನಿವೇಶನ	ಗೋವಿಂದಮ್ಮನ ಅಂಕನ ಮನೆ	ಮನೆ	ಡಿಟ್ಟೋ
				(6) ಗೋವಿಂದಮ್ಮನ ಅಂಕ.	ಹೆಂಚಿನ ಮನೆ	5	...	ಚವುಡನ ಹುಲ್ಲಿನ ಮನೆ	ಖಾಲಿ ನಿವೇಶನ	ಡಿಟ್ಟೋ	ಡಿಟ್ಟೋ
					ಖಾಲಿ ನಿವೇಶನ	2	...	ಮನೆ	ಮನೆ	ಖಾಲಿ ನಿವೇಶನ	ಡಿಟ್ಟೋ
					ಹೆಂಚಿನ ಮನೆ	5	...	ಖಾಲಿ ನಿವೇಶನ	ಪೊಲೀಸು ಚವುಡನ ಖಾಲಿ ನಿವೇಶನ	ಡಿಟ್ಟೋ	ಡಿಟ್ಟೋ
			(d) ತೊರಗೆರೆಯಲ್ಲಿರುವ ಚಿಕ್ಕ ಬೀದಿ.	(7) ತೊರೇರ ಚಲುವ.	ಹುಲ್ಲಿನ ಮನೆ	3	...	ಖಾಲಿ ನಿವೇಶನ	ಹಿತ್ತಲು	ಗಲ್ಲಿ	ಹುಲ್ಲಿನ ಮನೆ
					ಖಾಲಿ ನಿವೇಶನ	3	...	ಬೋರನಾಯಿಕನ ಹುಲ್ಲಿನ ಮನೆ	ಹುಲ್ಲಿನ ಮನೆ	ಡಿಟ್ಟೋ	ಖಾಲಿ ನಿವೇಶನ

1903–1904ನೇ ಸಾಲಿಗೆ ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ಹರಾಜು.

ನೋಟಿಫಿಕೇಷನ್ ನಂ. 441–Ex: F. 7—1902, ತಾರೀಖು 18ನೇ ಮಾರ್ಚಿ 1903.

1. ಇದಕ್ಕೆ ಲಗತ್ತಿರುವ *ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1903ನೇ ಇಸವಿ ಜುಲೈ ಗುರ್ರೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರ್ ಸಾಲ್ ಆಖೈರ್‌ವರಿಗೆ ಸಾರಾಯಿಯನ್ನು ಬಿಕರೀ ಮಾಡುವ ಬಟ್ಟು ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮಿಷನರುಗಳಿಂದ ಯಾ ಸಬ್ ಡಿವಿಜನ್ ಆಫೀಸರರಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫೀಸರುಗಳಿಂದ ಯಾ ಇದಕ್ಕಾಗಿ ಡೆಪ್ಯುಟಿ ಕಮಿಷನರುಗಳಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರುಗಳಿಂದ ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿ ಮೇಲ್ಕಂಡ ಪಟ್ಟಿಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ, ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು, ಸರ್ಕಾರದ ಸವಾಲನ್ನು ಗೊತ್ತುಮಾಡಿಕೊಂಡು ಹರಾಜ್ ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೇ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫೀಸರರು ಒಂದಕಿಂತ ಹೆಚ್ಚು ಫಿರ್ಕಾಗಳನ್ನು ಸೇರಿಸಿಯಾಗಲಿ, ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ, ಯಾ ಹಾಲಿ ಅಂಗಡಿಗಳನ್ನುಂಟಾಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಫೈಸಲು ಮಾಡಲು ಅವಶ್ಯಕವಿದ್ದರೆ ಉಳಿಸಿಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸಬಹುದು. ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫೀಸರರು ಯುಕ್ತಾನುಸಾರ ಸರ್ಕಾರದ ಸವಾಲನ್ನು ತಗ್ಗಿಸಬಹುದು. ಸವಾಲ್ಮಾಡಲು ಅಪೇಕ್ಷಿಸುವ ಜನರ ಸ್ಥಿತಿಯನ್ನೂ, ಮತ್ತು ಅವರ ಚಾಲ್‌ಚಲನನ್ನೂ ವಿಚಾರಿಸಬಹುದು; ಅಂಥಾ ವಿಚಾರಣೆಯ ಫಲಿತಾಂಶವು ಯಾರ ವಿಷಯದಲ್ಲಿ ತೃಪ್ತಿಕರವಾಗಿಲ್ಲವೋ ಅಂಥಾ ಜನರಿಂದ ಸವಾಲ್ಮಾಡಲಿಕ್ಕೆ ಹಕ್ಕನ್ನುಂಟುಮಾಡುವ ಅವಶ್ಯಕವಾದ ಠೇವಣಿಯನ್ನು ತೆಗೆದುಕೊಳ್ಳುವದಿಲ್ಲವೆಂದು ಹರಾಜು ಕಾಲದಲ್ಲಿ ತಿರಸ್ಕರಿಸಬಹುದು. ತನ್ನ ಲೈಸೆನ್ಸಿನ ಷರತ್ತುಗಳಿಗೂ, ಅಥವಾ ಜಾರೀಲಿರತಕ್ಕ ಎಕ್ಸೈಜ್ ಕಾನೂನುಗಳಿಗೂ ಉಲ್ಲಂಘನೆ ಮಾಡಿದ ತಪ್ಪಿತಸ್ಥನಾದ ಹಳೇ ಗುತ್ತಿಗೆದಾರನಿಗೆ ಸವಾಲ್ಮಾಡಲು ಹಕ್ಕು ಇರುವದಿಲ್ಲ. ಹರಾಜು ನಡಿಸತಕ್ಕ ಆಫೀಸರಿಗೆ ಭಡ ಸವಾಲು ತುಂಬಾ ದುಬಾರಿಯಾಗಿರುವದರಿಂದ ಗುತ್ತಿಗೇದಾರನು ಮುಂದೆ ದಿವಾಳಿಯಾಗುವನೆಂಬ ಅನುಮಾನ ತೋರುವ ಪಕ್ಷದಲ್ಲಿ ಅಂಥಾ ಭಡ ಸವಾಲನ್ನು ಅವರು ತಿರಸ್ಕರಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಬಟ್ಟು ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರ್ ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಭಡ ಸವಾಲ್ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ತಮ್ಮ ಯುಕ್ತಾನುಸಾರ ಕಾರಣವನ್ನ ನಮೂದಿಸದೆ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು, ಯಾ ಗವರ್ನ್‌ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. (*a*) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು.

(*b*) ಯಾವ ಮನುಷ್ಯನಾಗಲಿ ಪ್ರತಿಯೊಂದು ಫಿರ್ಕಾಕ್ಕೆ 200 ರೂಪಾಯಿಗಳ ಠೇವಣಿಯನ್ನು ಅಥವಾ ಹರಾಜು ಮಾಡುವ ಆಫೀಸರರು ಗೊತ್ತುಮಾಡಬಹುದಾದ ಬೇರೆ ಇತರ ನ್ಯಾಯವಾದ ಮೊತ್ತವನ್ನು ಹಾಜರು ಮಾಡುವ ಪರ್ಯಂತರ ಸವಾಲು ಮಾಡಕೂಡದು; ಪರಂತು ಅಂಥಾ ಪ್ರಥಮ ಠೇವಣಿಯನ್ನು ಗವರ್ನ್‌ಮೆಂಟಿನವರು ಯಾವ ಕಾಲದಲ್ಲಿಯಾದರೂ ಬಿಟ್ಟುಬಿಡಬಹುದು. ಯಾವ ಫಿರ್ಕಾವನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಮ್‌ಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಭಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

(*c*) ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೇ ಇರುವ ಪಕ್ಷದಲ್ಲಿ ಅವರಿಗೆ ವಾಪಸ್ ಮಾಡಲ್ಪಡುತ್ತೆ.

(*d*) ಯಾವದಾದರೊಂದು ಫಿರ್ಕಾದ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡದ ಸವಾಲ್ದಾರನು ಎರಡನೇ ಫಿರ್ಕಾದ ಹರಾಜು ಷುರುವಾಗುವದಕ್ಕೆ ತತ್ಪೂರ್ವವೇ ಮಾಹೇಯಾನ ಕಿಸ್ತಿನ $\frac{1}{3}$ನೇ ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು.

(*e*) ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹರಾಜ್ ಮಂಜೂರಾದ 15 ದಿವಸಗಳ ವಳಗಾಗಿ ಮೊದಲು ಇಡೋಣಾದ ಠೇವಣೀ ದೇಖೀಲ್ ಆತನ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಆತನು ಮೈಸೂರು ಶೀಮೆಯಲ್ಲಿ ಜಿಂದಿಗೆಯನ್ನುಂಟಾಗದೆ ಇರುವ ಅನ್ಯದೇಶದವನಾಗಿ ಯಾ ಜೇವಾಳಸನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿರುವಂತೆ ಕಂಡುಬಂದ ಪಕ್ಷದಲ್ಲಿ ವಿಧಾಯಕವಾದ ಠೇವಣೀಗೆ ದುಗಣಿ ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದು ಕೊಡುವದಕ್ಕೆ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ನಿರ್ಬಂಧ ಪಡಿಸಬಹುದು.

(*f*) ಈ ಮೇಲ್ಕಂಡ ಠೇವಣಿಗಳಲ್ಲಿ ಯಾವದನ್ನಾದರೂ ಇಡದೇ ತಪ್ಪಿದಲ್ಲಿ, ಯಾ ಅವಶ್ಯಕವಾದ ಜಾಮೀನ್‌ದಾರ ಅಥವಾ ಜಾಮೀನ್‌ದಾರರನ್ನು ಹಾಜರ್ಮಾಡದೇ ತಪ್ಪಿದಲ್ಲಿ, ಮೊದಲು ಇಟ್ಟಿರುವ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಪ್ಪಣೆ ಕೊಡುವ ರೀತ್ಯಾ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಹ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು; ಮತ್ತು ಆ ತಪ್ಪಿತಸ್ತನು ಅದೇ ಫಿರ್ಕಾಕ್ಕಾಗಲೀ ಯಾ ಬೇರೆ ಫಿರ್ಕಾಕ್ಕಾಗಲೀ ಸವಾಲ್ಮಾಡಕೂಡದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೇ ಹರಾಜ್‌ಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್ [illegible] ಜವಾಬ್ದಾರಿ ಮೇಲೆ ನಡಿಸಲ್ಪಡತಕ್ಕದ್ದು. ಸದರೀ ಸವಾಲ್ದಾರನು ಎಲ್ಲಾ ಆದಾಯವನ್ನೂ ಕಳೆದುಕೊಳ್ಳತಕ್ಕದ್ದಲ್ಲದೆ, ದುಸರೇ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರೂ ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಬಟ್ಟು ಮೊಬಲಗಿನಲ್ಲಿ ದುಸರೇ ಹರಾಜಿನಲ್ಲಿ ಪಡದ ಸವಾಲ್ದಾರನಿಂದ ಪಾವತಿಯಾಗತಕ್ಕ ಬಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತಿ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕಿ ಏನಾದರೂ ನಿಂ-

* ಷರಾ—ಸನ 1903ನೇ ಇಸವಿ ಮಾರ್ಚಿ 26ನೇ ತಾರೀಖು ಮೈಸೂರ ಗೆಜೆಟ್ಟಿಗೆ ಸಪ್ಲಿಮೆಂಟಾಗಿ ಷೆಡ್ಯೂಲ್ ಛಾಯಿಷಾಗಿರುತ್ತೆ.

ತಲ್ಲಿ ಆ ಮೊಬಲಗು ಜಮೀನ್ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣಿ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣಿ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡತಕ್ಕದ್ದು.

5. ಪ್ರತಿಯೊಂದು ಫಿರ್ಕಾದಲ್ಲಿ ಮಾರಲು ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ತಾನು ತನ್ನ ಕರಾರಿನ ಷರತ್ತುಗಳನ್ನು ಕ್ರಮವಾಗಿ ಜಾರಿ ಮಾಡಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಎಷ್ಟು ಚರ ಮತ್ತು ಸ್ಥಿರ ಆಸ್ತಿಯು ಅವಶ್ಯಕವಾಗಿರುತ್ತೆಂದು ಎಣಿಸುತ್ತಾರೋ, ಅಷ್ಟು ಆ ಬಾಬತು ತನ್ನ ಆಸ್ತಿಗಳುನಿಶಿ, ಬದ್ಧನಾಗಿರಲ್ಪವನೆಂದು ಒಂದು ಕರಾರನ್ನು ಬರದು ರುಜು ಮಾಡಿ ಕೊಡತಕ್ಕದ್ದು. ಕೊಂಡುಕೊಂಡವನು ಕರಾರನ್ನ ಸೈನ್ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಸಿಷ್ಟ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕ್ಕದ್ದಲ್ಲದೆ ಸದರೀ ಬಿಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂನಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದಿದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರೇ ಹರಾಜ್ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು. ಹರಾಜ್ ಮಂಜೂರಾದ ಮೇಲೆ ಸದರಿ ಖರೀದಿದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡದವರು ಸದರೀ ಕರಾರಿಗೆ ಜವಾಬ್ದಾರರಾಗಿರುತ್ತಾರೆ.

6. ಹಿಂದಿನ ಕೆಲವು ಸಾಲುಗಳಲ್ಲಿ ಹಾಲೀ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿಯೂ, ಮತ್ತು ಕೋಠಿಗಳಲ್ಲಿಯೂ ಖರ್ಚಾದ ಸಾರಾಯಿಯ ತಪಶೀಲೂ, ಮತ್ತು ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು ವಗೈರೆ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದಿದಾರನಿಗೆ ಡೆಪ್ಯುಟಿ ಕಮ್ಮಿಷನರವರು ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡತಕ್ಕದ್ದು.

(1) ಸದರೀ ಬಿಟ್ಟು ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡೆಪ್ಯುಟಿ ಕಮ್ಮಿಷನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಶುದ್ಧ ಮಾಡಲ್ಪಟ್ಟ ಯಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟೀ ಇಳಿಸಲ್ಪಟ್ಟಿರುವ ಷರಾಬಗಳನ್ನೂ ಮತ್ತು ಬ್ರಾಂದಿ, ವಿಸ್ಕಿ, ಜಿನ್ ವಗೈರೆ ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ತಮ್ಮ ಸ್ವಂತ ಖರೀದಿಗಳಿಗೆ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರ್ರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಯೆ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಚಲನ್‌ಗಳ ಮೂಲಕ ಸ್ಥಳೀಯವಾದ ತಾಲ್ಲೂಕು ಖಜಾನೆಗಳಿಗೆ 1903ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳುಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತೂ ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸ್‌ದಾರನು ಲೋಕಲ್ ಸೆಸ್‌ಗಾಗಿ ಏನೂ ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಇಜಾರೇ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮ್ಮಿಷನರವರ ಹುಕುಂ ಪಡದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ಆರ್ಡರ್ ಮಾಡಿ, ಮಾಹೆ ಆಖೈರಿ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜ್ ಮಾಡತಕ್ಕದ್ದು. ಪರಂತು ಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮ್ಮಿಷನರವರು ಅವರ ಯುಕ್ತಾನುಸಾರ ಹಾಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಸೇರಿದ ದುಕಾನ್‌ವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆ ಬೇರೆ ದುಕಾನ್‌ದಾರನಿಗೂ ಅವನು ಪಾವತಿ ಮಾಡುವದಕ್ಕೆ ಒಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಒಂದು ಲೈಸೆನ್ಸ್ ಕೊಡುವಂತೆ ಅಮಲ್ದಾರರಿಗೆ ಹುಕುಂ ಕೊಡಬಹುದು. ಪರಂತು ಹೀಗೆ ಕೊಡೋಣಾದ ಗುತ್ತಿಗೆಯ ಒಟ್ಟು ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ಒಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು.

(3) (*a*) ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ಮಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮ್ಮಿಷನರವರ ಯುಕ್ತಾನುಸಾರ ದಂಡವಾಗಿ ಆದರೂ ತೆಗದುಕೊಳ್ಳಲ್ಪಡಬಹುದು. ಅಥವಾ ತಪ್ಪಿಹೋದವನಿಂದ ಬರಬೇಕಾದ ಬಾಕೀಗೋಸ್ಕರವೂ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತೀ ಮಾಡುವ ಬಗ್ಯೆ ಉಪಯೋಗಿಸಲ್ಪಡಬಹುದು. ಅಂಥ ಬರಬೇಕಾದ ಬಾಕಿಗಳೂ ಮತ್ತು ನಷ್ಟದ ಮೊಬಲಗುಗಳೂ ಸದಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, ಲೈಸೆನ್ಸ್‌ದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೇ ಮೊಬಲಗನ್ನು ಕಮ್ಮಿ ಮಾಡುವ ಬಗ್ಯೆ ಅಥವಾ ಈಡು ಮೊಬಲಗು ಪಡೆಯುವ ಬಗ್ಯೆ ಕೇಳಲ್ಪಡಕೂಡದು.

(*b*) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯತು ಸಾಲೀಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಬೀಲ್ ವಸೂಲ್ಮಾಡಲ್ಪಡತಕ್ಕದ್ದು.

(4) (*a*) ಈ ಸರ್ಕಾರಕ್ಕೆ ಸಾರಾಯಿಯನ್ನೂ, ಒಳದೇಶದ ಇತರ ಷರಾಬುಗಳನ್ನೂ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರ್‍ರಾದ ಅರ್ಬತ್‌ನಾಟ್ ಅಂಡ್ ಕೋ ಎಂಬ ವರ್ತಕರಿಂದಾಗಲಿ, ಯಾ ಸರ್ಕಾರದ ಅಪ್ಪಣೇ ಮೇರೆ ಏರ್ಪಾಡಾಗುವ ಯಾವದಾದರೊಂದು ಬಾಂಡೆಡ್ ಡೆಪೋಯಿಂದಾಗಲಿ ಲೈಸೆನ್ಸ್‌ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಕಾಕುಂಬೆ ಸಾರಾಯಿಯನ್ನ ಕೊಂಡುಕೊಳ್ಳತಕ್ಕದ್ದು. ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ, ತರೀಕೆರೆ, ಮಂಜರಾಬಾದ್, ಬೇಲೂರು ತಾಲ್ಲೂಕುಗಳಲ್ಲಿಯೂ ಮತ್ತು ಎಕ್ಸೈಸ್ ಕಮ್ಮಿಷನರ್ ಸಾಹೇಬರವರು ಅಪ್ಪಣೆ ಕೊಡಬಹುದಾದ ಇತರ ತಾಲ್ಲೂಕುಗಳಲ್ಲಿಯೂ, ಇರತಕ್ಕ ಫಿರ್ಕಾ ಗುತ್ತಿಗೆ ಲೈಸೆನ್ಸ್‌ದಾರ್‍ರು

ಬಿರಟೆ ಹಾಕಿ ಮೊಹರ ಮಾಡಿದ ಸೀಸೆಗಳಲ್ಲಿ 20° ಡಿಗ್ರಿ ಜೋರುಳ್ಳ ಬೆಲ್ಲದ ಸಾರಾಯಿಯನ್ನು ಸಹಾ ಗ್ಯಾಲ್ಲನ 1ಕ್ಕೆ (ಲೋಕಲ ಸೆಸ ಶೇರಿ ಡ್ಯೂಟಿ ಅಂದರೆ $4\frac{3}{4}$ ರೂಪಾಯಿ ಅಡಗಿರುವ) ರೂ. 6—2—6 ಪ್ರಕಾರ ಬಾಂಡೆಡ ಡಿಪೋಗಳಿಂದ ಕೊಂಡುಕೊಳ್ಳಬಹುದು; ಮತ್ತು ಅಂಥಾ ಶೀಸೆಗಳನ್ನು ಗ್ಯಾಲ್ಲನ 1ಕ್ಕೆ ರೂ. 7—7—0 ಪ್ರಕಾರ ಅಥವಾ ರೆಪ್ಯೂಟೆಡಕ್ವಾರ್ಟ್ಸ ಶೀಶೆ 1ಕ್ಕೆ ರೂ. 1—3—10 ಪ್ರಕಾರ ಮೊತಬರಿ ಜನರಿಗೆ ಮಾರಬಹುದು.

(b) ಕಾಕುಂಬೆ ಸಾರಾಯಿಗೆ ಮೇಲ್ಕಂಡ ಖರೀದಿ ದರ ಶಿವಾಯಿ ಡಿಸ್ಟಿಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ ಪ್ರೂಫ಼ ಜೋರುಳ್ಳ ಸಾರಾಯಿ ಗ್ಯಾಲ್ಲನ 1ಕ್ಕೆ ಲೋಕಲ ಸೆಸ ಸಹಿತ $4\frac{3}{4}$ ರೂಪಾಯಿ ದರದಂತೆ ಎಕ್ಸೈಜ ಡ್ಯೂಟಿಯಾನೆ ಹಾಸಲು (5) ನೇ ಷರತ್ತು ಅನುಸರಿಸಿ ತಾಲ್ಲೂಕು ಖಜಾನೆಗೆ ಯಾ ಡೆಪ್ಯುಟಿ ಕಮ್ಮಿಷನರವರ ಅಪ್ಪಣೆ ಪಡದು ಬೇರೆ ಇತರ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡತಕ್ಕದ್ದು.

(c) ಲೈಸೆನ್ಸದಾರನು 20° ಡಿಗ್ರಿ ಅಂಡರ ಪ್ರೂಫ಼ ಜೋರಿನ ಕಾಕುಂಬಿ ಸಾರಾಯಿಯನ್ನು ಗ್ಯಾಲ್ಲನ 1ಕ್ಕೆ ವಿಧಾಯಕವಾದ ರೂ. 6—6—0 ಯಂತೆಯೂ, ಅಥವಾ ಗ್ಯಾಲ್ಲನ್ನಿನ $\frac{1}{51}$ ನೇ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ, ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(5) (a) ಡಿಸ್ಟಿಲೆರಿಯಿಂದ ಶೀದಾ ತನ್ನ ಸ್ವಂತ ಪಾತ್ರೆಗಳಲ್ಲಿ ಸಾರಾಯಿಯನ್ನು ತೆಕ್ಕೊಂಡು ಹೋಗುವ ಲೈಸೆನ್ಸದಾರನು ಮೇಲ್ಕಂಡ ಡ್ಯೂಟಿ ಮೊಬಲಗನ್ನು ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ, ವಿಧಾಯಕವಾದ ನಮೂನೆಯಲ್ಲಿ ಒಂದು ರಶೀತಿಯನ್ನು ಪಡೆಯತಕ್ಕದ್ದು; ಅಂಥಾ ರಶೀತಿಯನ್ನು ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರಪಡಿಸಿ, ಅಂಥಾ ಷರಾಬಿಗೆ ಮೇಲ್ಕಂಡಂತೆ ಖರೀದಿಯನ್ನು ಭಟ್ಟೀದಾರರಿಗಾಗಲೀ ಯಾ ಅವರ ಏಜಂಟರಿಗಾಗಲೀ ಪಾವತಿ ಮಾಡಿ, ಆತನಿಂದ ರಶೀತಿಯನ್ನು ಪಡೆದನಂತರ, ಡಿಸ್ಟಿಲೆರಿ ಜಿಮ್ಮೆಯಲ್ಲಿರುವ ಆಫೀಸರು ಖಜಾನೆ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಯೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ, ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮೂದ್ಮಾಡಿ, ತಮ್ಮ ರುಜುನಿಶಿ ಎಕ್ಸೈಸ ಕಮ್ಮಿಷನರ ಸಾಹೇಬರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು; ಮತ್ತು ಡಿಸ್ಟಿಲೆರಿಯಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ವಿಧಾಯಕವಾದ ನಮೂನೆಯಲ್ಲಿ ರಹದಾರಿಯನ್ನು ಕೊಡತಕ್ಕದ್ದು.

(b) ಬಾಂಡೆಡ ಡಿಪೋಯಿಂದ ಸಾರಾಯಿಯನ್ನ ಪಡೆಯುವಂಥಾ ಲೈಸೆನ್ಸದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ಒಂದು ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಪಡಿಸಿದನಂತರ, ಬಾಂಡೆಡ ಡೆಪೋ ಮುತ್ಸದ್ದಿಯು ಖಜಾನೆ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಸಾರಾಯಿಯನ್ನೂ ಸರಬರಾಯಿ ಮಾಡಿದನಂತರ ಮೇಲಿನ ಕಲಂನಂತೆ ನಡೆದುಕೊಳ್ಳತಕ್ಕದ್ದು.

(c) ಲೈಸೆನ್ಸದಾರನ ಅಂಗಡಿಗಳಿಗೆ ಸರಬರಾಯಿ ಮಾಡಿದ ಸಾರಾಯಿಗೆ ವಿಧಾಯಕವಾದ ಪರವಿಮಿಟ್ಟನ್ನ ಹೊಂದತಕ್ಕದ್ದು.

(6) ಬಾಂಡೆಡ ಡೆಪೋದಿಂದ ಸಾರಾಯಿಯನ್ನು ಪಡೆಯುವಂಥಾ ಲೈಸೆನ್ಸದಾರನು ತನ್ನ ಸ್ವಂತ ಡೆಪೋವನ್ನು ಇಡಲಿಕ್ಕೂ ಅಥವಾ ತನ್ನ ಸ್ವಂತ ಪೀಪಾಯಿಗಳನ್ನು ಇಟ್ಟುಕೊಳ್ಳಲಿಕ್ಕೂ ಬದ್ಧನಾಗಿರುವದಿಲ್ಲ. ಅಂಥಾ ಸಂದರ್ಭಗಳಲ್ಲಿ ಗವರ್ನ್ಮೆಂಟ ಟ್ರಾನ್ಸಪೋರ್ಟಿಂಗ ಕಂಟ್ರಾಕ್ಟುದಾರರು, ಇವರ ಏಜಂಟ ಯಾ ನಾಕರನು ಅಂಥಾ ಲೈಸೆನ್ಸದಾರನ ಸಾರಾಯಿಯ ಸರಕನ್ನು ಡಿಸ್ಟಿಲೆರಿಯಿಂದ ರವಾನಿಸಿ, ಅದನ್ನು ಆತನಿಗಾಗಲೀ ಅಥವಾ ಆತನ ಕೈ ಕೆಳಗಿರುವ ಅಂಗಡಿಕಾರರಿಗಾಗಲೀ ಮೇಲ್ಕಂಡ ಬಾಂಡೆಡ ಡೆಪೋದಲ್ಲಿ ಪಾವತಿ ಮಾಡತಕ್ಕದ್ದು; ಪರಂತು ಲೈಸೆನ್ಸದಾರನು ಡಿಸ್ಟಿಲೆರಿಯಿಂದ ದಾಖಲಾದ ಯಾವದಾದರೊಂದು ಪೀಪಾಯಿಯ ಪೂರಾ ಷರಾಬಿಗೆ ಡ್ಯೂಟಿ ವ ಖರೀದಿಯನ್ನು ಮುಂಗಡವಾಗಿ ಪಾವತಿ ಮಾಡುವ ಪಕ್ಷದಲ್ಲಿ, ಅಂಥಾ ಷರಾಬನ್ನೆಲ್ಲಾ ಕೂಡ್ಲೆ ಆತನ ಅಂಗಡಿಗಳಿಗೆ ಬಟವಾಡೆ ಮಾಡಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರ ಸಾಹೇಬರವರ ಲೈಸೆನ್ಸ ಪ್ರಕಾರ ಆತನ ಫಿರ್ಕಾ ಸರಹದ್ದಿನೊಳಗೆ ಸ್ಥಾಪಿಸಿರಬಹುದಾದ ಕೋಠಿಗೆ ಆತನ ಸ್ವಂತ ಪಾತ್ರೆಗಳಲ್ಲಿ ತೆಗೆದುಕೊಂಡು ಹೋಗಿ ಇಟ್ಟುಕೊಂಡು ಅಲ್ಲಿಂದ ಆತನ ಅಂಗಡಿಗಳಿಗೆ ಅವಶ್ಯಕವಾದಷ್ಟು ಷರಾಬನ್ನೂ ಕೊಡಲಿಕ್ಕೂ ಸ್ವತಂತ್ರನಾಗಿರುತ್ತಾನೆ. ಆತನು ಬಾಂಡೆಡ ಕೋಠಿಯಲ್ಲಿ ಯಾ ತನ್ನ ಸ್ವಂತ ಕೋಠಿ ಇದ್ದರೆ ಅದರಲ್ಲಿ ಎಕ್ಸೈಸ ಕಮ್ಮಿಷನರ ಸಾಹೇಬರವರು ಅಪ್ಪಣೆ ಕೊಡುವಷ್ಟು ಷರಾಬು ಸರಕನ್ನು ಇಡಲಿಕ್ಕೆ ಬದ್ಧನಾಗಿರತಕ್ಕದ್ದು.

(7) ಡಿಸ್ಟಿಲೆರಿಯಿಂದ ಯಾ ಬಾಂಡೆಡ ಕೋಠಿಗಳಿಂದ ಫಿರ್ಕಾ ಕೋಠಿಗಳಿಗೆ ರವಾನೆ ಆಗತಕ್ಕ ಷರಾಬಿನೊಡನೆ, ಮತ್ತು ಫಿರ್ಕಾ ಕೋಠಿಗಳಿಂದ ಯಾ ಬಾಂಡೆಡ ಕೋಠಿಗಳಿಂದ ಅಂಗಡಿಗಳಿಗೆ ರವಾನೆ ಆಗತಕ್ಕ ಷರಾಬಿನೊಡನೆ ಎಕ್ಸೈಜ ಕಮ್ಮಿಷನರವರು ಅಪ್ಪಣೆ ಮಾಡುವ ರೀತ್ಯಾ ಸಾಂಪಲ ಬಾಟಲಯಾನೆ ಮಾದ್ರಿ ಬುಡ್ಡಿಯು ರವಾನಿಸಲ್ಪಡತಕ್ಕದ್ದು. ಫಿರ್ಕಾ ಕೋಠಿಗಳಲ್ಲಿಡಲ್ಪಡುವ ಷರಾಬು, ಯಾ ಅವುಗಳಿಂದ ಅಂಗಡಿಗಳಿಗೆ ರವಾನೆ ಮಾಡಲ್ಪಡುವ ಷರಾಬು, ಮತ್ತು ಅಂಗಡಿಗಳಲ್ಲಿಡಲ್ಪಡುವ ವ ಅವುಗಳಿಂದ ಜನರಿಗೆ ಮಾರಲ್ಪಡುವ ಷರಾಬು ಸಹ ಡಿಸ್ಟಿಲೆರಿಯಿಂದ ಯಾ ಬಾಂಡೆಡ ಡೆಪೋದಿಂದ ರವಾನಿಸಲ್ಪಡುವಾಗ್ಯೆ ಹ್ಯಾಗೆ ಇತ್ತೋ ಅದೇ ರೀತಿ ಇರತಕ್ಕದ್ದು; ಮತ್ತು ಯಾವ ರೀತಿಯಿಂದಲೂ ಕೆಡಿಸಲ್ಪಟ್ಟಿರಕೂಡದು, ಯಾ ನೀರಿನಿಂದ ಮಿಶ್ರ ಮಾಡಲ್ಪಟ್ಟಿರಕೂಡದು.

(8) ಲೈಸೆನ್ಸದಾರನು ತನ್ನಿಂದ ಖರೀದಿಗೆ ತೆಗೆದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿಮಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲೆಖ್ಖಗಳನ್ನಿಡಬೇಕು. ಆತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಯಾ ಪ್ಯಾಸ್‌ಗಳು ಹಾಲಿ ಜಾರೀಲಿರುವ ಯಾ ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಆಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರಿಂದ ಕ್ರಮವಾಗಿ ಲೈಸೆನ್ಸ್ ಪಡೆದ ದುಕಾನಗಳಲ್ಲಿ ವಿನಹ ಮತ್ತೆಲ್ಲಿಯೂ ಸಾರಾಯಿ ಬಿಕರೀ ಮಾಡಲಾಗದು; ಮತ್ತು ಎಕ್ಸೈಜ್ ಕಮಿಷನರವರ ಮುಂಚಿತವಾದ ಮಂಜೂರಾತಿ ಇಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ಮಾಯಿದೆ ಒಳಗೆ ಆತನ ಗುತ್ತಿಗೆ ಫಿರ್ಕಾ ಯಾವ ತಾಲ್ಲೂಕಿನಲ್ಲಿರುತ್ತೋ ಅಂಥಾ ತಾಲ್ಲೂಕಿನ ಯಾವ ಭಾಗದಲ್ಲಿಯೂ, ಶೇಂದಿ ವ್ಯಾಪಾರತಕ್ಕ ಬಟ್ಟಿ ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದಿ ಬಿಕರೀ ಮಾಡತಕ್ಕ ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಒಳದೇಶದ ಸಾರಾಯಿ ಮಾರುವ ತನ್ನ ಬಟ್ಟಿ ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನ್ಸಿನ ಮಾಯಿದೆ ಅಂದರವಾರ್ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸ್‌ದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನ ಇಟ್ಟುಕೊಂಡಿರಕೂಡದು.

(12) ಲೈಸೆನ್ಸ್‌ದಾರನು 1903ನೇ ಇಸವಿ ಜುಲೈ ೧ನೇಯಲ್ಲಿ ಬಾಂಡೆಡ್ ಡಿಪೋದಲ್ಲಿ ಯಾ ತನ್ನ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ಹಳೇ ಗುತ್ತಿಗೇದಾರನ ಬಾಬತು ದಾಸ್ತಾನ ಸಾರಾಯಿಯನ್ನ ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(13) ಲೈಸೆನ್ಸ್‌ದಾರನು ಹಾಲೀ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಮತ್ತು ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಗೆ ಬೇಕಾದ ಲೆಖ್ಖ, ರಹದಾರಿ ಅಥವಾ ಪ್ಯಾಸ್ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ಡೆಪ್ಯುಟಿ ಕಮಿಷನರ್ ಸಾಹೇಬರವರು ಲೈಸೆನ್ಸ್‌ದಾರನ ಕೈಕೆಳಗಿರುವ ಪ್ರತಿ ಒಂದು ಅಂಗಡಿಗೂ ವಿಧಾಯಕವಾದ ನಮೂನೆಯಲ್ಲಿ ಲೈಸೆನ್ಸನ್ನು ಕೊಡತಕ್ಕದ್ದು.

(16 ತೆಗೆದುಕೊಳ್ಳಲ್ಪಟ್ಟಿದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರ ಮಾಡದೇ ತಿರಸ್ಕರಿಸುವರು.

8. ಲೈಸೆನ್ಸ್‌ದಾರನಿಂದಲಾಗಲಿ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲಿ ಮೇಲ್ಕಂಡ ಷರತ್ತುಗಳು ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ, ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಶ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೇ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಠೇವಣಿ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿಕೊಳ್ಳಲ್ಪಟ್ಟಿರುತ್ತೆಂದ ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರೀ ಮೇಲೆ ಸದರೀ ಸರ್ವ ಸ್ವಾತಂತ್ರ್ಯದ ಹಕ್ಕನ್ನ ಪುನಃ ಹರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೇ ಫಿರ್ಕಾವನ್ನ, ಸರಕಾರದ ಆಡಳಿತದಲ್ಲಿಡಲಿಕ್ಕೂ ಅಥವಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮುಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ಬೇಖೀಲ್ ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ್ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ಇತರ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸ್‌ದಾರನನ್ನಾಗಲಿ, ಯಾ ಆತನ ಏಜಂಟನನ್ನಾಗಲಿ, ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕಪಡಿಸುವವೆಂದು ಭಾವಿಸಲ್ಪಡಕೂಡದು.

1903–1904ನೇ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ್ 442–Ex : F. 1902, ತಾರೀಖು 18ನೇ ಮಾರ್ಚಿ 1903.

1. ಇದಕ್ಕೆ ಲಗತ್ತು ಮಾಡಿರುವ * ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಜಾಗಗಳಲ್ಲಿರುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1903ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರೀ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್‌ಗಳು ಯಾ ಸಬ್ ಡಿವಿಜನ್ ಆಫಿಸರರು ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫೀಸರರು ಯಾ ಡೆಪ್ಯುಟಿ ಕಮಿಷನರವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರವರು ಸರ್ಕಾರದ ಸವಾಲನ್ನು ಗೊತ್ತುಮಾಡಿಕೊಂಡು ಹರಾಜ್ ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೇ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು.

2. (a) ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲ್ ಮಾಡುವದಕ್ಕೆ ಮುಂಚಿತವಾಗಿ 60 ರೂಪಾಯಿ ಯಾ ಹರಾಜ್ ಮಾಡತಕ್ಕ ಆಫಿಸರರು ಗೊತ್ತುಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗಳಿಗೆ ಯಾರ ಜಡದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೆ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರು ಮಾಡಲ್ಪಡೋಣವು, ಗವರ್ನ್ಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ, ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು, ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡದು ಇರುವ ಅವರ ತರಫ ಮುಖ್ತಾಲೀಕರನ್ನು ಕಳುಹಿಸಬೇಕು. ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫಿಸರರು ಯುಕ್ತಾನುಸಾರ ಸರ್ಕಾರದ ಸವಾಲನ್ನು ತಗ್ಗಿಸಬಹುದು. ಸವಾಲ್ಮಾಡಲು ಅಪೇಕ್ಷಿಸುವ ಜನರ ಸ್ಥಿತಿಯನ್ನೂ ಮತ್ತು ಅವರ ಚಾಲ್‌ಚಲನನ್ನೂ ವಿಚಾರಿಸಬಹುದು; ಅಂಥಾ ವಿಚಾರಣೆಯ ಫಲಿತಾಂಶವು ಯಾರ ವಿಷಯದಲ್ಲಿ ತೃಪ್ತಿಕರವಾಗಿಲ್ಲವೋ ಅಂಥಾ ಜನರಿಂದ ಸವಾಲ್ಮಾಡಲಿಕ್ಕೆ ಹಕ್ಕನ್ನುಂಟುಮಾಡುವ ಅವಶ್ಯಕವಾದ ಠೇವಣಿಯನ್ನು ತೆಗೆದುಕೊಳ್ಳುವದಿಲ್ಲವೆಂದು ಹರಾಜು ಕಾಲದಲ್ಲಿ ತಿರಸ್ಕರಿಸಬಹುದು. ತನ್ನ ಲೈಸೆನ್ಸಿನ ಷರತ್ತುಗಳಿಗೂ, ಅಥವಾ ಜಾರೀಲಿರತಕ್ಕ ಎಕ್ಸೈಜ್ ಕಾನೂನುಗಳಿಗೂ ಉಲ್ಲಂಘನೆ ಮಾಡಿದ ತಪ್ಪಿತಸ್ಥನಾದ ಹಳೇ ಗುತ್ತಿಗೇದಾರನಿಗೆ ಸವಾಲ್ಮಾಡಲು ಹಕ್ಕು ಇರುವದಿಲ್ಲ. ಹರಾಜು ನಡಿಸತಕ್ಕ ಆಫಿಸರರಿಗೆ ಭಡ ಸವಾಲು ತುಂಬಾ ದುಬಾರಿಯಾಗಿರುವದರಿಂದ ಗುತ್ತಿಗೇದಾರನು ಮುಂದೆ ದಿವಾಳಿಯಾಗುವನೆಂಬ ಅನುಮಾನ ತೋರುವ ಪಕ್ಷದಲ್ಲಿ ಅಂಥಾ ಭಡ ಸವಾಲನ್ನು ಅವರು ತಿರಸ್ಕರಿಸಬಹುದು.

(b) ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಮ್‌ಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಭಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜ್ ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಹರಾಜು ಅಂತ್ಯದಲ್ಲಿ ಅವರುಗಳಿಗೆ ವಾಪಸ್ ಮಾಡಲ್ಪಡುತ್ತವೆ. ಹರಾಜ್ ನಡೆಯುತ್ತಾ ಬಂದಹಾಗೆಲ್ಲಾ ಪ್ರತಿ ಅಂಗಡಿಗೆ ಯಾರ್ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆಯಾಯ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನು ಠೇವಣೀ ಇಡಬೇಕು. ಡೆಪ್ಯುಟಿ ಕಮಿಷನರಿಂದ ಹರಾಜ್ ಮಂಜೂರಾದ 7 ದಿವಸಗಳೊಳಗಾಗಿ ಮೊದಲು ಹಾಜರ್ಮಾಡಿದ ಠೇವಣೀ ಸೇರಿಸಿಕೊಂಡು, ಎರಡು ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ಠೇವಣೀ ಇಡಬೇಕು. ಅವರು ಮೈಸೂರು ಸೀಮೆಯಲ್ಲಿ ಜಿಂದಿಗಿಯನ್ನುಂಟಾಗದೆ ಇರುವ ಅನ್ಯದೇಶದವರಾಗಿ, ಯಾ ಜೇವಾಳಸ್ಥರೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವರಾಗಿ ಇರುವಂತೆ ಕಂಡುಬಂದ ಪಕ್ಷದಲ್ಲಿ, ವಿಧಾಯಕವಾದ ಎರಡರಷ್ಟು ಮೊಬಲಗನ್ನು ಠೇವಣೀ ಇಡುವದಕ್ಕಾಗಲೀ ಯಾ ಅವರ ಗುತ್ತಿಗೆ ಷರತ್ತುಗಳನ್ನನುಸರಿಸಿ ಅವರು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತೀ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದು ಕೊಡುವದಕ್ಕೆ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಅವರಿಗೆ ನಿರ್ಬಂಧಪಡಿಸಬಹುದು. ಅವರು ಈ ಠೇವಣಿಗಳಲ್ಲಿ ಯಾವದನ್ನಾದರೂ ಹಾಜರ್ಮಾಡದೆ ತಪ್ಪಿದರೆ ಯಾ ಆವಶ್ಯಕವಾದ

* ಷರಾ–ಸರ್ 1903ನೇ ಇಸವಿ ಮಾರ್ಚಿ 26ನೇ ತಾರೀಖು ಮೈಸೂರ ಗೆಜೆಟ್ಟಿಗೆ ಸಪ್ಲಿಮೆಂಟಾಗಿ ಷೆಡ್ಯೂಲ್ ಛಾಯಿಷಾಗಿರುತ್ತೆ.

ಜಾಮೀನ್ದಾರ ಅಥವಾ ಜಾಮೀನ್ದಾರರನ್ನು ಹಾಜರ್ಮಾಡದೆ ಹೋದಲ್ಲಿ ಮೊದಲೇ ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಂಡವಾಗಿ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತು ಗಳಿಗೆ ಅನುಸಾರವಾಗಿ ಡೆಪ್ಯುಟಿ ಕಮ್ಮಿಷನರವರಿಂದ ಪುನಃ ಹರಾಜು ಮಾಡಲ್ಪಡುವದು ಅಥವಾ ಬೇರೆ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಮತ್ತು ಅವರು ಈ ಅಂಗಡಿಗಾಗಲಿ ಅಥವಾ ಮತ್ಯಾವ ಅಂಗಡಿಗೋಸ್ಕರವಾಗಿ ಆಗಲಿ ಸವಾಲ್ ಮಾಡಕೂಡದು.

4. ಮೇಲಿನ 3ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀ ಮೇಲೆ ನಡೆಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದು ಕೊಂಡವನಾಗುತ್ತಾನೆ; ಮತ್ತು ದುಸರೇ ಹರಾಜ್ ಮಾಡುವಲ್ಲಿ ನಷ್ಟಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಚಡಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರಕಾರಕ್ಕ ದಂಡವಾಗಿ ಶೇರಿಸಿಕೊಂಡಿರುವ ಠೇವಣೀ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಆ ಠೇವಣೀ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣೀ ಮೊಬಲಗನ್ನೆಲ್ಲಾ ಸರಕಾರಕ್ಕೇನೇ ಜಮಾ ಮಾಡಿಕೊಳ್ಳತಕ್ಕದ್ದು.

5. ಯಾರ್ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಇವೆಯೋ ಆ ಜನಗಳು ಮೇಲ ನಮೂದಿಸಿದ 7 ದಿನಗಳ ವಾಯಿದೆ ಕಳೆದನಂತರ 10 ದಿನಗಳೊಳಗಾಗಿ ವಿಧಾಯಕವಾದ ನಮೂನೆಯಲ್ಲಿ ತಾನು ತನ್ನ ಕರಾರಿನ ಷರತ್ತುಗಳನ್ನು ಕ್ರಮವಾಗಿ ಜಾರಿ ಮಾಡಲಿಕ್ಕೆ ಡೆಪ್ಯುಟಿ ಕಮ್ಮಿಷನರವರು ಎಷ್ಟು ಚರ ಮತ್ತು ಸ್ಥಿರ ಆಸ್ತಿಯು ಸಾಕಾಗಿರುತ್ತೆಂದು ಎಣಿಸುತಾರೋ ಅಷ್ಟು ಆ ಬಾಬತು ತನ್ನ ಆಸ್ತಿಗಳುನಿಸಿ ಲೈಸೆನ್ಸಗಳನ್ನು ಪಡಿಯತಕ್ಕದ್ದು, ಮತ್ತು ಕರಾರುಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಲೈಸೆನ್ಸ ಪಡಿಯಲಿಕ್ಕೆ ಯಾ ಒಡಂಬಡಿಕೆಯನ್ನು ಬರೆದು ಕೊಡಲಿಕ್ಕ ಯಾವ ಮನುಷ್ಯನಾದರೂ ತಪ್ಪಿದರೆ ಮೊದಲೇ ಇಡೋಣಾದ ಠೇವಣಿಗಳೆಲ್ಲವನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಸದರೀ ಅಂಗಡಿಯು ಯಾ ಅಂಗಡಿಗಳು ಅಂಥಾ ಮನುಷ್ಯರ ಜವಾಬ್ದಾರಿ ಮತ್ತು ನಷ್ಟದ ಮೇಲೆ ಪುನಹ ಹರಾಜು ಮಾಡಲ್ಪಡುತ್ತವೆ; ಅಥವಾ ಬೇರೆ ವಿಧವಾಗಿ ವ್ಯವಸ್ಥೆ ಮಾಡಲ್ಪಡುತ್ತವೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

6. ಹಿಂದಿನ ಕೆಲವು ವರುಷಗಳ ಬಾಬತು ಪ್ರತಿ ಅಂಗಡಿಯ ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ವಗೈರೆ ತಪ್ಸೀಲ್ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಮೇಲಿನ 5ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20ನೇ ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವದಕ್ಕೂ ಮತ್ತು ಡೆಪ್ಯುಟಿ ಕಮ್ಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫೀಸರರ ಅಪ್ಪಣೆಯಿಂದ 30 ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರಂತು ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಡಬ್ಬಲ್ ಡಿಸ್ಟಿಲ್ಡ್ಯಾನೆ ದುಗುಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನ ಅಂದರೆ ಬ್ರಾಂದಿ, ವಿಸ್ಕಿ, ಜಿನ್ ಮುಂತಾದದ್ದನ್ನು ಮಾರಲಿಕ್ಕೆ ಹಕ್ಕು ಇರಲಾರದು. ಈ ಬಾಬತು ಷರಾಬನ್ನ ವ ಮದ್ಯಗಳನ್ನು ತಮ್ಮ ಸ್ವಂತ ಖರೀದಿಗಳಿಗೆ ಮಾರುವದಕ್ಕೆ ಅನ್ಯದೇಶದ ಸಾರಾಯಿಗಳ ಅಂಗಡಿಕಾರರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) (*a*) ಸದರೀ ಸ್ವತಂತ್ರದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾದ ತಾಲ್ಲೂಕು ಖಜಾನೆಗೆ 1903ನೇ ಇಸವಿ ಜುಲೈ ಮಾಹೇ ಲಾಗಾಯತು ಸರಿಯಾದ ತಿಂಗಳು ಗಟ್ಲೆ ಕಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಕಿಸ್ತೂ ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ಸಗಾಗಿ ಏನೂ ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮ್ಮಿಷನರ ಹುಕುಂ ಪಡೆದು ಸದರೀ ಇಜಾರೆ ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರ

ಹ ಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಖೈರ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯಲ್ಲಿ ಸ್ವತಂತ್ರ ಅಂಗಡಿಯನ್ನು ಮರಳ ಹರಾಜು ಮಾಡತಕ್ಕದ್ದು.

(b) ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ಪಾಯಿದೆಯ ಆಖೈರ್ ಎರಡು ತಿಂಗಳ ಕಿಸ್ತು ಮೊಬಲಗಿಗೋಸ್ಕರ ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಸ್ವತಂತ್ರ ಅಂಗಡಿಯು ದುಸರೇ ಹರಾಜು ಮಾಡಲ್ಪಟ್ಟಾಗ ಸದರಿ ಡಿಪಾಜಿಟ್ಟು ಮೊಬಲಗು ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ದಂಡವಾಗಿ ಆದರೂ ತೆಗೆದುಕೊಳ್ಳಲ್ಪಡತಕ್ಕದ್ದು. ಅಥವಾ ತಪ್ಪಿಹೋದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗ ಬಹುದಾದ ಯಾವ ನಷ್ಟವೆನ್ನಾದರೂ ಭರ್ತಿಮಾಡುವ ಬಗ್ಯೆ ಉಪಯೋಗಿಸಲ್ಪಡತಕ್ಕದ್ದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳು ಸುದಾರವನ್ನು ಕಂದಾಯದ ಬಾಕಿ ವಸೂಲೀ ಬಗ್ಯೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಲೈಸೆನ್ಸದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ಮಿ ಮಾಡುವ ಬಗ್ಯೆ ಅಥವಾ ಪರಿಹಾರದ್ರವ್ಯವನ್ನು ಪಡೆಯುವ ಬಗ್ಯೆ ಕೇಳಲ್ಪಡಕೂಡದು.

(c) ಬಾಕಿಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯಿತು ಸಾಲಿಯಾನಾ ಶೇಕಡ 6ರ ಪ್ರಕಾರ ಆಗುವ ಬಡ್ಡೀ ದಾಖಲ ವಸೂಲ್ಮಾಡಲ್ಪಡತಕ್ಕದ್ದು.

(3) (a) ಈ ಸರ್ಕಾರಕ್ಕೆ ಸಾರಾಯಿಯನ್ನು ವ ಇತರ ಬಳದೇಶದ ಷರಾಬನ್ನು ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರ್ರಾದ "ಆರಬತನಾಟ ಅಂಡ ಕೋ" ಎಂಬ ವರ್ತಕರಿಂದಲಾಗಲೀ ಲೈಸೆನ್ಸ ಯಾ ಸರ್ಕಾರದ ಅಪ್ಪಣೆಮೇರ ಏರ್ಪಾಡಾಗಿರುವ ಬಾಂಡೆಡ ಡಿಪೋಯಿಂದಲಾಗಲೀ ಲೈಸೆನ್ಸದಾರನು ಕಾಕುಂಬಿ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ 1ಕ್ಕೆ 8½ ಆಣೆ ದರದ ಮೇರೆ ಕ್ರಯವನ್ನು ಪಾವತಿಮಾಡಿ ಕೊಂಡುಕೊಳ್ಳತಕ್ಕದ್ದು ಮತ್ತು ಆತನು ಬಿರಟೆ ಹಾಕಿ ಮೊಹರು ಮಾಡಿದ ಶೀಸೆಗಳಲ್ಲಿ 20° ಡಿಗ್ರಿ ಜೋರುಳ್ಳ ಬಲ್ಲದ ಸಾರಾಯಿಯನ್ನು ಸಹಾ ಗ್ಯಾಲನ 1ಕ್ಕೆ (ಲೋಕಲ್ ಸೆಸ ಶೇರಿ ಡ್ಯೂಟಿ ಅಂದರೆ 4¼ ರೂಪಾಯಿ ಅಡಗಿರುವ) ರೂ 6–2–6 ಪ್ರಕಾರ ಬಾಂಡೆಡ ಡಿಪೋದಿಂದ ಕೊಂಡುಕೊಳ್ಳಬಹುದು; ಮತ್ತು ಅಂಥಾ ಶೀಸೆಗಳನ್ನು ಗ್ಯಾಲನ 1ಕ್ಕೆ ರೂ. 7–7–0 ಪ್ರಕಾರ ಅಥವಾ ರೆಪ್ಯೂಟಡ ಕ್ವಾರ್ಟ್ ಶೀಸೆ 1ಕ್ಕೆ ರೂ. 1–3–10 ಪ್ರಕಾರ ಮೂತಬರ ಜನರಿಗೆ ಮಾರಬಹುದು.

(b) ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಕಾಕುಂಬಿ ಸಾರಾಯಿಯನ್ನು ಗ್ಯಾಲನ ಕ್ಕೆ 6–6–0 ಯಂತೆಯೂ, ಅಥವಾ ಗ್ಯಾಲನ್ನಿನ $\frac{1}{5}$ನೇ ಭಾಗವಾದ ಒಂದು ಡ್ರಾಂಗೆ 2 ಆಣೆ ಯಂತೆಯೂ ಸದರಿ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನರಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರ್ ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯು ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾಯಿ ದರದ ಮೇರಿಗೆ ಮುನಿಸಿಪಲ್ ಕಾನೂನು ಪ್ರಕಾರ ರೆಜಿಸ್ಟರ್ ಫೀ ಯಾ ರುಸುಮನ್ನು ಕೊಡಬೇಕು; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ ಫೀಯನ್ನು ಸಹ ಕೊಡಬೇಕು.

(5) ಭಟ್ಟಿದಾರರಿಂದ ಕಾಕುಂಬಿ ಸಾರಾಯಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿ ದರ ಮತ್ತು ರುಸುಂ ಸಿವಾಯಿ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ ಡಿಪೋದಿಂದ ಸಾರಾಯಿ ಒಯ್ಯಲ್ಪಡುವವಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ 1ಕ್ಕೆ ಲೋಕಲ್ ಸೆಸ ಸಹಿತ ವಿಧಾಯಕವಾಗಿರುವ 4¼ ರೂಪಾಯಿ ದರದಂತೆಯೂ, ಯಾ ಸದರಿ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇಕಾಗಿರುತ್ತೆ.

(6) ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ತಾಲ್ಲೂಕು ಕಚೇರಿಯಲ್ಲಿ ಭಾನುವಾರ ಮತ್ತು ರಜಾದಿನಗಳಲ್ಲಿಯೂ ಸಹ ಡಿಪೋ ಹಾಸಲು ಮತ್ತು ಖರೀದಿ ಮೊಬಲಗನ್ನು ತೆಗೆದುಕೊಳ್ಳಲು ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನ ವಶ

ಕ್ಕೆ ಪಾವತಿಮಾಡಿಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ್ ಡಿಪೋ ಜವಾಬ್ದಾರನು ಟ್ರೆಜರೀ ಆಫೀಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನು ನಮೂದು ಮಾಡಿ ಎಕ್ಸೈಜ್ ಕಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜವಾಬ್ದಾರನು ಬಾಂಡೆಡ್ ಡಿಪೋದಿಂದ ಸಾರಾಯಿ ರವಾನೆ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಜ್ ಕಮಿಷನರ್ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ್ ಬಾಟ್ಲಿಯಾಗ ಮಾಪ್ರಿ ಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು 1902ನೇ ಇಸವಿ ಜುಲೈ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೇ ಲೈಸೆನ್ಸದಾರನ ಬಾಬತು ದಾಸ್ತಾ ಸಾರಾಯಿಯನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(8) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ ಸಾರಾಯಿಯು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(9) ಅಂಗಡಿಯು ಎಕ್ಸೈಜ್ ಕಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(10) ತೆಗದುಕೊಳ್ಳಲ್ಪಟ್ಟದ್ದ ಅಂಗಡಿಗಳಿಗೆ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರ ಮಾಡದೆ ತಿರಸ್ಕರಿಸುವರು.

(11) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕನೂನು ಮತ್ತು ನಿಬಂಧನೆಗಳಿಗೂ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(12) ಬಾಕಿ ಕರಾರುಗಳು ವ ಷರತ್ತುಗಳು ವಿಧಾಯಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

8. ಲೈಸೆನ್ಸದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಅಂಗಡಿ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿಗೆ ಅಂಥಾ ಪ್ರತಿಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇವೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀ ಮೇಲೆ ಮೇಲ್ಕಂಡ ಅಂಗಡಿಯನ್ನು ಪುನಹ ಹರಾಜು ಮಾಡಲಿಕ್ಕೂ ಅಥವಾ ಇತರ ವಿಧವಾಗಿ ವಿಲೇಮಾಡಲಿಕ್ಕೂ ಯಾ ಅಂಥಾ ಅಂಗಡಿಯನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮಿಷನರವರು ಮುಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆರೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲ್ ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಅಂಗಡಿಯು ರದ್ದು ಮಾಡಲ್ಪಟ್ಟರೆ, ಪೂರಾಕಾಬದ ಗುತ್ತಿಗೇ ಹಣವು ಕೂಡ್ಲೇ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ದಂಡದ ವ ನಷ್ಟದ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಕಲಂನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನು ಯಾ ಇತರ ಕಾನೂನುಗಳಿಗೆ ವಿರೋಧವಾಗಿ ನಡೆಸಿದ ತಕ್ಸೀರಿಗೆ ಲೈಸೆನ್ಸುದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಸನ್ 1903—1904ನೇ ಸಾಲಿಗೆ ಶೇಂದಿ ಅಂಗಡಿಗಳ ಹರಾಜು.

ನಂಬರ್, 429—Ex: F. 6—1902, ತಾರೀಖು 18ನೇ ಮಾರ್ಚಿ 1903.

ಇದಕ್ಕೆ ಲಗತ್ತಿರುವ * ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಪ್ರತಿ ಅಂಗಡಿಯಲ್ಲಿ ಯಾ ಅಂಗಡಿಗಳ ಸಮುದಾಯದಲ್ಲಿ 12 ತಿಂಗಳು ಅಂದರೆ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು 1904ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಶೇಂದಿಯನ್ನು ಬಿಕರಿ ಮಾಡುವ ಏಟ್ಟು, ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮಿಷ್ಮನರುಗಳಿಂದ ಯಾ ರೆವಿನ್ಯೂ ಸಬ್ ಡಿವಿಜನ್ ಆಫೀಸರರಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫೀಸರರಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷ್ಮನರುಗಳಿಂದ ಆಯಾಯ ತಾಲ್ಲೂಕು ಕಸಬಾಗಳಲ್ಲಿ ಮೇಲ್ಕಂಡ ಪಟ್ಟಿಯಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಹರಾಜ್ ಹಾಕಲ್ಪಡುತ್ತೆಂದುನ್ನೂ, ಮತ್ತು ಸದರೀ ಹಕ್ಕಿಗೋಸ್ಕರ ಅತ್ಯಂತ ಜಾಸ್ತಿ ಗುತ್ತಿಗೆ ಮೊಬಲಗನ್ನು ದರಖಾಸ್ತು ಮಾಡುವ ಸವಾಲ್‌ದಾರನಿಗೆ ಅದು ಕೊಡಲ್ಪಡುವದೆಂದುನ್ನೂ, ಮೈಸೂರು ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಹರಾಜು ಹಾಕುವ ಆಫೀಸರರು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಸಮುದಾಯದ ಕ್ರಮವನ್ನು ಅವಶ್ಯಕಬಿದ್ದಾಗ ಬದಲಾಯಿಸಲಿಕ್ಕೂ ಮತ್ತು ಯಾವ ದರಖಾಸ್ತನ್ನಾಗಲಿ ಅವರಿಗೆ ಯುಕ್ತತೋರುವಂತೆ ಅಂಗೀಕರಿಸಲಿಕ್ಕೂ ಯಾ ತಿರಸ್ಕರಿಸಲಿಕ್ಕೂ ಅಥವಾ ಸದರೀ ಹಕ್ಕನ್ನು ಯಾವದಾದರೂ ಒಂದು ಮುಖ್ಯವಾದ ಸಂದರ್ಭದಲ್ಲಿ ಟೆಂಡರುಗಳನ್ನು ತೆಗೆದುಕೊಳ್ಳುವದರ ಮೂಲಕವಾಗಿಯಾಗಲೀ ಯಾ ಆಫೀಸಿನಲ್ಲಿ ಒಡಂಬಡಿಕೆ ಮೂಲಕವಾಗಿಯಾಗಲೀ ವಿಕ್ರಯಿಸಲಿಕ್ಕೂ ಅಥವಾ ಯಾವದಾದರೂ ಕಾಫಿ ಎಸ್ಟೇಟ್‌ನಲ್ಲಿ ಸದರೀ ಹಕ್ಕನ್ನು ಒಂದೊಂದು ಅಂಗಡಿಗೆ ಹನ್ನೆರಡು ರೂಪಾಯಿಗಳಿಗೆ ಕಮ್ಮಿಯಿಲ್ಲದಂತೆ ಗೊತ್ತಾದ ಮೊಬಲಗಿಗೆ ಕಾಫಿ ಪ್ಲಾಂಟರಿಗೆ ವಿಕ್ರಯಿಸಲಿಕ್ಕೂ ಸ್ವತಂತ್ರವುಳ್ಳವರಾಗಿರುತಾರೆ. ಇನಾಂಗ್ರಾಮಗಳಲ್ಲಿರತಕ್ಕ ಅಂಗಡಿಗಳು ಪ್ರತ್ಯೇಕವಾಗಿ ಹರಾಜು ಹಾಕಲ್ಪಡತಕ್ಕದ್ದಲ್ಲದೆ, ಅವುಗಳ ಬಾಬತು ಹುಟ್ಟುವಳಿ ಮೊಬಲಗು ಲೆಖ್ಖದಲ್ಲಿ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು. ಹರಾಜು ಪ್ರತಿ ಒಂದು ವಿಷಯದಲ್ಲಿಯೂ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟು ಇರತಕ್ಕದ್ದಲ್ಲದೆ ಗವರ್ನ್ಮೆಂಟಿನವರಿಂದ ಬದಲಾಯಿಸಲ್ಪಟ್ಟ ಹೊರ್ತು ಡೆಪ್ಯುಟಿ ಕಮಿಷ್ಮನರವರು ಕ್ರಮವಾಗಿ ಮಂಜೂರ್ ಮಾಡಿದಕೂಡಲೆ ಜಾರಿಗೆ ಬರತಕ್ಕದ್ದು. ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲು ಬಾರದೇ ಹೋದಲ್ಲಿ, ಹರಾಜು ಹಾಕುವ ಆಫೀಸರರು ಯುಕ್ತಾನುಸಾರ ಸರ್ಕಾರದ ಸವಾಲನ್ನು ತಗ್ಗಿಸಬಹುದು. ಸವಾಲ್ಮಾಡಲು ಅಪೇಕ್ಷಿಸುವ ಜನರ ಸ್ಥಿತಿಯನ್ನೂ ಮತ್ತು ಅವರ ಚಾಲ್‌ಚಲನನ್ನೂ ವಿಚಾರಿಸಬಹುದು ; ಅಂಥಾ ವಿಚಾರಣೆಯ ಫಲಿತಾಂಶವು ಯಾರ ವಿಷಯದಲ್ಲಿ ತೃಪ್ತಿಕರವಾಗಿಲ್ಲವೋ ಅಂಥಾ ಜನರಿಂದ ಸವಾಲ್ಮಾಡಲಿಕ್ಕೆ ಹಕ್ಕನ್ನುಂಟುಮಾಡುವ ಅವಶ್ಯಕವಾದ ಠೇವಣಿಯನ್ನು ತೆಗೆದುಕೊಳ್ಳುವದಿಲ್ಲವೆಂದು ಹರಾಜುಕಾಲದಲ್ಲಿ ತಿರಸ್ಕರಿಸಬಹುದು. ತನ್ನ ಲೈಸೆನ್ಸಿನ ಷರತ್ತುಗಳಿಗೂ ಅಥವಾ ಜಾರೀಲಿರತಕ್ಕ ಎಕ್ಸೈಸ್ ಕಾನೂನುಗಳಿಗೂ ಉಲ್ಲಂಘನೆ ಮಾಡಿದ ತಪ್ಪಿತಸ್ತನಾದ ಹಳೇ ಗುತ್ತಿಗೇದಾರನಿಗೆ ಸವಾಲ್ಮಾಡಲು ಹಕ್ಕು ಇರುವದಿಲ್ಲ. ಹರಾಜು ನಡಿಸತಕ್ಕ ಆಫೀಸರರಿಗೆ ಭಡಸವಾಲು ತುಂಬಾ ದುಬಾರಿಯಾಗಿರುವದರಿಂದ ಗುತ್ತಿಗೇದಾರನು ಮುಂದೆ ದಿವಾಳಿಯಾಗುವನೆಂಬ ಅನುಮಾನ ತೋರುವ ಪಕ್ಷದಲ್ಲಿ ಅಂಥಾ ಭಡಸವಾಲನ್ನು ಅವರು ತಿರಸ್ಕರಿಸಬಹುದು.

2. (a) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲೀ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾಲೀಕರ ಮೂಲಕವಾಗಿ ಆಗಲೀ ಹಾಜರಾಗಬೇಕು ; ಮತ್ತು ಪ್ರತ್ಯೇಕ ಅಂಗಡಿಗಳ ವಿಷಯದಲ್ಲಿ 10 ರೂಪಾಯಿಗಳನ್ನಾಗಲೀ ಯಾ ಅಂಗಡಿಗಳ ಸಮುದಾಯಗಳ ವಿಷಯದಲ್ಲಿ 25 ರೂಪಾಯಿಗಳನ್ನಾಗಲೀ ಯಾ ಹರಾಜು ಹಾಕುವ ಆಫೀಸರರಿಂದ ವಿಧಿಸಲ್ಪಡಬಹುದಾದಷ್ಟು ಬೇರೆ ಮೊಬಲಗನ್ನಾಗಲೀ ಠೇವಣಿ ಇಟ್ಟ ಹೊರ್ತು ಯಾರೊಬ್ಬರೂ ತನಗಾಗಿಯಾಗಲೀ ಯಾ ಇತರರಿಗೋಸ್ಕರವಾಗಿಯಾಗಲೀ ಸವಾಲ್ಮಾಡಕೂಡದು. ಅಂಥಾ ಠೇವಣಿ ಮೊಬಲಗುಗಳು ಹರಾಜು ಖೈದಾದಕೂಡಲೆ ವಾಪಸುಮಾಡಲ್ಪಡುವವು.

* ಷರಾ—ಸನ್ 1903ನೇ ಇಸವಿ ಮಾರ್ಚಿ 26ನೇ ತಾರೀಖು ಮೈಸೂರ ಗೆಜೆಟ್ಟಿಗೆ ಸಪ್ಲಿಮೆಂಟಾಗಿ ಷೆಡ್ಯೂಲ್ ಛಾಪಿಸಲಾಗಿದೆ.

(b). ಯಾವ ಅಂಗಡಿಯಾಗಲಿ, ಯಾ ಅಂಗಡಿಗಳ ಸಮುದಾಯವಾಗಲಿ ಒಬ್ಬ ಆಸಾಮಿಗಿಂತ ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪಿನಿ ಯಾ ಫರಮ್ಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಚಡಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜ ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಹರಾಜನಲ್ಲಿ ಪಡದ ಸವಾಲ್ದಾರನು ಎರಡನೇ ಅಂಗಡಿಯ ಯಾ ಅಂಗಡಿಗಳ ಸಮುದಾಯದ ಹರಾಜು ಷುರುವಾಗುವದಕ್ಕೆ ತತ್ಪೂರ್ವವೇ ಸದರೀ ಸಾಲಿಗೆ ತನ್ನ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತು ನಾಲ್ಕರಲ್ಲಿ ಒಂದುಭಾಗಕ್ಕೆ ಸರಿಯಾದ ಮೊಬಲಗನ್ನು ಅಂದರೆ ಒಂದು ತಿಂಗಳ ಗುತ್ತಿಗೆ ಮೊಬಲಗಿನಲ್ಲಿ ಅರ್ಧವನ್ನು ಠೇವಣೀ ಇಡಬೇಕು, ಮತ್ತು ಡೆಪ್ಯುಟಿ ಕಮಿಷನರವರಿಂದ ಹರಾಜ ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಇಡಬೇಕಾದ ಠೇವಣೀ ದೇಖಿಲ್ ಆತನ ಮೂರುತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಮೇಲ್ಕಂಡಂತೆ ಮೂರುತಿಂಗಳು ಗುತ್ತಿಗೆ ಮೊಬಲಗಿಗೆ ಸಮನಾದ ಠೇವಣಿಯನ್ನು ಹಾಜರು ಮಾಡಲಿಕ್ಕೆ ವಿಧಿಸಿರುವ ಅವಧಿಯು ಕಳೆದ ಹತ್ತು ದಿವಸಗಳೊಳಗಾಗಿ ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಕೆಳಗೆ ನಮೂದಿಸುವ ಷರತ್ತುಗಳ ಪ್ರಕಾರವೂ ಮತ್ತು ಆತನಿಗೆ ಕೊಡಲ್ಪಡುವ ಲೈಸೆನ್ಸಿನಲ್ಲಿ ವಿಧಿಸಿರುವ ಷರತ್ತುಗಳ ಪ್ರಕಾರವೂ ನಡೆಯಲಿಕ್ಕೆ ಅವಶ್ಯಕವಾಗಿರುವಷ್ಟು ಚರ ಮತ್ತು ಸ್ಥಿರ ಸ್ವತ್ತುಗಳ ಸಹಿತವಾಗಿ ಬದ್ಧನಾಗಿರತಕ್ಕವನೆಂದು ಒಂದು ಕರಾರನ್ನು ಬರದುಕೊಡತಕ್ಕದ್ದು; ಮತ್ತು ಇದರ ಮುಂದಿನ ಕಲಮನ್ನನುಸರಿಸಿ ಅಂಗೀಕರಿಸಲ್ಪಟ್ಟ ಪಕ್ಷದಲ್ಲಿ ಆತನ ಜಾಮೀನ್ದಾರನು ಸದರೀ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಅವನ ಕರಾರಿನ ಷರತ್ತುಗಳನ್ನನುಸರಿಸಿ ಕ್ರಮವಾಗಿ ಆಚರಿಸುವದಕ್ಕೋಸ್ಕರ ತನ್ನನ್ನು ಮತ್ತು ಡೆಪ್ಯುಟಿ ಕಮಿಷನರವರು ಅಪೇಕ್ಷಿಸಬಹುದಾದಷ್ಟು ಆತನ ಚರ ವ ಸ್ಥಿರಸ್ವತ್ತುಗಳನ್ನು ಈಡುಮಾಡಿ ವಿಧಾಯಕವಾಗಿರುವ ನಮೂನೆಯಲ್ಲಿ ಜಾಮೀನ್ ತಮಸೂಕನ್ನು ಬರದುಕೊಡತಕ್ಕದ್ದು. ಈ ಕಲಂನಲ್ಲಿ ವಿಧಿಸಿರುವ ವಾಯಿದೆ ಒಳಗಾಗಿ ಠೇವಣಿ ಯಾ ಠೇವಣಿಗಳನ್ನು ಹಾಜರು ಮಾಡಲಿಕ್ಕೆ ಯಾ ಕರಾರನ್ನು ಯಾ ಜಾಮೀನ್ ತಮಸೂಕನ್ನು ಬರದುಕೊಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಕೂಡ್ಲೆ ಸದರೀ ಸ್ವಾತಂತ್ರ್ಯದ ಹಕ್ಕನ್ನು ಮೊದಲು ಕೊಂಡುಕೊಂಡವನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಮಾಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ಪ್ರಥಮ ಖರೀದಿದಾರನಿಂದ ಮೊದಲೇ ಹಾಜರು ಮಾಡಲ್ಪಟ್ಟ ಠೇವಣಿ ಯಾ ಠೇವಣಿಗಳು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಉಂಟಾದ ನಷ್ಟಕ್ಕೆ ಸಹ ಗುರಿಯಾಗಿರತಕ್ಕದ್ದು; ಪರಂತು ದುಸರಾ ಹರಾಜಿನಲ್ಲಿ ಯಾ ಅನ್ಯಥಾ ವಿಲೇವಾರಿಯಲ್ಲಿ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರಲಾರದು. ಹರಾಜ ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

4. ಹಿಂದಿನ ಕಲಮನ್ನನುಸರಿಸಿ ಹಾಜರು ಮಾಡಲ್ಪಟ್ಟ ಠೇವಣಿಯು ನಗದಾಗಿಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಇಂಡ್ಯಾ ಗವರ್ನಮೆಂಟ್ ಸೆಕ್ಯೂರಿಟಿಗಳ ಯಾ ಮೈಸೂರು ಡಿಬೆಂಚರುಗಳ ಮೂಲಕವಾಗಿಯಾಗಲೀ ಇರತಕ್ಕದ್ದು. ಪರಂತು ಮೇಲ್ಕಂಡಂತೆ ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣಿಗೆ ಬದಲಾಗಿ ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ಮೇಲ್ಕಂಡ ಮೇರಿಗೆ ಒಂದು ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣೀ ಇರಿಸಿ ನಾಲ್ಕು ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಮೊಬಲಗ್ಗೆ ಖಾತರ್ ಜಾಮೀನನ್ನು ಕೊಡುವಂತೆಯೂ ಅಥವಾ ಎರಡು ತಿಂಗಳು ನಗದು ಗುತ್ತಿಗೆ ಹಣವನ್ನೂ ಮತ್ತು ಮೂರು ತಿಂಗಳು ಗುತ್ತಿಗೆ ಹಣಕ್ಕೆ ನಫರ್ ಜಾಮೀನನ್ನು ಸಹ ಹಾಜರ್ಮಾಡುವಂತೆಯೂ, ಖರೀದಿದಾರನಿಗೆ ಅಪ್ಪಣೆ ಕೊಡಬಹುದು. ಒಂದು ತಿಂಗಳ ಗುತ್ತಿಗೆ ಮೊಬಲಗು ಹತ್ತು ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ ಮೂರು ತಿಂಗಳ ಕಿಸ್ತಿಗೆ ಸಮನಾದ ನಗದು ಠೇವಣಿಯನ್ನು ಯಾವಾಗ್ಯೂ ತೆಗೆದುಕೊಳ್ಳಬೇಕೇ ಹೊರತು ನಫರ್ ಜಾಮೀನನ್ನು ಕೇಳಲೂ ಕೂಡದು, ಯಾ ಅಂಗೀಕರಿಸಲೂಕೂಡದು. ಆತನು ಮೈಸೂರು ಸೀಮೆಯಲ್ಲಿ ಜಿಂದಗಿಯನ್ನುಂಟಾಗದೆ ಇರುವ ಅನ್ಯದೇಶದವನಾಗಿಯೂ, ಜೇವಾಳಸ್ತನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡುಬಂದ ಪಕ್ಷದಲ್ಲಿ, ವಿಧಾಯಕವಾದ ಎರಡರಷ್ಟು ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ, ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ದೇಶದಲ್ಲಿ ವಾಸನಾಗಿ ಜಿಂದಗಿಯನ್ನುಂಟಾಗಿರತಕ್ಕ ಒಬ್ಬ ಜಾಮೀನ್ದಾರನನ್ನು ಯಾ ಜಾಮೀನ್ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ನಿರ್ಬಂಧ ಪಡಿಸಬಹುದು.

5. ಕರಾರುಗಳನ್ನೂ ಮತ್ತು ತಮಸೂಕುಗಳನ್ನೂ ಬರೆದುಕೊಟ್ಟ ಕೂಡ್ಲೆ ಖರೀದಿದಾರನಿಗೆ ಡೆಪ್ಯುಟಿ ಕಮಿಷ್ನರವರು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟು ವಿಧಾಯಕವಾದ ನಮೂನೆಯಲ್ಲಿ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ನಮೂದಿಸಿ ಒಂದು ಲೈಸೆನ್ಸನ್ನು ಕೊಡುವರು :—

(1) ಲೈಸೆನ್ಸದಾರನು ತನ್ನ ದುಕಾನಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ ಅಂಗಡಿಗಳ ಸಮುದಾಯಕ್ಕೆ ಸೇರಿದ ವನಗಳಲ್ಲಿ ಇರುವ ಶೇಂದಿ ಉತ್ಪತ್ತಿ ಆಗುವ ಗಿಡಗಳನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸರ್ವ ಸ್ವಾತಂತ್ರ್ಯವುಳ್ಳವನಾಗಿರುತ್ತಾನೆ. ಮತ್ತು ಆಪಸನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಡುಗಳನ್ನನುಸರಿಸಿ ಬಿಡುವಳಿದಾರರ ಜಮೀನುಗಳಲ್ಲಿ ಇರತಕ್ಕ ಮರಗಳಿಂದ ಶೇಂದಿಯನ್ನು ತಯಾರುಮಾಡಿಕೊಳ್ಳುವದಕ್ಕೆ ಸ್ವತಂತ್ರನಾಗಿರುತ್ತಾನೆ. ಲೈಸೆನ್ಸದಾರನು ಇನ್ಸ್ಪೆಕ್ಟರವರಿಗೆ ದರಖಾಸ್ತು ಕೊಟ್ಟು ಅವಶ್ಯಕವಾಗಿರುವ ಬಗ್ಯೆ ಅವರಿಂದ ಅಪ್ಪಣೇ ಚೀಟಿ ಪಡೆದು ಇತರ ಶೇಂದಿ ದುಕಾನದಾರನಿಂದ ಶೇಂದಿಯನ್ನು ಕೊಂಡುಕೊಳ್ಳಬಹುದು.

(2) ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ವಗೈರಾ ಮರಗಳ ಶೇಂದಿಯನ್ನು ಮಾರುವದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು ಬಗನಿ ಮರಗಳನ್ನೂ, ಬಗನೀ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನೂ ಕಟ್ಟಕೂಡದು. ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳನ್ನು ಕಟ್ಟಬಹುದು.

(3) ಗುತ್ತಿಗೆ ಮೊಬಲಗನ್ನು ಸರ್ಕಾರದಿಂದ ಆ ಬಗ್ಯೆ ವಿಧಾಯಕವಾಗಿ ಅಚ್ಚು ಹಾಕಲ್ಪಟ್ಟಿರುವ ಚಲನ್ಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1903ನೇ ಇಸವಿ ಜುಲೈ ಲಾಗಾಯತು ಸರಿಸಮಾನ ತಿಂಗಳಗಟ್ಲೆ ಕಿಸ್ತು ಪ್ರಕಾರ ಪಾವತಿಮಾಡುತ್ತಾ ಬರತಕ್ಕದ್ದು. ಪರಂತು ಯಾವದಾದರೊಂದು ಅಂಗಡಿಯ ಗುತ್ತಿಗೆ ಹಣವು ಸಾಲು 1ಕ್ಕೆ ಐದು ರೂಪಾಯಿಗಳಿಗೆ ಮೀರದಿದ್ದರೆ, ಪೂರಾ ಮೊಬಲಗು ಮೊದಲಿನ ಕಿಸ್ತಿನಲ್ಲಿಯೇ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿಯೊಂದು ಕಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ ಗೋಸ್ಕರ ಏನೂ ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಅದೇ ತಿಂಗಳ 20ನೇ ತಾರೀಖು ವ ಅದರೊಳಗೆ ಪಾವತಿಯಾಗತಕ್ಕದ್ದು. ಹಾಗೆ ಪಾವತಿಯಾಗುವದಕ್ಕೆ ತಪ್ಪಿದರೆ, ಅಮಲ್ದಾರರು, ಡೆಪ್ಯುಟಿ ಕಮಿಷ್ನರವರ ಮಂಜೂರಾತಿಯನ್ನು ಪಡೆದು ಬರಹಮೂಲಕ ರಿಕಾರ್ಡು ಮಾಡಿ, ಲೈಸೆನ್ಸನ್ನು ರದ್ದುಮಾಡಿ, ತಪ್ಪಿತಸ್ಥನ ಠೇವಣಿಗಳನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲಿಕ್ಕೆ ಹುಕುಂ ಮಾಡಿ ಸಾಧ್ಯವಾದ ಮಟ್ಟಿಗೆ ಸದರೀ ತಿಂಗಳು ಆಖೈರಾದ ಕೂಡ್ಲೆ ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ತಪ್ಪಿತಸ್ಥನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜ್ ಮಾಡಬಹುದು, ಯಾ ಅನ್ಯಥಾ ವಿಲೇವಾರಿ ಮಾಡಬಹುದು. ಪರಂತು ಮೇಲ್ಕಂಡಂತೆ ದುಸರಾ ಹರಾಜ್ ಹಾಕುವದಕ್ಕೆ ಬದಲಾಗಿ, ಡೆಪ್ಯುಟಿ ಕಮಿಷ್ನರವರು ತಮಗೆ ಯುಕ್ತ ತೋರುವಂತೆ ತಪ್ಪಿತಸ್ಥನು ಪಾವತಿ ಮಾಡಲು ಒಪ್ಪಿಯಿದ್ದ ಗುತ್ತಾ ಮೊಬಲಗಿಗಿಂತ ಕಡಿಮೆ ಇಲ್ಲದೆ ಇರುವ ಗುತ್ತಿಗೆಗೆ ಸಮನಾಗತಕ್ಕ ಮೊಬಲಗುಗಳಿಗೆ ತಪ್ಪಿದ ಲೈಸೆನ್ಸದಾರನ ಕೈಕೆಳಗಿರುವ ವೆಂಡರ್ ಅಥವಾ ಸಬ್ ವೆಂಡರುಗಳಿಗೆ ಲೈಸೆನ್ಸನ್ನು ಕೊಡಲು ಅಮಲ್ದಾರ್ರಿಗೆ ಹುಕುಂ ಮಾಡಬಹುದು.

(4) ಲೈಸೆನ್ಸದಾರನಿಂದ ಹಾಜರು ಮಾಡಲ್ಪಟ್ಟ ಠೇವಣೀ ಮೊಬಲಗು, ಲೈಸೆನ್ಸಿನ ವಾಯಿದೆಯ ಆಖೈರ್ ಮಾಹೆ ಯಾ ಮಾಹೆಗಳ ಕಿಸ್ತುಗಳಿಗೋಸ್ಕರ ವಸೂಲ್ ಹಾಕಲ್ಪಡಬೇಕು. ಲೈಸೆನ್ಸದಾರನಿಂದ ಬರಬೇಕಾದ ಬಾಕಿ ಹಣಗಳು ವ ನಷ್ಟದ ಮೊಬಲಗುಗಳು ಸಾಲು 1ಕ್ಕೆ ಶೇಕಡಾ ಆರು ರೂಪಾಯಿನಂತೆ ಬಡ್ಡಿ ಸಹಿತವಾಗಿ ಅವನಿಂದ ಯಾ ಆತನ ಜಾಮೀನ್ದಾರನಿಂದ ಜಮೀನು ಕಂದಾಯವನ್ನು ವಸೂಲ್ಮಾಡಲಿಕ್ಕೆ ಜಾರಿಯಲ್ಲಿರುವ ನಿಬಂಧನೆಗಳನ್ನನುಸರಿಸಿ ವಸೂಲ್ಮಾಡಲ್ಪಡತಕ್ಕದ್ದು. ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ, ಮತ್ತು ನಷ್ಟದ ಮೊಬಲಗಿಗೆ ಪುನಃ ಹರಾಜಾದ ತಾರೀಖಿನ ಲಾಗಾಯಿತು ಬಡ್ಡಿಯು ಲೆಖ್ಖಾಚಾರ ಮಾಡಲ್ಪಡತಕ್ಕದ್ದು.

(5) ಡೆಪ್ಯುಟಿ ಕಮಿಷ್ನರವರು ಹಾಗೆ ದುಸರಾ ಹರಾಜನ್ನು ಮಂಜೂರ್ ಮಾಡುವ ಪಕ್ಷದಲ್ಲಿ ಸದರೀ ಗುತ್ತಿಗೆಯಲ್ಲಿ ವಿಕ್ರಯಿಸುವ ಕಾಲಕ್ಕೆ ಯುಕ್ತ ತೋರುವ ಬೇರೆ ಏರ್ಪಾಡನ್ನಾದರೂ ಮಾಡಬಹುದು; ಹಾಗೆ ಮಾಡಿದ ಸಂದರ್ಭದಲ್ಲಿ ಅವರು ತಪ್ಪಿಹೋದ ಲೈಸೆನ್ಸದಾರರಿಗೆ ತಮ್ಮಿಂದ ಮಾಡಲ್ಪಟ್ಟಿರುವ ಏರ್ಪಾಡುಗಳ ವಿಧಾನವನ್ನು ತಿಳಿಸಿ ಒಂದು ನೋಟೀಸನ್ನು ಕೊಡಬೇಕು.

(6) ಶೇಂದಿಯು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಜನರಿಗೆ ಮಾರಲ್ಪಡಕೂಡದು.

(7) ಮರಗಳಿಂದ ತೆಗೆಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಿಕೆ ಇಲ್ಲದೆ ಮಾರಲ್ಪಡತಕ್ಕದ್ದು, ಮತ್ತು ಅಂಗಡಿಗಳಲ್ಲಿ ಅಥವಾ ಡಿಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರ ಮಾಡಲಾಗದು.

(8) ಅಂಗಡಿಗಳ ಸಮುದಾಯದ ಲೈಸೆನ್ಸದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಂಡರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಡಿಪೋ ಲೈಸೆನ್ಸದಾರನು ತನ್ನ ಡಿಪೋಕ್ಕೆ ಜಮಾ ಬಂದ ಶೇಂದಿಯ ಮೊತ್ತವನ್ನೂ, ಅಂಗಡಿಗಳಿಗೆ ಸರಬರಾಯಿ ಮಾಡಿದ ಶೇಂದಿಯ ಮೊತ್ತವನ್ನೂ ಕುರಿತು ಕರಾರುವಾಕಾ ಲೆಕ್ಕಗಳನ್ನು ಇಡತಕ್ಕದ್ದು. ಶೇಂದಿಯೊಡನೆ ಕೊಡಲ್ಪಟ್ಟ ಪೀಪಾಯಿಗಳು ಯಾ ಪಾತ್ರೆಗಳು ಅದಕ್ಕಾಗಿ ಅಧಿಕಾರಹೊಂದಿದ ಆಫೀಸರುಗಳ ಪರೀಕ್ಷೆಗೆ ವ ತನಿಖೆ ಬಗ್ಗೆ ಗುರಿಯಾಗಿರತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷ್ನರವರಿಂದ ಕ್ರಮವಾಗಿ ಲೈಸೆನ್ಸ್ ಪಡೆದ ದುಕಾನಗಳಲ್ಲಿ ವಿನಹಾ ಮತ್ತೆಲ್ಲಿಯೂ ಶೇಂದಿಯನ್ನು ಬಿಕರೀ ಮಾಡಲಾಗದು, ಮತ್ತು ಎಕ್ಸೈಜ್ ಕಮಿಷ್ನರವರ ಖಚಿತವಾದ ಮಂಜೂರಾತಿಯಿಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು. ಶೇಂದಿಯನ್ನು ಗಿಡದ ಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವು ಅಥವಾ ಕಾನೂನು ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗ ಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತೆ. ಪರಂತು ಬಗನಿ ಮರಗಳಿರತಕ್ಕ ಪ್ರದೇಶದಲ್ಲಿ ಬಗನಿ ಶೇಂದಿಯನ್ನು ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರೀಗ್ಯೂ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರವನ್ನು ಉತಾರ್ ಮಾಡಲು ಅಪ್ಪಣೆ ಕೊಡಬಹುದು. ಪ್ರತಿ ಒಂದು ಅಂಗಡಿಯ ಲೈಸೆನ್ಸದಾರನು ತನ್ನ ಅಂಗಡಿಗೆ ಜಮಾ ಬಂದ ಮತ್ತು ಖರ್ಚಾದ ಶೇಂದಿಯ ಕರಾರುವಾಕಾ ಲೆಕ್ಕವನ್ನು ಇಡತಕ್ಕದ್ದು.

(10) ಡೆಪ್ಯುಟಿ ಕಮಿಷ್ನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿಧಿಸಲ್ಪಟ್ಟಿರುವ ಸ್ಥಳದಿಂದ 200 ಗಜಗಳ ವಳಗೆ ವರ್ಗಾಯಿಸಲು ಅಪ್ಪಣೆ ಕೊಡಬಹುದು. ಮಂಜೂರ್ ಮಾಡಲ್ಪಟ್ಟ ಎಲ್ಲಾ ಅಂಗಡಿಗಳಲ್ಲಿ ಸಾಕಾದಷ್ಟು ಶೇಂದಿ ದಾಸ್ತಾನನ್ನು ಇಟ್ಟಿರಬೇಕು.

(11) ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ವಳಗೆ ತನ್ನ ಶೇಂದಿ ಅಂಗಡಿ ಇರತಕ್ಕ ತಾಲ್ಲೂಕು ಸರಹದ್ದಿನೊಳಗೆ ಸಾರಾಯಿ ಮಾರತಕ್ಕ ಬಟ್ಟಿ ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಸಾರಾಯಿ ಬಿಕರೀ ಮಾಡತಕ್ಕ ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನಾಗಲಿ, ಶೇಂದಿ ಮಾರುವ ತನ್ನ ಬಟ್ಟಿ ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ, ಯಾ ಸಂಬಂಧಪಟ್ಟವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರವಾಗಿ ಎಕ್ಸೈಜ್ ಕಮಿಷ್ನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಮೈಸೂರ್ ರಾಜ್ಯದ ಹೊರಗೆ ಇರುವ ಯಾವದೊಂದು ಶೇಂದಿ ಅಂಗಡಿಯಲ್ಲಿಯೂ ಅಥವಾ ಬಿಕರೀ ಗುತ್ತಿಗೆ ಫರ್ಮಾದಲ್ಲಿಯೂ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(12) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ಅವುಗಳನ್ನನುಸರಿಸಿದ ನಿಬಂಧನೆಗಳಿಗೂ ಲೈಸೆನ್ಸಿನ ಷರತ್ತುಗಳಿಗೂ ಅನುಸಾರವಾಗಿ ನಡೆಯುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು; ಮತ್ತು ಶೇಂದಿ ಸಾಗಿಸುವದಕ್ಕೆ ಬೇಕಾದ ಬಹದಾರಿಗಳನ್ನು ವದಗಿಸಿಕೊಳ್ಳತಕ್ಕದ್ದು. ಸದರೀ ಬಹದಾರಿಗಳ ಛಾಪಿಸಿದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಳ್ಳತಕ್ಕದ್ದು.

(13) ಈ ಲೈಸೆನ್ಸ್ ಎಕ್ಸೈಜ್ ಕಮಿಷನರ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

6. (1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸುಗಳು ಸಾದರ್‌ಮಾಡಲ್ಪಡತಕ್ಕದ್ದು:—

(a) ಲೈಸೆನ್ಸ್ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರ, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ;

(b) ಮೈಸೂರು ರಾಜ್ಯದಲ್ಲಿರುವ ಮರಗಳಿಂದ ಶೇಂದಿಯನ್ನು ಪಡೆಯಲಿಕ್ಕೆ ಅಪೇಕ್ಷಿಸುವ, ಪರಂತು ಈ ಕೆಳಗಿನ (9)ನೇ ಕಲಂನಲ್ಲಿ ವಿಧಿಸಿರುವ ಮರ ತೆರಿಗೆಯನ್ನು ಮೈಸೂರ್ ಸರ್ಕಾರಕ್ಕೆ ಕೊಡಬೇಕಾದ ನಿರ್ಬಂಧವನ್ನು ಹೊಂದಿರದೆ ಇರತಕ್ಕ, ಬ್ರಿಟಿಷ್ ರಾಜ್ಯದಲ್ಲಿರುವ ಅಂಗಡಿಕಾರರ;

(c) ಸನ್ 1898ನೇ ಇಸವಿ ಜೂನ್ 20ನೇ ಮೆಂಕುಂ 11897—906—Ex: 485ನೇ ನಂಬರುಳ್ಳ ಇಸ್ತಿಹಾರ್‌ನಾಮೆಯನ್ನನುಸರಿಸಿ ಸ್ವಂತ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿನಾಯಿತಿಯುಕ್ತವಾದ ಮರತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲೆನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಖಾನೆಗಳಲ್ಲಿಯೂ ಇರುವ ಮರಗಳ ಮಾಲೀಕರ;

ಲೈಸೆನ್ಸುಗಳನ್ನು ದರಖಾಸ್ತುದಾರನ ಹೆಸರಿಗಾಗಲೀ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೆ ದರಖಾಸ್ತುಗಳನ್ನು ಸಂಬಂಧಪಟ್ಟ ಎಕ್ಸೈಜ್ ಇನ್ಸ್‌ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟು ಇನ್ಸ್‌ಪೆಕ್ಟರುಗಳಿಂದ ಪಡೆಯಬಹುದು.

(3) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟು ರೇಂಜ್ ಆಫೀಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(4) ಉತಾರು ಲೈಸೆನ್ಸುಗಳಿಗೆ ದರಖಾಸ್ತು ಮಾಡುವ ಜನರು ಶೇಂದಿ ಉತಾರಿಗೋಸ್ಕರ ಸದರೀ ಲೈಸೆನ್ಸುಗಳಲ್ಲಿ ನಮೂದಾಗಿರುವ ಮರಗಳ ಬಾಬತು ಮರತೆರಿಗೆ ಪಾವತಿ ಆಗಬೇಕಾಗಿರುವ ಎಲ್ಲಾ ಹಣವನ್ನು ಸರ್ಕಾರಕ್ಕೆ ಕೊಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು; ಮತ್ತು ಸರ್ಕಾರೀ ಬಂಜರಿನಲ್ಲಿರತಕ್ಕ ಮರಗಳ ಮರದ ಮಾಲ್ಕಿಯನ್ನು ಸಹಾ ಪಾವತಿ ಮಾಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೆ ಇನ್ಸ್‌ಪೆಕ್ಟರವರು ಸಬ್ ಇನ್ಸ್‌ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರತೂದ್ ಮಾಡತಕ್ಕದ್ದು. ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ಮರಗಳ ದರಖಾಸ್ತುದಾರರು ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮ ನಿಸ್ಸಿ ನೋಟೀಸ್ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದ್ದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರ ತೆರಿಗೆಯೂ ವ ಮರದ ಮಾಲ್ಕಿಯೂ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ಡೆಪ್ಯುಟಿ ಕಮಿಷನರುಗಳು ಎಕ್ಸೈಜ್ ಕಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಟಪಕ್ಷ ಎಷ್ಟು ಮರಗಳಿಗೆ ಲೈಸೆನ್ಸು ಕೊಡಬಹುದೋ ಮತ್ತು ಒಂದೊಂದು ದರಖಾಸ್ತಿನಲ್ಲಿ ಕನಿಷ್ಟಪಕ್ಷ ಎಷ್ಟು ಮರಗಳನ್ನು ದಾಖಲ್ ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತು ಮಾಡತಕ್ಕದ್ದು; ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇ ಗ್ರಾಮದ ಮರಗಳನ್ನು ದಾಖಲ್ ಮಾಡಬೇಕೆಂದು ಹುಕುಂ ಮಾಡಬಹುದು.

(7) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರ್ ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಖಜಾನೆಗೆ ಕೊಟ್ಟಕೂಡಲೆ

ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗಿಡಗಳನ್ನು ತೆಗೆದು ಹಾಕಲಿಕ್ಕೂ, ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರು ಮಾಡಲಿಕ್ಕೂ ಉಪಕ್ರಮಿಸಬಹುದು.

(8) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತವ್ತೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ ಹದಿನೈದು ದಿವಸಗಳಿಗೆ ಮುಂಚಿತವಾಗಿ ಸಂಖೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗೆಡಿಗೆಗಳನ್ನು ಕಟ್ಟಬಹುದು; ಆದರೆ ಶೇಂದಿ ಉತಾರು ಮುಂತಾದ್ದು ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪರಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂಧಿಯನ್ನು ಮರಗಳಿಂದ ಇಳಿಸಿಕ್ಕೊಂಡು ಹೋಗಕೂಡದು.

(9) ಈ ಕೆಳಗೆ ನಮೂದಿಸುವ ದರಗಳಂತೆ ಮರತ್ತೆರಿಗೆಯನ್ನು ಕೊಟ್ಟು ಶೇಂದಿ ಉತಾರ್ ಬಗ್ಯೆ ಲೈಸೆನ್ಸನ್ನು ಪಡದ ಹೊರ್ತು ಯಾವ ಮರವನ್ನೂ ಕಟ್ಟಕೂಡದು :—

ಮರದ ತರಹೆ.		ಮರ ಒಂದಕ್ಕೆ ಲೋಕಲ್ ಸೆಸ ದೇಖೀಲ್ ವರುಷ ಒಂದಕ್ಕೆ ಕೊಡಬೇಕಾದ ಮರ ತೆರಿಗೆ.
		ರೂ. ಆ. ಪೈ.
ಈಚಲು	... ..	1—1—0
ತೆಂಗು	.. ..	2—2—0
ತಾಳೆ	... ..	1—9—6
ಬಗನಿ	.. ..	1—9—6
ದಡಸಾಲು	.. ..	0—8—6

ಟಿಪ್ಪಣಿ—ಮೇಲಿನ (1) (b) ವ (c) ನೇ ಕಲಂಗಳಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(10) ಮೇಲ್ಕಂಡ ಮೊಬಲಗು ಶಿವಾಯಿ, ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗೋಸ್ಕರ ಕಟ್ಟಲ್ಪಡುವ ಸರ್ಕಾರೀ ಮರಗಳಿಗೆ ಸಾಲಿಯಾನಾ ಮರ ಒಂದಕ್ಕೆ ನಾಲ್ಕು ಆಣೆ ಪ್ರಕಾರ ಮರದ ಮಾಲ್ಕಿ ಮೊಬಲಗು ಲೋಕಲ್ ಸೆಸನಿಸಿ ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರೀ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು. ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗಿರತಕ್ಕದ್ದು.

ಸಂಬಂಧಪಟ್ಟ ಆಯಾಯ ಇಲಾಖೆಗಳಿಗೆ ಈ ಮರದ ಮಾಲ್ಕಿ ಮೊಬಲಗನ್ನು ಜಮೇ ಕಟ್ಟತಕ್ಕದ್ದು.

(11) ಎಕ್ಸೈಜ್ ಕಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆಯನ್ನೂ ಮತ್ತು ಮರದ ಮಾಲ್ಕಿಯನ್ನು ಅವುಗಳ ಮೇಲೆ ವಸೂಲಾಗಬೇಕಾದ ಲೋಕಲ್ ಸೆಸ ಸಹಿತವಾಗಿ ಈ ಕೆಳಗೆ ನಮೂದಿಸುವ ಕಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ವ ಮರದ ಮಾಲ್ಕಿ ಮೊಬಲಗಿನ ದಾಮಾಷಾಯಿ.	ಮೂರನೇ ತಿಂಗಳು ಆಖೈರಾಗುವದಕ್ಕೆ ಮುಂಚೆ ಕೊಡಬೇಕಾದ ದಾಮಾಷಾಯಿ ಮರತೆರಿಗೆ ವ ಮರದ ಮಾಲ್ಕಿ.
1903ನೇ ಇಸವಿ ಜುಲೈ ಗುರ್ರೇಲಾಗಾಯಿತು 1904ನೇ ಏಪ್ರೆಲ್ 30ನೇ ತಾರೀಖಿನ ವಳಗಾಗಿ	ಮೂರರಲ್ಲಿ 1 ಭಾಗ ..	ಉಳಿದ ಮೂರರಲ್ಲಿ ಎರಡು ಭಾಗವು. ಆದರೆ ದರಖಾಸ್ತು ಮಾಡುವ ಈಚಲು, ತೆಂಗು ವ ತಾಳೆ ಮರಗಳ ಸಂಖೆಯು ಹತ್ತಾಗಿದ್ದರೆ ಯಾ ಹತ್ತಕ್ಕೆ ಕಮ್ಮಿಯಾಗಿದ್ದರೆ ಮತ್ತು ಬಗನಿ ಮರಗಳ ಸಂಖೆಯು ಐದಾಗಿದ್ದರೆ ಯಾ ಐದಕ್ಕೆ ಕಮ್ಮಿಯಾಗಿದ್ದರೆ ಆ ಬಾಬತು ಮರಗಳ ಪೂರಾ ಮರತೆರಿಗೆ ವ ಮರದ ಮಾಲ್ಕಿ ಮೊಬಲಗು ದರಖಾಸ್ತಿನೊಡನೆ ಪಾವತಿಯಾಗತಕ್ಕದ್ದು.
1904ನೇ ಮೇ ಗುರ್ರೇಲಾಗಾಯಿತು 1904ನೇ ಜೂನ್ 30ನೇ ತಾರೀಖಿನ ವಳಗಾಗಿ	ಎಲ್ಲಾ ...	ಇಲ್ಲಾ

(12) ಮದ್ರಾಸ್ ಸರ್ಕಾರದವರೊಡನೆ ಮಾಡಿಕೊಂಡಿರುವ ಏರ್ಪಾಟಿನ ಪ್ರಕಾರ ಮದ್ರಾಸ್ ರಾಜ್ಯದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ, ಶೇಂದಿ ಹೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮೈಸೂರು ಸರಕಾರಕ್ಕೆ ಜಮೆ ಆಗತಕ್ಕದ್ದು. ಬದಲಾಗಿ ಮೈಸೂರು ದೇಶದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮದ್ರಾಸ್ ರಾಜ್ಯದಲ್ಲಿ ಉಪಯೋಗಿಸಲ್ಪಡುವ ಶೇಂದಿ ಹೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮದ್ರಾಸ್ ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರ ತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಈ ವಿಷಯದಲ್ಲಿ ಕೆಳಗೆ ನಮೂದಿಸುವ ಕ್ರಮವನ್ನು ಆಚರಿಸತಕ್ಕದ್ದು.

(a) ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸುಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರರಿಗೆ ಒಂದೇ ಖಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯುಕವಾದ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರಕಟ್ಟಿನ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರು ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದ್ರಾಸು ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡೆಸಿದ ತರುವಾಯ ತೆಗೆದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನಸ್ಪೆಕ್ಟರವರಿಂದ ಪರಿಮಿಟ್ ಯಾ ರವಾನೆಯನ್ನು ಪಡೆಯತಕ್ಕದ್ದು.

(b) ಮೈಸೂರು ದೇಶದಲ್ಲಿರುವ ಮರಗಳಿಂದ ಶೇಂದಿ ಉತಾರ್ ಮಾಡಲಿಕ್ಕೆ ಅಪೇಕ್ಷಿಸುವ ಮದ್ರಾಸ ರಾಜ್ಯದ ಅಂಗಡಿಕಾರನು ಯಾ ಗುತ್ತಿಗೆದಾರನು ಆತನು ಕಟ್ಟಬೇಕೆಂದು ಅಪೇಕ್ಷಿಸುವ ಮರಗಳ ಬಾಬತು ಮರತೆರಿಗೆಯನ್ನು ಮದ್ರಾಸ್ ರಾಜ್ಯದ ತಹಶೀಲ್‌ದಾರರ ಖಜಾನೆಯಲ್ಲಿ ಪಾವತಿ ಮಾಡತಕ್ಕದ್ದು. ಆ ತಹಶೀಲ್‌ದಾರರು ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ತೃಪ್ತಿಪಟ್ಟ ತರುವಾಯ ಆ ಸಂಗತಿಯನ್ನು ಕೆಳಗೆ ದೃಢಪಡಿಸಿ ರುಜು ಮಾಡಿ ಒಂದು ರಶೀತಿಯನ್ನು ಕೊಡತಕ್ಕದ್ದು.

(c) ಸದರೀ ಅಂಗಡಿಕಾರನು ಮೈಸೂರು ದೇಶದಲ್ಲಿ ಜಾರಿಯಲ್ಲಿರುವ ಮರಕಟ್ಟಿನ ನಿಬಂಧನೆಗಳನ್ನನುಸರಿಸಿ ಮೈಸೂರು ದೇಶದ ತಕ್ಕ ಅಧಿಕಾರಿಗಳಿಗೆ ದರಖಾಸ್ತನ್ನು ಮಾಡತಕ್ಕದ್ದು. ಸಂಬಂಧಪಟ್ಟ ಮೈಸೂರು ಅಧಿಕಾರಿಗಳು ಸದರೀ ಮೊಬಲಗು ಪಾವತಿಯಾಗಿರುವದಕ್ಕೂ ಮತ್ತು ಆ ದರಖಾಸ್ತುದಾರನು ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಕೊಡಲು ಹಕ್ಕುಳ್ಳ ಮನುಷ್ಯನಾಗಿರುತ್ತಾನೆಂಬುವದಕ್ಕೂ ನಿದರ್ಶನವಾಗಿ ಸದರೀ ರಶೀತಿಯನ್ನು ಮತ್ತು ದೃಢಪಡಿಸುವಿಕೆಯನ್ನು ಅಂಗೀಕರಿಸತಕ್ಕದ್ದು. ಯದ್ಯಪಿ ಎಕ್ಸೈಜ್ ಇಲಾಖೆಯವರು ಉಳಿಸಿಕೊಂಡಿರುವ ಮರಗಳ ವಿಷಯದಲ್ಲಿ ಅಂಥಾ ಮರಗಳಿಗೆ ವಿಶ್ರಾಂತಿಯನ್ನು ಕೊಡಬೇಕೆಂಬ ಯಾ ಲೈಸೆನ್ಸನ್ನು ತಿರಸ್ಕರಿಸತಕ್ಕ ಉದ್ಯೋಗಸ್ಥರಿಂದ ಸಾಕಾದ್ದೆಂದು ಎಣಿಸಲ್ಪಡುವ ಇತರ ಕಾರಣದಿಂದ ಯುಕ್ತಾನುಸಾರ ಲೈಸೆನ್ಸುಗಳನ್ನು ತಿರಸ್ಕರಿಸಬಹುದೆಂದು ಸ್ಪಷ್ಟವಾಗಿ ತಿಳಿದಿರತಕ್ಕದ್ದು. ಲೈಸೆನ್ಸುಗಳನ್ನು ಕೊಡೋಣವೂ, ಮರಗಳಿಗೆ ಸಂಖ್ಯೆ ಹಾಕೋಣವೂ ಮುಂತಾದ್ದು ದರಖಾಸ್ತುದಾರನು ಮೈಸೂರು ದೇಶದಲ್ಲಿ ಒಬ್ಬ ಅಂಗಡಿಕಾರನಾಗಿದ್ದರೆ ಹ್ಯಾಗೋ ಹಾಗೆಯೇ ಸರಿಯಾಗಿ ನಡಿಸಲ್ಪಡತಕ್ಕದ್ದು. ಲೈಸೆನ್ಸ ಕೊಡಲ್ಪಡಬೇಕಾದ ಮರಗಳ ಸಂಖ್ಯೆಯು ಸರಹದ್ದಿನ ಉಭಯ ಕಡೆಗಳಲ್ಲಿಯೂ ಏಕರೀತಿಯಿಲ್ಲದೆ ಇರುವ ಪಕ್ಷದಲ್ಲಿ ಬ್ರಿಟಿಷ್ ದೇಶದ್ದಾಗಿರಲೀ ಯಾ ಮೈಸೂರು ದೇಶದ್ದಾಗಿರಲೀ, ಅಧಿಕ ದರವ್ಯಾವದೋ ಅದರಂತೆ ಲೆಖ್ಖ ಮಾಡತಕ್ಕದ್ದು.

(d) ಮೈಸೂರು ದೇಶದ ಸಂಬಂಧಪಟ್ಟ ಇನಸ್ಪೆಕ್ಟರವರು ಸರಹದ್ದಿಗೆ ಸಾಗಿಸಲ್ಪಡಬೇಕಾದ ಶೇಂದಿಯು ಮೈಸೂರು ದೇಶದ ಶೇಂದಿ ಅಂಗಡಿಗಳ ಸಮೀಪಕ್ಕೆ ಬರುವದಕ್ಕೆ ಅಸ್ಪದವಾಗದಂತೆ ಕೂಡಿದಮಟ್ಟಿಗೂ ಜಾಗರೂಕತೆಯಿಂದ ಅದಕ್ಕೆ ಮಾರ್ಗವನ್ನು ಗೊತ್ತು ಮಾಡಿ ಸರಹದ್ದುವರಿವಿಗೂ ಶೇಂದಿಯನ್ನು ಒಯ್ಯುವದಕ್ಕೆ ಮಾಮೂಲು ಮೇರಿಗೆ ಪರಿಮಿಟ್ ಯಾ ರವಾನೆಯನ್ನು ಕೊಡ

ತಕ್ಕದ್ದು. ಸಾಧ್ಯವಾದರೆ ಮದ್ರಾಸ್ ಶೀಮೆಗೆ ಶೇಂದಿಯು ರಫ್ತಾಗತಕ್ಕ ಮುಖ್ಯವಾದ ಯಾವ ಮಾರ್ಗಗಳಲ್ಲಿಯೂ ಸದರೀ ಶೇಂದಿ ಅಂಗಡಿಗಳನ್ನು ಇಡಿಸಕೂಡದು. ಮತ್ತು ಸದರೀ ಮಾರ್ಗಗಳ ಆಜೂ ಬಾಜೂ ಇರುವ ಅಂಗಡಿಗಳನ್ನು ದೂರ ಫಾಸಲೆಗೆ ಸಾಗಿಸಬೇಕಾಗಿರುವ ಅವಶ್ಯಕತೆಯನ್ನು ಸಂಬಂಧಪಟ್ಟ ಡೆಪ್ಯುಟಿ ಕಮ್ಮಿಷನರ ಗೋಚರಕ್ಕೆ ತರಬೇಕು. ಮೈಸೂರು ದೇಶದ ಸರಹದ್ದಿನಿಂದ ಮುಂದಕ್ಕೆ ಉದ್ದೇಶಿಸಿರತಕ್ಕ ಸ್ಥಳಕ್ಕೆ ಶೇಂದಿಯನ್ನು ಒಯ್ಯುವದಕ್ಕೆ ಪರಿಮಿಟ್ ಯಾ ರವಾನೆಗಳನ್ನು ಕೂಡಲು ಬ್ರಿಟಿಷ್ ಆಫೀಸರುಗಳ ಕೆಲಸವಾಗಿರುತ್ತೆ.

(*e*) ರೈಲ್ ಮಾರ್ಗವಾಗಿ ರಫ್ತಾಗತಕ್ಕ ಶೇಂದಿಗಾಗಿ ಪರಿಮಿಟ್ ಯಾ ರವಾನೆಗಳನ್ನು ದಿನಕ್ಕೆ ಬಂದರ ಪ್ರಕಾರ "ವೇಬಿಲ್" (ಪ್ರಯಾಣ ಪಟ್ಟಿ)ಗೆ ತಪ್ಪದೆ ಜಂಟಿಸುವದಕ್ಕೆ ಅನುಕೂಲಿಸುವಂತೆ ಏಳು ಅಥವಾ ಅವಶ್ಯಕವಾದ ಇತರ ಸಂಖ್ಯೆವುಳ್ಳದ್ದಾಗಿರುವಂತೆ ಕೊಡಲ್ಪಡಬೇಕು.

(13) ಬ್ರಿಟಿಷ್ ದೇಶದ ಗುತ್ತಿಗೆದಾರರ ಮತ್ತು ದುಕಾನ್‌ದಾರರ ದರಖಾಸ್ತಿನ ಮೇಲೆ ಕೊಟ್ಟ ಶೇಂದಿ ಉತಾರ್ ಲೈಸೆನ್ಸಗಳಲ್ಲಿ ಈ ಕೆಳಗೆ ನಮೂದಿಸುವ ನಿಬಂಧನೆಗಳನ್ನು ದಾಖಲುಮಾಡತಕ್ಕದ್ದು:—

"ಲೈಸೆನ್ಸ್‌ದಾರನು ಉತಾರ್ಮಾಡಿದ ತರುವಾಯ ಶೇಂದಿಯನ್ನು ಅದನ್ನು ಉಂಟಾಗಿದ್ದ ಮಡಿಕೆಗಳ
"ನ್ನು ಇಳಿಸಿದ ಕೂಡಲೆ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಂದ ಅಥವಾ ಇದಕ್ಕಾ
"ಗಿ ಅಧಿಕಾರವನ್ನು ಪಡೆದಿರುವ ಇತರ ಆಫೀಸರು ಯಾ ಆಸಾಮಿಯಿಂದ ಕೊಡಲ್ಪಟ್ಟಿರುವ ಜನರ
"ಲ್ ಪರಿಮಿಟ್ ಎಂಬ ರವಾನೆಯೊಡನೆ ಸರಹದ್ದಿನ ಮಾರ್ಗವಾಗಿ ಮದ್ರಾಸ್ ಶೀಮೆಗೆ ಶೀದಾ ಒ
"ಯ್ಯಲ್ಪಡತಕ್ಕದ್ದು. ಶೇಂದಿಯನ್ನು ಮರದಿಂದ ಉತಾರು ಮಾಡಿದ ಕಾಲದ ಲಾಗಾಯತು ಸ
"ರಹದ್ದನ್ನು ದಾಟುವ ಪರಿಯಂತರ ದಾನವಾಗಿಯಾವರೂ ವರ್ಗಾಯಿಸಕೂಡದು; ಮತ್ತು ಶೇಂ
"ದಿಯನ್ನು ಗಿಡದ ಕೆಳಗೆ ಮಾರೋಣವೂ, ಅಥವಾ ಜೈಲಿನಲ್ಲಿ ಮಾರೋಣವೂ, ಅಥವಾ ಜಾರೀ
"ಲಿರುವ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೆ ಇರುವ ಮತ್ಯಾವ ಇತರ ರೀತಿಯಲ್ಲಾಗ
"ಲಿ ವಿನಿಯೋಗ ಪಡಿಸೋಣವೂ ಸಂಪೂರ್ಣವಾಗಿ ಅಡ್ಡಿ ಮಾಡಲ್ಪಟ್ಟಿರುತ್ತೆ."

(14) ಬ್ರಿಟಿಷ್ ರಾಜ್ಯದ ದುಕಾನ್‌ದಾರರಿಗೆ ಮೈಸೂರು ದೇಶದಲ್ಲಿ ಮರಗಳನ್ನು ಕಟ್ಟಲು ಸದರೀ ಬ್ರಿಟಿಷ್ ರಾಜ್ಯಕ್ಕೆ ಪರತೆರಿಗೆ ಪಾವತಿ ಮಾಡಲ್ಪಟ್ಟ ಕಾರಣವನ್ನು ಆಲೋಚಿಸಿ ಲೈಸೆನ್ಸಗಳು ಕೊಡಲ್ಪಡುತ್ತಾದ್ದರಿಂದ ಆ ಸರ್ಕಾರದ ಅಥವಾ ಆ ಭಾಗದಲ್ಲಿ ಅವರಿಂದ ಅಧಿಕಾರವನ್ನು ಪಡೆದಿರುವ ಇತರ ಉದ್ಯೋಗಸ್ಥರ ಅಪೇಕ್ಷೆ ಪ್ರಕಾರ ಸದರೀ ಲೈಸೆನ್ಸುಗಳು ರದ್ದು ಮಾಡಲ್ಪಡಲಿಕ್ಕೆ ಗುರಿಯಾಗಿರುತ್ತವೆ.

(15) ಬ್ರಿಟಿಷ್ ರಾಜ್ಯದಲ್ಲಿ ಉತಾರ್ ಮಾಡಲ್ಪಟ್ಟ ಶೇಂದಿಯನ್ನು ಸದರೀ ರಾಜ್ಯದ ಅಧಿಕಾರಸ್ಥರಿಂದ ಕೊಡಲ್ಪಟ್ಟ ಪರಿಮಿಟ್ ಯಾ ರವಾನೆಗಳ ಮೇಲೆ ಮೈಸೂರು ದೇಶದ ಸರಹದ್ದಿನ ಮೂಲಕ ತೆಗೆದುಕೊಂಡು ಹೋಗಬಹುದು. ಪರಂತು ಮೈಸೂರು ದೇಶದಲ್ಲಿ ಯಾವ ರೇಂಜಿನ ಸರಹದ್ದು ಮುಖಾಂತ್ರ ಅದನ್ನು ಒಯ್ಯಬೇಕೋ ಆ ರೇಂಜಿನ ಇನ್ಸ್‌ಪೆಕ್ಟರಿಂದ ಸದರೀ ಪರಿಮಿಟ್ ಯಾ ರವಾನೆಗಳು ಎದುರು ದಸ್ಕತ್ತು ಮಾಡಲ್ಪಟ್ಟಿರಬೇಕು.

(16) ಸ್ಥಳದಲ್ಲಿ ಉಪಯೋಗಿಸಲಿಕ್ಕಾಗಲೀ ಅಥವಾ ಬ್ರಿಟಿಷ್ ರಾಜ್ಯಕ್ಕೆ ರಫ್ತು ಮಾಡುವದಕ್ಕಾಗಲೀ ತಯಾರ್ಮಾಡತಕ್ಕ ಶೇಂದಿಗೋಸ್ಕರ ಉತಾರ್ ಲೈಸೆನ್ಸನ್ನು ಪಡೆಯುವ ಪ್ರತಿ ಮನುಷ್ಯನು ಈಚಲು ಮರವನ್ನು ಕಟ್ಟುವಾಗ್ಯೆ ಈ ಕೆಳಗೆ ನಮೂದಾಗುವ ನಿಬಂಧನೆಗಳನ್ನು ಆಚರಿಸತಕ್ಕದ್ದು:—

(*a*) ಈಚಲು ಮರಗಳು ಕಸಬುದಾರರಿಂದಲೇ ಕಟ್ಟಲ್ಪಡತಕ್ಕದ್ದು.

(*b*) ಒಂದು ವರುಷದಲ್ಲಿ ಕಟ್ಟಿದ ಮರಗಳನ್ನು ವಾಡಿಕೆಯಾಗಿ ಮೂರನೇ ವರುಷದಲ್ಲಿ ಕಟ್ಟಕೂಡದು.

(*c*) ಮರಗಳಿಂದ ಶೇಂದಿಯನ್ನು ಮಿತಿಮೀರಿ ಉತಾರ್ಮಾಡಿ ಮರಗಳನ್ನು ಕೊಡಿಸಕೂಡದು.

(*d*) ವಿಶೇಷ ಅಪ್ಪಣೆ ಕೊಟ್ಟಿರುವ ಸ್ಥಳಗಳಲ್ಲಿ ವಿನಹಾ ಯಾವ ಮರದಲ್ಲ್ಯಾಗಲೀ ಪ್ರಥಮ ರೇವು ಭೂಮಿಯಿಂದ ಅದಕ್ಕೆ 3 ಅಡಿಗಿಂತ ಕಮ್ಮಿಯಾಗುವ ಸ್ಥಾನದಲ್ಲಿ ಮಾಡಲ್ಪಡಕೂಡದು.

(*e*) ರೇವಿನ ಆಳವೂ ಮತ್ತು ಅಗಲವೂ ಮರದ ಅಡ್ಡಳತೆಯ ಮೂರರಲ್ಲಿ ಒಂದು ಭಾಗಕ್ಕಿಂತ ಜಾಸ್ತಿಯಾಗಿರಕೂಡದು. ಮತ್ತು ಅದರ ಉದ್ದವು 8 ಅಂಗುಲಗಳಿಗಿಂತ ಜಾಸ್ತಿಯಾಗಿರಕೂಡದು.

(*f*) ವಿಶೇಷ ಅಪ್ಪಣೆ ಕೊಟ್ಟಿರುವ ಪ್ರದೇಶಗಳಲ್ಲಿ ವಿನಹ ಹೊಸದಾಗಿ ಮಾಡಲ್ಪಡುವ ಪ್ರತಿಯೊಂದು ರೇವು ಅದಕ್ಕೆ ಮುಂಚೆ ಮಾಡಲ್ಪಟ್ಟ ರೇವಿನ ಮೇಲುಗಡೆ ಒಂದು ಅಡಿಗಿಂತ ಕಮ್ಮಿಯಾಗಿರಕೂಡದು.

(*g*) ಮಧ್ಯದಲ್ಲಿ ಮೊಳಗೆಳೋಪಾದಿಯಲ್ಲಿರುವ ಸುಳಿಗಳ ಸಮುದಾಯವನ್ನು ಮುಟ್ಟಕೂಡದು. ಅವುಗಳ ಪಕ್ಕದ ಗರಿಗಳ ಪೈಕಿ ಎರಡು ವರಿಶೆಗಳಿಗೆ ಕಮ್ಮಿಯಿಲ್ಲದಂತೆ ಬಿಡತಕ್ಕದ್ದು. ಅಂದರೆ ಮಧ್ಯದ ಸುಳಿಗಳ ಬಾಜೂದಲ್ಲಿರುವ ಗರಿಗಳ ವರಿಶೆಗಳಿಂದ ರೇವಿನ ಮೇಲ್ಗಡೆವರೆಗೂ ಗರಿಗಳ

ನ್ನು ಲೆಖ್ಖ ಮಾಡಿದರೆ ಎರಡು ವರೆ ಶೆಗಳಿಗೆ ಕಮ್ಮಿಯಾಗಿರಕೂಡದು ; ಅಂದರೆ ರೇವಿನ ಮೇಲ್ಗಡೆಯಲ್ಲಿ ಮೊಳೆಗಳೋಪಾದಿಯಲ್ಲಿರುವ ಸುಳಿಗಳು ಶಿವಾಯಿ ರೇವು ತಯಾರ್ಮಾಡಲ್ಪಟ್ಟಿರುವ ಮುಂಭಾಗದಲ್ಲಿ ಎಂಟು ಗರಿಗಳಿಗಿಂತ ಕಮ್ಮಿಯಾಗಿ ಬಿಡಕೂಡದು.

(*h*) ಲೈಸೆನ್ಸದಾರನು ಲೈಸೆನ್ಸ್ ಕೊಡಲ್ಪಟ್ಟ ಮರಗಳನ್ನಾಗಲೀ ಅಥವಾ ಇತರ ಮರಗಳನ್ನಾಗಲೀ ಕುಯ್ಯಲೂ ಯಾ ಕಡಿಸಲೂಕೂಡದು, ಅಥವಾ ಕುಯ್ಯಲೂ ಯಾ ಕಡಿಸಲೂ ಅಪ್ಪಣೆ ಕೊಡಕೂಡದು.

(*i*) ಲೈಸೆನ್ಸದಾರನು ಅಥವಾ ಅವನ ಎಜಮಾನನು ತನ್ನ ಗುತ್ತಿಗೆ ಕಾಲದಲ್ಲಿ ಆಗಲೀ ಅಥವಾ ಅದು ಪೂರೈಸಿದ ಆರು ತಿಂಗಳೊಳಗಾಗಲೀ ಮಿತಿಯಿಲ್ಲದೆ ಶೇಂದಿಯನ್ನಿಳಿಸಿದ್ದರಿಂದ ಯಾ ಅಜಾಗರೂಕತೆಯಿಂದ ಉತಾರ್ ಮಾಡಿದ್ದರಿಂದ ಒಣಗಿಹೋದ ಮರಗಳು ಆತನಿಗೆ ಸಂಖ್ಯೆಹಾಕಿ ಕೊಡಲ್ಪಟ್ಟ ಒಟ್ಟು ಮರಗಳಲ್ಲಿ ಶೇಕಡ ಮೂರಕ್ಕೆ ಅತಿಕ್ರಮಿಸಿದರೆ ಅಂಥಾ ಪ್ರತಿಯೊಂದು ಮರಕ್ಕೂ ಒಂದು ರೂಪಾಯಿನಂತೆ ಜುರ್ಮಾನೆಯನ್ನು ಕೊಡಲು ಬದ್ಧನಾಗಿರುತ್ತಾನೆ.

(17) ಶೇಂದಿಯನ್ನು ಇಳಿಸುವ ಮರಗಳು ಇರತಕ್ಕ ಪ್ರತಿ ವನದಲ್ಲಿಯೂ ಎಕ್ಸೈಜ್ ಉದ್ಯೋಗಸ್ಥರು ಸಂಗತ್ಯಾನುಸಾರ ರೇವನ್ನು ಯಾ ಪಾಳೆಯನ್ನು ಅಜಮಾಯಿಷಿ ಮಾಡಲಿಕ್ಕೂ ಅಥವಾ ರೇವನ್ನು ಅಳತೆ ಮಾಡಲಿಕ್ಕೂ ಉತಾರ್‌ದಾರರು ಒಂದು ಏಣಿಯನ್ನು ಇಟ್ಟಿರತಕ್ಕದ್ದು.

7. ಮೇಲೆ ನಮೂದಿಸಿರುವ ಕಾನೂನುಗಳು ಯಾ ಲೈಸೆನ್ಸ್ ಷರತ್ತುಗಳು ಲೈಸೆನ್ಸುದಾರನಿಂದಾದರೂ ಅಥವಾ ಆತನ ಅಂತರ್ಯ ತಿಳುವಳಿಕೆ ಯಾ ಸಮ್ಮತಿಯಿಂದ ಆತನ ನೌಕರರಿಂದಲಾದರೂ ಉಲ್ಲಂಘಿಸಲ್ಪಟ್ಟರೆ, ಅಥವಾ ಲೈಸೆನ್ಸುದಾರನು ತನ್ನ ದುಕಾನುಗಳನ್ನು 1903ನೇ ಇಸವಿ ಜುಲೈ ಗುರ್ರ್ರಯಲ್ಲಿ ಇಡುವದಕ್ಕಾದರೂ ಯಾ ತನ್ನ ಕೆಲಸಗಳನ್ನು ಕ್ರಮವಾದ ಎಚ್ಚರಿಕೆಯೊಡನೆ ನಡಿಸುವದಕ್ಕಾದರೂ ಉದಾಸೀನಮಾಡಿದರೆ ಅಂಥಾ ಪ್ರತಿ ಒಂದು ಉಲ್ಲಂಘನೆ ಯಾ ಉದಾಸೀನದ ಬಗ್ಯೆ ಪ್ರತಿ ಲೈಸೆನ್ಸದಾರನಿಗೆ 50 ರೂಪಾಯಿಗಳಿಗೆ ಮೀರದ ಒಂದು ಜುರ್ಮಾನೆಯನ್ನು ವಿಧಿಸುವ ಬಗ್ಯೆ ಡೆಪ್ಯುಟಿ ಕಮಿಷನರವರಿಗೆ ನ್ಯಾಯುವಾಗಿರತಕ್ಕದ್ದು ; ಅಥವಾ ಡೆಪ್ಯುಟಿ ಕಮಿಷನರವರ ಯುಕ್ತಾನುಸಾರ ಅವರಿಂದ ಇಡೋಣಾದ ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಳ್ಳಲ್ಪಡಲಿಕ್ಕೂ, ಲೈಸೆನ್ಸನ್ನು ರದ್ದು ಮಾಡಲಿಕ್ಕೂ ಲೈಸೆನ್ಸುದಾರನನ್ನು ನಷ್ಟಕ್ಕೆ ಗುರಿಮಾಡಿ ಒಟ್ಟು ಸ್ವಾತಂತ್ರ್ಯವನ್ನು ಮರಳಿ ಹರಾಜು ಮಾಡಲಿಕ್ಕೂ, ಅಥವಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಅಥವಾ ಅದನ್ನು ಅಮಾನಿಯಲ್ಲಿ ಜರಿಗಿಸುವದಕ್ಕೂ ಅವರಿಗೆ ಯುಖ್ತ್ಯಾರೀ ಇರತಕ್ಕದ್ದು. ಒಂದು ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಗುತ್ತಿಗೆಯ ಪೂರಾ ಕಾಲಕ್ಕೆ ಬರಬೇಕಾದ ತಮಾಂ ಮೊಬಲಗೂ ತಕ್ಷಣ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು, ಮತ್ತು ಹಾಗೆ ಲೈಸೆನ್ಸ್ ರದ್ದು ಮಾಡಲ್ಪಟ್ಟದ್ದರಿಂದಲಾಗಲೀ ಯಾ ಆ ಹಕ್ಕನ್ನು ದುಸರಾ ಹರಾಜು ಅಥವಾ ಇತರ ವಿಧದಿಂದ ವಿಲೇವಾರಿ ಮಾಡುವದರಿಂದಲಾಗಲೀ ಗವರ್ನಮೆಂಟಿಗೆ ಉಂಟಾಗುವ ಎಲ್ಲಾ ನುಕ್ಸಾನುಗಳೂ ಲೈಸೆನ್ಸದಾರನಿಂದ ಯಾ ಅವನ ಜಾಮೀನ್‌ದಾರನಿಂದ ಮೇಲ್ಕಂಡ 3ನೇ ಪ್ಯಾರಾ ಅನುಸರಿಸಿ ಮರಳಿ ಹರಾಜಿಗಾಗಿ ವಿಧಿಸಿರುವ ಮೇರೆ ಭರ್ತಿ ಮಾಡಲ್ಪಡಬೇಕು. ಈ ರೀತಿ ವಸೂಲಾಗಬೇಕಾದ ತಮಾಂ ಮೊಬಲಗುಗಳೂ ಜಮೀನ್‌ಕಂದಾಯದ ಬಾಕಿಯೋಪಾದಿಯಲ್ಲಿ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ್ ರದ್ದುಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಕಾನೂನು ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸ್‌ಧಾರನನ್ನಾಗಲೀ ಯಾ ಆತನ ಏಜಂಟನ್ನಾಗಲೀ ಯಾ ಆತನ ನೌಕರರನ್ನಾಗಲೀ ಅಪಾದಿಸಿ ದರ್ಯಾಫ್ತಿ ಕ್ರಮ ನಡಿಸಲು ಆತಂಕಪಡಿಸುವದೆಂದು ಭಾವಿಸಲ್ಪಡಕೂಡದು.

ತಾರೀಖು 2ನೇ ಮಾರ್ಚಿ 1903.

ನಂ. ರ. 3498, ಸನ್ 1894ನೇ ಇಸವಿಯ VIIನೇ ನಂಬರ ಲ್ಯಾಂಡ್ ಅಕ್ವಿಜಿಷನ್ ರಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಬೆಳಕವಾಡಿ ಮತ್ತು ಮುಲಗತ್ತನಹಳ್ಳಿ ಗ್ರಾಮಗಳಲ್ಲಿರುವ ಶಿವಸಮುದ್ರದ ಜಹಗೀರ್‌ದಾರರಿಗೆ ಸೇರಿದ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಕಾವೇರಿ ವಿದ್ಯುಚ್ಛಕ್ತಿಯ ಕೆಲಸಗಳಿಗೋಸ್ಕರ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರಗ್ಯುಲೇಷನಿನ 7ನೇ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನುಗಳನ್ನು ಹೊಂದುವಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ಸರ್ವೆ ನಂ.	ವಿಸ್ತೀರ್ಣ		ಆಕಾರ.			ಕಾವೇರಿ ನದಿ ಕೆಲಸಕ್ಕೆ ಬೇಕಾಗಿರುವ ವಿಸ್ತೀರ್ಣ.		ಚಕ್ಕುಬಂದಿ.			
								ರೂ.	ಆ.	ಪೈ.	ಎ.	ಗು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು.	ಮಳವಳ್ಳಿ.	ಹಲಗೂರು.	ಬೆಳಕವಾಡಿ.	ಚಲುವಾದಿ ದುಂಡ ..	407	2	17	1	0	0	2	17	ಕಾವೇರಿ ನದಿ	ಹೈರೋಡು	ಚಿಕ್ಕಿದೊಡ್ಡಿ	ಕಾವೇರಿ ಸೇತುವೆ
				ದೇವರಗುಡ್ಡರಾಜ	405	6	31	2	8	0	1	8	ಹೈರೋಡು	ಎಸ್. ನಂ. 415	ಎಸ್. ನಂ. 412	ಎಸ್. ನಂ. 406
				ಕುನ್ನರಸ	403	2	39	2	0	0	2	39	ಕಾವೇರಿ ನದಿ	ಎಸ್. ನಂ. 402—404	ಎಸ್. ನಂ. 405	ಚಿಕ್ಕಿದೊಡ್ಡಿ
				ಮಳವಳ್ಳಿ ವೆಂಕಟ	404	1	...	0	8	0	1	...	ಎಸ್. ನಂ. 403	ಹೈರೋಡು	ಎಸ್. ನಂ. 402	ಡಿಟೋ
				ಕೊಸಂವೀರನ ಹೆಂಡತಿ ಮಾದಿ.	402	..	31	0	8	0		3	ಕಾವೇರಿ ನದಿ	ಡಿಟೋ	ಎಸ್. ನಂ. 401	ಎಸ್. ನಂ. 403 ವ 404
				ಯಡಗಿಹಾಲನ ರಾಜ ..	1/402	2	5	1	8	0	2	5	ಡಿಟೋ	ಡಿಟೋ	ಡಿಟೋ	ಡಿಟೋ
				ಯಡಗಿ ಅರಸ ...	2/402	1	7	0	12	0	1	7	ಡಿಟೋ	ಡಿಟೋ	ಡಿಟೋ	ಡಿಟೋ
				ಕೆಂಚರಕ ...	3/401	5	3	3	8	0	3	15	ಡಿಟೋ	ಎಸ್. ನಂ. 401ರ ಭಾಗ	ಎಸ್. ನಂ. 833 ವ 834	ಎಸ್. ನಂ. 402
				ಕೆ. ಸಿದ್ದ	833	2	1	1	4	0	1	1	ಎಸ್. ನಂ. 834	ಎಸ್. ನಂ. 833ರ ಭಾಗ	ಎಸ್. ನಂ. 834 ವ 400	ಎಸ್. ನಂ. 401
				ಡಿಟೋ	834	2	1	1	4	0	2	1	ಕಾವೇರಿ ನದಿ	ಎಸ್. ನಂ. 400	ಎಸ್. ನಂ. 399	ಎಸ್. ನಂ. 833 ವ 401
				ಚಲುವಾದಿ ದುಂಡ	400	2	27	1	8	0	..	12	ಎಸ್. ನಂ. 399 ವ 834	ಎಸ್. ನಂ. 400ರ ಭಾಗ	ಎಸ್. ನಂ. 399	ಎಸ್. ನಂ. 833
				ಕಾನ್ಸ್ಟೇಬಲ್ ಹ. ಸೇರ್‌ಸಾಬಿ...	399	7	.	2	8	0	4	28	ಕಾವೇರಿ ನದಿ	ಎಸ್. ನಂ 399 ವ 400 ಇವುಗಳ ಭಾಗ	ಎಸ್. ನಂ. 398	ಎಸ್. ನಂ. 834
				ಮಾದಿಗರ ಸಿದ್ದ ...	393	2	21	1	12	0	1	21	ಡಿಟೋ	ಎಸ್. ನಂ. 3.8ರ ಭಾಗ	ಎಸ್. ನಂ. 397	ಎಸ್. ನಂ. 399

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಸರ್ವೆ ನಂ.	ಭೂಮಿಯ ವಿಸ್ತೀರ್ಣ.		ಆಕಾರ.			ಕಾವೇರಿ ಪವರ್ ಕೆಲಸಗಳಿಗೋಸ್ಕರ ಬೇಕಾಗಿರುವ ಜಮೀನು		ಚೆಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
								ರೂ.	ಆ.	ಪೈ.	ಎ.	ಗು.				
ಮೈಸೂರು.	ಮಳವಳ್ಳಿ.	ಹುಂಗಳ.	ಬೆಳಕವಾಡಿ.	ಮಾದ ಬಿನ್ ಚಲುವಾದಿ .	397	2	39	2	0	0	1 (397 ಮತ್ತು 397/1 ಸೇರಿ)	32	ಎಸ್. ನಂ. 397ರ ಭಾಗ	ಡಿಟೋ 397ರ ಭಾಗ	ಎಸ್. ನಂ. 832	ಎಸ್. ನಂ. 398
				ವೀರ ಬಿನ್ ಎಂ. ಹುಚ್ಚ ...	397/1	2	38	2	0	0						
				ದುಂಡ ಬಿನ್ ಚಲುವಾದಿ ..	397/2 396	2	3	1	8	0	1	..	ಡಿಟೋ 396ರ ಭಾಗ	ಡಿಟೋ 396ರ ಭಾಗ	ಎಸ್. ನಂ. 395	ಎಸ್. ನಂ 832
				ಮಾದಿಗರ ಮದ್ದೂರ .	832	3	26	2	8	0	1	28	ಡಿಟೋ 832ರ ಭಾಗ	ಡಿಟೋ 832ರ ಭಾಗ	ಎಸ್. ನಂ. 396	ಎಸ್. ನಂ. 397
				ಮದನಿ ಸಿದ್ದ .	395	2	22	1	0	0	1	12	ಡಿಟೋ 395ರ ಭಾಗ	ಡಿಟೋ 395ರ ಭಾಗ	ಎಸ್. ನಂ. 394 ಮತ್ತು ಹೆಗ್ಗೂರ ರಸ್ತೆ ಸೇತುವೆ	ಎಸ್. ನಂ. 396
				ಅಶ್ವತ್ಥ ನಾರಣಪ್ಪ	394	...	22	0	4	0		22	ಕಾವೇರಿ ನದಿ	ಹೆಗ್ಗೂರ ಸೇತುವೆ ಮತ್ತು ನಂ. 395	ಹೆಗ್ಗೂರ ಸೇತುವೆ	ಎಸ್. ನಂ. 395
				ಡಿಟೋ ..	393	3		1	4	0	1	20	ನಂ. 393ರ ಭಾಗ	ಎಸ್. ನಂ 392	ಎಸ್. ನಂ. 388	ಎಸ್. ನಂ. 388
				ಡಿಟೋ .	392	5	12	2	12	0	2		ಎಸ್. ನಂ. 393 ವ 388	ಎಸ್. ನಂ. 392ರ ಭಾಗ	ಎಸ್. ನಂ. 388, 390 ವ 391	ಎಸ್. ನಂ. 388
				ಡಿಟೋ .	391	6	36	4	0	0	5		ಎಸ್ ನಂ. 388 ಮತ್ತು ಎಸ್. ನಂ. 391ರ ಭಾಗ	ಎಸ್ ನಂ. 390	ಎಸ್. ನಂ. 389 ವ 388	ಎಸ್. ನಂ. 392
				ಡಿಟೋ ..	390	4	39	1	12	0	2	32	ಸರ್ವೆ ನಂ. 391	ಎಸ್. ನಂ. 390ರ ಭಾಗ	ಸರ್ವೆ ನಂ. 389	ಎಸ್. ನಂ. 392
				ಜವರೇಗೌಡನ ಲಿಂಗಯ್ಯ ..	389	5	12	1	12	0	2	4	ಎಸ್. ನಂ. 389ರ ಭಾಗ	ಎಸ್. ನಂ. 388	ಎಸ್. ನಂ. 387	ಎಸ್. ನಂ. 390
				ಪುಟ್ಟಲಿಂಗ ...	388	6	3	2	0	0	1	8	ನದಿ, ಎಸ್. ನಂ. 389 ವ ಎಸ್. ನಂ. 388ರ ಭಾಗ	ಹೈರೋಡು ಮತ್ತು ನಂ. 388, 391 ವ 392ರ ಭಾಗ	ಎಸ್. ನಂ. 388, 392, 393 ವ 391ರ ಭಾಗ	ಎಸ್. ನಂ. 388ರ ಭಾಗ, ಹೆಗ್ಗೂರ ಸೇತುವೆ ಮತ್ತು ನಂ. 393
				ಪಕ್ರೂದಿ ಸಾಬ್ ...	341	5	9	2	8	0	..	14	ಸರ್ವೆ. ನಂ. 342	ಸರ್ವೆ ನಂ. 341ರ ಭಾಗ	ಸರ್ವೆ ನಂ. 340	ಹಳ್ಳ

ಡಿಟೋ	ಡಿಟೋ	ಡಿಟೋ		ಡಿಟೋ	342	2	18	1	4	0	2	18	ಸರ್ವೆ ನಂ. 340 ವ ಹಳ್ಳ	ಸರ್ವೆ ನಂ. 341	ಎಸ್. ನಂ. 340	ಡಿಟೋ
				ಚಾಬುಸಾಬಿ	343	7	13	3	8	0	4	12	ನಂ. 343ರ ಭಾಗ	ಎಸ್. ನಂ. 340 ವ ಸರ್ವೆ ನಂ. 343ರ ಭಾಗ	ಸರ್ವೆ ನಂ. 340	ಸರ್ವೆ ನಂ. 340
				ಗೋಪಾಲಾಚಾರಿ	345	5	32	2	8	0	2	32	ನಂ. 345ರ ಭಾಗ	ಎಸ್. ನಂ. 340	ಎಸ್. ನಂ. 346	ಎಸ್. ನಂ. 344
				ಡಿಟೋ	346	5	9	2	4	0	5	9	ಹೈರೋಡು	ಡಿಟೋ	ಎಸ್. ನಂ. 347 ವ 348	ಎಸ್. ನಂ. 345
				ಡಿಟೋ	348	4	32	1	8	0	1	6	ರಸ್ತೆ	ಎಸ್. ನಂ. 348ರ ಭಾಗ	ಎಸ್. ನಂ. 348ರ ಭಾಗ	ಎಸ್. ನಂ. 346
				ಡಿಟೋ	380	4	30	1	8	0	3		ಸರ್ವೆ ನಂ. 380ರ ಭಾಗ	ರಸ್ತೆ	ಎಸ್. ನಂ. 379	ಎಸ್. ನಂ. 382
				ವೀರತ್ತಯ್ಯ ಮತ್ತು ಸಿದ್ದಮಲ್ಲಯ್ಯ.	374	5	22	2	0	0	5	22	ಎಸ್. ನಂ. 371	ಎಸ್. ನಂ. 371	ಎಸ್. ನಂ. 371 ವ 373	ಎಸ್. ನಂ 371
				ಡಿಟೋ	373	3	25	1	4	0	3	25	ಡಿಟೋ	ಡಿಟೋ	ಎಸ್. ನಂ. 371	ಎಸ್. ನಂ. 374
				ಜುಮ್ಲಾ ...	...	129	25	61	8	0	74	1				
			ಮುಲಗತ್ತನಹಳ್ಳಿ	ಕೃಷ್ಣಯ್ಯಂಗಾರು	9	34	38	7	12	0	13	32	ಹೈರೋಡು	ಎಸ್. ನಂ. 9ರ ಭಾಗ	ಸರ್ವೆ ನಂ. 9ರ ಭಾಗ	ಸರ್ವೆ ನಂ. 9ರ ಭಾಗ ಮತ್ತು ರಸ್ತೆ
				ದಾವುದ್‌ಸಾಬಿ	8	6	11	4	8	0	6	11	ಎಸ್. ನಂ. 9	ಎಸ್. ನಂ. 7 ವ 6	ಹಳ್ಳ	ರಸ್ತೆ
				ಡಿಟೋ	7	4	12	3	0	0		7	ಎಸ್. ನಂ. 8	ಎಸ್. ನಂ. 7ರ ಭಾಗ	ಡಿಟೋ	ಎಸ್. ನಂ. 6
				ಜುಮ್ಲಾ ...	...	35	21	15	4	0	20	10				
				ಹಿಡುವಳಿಯಲ್ಲಿರುವ ಜಮೀನುಗಳ ಒಟ್ಟು ಜುಮ್ಲಾ	...	165	6	76	12	0	94	11				
			[illegible]	ಬಂಜರ್	379	3	29	1	12	0	2	28	ಎಸ್. ನಂ. 375	ರಸ್ತೆ ಮತ್ತು ಸರ್ವೆ ನಂ. 379ರ ಭಾಗ	ಎಸ್. ನಂ. 375	ಎಸ್. ನಂ. 380
				ಡಿಟೋ	372	1	23	0	8	0	1	23	ಎಸ್. ನಂ. 371	ಎಸ್. ನಂ. 369	ಎಸ್. ನಂ. 371	ಎಸ್. ನಂ. 371
				ಜುಮ್ಲಾ ...		5	12	2	4	0	4	11				
				ಜಹಗೀರ್‌ದಾರು ಪೆರಂಬೋಕ್ ಮತ್ತು ಜಂಗಲ್ ಜಮೀನುಗಳು.	369	560	1						ಸರ್ವೆ ನಂ. 372 ವ 371	ಎಸ್. ನಂ. 369ರ ಭಾಗ	ಎಸ್. ನಂ. 370	ಎಸ್. ನಂ. 369ರ ಭಾಗ
					371	492	29	0	0		90	5	ಕಾವೇರಿ ನದಿ	ಎಸ್. ನಂ 371 ವ 369ರ ಭಾಗ	ಹಳ್ಳ	ರಸ್ತೆ
					375	178	..						ಎಸ್. ನಂ. 375ರ ಭಾಗ	ಡಿಟೋ 375ರ ಭಾಗ	ರಸ್ತೆ	ಎಸ್. ನಂ. 379

ತಾರೀಖು 11ನೇ ಮಾರ್ಚಿ 1903.

ನಂ. ರೆ. 3608, ಸ್ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಆಕ್ವಿಜೇಷ್ರ್ ರೆಗ್ಯುಲೇಷನಿನ 6ನೇ ಸೆಕ್ಷರ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ತಾಲ್ಲೂಕಿನಲ್ಲಿರುವ ಯೋಗೇನಹಳ್ಳಿ ಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತದೆ. ಸದರಿ ರೆಗ್ಯುಲೇಷನಿನ 7ನೇ ಸೆಕ್ಷರ್ ಅನುಸರಿಸಿ ಡೆಪ್ಯುಟಿ ಕಮಿಷನರವರು ಸದರೀ ಜಮೀನನ್ನು ಹೊಂದುವಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಅನುಭವದಾರರ ಹೆಸರು.	ಸರ್ವೆ ನಂ.	ಪೂರಾ ನಂಬರಿನ ವಿಸ್ತೀರ್ಣ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
								ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
ತುಮಕೂರು	ತುಮಕೂರು	ಯೋಗೇನಹಳ್ಳಿ	ಗೋಪಾಲಾಚಾರ್ರು	ಗೋಪಾಲಾಚಾರ್ರು	2	ಎ. ಗು. 3—25 ಖುಷ್ಕಿ ರೂ. ಆ. ಪೈ. 2—4—0	8 ಎಕರೆ ಅಥವಾ 35 ಗುಂಟೆಗಳು	ತುಮಕೂರು—ಸಿದ್ಧಗಿರಿ ರಸ್ತೆ	ಸರ್ವೆ ನಂ. 83	ಸರ್ವೆ ನಂ. 80	ತುಮಕೂರು—ಸಿದ್ಧಗಿರಿ ರಸ್ತೆ.

ತಾರೀಖು 26ನೇ ಮಾರ್ಚಿ 1903.

ನಂ. ರೆ. 3737—ರೆ. ಫೈ. 37-96, ಮೈಸೂರು ಸರ್ವಿಸ್ ರೆಗ್ಯುಲೇಷ್ರಗಳ 188ನೇ ಆರ್ಟಿಕಲ್ ಅನುಸರಿಸಿ ಮೈಸೂರು ರೆವಿನ್ಯೂ ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುತ್ತಲಿರುವ ಅಸಿಸ್ಟೆಂಟ್ ಕಮಿಷನರಾದ ಮ॥ ಸಿ. ರಾಜಗೋಪಾಲಾಚಾರ್ಲು, ಬಿ. ಎ., ಯವರಿಗೆ 1903ನೇ ಮಾರ್ಚಿ 10ನೇ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 26ನೇ ಮಾರ್ಚಿ 1903.

ನಂ. ರೆ. 3740, ಮಾಗಡಿ ತಾಲ್ಲೂಕಿನ ಅಮಲ್ದಾರರಾದ ಮ॥ ಅಬ್ದುಲ್ ಜಲೀಲ್‌ಯವರಿಗೆ 1902ನೇ ಅಕ್ಟೋಬರ್ 16ನೇ ಪುರ್ಷುಂ ರೆ. 1582—ರೆ. ಫೈ. 35-98ನೇ ನಂಬರ್ ಯೊಡನೆ ಅಖೈರಾಗುವ ಇಸ್ತಿಹಾರ್ನಾಮೆಗಳಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟಿದ್ದ 20 ತಿಂಗಳುಗಳ ರಜಾ ಇನ್ನೂ 4 ತಿಂಗಳುಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತದೆ.

2. ಮ॥ ಭೀಮಸೇನರಾಯರು ಈ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹಿರಿಯೂರು ತಾಲ್ಲೂಕಿನಲ್ಲಿ ಆಕ್ಟಿಂಗ್ ತರೀಕು ಎಂದಿನಂತೆ ಇರತಕ್ಕದ್ದು.

ತಾರೀಖು 27ನೇ ಮಾರ್ಚಿ 1903.

ನಂ. ರೆ. 3768, ಮೈಸೂರು ಸರ್ವಿಸ್ ರೆಗ್ಯುಲೇಷ್ರಗಳ 188ನೇ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ದಾವಣಗೆರೆಯ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮ॥ ಚಂಗಯ್ಯ ಚೆಟ್ಟಿಯವರಿಗೆ 1903ನೇ ಮಾರ್ಚಿ 28ನೇ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜಿಬ್

ಹೆಚ್. ವಿ. ನಂಜುಂಡೈಯ್ಯ,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್ಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮಾ.

ತಾರೀಖು 27ನೇ ಮಾರ್ಚಿ 1903.

ನಂ. 356—1782, ಮೈಸೂರ ಪ್ಯಾಲೇಸ್ ಡಿವಿಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮ॥ ಸಿ. ಆರ್. ಶ್ರೀನಿವಾಸಯ್ಯಂಗಾರ್ರಿಗೆ 1903ನೇ ಫೆಬ್ರುವರಿ 6ನೇ ತಾರೀಖಿನಾರಭ್ಯ 13 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಹುಕುಂ ಬಮೋಜಿಬ್,

ಡಬ್ಲ್ಯೂ. ಮೆಕ್‌ಹಚೀಲ್,

ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನ್ಮೆಂಟ್ ಸೆಕ್ರೆಟರಿ.

ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಛಾಯಿಷ್ ಆದ್ದು. [ನಂ. 14.

ಬೆಂಗಳೂರು, ಗುರುವಾರ, ಏಪ್ರೆಲ್ ತಾ॥ 2, ಸನ್ 1903.

ವಿಷಯ ಸೂಚಿಕೆ.

1ನೇ ಭಾಗ-ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ-ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರಿಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ್ ವರ್ಕಸ್ ಆಫಿಸರಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಯುಡ್ಯುಕೇಷನ್ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೇ ಭಾಗ-ಲೆಜಿಸಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೇ ಭಾಗ-ಸರ್ಕಾರೀ ಕಾಗದಪತ್ರಗಳು—ಇಲ್ಲ.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 18ನೇ ಮಾರ್ಚಿ 1903.

ನಂ. 13878—ಲೋ. ಬೋ. ಪಿ. 663, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೇ ಫೆಬ್ರುವರಿ 10ನೇ ಮರ್ಕೂಂ 9383—ಮಿ. ಫೈ. 21–96ನೇ ಮತ್ತು 9384—ಮಿ. ಫೈ. 21–96ನೇ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗಾಗಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ದಾವಣಗೆರೆ ಟೌನ್, ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ತಾರೀಖು 18ನೇ ಮಾರ್ಚಿ 1903.

ನಂ. 13880—ಲೋ. ಬೋ. (ಪಿ) 661, ಸನ್ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ IIನೇ ನಂಬರ್ ರೆಗ್ಯುಲೇಷನಿನ 2ನೇ ಸೆಕ್ಷನಿಗೆ ಸೇರಿದ 1ನೇ ಸಬ್ ಸೆಕ್ಷನ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಜಾತ್ರೆಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಛೌನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿಪಡಿಸುತ್ತಾರೆ:—

ತಾಲ್ಲೂಕು.	ಜಾತ್ರೆಯ ಹೆಸರು.	ಎಲ್ಲಿ ನಡೆಯತಕ್ಕದ್ದು.	ತಾರೀಖು.	
			ಯಾವ ಲಾಗಾಯತು.	ಯಾವ ವರಿವಿಗೆ.
ಜಗಳೂರು ...	ಕೊನಚಲ್ ಗುಡ್ಡ ರಂಗನಾಥ ದೇವರ ಜಾತ್ರೆ.	ಕೊರಟಕೆರೆ ...	30—3—1903	2—4—1903

ತಾರೀಖು 31ನೇ ಮಾರ್ಚಿ 1903.

ನಂ. 14482—ಲೋ. ಬೋ. ಪಿ. 695, ಸ್ತ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ IIನೇ ನಂಬರ ರೆಗ್ಯುಲೇಷನಿನ 2ನೇ ಸೆಕ್‌ಷನಿಗೆ ಸೇರಿದ 1ನೇ ಸಬ್ ಸೆಕ್‌ಷ್ಷ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಇದರಡೀ ಕಂಡ ಜಾತ್ರೆಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಎಲ್ಲಿ ನಡೆಯತಕ ದ್ದು.	ತಾಲ್ಲೂಕು.	ತಾರೀಖು.		ಷರಾ.
			ಯಾವ ಲಾಗಾಯತು.	ಯಾವ ವರಿವಿಗೆ.	
ಬೆಂಗಳೂರು ಡಿಸ್ಟ್ರಿಕ್ಟು.					
ಶ್ರೀರಂಗನಾಥಸ್ವಾಮಿಯ ರಥೋತ್ಸವ.	ತಿರುಮಲೆ ...	ಮಾಗಡಿ	4—4—03	15—4—03	
ಕೋಲಾರ ಡಿಸ್ಟ್ರಿಕ್ಟು.					
ಶ್ರೀ ವೆಂಕಟರಮಣಸ್ವಾಮಿಯ ಜಾತ್ರೆ.	ತಿರುಪತಿ ...	ಮಾಲೂರು ..	4—4—03	14—4—03	ಜಾತ್ರೆ ನಡೆಯುವದನ್ನು ಅಡ್ಡೀಪಡಿಸಲ್ಪಟ್ಟಿರುತ್ತದೆ.

ತಾರೀಖು 31ನೇ ಮಾರ್ಚಿ 1903.

ನಂ. 14484—ಲೋ. ಬೋ. (ಪಿ) 697, ಸ್ತ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ IIನೇ ನಂಬರ ರೆಗ್ಯುಲೇಷನಿನ 2ನೇ ಸೆಕ್‌ಷನಿಗೆ ಸೇರಿದ 1ನೇ ಸಬ್ ಸೆಕ್‌ಷ್ಷ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಇದರಡೀ ಕಂಡ ಜಾತ್ರೆಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಎಲ್ಲಿ ನಡೆಯತಕ್ಕದ್ದು	ತಾಲ್ಲೂಕು.	ಯಾವ ತಾರೀಖಿನ ಲಾಗಾಯಿತು.	ಯಾವ ವರಿವಿಗೆ.
ಕೋಲಾರ ಡಿಸ್ಟ್ರಿಕ್ಟು.				
ಶ್ರೀ ವೆಂಕಟರಮಣ ಸ್ವಾಮಿಯ ರಥೋತ್ಸವ.	ಆಲಂಗಿರಿ	ಚಿಂತಾಮಣಿ	11— 4—1903	23— 4—1903
ಚಿತ್ರದುರ್ಗ ಡಿಸ್ಟ್ರಿಕ್ಟು.				
ಕಲ್ಲೇಶ್ವರದೇವರ ರಥೋತ್ಸವ ...	ಕಲ್ಲೇದೇವರಪುರ	ಜಗಲೂರು	15— 4—1903	18— 4—1903

ತಾರೀಖು 1ನೇ ಏಪ್ರೈಲ್ 1903.

ನಂ. ಲೋ. ಬೋ. (ಪಿ) 703, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರು ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕಟ್ಟುಗಳು ಕೊಡುವದನ್ನು ಮದ್ರಾಸ ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ಟಿಕಟ್ಟುಗಳು ವಿಕ್ರಯಿಸಲ್ಪಡದೇ ಇರುವ ತಾರೀಖುಗಳು ಮತ್ತು ಸ್ಟೇಷನ್‌ಗಳು.			ಅಥಾರಿಟಿ.
				ಯಾವ ಲಾಗಾಯತು	ಯಾವ ವರಿವಿಗೆ	ಸ್ಟೇಷನ್‌ಗಳು.	
ವಿರೂಪಾಕ್ಷಸ್ವಾಮಿಯ ರಥೋತ್ಸವ	ಹಂಪಿ	ಹೊಸಪೇಟೆ	ಬಳ್ಳಾರಿ	7—4—03	27—4—03	ದಕ್ಷಿಣ ಮಹರಾಟಾ ರೈಲ್ವೆಯಲ್ಲಿರುವ ಮುನಿರಾಬಾದ, ಹೊಸಪೇಟೆ, ಪಿನಾಯಿಕನಹಳ್ಳಿ, ಗಡಿಗನೂರು, ತೋರನಗಲ್ಲು, ದರೋಜಿ ಮತ್ತು ಕುಡತ್ತಿನಿ	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಡಿಪಾರ್ಟ್‌ಮೆಂಟ್ ನಂ. 366—ಪಿ., ತಾ|| 31—3—03.

ತಾರೀಖು 31ನೇ ಮಾರ್ಚಿ 1903.

ನಂ. 14486—ಲೋ. ಜೋ. ಪಿ. 699, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷರ್ಷ ಅನುಸರಿಸಿ 1898ನೇ ಫೆಬ್ರವರಿ 10ನೇ ಮುರ್ಕ್ಕಂ 9383—ಮಿ. ಫೈ. 21—96ನೇ ಮತ್ತು 9384 ಮಿ. ಫೈ. 21—96ನೇ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷರ್ಷಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಕೊಪ್ಪ ಟವ್ರ್ನ, ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ತಾರೀಖು 1ನೇ ಏಪ್ರೈಲ್ 1903.

ನಂ. ಲೋ. ಬೋ. (ಪಿ) 704, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆ ಮತ್ತು ಉತ್ಸವಗಳಿಗೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟನವರು ಅಡ್ಡೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.	ಷರಾ.
				ಯಾವ ಲಾಗಾಯತು.	ಯಾವ ವರಿವಿಗೆ.		
ಚಿತ್ರೋತ್ಸವ	ಡೆಂಕಣಿ ಕೋಟೆ	ಹೊಸೂರು	ಸೇಲಂ	6—4—03	29—4—03	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 353 ಪಿ., ತಾ॥27-3-03	
ಗಂಗಮ್ಮನ ಉತ್ಸವ.	ಪಲಮನೇರ್	ಪಲಮನೇರ್	ಉತ್ತರ ಆರ್ಕಾಡ್	9—5—03	16—5—03	ಡಿಟೋ ನಂ. 355-ಪಿ., ತಾ॥ 27-3-03	
ಮಣಿಕರಾಯ ಸ್ವಾಮಿಯ ಉತ್ಸವ.	ಪುಂಗನೂರು	.	ಡಿಟೋ	1—5—03	13-5-03	ಡಿಟೋ ನಂ. 364-ಪಿ., ತಾ॥ 31-3-03	ದನಗಳ ಪರಸೆ ನಡೆಯುವದು ಅಡ್ಡೀಪಡಿಸಲ್ಪಟ್ಟಿರುತ್ತದೆ.
ಪುಂಗನೂರ ದನಗಳ ಪರಸೆ.	ಡಿಟೋ	...	ಡಿಟೋ	14—5—03	20-5-03		
ವಿರುಪಾಕ್ಷಸ್ವಾಮಿಯ ರಥೋತ್ಸವ.	ಹಂಪಿ	ಹೊಸಪೇಟೆ	ಬಳ್ಳಾರಿ	7—4—03	27—4—03	ಡಿಟೋ ನಂ. 366-ಪಿ., ತಾ॥31-3-03	
ಶ್ರೀರಾಮ ನವಮಿ ಉತ್ಸವ.	ಪಟುಮುಟಲಿ	ಹೊಸೂರು	ಸೇಲಂ	1—4—03	16—4—03	ಡಿಟೋ ನಂ. 368-ಪಿ., ತಾ॥31-3-03	
ಶ್ರೀಕೈಲಾಸನಾಥಸ್ವಾಮಿಯ ರಥೋತ್ಸವ.	ಬೇರಿಕೆ	ಡಿಟೋ	ಡಿಟೋ	2—4—03	15—4—03	ಡಿಟೋ ನಂ. 370-ಪಿ, ತಾ॥ 31-3-03	

ತಾರೀಖು 7ನೇ ಏಪ್ರೈಲ್ 1903.

ನಂ. ಲೋ. ಬೋ. (ಪಿ) 715, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಮೈಸೂರ ಸಂಸ್ಥಾನ ಸಹಿತವಾಗಿ ರೋಗ ತಗಲಿದ ಪ್ರದೇಶಗಳಿಂದ ಬರಲು ಉದ್ದೇಶಿಸಿರುವ ಜನಗಳಿಗೆ ಟಿಕೆಟ್ಟುಗಳು ಕೊಡುವದನ್ನು ಮದರಾಸು ಗವರ್ನಮೆಂಟನವರು ಅಡ್ಡೀಪಡಿಸುತ್ತಾರೆ:—

ಜಾತ್ರೆ ಯಾ ಉತ್ಸವದ ಹೆಸರು.	ಸ್ಥಳ.	ತಾಲ್ಲೂಕು	ಡಿಸ್ಟ್ರಿಕ್ಟು.	ಟಿಕೆಟ್ಟುಗಳು ವಿಕ್ರಯಿಸಲ್ಪಡದೆ ಇರುವ ತಾರೀಖುಗಳು ಮತ್ತು ಸ್ಟೇಷರ್ಷಗಳು.			ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	ಸ್ಟೇಷರ್ಷಗಳು.	
ವಸಂತ ಉತ್ಸವ	ತಿರುವಣ್ಣಾಮಲೈ	..	ದಕ್ಷಿಣ ಆರ್ಕಾಟ್	23—4—03	9—5—03	ದಕ್ಷಿಣ ಇಂಡಿಯಾ ರೈಲ್ವೆಯಲ್ಲಿರುವ ಚಿಂಗ ದಂ, ಸಿಟ್ಟಿ, ತಿರುವಣ್ಣಾಮಲೈ ಮತ್ತು ಕಾಂಡಪ್ಪಾ	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್ಮೆಂಟ್ ನಂ. 379-ಪಿ., ತಾ॥ 3-4-03

ತಾರೀಖು 16ನೇ ಮಾರ್ಚಿ 1903.

ನಂ. 13806—ಲೋ. ಬೋ. (ಪಿ) 649, ಸರ್ 1897ನೇ ಇಸವಿಯ ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನಿನ 2ನೇ
ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮರ್ ಮಹಾರಾಜ ಸರ್ಕಾರ
ದವರು ಶ್ರೀರಂಗಪಟ್ಟಣದಲ್ಲಿರುವ ರೈಲ್ವೆ ಸ್ಟೇಷನನ್ನು 1903ನೇ ಏಪ್ರೈಲ್ ಗುರ್ರು ತಾರೀಖಿನಾರಭ್ಯ ಅಜಮಾಯಿಷಿ ಸ್ಟೇಷನ್ನಾಗಿ ಮೊ
ಕರರ್ಮಾಡುವದಲ್ಲದೆ ಇದರಡೀ ಕಂಡ ಹಂಗಾಮಿ ರೆಗ್ಯುಲೇಷರ್‌ಗಳನ್ನು ವಿಧಿಸಿರುತ್ತಾರೆ :—

1. ಯಾವ ಪ್ಯಾಸಂಜರು ಟ್ರೇನೂ, ಮುಂದೆ ವಿಧಿಸಲ್ಪಟ್ಟ ಮೇರೆ ಅಜಮಾಯಿಷಿ ಮಾಡಲ್ಪಟ್ಟ ಹೊರ್ತು ಮತ್ತು ಸದರೀ
ಟ್ರೇನ್ನಲ್ಲಿ ಹೊರಡುವ ರೈಲ್ವೆ ನೌಕರ್ರ್ಮಾನೇರು ಯಾ ಪ್ರಯಾಣೀಕರೆ ಆಗಲಿ ಪ್ಲೇಗ್ ರೋಗವು ಇಲ್ಲದೆ ಇರುತ್ತಾರೆಂದು ಶ್ರೀರಂಗಪಟ್ಟಣ
ಸ್ಟೇಷನಲ್ಲಿರುವ ಇರ್ಸ್ಪೆಕ್ಟಿಂಗ್ ಆಫಿಸರರಿಂದ ಸರ್ಟಿಫಿಕೇಟನ್ನು ಸದರೀ ಟ್ರೇರ್ ಚಾರ್ಜಿನಲ್ಲಿರುವ ಗಾರ್ಡ್ ಪಡೆದ ಹೊರ್ತು, ಮೈಸೂರ
ಮಾರ್ಗವಾಗಿ ಶ್ರೀರಂಗಪಟ್ಟಣ ಸ್ಟೇಷನ್ನಿಂದ ಹೊರಡಕೂಡದು.

2. ಬೆಂಗಳೂರ ಮಾರ್ಗದಿಂದ ಶ್ರೀರಂಗಪಟ್ಟಣಕ್ಕೆ ಬರುವ ಪ್ರತಿ ಪ್ಯಾಸಂಜರು ಟ್ರೇನೂ, ಡ್ಯೂಟಿ ಮೇಲಿರುವ ಇರ್ಸ್ಪೆಕ್ಟಿಂಗ್
ಆಫಿಸರರು ಅಪ್ಪಣೆ ಕೊಡುವ ಮೇರೆ, ಪ್ಯಾಸಂಜರುಗಳ ಅಜಮಾಯಿಷಿಗೋಸ್ಕರ ಖಾಲಿ ಮಾಡತಕ್ಕದ್ದು. ಮತ್ತು ಇದರಡೀ
ಕಂಡವರನ್ನು ಅಜಮಾಯಿಷಿ ಮಾಡುವದಕ್ಕೋಸ್ಕರ ಡ್ಯೂಟಿ ಮೇಲಿರುವ ಇರ್ಸ್ಪೆಕ್ಟಿಂಗ್ ಆಫಿಸರರಿಗೆ ಅವಶ್ಯಕವಾದ್ದೆಂದು ತೋ
ರಬಹುದಾದಂತ ಎಲ್ಲಾ ಸಹಾಯಗಳನ್ನು ರೈಲ್ವೆ ಕಂಪನಿಯ ನೌಕರ್ರ್ಮಾನೇರು ಮಾಡತಕ್ಕದ್ದು.

(*a*) ಸದರೀ ಟ್ರೇನ್ನಲ್ಲಿ ಬಂದ ಜನರು ಆ ಟ್ರೇನ್ನಲ್ಲಿ ಮುಂದಕ್ಕೆ ಹೊರಡಲು ಉದ್ದೇಶಿಸಿರುವರಾಗಲಿ ಅಥವಾ ಇಲ್ಲದವರಾಗಲಿ,

(*b*) ಅಜಮಾಯಿಷಿ ಸ್ಟೇಷನ್ನಿಂದ ಹೊರಟು ಸದರೀ ಟ್ರೇನ್ನಲ್ಲಿ ಪ್ರಯಾಣ ಮಾಡಲು ಉದ್ದೇಶಿಸುವ ಜನರು.

3. ಇರ್ಸ್ಪೆಕ್ಟಿಂಗ್ ಆಫಿಸರರು ಸದರೀ ಟ್ರೇರ್ ಮೂಲಕ ಬರವಂಥಾ ಅಥವಾ ಹೊರಡಲು ಉದ್ದೇಶಿಸುವಂಥಾ ವಿಸಿಷ್ಟ ಜನ
ರನ್ನು ಅಜಮಾಯಿಷಿ ಮಾಡಲಿಕ್ಕೂ ಮತ್ತು ಪ್ಲೇಗ್ ರೋಗವು ತಗಲಿದವರನ್ನು ಅಥವಾ ತಗಲಿರುವದಾಗಿ ಊಹಿಸಲ್ಪಟ್ಟಂಥಾವರನ್ನು
ಆಯಾ ಜನಗಳ ವಾಸಕ್ಕೆ ಗೊತ್ತಾಗಿರುವ ಸ್ಥಳಗಳಿಗೆ ತಕ್ಕ ಉಸ್ತುವಾರಿಯೊಡನೆ ಕಳುಹಿಸಲಿಕ್ಕೂ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

4. ಇರ್ಸ್ಪೆಕ್ಟಿಂಗ್ ಆಫಿಸರರು, ತಮ್ಮಿಂದ ಮೆಡಿಕಲ್ ಅಜಮಾಯಿಷಿ ಮಾಡಲ್ಪಟ್ಟ ವಿಶಿಷ್ಟ ಪ್ರಯಾಣೀಕರು ತಮ್ಮ ಟಿಕೆ
ಟ್ಟುಗಳನ್ನು ತಾವು ಅಜಮಾಯಿಷಿಸಲ್ಪಟ್ಟ ಸಂಗತಿಯನ್ನು ಅವುಗಳ ಮೇಲೆ ಗುರ್ತಿಸತಕ್ಕ ಬಗ್ಯೆ ಹಾಜರ್ರ್ಮಾಡುವಂತೆ ಅವರಿಗೆ
ಅಪ್ಪಣೆ ಮಾಡಬಹುದು. ಪ್ರಯಾಣೀಕರು ಯಾವತ್ತು ತಮ್ಮ ಟಿಕೇಟುಗಳನ್ನು ಆ ಮೇರಿಗೆ ಹಾಜರು ಮಾಡಲು ಬದ್ಧರಾಗಿರತಕ್ಕದ್ದು.

5. ಡ್ಯೂಟಿ ಮೇಲಿರುವ ಇರ್ಸ್ಪೆಕ್ಟಿಂಗ್ ಆಫಿಸರರು ಅಜಮಾಯಿಷಿ ಬಗ್ಯೆ ಮಾಡಬಹುದಾದಂಥ ಏರ್ಪಾಡುಗಳಿಗೆ ಜನರು
ಒಳಗಾಗುವಂತೆ ಬಲಾತ್ಕರಿಸುವ ವಿಷಯದಲ್ಲೂ, ಮತ್ತು ಪ್ಲೇಗ್ ರೋಗ ತಗಲಿರುವ ಅಥವಾ ತಗಲಿರುವದಾಗಿ ಊಹಿಸಲ್ಪಟ್ಟ ಜನ
ರನ್ನು ಸಾಗಿಸುವ ವಿಷಯದಲ್ಲೂ ಸದರೀ ಇರ್ಸ್ಪೆಕ್ಟಿಂಗ್ ಆಫಿಸರರು ಈ ರೆಗ್ಯುಲೇಷರ್‌ಗಳನ್ನನುಸರಿಸಿ ಕೊಡುವ ಅಪ್ಪಣೆ ಮೇರೆಗೆ
ಪೋಲೀಸು ನೌಕರ್ರ್ಮಾನೇರು ನಡೆಯತಕ್ಕದ್ದು.

6. ಈ ರೆಗ್ಯುಲೇಷರ್‌ಗಳ ಪೈಕಿ ಯಾವದನ್ನಾಗಲಿ ಯಾ ಅದಕ್ಕೆ ಅನುಗುಣವಾಗಿ ಇರ್ಸ್ಪೆಕ್ಟಿಂಗ್ ಆಫಿಸರರಿಂದ ಕೊಡಲ್ಪ
ಟ್ಟ ಯಾವ ಹುಕುಮನ್ನಾಗಲಿ ಉಲ್ಲಂಘಿಸುವ ಯಾವ ಮನುಷ್ಯನೂ ಇರ್ಡಿಯರ್ ಪೆನಲ್‌ಕೋಡಿನ 188ನೇ ಸೆಕ್ಷರ್ ಅನುಸರಿಸಿ
ಶಿಕ್ಷಿಸಬಹುದಾದ ತಕ್ಸೀರನ್ನು ನಡೆಸಿದಂತೆ ಎಣಿಸಲ್ಪಟ್ಟು ತಪ್ಪು ಆಪಾದಿಸಲ್ಪಟ್ಟರೆ, ಆರು ತಿಂಗಳುಗಳ ವರಿವಿಗೆ ವಿಸ್ತರಿಸಬಹುದಾದ
ಖೈದಿನಿಂದಾಗಲಿ ಯಾ 1,000 ರೂಪಾಯಿಗಳ ವರಿವಿಗೆ ತೆರಬಹುದಾದ ಜುರ್ಮಾನೆಯಿಂದಾಗಲಿ, ಅಥವಾ ಇವೆರಡರಿಂದಾಗಲಿ ಶಿಕ್ಷಿಸಲ್ಪ
ಡಲಿಕ್ಕೆ ಗುರಿಯಾಗಿರುತ್ತಾನೆ.

ತಾರೀಖು 7ನೇ ಏಪ್ರೈಲ್ 1903.

ನಂ. ಲೋ. ಬೋ. (ಪಿ) 716, ಇಧರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ,
ಇದರಡೀ ಕಂಡ ಜಾತ್ರೆ ಮತ್ತು ಉತ್ಸವಗಳಿಗೆ ರೋಗತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂ
ಟಿನವರು ಅಡ್ಡಿಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಾರಿಟಿ.
				ಯಾವಲಾಗಾಯತು.	ಯಾವ ವರಿವಿಗೆ.	
ವಸಂತ ಉತ್ಸವ	ತಿರುವಣ್ಣಮಲೈ	..	ದಕ್ಷಿಣ ಆರ್ಕಾಡ್	23—4—03	9—5—03	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎರ್ಡಾರ್ಸ್‌ಮೆಂಟ್ ನಂ. 379 ಪಿ., ತಾ॥ 3-4-03
ಶ್ರೀ ವೆಂಕಟರಮಣ ಸ್ವಾಮಿಯ ರಥೋತ್ಸವ	ಬೇರಿಕೆ ..	ಹೊಸೂರು	ಸೇಲಂ ..	2—5—03	15—5—03	ಡಿಟೋ ನಂ. 383—ಪಿ. ತಾ॥ 3—4—03.
ಧರ್ಮರಾಜ ರಥೋತ್ಸವ	ಧರ್ಮರಾಜಕೊತ್ತಪಲ್ಲಿ ಎಂದು ಪ್ರಸಿದ್ಧವಾದ ಹುಣಸಹಳ್ಳಿ	ಡಿಟೋ ...	ಡಿಟೋ ...	7—4—03	17—4—03	ಡಿಟೋ ನಂ. 381—ಪಿ., ತಾ॥ 3—4—03.

ತಾರೀಖು 23ನೇ ಮಾರ್ಚಿ 1903.

ನಂ. 14129, ಲೋ. ಫಂ. 80-02, ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನು ಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಮನೆ ವ ಖಾಲಿ ನಿವೇಶನಗಳು ಸರ್ಕಾರ ಕೆಲಸಕ್ಕೆ ಅಂದರೆ, ಕಚ್ಚೇರಿಯಲ್ಲಿ ರಸ್ತೆಯನ್ನು ಹಾಕುವ ಬಗ್ಗೆ ಮತ್ತು ಖಜಾನೆ ವೆಂಕಟಅಯ್ಯಂಗಾರ್ರ ಮನೆಯ ಉತ್ತರಕ್ಕೆ ಇರುವ ಗಲ್ಲಿಯ ಅನುಸಾರವಾಗಿ ಗಲ್ಲಿಯನ್ನು ಹಾಕುವ ಬಗ್ಗೆ ಬೇಕಾಗಿರುತ್ತವೆ. 1894ನೇ ಇಸವಿಯ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 7ನೇ ಕ್ಲಾಜ್ ಅನುಸರಿಸಿ ತುಮಕೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ವ ಮ್ಯುನಿಸಿಪಾಲಿಟಿಗಳ ಪ್ರೆಸಿಡೆಂಟರಾದ ಮ|| ಎಂ. ಎಸ್. ನಾರಾಯಣರಾಯರು ಸದರೀ ಮನೆ ವ ಖಾಲಿ ನಿವೇಶನಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬರು.	ಮನೆಯ ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ವಿಸ್ತೀರ್ಣ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.						
1	ಚಿಕ್ಕ ಹನುಮಯ್ಯ ... ಸರ್ವೆ ನಂ. 305	141	24	376	ಖಾಲಿ ನಿವೇಶನ	ಹೊಸರಸ್ತೆ	ಹೊನ್ನೂರಯ್ಯನ ಖಾಲಿ ಜಮೀನು ಮತ್ತು ದೊಡ್ಡಲಕ್ಷ್ಮಯ್ಯನ ಖಾಲಿಜಮೀನು	ತಿಗಳರ ಚಿಕ್ಕಹನುಮಯ್ಯನ ತೋಟ	ಚಿಕ್ಕಹನುಮಯ್ಯನ ತೋಟ
2	ದೊಡ್ಡಲಕ್ಷ್ಮಯ್ಯನ .. ನಿವೇಶನ ನಂ. 135, 136	50	8	$44\frac{4}{9}$	ಡಿಟೋ	ಚಿಕ್ಕಹನುಮಯ್ಯನ ಖಾಲಿ ಜಮೀನು	ಲಕ್ಷ್ಮಿನರಸಿಹ್ಮಯ್ಯನ ಖಾಲಿ ಜಮೀನು	ಹೊನ್ನೂರಯ್ಯನ ಖಾಲಿ ಜಮೀನು	ದಾಸಪ್ಪನ ಮತ್ತು ಅವರ ಸ್ವಂತ ಖಾಲಿ ಜಮೀನುಗಳು
3	ಲಕ್ಷ್ಮಿನರಸಯ್ಯ ... ಖಾನೇಷುಮಾರಿ ನಂ. 1866	22	8	$19\frac{5}{9}$	ಡಿಟೋ	ತಿಗಳರ ದಾಸಪ್ಪನ ಖಾಲಿ ಜಮೀನು	ಸರ್ಕಾರ ಮೋಹರಿ	ನರಸಣ್ಣನ ಮನೆ	ಲಕ್ಷ್ಮಿನರಸಯ್ಯನ ಸ್ವಂತ ಮನೆ
	ಡಿಟೋ ...	12	8	$10\frac{2}{3}$	ಹೆಂಚಿನ ಮಾಳಿಗೆ				
4	ಚಿಕ್ಕನರಸಯ್ಯ .. ಖಾನೇಷುಮಾರಿ ನಂ. 1868, 1869, 1870.	26	12	$34\frac{2}{3}$	ಡಿಟೋ	ಹೊನ್ನೂರಯ್ಯನ ಖಾಲಿ ಜಮೀನು	ಡಿಟೋ	ನರಸಿಮ್ಮಯ್ಯನ ಗಲ್ಲಿ	ಸರ್ಕಾರ ಗಲ್ಲಿ
5	ಹೊನ್ನೂರಯ್ಯ ..	50	$10\frac{1}{3}$	$58\frac{1}{3}$	ಖಾಲಿ ನಿವೇಶನ	ಚಿಕ್ಕಹನುಮಯ್ಯನ ಖಾಲಿ ಜಮೀನು	ನರಸಿಮ್ಮಯ್ಯನ ಮನೆ	ಹೊನ್ನೂರಯ್ಯನದೇವರ ಮನೆ	ತಿಗಳರ ದೊಡ್ಡಲಕ್ಷ್ಮಯ್ಯನ ಮತ್ತು ದಾಸಪ್ಪನ ಖಾಲಿ ಜಮೀನು
	ಡಿಟೋ .. ಖಾನೇಷುಮಾರಿ ನಂ. 1871	50	4	$22\frac{2}{9}$	ಮಂಗಳಿನ ಮಾಳಿಗೆ				

ನಂಬರು.	ಮನೆಯು ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ವಿಸ್ತೀರ್ಣ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚೆಕ್ಕು ಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.						
6	ನರಸಿಹ್ಮಯ್ಯ .. ಡಿಟೋ .. ಖಾನೇಷುಮಾರಿ ನಂ. 2114	27 27	$7\frac{1}{2}$ 15	$22\frac{1}{2}$ 45	ಖಾಲಿ ನಿವೇಶನ ಮಣ್ಣಿನ ಮತ್ತು ಹೆಂಚಿನ ಮಾಳಿಗೆ	ಸರ್ಕಾರ ರಸ್ತೆ	ವೆಂಕಟಮ್ಮನ ಮನೆ	ರಸ್ತೆ	ನರಸಿಹ್ಮಯ್ಯನ ಸ್ವಂತ ಮನೆ
7	ವೆಂಕಟಮ್ಮ ... ಡಿಟೋ .. ಖಾನೇಷುಮಾರಿ ನಂ. 2115	12 45	$4\frac{1}{2}$ $4\frac{1}{2}$	6 $22\frac{1}{2}$	ಖಾಲಿ ನಿವೇಶನ ಮಣ್ಣಿನ ಮತ್ತು ಹೆಂಚಿನ ಮಾಳಿಗೆ	ನರಸಿಹ್ಮಯ್ಯನ ಮನೆ ಮತ್ತು ಹಿತ್ತಲು	ಹುಸೇನ್ ಸಾಹೇಬರ ಮನೆ	ರಸ್ತೆ	ವೆಂಕಟಮ್ಮನ ಸ್ವಂತ ಮನೆ
8	ಹೊಸಹಾಳಪ್ಪ . ಡಿಟೋ .. ಡಿಟೋ .. ಖಾನೇಷುಮಾರಿ ನಂ. 2113	15 43 15	21 11 21	35 $52\frac{5}{9}$ 35	ಹೆಂಚಿನ ಮಾಳಿಗೆ ಖಾಲಿ ನಿವೇಶನ ಡಿಟೋ	ಸರ್ಕಾರ ರಸ್ತೆ	ಚಿಕ್ಕಹನುಮಯ್ಯನ ಖಾಲಿಜಮೀನು	ಹೊಸಹಾಳಪ್ಪನ ಸ್ವಂತ ಮನೆ	ಸರ್ಕಾರ ರಸ್ತೆ
9	ಚಿಕ್ಕಹನುಮಯ್ಯ .. ಖಾನೇಷುಮಾರಿ ನಂ. 2109	46	10	$51\frac{1}{9}$	ಖಾಲಿ ನಿವೇಶನ	ಹೊಸಹಾಳಪ್ಪನ ಮನೆ	ಗಂಗಮ್ಮನ ಮನೆ	ಚಿಕ್ಕಹನುಮಯ್ಯನ ಖಾಲಿ ಜಮೀನು	ರಸ್ತೆ
10	ನೇಯಿಗೆಗಾರ ಗಂಗಣ್ಣ .... ಡಿಟೋ .. ಖಾನೇಷುಮಾರಿ ನಂ. 2182	45 14	8 8	40 $12\frac{4}{9}$	ಹೆಂಚಿನ ಮಾಳಿಗೆ ಖಾಲಿ ನಿವೇಶನ	ಚಿಕ್ಕಹನುಮಯ್ಯನ ಖಾಲಿ ಜಮೀನು	ರಸ್ತೆ	ಗಂಗಣ್ಣನ ಸ್ವಂತ ಮನೆ	ಡಿಟೋ
11	ನೇಯಗೆಗಾರ ಹರ್ನಸಾಬಿ .. ಖಾನೇಷುಮಾರಿ ನಂ. 2081 ..	24 6	5 5	$13\frac{1}{3}$ $3\frac{1}{3}$	ಹೆಂಚಿನ ಮಾಳಿಗೆ ಖಾಲಿ ನಿವೇಶನ	ಸಾತಾನಿ ವೆಂಕಟಮ್ಮನ ಖಾಲಿ ಜಮೀನು	ಚನ್ನಯ್ಯನ ಮನೆ ಮತ್ತು ಹಿತ್ತಲು	ರಸ್ತೆ	ಹರ್ನಸಾಬಿಯ ಸ್ವಂತ ಮನೆ
12	ನೇಯಗೆಗಾರ ಸಂಜೀವಯ್ಯ .. ಖಾನೇಷುಮಾರಿ ನಂ. 2080	36	5	20	ಡಿಟೋ	ಹರ್ನಸಾಬಿಯ ಮನೆ	ರಸ್ತೆ	ಡಿಟೋ	ಸಂಜೀವಯ್ಯನ ಸ್ವಂತ ಮನೆ

13	ಸಿದ್ಧಲಿಂಗಯ್ಯನ ಮಗ ನೀಲಕಂಠಪ್ಪ ಖಾನೇಷುಮಾರಿ ನಂ. 1061 …	40	7	$31\frac{1}{9}$	ಹೆಂಚಿನ ಮಾಳಿಗೆ	ರಸ್ತೆ	ನೀಲಕಂಠಪ್ಪನ ಸ್ವಾಂತ ಮನೆ	ಡಿಟೋ	ನೀಲಕಂಠಪ್ಪನ ಸ್ವಾಂತ ಮನೆ
14	ಡಿಟೋ ಖಾನೇಷುಮಾರಿ ನಂ. 2063 …	26	7	$20\frac{2}{9}$	ಡಿಟೋ	ಸರ್ಕಾರ ಗಲ್ಲಿ	ರಸ್ತೆ	ಡಿಟೋ	ಡಿಟೋ
15	ನೇಯಿಗೆಗಾರ ಸೂರಯ್ಯ ಖಾನೇಷುಮಾರಿ ನಂ. 2059	14	7	$10\frac{8}{9}$	ಡಿಟೋ	ರಸ್ತೆ	ಸಂಜೀವಯ್ಯನ ಮನೆ ಮತ್ತು ಹಿತ್ತಲು	ಸೂರಯ್ಯನ ಸ್ವಾಂತ ಮನೆ	ರಸ್ತೆ
16	ಸೆಟ್ಟಿಲಯ್ಯನ ಮಗ ಸಂಜೀವಯ್ಯ ಖಾನೆಷುಮಾರಿ ನಂ. 2060 …	13	$7\frac{1}{2}$	$10\frac{5}{6}$	ಹೆಂಚಿನ ಮಾಳಿಗೆ	ಸೂರಯ್ಯನ ಮನೆ	ತಿಮ್ಮಣ್ಣನ ಮನೆ	ಸಂಜೀವಯ್ಯನ ಸ್ವಾಂತ ಮನೆ	ಡಿಟೋ
	ಡಿಟೋ	16	$7\frac{1}{2}$	$13\frac{1}{3}$	ಖಾಲಿ ನಿವೇಶನ				
17	ಚನ್ನಯ್ಯನ ಮಗ ತಿಮ್ಮಯ್ಯ ಖಾನೆಷುಮಾರಿ ನಂ. 2030	35	9	35	ಹೆಂಚಿನ ಮಾಳಿಗೆ	ಸಂಜೀವಯ್ಯನ ಮನೆ	ರಸ್ತೆ	ತಿಮ್ಮಯ್ಯನ ಸ್ವಾಂತ ಮನೆ	ಡಿಟೋ
		4	9	4	ಖಾಲಿ ನಿವೇಶನ				
18	ತಿಮ್ಮಸೆಟ್ಟಿಯ ಮಗಳು ಚನ್ನಮ್ಮ ಖಾನೇಷುಮಾರಿ ನಂ. 2027 …	30	3	10	ಹೆಂಚಿನ ಮಾಳಿಗೆ	ರಸ್ತೆ	ಕುಂಬಾರ ಲಕ್ಷ್ಮಪ್ಪನ ಖಾಲಿ ನಿವೇಶನ	ಸರ್ಕಾರ ಪೋಹರಿ	ಚನ್ನಮ್ಮನ ಸ್ವಾಂತ ಮನೆ
	ಡಿಟೋ	8	3	$2\frac{2}{3}$	ಖಾಲಿ ನಿವೇಶನ				
19	ಮಾಜಿ ದಲಾಯತ್ ಉಮರ್ ಸಾಬಿ	35	17	$66\frac{1}{9}$	ಜೋಡು ಮಾಳಿಗೆ	ಡಿಟೋ	ದೊಂಬರ ಲಕ್ಷ್ಮಯ್ಯನ ಮನೆ ಮತ್ತು ಗಲ್ಲಿ	ಮಹಬೂತಖಾನರ ಮನೆ	ಹರ್ಸಾಸಾಬಿಯ ಮನೆ
	ಡಿಟೋ	17	9	17	ಹೆಂಚಿನ ಮಾಳಿಗೆ				
	ಖಾನೆಷುಮಾರಿ ನಂ. 2000 …	23	4	$10\frac{2}{3}$	ಖಾಲಿ ನಿವೇಶನ				
20	ಸೆಟ್ಟಿಲಯ್ಯನ ಮಗ ಚನ್ನಪ್ಪ ಖಾನೆಷುಮಾರಿ ನಂ. 1099 …	42	7	$32\frac{2}{3}$	ಡಿಟೋ	ಉಮರ್ ಸಾಬಿಯ ಮನೆ	ಲಕ್ಷ್ಮಯ್ಯನ ಮನೆ	ಚನ್ನಪ್ಪನ ಸ್ವಾಂತ ಮನೆ	ಉಮರ್ ಸಾಬಿಯ ಮನೆ
21	ನಬೀಸಾಬಿಯ ಮಗ ಹರ್ಸಾಸಾಬಿ	24	$7\frac{1}{2}$	20	ಹೆಂಚಿನ ಮಾಳಿಗೆ	ಡಿಟೋ	ಯಲ್ಲೋಜಿಯ ಮನೆ	ಉಮರ್ ಸಾಬಿಯ ಖಾಲಿ ಜಮೀನು	ಹರ್ಸಾಸಾಬಿಯ ಸ್ವಾಂತ ಮನೆ
	ಖಾನೆಷುಮಾರಿ ನಂ. 201 ಡಿಟೋ …	14	$7\frac{1}{2}$	$11\frac{2}{3}$	ಖಾಲಿ ನಿವೇಶನ				
22	ದೊಂಬರ ಲಕ್ಷ್ಮಯ್ಯ ಮತ್ತು ಈತನ ಮಗ ಹುಚ್ಚಯ್ಯ	15	10	$16\frac{2}{3}$	ಹೆಂಚಿನ ಮಾಳಿಗೆ	ಉಮರ್ ಸಾಬಿಯ ಮತ್ತು ಮಹಬೂತಖಾನರ ಖಾಲಿ ನಿವೇಶನಗಳು	ಪುಟ್ಟ ಹುಚ್ಚಯ್ಯನ ಮನೆ	ಗಾರೆ ಸುಬ್ಬನ ಖಾಲಿ ಜಮೀನು	ಕಟ್ನೂಲ್ ಹರ್ಸಾಸಾಬಿಯ ಮನೆ ಮತ್ತು ದೊಂಬರ ಯಲ್ಲೋಜಿಯ ಖಾಲಿ ಜಮೀನು
	ಖಾನೆಷುಮಾರಿ ನಂ. 2234 ಡಿಟೋ …	22	14	$31\frac{7}{9}$	ಡಿಟೋ				
	ಡಿಟೋ	24	14	$37\frac{1}{3}$	ಖಾಲಿ ನಿವೇಶನ				

ನಂಬರು.	ಮನೆಯು ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ವಿಸ್ತೀರ್ಣ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.						
23	ಪುಟ್ಟ ಹುಚ್ಚಯ್ಯನ ಮಗ ದೊಂಬರ ಹುಚ್ಚಯ್ಯ. ಖಾನೆಷುಮಾರಿ ನಂ. 2238	17	13	$24\frac{5}{9}$	ಹೆಂಚಿನ ಮಾಳಿಗೆ	ದೊಂಬರ ಲಕ್ಷ್ಮಯ್ಯ ಮತ್ತು ಹುಚ್ಚಯ್ಯನ ಸ್ವಂತ ಮನೆ	ದೊಂಬರ ಕರೆಯಲ್ಲಪ್ಪನ ಮನೆ	ಅಂಗಳ	ದೊಂಬರ ಮುತ್ತನ ಮನೆ
24	ಯಲ್ಲೋಜಿಯ ಮಗ ದೊಂಬರ ಯಲ್ಲಪ್ಪ.. ಖಾನೇಷುಮಾರಿ ನಂ. 2248.	14	9	14	ಖಾಲಿ ನಿವೇಶನ	ರಸ್ತೆ	ಯಲ್ಲಪ್ಪನ ಸ್ವಂತ ಗಲ್ಲಿ ಮತ್ತು ಖಾಲಿ ಜಮಾನು	ಲಕ್ಷ್ಮಯ್ಯನ ಮತ್ತು ಹುಚ್ಚಪ್ಪನ ಖಾಲಿ ಜಮಾನುಗಳು	ದೊಂಬರ ಯಲ್ಲೋಜಿಯ ಮನೆ
25	ದೊಂಬರ ಯಲ್ಲಪ್ಪ ... ಖಾನೆಷುಮಾರಿ ನಂ. 2242	40	8	$35\frac{5}{9}$	ಡಿಟೋ	ದೊಂಬರ ಯಲ್ಲೋಜಿಯ ಖಾಲಿ ನಿವೇಶನ	ದೊಂಬರ ಗುಡ್ಡಪ್ಪನ ಮನೆ	ದೊಂಬರ ಹುಚ್ಚಪ್ಪನ ಮತ್ತು ಪುಟ್ಟ ಹುಚ್ಚಪ್ಪನ ಮನೆ	ದೊಂಬರ ಯಲ್ಲಪ್ಪನ ಮನೆ
26	ದೊಂಬರ ಕರೆಯಲ್ಲಪ್ಪ .... ಖಾನೇಷುಮಾರಿ ನಂ· 2245	18	15	30	ಹೆಂಚಿನ ಮಾಳಿಗೆ	ದೊಂಬರ ಹುಚ್ಚನ ಮತ್ತು ಪುಟ್ಟುಹುಚ್ಚಯ್ಯನ ಮನೆ	ಅಂಗಳ	ದೊಂಬರ ವೆಂಕಟರಮಣನ ಮನೆ	ದೊಂಬರ ಮತ್ತೆ ವೆಂಕಟರಮಣನ ಮನೆ
27	ದೊಂಬರ ವೆಂಕಟರಮಣ ... ಖಾನೇಷುಮಾರಿ ನಂ. 2249	20	7	$15\frac{5}{9}$	ಹೆಂಚಿನ ಮಾಳಿಗೆ	ದೊಂಬರ ಪುಟ್ಟಹುಚ್ಚಯ್ಯನ ಅಂಗಳ	ಡಿಟೋ	ದೊಂಬರ ಯಲ್ಲೋಜಿಯ ಮನೆ	ದೊಂಬರ ಕರಿಯಲ್ಲಪ್ಪನ ಮನೆ
28	ವೆಂಕಟಗಿರಿಯಪ್ಪನ ಮಗ ತಿಮ್ಮಯ್ಯ ... ಖಾನೇಷುಮಾರಿ ನಂ. 2253	8	6	$5\frac{1}{3}$	ಮಣ್ಣಿನ ಮಾಳಿಗೆ	} ರಸ್ತೆ	ಸರ್ಕಾರ ಗಲ್ಲಿ	ವೆಂಕಟಗಿರಿಯಪ್ಪನ ಹೆಂಚಿನ ಮನೆ	ದೊಂಬರ ಸಿದ್ದಪ್ಪನ ಹೆಂಚಿನ ಮನೆ
	ಡಿಟೋ ..	12	6	8	ಖಾಲಿ ನಿವೇಶನ				

29	ಸಿದ್ದನ ಮಗ ದೊಂಬರ ಸಿದ್ದ ... ಕೆ. ನಂ. 2249	17	12	$22\frac{2}{3}$	ಹೆಂಚಿನ ಮಾಳಿಗೆ	ಅಂಗಳ	ಡಿಟೋ	ದೊಂಬರ ವೆಂಕಟಗಿರಿಯನ ಮಣ್ಣಿನ ಮನೆ	ದೊಂಬರ ವೆಂಕಟರಮಣನ ಹೆಂಚಿನ ಮನೆ
30	ದೊಂಬರ ವೆಂಕಟರಮಣ ... ಕೆ. ನಂ. 2249	17	4	$7\frac{5}{9}$	ಹೆಂಚಿನ ಮಾಳಿಗೆ	ರಸ್ತೆ	ಡಿಟೋ	ವೆಂಕಟರಮಣನ ಸ್ವಂತಮನೆ	ದೊಂಬರ ಸಿದ್ದಪ್ಪನ ಮನೆ
31	ರಹಿಮಾನ್ ಖಾನ್ ಸಾಹೇಬಿಯು ಮಗ ಅಬ್ದುಲ್ ರಹಿಮಾನ್ ಖಾನ್, ಕೆ. ನಂ. 889	61	20	$135\frac{5}{9}$	ಖಾಲಿ ನಿವೇಶನ	ಸರ್ಕಾರ ರಸ್ತೆ	ಯತಿರಾಜುಲು ನಾಯುಡುವಿನ ಜಮೀನು	ಸ್ಕೂಲ್ ಮ್ಯಾಸ್ಟರ್ ಚನ್ನಬಸವಯ್ಯನ ಮನೆ	ಸ್ವಂತ ಮನೆ
32	ಮ್ಯುನಿಸಿಪಾಲಿಟಿಗೆ ತೆಗದುಕೊಂಡ ಯತಿರಾಜುಲು ನಾಯಿಡುವಿನ ಜಮೀನು. ಕೆ. ನಂ. 893	66	26	$190\frac{2}{3}$	ಡಿಟೋ	ಅಬ್ದುಲ್ ರಹಿಮಾನ್ ಸಾಹೇಬಿಯು ಖಾಲಿ ನಿವೇಶನ	ಕಿಟ್ಟಸಾನಿಯ ಮನೆ	ರಸ್ತೆ	ವೆಂಕಟಯ್ಯಂಗಾರ ಹಿತ್ತಲು
33	ಕಿಟ್ಟಸಾನಿ ... ಕೆ. ನಂ. 2510	28	11	$34\frac{2}{3}$	ಹೆಂಚಿನ ಮಾಳಿಗೆ	ಯತಿರಾಜುಲು ನಾಯಿಡುವಿನ ಖಾಲಿ ಜಮೀನು	ಸರ್ಕಾರ ಗಲ್ಲಿ	ಗಲ್ಲಿ	ಕಿಟ್ಟಸಾನಿಯ ಸ್ವಂತ ಮನೆ
	ಡಿಟೋ	7	11	$8\frac{5}{9}$	ಖಾಲಿ ನಿವೇಶನ				
34	ಪೂಜಾರಿ ನಂಜುಂಡಯ್ಯ ಕೆ. ನಂ. 59	34	15	$56\frac{2}{3}$	ಡಿಟೋ	ರಸ್ತೆ	ನಂಜುಂಡಯ್ಯನ ಹಿತ್ತಲು	ಗುರುಸಿದ್ದಯ್ಯನ ಮನೆ	ಮರಿಯಮ್ಮನ ಹಿತ್ತಲು
35	ಪೂಜಾರಿ ನಂಜುಂಡಪ್ಪ ... ಕೆ. ನಂ. 902, 903	28	15	$46\frac{2}{3}$	ಡಿಟೋ	ನಂಜುಂಡಪ್ಪನ ಸ್ವಂತ ಖಾಲಿ ಜಮೀನು	ಕೋಡಿ ಬಸವಣ್ಣನ ಪೂಜಾರಿಯ ಹಿತ್ತಲು	ಗುರುಸಿದ್ದಪ್ಪನ ಹಿತ್ತಲು	ನಂಜುಂಡಪ್ಪನ ಹಿತ್ತಲು

ನಂಬರ್.	ಮನೆಯು ಅಥವಾ ನಿವೇಶನದ ಮಾಲೀಕರ ಹೆಸರು.	ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಸ್ಕ್ವೇರ್ ಚದರ ಗಜಗಳು.	ಮನೆ ಯಾ ನಿವೇಶನದ ತರಹೆ.	ಚೆಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
		ಅಡಿಗಳು.	ಅಡಿಗಳು.		ಖಾಲಿನಿವೇಶನ				
36	ಪೂಜಾರಿ ಚನ್ನಮಲ್ಲಯ್ಯ ...	30	16	$53\frac{1}{3}$		ಪೂಜಾರಿ ನಂಜುಂಡಪ್ಪನ ಹಿತ್ತಲು	ರಸ್ತೆ	ಚನ್ನಮಲ್ಲಯ್ಯನ ಸ್ವಂತ ಹಿತ್ತಲು	ಅಣ್ಣಯಪ್ಪನ ಮನೆ ಹಿತ್ತಲು
37	ಮುನ್ಸೀಫ್ ಕೋರ್ಟಿನ ಪ್ಯೂನ್ ಸಕರಪ್ಪ. ಕೆ. ನಂ. 916	17	11	$20\frac{7}{9}$	ಹೆಂಚಿನ ಮಾಳಿಗೆ	ರಸ್ತೆ	ನರಸೀಯ ಮನೆ	ಸಿದ್ದಪ್ಪನ ಮನೆ	ಗಲ್ಲಿ
	ಡಿಟೋ ...	6	11	$7\frac{1}{3}$	ಖಾಲಿ ನಿವೇಶನ				
38	ನರಸಿ ... ಕೆ. ನಂ. 919 ಭಾಗ	9	12	12	ಹೆಂಚಿನ ಮಾಳಿಗೆ	ಸಕರಪ್ಪನ ಮನೆ	ಮಿರಾಬೀಯಹಿತ್ತಲು	ಗಲ್ಲಿ	ರಸ್ತೆ
	ಡಿಟೋ ...	9	12	12	ಖಾಲಿ ನಿವೇಶನ				
39	ಮಿರಾಬೀ . ಕೆ. ನಂ. 918	14	20	$31\frac{1}{9}$	ಖಾಲಿ ನಿವೇಶನ	ನರಸೀಯ ಮನೆ	ರಸ್ತೆ	ಯತಿರಾಜಯ್ಯನ ಖಾಲಿ ಜಮೀನು	ಮಿರಾಬೀಯ ಸ್ವಂತ ಮನೆ
	ಡಿಟೋ ...	13	11	$15\frac{8}{9}$					
40	ಯತಿರಾಜಯ್ಯ ...	9	8	8	ಹೆಂಚಿನ ಮಾಳಿಗೆ	ರಸ್ತೆ	ಡಿಟೋ	ಡಿಟೋ	ಸಾಹುಕಾರ್ ವೆಂಕಟರಮಣನ ಮನೆ
	ಡಿಟೋ ಕೆ. ನಂ. 924 .	20	12	$26\frac{2}{3}$	ಮಣ್ಣಿನ ಮಾಳಿಗೆ				
	ಡಿಟೋ ...	13	9	13	ಖಾಲಿ ನಿವೇಶನ				
41	ಮಾಲಗದ ವೆಂಕಟರಮಣ ... ಕೆ. ನಂ. 925	24	7	$18\frac{2}{3}$	ಮಣ್ಣಿನ ಮತ್ತು ಹೆಂಚಿನ ಮಾಳಿಗೆ	ಗಲ್ಲಿ	ರಸ್ತೆ	ಯತಿರಾಜಯ್ಯನ ಮನೆ	ವೆಂಕಟರಮಣನ ಸ್ವಂತ ಮನೆ
42	ಹರುವಿನ ರಂಗಣ್ಣ ... ಕೆ. ನಂ. 920	8	24	$21\frac{1}{3}$	ಖಾಲಿ ನಿವೇಶನ	ರಸ್ತೆ	ರಂಗಣ್ಣನ ಸ್ವಂತಮನೆ	ರಸ್ತೆ	ರಸ್ತೆ

ತಾರೀಖು 9ನೇ ಮಾರ್ಚಿ 1903.

ನಂ. 13500—ಲೋ. ಫಂ. 101-02, ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದರಡೀಕಂಡ ಮನೆಗಳು ವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಹೆಗ್ಗಡದೇವನಕೋಟೆಯಲ್ಲಿ ಪಾಕೀಜಾವನ್ನು ಅಭಿವೃದ್ಧಿಪಡಿಸುವ ಬಗ್ಗೆ ಬೇಕಾಗಿರುತ್ತವೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬೀದಿಯ ಹೆಸರು.	ಹಿಡುವಳೀದಾರ್ರ ಹೆಸರು.	ತಪಶೀಲ್.			ಚಕ್ಕುಬಂದಿ.			
					ಜಮೀನಿನ ವಿವರ.	ವಿಸ್ತೀರ್ಣ. ಗಜಗಳು.	ವಿಸ್ತೀರ್ಣ. ಅಡಿಗಳು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಹೆಗ್ಗಡದೇವನಕೋಟೆ.	ಹೆಗ್ಗಡದೇವನಕೋಟೆ.	ಹೆಗ್ಗಡದೇವನಕೋಟೆ.	(*a*) ದೊಡ್ಡಬೀದಿಗೂ ಮತ್ತು ರಂಗಯ್ಯಂಗಾರ್ರ ಬೀದಿಗು ಮಧ್ಯೆ ಇರುವ ಗಲ್ಲಿ.	(1) ಶೇಷಯ್ಯ ...	ಹೆಂಚಿನ ಮನೆ	7	...	ಗಲ್ಲಿ	ಮನೆ	ದೊಡ್ಡ ಬೀದಿ	ಅಂಗಳ
					ಖಾಲಿ ನಿವೇಶನ	5	...	ಡಿಟೋ	ಖಾಲಿ ನಿವೇಶನ	ಮನೆ	ಹುಲ್ಲಿನ ಹಸುವಿನ ಕೊಟಗೆ
					ಹುಲ್ಲಿನ ಹಸುವಿನ ಕೊಟಗೆ	3	...	ಡಿಟೋ	ಹುಲ್ಲಿನ ಹಸುವಿನ ಕೊಟಗೆ	ಖಾಲಿ ನಿವೇಶನ	ಖಾಲಿ ನಿವೇಶನ
				(2) ದಾಸಸೆಟ್ಟಿ	ಖಾಲಿ ನಿವೇಶನ	3	...	ಮನೆ	ಗಲ್ಲಿ	ಗಲ್ಲಿ	ಮನೆ
					ಹೆಂಚಿನ ಮನೆ	8	...	ಡಿಟೋ	ಡಿಟೋ	ಜಗಲಿ	ಖಾಲಿ ನಿವೇಶನ
			(*b*) ದೊಡ್ಡಬೀದಿಗೂ ಮತ್ತು ತೊರಗೆರೆಬೀದಿಗೂ ಮಧ್ಯೆ ಇರುವ ಗಲ್ಲಿ.	(3) ಚಲುವನಾಯಿಕ.	ಹೆಂಚಿನ ಮನೆ	36	...	ಗಲ್ಲಿ	ಮನೆ ನಿವೇಶನ	ರಸ್ತೆ	ಹಸುವಿನ ಕೊಟಗೆ
					ಹುಲ್ಲಿನ ಹಸುವಿನ ಕೊಟಗೆ	15	...	ಖಾಲಿ ನಿವೇಶನ	ಮನೆ	ಮನೆ	ಹಿತ್ತಲು
					ಖಾಲಿ ನಿವೇಶನ	44	...	ಗಲ್ಲಿ	ಮನೆ ಮತ್ತು ಹಸುವಿನ ಕೊಟಗೆ	ರಸ್ತೆ	ಡಿಟೋ
			(*c*) ತೊರಗೆರೆಯಲ್ಲಿರುವ ದೊಡ್ಡಬೀದಿ.	(4) ದೊಡ್ಡಮ್ಮನ ಬೀರ	ಖಾಲಿ ನಿವೇಶನ	10	...	ಹನುಮಿಯ ಹುಲ್ಲಿನ ಮನೆ	ಚವುಡನ ಖಾಲಿ ನಿವೇಶನ	ಖಾಲಿ ನಿವೇಶನ	ರಸ್ತೆ
				(5) ಚವುಡ ...	ಖಾಲಿ ನಿವೇಶನ	3	...	ಬೀರನ ಖಾಲಿ ನಿವೇಶನ	ಮನೆ	ಡಿಟೋ	ಡಿಟೋ
					ಹುಲ್ಲಿನ ಮನೆ	5	....	ಖಾಲಿ ನಿವೇಶನ	ಗೋವಿಂದಮ್ಮನ ಅಂಕನ ಮನೆ	ಮನೆ	ಡಿಟೋ
				(6) ಗೋವಿಂದಮ್ಮನ ಅಂಕ.	ಹೆಂಚಿನ ಮನೆ	5	...	ಚವುಡನ ಹುಲ್ಲಿನ ಮನೆ	ಖಾಲಿ ನಿವೇಶನ	ಡಿಟೋ	ಡಿಟೋ
					ಖಾಲಿ ನಿವೇಶನ	2	...	ಮನೆ	ಮನೆ	ಖಾಲಿ ನಿವೇಶನ	ಡಿಟೋ
					ಹೆಂಚಿನ ಮನೆ	5	...	ಖಾಲಿ ನಿವೇಶನ	ಪೋಲೀಸು ಚವುಡನ ಖಾಲಿ ನಿವೇಶನ	ಡಿಟೋ	ಡಿಟೋ
			(*d*) ತೊರಗೆರೆಯಲ್ಲಿರುವ ಚಿಕ್ಕ ಬೀದಿ.	(7) ತೊರೇರ ಚಲುವ.	ಹುಲ್ಲಿನ ಮನೆ	3	...	ಖಾಲಿ ನಿವೇಶನ	ಹಿತ್ತಲು	ಗಲ್ಲಿ	ಹುಲ್ಲಿನ ಮನೆ
					ಖಾಲಿ ನಿವೇಶನ	3	...	ಬೋರನಾಯಿಕನ ಹುಲ್ಲಿನ ಮನೆ	ಹುಲ್ಲಿನ ಮನೆ	ಡಿಟೋ	ಖಾಲಿ ನಿವೇಶನ

1903–1904ನೇ ಸಾಲಿಗೆ ಸಾರಾಯಿ ಬಿಕರೀ ಗುತ್ತಿಗೆ ಫಿರ್ಕಾಗಳ ಹರಾಜು.

ನೋಟಿಫಿಕೇಷನ್ ನಂ. 441–Ex: F. 7—1902, ತಾರೀಖು 18ನೇ ಮಾರ್ಚಿ 1903.

1. ಇದಕ್ಕೆ ಲಗತ್ತಿರುವ *ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಗೊತ್ತಾದ ಪ್ರದೇಶಗಳಲ್ಲಿ ಯಾ ಫಿರ್ಕಾಗಳಲ್ಲಿ 12 ತಿಂಗಳು ಅಂದರೆ 1903ನೇ ಇಸವಿ ಜುಲೈ ಒಂದನೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ 30ನೇ ತಾರೀಖಿಗೆ ಪೂರೈಸುವ ಸರ್ಕಾರ್ ಸಾಲ್ ಆಖೈರ್‌ವರಿಗೆ ಸಾರಾಯಿಯನ್ನು ಬಿಕರೀ ಮಾಡುವ ಬಟ್ಟಿ ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮಿಷನರುಗಳಿಂದ ಯಾ ಸಬ್ ಡಿವಿಜನ್ ಆಫಿಸರರಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫಿಸರುಗಳಿಂದ ಯಾ ಇದಕ್ಕಾಗಿ ಡೆಪ್ಯುಟಿ ಕಮಿಷನರುಗಳಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರುಗಳಿಂದ ಆಯಾ ಡಿಸ್ಟ್ರಿಕ್ಟುಗಳ ತಾಲ್ಲೂಕು ಕಸಬಾಗಳಲ್ಲಿ ಮೇಲ್ಕಂಡ ಪಟ್ಟಿಯಲ್ಲಿ ನಮೂದು ಮಾಡಿರುವ ತಾರೀಖುಗಳಲ್ಲಿ, ಈ ಕೆಳಗೆ ಉದಹರಿಸಲ್ಪಟ್ಟಿರುವ ಷರತ್ತುಗಳಿಗೆ ಒಳಪಟ್ಟು, ಸರ್ಕಾರದ ಸವಾಲನ್ನು ಗೊತ್ತುಮಾಡಿಕೊಂಡು ಹರಾಜ್ ಹಾಕಲ್ಪಡಲು ಮೈಸೂರ್ ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೇ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಮೇಲ್ಕಂಡ ಫಿರ್ಕಾಗಳ ಪೈಕಿ ಒಂಟಿಯಾಗಿ ಯಾವದಕ್ಕಾದರೂ ದರಖಾಸ್ತುಗಳೇನೂ ಬಾರದೆ ಹೋದಲ್ಲಿ ಹರಾಜ್ ಹಾಕುವ ಆಫಿಸರರು ಒಂದಕಿಂತ ಹೆಚ್ಚು ಫಿರ್ಕಾಗಳನ್ನು ಸೇರಿಸಿಯಾಗಲಿ, ಫಿರ್ಕಾಗಳನ್ನ ತಾಲ್ಲೂಕುವಾರ್ ಹರಾಜ್ ಮಾಡುವದರ ಮೂಲಕವಾಗಿ ಆಗಲಿ, ಯಾ ಹಾಲಿ ಅಂಗಡಿಗಳನ್ನಿಟ್ಟಾಗದೆ ಇರುವ ವಿಶೇಷ ಫಿರ್ಕಾಗಳನ್ನು ಮುಂದೆ ಫೈಸಲು ಮಾಡಲು ಅವಶ್ಯಕವಿದ್ದರೆ ಉಳಿಸಿಕೊಳ್ಳುವದರ ಮೂಲಕವಾಗಲಿ ಯುಕ್ತಾನುಸಾರ ಸದರೀ ಫಿರ್ಕಾಗಳನ್ನ ಬದಲಾಯಿಸ ಬಹುದು. ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫಿಸರರು ಯುಕ್ತಾನುಸಾರ ಸರ್ಕಾರದ ಸವಾಲನ್ನು ತಗ್ಗಿಸಬಹುದು. ಸವಾಲ್ಮಾಡಲು ಅಪೇಕ್ಷಿಸುವ ಜನರ ಸ್ಥಿತಿಯನ್ನೂ, ಮತ್ತು ಅವರ ಚಾಲ್‌ಚಲನನ್ನೂ ವಿಚಾರಿಸಬಹುದು; ಅಂಥಾ ವಿಚಾರಣೆಯ ಫಲಿತಾಂಶವು ಯಾರ ವಿಷಯದಲ್ಲಿ ತೃಪ್ತಿಕರವಾಗಿಲ್ಲವೋ ಅಂಥಾ ಜನರಿಂದ ಸವಾಲ್ಮಾಡಲಿಕ್ಕೆ ಹಕ್ಕನ್ನುಂಟುಮಾಡುವ ಅವಶ್ಯಕವಾದ ಠೇವಣಿಯನ್ನು ತೆಗದುಕೊಳ್ಳುವದಿಲ್ಲವೆಂದು ಹರಾಜು ಕಾಲದಲ್ಲಿ ತಿರಸ್ಕರಿಸಬಹುದು. ತನ್ನ ಲೈಸನ್ಸಿನ ಷರತ್ತುಗಳಿಗೂ, ಅಥವಾ ಜಾರೀಲಿರತಕ್ಕ ಎಕ್ಸೈಜ್ ಕಾನೂನುಗಳಿಗೂ ಉಲ್ಲಂಘನೆ ಮಾಡಿದ ತಪ್ಪಿತಸ್ಥನಾದ ಹಳೇ ಗುತ್ತಿಗೆದಾರನಿಗೆ ಸವಾಲ್ಮಾಡಲು ಹಕ್ಕು ಇರುವದಿಲ್ಲ. ಹರಾಜು ನಡಿಸತಕ್ಕ ಆಫಿಸರಿಗೆ ಖಡ ಸವಾಲು ತುಂಬಾ ದುಬಾರಿಯಾಗಿರುವದರಿಂದ ಗುತ್ತಿಗೇದಾರನು ಮುಂದೆ ದಿವಾಳಿಯಾಗುವನೆಂಬ ಅನುಮಾನ ತೋರುವ ಪಕ್ಷದಲ್ಲಿ ಅಂಥಾ ಖಡ ಸವಾಲನ್ನು ಅವರು ತಿರಸ್ಕರಿಸಬಹುದು.

2. ಮೇಲೆ ವಿವರಿಸಲ್ಪಟ್ಟಿರುವ ಬಟ್ಟಿ ಸ್ವಾತಂತ್ರ್ಯದ ಹಕ್ಕು ಫಿರ್ಕಾವಾರ್ ಹರಾಜ್ ಮಾಡಲ್ಪಡುತ್ತೆ. ಹರಾಜ್ ಮಾಡಲ್ಪಟ್ಟ ಪ್ರತಿ ಫಿರ್ಕಾವೂ ಅಂಗೀಕರಿಸಲ್ಪಡತಕ್ಕ ಖಡ ಸವಾಲ್ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮಿಷನರವರು ತಮ್ಮ ಯುಕ್ತಾನುಸಾರ ಕಾರಣವನ್ನ ನಮೂದಿಸದೆ ಸವಾಲನ್ನ ಅಂಗೀಕರಿಸುವದಕ್ಕೂ ಯಾ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಡೋಣವು, ಯಾ ಗವರ್ನಮೆಂಟಿನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ ಸವಾಲನ್ನ ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು.

3. (*a*) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲಿ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರ ಮೂಲಕವಾಗಿ ಆಗಲಿ ಹಾಜರಾಗಬೇಕು.

(*b*) ಯಾವ ಮನುಷ್ಯನಾಗಲಿ ಪ್ರತಿಯೊಂದು ಫಿರ್ಕಾಕ್ಕೆ 200 ರೂಪಾಯಿಗಳ ಠೇವಣಿಯನ್ನು ಅಥವಾ ಹರಾಜು ಮಾಡುವ ಆಫಿಸರರು ಗೊತ್ತುಮಾಡಬಹುದಾದ ಜೇರೆ ಇತರ ನ್ಯಾಯವಾದ ಮೊತ್ತವನ್ನು ಹಾಜರು ಮಾಡುವ ಪರ್ಯಂತರ ಸವಾಲು ಮಾಡಕೂಡದು; ಪರಂತು ಅಂಥಾ ಪ್ರಥಮ ಠೇವಣಿಯನ್ನು ಗವರ್ನಮೆಂಟಿನವರು ಯಾವ ಕಾಲದಲ್ಲಿಯಾದರೂ ಬಿಟ್ಟುಬಿಡಬಹುದು. ಯಾವ ಫಿರ್ಕಾವನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಮ್‌ಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಖಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

(*c*) ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷದಲ್ಲಿ ಅವರಿಗೆ ವಾಪಸ್ ಮಾಡಲ್ಪಡುತ್ತೆ.

(*d*) ಯಾವದಾದರೊಂದು ಫಿರ್ಕಾದ ಬಟ್ಟಿ ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡದ ಸವಾಲ್ದಾರನು ಎರಡನೇ ಫಿರ್ಕಾದ ಹರಾಜು ಷುರುವಾಗುವದಕ್ಕೆ ತತ್ಪೂರ್ವವೇ ಮಾಹೇಯಾನ ಖಿಸ್ತಿನ ⅓ನೇ ಭಾಗಕ್ಕೆ ಸರಿಯಾದ ಮೊಬಲಗನ್ನು ಠೇವಣೀ ಇಡಬೇಕು.

(*e*) ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹರಾಜ್ ಮಂಜೂರಾದ 15 ದಿವಸಗಳ ಒಳಗಾಗಿ ಮೊದಲು ಇಡೋಣಾದ ಠೇವಣೀ ದೇಖೀಲ್ ಆತನ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಆತನು ಮೈಸೂರು ಸೀಮೆಯಲ್ಲಿ ಜಿಂದಿಗೆಯನ್ನುಂಟಾಗದೆ ಇರುವ ಅನ್ಯದೇಶದವನಾಗಿ ಯಾ ಜೇವಾಳಸನೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿರುವಂತೆ ಕಂಡುಬಂದ ಪಕ್ಷದಲ್ಲಿ ವಿಧಾಯಕವಾದ ಠೇವಣೀಗೆ ದುಗಣಿ ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದು ಕೊಡುವದಕ್ಕೆ ಒಬ್ಬ ಜಾಮೀನ್‌ದಾರನನ್ನು ಯಾ ಜಾಮೀನ್‌ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ನಿರ್ಬಂಧ ಪಡಿಸಬಹುದು.

(*f*) ಈ ಮೇಲ್ಕಂಡ ಠೇವಣಿಗಳಲ್ಲಿ ಯಾವದನ್ನಾದರೂ ಇಡದೇ ತಪ್ಪಿದಲ್ಲಿ, ಯಾ ಅವಶ್ಯಕವಾದ ಜಾಮೀನ್‌ದಾರ ಅಥವಾ ಜಾಮೀನ್‌ದಾರರನ್ನು ಹಾಜರ್ಮಾಡದೇ ತಪ್ಪಿದಲ್ಲಿ, ಮೊದಲು ಇಟ್ಟಿರುವ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಪ್ಪಣೆ ಕೊಡುವ ರೀತ್ಯಾ ಸದರೀ ಬಟ್ಟಿ ಸ್ವಾತಂತ್ರ್ಯದ ಹಕ್ಕು ತಕ್ಷಣವೇ ಪುನಹ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲೇವಾರಿ ಮಾಡಲ್ಪಡುವದು; ಮತ್ತು ಆ ತಪ್ಪಿತಸ್ತನು ಅದೇ ಫಿರ್ಕಾಕ್ಕಾಗಲೀ ಯಾ ಜೇರೆ ಫಿರ್ಕಾಕ್ಕಾಗಲೀ ಸವಾಲ್ಮಾಡಕೂಡದು.

4. ಮೇಲ್ಕಂಡ 3ನೇ ಕಲಂ ಪ್ರಕಾರ ನಡಿಸಲ್ಪಡುವ ದುಸರೇ ಹರಾಜ್‌ಗಳು ತಪ್ಪಿತಸ್ಥನಾದ ಮೇಲ್ಕಂಡ ಸವಾಲ್‌ದಾರನ ಜವಾಬ್ದಾರಿ ಮೇಲೆ ನಡಿಸಲ್ಪಡತಕ್ಕದ್ದು. ಸದರೀ ಸವಾಲ್ದಾರನು ಎಲ್ಲಾ ಆದಾಯವನ್ನೂ ಕಳದುಕೊಳ್ಳತಕ್ಕದ್ದಲ್ಲದೆ, ದುಸರೇ ಹರಾಜಿನಿಂದ ಸರ್ಕಾರಕ್ಕೆ ನಷ್ಟವಾದ ಪಕ್ಷದಲ್ಲಿ ಷುರೂ ಹರಾಜಿನ ಷರತ್ತುಗಳನ್ನನುಸರಿಸಿ ಮೇಲ್ಕಂಡ ಪೂರಾ ಕಾಲಕ್ಕೆ ಆತನಿಂದ ಪಾವತಿಯಾಗಬೇಕಾಗಿದ್ದ ಬಟ್ಟು ಮೊಬಲಗಿನಲ್ಲಿ ದುಸರೇ ಹರಾಜಿನಲ್ಲಿ ಪಡದ ಸವಾಲ್ದಾರನಿಂದ ಪಾವತಿಯಾಗತಕ್ಕ ಬಟ್ಟು ಮೊಬಲಗನ್ನು ವಜಾ ಮಾಡಿದರೆ ಉಳಿಯುವ ಶೇಷವನ್ನು ಆತನು ಪಾವತಿ ಮಾಡತಕ್ಕದ್ದು. ಈ ಸಂದರ್ಭದಲ್ಲಿ ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣೀ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕೋಸ್ಕರ ವಜಾ ಮಾಡಲ್ಪಡತಕ್ಕದ್ದು. ತದನಂತರ ಬಾಕಿ ಏನಾದರೂ ನಿಂ-

---

* ಷರಾ—ಸದರಿ 1903ನೇ ಇಸವಿ ಮಾರ್ಚಿ 26ನೇ ತಾರೀಖು ಮೈಸೂರ ಗೆಜೆಟ್ಟಿಗೆ ಸಪ್ಲಿಮೆಂಟಾಗಿ ಷೆಡ್ಯೂಲ್ ಛಾಯಿಷಾಗಿರುತ್ತೆ.

ತಲ್ಲಿ ಆ ಮೊಬಲಗು ಜಮೀನ್ ಕಂದಾಯವು ಯಾವ ರೀತಿಯಾಗಿ ವಸೂಲ್ಮಾಡಲ್ಪಡುತ್ತೋ ಅದೇ ರೀತಿಯಾಗಿ ವಸೂಲ್ಮಾಡಲ್ಪಡತಕ್ಕದ್ದು. ಪರಂತು ದಂಡವಾಗಿ ದಾಖಲ್ಮಾಡಲ್ಪಟ್ಟ ಠೇವಣಿ ಮೊಬಲಗು ದುಸರೇ ಹರಾಜಿನಿಂದುಂಟಾದ ನಷ್ಟಕ್ಕಿಂತ ಹೆಚ್ಚಾಗಿರುವ ಪಕ್ಷದಲ್ಲಿ ಅಂಥಾ ಪೂರಾ ಠೇವಣಿ ಮೊಬಲಗು ಸರ್ಕಾರಕ್ಕೆ ದಾಖಲ್ಮಾಡಿಕೊಳ್ಳಲ್ಪಡತಕ್ಕದ್ದು.

5. ಪ್ರತಿಯೊಂದು ಫಿರ್ಕಾದಲ್ಲಿ ಮಾರಲು ಬಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ತಾನು ತನ್ನ ಕರಾರಿನ ಷರತ್ತುಗಳನ್ನು ಕ್ರಮವಾಗಿ ಜಾರಿ ಮಾಡಲಿಕ್ಕೆ ಡೆಪ್ಯುಟಿ ಕಮಿಷನರವರು ಎಷ್ಟು ಚರ ಮತ್ತು ಸ್ಥಿರ ಆಸ್ತಿಯು ಸಾಕಾಗಿರುತ್ತೆಂದು ಎಣಿಸುತ್ತಾರೋ, ಅಷ್ಟು ಆ ಬಾಬತು ತನ್ನ ಆಸ್ತಿಗಳುಸಹಿ, ಬದ್ಧನಾಗಿರಲ ಳ್ಳವನೆಂದು ಒಂದು ಕರಾರನ್ನು ಬರದು ರುಜು ಮಾಡಿ ಕೊಡತಕ್ಕದ್ದು. ಕೊಂಡುಕೊಂಡವನು ಕರಾರನ್ನ ಸೈನ್ ಮಾಡುವದಕ್ಕೆ ತಪ್ಪಿದಲ್ಲಿ ಯಾ ತಿರಸ್ಕರಿಸಿದಲ್ಲಿ ಮೊದಲೇ ಇಡಲ್ಪಟ್ಟ ವಿಸಿಷ್ಟ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡತಕದ್ದಲ್ಲದೆ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು 3 ಮತ್ತು 4ನೇ ಕಲಂನಲ್ಲಿ ನಮೂದಿಸಿರುವಂತೆ ಸದರೀ ಪ್ರಥಮ ಖರೀದಿದಾರನ ಜವಾಬ್ದಾರಿ ವ ನಷ್ಟಕ್ಕೆ ಗುರಿಯಾಗಿ ದುಸರೇ ಹರಾಜ್ಮಾಡಲ್ಪಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡಲ್ಪಡತಕ್ಕದ್ದು. ಹರಾಜ್ ಮಂಜೂರಾದ ಮೇಲೆ ಸದರಿ ಖರೀದೀದಾರನು ಸತ್ತುಹೋದ ಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನ ಪಡದವರು ಸದರೀ ಕರಾರಿಗೆ ಜವಾಬ್ದಾರರಾಗಿರುತ್ತಾರೆ.

6. ಹಿಂದಿನ ಕೆಲವು ಸಾಲುಗಳಲ್ಲಿ ಹಾಲೀ ಫಿರ್ಕಾಗಳ ಬಾಬತು ಅಂಗಡಿಗಳಲ್ಲಿಯೂ, ಮತ್ತು ಕೋಠಿಗಳಲ್ಲಿಯೂ ಖರ್ಚಾದ ಸಾರಾಯಿಯ ತಪಶೀಲೂ, ಮತ್ತು ಪ್ರತಿ ಫಿರ್ಕಾದ ಗುತ್ತಿಗೆ ಮೊಬಲಗು ವಗೈರೆ ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಕರಾರು ಬರದುಕೊಟ್ಟ ಕೂಡ್ಲೆ ಖರೀದೀದಾರನಿಗೆ ಡೆಪ್ಯುಟಿ ಕಮಿಷನರವರು ಈ ಕೆಳಗೆ ಉದಹರಿಸಿರುವ ಷರತ್ತುಗಳಿಗೆ ಒಳಪಟ್ಟು ವಿಧಿಸಲ್ಪಟ್ಟ ನಮೂನೆಯಲ್ಲಿ ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನ ಕೊಡತಕ್ಕದ್ದು.

(1) ಸದರೀ ಬಟ್ಟು ಸ್ವಾತಂತ್ರ್ಯದ ಹಕ್ಕು ಸಾಧಾರಣವಾಗಿ 20° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರುವದಕ್ಕೆ ಮಾತ್ರವೇ ಲಗಾವಾಗುತ್ತೆ. ಪರಂತು ಡೆಪ್ಯುಟ ಕಮಿಷನರವರ ಯಾ ಇವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫೀಸರರ ವಿಶೇಷ ಅಪ್ಪಣೆ ಮೂಲಕ 30° ಡಿಗ್ರಿ ಅಂಡರ್ ಪ್ರೂಫ್ ಬಲವುಳ್ಳ ಸಾರಾಯಿಯನ್ನು ಮಾರಬಹುದು. ಆದರೆ ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಯಾವ ಜೋರಿನದಾದರೂ ಶುದ್ಧ ಮಾಡಲ್ಪಟ್ಟ ಯಾ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗಣೀ ಭಟ್ಟೀ ಇಳಿಸಲ್ಪಟ್ಟಿರುವ ಷರಾಬುಗಳನ್ನೂ ಮತ್ತು ಬ್ರಾಂದಿ, ವಿಸ್ಕಿ, ಜಿನ್ ವಗೈರೆ ಇತರ ವಿಶೇಷವಾದ ಸಾರಾಯಿಗಳನ್ನೂ ಮಾರಲಿಕ್ಕೆ ಹಕ್ಕು ಇರುವದಿಲ್ಲವು. ಈ ಷರಾಬುಗಳನ್ನೂ ವ ಸಾರಾಯಿಗಳನ್ನೂ ತಮ್ಮ ಸ್ವಂತ ಖರೀದಿಗಳಿಗೆ ಮಾರಲಿಕ್ಕೆ ಪರಾಯಿ ದೇಶದ ಸಾರಾಯಿಗಳ ಅಂಗಡಿಕಾರ್‍ರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸರ್ಕಾರದಿಂದ ಆ ಬಗ್ಯೆ ವಿಧಾಯಕವಾಗಿ ಅಚ್ಚು ಹಾಕಿಸಲ್ಪಟ್ಟಿರುವ ಚಲನ್‌ಗಳ ಮೂಲಕ ಸ್ಥಳೀಯವಾದ ತಾಲ್ಲೂಕು ಖಜಾನೆಗಳಿಗೆ 1903ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳುಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸ್‌ದಾರನು ಲೋಕಲ್ ಸೆಸ್ಸಿಗಾಗಿ ಏನೂ ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯು ಇಜಾರೇ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲಿ, ತತ್ಪೂರ್ವವಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್ದಾರರು ಡೆಪ್ಯುಟಿ ಕಮಿಷನರವರ ಹುಕುಂ ಪಡದು ಸದರೀ ಲೈಸೆನ್ಸು ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರಹಮೂಲಕವಾಗಿ ರಿಕಾರ್ಡ್ ಮಾಡಿ, ಮಾಹೆ ಆಖೈರ್ ಆದ ಕೂಡಲೆ ಸಾಧ್ಯವಾದಷ್ಟು ತ್ವರೆಯಲ್ಲಿ ಇಜಾರೆಯನ್ನು ಮರಳಿ ಹರಾಜು ಮಾಡತಕ್ಕದ್ದು. ಪರಂತು ಮೇಲ್ಕಂಡಂತೆ ಇಜಾರೆಯನ್ನು ಪುನಃ ವಿಕ್ರಯಿಸುವದಕ್ಕೆ ಬದಲಾಗಿ ಡೆಪ್ಯುಟಿ ಕಮಿಷನರವರು ಅವರ ಯುಕ್ತಾನುಸಾರ ಹಾಗೆ ತಪ್ಪಿಹೋದ ಇಜಾರೆಯನ್ನು ಹಾಲಿ ಇರತಕ್ಕ ಅದಕ್ಕೆ ಸೇರಿದ ದುಕಾನುವಾರಾಗಿ ವಿಂಗಡಿಸಲ್ಪಟ್ಟ ಪ್ರತಿ ಬೇರೆ ಬೇರೆ ದುಕಾನ್‌ದಾರನಿಗೂ ಅವನು ಪಾವತಿ ಮಾಡುವದಕ್ಕೆ ಒಪ್ಪುವ ಗುತ್ತಿಗೆ ಮೊಬಲಗಿಗೋಸ್ಕರ ಒಂದು ಲೈಸೆನ್ಸ್ ಕೊಡುವಂತೆ ಅಮಲ್ದಾರರಿಗೆ ಹುಕುಂ ಕೊಡಬಹುದು. ಪರಂತು ಹೀಗೆ ಕೊಡೋಣಾದ ಗುತ್ತಿಗೆಯು ಒಟ್ಟು ಮೊಬಲಗು ತಪ್ಪಿಹೋದ ಇಜಾರೆದಾರನು ಪಾವತಿ ಮಾಡುವದಕ್ಕೆ ಒಪ್ಪಿ ಇದ್ದ ಮೊಬಲಗಿಗಿಂತಲೂ ಕಮ್ಮಿ ಆಗಿರಕೂಡದು.

(3) (a) ಲೈಸೆನ್ಸ್‌ದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ಮಾಯಿದೆಯ ಆಖೈರ್ ಎರಡು ತಿಂಗಳ ಖಿಸ್ತು ಮೊಬಲಗಿಗೋಸ್ಕರ ತೆಗದುಕೊಳ್ಳಲ್ಪಡುವದು. ಪರಂತು ಮೇಲ್ಕಂಡಂತೆ ಎರಡನೇ ಸಬ್ ಕ್ಲಾಜಿನ ನಿಯಮಗಳನುಸರಿಸಿ, ಇಜಾರೆಯು ದುಸರೇ ಹರಾಜ್ ಮಾಡಲ್ಪಟ್ಟಾಗ ಅಥವಾ ವಿಂಗಡಿಸಲ್ಪಟ್ಟಾಗ ಸದರೀ ಡಿಪಾಜಿಟ್ ಮೊಬಲಗು ಡೆಪ್ಯುಟಿ ಕಮಿಷನರವರ ಯುಕ್ತಾನುಸಾರ ದಂಡವಾಗಿ ಆವರೂ ತೆಗದುಕೊಳ್ಳಲ್ಪಡಬಹುದು. ಅಥವಾ ತಪ್ಪಿಹೋದವನಿಂದ ಬರಬೇಕಾದ ಬಾಕೀಗೋಸ್ಕರವೂ ಇಜಾರೆಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗಬಹುದಾದ ಯಾವ ನಷ್ಟವನ್ನಾದರೂ ಭರ್ತಿ ಮಾಡುವ ಬಗ್ಯೆ ಉಪಯೋಗಿಸಲ್ಪಡಬಹುದು. ಅಂಥ ಬರಬೇಕಾದ ಬಾಕಿಗಳೂ ಮತ್ತು ನಷ್ಟದ ಮೊಬಲಗುಗಳೂ ಸುವಾ ರೆವಿನ್ಯೂ ಕಂದಾಯದ ಬಾಕಿ ವಸೂಲಿ ಬಗ್ಯೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ, ಲೈಸೆನ್ಸ್‌ದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸ್‌ದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೇ ಮೊಬಲಗನ್ನು ಕಮ್ಮಿ ಮಾಡುವ ಬಗ್ಯೆ ಅಥವಾ ಈಡು ಮೊಬಲಗು ಪಡೆಯುವ ಬಗ್ಯೆ ಕೇಳಲ್ಪಡಕೂಡದು.

(b) ಬಾಕೀ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮತ್ತು ನಷ್ಟದ ಮೊಬಲಗಿಗೆ ಪುನಹ ಹರಾಜಾದ ತಾರೀಖಿನ ಲಾಗಾಯತು ಸಾಲೀಯಾನಾ ಶೇಕಡಾ 6ರ ಪ್ರಕಾರ ಆಗುವ ಬಡ್ಡೀ ದೇಖೀಲ್ ವಸೂಲ್ಮಾಡಲ್ಪಡತಕ್ಕದ್ದು.

(4) (a) ಈ ಸರ್ಕಾರಕ್ಕೆ ಸಾರಾಯಿಯನ್ನೂ, ಒಳದೇಶದ ಇತರ ಷರಾಬುಗಳನ್ನೂ ತಯಾರ್ಮಾಡಲಿಕ್ಕೆ ಮೊಕರರ್ಮಾಡಲ್ಪಟ್ಟಿರುವ ಭಟ್ಟೀದಾರ್‍ರಾದ ಅರ್ಬತ್‌ನಾಟ್ ಆಂಡ್ ಕೋ ಎಂಬ ವರ್ತಕರಿಂದಾಗಲಿ, ಯಾ ಸರ್ಕಾರದ ಅಪ್ಪಣೇ ಮೇರೆ ಏರ್ಪಾಡಾಗುವ ಯಾವದಾದರೊಂದು ಬಾಂಡೆಡ್ ಡೆಪೋಯಿಂದಾಗಲಿ ಲೈಸೆನ್ಸ್‌ದಾರನು ತನ್ನ ಫಿರ್ಕಾ ಅಂಗಡಿಗಳಿಗೆ ಸರಬರಾಯಿಗೋಸ್ಕರ ಕಾಕುಂಬ ಸಾರಾಯಿಯನ್ನ ಕೊಂಡುಕೊಳ್ಳತಕ್ಕದ್ದು. ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ, ತರೀಕೆರೆ, ಮಂಜರಾಬಾದ್, ಬೇಲೂರು ತಾಲ್ಲೂಕುಗಳಲ್ಲಿಯೂ ಮತ್ತು ಎಕ್ಸೈಸ್ ಕಮಿಷನರ್ ಸಾಹೇಬರವರು ಅಪ್ಪಣೆ ಕೊಡಬಹುದಾದ ಇತರ ತಾಲ್ಲೂಕುಗಳಲ್ಲಿಯೂ, ಇರತಕ್ಕ ಫಿರ್ಕಾ ಗುತ್ತಿಗೆ ಲೈಸೆನ್ಸ್‌ದಾರು

ಬಿರಟೆ ಹಾಕಿ ಮೊಹರ್ ಮಾಡಿದ ಸೀಸೆಗಳಲ್ಲಿ 20° ಡಿಗ್ರಿ ಜೋರುಳ್ಳ ಜಿಲ್ಲದ ಸಾರಾಯಿಯನ್ನು ಸಹಾ ಗ್ಯಾಲ್ಲ 1ಕ್ಕೆ (ಲೋಕಲ ಸೆಸ್ ಶೇರಿ ಡ್ಯೂಟಿ ಅಂದರೆ $4\frac{3}{4}$ ರೂಪಾಯಿ ಅಡಗಿರುವ) ರೂ. 6—2—6 ಪ್ರಕಾರ ಬಾಂಡೆಡ್ ಡಿಪೋಗಳಿಂದ ಕೊಂಡುಕೊಳ್ಳಬಹುದು; ಮತ್ತು ಅಂಥಾ ಶೀಸೆಗಳನ್ನು ಗ್ಯಾಲ್ಲ 1ಕ್ಕೆ ರೂ. 7—7—0 ಪ್ರಕಾರ ಅಥವಾ ರೆಪ್ಯೂಟೆಡ್‌ಕ್ವಾರ್ಟ್ಸ ಶೀಶೆ 1ಕ್ಕೆ ರೂ. 1—3—10 ಪ್ರಕಾರ ಮೊತಬರಿ ಜನರಿಗೆ ಮಾರಬಹುದು.

(b) ಕಾಕುಂಬೆ ಸಾರಾಯಿಗೆ ಮೇಲ್ಕಂಡ ಖರೀದಿ ದರ ಶಿವಾಯಿ ಡಿಸ್ಟಿಲ್ಲೇರಿಯಾನೆ ಭಟ್ಟೀ ಗಡಂಗಿನಿಂದ ಯಾ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂಡೆಡ್ ಡಿಪೋಯಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಜೋರುಳ್ಳ ಸಾರಾಯಿ ಗ್ಯಾಲ್ಲ 1ಕ್ಕೆ ಲೋಕಲ ಸೆಸ್ ಸಹಿತ $4\frac{3}{4}$ ರೂಪಾಯಿ ದರದಂತೆ ಎಕ್ಸೈಜ್ ಡ್ಯೂಟಿಯಾನೆ ಹಾಸಲು (5) ನೇ ಷರತ್ತು ಅನುಸರಿಸಿ ತಾಲ್ಲೂಕು ಖಜಾನೆಗೆ ಯಾ ಡೆಪ್ಯೂಟಿ ಕಮ್ಮಿಷನರವರ ಅಪ್ಪಣೆ ಪಡದು ಬೇರೆ ಇತರ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡಲ್ಪಡತಕ್ಕದ್ದು.

(c) ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಕಾಕುಂಬೆ ಸಾರಾಯಿಯನ್ನು ಗ್ಯಾಲ್ಲ 1ಕ್ಕೆ ವಿಧಾಯಕವಾದ ರೂ. 6—6—0 ಯಂತೆಯೂ, ಅಥವಾ ಗ್ಯಾಲನ್ನಿನ $\frac{1}{51}$ ನೇ ಭಾಗವಾದ ಒಂದು ಡ್ರಾಂಗೆ 2 ಆಣೆಯಂತೆಯೂ, ಸದರೀ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮಾಷಾಯಿ ದರದಂತೆಯೂ ಜನಗಳಿಗೆ ಮಾರತಕ್ಕದ್ದು.

(5) (a) ಡಿಸ್ಟಿಲೆರಿಯಿಂದ ಶೀದಾ ತನ್ನ ಸ್ವಂತ ಪಾತ್ರೆಗಳಲ್ಲಿ ಸಾರಾಯಿಯನ್ನು ತೆಕ್ಕೊಂಡು ಹೋಗುವ ಲೈಸೆನ್ಸದಾರನು ಮೇಲ್ಕಂಡ ಡ್ಯೂಟಿ ಮೊಬಲಗನ್ನು ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ, ವಿಧಾಯಕವಾದ ನಮೂನೆಯಲ್ಲಿ, ಒಂದು ರಶೀತಿಯನ್ನು ಪಡೆಯತಕ್ಕದ್ದು; ಅಂಥಾ ರಶೀತಿಯನ್ನು ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಪಡಿಸಿ, ಅಂಥಾ ಷರಾಬಿಗೆ ಮೇಲ್ಕಂಡಂತೆ ಖರೀದಿಯನ್ನು ಭಟ್ಟೀದಾರರಿಗಾಗಲೀ ಯಾ ಅವರ ಏಜಂಟರಿಗಾಗಲೀ ಪಾವತಿ ಮಾಡಿ, ಆತನಿಂದ ರಶೀತಿಯನ್ನು ಪಡೆದನಂತರ, ಡಿಸ್ಟಿಲೆರಿ ಜಿಮ್ಮೆಯಲ್ಲಿರುವ ಆಫೀಸರರು ಖಜಾನೆ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮೊಬಲಗ್ಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ, ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿರುವ ತಾರೀಖು ಮತ್ತು ಘಂಟೆ ನಮೂದ್ಮಾಡಿ, ತಮ್ಮ ರುಜುವಿನಿಶಿ ಎಕ್ಸೈಸ ಕಮ್ಮಿಷನರ ಸಾಹೇಬರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು; ಮತ್ತು ಡಿಸ್ಟಿಲೆರಿಯಿಂದ ಸಾರಾಯಿ ರವಾನೆ ಮಾಡುವದಕ್ಕೋಸ್ಕರ ವಿಧಾಯಕವಾದ ನಮೂನೆಯಲ್ಲಿ ರಹದಾರಿಯನ್ನು ಕೊಡತಕ್ಕದ್ದು.

(b) ಬಾಂಡೆಡ್ ಡಿಪೋಯಿಂದ ಸಾರಾಯಿಯನ್ನು ಪಡೆಯುವಂಥಾ ಲೈಸೆನ್ಸದಾರನು ಅಂಥಾ ಸಾರಾಯಿಯ ಖರೀದಿಯನ್ನೂ ಮತ್ತು ಡ್ಯೂಟಿ ಮೊಬಲಗನ್ನೂ ಸಹ ತಾಲ್ಲೂಕು ಖಜಾನೆಯಲ್ಲಿ ಪಾವತಿ ಮಾಡಿ ಒಂದು ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿ ಸರಬರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಪಡಿಸಿದನಂತರ, ಬಾಂಡೆಡ್ ಡೆಪೋ ಮುತ್ಸದ್ದಿಯು ಖಜಾನೆ ರಶೀತಿಯಲ್ಲಿ ನಮೂದ್ಮಾಡಿರುವ ಡ್ಯೂಟಿ ಮತ್ತು ಖರೀದಿ ಮೊಬಲಗಿಗೆ ಸರಿಯಾದ ಸಾರಾಯಿಯನ್ನೂ ಸರಬರಾಯಿ ಮಾಡಿದನಂತರ ಮೇಲಿನ ಕಲಂನಂತೆ ನಡೆದುಕೊಳ್ಳತಕ್ಕದ್ದು.

(c) ಲೈಸೆನ್ಸದಾರನ ಅಂಗಡಿಗಳಿಗೆ ಸರಬರಾಯಿ ಮಾಡಿದ ಸಾರಾಯಿಗೆ ವಿಧಾಯಕವಾದ ಪರವಿಟ್ಟನ್ನು ಹೊಂದತಕ್ಕದ್ದು.

(6) ಬಾಂಡೆಡ್ ಡೆಪೋದಿಂದ ಸಾರಾಯಿಯನ್ನು ಪಡೆಯುವಂಥಾ ಲೈಸೆನ್ಸದಾರನು ತನ್ನ ಸ್ವಂತ ಡೆಪೋವನ್ನು ಇಡಲಿಕ್ಕೂ ಅಥವಾ ತನ್ನ ಸ್ವಂತ ಪೀಪಾಯಿಗಳನ್ನು ಇಟ್ಟುಕೊಳ್ಳಲಿಕ್ಕೂ ಬದ್ಧನಾಗಿರುವದಿಲ್ಲ. ಅಂಥಾ ಸಂದರ್ಭಗಳಲ್ಲಿ ಗವರ್ನ್ಮೆಂಟ ಟ್ರಾನ್ಸಪೋರ್ಟಿಂಗ ಕಂಟ್ರಾಕ್ಟುದಾರರು, ಇವರ ಏಜಂಟ ಯಾ ನೌಕರನು ಅಂಥಾ ಲೈಸೆನ್ಸದಾರನ ಸಾರಾಯಿಯ ಸರಕನ್ನು ಡಿಸ್ಟಿಲರಿಯಿಂದ ರವಾನಿಸಿ, ಅದನ್ನು ಆತನಿಗಾಗಲೀ ಅಥವಾ ಆತನ ಕೈ ಕೆಳಗಿರುವ ಅಂಗಡಿಕಾರರಿಗಾಗಲೀ ಮೇಲ್ಕಂಡ ಬಾಂಡೆಡ್ ಡೆಪೋದಲ್ಲಿ ಪಾವತಿ ಮಾಡತಕ್ಕದ್ದು; ಪರಂತು ಲೈಸೆನ್ಸದಾರನು ಡಿಸ್ಟಿಲೆರಿಯಿಂದ ದಾಖಲಾದ ಯಾವದ್ದಾದರೊಂದು ಪೀಪಾಯಿಯ ಪೂರಾ ಷರಾಬಿಗೆ ಡ್ಯೂಟಿ ವ ಖರೀದಿಯನ್ನು ಮುಂಗಡವಾಗಿ ಪಾವತಿ ಮಾಡುವ ಪಕ್ಷದಲ್ಲಿ, ಅಂಥಾ ಷರಾಬನ್ನೆಲ್ಲಾ ಕೂಡ್ಲೆ ಆತನ ಅಂಗಡಿಗಳಿಗೆ ಬಟವಾಡೆ ಮಾಡಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಲೈಸೆನ್ಸ ಪ್ರಕಾರ ಆತನ ಫಿರ್ಕಾ ಸರಹದ್ದಿನೊಳಗೆ ಸ್ಥಾಪಿಸಿರಬಹುದಾದ ಕೋಠಿಗೆ ಆತನ ಸ್ವಂತ ಪಾತ್ರೆಗಳಲ್ಲಿ ತೆಗೆದುಕೊಂಡು ಹೋಗಿ ಇಟ್ಟುಕೊಂಡು ಅಲ್ಲಿಂದ ಆತನ ಅಂಗಡಿಗಳಿಗೆ ಆವಶ್ಯಕವಾದಷ್ಟು ಷರಾಬನ್ನೂ ಕೊಡಲಿಕ್ಕೂ ಸ್ವತಂತ್ರನಾಗಿರುತ್ತಾನೆ. ಆತನು ಬಾಂಡೆಡ್ ಕೋಠಿಯಲ್ಲಿ ಯಾ ತನ್ನ ಸ್ವಂತ ಕೋಠಿ ಇದ್ದರೆ ಅದರಲ್ಲಿ ಎಕ್ಸೈಸ ಕಮ್ಮಿಷನರ್ ಸಾಹೇಬರವರು ಅಪ್ಪಣೆ ಕೊಡುವಷ್ಟು ಷರಾಬು ಸರಕನ್ನು ಇಡಲಿಕ್ಕೆ ಬದ್ಧನಾಗಿರತಕ್ಕದ್ದು.

(7) ಡಿಸ್ಟಿಲೆರಿಯಿಂದ ಯಾ ಬಾಂಡೆಡ್ ಕೋಠಿಗಳಿಂದ ಫಿರ್ಕಾ ಕೋಠಿಗಳಿಗೆ ರವಾನೆ ಆಗತಕ್ಕ ಷರಾಬಿನೊಡನೆ, ಮತ್ತು ಫಿರ್ಕಾ ಕೋಠಿಗಳಿಂದ ಯಾ ಬಾಂಡೆಡ್ ಕೋಠಿಗಳಿಂದ ಅಂಗಡಿಗಳಿಗೆ ರವಾನೆ ಆಗತಕ್ಕ ಷರಾಬಿನೊಡನೆ ಎಕ್ಸೈಜ್ ಕಮ್ಮಿಷನರವರು ಅಪ್ಪಣೆ ಮಾಡುವ ರೀತ್ಯಾ ಸಾಂಪಲ ಬಾಟಲಿಯಾನೆ ಮಾದಿ ಬುಡ್ಡಿಯು ರವಾನಿಸಲ್ಪಡತಕ್ಕದ್ದು. ಫಿರ್ಕಾ ಕೋಠಿಗಳಲ್ಲಿಡಲ್ಪಡುವ ಷರಾಬು, ಯಾ ಅವುಗಳಿಂದ ಅಂಗಡಿಗಳಿಗೆ ರವಾನೆ ಮಾಡಲ್ಪಡುವ ಷರಾಬು, ಮತ್ತು ಅಂಗಡಿಗಳಲ್ಲಿಡಲ್ಪಡುವ ವ ಅವುಗಳಿಂದ ಜನರಿಗೆ ಮಾರಲ್ಪಡುವ ಷರಾಬು ಸಹ ಡಿಸ್ಟಿಲೆರಿಯಿಂದ ಯಾ ಬಾಂಡೆಡ್ ಡೆಪೋದಿಂದ ರವಾನಿಸಲ್ಪಡುವಾಗ್ಯೆ ಹ್ಯಾಗೆ ಇತ್ತೋ ಅದೇ ರೀತಿ ಇರತಕ್ಕದ್ದು; ಮತ್ತು ಯಾವ ರೀತಿಯಿಂದಲೂ ಕೆಡಿಸಲ್ಪಟ್ಟಿರಕೂಡದು, ಯಾ ನೀರಿನಿಂದ ಮಿಶ್ರ ಮಾಡಲ್ಪಟ್ಟಿರಕೂಡದು.

(8) ಲೈಸೆನ್ಸದಾರನು ತನ್ನಿಂದ ಖರೀದಿಗೆ ತೆಗೆದುಕೊಳ್ಳಲ್ಪಟ್ಟ ಮತ್ತು ಅಂಗಡಿಕಾರರಿಗೆ ಕೊಟ್ಟ ಸಾರಾಯಿಯ ಪರಿಮಾಣವನ್ನೂ ಮತ್ತು ಜೋರನ್ನೂ ಕುರಿತು ಸರಿಯಾದ ಲೆಖ್ಖಗಳನ್ನಿಡಬೇಕು. ಆತನಿಂದ ಕೊಂಡುಕೊಳ್ಳಲ್ಪಟ್ಟ ಸಾರಾಯಿಯೊಡನೆ ರವಾನಿಸಿದ ರಹದಾರಿಗಳು ಯಾ ಪ್ಯಾಸ್‌ಗಳು ಹಾಲಿ ಜಾರೀಲಿರುವ ಯಾ ಮುಂದೆ ಆಗಿಂದಾಗ್ಯೆ ಸರ್ಕಾರದಿಂದ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳನ್ನನುಸರಿಸಿ ಆಜಮಾಯಿಷಿಗೂ ವ ತನಿಖೆಗೂ ಗುರಿಯಾಗತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರಿಂದ ಕ್ರಮವಾಗಿ ಲೈಸೆನ್ಸ್ ಪಡೆದ ದುಕಾನಗಳಲ್ಲಿ ವಿನಹ ಮತ್ತೆಲ್ಲಿಯೂ ಸಾರಾಯಿ ಬಿಕರೀ ಮಾಡಲಾಗದು; ಮತ್ತು ಎಕ್ಸೈಜ್ ಕಮಿಷನರವರ ಮುಂಚಿತವಾದ ಮಂಜೂರಾತಿ ಇಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು.

(10) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸಲು ಅಪ್ಪಣೆ ಕೊಡಬಹುದು.

(11) ಲೈಸೆನ್ಸದಾರನು ತನ್ನ ಲೈಸೆನ್ಸಿನ ವಾಯಿದೆ ಒಳಗೆ ಆತನ ಗುತ್ತಿಗೆ ಫಿರ್ಕಾ ಯಾವ ತಾಲ್ಲೂಕಿನಲ್ಲಿರುತ್ತೋ ಅಂಥಾ ತಾಲ್ಲೂಕಿನ ಯಾವ ಭಾಗದಲ್ಲಿಯೂ, ಶೇಂದಿ ಮಾರತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಅವನ ಫಿರ್ಕಾವಿನ ಯಾವ ಭಾಗದಲ್ಲಾದರೂ ಶೇಂದಿ ಬಿಕರೀ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನೂ ಬಳದೇಶದ ಸಾರಾಯಿ ಮಾರುವ ತನ್ನ ಒಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು; ಅಥವಾ ತನ್ನ ಲೈಸೆನ್ಸಿನ ವಾಯಿದೆ ಅಂದರವಾರ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಬ್ರಿಟಿಷ್ ಸರ್ಕಾರದ ಕೈಕೆಳಗಿರುವ ಮದರಾಸ್ ಯಾ ಬೊಂಬಾಯಿ ರಾಜ್ಯಾಧಿಪತ್ಯದ ಯಾವ ಡಿಸ್ಟ್ರಿಕ್ಟುಗಳಲ್ಲಾಗಲಿ, ಯಾ ಇತರ ಪರಾಯಿ ದೇಶದ ಯಾ ಶೀಮೆಯಲ್ಲಾಗಲಿ ಲೈಸೆನ್ಸದಾರನು ಯಾವದೊಂದು ಸಾರಾಯಿ ಗುತ್ತಿಗೆಯಲ್ಲಿ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನ ಇಟ್ಟುಕೊಂಡಿರಕೂಡದು.

(12) ಲೈಸೆನ್ಸದಾರನು 1903ನೇ ಇಸವಿ ಜುಲೈ ಗುರ್ರೇಯಲ್ಲಿ ಬಾಂಡೆಡ್ ಡಿಪೋದಲ್ಲಿ ಯಾ ತನ್ನ ಫಿರ್ಕಾ ಕೋಠಿಯಲ್ಲಿ ಯಾ ಆತನ ಅಂಗಡಿಗಳಲ್ಲಿ ಹಾಜರಿರತಕ್ಕ ಹಳೇ ಗುತ್ತಿಗೇದಾರನ ಬಾಬತು ದಾಸ್ತಾನ ಸಾರಾಯಿಯನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(13) ಲೈಸೆನ್ಸದಾರನು ಹಾಲೀ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ನಿಬಂಧನೆಗಳಿಗೂ ಮತ್ತು ಆಗಿಂದಾಗ್ಯೆ ಎಕ್ಸೈಜ್ ಕಾನೂನುಗಳ ಪ್ರಕಾರ ವಿಧಿಸೋಣಾಗುವ ಹೆಚ್ಚು ನಿಬಂಧನೆಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನ ಉಪಯೋಗಿಸತಕ್ಕದ್ದು ಮತ್ತು ಸಾರಾಯಿಯನ್ನು ಸಾಗಿಸುವ ಬಗ್ಗೆ ಬೇಕಾದ ಲೆಕ್ಕ, ರಹದಾರಿ ಅಥವಾ ಪ್ಯಾಸ್ ಇವುಗಳಿಗೆ ವಿಧಾಯಕವಾದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(14) ಈ ಗುತ್ತಿಗೆಯು ಎಕ್ಸೈಜ್ ಕಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(15) ಡೆಪ್ಯುಟಿ ಕಮಿಷನರ್ ಸಾಹೇಬರವರು ಲೈಸೆನ್ಸದಾರನ ಕೈಕೆಳಗಿರುವ ಪ್ರತಿ ಒಂದು ಅಂಗಡಿಗೂ ವಿಧಾಯಕವಾದ ನಮೂನೆಯಲ್ಲಿ ಲೈಸೆನ್ಸನ್ನು ಕೊಡತಕ್ಕದ್ದು.

(16) ತೆಗೆದುಕೊಳ್ಳಲ್ಪಟ್ಟದ್ದ ಫಿರ್ಕಾಗಳ ಪೂರಾ ಯಾ ಒಂದು ಭಾಗಕ್ಕಾಗಿ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರ ಮಾಡದೇ ತಿರಸ್ಕರಿಸುವರು.

8. ಲೈಸೆನ್ಸದಾರನಿಂದಲಾಗಲಿ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಿಂದಲಾಗಲಿ ಮೇಲ್ಕಂಡ ಷರತ್ತುಗಳು ಯಾ ಲೈಸೆನ್ಸಿನ ಕರಾರುಗಳು ಉಲ್ಲಂಘಿಸಲ್ಪಟ್ಟ ಪಕ್ಷದಲ್ಲಿ, ಯಾ ಆತನು ಅಂಗಡಿಗಳನ್ನು ತೆಗಿಯುವದರಲ್ಲಿ ಅಶ್ರದ್ಧೆಯಾಗಿದ್ದಲ್ಲಿ ಯಾ ಗುತ್ತಿಗೇ ಕೆಲಸದಲ್ಲಿ ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಕೊಡಲು ತಪ್ಪಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಪ್ರತಿಯೊಂದು ಉಲ್ಲಂಘನೆಗೆ 50 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಠೇವಣಿ ಇಡಲ್ಪಟ್ಟಿರುವ ಮೊಬಲಗು ದಂಡವಾಗಿ ದಾಖಲ್ಮಾಡಿಕೊಳ್ಳಲ್ಪಟ್ಟಿರುತ್ತಿಂದ ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರೀ ಮೇಲೆ ಸದರೀ ಸರ್ವ ಸ್ವತಂತ್ರದ ಹಕ್ಕನ್ನ ಪುನಃ ಹರ್ರಾಜು ಮಾಡಲಿಕ್ಕೂ, ಯಾ ಅಂಥಾ ಗುತ್ತಿಗೇ ಫಿರ್ಕಾವನ್ನ, ಸರಕಾರದ ಆಡಳಿತದಲ್ಲಿಡಲಿಕ್ಕೂ ಅಥವಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮೊಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾದ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಗಳನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ಎಲ್ಲಾ ನಷ್ಟಗಳೂ ಬೇಶಿಲ್ ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಗುತ್ತಿಗೆಯು ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೇ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗುತ್ತೆ. ಅಂಥಾ ಎಲ್ಲಾ ದಂಡದ ವ ನಷ್ಟದ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ವಿಧಿಸೋಣ, ಠೇವಣೀ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳೋಣ, ಲೈಸೆನ್ಸ್ ರದ್ದು ಮಾಡೋಣ ಈ ಸಂದರ್ಭಗಳು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ಇತರ ಕಾನೂನ್ ಪ್ರಕಾರ ಶಿಕ್ಷಿಸಲ್ಪಡತಕ್ಕ ಯಾವ ತಪ್ಪಿತಕ್ಕಾದರೂ ಲೈಸೆನ್ಸದಾರನನ್ನಾಗಲಿ, ಯಾ ಆತನ ಏಜಂಟನನ್ನಾಗಲಿ, ಯಾ ಆತನ ನೌಕರರನ್ನಾಗಲಿ ಅಪಾದಿಸಿ ದರ್ಯಾಫ್ತೀ ಕ್ರಮ ನಡಿಸಲು ಅತಂಕಪಡಿಸುವದೆಂದು ಭಾವಿಸಲ್ಪಡಕೂಡದು.

E

1903–1904ನೇ ವರುಷಕ್ಕಾಗಿ ಪ್ರತ್ಯೇಕ ಸಾರಾಯಿ ಅಂಗಡಿಗಳ ಹರಾಜು.

ನಂಬರ್ 442–Ex: F. 1902, ತಾರೀಖು 18ನೇ ಮಾರ್ಚಿ 1903.

1. ಇದಕ್ಕೆ ಲಗತ್ತು ಮಾಡಿರುವ * ಷೆಡ್ಯೂಲ್ ಪಟ್ಟಿಯಲ್ಲಿ ನಮೂದಾಗುವ ಜಾಗಗಳಲ್ಲಿರುವ ಪ್ರತ್ಯೇಕ ಸಾರಾಯಿ ಅಂಗಡಿಗಳಲ್ಲಿ 1903ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳು ಕಾಲಕ್ಕಾಗಿ ಸಾರಾಯಿ ಬಿಕರೀ ಮಾಡತಕ್ಕ ಹಕ್ಕನ್ನು ಸದರೀ ಪಟ್ಟಿಯಲ್ಲಿ ಕಂಡ ಸ್ಥಳಗಳಲ್ಲಿ ವ ತಾರೀಖುಗಳಲ್ಲಿ ಆಯಾ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್‌ಗಳು ಯಾ ಸಬ್ ಡಿವಿಜನ್ ಆಫಿಸರರು ಯಾ ಎಕ್ಸೈಸ್ ಇಲಾಖೆಯ ಡಿವಿಜನ್ ಆಫಿಸರರು ಯಾ ಡೆಪ್ಯುಟಿ ಕಮಿಷನರವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ ಕಮಿಷನರವರು ಸರ್ಕಾರದ ಸವಾಲನ್ನು ಗೊತ್ತುಮಾಡಿಕೊಂಡು ಹರಾಜ್ ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಸಲ್ಪಟ್ಟಿಧೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೇ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು.

2. (*a*) ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲ್ ಮಾಡುವದಕ್ಕೆ ಮುಂಚಿತವಾಗಿ 60 ರೂಪಾಯಿ ಯಾ ಹರಾಜ್ ಮಾಡತಕ್ಕ ಆಫಿಸರರು ಗೊತ್ತುಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಸದರೀ ಅಂಗಡಿಗಳಿಗೆ ಯಾರ ಚಡದರಖಾಸು ಅಂಗೀಕರಿಸಲ್ಪಡುತ್ತೋ ಅಂಥಾ ಅಂಗೀಕಾರಕ್ಕೆ ಅರ್ಹರಾದ ಜನರಿಗೆ ಅಂಗಡಿಗಳು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತವೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೆ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರು ಮಾಡಲ್ಪಡೋಣವು ಗವರ್ನ್ಮೆಂಟನವರಿಂದ ವಿಶೇಷ ಕಾರಣಕ್ಕೋಸ್ಕರ ಬದಲಾಯಿಸಲ್ಪಡದೇ ಇದ್ದ ಪಕ್ಷದಲ್ಲಿ, ದರಖಾಸ್ತನ್ನು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು, ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ ಮುತಾಲೀಕರನ್ನು ಕಳುಹಿಸಬೇಕು. ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲು ಬಾರದೇ ಹೋದಲ್ಲಿ ಹರಾಜು ಹಾಕುವ ಆಫಿಸರರು ಯುಕ್ತಾನುಸಾರ ಸರ್ಕಾರದ ಸವಾಲನ್ನು ತಗ್ಗಿಸಬಹುದು. ಸವಾಲ್ಮಾಡಲು ಅಪೇಕ್ಷಿಸುವ ಜನರ ಸ್ಥಿತಿಯನ್ನೂ ಮತ್ತು ಅವರ ಚಾಲ್‌ಚಲನನ್ನೂ ವಿಚಾರಿಸಬಹುದು; ಅಂಥಾ ವಿಚಾರಣೆಯ ಫಲಿತಾಂಶವು ಯಾರ ವಿಷಯದಲ್ಲಿ ತೃಪ್ತಿಕರವಾಗಿಲ್ಲವೋ ಅಂಥಾ ಜನರಿಂದ ಸವಾಲ್ಮಾಡಲಿಕ್ಕೆ ಹಕ್ಕನ್ನುಂಟುಮಾಡುವ ಅವಶ್ಯಕವಾದ ಠೇವಣಿಯನ್ನು ತೆಗದುಕೊಳ್ಳುವದಿಲ್ಲವೆಂದು ಹರಾಜು ಕಾಲದಲ್ಲಿ ತಿರಸ್ಕರಿಸಬಹುದು. ತನ್ನ ಲೈಸೆನ್ಸಿನ ಷರತ್ತುಗಳಿಗೂ, ಅಥವಾ ಜಾರೀಲಿರತಕ್ಕ ಎಕ್ಸೈಸ್ ಕಾನೂನುಗಳಿಗೂ ಉಲ್ಲಂಘನೆ ಮಾಡಿದ ತಪ್ಪಿತಸ್ಥನಾದ ಹಳೇ ಗುತ್ತಿಗೆದಾರನಿಗೆ ಸವಾಲ್ಮಾಡಲು ಹಕ್ಕು ಇರುವದಿಲ್ಲ. ಹರಾಜು ನಡಿಸತಕ್ಕ ಆಫಿಸರರಿಗೆ ಛಡ ಸವಾಲು ತುಂಬಾ ದುಬಾರಿಯಾಗಿರುವದರಿಂದ ಗುತ್ತಿಗೆದಾರನು ಮುಂದೆ ದಿವಾಳಿಯಾಗುವನೆಂಬ ಅನುಮಾನ ತೋರುವ ಪಕ್ಷದಲ್ಲಿ ಅಂಥಾ ಛಡ ಸವಾಲನ್ನು ಅವರು ತಿರಸ್ಕರಿಸಬಹುದು.

(*b*) ಯಾವ ಅಂಗಡಿಯನ್ನು ಒಬ್ಬ ಆಸಾಮಿಗಿಂತ, ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಮ್ಮಿಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡ ಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜು ಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿರುವದಿಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಹರಾಜ್ ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣೀ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಹರಾಜು ಅಂತ್ಯದಲ್ಲಿ ಅವರುಗಳಿಗೆ ವಾಪಸ ಮಾಡಲ್ಪಡುತ್ತವೆ. ಹರಾಜ್ ನಡೆಯುತ್ತಾ ಬಂದಹಾಗೆಲ್ಲಾ ಪ್ರತಿ ಅಂಗಡಿಗೆ ಯಾರ್ಯಾರ ಸವಾಲ್ ಅಂಗೀಕರಿಸಲ್ಪಡುತ್ತೋ ಅವರವರು ತಕ್ಷಣವೇ ಆಯಾಯ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನು ಠೇವಣೀ ಇಡಬೇಕು. ಡೆಪ್ಯುಟಿ ಕಮಿಷನರಿಂದ ಹರಾಜ್ ಮಂಜೂರಾದ 7 ದಿವಸಗಳೊಳಗಾಗಿ ಮೊದಲು ಹಾಜರ್ಮಾಡಿದ ಠೇವಣೀ ಸೇರಿಸಿಕೊಂಡು, ಎರಡು ತಿಂಗಳ ಖಿಸ್ತು ಮೊಬಲಗಿಗೆ ಸರಿಯಾದಷ್ಟು ಹಣವನ್ನು ಠೇವಣೀ ಇಡಬೇಕು. ಅವರು ಮೈಸೂರು ಶೀಮೆಯಲ್ಲಿ ಜಿಂದಿಗಿಯನ್ನುಂಟಾಗದೆ ಇರುವ ಅನ್ಯದೇಶದವರಾಗಿ, ಯಾ ಜೇವಾಳಸ್ಥರೆಂಬುವದಕ್ಕೆ ಅನುಮಾನಕ್ಕೆ ಗುರಿಯಾದವರಾಗಿ ಇರುವಂತೆ ಕಂಡುಬಂದ ಪಕ್ಷದಲ್ಲಿ, ವಿಧಾಯಕವಾದ ಎರಡರಷ್ಟು ಮೊಬಲಗನ್ನು ಠೇವಣೀ ಇಡುವದಕ್ಕಾಗಲೀ ಯಾ ಅವರ ಗುತ್ತಿಗೆ ಷರತ್ತುಗಳನ್ನನುಸರಿಸಿ ಅವರು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತೀ ಮಾಡಲುಳ್ಳವರೆಂದು ಜಾಮೀನ ಪತ್ರವನ್ನು ಬರೆದು ಕೊಡುವದಕ್ಕೆ ಒಬ್ಬ ಜಾಮೀನದಾರನನ್ನು ಯಾ ಜಾಮೀನದಾರರನ್ನು ಹಾಜರ್ಮಾಡುವದಕ್ಕಾಗಲೀ ಅವರಿಗೆ ನಿರ್ಬಂಧಪಡಿಸಬಹುದು. ಅವರು ಈ ಠೇವಣಿಗಳಲ್ಲಿ ಯಾವದನ್ನಾದರೂ ಹಾಜರ್ಮಾಡದೆ ತಪ್ಪಿದರೆ ಯಾ ಆವಶ್ಯಕವಾದ

* ಷರಾ–ಸನ್ 1903ನೇ ಇಸವಿ ಮಾರ್ಚಿ 26ನೇ ತಾರೀಖು ಮೈಸೂರ ಗೆಜೆಟ್ಟಿಗೆ ಸಪ್ಲಿಮೆಂಟಾಗಿ ಷೆಡ್ಯೂಲ್ ಛಾಯಿಷಾಗಿರುತ್ತೆ.

ಜಾಮೀನ್‌ದಾರ ಅಥವಾ ಜಾಮೀನ್‌ದಾರರನ್ನು ಹಾಜರ್ ಮಾಡದೆ ಹೋದಲ್ಲಿ ಮೊದಲೇ ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಂಡವಾಗಿ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಡೆಪ್ಯುಟಿ ಕಮಿಷನರವರಿಂದ ಪುನಃ ಹರಾಜು ಮಾಡಲ್ಪಡುವದು ಅಥವಾ ಬೇರೆ ವಿಧವಾಗಿ ವಿಲೇವಾರಿ ಮಾಡಲ್ಪಡುವದು. ಮತ್ತು ಅವರು ಈ ಅಂಗಡಿಗಾಗಲಿ ಅಥವಾ ಮತ್ಯಾವ ಅಂಗಡಿಗೋಸ್ಕರವಾಗಿ ಆಗಲಿ ಸವಾಲ್ ಮಾಡಕೂಡದು.

4. ಮೇಲಿನ 3ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀ ಮೇಲೆ ನಡೆಯತಕ್ಕದ್ದು. ಇದರಿಂದ ಆತನು ಆದಾಯುವನ್ನೆಲ್ಲಾ ಕಳದುಕೊಂಡವನಾಗುತ್ತಾನೆ; ಮತ್ತು ದುಸರೇ ಹರಾಜ್ ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ಪಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಚಡಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಂಡಿರುವ ಠೇವಣೀ ಮೊಬಲಗುಗಳನ್ನು ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಟ್ಟ ಸದರೀ ಆ ಠೇವಣೀ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣೀ ಮೊಬಲಗನ್ನೆಲ್ಲಾ ಸರಕಾರಕ್ಕೇನೇ ಜಮಾ ಮಾಡಿಕೊಳ್ಳತಕ್ಕದ್ದು.

5. ಯಾರ್‍ಯಾರ ಹೆಸರಿಗೆ ಹರಾಜಿನಲ್ಲಿ ಅಂಗಡಿಗಳು ನಿಂತು ಇವೆಯೋ ಆ ಜನಗಳು ಮೇಲೆ ನಮೂದಿಸಿದ 7 ದಿನಗಳ ಪಾಯಿದೆ ಕಳದನಂತರ 10 ದಿನಗಳೊಳಗಾಗಿ ವಿಧಾಯಕವಾದ ನಮೂನೆಯಲ್ಲಿ ತಾನು ತನ್ನ ಕರಾರಿನ ಷರತ್ತುಗಳನ್ನು ಕ್ರಮವಾಗಿ ಜಾರಿ ಮಾಡಲಿಕ್ಕೆ ಡೆಪ್ಯುಟಿ ಕಮಿಷನರವರು ಎಷ್ಟು ಚರ ಮತ್ತು ಸ್ಥಿರ ಆಸ್ತಿಯು ಸಾಕಾಗುತ್ತೆಂದು ಎಣಿಸುತಾರೋ ಅಷ್ಟು ಆ ಬಾಬತ್ತು ತನ್ನ ಆಸ್ತಿಗಳನ್ನಿಟ್ಟು ಲೈಸೆನ್ಸಗಳನ್ನು ಪಡೆಯತಕ್ಕದ್ದು, ಮತ್ತು ಕರಾರುಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಲೈಸೆನ್ಸ ಪಡಿಯಲಿಕ್ಕೆ ಯಾ ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ಯಾವ ಮನುಷ್ಯನಾದರೂ ತಪ್ಪಿದರೆ ಮೊದಲೇ ಇಡೋಣಾದ ಠೇವಣಿಗಳೆಲ್ಲವನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಸದರೀ ಅಂಗಡಿಯು ಯಾ ಅಂಗಡಿಗಳು ಅಂಥಾ ಮನುಷ್ಯರ ಜವಾಬ್‌ದಾರಿ ಮತ್ತು ನಷ್ಟದ ಮೇಲೆ ಪುನಹ ಹರಾಜು ಮಾಡಲ್ಪಡುತ್ತವೆ; ಅಥವಾ ಬೇರೆ ವಿಧವಾಗಿ ವ್ಯವಸ್ಥೆ ಮಾಡಲ್ಪಡುತ್ತವೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸ್‌ದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

6. ಹಿಂದಿನ ಕೆಲವು ವರುಷಗಳ ಬಾಬತ್ತು ಪ್ರತಿ ಅಂಗಡಿಯು ಗುತ್ತಿಗೆ ಮೊಬಲಗು ಖರ್ಚಾದ ಸಾರಾಯಿ ವೈರೆ ತಪ್ಸೀಲ್ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುತ್ತೆ.

7. ಮೇಲಿನ 5ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು 20° ಡಿಗ್ರಿ ಜೋರಾದ ಅಂಡರ್ ಪ್ರೂಫ್ ಬಲವುಳ್ಳ ಸಾರಾಯನ್ನು ಮಾರುವದಕ್ಕೂ ಮತ್ತು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಅಧಿಕಾರ ಪಡೆದ ಇತರ ಆಫೀಸರರ ಅಪ್ಪಣೆಯಿಂದ 30° ಡಿಗ್ರಿ ಅಂಡರ್ ಪ್ರೂಫ್ ಸಾರಾಯನ್ನು ಮಾರುವದಕ್ಕೂ ಮಾತ್ರವೇ ವ್ಯಾಪಿಸುತ್ತೆ. ಪರಂತು ಬೆಂಗಳೂರು ಸೆಂಟ್ರಲ್ ಡಿಸ್ಟಿಲೇರಿಯಲ್ಲಿ ತಯಾರಾಗುವ ಡಬ್ಬಲ್ ಡಿಸ್ಟಿಲ್ಡ್ ಯಾನೆ ದುಗುಣಿ ಭಟ್ಟಿ ಇಳಿಸಲ್ಪಟ್ಟ ಷರಾಬನ್ನು ಯಾ ಇತರ ವಿಶೇಷ ಮದ್ಯಗಳನ್ನು ಅಂದರೆ ಬ್ರಾಂದಿ, ವಿಸ್ಕಿ, ಜಿನ್ ಮುಂತಾದದ್ದನ್ನು ಮಾರಲಿಕ್ಕೆ ಹಕ್ಕು ಇರಲಾರದು. ಈ ಬಾಬತು ಷರಾಬನ್ನ ವ ಮದ್ಯಗಳನ್ನು ತಮ್ಮ ಸ್ವಂತ ಖರೀದಿಗಳಿಗೆ ಮಾರುವದಕ್ಕೆ ಅನ್ಯದೇಶದ ಸಾರಾಯಿಗಳ ಅಂಗಡಿಕಾರರಿಗೆ ಮಾತ್ರವೇ ಅಪ್ಪಣೆ ಕೊಡಲ್ಪಟ್ಟಿರುತ್ತೆ.

(2) (a) ಸದರೀ ಸ್ವತಂತ್ರದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ಸ್ಥಳೀಯವಾದ ತಾಲ್ಲೂಕು ಖಜಾನೆಗೆ 1903ನೇ ಇಸವಿ ಜುಲೈ ಮಾಹೇ ಲಾಗಾಯತು ಸರಿಯಾದ ತಿಂಗಳುಗಟ್ಲೆ ಕಿಸ್ತು ಪ್ರಕಾರ ಪಾವತಿ ಮಾಡಲ್ಪಡುತ್ತಾ ಬರತಕ್ಕದ್ದು. ಪ್ರತಿಯೊಂದು ಕಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ಸಿಗಾಗಿ ಏನೂ ಜಾಸ್ತಿ ಮೊಬಲಗು ಕೊಡತಕ್ಕದ್ದಿಲ್ಲವು. ಪ್ರತಿ ಮಾಹೆಯ ಇಜಾರೆ ಮೊಬಲಗು ಸದರೀ ಮಾಹೆಯ 20ನೇ ತಾರೀಖಿನಲ್ಲಾಗಲೀ ತತ್ಪೂರ್ವವಾಗಲೀ ಪಾವತಿ ಮಾಡಲ್ಪಡಬೇಕು. ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದರೆ ಅಮಲ್‌ದಾರರು ಡೆಪ್ಯುಟಿ ಕಮಿಷನರ ಹುಕುಂ ಪಡೆದು ಸದರೀ ಇಜಾರೆ ದಂಡವಾಗಿ ಕಳದುಕೊಳ್ಳಲ್ಪಟ್ಟಿರುತ್ತೆಂದು ಬರ

ಹ ಮೂಲಕವಾಗಿ ರಿಕಾರ್ಡು ಮಾಡಿ ಮಾಹೆ ಆಖೈರ್ ಆದಕೂಡಲೇ ಸಾಧ್ಯವಾದಷ್ಟು ತ್ವರೆಯ ಲ್ಲಿ ಸ್ವತಂತ್ರ ಅಂಗಡಿಯನ್ನು ಮರಳಿ ಹರಾಜು ಮಾಡತಕ್ಕದ್ದು.

(b) ಲೈಸೆನ್ಸದಾರನಿಂದ ಇಡಲ್ಪಟ್ಟ ಠೇವಣಿ ಮೊಬಲಗು ಇಜಾರೆ ವಾಯಿದೆಯ ಆಖೈರ್ ಎರಡು ತಿಂ ಗಳ ಕಿಸ್ತು ಮೊಬಲಗಿಗೋಸ್ಕರ ತೆಗೆದುಕೊಳ್ಳಲ್ಪಡತಕ್ಕದ್ದು. ಪರಂತು ಸ್ವತಂತ್ರ ಅಂಗಡಿಯು ದುಸರೇ ಹರಾಜು ಮಾಡಲ್ಪಟ್ಟಾಗ ಸದರಿ ಡಿಪಾಜಿಟ್ಟು ಮೊಬಲಗು ಡೆಪ್ಯುಟಿ ಕಮಿಷ್ನರವರಿ ಗೆ ಯುಕ್ತ ತೋರುವಂತೆ ದಂಡವಾಗಿ ಆದರೂ ತೆಗೆದುಕೊಳ್ಳಲ್ಪಡತಕ್ಕದ್ದು. ಅಥವಾ ತಪ್ಪಿಹೋ ದವನಿಂದ ಬರಬೇಕಾದ ಬಾಕಿಗೋಸ್ಕರವೂ ಅಂಗಡಿಯು ದುಸರೇ ಹರಾಜು ಮಾಡಿದ್ದರಿಂದ ಉಂಟಾಗ ಬಹುದಾದ ಯಾವ ನಷ್ಟವನ್ನಾದರೂ ಭರ್ತೀಮಾಡುವ ಬಗ್ಗೆ ಉಪಯೋಗಿಸ ಲ್ಪಡತಕ್ಕದ್ದು. ಅಂಥಾ ಬರಬೇಕಾದ ಬಾಕಿಗಳು ಮತ್ತು ನಷ್ಟದ ಮೊಬಲಗುಗಳು ಸುದಾ ರವಿನ್ಯೂ ಕಂದಾಯದ ಬಾಕಿ ವಸೂಲೀ ಬಗ್ಗೆ ಜಾರಿಯಲ್ಲಿರುವ ರೂಲ್ಸ್ ಅನುಸರಿಸಿ ಲೈಸೆನ್ಸದಾ ರನಿಂದ ವಸೂಲ್ ಮಾಡಲ್ಪಡತಕ್ಕದ್ದು. ಲೈಸೆನ್ಸದಾರನಿಂದ ಯಾವ ಸಂದರ್ಭದಲ್ಲಿಯೂ ರಿಮಿಷನ್ ಅಥವಾ ಇಜಾರೆ ಮೊಬಲಗನ್ನು ಕಮ್ತಿ ಮಾಡುವ ಬಗ್ಗೆ ಅಥವಾ ಪರಿಹಾರದ್ರ ವ್ಯವನ್ನು ಪಡೆಯುವ ಬಗ್ಗೆ ಕೇಳಲ್ಪಡಕೂಡದು.

(c) ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ ತಾರೀಖಿನಿಂದಲೂ ಮ ತ್ತು ನಷ್ಟದ ಮೊಬಲಗಿಗೆ ಪುನಶ್ಚ ಹರಾಜಾದ ತಾರೀಖಿನ ಲಾಗಾಯಿತು ಸಾಲಿಯಾನಾ ಶೇಕ ಡ 6ರ ಪ್ರಕಾರ ಆಗುವ ಬಡ್ಡೀ ದಾಖಿಲ್ ವಸೂಲ್ಮಾಡಲ್ಪಡತಕ್ಕದ್ದು.

(3) (a) ಈ ಸರ್ಕಾರಕ್ಕೆ ಸಾರಾಯಿಯನ್ನು ವ ಇತರ ಬಳದೇಶದ ಷರಾಬನ್ನು ತಯಾರ್ಮಾಡಲಿಕ್ಕೆ ಮೊಕ ರರ್ಮಾಡಲ್ಪಟ್ಟಿರುವ ಭಟ್ಟೀದಾರರಾದ "ಆರ್ಬತ್‌ನಾಟ್ ಅಂಡ್ ಕೋ" ಎಂಬ ವರ್ತಕರಿಂದಲಾಗಲೀ ಯಾ ಸರ್ಕಾರದ ಅಪ್ಪಣೆಮೇರೆ ಏರ್ಪಾಡಾಗಿರುವ ಬಾಂಡೆಡ್ ಡೆಪೋಯಿಂದಲಾಗಲೀ ಲೈಸೆನ್ಸ ದಾರನು ಕಾಕುಂಬಿ ಸಾರಾಯಿಯನ್ನು 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ 8½ ಆಣೆ ದರದ ಮೇರೆ ಕ್ರಯವನ್ನು ಪಾವತಿಮಾಡಿ ಕೊಂಡುಕೊಳ್ಳತಕ್ಕದ್ದು ಮತ್ತು ಆತನು ಬಿರಟೆ ಹಾಕಿ ಮೊಹರ್ ಮಾಡಿದ ಶೀಸೆಗಳಲ್ಲಿ 20° ಡಿಗ್ರಿ ಜೋರುಳ್ಳ ಬೆಲ್ಲದ ಸಾರಾಯಿಯನ್ನು ಸಹಾ ಗ್ಯಾಲನ್ 1ಕ್ಕೆ (ಲೋಕಲ್ ಸೆಸ್ ಶೇರಿ ಡ್ಯೂಟಿ ಅಂದರೆ 4¾ ರೂಪಾಯಿ ಅಡಗಿರುವ) ರೂ 6—2—6 ಪ್ರಕಾರ ಬಾಂಡೆಡ್ ಡೆಪೋದಿಂದ ಕೊಂಡುಕೊಳ್ಳಬಹುದು; ಮತ್ತು ಅಂಥಾ ಶೀಸೆಗಳನ್ನು ಗ್ಯಾಲನ್ 1ಕ್ಕೆ ರೂ. 7—7—0 ಪ್ರಕಾರ ಅಥವಾ ರೆಪ್ಯೂಟೆಡ್ ಕ್ವಾರ್ಟ್ ಶೀಸೆ 1ಕ್ಕೆ ರೂ. 1—3—10 ಪ್ರ ಕಾರ ಮೊತಬರ ಜನರಿಗೆ ಮಾರಬಹುದು.

(b) ಲೈಸೆನ್ಸದಾರನು 20° ಡಿಗ್ರಿ ಅಂಡರ್ ಪ್ರೂಫ್ ಜೋರಿನ ಕಾಕುಂಬಿ ಸಾರಾಯಿಯನ್ನು ಗ್ಯಾಲನ್ 1ಕ್ಕೆ 6—6—0 ಯಂತೆಯೂ, ಅಥವಾ ಗ್ಯಾಲನ್ನಿನ $\frac{1}{51}$ನೇ ಭಾಗವಾದ ಒಂದು ದ್ರಾಂಗೆ 2 ಆಣೆ ಯಂತೆಯೂ ಸದರಿ ಜೋರಿಗಿಂತ ಕಮ್ಮಿಯುಳ್ಳ ಸಾರಾಯಿಗಳಿಗೆ ಅದರ ದಾಮೊಷಾಯಿ ದರ ದಂತೆಯೂ ಜನರಿಗೆ ಮಾರತಕ್ಕದ್ದು.

(4) ಬೆಂಗಳೂರು ಮತ್ತು ಮೈಸೂರ್ ಷಹರುಗಳಲ್ಲಿ ಪ್ರತಿಯೊಂದು ಅಂಗಡಿಯ ಲೈಸೆನ್ಸದಾರನು ಅವನ ಅಂಗಡಿಯ ಲೈಸೆನ್ಸಿನ ನಿಯಮಿತ ಕಾಲಕ್ಕೆ ಮುಂಗಡವಾಗಿ ವರುಷ 1ಕ್ಕೆ 180 ರೂಪಾ ಯಿ ದರದ ಮೇರಿಗೆ ಮುನಿಸಿಪಲ್ ಕಾನೂನು ಪ್ರಕಾರ ರಿಜಿಸ್ಟರ್ ಫೀ ಯಾ ರುಸುಮನ್ನು ಕೊಡ ಬೇಕು; ಮತ್ತು ಆತನು ಪ್ರತಿ ತಿಂಗಳಲ್ಲಿಯೂ 55 ಗ್ಯಾಲನ್‌ಗಳಿಗೆ ಹೆಚ್ಚಾಗಿ ಮಾರುವ ವಿಶಿಷ್ಟ ಸಾರಾಯಿನ ಮೇಲೆ ಗ್ಯಾಲನ್ 1ಕ್ಕೆ 4 ಆಣೆ ಪ್ರಕಾರ ಲೈಸೆನ್ಸ್ ಫೀಯನ್ನು ಸಹ ಕೊಡಬೇಕು.

(5) ಭಟ್ಟೀದಾರರಿಂದ ಕಾಕುಂಬಿ ಸಾರಾಯಿಗಾಗಿ ಹಾಕಲ್ಪಡುವ ಮೇಲ್ಕಂಡ ಖರೀದಿ ದರ ಮತ್ತು ರುಸುಂ ಶಿವಾಯಿ ಸರ್ಕಾರದ ಅಪ್ಪಣೆ ಪ್ರಕಾರ ಸ್ಥಾಪಿಸಲ್ಪಟ್ಟಿರುವ ಯಾವದಾದರೊಂದು ಬಾಂ ಡೆಡ್ ಡೆಪೋದಿಂದ ಸಾರಾಯಿ ಒಯ್ಯಲ್ಪಡುವದಕ್ಕೆ ಪೂರ್ವ 20° ಡಿಗ್ರಿ ಅಂಡರ್ ಪ್ರೂಫ್ ಗ್ಯಾಲನ್ 1ಕ್ಕೆ ಲೋಕಲ್ ಸೆಸ್ ಸಹಿತ ವಿಧಾಯಕವಾಗಿರುವ 4¾ ರೂಪಾಯಿ ದರದಂತೆಯೂ, ಯಾ ಸದರಿ ಜೋರಿಗಿಂತ ಕಮ್ಮಿಯಾದ ಸಾರಾಯಿಗಳಿಗೆ ಅದರ ದಾಮೊಷಾಯಿ ದರದಂತೆಯೂ ಎಕ್ಸೈಜ್ ಡ್ಯೂಟಿ ಯಾನೆ ಹಾಸಲು 6ನೇ ಷರತ್ತು ಅನುಸರಿಸಿ ಮುಂಗಡವಾಗಿ ಪಾವತೀ ಮಾಡಲ್ಪಡಬೇ ಕಾಗಿರುತ್ತೆ.

(6 ಲೈಸೆನ್ಸದಾರನು ಮೇಲ್ಕಂಡ ಹಾಸಲನ್ನೂ ವ ಖರೀದಿ ಮೊಬಲಗನ್ನೂ ತಾಲ್ಲೂಕು ಕಚೇರಿಯ ಲ್ಲಿ ಭಾನುವಾರ ಮತ್ತು ರಜಾದಿನಗಳಲ್ಲಿಯೂ ಸಹ ಡಿಟೋ ಹಾಸಲು ಮತ್ತು ಖರೀದಿ ಮೊಬ ಲಗನ್ನು ತೆಗೆದುಕೊಳ್ಳಲು ಸರ್ಕಾರದ ಖರ್ಚಿನಿಂದ ನೇಮಿಸಲ್ಪಟ್ಟಿರುವ ವಿಶೇಷ ಷರಾಫನ ವಶ

ಕ್ಕೆ ಪಾವತೀಮಾಡಿ ಗೊತ್ತು ಮಾಡಿರುವ ಛಾಪಾ ನಮೂನೆಯಲ್ಲಿ ರಶೀತಿಯನ್ನು ಪಡೆಯತಕ್ಕದ್ದು. ಅಂಥಾ ರಶೀತಿಯನ್ನೂ ಮತ್ತು ಆ ರಶೀತಿಯಲ್ಲಿ ಕಂಡ ಮೊಬಲಗಿಗೆ ತಕ್ಕ ಸಾರಾಯಿಗೆ ಒಂದು ದರಖಾಸ್ತನ್ನೂ ಹಾಜರ್ಮಾಡಿದರೆ ಬಾಂಡೆಡ ಡಿಪೋ ಜಿಮ್ಮೆದಾರನು ಟ್ರೆಜರೀ ಆಫಿಸರರ ರಶೀತಿಯಲ್ಲಿ ನಮೂದು ಮಾಡಿರುವ ಡ್ಯೂಟೀ ಮೊಬಲಗಿಗೆ ಸರಿಯಾದ ಸಾರಾಯಿಯನ್ನು ಸರಬರಾಯಿ ಮಾಡಿ ಆ ರಶೀತಿಯಲ್ಲಿ ಸಾರಾಯಿ ರವಾನೆ ಮಾಡಿದ ತಾರೀಖು ಮತ್ತು ಘಂಟೆಯನ್ನ ನಮೂದು ಮಾಡಿ ಎಕ್ಸೈಜ್ ಕಮಿಷನರವರ ಆಫೀಸಿಗೆ ಆ ರಶೀತಿಯನ್ನು ರವಾನಿಸತಕ್ಕದ್ದು. ಮೇಲ್ಕಂಡ ಡಿಪೋ ಜಿಮ್ಮೆದಾರನು ಬಾಂಡೆಡ ಡಿಪೋದಿಂದ ಸಾರಾಯಿ ರವಾನ ಮಾಡಲು ವಿಧಾಯಕವಾಗಿರುವ ನಮೂನೆಯಲ್ಲಿ ರಹದಾರಿಯನ್ನು ಕಳುಹಿಸತಕ್ಕದ್ದು. ಆತನು ಎಕ್ಸೈಸ ಕಮಿಷನರ ಸಾಹೇಬರವರ ಆಜ್ಞಾನುಸಾರವಾಗಿ ಸರಕಿನೊಡನೆ ಸ್ಯಾಂಪಲ ಬಾಟ್ಲಿಯಾಸ ಮಾದ್ರಿ ಬುಡ್ಡಿಗಳನ್ನು ಸಹಾ ಕಳುಹಿಸತಕ್ಕದ್ದು.

(7) ಲೈಸೆನ್ಸದಾರನು 1902ನೇ ಇಸವಿ ಜುಲೈ ತಾರೀಖಿನಲ್ಲಿ ಅಂಗಡಿಯಲ್ಲಿ ಹಾಜರಿರತಕ್ಕ ಹಳೆ ಲೈಸೆನ್ಸದಾರನ ಬಾಬತು ದಾಸ್ತಾ ಸಾರಾಯಿಯನ್ನು ಎಕ್ಸೈಸ ಕಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಗುತ್ತಿಗೆದಾರನಿಗೆ ಪಾವತಿ ತೆಗೆದುಕೊಳ್ಳಲು ಗುರಿಯಾಗತಕ್ಕದ್ದು.

(8) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಖ್ಖ ಸಾರಾಯಿಯು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪ್ಯಾಸ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಸ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(9) ಅಂಗಡಿಯು ಎಕ್ಸೈಸ ಕಮಿಷನರ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

(10) ತೆಗೆದುಕೊಳ್ಳಲ್ಪಟ್ಟದ್ದ ಅಂಗಡಿಗಳಿಗೆ ಬರುವ ರಾಜೀನಾಮೆಗಳನ್ನು ಡೆಪ್ಯುಟಿ ಕಮಿಷನರವರು ವಿಚಾರ ಮಾಡದೆ ತಿರಸ್ಕರಿಸುವರು.

(11) ಲೈಸೆನ್ಸದಾರನು ಹಾಲಿ ಜಾರೀಲಿರುವ ಎಕ್ಸೈಸ ಕಾನೂನು ಮತ್ತು ನಿಬಂಧನೆಗಳಿಗೂ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಎಕ್ಸೈಸ ಕಾನೂನುಗಳನ್ನನುಸರಿಸಿ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(12) ಬಾಕಿ ಕರಾರುಗಳು ವ ಷರತ್ತುಗಳು ವಿಧಾಯಕವಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

8. ಲೈಸೆನ್ಸದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದಪಕ್ಷದಲ್ಲಿ ತನ್ನ ಅಂಗಡಿಗಳನ್ನು ತೆಗೆಯುವದರಲ್ಲಿ ಯಾ ತನ್ನ ಅಂಗಡಿ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ನಡಿಸಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸುದಾರನಿ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣೀ ಮೊಬಲಗನ್ನು ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದುಮಾಡಿ ಸದರೀ ಲೈಸೆನ್ಸುದಾರನ ಜವಾಬ್ದಾರೀ ಮೇಲೆ ಮೇಲ್ಕಂಡ ಅಂಗಡಿಯನ್ನು ಪುನಹ ಹರಾಜು ಮಾಡಲಿಕ್ಕೂ ಅಥವಾ ಇತರ ವಿಧವಾಗಿ ವಿಲೇವಾಡಲಿಕ್ಕೂ ಯಾ ಅಂಥಾ ಅಂಗಡಿಯನ್ನು ಸರ್ಕಾರದ ಆಡಳಿತದಲ್ಲಿಡಲಿಕ್ಕೂ ಡೆಪ್ಯುಟಿ ಕಮಿಷನರವರು ಮುಖ್ತ್ಯಾರ್ರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೆ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟದ ದೇಖೀಲ್ ಸದರೀ ಲೈಸೆನ್ಸುದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಅಂಗಡಿಯು ರದ್ದು ಮಾಡಲ್ಪಟ್ಟರೆ, ಪುರಾಕಾಲದ ಗುತ್ತಿಗೆ ಹಣವು ಕೂಡ್ಲೇ ಪಾವತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ದಂಡದ ವ ನಷ್ಟದ ಮೊಬಲಗುಗಳೂ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡತಕ್ಕದ್ದು.

9. ಮೇಲಿನ ಹಿಂದಿನ ಕಲಂನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಸ ಕಾನೂನ್ ಯಾ ಇತರ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸುದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಪ್ತೀ ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಸರ್ನ 1903—1904ನೇ ಸಾಲಿಗೆ ಶೇಂದಿ ಅಂಗಡಿಗಳ ಹರಾಜು.

ನಂಬರ್, 429—Ex: F. 6—1902, ತಾರೀಖು 18ನೇ ಮಾರ್ಚಿ 1903.

ಇದಕ್ಕೆ ಲಗತ್ತಿರುವ * ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಪ್ರತಿ ಅಂಗಡಿಯಲ್ಲಿ ಯಾ ಅಂಗಡಿಗಳ ಸಮುದಾಯದಲ್ಲಿ 12 ತಿಂಗಳು ಅಂದರೆ 1903ನೇ ಇಸವಿ ಜುಲೈ ಗುರ್ರೆ ಶುರುವಾಗಾಯಿತು 1904ನೇ ಇಸವಿ ಜೂನ 30ನೇ ತಾರೀಖಿಗೆ ಪೂರೈಸುವ ಸರ್ಕಾರಿ ಸಾಲಿಗೆ ಶೇಂದಿಯನ್ನು ಬಿಕರಿ ಮಾಡುವ ಬಟ್ಟ, ಸ್ವಾತಂತ್ರ್ಯದ ಹಕ್ಕು ಆಯಾ ಡೆಪ್ಯುಟಿ ಕಮಿಷ್ನನರುಗಳಿಂದ ಯಾ ರೆವಿನ್ಯೂ ಸಬ್ ಡಿವಿಜನ್ ಆಫೀಸರರಿಂದ ಯಾ ಎಕ್ಸೈಜ್ ಇಲಾಖೆಯ ಡಿವಿಜನ್ ಆಫೀಸರರಿಂದ ಯಾ ಇದಕ್ಕಾಗಿ ಅವರಿಂದ ನೇಮಿಸಲ್ಪಡಬಹುದಾದ ಅಸಿಸ್ಟೆಂಟ್ ಕಮಿಷನರುಗಳಿಂದ ಆಯಾಯ ತಾಲ್ಲೂಕು ಕಸಬಾಗಳಲ್ಲಿ ಮೇಲ್ಕಂಡ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಸರ್ಕಾರದ ಸವಾಲನ್ನು ಗೊತ್ತು ಮಾಡಿಕೊಂಡು ಹರಾಜ್ ಹಾಕಲ್ಪಡುತ್ತೆಂದುನ್ನೂ, ಮತ್ತು ಸದರೀ ಹಕ್ಕಿಗೋಸ್ಕರ ಅತ್ಯಂತ ಜಾಸ್ತಿ ಗುತ್ತಿಗೆ ಮೊಬಲಗನ್ನು ದರಖಾಸ್ತು ಮಾಡುವ ಸವಾಲ್‌ದಾರನಿಗೆ ಅದು ಕೊಡಲ್ಪಡುವದೆಂದುನ್ನೂ, ಮೈಸೂರು ಸರ್ಕಾರದಿಂದ ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ. ಹರಾಜುಗಳು ಸದರೀ ತಾರೀಖುಗಳಲ್ಲಿ ಪೂರೈಸದೆ ಹೋದಲ್ಲಿ ಮಾರನೇ ದಿನಗಳಲ್ಲಿಯೂ ಹಾಕಲ್ಪಡುವವು. ಹರಾಜು ಹಾಕುವ ಆಫೀಸರರು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ನಮೂದಿಸಿರುವ ಅಂಗಡಿಗಳ ಸಮುದಾಯದ ಕ್ರಮವನ್ನು ಅವಶ್ಯಕಬಿದ್ದಾಗ ಬದಲಾಯಿಸಲಿಕ್ಕೂ ಮತ್ತು ಯಾವ ದರಖಾಸ್ತನ್ನಾಗಲಿ ಅವರಿಗೆ ಯುಕ್ತ ತೋರುವಂತೆ ಅಂಗೀಕರಿಸಲಿಕ್ಕೂ ಯಾ ತಿರಸ್ಕರಿಸಲಿಕ್ಕೂ ಅಥವಾ ಸದರೀ ಹಕ್ಕನ್ನು ಯಾವದಾದರೂ ಒಂದು ಮುಖ್ಯವಾದ ಸಂದರ್ಭದಲ್ಲಿ ಟೆಂಡರುಗಳನ್ನು ತೆಗೆದುಕೊಳ್ಳುವದರ ಮೂಲಕವಾಗಿಯಾಗಲೀ ಯಾ ಆಫೀಸಿನಲ್ಲಿ ಪಡಂಬಡಿಕೆ ಮೂಲಕವಾಗಿಯಾಗಲೀ ವಿಕ್ರಯಿಸಲಿಕ್ಕೂ ಅಥವಾ ಯಾವದಾದರೂ ಕಾಫಿ ಎಸ್ಟೇಟಿನಲ್ಲಿ ಸದರೀ ಹಕ್ಕನ್ನು ಒಂದೊಂದು ಅಂಗಡಿಗೆ ಹನ್ನೆರಡು ರೂಪಾಯಿಗಳಿಗೆ ಕಮ್ಮಿಯಿಲ್ಲದಂತೆ ಗೊತ್ತಾದ ಮೊಬಲಗಿಗೆ ಕಾಫಿ ಪ್ಲಾಂಟರಿಗೆ ವಿಕ್ರಯಿಸಲಿಕ್ಕೂ ಸ್ವತಂತ್ರವುಳ್ಳವರಾಗಿರುತಾರೆ. ಇನಾಂಗ್ರಾಮಗಳಲ್ಲಿರತಕ್ಕ ಅಂಗಡಿಗಳು ಪ್ರತ್ಯೇಕವಾಗಿ ಹರಾಜು ಹಾಕಲ್ಪಡತಕ್ಕದ್ದಲ್ಲದೆ, ಅವುಗಳ ಬಾಬತು ಹುಟ್ಟುವಳಿ ಮೊಬಲಗು ಲೆಖ್ಖದಲ್ಲಿ ಪ್ರತ್ಯೇಕವಾಗಿ ತೋರಿಸಲ್ಪಡತಕ್ಕದ್ದು. ಹರಾಜು ಪ್ರತಿ ಒಂದು ವಿಷಯದಲ್ಲಿಯೂ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟು ಇರತಕ್ಕದ್ದಲ್ಲದೆ ಗವರ್ನಮೆಂಟಿನವರಿಂದ ಬದಲಾಯಿಸಲ್ಪಟ್ಟ ಹೊರ್ತು ಡೆಪ್ಯುಟಿ ಕಮಿಷನರವರು ಕ್ರಮವಾಗಿ ಮಂಜೂರ್ ಮಾಡಿದಕೂಡ್ಲೆ ಜಾರೀಗೆ ಬರತಕ್ಕದ್ದು. ಸರ್ಕಾರದ ಸವಾಲಿಗಿಂತ ಹೆಚ್ಚಾದ ಸವಾಲು ಬಾರದೇ ಹೋದಲ್ಲಿ, ಹರಾಜು ಹಾಕುವ ಆಫೀಸರರು ಯುಕ್ತಾನುಸಾರ ಸರ್ಕಾರದ ಸವಾಲನ್ನು ತಗ್ಗಿಸಬಹುದು. ಸವಾಲ್ಮಾಡಲು ಅಪೇಕ್ಷಿಸುವ ಜನರ ಸ್ಥಿತಿಯನ್ನು ಮತ್ತು ಅವರ ಚಾಲ್‌ಚಲನನ್ನೂ ವಿಚಾರಿಸಬಹುದು; ಅಂಥಾ ವಿಚಾರಣೆಯ ಫಲಿತಾಂಶವು ಯಾರ ವಿಷಯದಲ್ಲಿ ತೃಪ್ತಿಕರವಾಗಿಲ್ಲವೋ ಅಂಥಾ ಜನರಿಂದ ಸವಾಲ್ಮಾಡಲಿಕ್ಕೆ ಹಕ್ಕನ್ನುಂಟುಮಾಡುವ ಅವಶ್ಯಕವಾದ ಠೇವಣಿಯನ್ನು ತೆಗೆದುಕೊಳ್ಳುವದಿಲ್ಲವೆಂದು ಹರಾಜುಕಾಲದಲ್ಲಿ ತಿರಸ್ಕರಿಸಬಹುದು. ತನ್ನ ಲೈಸೆನ್ಸಿನ ಷರತ್ತುಗಳಿಗೂ ಅಥವಾ ಜಾರೀಲಿರತಕ್ಕ ಎಕ್ಸೈಜ ಕಾನೂನುಗಳಿಗೂ ಉಲ್ಲಂಘನೆ ಮಾಡಿದ ತಪ್ಪಿತಸ್ತನಾದ ಹಳೇ ಗುತ್ತಿಗೇದಾರನಿಗೆ ಸವಾಲ್ಮಾಡಲು ಹಕ್ಕು ಇರುವದಿಲ್ಲ. ಹರಾಜು ನಡೆಸತಕ್ಕ ಆಫೀಸರರಿಗೆ ಭಡಸವಾಲು ತುಂಬಾ ದುಬಾರಿಯಾಗಿರುವದರಿಂದ ಗುತ್ತಿಗೇದಾರನು ಮುಂದೆ ದಿವಾಳಿಯಾಗುವನೆಂಬ ಅನುಮಾನ ತೋರುವ ಪಕ್ಷದಲ್ಲಿ ಅಂಥಾ ಭಡಸವಾಲನ್ನು ಅವರು ತಿರಸ್ಕರಿಸಬಹುದು.

2. (a) ಸವಾಲ್ಮಾಡಲು ಇಷ್ಟವುಳ್ಳವರು ಖುದ್ದಾಗಿ ಆಗಲೀ ಯಾ ಅಪ್ಪಣೆ ಹೊಂದಲ್ಪಟ್ಟಿರುವ ಮುಖ್ತಾರೀಕರ ಮೂಲಕವಾಗಿ ಆಗಲೀ ಹಾಜರಾಗಬೇಕು; ಮತ್ತು ಪ್ರತ್ಯೇಕ ಅಂಗಡಿಗಳ ವಿಷಯದಲ್ಲಿ 10 ರೂಪಾಯಿಗಳನ್ನಾಗಲೀ ಯಾ ಅಂಗಡಿಗಳ ಸಮುದಾಯಗಳ ವಿಷಯದಲ್ಲಿ 25 ರೂಪಾಯಿಗಳನ್ನಾಗಲೀ ಯಾ ಹರಾಜು ಹಾಕುವ ಆಫೀಸರರಿಂದ ವಿಧಿಸಲ್ಪಡಬಹುದಾದಷ್ಟು ಬೇರೆ ಮೊಬಲಗನ್ನಾಗಲೀ ಠೇವಣಿ ಇಟ್ಟ ಹೊರ್ತು ಯಾರೊಬ್ಬರೂ ತನಗಾಗಿಯಾಗಲೀ ಯಾ ಇತರರಿಗೋಸ್ಕರವಾಗಿಯಾಗಲೀ ಸವಾಲ್ಮಾಡಕೂಡದು. ಅಂಥಾ ಠೇವಣಿ ಮೊಬಲಗುಗಳು ಹರಾಜು ಖೈದಾದಕೂಡ್ಲೆ ವಾಪಸುಮಾಡಲ್ಪಡುವವು.

* ಷರಾ—ಸರ್ನ 1093ನೇ ಇಸವಿ ಮಾರ್ಚಿ 26ನೇ ತಾರೀಖು ಮೈಸೂರ ಗೆಜೆಟ್ಟಿಗೆ ಸಪ್ಲಿಮೆಂಟಾಗಿ ಷೆಡ್ಯೂಲ್ ಛಾಯಿಷಾಗಿದೆ.

(b) ಯಾವ ಅಂಗಡಿಯಾಗಲಿ, ಯಾ ಅಂಗಡಿಗಳ ಸಮುದಾಯವಾಗಲಿ ಒಬ್ಬ ಆಸಾಮಿಗಿಂತ ಯಾ ಕ್ರಮವಾಗಿ ಏರ್ಪಟ್ಟಿರುವ ಒಂದು ಕಂಪನಿ ಯಾ ಫರಮ್ಮಿಗಿಂತ ಹೆಚ್ಚಾದ ಸಂಖ್ಯೆಯುಳ್ಳವರ ಹೆಸರಿಗೆ ಛಡಸವಾಲಿನಲ್ಲಿ ನಿಲ್ಲಿಸಲ್ಪಡಕೂಡದು. ಹರಾಜುಮಾಡುವ ಅಧಿಕಾರಿಯು ಯಾರ ಹೆಸರಿನಿಂದ ಸವಾಲು ಬಂದಿದ್ದಿತ್ತೋ ಅದಲ್ಲವೋ ಆತನ ಹೆಸರನ್ನು ಕೊಂಡುಕೊಂಡವನೆಂದು ದಾಖಲ್ಮಾಡಲು ತಿರಸ್ಕರಿಸತಕ್ಕದ್ದು.

3. ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಹರಾಜಿನಲ್ಲಿ ಪಡೆದ ಖರೀದಿದಾರನು ಎರಡನೇ ಅಂಗಡಿಯ ಯಾ ಅಂಗಡಿಗಳ ಸಮುದಾಯದ ಹರಾಜು ಪ್ರಾರಂಭವಾಗುವದಕ್ಕೆ ತತ್ಪೂರ್ವದಲ್ಲೇ ಸದರೀ ಸಾಲಿಗೆ ತನ್ನ ಸವಾಲಿನ ಮೊಬಲಗಿನಲ್ಲಿ ಇಪ್ಪತ್ತು ನಾಲ್ಕರಲ್ಲಿ ಒಂದು ಭಾಗಕ್ಕೆ ಸರಿಯಾದ ಮೊಬಲಗನ್ನು ಅಂದರೆ ಒಂದು ತಿಂಗಳ ಗುತ್ತಿಗೆ ಮೊಬಲಗಿನಲ್ಲಿ ಅರ್ಧವನ್ನು ಠೇವಣೀ ಇಡತಕ್ಕದ್ದು ಮತ್ತು ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರಾದ ಸಂಗತಿಯು ಆತನಿಗೆ ಲಿಖಿತಮೂಲಕ ತಿಳಿಸಲ್ಪಟ್ಟ ಹದಿನೈದು ದಿವಸಗಳೊಳಗಾಗಿ ಮೊದಲು ಇಡೋಣಾದ ಠೇವಣೀ ದೇಖಿಲ್ ಆತನು ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮಾನವಾಗುವಷ್ಟು ಠೇವಣಿಯನ್ನಿಡಬೇಕು. ಮೇಲ್ಕಂಡಂತೆ ಮೂರು ತಿಂಗಳ ಗುತ್ತಿಗೆ ಮೊಬಲಗಿಗೆ ಸಮನಾದ ಠೇವಣಿಯನ್ನು ಹಾಜರು ಮಾಡಲಿಕ್ಕೆ ವಿಧಿಸಿರುವ ಅವಧಿಯು ಕಳೆದ ಹತ್ತು ದಿವಸಗಳೊಳಗಾಗಿ ಸದರೀ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಈ ಸೆಳಗ್ಗೆ ನಮೂದಿಸುವ ಷರತ್ತುಗಳ ಪ್ರಕಾರವೂ ಮತ್ತು ಆತನಿಗೆ ಕೊಡಲ್ಪಡುವ ಲೈಸೆನ್ಸಿನಲ್ಲಿ ವಿಧಿಸಿರುವ ಷರತ್ತುಗಳ ಪ್ರಕಾರವೂ ನಡೆಯಲಿಕ್ಕೆ ಅವಶ್ಯಕವಾಗಿರುವಷ್ಟು ಚರ ಮತ್ತು ಸ್ಥಿರ ಸ್ವತ್ತುಗಳ ಸಹಿತವಾಗಿ ಬದ್ಧನಾಗಿರಲ್ಪಟ್ಟವನೆಂದು ಒಂದು ಕರಾರನ್ನು ಬರದುಕೊಡತಕ್ಕದ್ದು; ಮತ್ತು ಇದರ ಮುಂದಿನ ಕಲಮನ್ನನುಸರಿಸಿ ಅಂಗೀಕರಿಸಲ್ಪಟ್ಟ ಪಕ್ಷದಲ್ಲಿ ಆತನ ಜಾಮೀನ್ದಾರನು ಸದರೀ ಸ್ವಾತಂತ್ರ್ಯದ ಹಕ್ಕನ್ನು ಕೊಂಡುಕೊಂಡವನು ಅವನ ಕರಾರಿನ ಷರತ್ತುಗಳನ್ನನುಸರಿಸಿ ಕ್ರಮವಾಗಿ ಆಚರಿಸುವದಕ್ಕೋಸ್ಕರ ತನ್ನನ್ನು ಮತ್ತು ಡೆಪ್ಯುಟಿ ಕಮಿಷನರವರು ಅಪೇಕ್ಷಿಸಬಹುದಾದಷ್ಟು ಆತನ ಚರ ಸ್ಥಿರಸ್ವತ್ತುಗಳನ್ನು ಈಡುಮಾಡಿ ವಿಧಾಯಕವಾಗಿರುವ ನಮೂನೆಯಲ್ಲಿ ಜಾಮೀನ್ ತಮಸೂಕನ್ನು ಬರದುಕೊಡತಕ್ಕದ್ದು. ಈ ಕಲಂನಲ್ಲಿ ವಿಧಿಸಿರುವ ಮಾಯಿದೆ ಒಳಗಾಗಿ ಠೇವಣಿ ಯಾ ಠೇವಣಿಗಳನ್ನು ಹಾಜರು ಮಾಡಲಿಕ್ಕೆ ಯಾ ಕರಾರನ್ನು ಯಾ ಜಾಮೀನ್ ತಮಸೂಕನ್ನು ಬರದುಕೊಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಕೂಡ್ಲೆ ಸದರೀ ಸ್ವಾತಂತ್ರ್ಯದ ಹಕ್ಕನ್ನು ಮೊದಲು ಕೊಂಡುಕೊಂಡವನನ್ನು ನಷ್ಟಕ್ಕೆ ಗುರಿಮಾಡಿ ದುಸರಾ ಹರಾಜು ಮಾಡತಕ್ಕದ್ದು, ಯಾ ಅನ್ಯಥಾ ವಿಲೇವಾರಿ ಮಾಡತಕ್ಕದ್ದು. ಸದರೀ ಪ್ರಥಮ ಖರೀದಿದಾರನಿಂದ ಮೊದಲೇ ಹಾಜರು ಮಾಡಲ್ಪಟ್ಟ ಠೇವಣಿ ಯಾ ಠೇವಣಿಗಳು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ, ಆತನು ದುಸರಾ ಹರಾಜಿನಿಂದ ಯಾ ಅನ್ಯಥಾ ವಿಲೇವಾರಿಯಿಂದ ಉಂಟಾದ ನಷ್ಟಕ್ಕೆ ಸಹ ಗುರಿಯಾಗಿರತಕ್ಕದ್ದು; ಪರಂತು ದುಸರಾ ಹರಾಜಿನಲ್ಲಿ ಯಾ ಅನ್ಯಥಾ ವಿಲೇವಾರಿಯಲ್ಲಿ ಏನಾದರೂ ನಫೆ ಬಂದರೆ ಅದಕ್ಕೆ ಆತನಿಗೆ ಏನೂ ಹಕ್ಕಿರಲಾರದು. ಹರಾಜು ಮಂಜೂರಾದ ಮೇಲೆ ಸದರೀ ಖರೀದಿದಾರನು ಸತ್ತುಹೋದಪಕ್ಷದಲ್ಲಿ ಅವನ ವಾರಸುದಾರರು ಯಾ ಆತನಿಂದ ಹಕ್ಕನ್ನು ಪಡೆದವರು ಅದಕ್ಕೆ ಜವಾಬ್ದಾರರಾಗಿರತಕ್ಕದ್ದು.

4. ಹಿಂದಿನ ಕಲಮನ್ನನುಸರಿಸಿ ಹಾಜರು ಮಾಡಲ್ಪಟ್ಟ ಠೇವಣಿಯು ನಗದಾಗಿಯಾಗಲೀ ಯಾ ಡೆಪ್ಯುಟಿ ಕಮಿಷನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಇಂಡ್ಯಾ ಗವರ್ನ್ಮೆಂಟ್ ಸೆಕ್ಯೂರಿಟಿಗಳ ಯಾ ಮೈಸೂರು ಡಿಬೆಂಚರುಗಳ ಮೂಲಕವಾಗಿಯಾಗಲೀ ಇರತಕ್ಕದ್ದು. ಪರಂತು ಮೇಲ್ಕಂಡಂತೆ ಮೂರು ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣಿಗೆ ಬದಲಾಗಿ ಡೆಪ್ಯುಟಿ ಕಮಿಷನರವರಿಗೆ ಯುಕ್ತ ತೋರುವಂತೆ ಮೇಲ್ಕಂಡ ಮೇರಿಗೆ ಒಂದು ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಠೇವಣೀನಿಸಿ ನಾಲ್ಕು ತಿಂಗಳ ಗುತ್ತಿಗೆ ಹಣಕ್ಕೆ ಸಮನಾದ ಮೊಬಲಗ್ಯ ಖಾತರ್ ಜಾಮೀನನ್ನು ಕೊಡುವಂತೆಯೂ ಅಥವಾ ಎರಡು ತಿಂಗಳು ನಗದು ಗುತ್ತಿಗೆ ಹಣವನ್ನೂ ಮತ್ತು ಮೂರು ತಿಂಗಳು ಗುತ್ತಿಗೆ ಹಣಕ್ಕೆ ನಫರ್ ಜಾಮೀನನ್ನು ಸಹ ಹಾಜರ್ಮಾಡುವಂತೆಯೂ, ಬಿಕರೀದಾರನಿಗೆ ಅಪ್ಪಣೆಕೊಡಬಹುದು. ಒಂದು ತಿಂಗಳ ಗುತ್ತಿಗೆ ಮೊಬಲಗು ಹತ್ತು ರೂಪಾಯಿಗಳಿಗೆ ಮೀರದಿರುವ ಎಲ್ಲಾ ಸಂದರ್ಭಗಳಲ್ಲಿಯೂ ಮೂರು ತಿಂಗಳ ಕಿಸ್ತಿಗೆ ಸಮನಾದ ನಗದು ಠೇವಣಿಯನ್ನು ಯಾವಾಗ್ಯೂ ತೆಗೆದುಕೊಳ್ಳಬೇಕೇ ಹೊರತು ನಫರ್ ಜಾಮೀನನ್ನು ಕೇಳಲೂ ಕೂಡದು, ಯಾ ಅಂಗೀಕರಿಸಲೂಕೂಡದು. ಆತನು ಮೈಸೂರು ಸೀಮೆಯಲ್ಲಿ ಜಿಂದಿಗಿಯನ್ನು ಒಟ್ಟಗದೆ ಇರುವ ಅನ್ಯದೇಶದವನಾಗಿಯೂ, ಜೇವಾಳಸ್ತನಂಬುವದಕ್ಕೆ ಅನುಮಾನಕ್ಕೆ ಗುರಿಯಾದವನಾಗಿ ಇರುವಂತೆ ಕಂಡುಬಂದ ಪಕ್ಷದಲ್ಲಿ, ವಿಧಾಯುಕವಾದ ಎರಡರಷ್ಟು ಮೊಬಲಗನ್ನು ಠೇವಣಿ ಇಡುವದಕ್ಕಾಗಲೀ, ಯಾ ಆತನ ಗುತ್ತಿಗೆ ಷರತ್ತುಗಳನ್ನನುಸರಿಸಿ ಆತನು ಕೊಡಬೇಕಾದ ಎಲ್ಲಾ ಹಣಗಳನ್ನು ಕ್ರಮವಾಗಿ ಪಾವತಿ ಮಾಡಲುಳ್ಳವರೆಂದು ಜಾಮೀನ್ ಪತ್ರವನ್ನು ಬರೆದುಕೊಡುವದಕ್ಕೆ ಮೈಸೂರು ದೇಶದಲ್ಲಿ ವಾಸವಾಗಿ ಜಿಂದಿಗಿಯನ್ನುಂಟುಮಾಡಿರತಕ್ಕ ಒಬ್ಬ ಜಾಮೀನ್ದಾರನನ್ನು ಯಾ ಜಾಮೀನ್ದಾರರನ್ನು ಹಾಜರ್ಮಾಡುವದಕ್ಕಾಗಲೀ ಆತನಿಗೆ ನಿರ್ಬಂಧಪಡಿಸಬಹುದು.

5. ಕರಾರುಗಳನ್ನೂ ಮತ್ತು ತಮಸೂಕುಗಳನ್ನೂ ಬರೆದುಕೊಟ್ಟ ಕೂಡ್ಲೆ ಖರೀದೀದಾರನಿಗೆ ಡೆಪ್ಯು
ಟಿ ಕಮ್ಮಿಷನರವರು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟ ವಿಧಾಯಕವಾದ ನಮೂನೆಯಲ್ಲಿ
ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕನ್ನ ನಮೂದಿಸಿ ಒಂದು ಲೈಸೆನ್ಸನ್ನು ಕೊಡುವರು:—
(1) ಲೈಸೆನ್ಸದಾರನು ತನ್ನ ದುಕಾನುಗಳಿಗೆ ಶೇಂದಿ ಒದಗಿಸಿಕೊಳ್ಳುವದಕ್ಕೆ ತನ್ನ ಅಂಗಡಿಗೆ ಯಾ
ಅಂಗಡಿಗಳ ಸಮುದಾಯಕ್ಕೆ ಶೇರಿದ ವನಗಳಲ್ಲಿ ಇರುವ ಶೇಂದಿ ಉತ್ಪತ್ತಿ ಆಗುವ ಗಿಡಗಳ
ನ್ನು ಮರತೆರಿಗೆ ನಿಬಂಧನೆಗಳಿಗೆ ಒಳಪಟ್ಟು, ಹೊಂದುವದಕ್ಕೆ ಸರ್ವ ಸ್ವಾತಂತ್ರ್ಯವುಳ್ಳವನಾಗಿರು
ತ್ತಾನೆ. ಮತ್ತು ಆಪಸನಲ್ಲಿ ಮಾಲೀಕರೊಡನೆ ಮಾಡಿಕೊಂಡ ಏರ್ಪಾಟುಗಳನ್ನನುಸರಿಸಿ ಹಿ
ಡುವಳಿದಾರ್ರ ಜಮೀನುಗಳಲ್ಲಿ ಇರತಕ್ಕ ಮರಗಳಿಂದ ಶೇಂದಿಯನ್ನು ತಯಾರ್ಮಾಡಿಕೊಳ್ಳುವ
ದಕ್ಕೆ ಸ್ವತಂತ್ರನಾಗಿರುತ್ತಾನೆ. ಲೈಸೆನ್ಸದಾರನು ಇನ್ಸ್ಪೆಕ್ಟರವರಿಗೆ ದರಖಾಸ್ತು ಕೊಟ್ಟು
ಅವಶ್ಯಕವಾಗಿರುವ ಬಗ್ಗೆ ಅವರಿಂದ ಅಪ್ಪಣೇ ಚೀಟಿ ಪಡೆದು ಇತರ ಶೇಂದಿ ದುಕಾನದಾರನಿಂದ
ಶೇಂದಿಯನ್ನು ಕೊಂಡುಕೊಳ್ಳಬಹುದು.
ಸದರೀ ಒಟ್ಟು ಸ್ವಾತಂತ್ರ್ಯದ ಹಕ್ಕು ಈಚಲು, ತಾಳೆ, ತೆಂಗು ಮತ್ತು ಬಗನಿ ವ ದಡಸಾಲು
(2) ಮರಗಳ ಶೇಂದಿಯನ್ನು ಮಾರುವದಕ್ಕೆ ವ್ಯಾಪಿಸುತ್ತದೆ. ಆದರೆ ಈಚಲು ಮತ್ತು ಬಗನಿ ಶೇಂದಿ
ಅಂಗಡಿಗಳಿರತಕ್ಕ ಪ್ರದೇಶಗಳಲ್ಲಿ ಈಚಲು ಶೇಂದಿ ಅಂಗಡಿ ಲೈಸೆನ್ಸದಾರನು ಬಗನಿ ಮರಗಳ
ನ್ನೂ, ಬಗನೀ ಶೇಂದಿ ಅಂಗಡಿ ಲೈಸೆನ್ಸದಾರನು ಈಚಲು ಮರಗಳನ್ನೂ ಕಟ್ಟಕೂಡದು.
ಆದರೆ ಈ ಉಭಯ ಲೈಸೆನ್ಸದಾರರು ಮೇಲೆ ನಮೂದಿಸಿರುವ ಎಲ್ಲಾ ಇತರ ಶೇಂದಿ ಮರಗಳ
ನ್ನು ಕಟ್ಟಬಹುದು.
ಗುತ್ತಿಗೆ ಮೊಬಲಗನ್ನು ಸರ್ಕಾರದಿಂದ ಆ ಬಗ್ಗೆ ವಿಧಾಯಕವಾಗಿ ಅಚ್ಚು ಹಾಕಲ್ಪಟ್ಟಿರುವ ಚ
(3) ಲ್ಲಾನ್‌ಗಳ ಮೂಲಕ ಸ್ಥಳೀಯವಾದ ಸರ್ಕಾರದ ಖಜಾನೆಗಳಿಗೆ 1903ನೇ ಇಸವಿ ಜುಲೈ ಲಾಗಾ
ಯತು ಸರಿಯಾದ ತಿಂಗಳಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪರಂತು
ಯಾವುದಾದರೊಂದು ಅಂಗಡಿಯ ಗುತ್ತಿಗೆ ಹಣವು ಸಾಲು 1ಕ್ಕೆ ಐದು ರೂಪಾಯಿಗಳಿಗೆ ಮೀರ
ದಿದ್ದರೆ, ಪೂರಾ ಮೊಬಲಗು ಮೊದಲಿನ ಖಿಸ್ತಿನಲ್ಲಿಯೇ ಪಾವತಿ ಮಾಡಲ್ಪಡತಕ್ಕದ್ದು. ಪ್ರತಿ
ಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲ
ಗೆಂದು ಭಾವಿಸಲ್ಪಡತಕ್ಕದ್ದು. ಲೈಸೆನ್ಸದಾರನು ಲೋಕಲ್ ಸೆಸ್ ಗೋಸ್ಕರ ಏನೂ ಜಾಸ್ತಿ ಮೊ
ಬಲಗು ಕೊಡತಕ್ಕದ್ದಿಲ್ಲವು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಅದೇ ತಿಂಗಳ
20ನೇ ತಾರೀಖು ವ ಅದರೊಳಗೆ ಪಾವತಿಯಾಗತಕ್ಕದ್ದು. ಹಾಗೆ ಪಾವತಿಯಾಗುವದಕ್ಕೆ ತಪ್ಪಿ
ದರೆ, ಅಮಲ್ದಾರರು, ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಯನ್ನು ಪಡೆದು ಬರಹಮೂ
ಲಕ ರಿಕಾರ್ಡು ಮಾಡಿ, ಲೈಸೆನ್ಸನ್ನು ರದ್ದುಮಾಡಿ ತಪ್ಪಿತಸ್ಥನ ಠೇವಣಿಗಳನ್ನು ಸರ್ಕಾರಕ್ಕೆ
ದಂಡವಾಗಿ ತೆಗದುಕೊಳ್ಳಲಿಕ್ಕೆ ಹುಕುಂ ಮಾಡಿ ಸಾಧ್ಯವಾದ ಮಟ್ಟಿಗೆ ಸದರೀ ತಿಂಗಳು ಆಖೈ
ರಾದ ಕೂಡ್ಲೆ ಅಂಗಡಿಯನ್ನು ಯಾ ಅಂಗಡಿಗಳ ಸಮುದಾಯವನ್ನು ತಪ್ಪಿತಸ್ಥನನ್ನು ನಷ್ಟ
ಕ್ಕೆ ಗುರಿಮಾಡಿ ದುಸರಾ ಹರಾಜು ಮಾಡಬಹುದು, ಯಾ ಅನ್ಯಥಾ ವಿಲೇವಾರಿ ಮಾಡಬಹುದು.
ಪರಂತು ಮೇಲ್ಕಂಡಂತೆ ದುಸರಾ ಹರಾಜ್ ಹಾಕುವದಕ್ಕೆ ಬದಲಾಗಿ, ಡೆಪ್ಯುಟಿ ಕಮ್ಮಿಷನರ
ವರು ತಮಗೆ ಯುಕ್ತ ತೋರುವಂತೆ ತಪ್ಪಿತಸ್ಥನು ಪಾವತಿ ಮಾಡಲು ಒಪ್ಪಿಯಿದ್ದ ಗುತ್ತಾ ಮೊ
ಬಲಗಿಗಿಂತ ಕಡಿಮೆ ಇಲ್ಲದೆ ಇರುವ ಗುತ್ತಿಗೆಗೆ ಸಮ್ಮನಾಗತಕ್ಕ ಮೊಬಲಗುಗಳಿಗೆ ತಪ್ಪಿದ ಲೈ
ಸೆನ್ಸದಾರನ ಕೈಕೆಳಗಿರುವ ವೆಂಡರ್ ಅಥವಾ ಸಬ್ ವೆಂಡರುಗಳಿಗೆ ಲೈಸೆನ್ಸನ್ನು ಕೊಡಲು
ಅಮಲ್ದಾರ್ರಿಗೆ ಹುಕುಂ ಮಾಡಬಹುದು.
ಲೈಸೆನ್ಸದಾರನಿಂದ ಹಾಜರು ಮಾಡಲ್ಪಟ್ಟ ಠೇವಣೀ ಮೊಬಲಗು, ಲೈಸೆನ್ಸಿನ ವಾಯಿದೆಯ
(4) ಆಖೈರ್ ಮಾಹೆ ಯಾ ಮಾಹೆಗಳ ಖಿಸ್ತುಗಳಿಗೋಸ್ಕರ ವಸೂಲ್‌ಹಾಕಲ್ಪಡಬೇಕು. ಲೈಸೆನ್ಸ
ದಾರನಿಂದ ಬರಬೇಕಾದ ಬಾಕಿ ಹಣಗಳು ವ ನಷ್ಟದ ಮೊಬಲಗುಗಳು ಸಾಲು 1ಕ್ಕೆ ಶೇಕಡ
ಆರು ರೂಪಾಯಿನಂತೆ ಬಡ್ಡಿ ಸಹಿತವಾಗಿ ಅವನಿಂದ ಯಾ ಆತನ ಜಾಮೀನ್‌ದಾರನಿಂದ ಜಮೀ
ನು ಕಂದಾಯವನ್ನು ವಸೂಲ್ಮಾಡಲಿಕ್ಕೆ ಜಾರಿಯಲ್ಲಿರುವ ನಿಬಂಧನೆಗಳನ್ನನುಸರಿಸಿ ವಸೂಲ್ಮಾ
ಡಲ್ಪಡತಕ್ಕದ್ದು. ಬಾಕಿ ಬರಬೇಕಾದ ದರೋಬಸ್ತು ಮೊಬಲಗಿಗೆ ಹಾಗೆ ಕೊಡಲಿಕ್ಕೆ ತಪ್ಪಿದ
ತಾರೀಖಿನಿಂದಲೂ, ಮತ್ತು ನಷ್ಟದ ಮೊಬಲಗಿಗೆ ಪುನಹ ಹರಾಜಾದ ತಾರೀಖಿನ ಲಾಗಾಯ
ತು ಬಡ್ಡಿಯು ಲೆಖ್ಖಾಚಾರ ಮಾಡಲ್ಪಡತಕ್ಕದ್ದು

(5) ಡೆಪ್ಯುಟಿ ಕಮಿಷನರವರು ಹಾಗೆ ದುಸರಾ ಹರಾಜನ್ನು ಮಂಜೂರ್ ಮಾಡದ ಪಕ್ಷದಲ್ಲಿ ಸದರೀ ಗುತ್ತಿಗೆಯಲ್ಲಿ ಮಿಕ್ಕಿರುವ ಕಾಲಕ್ಕೆ ಯುಕ್ತ ತೋರುವ ಬೇರೆ ಏರ್ಪಾಟನ್ನಾದರೂ ಮಾಡಬಹುದು; ಹಾಗೆ ಮಾಡಿದ ಸಂದರ್ಭದಲ್ಲಿ ಅವರು ತಪ್ಪಿಹೋದ ಲೈಸೆನ್ಸ್‌ದಾರಿಗೆ ತಮ್ಮಿಂದ ಮಾಡಲ್ಪಟ್ಟಿರುವ ಏರ್ಪಾಟುಗಳ ವಿಧಾನವನ್ನು ತಿಳಿಸಿ ಒಂದು ನೋಟೀಸನ್ನು ಕೊಡಬೇಕು.

(6) ಶೇಂದಿಯು ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ಸಮಾದಿಸಿರುವ ಚಿಲ್ಲರೆ ದರಗಳಿಗಿಂತ ಕಮ್ಮಿಯಾಗಿ ಜನರಿಗೆ ಮಾರಲ್ಪಡಕೂಡದು.

(7) ಮರಗಳಿಂದ ತೆಗೆಯಲ್ಪಟ್ಟ ಸ್ಥಿತಿಯಲ್ಲಿ ಶೇಂದಿಯು ಬೆರಿಕೆ ಇಲ್ಲದೆ ಮಾರಲ್ಪಡತಕ್ಕದ್ದು, ಮತ್ತು ಅಂಗಡಿಗಳಲ್ಲಿ ಅಥವಾ ಡೆಪೋಗಳಿದ್ದರೆ ಅವುಗಳಲ್ಲಿ ಯಾವ ರೀತಿಯಿಂದಲೂ ಇತರ ಪದಾರ್ಥಗಳಿಂದ ಕೆಡಿಸಲ್ಪಡಲಾಗದು ಯಾ ನೀರಿನಿಂದ ಮಿಶ್ರ ಮಾಡಲಾಗದು.

(8) ಅಂಗಡಿಗಳ ಸಮುದಾಯದ ಲೈಸೆನ್ಸ್‌ದಾರನು ತನ್ನ ಅಂಗಡಿಗಳಿಗೆ ಸರಬರಾಯಿ ಮಾಡಲು ಶೇಂದಿ ಸರಕನ್ನು ಇಡುವದಕ್ಕಾಗಿ ಒಂದು ಕೋಠಿಯನ್ನು ಇಟ್ಟುಕೊಂಡರೆ ವಿಧಿಸಲ್ಪಟ್ಟಿರುವ ನಮೂನೆಯಲ್ಲಿ ಲೈಸೆನ್ಸನ್ನು ಪಡೆಯಬೇಕು. ಡೆಪೋ ಲೈಸೆನ್ಸ್‌ದಾರನು ತನ್ನ ಡೆಪೋಕ್ಕೆ ಜಮಾ ಬಂದ ಶೇಂದಿಯ ಮೊತ್ತವನ್ನೂ, ಅಂಗಡಿಗಳಿಗೆ ಸರಬರಾಯಿ ಮಾಡಿದ ಶೇಂದಿಯ ಮೊತ್ತವನ್ನೂ ಕುರಿತು ಕರಾರುವಾಕಾ ಲೆಖ್ಖಗಳನ್ನು ಇಡತಕ್ಕದ್ದು. ಶೇಂದಿಯೊಡನೆ ಕೊಡಲ್ಪಟ್ಟ ಪ್ಯಾಸ್‌ಗಳು ಯಾ ರವಾನಗಿಗಳು ಅದಕ್ಕಾಗಿ ಅಧಿಕಾರಹೊಂದಿದ ಆಫೀಸರುಗಳ ಪರೀಕ್ಷೆಗೆ ವ ತನಿಖೆ ಬಗ್ಗೆ ಗುರಿಯಾಗಿರತಕ್ಕದ್ದು.

(9) ವಿಧಾಯಕವಾದ ನಮೂನೆಯಲ್ಲಿ ಡೆಪ್ಯುಟಿ ಕಮಿಷನರವರಿಂದ ಕ್ರಮವಾಗಿ ಲೈಸೆನ್ಸ್ ಪಡೆದ ದುಕಾನುಗಳಲ್ಲಿ ವಿನಹಾ ಮತ್ತೆಲ್ಲಿಯೂ ಶೇಂದಿಯನ್ನು ಬಿಕರೀ ಮಾಡಲಾಗದು, ಮತ್ತು ಎಕ್ಸೈಜ್ ಕಮಿಷನರವರ ಮುಂಚಿತವಾದ ಮಂಜೂರಾತಿಯಿಲ್ಲದೆ ಹೊಸದಾಗಿ ಅಂಗಡಿಗಳನ್ನಿಡಕೂಡದು. ಶೇಂದಿಯನ್ನು ಗಿಡದ ಕೆಳಗೆ ಮಾರೋಣವೂ ಅಥವಾ ಬೈಲಿನಲ್ಲಿ ಮಾರೋಣವು ಅಥವಾ ಕಾನೂನು ಯಾ ನಿಬಂಧನೆಗಳ ಪ್ರಕಾರ ಅಪ್ಪಣೆ ಕೊಡಲ್ಪಡದೇ ಇರುವ ಮತ್ತ್ಯಾವ ಇತರ ರೀತಿಯಲ್ಲಾಗಲಿ ವಿನಿಯೋಗ ಪಡಿಸೋಣವೂ ಖಂಡಿತವಾಗಿ ಅಡ್ಡೀ ಮಾಡಲ್ಪಟ್ಟಿರುತ್ತೆ. ಪರಂತು ಬಗನಿ ಮರಗಳಿರತಕ್ಕ ಪ್ರದೇಶದಲ್ಲಿ ಬಗನಿ ಶೇಂದಿಯನ್ನು ಮಾರುವ ಹಕ್ಕನ್ನು ಪಡೆದಿರುವ ಲೈಸೆನ್ಸ್‌ದಾರನು ಗೃಹಕೃತ್ಯದ ಉಪಯೋಗಕ್ಕೋಸ್ಕರವೂ, ಬಿಕರಿಬಗ್ಗ್ಯೆ ಸಹ ತಾನು ಹರಾಜಿನಲ್ಲಿ ಪಡೆದಿರುವ ಗ್ರಾಮದ ಸರಹದ್ದಿನೊಳಗೆ ಬಗನಿ ಮರವನ್ನು ಉತಾರ್ಮಾಡಲು ಅಪ್ಪಣೆ ಕೊಡಬಹುದು. ಪ್ರತಿ ಒಂದು ಅಂಗಡಿಯ ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಜಮಾ ಬಂದ ಮತ್ತು ಖರ್ಚಾದ ಶೇಂದಿಯ ಕರಾರ್ವಾಕಾ ಲೆಖ್ಖವನ್ನು ಇಡತಕ್ಕದ್ದು.

(10) ಡೆಪ್ಯುಟಿ ಕಮಿಷನರವರು ತಮಗೆ ಯುಕ್ತ ತೋಚಿದಾಗ ಯಾವ ದುಕಾನುಗಳನ್ನಾಗಲಿ ಮುಚ್ಚಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿಧಿಸಲ್ಪಟ್ಟಿರುವ ಸ್ಥಳದಿಂದ 200 ಗಜಗಳ ವಳಗೆ ವರ್ಗಾಯಿಸಲು ಅಪ್ಪಣೆ ಕೊಡಬಹುದು. ಮಂಜೂರ್ಮಾಡಲ್ಪಟ್ಟ ಎಲ್ಲಾ ಅಂಗಡಿಗಳಲ್ಲಿ ಸಾಕಾದಷ್ಟು ಶೇಂದಿ ದಾಸ್ತಾನನ್ನು ಇಟ್ಟಿರಬೇಕು.

(11) ಲೈಸೆನ್ಸ್‌ದಾರನು ತನ್ನ ಲೈಸೆನ್ಸಿನ ಮಾಯಿದೆ ವಳಗೆ ತನ್ನ ಶೇಂದಿ ಅಂಗಡಿ ಇರತಕ್ಕ ತಾಲ್ಲೂಕು ಸರಹದ್ದಿನೊಳಗೆ ಸಾರಾಯಿ ಮಾರತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ಯಾವ ವಿಧವಾದ ಸಂಬಂಧವನ್ನೂ ಇಟ್ಟುಕೊಳ್ಳಕೂಡದು. ಅಥವಾ ಸಾರಾಯಿ ಬಿಕರೀ ಮಾಡತಕ್ಕ ಬಿಟ್ಟು ಸ್ವಾತಂತ್ರ್ಯದ ಹಕ್ಕನ್ನು ವಹಿಸಿರತಕ್ಕ ಯಾವ ಮನುಷ್ಯನನ್ನಾಗಲಿ, ಶೇಂದಿ ಮಾರುವ ತನ್ನ ಬಿಟ್ಟು ಸ್ವಾತಂತ್ರ್ಯದ ಹಕ್ಕಿನಲ್ಲಿ ಪಾಲುದಾರನನ್ನಾಗಿ ಆಗಲಿ, ಯಾ ಸಂಬಂಧವುಳ್ಳವನನ್ನಾಗಿ ಆಗಲಿ ಇಟ್ಟುಕೊಳ್ಳಕೂಡದು. ಅಥವಾ ತನ್ನ ಲೈಸೆನ್ಸಿನ ಮಾಯಿದೆ ಅಂದರೆ ವಾರ್ ಎಕ್ಸೈಜ್ ಕಮಿಷನರವರ ಲಿಖಿತಮೂಲಕವಾದ ಹುಕುಂ ಇಲ್ಲದೆ ಮೈಸೂರ್ ರಾಜ್ಯದ ಹೊರಗೆ ಇರುವ ಯಾವದೊಂದು ಶೇಂದಿ ಅಂಗಡಿಯಲ್ಲಿಯೂ ಅಥವಾ ಬಿಕರೀ ಗುತ್ತಿಗೆ ಫರ್ಮಾದಲ್ಲಿಯೂ ಪ್ರತ್ಯಕ್ಷವಾದ ಯಾ ಪರೋಕ್ಷವಾದ ಸಂಬಂಧವನ್ನು ಇಟ್ಟುಕೊಂಡಿರಕೂಡದು.

(12) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೂ ಅವುಗಳನ್ನನುಸರಿಸಿದ ನಿಬಂಧನೆಗಳಿಗೂ ಲೈಸೆನ್ಸಿನ ಷರತ್ತುಗಳಿಗೂ ಅನುಸಾರವಾಗಿ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು. ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನ ಉಪಯೋಗಿಸತಕ್ಕದ್ದು; ಮತ್ತು ಶೇಂದಿ ಸಾಗಿಸುವದಕ್ಕೆ ಬೇಕಾದ ರಹದಾರಿಗಳನ್ನು ಒದಗಿಸಿಕೊಳ್ಳತಕ್ಕದ್ದು. ಸದರೀ ರಹದಾರಿಗಳ ಛಾಪಿಸಿದ ನಮೂನೆಗಳನ್ನು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಳ್ಳತಕ್ಕದ್ದು.

(13) ಈ ಲೈಸೆನ್ಸ ಎಕ್ಸೈಜ್ ಕಮ್ಮಿಷನರ್ ಸಾಹೇಬರವರ ಅಪ್ಪಣೆ ಶಿವಾಯಿ ವರ್ಗವಾಗತಕ್ಕದ್ದಲ್ಲ.

6. (1) ಈ ಕೆಳಗೆ ನಮೂದಿಸುವ ಜನರ ದರಖಾಸ್ತಿನ ಮೇಲೆ ನಿಬಂಧಿಸಿರುವ ನಮೂನೆಯಲ್ಲಿ ಮರವನ್ನು ಕಟ್ಟುವ ಬಗ್ಗೆ ಲೈಸೆನ್ಸುಗಳು ಸಾದರ್ಮಾಡಲ್ಪಡತಕ್ಕದ್ದು:—

(a) ಲೈಸೆನ್ಸ್ ಕೊಡಲ್ಪಟ್ಟಿರುವ ಶೇಂದಿ ಅಂಗಡಿಕಾರರು, ಅಥವಾ ಅವರಿಂದ ಅಧಿಕಾರ ಹೊಂದಿದ ಏಜಂಟರ ;

(b) ಮೈಸೂರು ರಾಜ್ಯದಲ್ಲಿರುವ ಮರಗಳಿಂದ ಶೇಂದಿಯನ್ನು ಪಡೆಯಲಿಕ್ಕೆ ಅಪೇಕ್ಷಿಸುವ, ಪರಂತು ಈ ಕೆಳಗಿನ (9)ನೇ ಕಲಂನಲ್ಲಿ ವಿಧಿಸಿರುವ ಮರ ತೆರಿಗೆಯನ್ನು ಮೈಸೂರ್ ಸರ್ಕಾರಕ್ಕೆ ಕೊಡಬೇಕಾದ ನಿರ್ಬಂಧವನ್ನುಂಟುಮಾಡದೆ ಇರತಕ್ಕ, ಬ್ರಿಟಿಷ್ ರಾಜ್ಯದಲ್ಲಿರುವ ಅಂಗಡಿಕಾರರ ;

(c) ಸನ್ 1898ನೇ ಇಸವಿ ಜೂನ್ 20ನೇ ತಾರೀಕು 11897—906—Ex: 485ನೇ ನಂಬರುಳ್ಳ ಇಸ್ತಿಹಾರ್‌ನಾಮೆಯನ್ನನುಸರಿಸಿ ಮನೆ ಕುಟುಂಬದವರ ನಿಜವಾದ ಸ್ವಂತ ಉಪಯೋಗಕ್ಕೋಸ್ಕರ ಬೇಕಾಗಿರುವ ಶೇಂದಿಯನ್ನು ವಿಧಾಯಕವಾದ ಮರತೆರಿಗೆಯನ್ನು ಕೊಡಬೇಕಾದ ನಿರ್ಬಂಧವಿಲ್ಲದೆ ಎಕ್ಸೈಜ್ ಕಮ್ಮಿಷನರವರಿಗೆ ಅವಶ್ಯಕವೆಂದು ಕಾಣಬರುವ ಮರಗಳಿಂದ ತಯಾರು ಮಾಡಲಿಕ್ಕೆ ಮಲನಾಡಿನಲ್ಲಿರುವ ಕಾಫಿ ತೋಟಗಳಲ್ಲಿಯೂ ಕಾಫಿ ಹಿತ್ತಲುಗಳಲ್ಲಿಯೂ ಮತ್ತು ಖಾನೆಗಳಲ್ಲಿಯೂ ಇರುವ ಮರಗಳ ಮಾಲೀಕರ;

ಲೈಸೆನ್ಸಗಳನ್ನು ದರಖಾಸ್ತುದಾರನ ಹೆಸರಿಗಾಗಲೀ ಯಾ ಆತನಿಂದ ನೇಮಿಸಲ್ಪಡುವ ಇತರ ಜನರ ಹೆಸರಿಗಾಗಲೀ ಕೊಡಬಹುದು.

(2) ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸಗಳಿಗೆ ದರಖಾಸ್ತುಗಳನ್ನು ಸಂಬಂಧಪಟ್ಟ ಎಕ್ಸೈಜ್ ಇನ್‌ಸ್ಪೆಕ್ಟರವರಿಗೆ ನಿಬಂಧಿಸಿರುವ ನಮೂನೆಯಲ್ಲಿ ಸ್ಥಳದ ಖಜಾನೆಯ ಮೂಲಕ ಕೊಡಬೇಕು. ಸದರೀ ನಮೂನೆಗಳನ್ನು ಅವರಿಂದ ಯಾ ಅವರ ಕೈಕೆಳಗಿರುವ ಅಸಿಸ್ಟೆಂಟು ಇನ್‌ಸ್ಪೆಕ್ಟರುಗಳಿಂದ ಪಡೆಯಬಹುದು.

(3) ಸರ್ಕಾರಿ ಹಿಡುವಳಿಗಳಲ್ಲಿಯೂ ಯಾ ಇನಾಂ ವ ಕಾಯಂಗುತ್ತಾ ಜಮೀನುಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಸದರೀ ಮರಗಳ ಮಾಲೀಕರ ಅನುಮತಿಯನ್ನು ಪಡದಿರುವದಕ್ಕೆ ಸಾಧಕವಾಗಿ ಸದರೀ ಮಾಲೀಕರ ರುಜುಗಳನ್ನು ಮಾಡಿಸಬೇಕು. ಸ್ಟೇಟ್ ಫಾರೆಸ್ಟುಗಳಲ್ಲಿಯೂ ಯಾ ಪ್ಲಾಂಟೇಷನ್‌ಗಳಲ್ಲಿಯೂ ಇರತಕ್ಕ ಮರಗಳನ್ನು ಕಟ್ಟಲಿಕ್ಕೆ ಲೈಸೆನ್ಸುಗಳಿಗೋಸ್ಕರ ಕೊಡುವ ದರಖಾಸ್ತುಗಳಿಗೆ ಫಾರೆಸ್ಟು ರೇಂಜ್ ಆಫೀಸರ ಅನುಮತಿಯನ್ನು ಪಡೆದಿರುವದಕ್ಕೆ ಸಾಧಕವಾಗಿ ಅವರ ರುಜುಗಳನ್ನು ಮಾಡಿಸಬೇಕು.

(4) ಉತಾರು ಲೈಸೆನ್ಸಗಳಿಗೆ ದರಖಾಸ್ತು ಮಾಡುವ ಜನರು ಶೇಂದಿ ಉತಾರಿಗೋಸ್ಕರ ಸದರೀ ಲೈಸೆನ್ಸಗಳಲ್ಲಿ ನಮೂದಾಗಿರುವ ಮರಗಳ ಬಾಬತು ಮರತೆರಿಗೆ ಪಾವತಿ ಆಗಬೇಕಾಗಿರುವ ಎಲ್ಲಾ ಹಣವನ್ನು ಸರ್ಕಾರಕ್ಕೆ ಕೊಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು; ಮತ್ತು ಸರ್ಕಾರೀ ಬಂಜರಿನಲ್ಲಿರತಕ್ಕ ಮರಗಳ ಮರದ ಮಾಲ್ಕಿಯನ್ನು ಸಹಾ ಪಾವತಿ ಮಾಡಲಿಕ್ಕೆ ಜವಾಬ್ದಾರರಾಗಿರತಕ್ಕದ್ದು.

(5) ಅಂಥಾ ದರಖಾಸ್ತು ದಾಖಲಾದ ಕೂಡಲೆ ಇನ್‌ಸ್ಪೆಕ್ಟರವರು ಸಬ್ ಇನ್‌ಸ್ಪೆಕ್ಟರ ಹುದ್ದೆಗೆ ಮೇಲ್ಪಟ್ಟ ಒಬ್ಬ ಉದ್ಯೋಗಸ್ಥರಿಂದ ಮರಗಳಿಗೆ ಸಂಖ್ಯೆ ಹಾಕಿಸುವದಕ್ಕೂ ಮತ್ತು ಕಾಲಕ್ಕೆ ಸರಿಯಾಗಿ ಲೈಸೆನ್ಸನ್ನು ಕೊಡುವದಕ್ಕೂ ತರದೂದ್ ಮಾಡತಕ್ಕದ್ದು. ನಂಬರು ಹಾಕತಕ್ಕ ಆಫೀಸರರು ಕೇಳಿದಾಗ ಮರಗಳ ದರಖಾಸ್ತುದಾರರು ದರಖಾಸ್ತು ಮಾಡಲ್ಪಟ್ಟ ಮರಗಳನ್ನು ತೋರಿಸಬೇಕು. ಯುಕ್ತವಾದಷ್ಟು ವಿರಾಮ ನೀಡಿ ನೋಟೀಸ ಕೊಟ್ಟ ತರುವಾಯ ಹಾಗೆ ಮಾಡಲು ಅವರು ತಪ್ಪಿದರೆ ಅವರಿಂದ ಪಾವತಿ ಮಾಡಲ್ಪಟ್ಟ ಮರತೆರಿಗೆಯೂ ವ ಮರದ ಮಾಲ್ಕಿಯೂ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು.

(6) ಡೆಪ್ಯುಟಿ ಕಮ್ಮಿಷನರುಗಳು ಎಕ್ಸೈಜ್ ಕಮ್ಮಿಷನರವರ ಹುಕುಮಿಗೆ ಒಳಪಟ್ಟು ಕನಿಷ್ಟಪಕ್ಷ ಎಷ್ಟು ಮರಗಳಿಗೆ ಲೈಸೆನ್ಸು ಕೊಡಬಹುದೋ ಮತ್ತು ಒಂದೊಂದ ದರಖಾಸ್ತಿನಲ್ಲಿ ಕನಿಷ್ಟಪಕ್ಷ ಎಷ್ಟು ಮರಗಳನ್ನು ದಾಖಲ್ ಮಾಡಬಹುದೋ ಆ ಅಂಶಗಳನ್ನು ಆಗಿಂದಾಗ್ಯೆ ಗೊತ್ತು ಮಾಡತಕ್ಕದ್ದು; ಶಿವಾಯಿ ಅವರು ಒಂದೊಂದು ದರಖಾಸ್ತಿನಲ್ಲಿ ಒಂದೇ ಗ್ರಾಮದ ಮರಗಳನ್ನು ದಾಖಲ್ ಮಾಡಬೇಕೆಂದು ಹುಕುಂ ಮಾಡಬಹುದು.

(7) ತಕ್ಕ ಉದ್ಯೋಗಸ್ಥರು ಮರಗಳಿಗೆ ಸಂಖ್ಯೆ ಹಾಕುವ ಪರಿಯಂತರ ಯಾವ ಮರವನ್ನೂ ಕಟ್ಟಕೂಡದು, ಯಾವ ಮರದಿಂದಲೂ ಶೇಂದಿಯನ್ನು ಉತಾರ್ ಮಾಡಕೂಡದು, ಯಾವ ಮರಕ್ಕೂ ಗಡಿಗೆಯನ್ನು ಕಟ್ಟಕೂಡದು. ಪರಂತು ನಿಬಂಧಿಸಿರುವ ನಮೂನೆಯಲ್ಲಿ ದರಖಾಸ್ತನ್ನು ಖಜಾನೆಗೆ ಕೊಟ್ಟಕೂಡಲೆ

ಶೇಂದಿ ಉತಾರಿಗೋಸ್ಕರ ರೇವು ಮಾಡಲಿಕ್ಕೆ ಗಡಿಗೆಗಳನ್ನು ತೆಗದು ಹಾಕಲಿಕ್ಕೂ, ಹೊಂಬಾಳೆಗಳನ್ನು ಯಾ ರೇವುಗಳನ್ನು ತಯಾರ ಮಾಡಲಿಕ್ಕೂ ಉಪಕ್ರಮಿಸಬಹುದು.

(8) ಶೇಂದಿ ಉತ್ಪತ್ತಿ ಆಗತಕ್ಕ ಎಲ್ಲಾ ಮರಗಳಿಗೂ ಕೊಡುವ ಉತಾರ್ ಲೈಸೆನ್ಸುಗಳು ವರುಷಗಟ್ಲೆಯಾಗಿರತಕ್ಕದ್ದು. ಲೈಸೆನ್ಸದಾರನ ಅನುಕೂಲಕ್ಕಾಗಿ ಯಾವ ಕಾಲಕ್ಕೆ ಸಂಬಂಧಪಡುತವೋ ಆ ಕಾಲಕ್ಕೆ 15 ದಿವಸಗಳು ಮುಂಚಿತವಾಗಿ ಉತಾರ್ ಲೈಸೆನ್ಸ್ ಬಗ್ಯೆ ದರಖಾಸ್ತುಗಳು ಅಂಗೀಕರಿಸಲ್ಪಡುವವು, ಮರಗಳಿಗೆ ಸಂಖ್ಯೆ ಹಾಕಲ್ಪಟ್ಟು ಲೈಸೆನ್ಸುಗಳು ಕೊಡಲ್ಪಡುವವು; ಮತ್ತು ಸದರೀ ಕಾಲಕ್ಕೆ ಹದಿನೈದು ದಿವಸಗಳಿಗೆ ಮುಂಚಿತವಾಗಿ ಸಂಖೆ ಹಾಕಲ್ಪಟ್ಟಿರುವ ಮೇಲ್ಕಂಡ ಮರಗಳಿಗೆ ಗಡಿಗೆಗಳನ್ನು ಕಟ್ಟಬಹುದು; ಆದರೆ ಶೇಂದಿ ಉತಾರು ಮುಂತಾದ್ದು ಸದರೀ ಕಾಲದ ಪ್ರಾರಂಭದ ಮೊದಲು ಜಾರಿಯಲ್ಲಿ ಬರತಕ್ಕದ್ದು. ಪ್ರಥಂತು ಲೈಸೆನ್ಸಿನ ಕಾಲಾವಧಿಯಲ್ಲಿ ವಿನಹಾ ಬೇರೆ ಕಾಲದಲ್ಲಿ ಶೇಂದಿಯನ್ನು ಮರಗಳಿಂದ ಇಳಿಸಿಕ್ಕೊಂಡು ಹೋಗಕೂಡದು.

(9) ಈ ಕೆಳಗೆ ನಮೂದಿಸುವ ದರಗಳಂತೆ ಮರತೆರಿಗೆಯನ್ನು ಕೊಟ್ಟು ಶೇಂದಿ ಉತಾರ್ ಬಗ್ಯೆ ಲೈಸೆನ್ಸನ್ನು ಪಡದ ಹೊರ್ತು ಯಾವ ಮರವನ್ನೂ ಕಟ್ಟಕೂಡದು :—

ಮರದ ತರಹೆ.		ಮರ ಬಂದಕ್ಕೆ ಲೋಕಲ್ ಸೆಸ ದೇಖೀಲ್ ವರುಷ ಬಂದಕ್ಕೆ ಕೊಡಬೇಕಾದ ಮರ ತೆರಿಗೆ.
		ರೂ. ಆ. ಪೈ.
ಈಚಲು	... ..	1—1—0
ತೆಂಗು	.. ..	2—2—0
ತಾಳೆ	... ..	1—9—6
ಬಗನಿ	.. ..	1—9—6
ದಡಸಾಲು	.. ..	0—8—6

ಟಿಪ್ಪಣಿ—ಮೇಲಿನ (1) (b) ವ (c) ನೇ ಕಲಂಗಳಲ್ಲಿ ನಮೂದಿಸಿರುವ ವಿಷಯಗಳಲ್ಲಿ ಕೊಡಲ್ಪಡುವ ಲೈಸೆನ್ಸುಗಳಿಗೆ ಮೈಸೂರು ಸರ್ಕಾರಕ್ಕೆ ಮರತೆರಿಗೆಯನ್ನು ಕೊಡಬೇಕಾದ್ದಿಲ್ಲವು.

(10) ಮೇಲ್ಕಂಡ ಮೊಬಲಗು ಶಿವಾಯಿ, ಮೈಸೂರು ರಾಜ್ಯದ ಒಳಗೆ ಅಥವಾ ಹೊರಗೆ ಇರುವ ಅಥವಾ ಬೆಂಗಳೂರು ದಂಡಿನಲ್ಲಿ ಇರುವ ಅಂಗಡಿಗಳಿಗೆ ಸರಬರಾಯಿಗೋಸ್ಕರ ಕಟ್ಟಲ್ಪಡುವ ಸರ್ಕಾರೀ ಮರಗಳಿಗೆ ಸಾಲಿಯಾನಾ ಮರ ಬಂದಕ್ಕೆ ನಾಲ್ಕು ಆಣೆ ಪ್ರಕಾರ ಮರದ ಮಾಲ್ಕಿ ಮೊಬಲಗು ಲೋಕಲ್ ಸೆಸನಿಸಿ ವಸೂಲಾಗತಕ್ಕದ್ದು.

ಟಿಪ್ಪಣಿ—ಸರ್ಕಾರೀ ಹಿಡುವಳಿ ಜಮೀನಿನಲ್ಲಿರುವ ಮರಗಳನ್ನು ಮಾಲೀಕರ ಅನುಮತಿ ಇಲ್ಲದೆ ಕಟ್ಟಕೂಡದು. ಇನಾಂ ವ ಕಾಯಂಗುತ್ತಾ ಜಮೀನಿನಲ್ಲಿರುವ ಮರಗಳ ವಿಷಯದಲ್ಲಿ ಹಾಲಿ ಏರ್ಪಾಟುಗಳು ಜಾರೀಲಿರತಕ್ಕದ್ದು. ಪರಂತು ಆ ಮರಗಳು ಸರ್ಕಾರದಿಂದ ಮರತೆರಿಗೆ ವಸೂಲ್ಮಾಡಲಿಕ್ಕೆ ಗುರಿಯಾಗಿರತಕ್ಕದ್ದು.

ಸಂಬಂಧಪಟ್ಟ ಆಯಾಯ ಇಲಾಖೆಗಳಿಗೆ ಈ ಮರದ ಮಾಲ್ಕಿ ಮೊಬಲಗನ್ನು ಜಮೇ ಕಟ್ಟತಕ್ಕದ್ದು.

(11) ಎಕ್ಸೈಜ್ ಕಮ್ಮಿಷನರ್ ಸಾಹೇಬರವರು ಬೇರೆ ಹುಕುಂ ಕೊಡದೆ ಇದ್ದ ಪಕ್ಷದಲ್ಲಿ ಮರತೆರಿಗೆಯನ್ನೂ ಮತ್ತು ಮರದ ಮಾಲ್ಕಿಯನ್ನೂ ಅವುಗಳ ಮೇಲೆ ವಸೂಲಾಗಬೇಕಾದ ಲೋಕಲ್ ಸೆಸ ಸಹಿತವಾಗಿ ಈ ಕೆಳಗೆ ನಮೂದಿಸುವ ಖಿಸ್ತುಗಳಲ್ಲಿ ಪಾವತಿ ಮಾಡಲ್ಪಡತಕ್ಕದ್ದು :—

ಲೈಸೆನ್ಸಗಳಿಗಾಗಿ ದರಖಾಸ್ತುಗಳನ್ನು ಕೊಡತಕ್ಕ ಕಾಲ	ಲೈಸೆನ್ಸಿಗೆ ದರಖಾಸ್ತು ಮಾಡುವಾಗ ಕೊಡಬೇಕಾದ ಮರತೆರಿಗೆ ವ ಮರದ ಮಾಲ್ಕಿ ಮೊಬಲಗಿನ ದಾವಾಷಾಯಿ.	ಮಾರನೇ ತಿಂಗಳು ಆಖೈರಾಗುವದಕ್ಕೆ ಮುಂಚೆ ಕೊಡಬೇಕಾದ ದಾವಾಷಾಯಿ ಮರತೆರಿಗೆ ವ ಮರದ ಮಾಲ್ಕಿ.
1903ನೇ ಇಸವಿ ಜುಲೈ ಗುರ್ರೇಲಾಗಾಯಿತು 1904ನೇ ಏಪ್ರೈಲ್ 30ನೇ ತಾರೀಖಿನ ವಳಗಾಗಿ	ಮೂರರಲ್ಲಿ 1 ಭಾಗ ..	ಉಳಿದ ಮೂರರಲ್ಲಿ ಎರಡು ಭಾಗವು. ಆದರೆ ದರಖಾಸ್ತು ಮಾಡುವ ಈಚಲು, ತೆಂಗು ವ ತಾಳೆ ಮರಗಳ ಸಂಖೆಯು ಹತ್ತಾಗಿದ್ದರೆ ಯಾ ಹತ್ತಕ್ಕೆ ಕಮ್ಮಿಯಾಗಿದ್ದರೆ ಮತ್ತು ಬಗನಿ ಮರಗಳ ಸಂಖೆಯು ಐದಾಗಿದ್ದರೆ ಯಾ ಐದಕ್ಕೆ ಕಮ್ಮಿಯಾಗಿದ್ದರೆ ಆ ಬಾಬತು ಮರಗಳ ಪೂರಾ ಮರತೆರಿಗೆ ವ ಮರದ ಮಾಲ್ಕಿ ಮೊಬಲಗು ದರಖಾಸ್ತಿನೊಡನೆ ಪಾವತಿಯಾಗತಕ್ಕದ್ದು.
1904ನೇ ಮೇ ಗುರ್ರೇಲಾಗಾಯಿತು 1904ನೇ ಜೂನ 30ನೇ ತಾರೀಖಿನ ವಳಗಾಗಿ	ಎಲ್ಲಾ ...	ಇಲ್ಲಾ

(12) ಮದ್ರಾಸ್ ಸರ್ಕಾರದವರೊಡನೆ ಮಾಡಿಕೊಂಡಿರುವ ಏರ್ಪಾಟಿನ ಪ್ರಕಾರ ಮದ್ರಾಸ್ ರಾಜ್ಯ ದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮೈಸೂರು ದೇಶದಲ್ಲಿ ಉಪಯೋಗಿಸಲ್ಪಡುವ, ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮೈಸೂರು ಸರಕಾರಕ್ಕೆ ಜಮೆ ಆಗತಕ್ಕದ್ದು. ಬದಲಾಗಿ ಮೈಸೂರು ದೇಶದಲ್ಲಿರುವ ಮರಗಳಿಂದ ಉತಾರಾಗುವ, ಆದರೆ ಮದ್ರಾಸ್ ರಾಜ್ಯದಲ್ಲಿ ಉಪಯೋಗಿಸಲ್ಪಡುವ ಶೇಂದಿಗೋಸ್ಕರ ಪಾವತಿ ಆಗಬೇಕಾದ ಮರತೆರಿಗೆಯು ಮದ್ರಾಸ್ ಸರ್ಕಾರಕ್ಕೆ ಜಮೆ ಆಗತಕ್ಕದ್ದು. ಅಂಥಾ ವಿಷಯಗಳಲ್ಲಿ ಉಭಯ ಸರಹದ್ದುಗಳ ಪೈಕಿ ಯಾವ ಕಡೆಯಲ್ಲಿ ಅತ್ಯಂತ ಜಾಸ್ತಿ ದರವಿರುತ್ತೋ ಆ ದರದಂತೆಯೇ ಯಾವಾಗಲೂ ಮರ ತೆರಿಗೆಯು ಪಾವತಿ ಮಾಡಲ್ಪಡತಕ್ಕದ್ದು. ಈ ವಿಷಯದಲ್ಲಿ ಕೆಳಗೆ ನಮೂದಿಸುವ ಕ್ರಮವನ್ನು ಆಚರಿಸತಕ್ಕದ್ದು.

(a) ಮೈಸೂರು ದೇಶದ ಅಂಗಡಿಕಾರರು ಮದ್ರಾಸ್ ರಾಜ್ಯದಲ್ಲಿ ಯಾವ ಮರಗಳಿಂದ ಶೇಂದಿಯನ್ನು ಉತಾರ್ ಮಾಡಲಿಕ್ಕೆ ಲೈಸೆನ್ಸುಗಳನ್ನು ಪಡೆಯಬೇಕೆಂಬ ಉದ್ದೇಶದಿಂದ ಇರುವರೋ ಅಂಥಾ ಮರಗಳ ಬಾಬತು ಮರತೆರಿಗೆಯನ್ನು ಮೈಸೂರು ದೇಶದಲ್ಲಿ ಸಂಬಂಧಪಟ್ಟ ತಾಲ್ಲೂಕು ಅಮಲ್ದಾರಿಗೆ ಬಂದೇ ಖಿಸ್ತಿನಲ್ಲಿ ಪಾವತಿ ಮಾಡತಕ್ಕದ್ದು. ಸದರೀ ಅಮಲ್ದಾರರು ವಿಧಾಯಕವಾದ ನಮೂನೆಯಲ್ಲಿ ಒಂದು ರಶೀತಿಯನ್ನು ಕೊಡಬೇಕಲ್ಲದೆ ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸಗಳನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ಆ ರಶೀತಿ ಕೆಳಗೆ ದೃಢಪಡಿಸಿ ರುಜು ಮಾಡಬೇಕು. ಸದರೀ ದರಖಾಸ್ತುದಾರನು ಮದ್ರಾಸ್ ಸರ್ಕಾರದ ಮರಕಟ್ಟಿನ ನಿಬಂಧನೆಗಳ ಪ್ರಕಾರ ಬ್ರಿಟಿಷ್ ಸರ್ಕಾರದವರಿಗೆ ದರಖಾಸ್ತು ಮಾಡಿ ಸರಹದ್ದು ಪ್ರದೇಶದಲ್ಲಿ ಉತಾರು ಮಾಡಲ್ಪಟ್ಟ ಶೇಂದಿಯನ್ನು ಉದ್ದೇಶಿಸಲ್ಪಟ್ಟ ಅಂಗಡಿಗೆ ಯಾ ಕೋಠಿಗೆ ಮದ್ರಾಸ್ ಸರ್ಕಾರದವರ ನಿಬಂಧನೆಗಳ ಪ್ರಕಾರ ಎಲ್ಲಾ ಕ್ರಮವನ್ನು ನಡಿಸಿದ ತರುವಾಯ ತೆಗೆದುಕೊಂಡು ಹೋಗಲಿಕ್ಕೆ ಮೈಸೂರು ದೇಶದ ಸಂಬಂಧಪಟ್ಟ ಇನ್ಸ್ಪೆಕ್ಟರವರಿಂದ ಪರಮಿಟ್ ಯಾ ರವಾನೆಯನ್ನು ಪಡೆಯತಕ್ಕದ್ದು.

(b) ಮೈಸೂರು ದೇಶದಲ್ಲಿರುವ ಮರಗಳಿಂದ ಶೇಂದಿ ಉತಾರ್ ಮಾಡಲಿಕ್ಕೆ ಅಪೇಕ್ಷಿಸುವ ಮದ್ರಾಸ್ ರಾಜ್ಯದ ಅಂಗಡಿಕಾರನು ಯಾ ಗುತ್ತಿಗೆದಾರನು ಆತನು ಕಟ್ಟಬೇಕೆಂದು ಅಪೇಕ್ಷಿಸುವ ಮರಗಳ ಬಾಬತು ಮರತೆರಿಗೆಯನ್ನು ಮದ್ರಾಸ್ ರಾಜ್ಯದ ತಹಶೀಲ್ದಾರರ ಖಜಾನೆಯಲ್ಲಿ ಪಾವತಿ ಮಾಡತಕ್ಕದ್ದು. ಆ ತಹಶೀಲ್ದಾರರು ಸದರೀ ದರಖಾಸ್ತುದಾರನು ಉತಾರ್ ಲೈಸೆನ್ಸನ್ನು ಪಡೆಯಲಿಕ್ಕೆ ಹಕ್ಕುದಾರನಾಗಿರುತ್ತಾನೆಂದು ತೃಪ್ತಿಪಟ್ಟ ತರುವಾಯ ಆ ಸಂಗತಿಯನ್ನು ಕೆಳಗೆ ದೃಢಪಡಿಸಿ ರುಜು ಮಾಡಿ ಒಂದು ರಶೀತಿಯನ್ನು ಕೊಡತಕ್ಕದ್ದು.

(c) ಸದರೀ ಅಂಗಡಿಕಾರನು ಮೈಸೂರು ದೇಶದಲ್ಲಿ ಜಾರಿಯಲ್ಲಿರುವ ಮರಕಟ್ಟಿನ ನಿಬಂಧನೆಗಳನ್ನನುಸರಿಸಿ ಮೈಸೂರು ದೇಶದ ತಕ್ಕ ಅಧಿಕಾರಿಗಳಿಗೆ ದರಖಾಸ್ತನ್ನು ಮಾಡತಕ್ಕದ್ದು. ಸಂಬಂಧಪಟ್ಟ ಮೈಸೂರು ಅಧಿಕಾರಿಗಳು ಸದರೀ ಮೊಬಲಗು ಪಾವತಿಯಾಗಿರುವದಕ್ಕೂ ಮತ್ತು ಆ ದರಖಾಸ್ತುದಾರನು ಉತಾರ್ ಲೈಸೆನ್ಸಿಗಾಗಿ ದರಖಾಸ್ತು ಕೊಡಲು ಹಕ್ಕುಳ್ಳ ಮನುಷ್ಯನಾಗಿರುತ್ತಾನೆಂಬುವದಕ್ಕೂ ನಿದರ್ಶನವಾಗಿ ಸದರೀ ರಶೀತಿಯನ್ನು ಮತ್ತು ದೃಢಪಡಿಸುವಿಕೆಯನ್ನು ಅಂಗೀಕರಿಸತಕ್ಕದ್ದು. ಯದ್ಯಪಿ ಎಕ್ಸೈಜ್ ಇಲಾಖೆಯವರು ಉಳಿಸಿಕೊಂಡಿರುವ ಮರಗಳ ವಿಷಯದಲ್ಲಿ ಅಂಥಾ ಮರಗಳಿಗೆ ವಿಶ್ರಾಂತಿಯನ್ನು ಕೊಡಬೇಕೆಂಬ ಯಾ ಲೈಸೆನ್ಸನ್ನು ತಿರಸ್ಕರಿತಕ್ಕ ಉದ್ಯೋಗಸ್ಥರಿಂದ ಸಾಕಾದ್ದೆಂದು ಎಣಿಸಲ್ಪಡುವ ಇತರ ಕಾರಣದಿಂದ ಯುಕ್ತಾನುಸಾರ ಲೈಸೆನ್ಸುಗಳನ್ನು ತಿರಸ್ಕರಿಸಬಹುದೆಂದು ಸ್ಪಷ್ಟವಾಗಿ ತಿಳಿದಿರತಕ್ಕದ್ದು. ಲೈಸೆನ್ಸುಗಳನ್ನು ಕೊಡೋಣವೂ, ಮರಗಳಿಗೆ ಸಂಖ್ಯೆ ಹಾಕೋಣವೂ ಮುಂತಾದ್ದು ದರಖಾಸ್ತುದಾರನು ಮೈಸೂರು ದೇಶದಲ್ಲಿ ಒಬ್ಬ ಅಂಗಡಿಕಾರನಾಗಿದ್ದರೆ ಹ್ಯಾಗೋ ಹಾಗೆಯೇ ಸರಿಯಾಗಿ ನಡಿಸಲ್ಪಡತಕ್ಕದ್ದು. ಲೈಸೆನ್ಸ್ ಕೊಡಲ್ಪಡಬೇಕಾದ ಮರಗಳ ಸಂಖ್ಯೆಯು ಸರಹದ್ದಿನ ಉಭಯ ಕಡೆಗಳಲ್ಲಿಯೂ ಏಕರೀತಿಯಿಲ್ಲದೆ ಇರುವ ಪಕ್ಷದಲ್ಲಿ ಬ್ರಿಟಿಷ್ ದೇಶದ್ದಾಗಿರಲೀ ಯಾ ಮೈಸೂರು ದೇಶದ್ದಾಗಿರಲೀ, ಅಧಿಕ ದರವ್ಯಾವದೋ ಅದರಂತೆ ಲೆಖ್ಖ ಮಾಡತಕ್ಕದ್ದು.

(d) ಮೈಸೂರು ದೇಶದ ಸಂಬಂಧಪಟ್ಟ ಇನ್ಸ್ಪೆಕ್ಟರವರು ಸರಹದ್ದಿಗೆ ಸಾಗಿಸಲ್ಪಡಬೇಕಾದ ಶೇಂದಿಯು ಮೈಸೂರು ದೇಶದ ಶೇಂದಿ ಅಂಗಡಿಗಳ ಸಮೀಪಕ್ಕೆ ಬರುವದಕ್ಕೆ ಆಸ್ಪದವಾಗದಂತೆ ಕೂಡಿದಮಟ್ಟಿಗೂ ಜಾಗರೂಕತೆಯಿಂದ ಅದಕ್ಕೆ ಮಾರ್ಗವನ್ನು ಗೊತ್ತುಮಾಡಿ ಸರಹದ್ದುವರಿವಿಗೂ ಶೇಂದಿಯನ್ನು ಒಯ್ಯುವದಕ್ಕೆ ಮಾಮೂಲು ಮೇರಿಗೆ ಪರಮಿಟ್ ಯಾ ರವಾನೆಯನ್ನು ಕೊಡ

ತಕ್ಕದ್ದು. ಸಾಧ್ಯವಾದರೆ ಮದ್ರಾಸ್ ಶೀಮೆಗೆ ಶ್ರೀಗಂಧಿಯು ರಫ್ತಾಗತಕ್ಕ ಮುಖ್ಯವಾದ ಯಾವ ಮಾರ್ಗಗಳಲ್ಲಿಯೂ ಸದರೀ ಶ್ರೀಗಂಧಿ ಅಂಗಡಿಗಳನ್ನು ಇಡಿಸಕೂಡದು. ಮತ್ತು ಸದರೀ ಮಾರ್ಗಗಳ ಆಜೂ ಬಾಜು ಇರುವ ಅಂಗಡಿಗಳನ್ನು ದೂರ ಫಾಸಲೆಗೆ ಸಾಗಿಸಬೇಕಾಗಿರುವ ಆವಶ್ಯಕತೆಯನ್ನು ಸಂಬಂಧಪಟ್ಟ ಡೆಪ್ಯುಟಿ ಕಮಿಷನರ ರ ಗೋಚರಕ್ಕೆ ತರಬೇಕು. ಮೈಸೂರು ದೇಶದ ಸರಹದ್ದಿನಿಂದ ಮುಂದಕ್ಕೆ ಉದ್ದೇಶಿಸಿರತಕ್ಕ ಸ್ಥಳಕ್ಕೆ ಶ್ರೀಗಂಧಿಯನ್ನು ಒಯ್ಯುವದಕ್ಕೆ ಪರಿಮಿಟ್ ಯಾ ರವಾನೆಗಳನ್ನು ಕೊಡಲು ಬ್ರಿಟಿಷ್ ಆಫಸರುಗಳ ಕೆಲಸವಾಗಿರುತ್ತೆ.

ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 27ನೇ ಡಿಸೆಂಬರು 1902.

ಇದರಿಂದ ಸರ್ವರಿಗು ತಿಳಿಯಪಡಿಸುವದೇನೆಂದರೆ:—ದೇವರಾಯದುರ್ಗ ಸ್ಟೇಟ್ ಫಾರೆಸ್ಟಿನ ಈ ಕೆಳಗೆ ಕಂಡ ಕಂಪಾರಟ್ಟು ಮೆಂಟಿನಲ್ಲಿರುವ ಸವುದೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತುಗಳಿಗೆ ಬಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ ಫಾರೆಸ್ಟ ಆಫೀಸರವರಿಂದ 1903ನೇ ಜನವರಿ 20ನೇ ತಾರೀಖು ದಿವಸ ತುಮಕೂರಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

ಕಂಪಾರಟುಮೆಂಟು ಹೆಸರು.	ಕಂಪಾರಟುಮೆಂಟಿನ ಹೆಸರು ನಂಬರು.	ವಿಸ್ತೀರ್ಣ ಎಕರೆ.	ಗಿಡಗಳ ಜಾತಿ.	ಅಂದಾಜಾ ಮತ್ತು ಎಕರೆ 1ಕ್ಕೆ.	ತುಮಕೂರಿಂದ ಫಾಸಲೆ.
ಮೂಡಲತಿಪ್ಪೆ ..	IV	488	ಚುಜ್ಜಲು ಹುಲವೆ ಚೆನ್ನಂಗಿ ವಜ್ಜಾರಿ ಮುತ್ತುಗಾ ಕಗ್ಗಲಿ ದೇವದಾರಿ ತೂಪರೆ ಈಚಿ ಮೂಕರ್ತಿ ಗೊರವಿ ನೌಲಾಡಿ ಆಲಾ	ಸುಮಾರು 2½ ಟನ್ ಸೌದೆ	ಸುಮಾರು 7ರಿಂದ 10 ಮೈಲಿ
ಸತ್ತಿಗಲ್ ..	III	350	ಡಿಟೋ		

ಷರಾ— × ಇದರ ವಿಸ್ತೀರ್ಣ 668 ಎಕರೆ ಇದೆ. ಆದರೆ ಅರ್ಧಕ್ಕೆ ಹೆಚ್ಚಾಗಿ ಕತ್ತರಿಸಲಾಗದೆ ಇದೆ.

2. ಈ ಹರಾಜು ಡೆಪ್ಯುಟಿ ಕಮಿಷನರ ಸಾಹೇಬರವರ ಮತ್ತು ಕನಸರ್ವೇಟರ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

3. ಸವಾಲ್‌ಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವು ಹೇಳದೆ ತಿರಸ್ಕರಿಸತಕ್ಕದ್ದಕ್ಕೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ ಒಂದುನೂರು ರೂಪಾಯಿ ಡಿಪಾಜಿಟ್ಟು ಹಾಜರು ಮಾಡಬೇಕು. ಆ ಮೊಬಲಗು, ಮಂಜೂರಾದ ಸವಾಲ್‌ದಾರನದ ಹೊರ್ತು, ಹರಾಜು ಕೈದಾದಮೇಲೆ ವಾಪಸ್ ಮಾಡಲ್ಪಡುವದು. ಆ ಮೊಬಲಗನ್ನು ಷರತ್ತುಮೇರೆ ನಡಿಯಲು ಶಿಕ್ಯೂರಿಟಿಗಾಗಿ ಗವರ್ನಮೆಂಟು ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

5. ಮಂಜೂರಾದ ಸವಾಲ್‌ದಾರನು ಮಂಜೂರಾದ ಒಟ್ಟು ಮೊಬಲಗಿನಲ್ಲಿ ಅರ್ಧ ಹಣವನ್ನು ಹರಾಜು ಮಂಜೂರಿ ತಿಳಿಸಿದ ಒಂದು ವಾರದಲ್ಲಿ ಸರಕಾರಕ್ಕೆ ಪಾವತಿ ಮಾಡಬೇಕು ಅಲ್ಲದೆ ಸರಿಯಾದ ಸ್ಟ್ಯಾಂಪು ಕಾಗದ್ದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದು ಕೊಡಬೇಕು. ತಪ್ಪಿದರೆ ಕಂಪಾರಟುಮೆಂಟನ್ನು ಪುನಹಾ ಹರಾಜು ಮಾಡಿಸ ಲಾದೀತು. ದುಸರೆ ಹರಾಜಿನಲ್ಲಿ ಏನಾದರು ಲುಕ್ಸಾನು ಬಂದರೆ ಮೊದಲಿನ ಹರಾಜುದಾರನು ಭರ್ತಿ ಮಾಡಿ ಕೊಡ ಬೇಕು. ಆದರೆ ಏನಾದರು ಜಾಸ್ತಿ ಬಂದರೆ ಹಿಸ್ಸೇ ದೊರಿಯಲಾರದು.

ಷರತ್ತುಗಳು.

(1) ಸಂದಲ್ ಗಿಡಗಳು ಮತ್ತು ಎಕರೆ 1ಕ್ಕೆ ಗುರ್ತು ಮಾಡುವ ಸರಾಸರಿ 50 ಗಿಡಗಳು, ಸಸಿಗಳು ಅಂದರೆ ಸುತ್ತಳತೆ 1 ಅಡಿ ಒಳಗೆ ಇರುವ ಗಿಡಗಳು, ಇವುಗಳನ್ನು ಬಿಟ್ಟು ಎಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತ್ತರಿಸಿಕೊಳ್ಳಬೇಕು.

(2) ಸವುದೆಗಿಡ ಕಡಿಯುವಾಗ ಅಥವಾ ಗಾಡಿಲಿ ಸಾಗಿಸುವಾಗ ಯಾವದಾದರು ಸಂದಲ್ ಗಿಡಕ್ಕೆ ಉಪಹತಿ ಉಂಟಾದರೆ ಕಂ ಟ್ರಾಕ್ಟುದಾರನು ಫಾರೆಸ್ಟ್ ಆಫೀಸರು ಗೊತ್ತುಮಾಡುವ ಲುಕ್ಸಾನು ಮೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

(3) ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಸೇರಿಲ್ಲಾ. ಅಲ್ಲದೆ ಫಲಗಳು ಬಿಡುವ ಮರಗಳು ಇತರ ಫಸಾರೆ ಬಾ ಬುಗಳು ಮತ್ತು ಹುಲ್ಲು ಇವು ಯಾವದು ಹರಾಜಿಗೆ ಸೇರಿಲ್ಲಾ. ಯಾವದಾದರು ಮರಗಳನ್ನು ಮನಸ್ಸಾನಿಯಾಗಿ ಕಡದರೆ ಅಂಥಾದ್ದೆಲ್ಲಾ ಇ... ಮಾರಿಫತ್ತು ಕಾಲ್ಸು ಮಾಡಿಸಿ ತಗಲುವ ಲಾಗವಡುನ್ನು ಒಂದುನೂರು ರೂಪಾಯಿನ ಶಿಕ್ಯೂರಟಿ ಹಣದಿಂದ ವಸೂಲು ...ತ್ತೆ.

(4) ಸವುದೆ ಕತ್ತರಿಸುವಣಿ ಮತ್ತು ಸಾಗಿಸತಕ್ಕದ್ದೆಲ್ಲಾ 1903ನೇ ಜೂನ 15ರ ಒಳಗೆ ಪೂರೈಸಿಕೊಳ್ಳಬೇಕು. ಹಾಗೆ ಮಾ ಡದೆ ಇದ್ದರೆ ಮೊದಲು ಪಾವತಿ ಮಾಡಿದ ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಸವುದೆ ಕತ್ತರಿಸುವಣಿ ಮತ್ತು ಸಾಗಿಸಿ ಕೊಳ್ಳುವ ಹಕ್ಕುದಾರಿಯೂ ಸಹಾ ಆ ತಾರೀಖು ನಂತರ ರದ್ದು ಆಗುತ್ತೆ.

(5) ಹರಾಜುಬಗೆ ಬಾಕಿ ಮೊಬಲಗು ಮತ್ತು ವಟ್ಟು ಇಜಾರೆ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 0—1—0 ಆಣೆ ಯಂತೆ ಲೋಕಲ್ ಸೆಸ್ಸು ಸಹಿತವಾಗಿ ಎರಡು ವಾಯಿದೇಲಿ ಪಾವತಿ ಮಾಡಬೇಕು. ಅಂದರೆ ಮೊದಲಿನ ವಾಯಿದೆ 1903ನೇ ಮಾ ರ್ಚಿ ಗುರ್ರು ತಾರೀಖು, ಎರಡನೆ ವಾಯಿದೆ 1903ನೇ ಇಸವಿ ಏಪ್ರಿಲ್ ಗುರ್ರು.

(6) ಆ ವಾಯಿದೆಗೆ ಸರಿಯಾಗಿ ಖಿಸ್ತು ಪಾವತಿ ಮಾಡುವದಕ್ಕೆ ಸಾಕಾದ ಇಸಂ ಜಾಮೀನಿಯೂ ಕೊಡಬೇಕು. ಏನಾದ ರು ಬಾಕಿ ಉಳಿದರೆ ಅಂಥಾ ಮೊಬಲಗನ್ನು ರಿವಿನ್ಯೂ ಕಂದಾಯದಂತೆ ವಸೂಲು ಮಾಡಲಾದೀತು.

(7) ಯಾವದಾದರು ಖಿಸ್ತು ಪಾವತಿ ಮಾಡುವದರಲ್ಲಿ ಸಾವಕಾಶವಾದರೆ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಯುಕ್ತ ತೋರುವಂತೆ ಜುಲ್ಮಾನೆಯು ವಿಧಿಸಲಾದೀತು.

(8) ಫಾರೆಸ್ಟಿನಿಂದ ಸವುದೆಗಾಡಿ ಸಾಗಿಸಿಕೊಳ್ಳುವದಕ್ಕೆ ಪ್ಯಾಸಪೋರಟು ಪಡಿಯಬೇಕು. ಅಲ್ಲಿ ಅಂಥಾ ಪ್ಯಾಸುಗಳನ್ನು ಫಾರೆಸ್ಟ್ ಇಲಾಖೆ ನವುಕರರು ಕೊಡುತ್ತಾರೆ.

(9) ಕಂಪಾರ್ಟುಮೆಂಟಿನಿಂದ ಸಾದೆಯನ್ನು ಯಾವ ದಿವಸವೂ ಸೂರ್ಯೋದಯ ಮುಂಚೆ ಅಥವಾ ಸೂರ್ಯಾಸ್ತಮಯ ವಾದಮೇಲೆ ಸಾಗಿಸಕೂಡದು. ಕತ್ತರಿಸುವಣಿ ಕೆಲಸಕ್ಕಾಗಿ ಕೊಟ್ಟಿರುವ ಕಂಪಾರ್ಟುಮೆಂಟಿನಲ್ಲಿ ಆಗಲಿ ಅಥವಾ ಸವುದೆಗಾಡಿ ಮಾ ರ್ಗದಲ್ಲಿ ಆಗಲಿ ಏನಾದರೂ ಬೆಂಕಿಬಿದ್ದು, ಅದು ಕಂಟ್ರಾಕ್ಟುದಾರನ ಅಥವಾ ಆತನ ಕಡೆ ಜನರ ಅಜಾಗ್ರತೆಯಿಂದ ಉಂಟಾದ್ದೆಂದು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರು ಯೋಚಿಸಲು ಕಾರಣವಿದ್ದರೆ ಅದಕ್ಕೆ ಕಂಟ್ರಾಕ್ಟುದಾರನೆ ಜವಾಬು ಮಾಡಬೇಕು.

ಬಿ. ಹೀರಾ ಸಿಂಗ್,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ತುಮಕೂರು ಡಿಸ್ಟ್ರಿಕ್ಟು.

1902ನೇ ಇಸವಿ ಡಿಸೆಂಬರ ತಾರೀಖು 15ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋಗಳಲ್ಲಿ ಚೌಬೀನ ಸಾಮಾನುಗಳು ಬಿದರುಗಳು ಸಹಾ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಹರಾಜು ನಡಿಸತಕ್ಕ ಅಧಿಕಾರಿಯ ಹೆಸರು.	ಹರಾಜಿಗೆ ಇಡಲ್ಪಡುವ ಚೌಬೀನೆಯ ಮೊತ್ತ.												ಬಿದರುಗಳು.	ಷರಾ.
				ಸಾಗುವಾನಿ ನಾಟಾ.		ಮನ್ನಾ ಜಾತಿ ನಾಟಾ.		ಕಾಡುಜಾತಿ ನಾಟಾ ವಗ್ಯೆರೆ.		ಸಾಗುವಾನಿ ಸರ ವಗ್ಯೆರೆ.		ಮನ್ನಾ ಜಾತಿ ಸರ ವಗ್ಯೆರೆ.		ಕಾಡುಜಾತಿ ಸರ ವಗ್ಯೆರೆ.			
				ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.		
*1	ಮೈಸೂರು ಪುಡಿಯ ಡರ್ಗ.	19—1—03	ಮೈಸೂರು ಡಿಸ್ಟ್ರಿಕ್ಟ ಫಾರೆಸ್ಟ ಆಫೀಸರರು.	307	5795	145	2569	3	61	417	458	...	..	12	55	29545	ಇದರಲ್ಲಿ ನಂಬರು ನಮೂದು ಮಾಡಿರುವ ಡಿಪೋಗಳಿಗೆ ಬಂದಿರುವುದು ಪ್ರತಿ ಡಿಪೋಕ್ಕೆ ಸುಮಾರು 3000 ಅಡಿ ಇರುತ್ತೆ, ಅದೂ ಸಹ ಹರಾಜಾಗುತ್ತೆ.
*2	ನಂಜನಗೂಡು ಡಿಪೋ.	16—1—03		144	2658	304	3498	31	538	1	3	1	2	..	.	6929	

ಷರತ್ತು.—1895ನೇ ಇಸವಿ 25ನೇ ಏಪ್ರೆಲ್ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಕುಂ 1529—R. F. 155-92ನೇ ನಂಬರ್ ನೋಟಿಫಿಕೇಷನ್ ನೋಡಿ. ಚೌಬೀನಾ ಬಗ್ಯೆ.

ಎಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ.

ತಾರೀಖು 19ನೇ ಮಾಹೆ ಡಿಸೆಂಬರ್ 1902ನೇ ಇಸವಿ.

ಮೈಸೂರು ಗೌರ್ನಮೆಂಟ 1901ನೇ ಇಸವಿ ಅಕ್ಟೋಬರ್ ಮಾಹೇ 2ನೇ ಮರ್ಸ್ಯಂನಲ್ಲಿ ಘಾಯಿಷ್ ಆಗಿರುವ 245-1300ನೇ ನಂಬರು ಇಸ್ತಿಹಾರ್ನಾಮಾ XIIನೇ ರೂಲ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ:—

ಈ ಕೆಳಗೆ ನಮೂದಿಸಲ್ಪಡುವ ಫಾರೆಸ್ಟ್ ಮತ್ತು ರವಿನ್ಯೂ ಅಧಿಕಾರಿಗಳು ಹಾಸನ ಡಿಸ್ಟ್ರಿಕ್ಟಿನಲ್ಲಿ ಉಳಿಸಿಕೊಳ್ಳಲ್ಪಡದಿರುವ (ಅನ್‌ರಿಸರ್ವ್ಡ್) ಫಾರೆಸ್ಟುಗಳಲ್ಲಿ ಚೌಬೀನಾ ಮರಗಳು, ಬೊಂಬುಗಳು, ಮತ್ತು ಸೌದೆ ಇವುಗಳನ್ನು ಕತರಾಯಿಸಿ ಸಾಗಿಸಿಕೊಂಡು ಹೋಗತಕ್ಕ ಬಗ್ಗೆ ವಿಧಾಯಕವಾದ ಡ್ಯೂಟೀಯಾನೇ ತೆರಿಗೆ ವಸೂಲಿಯಿಂದ ರಹದಾರೀ ಕೊಡಬಹುದಾದ ಅಧಿಕಾರವನ್ನು ಕೊಡಲ್ಪಟ್ಟವರಾಗಿರುತ್ತಾರೆ.

ನಂಬರು	ಅಧಿಕಾರಿಯ ಹೆಸರು.	ಅಧಿಕಾರದ ತಪಸೀಲ.	ಅಧಿಕಾರ ಚಲಾಯಿಸಬಹುದಾದ ಪರಿಮಿತಿಯಾನೇ ಸರಹದ್ದು.
1	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ...	ಉಳಿಸಿಕೊಂಡಿರುವ ಮತ್ತು ಉಳಿಸಿಕೊಳ್ಳಲ್ಪಡದಿರುವ ಜಾತೀ ನಾಟಾಗಳು, ಬಿದರು, ಹಸೀ ಮತ್ತು ಒಣಸೌದೆ ಇವುಗಳನ್ನು ಕತರಾಯಿಸತಕ್ಕ ಮತ್ತು ಸಾಗಿಸತಕ್ಕ ಬಗ್ಗೆ ಡ್ಯೂಟೀ ವಸೂಲೀಯಿಂದ ರಹದಾರೀ ಕೊಡಬಹುದು.	ಡಿಸ್ಟ್ರಿಕ್ಟಿನಲ್ಲಿ.
2	ಅಮಲ್ದಾರ್ರವರು ...	ಉಳಿಸಿಕೊಳ್ಳಲ್ಪಡದಿರುವ ಜಾತೀ ನಾಟಾಗಳೂ, ಮತ್ತು ಬಿದರು ಇವುಗಳನ್ನು ಕಡಿಯುವದಕ್ಕೂ ಸಾಗಿಸುವದಕ್ಕೂ ತೆರಿಗೇ ವಸೂಲೀಯಿಂದ ಲೈಸೆನ್ಸ್ ಕೊಡಬಹುದು.	ಆಯಾಯ ತಾಲ್ಲೂಕು ಸರಹದ್ದಿನಲ್ಲಿ.
3	ರೇಂಜಾಫೀಸರವರು ...	ಡಿಟ್ಟೋ	ರೇಂಜಿಗೆ ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ಉಳಿಸಿಕೊಳ್ಳಲ್ಪಟ್ಟಿರುವ ಭೂಮಿಯಲ್ಲಿ.
4	ಫಾರೆಸ್ಟರು ...	ಒಣಗಿದ ಸೌದೇಮಾತ್ರ ಕಡಿಯುವದಕ್ಕೂ ಸಾಗಿಸುವದಕ್ಕೂ ತೆರಿಗೆ ವಸೂಲೀಯಿಂದ ಲೈಸೆನ್ಸ್ ಕೊಡಬಹುದು.	ಛಾಜಿನೊಳಗಿರುವ ಸರಹದ್ದಿನಲ್ಲಿ ಉಳಿಸಿಕೊಂಡಿರುವ ಜಮೀನುಗಳಲ್ಲಿನದಕ್ಕೆ.
5	ಶೇಕ್‌ದಾರ್ರು ...	ಡಿಟ್ಟೋ	ಸಂಬಂಧಪಟ್ಟ ಹೋಬಳಿಯಲ್ಲಿ ಉಳಿಸಿಕೊಳ್ಳಲ್ಪಡದಿರುವ ಜಮೀನುಗಳಲ್ಲಿನದಕ್ಕೆ.
6	ಡೆಪ್ಯುಟಿ ಕಮಿಷನರವರ ಆರ್ಡರ್ ಮೇರೆಗೆ ಸ್ಪೆಷಲ್ಲಾಗಿ ಮೊಕರರೂರ್ ಮಾಡಲ್ಪಟ್ಟಿರುವ ಇತರ ಏಜೆನ್ಸೀಮೂಲಕ. (a) ಪಟೇಲ್ ಮತ್ತು ಶ್ಯಾನುಭಾಗರು. (b) ಹೋಬ್ಳಿ ಸ್ಕೂಲ್ ಮೇಸ್ಟರು. (c) (a) ಮತ್ತು (b) ಇವರುಗಳ ಗೈರ್ ಹಾಜರೀ ಸಂದರ್ಭದಲ್ಲಿ ಬರವಣಿಗೆ ಬಲ್ಲ ಇತರರು ಯಾರಾದರು	ಡಿಟ್ಟೋ	ಡೆಪ್ಯುಟಿ ಕಮಿಷನರವರ ಅಪ್ಪಣೇ ಮೇರೆಗೆ ಗೊತ್ತು ಮಾಡಿಕೊಡುವ ಪರಿಸ್ತರಣದೊಳಗೆ.

2. ಸಾಗಿಸಲ್ಪಡುತ್ತಿರುವ ನಾಟು, ಬೊಂಬು, ಮತ್ತು ಸೌದೆ, ಇವುಗಳ ರಹತ್ತನ್ನು ಎಲ್ಲಾ ರವಿನ್ಯೂ, ಫಾರೆಸ್ಟ್, ಮತ್ತು ಪೊಲೀಸ್ ಆಫೀಸರರೂ ಚೆಕ್ಮಾಡುವ ಬಗ್ಗೆ ಇದರಿಂದ ಅಧಿಕಾರ ಕೊಡಲ್ಪಟ್ಟವರಾಗಿರುತ್ತಾರೆ.

ನೋಟಿಫಿಕೇಷನ್, ತಾರೀಖು 31ನೇ ಡಿಸೆಂಬರ್ 1902.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ನಮೂದಿಸುವ ಹಾಸನದ ಡಿಸ್ಟ್ರಿಕ್ಟ್ ಡಿಪೋಗಳಲ್ಲಿರುವ ಫಾರೆಸ್ಟ್ ಪಸಾರೆ ಜಿನಸಿಗಳು ಈ ಕೆಳಗೆ ನಮೂದಿಸಿರುವ ಸ್ಥಳ ಮತ್ತು ತಾರೀಖುಗಳಲ್ಲಿ ಹಾಸನದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದಲಾಗಲಿ ಅಥವಾ ಅವರಿಂದ ನೇಮಿಸಲ್ಪಡಬಹುದಾದ ಇತರ ಆಫಿಸರಿಂದಲಾಗಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತದೆ.

ನಂಬರ್.	ಡಿಪೋ ಹೆಸರು.	ಪಸಾರೆ ಜಿನಸಿ ಹೆಸರು.	ಮೊತ್ತ.	ಹರಾಜು ನಡಿಸಲ್ಪಡುವ ಸ್ಥಳ.	ಹರಾಜು ನಡಿಸಲ್ಪಡುವ ತಾರೀಖು.
			ಮಣ.		
1	ಹಾಸನ ...	ಅಳಲೆಕಾಯಿ ..	ಸುಮಾರು 5500	ಹಾಸನ	2—2—1903
	,, .	ಗೋಂದು .	ಟನ್ $1\frac{1}{2}$		
	,, ...	ಸಿಗೇಕಾಯಿ	ಟನ್ $7\frac{1}{4}$		
	,, ...	ಯಾಲಕ್ಕಿ ಕಾಯಿ .	ಮಣ 12		
2	ಬೇಲೂರು ...	ಅಳಲೆಕಾಯಿ ..	ಮಣ 5500	ಬೇಲೂರು	5—2—1903

ಹರಾಜು ಷರತ್ತು:—1895ನೇ ಇಸವಿ ಮಾರ್ಚಿ 15ರ ಮರ್ಕ್ಯಂ 1529—ಆರ್. ಎಫ್. 155–92ನೇ ನಂಬರು ಗವರ್ನ್ಮೆಂಟ್ ನೋಟಿಫಿಕೇಷನ್‌ಗೆ ಅನುಗುಣವಾಗಿರುತ್ತೆ.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನದ ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 3ನೇ ಡಿಸೆಂಬರು 1902.

ಈ ಕೆಳಗೆ ನಮೂದಿಸಿರುವ ಪಸಾರೆ ಜಿನಸಿಗಳಿಗೆ ಶೀಲ್ಡ್ ಟೆಂಡರಗಳು ಅಂಗೀಕರಿಸಲ್ಪಡುತ್ತವೆ.

ಡಿಪೋ ಹೆಸರು.	ತಪಶೀಲ್.	ಮೊತ್ತ. ಟನ್.	ಹ.	ಪಾ.	ಬಿ.
ಶಿವಮೊಗ್ಗ ಕೋಟೆ ...	ಅಳಲೆಕಾಯಿ	..	10	14	..
	ಶೀಗೆಕಾಯಿ	..	2	..	..
ಸೊರಬ ...	ಅಳಲೆಕಾಯಿ	100	8	56	..
	ಶೀಗೆಕಾಯಿ	18	16	28	..
ಸಾಗರ ...	ಅಳಲೆಕಾಯಿ	84	10	7	..
	ಶೀಗೆಕಾಯಿ		16	84	..
ಚನ್ನಗಿರಿ ...	ಅಳಲೆಕಾಯಿ	..	7	91	..
	ಶೀಗೆಕಾಯಿ	1	5	56	...
ತೀರ್ಥಹಳ್ಳಿ ...	ಅಳಲೆಕಾಯಿ	..	12	62	4

(2) 1903ನೇ ಇಸವಿ ಫೆಬ್ರವರಿ ತಾರೀಖು 16ನೇ ಸೋಮವಾರ ದಿವಸ ಸಾಯಿಂಕಾಲ 2 ಘಂಟೆಗೆ ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಶಿವಮೊಗ್ಗಾ ಮೊಕ್ಕಾಂನಲ್ಲಿ ಹಾಜರಿರುವ ಟೆಂಡರದಾರಗಳ ರೂಬರೂ ಟೆಂಡರಗಳನ್ನು ಒಡಿಯುತಾರೆ.

(3) ಪ್ರತಿ ಒಂದು ಟೆಂಡರಿನ ಸಂಗಡ (100) ಒಂದು ನೂರು ರೂಪಾಯನ್ನು ಹಾಜರು ಮಾಡತಕ್ಕದ್ದು. ಹಾಗೆ ತಿರಸ್ಕಾರದ ಟೆಂಡರ್ ಬಾಬತು ಹಣವನ್ನು ಕೂಡ್ಲೆ ವಾಪಸ್ ಮಾಡಲಾಗುತ್ತೆ.

(4) ಮಂಜೂರು ಮಾಡಲ್ಪಟ್ಟ ಟೇಂಡರದಾರನು ಮಂಜೂರಾದ ಕೂಡ್ಲೆ ಡಿಪಾಜಟ್ಟು ಮೊಬಲಗು ವಜಾ ಜಾತಾ ಕಾಲು ಹಿಸ್ಸೆ ಆಗುವ ಮೊಬಲಗನ್ನು ಫೆಬ್ರವರಿ ತಾರೀಖು 19ರ ವಳಗಾಗಿ ಪಾವತಿ ಮಾಡಬೇಕು. $\frac{3}{4}$ ಮುಕ್ಕಾಲ್ ಹಿಸ್ಸೆ ಮೊಬಲಗನ್ನ 1903ನೇ ಇಸವಿ ಮಾರ್ಚಿ ಆಖೈರ್ ವಳಗಾಗಿ ಪಾವತಿ ಮಾಡಬೇಕು.

(5) ಮೇಲೆ ಕಂಡ ಷರತ್ತಿನಂತೆ ಯಾವ ಮೊಬಲಗನ್ನಾಗಲಿ ಪಾವತಿ ಮಾಡಲಿಕ್ಕೆ ಟೆಂಡರ್‌ದಾರನು ತಪ್ಪಿದಲ್ಲಿ ಠೇವಣಿಗಾಗಿ ಹಾಜರು ಮಾಡಿದ ಯಾ ಪಾವತಿ ಮಾಡಿದ ಮೊಬಲಗು ಎಲ್ಲಾ ಸರಕಾರಕ್ಕೆ ಸೇರಿಸಲ್ಪಡುವದಲ್ಲದೆ ಸದರಿ ಮಾಲು ಪುನಃ ಹರಾಜು ಮಾಡಿಸಲ್ಪಡುವದು. ಈ 2ನೇ ಹರಾಜಿನಲ್ಲಿ ಪೂರಾ ಹಣ ಹುಟ್ಟದೆ ಹೋದಪಕ್ಷ ರೆವಿನ್ಯೂ ಕಂ-

ದಾಯ ಬಾಕಿಯಂತೆ ಸದರಿ ಮೊಬಲಗು ವಸೂಲ್ ಮಾಡಲ್ಪಡುವದು. 2ನೇ ಹರಾಜಿನಲ್ಲಿ ಸರಕಾರಕ್ಕೆ ಫಾಯಿದೆ ಆದರೆ ಪುರು ಹರಾಜುದಾರನು ಫಾಯಿದೆ ಆಗುವ ಮೊಬಲಗ್ಯೆ ಒಪ್ಪಿನಾಗುವದಿಲ್ಲ.

(6) ಹರಾಜುದಾರನು ಹಣವನ್ನು ಪೂರ್ತಿಯಾಗಿ ಪಾವತಿಯಿಂದ 1903ನೇ ಇಸವಿ ಮೇ 16ರ ವೊಳಗಾಗಿ ಜಿನಸಿ ರಫ್ತು ಮಾಡಿಕೊಳ್ಳತಕ್ಕದ್ದು. ಅದಕ್ಕೆ ತಪ್ಪಿದರೆ ಮಾಹೆಯಾನಾ ಶೇಕಡಾ 1ರ ಬಂದು ರೂಪಾಯಿನಂತೆ ಬಟ್ಟು ಮೊಬಲಗ್ಯೆ ಬಾಡಿಗೆ ವಸೂಲ್ ಮಾಡಲ್ಪಡುವದು.

(7) ಟೆಂಡರುದಾರನು ಹರಾಜು ತಾರೀಖು ಲಾಗಾಯಿತು ಆರು ತಿಂಗಳ ವಳಗಾಗಿ ಜಿನಸಿಯನ್ನು ರಫ್ತು ಮಾಡಿಕೊಳ್ಳದೆ ಇದ್ದಲ್ಲಿ ಹರಾಜಿನಲ್ಲಿ ತೆಗೆದುಕೊಂಡ ಬಟ್ಟು ಜಿನಸಿಯ ಮತ್ತು ಪಾವತಿ ಮಾಡಿದ ಹಣದ ಹಕ್ಕನ್ನು ಕಳಕೊಳ್ಳುತ್ತಾನೆ.

(8) ಇತರ ತಪಶೀಲುಗಳನ್ನು ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಕೇಳಿ ತಿಳಕೊಳ್ಳಬಹುದು.

ನೋಟಿಫಿಕೇಷನ್, ತಾರೀಖು 24ನೇ ಡಿಸೆಂಬರ್ 1902.

ಸನ್ 1900ನೇ ಇಸವಿ ಫಾರೆಸ್ಟು ರೆಗ್ಯುಲೇಷನ್ 24ನೇ ಸೆಕ್ಷನ್ ಕ್ಲಾಜು (ಶಿ) ಅನುಸರಿಸಿ ಈ ಕೆಳಗೆ ನಮೂದಿಸಿರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟುಗಳನ್ನ ಬೆಂಕಿಯಿಂದ ಕಾಪಾಡಲು ಏರ್ಪಾಡು ಇಟ್ಟಿರುತ್ತೆ. 1903ನೇ ಇಸವಿ 15ನೇ ಜನವರಿ ಲಾಗಾಯಿತು ಮೇ 15ರ ವರಿವಿಗೆ ಬೇಟೆಯಾಡತಕ್ಕ ವರಿಗೆ ಸದರಿ ಸ್ಟೇಟ್ ಫಾರೆಸ್ಟುಗಳು ಬಂದುಮಾಡಲ್ಪಟ್ಟಿರುತ್ತವೆ. ಶಿವಾಯಿ ಯಾವ ಮನುಷ್ಯನು ಮೇಲ್ಕಂಡ ಫಾರೆಸ್ಟುಗಳಲ್ಲಿ ಗೊತ್ತಾದ ದಾರಿಗಳ ವಿನಹ ಕನ್ಸರ್ವೇಟರ ಅಥವಾ ಅಧಿಕಾರ ಹೊಂದಲ್ಪಟ್ಟ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ ಅಪ್ಪಣೆ ವಿನಹ ಪ್ರವೇಶ ಮಾಡಕೂಡದು. ಅಕ್ರಮಪ್ರವೇಶಿಸುವವರು ಪ್ರಾಸಿಕ್ಯೂಷನ್‌ಗೆ ಒಳಪಡುತ್ತಾರೆ.

ನಂಬರು.	ಫಾರೆಸ್ಟು ಯಾ ಪ್ಲಾಂಟೇಷನ್ ಹೆಸರು.	ತಾಲ್ಲೂಕು ಹೆಸರು.
1	ಶಂಕರಗುಡ್ಡಾ ಭೂತನಪ್ಯೆಲು	ಶಿವಮೊಗ್ಗಾ ತೀರ್ಥಹಳ್ಳಿ
2	ಪುರದಾಳು	ಶಿವಮೊಗ್ಗಾ
3	ಕುಂಚೇನಹಳ್ಳಿ	ಡಿಟ್ಟೋ
4	ಅನಪಿನಗಟ್ಟೆ ಪ್ಲಾಂಟೇಷನ್	ಡಿಟ್ಟೋ
5	ಸಕ್ರೆಬೈಲು ಫಾರೆಸ್ಟು .. .	ಡಿಟ್ಟೋ
6	ಡಿಟ್ಟೋ ಪ್ಲಾಂಟೇಷನ್ ...	ಡಿಟ್ಟೋ
7	ಕೋರನಡೆಹಳ್ಳಿ	ಡಿಟ್ಟೋ
8	ಆಯನೂರು ಸಂದಲ ರಿಜರ್ವ್	ಡಿಟ್ಟೋ
9	ಆಲಕೊಳ ಡಿಟ್ಟೋ	ಡಿಟ್ಟೋ
10	ಕರಲಕೊಪ್ಪ ಡಿಟ್ಟೋ . .	ಡಿಟ್ಟೋ
11	ವೊಂಬಳಿಬೈಲು ಹುಣಸೆಕಟ್ಟೆ	ಡಿಟ್ಟೋ
12	ಆಲದಹಾರ	ಡಿಟ್ಟೋ
13	ಕುಂಸಿ	ಡಿಟ್ಟೋ
14	ಮಸರೂರು	ನಗರ
15	ಕುಕ್ಕವಾಡಾ ಪುಬ್ಬಾಣಿ	ಶಿವಮೊಗ್ಗಾ ಚನ್ನಗಿರಿ ಮತ್ತು ತರೀಕೆರಿ
16	ಚನ್ನಗಿರಿ ಸೆಂದಲ್ ರಿಜರ್ವ್	ಚನ್ನಗಿರಿ
17	ತೆಲಗಡ್ಡೆ ಅರತೆಲಗಡ್ಡೆ . .	ಸೊರಬ
18	ಬೆಟ್ಟದಕುರ್ಲಿ . .	ಡಿಟ್ಟೋ
19	ಶಿದ್ದಹಳ್ಳಿ	ಡಿಟ್ಟೋ
20	ಚಂದ್ರಗುತ್ತಿ	ಡಿಟ್ಟೋ
21	ಕವಡಿ	ಡಿಟ್ಟೋ
22	ಕವಲಿ	ಶಿಕಾರಿಪುರ
23	ತೊಗರಸಿ	ಡಿಟ್ಟೋ
24	ಬಸವನಂದಿಹಳ್ಳಿ	ಡಿಟ್ಟೋ
25	ಕಾಳೇನಹಳ್ಳಿ ಪ್ಲಾಂಟೇಷನ್ ...	ಡಿಟ್ಟೋ
26	ಗಂಗ್ವಾನಸರ ಹಾರೋಕೊಪ್ಪ ಮತ್ತು ಯರೆಕಟ್ಟೆ ಕಾಪಿನ ಬ್ಲಾಕು.	ಡಿಟ್ಟೋ ಹೊನ್ನಾಳಿ
27	ಕರಡಿ ಬೆಟ್ಟ ...	ಶಿಕಾರಿಪುರ
28	ಚಂದ್ರಕಲ	ಡಿಟ್ಟೋ
29	ಬೆಳಂದೂರು	ಡಿಟ್ಟೋ
30	ಮುಲಂದೂರು	ಸಾಗರ
31	ಶಿವಮೊಗ್ಗಾ ರವಿನ್ಯೂ ಪ್ಲಾಂಟೇಷನ್ . .	ಶಿವಮೊಗ್ಗಾ
32	ಶಿಕಾರಿಪುರ ಡಿಟ್ಟೋ	ಶಿಕಾರಿಪುರ

ಎಸ್. ಎ. ಬಾಪೂರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಶಿವಮೊಗ್ಗಾ ಡಿಸ್ಟ್ರಿಕ್ಟ್.

1902ನೇ ಇಸವಿ ಡಿಸೆಂಬರು ತಾರೀಖು 16ರಲ್ಲು.

ಫಾರೆಸ್ಟ್ ಸೆಟ್ಲಮೆಂಟ್, ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು, ಲಕ್ಕವಳ್ಳಿ ಫಾರೆಸ್ಟು ಬಿಡಾವಣೆ.

ಸನ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ:

ಸನ್ 1901ನೇ ಇಸವಿ ಮೇ ಮಾಹೆ 16ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿರುವುದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1901ನೇ ಇಸವಿ ಮೇ ಮಾಹೆ 16ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್‌ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವುದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು ಅಥವಾ ಜಾಗೀರು.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು	ಕೊಪ್ಪ	4370 ಎಕರೆಗಳು	ಲಕ್ಕವಳ್ಳಿ ಫಾರೆಸ್ಟು ಬಿಡಾವಣೆ	ಸ್ಥಳ:—ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿಗೂ ಮತ್ತು ಕಟ್ಲೆಖಾನ್ ವ ಸಂಪಿಗೆಖಾನ್ ಕಾಫಿ ಎಸ್ಟೇಟುಗಳಿಗೂ ಮಧ್ಯೆ ಇರುವ ಡಿಸ್ಟ್ರಿಕ್ಟು ಫಾರೆಸ್ಟಿನ ತುಂಡು. ಚಕ್ಕುಬಂದಿ. ಉತ್ತರಕ್ಕೆ—ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ದಕ್ಷಿಣ ವ ಪೂರ್ವ ಸರಹದ್ದುಗಳು. ಪೂರ್ವಕ್ಕೆ—ನಂದಿಬಟ್ಲು ಗ್ರಾಮದ ಪಶ್ಚಿಮ ಸರಹದ್ದುಗಳು. ದಕ್ಷಿಣಕ್ಕೆ—ಸಂಪಿಗೆಖಾನ್ ವ ಕಟ್ಲೆಖಾನ್ ಎಸ್ಟೇಟುಗಳು ಮತ್ತು ತಾವಿಗೆ ಬೈಲುಮದ ಉತ್ತರ ಸರಹದ್ದುಗಳು ಸಹಾ. ಪಶ್ಚಿಮಕ್ಕೆ—ನಂದೀಗವಿ ಗ್ರಾಮದ ಪೂರ್ವ ಸರಹದ್ದುಗಳು.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟ್ಲಮೆಂಟ್ ಆಫಿಸರವರು, ಕಡೂರು ಡಿಸ್ಟ್ರಿಕ್ಟು.

ತಾರೀಖು 30ನೇ ಡಿಸೆಂಬರ 1902.

ಈ ಕೆಳಗೆ ನಮೂದಿಸಿರುವ ಇಸ್ತಿಹಾರನ್ನು ಸರ್ವರ ತಿಳುವಳಿಕೆ ಬಗ್ಗೆ ಫಾಯಿಷ್ ಮಾಡಿ ಇದೆ:—ಚಿತ್ರದುರ್ಗದ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ಮನ್ನಾ ಜಂಗಲು ಮತ್ತು ಪ್ಲಾಂಟೇಷನ್‌ಗಳನ್ನು 1903ನೇ ಇಸವಿ ಫೆಬ್ರವರಿ ಮಾಹೆ 1ರ ಲಾಗಾಯತು 1903ನೇ ಇಸವಿ ಜೂನ್ ಆಖೈರು ವರಿಗೆ ಬೇಟೆ, ಷಿಕಾರಿ, ವಗೈರೆ ಕೆಲಸಗಳು ಮಾಡದಂತೆ ಬಂದುಮಾಡಿ ಇರುತ್ತೆ. ಸದರಿ ಮನ್ನಾ ಜಂಗಲು ಮತ್ತು ಪ್ಲಾಂಟೇಷನ್‌ಗಳನ್ನು ಮೈಸೂರು ಚೀಫ್ ಕನ್‌ಸರ್ವೇಟರ್ ಸಾ॥ ರವರಿಂದಲಾಗಲಿ ಅಥವಾ ಅಧಿಕಾರ ಹೊಂದಿದ ಇತರ ಡಿಸ್ಟ್ರಿಕ್ಟು ಫಾರೆಷ್ಟು ಆಫಿಸರಿಂದಲಾಗಲಿ ಕ್ರಮವಾಗಿ ಅಧಿಕಾರ ಹೊಂದದ ಯಾವ ಮನುಷ್ಯನು ಪ್ರವೇಶಿಸಕೂಡದು. ಅಕ್ರಮವಾಗಿ ಪ್ರವೇಶ ಮಾಡಿದವರನ್ನು 1900ನೇ ಇಸವಿ XIನೇ ಫಾರೆಷ್ಟು ರೆಗ್ಯುಲೇಷನ್ 24ನೇ ಸೆಕ್ಷನ್ ಪ್ರಕಾರ ಸಿಕ್ಷೆಗೆ ಗುರಿಪಡಿಸಲಾಗುವದು.

1.	ಜೋಗಿಮಟ್ಟಿ ಮನ್ನಾ ಜಂಗಲಿ ಬಡಾವಣಿ ಸಹ ..	ಚಿತ್ರದುರ್ಗ, ಹಿರಿಯೂರು ಮತ್ತು ಹೊಳಲ್ಕೆರೆ ತಾಲ್ಲೂಕುಗಳು.
2.	ನೀರುಥಡಿ ಮನ್ನಾ ಜಂಗಲಿ ..	ಚಿತ್ರದುರ್ಗ ಹೊಳಲ್ಕೆರೆ ದಾವಣಗೆರೆ ತಾಲ್ಲೂಕುಗಳು.
3.	ಮಲೆಬೆನ್ನೂರು ಜಂಗಲಿ	ಹರಿಹರ ಸಬ್ ತಾಲ್ಲೂಕು.
4.	ನೀರ್ಲಗೊಂದಿ ಪ್ಲಾಂಟೇಷನ್	ಚಿತ್ರದುರ್ಗ ತಾಲ್ಲೂಕು.
5.	ಪಿಳ್ಳೆಕೇರಹಳ್ಳಿ ಡಿಟೋ	ಡಿಟೋ
6.	ಚಳ್ಳಕೆರೆ ಡಿಟೋ	ಚಳ್ಳಕೆರೆ.
7.	ಮೊಳಕಾಲ್ಮುರು ಪ್ಲಾಂಟೇಷನ್ ..	ಮೊಳಕಾಲ್ಮುರು ತಾಲ್ಲೂಕು.
8.	ಜಗಳೂರು ಡಿಟೋ	ಜಗಳೂರು ತಾಲ್ಲೂಕು.
9.	ದೇವರ ಗುಡ್ಡ (ರಿಜರ್ವ್‌ಡ್) ..	ಹೊಳಲ್ಕೆರೆ ಮತ್ತು ಹೊಸದುರ್ಗ ತಾಲ್ಲೂಕು.
10.	ಗರ್ಗಾ ಕಾವಲ್ ಡಿಟೋ ..	ಹೊಳಲ್ಕೆರೆ ತಾಲ್ಲೂಕು.
11.	ಕಮರಾ ಕಾವಲ್ ಡಿಟೋ ...	ಮೊಳಕಾಲ್ಮುರು ತಾಲ್ಲೂಕು.
12.	ಹಿರಿ ಅಡವಿ ಡಿಟೋ ...	
13.	ಕುದುರೆಕಣಿವೆ ಮನ್ನಾ ಜಂಗಲು ...	ಹೊಸದುರ್ಗ ತಾಲ್ಲೂಕು.

ಕೆ. ಶ್ಯಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ, ತಾ॥ 11ನೇ ಡಿಸೆಂಬರ 1902ನೇ ಇಸವಿ.

ಮಾರ್ಜಿನ್ನಲ್ಲಿ ನಮೂದ್ಮಾಡಿರುವ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಜೋಡೀ ಬಾಕೀಗೋಸ್ಕರವಾಗಿ ಆಯಾಯ ತಾಲ್ಲೂಕು ಅಮಲ್‌ದಾರ್ ಕಛೇರಿಯಲ್ಲಿ 1903ನೇ ಇಸವಿ ಜನವರಿ ಮಾಹೆ 30ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1.	ಕಾಯಂಗುತ್ತಾ ಕೃಷ್ಣಹಳ್ಳಿ ...	ಚಿಕ್ಕಬಳ್ಳಾಪುರ ತಾಲ್ಲೂಕು.
2.	ಡಿಟೋ ಅಂಬಿಗಾನ ಹಳ್ಳಿ ...	
3.	ಡಿಟೋ ಪುರ ...	
4.	ಡಿಟೋ ಕರಿಯನಪುರ ...	
5.	ಡಿಟೋ ಮಲಸಂದ್ರ ...	ಕೋಲಾರ ತಾಲ್ಲೂಕು.
6.	ಡಿಟೋ ಲಿಂಗಾಪುರ ...	
7.	ಡಿಟೋ ಜೋಡಿ ಮಟ್ನಹಳ್ಳಿ ...	

ಹೆಚ್ಚು ತಪಸೀಲ್ ಬಗ್ಗೆ ಡಿಸೆಂಬರ್ ತಾರೀಖು 18ನೇ ಮರ್ಕ್ಯುಂ 51ನೇ ನಂಬರ್ ಮೈಸೂರ ಗೆಜೆಟ್ಟಿನ 2ನೇ ಭಾಗದ 638, 639, 640, 641, 642, 643, ಮತ್ತು 644ನೇ ನಂಬರು ಪೇಜು ನೋಡತಕ್ಕದ್ದು.

ಹೆಚ್. ದಾಸಪ್ಪ,
ಫಾರ್ ಡೆಪ್ಯುಟಿ ಕಮಿಷನರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 16ನೇ ಡಿಸೆಂಬರ 1902.

1. ಕಂದಾಯದ ಬಾಕೀದಾರನಾದ ಹನುಮಂತೈಯ್ಯನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ ಸನ್ 1903ನೇ ಇಸವಿ ಫೆಬ್ರವರಿ 7ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1899–1900ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 53—5—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟಿರುವ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಮುಂಡಿಗೆ ಹೆಸರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಬೆರಿಜು.			ಸರಕಾರಕ್ಕೆ ಬರಬೇಕಾದ ಹೆಚ್ಚು ಬಾಕಿ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಕೋಲಾರ	ಹೊಳೂರು	ಚಿಕ್ಕ ಹುಣಸೇನಹಳ್ಳಿ	ಪಟೇಲ್ ಗಡ್ಡ ಮುನಿಸ್ವಾಮಪ್ಪ	..	..	..	ಪರಂಪೋಕು	227	11				52	5	6	ವಿಕಾರಿ ಬಾಕಿ
							ಖುಷ್ಕಿ	198	22	55	4	0	0	8	0	ನೋಟಿಸ್ ಫೀ
							ತರಿ	45	17							
							ಬಾಗಾಯತು	31	33				0	8	0	ಹರಾಜ್ ಫೀ
							ಜುಮ್ಲಾ	503	3				53	5	6	ಜುಮ್ಲಾ
								ಜೋಡಿ		295	8	6				
								ಸೆಸ್ಸು		40	2	3	ಪಾವತಿ ಬಡ್ಡಿ ಬರಬೇಕು.			

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರನಾದ ಮುತ್ತು ಕದಹಳ್ಳಿ ಜೋಡಿದಾರ್ ನರಶಿಂಗರಾಯನಿಂದ ಬರಬ್ಬೇಕಾದ ಜವಿರ್ನಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಚೇರಿಯಲ್ಲಿ 1903ನೇ ಇಸವಿ ಜನವರಿ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತು ದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901–1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 102—2—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ ಹಿಸ್ಸೆ ಬ್ಲಾಕಿನ ಹೆಸರು.	ಜಮೀನು. ವಿಸ್ತೀರ್ಣ ಎಕರೆ ಗುಂಟೆ ಅಥವಾ ಚದುರಗಜ.	ಜಮೀನು. ತರಹೆ.	ಜಮೀನು. ಕಂದಾಯ.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಮಾಲೂರು	ನರಸಾಪುರ	ಜೋಡಿ ಮುತ್ತು ಕದಹಳ್ಳಿ	ಜೋಡಿದಾರ್ ನರಶಿಂಗರಾವ್	...	ಜೋಡಿ ಮುತ್ತು ಕದಹಳ್ಳಿ ಗ್ರಾಮಕ್ಕೆ ಚಕ್ಕುಬಂದಿ. ಪೂರ್ವಕ್ಕೆ—ಕೊತ್ತಾಂಡಹಳ್ಳಿ ಮತ್ತು ಶಿವಾರಪಟ್ಟಣದ ಅಮಾನಿಕೆರೆ ಸರಹದ್ದು. ಪಶ್ಚಿಮಕ್ಕೆ—ಶಿವಾರಪಟ್ಟಣದ ಸರಹದ್ದು. ಉತ್ತರಕ್ಕೆ—ಶೀತಪಲ್ಲಿ ಸರಹದ್ದು. ದಕ್ಷಿಣಕ್ಕೆ—ಶಿವಾರಪಟ್ಟಣದ ಸರಹದ್ದು. ಈ ಮಧ್ಯೆ ಇರುವ ಪೂರಾಗ್ರಾಮ.					ರೂ. ಆ. ಪೈ. 101—2—0 ಬಾಕಿ 1—0—0 ಖರ್ಚು 102—2—0 ಜುಮ್ಲಾ ಚಾಲ್ತಿ ಬಡ್ಡಿ ಸಹಾ ಬರಬೇಕು.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ.

ತಾರೀಖು 11ನೇ ಡಿಸೆಂಬರ್ 1902, ಶಿವಮೊಗ್ಗಾ.

1901—1902ನೇ ಸಾಲುಖೈರು ವರಿಗೆ ಸರ್ಕಾರಕ್ಕೆ ಬರಬೇಕಾದ ಕಂದಾಯ ಬಾಕಿಗಾಗಿ ಶಿವಮೊಗ್ಗಾ ತಾಲ್ಲೂಕ ತಟ್ಟೆಕೆರೆ ಇನಾಂ ಗ್ರಾಮವು 1903ನೇ ಇಸವಿ ಜನವರಿ ತಾರೀಖು 20ನೇ ದಿವಸ ಶಿವಮೊಗ್ಗಾ ತಾಲ್ಲೂಕು ಕಚೇರಿ ಯಲ್ಲಿ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪ್ಸೀಲುಗಳ ಬಗ್ಗ್ಯೆ ಡಿಸೆಂಬರ್ ತಾರೀಖು 18ನೇ ಮೈಸೂರು ಗೆಜೆಟ್ಟಿನಲ್ಲಿ ಛಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮಿಷ್ನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 17ನೇ ಡಿಸೆಂಬರ್ 1902.

ತಾರೀಖು 13ನೇ ಡಿಸೆಂಬರ್ 1902ನೇ ರಾತ್ರಿ ಹೊಳಲ್ಕೆರೆ ತಾಲ್ಲೂಕು ಲಾಕಪ್ಪಿನಿಂದ ಫರಾರಿ ಆದ ಖೈದಿ ಮುರಿಗೆಪ್ಪನ ಚಹರೆ ತಪಶೀಲ್.

ಹೆಸರು—ಕುಕ್ಕೆ ಮುರಿಗೆಪ್ಪ; ವಯಸ್ಸು—25 ವರುಷಗಳು, ಜಾತಿ—ಸಾದು ಲಿಂಗಾಯಿತ, ತಂದೆ ಹೆಸರು—ಕುಕ್ಕೆ ಸಂಕಪ್ಪ, ಕಸಬು—ಜಿರಾಯಿತು, ವಾಸಸ್ಥಳ—ಹೊಳಲ್ಕೆರೆ.

ಚಹರೆ.

ಎತ್ತರ ಅಡಿಗಳು 5, ಎಣೆಗೆಂಪು ವರ್ನ; ಬಲ ಮೊಳಕೈಮೇಲೆ 2 ಮೈಲ ಕಲೆಗಳು ಇವೆ. ಎಡಪಕ್ಕೆ ಮೇಲೆ 9 ಮೈಲ ಕಲೆಗಳು ಇವೆ. ಮುಖದಮೇಲೆಲ್ಲಾ ಮೈಲ ಕಲೆ ಬಹಳ ಇವೆ. ಕೋಲು ಮುಖ, ಎಡಗಾಲಿನ ಹರ್ಡಿನ ಮೇಲುಗಡೆ ಬಾಡು ಕುರುವಿನ ಕಲೆ ಇದೆ.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜಿ ನಂಬರ್ 145.

ಅರ್ಜಿದಾರ ಮೈಸೂರು ಕಾಳಮ್ಮನ ಗುಡಿ ಬೀದಿಯಲ್ಲಿರುವ ಶಿಂಗಾಚಾರಿ ಮಗ ಚಿಕ್ಕಾಚಾರಿ ಮೈನರಾದ. ಮೈಸೂರು ಸ್ಥಳದ ಫವತಿ ಆದ ದಾಸಾಚಾರಿ ಉರಫ್ ಅಂಣೈಯ್ಯನ ಮಗ ನರಸುಹ್ಮಾಚಾರಿಯ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ನರಸುಹ್ಮಾಚಾರಿಗೆ ಭಾವನು ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ಚಿಕ್ಕಾಚಾರಿಯು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1903ನೇ ಇಸವಿ ಜನವರಿ ತಾರೀಖು 16ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡಲಾಗಿದೆ.

ಸನ್ 1902ನೇ ಇಸವಿ ಡಿಸೆಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟಿನ ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 166.

ಅರ್ಜೀದಾರ ಮಳವಳ್ಳಿಯಲ್ಲಿರುವ ಸ್ಮಾರ್ತ ಬ್ರಾಹ್ಮಣ ಅಶ್ವಥ ಶಾಸ್ತ್ರಿಗಳ ಮಗ ಎ. ನರಸುಂಹೈಯ್ಯ ಮೈನರಾದ ಮಳವಳ್ಳಿ ಸ್ಥಳದ ಫವತಿ ಆದ ಕೃಷ್ಣಾಪಂಡಿತರ ಮಗ ರಾಮಾಪಂಡಿತನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರಾಮಾಪಂಡಿತನಿಗೆ ಸೋದರ ಮಾವನು ಆಗಬೇಕೆಂಬ ಹಕ್ಕಿನ ಮೇಲೆ ಮಳವಳ್ಳಿ ಸ್ಥಳದ ಎ. ನರಸುಹೈಯ್ಯನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1903ನೇ ಇಸವಿ ಜನವರಿ ತಾರೀಖು 26ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ್ 1902ನೇ ಇಸವಿ ಡಿಸೆಂಬರು ತಿಂಗಳು 23ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 181.

ಅರ್ಜೀದಾರ ಚಾಮರಾಜನಗರದ ತಾಲ್ಲೂಕು ಹೆಬ್ಬೂರಲ್ಲಿ ವಾಸವಾಗಿರುವ ಪೇಷ್ಕರ್ ಓವರಶೀರು ಅಳಶಿಂಗ್ರಾಚಾರ್ರ ಮಕ್ಕಳು ಕೃಷ್ಣೈಯ್ಯಂಗಾರ್ ಮೈನರಾದ ಹೆಬ್ಬೂರು ಸ್ಥಳದ ಘವತಿ ಆದ ಕರೀಘಟ್ಟದ ವೆಂಕಟಾಚಾರ್ರ ಮಗಳು ಮುತ್ತಮ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಮುತ್ತಮ್ಮನಿಗೆ ಸೋದರ ಮಾವನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೆಬ್ಬೂರು ಸ್ಥಳದ ಕೃಷ್ಣೈಯ್ಯಂಗಾರ್ ಎಂಬುವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಫಿಕೇಟ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1903ನೇ ಇಸವಿ ಜನವರಿ ತಿಂಗಳು 29ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡಲಾಗಿಧೆ.

ಸನ್1902ನೇ ಇಸವಿ ಡಿಸೆಂಬರ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್1902—1903ನೇ ಇಸವಿ ಅರ್ಜೀ ನಂಬರ 238.

ಮೃತಪಟ್ಟ ದೇವಮ್ಮಣ್ಣಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ತಿರುಮಕೂಡ್ಲು ನರಸೀಪುರದ ತಾಲ್ಲೂಕು ಮೂಗೂರಲ್ಲಿರುವ ದ್ಯಾವಣ್ಣ ಮೈನರ್, ಗಾರ್ಡಿಯನ್ ತಮ್ಮಡಿ ಕಳಸಯ್ಯ, ಮೃತಪಟ್ಟ ಸದರೀ ದೇವಮ್ಮಣ್ಣಿಯವರಿಗೆ ಮಗ ಆಗಬೇಕೆಂಬ ಹಕ್ಕುದಾರಿಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ಮೂಗೂರು ವಾಸಸ್ಥರಾಗಿ ಮೃತಪಟ್ಟ ದೇವಮ್ಮಣ್ಣಿಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಫಿಕೇಟ ಬಗ್ಗೆ ಈ ಕೋರ್ಟಿಗೆ ಛಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವಮ್ಮಂಣಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಸೆಂಬರು ತಿಂಗಳು 12—15ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 248.

ಮೃತಪಟ್ಟ ಪುಟ್ಟಮ್ಮಣ್ಣಿಯಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಕತ್ವಾಡಿಪುರದ ಅಗ್ರಹಾರದಲ್ಲಿರುವ ಪುಟ್ಟಮ್ಮಣ್ಣಿಯವರ ಮಗಳು ಅಕ್ಕಯ್ಯಮ್ಮ ಉರಫ್ ಲಕ್ಷ್ಮಮ್ಮಂಣಿ, ಮೃತಪಟ್ಟ ಸದರೀ ಪುಟ್ಟಮ್ಮಣ್ಣಿಯಮ್ಮನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದಲ್ಲಿ ವಾಸಸ್ಥರಾಗಿ ಮೃತಪಟ್ಟ ಪುಟ್ಟಮ್ಮಂಣ್ಣಿಯಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಫಿಕೇಟ ಬಗ್ಗೆ ಈ ಕೋರ್ಟಿಗೆ ಛಾಯಿಷ್ಮಾಡಿರುತ್ತಾರೆ.

ಸದರೀ ದಾರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್1903ನೇ ಇಸವಿ ಜನವರಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟಮ್ಮಣ್ಣಿಯಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಈರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಸೆಂಬರ್ ತಿಂಗಳು 13—15ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 266.

ಮೃತಪಟ್ಟ ಕುಪ್ಪಮ್ಮ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಕೃಷ್ಣರಾಜ ಮೊಹಲ್ಲಾ ಕತ್ತವಾಡಿಪುರದ ಅಗ್ರಹಾರದಲ್ಲಿರುವ ವೈಷ್ಣವ ದೇಶಸ್ಥ ಶ್ರೀನಿವಾಸಾಚಾರ್ರ ಕುಟುಂಬ ನಾಗೂಬಾಯಿ, ಮೃತಪಟ್ಟ ಸದರೀ ಕುಪ್ಪಮ್ಮನವರಿಗೆ ವೋರಗಿತ್ತಿ ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಕುಪ್ಪಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಛಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಪ್ಪಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಸೆಂಬರು ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 275.

ವೃತಪಟ್ಟ ಪುಟ್ಟಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೊಡ್ಡಬಳ್ಳಾಪುರದ ತಾ|| ವರ್ಕ್‌ಸೀಫ್ ಕೋರ್ಟಿನ ಭತ್ತಾ ಅಮೀನ್ ಕಡಬದ ರಾಯಸದ ಸುಬ್ಬಣ್ಣನ ಮಗ 1ನೇ ಗುಂಡಪ್ಪ, 2ನೇ ಸದರಿ ಯವರ ತಮ್ಮ ತುಮಕೂರು ಡಿ|| ಗುಬ್ಬಿ ತಾಲ್ಲೂಕು ಕಡಬದಲ್ಲಿರುವ ರಾಯಸದ ಶೀತಾರಾಮಯ್ಯ, ವೃತಪಟ್ಟ ಸದರೀ ಪುಟ್ಟಮ್ಮನವರಿಗೆ ದಾಯಾದಿರು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ದೇವರಾಜಮೊಹಲ್ಲಾ ಕೊತ್ವಾಲ ರಾಮಯ್ಯನವರ ಬೀದಿಯಲ್ಲಿ ವಾಸಸ್ಥರಾಗಿ ವೃತಪಟ್ಟ ಪುಟ್ಟಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜನವರಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಪುಟ್ಟಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1902ನೇ ಇಸವಿ ಡಿಸೆಂಬರ್ ತಿಂಗಳು 13—15ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 281.

ವೃತಪಟ್ಟ ಗಣೇಶಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಮೈಸೂರು ದೇವರಾಜಮೊಹಲ್ಲಾದಲ್ಲಿರುವ ಹಸರವಾಣಿ ಗಣೇಶಯ್ಯನವರ ಹೆಂಡತಿ ಲಿಂಗಮ್ಮ, ವೃತಪಟ್ಟ ಸದರೀ ಗಣೇಶಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ವೃತಪಟ್ಟ ಗಣೇಶಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜನವರಿ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಗಣೇಶಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1902ನೇ ಇಸವಿ ಡಿಸೆಂಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 284.

ವೃತಪಟ್ಟ H. P. ಜನಾರ್ದನಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಬೆಂಗಳೂರು ಶ್ರೀನಿವಾಸಾಚಾರ್) ಮನೆಯಲ್ಲಿ (ಡೋರ್ ನಂಬರು 47) ಇರುವ ಕೃಷ್ಣಮೂರ್ತಿ ಮೈನರ್ಕ್, ಗಾರ್ಡಿಯನ್ ತಾಯಿ ನಂಜಮ್ಮ, ವೃತಪಟ್ಟ ಸದರೀ H. P. ಜನಾರ್ದನಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ವೃತಪಟ್ಟ H. P. ಜನಾರ್ದನಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜನವರಿ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ H. P. ಜನಾರ್ದನಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1902ನೇ ಇಸವಿ ಡಿಸೆಂಬರ್ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರು 285.

ವೃತಪಟ್ಟ ಕೆಂಪಾಬೋಯಿ ಮತ್ತು ಶಿದ್ದಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಮಳವಳ್ಳಿ ಬೆಸ್ತಗೇರಿಯಲ್ಲಿರುವ ಬೆಸ್ತರ ಮಾಗಾಬೋಯಿ ಮಕ್ಕಳು 1ನೇ ಸುಬ್ಬ, 2ನೇ ಮಾದಾ, 3ನೇ ನಂಜ, ವೃತಪಟ್ಟ ಸದರೀ ಕೆಂಪಾಬೋಯಿ ಮತ್ತು ಶಿದ್ದಮ್ಮನಿಗೆ ಮೊಮ್ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮಳವಳ್ಳಿ ಬೆಸ್ತಗೇರಿ ಸ್ಥಳದ ವಾಸಸ್ಥರಾಗಿ ವೃತಪಟ್ಟ ಕೆಂಪಾಬೋಯಿ ಶಿದ್ದಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಕೆಂಪಾಬೋಯಿ ಮತ್ತು ಶಿದ್ದಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1902ನೇ ಇಸವಿ ಡಿಸೆಂಬರ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 286.

ಮೃತಪಟ್ಟ ರಂಗಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮಂಡಿಮೊಹಲ್ಲಾ ಕಾಳಮ್ಮನಗುಡಿ ಬೀದೀಲಿರುವ ರಂಗಶೆಟ್ಟರ ಮಕ್ಕಳು ಗೋವಿಂದಶೆಟ್ಟಿ, ಲಕ್ಷ್ಮೀ ನಾರಾಯಣಶೆಟ್ಟಿ ವೈ|| ಗಾ|| ತಾಯಿ ಬಾಲಮ್ಮ, ಮೃತಪಟ್ಟ ಸದರೀ ರಂಗಶೆಟ್ಟರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ರಂಗಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಸೆಂಬರ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 287.

ಮೃತಪಟ್ಟ ರಾಜಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಲಷ್ಕರ್ ಮೊಹಲ್ಲಾ ಗರಡಿ ಸಂದಿಲಿರುವ ಶಿವಾಚಾರ ಜಾತಿ ಗಂಗಣ್ಣನ ಮಗ ಪುಟ್ಟಯ್ಯ, ಮೃತಪಟ್ಟ ಸದರೀ ರಾಜಮ್ಮನವರಿಗೆ ಮೈದನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರಾಜಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್1903ನೇ ಇಸವಿ ಜನವರಿ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಜಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸನ್ 1902ನೇ ಇಸವಿ ಡಿಸೆಂಬರು ತಿಂಗಳು 18ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್1902—1903ನೇ ಇಸವಿ ಅರ್ಜೀ ನಂಬರ್ 298.

ಮೃತಪಟ್ಟ ವೈರಮುಡಿ ಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಫ್ರೆಂಚ್‌ರಾಕ್ಸ್ ಸಬ್ ತಾ|| ಕಿರಂಗೂರು ಹೋಬಳಿ ಬಲ್ಲೇನಹಳ್ಳಿ ಗ್ರಾಮದಲ್ಲಿರುವ ಪವತಿಯಾದ ವೈರಮುಡಿ ಹೆಂಡತಿ ನಂಜಮ್ಮ ಮೃತಪಟ್ಟ ಸದರೀ ವೈರಮುಡಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಕಿರಂಗೂರು ಹೋಬಳಿ ಬಲ್ಲೇನಹಳ್ಳಿ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ವೈರಮುಡೀರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೈರಮುಡೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಸೆಂಬರ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

ಬೆಂಗಳೂರು ಪ್ರಿ. ಮುನ್ಸೀಫ್ ಕೋರ್ಟಿನಲ್ಲಿ.

1902—1903ನೇ ಇಸವಿ ಒರಿಜಿನಲ್ 628

ವಾದಿ.	ಪ್ರತಿವಾದಿಗಳು.
ಬೆಂಗಳೂರು ಸಿದ್ದಿಕಟ್ಟೇಲಿರುವ ಕಲ್ಯಾಣಿ ಶ್ರೀನಿವಾಸಾಚಾರ್.	1ನೇ ಸುಬ್ಬಮ್ಮ. 2ನೇ ವೆಂಕಮ್ಮ. 3ನೇ ಭಾಗೀರಥಮ್ಮ. 4ನೇ ವೆಂಕಮ್ಮ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಬೆಂಗಳೂರು ಸಿದ್ದಿಕಟ್ಟೇಲಿ ಬೆಂಗಳೂರು ಸ್ಥಳದ ಜನಗಳ ಸಹಾಯದಿಂದ ಬ್ರಾಹ್ಮಣರ ರಾತ್ರಿ ಭೋಜನಕ್ಕಾಗಿ ನಡಿಯುತ್ತಿರುವ ಧರ್ಮಾನ್ನಛತ್ರದ ಕಾರ್ಯಗಳನ್ನು ನಡಿಸತಕ್ಕ ಬಗ್ಯೆ ಈ ವಾದಿಯನ್ನು ಡಿಟೋ ಜನಗಳು ಮೊಕರೂರ್ ಮಾಡಿರುತ್ತಾರೆಂತಲೂ, ಡಿಟೋ ಛತ್ರಕ್ಕೆ ಈ ಪ್ರತಿವಾದಿಗಳ ಸಮ್ಮಂಧಿಯಾದ ಶಿಂಡೆ ಶೀಪಪ್ಪನವರ ಆಸ್ತಿಯಿಂದ 155—4—9 ರೂಪಾಯಿಗಳು ಬರಮಾಡಿಕೊಳ್ಳಲು ದಾವಾ ತರಬೇಕಾಗುತ್ತೆಯಾಗಿ ಸದರಿ ದಾವಾಕ್ಕೆ ಈ ಛತ್ರದ ಸಹಾಯಕರಾಗಿರುವ ಅನೇಕ ಜನಗಳು ವಾದಿಯಾಗಿ ಶೇರಲು ಅಸಾಧ್ಯವಾಗಿರುವದರಿಂದ ವಾದಿಯು ಒಬ್ಬನೇ ದಾವಾ ತರಬಹುದೆಂದು ಸಿ. ಪ್ರೊ. 30ನೇ ಸೆ|| ಪ್ರಕಾರ ಹುಕುಂ ಕೊಡಿಸಬೇಕೆಂತಲೂ, ವಾದಿಯು ಮನವೆ ಮಾಡಿಕೊಂಡಿರುತ್ತಾನಾಗಿ ಸದರಿ ದಾವಾಕ್ಕೆ ವಾದಿಗಳಾಗಿ ಶೇರಬೇಕೆಂಬ ವಿಶಿಷ್ಟ ಜನಗಳೂ 1903ನೇ ಇಸವಿ ಜನವರಿ 10ನೇ ತಾರೀಖು ದಿವಿ 11 ಘಂಟೆಗೆ ಕೋರ್ಟು ರೂಬರೂಬ್ ಹಾಜರಾಗತಕ್ಕದ್ದು.

1902ನೇ ಇಸವಿ ಡಿಸೆಂಬರ್ 23ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎ. ಗೋಪಾಲಯ್ಯಂಗಾರ್,
ಪ್ರಿನ್ಸಿಪಲ್ ಮುನ್ಸೀಫ್.

ತುಮಕೂರು ಮುನ್ಸೀಫ್ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ॥ ನಂಬರ್ 395.

ಮೃತಪಟ್ಟ ಬಿ. ವಿ. ಕೃಷ್ಣಸ್ವಾಮ್ಯೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಬಿ. ವೆಂಕಟರಮಣ್ಯೈಯ್ಯಂಗಾರ್ರು, 2ನೇ ಚಿನ್ನಪ್ಪ, 3ನೇ ವರದರಾಜಾ, 4ನೇ ತಿರುಮಲಾಚಾರ್ 2—3—4ನೇ ಅರ್ಜೆದಾರು ಮೈನರ್, ಗಾರ್ಡಿಯನ್ 1ನೇ ಅರ್ಜೆದಾರ್ ಈ ಅರ್ಜೆದಾರು, ಮೃತಪಟ್ಟ ಸದರೀ ಬಿ. ವಿ. ಕೃಷ್ಣಸ್ವಾಮ್ಯೈಯ್ಯಂಗಾರ್ರಿಗೆ ಮಕ್ಕಳಾಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರಲ್ಲಿ ವಾಸಮಾಡುವ ಸದರೀ ಅರ್ಜೆದಾರು, ಚಿಕ್ಕಮಗಳೂರು ವಾಸಸ್ಥರಾಗಿ ಮೃತಪಟ್ಟ ಮುನ್ಸಿಫ್ ಕೋರ್ಟು ಹೆಡ್ಮುನಷಿ ಬಿ. ವಿ. ಕೃಷ್ಣಸ್ವಾಮ್ಯೈಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಮೈಸೂರು ಸ್ಟೇಟ್ ಲೈಫ್ ಇನ್ಷ್ಯೂರೆನ್ಸ್ ಪಾಲಿಶಿಗಳ ಬಾಬತು ಒಟ್ಟು 748 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ಸಕ್ಸೆಷನ್ ಸರಟಿಫಿಕೇಟ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರ ಅರ್ಜಿಯನ್ನು ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿ. ವಿ. ಕೃಷ್ಣಸ್ವಾಮ್ಯೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಸೆಂಬರ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ಶೇಷಗಿರಿರಾವ್,
ಮುನ್ಸೀಫ್.

ಚಿಕ್ಕಮಗಳೂರು ಮುನ್ಸೀಫ್ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ॥ ನಂಬರ್ 116.

ಮೃತಪಟ್ಟ ಚಿಕ್ಕಮಗಳೂರು ತಾಲ್ಲೂಕು ಕೆಳಗೂರು ದೇವಪ್ಪಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಪಟೇಲ್ ವೀರಪ್ಪಗೌಡ, ಸದರೀ ಮೃತಪಟ್ಟ ದೇವಪ್ಪ ಗೌಡರಿಗೆ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಮೃತಪಟ್ಟ ಸದರೀ ದೇವಪ್ಪಗೌಡರಿಗೆ ಪವತಿ ನಂಜೇಗೌಡ ಬಿನ್. ವೀರೇಗೌಡನಿಂದ ಬರಪೇಕಾದ 22—12—93ನೇ ಮುರ್ಕಂ ರಿಜಿಸ್ಟರಿ ದಸ್ತಾವೇಜು ಸಮ್ಮಂಥ 500 ಐದುನೂರು ರೂಪಾಯಿ ಬರಬೇಕಾಗಿರುತ್ತೆ. ಈ ಮೊಬಲಗು ವಸೂಲ್ಮಾಡಲು ಈ ಕೋರ್ಟಿನಲ್ಲಿ ಅರ್ಜೆದಾರನ ತಂದೆ ಮೃತಪಟ್ಟ ದೇವಪ್ಪಗೌಡನು ದಾವಾಮಾಡಿ ಇರುತ್ತಾನೆ. ಈ ಬಾಬತು 500 ಐದುನೂರು ರೂಪಾಯಿಗಳು ಬರಬೇಕಾಗಿರುತ್ತೆ. ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ಅರ್ಜಿದಾರ್ ಪಟೇಲ್ ವೀರಪ್ಪಗೌಡರ ಅರ್ಜಿಯನ್ನ ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವಪ್ಪಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಶಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಮಿ॥ ನಂಬರ್ 140.

ಮೃತಪಟ್ಟ ತೊಗರಿ ಹಂಕಲು ಬಸವೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ತೊಗರಿ ಹಂಕಲು ಮಲ್ಲೇಗೌಡನು ಮೃತಪಟ್ಟ ಬಸವೇಗೌಡನಿಗೆ ತಾನು ತಂದೆಯಾಗಬೇಕೆಂದೂನ್ನೂ ಮೃತಪಟ್ಟ ಬಸವೆಗೌಡನಿಗೆ ಮಲ್ಲೇಗೌಡನೆಂಬ 12 ವರುಷದ ಹುಡುಗನು ಮತ್ತು ಹೆಂಡತಿ ದ್ಯಾವಮ್ಮ ಹಗ್ಗಡತಿ ಯೆಂತಲೂ ಇದ್ದಾರೆ. ಇವರುಗಳು ಅರ್ಜೀದಾರನ ಪೋಷಣೆಯಲ್ಲಿ ಇರುತ್ತಾರೆಂತಲು ಮೃತಪಟ್ಟ ಬಸವೇಗೌಡಗೆ ನಂದಿಬಟ್ಟು ಮಜ್ಜಿಗೆ ಗೌಡರ ಮಗ ರಂಗೇಗೌಡ ಈತನ ತಮ್ಮ ಕಾನೆಗೌಡ ಇವರು 29—3—97ರಲ್ಲಿ ಬರಿಸಿಕೊಟ್ಟಿಯಿದ್ದ ರಿಜಿಸ್ಟರ್ ಅಡವು ದಸ್ತಾವೇಜಿನ ಬಾಬತು 6,900 ರೂಪಾಯಿಗಳ ಪೈಕಿ 4,600 ರೂಪಾಯಿಗಳು ವಸೂಲ್ ಜಾತಾ ಬಾಕಿ ಮೊಬಲಗಿನಲ್ಲಿ 1902ನೇ ಇಸವಿ ಮಾರ್ಚಿ ಆಖ್ಯೆರಿಗೆ 400—0—0 ರೂಪಾಯಿಗಳು ಬರಬೇಕಾಗಿರುತ್ತೆ. ಸದರಹು ದಸ್ತಾವೇಜಿನ ಮೇಲೆ ಬರತಕ್ಕ ಬಾಕಿ ಪೈಕಿ 1902ನೇ ಇಸವಿ ಕಂತಿನ ಬಾಕಿ ಮೊಬಲಗು ವಸೂಲ್ ಮಾಡುವ ಬಗ್ಯೆ ಅಥವಾ ದಾವಾ ಮಾಡುವ ಬಗ್ಯೆ ಅರ್ಜೀದಾರ ಮೈನರಿನ ಪೋಷಕರ್ತನಾಗಿಯು ಇರುತ್ತಾನಾದ್ದರಿಂದ 1901ನೇ ಇಸವಿ VIIನೇ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಖಾಯಿಷ್ ಮಾಡಿರುತ್ತಾನೆ.

ಸದರೀ ಅರ್ಜೀದಾರ್ ತೊಗರಿ ಹಂಗಲು ಮಲ್ಲೇಗೌಡನ ಅರ್ಜಿಯನ್ನ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಮೃತಪಟ್ಟ ತೊಗರಿಹಂಕಲು ಬಸವೇಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1902ನೇ ಇಸವಿ ಡಿಶೆಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಆನಂದರಾವ್ ಸಿಂಧ್ಯೆ,
ಮುನ್ಸೀಫ್.

ಚಿತ್ರದುರ್ಗದ ಮುನ್ಸೀಫ್ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ॥ ನಂಬರ 318.

ಮೃತಪಟ್ಟ ಪಟ್ಟಣಸೆಟ್ಟಿ ಮಲ್ಲಪ್ಪನೆಂಬುವನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಶಿದ್ರಾಮಕ್ಕ ಎಂಬುವಳು ಮೃತಪಟ್ಟ ಪಟ್ಟಣಸೆಟ್ಟಿ ಮಲ್ಲಪ್ಪನಿಗೆ ಮಗಳಾಗಬೇಕು. ಸದರೀ ಯವರಿಗೆ ಬರತಕ್ಕ ಬಾಕಿ 550 ರೂಪಾಯಿನ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರಳಾದ ಹಿರಿಯೂರಲ್ಲಿರುವ ಶಿದ್ರಾಮಕ್ಕಾ ಎಂಬುವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು 6ನೇ ತಾರೀಖಿನಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟ್ಟಣಸೆಟ್ಟಿ ಮಲ್ಲಪ್ಪನೆಂಬುವನಿಗೆ ಮೈಸೂರ್ ರೈಲ್ವೆ ಲೋನ್ ಬಾಬತು 1107—935ನೇ ಪ್ರೋ ನೋಟು ಬಾಬತು 500 ರೂಪಾಯಿಗಳು ಇವು ಬಡ್ಡಿ ಸುಮಾರು 50 ರೂಪಾಯಿಗಳು ಜುಮ್ಲಾ 550 ರೂಪಾಯಿಗಳಿಗೆ ಹಕ್ಕುದಾರರಾದ ವಿಸಿಷ್ಟಜನಗಳು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1902ನೇ ಇಸವಿ ಡಿಸೆಂಬರು ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ಎಲ್. ಶ್ರೀಕಂಠೇಶಗೌಡ,
ಮುನ್ಸೀಫ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೇ ಡಿಸೆಂಬರ್ 1902.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಗೆ ಸನ್ 1903ನೇ ಇಸವಿ ಫೆಬ್ರುವರಿ ಗುರ್ರೇ ಲಾಗಾಯತು 1904ನೇ ಇಸವಿ ಜನವರಿ 31ನೇ ತಾರೀಖಿನ ವರೆಗೂ ಆ 2 ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಗೆ ಬರುವ 4 ಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ, ಸನ್1903ನೇ ಇಸವಿ ಜನವರಿ ತಾರೀಖು 20ನೇ ಮಂಗಳವಾರ ಹಗಲು 10 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು :—

1ನೇ ಧಾನ್ಯಕ್ಕೆ ... .. ದರಖಾಸ್ತು
2ನೇ ಮಸಾಲೆ ಜಿನಸುಗಳಿಗೆ ... ... ದರಖಾಸ್ತು
3ನೇ ಇತರ ಅವಶ್ಯಕವಾದ ಪದಾರ್ಥಗಳ ಬಗ್ಗೆ ... ದರಖಾಸ್ತು

4. ಧಾನ್ಯಕ್ಕೆ ... ... ರೂಪಾಯಿ 200
ಮಸಾಲೆ ಜಿನಸುಗಳಿಗೆ ... „ 50
ಇತರ ಅವಶ್ಯಕವಾದ ಪದಾರ್ಥಗಳಿಗೆ ... „ 150

ಈ ಮೇರಿಗೆ ನಗದಾಗಿ ಆಗಲಿ, ಕರೆನ್ಸೀನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರ್ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೇ ಧಾನ್ಯ.

	ಸುಮಾರು ಬೇಕಾದ್ದು.	
ಅಕ್ಕಿ	56,000	ಪೌಂಡು
ರಾಗಿ	240,000	„
ತೊಗರೀಬ್ಯಾಳೆ	11,000	„
ಅವರೇಬ್ಯಾಳೆ	19,000	„

2ನೇ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು.

1	ಪೌಂಡ್	ಮೆಣಸಿನಕಾಯಿ
12	ಔನ್ಸ್	ಕೊತ್ತುಂಬರೀ ಬೀಜ
2	,,	ಅರಿಸಿನ
1	,,	ಜೀರಿಗೆ
6	,,	ಮೆಣಸು
3	,,	ಪೋಸ್ತುಕಾಯಿ
1	,,	ಮೆಂತ್ಯ
1	,,	ಸಾಸಿವೆ
1	,,	ಕರಿಬೇವು ಸೊಪ್ಪು

* ಖಾರದ ಸಾಮಾನು ಯಾ ಪುಡಿ 4,200 ಪೌಂಡು

ಈರುಳ್ಳಿ	...	6,000	,,
ಬೆಳ್ಳುಳ್ಳಿ	.	600	,,
ಹುಣಸೇಹಣ್ಣು	...	6,000	,,
ಉಪ್ಪು	...	8,400	,,
ಮೆಣಸು	...	100	,,

3ನೇ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು	...	24,000	ಪೌಂಡ್.
ಬಳ್ಳೆ ಯಂಣೆ	...	2,400	,,
ತುಪ್ಪಾ	..	1,200	,,
ತರಕಾರಿ	...	72,000	,,
ರವೆ	...	200	,,
ಸಕ್ಕರೆ	....	300	,,
ಕಾಫಿ	...	50	,,
ಟೀ	..	10	,,
ರೊಟ್ಟಿ	..	1,000	ಪೌಂಡು.
ಹಾಲು	...	4,500	,,
ಶೀಗೇಕಾಯಿ	..	400	,,
ಗೇರುಬೀಜ	..	300	,,
ದೀಪದೆಂಣೆ	..	350	,,
ಪೊರಕೆಗಳು	.	1,500	ಅದದು
ಕೊಬ್ಬರಿ ಎಂಣೆ	..	100	ಪೌಂಡು

* ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಬಾರದು.

7. ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಖೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗಿ ದರದ ಮೇಲೆ ಹಣ ಪಾವತಿಯಾದೀತು.

8. ಸೂಪರ್‌ಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರನ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲೆ ಜಿನಸಿಗೆ	ರೂ.	100.
ಇತರ ಅವಶ್ಯಕವಾದ ಪದಾರ್ಥಗಳಿಗೆ ...	ರೂ.	300.

ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

10. ಕಂಟ್ರಾಕ್ಟುದಾರರಿಗೆ ನಗದಾಗಿ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತು ಪ್ರತಿ ತಿಂಗಳ 1ನೇ ತಾರೀಖು ನಂತರ ಕಂಟ್ರಾಕ್ಟುದಾರರಿಗೆ ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಒಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರ್‌ಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದೆ ಜುರ್ಮಾನೆ ಹಾಕುವರು ಮತ್ತು ಪದೇ ಪದೇ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದು ಮಾಡಿ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರ್‌ಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಖೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ ತರಕಾರಿಯನ್ನೂ ಮತ್ತು ತೋಟದ ಬೆಳೆನನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲ್‌ನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರ್‌ಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಕಂಟ್ರಾಕ್ಟುಗಳು ಮೈಸೂರು ದೇಶದ ಜೈಲುಗಳ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು. ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟು ಕೊಂಡಿದಾರೆ.

18. ಕಂಟ್ರಾಕ್ಟುದಾರರು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲ ದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚಾದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತಿಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ನೋಟಿಸ್.

ನೋಟಿಸ್ ಮೂಲಕ ತಿಳಿಯಪಡಿಸುವದೇನಂದರೆ.—1903ನೇ ಇಸವಿ ಫೆಬ್ರುವರಿ ಗುರ್‍ರೇ ತಾರೀಖು ಲಾಗಾಯತು 1904ನೇ ಇಸವಿ ಜನವರಿ 31ನೇ ತಾರೀಖು ವರವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡು ಕವರುನಿಸಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು 1903ನೇ ಇಸವಿ ಜನವರಿ 20ನೇ ಮಂಗಳವಾರ ದಿವಿ 10 ಘಂಟೇವರಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿ ಇರುವ ಪ್ರೋಟುಗಳನ್ನು ಆಗಲಿ ಡಿಪಾಜಿಟ್ ತಾರೀಖು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್‌ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ "ಸಾಮಾನುಗಳು ತಯಾರಾಗತಕ್ಕ ಬಗ್ಗೆ ಬೇಕಾಗಿರುವ ಸಾಮಾನುಗಳನ್ನು ಸಪ್ಲೈ ಮಾಡತಕ್ಕ ಬಗ್ಗೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತಮ್ಮ ಆಫೀಸಿನಲ್ಲಿ ಹಾಜರಿರುವ ದರಖಾಸ್ತುದಾರ್‍ರು ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ಪಡದು ನೋಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟರವರು ವಹಿಸಿ ಇದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ಒಳ್ಳೆ ಸರಕುಗಳನ್ನು ಯಾವ ರೇಟಿನಲ್ಲಿ ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್‍ಮಾಡಲ್ಪಟ್ಟ ಡಿಪಾಜಿಟ್ ಮೊಬಲಗನ್ನು ವಾಪಸು ಕೊಡುವದಿಲ್ಲ ಮತ್ತು ಸದರೀಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಒಂದು ವಾರದೊಳಗಾಗಿ ಕಂಟ್ರಾಕ್ಟು ಬಾಂಡು ಬರದುಕೊಡದೇ ಹೋದರೂ ಅಥವಾ ಜಾಮೀನ್ ತರೀಕ್ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟ್ಟೋ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿ ಕೊಳ್ಳಲ್ಪಡುತ್ತೆ.

8. ಯಾವ ಮೊಬಲಗು ಅಡ್ವಾನ್ಸ್ ತರೀಕ್ ಕಂಟ್ರಾಕ್ಟುದಾರನಿಗೆ ಪ್ರತಿ ತಿಂಗಳಲ್ಲೂ ದೊರೆಯಲಾರದು. ಪ್ರತಿ ತಿಂಗಳಲ್ಲೂ ಕಂಟ್ರಾಕ್ಟುದಾರನಿಂದ ಹಾಜರು ಮಾಡಲ್ಪಟ್ಟ ಸಾಮಾನುಗಳ ಕ್ರಯವನ್ನು ಸೂಪರಿಂಟೆಂಡೆಂಟರವರು ಗುರ್‍ರೇ ತಾರೀಖು ಕಳದ ನಂತರ ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ಕೊಡುವರು.

9. ಕಂಟ್ರಾಕ್ಟನ್ನು ಶಿಕಮಿ ಕಂಟ್ರಾಕ್ಟಾಗಿ ಕೊಡಕೂಡದು.

10. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಷರತ್ತು ಮೇರೆ ನಡಿಯದೇ ತಪ್ಪಿದರೂ ಅಥವಾ ಕಮ್ತಿರಖಂ ಸಾಮಾನುಗಳನ್ನು ಹಾಜರು ಮಾಡಿದರೂ, ಜೈಲ್ ಸೂಪರಿಂಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳ ವರಿಗೂ ಜುರ್ಮಾನೆ ವಿಧಿಸಬಹುದು. ಹೀಗೆ ಪದೇಪದೇ ಮಾಡಿದರೆ ಕಂಟ್ರಾಕ್ಟನ್ನು ವಜಾ ಮಾಡಿ ಜಾಮೀನ್ ತರೀಕ್ ಕೊಟ್ಟ ಮೊಬಲಗನ್ನು ಸರಕಾರಕ್ಕೆ ತೆಗದುಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡದುಕೊಂಡರೆ ಆ ವಿಷಯದಲ್ಲಿ ಜೈಲ್ ಸೂಪರಿಂಟೆಂಡೆಂಟರು ಮಾಡುವ ಹುಕುಮೇ ಆಖೈರು ಹುಕುಂ ಆಗಿಯಿಧೆ.

12. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನ ಇಟ್ಟುಕೊಳ್ಳಲು ಒಂದು ಕೊಠಡಿ ಕೊಡಲ್ಪಡಬಹುದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದವೇಳೆ ಕೊಡಬಹುದು.

13. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

14. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊತೆಯಲ್ಲಿ ಹಜರು ಮಾಡಬೇಕು.

15. ಮೇಲೆ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ್ ಕಟ್ಟಿದರೆ ಮೇಲ್ಕಂಡ ತಾರೀಖಿನಲ್ಲಿ ತುಪಟಗಳು ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಗೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದು.

16. 25 ಪೌಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

17. ಜಿನಸಿಗಳ ಸುಮಾರು ನಿಬಂಧನೆ ಈ ಕೆಳಗೆ ನಮೂದಿಸಿದೆ, ಆದರೆ ಇಷ್ಟೇ ಆಗುತ್ತೆಂದು ನಿರ್ಣಯಿಸಿ ಇಲ್ಲಾ.

18. ಈ ಕಂಟ್ರಾಕ್ಟು.—ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಜನ್ಸುಯವರ ಮಂಜೂರಾತಿಗೆ ವಳಪಟ್ಟಿರತಕ್ಕದ್ದು.

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.	ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
ಸ್ಪಿಕ್ಕುಗ್ಲೊ ಯಾನೆ ವಜ್ರ 25 ಪವನಿನ ಮಣಕ್ಕೆ..	200	ಕಾರ್ಟ ರೀಲ್ ಯಾವತರಹಾದ್ದೇ ಆಗಲಿ, ನಂ. 20–	
ಅಳಲೆಕಾಯಿ ಡಿಟ್ಟೋ ..	275	30 - 40 ಮತ್ತು ಡರ್ಜ ಬಂದಕ್ಕೆ ...	252
*ಚೌಳು (ಬಿಲ್ಲೆಯಾಗಿ) ಡಿಟ್ಟೋ	1,200	ಹತ್ತಿ ಮಣ ಬಂದಕ್ಕೆ 25 ಪವನು ...	250ಪವನು
ಅಡಿಕೆ ಡಿಟ್ಟೋ ...	50	ಜೇನುಮೇಣ (ಹಳದಿ) ...	30 ಪವನು
ಕಾಂಚು ಡಿಟ್ಟೋ ...	50	ಹುಣಸೇಹಣ್ಣು (ಕೊಳೆ ಕಲ್ಲು ವಗೈರೆ ಇಲ್ಲದ್ದು) 25 ಪವನಿನ ಮಣಕ್ಕೆ	2000ಪವನು
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು) ..	300 ಸೇರು		
ಹರಿದೆ) 25 ಪವನಿನ ಮಣಕ್ಕೆ	200ಪವನು	ಕೆಂಪು ಸಾಬೂನು (ಬಿಲ್ಲೆಗಳು) ಡಿಟ್ಟೋ ...	50 ಪವನು
ತಾಂಬ್ರದ ತಗಡು ನಾನಾತರ ದಪ್ಪದ್ದು ..	600	*ಹಳದಿ ಹೂ ಡಿಟ್ಟೋ ...	1500ಪವನು
ಹಿತ್ತಾಳೇ ತಗಡು ಡಿಟ್ಟೋ ..	50	ಬಿಳೀ ಗೋಂದು (ಕೊಳೆ ಇಲ್ಲದ್ದು) ಡಿಟ್ಟೋ ...	25ಪವನು
ಪಟಿಕಾರವು 25 ಪವನಿನ ಮಣಕ್ಕೆ	250	ದೋಬಿಸ್ಯಾಂಡು ಯಾನೆ ಮರಳು ಡಿಟ್ಟೋ ..	200 ಮಣ
*ಅರಗು ಪೆಪ್ಪರ ಅಥವಾ ರಂಗೂನದು ಕಡ್ಡಿ ಇಲ್ಲದ್ದು	700 ಪವನು	ಬೆಸಿಯುತಕ್ಕ ಸೀಸ ಡಿಟ್ಟೋ ...	75ಪವನು
*ಕೆಂಪುಮರ ಸಣ್ಣಾಗಿ ಸೀಳಿದ್ದು ..	200ಪವನು	ಟಂಕವು (ಬಿಳಿಗಾರ) ಡಿಟ್ಟೋ ..	75ಪವನು
ಬಿಳೀ ಸೀಮೆ ಸುಣ್ಣ ...	20 ಪವನು	ಸಾಲಿಮೊನಿಯಾಕ್ ಡಿಟ್ಟೋ ...	75ಪವನು
*ಅವಲ್‌ನೀಲಿ ಅವಲ್ ದುಯ್ಯಂ ಮತ್ತು ಸಿಯ್ಯಂ ರಖಂ	150 ಪವನು	ಆಷಫಾಲಟ್ ಡಿಟ್ಟೋ ...	10 ಮಣ
		ಭತ್ತದ ಹೊಟ್ಟು ಡಿಟ್ಟೋ ..	100 ಮಣ
ಅವಲ್ ಟೂರು	6 ಪೀಪಾಯಿ	ನೀಲೀಬೀಜ ಡಿಟ್ಟೋ ..	600 ಪವನು
ಮರದೆಣ್ಣೆ	3 ಮಣ	ಅವಲ್ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ ...	150 ಚೀಲ
ಗೋಪಿ	200 ಪವನು	ಸೆಣಬಿನದಾರ ಬಂದು ಡರ್ಜ ವುಂಡೆಗೆ	100 ವುಂಡೆ
ಅವಲ್ ಕೊಬರಿ ಎಣ್ಣೆ ..	56 ಪವನು	ತೆಂಗಿನ ನಾರು (ಅವಲ್ ಕಳ್ಳಿಕೋಟೇದು) 25 ಪವನಿನ ಮಣಕ್ಕೆ ..	10000 [illegible]
ಅವಲ್ ಅಚ್ಚಳ್ಳೆಣ್ಣೆ ..	50 ಪವನು		
ಅವಲ್ ದೀಪದ ಎಣ್ಣೆ ..	75 ಪವನು	ಸವುದೆ (ಸಣ್ಣಾಗಿ ಸೀಳಿದ್ದು) ...	1200 ಮಣ
ಅವಲ್ ಬಿಳೀ ಚೆತ್ತು 1ನೇ ಕ್ಲಾಸು ..	350 ಪವನು	1ನೇ ರಖಂ ಚಿತ್ರದುರ್ಗದ ಕತ್ತರಿಸಿದ ಕುರಿ ತುಪಟ 25 ಪವನು ಮಣಕ್ಕೆ	1500ಪವನು
ತೊಳದ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್ ..	30 ಗಜ		
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪು ಬಟ್ಟೆ	30 ಗಜ	ಪುಂಡೀನಾರು (ಬಿಳೀದು) 25 ಪವನು ಮಣಕ್ಕೆ ..	800 ಪವನು
ಬಂದು ಅಡಿ ಅಗಲವುಳ್ಳ ಟೆಂಟುಗನಿ (ಚೀಲಕ್ಕೆ) ಗಜಕ್ಕೆ	100 ಗಜ	*ತೂತು ಇಲ್ಲದ ಅವಲ್ ಕೋಣನ ಚಕ್ಕಳ ..	10
		ಡಿಟ್ಟೋ ಹದಮಾಡಿದ ಎತ್ತಿನ ಚಕ್ಕಳ ..	10
ನೇವಿ ಕ್ಯಾನವಸ್ ನಂ. 1 ಗಜಕ್ಕೆ ..	30 ಗಜ	ಡಿಟ್ಟೋ ಡಿಟ್ಟೋ ಸಾಧಾರಣದ್ದು ..	5
ಡಿಟ್ಟೋ ನಂ. 2 ಡಿಟ್ಟೋ ..	5 ಗಜ	ಬೇಯಿಸಿದ ಅಗಸೇಬೀಜದ ಎಣ್ಣೆ $2\frac{1}{2}$ ಸೇರಿನ ಸೀಸೇಕ್ಕೆ	50 ಸೀಸೆ
ಡಿಟ್ಟೋ ನಂ. 3 ಡಿಟ್ಟೋ ...	5 ಗಜ		
*ಬಾರ್ ಐರನು ಯಾನೆ ಕಬ್ಬಿಣ 25 ಪವನು ಮಣಕ್ಕೆ	200 ಪವನು	ಟರ್ಪಂಟೈನ್ ಎಣ್ಣೆ ಡಿಟ್ಟೋ ..	30 ಸೀಸೆ
ಹೂಪು ಐರನು ಡಿಟ್ಟೋ ...	200ಪವನು	ಗೋಪಾಲ್ ವಾರ್‌ನಿಷ್ ಡಿಟ್ಟೋ ..	10 ಸೀಸೆ
ಅರ ವಂದಕ್ಕೆ .	50	ಬ್ಲಾಕ್ ಜಪಾನ್ ಡಿಟ್ಟೋ ..	10 ಸೀಸೆ
ಹಳೇ ಹಿತ್ತಾಳೆ 25 ಪವನು ಮಣಕ್ಕೆ ..	200ಪವನು	ಅವಲ್ ಫ್ರೆಂಚ್ ಪಾಲೀಷ್ ಸೀಸೇಕ್ಕೆ ..	50 ಸೀಸೆ
*ಕತ್ತರಿಸಿದ ಮಂಡ್ಯದ ಬಿಳೀತುಪಟ 25ಪವನು ಮಣಕ್ಕೆ 1ನೇ ರಖಂ	500ಪವನು	ಕಾಡಿಗೆ ಸೀಸೇಕ್ಕೆ ..	10 ಸೀಸೆ
		ಒಣಗಿದ ಕರ್ಪೂರ ಪವನಿಗೆ ...	20ಪವನು
*2ನೇ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ ..	1000ಪವನು	ಷೀಟು ಐರನು ಎಂಬ ಕಬ್ಬಿಣ 25ಪೌನು ಮಣಕ್ಕೆ	200ಪವನು
*ಕುರಿಮರಿತುಪಟ ಚಿತ್ರದುರ್ಗದ್ದು (ಬ್ಲಾಕು ಕಿ ಮ್ಡ್ಡಿ)	2500ಪವನು	ಸತ್ತು 25 ಪವನು ಮಣಕ್ಕೆ ...	200ಪವನು
*ಜುನಾಮು ಯಾನೆ ಸ್ಕ್ರಮ್ಡ ಬ್ಲಾಕು ...	5000ಪವನು	*ಹಾಸಿಗ್ಗೆ ಗೌನ್ ಹಾಕುವ ಬಟ್ಟೆ ಗಜಕ್ಕೆ ..	30 ಗಜ
ಡಿಟ್ಟೋ ಬಿಳೀ ತುಪಟ ...	3000ಪವನು	*2ನೇ ರಖಂ ಮಂಡ್ಯದ ಕತ್ತರಿಸಿದ ಬೀಳೀತುಪಟ 25 ಪವನು ಮಣಕ್ಕೆ	1500ಪವನು
*ಡಿಟ್ಟೋ ಮರಿ ತುಪಟ ...	1000 ಪವನು		
ಡಿಟ್ಟೋ ಗ್ರೇಯಾನೆ ಬಿಳೀ ತುಪಟ ..	3000 ಪವನು		

ತುಪಟವನ್ನು ಕೆಲಸಕ್ಕೆ ಉಪಯೋಗಿಸುವದಕ್ಕೆ ಮುಂಚೆ ಅದು ಹೊಡೆದು ಕ್ಲೀನುಮಾಡಿ ಮತ್ತು ತೊಳದು ಉಪಯೋಗಿಸಲ್ಪಡುತ್ತೆ.

ತೇಗದಮರ, ಹೊನ್ನೇಮರ, ಕರೀಮರ ಮತ್ತು "ರೋಸುವುಡ್ಡು" ಮರ ಇವುಗಳ ತೊಲೆಗಳನ್ನು ಅಡಿ ಲೆಖ್ಖದ ಮೇಲೆ ತೆಗೆದು ಕೊಳ್ಳುತ್ತೆ.

ಇನ್ನೂ ಇತರ ಚಿಲ್ರೇ ಸರಕುಗಳನ್ನು ಕಂಟ್ರಾಕ್ಟುದಾರನು ಮಾರ್ಕೆಟ್ಟಿನಲ್ಲಿ ಮಾರುವ ದರದ ಮೇರೆ ಸಪ್ಲೈ ಮಾಡತಕ್ಕದ್ದು,

ಜಿ. ಹ್ಯೂಂ ರೈಟ್,

ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್, ಬೆಂಗಳೂರು.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್ನಾಮಾ.

ದರಜಾಗಾ ಬೆಂಗಳೂರು, ತಾರೀಖು 17ನೇ ಡಿಸೆಂಬರ್, ಸನ್ 1902ನೇ ಇಸವಿ.

ನಂ. 63. ಸನ್1903ನೇ ಇಸವಿ ಏಪ್ರೆಲ್ ತಾರೀಖು 1ರ ಲಾಗಾಯಿತು 1906ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ ಮೂರು ವರುಷಗಳ ಪರಿಯಂತರ ಕೊಡಗು ಸೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾವಸ್ತುಗಳನ್ನು ಮಾರುವದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವ ಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ. ಇವುಗಳಿಗೆ ದರಖಾಸ್ತುಗಳು ಇದರಡಿ ಕಾಣಿಸಿರುವ ಷರತ್ತುಗಳಿಗೆ ಒಳಪಟ್ಟು ಮಾಡತಕ್ಕದ್ದು.

2. ದರ್ಖಾಸ್ತಿನ ಜೊತೆಯಲ್ಲು (100) ರೂಪಾಯಿ ಶೇವಣಿಯನ್ನು ಕಳುಹಿಸತಕ್ಕದ್ದು. ದರ್ಖಾಸ್ತನ್ನು ರವಾನಿಸುವಲ್ಲಿ ಲಿಪಾಪೆಯಮೇಲೆ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಬಿಕ್ರಿ ಮಾಡುವ ಬಗ್ಯೆ ಮಾಡಲ್ಪಟ್ಟ ದರ್ಖಾಸ್ತು ಎಂಬದಾಗಿ ಬರದು ಕೊಡಗು ಕಮಿಷನರವರ ಕಚೇರಿಗೆ 1903ನೇ ಮಾರ್ಚಿ ಮಾಹೆ 5ನೇ ತಾರೀಖು ಗುರುವಾರ ಮಧ್ಯಾಹ್ನ 12 ಘಂಟೆ ಯಾ, ಅದಕ್ಕೆ ತತ್ಪೂರ್ವ ತಲಪುವಂತೆ ಕೊಡಗು ಕಮಿಷನರವರ ಹೆಸರಿಗೆ ಕಳುಹಿಸತಕ್ಕದ್ದು. ನಂತರ ಬರುವ ದರ್ಖಾಸ್ತುಗಳನ್ನು ಅಂಗೀಕರಿಸುವದಿಲ್ಲವು.

3. ಸದರಿ ದರಖಾಸ್ತುಗಳಲ್ಲಿ ದರ್ಖಾಸ್ತುದಾರರು ಸದರಿ ಪದಾರ್ಥಗಳನ್ನು ಸ್ವಾತಂತ್ರ್ಯವಾಗಿ ಮಾರುವದಕ್ಕೆ ಸರ್ಕಾರಕ್ಕೆ ಸಾಲಿಯಾನ ಇಷ್ಟೇ ತೆರಿಗೆ ಕೊಡುತ್ತೇನೆಂಬದಾಗಿ ನಮೂದಿಸಬೇಕು. ಕೊಡಬೇಕಾದ ತೆರಿಗೆಯನ್ನು ಪ್ರತಿ ವರುಷದ ಅಂದರೆ ಜಾಲೈ, ಅಕ್ಟೋಬರ್, ಜನವರಿ, ಈ ಮಾಹೆಗಳ 1ನೇ ತಾರೀಖಿನ ದಿವಸ ಪಾವತಿ ಮಾಡತಕ್ಕದ್ದು.

4. ದರ್ಖಾಸ್ತುಗಳು 1903ನೇ ಇಸವಿ ಮಾರ್ಚಿ ತಾರೀಖು 6ನೇ ಶುಕ್ರವಾರ ಮಧ್ಯಾಹ್ನ ಮಡಿಕೇರಿಯಲ್ಲಿ ಹಾಜರಿರುವ ದರ್ಖಾಸ್ತುದಾರರುಗಳ ರೂಬರೂ ಕಮಿಷನರವರಿಂದ ಅಥವಾ ಅವರ ಗೈರಹಾಜರಿಯಲ್ಲಿ ಅಸಿಸ್ಟೆಂಟ್ ಕಮಿಷನರವರಿಂದ ಖುಲ್ಲಾ ಮಾಡಲ್ಪಡುವವು. ದರ್ಖಾಸ್ತುಗಳ ಆಖೈರ್ವಸ್ತೆಯು ಕೊಡಗು ಚೀಫ್ ಕಮಿಷನರವರಿಗೆ ಹೊಂದಿರುತ್ತೆ ಮತ್ತು ಅವರು ಯಾವ ಕಾರಣವೂ ನಮೂದಿಸದೆ ಯಾವದೊಂದು ಯಾ, ಎಲ್ಲಾ ದರ್ಖಾಸ್ತುಗಳನ್ನು ತಿರಸ್ಕರಿಸುವ ಎಲ್ಲಾ ಸ್ವಾತಂತ್ರ್ಯವನ್ನು ತಮಗೇನೆ ಉಳಿಸಿಕೊಂಡಿರುತ್ತಾರೆ. ಯಾರ ದರ್ಖಾಸ್ತುಗಳು ತಿರಸ್ಕರಿಸಲ್ಪಡುತ್ತವೋ ಅಂಥಾ ದರ್ಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಶೇವಣಿ ಮೊಬಲಗು ಅವರಿಗೇನೆ ವಾಪಸ್ಮಾಡಲ್ಪಡುವದು.

5. ಚೀಫ್ ಕಮಿಷನರವರಿಂದ ಯಾವ ದರ್ಖಾಸ್ತು ಮಂಜಾರ್ಮಾಡಲ್ಪಡುತ್ತದೋ ಅಂಥಾ ದರ್ಖಾಸ್ತುದಾರನು ಮೊದಲು ಕೊಟ್ಟಿರುವ ಶೇವಣಿ ದೇಖಿಲ್ ಸಾಲಿಯಾನದ ಬರವಶ ಕೊಟ್ಟಿರುವ ತೆರಿಗೆ ಮೊಬಲಗು ಪೈಕಿ ಅರ್ಧ ವರುಷಕ್ಕೆ ಸರಿಯಾಗುವಷ್ಟು ಮೊಬಲಗನ್ನು 3 ದಿವಸದ ವಳಗಾಗಿ ನಗದು ಆಗಲೀ, ಕರ್ರೆನ್ಸಿ ನೋಟ್ ಮೂಲಕವಾಗಲೀ, ಅಥವಾ ಗವರ್ನ್ಮೆಂಟ್ ಪ್ರಾಮಿಸರಿ ನೋಟ್ ಮೂಲಕವಾಗಲೀ, ಶೇವಣಾತಿ ಇಡತಕ್ಕದ್ದು. ಈ ಡಿಪಾಜಿಟ್ ಹಣವನ್ನು 1906ನೇ ಇಸವಿ ಮಾರ್ಚಿ ತಾ॥ 31ಕ್ಕೆ ಮುಗಿಯುವ ಅರ್ಧವರುಷಕ್ಕೆ ಸಲ್ಲಬೇಕಾದ ಕಿಸ್ತಿಗೆ ಹಿಂದಲಿಂದ ಸರ್ಕಾರಕ್ಕೆ ವಜಾ ಮಾಡಿಕೊಳ್ಳಲ್ಪಡುವದು ಮತ್ತು ಚೀಫ್ ಕಮಿಷನರವರಿಂದ ಮಂಜಾರ್ಮಾಡಲ್ಪಟ್ಟ ತಾರೀಖಿನಿಂದ 10 ದಿವಸದ ವಳಗಾಗಿ ಸದರಿ ದರ್ಖಾಸ್ತುದಾರನು 1878ನೇ ಇಸವಿ ನಂಬರ 1ರ ಅಫೀಮು ಆಕ್ಟಿನ ರೂಲ್ಸ್ ಮೇರೆ ನಡದುಕೊಳ್ಳುವದಕ್ಕೆ ಬದ್ಧನಾಗಿರುತ್ತೇನೆಂಬದಾಗಿ ನೇಮಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ಒಂದು ಒಡಂಬಡಿಕೆಯನ್ನು ಬರದು ಕೊಡಬೇಕು ಮತ್ತು ಅದರಲ್ಲಿ ಕಂಡ ಷರತ್ತು ಪ್ರಕಾರ ನಡದುಕೊಳ್ಳುವದಕ್ಕೋಸ್ಕರ ಜಾಮಿನ್ ಸಹ ಕೊಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟಿರುವ ಶೇವಣಾತಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟು ಸದರೀ ಕಂಟ್ರಾಕ್ಟು ಬೇರೆ ವಿಧವಾಗಿ ವ್ಯವಸ್ತೆ ಮಾಡಲ್ಪಡುವದು.

6. ಕಂಟ್ರಾಕ್ಟುದಾರನು ಸಲಿಕೆ ಮಾಡಬೇಕಾಗುವ ತಾರೀಖಿಗೆ ಸರಿಯಾಗಿ ಯಾವ ಖಿಸ್ತಿನಲ್ಲಾಗಲೀ ಮೊಬಲಗು ಕಟ್ಟುವದಕ್ಕೆ ತಪ್ಪಿದ ಪಕ್ಷದಲ್ಲಿ ಆ ಕೂಡಲೆ ಕಂಟ್ರಾಕ್ಟನ್ನು ರದ್ದು ಮಾಡುವದಕ್ಕೂ ಶೇವಣಿ ಹಣವನ್ನು ಜಫ್ತಿಮಾಡಿ ಸದರೀ ಗುತ್ತಿಗೆಯನ್ನು ಕಂಟ್ರಾಕ್ಟುದಾರನ ಜವಾಬ್ದಾರಿಯಾ, ನಷ್ಟದಮೇಲೆ ಪುನಹ ಹರಾಜು ಮಾಡುವದಕ್ಕೆ ಕೊಡಗು ಕಮಿಷನರವರು ಸ್ವತಂತ್ರರಾಗಿರುತ್ತಾರೆ.

7. ಕೊಡಗು ದೇಶದಲ್ಲಿ ಮೇಲ್ಕಂಡ ಪದಾರ್ಥಗಳನ್ನು ಮಾರುವದಕ್ಕೆ ತಾಲ್ಲೂಕ ಅಂಗಡಿಗಳು ನೇಮಕ ಮಾಡಲ್ಪಟ್ಟಿವೆ. ಮಡಿಕೇರಿ ಮಹದೇವಪ್ಯಾಟೆಯಲ್ಲಿ ಒಂದು, ವೀರಾಜೇಂದ್ರ ಪ್ಯಾಟೆಯಲ್ಲಿ ಒಂದು, ಗೋಣಿಕೊಪ್ಪಲ್ಲಿ ಒಂದು ಮತ್ತು ಸೋಮವಾರ ಪ್ಯಾಟೆಯಲ್ಲಿ ಒಂದು.

8. ಮೇಲ್ಕಂಡ 7ನೇ ಕಲಂನಲ್ಲಿ ನಮೂದಿಸಿರುವ ಅಂಗಡಿಗಳ ವಿನಹ ಕಮಿಷನರವರ ಸ್ಪೆಷಲ್ ಅಪ್ಪಣೆ ಸಿವಾಯಿ ಹೆಚ್ಚು ಅಂಗಡಿಗಳಿರಕೂಡದು.

9. ಮೇಲೆ ನಮೂದಿಸಲ್ಪಟ್ಟಿರುವ ಅಂಗಡಿಗಳಲ್ಲಿ ಚಿಲ್ಲರೆ ಬಿಕರಿ ಮಾಡುವದಕ್ಕೋಸ್ಕರವಾಗಿ ಗುತ್ತಿಗೆದಾರನಿಂದ ಇಡಲ್ಪಟ್ಟ ಜನಗಳಿಗೆ ಫಾರ್ನಂನಿಂದ ನೇಮಕ ಮಾಡಲ್ಪಟ್ಟ ನಮೂನೆಯಲ್ಲಿ ಕೊಡಗು ಕಮಿಷನರವರಿಂದ ಮಂಜೂರ್ ಮತ್ತು ಕೌಂಟರಸೈನ್ ಮಾಡಿ ಕೊಡೋಣಾದ ಲೈಸೆನ್ಸಗಳನ್ನು ಕೊಟ್ಟಿರತಕ್ಕದ್ದು.

10. ಮಾರುವದಕ್ಕೆ ಬೇಕಾಗುವ ಅಫೀಮನ್ನು ಕೊಡಗುದೇಶದ ಕಮಿಷನರವರ ಮೂಲಕ ಚೀಫ್ ಕಮಿಷನರವರು ಮೊಕರರ್ಮಾಡಿರುವ ಕ್ರಯ ಕೊಟ್ಟು ತರಿಸಿಕೊಳ್ಳಬೇಕು. ಕಂಟ್ರಾಕ್ಟು ವಾಯಿದೆ ಮುಗಿದ ಬಳಿಕ ಮೊದಲಿನ ಕಂಟ್ರಾಕ್ಟುದಾರನಲ್ಲಿ ಕರ್ಚಾಗದೆ ಬಾಕಿ ಇರುವಂಥಾ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದೆ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಎರಡು ತಿಂಗಳಿಗೆ ಬೇಕಾದಷ್ಟರಲ್ಲಿ ಕಮಿಷನರವರಿಂದ ತೀರ್ಮಾನಿಸಲ್ಪಡುವ ಖರೀದಿಗೆ ಮತ್ತು ಅವರಿಂದ ಎಷ್ಟೆಷ್ಟು ಎಂಬದಾಗಿ ನಿರ್ಣಯಿಸಲ್ಪಡುತ್ತದೋ ಅಷ್ಟಷ್ಟನ್ನು ಕೊಂಡುಕೊಳ್ಳಬೇಕೆಂದು ಕಮಿಷನರವರಿಂದ ಅಪ್ಪಣೆ ಕೊಡಲ್ಪಟ್ಟರೆ ಕೊಂಡುಕೊಳ್ಳುವದಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

11. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತುಮಾಡಿ ತಿಳಿದುಕೊಳ್ಳಬಹುದು.

"ಹುಕುಂ ಬಮೋಜಿಬ್"

ಆರ್. ಸಿ. ಎಚ್. ಎಂ. ಕಿಂಗ್,

ಚೀಫ್ ಕಮಿಷನರವರ ಸೆಕ್ರೆಟರಿಯವರು.

ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ.

ಸನ್ 1895ನೇ ಇಸವಿಯ ಮೂರನೇ ನಂಬರು ರೆಗ್ಯುಲೇಷನ್ ಆದ ಮೈಸೂರ ಕಂಪನೀಸ್ ಆಕ್ಟು ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿಕೇಷನ್ನೊಡನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡ್ಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಬಂದಕ್ಕೆ 5 ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡಲ್ಪಡುವದು. ಪ್ರಕಟನೆ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಅದರಡಿ ಸೈನ್ ಮಾಡಿರುವವರಿಂದ ತರಸಿಕೊಳ್ಳಬಹುದು.

ಪಿ ಸುಬ್ಬರಾವ್,

ಮ್ಯಾನೆಜಿಂಗ್ ಡೈರೆಕ್ಟರ್,

ಬೆಂಗಳೂರು–ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,

68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಸಿದ್ಧ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ|| 15, ಸನ್ 1903.

IIನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಸೆನ್ಸಸ್ ಡಿಪಾರ್ಟ್ಮೆಂಟ್.

ನೋಟಿಸ್.

ಮೈಸೂರು ಸೀಮೆಯ ಡೆಪ್ಯುಟಿ ಸೆನ್ಸಸ್ಸು ಸೂಪರಿಂಟೆಂಡೆಂಟರವರ ಆಫೀಸ್.

ತಾರೀಖು 12ನೇ ಜನವರಿ 1903.

ಬೆಂಗಳೂರು ಹೈಗ್ರೌಂಡು ಸ್ಯಾಂಕೀರೋಡು ಅಬ್ ಷಾಟ್ ಹೌಸಿನಲ್ಲಿರತಕ್ಕ ಡೆಪ್ಯುಟಿ ಸೆನ್ಸಸ್ಸು ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಸ್ವಲ್ಪಭಾಗ ಕತ್ತರಿಸಲ್ಪಟ್ಟ ಬರೆದ ಸುಮಾರು 400 ಮಣ 18 ಅಂಗುಲ ಉದ್ದ 10 ಅಂಗುಲ ಅಗಲ ಇರತಕ್ಕ ಬಾದಾಮಿ ಕಾಗದದ ಸೆನ್ಸಸ್ಸು ಷೆಡ್ಯೂಲುಗಳು ಸನ್ 1903ನೇ ಇಸವಿ ಜನವರಿ ತಿಂಗಳು 28ನೇ ಬುಧವಾರದ ಲಾಗಾಯಿತು ಹರಾಜು ಹಾಕಲ್ಪಡುತ್ತದೆ.

2\. ಸರಕನ್ನು ಕೊಂಡುಕೊಳ್ಳುವದಕ್ಕೆ ಅಭಿಲಾಷೆ ಉಳ್ಳವರಿಂದ "ಷೆಡ್ಯೂಲ್ ಕಾಗದವನ್ನು ಕೊಂಡುಕೊಳ್ಳುವದಕ್ಕಾಗಿ ಟೆಂಡರುಗಳು" ಎಂಬದಾಗಿ ವಿಳಾಸ ಬರದು ಮೊಹರಾದ ಲಕ್ಕೋಟೆಗಳು ಮಜಕೂರು 24ನೇ ಶನಿವಾರದ ಪೂರ್ವಾಹ್ನದವರಿಗೂ ಈ ಕೆಳಗೆ ರುಜು ಮಾಡಿರುವವರಿಂದ ಹಿಡಿಯಲ್ಪಡುತ್ತೆ.

(ಎ) ಸರಕನ್ನು ಕೊಂಡುಕೊಳ್ಳುವದಕ್ಕೆ ಸಿದ್ಧನಾಗಿರುವಂಥಾ ಟೆಂಡರುದಾರರು (1 ಮಣ =40 ಶೇರು, ಶೇರು=24 ರೂಪಾಯಿ ತೂಕ) ಮಣ ಒಂದಕ್ಕೆ ದರವನ್ನು ನಮೂದಿಸಿ ಟೆಂಡರು ಜೊತೆಗೆ 25 ರೂಪಾಯಿ ಡಿಪಾಜಿಟ್ಟು ಕಳುಹಿಸಬೇಕು.

(ಬಿ) ಮೈಸೂರು ಸೀಮೆಯ ಡೈರೆಕ್ಟರ್ ಆಫ್ ಸ್ಟ್ಯಾಟಿಸ್ಟಿಕ್ಸ್ ಮತ್ತು ಸೆನ್ಸಸ್ಸು ಸೂಪರಿಂಟೆಂಡೆಂಟ್ ಸಾಹೇಬರವರು ಟೆಂಡರುಗಳನ್ನು ಮಂಜೂರು ಮಾಡುವದಕ್ಕೂ ಅಥವಾ ವಜಾ ಮಾಡುವದಕ್ಕೂ ಮೋಖ್ತೇಸರರಾಗಿರುತ್ತಾರೆ.

ಅತ್ಯಂತ ಹೆಚ್ಚು ದರವುಳ್ಳ ಟೆಂಡರನ್ನಾಗಲಿ ಯಾ ಯಾವ ಟೆಂಡರನ್ನೇ ಆಗಲಿ ಮಂಜೂರು ಮಾಡುವದಕ್ಕೂ ಅಥವಾ ಕಾರಣಗಳನ್ನು ಕೊಡುವದಕ್ಕೂ ಬದ್ಧರಾಗಿರುವದಿಲ್ಲ.

(ಸಿ) ವಜಾ ಮಾಡಿದ ಟೆಂಡರುಗಳ ಡಿಪಾಜಿಟ್ ಮೊಬಲಗು ವಾಪಸು ಮಾಡಲ್ಪಡುತ್ತೆ ಮತ್ತು ಮಂಜೂರಾದ ಟೆಂಡರುದಾರರು ಸರಕನ್ನು ತೂಕ ಮಾಡಿಸಿ ಬಾಕಿ ಮೊಬಲಗನ್ನು ನಗದು ಕೊಟ್ಟು ಟೆಂಡರು ಮಂಜೂರಾದ ವರ್ತಮಾನ ತಿಳಿದ 5 ದಿವಸದ ಒಳಗಾಗಿ ಸ್ವಂತ ಖರ್ಚಿನಿಂದ ಸರಕನ್ನು ತೆಗದುಕೊಂಡುಹೋಗಲು ತಪ್ಪಿದರೆ ಟೆಂಡರುದಾರರು ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಮತ್ತೊಂದು ಮಾರಾಟದಿಂದುಂಟಾದ ಲುಕ್ಸಾನಿಗೆ ಗುರಿಯಾಗುತ್ತಾರೆ.

ಮೇಲೆ ಹೇಳಿದ ಪ್ರಕಾರ ಟೆಂಡರು ಮೂಲಕ ಮಾರಾಟ ಪೂರ್ತಿಯಾದ ಪಕ್ಷದಲ್ಲಿ ಹರಾಜು ನಿಲ್ಲಿಸಲ್ಪಟ್ಟು ಹರಾಜು ನಿಯಮಿತವಾದದಿನದ ತತ್ಪೂರ್ವವೇ ಆಫೀಸಿನ ನೋಟಿಸ್ ಬೋರ್ಡಿನ ಮೇಲೆ ನೋಟಿಸು ಹಾಕಲ್ಪಡುತ್ತದೆ.

ಸರಕನ್ನು ತೆಗದುಕೊಳ್ಳಲು ಅಭಿಲಾಷೆವುಳ್ಳವರು ಆಫೀಸ್ ದಿನಗಳಲ್ಲಿ ಮಧ್ಯಾಹ್ನ 3 ಘಂಟೆಯಿಂದ 5 ಘಂಟೆ ವರಿವಿಗೆ ಸರಕನ್ನು ಅಜಮಾಯಿಷಿ ಮಾಡಬಹುದು.

ಟಿ. ಎನ್. ಲಕ್ಷ್ಮೀನರಸಿಂಹರಾವ್,
ಅಸಿಸ್ಟೆಂಟ್ ಸೆನ್ಸಸ್ ಸೂಪರಿಂಟೆಂಡೆಂಟ್ ಇನ್ಛಾರ್ಜ್ ಆಫ್ ದಿ
ಡೆಪ್ಯುಟಿ ಸೆನ್ಸಸ್ ಸೂಪರಿಂಟೆಂಡೆಂಟ್ಸ್ ಆಫೀಸ್ ಇನ್ ಮೈಸೂರು,
ಬೆಂಗಳೂರು.

ಫಾರೆಸ್ಟ್ ಇಲಾಖಾ.

1902ನೇ ಇಸವಿ ಡಿಸೆಂಬರ್ ತಾರೀಖು 15ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋಗಳಲ್ಲಿ ಚೌಬೀನ ಸಾಮಾನುಗಳು ಬಿದರುಗಳು ಸಹಾ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಹರಾಜು ಮಾಡಿಸಲ್ಪಡುವ ಆಫೀಸರ ಹೆಸರು.	ಹರಾಜಿಗೆ ಇಡಲ್ಪಡುವ ಚೌಬೀನೆಯ ಮೊತ್ತ.												ಬಿದರುಗಳು.	ಷರಾ.
				ಸಾಗುವಾನಿ ನಾಟಾ.		ಮನ್ನಾ ಜಾತಿ ನಾಟಾ.		ಕಾಡುಜಾತಿ ನಾಟಾ ವಗೈರೆ.		ಸಾಗುವಾನಿ ಸರ ವಗೈರೆ.		ಮನ್ನಾ ಜಾತಿ ಸರ ವಗೈರೆ.		ಕಾಡುಜಾತಿ ಸರ ವಗೈರೆ.			
				ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.	ನಂಬರು.	ಅಡಿ.		
*1	ಮೈಸೂರು ವುಡಿಯ ಡರ್.	19—1—03	ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು.	307	5795	145	2569	3	61	417	458	...	..	12	55	29545	ಇದಲ್ಲದೆ ನವಂಬರು ಮಾಹೆಯಲ್ಲಿ ಡಿಪೋಗಳಿಗೆ ಬಂದಿರುವದು ಪ್ರತಿ ಡಿಪೋಕ್ಕೂ ಸುಮಾರು 3000 ಅಡಿ ಇರುತ್ತೆ. ಅದೂ ಸಹ ಹರಾಜಾಗುತ್ತೆ.
*2	ನಂಜನಗೂಡು ಡಿಪೋ.	16—[illegible]—03		144	2653	304	3498	31	538	1	3	1	2	..		C929	

ಷರತ್ತು—1895ನೇ ಇಸವಿ 25ನೇ ಏಪ್ರೆಲ್ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ ಮಾಹೆ 15ನೇ ಮರ್ಕ್ಯಂ 1529—R. F. 155–92ನೇ ನಂಬರ್ ನೋಟಿಫಿಕೇಷನ್ ನೋಡಿ. ಚೌಬೀನಾ ಬಗ್ಯೆ.

ಎಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ.

ತಾರೀಖು 19ನೇ ಮಾಹೆ ಡಿಸೆಂಬರ್ 1902ನೇ ಇಸವಿ.

ಮೈಸೂರು ಗೌರ್ನಮೆಂಟ್ 1901ನೇ ಇಸವಿ ಅಕ್ಟೋಬರ್ ಮಾಹೇ 2ನೇ ಮರ್ಕ್ಯುಲರ್‌ನಲ್ಲಿ ಪ್ರಾಯಿಷ್ ಆಗಿರುವ 245—1300ನೇ ನಂಬರು ಇಸ್ತಿಹಾರ್ನಾಮಾ XIIನೇ ರೂಲ್ ಅನುಸರಿಸಿ ಪ್ರಸಿದ್ಧಪಡಿಸುವದೇನೆಂದರೆ:—

ಈ ಕೆಳಗೆ ನಮೂದಿಸಲ್ಪಡುವ ಫಾರೆಸ್ಟ್ ಮತ್ತು ರೆವಿನ್ಯೂ ಅಧಿಕಾರಿಗಳು ಹಾಸನ ಡಿಸ್ಟ್ರಿಕ್ಟಿನಲ್ಲಿ ವುಳಿಸಿಕೊಳ್ಳಲ್ಪಡದಿರುವ (ಅನ್‌ರಿಸರ್ವ್ಡ್) ಫಾರೆಸ್ಟ್‌ಗಳಲ್ಲಿ ಚೌಬೀನಾ ಮರಗಳು, ಬೊಂಬುಗಳು, ಮತ್ತು ಸೌದೆ ಇವುಗಳನ್ನು ಕತರಾಯಿಸಿ ಸಾಗಿಸಿಕೊಂಡು ಹೋಗತಕ್ಕ ಬಗ್ಯೆ ವಿಧಾಯುಕವಾದ ಡ್ಯೂಟೀಯಾನೇ ತೆರಿಗೆ ವಸೂಲಿಯಿಂದ ರಹದಾರೀ ಕೊಡಬಹುದಾದ ಅಧಿಕಾರವನ್ನು ಕೊಡಲ್ಪಟ್ಟವರಾಗಿರುತ್ತಾರೆ.

ನಂಬ್ರು	ಅಧಿಕಾರಿಯ ಹೆಸರು.	ಅಧಿಕಾರದ ತಪಸೀಲೆ.	ಅಧಿಕಾರ ಚಲಾಯಿಸಬಹುದಾದ ಪರಿಮಿತಿಯಾನೇ ಸರಹದ್ದು.
1	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ...	ವುಳಿಸಿಕೊಂಡಿರುವ ಮತ್ತು ವುಳಿಸಿಕೊಳ್ಳಲ್ಪಡದಿರುವ ಜಾತೀ ನಾಟಾಗಳು, ಬಿದರು, ಹಸೀ ಮತ್ತು ಒಣಸೌದೆ ಇವುಗಳನ್ನು ಕತರಾಯಿಸತಕ್ಕ ಮತ್ತು ಸಾಗಿಸತಕ್ಕ ಬಗ್ಯೆ ಡ್ಯೂಟೀ ವಸೂಲೀಯಿಂದ ರಹದಾರೀ ಕೊಡಬಹುದು.	ಡಿಸ್ಟ್ರಿಕ್ಟಿನಲ್ಲಿ.
2	ಅಮಲ್ದಾರ್ರುವರು ...	ವುಳಿಸಿಕೊಳ್ಳಲ್ಪಡದಿರುವ ಜಾತೀ ನಾಟಾಗಳೂ, ಮತ್ತು ಬಿದರು ಇವುಗಳನ್ನು ಕಡಿಯುವದಕ್ಕೂ ಸಾಗಿಸುವದಕ್ಕೂ ತೆರಿಗೇ ವಸೂಲೀಯಿಂದ ಲೈಸೆನ್ಸ್ ಕೊಡಬಹುದು.	ಆಯಾ ತಾಲ್ಲೂಕು ಸರಹದ್ದಿನಲ್ಲಿ.
3	ರೇಂಜಾಫೀಸರವರು	ಡಿಟೋ	ರೇಂಜಿಗೆ ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ವುಳಿಸಿಕೊಳ್ಳಲ್ಪಟ್ಟಿರುವ ಭೂಮಿಯಲ್ಲಿ.
4	ಫಾರೆಸ್ಟರು ...	ಒಣಗಿದ ಸೌದೇಮಾತ್ರ ಕಡಿಯುವದಕ್ಕೂ ಸಾಗಿಸುವದಕ್ಕೂ ತೆರಿಗೆ ವಸೂಲೀಯಿಂದ ಲೈಸೆನ್ಸ್ ಕೊಡಬಹುದು.	ಛಾರ್ಜಿನೊಳಗಿರುವ ಸರಹದ್ದಿನಲ್ಲಿ ವುಳಿಸಿಕೊಂಡಿರುವ ಜಮೀನುಗಳಲ್ಲಿನದಕ್ಕೆ.
5	ಶೇಕ್‌ದಾರರು ...	ಡಿಟೋ	ಸಂಬಂಧಪಟ್ಟ ಹೋಬಳಿಯಲ್ಲಿ ವುಳಿಸಿಕೊಳ್ಳಲ್ಪಡದಿರುವ ಜಮೀನುಗಳಲ್ಲಿನದಕ್ಕೆ.
6	ಡೆಪ್ಯುಟಿ ಕಮಿಷನರವರ ಆರ್ಡರ್ ಮೇರಗ ಸ್ಪೆಷಲ್ಲಾಗಿ ಮೊಕರೂರ್ ಮಾಡಲ್ಪಟ್ಟಿರುವ ಇತರೆ ಏಜೆನ್ಸೀಮೂಲಕ. (a) ಪಟೇಲ್ ಮತ್ತು ಶ್ಯಾನುಭಾಗರು. (b) ಹೋಬ್ಳೀ ಸ್ಕೂಲ್ ಮೇಸ್ಟರು. (c) (a) ಮತ್ತು (b) ಇವರುಗಳ ಗ್ಯೆರ್ ಹಾಜರಿ ಸಂದರ್ಭಹಲ್ಲಿ ಬರವಣಿಗೆ ಬಲ್ಲ ಇತರರು ಯಾರಾದರು.	ಡಿಟೋ	ಡೆಪ್ಯುಟಿ ಕಮಿಷನರವರ ಅಪ್ಪಣೇ ಮೇರಗೆ ಗೊತ್ತು ಮಾಡಿಕೊಡುವ ಪರಿಸ್ತರಣದೊಳಗೆ.

2. ಸಾಗಿಸಲ್ಪಡುತ್ತಿರುವ ನಾಟಾ, ಬೊಂಬು, ಮತ್ತು ಸೌದೆ, ಇವುಗಳ ರಹ್ದಾರನ್ನು ಎಲ್ಲಾ ರೆವಿನ್ಯೂ, ಫಾರೆಸ್ಟ್, ಮತ್ತು ಪೋಲೀಸ್ ಆಫಿಸರರೂ ಚೆಕ್ಮಾಡುವ ಬಗ್ಯೆ ಇದರಿಂದ ಅಧಿಕಾರ ಕೊಡಲ್ಪಟ್ಟವರಾಗಿರುತ್ತಾರೆ.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನದ ಡಿಸ್ಟ್ರಿಕ್ಟ್.

ನೋಟಿಸ್.

ಚಿತ್ರದುರ್ಗದ ಡಿಸ್ಟ್ರಿಕ್ಟು ಕೆಲವು ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನು ತಾರೀಖು 1—2—1903ರ ಲಾಗಾಯಿತು 30—6—1903ರ ವರಿಗೆ ಕ್ರಮಸಾದ ಅಪ್ಪಣೆ ಇಲ್ಲದೆ ಯಾರೂ ಪ್ರವೇಶ ಮಾಡಕೂಡದು. ಹೆಚ್ಚಿಗೆ ತಪಶೀಲು ಬಗ್ಗೆ ತಾರೀಖು 8—1—1903ನೇ ಮರ್ಸ್ಕಂ 1ನೇ ನಂಬರ್ ಮೈಸೂರ ಗೆಜೆಟಿನ IIನೇ ಭಾಗದ 9ನೇ ಪುಟದಲ್ಲಿ ಫಾಯಿಷ್ ಆಗಿರುವ ನೋಟಿಸ್ ನೋಡಬೇಕು.

ಕೆ. ಶ್ಯಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮಾ, ತಾ॥ 11ನೇ ಡಿಸೆಂಬರ್ 1902ನೇ ಇಸವಿ.

ಮಾರ್ಜಿನ್ನಲ್ಲಿ ನಮೂದ್ಮಾಡಿರುವ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಜೋಡೀ ಬಾಕೀಗೋಸ್ಕರವಾಗಿ ಆಯಾಯ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಜನವರಿ ಮಾಹೆ 30ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1.	ಕಾಯಂಗುತ್ತಾ	ಕೃಷ್ಣಹಳ್ಳಿ	ಶಿಡ್ಲಘಟ್ಟ ತಾಲ್ಲೂಕು.
2.	ಡಿಟೋ	ಅಂಬಿಗಾನ ಹಳ್ಳಿ	ಶಿಡ್ಲಘಟ್ಟ ತಾಲ್ಲೂಕು.
3.	ಡಿಟೋ	ಪುರ	ಶಿಡ್ಲಘಟ್ಟ ತಾಲ್ಲೂಕು.
4.	ಡಿಟೋ	ಕರಿಯನಪುರ	ಶಿಡ್ಲಘಟ್ಟ ತಾಲ್ಲೂಕು.
5.	ಡಿಟೋ	ಮಲಸಂದ್ರ	ಕೋಲಾರ ತಾಲ್ಲೂಕು.
6.	ಡಿಟೋ	ಲಿಂಗಾಪುರ	ಕೋಲಾರ ತಾಲ್ಲೂಕು.
7.	ಡಿಟೋ	ಜೋಡಿ ಮಟ್ನಹಳ್ಳಿ	ಕೋಲಾರ ತಾಲ್ಲೂಕು.

ಹೆಚ್ಚು ತಪಸೀಲ್ ಬಗ್ಗೆ ಡಿಸೆಂಬರ್ ತಾರೀಖು 18ನೇ ಮರ್ಸ್ಕಂ 51ನೇ ನಂಬರ್ ಮೈಸೂರ ಗೆಜೆಟ್ಟಿನ 2ನೇ ಭಾಗದ 638, 639, 640, 641, 642, 643, ಮತ್ತು 644ನೇ ನಂಬರು ಪೇಜು ನೋಡತಕ್ಕದ್ದು.

ಹೆಚ್. ದಾಸಪ್ಪ,
ಫಾರ್ ಡೆಪ್ಯುಟಿ ಕಮಿಷನರ.

ಇಸ್ತಿಹಾರ್ನಾಮಾ, ತಾರೀಖು 15ನೇ ಡಿಸೆಂಬರ್ 1902ನೇ ಇಸವಿ.

ಮಾಲೂರು ತಾಲ್ಲೂಕಿಗೆ ಶೇರಿದ ಜೋಡಿ ಮುತ್ತುಕದಹಳ್ಳಿ ಗ್ರಾಮವು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಜನವರಿ 30ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

(ಹೆಚ್ಚು ತಪಸೀಲ್ ಬಗ್ಗೆ 8—1—1903ನೇ ಮರ್ಸ್ಕಂ 1ನೇ ನಂಬರ್ ಮೈಸೂರ ಗೆಜೆಟ್ಟಿನ 2ನೇ ಭಾಗದ 11ನೇ ನಂಬರ್ ಪೇಜು ನೋಡತಕ್ಕದ್ದು.)

ಇಸ್ತಿಹಾರ್ನಾಮಾ, ತಾರೀಖು 16ನೇ ಡಿಸೆಂಬರ್ 1902.

ಕೋಲಾರ ತಾಲ್ಲೂಕಿಗೆ ಶೇರಿದ ಜೋಡಿ ಬೆಳ್ಳಂಬರೆ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಫೆಬ್ರವರಿ ತಾರೀಖು 7ರಲ್ಲು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ ತಾರೀಖು 8—1—1903ನೇ ಮರ್ಸ್ಕಂ 1ನೇ ನಂಬರ್ ಮೈಸೂರು ಗೆಜೆಟ್ಟಿನ IIನೇ ಭಾಗದ 10ನೇ ನಂಬರ್ ಪೇಜು ನೋಡತಕ್ಕದ್ದು

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 9ನೇ ಜನವರಿ 1903.

1. ಕಂದಾಯದ ಬಾಕೀದಾರರಾದ ನರಹರಿಶಾಸ್ತ್ರಿ ಮತ್ತು ವಾಸುದೇವಶಾಸ್ತ್ರಿಯವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಶಿಡ್ಲಘಟ್ಟ ತಾಲ್ಲೂಕು ಕಛೇರಿಯಲ್ಲಿ 1903ನೇ ಇಸವಿ ಫೆಬ್ರವರಿ 24ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1900–1901ನೇ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ 176—1—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನನಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಶಿಡ್ಲಘಟ್ಟ	ಬಶೆಟ್ಟಿಹಳ್ಳಿ	ಜೋಡಿ ಆನೂರು ತಿಮ್ಮನಹಳ್ಳಿ	1. ನರಹರಿಶಾಸ್ತ್ರಿ, 2. ವಾಸುದೇವಶಾಸ್ತ್ರಿ.		ರೂ. ಆ. ಪೈ. ...	ವೃತ್ತಿಯ ಬೀಜವರಿ ...		ಎ. 357 ಗು. 10		170	3	0	ಪ್ರವ.
						ಗ್ರಾಮಕ್ಕೆ ಚಕ್ಕುಬಂದಿ.				0	8	0	ನೋಟಿಸ್ ಫೀ.
						ಪೂರ್ವಕ್ಕೆ—ಆವಲಗಾನಹಳ್ಳಿ ಎಲ್ಲೆಕಟ್ಟು.				1	0	0	ಇಸ್ತಿಹಾರ್ ಫೀ.
						ಪಶ್ಚಿಮಕ್ಕೆ—ತಾವರೇವಡ್ಡಿನ ಎಲ್ಲೆಕಟ್ಟು.				4	6	10	ಬಡ್ಡಿ.
						ಉತ್ತರಕ್ಕೆ—ಬೊಮ್ಮೇನಹಳ್ಳಿ ಎಲ್ಲೆಕಟ್ಟು.							
						ದಕ್ಷಿಣಕ್ಕೆ—ಕುಂಬಾರಹಳ್ಳಿ ಎಲ್ಲೆಕಟ್ಟು.							
						ಈ ಮಧ್ಯೆ ಇರುವ ಪೂರಾಗ್ರಾಮ.				176	1	10	ಜುಮ್ಲಾ

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಸ್. ಅಮಿರ್ ಹಸ್ನೇ ಆಫಿಷಿಯೇಟಿಂಗ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸಿ ಹಾರ್ನಾಮಾ.

ತಾರೀಖು 11ನೇ ಡಿಸೆಂಬರ 1902, ಶಿವಮೊಗ್ಗಾ.

1901—1902ನೇ ಸಾಲಾಖೈರು ವರೆಗೆ ಸರ್ಕಾರಕ್ಕೆ ಬರಬೇಕಾದ ಕಂದಾಯ ಬಾಕಿಗಾಗಿ ಶಿವಮೊಗ್ಗಾ ತಾಲ್ಲೂಕ್ ತಟ್ಟೆಕೆರೆ ಇನಾಂ ಗ್ರಾಮವು 1903ನೇ ಇಸವಿ ಜನವರಿ ತಾರೀಖು 20ನೇ ದಿವಸ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪ್ಸೀಲುಗಳ ಬಗ್ಗೆ ಡಿಸೆಂಬರ ತಾರೀಖು 18ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮ್ಮಿಷನರ.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 17ನೇ ಡಿಸೆಂಬರ 1902.

ತಾರೀಖು 13ನೇ ಡಿಸೆಂಬರ 1902ನೇ ರಾತ್ರಿ ಹೊಳಲ್ಕೆರ ತಾಲ್ಲೂಕು ಲಾಕಪ್ಪಿನಿಂದ ಫರಾರಿ ಆದ ಖೈದಿ ಮುರಿಗೆಪ್ಪನ ಚಹರೆ ತಪಶೀಲ್.

ಹೆಸರು—ಕುಕ್ಕೆಮುರಿಗೆಪ್ಪ; ವಯಸ್ಸು—25 ವರುಷಗಳು, ಜಾತಿ—ಸಾದು ಲಿಂಗಾಯಿತ, ತಂದೆ ಹೆಸರು—ಕುಕ್ಕೆ ಸಂಕಪ್ಪ, ಕಸಬು—ಜಿರಾಯಿತು, ವಾಸಸ್ಥಳ—ಹೊಳಲ್ಕೆರೆ.

ಚಹರೆ.

ಎತ್ತರ ಅಡಿಗಳು 5, ಎಣೆಗೆಂಪು ವರ್ಣ; ಬಲ ಮೊಳಕೈಮೇಲೆ 2 ಮೈಲ ಕಲೆಗಳು ಇವೆ. ಎಡಪಕ್ಕೆ ಮೇಲೆ 9 ಮೈಲ ಕಲೆಗಳು ಇವೆ. ಮುಖದಮೇಲೆಲ್ಲಾ ಮೈಲ ಕಲೆ ಬಹಳ ಇವೆ. ಕೋಲು ಮುಖ, ಎಡಗಾಲಿನ ಹರ್ಡಿನ ಮೇಲುಗಡೆ ಒಂದು ಕುರುವಿನ ಕಲೆ ಇಧೆ.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸ್ನ 1902—1903ನೇ ಇಸವಿ ಮಿ|| ಅರ್ಜಿ ನಂಬರ 101.

ಮೃತಪಟ್ಟ ಹೊನ್ನಾಳಿ ತಾಲ್ಲೂಕು ನ್ಯಾಮತಿಯಲ್ಲಿರುವ ಕಂಚುಗಾರನಹಳ್ಳಿ ಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ನ್ಯಾಮತಿವಾಶೀ ಕಂಚುಗಾರನಹಳ್ಳಿ ಶಾಂತವೀರಪ್ಪ ಬಿನ್ ಬಸಪ್ಪನವರು ಮೃತಪಟ್ಟ ಸದರೀ ಕಂಚುಗಾರನಹಳ್ಳಿ ಬಸಪ್ಪನವರಿಗೆ ಖಾಸ ಮಗನು ಆಗಬೇಕೆಂಬ ಹಕ್ಕುಬಾರಿ ಮೇಲೆ ನ್ಯಾಮತಿ ಸ್ಥಳದ ಕಂಚುಗಾರನಹಳ್ಳಿ ಶ್ಯಾಂತವೀರಪ್ಪನವರು, ನ್ಯಾಮತಿ ವಾಸಸ್ಥರಾಗಿ ಮೃತಪಟ್ಟ ಡಿಟೋ ಬಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ (1,540 3—10) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ನ 1901ನೇ ಇಸವಿ VIIನೇ ನಂಬರ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಕಂಚಗಾರನಹಳ್ಳಿ ಶಾಂತವೀರಪ್ಪ ಬಿನ್ ಬಸಪ್ಪನವರ ಅರ್ಜಿಯನ್ನು ಸ್ನ 1903ನೇ ಇಸವಿ ಜನವರಿ ತಿಂಗಳು ತಾರೀಖು 30ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ನ 1902ನೇ ಇಸವಿ ಡಿಸೆಂಬರು ತಿಂಗಳು 28ನೇ ತಾರೀಖಿನಲ್ಲಿ ಕೋರ್ಟುಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್,
ಶಿರಸ್ತೇದಾರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ನ 1902—1903ನೇ ಇಸವಿ ಮಿ|| ಅರ್ಜೀ ನಂಬರ 359.

ಅರ್ಜೀದಾರು ಬೆಂಗಳೂರು ಚಿಕ್ಕಪ್ಯಾಟಿಲಿರುವ ದೊಡ್ಡ ಭಾಗಾಸಾ ಹೆಂಡತಿ ಭವಾನಿ ಬಾಯಿ, ಮೈನರಾದ ಹೊನ್ನಪ್ಪ, 2ನೇ ಕೃಷ್ಣಪ್ಪ, 3ನೇ ಭಾಗಾಸಾ, ಬೆಂಗಳೂರು ಚಿಕ್ಕಪ್ಯಾಟೆ ಸ್ಥಳದ ಮೃತಪಟ್ಟ ದೊಡ್ಡ ಭಾಗಾಸಾಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ಹೊನ್ನಪ್ಪ, 2ನೇ ಕೃಷ್ಣಪ್ಪ, 3ನೇ ಭಾಗಾಸಾ ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ಚಿಕ್ಕಪ್ಯಾಟೆ ಸ್ಥಳದ ಭವಾನಿ ಬಾಯಿಯವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ನ 1903ನೇ ಇಸವಿ ಜನವರಿ ತಾರೀಖು 23ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ. ಆ ತಾರೀಖು ದಿವಿ 11 ಘಂಟೆಗೆ ತಕರಾರುದಾರು ಹಾಜರಾಗಿ ತಿಳಿಯಪಡಿಸತಕ್ಕದ್ದಿಧೆ.

ಸ್ನ 1902ನೇ ಇಸವಿ ಡಿಸೆಂಬರು ತಿಂಗಳು 15ನೇ ತಾರೀಖಿನಲ್ಲಿ ಕೋರ್ಟುಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿ. ಸಿಂಗ್ರಾಚಾರ್, ಸಬ್ ಜಡ್ಜ.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ

ಇಸ್ತಿಹಾರ್ನಾಮಾ.

ದರಜಾಗಾ ಬೆಂಗಳೂರು, ತಾರೀಖು 17ನೇ ಡಿಸೆಂಬರ್, ಸ್ರ 1902ನೇ ಇಸವಿ.

ನಂ. 63. ಸ್ರ1903ನೇ ಇಸವಿ ಏಪ್ರೈಲ್ ತಾರೀಖು 1ರ ಲಾಗಾಯಿತು 1906ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ ಮೂರು ವರುಷಗಳ ಪರಿಯಂತರ ಕೊಡಗು ಶೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾವಸ್ತುಗಳನ್ನು ಮಾರುವದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವ ಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ. ಇವುಗಳಿಗೆ ದರಖಾಸ್ತುಗಳು ಇದರಡಿ ಕಾಣಿಸಿರುವ ಷರತ್ತುಗಳಿಗೆ ಒಳಪಟ್ಟು ಮಾಡತಕ್ಕದ್ದು.

2. ದರ್ಖಾಸ್ತಿನ ಜೊತೆಯಲ್ಲು (100) ರೂಪಾಯಿ ಠೇವಣಿಯನ್ನು ಕಳುಹಿಸತಕ್ಕದ್ದು. ದರ್ಖಾಸ್ತನ್ನು ರವಾನಿಸುವಲ್ಲಿ ಲಿಫಾಫೆಯಮೇಲೆ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಬಿಕ್ರಿ ಮಾಡುವ ಬಗ್ಯೆ ಮಾಡಲ್ಪಟ್ಟ ದರ್ಖಾಸ್ತು ಎಂಬದಾಗಿ ಬರದು ಕೊಡಗು ಕಮಿಷನರವರ ಕಛೇರಿಗೆ 1903ನೇ ಮಾರ್ಚಿ ಮಾಹೆ 5ನೇ ತಾರೀಖು ಗುರುವಾರ ಮಧ್ಯಾನ್ಹ 12 ಘಂಟೆ ಯಾ, ಅದಕ್ಕೆ ತತ್ಪೂರ್ವ ತಲಪುವಂತೆ ಕೊಡಗು ಕಮಿಷನರವರ ಹೆಸರಿಗೆ ಕಳುಹಿಸತಕ್ಕದ್ದು. ನಂತರ ಬರುವ ದರ್ಖಾಸ್ತುಗಳನ್ನು ಅಂಗೀಕರಿಸುವದಿಲ್ಲವು.

3. ಸದರಿ ದರಖಾಸ್ತುಗಳಲ್ಲಿ ದರ್ಖಾಸ್ತುದಾರರು ಸದರಿ ಪದಾರ್ಥಗಳನ್ನು ಸ್ವಾತಂತ್ರ್ಯವಾಗಿ ಮಾರುವದಕ್ಕೆ ಸರ್ಕಾರಕ್ಕೆ ಸಾಲಿಯಾನ ಇಷ್ಟೋ ತೆರಿಗೆ ಕೊಡುತ್ತೇನೆಂಬದಾಗಿ ನಮೂದಿಸಬೇಕು. ಕೊಡಬೇಕಾದ ತೆರಿಗೆಯನ್ನು ಪ್ರತಿ ವರುಷದ ಅಂದರೆ ಜೂಲೈ, ಅಕ್ಟೋಬರ್, ಜನವರಿ, ಈ ಮಾಹೆಗಳ 1ನೇ ತಾರೀಖಿನ ದಿವಸ ಪಾವತಿ ಮಾಡತಕ್ಕದ್ದು.

4. ದರ್ಖಾಸ್ತುಗಳು 1903ನೇ ಇಸವಿ ಮಾರ್ಚಿ ತಾರೀಖು 6ನೇ ಶುಕ್ರವಾರ ಮಧ್ಯಾನ್ಹ ಮಡಿಕೇರಿಯಲ್ಲಿ ಹಾಜರಿರುವ ದರ್ಖಾಸ್ತುದಾರರುಗಳ ರೂಬರೂ ಕಮಿಷನರವರಿಂದ ಅಥವಾ ಅವರ ಗೈರಹಾಜರಿಯಲ್ಲಿ ಅಸಿಸ್ಟೆಂಟ್ ಕಮಿಷನರವರಿಂದ ಖುಲ್ಲಾ ಮಾಡಲ್ಪಡುವವು. ದರ್ಖಾಸ್ತುಗಳ ಆಖೈರ್ವಿವಸ್ತೆಯು ಕೊಡಗು ಚೀಫ್ ಕಮಿಷನರವರಿಗೆ ಹೊಂದಿರುತ್ತೆ ಮತ್ತು ಅವರು ಯಾವ ಕಾರಣವೂ ನಮೂದಿಸದೆ ಯಾವದೊಂದು ಯಾ, ಎಲ್ಲಾ ದರ್ಖಾಸ್ತುಗಳನ್ನು ತಿರಸ್ಕರಿಸುವ ಎಲ್ಲಾ ಸ್ವಾತಂತ್ರ್ಯವನ್ನು ತಮಗೇನೆ ಉಳಿಸಿಕೊಂಡಿರುತ್ತಾರೆ. ಯಾರ ದರ್ಖಾಸ್ತುಗಳು ತಿರಸ್ಕರಿಸಲ್ಪಡುತ್ತವೋ ಅಂಥಾ ದರ್ಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು ಅವರಿಗೇನೆ ವಾಪಸ್ಮಾಡಲ್ಪಡುವದು.

5. ಚೀಫ್ ಕಮಿಷನರವರಿಂದ ಯಾವ ದರ್ಖಾಸ್ತು ಮಂಜೂರ್ಮಾಡಲ್ಪಡುತ್ತದೋ ಅಂಥಾ ದರ್ಖಾಸ್ತುದಾರನು ಮೊದಲು ಕೊಟ್ಟಿರುವ ಠೇವಣಿ ದೇಖಿಲ್ ಸಾಲಿಯಾನದ ಬರವಶ ಕೊಟ್ಟಿರುವ ತೆರಿಗೆ ಮೊಬಲಗು ಪೈಕಿ ಅರ್ಧ ವರುಷಕ್ಕೆ ಸರಿಯಾಗುವಷ್ಟು ಮೊಬಲಗನ್ನು 3 ದಿವಸದ ವಳಗಾಗಿ ನಗದು ಆಗಲೀ, ಕರ್ರೆನ್ಸಿ ನೋಟ್ ಮೂಲಕವಾಗಲೀ, ಅಥವಾ ಗವರ್ನ್ಮೆಂಟ್ ಪ್ರಾಮಿಸರಿ ನೋಟ್ ಮೂಲಕವಾಗಲೀ, ಠೇವಣಾತಿ ಇಡತಕ್ಕದ್ದು. ಈ ಡಿಪಾಜಿಟ್ ಹಣವನ್ನು 1906ನೇ ಇಸವಿ ಮಾರ್ಚಿ ತಾರೀಖು 31ಕ್ಕೆ ಮುಗಿಯುವ ಅರ್ಧವರುಷಕ್ಕೆ ಸಲ್ಲಬೇಕಾದ ಕಿಸ್ತಿಗೆ ಹಿಂದಲಿಂದ ಸರ್ಕಾರಕ್ಕೆ ವಜಾ ಮಾಡಿಕೊಳ್ಳಲ್ಪಡುವದು ಮತ್ತು ಚೀಫ್ ಕಮಿಷನರವರಿಂದ ಮಂಜೂರ್ಮಾಡಲ್ಪಟ್ಟ ತಾರೀಖಿನಿಂದ 10 ದಿವಸದ ವಳಗಾಗಿ ಸದರಿ ದರ್ಖಾಸ್ತುದಾರನು 1878ನೇ ಇಸವಿ ನಂಬರ್ 1ರ ಅಫೀಮು ಆಕ್ಟಿನ ರೂಲ್ಸ್ ಮೇರೆ ನಡದುಕೊಳ್ಳುವದಕ್ಕೆ ಬದ್ಧನಾಗಿರುತ್ತೇನೆಂಬದಾಗಿ ನೇಮಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ಒಂದು ಒಡಂಬಡಿಕೆಯನ್ನು ಬರದು ಕೊಡಬೇಕು ಮತ್ತು ಅದರಲ್ಲಿ ಕಂಡ ಷರತ್ತು ಪ್ರಕಾರ ನಡದುಕೊಳ್ಳುವದಕ್ಕೋಸ್ಕರ, ಜಾಮೀನ್ ಸಹ ಕೊಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟಿರುವ ಠೇವಣಾತಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಟ್ಟು ಸದರೀ ಕಂಟ್ರಾಕ್ಟು ಬೇರೆ ವಿಧವಾಗಿ ವ್ಯವಸ್ತೆ ಮಾಡಲ್ಪಡುವದು.

6. ಕಂಟ್ರಾಕ್ಟುದಾರನು ಸಲಿಕ ಮಾಡಬೇಕಾಗುವ ತಾರೀಖಿಗೆ ಸರಿಯಾಗಿ ಯಾವ ಕಿಸ್ತಿನಲ್ಲಾಗಲೀ ಮೊಬಲಗು ಕಟ್ಟುವದಕ್ಕೆ ತಪ್ಪಿದ ಪಕ್ಷದಲ್ಲಿ ಆ ಕೂಡಲೆ ಕಂಟ್ರಾಕ್ಟನ್ನು ರದ್ದು ಮಾಡುವದಕ್ಕೂ ಠೇವಣಿ ಹಣವನ್ನು ಜಫ್ತು ಮಾಡಿ ಸದರೀ ಗುತ್ತಿಗೆಯನ್ನು ಕಂಟ್ರಾಕ್ಟುದಾರನ ಜವಾಬ್ದಾರಿಯೂ, ನಷ್ಟದಮೇಲೆ ಪುನಹ ಹರಾಜು ಮಾಡುವದಕ್ಕೆ ಕೊಡಗು ಕಮಿಷನರವರು ಸ್ವತಂತ್ರರಾಗಿರುತ್ತಾರೆ.

7. ಕೊಡಗು ದೇಶದಲ್ಲಿ ಮೇಲ್ಕಂಡ ಪದಾರ್ಥಗಳನ್ನು ಮಾರುವದಕ್ಕೆ ನಾಲ್ಕೂಕ್ ಅಂಗಡಿಗಳು ನೇಮಕ ಮಾಡಲ್ಪಟ್ಟಿವೆ. ಮಡಿಕೇರಿ ಮಹದೇವಪ್ಪೇಟೆಯಲ್ಲಿ ಒಂದು, ವೀರಾಜೇಂದ್ರ ಪ್ಯಾಟೆಯಲ್ಲಿ ಒಂದು, ಗೋಣಿಕೊಪ್ಪಲ್ಲಿ ಒಂದು ಮತ್ತು ಸೋಮವಾರ ಪ್ಯಾಟೆಯಲ್ಲಿ ಒಂದು.

8. ಮೇಲ್ಕಂಡ 7ನೇ ಕಲಂನಲ್ಲಿ ನಮೂದಿಸಿರುವ ಅಂಗಡಿಗಳ ವಿನಹ ಕಮಿಷನರವರ ಸ್ಪೆಷಲ್ ಅಪ್ಪಣೆ ಸಿವಾಯಿ ಹೆಚ್ಚು ಅಂಗಡಿಗಳಿರಕೂಡದು.

9. ಮೇಲೆ ನಮೂದಿಸಲ್ಪಟ್ಟಿರುವ ಅಂಗಡಿಗಳಲ್ಲಿ ಚಿಲ್ಲರೆ ಬಿಕರಿ ಮಾಡುವದಕ್ಕೋಸ್ಕರವಾಗಿ ಗುತ್ತಿಗೆದಾರನಿಂದ ಇಡಲ್ಪಟ್ಟ ಜನಗಳಿಗೆ ಫಾರ್ಮನಿಂದ ನೇಮಕ ಮಾಡಲ್ಪಟ್ಟ ನಮೂನೆಯಲ್ಲಿ ಕೊಡಗು ಕಮಿಷನರವರಿಂದ ಮಂಜೂರ್ ಮತ್ತು ಕೌಂಟರಸೈನ್ ಮಾಡಿ ಕೊಡೋಣಾದ ಲೈಸೆನ್ಸಗಳನ್ನು ಕೊಟ್ಟಿರತಕ್ಕದ್ದು.

10. ಮಾರುವದಕ್ಕೆ ಬೇಕಾಗುವ ಅಫೀಮನ್ನು ಕೊಡಗುದೇಶದ ಕಮಿಷನರವರ ಮೂಲಕ ಚೀಫ್ ಕಮಿಷನರವರು ಮೊಕರೂರ್ಮಾಡಿರುವ ಕ್ರಯ ಕೊಟ್ಟು ತರಿಸಿಕೊಳ್ಳಬೇಕು. ಕಂಟ್ರಾಕ್ಟು ವಾಯಿದೆ ಮುಗಿದ ಬಳಿಕ ಮೊದಲಿನ ಕಂಟ್ರಾಕ್ಟುದಾರನಲ್ಲಿ ಕರ್ಚಾಗದೆ ಬಾಕಿ ಇರುವಂಥಾ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದೆ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಎರಡು ತಿಂಗಳಿಗೆ ಬೇಕಾದಷ್ಟರಲ್ಲಿ ಕಮಿಷನರವರಿಂದ ತೀರ್ಮಾನಿಸಲ್ಪಡುವ ಖರೀದಿಗೆ ಮತ್ತು ಅವರಿಂದ ಎಷ್ಟೆಷ್ಟು ಎಂಬದಾಗಿ ನಿರ್ಣಯಿಸಲ್ಪಡುತ್ತದೋ ಅಷ್ಟಷ್ಟನ್ನು ಕೊಂಡುಕೊಳ್ಳಬೇಕೆಂದು ಕಮಿಷನರವರಿಂದ ಅಪ್ಪಣೆ ಕೊಡಲ್ಪಟ್ಟರೆ ಕೊಂಡುಕೊಳ್ಳುವದಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

11. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತು ಮಾಡಿ ತಿಳಿದುಕೊಳ್ಳಬಹುದು.

"ಹುಕುಂ ಬಮೋಜೀಬ್"
ಆರ್. ಸಿ. ಎಚ್. ಎಂ. ಕಿಂಗ್,
ಚೀಫ್ ಕಮಿಷನರವರ ಸೆಕ್ರೆಟೆರಿಯವರು.

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್.

ಸನ್ 1895ನೇ ಇಸವಿಯ ಮೂರನೇ ನಂಬರು ರೆಗ್ಯುಲೇಷನ್ ಆದ ಮೈಸೂರ ಕಂಪನೀಸ್ ಆಕ್ಟು ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿಕೇಷನ್ನೊಡನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಬಂದಕ್ಕೆ 5 ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡಲ್ಪಡುವದು. ಪ್ರಕಟನೆ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಇದರಡಿ ಸೈನ್ ಮಾಡಿರುವವರಿಂದ ತರಿಸಿಕೊಳ್ಳಬಹುದು.

ಏ ಸುಬ್ಬರಾವ್,
ಮ್ಯಾನೇಜಿಂಗ್ ಡೈರೆಕ್ಟರ್,
ಬೆಂಗಳೂರು-ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,
68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಫರ್ಮಾಯಿಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ|| 22, ಸನ್ 1903.

IIನೇ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 17ನೇ ಜನವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕಾನಕಾನಹಳ್ಳಿ ತಾಲ್ಲೂಕು ಕಬ್ಬಾಳು ಸ್ಟೇಟ್ ಫಾರೆಸ್ಟಿನಲ್ಲಿ ಗುರ್ತುಮಾಡಿರುವ ಕೂಪಿನಲ್ಲಿನ ಚಾಬೀನೆ ಮತ್ತು ಸಾವೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಕಡಿದು ಸಾಗಿಸಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟು ಆಫಿಸರವರಿಂದ 1903ನೇ ಇಸವಿ ಜನವರಿ 31ನೇ ತಾರೀಖು ದಿವಸ ಕಬ್ಬಾಳಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

2. ಈ ಹರಾಜು ಫಾರೆಸ್ಟು ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾತಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ಯನು ನಡಿಸುವ ಫಾರೆಸ್ಟು ಆಫಿಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೇಯೇ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್‌ದಾರನು ಇಡಬೇಕಾದ 75 ಜಾಮೀನು 100 ರೂಪಾಯಿಗಳನ್ನು ಗೌರ್ನಮೆಂಟ್ ಸೇವಿಂಗ್ಸ್‌ಬ್ಯಾಂಕಿನಲ್ಲಿ ಇಡುತ್ತೆ.

5. ಹರಾಜ್ ಮಂಜೂರಾತಿ ತಿಳಿಸಿದ ಒಂದು ವಾರದೊಳಗಾಗಿ ಮಂಜೂರಾದ ಸವಾಲ್‌ದಾರನು ಸರಿಯಾದ ಸ್ಟಾಂಪು ಕಾಗದದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರೆದುಕೊಡಬೇಕು. ತಪ್ಪಿದಲ್ಲಿ ಕೂಪನ್ನು ಪುನಃ ಹರಾಜು ಮಾಡಿಸಲಾದೀತು. ದುಸರೆ ಹರಾಜಿನಲ್ಲಿ ಏನಾದರೂ ಲುಕ್ಸಾನ್ ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿಕೊಡಬೇಕು. ಆದರೇ ಏನಾದರೂ ಜಾಸ್ತಿ ಬಂದರೆ ಹಿಸ್ಸೆ ದೊರಿಯಲಾರದು.

ಷರತ್ತುಗಳು.

1. ಸಂದಲ್ ಗಿಡಗಳು, ಗುರ್ತುಮಾಡಿಯಿರುವ ಮರಗಳು ಮತ್ತು ಸೊಸಿಗಳು ಅಂದರೆ ಸುತ್ತಳತೆ ಒಂದಡಿ ಒಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಮಿಕ್ಕ ಗಿಡಗಳನ್ನು ಭೂಮಿಮಟ್ಟಕ್ಕೆ ಸರಿಯಾಗಿ ಕತರಾಯಿಸಿಕೊಳ್ಳಬೇಕು.

2. ಸಾವೆ ಮತ್ತು ಚಾಬೀನೆ ಗಿಡಗಳು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟಾದರೆ ಕಂಟ್ರಾಕ್ಟುದಾರನು ಫಾರೆಸ್ಟು ಆಫಿಸರವರು ಗೊತ್ತು ಮಾಡುವ ಲುಕ್ಸಾನ್ ಮೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಮರಗಳು ಇತರ ಪಸಾರೆ ಬಾಬುಗಳು ಮತ್ತು ಹುಲ್ಲು ಇದು ಯಾವದೂ ಹರಾಜಿಗೆ ಶೇರಿಯಿಲ್ಲಾ. ಯಾವದಾದರೂ ಮರಗಳನ್ನು ಮನಸ್ವಿನಿಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮಾರೀಪತ್ತು ಕಾಲ್ಸ ಮಾಡಿಸಿ ತಗಲುವ ಲಾಗೋಡನ್ನು 10) ಒಂದನೂರು ರೂಪಾಯಿನ ಸೆಕ್ಯೂರಟಿ ಹಣದಿಂದ ವಸೂಲ್ಮಾಡುತ್ತೆ.

4. ಚಾಬೀನೆ ಮತ್ತು ಸಾವೆ ಕತ್ರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಜೂನ್ 30ರ ಒಳಗೆ ಪೂರೈಸಿಕೊಳ್ಳಬೇಕು. ಹಾಗೆಮಾಡದೇ ಇದ್ದರೆ ಕಂಟ್ರಾಕ್ಟುದಾರನು ಖಾತರಿಗಾಗಿ ಕೊಟ್ಟಿಯಿರುವ ಮೊಬಲಗನ್ನು ಸರ್ಕಾರಕ್ಕೆ ಶೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಚಾಬೀನೆ ಸಾವೆ ಕತ್ರಾವಣಿ ಮಾಡಿಕೊಳ್ಳುವ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದಾಗಿ ಇರುತ್ತೆ.

5. ಕಂಟ್ರಾಕ್ಟುದಾರನು ಚಾಬೀನೆ ಮತ್ತು ಸಾವೆ ಖಾಯಿಷ್ ಮಾಡುವ ಮೊತ್ತಕ್ಕೆ ಹಾಸಲ್ ಪಾವತಿ ಮಾಡಿದನಂತರ ರೇಂಜ್ ಫಾರೆಸ್ಟು ಆಫಿಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸು ಕೊಡುತ್ತಾರೆ ಸದು ಕೂಪಿನಿಂದ ರೂಢಿಸಿದ ಬಾಬು ಕೂಪಿನಿಂದ ಸಾಗಿಸುವದಕ್ಕೆ ಫಾರೆಸ್ಟರು ರಹದಾರಿ ಕೊಡುತ್ತಾರೆ.

6. ಕೂಪಿನಿಂದ ಸಾವೆ ಮತ್ತು ಚಾಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತ್ರಾವಣಿ ಕೆಲಸಕ್ಕಾಗಿ ಕೊಟ್ಟಿಯಿರುವ ಕೂಪಿನಲ್ಲಿ ಅಸಲ್ ಅಥವಾ ಸಾವೆಗಾಡಿ ಮಾರ್ಗದಲ್ಲಿ ಆಗಲಿ ಬೇಸಿಗೆಕಾಲದಲ್ಲಿ ಅಂದರೆ 1903ನೇ ಫೆಬ್ರವರಿ 1ರ ಲಾಗಾಯತು 1903ನೇ ಮೇ 31ರ ವರಿವಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದ್ದೆಂದು ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

ಟಿ. ಅಬ್ದುಲ್ ಕರೀಂ, ಡಿಸ್ಟ್ರಿಕ್ಟ್ ಫಾರೆಸ್ಟ್ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮಾ.

ತಾರೀಖು 19ನೇ ಮಾಹೆ ಡಿಸೆಂಬರ್ 1902ನೇ ಇಸವಿ.

ಮೈಸೂರು ಗೌರ್ನ್ಮೆಂಟ್ 1901ನೇ ಇಸವಿ ಅಕ್ಟೋಬರ್ ಮಾಹೇ 2ನೇ ಮುಕ್ಕಾಂನಲ್ಲಿ ಪ್ರಾಯಿಷ್ ಆಗಿರುವ 245–1300ನೇ ನಂಬರು ಇಸ್ತಿಹಾರ್ನಾಮಾ XIIನೇ ರೂಲ್ ಅನುಸರಿಸಿ ಪ್ರಸಿದ್ಧಪಡಿಸುವದೇನಂದರೆ:—

ಈ ಕೆಳಗೆ ನಮೂದಿಸಲ್ಪಡುವ ಫಾರೆಸ್ಟ್ ಮತ್ತು ರೆವಿನ್ಯೂ ಅಧಿಕಾರಿಗಳು ಹಾಸನ ಡಿಸ್ಟ್ರಿಕ್ಟಿನಲ್ಲಿ ವುಳಿಸಿಕೊಳ್ಳಲ್ಪಡದಿರುವ (ಅನ್‌ರಿಸರ್ವಡ್) ಫಾರೆಸ್ಟುಗಳಲ್ಲಿ ಚೌಬೀನಾ ಮರಗಳು, ಬೊಂಬುಗಳು, ಮತ್ತು ಸೌದೆ ಇವುಗಳನ್ನು ಕತರಾಯಿಸಿ ಸಾಗಿಸಿಕೊಂಡು ಹೋಗತಕ್ಕ ಬಗ್ಯೆ ವಿಧಾಯಕವಾದ ಡ್ಯೂಟೀಯಾನೇ ತೆರಿಗೆ ವಸೂಲಿಯಿಂದ ರಹದಾರೀ ಕೊಡಬಹುದಾದ ಅಧಿಕಾರವನ್ನು ಕೊಡಲ್ಪಟ್ಟವರಾಗಿರುತ್ತಾರೆ.

ನಂಬ್ರ	ಅಧಿಕಾರಿಯ ಹೆಸರು.	ಅಧಿಕಾರದ ತಪಸೀಲ್.	ಅಧಿಕಾರ ಚಲಾಯಿಸಬಹುದಾದ ಪರಿಮಿತಿಯಾನೇ ಸರಹದ್ದು.
1	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ...	ವುಳಿಸಿಕೊಂಡಿರುವ ಮತ್ತು ವುಳಿಸಿಕೊಳ್ಳಲ್ಪಡದಿರುವ ಜಾತೀ ನಾಟಾಗಳು, ಬಿದರು, ಹಸೀ ಮತ್ತು ಒಣಸೌದೆ ಇವುಗಳನ್ನು ಕತರಾಯಿಸತಕ್ಕ ಮತ್ತು ಸಾಗಿಸತಕ್ಕ ಬಗ್ಯೆ ಡ್ಯೂಟೀ ವಸೂಲೀಯಿಂದ ರಹದಾರೀ ಕೊಡಬಹುದು.	ಡಿಸ್ಟ್ರಿಕ್ಟಿನಲ್ಲಿ.
2	ಅಮಲ್ದಾರ್ರವರು ...	ವುಳಿಸಿಕೊಳ್ಳಲ್ಪಡದಿರುವ ಜಾತೀ ನಾಟಾಗಳೂ, ಮತ್ತು ಬಿದರು ಇವುಗಳನ್ನು ಕಡಿಯುವದಕ್ಕೂ ಸಾಗಿಸುವದಕ್ಕೂ ತೆರಿಗೇ ವಸೂಲೀಯಿಂದ ಲೈಸೆನ್ಸ್ ಕೊಡಬಹುದು.	ಆಯಾಯ ತಾಲ್ಲೂಕು ಸರಹದ್ದಿನಲ್ಲಿ.
3	ರೇಂಜಾಫೀಸರವರು ...	ಡಿಟೋ	ರೇಂಜಿಗೆ ಸಂಬಂಧಪಟ್ಟ ತಾಲ್ಲೂಕುಗಳಲ್ಲಿನ ವುಳಿಸಿಕೊಳ್ಳಲ್ಪಟ್ಟಿರುವ ಭೂಮಿಯಲ್ಲಿ.
4	ಫಾರೆಸ್ಟರು ...	ಒಣಗಿದ ಸೌದೇಮಾತ್ರ ಕಡಿಯುವದಕ್ಕೂ ಸಾಗಿಸುವದಕ್ಕೂ ತೆರಿಗೆ ವಸೂಲೀಯಿಂದ ಲೈಸೆನ್ಸ್ ಕೊಡಬಹುದು.	ಛಾರ್ಜಿನೊಳಗಿರುವ ಸರಹದ್ದಿನಲ್ಲಿ ವುಳಿಸಿಕೊಂಡಿರುವ ಜಮೀನುಗಳಲ್ಲಿನದಕ್ಕೆ.
5	ಶೇಕ್‌ದಾರ್ರು ...	ಡಿಟೋ	ಸಂಬಂಧಪಟ್ಟ ಹೋಬಳಿಯಲ್ಲಿ ವುಳಿಸಿಕೊಳ್ಳಲ್ಪಡದಿರುವ ಜಮೀನುಗಳಲ್ಲಿನದಕ್ಕೆ.
6	ಡೆಪ್ಯುಟಿ ಕಮೀಷನರವರ ಆರ್ಡರ್ ಮೇರೆಗೆ ಸ್ಪೆಷಲ್ಲಾಗಿ ಮೊಕರೂರ್ ಮಾಡಲ್ಪಟ್ಟಿರುವ ಇತರೆ ಏಜೆನ್ಸೀಮೂಲಕ್ಕ. (a) ಪಟೇಲ್ ಮತ್ತು ಶ್ಯಾನುಭೋಗರು. (b) ಹೋಬ್ಳೀ ಸ್ಕೂಲ್ ಮೇಸ್ಟರು. (c) (a) ಮತ್ತು (b) ಇವರುಗಳ ಗೈರ್ ಹಾಜರೀ ಸಂದರ್ಭದಲ್ಲಿ ಬರವಣಿಗೆ ಬಲ್ಲ ಇತರರು ಯಾರಾದರು	ಡಿಟೋ	ಡೆಪ್ಯುಟಿ ಕಮೀಷನರವರ ಅಪ್ಪಣೇ ಮೇರೆಗೆ ಗೊತ್ತು ಮಾಡಿಕೊಡುವ ಪರಿಸ್ತರಣದೊಳಗೆ.

2. ಸಾಗಿಸಲ್ಪಡುತ್ತಿರುವ ನಾಟಾ, ಬೊಂಬು, ಮತ್ತು ಸೌದೆ, ಇವುಗಳ ರಫ್ತನ್ನು ಎಲ್ಲಾ ರೆವಿನ್ಯೂ, ಫಾರೆಸ್ಟ್, ಮತ್ತು ಪೋಲೀಸ್ ಆಫೀಸರರೂ ಚಕ್ಮಾಡುವ ಬಗ್ಯೆ ಇದರಿಂದ ಅಧಿಕಾರ ಕೊಡಲ್ಪಟ್ಟವರಾಗಿರುತ್ತಾರೆ.

ನೋಟೀಸ.

ಅಳಲೆಕಾಯಿ, ಸಿಗೆಕಾಯಿ, ಯಾಲಕ್ಕಿ ಮತ್ತು ಗೋಂದು ಹರಾಜು ವಿಚಾರವಾಗಿ 8-1-1903ನೇ ಮುಕ್ಕಾಂ ಮೈಸೂರು ಗೆಜೆಟ್, 2ನೇ ಭಾಗ, 5ನೇ ಪುಟದಲ್ಲಿ ಪ್ರಾಯಿಷಾಗಿ ಇರುವ ನೋಟಿಫಿಕೇಷನ್ನನ್ನು ಸಮಸ್ತರೂ ನೋಡತಕ್ಕದ್ದು.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಹಾಸನದ ಡಿಸ್ಟ್ರಿಕ್ಟು.

1903ನೇ ಇಸವಿ ಜನವರಿ ತಾರೀಖು 13ರಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್, ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು, ಅರಂಬಳ್ಳಿ ಫಾರೆಸ್ಟು.

ಸರ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷರ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸರ್ 1902ನೇ ಇಸವಿ ಡಿಸೆಂಬರು ಮಾಹೆ 18ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷರ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1902ನೇ ಇಸವಿ ಡಿಸೆಂಬರು 18ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತ ಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ಪ್ರಸ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷರ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ಮಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು.	ಕೊಪ್ಪ ತಾಲ್ಲೂಕು—ಯಡೇಹಳ್ಳಿ ಸಬ್ ತಾಲ್ಲೂಕು.	28¾ ಚದರ ಮೈಲಿಗಳು.	ಅರಂಬಳ್ಳಿ.	ಸ್ಥಳ :—ಶಿವಮೊಗ್ಗ—ಯಡೇಹಳ್ಳಿ ರಸ್ತೆಗೂ ಯಡೇಹಳ್ಳಿ—ಮಂಡಗದ್ದೆ ರಸ್ತೆಗೂ ಮಧ್ಯೆ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಸರಹದ್ದಿಗೆ ದಕ್ಷಿಣದಲ್ಲಿರುವ ಪಟ್ಟಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ.—ಕಣಬೂರು ಗ್ರಾಮದ ಸರ್ವೆ ನಂ. 64ರ ನೈರುತ್ಯಮೂಲೆಯಿಂದ ಗಡಿಯು ಷುರುವಾಗಿ ಸರ್ವೆ ನಂ. 64—25ರ ದಕ್ಷಿಣ ಯಲ್ಲೆಯನ್ನು ಅನುಸರಿಸಿಕೊಂಡು ಸರ್ವೆ ನಂ. 25ರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 108ರಲ್ಲಿ ಹಾದು ಸರ್ವೆ ನಂ. 107ರ ವಾಯುವ್ಯ ಮೂಲೆಯನ್ನು ಶೇರುತ್ತದೆ. ಅನಂತರ ಇದೇ ನಂಬರಿನ ದಕ್ಷಿಣ ಮತ್ತು ಪೂರ್ವದ ಗಡಿಗಳನ್ನು ಅನುಸರಿಸಿಕೊಂಡು ಆದರ ವಾಯುವ್ಯ ಮೂಲೆಗೆ ಬರುತ್ತದೆ. ತರುವಾಯ ಸರ್ವೆ ನಂ. 106—105—

ಡಿಸ್ಟ್ರಿಕ್ಟು.	ತಾಲ್ಲೂಕು, ಜಹಗೀರಿ ಇ ಗ್ರಾಮ.	ಸುಮಾರು ವಿಸ್ತೀರ್ಣ.	ಪ್ರಾಕೃತಿಕ ಜಾಗ.	ಸ್ಥಳ ವ ಚಕ್ಕುಬಂದಿ.
ಕಡೂರು.	ಕೊಪ್ಪ ತಾಲ್ಲೂಕು ಯಡೇಹಳ್ಳಿ ಸಬ್ ತಾಲ್ಲೂಕು.	28¾ ಚದರ ಮೈಲಿಗಳು.	ಆರಂಬೈ.	104—103 ಇವುಗಳ ದಕ್ಷಿಣ ಎಲ್ಲೆಯನ್ನು ಸರ್ವೆ ನಂ. 101ರ ಪಶ್ಚಿಮ ಮತ್ತು ದಕ್ಷಿಣ ಎಲ್ಲೆಯನ್ನು ಸರ್ವೆ ನಂ. 99ರ ಪಶ್ಚಿಮ, ದಕ್ಷಿಣ ಮತ್ತು ಪೂರ್ವ ಎಲ್ಲೆಗಳನ್ನು ಸರ್ವೆ ನಂ. 117ರ ದಕ್ಷಿಣ ಮತ್ತು ಪೂರ್ವ ಎಲ್ಲೆಗಳನ್ನು ಮತ್ತು ಸರ್ವೆ ನಂ. 114ರ ಪೂರ್ವ ಎಲ್ಲೆಯನ್ನು ಅನುಸರಿಸಿ ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಇದೇ ಗ್ರಾಮದ ಸರ್ವೆ ನಂ. 97ರಲ್ಲಿ ಹಾದು ಶಿವಮೊಗ್ಗ ಡಿಸ್ಟ್ರಿಕ್ಟಿಗೆ ಸೇರಿದ ಕಾಕನ ಹೊಸೂರು ಗ್ರಾಮದ ಸರಹದ್ದಿನಲ್ಲಿರುವ ಹಳ್ಳಕ್ಕೆ ತಗಲುತ್ತದೆ. ತರುವಾಯ ಹಳ್ಳದ ಪೂರ್ವ ಧಡವನ್ನು ಸುಮಾರು 3 ಫರ್ಲಾಂಗು ವರಿಗೆ ಅನುಸರಿಸಿ ಸರ್ವೆ ನಂ. 97ರ ವಾಯುವ್ಯ ಮೂಲೆಗೆ ಬರುತ್ತದೆ. ತರುವಾಯ ಈ ನಂಬರಿನ ಪೂರ್ವ ಎಲ್ಲೆಯನ್ನು ಕುಸಬೂರು ಗ್ರಾಮದ ಸರ್ವೆ ನಂ. 66—65ರ ಪೂರ್ವ ಎಲ್ಲೆಗಳನ್ನು ನೆಲಗದ್ದೆ ಗ್ರಾಮದ ಸರ್ವೆ ನಂ. 125—126ರ ಉತ್ತರ ಎಲ್ಲೆಗಳನ್ನು ಅನುಸರಿಸಿಕೊಂಡು ಶಿವಮೊಗ್ಗ-ಯಡೇಹಳ್ಳಿ ರಸ್ತೆಯನ್ನು ಸೇರುತ್ತದೆ. ಪೂರ್ವಕ್ಕೆ—ಮೇಲಿನ ರಸ್ತೆಯನ್ನೇ ಅನುಸರಿಸಿಕೊಂಡು ಗಡಿಯು ವಿಠಲ ಗ್ರಾಮದ ಸರ್ವೆ ನಂ. 2ರ ಈಶಾನ್ಯ ಮೂಲೆಯನ್ನು ಕೂಡುತ್ತದೆ. ದಕ್ಷಿಣಕ್ಕೆ—ವಿಠಲಗ್ರಾಮದ ಸರ್ವೆ ನಂ. 2-3ರ ಉತ್ತರ ಎಲ್ಲೆಯನ್ನು ಸರ್ವೆ ನಂ. 4-16ರ ಉತ್ತರ ಮತ್ತು ಪಶ್ಚಿಮ ಎಲ್ಲೆಗಳನ್ನು ಸರ್ವೆ ನಂ. 60ರ ಪಶ್ಚಿಮ ಎಲ್ಲೆಯನ್ನು ಸರ್ವೆ ನಂ. 83ರ ಉತ್ತರ ಎಲ್ಲೆಯನ್ನು ಅನುಸರಿಸಿಕೊಂಡು ಕೊನೇ ನಂಬರಿನ ವಾಯುವ್ಯ ಮೂಲೆಗೆ ಸೇರುತ್ತದೆ. ನಂತರ ಸರ್ವೆ ನಂ. 35—52ರಲ್ಲಿ ಹಾದು ಸರ್ವೆ ನಂ. 51ರ ಈಶಾನ್ಯ ಮೂಲೆಗೆ ಕೂಡುತ್ತದೆ. ತರುವಾಯ ಸರ್ವೆ ನಂ. 51ರ ಉತ್ತರ ಮತ್ತು ಪಶ್ಚಿಮ ಎಲ್ಲೆಗಳನ್ನು ಅನುಸರಿಸಿ ಈ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 50—49—47ರ ಪಶ್ಚಿಮ ಎಲ್ಲೆಯನ್ನು ಸರ್ವೆ ನಂ. 39—38—37ರ ಉತ್ತರ ಎಲ್ಲೆಯನ್ನು ಅನುಸರಿಸಿಕೊಂಡು ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಈ ಗ್ರಾಮದ ಸರ್ವೆ ನಂ. 35ರಲ್ಲು ಸೂಸಲವಾನಿ ಗ್ರಾಮದ ಸರ್ವೆ ನಂ. 115ರಲ್ಲಿ ಹಾದು ಸರ್ವೆ ನಂ. 119ರ ಈಶಾನ್ಯ ಮೂಲೆಯನ್ನು ಕೂಡುತ್ತದೆ. ತರುವಾಯ ಸರ್ವೆ ನಂ. 119-117ರ ಉತ್ತರ ಎಲ್ಲೆಯನ್ನು ಸರ್ವೆ ನಂ. 65ರ ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಸರ್ವೆ ನಂ. 68ರ ಪೂರ್ವ ಎಲ್ಲೆಯನ್ನು ಅನುಸರಿಸಿ ಕೊನೇ ನಂಬರಿನ ಈಶಾನ್ಯ ಮೂಲೆಯನ್ನು ಸೇರುತ್ತದೆ. ನಂತರ ಸರ್ವೆ ನಂ. 71ರಲ್ಲಿ ಹಾದು ತಡಬಿನಮೈಲು ಗ್ರಾಮದ ಸರ್ವೆ ನಂ. 102ರ ಆಗ್ನೇಯ ಎಲ್ಲೆಯನ್ನು ತಗಲುತ್ತದೆ. ನಂತರ ಈ ನಂಬರಿನ ಪೂರ್ವ ಎಲ್ಲೆಯನ್ನು ಸರ್ವೆ ನಂ. 100ರ ಪೂರ್ವ ಮತ್ತು ಉತ್ತರ ಎಲ್ಲೆಗಳನ್ನು ಸರ್ವೆ ನಂ. 96—95—14—18—17—23—25 ಇವುಗಳ ಉತ್ತರ ಎಲ್ಲೆಯನ್ನು ಅನುಸರಿಸಿ ಯಡೇಹಳ್ಳಿ—ಮಂಡಗದ್ದೆ ರಸ್ತೆಯನ್ನು ಕೂಡುತ್ತದೆ. ಪಶ್ಚಿಮಕ್ಕೆ—ಈ ರಸ್ತೆಯನ್ನೇ ಅನುಸರಿಸಿ ಮುತ್ತಿನ ಕೊಪ್ಪದ ಸರ್ವೆ ನಂ. 16ರ ಈಶಾನ್ಯ ಮೂಲೆ ವರಿಗೂ ಹೋಗುತ್ತದೆ. ನಂತರ ಕುಶಲಾಪುರದ ದಕ್ಷಿಣ ಸರಹದ್ದು ಹಿಡಿದು ಹೋಗಿ ಮುತ್ತಿನಕೊಪ್ಪದ ಸರ್ವೆ ನಂ. 11—12—15ರ ದಕ್ಷಿಣ ಎಲ್ಲೆಯನ್ನು 15—14—3ರ ಪೂರ್ವ ಎಲ್ಲೆಯನ್ನು ಅನುಸರಿಸಿ ಮುತ್ತಿನಕೊಪ್ಪಕ್ಕೆ ಹೋಗುವ ಗಾಡಿ ದಾರಿಯನ್ನು ಕೂಡಿಕೊಳ್ಳುತ್ತದೆ. ನಂತರ ಈ ಗಾಡಿ ದಾರಿಯನ್ನೇ ಹಿಡಿದು ಕೆಲವು ದೂರ ಹೋಗಿ ತರುವಾಯ ಕಣಬೂರು ರಸ್ತೆ ಹಿಡಿದು ಮುತ್ತಿನಕೊಪ್ಪದ ಸರ್ವೆ ನಂ. 135ರ ಈಶಾನ್ಯ ಮೂಲೆಯನ್ನು ಕೂಡುತ್ತದೆ. ತರುವಾಯ ಸರ್ವೆ ನಂ. 121ರ ಪೂರ್ವ ಎಲ್ಲೆಯನ್ನು ಅನುಸರಿಸಿ ಹೊರಟ ಸ್ಥಳವನ್ನು ಸೇರುತ್ತದೆ

1903ನೇ ಇಸವಿ ಜನವರಿ ತಾರೀಖು 13ರಲ್ಲು.

ಫಾರೆಸ್ಟ್ ಸೆಟ್ಲ ಮೆಂಟ್. ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು, ಕುಸ್ಕಲ್ ಫಾರೆಸ್ಟು.

ಸ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸ್ 1902ನೇ ಇಸವಿ ಡಿಸೆಂಬರು ಮಾಹೆ 18ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1902ನೇ ಇಸವಿ ಡಿಸೆಂಬರು 18ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರಶ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡದುಕೊಳ್ಳತಕ್ಕದ್ದು.]

ಸದರೀ ಪ್ರದೇಶವಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆಯೆಂದು ವಾದಿಸುವ ಸಮಸ್ತಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್‌ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೋ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವುದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಮ್ಯಾಪಿನ ನಂಬರು.	ಸ್ಥಳ ವ ಚಕ್ಕುಬಂದಿ.
ಕಡೂರು ಡಿಸ್ಟ್ರಿಕ್ಟು.	ಕೊಪ್ಪ ತಾಲ್ಲೂಕು	25½ ಚದರ ಮೈಲುಗಳು.	ಪ್ಲಾನ್ ೧ ಕಡತಸ್ತು	ಸ್ಥಳ.—ಕೊಪ್ಪ ತಾಲ್ಲೂಕಿನ ಪೂರ್ವ ಸರಹದ್ದಿನಲ್ಲಿ ಬಾಳೇ ಹೊನ್ನೂರು—ಯಡೇಹಳ್ಳಿ ರಸ್ತೆಗೂ ಭದ್ರಾನದಿಗೂ ಮಧ್ಯದಲ್ಲಿರುವ ಬೆಟ್ಟದ ಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ—ಬಾಳೇ ಗ್ರಾಮದ ಸರ್ವೆ ನಂ. 27ರ ನೈರುತ್ಯ ಮೂಲೆಯಲ್ಲಿ ಗಡಿಯು ಶುರುವಾಗಿ, ಈ ನಂಬರಿನ ದಕ್ಷಿಣ ಮತ್ತು ಪೂರ್ವದ ಎಲ್ಲೆಗಳನ್ನು ಹಿಡಿದು ಸರ್ವೆ ನಂ. 105ರಲ್ಲಿ ಹಾದು ಸರ್ವೆ ನಂ. 100ರ ದಕ್ಷಿಣ ಎಲ್ಲೆಯನ್ನು ಸೇರುತ್ತದೆ. ತರುವಾಯು ಆಗ್ನೇಯ ದಿಕ್ಕಿಗೆ ಹೊರಟು ಸರ್ವೆ ನಂ. 101ರ ನೈರುತ್ಯ ಮೂಲೆಗೆ ಬರುತ್ತದೆ. ನಂತರ ಸರ್ವೆ ನಂ. 104, 103ರ ದಕ್ಷಿಣ ಎಲ್ಲೆಯನ್ನು ಅನುಸರಿಸಿಕೊಂಡು ಸರ್ವೆ ನಂ. 96ರ ದಕ್ಷಿಣ ಎಲ್ಲೆಯ ಮಧ್ಯಭಾಗಕ್ಕೆ ಹೋಗುತ್ತದೆ. ಈ ನಂಬರಿನ ದಕ್ಷಿಣ ಎಲ್ಲೆಯನ್ನೇ ಹಿಡಿದು ವಕ್ಕಣೆ ಗ್ರಾಮದ ದಕ್ಷಿಣ ಎಲ್ಲೆಯನ್ನು ಸರ್ವೆ ನಂ. 115, 24, 49, 48ರ ಪಶ್ಚಿಮ ಎಲ್ಲೆಗಳನ್ನು ಸರ್ವೆ ನಂ. 40,

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಇಲ್ಲವೆ ಗ್ರಾಮ.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳದ ಚಕ್ಕುಬಂದಿ.
ಕಡೂರು ಡಿಸ್ಟ್ರಿಕ್ಟು.	ಕೊಪ್ಪ ತಾಲ್ಲೂಕು	25½ ಚದರ ಮೈಲಿಗಳು.	ಮುದುಗುಣಿ ಫಾರೆಸ್ಟು.	41, 42, 43 ಇವುಗಳ ದಕ್ಷಿಣ ಎಲ್ಲೆಯನ್ನು ಅನುಸರಿಸಿಕೊಂಡು ಸರ್ವೆ ನಂ. 45ರಲ್ಲಿ ಹಾದು ಸರ್ವೆ ನಂ. 75, 103ರ ದಕ್ಷಿಣ ಎಲ್ಲೆಯನ್ನು ಹೊನ್ನಿಕೊಡಗಿ ಗ್ರಾಮದ ಸರ್ವೆ ನಂ. 32ರ ದಕ್ಷಿಣ ಎಲ್ಲೆಯನ್ನು ಹಿಡಿದು ಯಡೇಹಳ್ಳಿ—ಚಿಕ್ಕಮಗಳೂರು ರಸ್ತೆಯನ್ನು ಸೇರುತ್ತದೆ. ತರುವಾಯ ಭದ್ರಾನದಿ ಕಟ್ಟುವವರಿಗೂ ಈ ರಸ್ತೆಯನ್ನೇ ಅನುಸರಿಸುತ್ತದೆ. ಪೂರ್ವಕ್ಕೆ.—ಭದ್ರಾನದೀ ತೀರವನ್ನೇ ಅನುಸರಿಸಿಕೊಂಡು ಆಡವಳ್ಳಿ ಗ್ರಾಮದ ಸರ್ವೆ ನಂ. 225ರ ಈಶಾನ್ಯ ಮೂಲೆಯನ್ನು ಕೂಡುತ್ತದೆ. ದಕ್ಷಿಣಕ್ಕೆ.—ತರುವಾಯ ಈ ನಂಬರಿನಲ್ಲಿ ಹಾದು ಸರ್ವೆ ನಂ. 227ರ ಉತ್ತರ ಎಲೆಯನ್ನು ಹಿಡಿದು ಸರ್ವೆ ನಂ. 204ರಲ್ಲಿ ಹಾದು ಸರ್ವೆ ನಂ. 150ರ ಉತ್ತರ ಎಲ್ಲೆಯನ್ನು ಸರ್ವೆ ನಂ. 152, 153, 154, 155 ಇವುಗಳ ಪೂರ್ವ ಎಲ್ಲೆಯನ್ನು ಅನುಸರಿಸಿಕೊಂಡು ಬಂದುದನ್ನು ಹಳ್ಳವನ್ನು ಕೂಡುತ್ತದೆ. ಈ ಹಳ್ಳದ ಪಶ್ಚಿಮಧಡವತ್ತಿ ಸುಮಾರು ಮೂರು ಫರ್ಲಾಂಗುಗಳ ವರಿಗೂ ಅನುಸರಿಸಿಕೊಂಡು ಸರ್ವೆ ನಂ. 193ರ ಈಶಾನ್ಯ ಮೂಲೆಯನ್ನು ಸೇರುತ್ತದೆ. ತರುವಾಯ ಸರ್ವೆ ನಂ. 190, 188, 187, 186, 184 ಇವುಗಳ ಉತ್ತರ ಎಲ್ಲೆಯನ್ನು ಹಿಡಿದು ಬಾಳೆಹೊನ್ನೂರು—ಯಡೇಹಳ್ಳಿ ರಸ್ತೆಯನ್ನು ಕೂಡಿಕೊಳ್ಳುತ್ತದೆ. ಪಶ್ಚಿಮಕ್ಕೆ.—ತರುವಾಯ ಈ ರಸ್ತೆಯನ್ನೇ ಹಿಡಿದು ಹೊರಟ ಸ್ಥಳವನ್ನು ಸೇರುತ್ತದೆ.

1903ನೇ ಇಸವಿ ಜನವರಿ ತಾರೀಖು 13ರಲ್ಲು.

ಫಾರೆಸ್ಟ್ ಸೆಟ್ಲಮೆಂಟ್, ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು, ಮುದುಗುಣಿ ಫಾರೆಸ್ಟು.

ಸಕ 1901ನೇ ಇಸವಿ 11ನೇ ಖಾನೂನಾದ ಮೈಸೂರು ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸಕ 1902ನೇ ಇಸವಿ ಡಿಸೆಂಬರು ಮಾಹೆ 18ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಸೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿದೆಯಾದ್ದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1902ನೇ ಇಸವಿ ಡಿಸೆಂಬರು ತಾರೀಖು 18ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತ ಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರಿಗೆ ಬರದುಕೊಂಡು ಅವರಿಂದ ಲಿಖಿತ ಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವಕಡೆಯಲ್ಲೂ ಸಾಗುವಳಿಗಾಗಲಿ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತಜನಗಳು, ಈ ಇಸ್ತಿಹಾರು ಮೈಸೂರು ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರವರಲ್ಲಿ ರೂಬರೂಬ್ ಹಾಜರಾಗಿ, ಮೊಖಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷರ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮುನ್ನಾ ಜಂಗಿಲ್ ಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವವರೆಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತವರೂಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವುದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಅಥವಾ ಗ್ರಾಮ.	ಸುಮಾರು ವಿಸ್ತೀರ್ಣ ಚ. ಮೈ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು ಡಿಸ್ಟ್ರಿಕ್ಟು.	ಕೊಪ್ಪ ತಾಲ್ಲೂಕು	$4\frac{3}{4}$ ಚದರ ಮೈಲಿಗಳು.	ಮುದುಗುಣಿ ಬ್ಲಾಕು.	ಸ್ಥಳ.—ಕೊಪ್ಪ ತಾಲ್ಲೂಕಿನ ಪೂರ್ವ ಸರಹದ್ದಿನಲ್ಲಿ ಬಾಳೆಹೊನ್ನೂರು ಯಡೇಹಳ್ಳಿ ರಸ್ತೆಗೂ ಭದ್ರಾನದಿಗೂ ಮಧ್ಯದಲ್ಲಿರುವ ಬೆಟ್ಟದ ಪ್ರದೇಶ. **ಚಕ್ಕುಬಂದಿ.** ಉತ್ತರಕ್ಕೆ.—ಕೊಳಾಲು ಗ್ರಾಮದ ಸರ್ವೆ ನಂ. 36ರ ವಾಯುವ್ಯ ಮೂಲೆಯಲ್ಲಿ ಗಡಿಯು ಷುರುವಾಗಿ ಆಗ್ನೇಯ ಮಾರ್ಗವಾಗಿ ಈ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆಗಳನ್ನು ಸರ್ವೆ ನಂ. 17ರ ದಕ್ಷಿಣ ಎಲ್ಲೆಯನ್ನು ಅನುಸರಿಸಿಕೊಂಡು ಸರ್ವೆ ನಂ. 26ರ ಪಶ್ಚಿಮ ಎಲ್ಲೆಯನ್ನು ಶೇರುತ್ತದೆ. ತರುವಾಯ ಈ ನಂಬರಿನ ಪಶ್ಚಿಮ ಮತ್ತು ದಕ್ಷಿಣ ಎಲ್ಲೆಗಳನ್ನು ಸರ್ವೆ ನಂ 133ರ ದಕ್ಷಿಣ ಎಲ್ಲೆಯನ್ನು ಸರ್ವೆ ನಂ. 24ರ ಪೂರ್ವ ಎಲ್ಲೆಯನ್ನು ಹಿಡಿದುಕೊಂಡು ಭದ್ರಾನದಿಯನ್ನು ಸೇರುತ್ತದೆ. ಪೂರ್ವಕ್ಕೆ.—ಮುದುಗುಣಿ ಗ್ರಾಮದ ಸರ್ವೆ ನಂ. 70ರ ಆಗ್ನೇಯ ಮೂಲೆ ತಟ್ಟುವವರಿಗೂ ಭದ್ರಾನದಿ. ದಕ್ಷಿಣಕ್ಕೆ.—ತರುವಾಯ ಭದ್ರಾನದಿ ತೀರವನ್ನೇ ಅನುಸರಿಸಿಕೊಂಡು ಯಡೇಹಳ್ಳಿ—ಬಾಳೆಹೊನ್ನೂರು ರಸ್ತೆಯನ್ನು ಕೂಡುತ್ತದೆ. ಪಶ್ಚಿಮಕ್ಕೆ.—ತರುವಾಯ ಈ ರಸ್ತೆಯನ್ನೇ ಹಿಡಿದು ಕೊಳಾಲು ಗ್ರಾಮದ ಸರ್ವೆ ನಂ. 41ರ ವಾಯುವ್ಯ ಮೂಲೆಯನ್ನು ಸೇರಿ ಸರ್ವೆ ನಂ. 25ರ ಪಶ್ಚಿಮಕ್ಕೆ ಇರುವ ಒಂದು ಸಣ್ಣ ಹಳ್ಳವನ್ನು ಅನುಸರಿಸಿಕೊಂಡು ಬಂದು ಹೊರಟ ಸ್ಥಳವನ್ನು ಸೇರುತ್ತದೆ.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟ್ಲಮೆಂಟ್ ಆಫಿಸರವರು, ಕಡೂರು ಡಿಸ್ಟ್ರಿಕ್ಟು.

ನೋಟಿಸ್.

ಚಿತ್ರದುರ್ಗದ ಡಿಸ್ಟ್ರಿಕ್ಟು ಕೆಲವು ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳನ್ನು ತಾರೀಖು 1—2—1903ರ ಲಾಗಾಯಿತು 30—6—1903ರ ವರಿಗೆ ಕ್ರಮವಾದ ಅಪ್ಪಣೆ ಇಲ್ಲದೆ ಯಾರೂ ಪ್ರವೇಶ ಮಾಡಕೂಡದು. ಹೆಚ್ಚಿಗೆ ತಪಶೀಲು ಬಗ್ಗೆ ತಾರೀಖು 8—1—1903ನೇ ಮರ್ಕುಂ 1ನೇ ನಂಬರ್ ಮೈಸೂರ ಗೆಜೆಟಿನ IIನೇ ಭಾಗದ 9ನೇ ಪುಟದಲ್ಲಿ ಪ್ರಾಯಿಷ್ ಆಗಿರುವ ನೋಟಿಸ್ ನೋಡಬೇಕು.

ಕೆ. ಶ್ಯಾಮಯ್ಯಂಗಾರ್, ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಸೆನ್ಸಸ್ ಡಿಪಾರ್ಟ್‌ಮೆಂಟ್.

ನೋಟಿಸ್.

ಮೈಸೂರು ಸೀಮೆಯ ಡೆಪ್ಯುಟಿ ಸೆನ್ಸಸ್ಸು ಸೂಪರಿಂಟೆಂಡೆಂಟರವರ ಆಫೀಸ್.

ತಾರೀಖು 12ನೇ ಜನವರಿ 1903.

ಬೆಂಗಳೂರು ಹೈಗ್ರೌಂಡು ಸ್ಯಾಂಕೀರೋಡು ಅಬ್‌ಷಾಟ್ ಹೌಸಿನಲ್ಲಿರತಕ್ಕ ಡೆಪ್ಯುಟಿ ಸೆನ್ಸಸ್ಸು ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಸ್ವಲ್ಪಭಾಗ ಕತ್ತರಿಸಲ್ಪಟ್ಟ ಬರೆದ ಸುಮಾರು 400 ಮಣ 18 ಅಂಗುಲ ಉದ್ದ 10 ಅಂಗುಲ ಅಗಲ ಇರತಕ್ಕ ಬಾದಾಮಿ ಕಾಗದದ ಸೆನ್ಸಸ್ಸು ಷೆಡ್ಯೂಲುಗಳು ಸರ್ 1903ನೇ ಇಸವಿ ಜನವರಿ ತಿಂಗಳು 28ನೇ ಬುಧವಾರದ ಲಾಗಾಯಿತು ಹರಾಜು ಹಾಕಲ್ಪಡುತ್ತದೆ.

2. ಸರ್ಕನ್ನು ಕೊಂಡುಕೊಳ್ಳುವದಕ್ಕೆ ಅಭಿಲಾಷೆ ಉಳ್ಳವರಿಂದ "ಷೆಡ್ಯೂಲ್ ಕಾಗದವನ್ನು ಕೊಂಡುಕೊಳ್ಳುವದಕ್ಕಾಗಿ ಟೆಂಡರುಗಳು" ಎಂಬದಾಗಿ ವಿಳಾಸ ಬರದು ಮೊಹರಾದ ಲಕ್ಕೋಟೆಗಳು ಮಜಕೂರು 24ನೇ ಶನಿವಾರದ ಪೂರ್ವಾಹ್ನದವರಿಗೂ ಈ ಕೆಳಗೆ ರುಜು ಮಾಡಿರುವವರಿಂದ ಹಿಡಿಯಲ್ಪಡುತ್ತೆ.

(ಎ) ಸರ್ಕನ್ನು ಕೊಂಡುಕೊಳ್ಳುವದಕ್ಕೆ ಸಿದ್ಧವಾಗಿರುವಂಥಾ ಟೆಂಡರುದಾರು (1 ಮಣ=40 ಶೇರು, ಶೇರು=24 ರೂಪಾಯಿ ತೂಕ) ಮಣ ಒಂದಕ್ಕೆ ದರವನ್ನು ನಮೂದಿಸಿ ಟೆಂಡರು ಜೊತೆಗೆ 25 ರೂಪಾಯಿ ಡಿಪಾಜಿಟ್ಟು ಕಳುಹಿಸಬೇಕು.

(ಬಿ) ಮೈಸೂರು ಸೀಮೆಯ ಡೈರೆಕ್ಟರ್ ಆಫ್ ಸ್ಟ್ಯಾಟಿಸ್ಟಿಕ್ಸ್ ಮತ್ತು ಸೆನ್ಸಸ್ಸು ಸೂಪರಿಂಟೆಂಡೆಂಟ್ ಸಾಹೇಬರವರು ಟೆಂಡರುಗಳನ್ನು ಮಂಜೂರು ಮಾಡುವದಕ್ಕೂ ಅಥವಾ ವಜಾ ಮಾಡುವದಕ್ಕೂ ಮುಖ್ತೇಸರರಾಗಿರುತ್ತಾರೆ.

ಅತ್ಯಂತ ಹೆಚ್ಚು ದರವುಳ್ಳ ಟೆಂಡರನ್ನಾಗಲಿ ಯಾ ಯಾವ ಟೆಂಡರನ್ನೇ ಆಗಲಿ ಮಂಜೂರು ಮಾಡುವದಕ್ಕೂ ಅಥವಾ ಕಾರಣಗಳನ್ನು ಕೊಡುವದಕ್ಕೂ ಬದ್ಧರಾಗಿರುವದಿಲ್ಲ.

(ಸಿ) ವಜಾ ಮಾಡಿದ ಟೆಂಡರುಗಳ ಡಿಪಾಜಿಟ್ ಮೊಬಲಗು ವಾಪಸು ಮಾಡಲ್ಪಡುತ್ತೆ ಮತ್ತು ಮಂಜೂರಾದ ಟೆಂಡರುದಾರರು ಸರ್ಕನ್ನು ತೂಕ ಮಾಡಿಸಿ ಬಾಕಿ ಮೊಬಲಗನ್ನು ನಗದು ಕೊಟ್ಟು ಟೆಂಡರು ಮಂಜೂರಾದ ವರ್ತಮಾನ ತಿಳಿದ 5 ದಿವಸದ ವಳಗಾಗಿ ಸ್ವಂತ ಖರ್ಚಿನಿಂದ ಸರಕನ್ನು ತೆಗೆದುಕೊಂಡುಹೋಗಲು ತಪ್ಪಿದರೆ ಟೆಂಡರುದಾರರ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಮತ್ತೊಂದು ಮಾರಾಟದಿಂದುಂಟಾದ ಲುಕ್ಸಾನಿಗೆ ಗುರಿಯಾಗುತ್ತಾರೆ.

ಮೇಲೆ ಹೇಳಿದ ಪ್ರಕಾರ ಟೆಂಡರು ಮೂಲಕ ಮಾರಾಟ ಪೂರ್ತಿಯಾದ ಪಕ್ಷದಲ್ಲಿ ಹರಾಜು ನಿಲ್ಲಿಸಲ್ಪಟ್ಟು ಹರಾಜು ನಿಯಮಿತವಾದದಿನದ ತತ್ಪೂರ್ವವೇ ಆಫೀಸಿನ ನೋಟೀಸ್ ಬೋರ್ಡಿನ ಮೇಲೆ ನೋಟೀಸು ಹಾಕಲ್ಪಡುತ್ತದೆ.

ಸರ್ಕನ್ನು ತೆಗೆದುಕೊಳ್ಳಲು ಅಭಿಲಾಷೆವುಳ್ಳವರು ಆಫೀಸ್ ದಿನಗಳಲ್ಲಿ ಮಧ್ಯಾಹ್ನ 3 ಘಂಟೆಯಿಂದ 5 ಘಂಟೆ ವರಿವಿಗೆ ಸರಕನ್ನು ಅಜಮಾಯಿಷಿ ಮಾಡಬಹುದು.

ಟಿ. ಎನ್. ಲಕ್ಷ್ಮೀನರಸಿಂಹರಾವ್,
ಅಸಿಸ್ಟೆಂಟ್ ಸೇಲ್ಸ್ ಸೂಪರಿಂಟೆಂಡೆಂಟ್ ಇನ್‌ಛಾರ್ಜ್ ಆಫ್ ದಿ
ಡೆಪ್ಯುಟಿ ಸೇಲ್ಸ್ ಸೂಪರಿಂಟೆಂಡೆಂಟ್ಸ್ ಆಫೀಸ್ ಇನ್ ಮೈಸೂರು, ಬೆಂಗಳೂರು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ, ತಾರೀಖು 15ನೇ ಡಿಸೆಂಬರ 1902ನೇ ಇಸವಿ.

ಮಾಲೂರು ತಾಲ್ಲೂಕಿಗೆ ಸೇರಿದ ಜೋಡಿ ಮುತ್ತುಕದಹಳ್ಳಿ ಗ್ರಾಮವು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಮಾಲೂರು ತಾಲ್ಲೂಕು ಅಮಲ್‌ದಾರ್ರವರ ಕಛೇರಿಯಲ್ಲಿ 1903ನೇ ಇಸವಿ ಜನವರಿ 30ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

(ಹೆಚ್ಚು ತಪಶೀಲ್ ಬಗ್ಯೆ 8—1—1903ನೇ ಮರ್ಕಂ 1ನೇ ನಂಬರ ಮೈಸೂರ ಗೆಜೆಟ್ಟಿನ 2ನೇ ಭಾಗದ 11ನೇ ನಂಬರ ಪೇಜು ನೋಡತಕ್ಕದ್ದು.)

ಇಸ್ತಿಹಾರ್ನಾಮಾ, ತಾರೀಖು 16ನೇ ಡಿಸೆಂಬರ 1902.

ಕೋಲಾರ ತಾಲ್ಲೂಕಿಗೆ ಸೇರಿದ ಜೋಡಿ ಬೆಳ್ಳಂಬರೆ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಫೆಬ್ರುವರಿ ತಾರೀಖು 7ರಲ್ಲು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಯೆ ತಾರೀಖು 8—1—1903ನೇ ಮರ್ಕಂ 1ನೇ ನಂಬರ ಮೈಸೂರು ಗೆಜೆಟ್ಟಿನ IIನೇ ಭಾಗದ 10ನೇ ನಂಬರ ಪೇಜು ನೋಡತಕ್ಕದ್ದು.

ಎಫ್. ಸಿ. ಕಾರ್, ಡೆಪ್ಯುಟಿ ಕಮ್ಮಿಷನರ.

ತಾರೀಖು 9ನೇ ಜನವರಿ 1903.

ಶಿಡ್ಲಘಟ್ಟದ ತಾಲ್ಲೂಕಿಗೆ ಸೇರಿದ ಜೋಡಿ ಆನೂರು ತಿಮ್ಮನಹಳ್ಳಿಯೆಂಬ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗಾಗಿ ತಾಲ್ಲೂಕು ಅಮಲ್ದಾರ ಕಛೇರಿಯಲ್ಲಿ ಫೆಬ್ರುವರಿ 24ನೇ ತಾರೀಖು 1903ನೇ ಇಸವಿಯು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಯೆ 15—1—1903ನೇ ಮರ್ಕಂ 2ನೇ ನಂಬರ ಮೈಸೂರು ಗೆಜೆಟಿನ 2ನೇ ಭಾಗದ 27ನೇ ನಂಬರ ಪೇಜು ನೋಡತಕ್ಕದ್ದು.)

ಎಸ್. ಅಮೀರ ಹಸೇನ್, ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ.

ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 17ನೇ ಡಿಸೆಂಬರ 1902.

ತಾರೀಖು 13ನೇ ಡಿಸೆಂಬರ 1902ನೇ ರಾತ್ರಿ ಹೊಳಲ್ಕೆರೆ ತಾಲ್ಲೂಕು ಲಾಕಪ್ಪಿನಿಂದ ಫರಾರಿ ಆದ ಖೈದಿ ಮುರಿಗೆಪ್ಪನ

ಚಹರೆ ತಪಶೀಲ್.

ಹೆಸರು—ಕುಕ್ಕೆ ಮುರಿಗೆಪ್ಪ; ವಯಸ್ಸು—25 ವರುಷಗಳು, ಜಾತಿ—ಸಾದು ಲಿಂಗಾಯಿತ, ತಂದೆ ಹೆಸರು—ಕುಕ್ಕೆ ಸಂಕಪ್ಪ, ಕಸಬು—ಜಿರಾಯಿತು, ವಾಸಸ್ಥಳ—ಹೊಳಲ್ಕೆರೆ.

ಚಹರೆ.

ಎತ್ತರ ಅಡಿಗಳು 5, ಎಣೆಗೆಂಪು ವರ್ನ; ಬಲ ಮೊಳಕೈಮೇಲೆ 2 ಮೈಲ ಕಲೆಗಳು ಇವೆ. ಎಡಪಕ್ಕೆ ಮೇಲೆ 9 ಮೈಲ ಕಲೆಗಳು ಇವೆ. ಮುಖದಮೇಲೆಲ್ಲಾ ಮೈಲ ಕಲೆ ಬಹಳ ಇವೆ. ಕೋಲು ಮುಖ, ಎಡಗಾಲಿನ ಹರ್ಡಿನ ಮೇಲುಗಡೆ ಬಂದು ಕುರುವಿನ ಕಲೆ ಇದೆ.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ.

ಶಿವಮೊಗ್ಗ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ|| ಅರ್ಜಿ ನಂಬರ 116.

ಮೃತಪಟ್ಟ ಶಿವಮೊಗ್ಗಾದಲ್ಲಿ ಲೇಟ್ ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಡಿಪ್ಯುಟಿ ಕನ್ಸರ್ವೇಟರ ಆಫೀಸಿನ ಅಕೌಂಟೆಂಟ್ ಶ್ರೀನಿವಾಸ ರಾಘವಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ರು ವೆಂಕಟಲಕ್ಷ್ಮಮ್ಮನು ಮೃತಪಟ್ಟ ಸದರೀ ಶ್ರೀನಿವಾಸ ರಾಘವಾಚಾರ್ಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ವೆಂಕಟಲಕ್ಷ್ಮಮ್ಮನವರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸ ರಾಘವಾಚಾರ್ಯರ ಜಿಂದಗಿ ಬಗ್ಯಾಗಿ ಬರತಕ್ಕ 1,080—0—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬ್ರ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಲಕ್ಷ್ಮಮ್ಮನವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸ ರಾಘವಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಜನವರಿ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 295.

ಮೃತಪಟ್ಟ ನಂಜಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಕೋಟೆಯಲ್ಲಿರುವ ರಿಜಿಸ್ಟ್ರೇಷನ್ ಗುಮಾಸ್ತೆ ನಂಜಪ್ಪನವರ ಮಗ K. N. ಶ್ರೀಕಂಠಯ್ಯ ಮತ್ತು ನಾರಾಯಣ ಮೈನರ್, ಗಾರ್ಡಿಯನ್ ಶ್ರೀಕಂಠಯ್ಯ, ಮೃತಪಟ್ಟ ಸದರೀ ನಂಜಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ನಂಜಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜನವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 301.

ಮೃತಪಟ್ಟ G. ಶ್ರೀನಿವಾಸ ಅಯ್ಯಂಗಾರ್ರು ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶ್ರೀರಂಗಪಟ್ಟಣದಲ್ಲಿರುವ ಪ್ಲೀಡರು G. ಶ್ರೀನಿವಾಸ ಅಯ್ಯಂಗಾರ್ರು ಹೆಂಡತಿ ಲಕ್ಷ್ಮಮ್ಮ, ಮೃತಪಟ್ಟ ಸದರೀ G. ಶ್ರೀನಿವಾಸ ಅಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸ ಅಯ್ಯಂಗಾರ್ರು ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ G. ಶ್ರೀನಿವಾಸ ಅಯ್ಯಂಗಾರ್ರು ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 309.

ಮೃತಪಟ್ಟ ರಂಗಸಾಮಿಪಿಳ್ಳೆಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಇಟ್ಟಿಗೆಗೂಡಿನಲ್ಲಿರುವ ರಂಗಸಾಮಿಪಿಳ್ಳೆಯವರ ಮಕ್ಕಳು ದೊರಸಾಮಿಪಿಳ್ಳೆಯವರು, ಮೃತಪಟ್ಟ ಸದರೀ ರಂಗಸಾಮಿಪಿಳ್ಳೆಯವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರಂಗಸಾಮಿಪಿಳ್ಳೆಯವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನ ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಸಾಮಿಪಿಳ್ಳೆಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 310.

ಮೃತಪಟ್ಟ ನಂಜುಂಡಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಚಾಮರಾಜ ಮೊಹಲ್ಲಾ ಪಡಿವಾರಹಳ್ಳಿಯಲ್ಲಿರುವ ನಂಜುಂಡಗೌಡ ಪತ್ನಿ ಇವನ ಮಗ ಬಸವಯ್ಯ ಮೈನರ್, ಗಾರ್ಡಿಯನ್ ಚಿಕ್ಕಪ್ಪ ಹೊಂಬಾಳೆ, ಮೃತಪಟ್ಟ ಸದರೀ ನಂಜುಂಡಗೌಡನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ನಂಜುಂಡಗೌಡನ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜುಂಡಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಶಿಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1902—1903ನೇ ಇಸವಿ ಅರ್ಜೀ ನಂಬರ್ 311.

ಮೃತಪಟ್ಟ ಲಿಂಗಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಸಂತೇಪೇಟೆಲಿರುವ ಕುಂಚಿಗರಜಾತಿ ಚಿಕ್ಕ ಲಿಂಗೈಯ್ಯನ ಹೆಂಡತಿ ಆಲಮ್ಮನು, ಮೃತಪಟ್ಟ ಸದರೀ ಲಿಂಗೈಯ್ಯನಿಗೆ ಮಲತಾಯಿ ಆಗಬೇಕೆಂಬ ಹಕ್ಕುದಾರ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಲಿಂಗೈಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 5 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಜನವರಿ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್,
ಸಬ್‌ಜಡ್ಜ್.

ಚಿಕ್ಕಮಗಳೂರು ಮುರ್ನ್‌ಸೀಫ್ ಕೋರ್ಟಿನಲ್ಲಿ.

1902—1903ನೇ ಇಸವಿ ಮಿಸಲೇನಿಯಸ್ ನಂಬರು 99.

ಮೃತಪಟ್ಟ ಕಡೂರು ತಾಲ್ಲೂಕು ಬೀರೂರು ಗರ್ಜೆ ನಂಜುಂಡೈಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರುಗಳು ಕಡೂರು ತಾಲ್ಲೂಕು ಬೀರೂರು ವಾಸಿಗಳು 1ನೇ ಗರ್ಜೆ ರುದ್ರಪ್ಪ ಬಿ॥ ಸಿದ್ದರಾಮೈಯ್ಯ 2ನೇ ಗರ್ಜೆ ಚನ್ನಬಸಪ್ಪ ಬಿ॥ ನಂಜಪ್ಪ ಇವರು ಹೇಳಿಕೊಳ್ಳುವದೇನಂದರೆ,—ಅರ್ಜಿದಾರರುಗಳಿಗೆ ಚಿಕ್ಕಪ್ಪನ ಮಗನಾದ ನಂಜುಂಡೈಯ್ಯನು 1902ನೇ ಇಸವಿ ಜನವರಿ ತಾರೀಖು 8ರಲ್ಲು ಬೀರೂರಲ್ಲಿ ಮೃತನಾದನು. ಇವನಿಗೆ ತಂದೆ ಈರಣ್ಣ. ಅಣ್ಣಂದರು ಶಿದ್ದಪ್ಪ, ಬಸಪ್ಪ. ಚಿಕಪ್ಪಂದರು 2ನೇ ಅರ್ಜಿದಾರನ ತಂದೆ ನಂಜಪ್ಪ, ಇನ್ನೊಬ್ಬರು ಶಿದ್ದಪ್ಪ, ಇವರುಗಳು ವಾರಸ್ಸುದಾರರುಗಳಾಗಿ ಇಧಾರೆ. ಮತ್ತು ಏಕಗೃಹಕೃತ್ಯದಲ್ಲಿ ಇಧಾರೆಂತಲು, ಅವಿಭಕ್ತರಾಗಿ ಇರುತ್ತಾರೆಂತಲು, ಮೃತಪಟ್ಟ ನಂಜುಂಡೈಯ್ಯನು ಒಟ್ಟು ಕುಟುಂಬದ ಫಾಯಿದೆ ಬಗ್ಯೆ 1,000—0—0 ಒಂದು ಸಾವಿರ ರೂಪಾಯಿಗಳಿಗೆ ಬೊಂಬಾಯಿ ಗವರ್ನಮೆಂಟ್ ಲೈಫ್ ಇನ್ಷೂರೆನ್ಸ್ ಕಂಪನಿಯಲ್ಲಿ ತನ್ನ ಲೈಫ್‌ನ್ನು ಇನ್ಷೂರ್ ಮಾಡಿ ಇರುತ್ತಾನೆಂತಲು ಇದನ್ನು ಅರ್ಜಿದಾರರುಗಳು ಸದರಿ ಕಂಪನಿಯಿಂದ ವಸೂಲ್ ಮಾಡುವ ವಿಷಯದಲ್ಲಿ ಮೇಲೆ ಹೇಳಿದ ಫವತಿಯುವನ ಹತ್ತರ ವಾರಸ್ಸುದಾರರುಗಳಿಗೂ ಸಹ ಯಾವ ವಿಧವಾದ ಅಭ್ಯಂತರವು ಇರುವದಿಲ್ಲಾ. ಸದರಿ ಇನ್ಷೂರೆನ್ಸ್ ಕಂಪನಿಯಲ್ಲಿ ಮೇಲೆ ಹೇಳಿದ 1,000—0—0 ರೂಪಾಯಿಗಳನ್ನ ವಸೂಲು ಮಾಡಿಕೊಳ್ಳಲು ವಾರಸ್ಸು ಸರ್ಟಿಫಿಕೇಟ್ ಬಗ್ಯೇ ಅಪ್ಪಣೆ ಆಗಬೇಕಾಗಿ ಪ್ರಾರ್ಥನೆಮಾಡಿಕೊಂಡು ಇರುವದ್ದರಿಂದ ಅರ್ಜಿದಾರರುಗಳಿಗೆ 1901ನೇ ಇಸವಿ VIIನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಅರ್ಜಿದಾರರುಗಳು 1ನೇ ಗರ್ಜೆ ರುದ್ರಪ್ಪ, 2ನೇ ಗರ್ಜೆ ಚನ್ನಬಸಪ್ಪ ಇವರುಗಳ ಅರ್ಜಿಯನ್ನು ಸ್ 1903ನೇ ಇಸವಿ ಫೆಬ್ರುವರಿ ತಿಂಗಳು 10ನೇ ತಾರೀಖಿನಲ್ಲಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಮೃಪತಟ ರ್ಜೆ ನಂಜುಂಡೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟು ರೂಬರೂಬ್ ಹಾಜರಾಗಬೇಕಾಗಿ ಇಧೆಯೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1902ನೇ ಇಸವಿ ಡಿಸೆಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1902—1903ನೇ ಇಸವಿ ಮಿಸ್‌ಲೇನಿಯಸ್ ನಂಬರು 149.

ಮೃತಪಟ್ಟ ಚಿಕ್ಕಮಗಳೂರು ತಾಲ್ಲೂಕು ಮರ್ಲೆ ಮಾಗಣಿ ಮರ್ಲೆ ತಿಮ್ಮನಹಳ್ಳಿ ಬಸವೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜಿದಾರ ಸಣ್ಣರಾಮೇಗೌಡ ಹೇಳಿಕೊಳ್ಳುವದೇನಂದರೇ 1ನೇ ನಿಂಗೇಗೌಡ, 2ನೇ ಚಿಕ್ಕರಾಮೇಗೌಡ, ನೇ ಬಸವೇಗೌಡ, 4ನೇ ಅರ್ಜೀದಾರ ಸಣ್ಣರಾಮೇಗೌಡ ಈ 4 ಜನರು ರಾಮೇಗೌಡನ ಮಕ್ಕಳು. 2ನೇ ಚಿಕ್ಕರಾಮೇಗೌಡನು ಸುಮಾರು 20 ವರುಷದಿಂದ ಪ್ರತ್ಯೇಕವಾಗಿದ್ದುಕೊಂಡು ಇಧಾನೆ. ಬಾಕಿ 3 ಜನರು ಒಟ್ಟಿಗೆ ಏಕ ಗೃಹಕೃತ್ಯದಲ್ಲೇ ಇದ್ದರು. 3ನೇ ಬಸವೇಗೌಡನು ಸುಮಾರು 20 ತಿಂಗಳಲ್ಲಿ ಮೃತಪಟ್ಟನು ಇವನಿಗೆ ಇದ್ದ ಹುಲಿಯಮ್ಮ, ಚನ್ನಮ್ಮ, ಎಂಬ ಇಬ್ಬರ ಹೆಂಡತಿಯರ ಪೈಕಿ ಹುಲಿಯಮ್ಮನು ಸುಮಾರು 5 ತಿಂಗಳಲ್ಲಿ ಮೃತಪಟ್ಟಳು 2ನೇ ಹೆಂಡತಿ ಚನ್ನಮ್ಮನು ತನ್ನ ಗಂಡನ ಮನೆಯಲ್ಲಿ ಯಾವಾಗಲೂ ಇರಲಿಲ್ಲ. ಸದರೀ ಬಸವೇಗೌಡನಿಗೆ ವಾರಸುದಾರರಾಗಿ ಇವನ ಅಣ್ಣ ನಿಂಗೇಗೌಡ, ಅರ್ಜೀದಾರ ಸಣ್ಣರಾಮೇಗೌಡ, 2ನೇ ಹೆಂಡತಿ ಚನ್ನಮ್ಮ, ಹೀಗೆ 3 ಜನರು ಇಧಾರೆ ಇವರುಗಳೆಲ್ಲರು ಮರ್ಲೆತಿಮ್ಮನ ಹಳ್ಳಿಯಲ್ಲಿ ವಾಸವಾಗಿಧಾರೆ. ನಿಂಗೇಗೌಡನಿಗೆ ಬುದ್ಧಿ ಚನ್ನಾಗಿಲ್ಲ ಇವನು ಯಾವ ಆಡಳತವನ್ನೂ ನಡಸಲಾರ. ಅರ್ಜೀದಾರನೆ ಮುಖ್ಯವಾರಸುಧಾರನಾಗಿ ಆಡಳತವನ್ನು ನಡಿಸಲು ಶಕ್ತನಾಗಿಧಾನೆ. ಮತ್ತು ಸದರೀ ಬಸವೇಗೌಡನ ಹೆಸರಿಗೆ ಇರತಕ್ಕ ದಸ್ತಾವೇಜುಗಳ ಬಾಬತು ಮತ್ತು ಇತರ ವಿಧವಾದ ಸಾಲಗಳು ಇದಕ್ಕೆ ಲಗತ್ತು ಇರುವ ಷೆಡ್ಯೂಲಿನಂತೆ ಬರಬೇಕಾಗಿಧೆ. ಸದರಿ ಸಾಲಗಳನ್ನು ವಸೂಲ್ಮಾಡಲು ಅರ್ಜೀದಾರನಿಗೆ 1901ನೇ ಇಸವಿ VIIನೇ ರೆಗ್ಯುಲೇಷನ್ ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ. ಸದರಿ ಅರ್ಜೀದಾರ ಸಣ್ಣರಾಮೇಗೌಡನ ಅರ್ಜಿಯನ್ನ 1903ನೇ ಇಸವಿ ಫೆಬ್ರುವರಿ 23 ಇಪ್ಪತ್ತಮೂರನೇ ತಾರೀಖಿನಲ್ಲಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ.

ಆ ಕಾಲದಲ್ಲಿ ಮೃತಪಟ್ಟ ದೇವಪ್ಪಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1902ನೇ ಇಸವಿ ಡಿಸೆಂಬರ್ 23ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿ ಇದೆ.

ಷೆಡ್ಯೂಲಿನ ವಿವರ.

	ಅಸಲ್.	ಬಡ್ಡಿ.	ಜುವಲ್ಲಾ.
10-1-98ರಲ್ಲಿ ಬಸವೇಗೌಡನಿಗೆ ಬಲಗ್ಯ ತಿಮ್ಮನ ಮಗ ತಿಮ್ಮನು ಬರದುಕೊಟ್ಟ ದಸ್ತಾವೇಜಿನ ಬಾಬತು ಅಸಲ ಮತ್ತು ವಸೂಲ್ ಜಾತಾ ಬಡ್ಡಿ.	20-0-0	15-8-0	35-8-0
11-4-98ರಲ್ಲು ಬಸವೇಗೌಡನಿಗೆ ಪುಟ್ಟೇಗೌಡನ ಮಗ ಮಲ್ಲೆಗೌಡನು ಬರದುಕೊಟ್ಟ ಪ್ರೋನೋಟಿನ ಬಾಬತು ಅಸಲ್ ಮತ್ತು ವಸೂಲ್ ಜಾತಾ ಇದರ ಬಡ್ಡಿ	59-0-0	23-4-0	82-4-0
2-12-98ರಲ್ಲಿ ಬಸವೇಗೌಡನಿಗೆ ಶಿವೇಗೌಡನ ಮಗ ತಿಮ್ಮಣ್ಣನು ಬರದುಕೊಟ್ಟ ರಿಜಿಸ್ಟ್ರಿ ದೀಡು ದಸ್ತಾವೇಜು ಬಾಬತು ಅಸಲ್ ಮತ್ತು ಇದರ ಸುಮಾರು ಬಡ್ಡಿ.	200-0-0	96-0-0	296-0-0
4-4-1900ರಲ್ಲಿ ಬಸವೇಗೌಡನಿಗೆ ಲಿಂಗಪ್ಪಯ್ಯನವರ ಮಗ ಕೃಷ್ಣಪ್ಪನು ಬರದುಕೊಟ್ಟ ರಿಜಿಸ್ಟ್ರಿ ದೀಡು ದಸ್ತಾವೇಜು ಬಾಬತು ಅಸಲು ಮತ್ತು ಇದರ ಸುಮಾರು ಬಡ್ಡಿ.	300-0-0	96-0-0	396-0-0
6-11-1900ರಲ್ಲಿ ಬಸವೇಗೌಡನಿಗೆ ದೊಡ್ಡ ರಾಮೇಗೌಡನು ಬರದುಕೊಟ್ಟ ಛಾಪಾ ದಸ್ತಾವೇಜು ಬಾಬತು ಅಸಲ್ ಮತ್ತು ಇದರ ಸುಮಾರು ಬಡ್ಡಿ.	70-0-0	21-12-0	91-12-0
ಕಡೂರ್ ಡಿಸ್ಟ್ರಿಕ್ಟು ಇಂಜನೀರ್ ಆಫೀಸಿನಿಂದ ಕಂಟ್ರಾಕ್ಟು ಬಾಬತು ಬರಬೇಕಾದ್ದು ಸುಮಾರು.	25-0-0		
ಜುಮ್ಲಾ ...	674-0-0	252-8-0	926-8-0
ಈ ಮೇರಿಗೆ 926-8-0 ಬಗ್ಯೆ.			

ಆನಂದರಾವ್ ಶಿರಸ್ತೆ,
ಮುನ್ಸಿಫ್.

ಕೊಡಗು ಚೀಫ್ ಕಮಿಷನರವರಿಂದ ಕೊಡೋಣಾದ ಇಸ್ತಿಹಾರ್ನಾಮಾ.

ದರಜಾಗಾ ಬೆಂಗಳೂರು, ತಾರೀಖು 17ನೇ ಡಿಸೆಂಬರ್, ಸ್ 1902ನೇ ಇಸವಿ.

ನಂ. 63. ಸ್ 1903ನೇ ಇಸವಿ ಏಪ್ರೆಲ್ ತಾರೀಖು 1ರ ಲಾಗಾಯಿತು 1906ನೇ ಇಸವಿ ಮಾರ್ಚಿ ತಾರೀಖು 31ರ ವರಿಗೆ ಮೂರು ವರುಷಗಳ ಪರಿಯಂತರ ಕೊಡಗು ಶೀಮೆಯಲ್ಲಿ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾವಸ್ತುಗಳನ್ನು ಮಾರುವದಕ್ಕೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಹೊಂದಿಕೊಳ್ಳುವ ಬಗ್ಯೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತವೆ. ಇವುಗಳಿಗೆ ದರಖಾಸ್ತುಗಳು ಇದರಡಿ ಕಾಣಿಸಿರುವ ಷರತ್ತುಗಳಿಗೆ ಬಳಪಟ್ಟು ಮಾಡತಕ್ಕದ್ದು.

2. ದರ್ಖಾಸ್ತಿನ ಜೊತೆಯಲ್ಲು (100) ರೂಪಾಯಿ ಠೇವಣಿಯನ್ನು ಕಳುಹಿಸತಕ್ಕದ್ದು. ದರ್ಖಾಸ್ತನ್ನು ರವಾನಿಸುವಲ್ಲಿ ಲಕೋಟೆಯಮೇಲೆ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದ ಕಸಕಸೆಯಿಂದ ತಯಾರಾದ ನಿಷಾವಸ್ತುಗಳನ್ನು ಬಿಕ್ರಿ ಮಾಡುವ ಬಗ್ಯೆ ಮಾಡಲ್ಪಟ್ಟ ದರ್ಖಾಸ್ತು ಎಂಬದಾಗಿ ಬರದು ಕೊಡಗು ಕಮಿಷನರವರ ಕಚೇರಿಗೆ 1903ನೇ ಮಾರ್ಚಿ ಮಾಹೆ 5ನೇ ತಾರೀಖು ಗುರುವಾರ ಮಧ್ಯಾನ್ಹ 12 ಘಂಟೆ ಯಾ, ಅದಕ್ಕೆ ತತ್ಪೂರ್ವ ತಲಪುವಂತೆ ಕೊಡಗು ಕಮಿಷನರವರ ಹೆಸರಿಗೆ ಕಳುಹಿಸತಕ್ಕದ್ದು. ನಂತರ ಬರುವ ದರ್ಖಾಸ್ತುಗಳನ್ನು ಅಂಗೀಕರಿಸುವದಿಲ್ಲವು.

3. ಸದರಿ ದರಖಾಸ್ತುಗಳಲ್ಲಿ ದರ್ಖಾಸ್ತುದಾರರು ಸದರಿ ಪದಾರ್ಥಗಳನ್ನು ಸ್ವಾತಂತ್ರ್ಯವಾಗಿ ಮಾರುವದಕ್ಕೆ ಸರ್ಕಾರಕ್ಕೆ ಸಾಲಿಯಾನ ಇಷ್ಟೇ ತೆರಿಗೆ ಕೊಡುತ್ತೇನೆಂಬದಾಗಿ ನಮೂದಿಸಬೇಕು. ಕೊಡಬೇಕಾದ ತೆರಿಗೆಯನ್ನು ಪ್ರತಿ ವರುಷದ ಅಂದರೆ ಜೂಲೈ, ಅಕ್ಟೋಬರ್, ಜನವರಿ, ಈ ಮಾಹೆಗಳ 1ನೇ ತಾರೀಖಿನ ದಿವಸ ಪಾವತಿ ಮಾಡತಕ್ಕದ್ದು.

4. ದರ್ಖಾಸ್ತುಗಳು 1903ನೇ ಇಸವಿ ಮಾರ್ಚಿ ತಾರೀಖು 6ನೇ ಶುಕ್ರವಾರ ಮಧ್ಯಾಹ್ನ ಮಡಿಕೇರಿಯಲ್ಲಿ ಹಾಜರಿರುವ ದರ್ಖಾಸ್ತುದಾರರುಗಳ ರೂಬರೂ ಕಮಿಷನರವರಿಂದ ಅಥವಾ ಅವರ ಗೈರಹಾಜರಿಯಲ್ಲಿ ಅಸಿಸ್ಟೆಂಟ್ ಕಮಿಷನರವರಿಂದ ಖುಲ್ಲಾ ಮಾಡಲ್ಪಡುವವು. ದರ್ಖಾಸ್ತುಗಳ ಆಖೈರ್ವ್ಯವಸ್ಥೆಯು ಕೊಡಗು ಚೀಫ್ ಕಮಿಷನರವರಿಗೆ ಹೊಂದಿರುತ್ತೆ ಮತ್ತು ಅವರು ಯಾವ ಕಾರಣವೂ ನಮೂದಿಸದೆ ಯಾವದೊಂದು ಯಾ, ಎಲ್ಲಾ ದರ್ಖಾಸ್ತುಗಳನ್ನು ತಿರಸ್ಕರಿಸುವ ಎಲ್ಲಾ ಸ್ವಾತಂತ್ರ್ಯವನ್ನು ತಮಗೇನೆ ಉಳಿಸಿಕೊಂಡಿರುತ್ತಾರೆ. ಯಾರ ದರ್ಖಾಸ್ತುಗಳು ತಿರಸ್ಕರಿಸಲ್ಪಡುತ್ತವೋ ಅಂಥಾ ದರ್ಖಾಸ್ತುದಾರರಿಂದ ಹಾಜರ್ಮಾಡಲ್ಪಟ್ಟ ಠೇವಣಿ ಮೊಬಲಗು ಅವರಿಗೇನೆ ವಾಪಸ್ಮಾಡಲ್ಪಡುವದು.

5. ಚೀಫ್ ಕಮಿಷನರವರಿಂದ ಯಾವ ದರ್ಖಾಸ್ತು ಮಂಜೂರ್ಮಾಡಲ್ಪಡುತ್ತದೋ ಅಂಥಾ ದರ್ಖಾಸ್ತುದಾರನು ಮೊದಲು ಕೊಟ್ಟಿರುವ ಠೇವಣಿ ದೇಖಿಲ್ ಸಾಲಿಯಾನದ ಬರವಶ ಕೊಟ್ಟಿರುವ ತೆರಿಗೆ ಮೊಬಲಗು ಪೈಕಿ ಅರ್ಧ ವರುಷಕ್ಕೆ ಸರಿಯಾಗುವಷ್ಟು ಮೊಬಲಗನ್ನು 3 ದಿವಸದ ವಳಗಾಗಿ ನಗದು ಆಗಲೀ, ಕರೆನ್ಸಿ ನೋಟ್ ಮೂಲಕವಾಗಲೀ, ಅಥವಾ ಗವರ್ನ್ಮೆಂಟ್ ಪ್ರಾಮಿಸರಿ ನೋಟ್ ಮೂಲಕವಾಗಲೀ, ಠೇವಣಾತಿ ಇಡತಕ್ಕದ್ದು. ಈ ಡಿಪಾಜಿಟ್ ಹಣವನ್ನು 1906ನೇ ಇಸವಿ ಮಾರ್ಚಿ ತಾರೀಖು 31ಕ್ಕೆ ಮುಗಿಯುವ ಅರ್ಧವರುಷಕ್ಕೆ ಸಲ್ಲಬೇಕಾದ ಕಿಸ್ತಿಗೆ ಹಿಂದಲಿಂದ ಸರ್ಕಾರಕ್ಕೆ ವಜಾ ಮಾಡಿಕೊಳ್ಳಲ್ಪಡುವದು ಮತ್ತು ಚೀಫ್ ಕಮಿಷನರವರಿಂದ ಮಂಜೂರ್ಮಾಡಲ್ಪಟ್ಟ ತಾರೀಖಿನಿಂದ 10 ದಿವಸದ ವೊಳಗಾಗಿ ಸದರಿ ದರ್ಖಾಸ್ತುದಾರನು 1878ನೇ ಇಸವಿ ನಂಬರ್ 1ರ ಅಫೀಮು ಆಕ್ಟಿನ ರೂಲ್ಸ್ ಮೇರೆ ನಡದುಕೊಳ್ಳುವದಕ್ಕೆ ಬದ್ಧನಾಗಿರುತ್ತೇನೆಂಬದಾಗಿ ನೇಮಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ಒಂದು ಒಡಂಬಡಿಕೆಯನ್ನು ಬರದು ಕೊಡಬೇಕು ಮತ್ತು ಅದರಲ್ಲಿ ಕಂಡ ಷರತ್ತು ಪ್ರಕಾರ ನಡದುಕೊಳ್ಳುವದಕ್ಕೋಸ್ಕರ ಜಾಮೀನ್ ಸಹ ಕೊಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟಿರುವ ಠೇವಣಾತಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟು ಸದರೀ ಕಂಟ್ರಾಕ್ಟು ಬೇರೆ ವಿಧವಾಗಿ ವ್ಯವಸ್ಥೆ ಮಾಡಲ್ಪಡುವದು.

6. ಕಂಟ್ರಾಕ್ಟುದಾರನು ಸಲಿಕೆ ಮಾಡಬೇಕಾಗುವ ತಾರೀಖಿಗೆ ಸರಿಯಾಗಿ ಯಾವ ಕಿಸ್ತಿನಲ್ಲಾಗಲೀ ಮೊಬಲಗು ಕಟ್ಟುವದಕ್ಕೆ ತಪ್ಪಿದ ಪಕ್ಷದಲ್ಲಿ ಆ ಕೂಡಲೆ ಕಂಟ್ರಾಕ್ಟನ್ನು ರದ್ದು ಮಾಡುವದಕ್ಕೂ ಠೇವಣಿ ಹಣವನ್ನು ಜಫ್ತಿ ಮಾಡಿ ಸದರೀ ಗುತ್ತಿಗೆಯನ್ನು ಕಂಟ್ರಾಕ್ಟುದಾರನ ಜವಾಬ್ದಾರಿಯೂ, ನಷ್ಟದಮೇಲೆ ಪುನಹ ಹರಾಜು ಮಾಡುವದಕ್ಕೆ ಕೊಡಗು ಕಮಿಷನರವರು ಸ್ವತಂತ್ರರಾಗಿರುತ್ತಾರೆ.

7. ಕೊಡಗು ದೇಶದಲ್ಲಿ ಮೇಲ್ಕಂಡ ಪದಾರ್ಥಗಳನ್ನು ಮಾರುವದಕ್ಕೆ ತಾಲ್ಲೂಕ್ ಅಂಗಡಿಗಳು ನೇಮಕ ಮಾಡಲ್ಪಟ್ಟಿವೆ. ಮಡಿಕೇರಿ ಮಹದೇವಪ್ಪೇಟೆಯಲ್ಲಿ ಒಂದು, ವೀರರಾಜೇಂದ್ರ ಪ್ಯಾಟೆಯಲ್ಲಿ ಒಂದು, ಗೋಣಿಕೊಪ್ಪಲ್ಲಿ ಒಂದು ಮತ್ತು ಸೋಮವಾರಪ್ಯಾಟೆಯಲ್ಲಿ ಒಂದು.

8. ಮೇಲ್ಕಂಡ 7ನೇ ಕಲಂನಲ್ಲಿ ನಮೂದಿಸಿರುವ ಅಂಗಡಿಗಳ ವಿನಹ ಕಮಿಷನರವರ ಸ್ಪೆಷಲ್ ಅಪ್ಪಣೆ ಸಿವಾಯಿ ಹೆಚ್ಚು ಅಂಗಡಿಗಳಿರಕೂಡದು.

9. ಮೇಲೆ ನಮೂದಿಸಲ್ಪಟ್ಟಿರುವ ಅಂಗಡಿಗಳಲ್ಲಿ ಚಿಲ್ಲರೆ ಬಿಕರಿ ಮಾಡುವದಕ್ಕೋಸ್ಕರವಾಗಿ ಗುತ್ತಿಗೆದಾರನಿಂದ ಇಡಲ್ಪಟ್ಟ ಜನಗಳಿಗೆ ಖಾನೂನಿನಿಂದ ನೇಮಕ ಮಾಡಲ್ಪಟ್ಟ ನಮೂನೆಯಲ್ಲಿ ಕೊಡಗು ಕಮಿಷನರವರಿಂದ ಮಂಜೂರ್ ಮತ್ತು ಕೌಂಟರಸೈನ್ ಮಾಡಿ ಕೊಡೋಣಾದ ಲೈಸೆನ್ಸಗಳನ್ನು ಕೊಟ್ಟಿರತಕ್ಕದ್ದು.

10. ಮಾರುವದಕ್ಕೆ ಬೇಕಾಗುವ ಅಫೀಮನ್ನು ಕೊಡಗುದೇಶದ ಕಮಿಷನರವರ ಮೂಲಕ ಚೀಫ್ ಕಮಿಷನರವರು ಮುಕರರ್ಮಾಡಿರುವ ಕ್ರಯ ಕೊಟ್ಟು ತರಿಸಿಕೊಳ್ಳಬೇಕು. ಕಂಟ್ರಾಕ್ಟು ವಾಯಿದೆ ಮುಗಿದ ಬಳಿಕ ಮೊದಲಿನ ಕಂಟ್ರಾಕ್ಟುದಾರನಲ್ಲಿ ಕರ್ಚಾಗದೆ ಬಾಕಿ ಇರುವಂಥಾ ಅಫೀಮನ್ನು, ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳನ್ನು ಮತ್ತು ಹೊಗೆ ತೆಗಿಯುವದಕ್ಕೋಸ್ಕರ ಉಪಯೋಗಿಸಲ್ಪಡುವ ಅಫೀಮಿನಿಂದ ತಯಾರಾದ ಅಥವಾ ಮಿಶ್ರವಾದ ಪದಾರ್ಥಗಳಲ್ಲದೆ ಕಸಕಸೆಯಿಂದ ತಯಾರಾದ ನಿಷಾ ವಸ್ತುಗಳನ್ನು ಎರಡು ತಿಂಗಳಿಗೆ ಬೇಕಾದಷ್ಟರಲ್ಲಿ ಕಮಿಷನರವರಿಂದ ತೀರ್ಮಾನಿಸಲ್ಪಡುವ ಖರೀದಿಗೆ ಮತ್ತು ಅವರಿಂದ ಎಷ್ಟೆಷ್ಟು ಎಂಬದಾಗಿ ನಿರ್ಣಯಿಸಲ್ಪಡುತ್ತದೋ ಅಷ್ಟಷ್ಟನ್ನು ಕೊಂಡುಕೊಳ್ಳಬೇಕೆಂದು ಕಮಿಷನರವರಿಂದ ಅಪ್ಪಣೆ ಕೊಡಲ್ಪಟ್ಟರೆ ಕೊಂಡುಕೊಳ್ಳುವದಕ್ಕೆ ಹೊಸ ಕಂಟ್ರಾಕ್ಟುದಾರನು ಬದ್ಧನಾಗಿರಬೇಕು.

11. ಇನ್ನು ಹೆಚ್ಚಿಗೆ ಬೇಕಾಗುವ ತಪ್ಸೀಲಗಳನ್ನು ಮಡಿಕೇರಿಯಲ್ಲಿ ಕೊಡಗು ಕಮಿಷನರವರಲ್ಲಿ ದರ್ಖಾಸ್ತುಮಾಡಿ ತಿಳದುಕೊಳ್ಳಬಹುದು.

"ಹುಕುಂ ಬಮೋಜೀಬ್"
ಆರ್. ಸಿ. ಎಚ್. ಎಂ. ಕಿಂಗ್,
ಚೀಫ್ ಕಮಿಷನರವರ ಸೆಕ್ರಿಟೆರಿಯವರು.

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್.

ಸೆ 1895ನೇ ಇಸವಿಯ ಮೂರನೇ ನಂಬರು ರೆಗ್ಯುಲೇಷನ್ ಆದ ಮೈಸೂರ ಕಂಪನಿಸ್ ಆಕ್ಟು ಅನುಸರಿಸಿ ರಿಜಸ್ಟರ್ ಮಾಡಲ್ಪಟ್ಟಿದೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿಕೇಷನ್‌ಜೊತೆನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡ್ಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಒಂದಕ್ಕೆ 5 ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡಲ್ಪಡುವದು. ಪ್ರಕಟನ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಇದರಡಿ ಸೈನ್ ಮಾಡಿರುವವರಿಂದ ತರಸಿಕೊಳ್ಳಬಹುದು.

ಪಿ ಸುಬ್ಬರಾವ್,
ಮ್ಯಾನೆಜಿಂಗ್ ಡೈರೆಕ್ಟರ್,
ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,
68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಕಾಶಿತ ಆದ್ದು. [ನಂ 4.

ಬೆಂಗಳೂರು, ಗುರುವಾರ, ಜನವರಿ ತಾ|| 29, ಸರ 1903.

IIನೇ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆ ಅವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಡಿ. ನಂಬರು 49ನೇ ಪ್ರಕಟನ ಪತ್ರಿಕೆ, ಸರ 1902ನೆಯ ಇಸವಿ ಡಿಸೆಂಬರು ತಾರೀಖು 22.

ಮೈಸೂರು ದೇಶೀಯ ಪರೀಕ್ಷಾ ಭಾಷಾ ಗ್ರಂಥಗಳು.

ಇದರಡೀ ಕಂಡ ಭಾಷಾ ಗ್ರಂಥಗಳು ಸರ 1904ನೆಯ ಇಸವಿ ನವಂಬರ್ ತಿಂಗಳಲ್ಲಿ ನಡೆಯುವ ಮೈಸೂರು ಲೋವರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ—ಗದ್ಯ...ಧರ್ಮಶರ್ಮಾಭ್ಯುದಯ—ಪೂರ್ತಿಯಾಗಿ.

ಪದ್ಯ...ಹೊಸ ಪದ್ಯಸಾರ, Iನೆಯ ಭಾಗ, ಪದ್ಯಗಳು 343—487.

ತೆಲುಗು—ಗದ್ಯ...ರಾಜಶೇಖರ ಚರಿತ್ರ, ಪುಟಗಳು 1—42 (ಐದು ಪ್ರಕರಣಗಳು.)

ಪದ್ಯ...ನಳಚರಿತ್ರಮು.

ಸಂಸ್ಕೃತ— ಮೊದಲನೆಯ ಭಾಷೆ.

ಪದ್ಯ...ರಘುವಂಶ, III ಮತ್ತು IVನೆಯ ಸರ್ಗಗಳು.

ಗದ್ಯ...ಕಥಾಸರಿತಸಾಗರ (ಜೀವಾನಂದರಿಂದ ಗದ್ಯರೂಪದಲ್ಲಿ ರಚಿಸಲ್ಪಟ್ಟದ್ದು)—V ಮತ್ತು VIನೆಯ ತರಂಗಗಳು.

ಎರಡನೆಯ ಭಾಷೆ.

ವಿಕ್ರಮಾರ್ಕ ಚರಿತ್ರ (ಮೈಸೂರು ಇಲಾಖೆಯ ಛಾಪೆ)—28ನೆಯ ಕಥೆಯಿಂದ ಕಡೆಯ ವರೆಗೆ.

ಲ್ಯಾಟಿನ್—ಸೀಜರ್ ಡಿಬೆಲ್ಲೋ ಗ್ಯಾಲಿಕೊ, Vನೆಯ ಪುಸ್ತಕ.

ಹಿಂದುಸ್ತಾನಿ—ಗದ್ಯ...ತಾಜೆಬುಲ್ ಅಕ್‌ಲಾಕ್ ಆರ್ಯ—ಎ—ಹಿಂದ್, ಉತ್ತರಾರ್ಧ. ಮೌಲ್ವಿಸುಕಾವುಲ್ಲ ಸಾಹೇಬರವರಿಂದ ರಚಿಸಲ್ಪಟ್ಟದ್ದು. (ಚಷ್ಮೈ—ಅಂ ಪ್ರೆಸ್, ದೆಹಲಿ.)

ಪದ್ಯ...ಮಜ್ ಮುಅ—ಎ—ಸಖುನ್, IIನೆಯ ಭಾಗ, ಉತ್ತರಾರ್ಧ—(ನವಲ್‌ಕಿಷೋರೀ ಪ್ರೆಸ್, ಲಕ್ನೋ.)

ಫಾರಸಿ— ಮೊದಲನೆಯ ಭಾಷೆ.

ಸರ್ವಯ್ಯೆ—ಖಿರದ (ಪಂಜಾಬ್), ಸಿಕಂದರ ನಾಮಯಿಂದ ಆರಿಸಲ್ಪಟ್ಟ ಭಾಗವಿನಾ.

ಎರಡನೆಯ ಭಾಷೆ.

ಪದ್ಯ...ಪೋಸ್ಟ್ರ್—VII ಮತ್ತು VIIIನೆಯ ಅಧ್ಯಾಯಗಳು.

ಗದ್ಯ...ಸಿಗರೇದಾನಿಷ್, Xನೆಯ ಅಧ್ಯಾಯದಿಂದ ಕೊನೆಯ ವರೆಗೆ—(ನವಲ್ ಕಿಷೋರ್ ಪ್ರೆಸ್, ಲಕ್ನೋ.

ಇದರಡಿ ಕಂಡ ಭಾಷಾ ಗ್ರಂಥಗಳು ಸ್ 1904ನೆಯ ಇಸವಿ ನವಂಬರ ತಿಂಗಳಲ್ಲಿ ನಡೆಯುವ ಮೈಸೂರು ದೇಶ ಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆಗೆ ನಿಯಮಿಸಲ್ಪಟ್ಟಿರುತ್ತವೆ:—

ಕನ್ನಡ - ಪದ್ಯ...(1) ಹರಿಶ್ಚಂದ್ರ ಕಾವ್ಯ—ಅಧ್ಯಾಯಗಳು I—V, ರಾಘವಾಂಕರಿಂದ ರಚಿಸಲ್ಪಟ್ಟಿದ್ದು.

(2) ಕಾದಂಬರಿ—ಮೊದಲನೆಯ 100 ಪದ್ಯಗಳು.

(3) ಹೇಮಚಂದ್ರ ರಾಜ್ಯವಿಲಾಸ (ಕಿಂಗಲಿಯರ್).

ಗದ್ಯ....(1) ರಾಮಾಶ್ವಮೇಧ—ಪುಟಗಳು 31—60.

(2) ಅರ್ಥಶಾಸ್ತ್ರ—ಪುಟಗಳು 1—65, ಮೆ|| ನಂಜುಂಡೈಯ್ಯನವರಿಂದ ರಚಿಸಲ್ಪಟ್ಟಿದ್ದು.

ಸಂಸ್ಕೃತ—(1) ರಘುವಂಶ, I ಮತ್ತು IIನೆಯ ಸರ್ಗಗಳು

(2) ಪಂಚತಂತ್ರ, (ಮುಂಬೈ ಛಾಪೆ) IVನೆಯ ಭಾಗ.

ಹಿಂದುಸ್ತಾನಿ—ಗದ್ಯ...ನಿಸಬೆಉರ್ದು—ಗದ್ಯ ಭಾಗ.

ಪದ್ಯ...ದೀವಾನ್—ಎ—ಅಮೀರ್, ರದೀಫ್—ಎ—ನೂನ್‌ಯಿಂದ ಅಂತ್ಯದ ವರೆಗೆ.

ಫಾರಸಿ—ಪದ್ಯ...ದಿವಾನಿಹಾಫಿಜ್—ಮೊದಲಿನಿಂದ ರಡಿಫಿರ ಅಂತ್ಯದ ವರೆಗೆ.

ಗದ್ಯ...ಅನ್ವಾರೆ ಸೊಹಿಲಿ—ಅಧ್ಯಾಯಗಳು VIIರಿಂದ ಅಂತ್ಯದ ವರೆಗೆ.

ಹೆಚ್. ಜೆ. ಭಾಭಾ,

ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್, ಮೈಸೂರು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 17ನೇ ಜನವರಿ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಕಾನಕಾನಹಳ್ಳಿ ತಾಲ್ಲೂಕು ಕಬ್ಬಾಳು ಸ್ಟೇಟ್ ಫಾರೆಸ್ಟಿನಲ್ಲಿ ಗುರ್ತುಮಾಡಿರುವ ಕೂಪಿನಲ್ಲಿನ ಚಾಬೀನೆ ಮತ್ತು ಸೌವೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಕಡಿದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಂದ ಅಥವಾ ರೇಂಜ್ ಫಾರೆಸ್ಟು ಆಫೀಸರವರಿಂದ 1903ನೇ ಇಸವಿ ಜನವರಿ 31ನೇ ತಾರೀಖು ದಿವಸ ಕಬ್ಬಾಳಿನಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

2. ಈ ಹರಾಜು ಫಾರೆಸ್ಟು ಕನ್‌ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸುವ ಫಾರೆಸ್ಟು ಆಫೀಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ 25 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ನೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್‌ದಾರನು ಇಡಬೇಕಾದ 75 ಜಾಸ್ತಿ 100 ರೂಪಾಯಿಗಳನ್ನು ಗೌರ್ನಮೆಂಟ್ ಸೇವಿಂಗ್ಸ್‌ಬ್ಯಾಂಕಿನಲ್ಲಿ ಇಡುತ್ತೆ.

5. ಹರಾಜು ಮಂಜೂರಾತಿ ತಿಳಿದ ಒಂದು ವಾರದೊಳಗಾಗಿ ಮುಂಜೂರಾದ ಸವಾಲ್‌ದಾರನು ಸರಿಯಾದ ಸ್ಟಾಂಪು ಕಾಗದದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪನ್ನು ಪುನಃ ಹರಾಜು ಮಾಡಿಸಲಾದೀತು. ದುಸರೆ ಹರಾಜಿನಲ್ಲಿ ಏನಾದರೂ ಲುಕ್ಸಾನ್ ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿಕೊಡಬೇಕು. ಆದರೇ ಏನಾದರೂ ಜಾಸ್ತಿ ಬಂದರೆ ಹಿಸ್ಸೆ ದೊರೆಯಲಾರದು.

ಷರತ್ತುಗಳು.

1. ಸಂದಲ್ ಗಿಡಗಳು, ಗುರ್ತುಮಾಡಿಯಿರುವ ಮರಗಳು ಮತ್ತು ಸೊಸಿಗಳು ಅಂದರೆ ಸುತ್ತಳತೆ ಒಂದಡಿ ಒಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಮಿಕ್ಕಾ ಗಿಡಗಳನ್ನು ಭೂಮಿಮಟ್ಟಕ್ಕೆ ಸರಿಯಾಗಿ ಕತರಾಯಿಸಿಕೊಳ್ಳಬೇಕು.

2. ಸೌವೆ ಮತ್ತು ಚಾಬೀನೆ ಗಿಡಗಳು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಯುಂಟಾದರೆ ಕಂಟ್ರ್ಯಾಕ್ಟುದಾರನು ಫಾರೆಸ್ಟು ಆಫೀಸರವರು ಗೊತ್ತು ಮಾಡುವ ಲುಕ್ಸಾನ್ ಮೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ; ಅಲ್ಲದೆ ಫಲಗಳು ಬಿಡುವ ಮರಗಳು ಇತರ ಪಸರೆ ಬಾಬುಗಳು ಮತ್ತು ಹುಲ್ಲು ಇದು ಯಾವದೂ ಹರಾಜಿಗೆ ಶೇರಿಯಿಲ್ಲಾ. ಯಾವದಾದರೂ ಮರಗಳನ್ನು ಮನಸ್ಸಾನೆಯಾಗಿ ಕಡಿದರೆ ಅಂಥಾದ್ದೆಲ್ಲಾ ಇಲಾಖಾ ಮಾರೀಪತ್ತು ಕಾಲ್ಸ ಮಾಡಿಸಿ ತಗಲುವ ಲಾಗೋಡನ್ನು 100 ಒಂದನೂರು ರೂಪಾಯಿನ ಸೆಕ್ಯೂರಟಿಯಿಂದ ವಸೂಲ್ಮಾಡುತ್ತೆ.

4. ಚಾಬೀನೆ ಮತ್ತು ಸೌವೆ ಕತ್ರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1903ನೇ ಜೂನ್ 30ರ ವಳಗೆ ಪೂರೈಸಿಕೊಳ್ಳಬೇಕು. ಹಾಗೆಮಾಡದೇ ಇದ್ದರೆ ಕಂಟ್ರ್ಯಾಕ್ಟುದಾರನು ಖಾತರಿಗಾಗಿ ಕೊಟ್ಟುಯಿರುವ ಮೊಬಲಗನ್ನು ಸರ್ಕಾರಕ್ಕೆ ಶೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಚಾಬೀನೆ ಸೌವೆ ಕತ್ರಾವಣಿ ಮಾಡಿಕೊಳ್ಳುವ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದಾಗಿ ಇರುತ್ತೆ.

5. ಕಂಟ್ರಾಕ್ಟದಾರರನು ಚಾಬೀನೆ ಮತ್ತು ಸೌದೆ ಖಾಯಿಷ್ ಮಾಡುವ ಮೊತ್ತಕ್ಕೆ ಹಾಸಲ್ ಪಾವತಿ ಮಾಡಿದನಂತರ ರೇಂಜ್ ಫಾರೆಸ್ಟು ಆಫೀಸರವರು ಬಾಬು ರೂಢಿಸುವದಕ್ಕೆ ಲೈಸೆನ್ಸು ಕೊಡುತ್ತಾರೆ ಸದರಿ ಕೂಪಿನಿಂದ ರೂಢಿಸಿದ ಬಾಬು ಕೂಪಿನಿಂದ ಸಾಗಿಸುವದಕ್ಕೆ ಫಾರೆಸ್ಟರು ರಹದಾರಿ ಕೊಡುತ್ತಾರೆ.

6. ಕೂಪಿನಿಂದ ಸೌದೆ ಮತ್ತು ಚಾಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತವು ಯಾದ ವೇಳೆ ಸಾಗಿಸಕೂಡದು. ಕತ್ತರಣಿ ಕೆಲಸಕ್ಕಾಗಿ ಕೊಟ್ಟಿಯಿರುವ ಕೂಪಿನಲ್ಲಿ ಆಸಲ್ ಅಥವಾ ಸಾಗೆಗಾಡಿ ಮಾರ್ಗ ದಲ್ಲಿ ಆಗಲಿ ಬೇಸಿಗೆಕಾಲದಲ್ಲಿ ಅಂದರೆ 1903ನೇ ಫೆಬ್ರವರಿ 1ರ ಲಾಗಾಯತು 1903ನೇ ಮೇ 31ರ ವರಿವಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ವುಂಟಾದ್ದೆಂದು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಕಾಣಬಂದರೆ ಅದಕ್ಕೆ ಕಂಟ್ರಾಕ್ಟದಾರನೇ ಜವಾಬ್ ಮಾಡಬೇಕು.

ಟಿ. ಅಬ್ದುಲ್ ಕರೀಂ, ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ.

ಆಳಲೆಕಾಯಿ, ಸೀಗೆಕಾಯಿ, ಯಾಲಕ್ಕಿ ಮತ್ತು ಗೋಂದು ಹರಾಜು ವಿಚಾರವಾಗಿ 8—1—1903ನೇ ಮರ್ಕುಂ ಮೈಸೂರು ಗೆಜೆಟ, 2ನೇ ಭಾಗ, 5ನೇ ಪುಟದಲ್ಲಿ ಫಾಯಿಷಾಗಿ ಇರುವ ನೋಟಿಫಿಕೇಷನ್ನನ್ನು ಸಮಸ್ತರೂ ನೋಡತಕ್ಕದ್ದು.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಹಾಸನದ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ.

ತಾರೀಖು 20ನೇ ಜನವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ; ಕಡೂರು ಡಿಸ್ಟ್ರಿಕ್ಟು ಬಾಬತು ತರೀಕೆರೆ ಮತ್ತು ದಾನವಾಸ ಡಿಪೋಗಳಲ್ಲಿ ಈ ಕೆಳಗಿನ ತಖ್ತೆಯಲ್ಲಿ ಕಂಡ ನಾಟುಗಳನ್ನು ಆ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರ ರೂಬರೂಬ್ ಬಹಿರಂಗವಾದ ಹರಾಜು ಮಾಡಿಸಲ್ಪಡುತ್ತದೆ:—

ನಂಬರ.	ಡಿಪೋ ಹೆಸರು.	ಹರಾಜು ತಾರೀಖು.	ಮರದ ಜಾತಿ.	ಸಂಖ್ಯೆ.	ಸಲೆ ಅಡಿ.	ಷರಾ.
1	ತರೀಕೆರೆ ...	20ನೇ ಫೆಬ್ರವರಿ 1903	ಸಾಗುವಾನಿ	150	4,500	[illegible]
			ನಂದಿ	40	1,500	
			ಬೀಟೆ	16	400	
			ಸಾಗುವಾನಿ ತಲೆ ಕೊನೆಗಳು	250	2,500	
			ಸಾಗುವಾನಿ ಬೆಲಗು	300	1,000	
2	ದಾನವಾಸ (ಬೆಂಕಿಪುರದ ರೈಲ್ವೇ ಸ್ಟೇಷನಿಂದ 18 ಮೈಲಿ ಫಾಸಲೆ.)	23ನೇ ಫೆಬ್ರವರಿ 1903	ಮತ್ತಿ	150	4,500	

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮರ್ಕುಂ ನಂ. 15ನೇ ಗೆಜೆಟನಲ್ಲಿ 95ನೇ ಇಸವಿ ಮಾರ್ಚಿ 15ನೇ ಮರ್ಕುಂ 1529—R. F. 155-92ನೇ ನೋಟಫಿಕೇಷನ್ ನೋಡಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಕಡೂರು ಡಿಸ್ಟ್ರಿಕ್ಟು.

ಸೆನ್ಸೆಸ್ ಡಿಪಾರ್ಟಮೆಂಟ್.

ನೋಟಿಸ.

ಸನ್ 1903ನೇ ಇಸವಿ ಜನವರಿ 15ನೇ ತಾರೀಖಿನ ಮೈಸೂರು ಗೆಜೆಟ 2ನೇ ಭಾಗ 52ನೇ ಪುಟದಲ್ಲಿ ಫಾಯಿಷ್ ಆಗಿರುವ ಜನವರಿ ಮಾಹೆ 12ನೇ ತಾರೀಖಿನ ನೋಟೀಸ್ ವಿಚಾರದಲ್ಲಿ—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸದರಿ ನೋಟೀಸಿನಲ್ಲಿ ಹೇಳಿರುವ ಕತ್ತರಿಸಲ್ಪಟ್ಟ ಷೆಡ್ಯೂಲ್‌ಗಳ ಹರಾಜು ತಾರೀಖು 1903ನೇ ಇಸವಿ ಜನವರಿ ಮಾಹೆ 28ರಿಂದ ಫೆಬ್ರವರಿ ಮಾಹೆ 9ನೇ ತಾರೀಖು ಸೋಮವಾರಕ್ಕೆ ಬದಲಾಯಿಸಲ್ಪಟ್ಟಿರುತ್ತೆ. ಪೂರಾ ಸರ್ತನ್ನು ಒಟ್ಟಾಗಿ ಕೊಂಡು ಕೊಳ್ಳಲಿಷ್ಟವುಳ್ಳವರ ಟೆಂಡರುಗಳು 1903ನೇ ಇಸವಿ ಜನವರಿ ಮಾಹೆ ತಾರೀಖು 31ನೇ ಶನಿವಾರದ ಪೂರ್ವಾಹ್ನದವರೆಗೂ ಈ ಕೆಳಗೆ ರುಜು ಮಾಡಿರುವವರಿಂದ ದಾಖಲ್ ಮಾಡಿಕೊಳ್ಳಲ್ಪಡುತ್ತೆ.

Bangalore.
26—1—03.

T. LAKSHMINARASIMHA ROW,
Assistant Census Superintendent in Charge of Deputy Census Superintendent's Office in Mysore.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 9ನೇ ಜನವರಿ 1903.

ಶಿಡ್ಲಘಟ್ಟದ ತಾಲ್ಲೂಕಿಗೆ ಶೇರಿದ ಜೋಡಿ ಆಮೂರು ತಿಮ್ಮನಹಳ್ಳಿಯೆಂಬ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಬಾಗಿ ತಾಲ್ಲೂಕು ಅಮಲ್ದಾರರ ಕಛೇರಿಯಲ್ಲಿ ಫೆಬ್ರವರಿ 24ನೇ ತಾರೀಖು 1903ನೇ ಇಸವಿಯ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 15—1—1903ನೇ ಮರ್ಕುಂ 2ನೇ ನಂಬರ್ ಮೈಸೂರು ಗೆಜೆಟಿನ 2ನೇ ಭಾಗದ 27ನೇ ನಂಬರ್ ಪೇಜು ನೋಡತಕ್ಕದ್ದು.)

ಎಸ್. ಅಬ್ರಾರ್ ಹಸೇನ್, ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 24ನೇ ಜನವರಿ 1903.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿರುವ ರಿಜಿಸ್ಟರಾದ ದಸ್ತೈವಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗಿರುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರೀ ದಸ್ತೈವಜು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವ ದಸ್ತೈವಜುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸ್ ಪಡೆಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರಿ ದಸ್ತೈವಜುಗಳು ನಾಶಪಡಿಸಲ್ಪಡುತ್ತೆ.

ಸಬ್ ರಿಜಿಸ್ಟ್ರೀ ಆಫೀಸು ಹೆಸರು.	ಬುಕ್ಕು ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತೈವಜು ಬರಿಯಲ್ಪಟ್ಟ ತಾರೀಖು.	ದಸ್ತೈವಜು ರಿಜಿಸ್ಟರ್ಮಾಡಿದ ತಾರೀಖು.	ದಸ್ತೈವಜು ಬರದುಕೊಟ್ಟವರ ಹೆಸರು.	ದಸ್ತೈವಜು ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
			ಕುಣಿಗಲ್.				
ಕುಣಿಗಲ್ ...	I	461 / 1899—1900	17ನೇ ಮಾರ್ಚಿ 1900	20ನೇ ಮಾರ್ಚಿ 1900	ಸಿಟ್ನಹಳ್ಳಿ ಯಾಕ್ಕೈಯ್ಯನವರ ಅಳಿಯ ಶಿಂಗ್ರೈಯ್ಯ.	ಮಾಕಂ ನಂಜುಂಡೈಯ್ಯನವರ ಮಗ ರಾಜಗೋಪಾಲೈಯ್ಯ.	ಕ್ರಯ 150—0—0
	IV	12 / 1899—1900	2ನೇ ಮೇ 1900	26ನೇ ಮೇ 1900	ಗೊಂದಲಗೆರೆ ಮಲ್ಲಾಚಾರಿ ಮಗ ಲಿಂಗದ್ಯಾವರೈಯ್ಯ.	ಯಲಯೂರು ನಂಜುಂಡೇಗೌಡನ ಮಗ ಕಪನಿಗೌಡ.	ಹಣ ಸಂದ ರಶೀದಿ 100—0—0
	I	610 / 1899—1900	2ನೇ ಜೂನ್ 1900	2ನೇ ಜೂನ್ 1900	ಉಜ್ಜನಿ ಗ್ರಾಮದ ಬಸವಲಿಂಗೈಯ್ಯನ ಹೆಂಡತಿ ಗಿರಿಜಮ್ಮ.	ಉಜ್ಜನಿ ಪುಟ್ಟೈಯ್ಯ ಕೆಂಪಗೌಡನ ಲಿಂಗೆಗೌಡ.	ಕ್ರಯ 200—0—0
	I	671 / 1899—1900	16ನೇ ಜೂನ್ 1900	25ನೇ ಜೂನ್ 1900	1. ದೊಡ್ಡ ಮಾವತ್ತೂರು ಪಟೇಲ ಬೆಳ್ಳುಳ್ಳಿ ಗೌಡ. 2. ಕಂಡೇಶಟ್ಟಿ ಕೋಡಿ ಮಗ ಕರಿಯ. 3. ಚಿಕ್ಕ ಮಾವತ್ತೂರು ದಾಸೇಗೌಡನ ಮಗ ದಾಸೇಗೌಡ.	ದೊಡ್ಡ ಮಾವತ್ತೂರು ಚನ್ನೆಗೌಡನ ಮಗ ತಿಬ್ಬಗೌಡ.	ಗುತ್ತಿಗೆ 13—0—0 ಅಂದರೆ, 10 ರೂ. ಕಿಮ್ಮತ್ತು ಬಾಳುವ ಒಂದು ಖಂಡಿ ರಾಗಿ ಮತ್ತು 3 ರೂ. ಬಾಳುವ ಒಂದು ಗಾಡಿ ಹುಲ್ಲು.

	I	672 / 1899—1900	25ನೇ ಜೂನ್ 1900.	25ನೇ ಜೂನ್ 1900	1. ಚಿಕ್ಕ ಮಾವತ್ತೂರಿಗೆ ಸೇರಿದ ತಂಗಚಿಹಳ್ಳಿ ಗ್ರಾಮದ ಮೈಲ್ಗಿರಿ ಗೌಡನ ಮಗ ತಿಮ್ಮ. 2. ಬೋರೆಗೌಡನ ಮಗ ಬೋರ. 3. ಕುಳ್ಳೇಗೌಡನ ಮಗ ಮೈಲ್ಗಿರಿ 4. ನೀಲೆಗೌಡನ ಮಗ ತಿಮ್ಮೆಗೌಡ	ದೊಡ್ಡ ಮಾವತ್ತೂರು ಚನ್ನಗೌಡನ ಮಗ ತಿಬ್ಬೆಗೌಡ.	ಗ[illegible]ಗೆ 13—0—0 ಅಂದರೆ 10 ರೂ. ಕಿಮ್ಮತು ಬಾಳುವ ಒಂದು ಖಂಡಿ ರಾಗಿ ಅಥವಾ ಭತ್ತ ಮತ್ತು 3 ರೂ. ಕಿಮ್ಮತಿನ ಒಂದು ಗಾಡಿ ಹುಲ್ಲು.
	I	51 / 1900—1901	30ನೇ ಆಗಸ್ಟು 1900.	31ನೇ ಆಗಸ್ಟು 1900.	ತರೀಕೆರೆ ಕುನ್ನಿರಂಗನ ಮಗ ರಂಗ	ಕಂಚೈಯ್ಯನ ಮಗ ದೊಡ್ಡ ಕೋಟಯ್ಯ.	ಕ್ರಯ 20—0—0

ತಿಪಟೂರು.

ತಿಪಟೂರು ...	I	85 / 1900—1901	25ನೇ ನವಂಬರು 1899.	2ನೇ ಆಗಸ್ಟು 1900.	ಮಹಮದ್ ಹಯಾತ್‌ಸಾಬಿ.	ಅವನ ಹೆಂಡತಿ ಅಮಾಂಬಿ.	ಕ್ರಯ 97—8—0 ಮಹರಿಗಾಗಿ

ಶಿರಾ.

ಶಿರಾ ...	I	448 / 1899—1900	1ನೇ ಜೂನ್ 1900.	1ನೇ ಜೂನ್ 1900.	ಎಲಿಯೂರು ಮಜರೆ ಹಗ್ಗನಹಳ್ಳೀಲಿರುವ ಕಂಚಾವೀರಪುರದ ಮಗ ಹೊನ್ನ.	ಹಗ್ಗನಹಳ್ಳೀಲಿರುವ ನಾಯ್ಕರ ಜಲ್ಲೇದಿನಾಯ್ಕನ ಮಗ ರಾಮನಾಯಿಕ.	ಕ್ರಯ 30—0—0

ತುಮಕೂರು.

ತುಮಕೂರು	I	455 / 1899—1900	25ನೇ ಜನವರಿ 1900.	28ನೇ ಫೆಬ್ರವರಿ 1900.	ಕೆಂಪನಾಯಿಕ.	ಕರಿಯಪ್ಪ.	ಗೇಣಿಚೀಟಿ ವರುಷಕ್ಕೆ 50 ರೂ. ಗಳಂತೆ 10 ವರುಷಗಳ ವರೆಗು.
	I	215 / 1900—1901	16ನೇ ಆಗಸ್ಟು 1900.	17ನೇ ಆಗಸ್ಟು 1900.	ಚಾರ್ಲ್ಸ್ ಫ್ರಾನ್ಸಿಸ್.	ಹೈದರಸಾಬಿ.	ಕ್ರಯ 150—0—0

ಎಂ. ಎಸ್. ನಾರಾಯಣರಾವ್,
ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ಚಿಕ್ಕ ಮಗಳೂರು ತಾಲ್ಲೂಕು.

ತಾರೀಖು 25ನೇ ಡಿಸೆಂಬರ್ ಸರ್ 1902ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕ ಮಗಳೂರು ತಾಲ್ಲೂಕು ಪಂಡ್ರವಳ್ಳಿ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸರ್ 1903ನೇ ಇಸವಿ ಮಾರ್ಚಿ ತಾರೀಖು 7ನೇ ಶನಿವಾರ ಹಗಲು 11 ಘಂಟೆಗೆ ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಗೆ ಒಳಪಡಿಸಿ ಚಿಕ್ಕ ಮಗಳೂರು ತಾಲ್ಲೂಕು ಕಚೇರಿ ರೂಬರೂ ಚಿಕ್ಕ ಮಗಳೂರು ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾವಿಾಲ್ ಷರತ್ತುಗಳಿಗೆ ಒಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು. ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟಿ ಪ್ರೈಸ್‌ಯಾನೆ ನಿಯಮವಾದ ಸರ್ಕಾರ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖ್ಯೆರ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ ಸವಾಲ್ ಮೊಬಲಗು (ಅಪ್ಸೆಟಿ ಪ್ರೈಸ್ ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಸೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಪ್ಸೆಟ್ ಪ್ರೈಸ್‌ಯಾನೆ ನಿಯಮವಾದ ಸರಕಾರ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೋಸ್ಕರ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಎಲ್ಲಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4 ಹರಾಜು ಮೊಬಲಗು ಪೈಕಿ ಸೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜ್ ಖೈದಾದ ಒಡನೆಯೇ 2ನೇ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗಿನ ಭರ್ತಿಗೆ ಒಳಪಟ್ಟು ಆಖ್ಯೆರ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಚೆಯೇ ಆಖ್ಯೆರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಹ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ಒಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಕ್ರಮ ನಂಬರು	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ. ವಿಸ್ತೀರ್ಣ.	ದರಖಾಸ್ತು ಜಮೀನಿನ. ಆಕಾರ.	ಷರಾ.
30 / 1	ಎಸ್. ಎಲ್. ಮೆಥೀಯಸ್...	ಜಾಗರದ ಮಾಗಣಿ ಪಂಡ್ರವಳ್ಳಿ ಸರ್ವೆ ನಂ. 30	ಪೂರ್ವಕ್ಕೆ ಸರ್ವೆ ನಂ. 166—167ನೇ ಕಾಫಿತೋಟ ಸರ್ವೆ ನಂ. 30ನೇ ಜಂಗ್ಲಿ ಮತ್ತು. ಪಶ್ಚಿಮಕ್ಕೆ ಸರ್ವೆ ನಂ. 31 ಮತ್ತು 40ನೇ ನಂ. ಬಾಂದು ಕಲ್ಲುಗಳ ಹದ್ದುಬಸ್ತು. ದಕ್ಷಿಣಕ್ಕೆ ಸರ್ವೆ ನಂ. 34 & 167. ಉತ್ತರಕ್ಕೆ ಸರ್ವೆ ನಂ. 30ನೇ ಪೈಕಿ.	ಖುಲ್ಲು 61—25 ಖರಾಬ್ 2—23 ಜಾತಾ 59—2		

ತಿಳುವಳಿಕೆ ಷರಾ:—ಬಂದು ಸರ್ವೆ ನಂಬರು ಪೈಕಿ ಕೆಲವು ಜಾಗಕ್ಕೆ ದರಖಾಸ್ತು ಬಂದು ಕಚ್ಚಾ ಅಳತೆ ಪ್ರಕಾರ ಅಂದಾಜಾ ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕಾ ಮೋಜಣೀ ಎಕರೆಗೆ ಗಣನೀಯವಾದಷ್ಟು ಕಮ್ಮಿ ಜಾಸ್ತೀ ಆದರೆ ಜಾಸ್ತೀ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲೀ ಕೊಡುವದಕ್ಕೇ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೇ ಆಗಲಿ ಜಮೀನ್ ಹಿಡುವಳಿದಾರನು ಬದ್ಧವ ಅರ್ಹನಾಗಿರಬೇಕು.

ಸ್ಥಿರಸ್ವತ್ತಿನ ಹರಾಜು ಒಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 17ನೇ ಜನವರಿ 1903, ಚಿಕ್ಕಮಗಳೂರು.

1. ಕಂದಾಯದ ಬಾಕೀದಾರರಾದ ಪವತಿ ಮೆ॥ ಜೆ. ಎಂ. ಬ್ರಿಟೋ ಕುಟುಂಬ ಎಸ್. ಎಸ್. ಕೋಯಿಲೋ ಯವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಹಿಡುವಳಿದಾರ್ರ ಹಕ್ಕು ಬಾಧ್ಯತೆ ಕಳಕೊಂಡದ್ದಾಗಿ ಕಂಠೋಕ್ತವಾಗಿ ನಮೂದಾದ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಕಚೇರಿಯಲ್ಲಿ ಸೆಕೆಂಡ್ ಅ॥ ಕ॥ ರವರು 1903ನೇ ಇಸವಿ ಮಾರ್ಚಿ ತಾರೀಖು 3ನೇ ಮಂಗಳವಾರದ ದಿವಸ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಕಡೆ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

3. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಆವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

4. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುಕ್ತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಕ್ತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತನ್ನ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

5. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರರಾಗಲೀ ಅವರ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

6. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

7. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

8. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.*			ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕೀ ಮೊಬಲಗು.			
					ರೂ.	ಆ.	ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಮೂಡಿಗೆರೆ	ಕಳಸ	ತಲಗೋಡು	ಮೆ॥ ಜೆ. ಎಂ. ಬ್ರಿಟೋ ಇವರು ಪವತಿ, ಕುಟುಂಬ ಎಸ್. ಎಸ್. ಕೋಯಿಲೋ ಯವರು.	ಸರ್ವೆ ನಂಬರು 9ರಲ್ಲಿ.											473	0	0	ಅಪ್‌ಸೆಟ್ ಪ್ರೈಸ್
								4	ಕಾಫಿ	151	2	227	0	0	420	0	0	ಬಾಂದು ನಾಶಪಡಿಸಿದ ಬಗ್ಯೆ ವಿಧಿಸಿರುವ ಜುರ್ಮಾನೆ.
				1 ಬಂಗಲೆ	25	0	0	7	ಡಿಟೋ	4	0	4	0	0	705	0	0	ಹಿಂದಿನ ಸಾಲು ಕಂದಾಯ.
				4 ಕೂಲಿ ಲೈನು.	18	0	0	9	ಡಿಟೋ	50	0	75	0	0	73	10	0	ಲೋಕಲ್ ಫಂಡು
								46	ಡಿಟೋ	350	19	525	0	0	1	0	0	ನೋಟಿಸು ಇಸ್ತಿಹಾರ ಫೀ.
										555	21	831	0	0	1672	10	0	ಈರೀತಿ ವಸೂಲ್ ಬರಬೇಕಾಗಿರುತ್ತೆ. ಇದಲ್ಲದೆ ಹರಾಜು ಆಗುವ ತಾರೀಖಿನವರಿಗಿನ ಬಡ್ಡಿ ಸಹ ಲೆಖ್ಖಾಚಾರವಾಗಿ ಬರಬೇಕು.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಪಿ. ಜೆ. ಡಿಸೋಜ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1902—03ನೇ ಇಸವಿ ಮಿ॥ ಅರ್ಜಿ ನಂಬರ 113.

ಮೃತಪಟ್ಟ ಶಿವಮೊಗ್ಗಾದಲ್ಲಿರತಕ್ಕ—ಕಿಕ್ಕೇರಿ ವೆಂಕೋಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಕಿಕ್ಕೇರಿ ಸೀತಾಬಾಯಿಯು ಮೃತಪಟ್ಟ ಸದರೀ ವೆಂಕೋಬರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಕಿಕ್ಕೇರಿ ಶೀತಾಬಾಯಿಯು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ವೆಂಕೋಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ (50—0—0) ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಕಿಕ್ಕೇರಿ ಶೀತಾಬಾಯಿಯು ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರವರಿ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕೋಬರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೋಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—03ನೇ ಇಸವಿ ಮಿ॥ ಅರ್ಜೀ ನಂಬರು 114.

ಮೃತಪಟ್ಟ ದಾವಣಗೆರೆಯಲ್ಲಿದ್ದ ಐಯ್ಯ ಶಿದ್ಧಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ತಿರಕಪ್ಪನವರ ಮಠದ ಷಡಾಕ್ಷರಪ್ಪ, ಮೃತಪಟ್ಟ ಸದರೀ ಐಯ್ಯ ಶಿದ್ಧಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ದಾವಣಗೆರೆ ಸ್ಥಳದ ತಿರಕಪ್ಪನವರ ಮಠದ ಷಡಾಕ್ಷರಪ್ಪನವರು ದಾವಣಗೆರೆ ವಾಸಸ್ಥರಾಗಿ ಮೃತಪಟ್ಟ ಐಯ್ಯ ಶಿದ್ಧಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 500—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಷಡಾಕ್ಷರಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರವರಿ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಐಯ್ಯ ಶಿದ್ಧಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೋಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್, ಶಿರಸೆದ್ದಾರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ 333.

ಮೃತಪಟ್ಟ ಮೈಸೂರು ಮುನಸಿಪಾಲಿಟಿ ಇಂಜನೀರು ಆ॥ ಹೆಡ್ ಅಕೌಂಟೆಂಟ್ ಚನ್ನಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮುನಸಿಪಾಲಿಟಿ ಪೌಂಡು ಕೀಪರ್ M. C. ಶಂಕರನಾರಾಯಣರಾವ್, ಮೃತಪಟ್ಟ ಸದರೀ ಚನ್ನಪ್ಪಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಚನ್ನಪ್ಪಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರವರಿ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಪ್ಪಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೋಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 334.

ಮೃತಪಟ್ಟ ಶ್ರೀರಂಗಪಟ್ಟಣದ ತಾ॥ ಗಂಜಾಮಿನಲ್ಲಿದ್ದ ಶೇಷಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀರಂಗಪಟ್ಟಣದ ತಾ॥ ಗಂಜಾಮಿನಲ್ಲಿ ಕರೀಘಟ್ಟದ ರಸ್ತೆಯಲ್ಲಿರುವ ವಾಣಿ ವೈಶ್ಯರ ಜಾತಿ ಶಿವಶೆಟ್ಟಿ ಮಗ ನಂಜಪ್ಪಶೆಟ್ಟಿ, ಮೃತಪಟ್ಟ ಸದರೀ ಶೇಷಪ್ಪಶೆಟ್ಟರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಗಂಜಾಮದ ವಾಸಸ್ಥರಾಗಿ ಮೃತಪಟ್ಟ ಶೇಷಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಯ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

ಸನ 1903ನೇ ಇಸವಿ ಜನವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ 1902—1903ನೇ ಇಸವಿ ಅರ್ಜೀ ನಂಬರು 335.

ಮೃತಪಟ್ಟ ನಂಜನಗೂಡು ತಾ॥ ರವಿನ್ಯೂ ಗುಮಾಸ್ತೆ ಅನಂತಪದ್ಮನಾಭರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಯಡತೊರೆ ತಾ॥ ಟ್ಯಾಂಕು ಇನ್ಸ್‌ಪೆಕ್ಟರು ಮೈಸೂರು ಶ್ರೀನಿವಾಸರಾಯರ ಮನೇಲಿರುವ ಅನಂತಪದ್ಮನಾಭರಾಯರ ಹೆಂಡತಿ ಸಾವಿತ್ರಮ್ಮ ಮೈನರ್, ಗಾರ್ಡಿಯನ್ ಶ್ರೀನಿವಾಸರಾವ್, ಮೃತಪಟ್ಟ ಸದರೀ ಅನಂತಪದ್ಮನಾಭರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದಲ್ಲಿ ಮೃತಪಟ್ಟ ಅನಂತಪದ್ಮನಾಭರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅನಂತಪದ್ಮನಾಭರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಜನವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ್ ರೈಲ್ವೆ ಕಂಪನಿ, ಲಿಮಿಟೆಡ್.

ಸನ 1895ನೇ ಇಸವಿಯ ಮೂರನೇ ನಂಬರು ರೆಗ್ಯುಲೇಷನ್ ಆದ ಮೈಸೂರ ಕಂಪನೀಸ್ ಆಕ್ಟು ಅನುಸರಿಸಿ ರಿಜಿಸ್ಟರ್ ಮಾಡಲ್ಪಟ್ಟಿಧೆ.

ಇದರ ಬಂಡವಾಳ 5,00,000 ರೂಪಾಯಿಗಳು. ಷೇರು 1ಕ್ಕೆ 25 ರೂಪಾಯಿಗಳಂತೆ 20,000 ಷೇರುಗಳು. ಅಪ್ಲಿಕೇಷನ್ನೊಡನೆ 5 ರೂಪಾಯಿಗಳು, ಷೇರುಗಳು ಹಂಚಿದಕೂಡ್ಲೆ 5 ರೂಪಾಯಿಗಳು, ಬಾಕಿ 15 ರೂಪಾಯಿಗಳು ಕಾಲ್ ಬಂದಕ್ಕೆ ರೂಪಾಯಿಗಳಂತೆ ಪಾವತಿ ಮಾಡತಕ್ಕದ್ದು.

ಕಂಪನಿಯ ಷೇರುಲಿಸ್ಟು ಸಿದ್ಧವಾಗಿರುವದು. ಹಣವು ಬೆಂಗಳೂರಿನಲ್ಲಿರುವ ಮದರಾಸ್ ಬ್ಯಾಂಕಿಗಾಗಲಿ ಅಥವಾ ಮ್ಯಾನೇಜಿಂಗ್ ಡೈರೆಕ್ಟರಿಗಾಗಲಿ ಕಳುಹಿಸಿ ರಸೀತಿ ಪಡೆಯಬಹುದು.

ಷೇರುಗಳು ಮೈಸೂರು ಸೀಮೆಯಲ್ಲಿ ವಾಸಮಾಡುವವರಿಗು ಮತ್ತು ಅನ್ಯದೇಶದಲ್ಲಿ ವಾಸಿಸುತ್ತಿರುವ ಈ ದೇಶಿಯರಿಗು ಕೊಡಲ್ಪಡುವದು. ಪ್ರಕಟನ ಪತ್ರಿಕೆಗಳು ಮತ್ತು ಇತರ ತಪಸೀಲುಗಳು ಸಹಾ ಇದರಡಿ ಸೈನ್ ಮಾಡಿರುವವರಿಂದ ತರಸಿಕೊಳ್ಳಬಹುದು.

ಪಿ. ಸುಬ್ಬರಾವ್,
ಮ್ಯಾನೇಜಿಂಗ್ ಡೈರೆಕ್ಟರ್,
ಬೆಂಗಳೂರು—ಚಿಕ್ಕಬಳ್ಳಾಪುರ ಲೈಟ ರೈಲ್ವೆಕಂಪನಿ, ಲಿಮಿಟೆಡ್,
68ನೇ ನಂಬರು, 2ನೇ ಬೀದಿ, ಚಾಮರಾಜಪ್ಯಾಟೆ, ಬೆಂಗಳೂರು.

ಶ್ರೀನಿವಾಸಪುರ—ಕೈವಾರ ವೆಂಕೋಬರಾಯರವರಿಗೆ ಶ್ರೀ॥ ಜಮೀನ್ದಾರ ಸುಬ್ಬರಾಯಪ್ಪನವರಿಂದ ನೋಟಿಸ್— ನೀವು 400 ರೂಪಾಯಿಗೆ ಒಪ್ಪಿದದ್ದಕ್ಕೆ ಕೋರ್ಟಿನಲ್ಲಿ ತಪ್ಪುಪ್ರಮಾಣಾ ಮಾಡಿ 600 ರೂಪಾಯಿಗೆ ಡಿಕರಿ ಪಡಿದಿರಿ, ರಾಗಿ ಕ್ರಯ 98 ರೂಪಾಯಿಗೆ ಜವಾಬ್ ಕೊಡಲಿಲ್ಲಾ. ಮಣಿಆರ್ಡರ್ ವಾಪಸು ಮಾಡಿದಿರಿ ಈಗಲು 62 ರೂಪಾಯಿ ಸಿದ್ಧವಾಗಿಧೆ ಫಸಲು ಬರಲಾರದು. 160 ರೂಪಾಯಿನ ಪತ್ರ ವಾಪಸು ಮಾಡದೆ ದಾವೆ ಮಾಡಿದರೆ ಆ ಕೂಡ್ಲೆ ನಿಮ್ಮಮ್ಯಾಲೆ 14—6 —1902ರಲ್ಲು ಬರದ ಪ್ರಕಾರ ಮಾನನಷ್ಟ ಬಾಬು 500 ರೂಪಾಯಿಗೆ ದಾವೆ ಮಾಡುತ್ತೇನೆ ತಿಳಿಯುವದು.

ಸುಬ್ಬರಾಯಪ್ಪ.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 5.

ಬೆಂಗಳೂರು, ಗುರುವಾರ, ಫೆಬ್ರುವರಿ ತಾ|| 5, ಸನ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಟೋಣಾದ ಇಸ್ತಿಹಾರ್ ನಾಮೆಗಳು.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಜನವರಿ 1903.

— ಶಿಡ್ಲಘಟ್ಟದ ತಾಲ್ಲೂಕಿಗೆ ಸೇರಿದ ಜೋಡಿ ಆನೂರು ತಿಮ್ಮನಹಳ್ಳಿಯೆಂಬ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗಾಗಿ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ ಫೆಬ್ರುವರಿ 24ನೇ ತಾರೀಖು 1903ನೇ ಇಸವಿಯ ದಿವಸ ಬಹಿರಂಗವಾಗಿ ಹರಾಜು ಡಿಸಲ್ಪಡುತ್ತೇದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಸೀಲ್ ಬಗ್ಗೆ 15—1—1903ನೇ ತಾರೀಖು 2ನೇ ನಂಬರ್ ಮೈಸೂರು ಗೆಜೆಟಿನ 2ನೇ ಭಾಗದ 27ನೇ ನಂಬರ್ ಪೇಜು ನೋಡತಕ್ಕದ್ದು.)

ಎಸ್. ಅವಿಹಾರ್ ಹರ್ಸೇ, ಆಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 24ನೇ ಜನವರಿ 1903.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿರುವ ರಿಜಿಸ್ಟರಾದ ದಸ್ತೈವಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರೀ ದಸ್ತೈವಜು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವ ದಸ್ತೈವಜುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸ್ ಪಡೆಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ಸದರಿ ದಸ್ತೈವಜುಗಳು ನಾಶಪಡಿಸಲ್ಪಡುತ್ತೆ.

ಸಬ್ ರಿಜಿಸ್ಟ್ರೀ ಆಫೀಸು ಹೆಸರು.	ಪುಸ್ತಕ ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತೈವಜು ಬರಿಯಲ್ಪಟ್ಟ ತಾರೀಖು.	ದಸ್ತೈವಜು ರಿಜಿಸ್ಟರ್ಮಾಡಿದ ತಾರೀಖು.	ದಸ್ತೈವಜು ಬರದುಕೊಟ್ಟವರ ಹೆಸರು.	ದಸ್ತೈವಜು ಬರಸಿಕೊಂಡವರ ಹೆಸರು.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತು.
			ಕುಣಿಗಲ್.				
ಕುಣಿಗಲ್ ...	I	461 / 1899—1900	17ನೇ ಮಾರ್ಚಿ 1900	20ನೇ ಮಾರ್ಚಿ 1900	ಸಿಟ್ಟಹಳ್ಳಿ ಯಾಕೈಯ್ಯನವರ ಅಳಿಯ ಶಿಂಗೈಯ್ಯ.	ಮಾಕಂ ನಂಜುಂಡೈಯ್ಯನವರ ಮಗ ರಾಜಗೋಪಾಲೈಯ್ಯ.	ಕ್ರಯ 150—0—0
	IV	12 / 1899—1900	2ನೇ ಮೇ 1900	26ನೇ ಮೇ 1900	ಗೊಂಡಲಗೆರೆ ಮಲ್ಲಾಚಾರಿ ಮಗ ಲಿಂಗದ್ಯಾವರೈಯ್ಯ.	ಯಲಯೂರು ನಂಜುಂಡೇಗೌಡನ ಮಗ ಕಪನಿಗೌಡ.	ಹಣ ಸಂದ ರಶೀದಿ 100—0—0
	I	610 / 1899—1900	2ನೇ ಜೂನ್ 1900	2ನೇ ಜೂನ್ 1900	ಉಜ್ಜನಿ ಗ್ರಾಮದ ಬಸವಲಿಂಗೈಯ್ಯನ ಹೆಂಡತಿ ಗಿರಿಜಮ್ಮ.	ಉಜ್ಜನಿ ಪುಟ್ಟೈಯ್ಯ ಕೆಂಪೆಗೌಡನ ಲಿಂಗೆಗೌಡ.	ಕ್ರಯ 200—0—0
	I	671 / 1899—1900	16ನೇ ಜೂನ್ 1900	25ನೇ ಜೂನ್ 1900	1. ದೊಡ್ಡ ಮಾವತ್ತೂರು ಪಟೇಲ ಬೆಳ್ಳಿ ಗೌಡ. 2. ಕಂಡೇಶೆಟ್ಟಿ ಕೋಡಿ ಮಗ ಕರಿಯ. 3. ಚಿಕ್ಕ ಮಾವತ್ತೂರು ದಾಸೇಗೌಡನ ಮಗ ದಾಸೇಗೌಡ.	ದೊಡ್ಡ ಮಾವತ್ತೂರು ಚನ್ನೆಗೌಡನ ಮಗ ತಿಬ್ಬೆಗೌಡ.	ಗುತ್ತಿಗೆ 13—0—0 ಅಂದರೆ, 10 ರೂ. ಕಿಮ್ಮತು ಬಾಳುವ ಒಂದು ಖಂಡಿ ರಾಗಿ ಮತ್ತು 3 ರೂ. ಬಾಳುವ ಒಂದು ಗಾಡಿ ಹುಲ್ಲು.

	I	672 / 1899—1900	25ನೇ ಜೂನ್ 1900.	25ನೇ ಜೂನ್ 1900	1. ಚಿಕ್ಕ ಮೂವತ್ತೂರಿಗೆ ಸೇರಿದ ತಂಗಚಿಹಳ್ಳಿ ಗ್ರಾಮದ ಮೈಲ್ಗಿರಿ ಗೌಡನ ಮಗ ತಿಮ್ಮ. 2. ಬೋರೆಗೌಡನ ಮಗ ಬೋರ. 3. ಕುಳ್ಳೇಗೌಡನ ಮಗ ಮೇಲ್ಗಿರಿ 4. ನೀಲೆಗೌಡನ ಮಗ ತಿಮ್ಮೇಗೌಡ	ದೊಡ್ಡ ಮೂವತ್ತೂರು ಚನ್ನೆಗೌಡನ ಮಗ ತಿಬ್ಬೆಗೌಡ.	ಗುತ್ತಿಗೆ 13—0—0 ಅಂದರೆ 10 ರೂ. ಕಿಮ್ಮತ್ತು ಬಾಳುವ ಒಂದು ಖಂಡಿ ರಾಗಿ ಅಥವಾ ಭತ್ತ ಮತ್ತು 3 ರೂ. ಕಿಮ್ಮತ್ತಿನ ಒಂದು ಗಾಡಿ ಹುಲ್ಲು.
	I	51 / 1900—1901	30ನೇ ಆಗಸ್ಟು 1900.	31ನೇ ಆಗಸ್ಟು 1900.	ತರೀಕರೆ ಕುನ್ನರಂಗನ ಮಗ ರಂಗ	ಕೆಂಚೈಯ್ಯನ ಮಗ ದೊಡ್ಡ ಕೋಟಯ್ಯ.	ಕ್ರಯ 20—0—0

ತಿಪಟೂರು.

ತಿಪಟೂರು ...	I	85 / 1900—1901	25ನೇ ನವಂಬರು 1899.	2ನೇ ಆಗಸ್ಟು 1900.	ಮಹಮದ್ ಹಯಾತ್‌ಸಾಬಿ.	ಇವನ ಹೆಂಡತಿ ಇಮಾಂಬಿ.	ಕ್ರಯ 97—8—0 ಮಹಾಲಿಗಾಗಿ

ಶಿರಾ.

ಶಿರಾ ...	I	448 / 1899—1900	1ನೇ ಜೂನ್ 1900.	1ನೇ ಜೂನ್ 1900.	ಎಲಿಯೂರು ಮಜರೆ ಹೆಗ್ಗನಹಳ್ಳಿಲಿರುವ ಕಂಚಾವೀರಪುರದನ ಮಗ ಹೊನ್ನ.	ಹೆಗ್ಗನಹಳ್ಳೀಲಿರುವ ನಾಯ್ಕರ ಬಲ್ಲೇದಿನಾಯ್ಕನ ಮಗ ರಾಮನಾಯಿಕ.	ಕ್ರಯ 30—0—0

ತುಮಕೂರು.

ತುಮಕೂರು	I	455 / 1899—1900	25ನೇ ಜನವರಿ 1900.	28ನೇ ಫೆಬ್ರುವರಿ 1900.	ಕೆಂಪನಾಯಿಕ.	ಕರಿಯಪ್ಪ.	ಗೇಣಿಚೀಟಿ ವರುಷಕ್ಕೆ 50 ರೂ. ಗಳಂತೆ 10 ವರುಷಗಳ ವರೆಗು.
	I	215 / 1900—1901	16ನೇ ಆಗಸ್ಟು 1900.	17ನೇ ಆಗಸ್ಟು 1900.	ಚಾರ್ಲ್ಸ್‌ಫ್ರಾನ್ಸಿಸ್.	ಹೈದರಸಾಬಿ.	ಕ್ರಯ 150—0—0

ಎಂ. ಎಸ್. ನಾರಾಯಣರಾವ್,
ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 20ನೇ ಡಿಸೆಂಬರ್ 1902, ಮೊಕ್ಕಾಂ ಶಿವಮೊಗ್ಗಾ.

1902ನೇ ಇಸವಿ ಡಿಶಂಬರ್ ತಾರೀಖು 20ನೇ ಶನಿವಾರ ಶಿವಮೊಗ್ಗಾದಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟ್ ಫಂಡು ಬೋರ್ಡು ಮೀಟಿಂಗ್ ಪ್ರೊಸೀಡಿಂಗ್ಸ್ ಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗತಃ ಮೆಂಬರುಗಳು.

ಮೆ|| ಕೆ. ಪಿ. ಪುಟ್ಟಣ್ಣ ಶೆಟ್ಟರವರು, ಡೆಪ್ಯುಟಿ ಕಮಿಷನರ್ ಮತ್ತು ಪ್ರೆಸಿಡೆಂಟರವರು, ಸಭಾಧ್ಯಕ್ಷರು.

1. ,, ಕೆ. ಪ್ರಹ್ಲಾದರಾಯರವರು, ಎಗ್ಸಿಕ್ಯೂಟಿವ್ ಇಂಜಿನಿಯರವರು.
2. ,, ಡಬ್ಲ್ಯು. ಶ್ರೀನಿವಾಸಯ್ಯಂಗಾರ್ರವರು, ಶಿವಮೊಗ್ಗಾ ಸಿವಿಲ್ ಆಸ್ಪತ್ರೆ ಇನ್‌ಚಾರ್ಜು ಅಸಿಸ್ಟೆಂಟ್ ಸರ್ಜನರವರು.
3. ,, ಟಿ. ಕೆ. ಲಕ್ಷ್ಮಣ ಐಯ್ಯರ್, ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್.
4. ,, ಎಸ್. ಕೃಷ್ಣಯ್ಯರವರು, ಚನ್ನಗಿರಿ ತಾಲ್ಲೂಕು ಅಮಲ್ದಾರ್.
5. ,, ಜೆ. ಡಿ. ಚಿನ್ನಪ್ಪಾಪಿಳ್ಳೆ, ಹೊನ್ನಾಳಿ ತಾಲ್ಲೂಕು ಅಮಲ್ದಾರ್.
6. ,, ಕೆ. ಆರ್. ಸುಬ್ಬರಾವ್, ಷಿಕಾರಿಪುರದ ತಾಲ್ಲೂಕು ಅಮಲ್ದಾರ್.
7. ,, ಎಸ್. ಕೃಷ್ಣಪ್ಪ, ಸೊರಬ ತಾಲ್ಲೂಕು ಅಮಲ್ದಾರ್.
8. ,, ಜಿ. ಹನುಮಂತರಾವ್, ಸಾಗರದ ತಾಲ್ಲೂಕು ಅಮಲ್ದಾರ್.
9. ,, ಬಿ. ಎಸ್. ರಾಮೋಜಿರಾವ್, ನಗರದ ತಾಲ್ಲೂಕು ಅಮಲ್ದಾರ್.
10. ,, ಎಸ್. ವೆಂಕಟರಮಣ ಶ್ರೌತಿ, ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮೆ|| ಕೆ. ಅನಂತರಾಮೈಯ್ಯಂಗಾರ್ರು, ಚನ್ನಗಿರಿ ತಾಲ್ಲೂಕು.
2. ,, ಹೊಸಬಾಳೆ ತಿಮ್ಮಪ್ಪನವರು, ಸೊರಬ ತಾಲ್ಲೂಕು.
3. ,, ಅರಮನೆ ಕೊಪ್ಪದ ರಾಮಪ್ಪನವರು, ನಗರದ ತಾಲ್ಲೂಕು.

ಗೈರ್ ಹಾಜರು.

ಉದ್ಯೋಗತಃ ಮೆಂಬರುಗಳು.

1. ಸಾಗರದ ಸಬ್ ಡಿವಿಜನ್ ಆಫೀಸರವರು (ಖಾಲಿ).
2. ಮೆ|| ಎ. ಅನಂದರಾಯರವರು, 1ನೇ ಅಸಿಸ್ಟೆಂಟ್ ಕಮಿಷನರವರು.
3. ,, ಸಿ. ಎಸ್. ಬಾಲಸುಂದರಮ್ಮೈಯ್ಯರವರು, 2ನೇ ಅಸಿಸ್ಟೆಂಟ್ ಕಮಿಷನರವರು.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮೆ|| ಸಿ. ಚನ್ನಬಸಪ್ಪನವರು, ಶಿವಮೊಗ್ಗಾ ತಾಲ್ಲೂಕು.
2. ,, ಸಿ. ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
3. ,, ಜವಳಿ ಮಂಜಪ್ಪನವರು, ತೀರ್ಥಹಳ್ಳಿ ತಾಲ್ಲೂಕು.
4. ಇನಾಂದಾರ್ ಮೆಂಬರ್ (ಖಾಲಿ).

1. ಲೋಕಲ್ ಬೋರ್ಡು ರೆಗ್ಯುಲೇಷನ್ :—1902ನೇ ಇಸವಿ IIನೇ ನಂಬರ್ ಮೈಸೂರು ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಯಾನೆ ಚಟ್ಟವನ್ನು ಓದಿ ರಿಕಾರ್ಡು ಮಾಡಲಾಯಿತು.

2. ಡಿಸ್ಟ್ರಿಕ್ಟ್ ಫಂಡು ಬಡ್ಜೆಟ್ :—1903—04ನೇ ಇಸವಿ ಡಿಸ್ಟ್ರಿಕ್ಟ್ ಫಂಡು ಜಮಾಖರ್ಚು ಬಡ್ಜೆಟ್ ಅಂದಾಜಾ ಓದಿ ಮಂಜೂರಾಗಬಹುದಾಗಿ ತೀರ್ಮಾನವಾಯಿತು.

ಶಿಲ್ಕು ಜೇಬೀಲು ಜಮಾ ರೂಪಾಯಿಗಳು 1,05,721—0—0

ಅಂದಾಜಾ ಖರ್ಚು ರೂಪಾಯಿಗಳು 86,716—0—0

3. ಅನಂತಪುರ–ತೀರ್ಥಹಳ್ಳಿ ರಸ್ತೆ :—ಅನಂತಪುರ–ತೀರ್ಥಹಳ್ಳಿ ರಸ್ತೆಯ ಮೈಲೇಜು ದರವನ್ನು 50 ರೂಪಾಯಿಗಳಿಂದ 70 ರೂಪಾಯಿಗಳಿಗೆ ಹೆಚ್ಚಿಸಿ ಇರುವದನ್ನು ಮಂಜೂರು ಮಾಡಿ ಇರುವದಾಗಿ ಗವರ್ನಮೆಂಟಿನಿಂದ ಸಾದರಾದ 1902ನೇ ಇಸವಿ ಅಕ್ಟೋಬರ್ ತಾರೀಖು 4ನೇ ಮರ್ಕುಂ ನಂಬರ್ 5394—6 ಎಲ್. ಎಫ್. 9—1902ನೇ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

4. ಡಿಸ್ಟ್ರಿಕ್ಟ್ ಫಂಡು ಇನ್‌ಸ್ಪೆಕ್ಷನ್ ಲಾಡ್ಜುಗಳು :—ಡಿಸ್ಟ್ರಿಕ್ಟ್ ಫಂಡು ಇನ್‌ಸ್ಪೆಕ್ಷನ್ ಲಾಡ್ಜುಗಳ ಬಾಡಿಗೆಯನ್ನು ವಸೂಲ್ ಮಾಡೋಣವನ್ನು ಈ ಕಟ್ಟಡಗಳ ನಿಗೇವಾನಿ ನೋಡಿಕೊಳ್ಳತಕ್ಕ ನೌಕರರ ಮೊಕರೂರಾತಿ ಇವರಿಗೆ ತಲಬು ಪಾವತಿ ಮಾಡೋಣ ಮತ್ತು ಇವರನ್ನು ಕೆಲಸದಿಂದ ನಿವೃತ್ತಿ ಮಾಡೋಣ ಇವುಗಳಿಗೆ ಸಾಮಾನು ಅಂದರೆ ಕುರ್ಚಿ, ಮೇಜಾ, ಮುಂತಾದವುಗಳ

ನ್ನು ಬದಗಿಸಿಕೊಡೋಣ ಮತ್ತು ಈ ಸಾಮಾನುಗಳನ್ನು ಭದ್ರವಾಗಿಟ್ಟುಕೊಂಡು ಇರೋಣ ಈ ಮುಂತಾದ್ದಾವತ್ತು ಚೀಫ್ ಇಂಜನಿಯರ್ ಸಾಹೇಬರವರು ಅಭಿಪ್ರಾಯಪಡುವಂತೆ ರೆವಿನ್ಯೂ ಇಲಾಖೆಯವರಿಗೆ ವಹಿಸಿಕೊಡಬಹುದೇ ಹ್ಯಾಗೆ ಯೆಂಬುವ ವಿಚಾರದಲ್ಲೂ ಮತ್ತು ಹಾಗೆ ರೆವಿನ್ಯೂ ಇಲಾಖೆಯವರಿಗೆ ವಹಿಸಬಹುದಾದ ಇನ್ಸ್‌ಪೆಕ್ಷನ್ ಲಾಡ್ಜುಗಳಿಗೆ ಬೇಕಾಗುವ ಫರ್ನೀಚರ್ ಯಾನೆ ಸಾಮಾನುಗಳ ಖರೀದಿಯನ್ನು ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನವರು ವಹಿಸುತ್ತಾರೆಯೋ ಹ್ಯಾಗೆ ಎಂಬುವ ವಿಚಾರದಲ್ಲಿಯೂ ಬಂದ ಗೌರ್ನಮೆಂಟ್ 1902ನೇ ಇಸವಿ ಡಿಸೆಂಬರ್ ತಾರೀಖು 3ನೇ ಮುರ್ಕಂ ನಂಬರು 9275—83 ಎಲ್. ಎಫ್. 67–97ನೇ ಪ್ರೊಸಿಡಿಂಗ್ಸು ಓದಲಾಗಿ ಬೋರ್ಡಿನವರು ಚೀಫ್ ಇಂಜನಿಯರ್ ಸಾಹೇಬರವರ ಅಭಿಪ್ರಾಯವನ್ನು ಅನುಮೋದಿಸುವದಾಗಿಯೂ ಈ ಕಟ್ಟಡಗಳಿಗೆ ಒದಗಿಸಿಕೊಡತಕ್ಕ ಫರ್ನೀಚರ್ ಯಾನೆ ಸಾಮಾನುಗಳ ಕ್ರಯವನ್ನು ಹಾಲಿ ಕೊಡುತ್ತಾ ಇರುವಂತೆ ಡಿಸ್ಟ್ರಿಕ್ಟು ಫಂಡಿನಿಂದ ಕೊಡಬಹುದಾಗಿಯೂ ತೀರ್ಮಾನ ಮಾಡಿದರು.

5. ಹೊಸೂರು ಮುಸಾಫರಖಾನೆ:—1902ನೇ ಇಸವಿ ಆಗಸ್ಟ್ ತಾರೀಖು 30ರಲ್ಲಿ ನಡದ ಡಿಸ್ಟ್ರಿಕ್ಟು ಫಂಡು ಬೋರ್ಡು ಮೀಟಿಂಗಿನಲ್ಲಿ ತೀರ್ಮಾನವಾದಂತೆ ಚನ್ನಗಿರಿ ತಾಲ್ಲೂಕು ಹೊಸೂರು ಮುಸಾಫರ್ ಖಾನೆಯನ್ನು ಇಂಜನಿಯರ್ ಇಲಾಖೆ ಯವರಿಗೆ ವಾಪಸ್ ಕೊಟ್ಟುಬಿಡೋಣವನ್ನು ರಿಕಾರ್ಡು ಮಾಡಿಕೊಂಡಿರುವದಾಗಿ ಬಂದ ಗೌರ್ನಮೆಂಟ್ 1902ನೇ ಇಸವಿ ಅಕ್ಟೋಬರ್ ತಾರೀಖು 4ನೇ ಮುರ್ಕಂ 5390—1 ಎಲ್. ಎಫ್. 74—94ನೇ ನಂಬರ್ ಪ್ರೊಸಿಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

6. ನಗರದ ಡಿಸ್ಪೆನ್ಸರಿ ಝಾಡಮಾಲಿ ಅಲೋಯೆನ್ಸು:—ನಗರದ ಡಿಸ್ಪೆನ್ಸರಿ ಝಾಡಮಾಲಿಗೆ ಮಾಹೆಯಾನಾ ಒಂದು ರೂಪಾಯಿ ಅಲೋಯೆನ್ಸನ್ನು ಕೊಡಬೇಕೆಂಬದಾಗಿ ಸೀನಿಯರ್ ಸರ್ಜನ್ ಸಾಹೇಬರವರು ಶಿಫಾರಸ್ ಮಾಡುವದನ್ನು ಡಿಸ್ಟ್ರಿಕ್ಟು ಫಂಡು ಬೋರ್ಡು ಪ್ರೆಸಿಡೆಂಟರು ಈ ಅಂಶವನ್ನು ಮಾಹೆ ಮಜಕೂರು ತಾರೀಖು 18ನೇ ಮುರ್ಕಂ ನಂಬರು 10106 ಎಲ್. ಎಫ್. 28—92ನೇ ಗೌರ್ನಮೆಂಟ್ ಪ್ರೊಸಿಡಿಂಗ್ಸ್ ಅನುಸರಿಸಿ ಬೋರ್ಡಿನಲ್ಲಿ ಇಡಲು ಸದರೀ ಡಿಸ್ಪೆನ್ಸರಿ ಝಾಡಮಾಲಿಗೆ ಮಾಹೆಯಾನಾ ಒಂದು ರೂಪಾಯಿ ಮುಲ್ಕಾಡು ಅಲೋಯೆನ್ಸು ಕೊಡಬಹುದಾಗಿ ಬೋರ್ಡಿನವರು ಒಪ್ಪಿಕೊಂಡರು.

7. ಚನ್ನಗಿರಿ ಸಬ್ ರಿಜಿಸ್ಟ್ರಾರ ಆಫೀಸು:—ಚನ್ನಗಿರಿ ಮುಸಾಫರ್ ಖಾನೆಯಲ್ಲಿ 2 ಕೊಠಡಿಗಳನ್ನು ತಮ್ಮ ಆಫೀಸ್ ಮಾಡಿಕೊಳ್ಳಲು ಕೊಡಿಸಿಕೊಡಬೇಕೆಂಬದಾಗಿ ಚನ್ನಗಿರಿ ಸಬ್ ರಿಜಿಸ್ಟ್ರಾರು ಬರದುಕೊಂಡ 1902ನೇ ಇಸವಿ ಜೂನ್ ತಾರೀಖು 18ನೇ ಮುರ್ಕಂ 121—678ನೇ ನಂಬರು ರಿಪೋರ್ಟು ಓದಲಾಗಿ ಸದರಿ ಮುಸಾಫರ್ ಖಾನೆಯು ಪ್ರಯಾಣಸ್ಥರ ಅನುಕೂಲತೆಗಾಗಿ ಇರಬೇಕಾದ್ದರಿಂದ ಸಬ್ ರಿಜಿಸ್ಟ್ರಾರವರ ಆಫೀಸ್ ಮಾಡೋಣ ಬೋರ್ಡಿನವರಿಗೆ ಇಷ್ಟವಿಲ್ಲವಾಗಿ ತೀರ್ಮಾನವಾಯಿತು.

8. ಚನ್ನಗಿರಿ ತಾಲ್ಲೂಕು ನಲ್ಲೂರು ಮುಸಾಫರಖಾನೆ:—ಚನ್ನಗಿರಿ ತಾಲ್ಲೂಕು ನಲ್ಲೂರಿನಲ್ಲಿ ಹೊಸದಾಗಿ ಒಂದು ಮುಸಾಫರ್ ಖಾನೆಯನ್ನು ಕಟ್ಟಿಸುವ ವಿಚಾರದಲ್ಲಿ 479—0—0 ರೂಪಾಯಿನ ಅಂದಾಜಾನಿಶಿ ಬಂದ ಚನ್ನಗಿರಿ ತಾಲ್ಲೂಕು ಅಮಲ್ದಾರ್ರ 1902ನೇ ಇಸವಿ ಜುಲೈ ತಾರೀಖು 17ನೇ ಮುರ್ಕಂ 52—127ನೇ ನಂಬರು ರಿಪೋರ್ಟು ಓದಲಾಗಿ ಕೆಳೂರುಕಟ್ಟೆಯಲ್ಲಿ ಮುಸಾಫರಖಾನೆ ಹೊಸದಾಗಿ ತಯಾರಾಗುವದು ತುಂಬಾ ಜರೂರಾದ್ದರಿಂದ ಈ ವಿಷಯವು ಅಮಾನತ್ತು ಇರತಕ್ಕದ್ದೆಂತ ತೀರ್ಮಾನವಾಯಿತು.

9. ತಾಳಗುಪ್ಪೆ ಮುಸಾಫರ್ ಖಾನೆ:—ಸಾಗರದ ತಾಲ್ಲೂಕು ತಾಳಗುಪ್ಪಾ ಮುಸಾಫರಖಾನೆ ರಿಪೇರಿ ವಿಚಾರದಲ್ಲಿ 943 ರೂಪಾಯಿನ ಅಂದಾಜಾನಿಸಿ ತಾಲ್ಲೂಕು ಅಮಲ್ದಾರ್ರು ಮಾಡಿದ 1902ನೇ ಇಸವಿ ನವಂಬರ್ ತಾರೀಖು 5ನೇ ಮುರ್ಕಂ 510–629ನೇ ನಂಬರು ರಿಪೋರ್ಟನೊಡನೆ ಬಂದ ಸಾಗರದ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟು ಕಮಿಷನರವರ 1902ನೇ ಇಸವಿ ನವಂಬರ್ ತಾರೀಖು 22ನೇ ಮುರ್ಕಂ ನಂಬರು 421—275ನೇ ಯಾದಾಸ್ತು ಓದಲಾಗಿ ಸದರಿ ಅಂದಾಜವನ್ನು ಮಂಜೂರು ಮಾಡಬಹುದಾಗಿ ತೀರ್ಮಾನವಾಯಿತು.

10. ಕೂಡ್ಲಿಗೆರೆ–ಹೊಳೆ ಹೊನ್ನೂರು ರಸ್ತೆ:—ಕೂಡ್ಲಿಗೆರೆ ಮತ್ತು ಹೊಳೆಹೊನ್ನೂರಿಗೆ ಮಧ್ಯೆ ಹಾಲಿ ಇರುವ ಭಂಡಿ ಜಾಡನ್ನು ಹೆಚ್ಚಾಗಿ ಅನುಕೂಲಪಡಿಸಿಕೊಡಬೇಕೆಂಬುವ ವಿಚಾರದಲ್ಲಿ 6,126—0—0 ರೂಪಾಯಿನ ಕಚ್ಚಾ ಅಂದಾಜಾನಿಶಿ ಬಂದ ಶಿವಮೊಗ್ಗ ತಾಲ್ಲೂಕು ಅಮಲ್ದಾರ್ರ 1902ನೇ ಇಸವಿ ಸೆಪಟಂಬರ್ ತಾರೀಖು 24ನೇ ಮುರ್ಕಂ ನಂಬರು 217–559ನೇ ರಿಪೋರ್ಟು ಓದಲಾಗಿ ಶಿವಮೊಗ್ಗ–ಹೊಳೆಹೊನ್ನೂರು ರಸ್ತೆ ಪೂರೈಸುವ ಪರಿಯಂತರವೂ ಈ ಕೆಲಸ ಅಮಾನತ್ತು ಇರತಕ್ಕದ್ದೆಂತ ತೀರ್ಮಾನವಾಯಿತು.

11. ಸಂತೆ ಬೆನ್ನೂರು ಹೊಂಡ:—ಚನ್ನಗಿರಿ ತಾಲ್ಲೂಕು ಸಂತೆ ಬೆನ್ನೂರು ಹೊಂಡದ ಹೂಳನ್ನು ತೆಗಿಯುವ ವಿಚಾರದಲ್ಲಿ 954 ರೂಪಾಯಿನ ಅಂದಾಜಾನಿಶಿ ತಾಲ್ಲೂಕು ಅಮಲ್ದಾರ್ರು ಮಾಡಿದ ರಿಪೋರ್ಟನೊಡನೆ ಬಂದ 1ನೇ ಅಸಿಸ್ಟೆಂಟ್ ಕಮಿಷನರವರ 1902ನೇ ಇಸವಿ ಮೇ ತಾರೀಖು 9ನೇ ಮುರ್ಕಂ ನಂಬರು 490—591ನೇ ಯಾದಾಸ್ತು ಓದಲಾಗಿ ಸದರಿ ಹೊಂಡದ ವಿಷಯವು ಮುಂದೆ ಯೋಚಿಸಬಹುದಾಗಿ ತೀರ್ಮಾನವಾಯಿತು.

12. ಸೊರಬ–ಚಂದ್ರಗುತ್ತಿ ಭಂಡಿದಾರಿ:—ಸೊರಬಕ್ಕೂ ಚಂದ್ರಗುತ್ತಿಗೂ ಹಾಲಿ ಇರುವ ರಸ್ತೆಯನ್ನು ಹೆಚ್ಚಾಗಿ ಅನುಕೂಲಪಡಿಸಿಕೊಡುವ ವಿಚಾರದಲ್ಲಿ ಸೊರಬದ ತಾಲ್ಲೂಕು ಅಮಲ್ದಾರರಿಂದ ಬಂದ 1902ನೇ ಇಸವಿ ಏಪ್ರೆಲ್ ತಾರೀಖು 18ನೇ ಮುರ್ಕಂ ನಂಬರು 397—1963ನೇ ರಿಪೋರ್ಟು ಓದಲಾಗಿ ಹಾಲಿ ಇರುವ ಭಂಡಿ ಜಾಡನ್ನು ಹೆಚ್ಚಾಗಿ ಅನುಕೂಲಪಡಿಸೋಣ ಬೋರ್ಡಿನವರಿಗೆ ಅವಶ್ಯಕವೆಂತ ಕಂಡುಬಂದದ್ದರಿಂದ ಮೈಲಿ 1ಕ್ಕೆ 15 ರೂಪಾಯಿನಂತೆ ಅಂದರೆ ಪೂರಾ ರಸ್ತೆಗೂ ಸಾಲೀಯಾನಾ 180 ರೂಪಾಯಿಗಳು ಅಲಾಟ್ ಮಾಡಬಹುದಾಗಿ ಬೋರ್ಡಿನವರು ತೀರ್ಮಾನ ಮಾಡಿದರು.

13. ಆಚಾಪುರದ ತೀರ್ಥಯಾನೆ ಅಚ್ಯುತ ತೀರ್ಥ :—ಶಿವಮೊಗ್ಗಾ—ಅನಂತಪುರದ ರಸ್ತೆ ಹತ್ತರ ಇರುವ ಆಚಾಪುರದ ತೀರ್ಥಯಾನೆ ಅಚ್ಯುತ ತೀರ್ಥವನ್ನು ಜೀರ್ಣೋದ್ಧಾರ ಮಾಡುವ ವಿಚಾರದಲ್ಲಿ 1429 ರೂಪಾಯಿನ ಅಂದಾಜಾನಿಶಿ ಸಾಗರದ ತಾಲ್ಲೂಕು ಅಮಲ್‌ದಾರು 1902ನೇ ಇಸವಿ ಜುಲೈ ತಾರೀಖು 28ನೇ ಮರ್ಸ್ಕಂ ನಂಬರು 81—343ನೇ ರಿಪೋರ್ಟಿನೊಡನೆ ಬಂದ ಸಾಗರದ ಸಬ್ ಡಿವಿಜನ್ ಆಫೀಸರವರ 1902ನೇ ಇಸವಿ ಆಗಸ್ಟು ತಾರೀಖು 28ನೇ ಮರುಂ ನಂಬರು 193—128ನೇ ಯಾದಾಸ್ತು ಬದಲಾಗಿ ಈ ಪುರಾತನ ಕೆಲಸವು (ಸರೋವರ) ಶಿಲಾ ಶಾಸನಗಳಿಂದ ಕೂಡಿ ಇರುತ್ತಾದ್ದರಿಂದ ಈ ವಿಚಾರವನ್ನು ಇಂಜನಿಯರ್ ಇಲಾಖೆಯವರ ಪೈಸಲಾತಿಗೆ ವಹಿಸತಕ್ಕದ್ದೆಂದು ತೀರ್ಮಾನವಾಯಿತು.

14. ಸಿರವಂತಿ-ಮರಡವಳ್ಳಿ ರಸ್ತೆ :—ಸಾಗರದ ತಾಲ್ಲೂಕು ಸಿರವಂತಿಯಿಂದ ಮರಡವಳ್ಳಿಗೆ ಹೊಸದಾಗಿ ಒಂದು ರಸ್ತೆ ಹಾಕಬೇಕೆಂಬುವ ವಿಚಾರದಲ್ಲಿ ತಾಲ್ಲೂಕು ಅಮಲ್‌ದಾರು ಮಾಡಿದ 1902ನೇ ಇಸವಿ ನವಂಬರ್ ತಾರೀಖು 15ನೇ ಮರ್ಸ್ಕಂ 525-637ನೇ ನಂಬರು ರಿಪೋರ್ಟಿನೊಡನೆ ಬಂದ ಸಾಗರದ ಸಬ್ ಡಿವಿಜನ್ ಇನ್‌ಛಾರ್ಜ್ ಅಸಿಸ್ಟೆಂಟ್ ಕಮಿಷನರವರ 1902ನೇ ಇಸವಿ ನವಂಬರ್ ತಾರೀಖು 27ನೇ ಮರ್ಸ್ಕಂ ನಂಬರು 431—281ನೇ ಯಾದಾಸ್ತು ಬದಲಾಗಿ ಪ್ರೆಸಿಡೆಂಟರವರು ಸದರಿ ಸ್ಥಳ ಅಜಮಾಯಿಷಿ ಮಾಡುವ ಪರಿಯಂತರವು ಅಮಾನತ್ತು ಇರತಕ್ಕದ್ದೆಂತ ತೀರ್ಮಾನವಾಯಿತು.

ಕೆ. ಪಿ. ಪುಟ್ಟಣ್ಣಶೆಟ್ಟಿ,
ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ಫಂಡ್ ಬೋರ್ಡು.

ಶಿವಮೊಗ್ಗಾ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 117.

ಮೃತಪಟ್ಟ ತೀರ್ಥಹಳ್ಳಿ ತಾಲ್ಲೂಕು ಮಧುವಂಕನಾಡ ಮಾಗಣಿ ಶಿರಗಾರ ಗ್ರಾಮದ ಮಜರೆ ಅಂಬುತೀರ್ಥವಾಸಿ ಗುಂಡಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ಶೀತಾರಾಂಭಟ್ಟ ಬಿನ್ ಗುಂಡಭಟ್ಟ, 2ನೇ ಈತನ ತಮ್ಮ ಮಂಜು ಮೈನರ್, ಗಾರ್ಡಿಯನ್ 1ನೇ ಅರ್ಜಿದಾರು, ಮೃತಪಟ್ಟ ಸದರೀ ಗುಂಡಭಟ್ಟರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಅಂಬುತೀರ್ಥ ಸ್ಥಳದ 1ನೇ ಶೀತಾರಾಂಭಟ್ಟ 2ನೇ ಮಂಜು ಇವರು ಅಂಬುತೀರ್ಥ ವಾಸಸ್ಥರಾಗಿ ಮೃತಪಟ್ಟ ಗುಂಡಭಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 284-5-6 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷಾ ಡಿರುತ್ತಾರೆ.

ಸದರೀ ದಾರಖಾಸ್ತು ದಾರರಾದ 1ನೇ ಶೀತಾರಾಂಭಟ್ಟ, 2ನೇ ಈತನ ತಮ್ಮ ಮಂಜು ಇವರ ಅರ್ಜಿಯನ್ನು ಸನ್ 1903ನೇ ಇಸವಿ ಫಿಬ್ರುವರಿ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಗುಂಡಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—03ನೇ ಇಸವಿ ಅರ್ಜೀ ನಂಬರು 227.

ಮೃತಪಟ್ಟ ಬಳೆ ಮುತ್ತಯ್ಯ ಉರುಫ್ ಅಪ್ಪೈಯ್ಯಶೆಟ್ಟರ ಆಸ್ತೀ ವಿಷಯವಲ್ಲಿ—

ಅರ್ಜೀದಾರು ಮೈಸೂರು ಕೃಷ್ಣರಾಜ ಮೊಹಲ್ಲಾ ರಾಮದೇವರ ದೇವಸ್ಥಾನದ ಹಿಂಭಾಗದಲ್ಲಿರುವ ಸುಬ್ಬಮ್ಮನು, ಮೃತಪಟ್ಟ ಸದರೀ ಬಳೆ ಮುತ್ತೈಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಬಳೆ ಮುತ್ತೈಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಅರ್ಜಿದಾರರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಳೆ ಮುತ್ತೈಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಜನವರಿ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—03ನೇ ಇಸವಿ ಅರ್ಜಿ ನಂಬರ್ 325.

ಮೃತಪಟ್ಟ ವೆಂಕಟರಾಮಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಕಾರಹಳ್ಳಿಯಲ್ಲಿರುವ ನಾಗಮ್ಮ, ಮೃತಪಟ್ಟ ಸದರೀ ವೆಂಕಟರಾಮಾಚಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ಕನಬಾವಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕರಾಮಾಚಾರ್ರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಅರ್ಜಿದಾರ್ರ ಅರ್ಜಿಯನ್ನು ಸನ್1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಮಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 326.

ಮೃತಪಟ್ಟ ರಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಚಾಮರಾಜ ಮೊಹಲ್ಲಾ ಅನಾಥಾಲಯಕ್ಕೆ ಸೇರಿದ ವಠಾರದಲ್ಲಿರುವ ಹಂಪಾಪುರದ ರಾಮರಾಯರ ಹೆಂಡತಿ ಕೃಷ್ಣಮ್ಮ, ಮೃತಪಟ್ಟ ಸದರೀ ರಾಮರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರಾಮರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜಿದಾರ್ರ ಅರ್ಜಿಯನ್ನು ಸನ್1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮರಾಯರ ಆಸ್ತಿಗೆ ಹಕ್ಕುದಾರ್ರಾದ ವಿಶಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 342.

ಮೃತಪಟ್ಟ ರಾಮಸ್ವಾಮಿಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ನಂಜನಗೂಡು ಸರಾಫ್ ರಾಮಸ್ವಾಮಿ ಶೆಟ್ಟರ ಹೆಂಡತಿ ಲಕ್ಷ್ಮಮ್ಮ ಮೈನರ್, ಗಾರ್ಡಿಯನ್ ಮೈಸೂರಲ್ಲಿರುವ ಅಯೋಧ್ಯಾನಗರದ ಹನುಮಂತಶೆಟ್ಟಿ 2ನೇ ರಾಮಸ್ವಾಮಿ ಶೆಟ್ಟರ ಚಿಕ್ಕಮ್ಮ ಚಿಕ್ಕಮ್ಮ, ಮೃತಪಟ್ಟ ಸದರೀ ರಾಮಸ್ವಾಮಿ ಶೆಟ್ಟರಿಗೆ ಹೆಂಡತಿ ಮತ್ತು ಚಿಕ್ಕಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಿ ಶೆಟ್ಟರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮಿ ಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 343.

ಮೃತಪಟ್ಟ ಜಕ್ಕಳಿ ತಿಮ್ಮಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮಂಡಿಮೊಹಲ್ಲಾದಲ್ಲಿ ರಾಗಿ ಅಂಗಡಿ ಜಕ್ಕಳಿ ತಿಮ್ಮಣ್ಣನ ಹೆಂಡತಿ ತಿಮ್ಮಕ್ಕ, ಮೃತಪಟ್ಟ ಸದರೀ ತಿಮ್ಮಣ್ಣನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ತಿಮ್ಮಣ್ಣನ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 347.

ಮೃತಪಟ್ಟ ಫ್ರೆಂಚ್‌ರಾಕ್ಸ್ ಸಬ್ ತಾ॥ ಚಿಕ್ಕಡೆ ಗ್ರಾಮದಲ್ಲಿದ್ದ ಮರ್ಜಿ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಫ್ರೆಂಚ್‌ರಾಕ್ಸ್ ಸಬ್ ತಾ॥ ಕಿರಂಗೂರು ಹೋಬಳಿ ಚಿಕ್ಕಡೆ ಗ್ರಾಮದಲ್ಲಿರುವ ವಸ್ತಿಗೌಡನ ಮಗ ಹೊನ್ನೆಗೌಡ, ಮೃತಪಟ್ಟ ಸದರೀ ಮರ್ಜಿ ಎಂಬುವನಿಗೆ ದಾಯಾದಿ ಆಗಬೇಕೆಂಬ ಹಕ್ಕುದಾರಿ ಮೇಲೆ ಫ್ರೆಂಚ್‌ರಾಕ್ಸ್ ಸಬ್ ತಾ॥ ಚಿಕ್ಕಡೆ ಗ್ರಾಮ ದಲ್ಲಿ ವಾಸಸ್ಥರಾಗಿ ಮೃತಪಟ್ಟ ಮರ್ಜಿರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರ್ಜಿ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 351.

ಮೃತಪಟ್ಟ ಸೈಯ್ಯದ್ ಹಯಾತ್‌ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಲಷ್ಕರ್ ಮೊಹಲ್ಲಾದಲ್ಲಿರುವ ಸೈಯ್ಯದ್ ಹುಸೇನ್‌ರ ಮಗ ಸೈಯ್ಯದ್ ಪೀರು ಮೃತಪಟ್ಟ ಸದರೀ ಸೈಯ್ಯದ್ ಹಯಾತರಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಸೈಯ್ಯದ್ ಹಯಾತರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಮಾರ್ಚಿ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈಯ್ಯದ್ ಹಯಾತರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

ತುಮಕೂರು ಮುನ್ಸಿಫ್ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ॥ ನಂಬರ್ 438.

ಮೃತಪಟ್ಟ ಸಂಗಣ್ಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಕಲ್ಲಮ್ಮನು, ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಕಂದಿಕೆರೆ ಸಮ್ಮತು ರಾಮನಹಳ್ಳಿಲಿ ವಾಸಮಾಡುವ ಸದರಿ ಅರ್ಜಿದಾರಳು ತಿಪಟೂರು ತಾಲ್ಲೂಕು ರುಂದಿಹಳ್ಳಿಲಿ ವಾಸಸ್ಥನಾಗಿದ್ದು ಮೃತಪಟ್ಟ ರುದ್ರಪ್ಪನವರ ಮಗ ಸಂಗಣ್ಣನ ಜಿಂದಗಿ ಬಗ್ಯಾಗಿ ಬರತಕ್ಕ 100—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರ ಅರ್ಜಿಯನ್ನು ಸನ್ 1903ನೇ ಇಸವಿ ಫೆಬ್ರುವರಿ ತಿಂಗಳು 13ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂಗಣ್ಣನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜನವರಿ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇಧೆ.

ಎಸ್. ಶೇಷಗಿರಿರಾವ್,
ಮುನ್ಸೀಫ್.

ಗೌರ್ನ್ಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಬೆಂಗಳೂರ್, ತಾರೀಖು 2ನೇ ಫೆಬ್ರುವರಿ 1903.

ಸರ್ವಿಸ್ ರಿಜಿಸ್ಟರ್‌ಗಳು ಈಗ ತಾನೆ ಗೌರ್ನ್ಮೆಂಟ್ ಸೆಂಟ್ರಲ್ ಪ್ರೆಸ್ಸಿನಿಂದ ತಲ್ಪಿರುವದ್ದರಿಂದ ಪ್ರತಿ ಒಂದಕ್ಕೆ ಅರ್ಧಾಣೆ ಮೇರೆ ಹಾಲಿ ಗೌರ್ನ್ಮೆಂಟ್ ಸೆಂಟ್ರಲ್ ಬುಕ್ ಡಿಪೋವಿನಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತೆಂದು ಇದರಿಂದ ಪ್ರಸಿದ್ಧಪಡಿಸಿಧೆ.

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 6.

ಬೆಂಗಳೂರು, ಗುರುವಾರ, ಫೆಬ್ರವರಿ ತಾ|| 12, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಪ್ರಕಟನ ಪತ್ರಿಕೆ.

ಸನ್1903ನೇ ಇಸವಿ ಜನವರಿ 22ನೇ ತಾರೀಖಿನ ಡಿ. ನಂಬರು 59.

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ಇದರಿಂದ ತಿಳಿಯಪಡಿಸುವದೇನಂದರೆ, ಇಂಗ್ಲಿಷ್ ಸ್ವಂತ ವ್ಯಾಸಂಗಿಗಳಿಗೆ, ಸಂಸ್ಕೃತದಲ್ಲಿ ಮಾತ್ರವೇ ಆಗಲಿ ಫಾರಸಿಯಲ್ಲಿ ಮಾತ್ರವೇ ಆಗಲಿ ಅಥವಾ ಇತರ ಯಾವ ದೇಶಭಾಷೆಯಲ್ಲಿ ಮಾತ್ರವೇ ಆಗಲಿ ಸೇರುವ ಪರೀಕ್ಷ್ಯರಿಗೆ ಮತ್ತು ಎಲ್ಲಾ ಪರೀಕ್ಷ್ಯೆಯರಿಗೆ ವಿನಹ ಮಿಕ್ಕ ಎಲ್ಲಾ ಲೋವರ್ ಸೆಕೆಂಡರಿ ಪರೀಕ್ಷ್ಯರಿಗೆ ಪರೀಕ್ಷಾ ವೇತನವು 8 ಆಣೆಯಂತೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಪರೀಕ್ಷಾ ವೇತನವು ಇದರಡೀ ಕಂಡಂತೆ ಈ ಲಾಗಾಯಿತು ನಿಯಮಿಸಲ್ಪಟ್ಟಿರುತ್ತೆ :—

		ರೂ. ಆ. ಪೈ.
(1)	ಇಂಗ್ಲಿಷನ್ನು ತನ್ನ ಅವಶ್ಯಕ ಭಾಷೆಯಾಗಿ ತೆಗೆದುಕೊಳ್ಳುವಂಥಾ ಸರ್ಕಾರದ ಅಥವಾ ದ್ರವ್ಯ ಸಹಾಯದ ಪಾಠಶಾಲೆಯ ಉಪಾಧ್ಯಾಯನಿಗಾಗಲಿ ಅಥವಾ ಪರೀಕ್ಷಾ ರೂಲ್ಸಿನ ಎರಡನೇ ಪ್ರಕರಣದಲ್ಲಿ ವಿವರಿಸಲ್ಪಟ್ಟ ವಿದ್ಯಾರ್ಥಿಗಾಗಲಿ.	5—0—0
(2)	ಇತರ ಎಲ್ಲಾ ವಿದ್ಯಾರ್ಥಿಗಳಿಗೂ ಮತ್ತು ಸರ್ಕಾರದ ಅಥವಾ ದ್ರವ್ಯಸಹಾಯದ ಪಾಠಶಾಲೆಯ ಉಪಾಧ್ಯಾಯರುಗಳಿಗೂ.	4—0—0
(3)	ಇಂಗ್ಲಿಷನ್ನು ಆವಶ್ಯಕ ಭಾಷೆಯಾಗಿ ತೆಗೆದುಕೊಂಡು ಸ್ವಂತ ವ್ಯಾಸಂಗ ಮಾಡುವಂಥಾವರಿಗೆ.	10—0—0
(4)	ಇತರ ಎಲ್ಲಾ ಸ್ವಂತ ವ್ಯಾಸಂಗಿಗಳಿಗೆ	5—0—0
(5)	ಸಂಸ್ಕೃತದಲ್ಲಿ ಮಾತ್ರವೇ ಆಗಲಿ ಫಾರಸಿಯಲ್ಲಿ ಮಾತ್ರವೇ ಆಗಲಿ ಅಥವಾ ಇತರ ಯಾವ ದೇಶ ಭಾಷೆಯಲ್ಲಿ ಮಾತ್ರವೇ ಆಗಲಿ ಸೇರುವ ಪರೀಕ್ಷ್ಯರಿಗು ಮತ್ತು ಎಲ್ಲಾ ಪರೀಕ್ಷ್ಯೆಯರಿಗೂ.	2—8—0

ಹೆಚ್. ಜೆ. ಭಾಭಾ,

ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್, ಮೈಸೂರು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 7ನೇ ಫೆಬ್ರುವರಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಾನಕಾನಹಳ್ಳಿ ತಾಲ್ಲೂಕು ಬಾಣಂತಿ ಮಾರಿ ಸ್ಟೇಟ್ ಫಾರೆಸ್ಟಿನಲ್ಲಿ ಗುರ್ತುಮಾಡಿರುವ ಸೊಳ್ಳೆಹಳ್ಳವೆಂಬ ಕೂಪಿನಲ್ಲಿನ ಚಾಬೀನೆ ಮತ್ತು ಸಾದೆ ಗಿಡಗಳನ್ನು ಈ ಕೆಳಗೆ ನಮೂದಾಗುವ ಷರತ್ತುಗಳಿಗೆ ಒಳಪಟ್ಟು ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಅಥವಾ ರೇಂಜ್ ಫಾರೆಸ್ಟು ಆಫಿಸರವರಿಂದ 1903ನೇ ಇಸವಿ ಫೆಬ್ರುವರಿ 21ನೇ ತಾರೀಖು ದಿವಸ ಕಾನಕಾನಹಳ್ಳಿಯಲ್ಲಿ ಬಹಿರಂಗವಾಗಿ ಹರಾಜು ಹಾಕಲ್ಪಡುವದು.

2. ಈ ಹರಾಜು ಫಾರೆಸ್ಟು ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸುವ ಫಾರೆಸ್ಟು ಆಫಿಸರವರಿಗೆ ಅಧಿಕಾರವಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ 15 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಮತ್ತು ಷರತ್ತು ಮೇರೆ ನಡಿಯಲು ಮಂಜೂರಾದ ಸವಾಲ್‌ದಾರನು ಇಡಬೇಕಾದ 35 ಜುಮ್ಲಾ 50 ರೂಪಾಯಿಗಳನ್ನು ಗಾರ್ನಮೆಂಟ್ ಸೇವಿಂಗ್ಸ್‌ಬ್ಯಾಂಕಿನಲ್ಲಿ ಇಡುತ್ತೆ.

5. ಹರಾಜು ಮಂಜೂರಾತಿ ತಿಳಿಸಿದ ಒಂದು ವಾರದೊಳಗಾಗಿ ಮಂಜೂರಾದ ಸವಾಲ್‌ದಾರನು ಸರಿಯಾದ ಸ್ಟಾಂಪು ಕಾಗದದಲ್ಲಿ ಈ ಕೆಳಗಿನ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪನ್ನು ಪುನಃ ಹರಾಜು ಮಾಡಿಸಲಾದೀತು. ದುಸರೆ ಹರಾಜಿನಲ್ಲಿ ಏನಾದರೂ ಲುಕ್ಸಾನ್ ಬಂದರೆ ಮೊದಲಿನ ಹರಾಜುದಾರನು ಭರ್ತಿಮಾಡಿಕೊಡಬೇಕು. ಅದರೇ ಏನಾದರೂ ಜಾಸ್ತಿ ಬಂದರೆ ಹಿಸ್ಸೆ ದೊರಿಯಲಾರದು.

ಷರತ್ತುಗಳು.

1. ಸಂದಲ್ ಗಿಡಗಳು, ಗುರ್ತುಮಾಡಿಯಿರುವ ಮರಗಳು ಮತ್ತು ಸೊಸಿಗಳು ಅಂದರೆ ಸುತ್ತಳತೆ ಒಂದಡಿ ಒಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಯಲ್ಲಾ ಗಿಡಗಳನ್ನು ಭೂಮಿಮಟ್ಟಕ್ಕೆ ಸರಿಯಾಗಿ ಕತರಾಯಿಸಿಕೊಳ್ಳಬೇಕು.

2. ಸಾದೆ ಮತ್ತು ಚಾಬೀನೆ ಗಿಡಗಳು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ವುಂಟಾದರೆ ಕಂಟ್ರಾಕ್ಟುದಾರನು ಫಾರೆಸ್ಟು ಆಫಿಸರವರು ಗೊತ್ತುಮಾಡುವ ಲುಕ್ಸಾನ್ ಮೊಬಲಗನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.

	ನೊಣವಿನಕೆರೆ ..	3 ನೊಣವಿನಕೆರೆ ..	43—40	18—0	.	..	36	48	..	..	
	ಕಿಬ್ಬನಹಳ್ಳಿ	4 ಬಾಣಸಂದ್ರ ...	25—40	10—40	...	..	9	24	..	..	
	ತುರವೇಕೆರೆ ..	5 ತುರ್ವೇಕೆರೆ ...	43—40	19—40	..	..	24	30	..	.	
	ಮಾಯಸಂದ್ರ ..	6 ಮಾಯಸಂದ್ರ ..	15—0	17—0	..		6	12	..	..	
ಚಿಕ್ಕನಾಯ್ಕನಹಳ್ಳಿ .	ಚಿಕ್ಕನಾಯ್ಕನಹಳ್ಳಿ.	1 ಚಿಕ್ಕನಾಯಿಕನಹಳ್ಳಿ ..	146—40	98—0	2—32	1—64	75	121	7	12	5ನೇ ಮೇ 1903
	ಹುಳಿಯಾರ್ ..	2 ಹುಳಿಯಾರ್ ..	63—40	25—0	0—36	...	50	50	10	10	
ಮೈಸೂರು.		ಮೈಸೂರು ಸಿಟಿ									
ಮೈಸೂರು ..	ಮೈಸೂರು	1 ಶ್ರೀರಾಂಪೇಟೆ ..	504—0	351—0	62—10$\frac{3}{4}$	38—5	1044	1104	1041	1104	5ನೇ ಮೇ 1903
		2 ಲಷ್ಕರ್ ಮೊಹಲಾ ..	141—0	186—0	11—5$\frac{1}{4}$	3—13	1092	780	1092	780	
		3 ಮಂಡಿ ಮೊಹಲ ..	198—0	285—0	77—36$\frac{7}{8}$	43—73$\frac{1}{2}$	1212	1080	1212	1080	
ಯಡತೊರೆ ...	ಯಡತೊರೆ ...	1 ಯಡತೊರೆ ...	57—60	19—40	3—25	1—58$\frac{1}{2}$	27	60	27	60	7ನೇ ಮೇ 1903
	ಸಾಲಿಗ್ರಾಮ ...	2 ಸಾಲಿಗ್ರಾಮ ..	12—0	3—0	1—22$\frac{3}{4}$	0—37	6		6		
ಹುಣಸೂರು .	ಕಿರಜಾಜಿ ..	1 ಹುಣಸೂರು	22—50	47—48	4—49$\frac{1}{2}$	17—45$\frac{12}{16}$	72	24	72	24	11ನೇ ಮೇ 1903
		2 ಪಿರಿಯಾಪಟ್ಣ	12—0	17—22	2—15	5—58$\frac{1}{4}$	39	13—8—0	39	13—8—0	
ಹೆಗ್ಗಡದೇವನ ಕೋಟೆ	ಕಸಬಾ ...	1 ಹೆಗ್ಗಡದೇವನ ಕೋಟೆ	15—64	23—22	0—30	0—22	1—14—0	1—14—0	1—14—0	1—14—0	13ನೇ ಮೇ 1903
	ಸರಗೂರು .	2 ಸರಗೂರು ..	1—54	.	0—1$\frac{1}{2}$	...	2—4—0	2—4—0	2—4—0	2—4—0	
ಗುಂಡ್ಲುಪೇಟೆ	ಗುಂಡ್ಲುಪೇಟೆ	1 ಗುಂಡ್ಲುಪೇಟೆ ಕಸಬ ...	90—21$\frac{1}{2}$	61—52	6—19$\frac{7}{8}$	16—37$\frac{1}{2}$	16	16	16	16	15ನೇ ಮೇ 1903
ಚಾಮರಾಜನಗರ ...	ಚಾಮರಾಜನಗರ	1 ಚಾಮರಾಜನಗರ	252—40	117—0	..	49—52$\frac{1}{2}$	60	195	60	195	20ನೇ ಮೇ 1903
	ಸಂತೆ ಮರಹಳ್ಳಿ	2 ಸಂತೆ ಮರಹಳ್ಳಿ									
ಯಳಂದೂರು ...	ಯಳಂದೂರು	1 ಯಳಂದೂರು ...	30—40	16—0	..	20—57$\frac{5}{8}$	168	15	168	15	22ನೇ ಮೇ 1903
	ಅಗರ	2 ಅಗರ ..	39—0	14—40				24		24	
ನಂಜನಗೂಡು	ನಂಜನಗೂಡು ಕ||	1 ನಂಜನಗೂಡು ಟವರ್	57—16	90—29	3—34$\frac{1}{2}$	2—71	78	72	78	72	18ನೇ ಮೇ 1903
	ಕಳಲೆ .	2 ಹಲ್ಲರೆ ...	9—0	...	0—12						
	ಹುರ .	3 ಆಂಬಳೆ ..	..	9—75	...	0—52					
ತಿರುಮಕೂಡ್ಲು ನರಸೀಪುರ	ತಿ|| ನರಸೀಪುರ .	1 ತಿ|| ನರಸೀಪುರ ...	18—0	25—40	7—39	4—53	8	15	8	15	25ನೇ ಮೇ 1903
	ಬನ್ನೂರು .	2 ಬನ್ನೂರು ...	42—0	39—0	2—14	1—26	5—4—0	9	5—4—0	9	
	ಡಿಟ್ಟೋ ..	3 ಡಿಟ್ಟೋ									
	ತಲಕಾಡು ..	4 ತಲಕಾಡು ಮತ್ತು ಮುಡುಕ ತೊರೆ ಜಾತ್ರೆ ಸಹ	..	6—0	..	.	2—4—0	3	2—4—0	3	
	ಮೂಗೂರು ...	5 ಮೂಗೂರು ..	..	..	..	..	2—2—0	..	2—2—0	..	

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ.	ಬಿಕರಿ. ಪ್ರತಿ ಅಂಗಡಿಯ ಗಾಂಜಾ. 1901–1902	ಬಿಕರಿ. ಪ್ರತಿ ಅಂಗಡಿಯ ಗಾಂಜಾ. 1902–1903 ಆರು ತಿಂಗಳ ಬಿಕರಿ.	ಬಿಕರಿ. ಪ್ರತಿ ಅಂಗಡಿಯ ಅಫೀಂ. 1901–1902	ಬಿಕರಿ. ಪ್ರತಿ ಅಂಗಡಿಯ ಅಫೀಂ. 1902–1903 ಆರು ತಿಂಗಳ ಬಿಕರಿ.	ಗುತ್ತಾ ಮೊಬಲಗು. ಗಾಂಜಾ. 1901—1902	ಗುತ್ತಾ ಮೊಬಲಗು. ಗಾಂಜಾ. 1902—1903	ಗುತ್ತಾ ಮೊಬಲಗು. ಅಫೀಂ. 1901—1902	ಗುತ್ತಾ ಮೊಬಲಗು. ಅಫೀಂ. 1902—1903	ಹರಾಜು ತಾರೀಖು.
					ಸೇರು. ತೊಲೆ.	ಸೇರು. ತೊಲೆ.	ಸೇರು. ತೊಲೆ.	ಸೇರು. ತೊಲೆ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಮೈಸೂರು.	ಶ್ರೀರಂಗಪಟ್ಟಣ	ಕಸಬಾ ..	1	ಶ್ರೀರಂಗಪಟ್ಟಣ ..	63— 0	75—40	7—39	8—18	516	312			6ನೇ ಜೂನ್ 1903
		ಡಿಟ್ಟೋ ..	2	ಗಂಜಾಂ ..	76—40	85—40	6— 0	2—59					
		ಕಿರಂಗೂರು	3	ಕಿರಂಗೂರು ..	31—40	9— 0	15— 0	1— 2					
		ಹಿರೋಡೆ ..	4	ಫ್ರೆಂಚ್‌ರಾಕ್ಸ್ ..	33— 0	43— 0	8— 0	6—22					
		ಮೇಲುಕೋಟೆ ..	5	ಮೇಲ್ಕೋಟೆ	22—40		0—54	..					
	ಮಂಡ್ಯ ..	ಮಂಡ್ಯ ..	1	ಮಂಡ್ಯ ...	17—26	7—40	1—15	0—20	12	12	12	12	29ನೇ ಜೂನ್ 1903
		ಮದ್ದೂರು .	2	ಮದ್ದೂರು .	31—22	20— 0	0—60	0—56	6	6—6—0	6	6—6—0	
	ಮಳವಳ್ಳಿ ..	ಮಳವಳ್ಳಿ .	1	ಮಳವಳ್ಳಿ ..	18— 0	26—40	15—39	19—72	4	25—8—0	4	25—8—0	27ನೇ ಮೇ 1903
		ಪೂರಿಗಾಲಿ ...	2	ಶಿವಸಮುದ್ರ ಮತ್ತು ಜಾತ್ರೆ ಸಹ	108— 0	18— 0	12—60	2—46	3—2—0	9	3—2—0	9	
	ಕೃಷ್ಣರಾಜಪೇಟೆ ..	ಕೃಷ್ಣರಾಜಪೇಟೆ	1	ಕೃಷ್ಣರಾಜಪೇಟೆ ...	74— 0	41— 0	2—14	1—45	22—8—0	15	...	...	4ನೇ ಜೂನ್ 1903
		ಕಿಕ್ಕೇರಿ ...	2	ಕಿಕ್ಕೇರಿ ..	14—40	9—40	..	0—35		6	..	..	
		ಕನ್ನಂಬಾಡಿ ...	3	ಕನ್ನಂಬಾಡಿ ...	43—40	18— 0	...	0—32		27	...	..	
		ಡಿಟ್ಟೋ ...	4	ಬೂಕನಕೆರೆ ..	...	6— 0	..	..		6	...	..	
	ನಾಗಮಂಗಲ ..	ನಾಗಮಂಗಲ ...	1	ನಾಗಮಂಗಲ ...	48— 5	19—40	1—17	0—58	6	4— 8—0	6	4— 8—0	1ನೇ ಜೂನ್ 1903
		ದೇವಲಾಪುರ	2	ದೇವಲಾಪುರ ...	7—30	3— 0	0—12	0—14	1—8—0	1— 8—0	1— 8—0	1— 8—0	
		ನೆಲ್ಲಿಗೆರೆ ...	3	ನೆಲ್ಲಿಗೆರೆ ..	9—68	6— 0	1—10	0— 1	1—14—0	2—10—0	1—14—0	2—10—0	
		[illegible]ರು .	4	ಬೆಳ್ಳೂರು ..	71— 0	26—40	3—[illegible]9	0—24	3	13—8—0	3	13—8—0	

ಹಾಸನ	ಹಾಸನ	ಹಾಸನ	1	ಹಾಸನ	161—30	78 — 0	12—36	21—79	129	120	129	120	25ನೇ ಏಪ್ರೈಲ್ 1903
		ಆಲೂರು	2	ಆಲೂರು	35—56	24 — 0	3-57½	2—28	3	3	3	3	
		ಕಟ್ಟಾಯ	3	ಗೊರೂರು	39 — 0	25—40	..	..	4—8—0	3	4—8—0	3	
	ಬೇಲೂರು	[illegible]ರ	1	ಬೇಲೂರು	108 — 0	86—40	6—[illegible]	2—49					
		ಶನಿವಾರ ಸಂತೆ	2	ಗೆಂಡಹಳ್ಳಿ	43—40	19—40	..	..	49—8—0	60—0—0	49—8—0	60	23ನೇ ಏಪ್ರೈಲ್ 1903
		ಡಿಟ್ಟೋ	3	ಕೋಟಿಗನಹಳ್ಳಿ	91—40	12—0	..	.					
	ಮಂಜರಾಬಾದ	ಸಕಲೇಶಪುರ	1	ಸಕಲೇಶಪುರ	123—0	65—40	20—8	10—72	66—0—0	108	66	108	
		ಜಳಗೋಡು	2	ಜಳಗೋಡು	51—0	26—0	1—64	1—23	6	6	6	6	
		ಶುಕ್ರವಾರ ಸಂತೆ	3	ಶುಕ್ರವಾರಸಂತೆ	65—0	29—40	0—24	0—12	6	6—12	6	6—12	21ನೇ ಏಪ್ರೈಲ್ 1903
		ಎಸಳೂರು	4	ಎಸಳೂರು	21—0	6—0	..	...	3	3	3	3	
		ಹಾರ್ಲೆಬಾಳು	5	ಹಾದಿಗೆಪೇಟೆ	..	9—0	..	..	..	6	..	6	
	ಅರಸೀಕೆರೆ	ಅರಸೀಕೆರೆ	1	ಅರಸೀಕೆರೆ	58—0	64—0	4—40	4—0	49—8—0	54	49—8—0	54	
		ಬಾಣಾವಾರ	2	ಬಾಣಾವಾರ	52—0	40—0	3—0	1—16	28—8—0	36	28—8—0	36	28ನೇ ಏಪ್ರೈಲ್ 1903
		ಹಾರನಹಳ್ಳಿ	3	ಹಾರನಹಳ್ಳಿ	30—0	16—0	0—72	0—24	30	27	30	27	
	ಚನ್ನರಾಯಪಟ್ಟಣ	ಚನ್ನರಾಯಪಟ್ಟಣ	1	ಚನ್ನರಾಯಪಟ್ಟಣ	82—0	39—0	3—72	4—0	12	24	12	24	15ನೇ ಏಪ್ರೈಲ್ 1903
		ಡಿಟ್ಟೋ	2	ಶ್ರವಣಬೆಳಗುಳ	..	13—0	..	1—0	..	6	..	6	
	ಹೊಳೇನರಸೀಪುರ	ಹೊಳೇನರಸೀಪುರ	1	ಹೊಳೇನರಸೀಪುರ	50—0	39—0	3—0	2—0	33	21	33	21	17ನೇ ಏಪ್ರೈಲ್ 1903
	ಅರ್ಕಲಗೂಡು	ಅರ್ಕಲುಗೂಡು	1	ಅರಕಲಗೂಡು	41—0	22—0	4—0	2—0	24	21	24	21	18ನೇ ಏಪ್ರೈಲ್ 1903
ಕಡೂರು	ಕಡೂರು	ಕಡೂರು	1	ಕಡೂರು	65—0	27—0	2—57	1—18	24	24	24	24	30ನೇ ಏಪ್ರೈಲ್ 1903
		ಬೀರೂರು	2	ಬೀರೂರು	72½—0	24⅓—0	1—40	1—54	18	42	18	42	
	ತರೀಕೆರೆ	ತರೀಕೆರೆ	1	ತರೀಕೆರೆ	292½—0	79—0	26—23	12—63	120	126	120	126	4ನೇ ಮೇ 1903
		ಅಜ್ಜಂಪುರ	2	ಅಜ್ಜಂಪುರ	37½—0	9½—0	..		3	18	3	..	
		ಲಕ್ಕವಳ್ಳಿ	3	ಲಕ್ಕವಳ್ಳಿ	18—0	9½—0	.	...	4—8—0	9	4—8—0	..	
		ಲಿಂಗದಹಳ್ಳಿ	4	ಲಿಂಗದಹಳ್ಳಿ	25⅓—0	14—0	...	...	7—8—0	13—8—0	7—8—0	..	
	ಯಡೆಹಳ್ಳಿ ಸಬ್	ಯಡೆಹಳ್ಳಿ	1	ಯಡೆಹಳ್ಳಿ	50—0	21—40	16—0	4—0	34—8—0	76—8—0	34—8—0	76—8—0	7ನೇ ಮೇ 1903
		ಬಾಳೆಹೊನ್ನೂರು	2	ಬಾಳೆಹೊನ್ನೂರು	39—0	3—0	5—0	1—0	6	18	6	18	
	ಕೊಪ್ಪ	ಕೊಪ್ಪ	1	ಕೊಪ್ಪ	67—40	16—40	11—0	5—12	21	42	24	42	
		ಜಳ್ರಿ	2	ಹರಿಹರಪುರ	25—40	9—0	1—0	1—0	9—12—0	9—12—0	9—12—0	9—12—0	11ನೇ ಮೇ 1903
		ಬಗ್ಗುಂಜಿ	3	ಸೊಳ್ಳೆಬೈಲ್	21—0	7—40	..	...	6	6	...	..	
		ಕಿಗ್ಗ	4	ಕಿಗ್ಗ	16—40	3—0	..	...	12	12	..	..	

20

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ.	ಬಿಕರಿ. ಪ್ರತಿ ಅಂಗಡಿಯ ಗಾಂಜಾ. 1901-1902	ಬಿಕರಿ. ಪ್ರತಿ ಅಂಗಡಿಯ ಗಾಂಜಾ. 1902—1903 ಆರು ತಿಂಗಳ ಬಿಕರಿ	ಬಿಕರಿ. ಪ್ರತಿ ಅಂಗಡಿಯ ಅಫೀಂ. 1901-1902	ಬಿಕರಿ. ಪ್ರತಿ ಅಂಗಡಿಯ ಅಫೀಂ. 1902—1903 ಆರು ತಿಂಗಳ ಬಿಕರಿ.	ಗುತ್ತಾ ಮೊಬಲಗು. ಗಾಂಜಾ. 1901—1902	ಗುತ್ತಾ ಮೊಬಲಗು. ಗಾಂಜಾ. 1902—1903	ಗುತ್ತಾ ಮೊಬಲಗು. ಅಫೀಂ. 1901—1902	ಗುತ್ತಾ ಮೊಬಲಗು. ಅಫೀಂ. 1902—1903	ಹರಾಜು ತಾರೀಖು.
					ಶೇರು. ತೊಲೆ.	ಶೇರು. ತೊಲೆ.	ಶೇರು. ತೊಲೆ.	ಶೇರು. ತೊಲೆ.	ರೂ. ಆ. ಪೈ.	ರೂ. ಆ. ಪೈ	ರೂ. ಆ. ಪೈ.	ರೂ. ಆ. ಪೈ.	
ಕಡೂರು.	ಶೃಂಗೇರಿ (ಜಹಗೀರ್)	ಶೃಂಗೇರಿ ಜಹಗೀರ್	1	ಶೃಂಗೇರಿ ...	67—40	15	9	2	54	60	54	60	11ನೇ ಮೇ 1903
		ಡಿಟ್ಟೋ ..	2	ಕುಂಚೆಬ್ಬೈಲ್ ...	9	3	..	..	15	12	..	..	
	ಮೂಡಿಗೆರೆ ...	ಮೂಡಿಗೆರೆ ..	1	ಮೂಡಿಗೆರೆ ..	98—40	14—40	9—6	2—38	47—4—0	76—8—0	47—4—0	76—8—0	16ನೇ ಮೇ 1903
		ಕಳಸಾ ...	2	ಕಳಸ ..	13	..	..	..	1—8—0	3	1—8—0	3	
	ಚಿಕ್ಕಮಗಳೂರು ..	ಚಿಕ್ಕಮಗಳೂರು	1	ಚಿಕ್ಕಮಗಳೂರು ...	215—40	74—0	54—21	17—32	300	306	300	306	19ನೇ ಮೇ 1903
		ಡಿಟ್ಟೋ ..	2	ಡಿಟ್ಟೋ ...									
		ಬಿದರನಾಡು ..	3	ಆಲ್ದೂರ್ ..	69—40	29—40	11—32	8—8	48	48	48	48	
		ಡಿಟ್ಟೋ ..	4	ವಾಜಗೊಂಡನಹಳ್ಳಿ ...	21—0	12—0	4—64	3—48	9	15	9	15	
		ವಸ್ತಾರಾ ..	5	ಜೋಳದಾಳು ..									ಬರುವ ಸಾಲಿಗೆ ಹೊಸದಾಗಿ ಜಾರಿಯಲ್ಲಿ ಬರತಕ್ಕ ದುಕಾನುಗಳು
		ಲಕ್ಯಾ ...	6	ಹೊಸಪೇಟೆ ..									
		ಮರ್ಲೆ ...	7	ಮಳಲೂರು .									
		ಜಾಗರ .	8	ದತ್ತಾತ್ರಿಪೀಠ ...									
ಶಿವಮೊಗ್ಗ.	ಚನ್ನಗಿರಿ ..	ಚನ್ನಗಿರಿ ...	1	ಚನ್ನಗಿರಿ ಮತ್ತು ಜಾತ್ರೆ	73—40	33—40	...	...	39	39	..	..	1ನೇ ಮೇ 1903
		ಬಸವಪಟ್ಣ	2	ತ್ಯಾವಣಿಗಿ ಮತ್ತು ಜಾತ್ರೆ	138—0	67—0	...	...	51	90	..	...	
	ಶಿವಮೊಗ್ಗ ಕುಂಪಿ ಸಬ್ ತಾಲ್ಲೂಕು	ಶಿವಮೊಗ್ಗ .	1	ಶಿವಮೊಗ್ಗಾ ...	172—40	283—40	26—14	13—10	204	342	204	342	4ನೇ ಮೇ 1903
		ಬೆಂಕೀಪುರ ...	2	ಬೆಂಕೀಪುರ ..	43—0	64—0	4—61	3—55	84		84		
		ಹೊಳೆಹೊನ್ನೂರು	3	ಹೊಳೆಹೊನ್ನೂರು ..	27—0	28—40	0—72	0—66	55—8—0		55—8—0		
		ಆಯನೂರು ..	4	ಆಯನೂರ್ ..	21—40	32—40	...	...	90				
	ಹೊನ್ನಾಳಿ ..	ಹೊನ್ನಾಳಿ ...	1	ಹೊನ್ನಾಳಿ .	37—0	63—0	14—78	8—7	39	49—8—0	39	49—8—0	6ನೇ ಮೇ 1903
		ಸಾಸ್ವೆಹಳ್ಳಿ ..	2	ಸಾಸಿವೆಹಳ್ಳಿ ..	30—0	11—0	..	...	6	3	..	..	
			3	ಹುಣಸಘಟ್ಟ ..	16—40	3—0	..	...	3	3	..	..	
		[illegible]ತ್ತಿ ..	4	ನ್ಯಾಮತಿ ..	51—0	40—40	..	0—57	24	30	..	...	
			5	ಬೆಲಗುತ್ತಿ ..	10—40	7—40	..	..	6	1—8—0	...	...	
			6	ಚಿನ್ನಿಕಟ್ಟೆ ...	22—40	1—40	...	...	..	3	...	...	
		ಹೊನ್ನಾಳಿ ..	7	ಚೀಲೂರು ..	13—40	3—0	...	..	6	6—12—0	...	...	

ಶಿವಮೊಗ್ಗ	ಶಿಕಾರಿಪುರ	ಶಿಕಾ[illegible]ರ	1	ಶಿಕಾರಿಪುರ	109	63—40	4—[illegible]	2— 8	36	54	36	54	8ನೇ ಮೇ 1903
		ವುಡಗಣಿ	2	ಶಿರಾಳಕೊಪ್ಪ	83	56	3	1—20	28— 8—0	55— 8—0	28— 8—0	55— 8—0	
		ಜಳಂದೂರು	3	ಹೊಸ್ಸಂತೆ	46	31—40	...	..	26 — 4—0	30 —12—0	...	...	
	ಸೊರಬ	ಸೊರಬ	1	ಸೊರಬ	99—50	48	7	1—24	67— 8—0	60	15	6	11ನೇ ಮೇ 1903
		ಡಿಟೋ	2	ಉದ್ರಿ	..	15	..	..	6	6 —12—0	...	...	
		ಜಡೆ	3	ಜಡೆ	..	10—40	...	..	...	1— 8—0	..	..	
		ಆನವಟ್ಟಿ	4	ಆನವಟ್ಟಿ	57	37—40	...	...	6	16 — 8—0	..	...	
	ಸಾಗರ	ಸಾಗರ	1	ಸಾಗರ ಟಿರ್ವ ಜಾತ್ರಸಹಾ	183	110	9—24	4—16	97— 8—0	100 — 8—0	97— 8—0	100— 8—0	13ನೇ ಮೇ 1903
		ತಾಳಗುಪ್ಪ	2	ತಾಳಗುಪ್ಪಜಾತ್ರಸಹಾ	28—40	21	...	...	30	30	..	..	
			3	ಸಿರವಂತೆ	24	13—40	...	....	48	24	...	...	
		ಇಕ್ಕೇರಿ	4	ಆವಿನಹಳ್ಳಿ	36	15	...	..	7— 8—0	7 — 8—0	..	..	
		ಅನಂತಪುರ	5	ಅನಂತಪುರ	39	22—40	..	..	13— 8—0	13— 8—0	...	..	
		ಕರೂರು	6	ಕರೂರು	15	6	...	..	4— 8—0	6	..	...	
		ಸಾಗರ	7	ಮಾಸೂರು	16—40	18	...	...	6	6	...	..	
	ನಗರ	ಪಯಿಗುಪ್ಪ	1	ಕಳೂರು ಕಟ್ಟೆ	76—40	31—40	4	2	60	48	60	48	15ನೇ ಮೇ 1903
		ನಗರ	2	ನಗರ	49—40	20	...	..	48	60	...	..	
			3	ಯಡೂರು	12	...	...	..	3	3	...	..	
			4	ಹುಲಿಕಲ್ಲು									
		ಕೆರೆಹಳ್ಳಿ	5	ನೊಡ್ಡಿನಕೊಪ್ಪ	22—40	..	..	...	6	7— 8—0	..	..	
			6	ಬೆನವಳ್ಳಿ	..	..	...	..	..	3	...	..	
			7	ಬನವಳ್ಳಿ ಜಾತ್ರೆ ಮತ್ತು ಸಂತೆ	...	13—40	..		...	..	...	..	
		ಹುಂಚ	8	ಹುಂಚ	22—40	4—40	..	...	9	9	...	..	
	ತೀರ್ಥಹಳ್ಳಿ	ಆರಗ	1	ತೀರ್ಥಹಳ್ಳಿ	113—40	51	2—18	0—60	90	84	90	84	18ನೇ ಮೇ 1903
			2	ಆರಗ	33	9	..	...	3	15—12—0	..	..	
		ಅಗ್ರಹಾರ	3	ಕೋಣಂದೂರು	41	27	...	...	21	13	...	..	
			4	ಹುಮಚದ ಕಟ್ಟೆ	55—40	42	..	..	60	57	...	..	
			5	ನೊಣಬೂರು	18	9	...	..	3	3	..	..	
		ಮುತ್ತೂರು	6	ಕುರುವಳ್ಳಿ	33	7—40	..	..	28— 8—0	31— 8—0	..	..	
		ಆಗುಂಬೆ	7	ಆಗುಂಬೆ	19—40	9	.	..	6	8— 4—0	..	..	
			8	ಮೇಗರವಳ್ಳಿ	21	16—40	..	..	3	3 —12—0	..	..	
		ಮಂಡಗದ್ದೆ	9	ಮಂಡಗದ್ದೆ	...	12	..	...	6	15	..	...	
			10	ಹೊಸಬೀಡು	31—40	17	..	...	6	4— 8—0	..	..	
			11	ಮುಕಿಷಿ	..	3	...	...	..	4— 8—0	..	...	
			12	ನೇರ್ಲಕೊಪ್ಪ ಜಾತ್ರೆ ಅಂಗಡಿ	...	..	..	.	..	..	.	..	

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಅಂಗಡಿಗಳ ಕ್ರಮ ನಂಬರ್.	ಅಂಗಡಿ ಇರುವ ಸ್ಥಳ.	ಬಿಕರಿ. ಪ್ರತಿ ಅಂಗಡಿಯ ಗಾಂಜಾ. 1901–1902	ಬಿಕರಿ. ಪ್ರತಿ ಅಂಗಡಿಯ ಗಾಂಜಾ. 1902–1903	ಬಿಕರಿ. ಪ್ರತಿ ಅಂಗಡಿಯ ಅಫೀಂ. 1901–1902	ಬಿಕರಿ. ಪ್ರತಿ ಅಂಗಡಿಯ ಅಫೀಂ. 1902–1903	ಗುತ್ತಾ ಮೊಬಲಗು. ಗಾಂಜಾ. 1901—1902	ಗುತ್ತಾ ಮೊಬಲಗು. ಗಾಂಜಾ. 1902—1903	ಗುತ್ತಾ ಮೊಬಲಗು. ಅಫೀಂ. 1901—1902	ಗುತ್ತಾ ಮೊಬಲಗು. ಅಫೀಂ. 1902—1903	ಹರಾಜು ತಾರೀಖು.
					ಶೇರು. ತೊಲೆ.	ಶೇರು. ತೊಲೆ.	ಶೇರು. ತೊಲೆ.	ಶೇರು. ತೊಲೆ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಚಿತ್ರದುರ್ಗ.	ಚಿತ್ರದುರ್ಗ ...	ಚಿತ್ರದುರ್ಗ ...	1	ಚಿತ್ರದುರ್ಗ ಟವರ್ ..									
		ಭರ್ಮಸಾಗರ ..		ಭರ್ಮಸಾಗರ ಸಂತೆ ..									
		ಗುಂಟನೂರು ...		ಗುಂಟನೂರು ಸಂತೆ ..	235	78	10—40	6—24	206	408	35	60	29ನೇ ಏಪ್ರೆಲ್ 1903
		ತುರುವನೂರು ...		ಶಿರಿಗೆರೆ ಸಂತೆ									
				ಚಿಕ್ಕೊಂಡನಹಳ್ಳಿ ಸಂತೆ ..									
	ಜಗಲೂರು ...	ಜಗಲೂರು ...	1	ಜಗಲೂರು ...	76—30	26	...	..	50	70	..		21ನೇ ಏಪ್ರೆಲ್ 1903
		ಬಿಳಿಚೋಡು ..	2	ಅಸಗೋಡು ..	6	12	..	..					
		ಸೊಕ್ಕೆ ..	3	ಸೊಕ್ಕೆ ..	1—40		..	..					
	ಚಳ್ಳಕೆರೆ ...	ಚಳ್ಳಕೆರೆ ...	1	ಚಳ್ಳಕೆರೆ ..	82	29	3	1—64	93—8—0	99	5	6—8—0	25ನೇ ಏಪ್ರೆಲ್ 1903
		ತಳಕು ...	2	ತಳಕು ...	17—40	5	..	.	..	30	..	...	
		ನಾಯ್ಕನಹಟ್ಟಿ ..	3	ನಾಯಿಕನಹಟ್ಟಿ ..	23—40	10—40	..	..	..				
	ಮೊಳಕಾಲ್ಮುರು ..	ಮೊಳಕಾಲ್ಮುರು .	1	ಮೊಳಕಾಲ್ಮುರು .	37—40	15	..	..	16	28	..	..	23ನೇ ಏಪ್ರೆಲ್ 1903
		ದೇವಸಮುದ್ರ ...	2	ದೇವಸಮುದ್ರ ..	10—40	6	.	..					
	ಹೊಳಲಕೆರೆ .	ಹೊಳಲಕೆರೆ ..	1	ಹೊಳಲಕೆರೆ ಟವರ್ .	146	72	...	...	60	78	....	..	15ನೇ ಏಪ್ರೆಲ್ 1903
				ರಾಂಗಿರಿ ಸಂತೆ ..	..								
				ಭರ್ಮಣ್ಣನಾಯ್ಕನದುರ್ಗ ಸಂ	..	4							
				ಚಿಕ್ಕಜಾಜೂರು ಸಂತೆ	...	2							
				ಚಿತ್ರಹಳ್ಳಿ ಸಂತೆ	...	..							
	ದಾವಣಗೆರೆ ..	ದಾವಣಗೆರೆ ...	1	ದಾವಣಗೆರೆ ...	184—10	105	4—55	3—20	195	300	33	51—12—0	17ನೇ ಏಪ್ರೆಲ್ 1903
		ಹದಡಿ .	2	ಹದಡಿ ...	13-40	11—37	..	..					
			3	ಸಂತೆಗಳು ...									
	ಹರಿಹರ ಸಬ್ ತಾ||	ಹರಿಹರ ...	4	ಹರಿಹರ ..	52—40	59—40	7—52	6—60					
		ಮಲೆಬೆನ್ನೂರು	5	ಕಿರಗೆರೆ .	..	10—40	.	..	97	114	7	39	
			6	ಸಂತೆ ಅಂಗಡಿಗಳು ..	24	10—40	..	..					
	ಹೊಸದುರ್ಗ ..	ಹೊಸದುರ್ಗ ...	1	ಹೊಸದುರ್ಗ ..	61	26	..	..	23	30	...	...	13ನೇ ಏಪ್ರೆಲ್ 1903
	ಹಿರಿಯೂರು ...	ಹಿರಿಯೂರು ..	1	ಹಿರಿಯೂರು ..	74	2	0—72	0—36	25	28	5	5	27ನೇ ಏಪ್ರೆಲ್ 1903
			2	ನಾರಿಕಣಿವೆ ..	120	40	2—56	1-55¼	88	148	25	18	

ಫಾರೆಸ್ಟ್ ಇಲಾಖಾ.

ತಾರೀಖು 12ನೇ ಮಾರ್ಚಿ 1903, ಮೊಕ್ಕಾಂ ಬೆಂಗಳೂರು.

ನೆಲಮಂಗಲದ ತಾಲ್ಲೂಕು ಸೊಲದೇವನಹಳ್ಳಿ, ಗೊರವನಹಳ್ಳಿ, ಬೊಲಿಮಾರನಹಳ್ಳಿ, ಚೌಡಸಂದ್ರ ಈ ಗ್ರಾಮದ ಜಮೀನುಗಳು ಸ್ಟೇಟ್ ಫಾರೆಸ್ಟ್ಗೆ ದಾಖಲ್ಮಾಡಿಕೊಳ್ಳತಕ್ಕ ಖಾಜಿ ಫಾರೆಸ್ಟ್ ಇಲಾಖೆ ಮಾರ್ಫತ್ತು ಇಸ್ತಿಹಾರ ಗೆಜೆಟಿನಲ್ಲಿ ಫಾಯಿಷಾಗಿ ಇದರ ವ್ಯವಸ್ಥೆ ಬಗ್ಯೆ ನಮ್ಮನ್ನು ನೇಮಕ ಮಾಡಿರುವಂತೆ 1903ನೇ ಇಸವಿ ಜನವರಿ 29ನೇ ಮಾರ್ಕಂ 462—4476ನೇ ನಂಬರು ನೋಟಿಫಿಕೇಷನ್ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸೊಲದೇವನಹಳ್ಳಿ ಗ್ರಾಮದ ಸರ್ವೆ 5–12–4–6–7–8–16–17–18–9–10–11 ಗೊರವನಹಳ್ಳಿ ಗ್ರಾಮದ ಸರ್ವೆ 13–14–15–17–16 ಬೊಲಿಮಾರನಹಳ್ಳಿ ಗ್ರಾಮದ ಸರ್ವೆ 35–36–37–38–39–40 ಚೌಡಸಂದ್ರ ಗ್ರಾಮದ 22–28–20 ಈ ನಂಬರುಗಳು ಸ್ಟೇಟ್ ಫಾರೆಸ್ಟ್ಗೆ ಶೇರಿಕೊಳ್ಳುವದು ಅವಶ್ಯಕವಾಗಿ ಇರುವದ್ದರಿಂದ ಫಾರಸ್ಟು ರೆಗ್ಯುಲೇಷನ್ 5ನೇ ಸೆಕ್ಷನ್ ಅನುಸರಿಸಿ ಈ ಜಮೀನುಗಳ ಯಾವ ಹಕ್ಕುದಾರಿಯನ್ನಾದರು ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕುದಾರ್ರು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಒಂದು ಬರಹ ಮೂಲಕವಾದ ನೋಟಿಸನ್ನು ಇಸ್ತಿಹಾರು ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ಒಳಗಾಗಿ ನಮ್ಮಲ್ಲಿ ಹಾಜರ್ಮಾಡಬೇಕು ಅಥವಾ ಆ ಮಾಯಿದೆ ಅಂದರುವಾರು ನಮ್ಮ ರೂಬರೂಬು ಹಾಜರಾಗಿ ಬಯಾನ್ ಮಾಡಬೇಕು.

ಸ್ಟೇಟ್ ಫಾರೆಸ್ಟ್ಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಮತ್ತು ದನ ಕರುಗಳು ಪ್ರವೇಶ ಮಾಡಲು ನಿರ್ಬಂಧ ಉಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಆದಕಾರಣ ಮಾಯಿದೆ ಕಳೆದುಬರುವ ತಕರಾರುಗಳನ್ನು ಅಂಗೀಕರಿಸಲ್ಪಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ತಿಳಿಯಪಡಿಸುವದೇನಂದರೆ—ಸ್ಟೇಟ್ ಫಾರೆಸ್ಟ್ ಆಗಿರಬೇಕೆಂದು ಮೊಕರರ್ಮಾಡುವ ಇಸ್ತಿಹಾರಿನಿಂದ ಗೊತ್ತಾಗುವ ತಾರೀಖಿಗೂ ಈ ಇಸ್ತಿಹಾರ್ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನ್ ಅಥವಾ ಅದರಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಅಪ್ಪಣೆ ಶಿವಾಯಿ ಸಂಪಾದಿಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗೈರೆ ಕಟ್ಟಕೂಡದು ಎಂದು ಇದರಿಂದ ಎಲ್ಲರಿಗೂ ತಿಳಿಯಪಡಿಸಿ ಇದೆ.

ಡಿ. ಎಂ. ನರಸಿಂಗರಾವ್,

ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ್ ತಾರೀಖು 24ನೇ ಮಾರ್ಚಿ 1903ನೇ ಇಸವಿ.

ಶ್ರೀನಿವಾಸಪುರದ ರೇಂಜ್ ರಾಯಲ್ಪಾಡ ಫಾರಸ್ಟು ಗಾರ್ಡ್ ಆಗಿ ಇದ್ದ ಹಾಲಿ ಮೃತಪಟ್ಟಿರುವ ಸುಬ್ರಹ್ಮಣ್ಯ ಎಂಬಾತನು ಕಳೆದ ನವಂಬರ್ ಗ.ರ್ರ ತಾರೀಖು ಲಾಗಾಯತು 27ರ ವರಿಗೆ ಈ ಇಲಾಖೆಯಲ್ಲಿ ಕೆಲಸ ಮಾಡಿದ 27 ರೋಜುಗಳ ತಲಬು ಮಾಹೆಯಾನಾ ಎಂಟು ರೂಪಾಯಿನಂತೆ ಆಗುವ 7—3—2 ಪೈ ಮೇಲ್ಕಂಡ ಸುಬ್ರಹ್ಮಣ್ಯನಿಗೆ ಪಾವತಿ ಆಗದೆ ಶ್ರೀನಿವಾಸಪುರದ ಫಾರೆಸ್ಟ್ ರೇಂಜಾಫಿಸರಲ್ಲಿ ಅಮಾನತ್ತಿನಲ್ಲಿರುತ್ತೆ. ಮೇಲ್ಕಂಡ ಮೊಬಲಗನ್ನು ಈ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಹಕ್ಕು ಇರತಕ್ಕವರು ತೆಗೆದುಕೊಂಡುಹೋಗದಿದ್ದರೆ ಸದರಿ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಕೋಲಾರ ಡಿಸ್ಟ್ರಿಕ್ಟು.

ತಾರೀಖು 20ನೇ ಮಾರ್ಚಿ 1903.

ಅಕಾವಳ್ಳಿ ನದಿಯಿಂದ ತಪ್ಪಿಸಿಕೊಂಡುಬಂದ ಬೊಂಬುಗಳ ಜಾತಿಗಳ ಪೈ+ (25) ಬೊಂಬುಗಳು ಶಿವಮೊಗ್ಗ ತಾಲ್ಲೂಕು ಬೆಂ ಪುರ ಮಾಗಣೆ ಡಣಾಯಿ ಕಪ್ಪದ ಬಳಿ ಸಿಕ್ಕಿದ್ದದ್ದು ಈ ಗ್ರಾಮದ ಪಟೇಲನ ಸ್ವಾಧೀನದಲ್ಲಿರುತ್ತೆ. ಈ ನೋಟಿಸ್ ತಾರೀಖು ಲಾಗಾಯತು ಒಂದು ತಿಂಗಳವಳಗಾಗಿ ಸದರಿ ಬೊಂಬುಗಳು ಬರಬೇಕೆಂದು ಯಾವ ಮನುಷ್ಯನಾಗಲಿ ಬಾಧ್ಯತೆಯನ್ನು ಕುರಿತು ಬರಹ ಮೂಲಕವಾದ ಹೇಳಿಕೆಯನ್ನು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರಲ್ಲಿ ಹಾಜರ್ಮಾಡಬೇಕು. ತಪ್ಪಿದರೆ ಸದರಿ ಮಾಲು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ. 1900ನೇ ಇಸವಿ ಫಾರೆಸ್ಟ್ ರೆಗ್ಯುಲೇಷನ್ 40ನೇ ಸೆಕ್ಷನ್ ಅನುಸರಿಸಿ ಈ ನೋಟಿಸ್ ಕೊಡಲ್ಪಟ್ಟಿರುತ್ತೆ.

ಟಿ. ಬೊಕ್ಕಣ್ಣ,

ಫಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

1903ನೇ ಇಸವಿ ಮಾರ್ಚಿ ತಾರೀಖು 19ಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನೆಂದರೆ, ಇದರಡೀ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜಾದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ, ಕೊಂಬು ಮತ್ತು ಪಸಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು	ಹರಾಜು ತಾರೀಖು.	ಹರಾಜು ಮಾಡತಕ್ಕ ಅಧಿಕಾರಿ.	ಸುಮಾರು ಚೌಬೀನೆ ಮೊತ್ತಾ.												ಸುಮಾರು ಪಸಾರೆ ಜಿನಸಿ ಮೊತ್ತಾ.												ಒಟ್ಟು.
				ಸಾಗವಾನಿ ನಾಟಾ ಮತ್ತು ಜಂತಿ.		ಮನ್ನಾ ಜಾತಿ ನಾಟಾ ಮತ್ತು ಜಂತಿ.		ಕಾಡ ನಾಟಾ ಮತ್ತು ಜಂತಿ.		ಸಾಗವಾನಿ ಸರ.		ಮನ್ನಾ ಜಾತಿ ಸರ.		ಕಾಡು ಸರ.		ಆಳಲೆಕಾಯಿ.		ಅರಗು.		ಗೋಂದು.		ಜೇನು ತುಪ್ಪ.		ಜೇನು ಮ್ಯಾಣ.		ಕೊಂಬು.		
				ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಅದದು
1	ಮೈಸೂರು ವುಡಿಯಾರ್ಡು	16-4-03	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು.	338	7231	182	3294	6	125	63	72	..	...	...	...	1169	...	..	....	16	21	16	8	14	.	8		9226
2	ನಂಜನಗೂಡು ಡಿಪೋ	20-1-03		260	2641	36	657	123	1413	...	..	....	...	..	..	...	...	...	...	...	...	...	...	...		.	.	
3	ಶ್ರೀರಂಗಪಟ್ಟಣದ ಕೋಟೆ	15-4-03		...	...		...	..	..	...	...	...	...	..	..	2255	.	216	21	...	...	...	...	..	.	..	...	

ಷರತ್ತು:—1895ನೇ ಇಸವಿ ಮಾರ್ಚಿ 10ನೇ ಮರ್ಕ್ಕಂ 1529—R. F. 155-92ನೇ ನಂಬರು ಇಸ್ತಿಹಾರ್ ನಾಮೆಯನ್ನು 25—4—1895ನೇ ಮರ್ಕ್ಕಂ 15ನೇ ನಂಬರು ಮೈಸೂರು ಗೆಜೆಟ್ಟನಲ್ಲಿ ಛಾಯಿಷ್ ಮಾಡಿರುತ್ತೆ ನೋಡಿ,

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 21ನೇ ಮಾರ್ಚ್ 1903.

1. ಕಂದಾಯದ ಬಾಕೀದಾರರಾದ ಮಂಗಳೂರು ಗ್ರಾಮದ ಮೆ|| ಜೆ. ಜೆ. ರೆಬೆಲೊಪ್ರಭು ಯವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಹಿಡುವಳಿದಾರರ ಹಕ್ಕು ಬಾಧ್ಯತೆ ಕಳಕೊಂಡದ್ದಾಗಿ ಕಂಡೋಕ್ತವಾಗಿ ನಮೂದಾದ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಮೂಡಿಗೆರೆ ಕಸಬಾ ಗ್ರಾಮದಲ್ಲಿ 1903ನೇ ಇಸವಿ ಮೇ 7ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಅಮಲ್‌ದಾರರು ಯಾ ಶಿರಸ್ತೆದಾರರವರಿಂದ ಹರಾಜು ಏಪಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಕ ದರ ಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901—1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 404—14—1 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದಿನಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್ — ಕಟ್ಟಡಗಳು. — ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. — ಸರ್ವೆ ನಂಬರು.	ಜಮೀನಿನ ವರ್ಗ.	ವಿಸ್ತೀರ್ಣ.		ಕಂದಾಯ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
					ರೂ.ಆ.ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಮೂಡಿಗೆರೆ	ಕಸಬ	ಮೂಡಿಗೆರೆ	ಮಂಗಳೂರು ಗ್ರಾಮದ ಮೆ|| ಜೆ. ಜೆ. ರೆಬೆಲೊಪ್ರಭು.	1 ಮನೆ, 1 ಆಫೀಸು, 4 ಆಳು ಮನೆ	10	120	ತರಿ	..	37	2	4	0	404	14	1
						130	ಕಾಫಿ	56	34	57	0	0			
						131	ಡಿಟೋ	171	15	171	8	0			
						213	ಡಿಟೋ	80	13	80	4	0			
						214	ಡಿಟೋ	57	26	57	12	0			
						215	ಡಿಟೋ	5	32	6	0	0			

ಸರ್ವೆ ನಂಬರುವಾರಾಗಿ ಹರಾಜು ಮಾಡಿಸಲ್ಪಡುತ್ತೆ.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 180.

ಮೃತಪಟ್ಟ ಧಾರವಾಡ ಜಿಲ್ಲಾ ಹುಬ್ಬಳ್ಳಿಯಲ್ಲಿ ವಾಸವಾಗಿರುವ ಚನ್ನಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಗುರಪ್ಪ, 2ನೇ ಈತನ ತಮ್ಮ ಗುರುಸಿದ್ಧಪ್ಪ ಮೈನರ್, ಬಿನ್ ಚನ್ನಬಸಪ್ಪ, ಇವರ ಗಾರ್ಡಿಯನ್ ಇವರ ಭಾವ ಬೆಳಗಾಂ ಶಿವಮೂರ್ತೆಪ್ಪ ಬಿನ್ ಶಂಕರಪ್ಪ, ಧಾರವಾಡ ಜಿಲ್ಲಾ ಹುಬ್ಬಳ್ಳೀ ವಾಸಿ, ವೃತಪಟ್ಟ ಸದರೀ ಮೈನರ್ ತಂದೆ ಚನ್ನಬಸಪ್ಪನವರಿಗೆ ಖಾಸ ಅಳಿಯನು ಆಗಪೇಕೆಂಬ ಹಕ್ಕುದಾರಿ ಮೇಲೆ ಹುಬ್ಬಳ್ಳೀ ಸ್ಥಳದ ಬೆಳಗಾಂ ಶಿವಮೂರ್ತೆಪ್ಪನವರು ಹುಬ್ಬಳ್ಳೀ ವಾಸಸ್ಥರಾಗಿ ಮೃತಪಟ್ಟ ಚನ್ನಬಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 811—3—2 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬೆಳಗಾಂ ಶಿವಮೂರ್ತೆಪ್ಪನವರ ಅರ್ಜಿಯನ್ನು ಸ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನು, ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚನ್ನಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಪೇಕೆಂದು ಇವರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 183.

ಮೃತಪಟ್ಟ ಶಿವಮೊಗ್ಗಾ ವಾಸಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಲೇಟ್ ಜುಡಿಷಿಯಲ್ ಹೆಡ್ ಮುನಷಿಯಾಗಿದ್ದ ಸುಬ್ಬಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಿವಮೊಗ್ಗ ವಾಸಿ ಕಾವೇರಮ್ಮ ಕೋಂ ಸುಬ್ಬರಾಯರು, ಮೃತಪಟ್ಟ ಸದರೀ ಸುಬ್ಬಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಕಾವೇರಮ್ಮನವರು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ 2,088—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರು ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾವೇರಮ್ಮನವರ ಅರ್ಜಿಯನ್ನು ಸ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಪೇಕೆಂದು ಇವರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟಿನ ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್,
ಶಿರಿಸ್ತೇದಾರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 380.

ಮೃತಪಟ್ಟ ಮೈಸೂರು ಅರಮನೆ ಅಂಬಾವಿಲಾಸದ ಮೊಖ್ತೇಸರ್ರಾಗಿದ್ದ ರಾಮಕೃಷ್ಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಲಕ್ಷ್ಮೀದೇವಮ್ಮ, ಮೃತಪಟ್ಟ ಸದರೀ ರಾಮಕೃಷ್ಣಪ್ಪನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರಾಮಕೃಷ್ಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮೀದೇವಮ್ಮನವರ ಅರ್ಜಿಯನ್ನು ಸ್ 1903ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಪೇಕೆಂದು ಇವರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 393.

ಮೃತಪಟ್ಟ ಪುಟ್ಟ ಪುರುಷ ಲಕ್ಷ್ಮೀನಾರಾಯಣ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗಂಜಾಂನಲ್ಲಿರುವ ಗುಂಡಪ್ಪ, ಮೃತಪಟ್ಟ ಸದರೀ ಲಕ್ಷ್ಮೀನಾರಾಯಣನಿಗೆ ಮುಖ್ಯ ವಾರಸುದಾರ ಆಗಪೇಕೆಂಬ ಹಕ್ಕುದಾರಿ ಮೇಲೆ ಗಂಜಾಂನಲ್ಲಿ ವಾಸಸ್ಥರಾಗಿ ಮೃತಪಟ್ಟ ಲಕ್ಷ್ಮೀನಾರಾಯಣನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುಂಡಪ್ಪನ ಅರ್ಜಿಯನ್ನು 1903ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಕ್ಷ್ಮೀನಾರಾಯಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1902—1903ನೇ ಇಸವಿ ಮಿ|| ಅರ್ಜೀ ನಂಬರ 400.

ಮೃತಪಟ್ಟ ಯಡತೊರೆ ತಾ|| ಬ್ಯಾಡರಹಳ್ಳಿ ಹೋಬಳಿ ಮೂವತ್ತೂರಲ್ಲಿದ್ದ ಸೂರ್ಯನಾರಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ಸುಬ್ಬಾಯು, 2ನೇ ರಾಮು ಮೈನರ ಗಾರ್ಡಿಯನ್ ತಾಯಿ ಸುಬ್ಬಮ್ಮ, ಮೃತಪಟ್ಟ ಸದರೀ ಸೂರ್ಯನಾರಣಪ್ಪನವರಿಗೆ ಸದರಿ ಮೈನರಗಳು ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ತಾ|| ತಿಪ್ಪೂರು ಹೋಬಳಿ ಮಂಚೇನಹಳ್ಳಿ ವಾಸಸ್ಥರಾಗಿ ಮೃತಪಟ್ಟ ಸೂರ್ಯನಾರಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜಿದಾರರ ಅರ್ಜಿಯನ್ನು ಸನ 1903ನೇ ಇಸವಿ ಏಪ್ರೈಲ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರ್ಯನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಮಾರ್ಚಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ 1902—03ನೇ ಇಸವಿ ಅರ್ಜಿ ನಂಬರ 440.

ಮೃತಪಟ್ಟ ಕೊಂಗಳಪ್ಪನ ಆಸ್ತೀ ವಿಷಯದಲ್ಲಿ -

ಅರ್ಜೀದಾರರು ಚಾಮರಾಜ ನಗರದ ತಾಲ್ಲೂಕು ಸಂತೆಮಾರಳ್ಳಿ ಹೋಬಳಿ ಕಾವುರುವಾಡಿ ಗ್ರಾಮದಲ್ಲಿರುವ ಬಸವಲಿಂಗವಡೇರು ಕೊಂಗಳಪ್ಪನ ಮಕ್ಕಳು 1ನೇ ಮಾದಯ್ಯ. 2ನೇ ಬಸವಲಿಂಗ ಮೈನರಿ ಗಾ|| ದೊಡ್ಡಪ್ಪ ಶಿದ್ದಪ್ಪ, ಮೃತಪಟ್ಟ ಸದರೀ ಕೊಂಗಳಪ್ಪನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಚಾಮರಾಜನಗರದ ತಾಲ್ಲೂಕು ಕಾವುರುವಾಡಿ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಕೊಂಗಳಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮಾದಯ್ಯ ವಗೈರೆ ಅರ್ಜಿಯನ್ನು ಸನ1903ನೇ ಇಸವಿ ಏಪ್ರೈಲ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೊಂಗಳಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಮಾರ್ಚಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ 1902—1903ನೇ ಇಸವಿ ಅರ್ಜೀ ನಂಬರ 444.

ಮೃತಪಟ್ಟ ಮಿಾರರಜಾಲಿಯುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಲಷ್ಕರ ಮೊಹಲ್ಲಾದಲ್ಲಿದ್ದು ಸ್ಟೇಟ್‌ಪೆನಷನರ ಮಿಾರರಜಾಲಿ ಸಾಬರ ಎರಡನ ಹೆಂಡತಿ ಅಬ್ಬಾಸಿಬೇಗಂ, ಮೃತಪಟ್ಟ ಸದರೀ ಮಿಾರರಜಾಲಿಗೆ ಎರಡನೇ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಮಿಾರರಜಾಲಿಯುವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಿಾರರಜಾಲಿಯುವರ ಅರ್ಜಿಯನ್ನು ಸನ 1903ನೇ ಇಸವಿ ಏಪ್ರೈಲ ತಿಂಗಳು ತಾರೀಖು ೭ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಿಾರರಜಾಲಿಯುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಮಾರ್ಚಿ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇಧೆ.

ಸನ 1902-1903ನೇ ಇಸವಿ ಮಿ|| ಅರ್ಜೀ ನಂಬರ 418.

ಮೃತಪಟ್ಟ ನಂಜಪ್ಪಾಜಿಯುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮಳವಳ್ಳಿ ತಾ|| ಪುಂಡಿಗಾಲಿ ಹೋಬಳಿ ಬೊಪ್ಪಗೌಡನ ಪುರದಲ್ಲಿರುವ ಕಾಂತರಾಜೆ ಅರಸಿನವರ ಮಗಳು ದೇವಾಜಮ್ಮಣ್ಣಿ, ಮೃತಪಟ್ಟ ಸದರೀ ನಂಜಪ್ಪಾಜಿಯುವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಬೊಪ್ಪಗೌಡನ ಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ನಂಜಪ್ಪಾಜಿಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನುವಸೂಲ ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೇವಾಜಮ್ಮಣ್ಣಿಯುವರ ಅರ್ಜಿಯನ್ನು ಸನ 1903ನೇ ಇಸವಿ ಏಪ್ರೈಲ ತಿಂಗಳು ತಾರೀಖು ೭ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಂಜಪ್ಪಾಜಿಯುವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಶಿಧೆ.

ಸನ 1903ನೇ ಇಸವಿ ಮಾರ್ಚಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಮೈಸೂರ ಗೆಜೆಟ್.

ನಂ. XXXVIII] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ 14.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 9, ಸನ್ 1903.

IIನೇ ಭಾಗ.

ಇಂಡ್ಯ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

1903–1904ನೇ ವರುಷಕ್ಕಾಗಿ ಮೈಸೂರು ಶೀಮೆಯಲ್ಲಿ ಇರತಕ್ಕ ಗಾಂಜಾ ವ ಅಫೀಂ ಅಂಗಡಿಗಳ ಹರಾಜು ನೋಟಿಸ್.

ನಂಬರು 5807–7, ತಾರೀಖು 24ನೇ ಮಾರ್ಚಿ 1903.

1. ಇದಕ್ಕೆ ಲಗತ್ತು ಮಾಡಿರುವ *ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಮಾದಕ ಪದಾರ್ಥಗಳನ್ನು 1903ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ವಿಕರೀ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಸದರೀ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಆಯಾಯ ಡೆಪ್ಯುಟಿ ಕಮಿಷನರವರು ಅಥವಾ ಅದಕ್ಕಾಗಿ ಅವರಿಂದ ಅಧಿಕಾರ ಹೊಂದಿದ ಅಸಿಸ್ಟೆಂಟ್ ಕಮಿಷನರವರು ಆಯಾಯ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 5 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಗೆ ಯಾರ ಚಡ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾವರಿಗೆ ಆ ಅಂಗಡಿಯು ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನಮೆಂಟಿನವರು ತಿದ್ದುಪಡಿ ಮಾಡದೆ ಇರುವ ಪಕ್ಷದಲ್ಲಿ, ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುಖ್ತಾಲೀಕರನ್ನ ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡೆಯುತ್ತಿರುವಾಗ ಯಾರ ಸವಾಲ್ ಅಂಗೀಕರಿಸಲ್ಪಡುತ್ತೊ ಅವರವರು ತಕ್ಷಣವೇ ಆ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣೀ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಂನಲ್ಲಿ ಕಂಡಂತೆ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗೆ ಅನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿ ಯಾ ಇತರ ಅಂಗಡಿಗಳನ್ನು ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣೀ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜು ತಾರೀಖು ಲಾಗಾಯ್ತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ಠೇವಣಿ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸ್‌ಗಳನ್ನ ಪಡೆಯತಕ್ಕದ್ದು, ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತಿಯಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್‌ದಾರಿ ಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿ[illegible]ನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನು ವಾರಸುದಾರರು ಅಥವಾ ಆತನಿಂದ ವರ್ಗಪಡೆದವರನ್ನ ಹೊಂದಿರುತ್ತೆ.

---

* ಷರಾ—ಸರ್ 1903ನೇ ಇಸವಿ ಏಪ್ರೈಲ್ ತಾರೀಖು 2ನೇ ಮೈಸೂರ ಗೆಜೆಟ್ IIನೇ ಭಾಗ ಪುಟಗಳು 116ರಿಂದ 125ರ ವರಿಗೆ ಷೆಡ್ಯೂಲ್ ಛಾಪಿಸಲಾಗಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೆ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಬಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದರಲ್ಲಿ ಬಿಡಸವಾಲ್‌ದಾರನು ಕೊಡಬೇಕಾದ ಬಟ್ಟು ಮೊಬಲಗು ಜಾತಾ ಬಾಕಿ ಉಳಿಯುವದರನ್ನ ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

6. ಮೇಲಿನ 4ನೇ ಕಲಂನಲ್ಲಿ ಕಂಡಮೇರಿಗೆ ಹೊಂದಬೇಕಾದ ಲೈಸೆನ್ಸ್ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಬಳಪಟ್ಟಿರತಕ್ಕದ್ದು :—

(1) ಸದರೀ ಬಟ್ಟು ಸ್ವತಂತ್ರದ ಹಕ್ಕನ್ನು ಪಡಕೊಂಡದ್ದಕ್ಕೆ ಕೊಡಬೇಕಾದ ಮೊಬಲಗನ್ನು ವಿಧಾಯಕವಾದ ಚಲನ್‌ನಲ್ಲಿ ತಾಲ್ಲೂಕು ಖಜಾನೆಗೆ 1903ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳುಗಟ್ಲೆ ಖಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿ ಆಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಪಾವತಿಯಾಗತಕ್ಕದ್ದು. ಅಂಥಾ ಮೊಬಲಗು 12 ರೂಪಾಯಿಗಳಿಗೆ ಕಮ್ಮಿಯಾಗಿದ್ದರೆ ಮೂರು ಖಿಸ್ತುಗಳಿಗೆ ಅತಿಕ್ರಮಿಸದಂತೆ ಪಾವತಿ ಮಾಡಲ್ಪಡಬೇಕು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ 2 ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಸದರೀ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿಯಂತೆ ಬಡ್ಡಿ ನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(2) ಲೈಸೆನ್ಸ್‌ದಾರನು ಯಾವದಾದರೂ ಬಾಂಡೆಡ್ ಡಿಪೋದಿಂದ ಗಾಂಜಾ 80 ತೊಲೆಗಳುಳ್ಳ ಶೇರು 1ಕ್ಕೆ ರೂಪಾಯಿ 0—13—4 ಪ್ರಕಾರವೂ, ಮಾಜುಂ ರೂ. 0—5—4 ಪ್ರಕಾರವೂ ಖರೀದಿ ಕೊಟ್ಟು ಸದರಿ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕದ್ದು.

(3) ಮೇಲ್ಕಂಡ ಖರೀದಿ ಶಿವಾಯಿ, ಗಾಂಜಾ ಶೇರು 1ಕ್ಕೆ (ಲೋಕಲ್ ಸೆಸ್ ಸಹಿತವಾಗಿ) ರೂ. 3—6—8 ದರದಂತೆಯೂ, ಮಾಜುಂ ಶೇರು 1ಕ್ಕೆ ರೂ. 0—11—8 ದರದಂತೆಯೂ ಡ್ಯೂಟಿ ಯಾ ಹಾಸಲನ್ನು ತಾಲ್ಲೂಕು ಖಜಾನೆಗೆ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರ ಅನುಮತಿಮೇಲೆ ಬೇರೆ ಇತರ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(4) ಲೈಸೆನ್ಸುದಾರನಿಂದ ಮಾರಲ್ಪಡುವ ಗಾಂಜಾ ಒಳ್ಳೇ ಗುಣವುಳ್ಳದ್ದಾಗಿಯೂ, ಬೆರಿಕೆ ಇಲ್ಲದ್ದಾಗಿಯೂ, ಇರತಕ್ಕದ್ದು. ಮತ್ತು ಗಾಂಜಾ 80 ತೊಲೆ ಶೇರು ಒಂದಕ್ಕೆ 5 ರೂಪಾಯಿ ಪ್ರಕಾರವೂ, ಮಾಜುಂ ಶೇರು 1ಕ್ಕೆ ರೂ. 1—10—8 ಪ್ರಕಾರವೂ, ಆತನಿಂದ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹಾಜರಿರುವ ತಮಾಂ ಗಾಂಜಾ ಮತ್ತು ಮಾಜುಂ ಲೈಸೆನ್ಸು ಪಡೆದ ದುಕಾನ್‌ನಲ್ಲಿ ಇಡಲ್ಪಡತಕ್ಕದ್ದೇಹೊರ್ತು ಯಾವ ನೆಪದಿಂದಲೂ ವಿಶೇಷ ಅಪ್ಪಣೆ ಇಲ್ಲದೆ ಅನ್ಯತ್ರ ಎಲ್ಲಿಯೂ ಇಡಲ್ಪಡತಕ್ಕದ್ದಲ್ಲವು.

(5) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ತ್ರಾಸು ವ ಬಟ್ಟುಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ ಮದತ್ ಪದಾರ್ಥಗಳನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(6) ಲೈಸೆನ್ಸ್‌ದಾರನು 1903ನೇ ಇಸವಿ ಜುಲೈ ಗುರ್ರೇಯಲ್ಲಿ ಹಳೇ ಲೈಸೆನ್ಸ್‌ದಾರನ ಬಾಬತು ಸದರೀ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಮದತ್ ಪದಾರ್ಥಗಳನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸ್‌ದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಲು ಗುರಿಯಾಗತಕ್ಕದ್ದು.

(7) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ನಿಬಂಧನೆಗಳು ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡದುಕೊಳ್ಳಲು ಬದ್ಧನಾಗಿರತಕ್ಕದ್ದು.

(8) ಬಾಕಿ ಕರಾರುಗಳು ವ ಷರತ್ತುಗಳು ವಿಧಾಯಕವಾಗಿರುವ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸ್‌ದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನ ತೆಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡಿರುತ್ತಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮುಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಪ್ಸೀರಿಗೆ ಲೈಸೆನ್ಸ್‌ದಾರನನ್ನಾಗಲಿ ಯಾ ಆತನ ನೌಕರನನ್ನಾಗಲಿ ಆಪಾದಿಸಿ ದರ್ಯಾಫ್ತು ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮಿಷನರ್.

ವಿದ್ಯಾಭ್ಯಾಸದ ಇಲಾಖಾ.

ಉಪಾಧ್ಯಾಯರ ನಿರ್ಣಯ ಪತ್ರಿಕಾ ಪರೀಕ್ಷೆಗಳು.

ಸನ್ 1903ನೇ ಇಸವಿ ಏಪ್ರೈಲ್ ತಾರೀಖು 3.

ಉಪಾಧ್ಯಾಯರ ನಿರ್ಣಯ ಪತ್ರಿಕೆಗಳ ಅಪ್ಪರ್ ಸೆಕಂಡರಿ ಲೋವರ್ ಸೆಕಂಡರಿ ಮತ್ತು ಪ್ರೈಮರಿ ಅಂತಸ್ತುಗಳ ಬರಹ ಪರೀಕ್ಷೆಯು (Written Examination) ಸನ್ 1903ನೇ ಇಸವಿ ಜೂನ್ ತಿಂಗಳ ತಾರೀಖು 1ನೇ ಸೋಮವಾರ ಮತ್ತು 2ನೇ ಮಂಗಳವಾರ ಈ ದಿವಸಗಳಲ್ಲಿ ಮೈಸೂರಲ್ಲಿ ಇದರಡಿ ಕಂಡ ಕಾಲಕ್ರಮವಾಗಿ ನಡೆಯಿಸಲ್ಪಡುವದು :—

ದಿವಸ.	ಕಾಲ.	ಅಪ್ಪರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಲೋವರ್ ಸೆಕಂಡರಿ ಅಂತಸ್ತಿನ ವಿಷಯಗಳು.	ಕಾಲ.	ಪ್ರೈಮರಿ ಅಂತಸ್ತಿನ ವಿಷಯಗಳು.
ಮೊದಲನೆಯ ದಿವಸ	10ರಿಂದ 1ರ ವರೆಗೆ.	(1) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಶಾಸ್ತ್ರ ಮತ್ತು ಅನುಭವ (The theory and practice of teaching ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ (The art of oral teaching) ಯಾವುದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ (Notes of a lesson on a given subject)	10 ರಿಂದ 1ರ ವರೆಗೆ	(1) ಅಪ್ಪರ್ ಪ್ರೈಮರಿ ಸ್ಕೂಲ್‌ಗಳಲ್ಲಿ ಓದಬೇಕಾದ ವಿಷಯಗಳನ್ನು ಕಲಿಸುವ ಕ್ರಮಗಳು, ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ	10ರಿಂದ 12ರ ವರೆಗೆ	(1) ಸಾಮಾನ್ಯವಾಗಿ ಮುಖತಃ ಬೋಧಿಸುವ ಪ್ರಕ್ರಿಯೆ ಮತ್ತು ಯಾವದಾದರೂ ಒಂದು ಕೊಟ್ಟ ವಿಷಯವನ್ನು ಪಾಠ ಹೇಳುವ ಟಿಪ್ಪಣಿ
	2ರಿಂದ 5ರ ವರೆಗೆ.	(2)(a) ಲೋವರ್ ಸೆಕಂಡರಿ ಮತ್ತು ಪ್ರೈಮರಿ ಸ್ಕೂಲ್‌ಗಳ ಸಂವಿಧಾನ (Organization) ಸ್ಕೂಲ್ ರೆಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರುಮಾಡುವ ರೀತಿ ಮತ್ತು ಸರ್ಕಾರೀ ಕಾಗದಗಳನ್ನು ಬರಿಯುವ ಸರಿಯಾದ ಕ್ರಮ.	2ರಿಂದ 5ರ ವರೆಗೆ	(2) ಯಾವದಾದರೂ ಒಂದು ಪ್ರೈಮರಿ ಸ್ಕೂಲಿನ ಸಂವಿಧಾನ (Organization) ಮತ್ತು ವ್ಯವಸ್ಥೆ (Discipline) ಸ್ಕೂಲ್ ರಿಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರುಮಾಡುವ ರೀತಿ	2ರಿಂದ 4ರ ವರೆಗೆ	(2) ಸ್ಕೂಲ್ ರಜಿಸ್ಟರುಗಳ ಮಾದರಿ, ಅವುಗಳನ್ನು ಇಡುವ ಮತ್ತು ಅವುಗಳಿಂದ ಲೆಖ್ಖಗಳನ್ನು ತಯಾರುಮಾಡುವ ರೀತಿ
2ನೆಯ ದಿವಸ	10 ರಿಂದ 12ರ ವರೆಗೆ	(2) (b) ನೀತ್ಯನುಶಾಸನ ವಿಧಾನ (Principles of moral discipline) ಶೀಲಸ್ವಭಾವೋತ್ಪಾದನ (Formation of habits and character)				

ಒಂದೊಂದು ಪತ್ರಿಕೆಗೂ ಕ್ಲಿಪ್ತಮಾಡಿರುವ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆಯದವರು ಪರೀಕ್ಷೆಯಲ್ಲಿ ತೇರ್ಗಡೆಮಾದಂತೆ ಭಾವಿಸಲ್ಪಡುವದಿಲ್ಲ. ತೇರ್ಗಡೆಯಾದವರಲ್ಲಿ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

ಬರಹ ಪರೀಕ್ಷೆಗಳ ಫಲಿತಾಂಶವು 1903ನೇ ಇಸವಿ ಜೂನ್ ತಿಂಗಳು 10ನೇ ತಾರೀಖನ್ನು ಅತಿಕ್ರಮಿಸದೆ ಪ್ರಕಟಿಸಲ್ಪಡುತ್ತದೆ.

ವ್ಯವಹಾರಿಕ ಪರೀಕ್ಷೆಯು (Practical test) 1903ನೇ ಇಸವಿ ಜೂನ್ ತಿಂಗಳು 15ನೇ ತಾರೀಖಿನಲ್ಲಿಯೂ ಮುಂದಿನ ದಿವಸಗಳಲ್ಲಿಯೂ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಡೆಯಿಸಲ್ಪಡುವದು.

ಬರಹ ಪರೀಕ್ಷೆಯಲ್ಲಿ ತೇರ್ಗಡೆಯಾಗದವರನ್ನು ವ್ಯವಹಾರಿಕ ಪರೀಕ್ಷೆಗೆ ಸೇರಿಸುವದಿಲ್ಲ.

ಇದರಡಿ ಕಂಡ ನಿಬಂಧನೆಗಳಿಗೆ ಪರೀಕ್ಷ್ಯರು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು :—

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ಪರೀಕ್ಷ್ಯನಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ಪರೀಕ್ಷ್ಯರಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದ ನಂತರ ಪುನಹ ಪ್ರವೇಶಿಸಲು ಯಾವ ಪರೀಕ್ಷ್ಯನಿಗೂ ಅವಕಾಶ ಉಂಟಾಗಲಾರದು, ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟ ವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ಪರೀಕ್ಷ್ಯನೇ ಆಗಲಿ ಮತ್ತೊಬ್ಬ ಪರೀಕ್ಷ್ಯನೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಅನ್ಯಾಯ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ತಿಳಿಸಲ್ಪಡುವದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲೀ, ಪುಸ್ತಕಗಳನ್ನಾಗಲಿ, ಬರೆದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗದುಕೊಂಡು ಹೋಗಲು ಯಾವ ಪರೀಕ್ಷ್ಯನಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ಪರೀಕ್ಷ್ಯನಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿ ವದಾಗಿಯಾಗಲಿ ಅಥವಾ ಅನ್ಯಾಯ ಅಕೃತ್ಯಗಳನ್ನು ನಡಿಸುತ್ತಿರುವದಾಗಿಯಾಗಲಿ, ಕಂಡು ಹಿಡಿಯಲ್ಪಟ್ಟರೆ ಅಂಥಾ ಪರೀಕ್ಷ್ಯನು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವನಲ್ಲದೆ ಸದರಿ ನಡವಳಿತವು ಇನ್ಸ್‌ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ತಿಳಿಸಲ್ಪಡುವದು.

(5) ಪರೀಕ್ಷ್ಯನು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರಿಗೂ ಹಾಗೆಯೇ ನಿಂತಿರತಕ್ಕದ್ದು ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ಪರೀಕ್ಷ್ಯನೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ಪರೀಕ್ಷ್ಯನ ಹೆಸರು ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ಪರೀಕ್ಷ್ಯರಿಗೆ ಅಪ್ಪಣೆ ಕೊಡುವದಿಲ್ಲವು.

(8) ಪರೀಕ್ಷ್ಯರು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಶಿಷ್ಟ ಕಾಗದಗಳೂ ಪರೀಕ್ಷ್ಯರು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ತಾರೀಖು 12ನೇ ಮಾರ್ಚಿ 1903, ಮೊಕ್ಕಾಂ ಬೆಂಗಳೂರು.

ನೆಲಮಂಗಲದ ತಾಲ್ಲೂಕು ಸೋಲದೇವನಹಳ್ಳಿ, ಗೊರವನಹಳ್ಳಿ, ಬೋಲಿಮಾರನಹಳ್ಳಿ, ಚಾಡಸಂದ್ರ ಈ ಗ್ರಾಮದ ಜಮೀನುಗಳು ಸ್ಟೇಟ್ ಫಾರೆಸ್ಟಿಗೆ ದಾಖಲ್ಮಾಡಿಕೊಳ್ಳತಕ್ಕ ಬಾಜಿ ಫಾರೆಸ್ಟ್ ಇಲಾಖೆ ಮಾರೀಫತ್ತು ಇಸ್ತಿಹಾರ್ ಗೆಜೆಟಿನಲ್ಲಿ ಖಾಯಿಷಾಗಿ ಇದರ ವ್ಯವಸ್ಥೆ ಬಗ್ಯೆ ನಮ್ಮನ್ನು ನೇಮಕ ಮಾಡಿರುವಂತೆ 1903ನೇ ಇಸವಿ ಜನವರಿ 29ನೇ ಮುಕ್ಕಾಂ 462—4476ನೇ ನಂಬರು ನೋಟಿಫಿಕೇಷನ್ ಅನುಸರಿಸಿ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸೋಲದೇವನಹಳ್ಳಿ ಗ್ರಾಮದ ಸರ್ವೆ 5–12–4–6–7–8–16–17–18–9–10–11 ಗೊರವನಹಳ್ಳಿ ಗ್ರಾಮದ ಸರ್ವೆ 13–14–15–17–16 ಬೋಲಿಮಾರನಹಳ್ಳಿ ಗ್ರಾಮದ ಸರ್ವೆ 35–36–37–38–39–40 ಚಾಡಸಂದ್ರ ಗ್ರಾಮದ 22–28–20 ಈ ನಂಬರುಗಳು ಸ್ಟೇಟ್ ಫಾರೆಸ್ಟಿಗೆ ಸೇರಿಕೊಳ್ಳುವದು ಅವಶ್ಯಕವಾಗಿ ಇರುವದ್ದರಿಂದ ಫಾರೆಸ್ಟು ರೆಗ್ಯುಲೇಷನ್ 5ನೇ ಸೆಕ್ಷನ್ ಅನುಸರಿಸಿ ಈ ಜಮೀನುಗಳ ಯಾವ ಹಕ್ಕು ದಾರಿಯನ್ನಾದರು ನಮೂದಿಸುವ ಅಥವಾ ದಾವೆಯನ್ನಾದರು ಮಾಡುವ ಪ್ರತಿ ಮನುಷ್ಯನಿಗೂ ಅಂಥಾ ಹಕ್ಕುದಾರ್ರು ಅಥವಾ ದಾವೆಯ ಸ್ವಭಾವವನ್ನು ವಿವರಿಸಿ ಇರುವ ಒಂದು ಬರಹ ಮೂಲಕವಾದ ನೋಟಿಸನ್ನು ಇಸ್ತಿಹಾರು ಗೆಜೆಟ್ಟಿನಲ್ಲಿ ಖಾಯಿಷಾದ ತಾರೀಖು ಲಾಗಾಯತು 3 ತಿಂಗಳು 15 ದಿವಸಗಳ ವಳಗಾಗಿ ನಮ್ಮಲ್ಲಿ ಹಾಜರ್ಮಾಡಬೇಕು ಅಥವಾ ಆ ವಾಯಿದೆ ಅಂದರುವಾರು ನಮ್ಮ ರೂಬರೂಬು ಹಾಜರಾಗಿ ಬಯಾನ್ ಮಾಡಬೇಕು.

ಸ್ಟೇಟ್ ಫಾರೆಸ್ಟಿಗೆ ಸೇರೋಣದ್ದರಿಂದ ಉತ್ತರೋತ್ತರ ಜಮೀನುಗಳಲ್ಲಿ ಜನ ಮತ್ತು ದನ ಕರುಗಳು ಪ್ರವೇಶ ಮಾಡಲು ನಿರ್ಬಂಧ ಉಂಟಾಗುವದಲ್ಲದೆ ಎಲ್ಲಾ ಹಕ್ಕು ನಿವರ್ತಿಯಾಗುವದು. ಆದಕಾರಣ ವಾಯಿದೆ ಕಳೆದುಬರುವ ತಕರಾರುಗಳನ್ನು ಅಂಗೀಕರಿಸಲ್ಪಡುವದಿಲ್ಲಾ ತಿಳಿಯುವದು.

ಮತ್ತು ಫಾರೆಸ್ಟ್ ರೆಗ್ಯುಲೇಷನ್ 6ನೇ ಸೆಕ್ಷನ್ ಅನುಸರಿಸಿ ತಿಳಿಯಪಡಿಸುವದೇನಂದರೆ—ಸ್ಟೇಟ್ ಫಾರೆಸ್ಟ್ ಆಗಿರಬೇಕೆಂದು ಮೊಕರರ್ಮಾಡುವ ಇಸ್ತಿಹಾರಿನಿಂದ ಗೊತ್ತಾಗುವ ತಾರೀಖಿಗೂ ಈ ಇಸ್ತಿಹಾರ್ ಖಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಈ ಜಮೀನ್ ಅಥವಾ ಅದರಮೇಲೆ ಯಾವ ಹಕ್ಕನ್ನಾಗಲಿ ಸರಕಾರದ ಅಪ್ಪಣೆ ಶಿವಾಯಿ ಸಂಪಾದಿಸಕೂಡದು ಮತ್ತು ಅಂಥಾ ಜಮೀನುಗಳಲ್ಲಿ ಹೊಸದಾಗಿ ಮನೆ ವಗೈರೆ ಕಟ್ಟಕೂಡದು ಎಂದು ಇದರಿಂದ ಎಲ್ಲರಿಗೂ ತಿಳಿಯಪಡಿಸಿ ಇದೆ.

ಡಿ. ಎಂ. ನರಸಿಂಗರಾವ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ್ ತಾರೀಖು 24ನೇ ಮಾರ್ಚಿ 1903ನೇ ಇಸವಿ.

ಶ್ರೀನಿವಾಸಪುರದ ರೇಂಜ್ ರಾಯಲ್‌ಪಾಡ್ ಫಾರೆಸ್ಟು ಗಾರ್ಡ್ ಆಗಿ ಇದ್ದ ಹಾಲಿ ಮೃತಪಟ್ಟಿರುವ ಸುಬ್ರಹ್ಮಣ್ಯಯ್ಯ ಎಂಬಾತನು ಕಳೆದ ನವೆಂಬರ್ ಗುರ್‍ರೆ ತಾರೀಖು ಲಾಗಾಯತು 27ರ ವರಿಗೆ ಈ ಇಲಾಖೆಯಲ್ಲಿ ಕೆಲಸ ಮಾಡಿದ 27 ರೋಜುಗಳ ತಲಬು ಮಾಹೆಯಾನಾ ಎಂಟು ರೂಪಾಯಿನಂತೆ ಆಗುವ 7—3—2 ಪೈ, ಮೇಲ್ಕಂಡ ಸುಬ್ರಹ್ಮಣ್ಯಯ್ಯನಿಗೆ ಪಾವತಿ ಆಗದೆ ಶ್ರೀನಿವಾಸಪುರದ ಫಾರೆಸ್ಟ್ ರೇಂಜಾಫೀಸರಲ್ಲಿ ಅಮಾನತ್ತಿನಲ್ಲಿರುತ್ತೆ. ಮೇಲ್ಕಂಡ ಮೊಬಲಗನ್ನು ಈ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಹಕ್ಕು ಇರತಕ್ಕವರು ತೆಗದುಕೊಂಡುಹೋಗದಿದ್ದರೆ ಸದರಿ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಕೋಲಾರ ಡಿಸ್ಟ್ರಿಕ್ಟು.

1903ನೇ ಇಸವಿ ಮಾರ್ಚಿ ತಾರೀಖು 24ರಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್, ಕೋಲಾರ ಡಿಸ್ಟ್ರಿಕ್ಟ್.

ಗೋರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.

ಸನ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ :—

ಸನ್ 1903ನೇ ಇಸವಿ ಫೆಬ್ರವರಿ ಮಾಹೆ 12ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮುನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಿಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕು, 1903ನೇ ಇಸವಿ ಫೆಬ್ರವರಿ 12ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ ಅಥವಾ ಪೇರೆ ಬಾಧ್ಯಕರ್ತರಿಂದಲಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

'ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುವರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆ ಎಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಲಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮುನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಯೆ ಮೈಸೂರು ಗೆಜೆಟಿನಲ್ಲಿ ಇಸ್ತಿಹಾರ್ ಪ್ರಕಟಣೆ ಯಾಗುವದಕ್ಕೆ ಮುಂಚೆ ಅಂದರೆ ಮೇಲ್ಕಂಡ ವಾಯಿದೆ ಒಳಗಾಗಿ ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ ಅನಂತರ ಯಾವ ಮನವಿಯೂ ತಕರಾರು ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಅಥವಾ ಗ್ರಾಮ.	ಜಮೀನಿನ ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕೋಲಾರ.	ಗೋರಿಬಿದನೂರು, ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ದಿಬ್ಬೂರು, ನಾಗರಗೆರೆ, ಗುಡಿಬಂಡೆ ಮತ್ತು ಮಂಚೇನಹಳ್ಳಿ ಹೋಬಳಿಗಳು.	11,860 ಎಕರೆಗಳು.	ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.	ಸ್ಥಳ.—ಬ್ಲಾಕು ಸ್ವಲ್ಪ ಗುಡಿಬಂಡೆ ಸಬ್ ತಾಲ್ಲೂಕಿನಲ್ಲಿಯೂ ಮತ್ತು ಸ್ವಲ್ಪ ಗೋರಿಬಿದನೂರ್ ವ ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿಯೂ ಇರುತ್ತದೆ. **ಚಕ್ಕುಬಂದಿ.** ಉತ್ತರಕ್ಕೆ.—ಜೋಡಿ ಬಂಡಹಳ್ಳಿಯ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 639 ಗಜಗಳಲ್ಲಿರುವ ಒಂದು ಸ್ಥಳದಿಂದ ಹೊರಟ ಲೈನು ಅದೇ ನಂಬರಿನ ಮಧ್ಯೆ ಮತ್ತು ತೊಕ್ಲಹಳ್ಳಿಯ ಸರ್ವೆ ನಂ. 51 ವ 24 ಇವುಗಳ ಮಧ್ಯೆ ಆಖೈರು ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಚಿಮುಕ್ಲಹಳ್ಳಿಯ ಸರ್ವೆ ನಂ. 14 ಮತ್ತು ಘಾಟಿ ಅನುಪಹಳ್ಳಿಯ ಸರ್ವೆ ನಂ. 6 ಇವುಗಳ ಮಧ್ಯೆ ಗುಡಿಬಂಡೆ ಗೋರಿಬಿದನೂರು ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸದರಿ ರಸ್ತೆಯ ಉದ್ದಕ್ಕೂ ಘಾಟಿ ಅನುಪಹಳ್ಳಿಯ ಸರ್ವೆ ನಂ. 6ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೂಲೆ ಘಾಟಿ ಅನುಪಹಳ್ಳಿಯ ಸರ್ವೆ ನಂ. 6ರ ಉತ್ತರ ಪಾರ್ಶ್ವದ ಉದ್ದಕ್ಕೂ ನಾರಾಯಣಪಹಳ್ಳಿಯ ನಂ. 23ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಉತ್ತರ ಪಾರ್ಶ್ವ ಮತ್ತು ಗುಡಿಬಂಡೆಯ ನಂ. 114ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಚೌಡಕೆಟ್ಟೆಯ ಹಳ್ಳಿಯ ನಂ. 45ರ ನೈರುತ್ಯ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಚಿಕ್ಕ ಮಲ್ಲೇನಹಳ್ಳಿಯ ನಂ. 13ರ ದಕ್ಷಿಣ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಮತ್ತು ಅದೇ ಸರ್ವೆ ನಂಬರಿನ ಮಧ್ಯೆ ಚೌಡಕೆಟ್ಟೆಹಳ್ಳಿಯ ನಂ. 45ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ನಂ. 45ರ ಉತ್ತರ ಪಾರ್ಶ್ವದ ಉದ್ದಕ್ಕೂ ನಂ. 44ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 44ರ ಮಧ್ಯೆ ಅನುಪ

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕೋಲಾರ.	ಗೋಲಬಿದನೂರು-ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ನಾರಾಯಣನಹಳ್ಳಿ, ನಾಗರಗೆರೆ, ಗುಡಿಬಂಡೆ ಮತ್ತು ಮಂಡಿಕಲ್ ಹೋಬಳಿಗಳು.	11,860 ಎಕರೆಗಳು.	ನರಸಿಂಹದೇವರ ಬೆಟ್ಟದ ಫಾರೆಸ್ಟ್ ಬ್ಲಾಕ್ ನಂ. V.	ಹಳ್ಳಿಯ ನಂ. 4ರ ಉತ್ತರ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು 1 ಫರ್ಲಾಂಗಿನಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಸರ್ವೆ ನಂ. 4 ವ 3 ಇವುಗಳ ಮಧ್ಯೆ ಅನಪಹಳ್ಳಿಯ ನಂ. 2ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಮೂಲೆಯಿಂದ ಮೂಲೆಗೆ ಸರ್ವೆ ನಂ. 2ರ ಮಧ್ಯೆ ಸರ್ವೆ ನಂ. 10ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ನಂ. 10 ವ 9 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಪೂರ್ವ ವ ನೈರುತ್ಯ ದಿಕ್ಕಾಗಿ ವಾಬಸಂದ್ರದ ನಂ. 77ವ 61 ಮತ್ತು ಗುಡಿಬಂಡೆಯ ನಂ. 117 ಇವುಗಳ ಮಧ್ಯೆ ನಂ. 114ರ ಪೂರ್ವ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆ ಮೇಲೆ ಅದರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ನಂ. 115ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ನಂ. 114ರ ಮಧ್ಯೆ ನಾರಾಮನಹಳ್ಳಿಯ ನಂ. 23ರ ಪೂರ್ವ ಮೂಲೆಗೆ ಹೋಗುತ್ತದೆ. ತರುವಾಯ ನಾರಾಮನಹಳ್ಳಿಯ ನಂ. 19 ವ 23 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಗುಡಿಬಂಡೆ-ಗೋರೀಬಿದನೂರು ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆ ಮೇಲೆ ಚದುಮ ಹಳ್ಳಿಯ ನಂ. 50 ವ 49 ಇವುಗಳ ವಾಯುವ್ಯ ಪಾರ್ಶ್ವದ ಉದ್ದಕ್ಕೂ ಅಖೈರು ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನಂ. 48 ವ 47 ಇವುಗಳ ಮಧ್ಯೆ ನಂ. 43ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮತ್ತು ಚದುಮಹಳ್ಳಿಯ ನಂ. 42–29–26 ವ 4 ಇವುಗಳ ಮಧ್ಯೆ ಹೋಗುತ್ತದೆ. ತರುವಾಯ ಚದುಮಹಳ್ಳಿಯ ನಂ. 5 ವ 6 ಇವುಗಳ ಆಗ್ನೇಯ ಪಾರ್ಶ್ವದ ಉದ್ದಕ್ಕೂ ನಂ. 24ರ ನೈರುತ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದೇ ನಂಬರಿನ ಮಧ್ಯೆ ನಾರಾಮನಹಳ್ಳಿಯ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನಾರಾಮನಹಳ್ಳಿಯ ನಂ. 1ರ ಈಶಾನ್ಯ ಪಾರ್ಶ್ವದ ಉದ್ದಕ್ಕೂ ಮತ್ತು ಗುಡಿಬಂಡೆಯ ನಂ. 91–62 ವ 61 ಇವುಗಳ ಮಧ್ಯೆ ಚಿನ್ನಹಳ್ಳಿಯ ನಂ. 26ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಚಿನ್ನಹಳ್ಳಿಯ ನಂ. 26–22–21–20 ವ 19 ಇವುಗಳ ಉತ್ತರ ಪಾರ್ಶ್ವದ ಉದ್ದಕ್ಕೂ ಅಖೈರು ನಂಬರಿನ ಉತ್ತರ ಪಾರ್ಶ್ವದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಚಿನ್ನಹಳ್ಳಿಯ ನಂ. 19–18–17 ವ 16 ಇವುಗಳ ಮಧ್ಯೆ ಹೋಗುತ್ತದೆ. ಆಮೇಲೆ ಬೀಕಲಗಾನ ದಿನ್ನೆಯ ನಂ. 5ರ ಪೂರ್ವ ಪಾರ್ಶ್ವದ ಉದ್ದಕ್ಕೂ ನಂ. 1ರ ಉತ್ತರ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಬೀಕಲಗಾನ ದಿನ್ನೆಯ ನಂ. 1 ವ 3 ಇವುಗಳ ಪಶ್ಚಿಮ ಪಾರ್ಶ್ವ ಮತ್ತು ಬೀಕಲಗಾನ ದಿನ್ನೆಯ ನಂ. 4ರ ಉತ್ತರ ಪಾರ್ಶ್ವ ಇವುಗಳ ಉದ್ದಕ್ಕೂ ನಿಮ್ಮಕಮ್ಮನಹಳ್ಳಿಯ ನಂ. 11ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಮತ್ತು ಮಾವಲಹಳ್ಳಿಯ ನಂ. 19ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಹುಂಗುಟಹಳ್ಳಿಯ ನಂ. 1ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಹುಂಗುಟನಹಳ್ಳಿಯ ನಂ. 4 ವ 2 ಇವುಗಳ ಪೂರ್ವಪಾರ್ಶ್ವದ ಉದ್ದಕ್ಕೂ ಅಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಹುಂಗುಟನಹಳ್ಳಿಯ ನಂ. 5ರ ಉತ್ತರ ಪಾರ್ಶ್ವದ ಉದ್ದಕ್ಕೂ ಗುವ್ವಲಗುಂಡಹಳ್ಳಿಯ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರು 1ರ ಮಧ್ಯೆ ಹುಂಗುಟಹಳ್ಳಿಯ ನಂ. 7ರ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಹುಂಗುಟಹಳ್ಳಿಯ ನಂ. 7ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಹುಂಗುಟಹಳ್ಳಿಯ ನಂ. 6ರ ಮಧ್ಯೆ ಚಿಂಚನಹಳ್ಳಿಯ ನಂ. 14ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಚಿಂಚನಹಳ್ಳಿಯ ನಂ. 14ರ ಮಧ್ಯೆ ಯರ್ರನಾಗೇನಹಳ್ಳಿಯ ನಂ. 11ರ ದಕ್ಷಿಣ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಯರ್ರನಾಗೇನಹಳ್ಳಿಯ ಸರ್ವೆ ನಂ. 11 ವ 18 ತೇರುಮರದ ಹಳ್ಳಿಯ ನಂ. 4 ಲಿಂಗತ್ತನಹಳ್ಳಿಯ ನಂ 2 ಅಡ್ಡಗಾಸಲಹಳ್ಳಿಯ ನಂ. 4 ವುಲವಾಕಲಹಳ್ಳಿಯ ನಂ. ನಂ. 36–28 ವ 22 ಇವುಗಳ ಮಧ್ಯೆ ವುಲವಾಕಲಹಳ್ಳಿಯ ನಂಬರು 35ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅಂಗತನಹಳ್ಳಿಯ ನಂಬರು 2 ವ 49 ಹುಲಿಕುಂಟೆಯ ನಂಬರು 86 ವ 19 ಇವುಗಳ ಮಧ್ಯೆ ಹೊರಟ ಸ್ಥಳಕ್ಕೆ ಹೋಗುತ್ತದೆ.

ಎಸ್. ಅವಿಾರ್ ಹಸೇನ್,

ಫಾರೆಸ್ಟ್ ಸೆಟಲ್‌ಮೆಂಟ್ ಮತ್ತು ಸಬ್ ಡಿವಿಜನ್ ಆಫಿಸರ್, ಚಿಕ್ಕಬಳ್ಳಾಪುರ.

ಇಸ್ತಿಹಾರನಾಮೆ.

1903ನೇ ಇಸವಿ ಮಾರ್ಚಿ ತಾರೀಖು 19ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಇದರಡೀ ಕಂಡ ಮೈಸೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ, ಬೊಂಬು ಮತ್ತು ಪಸಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜಿ ತಾರೀಖು.	ಹರಾಜಿ ನಡಿಸುವ ಅಧಿಕಾರಿ.	ಸುಮಾರು ಚೌಬೀನೆ ಮೊತ್ತಾ.												ಸುಮಾರು ಪಸಾರೆ ಜಿನಸಿ ಮೊತ್ತಾ.												ಒಟ್ಟು.
				ಸಾಗವಾನಿ ನಾಟು ಮತ್ತು ಜಂತಿ.		ಮನ್ನಾ ಜಾತಿ ನಾಟು ಮತ್ತು ಜಂತಿ.		ಕಾಡುನಾಟು ಮತ್ತು ಜಂತಿ.		ಸಾಗವಾನಿ ಸರ.		ಮನ್ನಾ ಜಾತಿ ಸರ.		ಕಾಡು ಸರ.		ಅಳಲೆಕಾಯಿ.		ಅರಗು.		ಗೋಂದು.		ಜೇನುತುಪ್ಪ.		ಜೇನು ಮ್ಯಾಣ.		ಕೊಂಬು.		
				ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಮಣ	ಪೌಂ	ಮಣ	ಪೌಂ	ಮಣ	ಪೌಂ	ಮಣ	ಪೌಂ	ಮಣ	ಪೌಂ	ಮಣ	ಪೌಂ	ಅದದು
1	ಮೈಸೂರು ವುಡಿಯಾರ್ಡು	16-4-03	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು.	338	7234	182	3294	6	125	63	72	..	...	...	...	1169	...		....	16	21	16	8	14	..	8		9226
2	ನಂಜನಗೂಡು ಡಿಪೋ	20-4-03		260	2641	36	657	123	1413	...	..	....	...	..	..	...	...	...	...	...	...	...	...	...	..	.	..	
3	ಶ್ರೀರಂಗಪಟ್ಟಣದ ಕೋಟೆ	15-4-03		...	...	..	...	..	..	...	...	...	...	..	..	2255	.	246	21	...	...	...	...	..	..	..	...	

ಷರತ್ತು:—1895ನೇ ಇಸವಿ ಮಾರ್ಚಿ 10ನೇ ಮುರ್ಕ್ಕಂ 1529—R. F. 155-92ನೇ ನಂಬರು ಇಸ್ತಿಹಾರ್ ನಾಮೆಯನ್ನು 25—4—1895ನೇ ಮುರ್ಕ್ಕಂ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತೆ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೆಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 1ನೇ ಏಪ್ರಿಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು	ಹರಾಜು ತಾರೀಖು.	ಹರಾಜು ಸ್ಥಳ.
1	ಮೊಳಕಾಲ್ಮುರು ತಾಲ್ಲೂಕು ..	23—4—1903	ಮೊಳಕಾಲ್ಮುರು ತಾಲ್ಲೂಕು ಕಚೇರಿ
2	ಹೊಳಲಕೆರೆ ತಾಲ್ಲೂಕು ...	29—5—1903	ಹೊಳಲಕೆರೆ ತಾಲ್ಲೂಕು ಕಚೇರಿ
3	ಗಂಗಾ ಕಾವಲು ..		
4	ಹೊಸದುರ್ಗದ ತಾಲ್ಲೂಕು ...	30—5—1903	ಹೊಸದುರ್ಗ ತಾಲ್ಲೂಕು ಕಚೇರಿ
5	ದಾವಣಗೆರೆ ತಾಲ್ಲೂಕು ..	2—6—1903	ದಾವಣಗೆರೆ ತಾಲ್ಲೂಕು ಕಚೇರಿ
6	ಹರಿಹರ ತಾಲ್ಲೂಕು ..	3—6—1903	ಹರಿಹರ ಸಬ್ ತಾಲ್ಲೂಕು ಕಚೇರಿ

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ತಾರೀಖು 30ರ ವರಿಗಿನ 12 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಗೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸಿದಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸಾರ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ 15 ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜೂನ್ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರೆದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಒಳಪಡಿಸಲ್ಪಡುವದು. ಈ ಲಾಗಾಯಿತು ಸೆಸ್ಸು ವಸೂಲು ಮಾಡುವದಿಲ್ಲ.

ಷ ರ ತ್ತು ಗ ಳು .

1. ಒಂದು ಪುರುಷಕ್ಕೆ ಮೇಲ್ಪಟ್ಟ ದೊಡ್ಡದಾದ ಯಾ ಸಣ್ಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.
2. ಒಂದು ಪುರುಷಕ್ಕೆ ಒಳಪಟ್ಟ ಎಳೇಗಿಡಗಳನ್ನು ಇಜಾರೆದಾರನ ನವಕರರಾಗಲಿ ಅಥವಾ ಆತನ ಷಿಕಮಿ ಕಂಟ್ರ್ಯಾಕ್ಟುದಾರರಾಗಲಿ ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಒಂದು ಸಕ್ಷನಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರ್ಯಾಕ್ಟುದಾರರುಗಳ ಹೆಸರಿನ ಒಂದು ಲಿಸ್ಟು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.

4. ತೊಬಟೆ ತೆಗದನಂತರ ಆ ಸಮ್ಮಂಧವಾದ ವಿಸಿಷ್ಟ ಸಾದೆಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣಿ ಆದಬಗ್ಯೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫಿಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ/ಹೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡೆಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿ ಜೂ೯ ಆಖೈರ್ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟುಇದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟು ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವೂ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯುಟಿ ಕಮಿಷ್ನರ್ ಸಾಹೇಬರವರಿಂದ 1,000 ಒಂದು ಸಾವಿರ ರೂಪಾಯಿವರಿಗೆ ಜುರ್ಮಾನೆ ವಿಧಿಸಲ್ಪಡುವದಕ್ಕೆ ಬದ್ಧನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

1. ಕಂದಾಯದ ಬಾಕೀದಾರನಾದ ನೆವಟೂರು ಗ್ರಾಮದ ಶ್ಯಾಮರಾವ್ ಬಿ೯ ವೆಂಕಪ್ಪಯ್ಯನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ತೀರ್ಥಹಳ್ಳಿ ತಾಲ್ಲೂಕು ಕಚೇರಿಬಳಿ ಸ೯ 1903 ನೇ ಇಸವಿ ಮೇ 25ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ಆ ದಿವಸ ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಪದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903–1904ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 500—9—8 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ೯ ಮೊಹರ್ ಮಾಡಲ್ಪಟ್ಟ ಒಂದು ಸೇಲ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ

ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಶೀಲ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕ್ರಯ.	ಜಮೀನು. ನಂಬರ ಅಥವಾ ಪೋಟನಂಬರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ. ಆ. ಪೈ.
ಶಿರ್ಶಿ	ಅಗರ	ನೆಡಗೋಡು	ಕೃಷ್ಣರಾವ ಬಿನ್ ವೆಂಕಟ್ರಾವ	..	.. (ರೂ. ಆ. ಪೈ.)	13	ಬಾಗಾಯತು	..	16	3	0	0	500—9—8
							ತರಿ	...	30	2	0	0	
						26	ಡಿಟ್ಟೋ	..	37	1	0	0	
						32	ಡಿಟ್ಟೋ	1		1	4	0	
						33	ಬಾಯತು	4	36	29	8	0	
							ಖುಷ್ಕಿ	...	12	.	...	...	
							ತರಿ	1	7	1	8	0	
						52	ಬಾಗಾಯತು	3	15	47	4	0	
							ತರಿ	..	14	1	12	0	
						101	ಡಿಟ್ಟೋ	..	37	4	0	0	
						103	ಡಿಟ್ಟೋ	..	22	2	8	0	
						104	ಬಾಗಾಯತು	..	15	3	0	0	
						105	ಡಿಟ್ಟೋ	..	6	2	12	0	
						109	ತರಿ	4	20	9	8	0	
						113–1	ಡಿಟ್ಟೋ	1	8	4	4	0	
						114	ಡಿಟ್ಟೋ	4	22	16	0	0	
						119	ಡಿಟ್ಟೋ	...	13	1	4	0	
						121	ಡಿಟ್ಟೋ	2	27	5	0	0	
						126	ಡಿಟ್ಟೋ	3	6	8	8	0	
						120	ಡಿಟ್ಟೋ	1	19	2	12	0	ಒಂದಾಣಿ ಮೊಬಲಗು 829—0—0
						125	ಡಿಟ್ಟೋ	2	25	5	0	0	
						129	ಡಿಟ್ಟೋ	...	22	1	12	0	
						127	ಡಿಟ್ಟೋ	2	28	90	0	0	
						16	ಡಿಟ್ಟೋ	1	11	3	8	0	
						18	ಖುಷ್ಕಿ	1	6	0	8	0	
							ತರಿ	2	21	6	8	0	
						20	ಖುಷ್ಕಿ	...	21	0	4	0	
							ತರಿ	.	32	1	8	0	
						24	ಡಿಟ್ಟೋ	4	23	15	0	0	
						27	ಡಿಟ್ಟೋ	2	34	9	8	0	
						28	ಡಿಟ್ಟೋ	..	10	0	12	0	
						29	ಡಿಟ್ಟೋ	3	35	13	0	0	
						30	ಡಿಟ್ಟೋ	1	4	3	8	0	
						34	ಖುಷ್ಕಿ	2	7	1	0	0	
							ತರಿ	11	24	37	0	0	
						38	ಬಾಗಾಯತು	....	2	2	0	0	
							ಖುಷ್ಕಿ	2	23	1	0	0	
							ತರಿ	8	10	27	8	0	
						40	ಡಿಟ್ಟೋ	10	11	35	0	0	
						42	ಡಿಟ್ಟೋ	..	23	2	8	0	
						48	ಡಿಟ್ಟೋ	4	19	11	0	0	
						107	ಬಾಗಾಯತು	1	31	28	0	0	
						111	ತರಿ	3	9	9	0	0	
						115	ಡಿಟ್ಟೋ	..	22	2	4	0	
						116	ಬಾಗಾಯತು	.	15	2	4	0	
							ತರಿ	1	9	1	4	0	
						117–1	ಡಿಟ್ಟೋ	2	26	9	8	0	
						118	ಡಿಟ್ಟೋ	2	13	5	0	0	
						124	ಡಿಟ್ಟೋ	1	3	3	12	0	
						ಜುಮ್ಲಾ		111	1	393	0	0	

ಸಿ. ಎಸ್. ಬಾಲಸುಂದರಂ ಅಯ್ಯರ್, ಫಾರ ಡೆಪ್ಯುಟಿ ಕಮಿಶ್ನರ.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ಅರಳೇಪೇಟೆಯಲ್ಲಿರುವ ಗಂದಿಗೆ ಬುಳ್ಳಪ್ಪನ ವಿಷಯದಲ್ಲಿ—

ಸನ್ 1902–1903ನೇ ಇಸವಿ ದಿವಾಳೀ ಕೇಸ್ ನಂಬರ್ 170.

ಅರ್ಜೀದಾರ ಗಂದಿಗೆ ಬುಳ್ಳಪ್ಪನು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಕೋರ್ಟಿನವರ ರೂಬರೂ ಅರ್ಜೀದಾರನಾದ ಬುಳ್ಳಪ್ಪನವರ ಪರವಾಗಿ ಮೆ॥ ಟಿ. ಅಪ್ಪೂರಾಯರನ್ನು ಮತ್ತು ಸದರಿಯವರ ಲೇಣೇದಾರರಾದ 1ನೇ ಸುಬ್ಬರಾಮಯ್ಯ ಹಾಜರು 2ನೇ ನೂರುಬಿ, 3ನೇ ಆಷಾಬಿ, 4ನೇ ನಂಜಪ್ಪ, 5ನೇ ಶಂಕರಪ್ಪ, 6ನೇ ಸುಬ್ಬಾಶಾಸ್ತ್ರಿ, 7ನೇ ರಾಜಪ್ಪ, 8ನೇ ಯಂಗಂಣ 2—3ನೇ ಯವರ ತರಫ್ ಗುಂಡೂರಾಯರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜೀದಾರ್ ಬುಳ್ಳಪ್ಪನವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1903ನೇ ಇಸವಿ ಮಾರ್ಚಿ 28ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ವುಂಟಾದ್ದು.	ದೇಣೆಯು ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.
1	ಬೆಂಗಳೂರು ಮಾಮೂಲ್ ಪೇಟೆಯಲ್ಲಿರುವ ಸುಬ್ಬರಾಮಯ್ಯನವರಿಗೆ.	52—11— 3	..	ಬೆಂಗಳೂರು ಪ್ರಿನ್ಸಿಪಲ್ ಮುನ್ಸಿಫ್ ಕೋರ್ಟಿನ ಸ್ಮಾಲ್‌ಕಾಸ್ 1901—1902ನೇ ಇಸವಿ 1713ನೇ ನಂಬರು ಡಿಕ್ರಿ
2	ನೂರುಬಿ, ಆಷಾಬಿ ..	2976—15— 6	..	ಬೆಂಗಳೂರು ಸಬ್ ಕೋರ್ಟು O. S. 641—99–00 ನಂಬರ್ ಡಿಕ್ರಿ
3	ಡಿಟೋ ..	152— 0— 0	...	ಮೈಸೂರು ಚೀಫ್ ಕೋರ್ಟ್ ಅಪಿಲ್ 117-901-02ನೇ ನಂಬರು ಡಿಕ್ರಿ ಮತ್ತು ಕೋರ್ಟು ಖರ್ಚು
4	ಜೇರಿಗೆ ನಂಜಪ್ಪ ..	300— 0— 0	..	ಪತ್ರದ ಮೇಲೆ
5	ಶಂಕರಂಣನವರಿಗೆ ..	135— 0— 0	...	ಲೆಖ್ಖ ಮತ್ತು ಪ್ರೊನೋಟು ಮೇಲೆ
6	ಸುಬ್ಬಾಶಾಸ್ತ್ರಿಗಳಿಗೆ ..	60— 0— 0	..	ಪ್ರಾಂಸರಿ ಮೇಲೆ ಬಡ್ಡಿ ಅಲ್ಲದೆ ಕೊಡಬೇಕು
7	ಗಂಟೆ ರಾಚಪ್ಪಯ್ಯನಿಗೆ ..	40— 0— 0	..	ಕೈಸಾಲದ ಬಗೆ
8	ಯಂಗಂಣನವರಿಗೆ ..	15— 0— 0	...	ಚೀಟಿ ಮೇಲೆ

ದಿವಾಳಿಯಾದ ಡಿಕ್ರೀ ದೇಣೇದಾರ ಸಿ. ನಾರಾಯಣರಾಯರ ವಿಷಯದಲ್ಲಿ—

ಸ್ 1902—1903ನೇ ಇಸವಿ ದಿವಾಳಿ ಕೇಸ್ ನಂಬರು 393.

ಅರ್ಜಿದಾರ ಸಿ. ನಾರಾಯಣರಾಯರು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನವರ ರೂಬರೂಬ್ ಅರ್ಜೀದಾರರಾದ ಸಿ. ನಾರಾಯಣರಾವು ಖುದ್ದು ಹಾಜರುನ್ನು ಮತ್ತು ಸದರಿಯವರ ಲೇಣೇದಾರರಾದ 1ನೇ ರಸೂಲ್‌ಖಾನ್, 2ನೇ ಬಿ. ವಿ. ರಾಮಸ್ವಾಮಿಶೆಟ್ಟು, 3ನೇ ಶ್ರೀಪತಿರಾವು, 4ನೇ ಶ್ರೀನಿವಾಸರಾವು, 5ನೇ ವೇದಾಂತ ಅಯ್ಯಂಗಾರ್ರು, 6ನೇ ವೆಂಕಟೇಶಯ್ಯ, 7ನೇ ರಾಜಪ್ಪನವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸಿ. ನಾರಾಯಣರಾಯರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟು ಇರುತ್ತೆ.

ಸ್ 1903ನೇ ಇಸವಿ ಮಾರ್ಚಿ 31ನೇ ತಾರೀಖಿನಲ್ಲಿ ಈ ಕೋರ್ಟಿನ ಮೊಹರ್ ಮತ್ತು ನಮ್ಮ ದಸ್ತಖತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ವುಂಟಾದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	ರಸೂಲ್‌ಖಾನ್‌ಸಾಬ್, ಜವಳಿ ಅಂಗಡಿ, ಬೆಂಗಳೂರು.	46— 7— 0	ಜವಳಿಸಾಲಾ	92-3ನೇ ಶಿವಿಲ್ 1588 ಮತ್ತು ಜಾರಿ 367	
2	ಬಿ. ವಿ. ರಾಮಸ್ವಾಮಿಶೆಟ್ಟು, ಅಡ್ವಿಕೇಟ್, ಬೆಂಗಳೂರು.	18— 0— 0	ಡಿಟೋ	ಜಾರಿ 368-902-03	
3	ಶ್ರೀಪತಿರಾವು ಪೇಷ್ಕರ್ ಮೋಜನಿದಾರ್ರು, ಬೆಂಗಳೂರು ಚಿಕ್ಕಪೇಟೆ.	450— 0— 0 615— 0— 0	ಮದಿವೆ ಸಾಲಾ ಡಿಟೋ	ಅಸಲ್ ಮಾತ್ರಾ C. S. 367 & 464-1901—02 13—508—209—1901-02	ಹಾಲಿ ತಕರಾರುನಲ್ಲಿ ಇರುತ್ತೆ.
4	ಶ್ರೀನಿವಾಸರಾವು, ಯಕ್ಸೈಜ್ ಆಫೀಸ್ ಕ್ಲಾರ್ಕ್ ಬೆಂಗಳೂರು ಸುಲ್ತಾನಪೇಟೆ.	22— 0— 0	..	ಉತ್ತರಕ್ರಿಯೆಗಳಿಗೋಸ್ಕರ ಕೊಡಿಸಿದ ಬಾಬತು	ಶೇಕಡಾ ಒಂದು ರೂಪಾಯಿ ನಂತೆ ಬಡ್ಡಿ ಕೊಡುವದಾಗಿ ನಿಷ್ಕರಿಷೆ ಮಾಡಿ ಇರುತ್ತೆ.
5	ವೇದಾಂತ ಅಯ್ಯಂಗಾರ್ರು ..	14— 0— 0	..	ಜವಳಿ ಸಾಲ	
6	ವೆಂಕಟೇಶಯ್ಯ ...	9— 0— 0	...	ಡಿಟೋ	
7	ರಾಜಪ್ಪ	25— 0— 0	...	ಡಿಟೋ	14 ಮಾತ್ರ ಪಾವತಿ ಆಗಿ ಇರುತ್ತೆ.

ಸ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 591.

ಅರ್ಜೀದಾರ್ರು ಮಹಮ್ಮದುಸರ್ವರು ಬೆಂಗಳೂರು ತಾಲ್ಲೂಕು ದೇವರಜೀವನಹಳ್ಳಿ ಸ್ಥಳದ ಮೈನರಾದ ಅಬ್ದುಲ್‌ಗಫೂರ್ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಅಬ್ದುಲ್‌ಗಫೂರಿಗೆ ಭಾವನು ಆಗಬೇಕೆಂಬ ಹಕ್ಕಿನ ಮೇಲೆ ಬೆಂಗಳೂರು ತಾಲ್ಲೂಕು ದೇವರಜೀವನಹಳ್ಳಿ ಸ್ಥಳದ ಮಾಹಮ್ಮದ್ ಷಿಕಂದರು ಮಗ ಮಹಮ್ಮದ್‌ಸರ್ವರ್, ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ [illegible] ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1903ನೇ ಇಸವಿ ಏಪ್ರಲ್ ತಾರೀಖು 7ರಲ್ಲು ಮೊಕರರು ಮಾಡಿ [illegible] ದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಸಿಂಗ್ರಾಚಾರ್, ಸಬ್‌ಜಡ್ಜ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 460.

ಮೃತಪಟ್ಟ ಕಿತ್ತೂರು ಸುಬ್ರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹುಣಸೂರು ತಾಲ್ಲೂಕು ಕಟ್ಟೆಮಳವಾಡಿಲಿದ್ದ ಕಿತ್ತೂರು ಸುಬ್ಬರಾಯರು ಪೌತಿ, ಇವರ ಮಗ ಅನಂತರಾಮೈಯ್ಯ ಮೈ|| ಗಾ|| ಪಾರ್ವತಮ್ಮ, ಮೃತಪಟ್ಟ ಸದರೀ ಸುಬ್ರಾಯರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾ|| ಕಟ್ಟೆಮಳವಾಡಿಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅನಂತರಾಮೈಯ್ಯ ಮೈ|| ಗಾ|| ಪಾರ್ವತಮ್ಮನ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಮಾರ್ಚಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರಿ, ಸಬ್ ಜಡ್ಜ್.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಛಾಪಿಸಲ್ಪಟ್ಟದ್ದು. [ಸಂ 15.

ಬೆಂಗಳೂರು, ಗುರುವಾರ, ಏಪ್ರಿಲ್ ತಾ|| 16, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನ್‌ಮೆಂಟು, ರೆಸಿಡೆಂಟರು, ಚೀಫ್ ಜಡ್ಜಿಯವರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಎಕ್ಸೈಜ್ ಇಲಾಖೆ.

1903–1904ನೇ ವರುಷಕ್ಕಾಗಿ ಮೈಸೂರು ಶೀಮೆಯಲ್ಲಿ ಇರತಕ್ಕ ಗಾಂಜಾ ವ ಅಫೀಂ ಅಂಗಡಿಗಳ ಹರಾಜು ನೋಟೀಸ್.

ನಂಬರು 5807–7, ತಾರೀಖು 24ನೇ ಮಾರ್ಚಿ 1903.

1. ಇದಕ್ಕೆ ಲಗತ್ತು ಮಾಡಿರುವ *ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಮಾದಕ ಪದಾರ್ಥಗಳನ್ನು 1903ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕನ್ನು ಇದರಡಿ ಕಂಡ ಷರತ್ತುಗಳಿಗೆ ಒಳಪಟ್ಟು ಸದರೀ ಪಟ್ಟಿಯಲ್ಲಿ ನಮೂದ್ಮಾಡಿರುವ ತಾರೀಖುಗಳಲ್ಲಿ ಆಯಾಯ ಡೆಪ್ಯುಟಿ ಕಮ್ಮಿಷನರವರು ಅಥವಾ ಅದಕ್ಕಾಗಿ ಅವರಿಂದ ಅಧಿಕಾರ ಹೊಂದಿದ ಅಸಿಸ್ಟೆಂಟ್ ಕಮ್ಮಿಷನರವರು ಆಯಾಯ ತಾಲ್ಲೂಕು ಕಸಬಾಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಹರಾಜಿನಲ್ಲಿ ಪ್ರತಿ ಸವಾಲುದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 5 ರೂಪಾಯಿ ಯಾ ಹರಾಜು ಮಾಡತಕ್ಕ ಅಧಿಕಾರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಗೆ ಯಾರ ಬಿಡ ದರಖಾಸ್ತು ಅಂಗೀಕರಿಸಲ್ಪಡುತ್ತೋ ಅಂಥಾವರಿಗೆ ಆ ಅಂಗಡಿಯು ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತೀ ಬಳಿಕ ಬಿಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳುಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನ್‌ಮೆಂಟಿನವರು ತಿದ್ದುಪಡಿ ಮಾಡದೆ ಇರುವ ಪಕ್ಷದಲ್ಲಿ, ಅಂಗೀಕರಿಸಿದಂತ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ಼್ ಮುಖ್ತಾರ್ ಲೇಕರನ್ನ ಕಳುಹಿಸಬೇಕು.

3. ಹರಾಜು ಪೂರೈಸಿದ ಕೂಡಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೇ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ. ಹರಾಜು ನಡೆಯುತ್ತಿರುವಾಗ ಯಾರ ಸವಾಲ್ ಅಂಗೀಕರಿಸಲ್ಪಡುತ್ತೊ ಅವರವರು ತತ್ಷಣವೇ ಆ ಅಂಗಡಿಯ ಒಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣೀ ಇಡಬೇಕು. ಇದಕ್ಕೆ ಯಾರಾದರೂ ತಪ್ಪಿದಲ್ಲಿ ಮೇಲೆ 2ನೇ ಕಲಂನಲ್ಲಿ ಕಂಡಂತ ಆತನು ಇಟ್ಟಿರುವ ಠೇವಣೀ ಮೊಬಲಗು ಸರ್ಕಾರಕ್ಕೆ ದಾಖಲಾಗಿ ಸದರೀ ಅಂಗಡಿಯು ಪುನಹ ಮೇಲೆ ನಮೂದಿಸಿರುವ ಷರತ್ತುಗಳಿಗನುಸಾರವಾಗಿ ಹರಾಜಾಗುವದಲ್ಲದೆ ಆತನು ಈ ಅಂಗಡಿ ಯಾ ಇತರ ಅಂಗಡಿಗಳನ್ನು ಸವಾಲ್ ಮಾಡಕೂಡದು.

4. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ನಿಂತು ಮೇಲಿನ 2 ವ 3ನೇ ಕಲಂಗಳಲ್ಲಿ ಕಂಡಂತೆ ಠೇವಣೀ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟಿರುವ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಿಗಳಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ಠೇವಣಿ ಕಟ್ಟಿ ವಿಧಾಯಕವಾದ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸ್‌ಗಳನ್ನ ಪಡೆಯುತಕ್ಕದ್ದು, ಮತ್ತು ಒಂದು ಎದುರು ಒಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತಿಯಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರ ಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಇತರ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

---

* ಸಂ——ನೇ 1903ನೇ ಇಸವಿ ಏಪ್ರಿಲ್ ತಾರೀಖು 2ನೇ ಮೈಸೂರು ಗಜೆಟ್ IIನೇ ಭಾಗ ಪುಟಗಳು 116ರಿಂದ 125ರ ವರೆಗೆ ಷೆಡ್ಯೂಲ್ ಛಾಪಿಸಿಲ್ಪಟ್ಟಿರುತ್ತೆ.

5. ಮೇಲಿನ 4ನೇ ಕಲಂ ಅನುಸರಿಸಿ ನಡೆಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರಿಮೇಲೆ ನಡೆಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೆ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಬಟ್ಟು ಮೊಬಲಗಿನ ಪೈಕಿ ದುಸರೇ ಹರಾಜಿನದ್ದರಲ್ಲಿ ಬಿಡಕವಾಲ್‌ದಾರನು ಕೊಡಬೇಕಾದ ಬಟ್ಟು ಮೊಬಲಗು ಜಾತಾ ಬಾಕಿ ಉಳಿಯುವದನ್ನು ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು.

6. ಮೇಲಿನ 4ನೇ ಕಲಂನಲ್ಲಿ ಕಂಡವರಿಗೆ ಕೊಡಬೇಕಾದ ಲೈಸೆನ್ಸ ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಬಳಪಟ್ಟಿರತಕ್ಕದ್ದು:—

(1) ಸದರೀ ಬಟ್ಟು ಸ್ವತಂತ್ರದ ಹಕ್ಕನ್ನು ಪಡಕೊಂಡದ್ದಕ್ಕೆ ಕೊಡಬೇಕಾದ ಮೊಬಲಗನ್ನು ವಿಧಾಯಕವಾದ ಚೆರ್ಲನಲ್ಲಿ ತಾಲ್ಲೂಕು ಖಜಾನೆಗೆ 1903ನೇ ಇಸವಿ ಜುಲೈ ಮಾಹೆ ಲಾಗಾಯತು ಸರಿಯಾದ ತಿಂಗಳಂಗಟ್ಟೆ ಖಿಸ್ತು ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿಯೊಂದು ಖಿಸ್ತು ಯಾವ ತಿಂಗಳಿಗೆ ಪಾವತಿ ಆಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗೆಂದು ಭಾವಿಸಲ್ಪಡತಕ್ಕದ್ದು. ಪ್ರತಿಯೊಂದು ತಿಂಗಳ ಗುತ್ತಿಗೆ ಮೊಬಲಗು ಇದಕ್ಕಾಗಿ ಗೊತ್ತಾಗಿರುವ ಚೆರ್ಲ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚಿತವಾಗಿ ಪಾವತಿಯಾಗತಕ್ಕದ್ದು. ಅಂಥಾ ಮೊಬಲಗು 1 ರೂಪಾಯಿಗಳಿಗೆ ಕಮ್ಮಿಯಾಗಿದ್ದರೆ ಮೂರು ಖಿಸ್ತುಗಳಿಗೆ ಅತಿಕ್ರಮಿಸದಂತೆ ಪಾವತಿ ಮಾಡಲ್ಪಡಬೇಕು. ಲೈಸೆನ್ಸದಾರನಿಂದ ಠೇವಣಿ ಇಡಲ್ಪಟ್ಟಿರುವ 2 ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಖಿಸ್ತುಗಳಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಸದರೀ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರಿಯಲ್ಲಿರುವ ನಿಬಂಧನೆಗಳ ಪ್ರಕಾರ ನೂರುಕ್ಕೆ ಸೇಕಡ 6 ರೂಪಾಯಿಯಂತೆ ಬಡ್ಡಿ ಸಹ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(2) ಲೈಸೆನ್ಸದಾರನು ಯಾವದಾದರೂ ಬಾಂಡೆಡ್ ಡಿಪೋದಿಂದ ಗಾಂಜಾ 80 ತೊಲೆಗಳುಳ್ಳ ಶೇರು 1ಕ್ಕೆ ರೂಪಾಯಿ 0—13—4 ಪ್ರಕಾರವೂ, ಮಾಜುಂ ರೂ. 0—5—4 ಪ್ರಕಾರವೂ ಖರೀದಿ ಕೊಟ್ಟು ಸದರಿ ಪದಾರ್ಥಗಳನ್ನು ಕೊಂಡುಕೊಳ್ಳತಕ್ಕದ್ದು.

(3) ಮೇಲ್ಕಂಡ ಖರೀದಿ ಶಿವಾಯಿ, ಗಾಂಜಾ ಶೇರು 1ಕ್ಕೆ (ಲೋಕಲ್ ಸೆಸ್ ಸಹಿತವಾಗಿ) ರೂ. 3—6—8 ದರದಂತೆ ಯೂ, ಮಾಜುಂ ಶೇರು 1ಕ್ಕೆ ರೂ. 0—11—8 ದರದಂತೆಯೂ ಡ್ಯೂಟಿ ಯಾ ಹಾಸಲನ್ನು ತಾಲ್ಲೂಕು ಖಜಾನೆಗೆ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರ ಅನುಮತಿಮೇಲೆ ಬೇರೆ ಇತರ ಸರ್ಕಾರದ ಖಜಾನೆಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(4) ಲೈಸೆನ್ಸದಾರನಿಂದ ಮಾರಲ್ಪಡುವ ಗಾಂಜಾ ಒಳ್ಳೇ ಗುಣವುಳ್ಳದ್ದಾಗಿಯೂ, ಬೆರಿಕೆ ಇಲ್ಲದ್ದಾಗಿಯೂ, ಇರತಕ್ಕದ್ದು. ಮತ್ತು ಗಾಂಜಾ 80 ತೊಲೆ ಶೇರು ಒಂದಕ್ಕೆ 5 ರೂಪಾಯಿ ಪ್ರಕಾರವೂ, ಮಜುಂ ಶೇರು 1ಕ್ಕೆ ರೂ. 1—10—8 ಪ್ರಕಾರವೂ, ಅತನಿಂದ ವಿಕ್ರಯಿಸಲ್ಪಡತಕ್ಕದ್ದು. ಮತ್ತು ಹಾಜರಿರುವ ತಮಾಮು ಗಾಂಜಾ ಮತ್ತು ಮಾಜುಂ ಲೈಸೆನ್ಸು ಪಡೆದ ದುಕಾನ್‌ನಲ್ಲಿ ಇಡಲ್ಪಡತಕ್ಕದ್ದೇಹೊರತು ಯಾವ ಸಬಬಿಂದಲೂ ವಿಶೇಷ ಅಪ್ಪಣೆ ಇಲ್ಲದೆ ಅನ್ಯತ್ರ ಎಲ್ಲಿಯೂ ಇಡಲ್ಪಡತಕ್ಕದ್ದಲ್ಲವು.

(5) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ತ್ರಾಸು ವ ಬಟ್ಟುಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲಕ್ಕ ಮುಪತ್ ಪದಾರ್ಥಗಳನ್ನು ಸಾಗಿಸುವ ಬಗ್ಗೆ ಬೇಕಾದ ರಹದಾರೀ ಅಥವಾ ಪಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(6) ಲೈಸೆನ್ಸದಾರನು 1903ನೇ ಇಸವಿ ಜುಲೈ ಗುರ್ರೆಯಲ್ಲಿ ಹಳೇ ಲೈಸೆನ್ಸದಾರನ ಬಾಬತು ಸದರೀ ಅಂಗಡಿಯಲ್ಲಿ ದಾಸ್ತಾನ್ ಇರತಕ್ಕದಾದ ಮುದತ್ ಪದಾರ್ಥಗಳನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿ ಮಾಡಿ ತೆಗದುಕೊಳ್ಳಬೇಕಾದ್ದು ಗುರಿಯಾಗತಕ್ಕದ್ದು.

(7) ಲೈಸೆನ್ಸದಾರನು ಹಾಲಿ ಜಾರಿಯಲ್ಲಿರುವ ನಿಬಂಧನೆಗಳು ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಂದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡದುಕೊಳ್ಳಲು ಬದ್ಧನಾಗಿರತಕ್ಕದ್ದು.

(8) ಬಾಕಿ ಕರಾರುಗಳು ವ ಷರತ್ತುಗಳು ವಿಧಾಯಕವಾಗಿರುವ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸದಾರನು ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಸೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನ ತಗೆಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮಿಷನರವರ ಇಷ್ಟಾನುಸಾರ ಖಜಾನೆಯಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರ್ಕಾರಕ್ಕೆ ದಾಖಲ್ಮಾಡಿಕೊಂಡು ಮತ್ತೊಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರವಿಧವಾಗಿ ವಿಲೆ ಮಾಡಲಿಕ್ಕೂ ಡೆಪ್ಯುಟಿ ಕಮಿಷನರವರು ಮುಖ್ತ್ಯಾರರಾಗಿರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ ರದ್ದು ಮಾಡಲ್ಪಟ್ಟರೆ ಪೂರಾ ಕಾಲದ ಗುತ್ತಿಗೆ ಹಣವು ಕೂಡ್ಲೆ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು. ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡತಕ್ಕದ್ದು.

8. ಮೇಲಿನ ಹಿಂಬನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರಿಯಲ್ಲಿರುವ ಎಕ್ಸೈಜ್ ಕಾನೂನ್ ಯಾ ನಿಬಂಧನೆಗಳಿಗೆ ವಿರೋಧವಾಗಿ ನಡಿಸಿದ ತಪ್ಪಿಗೆ ಲೈಸೆನ್ಸದಾರನನ್ನಾಗಲಿ ಯಾ ಆತನ ನೌಕರನನ್ನಾಗಲಿ ಆಪಾದಿಸಿ ದಿವ್ಯಾಫ್ತ ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮಿಷನರ್.

ಫಾರೆಸ್ಟ ಇಲಾಖಾ.

ನೋಟಿಫಿಕೇಷನ್.

ತಾರೀಖು 7ನೇ ಏಪ್ರೈಲ್ 1903.

1.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,— ಈ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಸ್ಟೇಟ ಫಾರೆಸ್ಟ ಮತ್ತು ಪ್ಲಾನ್ಟೇಷನ್‌ಗಳು ಅಮೃತಮಹಲ್ ಕಾವಲುಗಳು ಶೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನುಗಳಲ್ಲಿಯೂ ಸಹ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1903ನೇ ಜುಲೈ ಗುರ್ರು ಲಾಗಾಯತು 1904ನೇ ಇಸವಿ ಜೂನ್ ಆಖೈರ ವರೆಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1903ನೇ ಇಸವಿ ಜೂನ್ ತಾರೀಖು 10ರಲ್ಲಿ ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫೀಸರವರೊಂದಿಗೆಯಾಗಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸರವರು ತಾಲ್ಲೂಕುವಾರ್ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸುತ್ತಾರೆ.

1-7—1903ರ ಲಾಗಾಯತು 30—6--1904ರ ವರೆಗೆ.

1 ಕಾನಕಾನಹಳ್ಳಿ. | 2 ಆನೇಕಲ್.

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಚಡವರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯುಟಿ ಕಮಿಷನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡದ ಏಜಂಟ್ ಯಾ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡ ದರಖಾಸ್ತುದಾರು ಹರಾಜು ಮಂಜೂರಾದ ಸಂಗತಿ ತಮ್ಮಗೆ ತಿಳಿಸಿದ ಮೂರು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ ಮೊಬಲಗು ಸೇರಿಸಿ ಬಟ್ಟು ಹರಾಜು ಮೊಬಲಗಿನ ಕೆಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟ ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫೀಸರಿಂದ ಸದರೀ ಬಾಬ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಐದು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದು ಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸಸ್ ಸಹ ಸಮವಾದ ಮೂರು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1903ನೇ ಇಸವಿ ಅಕ್ಟೋಬರ್ 1ನೇ ತಾರೀಖು, 2ನೇ ಖಿಸ್ತು 1904ನೇ ಇಸವಿ ಜನವರಿ 1ನೇ ತಾರೀಖು, 3ನೇ ಖಿಸ್ತು 1904ನೇ ಇಸವಿ ಏಪ್ರೈಲ್ 1ನೇ ತಾರೀಖು ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣೆ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮೀ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣಿ ಬಗ್ಗೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರದಾರನು ಕೊಡತಕ್ಕದ್ದು.

(4) ತೊಗಟೆ ತೆಗೆದ ನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾದೆಯು ಇಜಾರದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟ್ ಅಥವಾ ಪ್ಲಾಂಟೇಷನ್ನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟು ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟು ಯಾ ಪ್ಲಾಂಟೇಷನ್‌ಗಳ ಭಾಗಗಳಲ್ಲಿ ಚಕ್ಕೆ ಜಮಾವಣಿ ಕೆಲಸ ನಡಿಸಕೂಡದು.

(7) ಇಜಾರ ಮೇರೆಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಸೀಲ್ ಕಾಣುವ ಲೆಖ್ಖಗಳನ್ನು ಇಜಾರದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರದಾರನು ಪ್ಯಾಸ್ ಪಡಿಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋಠಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15—7—1904 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಒಂದು ಷರತ್ತಿಗೆ ಇಜಾರದಾರನು ತಪ್ಪಿ ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿವಿಗೂ ಜಮಾಯಿಸಿ ಇರುವ ವಿಸಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು. ಮತ್ತು ಇಜಾರದಾರನಿಂದ ಖಾತರಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ಟಿ. ಅಬ್ದುಲ್ ಕರೀಂ,

ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಸ್ ತಾರೀಖು 24ನೇ ಮಾರ್ಚಿ 1903ನೇ ಇಸವಿ.

ಶ್ರೀನಿವಾಸಪುರದ ರೇಂಜ್ ರಾಯಲ್‌ಪಾಡ್ ಫಾರೆಸ್ಟು ಗಾರ್ಡ್‌ಆಗಿ ಇದ್ದ ಹಾಲಿ ಮೃತಪಟ್ಟಿರುವ ಸುಬ್ರಹ್ಮಣ್ಯಯ್ಯ ಎಂಬಾತನು ಕಳೆದ ನವೆಂಬರ್ ಗ.ರೆ ತಾರೀಖು ಲಾಗಾಯತು 27ರ ವರಿಗೆ ಈ ಇಲಾಖೆಯಲ್ಲಿ ಕೆಲಸ ಮಾಡಿದ 27 ರೋಜುಗಳ ತಲಬು ಮಾಹೆಯಾನಾ ಎಂಟು ರೂಪಾಯಿ ನಂತ ಆಗುವ 7—3—2 ಪೈ ಮೇಲ್ಕಂಡ ಸುಬ್ರಹ್ಮಣ್ಯಯ್ಯನಿಗೆ ಪಾವತಿ ಆಗದೆ ಶ್ರೀನಿವಾಸಪುರದ ಫಾರೆಸ್ಟು ರೇಂಜಾಫಿಸಿನಲ್ಲಿ ಅಮಾನತ್ತಿನಲ್ಲಿರುತ್ತೆ. ಮೇಲ್ಕಂಡ ಮೊಬಲಗನ್ನು ಈ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಹಕ್ಕು ಇರತಕ್ಕವರು ತೆಗದುಕೊಂಡುಹೋಗದಿದ್ದರೆ ಸದರಿ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

ಎಂ. ವೆಂಕಟನಾರಣಪ್ಪ,

ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

1903ನೇ ಇಸವಿ ಮಾರ್ಚಿ ತಾರೀಖು 24ರಲ್ಲು.

ಫಾರೆಸ್ಟ್ ಸೆಟ್ಲಮೆಂಟ್, ಕೋಲಾರ ಡಿಸ್ಟ್ರಿಕ್ಟ್.

ಗೌರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.

ಸನ್ 1901ನೇ ಇಸವಿ 11ನೇ ಖಾನೂನಾದ ಮೈಸೂರ್ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—

ಸನ್ 1903ನೇ ಇಸವಿ ಫೆಬ್ರುವರಿ ಮಾಹೆ 12ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟದೆಯಾದ್ದರಿಂದ, ಈ ಇ

ಸ್ತಿಹಾರು ಛಾಯಿಸ್ಪಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಿಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕು, 1903ನೇ ಇಸವಿ ಫೆಬ್ರುವರಿ 12ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ ಅಥವಾ ಬೇರೆ ಬಾಧ್ಯಕರ್ತರಿಂದಲಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲಮೆಂಟ್ ಆಫೀಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶವಲ್ಲಿ ಯಾವ ಕಡಿಮಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲಮೆಂಟ್ ಆಫೀಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲಮೆಂಟ್ ಆಫೀಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆ ಎಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಛಾಯಿಸ್ಪಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲಮೆಂಟ್ ಆಫೀಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಲಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟು ರೆಗ್ಯುಲೇಷ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರು ಗೆಜೆಟಿನಲ್ಲಿ ಇಸ್ತಿಹಾರ್ಪ್ರಕಟಣೆ ಯಾಗುವದಕ್ಕೆ ಮುಂಚೆ ಅಂದರೆ ಮೇಲ್ಕಂಡ ಮಾಯಿದೆ ಒಳಗಾಗಿ ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೋ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ ಅನಂತರ ಯಾವ ಮನವಿಯೂ ತಕರಾರು ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಮ್ಯಾಪಿನ ನಂಬರು.	ಸ್ಥಳ ವ ಚಕ್ಕುಬಂದಿ.
ಕೋಲಾರ.	ಗೋರಿಬಿದನೂರು.ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ಮುಂಡಾಮುಕನಹಳ್ಳಿ, ನಾಗರಗೆರೆ, ಗುಡಿಬಂಡೆ ಮತ್ತು ಸೋಮೇನಹಳ್ಳಿ ಹೋಬಳಿಗಳು.	11,860 ಎಕರೆಗಳು.	ಸರ್ವೇ ಡಿಪಾರ್ಟ್ಮೆಂಟಿನ ಮ್ಯಾಪು ನಂ. V.	ಸ್ಥಳ.—ಬ್ಲಾಕು ಸ್ವಲ್ಪಗುಡಿಬಂಡೆ ಸಬ್ ತಾಲ್ಲೂಕಿನಲ್ಲಿಯೂ ಮತ್ತು ಸ್ವಲ್ಪ ಗೋರಿಬಿದನೂರ ವ ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿಯೂ ಇರುತ್ತದೆ. ಚಕ್ಕುಬಂದಿ. ಉತ್ತರಕ್ಕೆ.—ಜೋಡಿ ಬಂಡಹಳ್ಳಿಯ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅವರ, ವಾಯುವ್ಯ ಮೂಲೆಯಿಂದ ಸ.ಮಾರು 639 ಗಜಗಳಲ್ಲಿರುವ ಒಂದು ಸ್ಥಳದಿಂದ ಹೊರಟ ಲೈನು ಅದೇ ನಂಬರಿನ ಮಧ್ಯೆ ಮತ್ತು ತೊಕಲಹಳ್ಳಿಯ ಸರ್ವೆ ನಂ. 51 ವ 24 ಇವುಗಳ ಮಧ್ಯೆ ಆಖೈರು ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಚಿಮುಕಹಳ್ಳಿಯ ಸರ್ವೆ ನಂ. 11 ಮತ್ತು ಘಾಟ ಅನುಪಹಳ್ಳಿಯ ಸರ್ವೆ ನಂ. 6 ಇವುಗಳ ಮಧ್ಯೆ ಗುಡಿಬಂಡೆ ಗೋರಿಬಿದನೂರು ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸದರಿ ರಸ್ತೆಯ ಉದ್ದಕ್ಕೂ ಘಾಟ ಅನುಪಹಳ್ಳಿಯ ಸರ್ವೆ ನಂ. 6ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೂಲೆ ಘಾಟ ಅನುಪಹಳ್ಳಿಯ ಸರ್ವೆ ನಂ. 6ರ ಉತ್ತರ ಪಾರ್ಶ್ವದ ಉದ್ದಕ್ಕೂ ನಾರಾಯಣಹಳ್ಳಿಯ ನಂ. 23ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಉತ್ತರ ಪಾರ್ಶ್ವ ಮತ್ತು ಗುಡಿಬಂಡೆಯ ನಂ. 114ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಚೌಡಶೆಟ್ಟಿಯ ಹಳ್ಳಿಯ ನಂ. 45ರ ನೈರುತ್ಯ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಚಿಕ್ಕ ಮಲ್ಲೇನಹಳ್ಳಿಯ ನಂ. 13ರ ದಕ್ಷಿಣ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಮತ್ತು ಅದೇ ಸರ್ವೆ ನಂಬರಿನ ಮಧ್ಯೆ ಚೌಡಶೆಟ್ಟಿಹಳ್ಳಿಯ ನಂ. 45ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ನಂ. 45ರ ಉತ್ತರ ಪಾರ್ಶ್ವದ ಉದ್ದಕ್ಕೂ ನಂ. 44ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 44ರ ಮಧ್ಯೆ ಅನಪ

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕೋಲಾರ.	ಗೋರಿಬಿದನೂರು-ಚಿಕ್ಕ ಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ದಾರಿನಾಯಿಕನಪಾಳ್ಯ, ನಾಗರಗೆರೆ, ಗುಡಿಬಂಡೆ ಮತ್ತು ಮಂಡಿಕಲ್ ಹೋಬಳಿಗಳು.	11,860 ಎಕರೆಗಳು.	ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.	ಹಳ್ಳಿಯ ನಂ. 4ರ ಉತ್ತರ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು 1 ಫರ್ಲಾಂಗಿನಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಸರ್ವೆ ನಂ. 4 ವ 3 ಇವುಗಳ ಮಧ್ಯೆ ಅನಪಹಳ್ಳಿಯ ನಂ. 2ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಮೂಲೆಯಿಂದ ಮೂಲೆಗೆ ಸರ್ವೆ ನಂ. 2ರ ಮಧ್ಯೆ ಸರ್ವೆ ನಂ. 10ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ನಂ. 10 ವ 9 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಪೂರ್ವ ವ ನೈರುತ್ಯ ದಿಕ್ಕಾಗಿ ವಾಬಸಂದ್ರದ ನಂ. 77ವ 61 ಮತ್ತು ಗುಡಿಬಂಡೆಯ ನಂ. 117 ಇವುಗಳ ಮಧ್ಯೆ ನಂ. 114ರ ಪೂರ್ವ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆ ಮೇಲೆ ಅದರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ನಂ. 115ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ನಂ. 114ರ ಮಧ್ಯೆ ನಾರಾಮನಹಳ್ಳಿಯ ನಂ. 23ರ ಪೂರ್ವ ಮೂಲೆಗೆ ಹೋಗುತ್ತದೆ. ತರುವಾಯ ನಾರಾಮನಹಳ್ಳಿಯ ನಂ. 19 ವ 23 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಗುಡಿಬಂಡೆ ಗೋರೀಬಿದನೂರು ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆ ಮೇಲೆ ಚದುಮ ಹಳ್ಳಿಯ ನಂ. 50 ವ 49 ಇವುಗಳ ವಾಯುವ್ಯ ಪಾರ್ಶ್ವದ ಉದ್ದಕ್ಕೂ ಅಖೈರು ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನಂ. 48 ವ 47 ಇವುಗಳ ಮಧ್ಯೆ ನಂ. 43ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮತ್ತು ಚದುಮಹಳ್ಳಿಯ ನಂ. 42-29-26 ವ 4 ಇವುಗಳ ಮಧ್ಯೆ ಹೋಗುತ್ತದೆ. ತರುವಾಯ ಚದುಮಹಳ್ಳಿಯ ನಂ. 5 ವ 6 ಇವುಗಳ ಆಗ್ನೇಯ ಪಾರ್ಶ್ವದ ಉದ್ದಕ್ಕೂ ನಂ. 24ರ ನೈರುತ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದೇ ನಂಬರಿನ ಮಧ್ಯೆ ನಾರಾಮನಹಳ್ಳಿಯ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನಾರಾಮನಹಳ್ಳಿಯ ನಂ. 1ರ ಈಶಾನ್ಯ ಪಾರ್ಶ್ವದ ಉದ್ದಕ್ಕೂ ಮತ್ತು ಗುಡಿಬಂಡೆಯ ನಂ. 91-62 ವ 61 ಇವುಗಳ ಮಧ್ಯೆ ಚಿನ್ನಹಳ್ಳಿಯ ನಂ. 26ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಚಿನ್ನಹಳ್ಳಿಯ ನಂ. 26-22-21-20 ವ 19 ಇವುಗಳ ಉತ್ತರ ಪಾರ್ಶ್ವದ ಉದ್ದಕ್ಕೂ ಅಖೈರು ನಂಬರಿನ ಉತ್ತರ ಪಾರ್ಶ್ವದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಚಿನ್ನಹಳ್ಳಿಯ ನಂ. 19-18-17 ವ 16 ಇವುಗಳ ಮಧ್ಯೆ ಹೋಗುತ್ತದೆ. ಆಮೇಲೆ ಬೀಕಲಗಾನ ದಿನ್ನೆಯ ನಂ. 5ರ ಪೂರ್ವ ಪಾರ್ಶ್ವದ ಉದ್ದಕ್ಕೂ ನಂ. 1ರ ಉತ್ತರ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಬೀಕಲಗಾನ ದಿನ್ನೆಯ ನಂ. 1 ವ 3 ಇವುಗಳ ಪಶ್ಚಿಮ ಪಾರ್ಶ್ವ ಮತ್ತು ಬೀಕಲಗಾನ ದಿನ್ನೆಯ ನಂ. 4ರ ಉತ್ತರ ಪಾರ್ಶ್ವ ಇವುಗಳ ಉದ್ದಕ್ಕೂ ನಿಮ್ಮಕೊಮ್ಮೇನಹಳ್ಳಿಯ ನಂ. 11ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಮತ್ತು ಮಾವಲಹಳ್ಳಿಯ ನಂ. 19ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಹುಂಗುಟಹಳ್ಳಿಯ ನಂ. 1ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಹುಂಗುಟನಹಳ್ಳಿಯ ನಂ. 4 ವ 2 ಇವುಗಳ ಪೂರ್ವಪಾರ್ಶ್ವದ ಉದ್ದಕ್ಕೂ ಅಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರವಾಯ ಹುಂಗುಟನ ಹಳ್ಳಿಯ ನಂ. 5ರ ಉತ್ತರ ಪಾರ್ಶ್ವದ ಉದ್ದಕ್ಕೂ ಗುಮ್ಮಲಗುಂಡಹಳ್ಳಿಯ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರು 1ರ ಮಧ್ಯೆ ಹುಂಗುಟಹಳ್ಳಿಯ ನಂ. 7ರ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಹುಂಗುಟಹಳ್ಳಿಯ ನಂ. 7ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಹುಂಗುಟಹಳ್ಳಿಯ ನಂ. 6ರ ಮಧ್ಯೆ ಚಿಂಚನಹಳ್ಳಿಯ ನಂ. 14ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಚಿಂಚನಹಳ್ಳಿಯ ನಂ. 14ರ ಮಧ್ಯೆ ಯರ್ರನಾಗೇನಹಳ್ಳಿಯ ನಂ. 11ರ ದಕ್ಷಿಣ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಯರ್ರನಾಗೇನಹಳ್ಳಿಯ ಸರ್ವೆ ನಂ. 11 ವ 18 ತೇರುಮರದ ಹಳ್ಳಿಯ ನಂ. 4 ಲಿಂಗಬ್ಬನ ಹಳ್ಳಿಯ ನಂ. 2 ಅಡ್ಡಗಾಸಲಹಳ್ಳಿಯ ನಂ. 4 ವುಲವಾಕ್ಲಹಳ್ಳಿಯ ನಂ. ನಂ. 36-28 ವ 22 ಇವುಗಳ ಮಧ್ಯೆ ವುಲವಾಕ್ಲಹಳ್ಳಿಯ ನಂಬರು 35ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅಂಗತನಹಳ್ಳಿಯ ನಂಬರು 2 ವ 49 ಹುಲಿಕುಂಟೆಯ ನಂಬರು 86 ವ 19 ಇವುಗಳ ಮಧ್ಯೆ ಹೊರಟ ಸ್ಥಳಕ್ಕೆ ಹೋಗುತ್ತದೆ.

ಎಸ್. ಅವಿರಾರ್ ಹರ್ನೇ,

ಫಾರೆಸ್ಟು ಸೆಟಲ್‌ಮೇಂಟ್ ಮತ್ತು ಸಬ್ ಡಿವಿಜನ್ ಆಫೀಸರ್, ಚಿಕ್ಕ ಬಳ್ಳಾಪುರ.

ಇಸ್ತಿಹಾರನಾಮೆ.

1903ನೇ ಇಸವಿ ಮಾರ್ಚಿ ತಾರೀಖು 19ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಇದರಡೀ ಕಂಡ ಮೈಸೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ, ಬೊಂಬು ಮತ್ತು ಪಸಾರೆ ಜಿನಸಿಗಳನ್ನು ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಅಧಿಕಾರರು.	ಸುಮಾರು ಚೌಬೀನೆ ಮೊತ್ತ.												ಸುಮಾರು ಪಸಾರೆ ಜಿನಸಿ ಮೊತ್ತ.												ಮೊತ್ತ.
				ಸಾಗವಾನಿ ನಾಟಾ ಮತ್ತು ಜಂತಿ.		ಮನ್ನಾಜಾತಿ ನಾಟಾ ಮತ್ತು ಜಂತಿ.		ಕಾಡುನಾಟಾ ಮತ್ತು ಜಂತಿ.		ಸಾಗವಾನಿ ಸರ.		ಮನ್ನಾಜಾತಿ ಸರ.		ಕಾಡು ಸರ.		ಆಳಲೆಕಾಯಿ.		ಅರಗು.		ಗೋಂದು.		ಜೇನುತುಪ್ಪ.		ಜೇನು ಮ್ಯಾಣ.		ಕೊಂಬು.		
				ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಮಣ	ಪೌ	ಅದದು
1	ಮೈಸೂರು ಪುಡಿಯಾರ್ಡು	16–4–03	ಡಿಸ್ಟ್ರಿಕ್ಟ್ ಫಾರೆಸ್ಟ್ ಅಧಿಕಾರರು.	338	7234	182	3294	6	125	63	72	..	...	....	...	1169	...	..	....	16	21	16	8	14	..	8	.	9226
2	ನಂಜನಗೂಡು ಡಿಪೋ	20–4–03		260	2641	36	657	123	1413	...	..	....	...	..	..	...	...	...	...	...	...	...	...	...	..	.	..	
3	ಶ್ರೀರಂಗಪಟ್ಣದ ಕೋಠಿ	15–4–03		...	...	..	...	..	..	...	...	...	...	..	..	2255	..	246	21	...	...	...	...	..	..	..	...	

ಪರತ್ತು:—1895ನೇ ಇಸವಿ ಮಾರ್ಚಿ 10ನೇ ಮುರ್ಕ್ಕಂ 1529—R. F. 155–92ನೇ ನಂಬರು ಇಸ್ತಿಹಾರ್ ನಾಮೆಯನ್ನ 25—4—1895ನೇ ಮುರ್ಕ್ಕಂ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತೆ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 1ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರ ಬಂಜರ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ:—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು	ಹರಾಜು ತಾರೀಖು.	ಹರಾಜು ಸ್ಥಳ.
1	ಮೊಳಕಾಲ್ಮುರು ತಾಲ್ಲೂಕು ..	23—4—1903	ಮೊಳಕಾಲ್ಮುರು ತಾಲ್ಲೂಕು ಕಚೇರಿ
2	ಹೊಳಲಕೆರೆ ತಾಲ್ಲೂಕು ...	29—5—1903	ಹೊಳಲಕೆರೆ ತಾಲ್ಲೂಕು ಕಚೇರಿ
3	ಗೆರಗಾ ಕಾವಲು ..		
4	ಹೊಸದುರ್ಗದ ತಾಲ್ಲೂಕು ...	30—5—1903	ಹೊಸದುರ್ಗ ತಾಲ್ಲೂಕು ಕಚೇರಿ
5	ದಾವಣಗೆರೆ ತಾಲ್ಲೂಕು ..	2—6—1903	ದಾವಣಗೆರೆ ತಾಲ್ಲೂಕು ಕಚೇರಿ
6	ಹರಿಹರ ತಾಲ್ಲೂಕು ..	3—6—1903	ಹರಿಹರ ಸಬ್ ತಾಲ್ಲೂಕು ಕಚೇರಿ

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ತಾರೀಖು 30ರ ವರಿಗಿನ 12 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಖೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಯೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ 15 ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜೂನ್ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರೆದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಒಳಪಡಿಸಲ್ಪಡುವದು. ಈ ಲಾಗಾಯಿತು ಸೆನ್ಸು ವಸೂಲು ಮಾಡುವದಿಲ್ಲ.

ಷ ರ ತ್ತು ಗ ಳು.

1. ಒಂದು ವರುಷಕ್ಕೆ ಮೇಲ್ಪಟ್ಟ ದೊಡ್ಡದಾದ ಯಾ ಸಂಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.
2. ಒಂದು ವರುಷಕ್ಕೆ ಒಳಪಟ್ಟ ಎಳೇಗಿಡಗಳನ್ನು ಇಜಾರೆದಾರನ ನವಕರರಾಗಲಿ ಅಥವಾ ಆತನ ಷಿಕಿಮಿ ಕಂಟ್ರಾಕ್ಟುದಾರರಾಗಲಿ ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಒಂದು ಸರ್ಕಲಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಿಮಿ ಕಂಟ್ರಾಕ್ಟುದಾರರುಗಳ ಹೆಸರಿನ ಒಂದು ಲೀಸ್ಟು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.

4. ತೊಬಟೆ ತೆಗೆದನಂತರ ಆ ಸಮ್ಮಂಧವಾದ ವಿಸಿಷ್ಟ ಆದಾಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣೆ ಆದಬಗ್ಗೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫೀಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡೆಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿ ಜೂನ್ ಆಖೈರ್ ಒಳಗಾಗಿ ಜಮಾಯಿಸಿ ರಾಸ್ತಾನು ಇಟ್ಟುಇದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟ್ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯು ಹಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವೂ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯುಟಿ ಕಮಿಷನರುಸಾಹೇಬರವರಿಂದ 1,000 ಒಂದು ಸಾವಿರ ರೂಪಾಯಿವರಿಗೆ ಜುರ್ಮಾನೆ ವಿಧಿಸಲ್ಪಡುವದಕ್ಕೆ ಬದ್ಧನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 26ನೇ ಮಾರ್ಚಿ 1903.

1903ನೇ ಜುಲೈ ಮಾಹೆ ಗುರ್ರೆ ತಾರೀಖು ಆರಂಭಾಯಿತು 1904ನೇ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದುಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖಿಗೆಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದಾ ಸ್ಪಷ್ಟವಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ B ಯಲ್ಲಿ ನಮೂದ ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು ಹರಾಜು ಆಖೈರು ಆದಕೂಡಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸರಿನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡಲೆ ಡಿಪಾಜಿಟ್ಟು ಬಗ್ಗೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೇ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟುದಾರರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನು ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರ್ರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೇ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖರಾರ್ವಾಕವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಆವಶ್ಯಕವಿದ್ದಲ್ಲಿ ಗವರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4–11–1876ನೇ ಮರ್ಸೂಂ 274ನೇ ನಂಬರು ನೋಟಿಫಿಕೇಷನ್ ನೊಡನೆ ಸಂದರ್ಭಾದಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರರು ಬದ್ಧರಾಗಿರಬೇಕು.

11. ಮಾಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಅದೇರೀತಿಯೇ ಸುಂಕ ವಸೂಲ್ಮಾಡುವದು.

ಷೆಡ್ಯೂಲ್. A.

ರಸ್ತೆಗಳು.	ಸ್ಟೇಷನ್‌ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು–ಮಂಗಳೂರು ರಸ್ತೆ, ಸಿದ್ಧಾಪುರದ ಬ್ರ್ಯಾಂಚು ರಸ್ತೆ	ಪಿರ್ಯಾಪಟ್ಟಣದ ಕೋಟೆಗೆ ಪಕ್ಕದ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ್ ಕಚೇರಿ	1902ನೇ ಮೇ ತಾರೀಖು 11ರಲ್ಲು
2. ಹಾಸನ–ಪಿರ್ಯಾಪಟ್ಟಣ–ಕನ್ಯಾನೂರು ರಸ್ತೆ ...	ಪಿರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ		
3. ಮಾಂಡಾಸು–ಕನ್ಯಾನೂರು ರಸ್ತೆ ..	ಪಂಚವಳ್ಳಿ		
4. ಮೈಸೂರು–ಮಾನಂದವಾಡಿ ರಸ್ತೆ .	ಕಾರಾಪುರ	ಹೆಗ್ಗಡದೇವನ ಕೋಟೆ ತಾಲ್ಲೂಕ್ ಕಚೇರಿ	ಡಿಟೋ 13ರಲ್ಲು
5. ಗುಂಡ್ಲುಪೇಟೆ–ಸುಲ್ತಾನಬತೇರಿ ರಸ್ತೆ ..	ಮಾಳೆ ಹೊಳೆ	ಗುಂಡ್ಲುಪೇಟೆ ತಾಲ್ಲೂಕ್ ಕಚೇರಿ	ಡಿಟೋ 15ರಲ್ಲು
6. ಬೆಂಗಳೂರು–ನೀಲಗಿರಿ ರಸ್ತೆ ..	ಬಂಡೀಪುರ		
7. ನಂಜನಗೂಡು–ಹಾಸನೂರು ಗಾಟ್ ರಸ್ತೆ .	ಸುವರ್ಣಾವತೀ ಬಳಿ ಅತ್ತಿಕಲ್‌ಪುರ	ಚಾಮರಾಜನಗರ ತಾಲ್ಲೂಕ್ ಕಚೇರಿ	ಡಿಟೋ 20ರಲ್ಲು

ಷೆಡ್ಯೂಲ್ B ರೇಟುಗಳು.

ತಪಶೀಲು.	ರೂ.	ಅ.	ಪೈ.	ಷರಾ.
ಪ್ರಯಾಣಸ್ತರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ . ..	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ . ..	0	8	0	
ಪ್ರಯಾಣಸ್ತರೊಡನೆ ಇಲ್ಲದೆ ಇರುವ ಎರಡು ಚಕ್ರದಗಾಡಿ ..	0	4	0	
ಗಾಡಿ ಬೋಜು ಸಹಿತವಾದದ್ದು	0	4	0	
ಡಿಟೋ ಬೋಜು ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜು ಳ್ಳದ್ದು	0	1	0	
ಡಿಟೋ ಬೋಜು ಇಲ್ಲದ್ದು	0	0	6	
ಕತ್ತೆ ಬೋಜು ವುಳ್ಳದ್ದು	0	0	6	
ಡಿಟೋ ಬೋಜು ಇಲ್ಲದ್ದು	0	0	3	
ಪಲ್ಲಕಿ	0	4	0	
ಕುರಿ, ಆಡು ಯಾ ಹಂದಿ	0	0	1	

ತಾರೀಖು 26ನೇ ಮಾರ್ಚಿ 1903.

1903ನೇ ಇಸವಿ ಜುಲೈ ಮಾಹೇ ಗುರ್ರೆ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ 9ನೇ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್‌ನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

10. ಲೇಟ್ ಚೀಫ್ ಕಮೀಷನರ್ ಸಾಹೇಬರವರ 4-11-1876ನೇ ವಾಲ್ಯುಂ 274ನೇ ನಂಬರು ನೋಟಿಫಿಕೇಷನ್ನೊಡನೆ ಸದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರರು ಬದ್ಧರಾಗಿರಬೇಕು.

11. ಮಾಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಆರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್. A.

ರಸ್ತೆಗಳು.	ಸ್ಟೇಷನ್‌ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು—ಮಂಗಳೂರು ರಸ್ತೆ, ಸಿದ್ಧಾಪುರದ ಬ್ರ್ಯಾಂಚು ರಸ್ತೆ	ಪೆರ್ಯಾಪಟ್ಟಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ ಕಚೇರಿ	1902ನೇ ಮೇ ತಾರೀಖು 11ರಲ್ಲು
2. ಹಾಸನ—ಪೆರ್ಯಾಪಟ್ಟಣ—ಕನ್ನಾನೂರು ರಸ್ತೆ ...	ಪೆರ್ಯಾಪಟ್ಟಣಕ್ಕೂ ಅಂಕನಹಳ್ಳಿಗೂ ಮಧ್ಯೆ		
3. ಮೈಸೂರು—ಕನ್ನಾನೂರು ರಸ್ತೆ ..	ಪಂಚವಳ್ಳಿ		
4. ಮೈಸೂರು—ಮಾನಂದವಾಡಿ ರಸ್ತೆ .	ಕಾರಾಪುರ	ಹೆಗ್ಗಡದೇವನ ಕೋಟೆ ತಾಲ್ಲೂಕ ಕಚೇರಿ	ಡಿಟ್ಟೋ 13ರಲ್ಲು
5. ಗುಂಡ್ಲುಪೇಟೆ—ಸುಲ್ತಾನಬತೇರಿ ರಸ್ತೆ ..	ಮಾಲೆ ಹೊಳೆ	ಗುಂಡ್ಲುಪೇಟೆ ತಾಲ್ಲೂಕ ಕಚೇರಿ	ಡಿಟ್ಟೋ 15ರಲ್ಲು
6. ಬೆಂಗಳೂರು—ನೀಲಗಿರಿ ರಸ್ತೆ ..	ಬಂಡೀಪುರ		
7. ನಂಜನಗೂಡು—ಹಾಸನೂರು ಗಾಟ್ ರಸ್ತೆ .	ಸುವರ್ಣಾವತೀ ಬಳಿ ಅತ್ತಿಕಳ್ಪುರ	ಚಾಮರಾಜನಗರ ತಾಲ್ಲೂಕ ಕಚೇರಿ	ಡಿಟ್ಟೋ 20ರಲ್ಲು

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು. ರೂ.	ಆ.	ಪೈ.	ಷರಾ.
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟ್ಟೋ ಇಲ್ಲದೆ ಇರುವ ಡಿಟ್ಟೋ	0	6	0	
ಡಿಟ್ಟೋ ಇರುವ ಎರಡು ಚಕ್ರದ ಗಾಡಿ	0	8	0	
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡು ಚಕ್ರದ ಗಾಡಿ	0	4	0	
ಗಾಡಿ ಬೋಜಾ ಸಹಿತವಾದದ್ದು	0	4	0	
ಡಿಟ್ಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟ್ಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟ್ಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟ್ಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟ್ಟೋ ಬೋಜಾ ಇಲ್ಲದ್ದು	0	0	3	
ಪಲ್ಲಕಿ	0	4	0	
ಕುರಿ, ಆಡು ಯಾ ಹಂದಿ	0	0	1	

ತಾರೀಖು 26ನೇ ಮಾರ್ಚಿ 1903.

1903ನೇ ಇಸವಿ ಜುಲೈ ಮಾಹೆ 1ನೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ 9ನೇ ತಾರೀಖುಗಳಲ್ಲಿ ಡೆಪ್ಯುಟಿ ಕಮೀಷನರವರಿಂದ ಯಾ ಅವರಿಂದ ಸ್ಪೆಷಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಸೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೀರಿ ನಡೆದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮೀಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಸೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.	
ಗುಡಾರ	ಪ್ರತಿಯೊಂದಕ್ಕೆ	4 ಆಣೆ.
ಎತ್ತಿನ ಗಾಡಿ ..	,,	2 ,,
ಒಡ್ಡರ ಗಾಡಿ ..	,,	1 ,,
ಎತ್ತಿನ ಹೋಜು ...	,,	6 ,,
ತಲೆ ಹೋಜು	,,	3 ,,

ನೋಟ್ :—ಕೊನೇ [illegible] ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. [illegible] ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಸನ್ 1 [illegible] ತೀರ್ಥಹಳ್ಳಿ ತಾಲ್ಲೂಕು ನವಿಲೂರು ಗಾ[illegible] ಸುಗಳು ತೀರ್ಥಹಳ್ಳಿ ತಾಲ್ಲೂಕ್ ಕಚೇರಿಯಲ್ಲಿ ಸನ್ 1903ನೇ ಇಸವಿ ಮೇ ತಾ[illegible] ಗಂಟೆಗೆ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪಸೀಲುಗಳ ಬಗ್ಯೆ 1903ನೇ ಇಸವಿ ಏಪ್ರಿಲ್ ತಿಂಗಳು ತಾರೀಖು 9ನೇ ಮೈಸೂರು ಗೆಜಟ್ಟಿನಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಬಿ. ಬಾಲಸುಂದರಂ ಐಯ್ಯರ್,
ಫಾರ್ ಡೆಪ್ಯುಟಿ ಕಮೀಷನರ್,

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 472.

ಮೃತಪಟ್ಟ ತಿಮ್ಮಮ್ಮ ಉರಫ್ ತಂಗಚ್ಚಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹುಣಸೂರು ತಾಲ್ಲೂಕು ಪಟ್ಟದಪುರದಲ್ಲಿರುವ ಹೊಸಹಳ್ಳಿ ಕಾಂತಯ್ಯನ ಮಗ ದ್ಯಾವಣ್ಣ ಮೈನರ್, ಗಾರ್ಡಿಯನ್ ಭಾವ ನಾರಣಪ್ಪ, ಮೃತಪಟ್ಟ ಸದರೀ ತಿಮ್ಮಮ್ಮ ಉರಫ್ ತಂಗಚ್ಚಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರ ಮೇಲೆ ಹುಣಸೂರು ತಾ|| ಪಟ್ಟದಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮಮ್ಮ ಉರಫ್ ತಂಗಚ್ಚಮ್ಮನ ಜೆಂಪಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದ್ಯಾವರಯ್ಯ ಗ||. ನಾರಣಪ್ಪನ ಅರ್ಜಿಯನ್ನು ಸ್ರ 1903ನೇ ಇಸವಿ ಜೂನ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ರ 1903ನೇ ಇಸವಿ ಏಪ್ರೆಲ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ರ 1902—1903ನೇ ಇಸವಿ ಅರ್ಜೀ ನಂಬರ್ 476.

ಮೃತಪಟ್ಟ ಮದಾರುಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1. ತಿ|| ನರಸೀಪುರದ ತಾಲ್ಲೂಕು ಬನ್ನೂರಲ್ಲಿ ಚಿಲ್ಲರೆ ಅಂಗಡಿ ಮದಾರುಸಾಬರ ಹೆಂಡತಿ ಖಾಸಿಂಬೀಬಿ, 2. ಸದರಿ ಮದಾರುಸಾಬಿ ಮಗ ಅಬ್ದುಲ್‌ರಜಾಕು ಮೈನರ್, ಗಾರ್ಡಿಯನ್ 1ನೇ ಅರ್ಜೀದಾರ್, 3. 2ನೇ ಅರ್ಜೀದಾರ್ ತಮ್ಮ ಅಬ್ದುಲ್‌ಗಫೂರ್ ಮೈನರ್, ಗಾರ್ಡಿಯನ್ 1ನೇ ಅರ್ಜೀದಾರ್, 4. ಸದರಿ ಮದಾರುಸಾಬಿ ಮಗಳು ಜಾಲಿಬಾಬಿ, ಮೃತಪಟ್ಟ ಸದರೀ ಮದಾರುಸಾಬರಿಗೆ ಹೆಂಡತಿ, ಮಕ್ಕಳು, ಆಗಬೇಕೆಂಬ ಹಕ್ಕುದಾರಿ ಮೇಲೆ ತಿ|| ನರಸೀಪುರ ತಾಲ್ಲೂಕು ಬನ್ನೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಮದಾರುಸಾಬಿಯು ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ರ 1901ನೇ ಇಸವಿ VIIನೇ ಅಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಖಾಸಿಂಬೀಬಿ ವಗೈರೇರ ಅರ್ಜಿಯನ್ನು ಸ್ರ 1903ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮದಾರುಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ರ 1903ನೇ ಇಸವಿ ಏಪ್ರೆಲ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

Mysore Government Central Press, Bangalore—1903.

ಸದರೀ ದರಖಾಸ್ತುದಾರರಾದ ವ್ಯಾವರಯ್ಯ ಗಾ॥ ನಾರಣಪ್ಪನ ಅರ್ಜಿಯನ್ನು ಸರ್ 1903ನೇ ಇಸವಿ ಜೂನ್ ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರಿಲ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 476.

ಮೃತಪಟ್ಟ ಮದಾರುಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1. ತಿ॥ ನರಸೀಪುರದ ತಾಲ್ಲೂಕು ಬನ್ನೂರಲ್ಲಿ ಚಿಲ್ಲರೆ ಅಂಗಡಿ ಮದಾರುಸಾಬರ ಹೆಂಡತಿ ಖಾಸಿಂಬೀಬಿ, 2. ಸದರಿ ಮದಾರುಸಾಬಿ ಮಗ ಅಬ್ದುಲ್‌ರಜಾಕು ಮೈನರ್, ಗಾರ್ಡಿಯನ್ 1ನೇ ಅರ್ಜೀದಾರ್, 3. 2ನೇ ಅರ್ಜೀದಾರ್ ತಮ್ಮ ಅಬ್ದುಲ್‌ಗಫೂರ್ ಮೈನರ್, ಗಾರ್ಡಿಯನ್ 1ನೇ ಅರ್ಜೀದಾರ್, 4. ಸದರಿ ಮದಾರುಸಾಬಿ ಮಗಳು ಜಾಲಿಬಾಬಿ, ಮೃತಪಟ್ಟ ಸದರೀ ಮದಾರುಸಾಬರಿಗೆ ಹೆಂಡತಿ, ಮಕ್ಕಳು, ಆಗಬೇಕೆಂಬ ಹಕ್ಕುದಾರಿ ಮೇಲೆ ತಿ॥ ನರಸೀಪುರ ತಾಲ್ಲೂಕು ಬನ್ನೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಮದಾರುಸಾಬಿಯು ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಖಾಸಿಂಬೀಬಿ ವಗೈರೇರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮದಾರುಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರಿಲ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜಯ್ಯಂಗಾರ್, ಸಬ್ ಜಡ್ಜ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ಸಂ 16.

ಬೆಂಗಳೂರು, ಗುರುವಾರ, ಏಪ್ರೈಲ್ ತಾ|| 23, ಸನ್ 1903.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಜೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 7ನೇ ಏಪ್ರೈಲ್ 1903.

1.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ,—ಈ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಪ್ರೈವೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳು ಅಮೃತಮಹಲ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನುಗಳಲ್ಲಿಯೂ ಸಹ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1903ನೇ ಜುಲೈ ಶುರು ಲಾಗಾಯತು 1904ನೇ ಇಸವಿ ಜೂನ್ ಆಖೈರ ವರೆಗೆ ಜಮಾಯಿಸಿ ತೆಗೆದುಕೊಂಡು ಹೋಗತಕ್ಕ ಬಿಟ್ಟು ಸ್ವತಂತ್ರ ಹಕ್ಕನ್ನು 1903ನೇ ಇಸವಿ ಜೂನ್ ತಾರೀಖು 10ರಲ್ಲಿ ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫೀಸರವರೊಂದಿಗೆಯಾಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರು ತಾಲ್ಲೂಕುವಾರ್ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸುತ್ತಾರೆ.

1-7—1903ರ ಲಾಗಾಯತು 30—6—1904ರ ವರೆಗೆ.

1 ಕಾನಕಾನಹಳ್ಳಿ. | 2 ಆನೇಕಲ್.

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಹರಾಜ್ ಶುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಜಾಡ್ತಿ ದರಖಾಸ್ತುದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನ ಡೆಪ್ಯುಟಿ ಕಮಿಷನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡದ ಏಜಂಟ್ ಯಾ ಮುಕ್ತಾಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತುದಾರನಾಗಲಿ (100) ಒಂದು ನೂರು ರೂಪಾಯಿಗಳನ್ನ ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಚಡ ದರಖಾಸ್ತುದಾರ್ರು ಹರಾಜು ಮಂಜೂರಾದ ಸಂಗತಿ ತಮಗೆ ತಿಳಿಸಿದ ಮೂರು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫೀಸರಿಂದ ಸದರೀ ಬಾಬ್ ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ಚಡ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳ ಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಐದು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದು ಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹ ಸಮವಾದ ಮೂರು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1903ನೇ ಇಸವಿ ಅಕ್ಟೋಬರ್ 1ನೇ ತಾರೀಖು, 2ನೇ ಖಿಸ್ತು 1904ನೇ ಇಸವಿ ಜನವರಿ 1ನೇ ತಾರೀಖು, 3ನೇ ಖಿಸ್ತು 1904ನೇ ಇಸವಿ ಏಪ್ರೈಲ್ 1ನೇ ತಾರೀಖು ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತೆಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣಿ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ತೊಗಟೆ ತೆಗದ ನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಿಯು ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟು ಅಥವಾ ಪ್ಲಾಂಟೇಷನ್ನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫಿಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟು ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟು ಯಾ ಪ್ಲಾಂಟೇಷನ್‌ಗಳ ಭಾಗಗಳಲ್ಲಿ ಚಕ್ಕೆ ಜಮಾವಣಿ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಸೀಲ್ ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಪಡಿಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋಠಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15—7—1904 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಒಂದು ಷರತ್ತಿಗೆ ಇಜಾರೆದಾರನು ತಪ್ಪಿ ನಡದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿವಿಗೂ ಜಮಾಯಿಸಿ ಇರುವ ವಿಸಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು. ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮ್ಮಿಷನರವರಿಂದ ತೀರ್ಮಾನಿಸಲ್ಪಡಬಹುದಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ಟಿ. ಅಬ್ದುಲ್ ಕರೀಂ,
ಡೆಪ್ಯುಟಿ ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್, ಬೆಂಗಳೂರು ಡಿಸ್ಟ್ರಿಕ್ಟು.

1903ನೇ ಇಸವಿ ಮಾರ್ಚಿ ತಾರೀಖು 24ರಲ್ಲು.

ಫಾರೆಸ್ಟ್ ಸೆಟ್ಲಮೆಂಟ್, ಕೋಲಾರ ಡಿಸ್ಟ್ರಿಕ್ಟ್.

ಗೋರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.

ಸರ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸರ್ 1903ನೇ ಇಸವಿ ಫೆಬ್ರುವರಿ ಮಾಹೆ 12ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಶ್ತಿಹಾರು ಛಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಿಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕು, 1903ನೇ ಇಸವಿ ಫೆಬ್ರುವರಿ 12ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ ಅಥವಾ ಬೇರೆ ಬಾಧ್ಯಕರ್ತರಿಂದಲಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರಿಶ್ಯ, ವಗ್ಯೆರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲಮೆಂಟ್ ಆಫೀಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲಮೆಂಟ್ ಆಫೀಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣಿ ವಗ್ಯೆರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲಮೆಂಟ್ ಆಫೀಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆ ಎಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಛಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲಮೆಂಟ್ ಆಫೀಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಲಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗ್ಯೆರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಯೆ ಮೈಸೂರು ಗೆಜೆಟಿನಲ್ಲಿ ಇಸ್ತಿಹಾರಿಪ್ರಕಟಣೆ ಯಾಗುವದಕ್ಕೆ ಮುಂಚೆ ಅಂದರೆ ಮೇಲ್ಕಂಡ ಮಿಯಾದೆ ಒಳಗಾಗಿ ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ ಅನಂತರ ಯಾವ ಮನವಿಯೂ ತಕರಾರು ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕೋಲಾರ.	ಗೋರಿಬಿದನೂರು ವ ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು, ದಿಬ್ಬೂರು, ನಾಗರಗೆರೆ, ಗುಡಿಬಂಡೆ ಮತ್ತು ಸೋಮೇನಹಳ್ಳಿ ಹೋಬಳಿಗಳು.	11,860 ಎಕರೆಗಳು.	ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.	ಸ್ಥಳ.—ಬ್ಲಾಕು ಸ್ವಲ್ಪಗುಡಿಬಂಡೆ ಸಬ್ ತಾಲ್ಲೂಕಿನಲ್ಲಿಯೂ ಮತ್ತು ಸ್ವಲ್ಪ ಗೋರಿಬಿದನೂರ ವ ಚಿಕ್ಕಬಳ್ಳಾಪುರ ತಾಲ್ಲೂಕುಗಳಲ್ಲಿಯೂ ಇರುತ್ತದೆ. **ಚಕ್ಕುಬಂದಿ.** ಉತ್ತರಕ್ಕೆ.—ಜೋಡಿ ಬಂಡಹಳ್ಳಿಯ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 639 ಗಜಗಳಲ್ಲಿರುವ ಒಂದು ಸ್ಥಳದಿಂದ ಹೊರಟ ಲೈನು ಅದೇ ನಂಬರಿನ ಮಧ್ಯೆ ಮತ್ತು ತೊಕ್ಲಹಳ್ಳಿಯ ಸರ್ವೆ ನಂ. 51 ವ 24 ಇವುಗಳ ಮಧ್ಯೆ ಆಖೈರು ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಚಿಮುಕ್ಲಹಳ್ಳಿಯ ಸರ್ವೆ ನಂ. 14 ಮತ್ತು ಘಾಟಿ ಅನುಪಹಳ್ಳಿಯ ಸರ್ವೆ ನಂ. 6 ಇವುಗಳ ಮಧ್ಯೆ ಗುಡಿಬಂಡೆ ಗೋರಿಬಿದನೂರು ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಸದರಿ ರಸ್ತೆಯ ಉದ್ದಕ್ಕೂ ಘಾಟಿ ಅನಪಹಳ್ಳಿಯ ಸರ್ವೆ ನಂ. 6ರ ವಾಯವ್ಯ ಮೂಲೆಗೆ ಹೋಗುತ್ತದೆ. ಆ ಮೂಲೆ ಘಾಟಿ ಅನಪಹಳ್ಳಿಯ ಸರ್ವೆ ನಂ. 6ರ ಉತ್ತರ ಪಾರ್ಶ್ವದ ಉದ್ದಕ್ಕೂ ನಾರಾಮನಹಳ್ಳಿಯ ನಂ. 23ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಉತ್ತರ ಪಾರ್ಶ್ವ ಮತ್ತು ಗುಡಿಬಂಡೆಯ ನಂ. 114ರ ಪಶ್ಚಿಮ ಪಾರ್ಶ್ವ ಇವುಗಳ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಚೌಡಶೆಟ್ಟಿಯ ಹಳ್ಳಿಯ ನಂ. 45ರ ನೈರುತ್ಯ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಚಿಕ್ಕ ಮಲ್ಲೀನಹಳ್ಳಿಯ ನಂ. 13ರ ದಕ್ಷಿಣ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಮತ್ತು ಅದೇ ಸರ್ವೇ ನಂಬರಿನ ಮಧ್ಯೆ ಚೌಡಶೆಟ್ಟಿಹಳ್ಳಿಯ ನಂ. 45ರ ವಾಯವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ನಂ. 45ರ ಉತ್ತರ ಪಾರ್ಶ್ವದ ಉದ್ದಕ್ಕೂ ನಂ. 44ರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 44ರ ಮಧ್ಯೆ ಅನಪ

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕು ಬಂದಿ.
ಕೋಲಾರ.	ಗೋರಿಬಿದನೂರು-ಚಿಕ್ಕಬಳ್ಳಾಪುರ ತಾಲ್ಲೂಕುಗಳು ಮತ್ತು ಗುಡಿಬಂಡೆ ಸಬ್ ತಾಲ್ಲೂಕು ದಾರಿನಾಯಿಕನಪಾಳ್ಯ, ನಾಗರಗೆರೆ, ಗುಡಿಬಂಡೆ ಮತ್ತು ಮಂಡಿಕಲ್ ಹೋಬಳಿಗಳು.	11,860 ಎಕರೆಗಳು.	ನರಸಿಂಹದೇವರ ಬೆಟ್ಟದ ಫಾರೆಸ್ಟು ಬ್ಲಾಕು ನಂ. V.	ಹಳ್ಳಿಯ ನಂ. 4ರ ಉತ್ತರ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು 1 ಫರ್ಲಾಂಗಿನಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ಸರ್ವೆ ನಂ. 4 ವ 3 ಇವುಗಳ ಮಧ್ಯೆ ಅನಪಹಳ್ಳಿಯ ನಂ. 2ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಮೂಲೆಯಿಂದ ಮೂಲೆಗೆ ಸರ್ ನಂ. 2ರ ಮಧ್ಯೆ ಸರ್ವೆ ನಂ. 10ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ನಂ. 10 ವ 9 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಪೂರ್ವ ವ ನೈರುತ್ಯ ದಿಕ್ಕಾಗಿ ವಾಬಸಂದ್ರದ ನಂ. 77ವ 61 ಮತ್ತು ಗುಡಿಬಂಡೆಯ ನಂ. 117 ಇವುಗಳ ಮಧ್ಯೆ ನಂ. 114ರ ಪೂರ್ವ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆ ಮೇಲೆ ಅದರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ನಂ. 115ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ನಂ. 114ರ ಮಧ್ಯೆ ನಾರಾಮನಹಳ್ಳಿಯ ನಂ. 23ರ ಪೂರ್ವ ಮೂಲೆಗೆ ಹೋಗುತ್ತದೆ. ತರುವಾಯ ನಾರಾಮನಹಳ್ಳಿಯ ನಂ. 19 ವ 23 ಇವುಗಳ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಗುಡಿಬಂಡೆ ಗೋರೀಬಿದನೂರು ರಸ್ತೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆ ಮೇಲೆ ಚದುಮ ಹಳ್ಳಿಯ ನಂ. 50 ವ 49 ಇವುಗಳ ವಾಯುವ್ಯ ಪಾರ್ಶ್ವದ ಉದ್ದಕ್ಕೂ ಆಖೈರು ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನಂ. 48 ವ 47 ಇವುಗಳ ಮಧ್ಯೆ ನಂ. 43ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮತ್ತು ಚದುಮಹಳ್ಳಿಯ ನಂ. 42–29–26 ವ 4 ಇವುಗಳ ಮಧ್ಯೆ ಹೋಗುತ್ತದೆ. ತರುವಾಯ ಚದುಮಹಳ್ಳಿಯ ನಂ. 5 ವ 6 ಇವುಗಳ ಆಗ್ನೇಯ ಪಾರ್ಶ್ವದ ಉದ್ದಕ್ಕೂ ನಂ. 24ರ ನೈರುತ್ಯ ಮೂಲೆಗೆ ಹೋಗುತ್ತದೆ. ಆ ಮೇಲೆ ಅದೇ ನಂಬರಿನ ಮಧ್ಯೆ ನಾರಾಮನಹಳ್ಳಿಯ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ನಾರಾಮನಹಳ್ಳಿಯ ನಂ. 1ರ ಈಶಾನ್ಯ ಪಾರ್ಶ್ವದ ಉದ್ದಕ್ಕೂ ಮತ್ತು ಗುಡಿಬಂಡೆಯ ನಂ. 91–62 ವ 61 ಇವುಗಳ ಮಧ್ಯೆ ಚಿನ್ನಹಳ್ಳಿಯ ನಂ. 26ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಚಿನ್ನಹಳ್ಳಿಯ ನಂ. 26–22–21–20 ವ 19 ಇವುಗಳ ಉತ್ತರ ಪಾರ್ಶ್ವದ ಉದ್ದಕ್ಕೂ ಆಖೈರು ನಂಬರಿನ ಉತ್ತರ ಪಾರ್ಶ್ವದಲ್ಲಿರುವ ಒಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಚಿನ್ನಹಳ್ಳಿಯ ನಂ. 19–18–17 ವ 16 ಇವುಗಳ ಮಧ್ಯೆ ಹೋಗುತ್ತದೆ. ಆಮೇಲೆ ಬೀಕಲಗಾನ ದಿನ್ನೆಯ ನಂ. 5ರ ಪೂರ್ವ ಪಾರ್ಶ್ವದ ಉದ್ದಕ್ಕೂ ನಂ. 1ರ ಉತ್ತರ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಬೀಕಲಗಾನ ದಿನ್ನೆಯ ನಂ. 1 ವ 3 ಇವುಗಳ ಪಶ್ಚಿಮ ಪಾರ್ಶ್ವ ಮತ್ತು ಬೀಕಲಗಾನ ದಿನ್ನೆಯ ನಂ. 4ರ ಉತ್ತರ ಪಾರ್ಶ್ವ ಇವುಗಳ ಉದ್ದಕ್ಕೂ ನಿಮ್ಮಕಾಯಲಹಳ್ಳಿಯ ನಂ. 11ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಮತ್ತು ಮ್ಯಾವಲಹಳ್ಳಿಯ ನಂ. 19ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಹುಂಗುಟಹಳ್ಳಿಯ ನಂ. 1ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಹುಂಗುಟನಹಳ್ಳಿಯ ನಂ. 4 ವ 2 ಇವುಗಳ ಪೂರ್ವಪಾರ್ಶ್ವದ ಉದ್ದಕ್ಕೂ ಆಖೈರು ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಹುಂಗುಟನ ಹಳ್ಳಿಯ ನಂ. 5ರ ಉತ್ತರ ಪಾರ್ಶ್ವದ ಉದ್ದಕ್ಕೂ ಗುಮ್ಮಲಗುಂಡಹಳ್ಳಿಯ ನಂ. 1ರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಸರ್ವೆ ನಂಬರು 1ರ ಮಧ್ಯೆ ಹುಂಗುಟಹಳ್ಳಿಯ ನಂ. 7ರ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಹುಂಗುಟಹಳ್ಳಿಯ ನಂ. 7ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಹುಂಗುಟಹಳ್ಳಿಯ ನಂ. 6ರ ಮಧ್ಯೆ ಚಿಂಚನಹಳ್ಳಿಯ ನಂ. 14ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಚಿಂಚನಹಳ್ಳಿಯ ನಂ. 14ರ ಮಧ್ಯೆ ಯರ್ರನಾಗೇನಹಳ್ಳಿಯ ನಂ. 11ರ ದಕ್ಷಿಣ ಪಾರ್ಶ್ವದಲ್ಲಿನ ಒಂದು ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಯರ್ರನಾಗೇನಹಳ್ಳಿಯ ಸರ್ವೆ ನಂ. 11 ವ 18 ತೇರುಮರದ ಹಳ್ಳಿಯ ನಂ. 4 ಲಿಂಗಬತ್ತನ ಹಳ್ಳಿಯ ನಂ. 2 ಅಡ್ಡಗಾಸಲಹಳ್ಳಿಯ ನಂ. 4 ವುಲವಾಕಹಳ್ಳಿಯ [illegible] 36–28 ವ 22 ಇವುಗಳ ಮಧ್ಯೆ ವುಲವಾಕಹಳ್ಳಿಯ ನಂಬರು 35ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಅಂಗತನ ಹಳ್ಳಿಯ ನಂಬರು 2 ವ 49 ಹುಲಿಕುಂಟೆಯ ನಂಬರು 86 ವ 19 ಇವುಗಳ ಮಧ್ಯೆ ಹೊರಟ ಸ್ಥಳಕ್ಕೆ ಹೋಗುತ್ತದೆ.

ಎಸ್. ಆವಿಾರ್ ಹಸೇನ್,

ಫಾರೆಸ್ಟು ಸೆಟಲ್‌ಮೆಂಟ್ ಮತ್ತು ಸಬ್ ಡಿವಿಜನ್ ಆಫೀಸರ್, ಚಿಕ್ಕಬಳ್ಳಾಪುರ.

ತಾರೀಖು 4ನೇ ಏಪ್ರೆಲ್ 1903.

ಇದರಿಂದ ನೋಟಿಸ್ ಕೊಡುವದೇನಂದರೆ, 1902ನೇ ಸೆಪ್ಟಂಬರ ಮತ್ತು ಡಿಸೆಂಬರ ಮಾಹೆ ಬಗ್ಗೆ ಭತ್ಯಾ ಮೊಬಲಗು ರೂ. 8—0—7 ಮದ್ದಗಿರಿ ರೇಂಜು ಟೆಂಪರರಿ ಫಾರೆಸ್ಟರ ಅಬ್ದುಲ್ ಖಾದರಗೆ ಸಲ್ಲತಕ್ಕದ್ದು. ಮದ್ದಗಿರಿ ರೇಂಜ್ ಆಫಿಸರಲ್ಲಿ ಡಿಪಾಜಿಟ್ಟನಲ್ಲಿರುತ್ತೆ. ಸದರಿ ಪಾರ್ಟಿಯು ಖುದ್ದಾಗಿ ಆಗಲಿ ಅಥವಾ ಅಧಿಕಾರ ವಹಿಸಿದ ಏಜಂಟು ಮೂಲಕವಾಗಿ ಆಗಲಿ ಮದ್ದಗಿರಿ ರೇಂಜಾಫಿಸರ ರೂಬರೂಬ್ ಈ ತಾರೀಖು ಲಾಗಾಯಿತು 30 ದಿವಸಗಳವಳಗೆ ಹಾಜರಾಗಿ ಮೊಬಲಗು ಪಡಿಯಬೇಕು, ತಪ್ಪಿದರೆ ಆ ಹಣ ಸರಕಾರಕ್ಕೆ "V (a)" ಹೆಡ್ಡಿಗೆ ಜಮೆ ಕಟ್ಟಿಸಲಾದೀತು.

ಬಿ. ಹೀರಾಸಿಂಗ್,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ತುಮಕೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 1ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ ಫಾರೆಸ್ಟುಗಳ ಹೆಸರು	ಹರಾಜು ತಾರೀಖು.	ಹರಾಜು ಸ್ಥಳ.
1	ಮೊಳಕಾಲ್ಮುರು ತಾಲ್ಲೂಕು ..	23—4—1903	ಮೊಳಕಾಲ್ಮುರು ತಾಲ್ಲೂಕು ಕಚೇರಿ
2	ಹೊಳಲಕೆರೆ ತಾಲ್ಲೂಕು ...	29—5—1903	ಹೊಳಲಕೆರೆ ತಾಲ್ಲೂಕು ಕಚೇರಿ
3	ಗಗಾ ಕಾವಲು ..		
4	ಹೊಸದುರ್ಗದ ತಾಲ್ಲೂಕು ...	30—5—1903	ಹೊಸದುರ್ಗ ತಾಲ್ಲೂಕು ಕಚೇರಿ
5	ದಾವಣಗೆರೆ ತಾಲ್ಲೂಕು ..	2—6—1903	ದಾವಣಗೆರೆ ತಾಲ್ಲೂಕು ಕಚೇರಿ
6	ಹರಿಹರ ತಾಲ್ಲೂಕು ..	3—6—1903	ಹರಿಹರ ಸಬ್ ತಾಲ್ಲೂಕು ಕಚೇರಿ

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣೆ ಹಕ್ಕನ್ನು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನು ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ ತಾರೀಖು 30ರ ವರಿಗಿನ 12 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣೆ ಬಗ್ಗೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್ದಾರರ ಮೊಬಲಗನ್ನು ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟುಇದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲುಹಿಸ್ಸೆ ಹಣವನ್ನು ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ತಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತವೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಬಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ 15 ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತವೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜೂನ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕೆ ದಾಖಲ್ಮಾಡಿಕೊಳ್ಳುವದಲ್ಲದೆ

ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಒಳಪಡಿಸಲ್ಪಡುವದು. ಈ ಲಾಗಾಯಿತು ಸೆಸ್ಸು ವಸೂಲು ಮಾಡುವದಿಲ್ಲ.

ಷ ರ ತ್ತು ಗ ಳು.

1. ಒಂದು ವರುಷಕ್ಕೆ ಮೇಲ್ಪಟ್ಟ ದೊಡ್ಡದಾದ ಯಾ ಸಂಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.
2. ಒಂದು ವರುಷಕ್ಕೆ ಒಳಪಟ್ಟ ಎಳೇಗಿಡಗಳನ್ನು ಇಜಾರದಾರನ ನವಕರರಾಗಲಿ ಅಥವಾ ಆತನ ಷಿಕಿಮಿ ಕಂಟ್ರಾಕ್ಟುದಾರರಾಗಲಿ ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಒಂದು ಸರ್ಕಲಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಿಮಿ ಕಂಟ್ರಾಕ್ಟುದಾರರುಗಳ ಹೆಸರಿನ ಒಂದು ಲೀಸ್ಟು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.
4. ತೊಬಟೆ ತೆಗೆದನಂತರ ಆ ಸಮ್ಮಂಧವಾದ ವಿಸಿಷ್ಟ ಸೌದೆಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.
5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣೆ ಆದಬಗ್ಗೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫಿಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.
6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಹೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.
7. ಇಜಾರೆಗೆ ಸಂಬಂಧಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿ ಜೂನ್ ಆಖೈರ್ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟುದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟು ಸರಹದ್ದು ಹೊರಕ್ಕೆ ತೆಗೆದುಕೊಂಡು ಹೋಗತಕ್ಕದ್ದು.
8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವೂ ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯುಟಿ ಕಮಿಷನರ್‌ಸಾಹೇಬರವರಿಂದ 1,000 ಒಂದು ಸಾವಿರ ರೂಪಾಯಿವರಿಗೆ ಜುರ್ಮಾನೆ ವಿಧಿಸಲ್ಪಡುವದಕ್ಕೆ ಬದ್ಧನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ತಾರೀಖು 15ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟ್ ಟಿಂಬರ್ ಡಿಪೋಗಳಲ್ಲಿ ನಾಟಾ ಮತ್ತು ಬಂಬುಗಳು ಆಯಾಯ ಡಿಪೋಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರವರಿಂದಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ:—

ನಂಬರು	ಡಿಪೋ ಹೆಸರು	ಹರಾಜು ತಾರೀಖು	ಸಾಗುವಾನಿ ನಾಟಾ	ಸಾಗುವಾನಿ ಬಿಲಗು	ಕಾಡುಜಾತಿ ನಾಟಾ	[illegible]	ಬಂಬುಗಳು	ಸೌದೆ
1	ಶಿವಮೊಗ್ಗ ..	23—5—1903	75	1,580	50	..	12,857	955
2	ಮುಂಬಳೆ ಬೈಲು ..	25—5—1903	32	...	145	..	..	...
3	ಆಯನೂರು ..	28—5—1903	68	...	146	..	..	375
4	ಶಿಕಾರಿಪುರ ..	31—5—1903	..	267	98	...	380	..

ಹರಾಜ್ ಷರತ್ತು—(1895ನೇ ಇಸವಿ ಏಪ್ರೆಲ್ 25ನೇ ತಾರೀಖು ನೋಟಿಫಿಕೇಷನ್ ನಂಬರು 15) ಮೈಸೂರು ಗೆಜೆಟ್ ನಂಬರ್ 15—25-4-1895ನಲ್ಲಿ ಛಾಯಿಷ್ ಆಗಿ ಇರುವ ನಂಬರ 15229—ಆರ್. ಎಫ್. 155—92ನೇ ನೋಟಿಫಿಕೇಷನನ್ನ ನೋಡತಕ್ಕದ್ದು.

ಜೆ. ಮಾರ್ಟೈರೋ,
ಫಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗಾ ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 26ನೇ ಮಾರ್ಚಿ 1903.

1903ನೇ ಜುಲೈ ಮಾಹೆ ಗುರ್‍ರೆ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಷೆಡ್ಯೂಲ್ A ಯಲ್ಲಿ ನಮೂದುಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದಾ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲ್ B ಯಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದಕೂಡಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜೆಟ್ಟು ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜೆಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡಲೆ ಡಿಪಾಜೆಟ್ಟು ಬಗ್ಯೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೇ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಬಳಪಟ್ಟು ಕಂಟ್ರಾಕ್ಟುದಾರ್ರು ಹರಾಜು ಮೊಬಲಿಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಶೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರ್ರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೇ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕಗಳ ಲೆಖ್ಖಗಳನ್ನು ಖರಾರ್ವಾಕಾವಾಗಿ ಇಡಲು, ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿಯಿರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೇ ಮುರ್ಖಂ 274ನೇ ನಂಬರು ನೋಟಿಫಿಕೇಷನ್ ನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರ್ರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಆರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್. A.

ರಸ್ತೆಗಳು.	ಸ್ಟೇಷನ್‌ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು—ಮಂಗಳೂರು ರಸ್ತೆ, ಸಿದ್ದಾಪುರದ ಬ್ರ್ಯಾಂಚು ರಸ್ತೆ	ಪೆರ್‍ಯಾಪಟ್ಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ ಕಚೇರಿ	1903ನೇ ಮೇ ತಾರೀಖು 11ರಲ್ಲು
2. ಹಾಸನ—ಪೆರ್‍ಯಾಪಟ್ಣ—ಕನ್ನಾನೂರು ರಸ್ತೆ ..	ಪೆರ್‍ಯಾಪಟ್ಣಕ್ಕೂ ಅಂಕನಹಳ್ಳಿಗೂ ಮಧ್ಯ		
3. ಮದರಾಸು—ಕನ್ನಾನೂರು ರಸ್ತೆ ..	ಪಂಜವಳ್ಳಿ		
4. ಮೈಸೂರು—ಮಾನಂದವಾಡಿ ರಸ್ತೆ ..	ಕಾರಾಪುರ	ಹೆಗ್ಗಡದೇವನ ಕೋಟೆ ತಾಲ್ಲೂಕ ಕಚೇರಿ	ಡಿಟೋ 13ರಲ್ಲು
5. ಗುಂಡ್ಲುಪೇಟೆ—ಸುಲ್ತಾನಬತೇರಿ ರಸ್ತೆ	ಮೂಲೆ ಹೊಳೆ	ಗುಂಡ್ಲುಪೇಟೆ ತಾಲ್ಲೂಕ ಕಚೇರಿ	ಡಿಟೋ 15ರಲ್ಲು
6. ಬೆಂಗಳೂರು—ನೀಲಗಿರಿ ರಸ್ತೆ ..	ಬಂಡೀಪುರ		
7. ನಂಜನಗೂಡು—ಹಾಸನೂರು ಗಾಟ್ ರಸ್ತೆ ..	ಸುವರ್ಣಾವತೀ ಹೊಳೆ ಅತ್ತಿಕಲ್‍ಪುರ	ಚಾಮರಾಜನಗರ ತಾಲ್ಲೂಕ ಕಚೇರಿ	ಡಿಟೋ 20ರಲ್ಲು

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು.			ಷರಾ.
	ರೂ.	ಆ.	ಪೈ.	
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ	0	8	0	
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡು ಚಕ್ರದಗಾಡಿ ..	0	4	0	
ಗಾಡಿ ಜೋಜಾ ಸಹಿತವಾದದ್ದು.	0	4	0	
ಡಿಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕ್ಕಿ	0	4	0	
ಕುರಿ, ಆಡು ಯಾ ಹಂದಿ	0	0	1	

ತಾರೀಖು 26ನೇ ಮಾರ್ಚಿ 1903.

1903ನೇ ಇಸವಿ ಜುಲೈ ಮಾಹೇ ಗುರ್ರೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ 9ನೇ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟುದಾರನು ಷೆಡ್ಯೂಲಿನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ತ್ಯಾವ ದರವನ್ನೇ ಆಗಲಿ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರು ಆದ ಕೂಡ್ಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡ್ಲೆ ಡಿಪಾಜಿಟ್ಟು ಬಗ್ಯೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ, ಪುನಹ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತಿ ಮಾಡುವ ತಾರೀಖಿನ ವರಿವಿಗೆ ಮಾಹೇಯಾನಾ ರೂಪಾಯಿಗೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹ ಹರಾಜು ಮಾಡಿ, ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಮೇಲ್ಕಂಡ 5 ಮತ್ತು 4ನೇ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಬಳವಟ್ಟು ಕಂಟ್ರಾಕ್ಟುದಾರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟುದಾರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್‌ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೇ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖರಾರ್ವಾಕವಾಗಿ ಇಡಲು ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೇ ಮುರ್ಖಂ 274ನೇ ನಂಬರು ನೋಟಿಫಿಕೇಷನೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರಾಕ್ಟುದಾರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್.

ನಂಬರು.	ತಪಸೀಲು.	ಬೋಜ ವುಳ್ಳದ್ದು.			ಬೋಜ ಇಲ್ಲದ್ದು.		
		ರೂ.	ಆ.	ಪೈ.	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಗಾಡಿ	0	8	0	0	4	0
2	,, ಎರಡು ಡಿಟೋ	0	4	0	0	2	0
3	,, ಎಮ್ಮೆ ಅಥವಾ ಎತ್ತು	0	0	6	...	...	..
4	,, ಆನೆ	1	0	0	1	0	0
5	,, ಒಂಟೆ	0	8	0	0	8	0
6	,, ಕುದುರೆ ಸವಾರ ಅಥವಾ ಬೋಜ ಉಳ್ಳದ್ದು.... ...	0	1	0	...	...	...
7	,, ಡಿಟೋ ಡಿಟೋ ಇಲ್ಲದ್ದು	..	...	...	0	1	0
8	,, ಕತ್ತೆ ಸವಾರ ಅಥವಾ ಬೋಜ ಉಳ್ಳದ್ದು	0	0	6	...	..	..

ತಾರೀಖು 26ನೇ ಮಾರ್ಚಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1903ನೇ ಜುಲೈ 1ರ ಲಾಗಾಯತು 1904ನೇ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೋಲೀಸ್ ಸ್ಟೇಷನ್ ಬಳಿ ತಾಲ್ಲೂಕು ಅಮಲ್ದಾರ್ರಿಂದ 1903ನೇ ಮೇ 21ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರ್ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಕ್ಕವನ್ನು ಇಟ್ಟಿರಬೇಕು. ಸದರೀ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನಾಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	....	...	..	ಪ್ರತ್ಯೇಕ ಹರಾಜು ಮಾಡಲ್ಪಡುತ್ತೆ.		
ಗುಡಾರ	...	...	..	ಪ್ರತಿಯೊಂದಕ್ಕೆ	4	ಆಣೆ.
ಎತ್ತಿನ ಗಾಡಿ	..	...	..	,,	2	,,
ಬಿದ್ದರ ಗಾಡಿ	..	..	..	,,	1	,,
ಎತ್ತಿನ ಬೋಜಾ	...	...	..	,,	6	,,
ತಲೆ ಬೋಜಾ	..	..	..	,,	3	,,

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಂ. ಕಾಂತರಾ

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 3ನೇ ಏಪ್ರೆಲ್ 1903.

ಸನ್ 1903—04ನೇ ಸಾಲುಖೈರು ವರಿಗೆ ಸರಕಾರಕ್ಕೆ ಬರಬೇಕಾದ ಕಂದಾಯ ಬಾಕೀಗಾಗಿ ತೀರ್ಥಹಳ್ಳಿ ತಾಲ್ಲೂಕು ನವಟೂರು ಗ್ರಾಮದ ಶ್ಯಾಮರಾವ್ ಬಿನ್ ವೆಂಕಪ್ಪಯ್ಯನ ಜಮೀನುಗಳು ತೀರ್ಥಹಳ್ಳಿ ತಾಲ್ಲೂಕ ಕಚೇರಿಯಲ್ಲಿ ಸನ್ 1903ನೇ ಇಸವಿ ಮೇ ತಾರೀಖು 25ನೇ ದಿವಿ 12 ಗಂಟೆಗೆ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪಸೀಲುಗಳ ಬಗ್ಯೆ 1903ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 9ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಬಿ. ಬಾಲಸುಂದರಂ ಐಯ್ಯರ್,
ಫಾರ್ ಡೆಪ್ಯುಟಿ ಕಮೀಷನರ.

ಬೆಂಗಳೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 7.

ಮೃತಪಟ್ಟ ತಿಮ್ಮಾಚಾರಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚವುಡಯ್ಯ, ಗಾರ್ಡಿಯನ್ ತಾಯಿ ಮುದ್ದಮ್ಮ, ಮೃತಪಟ್ಟ ಸದರೀ ತಿಮ್ಮಾಚಾರಿಯವರಿಗೆ ಮುಖ್ಯ ವಾರಸ್‌ದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಕಾರ್ಕಾರ್‌ಹಳ್ಳಿ ತಾ|| ಸೋಮನಹಳ್ಳಿಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮಾಚಾರಿಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚವುಡಯ್ಯ, ಗಾರ್ಡಿಯನ್ ತಾಯಿ ಮುದ್ದಮ್ಮನ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಾಚಾರಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 8.

ಮೃತಪಟ್ಟ ಪೋಲೇಪಲ್ಲಿ ಮೀನಾಕ್ಷಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪೋಲೇಪಲ್ಲಿ ಶೇಷಮ್ಮ, ಮೃತಪಟ್ಟ ಸದರೀ ಮೀನಾಕ್ಷಮ್ಮನವರಿಗೆ ಮುಖ್ಯ ವಾರಸ್‌ದಾರಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಮೀನಾಕ್ಷಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೇಷಮ್ಮನವರ ಅರ್ಜಿಯನ್ನು ಸನ್1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೀನಾಕ್ಷಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 11.

ಮೃತಪಟ್ಟ ಸೆಟ್ಲೂರು ರಾಮಸ್ವಾಮೈಯ್ಯಂಗಾರು ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶಾಮಣ್ಣ ಮೈನರ್, ಗಾರ್ಡಿಯನ್ ಸೆಟ್ಲೂರು ನರಶಿಹ್ಮಯ್ಯಂಗಾರು, ಮೃತಪಟ್ಟ ಸದರೀ ಸೆಟ್ಲೂರು ರಾಮಸ್ವಾಮೈಯ್ಯಂಗಾರಿಗೆ ಮುಖ್ಯ ವಾರಸ್‌ದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ಚಿಕ್ಕಪ್ಯಾಟೆ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮೈಯ್ಯಂಗಾರು ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾಮಣ್ಣ ಮೈನರ್, ಗಾರ್ಡಿಯನ್ ಸೆಟ್ಲೂರು ನರಶಿಹ್ಮಯ್ಯಂಗಾರು ಅರ್ಜಿಯನ್ನು ಸನ್1903ನೇ ... ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲ... ...ೃತಪಟ್ಟ ರಾಮಸ್ವಾಮೈಯ್ಯಂಗಾರು ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ...ಪಡಿಸಿ ಇಧೆ.

...ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋ

ಸರ್ 1902—1903ನೇ ಇಸವಿ ಅರ್ಜೀ ನಂಬರ್ 47.

ವೃತಪಟ್ಟ ಉದ್ದಿ ಶಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಉದ್ದಿ ವೆಂಕಟರಾ[illegible], ವೃತಪಟ್ಟ ಸದರೀ ಉದ್ದಿ ಶಾಮರಾಯರಿಗೆ ಮುಖ್ಯ ವಾರಸ್‌ದಾರರು ಆಗಬೇಕೆಂಬ ಹಕ್ಕುದಾರೀ ಮೇಲೆ ಮುಳವಳ್ಳಿ ವಾ[illegible]ರಾಗಿ ವೃತಪಟ್ಟ ಉದ್ದಿ ಶಾಮರಾಯರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7[illegible] ನಂಬರು ರೆಗ್ಯುಲೇಷರ್ ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಉದ್ದಿ ವೆಂಕಟರಾಯರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಉದ್ದಿ ಶಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 55.

ವೃತಪಟ್ಟ ಪಾಪಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ತಿಮ್ಮಕ್ಕಾ, ವೃತಪಟ್ಟ ಸದರೀ ಪಾಪಣ್ಣನವರಿಗೆ ಮುಖ್ಯ ವಾರಸದಾರಳು ಆಗಬೇಕೆಂಬ ಹಕ್ಕುದಾರೀ ಮೇಲೆ ಗೋರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಹೋಬಳಿ ಬಂಡಿನೂರನಹಳ್ಳಿ ವಾಸಸ್ಥರಾಗಿ ವೃತಪಟ್ಟ ಪಾಪಂಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷರ್ ಮೇರಿಗೆ ಸರ್ಟಿಫಿಕೇಟ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಮ್ಮಕ್ಕನವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಪಾಪಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 57.

ವೃತಪಟ್ಟ ಅಕ್ಕಯ್ಯಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಿಕ್ಕಮುನಿಯಪ್ಪ, ವೃತಪಟ್ಟ ಸದರೀ ಅಕ್ಕಯ್ಯಮ್ಮನವರಿಗೆ ಮುಖ್ಯ ವಾರಸದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿಡ್ಲಘಟ್ಟದ ತಾಲ್ಲೂಕು ದಾಸರಹಳ್ಳಿ ವಾಸಸ್ಥರಾಗಿ ವೃತಪಟ್ಟ ಅಕ್ಕಯ್ಯಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷರ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕಮುನಿಯಪ್ಪನವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ಅಕ್ಕಯ್ಯಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇಧೆ.

ಸರ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 65.

ವೃತಪಟ್ಟ ಚನ್ನಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಪುಟ್ಟಮ್ಮನವರು, ವೃತಪಟ್ಟ ಸದರೀ ಚನ್ನಪ್ಪಯ್ಯನವರಿಗೆ ವಾರಸದಾರು ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ವಾಸಸ್ಥರಾಗಿ ವೃತಪಟ್ಟ ಚನ್ನಪ್ಪಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷರ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪುಟ್ಟಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು [illegible] ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ [illegible] ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ[illegible] ಕೊಡೋಣಾಗಿ ಇಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 83.

ವ್ಯಾತಪಟ್ಟ ಚಿಂತಾಮಣಿ ಶ್ರೀನಿವಾಸ ಭೀಮಾಜಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕೋಬಾಯಿ ಇವರ ಮೈನರ ಮಗ ಅನಂತಮೂರ್ತಿಯವರು ... ತಪಟ್ಟ ಸದರೀ ಚಿಂತಾಮಣಿ ಶ್ರೀನಿವಾಸ ಭೀಮಾಜಿಯವರಿಗೆ ಮುಖ್ಯವಾರಸದಾರು ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂ... ಸಸ್ಥರಾಗಿ ವ್ಯಾತಪಟ್ಟ ಶ್ರೀನಿವಾಸ ಭೀಮಾಜಿಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕೋಬಾಯಿ, ಅನಂತಮೂರ್ತಿಯವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯಾತಪಟ್ಟ ಶ್ರೀನಿವಾಸ ಭೀಮಾಜಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೈಲ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 84.

ವ್ಯಾತಪಟ್ಟ ಮುನಿಯಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೊಡ್ಡ ನಂಜಪ್ಪಾ, ವ್ಯಾತಪಟ್ಟ ಸದರೀ ಮುನಿಯಪ್ಪನವರಿಗೆ ಮುಖ್ಯ ವಾರಸುದಾರ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಹೆಣ್ಣೂರು ವಾಸಸ್ಥರಾಗಿ ವ್ಯಾತಪಟ್ಟ ಮುನಿಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದೊಡ್ಡ ನಂಜಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯಾತಪಟ್ಟ ಮುನಿಯಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೈಲ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 86.

ವ್ಯಾತಪಟ್ಟ ಗರುಡಾಚಾರ್ಯರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ವೆಂಕಟಾದ್ರಿ ಅಯ್ಯಂಗಾರು ಮೈನರ, ಗಾರ್ಡಿಯನ್ ತಾಯಿ ಲಕ್ಷ್ಮಿಯಮ್ಮಾಳ್, ವ್ಯಾತಪಟ್ಟ ಸದರೀ ಗರುಡಾಚಾರ್ಯರಿಗೆ ಮುಖ್ಯ ವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ನೀಲಗಿರಿ ಸ್ಥಳದ ವಾಸಸ್ಥರಾಗಿ ವ್ಯಾತಪಟ್ಟ ಗರುಡಾಚಾರ್ಯರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಾದ್ರಿ ಅಯ್ಯಂಗಾರು ಮೈನರ, ಗಾರ್ಡಿಯನ್ ತಾಯಿ ಲಕ್ಷ್ಮಿಯಮ್ಮಾಳರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯಾತಪಟ್ಟ ಗರುಡಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಏಪ್ರೈಲ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 92.

ವ್ಯಾತಪಟ್ಟ ಕಾವೇರಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಗಂಗಾಧರಶಾಸ್ತ್ರಿಗಳವರು ವ್ಯಾತಪಟ್ಟ ಸದರೀ ಕಾವೇರಮ್ಮನವರಿಗೆ ಮುಖ್ಯ ವಾರಸುದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ವ್ಯಾತಪಟ್ಟ ಕಾವೇರಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

...ದರಖಾಸ್ತುದಾರರಾದ ಗಂಗಾಧರಶಾಸ್ತ್ರಿಗಳವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರ... ...ಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯಾತಪಟ್ಟ ಕಾವೇರ... ...ಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

...ಇಸವಿ ಏಪ್ರೈಲ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊ-

ಸನ್ 1902—1903ನೇ ಇಸವಿ ವಿ|| ಅರ್ಜೀ ನಂಬರ್ 106.

ಮೃತಪಟ್ಟ ಸಂತೋಜಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಸಟ್ವಾಬಾಯಿ, ಮೃತಪಟ್ಟ ಸದರೀ ಸಂತೋಜಿರಾಯರಿಗೆ ಮುಖ್ಯ ವಾರಸುದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಸಂತೋಜಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರು ರೆಗ್ಯುಲೇಷನ್ ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಟ್ವಾಬಾಯಿಯವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂತೋಜಿರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರಿಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 107.

ಮೃತಪಟ್ಟ ಶೇಷಗಿರಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಯಮುನಾಬಾಯಮ್ಮ ಮೈನರ್, ಗಾರ್ಡಿಯನ್ ಗಂಡ ಶೇಷಗಿರಿರಾಯರು, ಮೃತಪಟ್ಟ ಸದರೀ ಶೇಷಗಿರಿರಾಯರಿಗೆ ಮುಖ್ಯವಾರಸುದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ಶೇಷಗಿರಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಯಮುನಾಬಾಯಮ್ಮ ಮೈನರ್, ಗಾರ್ಡಿಯನ್ ಗಂಡ ಶೇಷಗಿರಿರಾಯರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೇಷಗಿರಿರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರಿಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೋಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 108.

ಮೃತಪಟ್ಟ ಮುದ್ದುಮಲ್ಲಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಪರ್ವತಯ್ಯಾ, ಮೃತಪಟ್ಟ ಸದರೀ ಮುದ್ದುಮಲ್ಲಯ್ಯನವರಿಗೆ ಮುಖ್ಯ ವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ನೆಲಮಂಗ್ಲದ ತಾಲ್ಲೂಕು ಸೊಂಡೆಕೊಪ್ಪ ಗ್ರಾಮದ ವಾಸಸ್ಥರಾಗಿ ಮೃತಪಟ್ಟ ಮುದ್ದುಮಲ್ಲಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪರ್ವತಯ್ಯನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುದ್ದುಮಲ್ಲಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರಿಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 114.

ಮೃತಪಟ್ಟ ಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಸೋಮಯ್ಯನವರು, ಮೃತಪಟ್ಟ ಸದರೀ ಸುಬ್ಬಯ್ಯನವರಿಗೆ ಮುಖ್ಯ ವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಬಂಡರೆಡ್ಡಿ ಪಾಳ್ಯದ ವಾಸಸ್ಥರಾಗಿ ಮೃತಪಟ್ಟ ಸುಬ್ಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೋಮಯ್ಯನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಸುಬ್ಬಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರಿಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 115.

ಮೃತಪಟ್ಟ ವೆಂಗಟಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ವೆಂಕಟೇಶಯ್ಯನವರು, ಮೃತಪಟ್ಟ ಸದರೀ ವೆಂಕಟಯ್ಯ ಉರಫ್ ಕೋನಯ್ಯನಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಕ್ಲೋಸ್ ಪೇಟೆ ತಾಲ್ಲೂಕು ಮಾಕಳಿ ಹೋಬಳಿ ನಾಗಾವಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕಟಯ್ಯ ಉರಫ್ ಕೋನಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟೇಶಯ್ಯನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಯ್ಯ ಉರುಫ್ ಕೋನಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 121.

ಮೃತಪಟ್ಟ ಸಂಪನ್ನಯ್ಯನವರ ನಂಜುಂಡಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜುಂಡಪ್ಪ, ಚಿಕ್ಕ ನಂಜುಂಡಪ್ಪ, ಮೃತಪಟ್ಟ ಸದರೀ ಸಂಪನ್ನಯ್ಯನವರ ನಂಜುಂಡಪ್ಪನವರಿಗೆ ಮುಖ್ಯವಾರಸ್ಸುದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ನಗರ್ತರ ಪೇಟೆ ವಾಸಸ್ಥರಾಗಿ ಮೃತಪಟ್ಟ ನಂಜುಂಡಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜುಂಡಪ್ಪ, ಚಿಕ್ಕ ನಂಜುಂಡಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಸಂಪನ್ನಯ್ಯನವರ ನಂಜುಂಡಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 123.

ಮೃತಪಟ್ಟ ಜೋತ್ರರ ಪೆದ್ದಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಾಳಪ್ಪ, ಮೃತಪಟ್ಟ ಸದರೀ ಜೋತ್ರರ ಪೆದ್ದಣ್ಣನವರಿಗೆ ಮುಖ್ಯವಾರಸುದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ತಾಲ್ಲೂಕು ಬೇಗೂರು ವಾಸಸ್ಥರಾಗಿ ಮೃತಪಟ್ಟ ಪೆದ್ದಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾಳಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಪೆದ್ದಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 126.

ಮೃತಪಟ್ಟ ವೆಂಕಟ್ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀನಿವಾಸಾಚಾರ್ರು ಮತ್ತು ರಂಗಣ್ಣ, ಮೃತಪಟ್ಟ ಸದರೀ ವೆಂಕಟ್ರಾಮಯ್ಯನವರಿಗೆ ಎಗ್ಸಿಕ್ಯೂಟರು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಪಟ್ಣದ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಾಚಾರ್ರು, ರಂಗಣ್ಣನವರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ವೆಂಕಟರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರೆಲ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 127.

ವೃತಪಟ್ಟ ಮುನಿಸಾಮಿ ಮೊದಲಿಯಾರ್ರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ಅಂದಾಲಮ್ಮ, ವೃತಪಟ್ಟ ಸದರೀ ಮುನಿಸಾಮಿ ಮೊದಲಿಯಾರ್ರಿಗೆ ಮುಖ್ಯ ವಾರಸುದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಶಿವಲ್ ಅಂಡ್ ಮಿಲಿಟೆರಿ ಸ್ಟೇಷನ್ ಹಲಸೂರು ವಾಸಸ್ಥರಾಗಿ ವೃತಪಟ್ಟ ಮುನಿಸಾಮಿ ಮೊದಲಿಯಾರ್ರ ಜೀವಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಂದಾಲಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆಮಾಡಲ್ಪಡುತ್ತೆ. ಆಕಾಲದಲ್ಲಿ ಸದರಿ ವೃತಪಟ್ಟ ಮುನಿಸಾಮಿ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೆಲ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 144.

ವೃತಪಟ್ಟ ಶಂಖರೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬಾಲಮ್ಮ, ವೃತಪಟ್ಟ ಸದರೀ ಶಂಖರೈಯ್ಯನವರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಆನೆಕಲ್ ಕಸಬಾ ವಾಸಸ್ಥರಾಗಿ ವೃತಪಟ್ಟ ಶಂಖರೈಯ್ಯನವರ ಜೀವಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಾಲಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 28ಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ವೃತಪಟ್ಟ ಶಂಖರೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 154.

ವೃತಪಟ್ಟ ರಗುನಾದರಾಯರವರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು ವೆಂಕೋಬರಾವು, ವಾಸುದೇವ, ಗಾ॥ ಸುಂದರಾಬಾಯಿ, ವೃತಪಟ್ಟ ಸದರೀ ರಗುನಾದರಾಯರಿಗೆ ಮುಖ್ಯವಾರಸ್ಸುದಾರ್ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸುಲ್ತಾನ್‌ಪೇಟೆಯಲ್ಲಿ ವಾಸಸ್ಥರಾಗಿ ವೃತಪಟ್ಟ ರಗುನಾದರಾವು ಯವರ ಜೀವಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕೋಬರಾವ್ ವಾಸುದೇವ ಗಾ॥ ಸುಂದರಾಬಾಯಿಯವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ವೃತಪಟ್ಟ ರಗುನಾದರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ 1903ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 151.

ವೃತಪಟ್ಟ ಚಿಕ್ಕಮುಗಳೂರು ತಾಲ್ಲೂಕು ರಿಕಾರ್ಡು ಕೀಪರ್‌ಆಗಿದ್ದ ಲೇಟ್ ನಾರಣೈಯ್ಯಂಗಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸೋಮಮ್ಮ ಮೈನರ್, ಗಾ॥ ತಂದೆ ಗೋವಿಂದಾಚಾರ್ರು, ರಂಗಾಚಾರ್ರ ಮಗ್ಗ ಪೇಷ್ಕರ್ ಅಂಚೆ ಮುತ್ಸದ್ದಿ, ಚಿಕ್ಕ ಮುಗಳೂರು ತಾ॥ ಈಶ್ವರವಳ್ಳಿ, ವೃತಪಟ್ಟ ಸದರೀ ನಾರಣೈಯ್ಯಂಗಾರ್ರಿಗೆ ಖಾಸ ಮಾವನು ಆಗಬೇಕೆಂಬ ಹಕ್ಕುದಾರಿ ಮೇಲೆ ಸದರಿ ಯವರು ಚಿಕ್ಕಮುಗಳೂರು ವಾಸಸ್ಥರಾಗಿ ವೃತಪಟ್ಟ ನಾರಣೈಯ್ಯಂಗಾರ್ರ ಜೀವಗಿ ಬಗ್ಯಾಗಿ ಬರತಕ್ಕ 500—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋವಿಂದಾಚಾರ್ರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ನಾರಣೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್1903ನೇ ಇಸವಿ ಮಾರ್ಚಿ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 185.

ಮೃತಪಟ್ಟ ನಗರದಲ್ಲಿದ್ದ ದಾಮೋದರೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ವೆಂಕಟದಾಸಪ್ಪ ಬಿನ್ ದಾಮೋದರೈಯ್ಯನವರು, ಮೃತಪಟ್ಟ ಸದರೀ ದಾಮೋದರೈಯ್ಯನವರಿಗೆ ಖಾಸ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ನಗರದ ಸ್ಥಳದ ವೆಂಕಟದಾಸಪ್ಪನವರು ನಗರದ ವಾಸಸ್ಥರಾಗಿ ಮೃತಪಟ್ಟ ದಾಮೋದರೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 600—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟದಾಸಪ್ಪನವರ ಅರ್ಜಿಯನ್ನು ಸ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಾಮೋದರೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ್ 190.

ಮೃತಪಟ್ಟ ತೀರ್ಥಹಳ್ಳಿ ತಾಲ್ಲೂಕು ಕಲ್ಲೋಣಿಯಲ್ಲಿದ್ದ ಸುಬ್ಬಣ್ಣೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ದುರ್ಗಪ್ಪಯ್ಯ, ವಾಸುದೇವೈಯ್ಯ, ಶೀತಾರಾಮೈಯ್ಯ ಮೈನರ್, ಗಾರ್ಡಿಯನ್ ಕಲ್ಲೋಣಿ ರಾಮಪ್ಪ, ತೀರ್ಥಹಳ್ಳಿ ತಾಲ್ಲೂಕು ಕಲ್ಲೋಣಿ ವಾಸಿ, ಮೃತಪಟ್ಟ ಸದರೀ ಕಲ್ಲೋಣಿ ಸುಬ್ಬಣ್ಣೈಯ್ಯನವರಿಗೆ ಖಾಸ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಕಲ್ಲೋಣಿ ಸ್ಥಳದ ಮೈನರಿಗೋಸ್ಕರ ಕಲ್ಲೋಣಿ ರಾಮಪ್ಪನವರು ಕಲ್ಲೋಣಿ ವಾಸಸ್ಥರಾಗಿ ಮೃತಪಟ್ಟ ಕಲ್ಲೋಣಿ ಸುಬ್ಬಣ್ಣೈಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ 3,064-5-6 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಲ್ಲೋಣಿ ದುರ್ಗಪ್ಪಯ್ಯ, ವಾಸುದೇವೈಯ್ಯ, ಶೀತಾರಾಮೈಯ್ಯ ಮೈನರ್ ಗಾರ್ಡಿಯನ್ ಕಲ್ಲೋಣಿ ರಾಮಪ್ಪನವರ ಅರ್ಜಿಯನ್ನು 1903ನೇ ಇಸವಿ ಜೂನ್ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಲ್ಲೋಣಿ ಸುಬ್ಬಣ್ಣೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರಾಗಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1903ನೇ ಇಸವಿ ಮಾರ್ಚಿ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ

ಸಿ. ಶೇಷಯ್ಯಂಗಾರ್,
ಶಿರಸ್ತೇದಾರ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ 1902—1903ನೇ ಇಸವಿ ಅರ್ಜೀ ನಂಬರು 432.

ಮೃತಪಟ್ಟ ಸುಬ್ಬಯ್ಯಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಗುಂಡ್ಲು ಖಾಯಂಗುತ್ತಾ ಹುರಿಯಾಲು ಗ್ರಾಮದಲ್ಲಿದ್ದು ಫವತಿಯಾದ ಸುಬ್ಬಶೆಟ್ಟರ ಮಕ್ಕಳು 1. ರಾಮಶೆಟ್ಟಿ, 2. ವರದಶೆಟ್ಟಿ, 3. ಗೋಪಾಲಶೆಟ್ಟಿ, ಮೈನರ್ ಗಾರ್ಡಿಯನ್ ತಾಯಿ ಲಕ್ಷ್ಮಮ್ಮ ವುರುಫ್ ಪುಟ್ಟಮ್ಮ, ಮೃತಪಟ್ಟ ಸದರೀ ಸುಬ್ಬಶೆಟ್ಟರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಗುಂಡ್ಲು ತಾ॥ ಹುರಿಯಾಲು ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಯ್ಯಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1903ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಯ್ಯಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1903ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸ್ 1902—1903ನೇ ಇಸವಿ ಅರ್ಜೀ ನಂಬರ್ 430.

ಮೃತಪಟ್ಟ ತಿಮ್ಮಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹುಣಸೂರು ತಾಲ್ಲೂಕು ಪಿರಿಯಾಪಟ್ಣದಲ್ಲಿರುವ ಗೊಲ್ಲರ ಜಾತಿ ಮರಿಗೌಡನ ಮಗ ಪುಟ್ಟರಾಮೇಗೌಡ, ಮೃತಪಟ್ಟ ಸದರೀ ತಿಮ್ಮಯ್ಯನಿಗೆ ತಂದೆ ಆಗಬೇಕೆಂಬ ಹಕ್ಕುದಾರಿ ಮೇಲೆ ಹುಣಸೂರು ತಾಲ್ಲೂಕು ಪಿರಿಯಾಪಟ್ಣದಲ್ಲಿ ವಾಸಸ್ಥರಾಗಿ ಮೃತಪಟ್ಟ ತಿಮ್ಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1903ನೇ ಇಸವಿ ಮೇ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1903ನೇ ಇಸವಿ ಏಪ್ರೆಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1902-1903ನೇ ಇಸವಿ ಅರ್ಜೀ ನಂಬರ 487.

ಮೃತಪಟ್ಟ ಹೈದರಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮಂಡಿ ಮೊಹಲ್ಲಾದಲ್ಲಿ ಘೇರ್ಕೃದೀದ ಬಂದು ವಾಸವಾಗಿದ್ದ ಬುಡ್ಡಸಾಬರ ಮಗ ಹೈದರಸಾಬಿಯ್ಯ 1ನೇ ನಿಕಾ ಹಂಡತಿ ಕುಲ್ಸುಂಬಿ, 2ನೇ ಮದುವೆ ಆದ ಹಂಡತಿ ಇರಾದಬಿ, ಮೃತಪಟ್ಟ ಸದರೀ ಹೈದರಸಾಬರಿಗೆ ಹೆಂಡರು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಹೈದರಸಾಬರ ಜಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜೂನ್ ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೈದರಸಾಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 520.

ಮೃತಪಟ್ಟ ಶಾಮಂಣಶಾಸ್ತ್ರೀರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ನೆಲಮನೇಲಿರುವ ಶ್ರೀಕಂಠಶಾಸ್ತ್ರಿಗಳ ಹೆಂಡತಿ ಮಲ್ಲಮ್ಮ ಪುರುಫ್ ಚೆಣ್ಣಮ್ಮ, ಮೃತಪಟ್ಟ ಸದರೀ ಶಾಮಂಣಶಾಸ್ತ್ರೀರಿಗೆ ಅರ್ಜೀದಾರಳ ಗಂಡನ ಚಿಕ್ಕಪ್ಪ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ವಾಸಸ್ಥರಾಗಿ ಮೃತಪಟ್ಟ ಶಾಮಂಣಶಾಸ್ತ್ರೀರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜೂನ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಾಮಂಣಶಾಸ್ತ್ರೀರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇದೆ.

ಸರ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ 531.

ಮೃತಪಟ್ಟ ನಂಜನಗೂಡಿನಲ್ಲಿದ್ದ ಗಣಾರಾಧನೆ ವೆಂಕಟಸುಬ್ಬಯ್ಯನವರ ಮಗ ಸುಬ್ರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಾವೇರಮ್ಮ, ಮೃತಪಟ್ಟ ಸದರೀ ಸುಬ್ರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ವಾಸಸ್ಥರಾಗಿ ಮೃತಪಟ್ಟ ಸುಬ್ರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಕಾವೇರಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಜೂನ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 532.

ಮೃತಪಟ್ಟ ರಂಗಂಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀರಂಗಪಟ್ಟಣದಲ್ಲಿ ವಾಸವಾಗಿದ್ದ ಬಿಟ್ಟಿದಪುರದ ಸುಬ್ರಾಯರ ಮಗ ರಂಗಂಣನವರ ಹೆಂಡತಿ ಎಡತೊರೆ ಕಸಬಾದಲ್ಲಿ ಗಂಗಾಧರದೀಕ್ಷಿತರ ಮನೇಲಿರುವ ನಂಜಮ್ಮ, ಮೃತಪಟ್ಟ ಸದರೀ ರಂಗಂಣನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಎಡತೊರೆ ವಾಸಸ್ಥರಾಗಿ ಮೃತಪಟ್ಟ ರಂಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜೂನ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಂಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೈಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಎಸ್. ವರದರಾಜಯ್ಯಂಗಾರ್,

ಸಬ್ ಜಡ್ಜಿ.

Mysore Government Central Press, Bangalore.—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಫಾಯಿಷ್ ಆದ್ದು. [ನಂ 17.

ಬೆಂಗಳೂರು, ಗುರುವಾರ, ಏಪ್ರೈಲ್ ತಾ॥ 30, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

ನೋಟಿಸ್.

ಬೆಂಗಳೂರು, 1903ನೇ ಇಸವಿ ಏಪ್ರೈಲ್ 27ನೇ ತಾರೀಖು.

ಮೈಸೂರು ತಾಲ್ಲೂಕು ಬಾಬತು ಶೇಂದಿ ಅಂಗಡಿಗಳು 1903ನೇ ಇಸವಿ ಮಾರ್ಚಿ 18ನೇ ಮರ್ಸು೦ 429—ಎಕ್ಸ್. ಎಫ್. 6—1902ನೇ ನಂಬರು ಗವರ್ನಮೆಂಟ್ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿರುವಂತೆ 1903ನೇ ಇಸವಿ ಮೇ ತಿಂಗಳ 7ನೇ ತಾರೀಖಿಗೆ ಬದಲಾಗಿ 5ನೇ ತಾರೀಖಿನಲ್ಲಿ ಹರಾಜು ಹಾಕಲ್ಪಡುತ್ತವೆಂದು ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ.

ಪಿ. ಎನ್. ಪೂರ್ಣಯ್ಯ,
ಮೈಸೂರು ಸೀಮೆಯ ಎಕ್ಸೈಜ್ ಕಮಿಷನರ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 7ನೇ ಏಪ್ರೈಲ್ 1903.

1.—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಡಿಸ್ಟ್ರಿಕ್ಟಿನ ಈ ಕೆಳಗೆ ಕಾಣುವ ತಾಲ್ಲೂಕುಗಳಲ್ಲಿರುವ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‍ಗಳು ಅಮೃತಮಹಲ್ ಕಾವಲುಗಳು ಸೇರಿಸಿಕೊಂಡು ಇತರ ಎಲ್ಲಾ ಸರ್ಕಾರಿ ಜಂಗಲ್ ಮತ್ತು ಬಂಜರ್ ಜಮೀನ್‍ಗಳಲ್ಲಿಯೂ ಸಹ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1903ನೇ ಜುಲೈ ಗುರ್‌ಲಾಗಾಯಿತು 1904ನೇ ಇಸವಿ ಜೂನ್ ಆಖೈರ ವರೆಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವತಂತ್ರ ಹಕ್ಕನ್ನು 1903ನೇ ಇಸವಿ ಜೂನ್ ತಾರೀಖು 10ರಲ್ಲಿ ಬೆಂಗಳೂರು ಮೊಕ್ಕಾಮಿನಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರೊಂದಿಗೆ ಆಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರವರೊಂದಿಗೆಯಾಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಾಲ್ಲೂಕುವಾರ್ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸುತ್ತಾರೆ.

1-7—1903ರ ಲಾಗಾಯಿತು 30—6—1904ರ ವರೆಗೆ.

1 ಕಾನಕಾನಹಳ್ಳಿ.	2 ಆನೇಕಲ್.

2. ಹರಾಜ್ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಹರಾಜ್ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಪುನಹ ಹರಾಜು ಮಾಡಲ್ಪಡುವದು.

3. ಮೇಲೆ ವಿವರಿಸಿರುವಂತೆ ತಂಗಡಿ ಮತ್ತು ಕಕ್ಕೆ ಚಕ್ಕೆ ಜಮಾವಣೆ ಹಕ್ಕನ್ನು ಜಾಸ್ತಿ ದರಖಾಸ್ತು ದಾರನಿಗೆ ವಿಲೇವಾರಿ ಮಾಡಲ್ಪಡುವದು. ಆದರೆ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ. ಯಾವ ದರಖಾಸ್ತನ್ನಾದರೂ ಯಾವ ಕಾರಣವನ್ನು ನಮೂದಿಸದೆ ಅಂಗೀಕರಿಸುವದಕ್ಕೂ ಅಥವಾ ನಿರಾಕರಿಸುವದಕ್ಕೂ ಇರುವ ಹಕ್ಕನ್ನು ಡೆಪ್ಯುಟಿ ಕಮಿಷನರವರು ತಾವೆ ಉಳಿಸಿಕೊಂಡು ಇರುತ್ತಾರೆ.

4. ದರಖಾಸ್ತು ಮಾಡಲು ಅಭಿಪ್ರಾಯವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡದ ಏಜೆಂಟ್ ಯಾ ಮುಖ್ತಾರ್ಲೀಕರ ಮೂಲಕವಾಗಿಯಾಗಲಿ ಹಾಜರಾಗಬೇಕು. ಯಾವ ದರಖಾಸ್ತು ದಾರನಾಗಲಿ (100), ಒಂದು ನೂರು ರೂಪಾಯಿಗಳನ್ನು ಠೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿಯಾಗಲಿ ಸವಾಲ್ ಮಾಡಲು ಆತನಿಗೆ ಅಪ್ಪಣೆ ಕೊಡಲ್ಪಡುವದಿಲ್ಲ. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಮೊಬಲಗು ಹರಾಜು ಖೈದಾದೊಡನೆ ವಾಪಸ್ ಮಾಡಲ್ಪಡುವದು. ಆಖೈರ್ ಜಾಸ್ತಿ ದರಖಾಸ್ತುದಾರನು ಹರಾಜ್ ಮಂಜೂರಾದ ಸಂಗತಿ ತಮಗೆ ತಿಳಿಸಿದ ಮೂರು ದಿವಸದೊಳಗೆ ತಾವು ಮೊದಲೇ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸೇರಿಸಿ ಒಟ್ಟು ಹರಾಜು ಮೊಬಲಗಿನ ನಾಲು ಹಿಸ್ಸೆ ಮೊಬಲಗನ್ನು ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ಪಾವತಿ ಮಾಡತಕ್ಕದ್ದು. ಹಾಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಹರಾಜು ಕ್ರಮ ನಡಿಸುವ ಆಫಿಸರಿಂದ ಸದರೀ ಬಾಬು ಪುನಹ ಹರಾಜು ಮಾಡಲ್ಪಡುವದು.

5. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗಿಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿಯಾಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

6. ಇಜಾರೆದಾರನು ಇದರಡಿ ನಮೂದಿರುವ ಷರತ್ತುಗಳಮೇರಿಗೆ ನಡಕೊಳ್ಳಲು ತಾನು ಬದ್ಧನಾಗಿರುತ್ತಾನಾಗಿ ಒಂದು ಮುಚ್ಚಳಿಕೆಯನ್ನು ಬರದು ರುಜು ಹಾಕಿ ಕೊಡತಕ್ಕದ್ದು. ಇಜಾರೆ ಮಂಜೂರಾದ ಸಂಗತಿ ಆತನಿಗೆ ತಿಳಿಸಿದ ಐದು ದಿವಸದೊಳಗಾಗಿ ಮುಚ್ಚಳಿಕೆಯನ್ನು ಆತನು ಬರದು ಕೊಡತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಠೇವಣಿ ಮೊಬಲಗು ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಖಾಯಿ ಪುನಹ ಹರಾಜು ಮಾಡಲ್ಪಡುವದು.

ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿ ಮೊಬಲಗನ್ನ ಮತ್ತು ಪೂರಾ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ ಸಹ ಸಮವಾದ ಮೂರು ಖಿಸ್ತುಗಳಲ್ಲಿ ಈ ಕೆಳಗೆ ಕಾಣುವಂತೆ ಪಾವತಿ ಮಾಡತಕ್ಕದ್ದು. ಮೊದಲನೇ ಖಿಸ್ತು 1903ನೇ ಇಸವಿ ಅಕ್ಟೋಬರ್ 1ನೇ ತಾರೀಖು, 2ನೇ ಖಿಸ್ತು 1904ನೇ ಇಸವಿ ಜನವರಿ 1ನೇ ತಾರೀಖು, 3ನೇ ಖಿಸ್ತು 1904ನೇ ಇಸವಿ ಏಪ್ರೈಲ್ 1ನೇ ತಾರೀಖು ಯಾವದಾದರೂ ಒಂದು ಖಿಸ್ತು ಮೇಲೆ ಕಂಡಂತೆ ಪಾವತಿಯಾಗದೆ ತಪ್ಪಿದಲ್ಲಿ ಚಕ್ಕೆಗಳ ಜಮಾವಣಿ ಮತ್ತು ರಫ್ತು ಮಾಡುವದನ್ನ ನಿಲ್ಲಿಸಿಬಿಡಲ್ಪಡುತ್ತಿಯಲ್ಲದೆ ಇಜಾರೆ ಮೊಬಲಗಿನ ಬಾಕಿ ಮೊಬಲಗು ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಿ ಇಜಾರೆಯನ್ನು ವಜಾ ಮಾಡಲ್ಪಡುವದು.

ಷರತ್ತುಗಳು.

(1) ಒಂದು ವರುಷಕ್ಕೆ ಒಳಪಟ್ಟ ಎಳೇಗಿಡ ಅಥವಾ ಕೊಂಬೆಯನ್ನು ಕಡಿಯಬಾರದು ಮತ್ತು ಚಕ್ಕೆ ತೆಗಿಯಬಾರದು.

(2) ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕ್ಮಿ ಕಂಟ್ರಾಕ್ಟುದಾರರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟುದಾರ ಜವಾಬ್ದಾರನಾಗಿರಬೇಕು.

(3) ಚಕ್ಕೆ ಜಮಾವಣಿ ಬಗ್ಯೆ ಬೇರೆ ಬೇರೆ ವಿಂಗಡಿಸುವ ಸರ್ಕಲ್‌ನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರರುಗಳ ಹೆಸರಿನ ಮತ್ತು ಚಕ್ಕೆಯನ್ನು ರಫ್ತು ಮಾಡುವದಕ್ಕೆ ಮುಂಚೆ ದಾಸ್ತಾನ್ ಮಾಡಿ ಇಡುವ ಜಾಗಾಗಳ ಒಂದು ಪಟ್ಟಿಯನ್ನು ಇಜಾರೆದಾರನು ಕೊಡತಕ್ಕದ್ದು.

(4) ಕೊಗಟ ತೆಗೆದ ನಂತರ ವುಳಿಯುವ ಆ ಸಂಬಂಧವಾದ ಏಸಿಷ್ಟ ಸಾದೆಯು ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(5) ಸ್ಟೇಟ್ ಫಾರೆಸ್ಟ್ ಅಥವಾ ಪ್ಲಾಂಟೇಷನ್ನಲ್ಲಿ ಚಕ್ಕೆಯನ್ನು ಜಮಾಯಿಸಬೇಕಾದರೆ ಅವುಗಳ ಚಾರ್ಜಿನಲ್ಲಿರುವ ರೇಂಜ್ ಆಫೀಸರು ಮತ್ತು ಫಾರೆಸ್ಟರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆಯದೆ ಪ್ರವೇಶ ಮಾಡಕೂಡದು.

(6) ಸೊಸಿ ಹಾಕಿ ಆಗಲಿ, ಅಭಿವೃದ್ಧಿಪಡಿಸುವದಕ್ಕಾಗಲಿ ಯಾ ಇತರ ಫಾರೆಸ್ಟ್ ಕೆಲಸಗಳು ನಡಿಸುವದಕ್ಕಾಗಿ ಬಹಿರಂಗವಾಗಿ ಬಂದ್ ಮಾಡಲ್ಪಟ್ಟಿರುವ ಸ್ಟೇಟ್ ಫಾರೆಸ್ಟ್ ಯಾ ಪ್ಲಾಂಟೇಷನ್‌ಗಳ ಭಾಗಗಳಲ್ಲಿ ಚಕ್ಕೆ ಜಮಾವಣಿ ಕೆಲಸ ನಡಿಸಕೂಡದು.

(7) ಇಜಾರೆ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಸೀಲ್ ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನ ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಹಾಜರ್ಮಾಡತಕ್ಕದ್ದು.

(8) ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ನಿಯಮಿಸಲ್ಪಡುವ ರೀತಿಯಲ್ಲಿ ಇಜಾರೆದಾರನು ಪಾಸ್ ಪಡಿಯತಕ್ಕದ್ದು.

(9) ಡಿಸ್ಟ್ರಿಕ್ಟಿನ ಕೋಠಿಗಳಲ್ಲಿ ಮತ್ತು ರೈಲ್ವೆ ಸ್ಟೇಷನ್‌ಗಳಲ್ಲಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಗಳನ್ನು 15—7—1904 ಒಳಗಾಗಿ ಡಿಸ್ಟ್ರಿಕ್ಟಿನ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(10) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರು ಒಂದು ಷರತ್ತಿಗೆ ಇಜಾರೆದಾರನು ತಪ್ಪಿ ನಡೆದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಪಿಗೂ ಜಮಾಯಿಸಿ ಇರುವ ಏಸಿಷ್ಟ ಚಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು. ಮತ್ತು ಇಜಾರೆದಾರನಿಂದ ಪಾವತಿ ಮಾಡಲ್ಪಟ್ಟಿರುವ ಪೂರಾ ಇಜಾರೆ ಮೊಬಲಗನ್ನೇ ಆಗಲಿ ಅಥವಾ ಆ ಪೈಕಿ ಡೆಪ್ಯುಟಿ ಕಮಿಷನರವರಿಂದ ತೀರ್ಮಾನಿಸಲ್ಪಡುವ ಹಾಗಾದ ಮೊಬಲಗನ್ನೇ ಆಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು.

ನೋಟಿಫಿಕೇಷನ್, ತಾರೀಖು 22ನೇ ಏಪ್ರಿಲ್ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕ್ಲೋಸಿಪೇಟೆ ರೇಂಜ್ ಸಾವನದುರ್ಗ ಮತ್ತು ಹುಲಿಗೊಂದಿ ಸ್ಟೇಟ್ ಫಾರಸ್ಟುಗಳಲ್ಲಿ ಇರುವ ಪಟ್ಟಿ ಚಕ್ಕೆಯನ್ನು 31—1—1904ರ ವರೆಗೆ ರೂಢಿಸಲು 30—5—1903ರಲ್ಲಿ ಡಿ॥ ಫಾ॥ ಆಫಿಸರವರಿಂದ ಅಥವಾ ರೇಂಜ್ ಆಫಿಸರವರಿಂದ ಕ್ಲೋಸ್ಪೇಟೆಯಲ್ಲಿ ಹರಾಜು ಹಾಕಲ್ಪಡುವದು.

ಷರತ್ತುಗಳು.—1. ಚಡದರಖಾಸ್ತುದಾರನು ಹರಾಜು ಖೈದಾದಕೂಡಲೆ ಕಾಲುಹಿಸ್ಸೆ ಮೊಬಲಗನ್ನು ಹಾಜರುಮಾಡಬೇಕು. ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಡಿ॥ ಫಾ॥ ಆಫಿಸರವರಿಂದ ಕೊಡೋಣಾಗುವ ಅಡ್ವೈಸ್ ಮೇರೆ ಸಮೀಪದಲ್ಲಿರುವ ತಾಲ್ಲೂಕು ಟ್ರೆಜರಿಗೆ ಹರಾಜು ತಾರೀಖು ಲಾಗಾಯತು ಮೂರು ದಿವಸದಲ್ಲಿ ಪಾವತಿ ಮಾಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಬಾಬು ಪುನಹ ಹರಾಜುಮಾಡಲ್ಪಡುವದು.

2. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಿಗ್ಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಿಗ್ಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿ ಆಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

3. ಸದರಿ ಚಕ್ಕೆಯನ್ನು ಡಿ॥ ಫಾ॥ ಆಫಿಸರವರಿಂದ ಕೊಡೋಣಾಗುವ ಲೈಸೆನ್ಸ್ ಮೇರೆ ಅದರಲ್ಲಿ ನಮೂದಾಗುವ ವಾಯಿದೆ ಅಂದರವಾರ್ ಸಾಗಿಸಿಕೊಳ್ಳಬೇಕು.

4. ಸೂರ್ಯ ಅಸ್ತಮಾನವಾದ ನಂತರ ಮತ್ತು ಸೂರ್ಯ ಉದಯವಾಗುವದಕ್ಕೆ ಪೂರ್ವದಲ್ಲಿ ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಯಾವ ಮರಗಳು ಸಾಗಿಸಲ್ಪಡಕೂಡದು.

5. ಗುತ್ತಾದಾರನು, ಬಳ್ಳಿ ಯಾ ತಾಯಿಬೇರಿಗೆ ಇಜಾ ಇಲ್ಲದಂತೆ ಪಕ್ಕದ ಬೇರುಗಳಲ್ಲಿ ಮಾತ್ರ ಚಕ್ಕೆಯನ್ನು ರೂಢಿಸಿಕೊಳ್ಳಬೇಕು.

6. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟಿನಲ್ಲಿ ಬೆಂಕಿ ಸಂಭವಿಸಿದರೆ ಅವರನ್ನೇ ಶಿಕ್ಷೆಗೆ ಗುರಿಪಡಿಸಲಾದೀತು.

7. ಕಂಟ್ರಾಕ್ಟುದಾರನು ಚಕ್ಕೆ ರೂಢಿಸುವದರಲ್ಲಿ ತಾಯಿಬೇರಿನಲ್ಲಿ ತೆಗೆಯದೆ ಪಕ್ಕದ ಬೇರುಗಳಲ್ಲಿ ತೆಗೆದುಕೊಳ್ಳಬೇಕು.

ನೋಟಿಫಿಕೇಷನ್, ತಾರೀಖು 22ನೇ ಏಪ್ರಿಲ್ 1903.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಬೆಂಗಳೂರು ಡಿಸ್ಟ್ರಿಕ್ಟಿಗೆ ಫಾರೆಸ್ಟುಗಳಲ್ಲಿರತಕ್ಕ ಹಣ ಸಣ್ಣ ಮತ್ತು ಥಪ್ಪ ಬಿದರುಗಳನ್ನು 1904ನೇ ಇಸವಿ ಜನವರಿ 31ನೇ ತಾರೀಖಿನ ವರಿವಿಗೆ ಸಾಗಿಸುವ ಹಕ್ಕನ್ನು ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಈ ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ:—

ನಂಬರು	ತಾಲ್ಲೂಕು.	ಫಾರೆಸ್ಟು ಹೆಸರು.	ಹರಾಜು ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
1	ಆನೆಕಲ್ ...	ಬಿಳವನಕುಪ್ಪೆಕೇರಿ ರಾಗಿಹಳ್ಳಿ	11—5—1903	ಬನ್ನೇರಘಟ್ಟ	ಡೆಪ್ಯುಟಿ ಕನ್ಸರ್ವೇಟರ್, ಬೆಂಗಳೂರು ಡಿಸ್ಟ್ರಿಕ್ಟ್
2	ಕನಕನಹಳ್ಳಿ ...	ಬಿಳಿಕಲ್	16—5—1903	ಕನಕನಹಳ್ಳಿ	
		ಬಾಣಂತಮಾರಿ			
3	ಡಿಟೋ ...	ಮುಗೂರು	18—5—1903	ಕೋಡಿಹಳ್ಳಿ	
		ರಾಮದೇವರ ಬೆಟ್ಟ ರಿಜರ್ವ್			
		ಮುನೇಶ್ವರ ಬೆಟ್ಟ ರಿಜರ್ವ್			
		ಮಂಜನಾತ ರಿಜರ್ವ್			
4	ಡಿಟೋ ...	ಚೀಲಂದಾಡಿ	20—5—1903	ಸಾತನೂರು	
		ಅಚ್ಚಲು ರಿಜರ್ವ್			
5	ಮಾಲವಳ್ಳಿ ...	ಬಸವನ ಬೆಟ್ಟ	21—5—1903	ಹಲಗೂರು	
6	ಕನಕನಹಳ್ಳಿ ...	ಕಬ್ಬಾಳ್	22—5—1903	ಹಾನಿಯೂರು	
		ಟೈಲೂರು ರಿಜರ್ವ್			
7	ಮಾಗಡಿ ...	ಸಾವನದುರ್ಗ	25—5—1903	ಮಾಗಡಿ	

2. ಹರಾಜು ಖೈದಾದ ಕೂಡಲೆ ಆಖೈರ್ ಸವಾಲ್ದಾರನು ಪೂರಾ ಮೊಬಲಿಗಿನ ಮೈಕಿ ಶೇಕಡ 25 ರೂಪಾಯಿ ಡಿಪಾಜಿಟ್ ಇಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು 30 ದಿವಸಗಳ ಒಳಗಾಗಿ ಸಂದಾಯ ಮಾಡಬೇಕು. ಈ ಮೇರೆ ಪಾವತಿ ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು. ಅಲ್ಲದೆ ಮೊದಲ್ ಸವಾಲ್ದಾರನಿಗೆ ನಷ್ಟಕ್ಕೆ ಗುರಿಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಈ ಹರಾಜಿನಲ್ಲಿ ಜಾಸ್ತಿ ಉತ್ಪತ್ತಿ ಆಗುವ ಪಕ್ಷ ಅದಕ್ಕೆ ಅವಲ್ ದರಖಾಸ್ತುದಾರನಿಗೆ ಏನೂ ಹಕ್ಕು ಇರುವದಿಲ್ಲ. ಪೂರಾ ಹಣ ಸಂದಾಯ ಮಾಡಿದಕೂಡಲೆ ಗಳ ಜವಾವಣಿ ಮಾಡಿಕೊಳ್ಳಲು ಲೈಸೆನ್ಸು ಕೊಡಲ್ಪಡುತ್ತೆ.

3. ಬಿದರು ಜಮಾಯಿಸುವ ಫಾರೆಸ್ಟು ಯಾ ಫಾರೆಸ್ಟಿನ ಯಾವ ಭಾಗದಲ್ಲಿಯೇ ಆಗಲಿ ಬೆಂಕಿ ಬಾಧೆ ಏನಾದರೂ ಉಂಟಾದಲ್ಲಿ ಕಂಟ್ರಾಕ್ಟುದಾರನು ಅದಕ್ಕೆ ಜವಾಬ್ದಾರನನ್ನಾಗಿ ಮಾಡುತ್ತೆ. ಕಂಟ್ರಾಕ್ಟುದಾರನಿಂದಾಗಲಿ ಅಥವಾ ಅತನ ಕಡೆ ಮನುಷ್ಯನಿಂದಾಗಲಿ ಯಾವದಾದರೂ ಫಾರೆಸ್ಟು ತಕಶೀರ್ ನಡದಲ್ಲಿ ಅಂಥಾದ್ದಕ್ಕೆ ಫಾರೆಸ್ಟ್ ರೂಲ್ ಮೇರೆ ಕ್ರಮ ಜರಗಿಸಲ್ಪಡುವದು.

4. ಒಣ ಬಿದರು ತೆಗೆದುಕೊಳ್ಳತಕ್ಕವರು ಸಾವಿರ ಗಳು ಕಟ್ಟುವದಕ್ಕೆ ಆಗುವ ಪಚ್ಚೆ ಗಳಿಗೆ 0—4—0 ಯಂತೆ ಬೇರೆ ಹಣ ಕೊಟ್ಟು ಲೈಸೆನ್ಸು ಮೂಲಕ ಕಟ್ಟುಗಳು ತೆಗೆದುಕೊಳ್ಳಬೇಕು.

ಟಿ. ಅಬ್ದುಲ್ ಕರೀಂ,

ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

1903ನೇ ಇಸವಿ ಏಪ್ರೈಲ್ ತಾರೀಖು 20ನೇ ಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡೀ ಕಂಡ ಕಡೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ನಾಟುಗಳನ್ನು ಕಡೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರ ರೂಬರೂಬು ಬಹಿರಂಗವಾದ ಹರಾಜು ಮಾಡಿಸಲ್ಪಡುತ್ತೆ :—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ನಾಟುಗಳ ಜಾತಿ, ಅದದು ಮತ್ತು ಅವುಗಳ ಸುತ್ತಳತೆ.																		ಷರಾ.
			ಸಾಗವಾನಿ ನಾಟು.	ಅಳತೆ.	ಸಾಗವಾನಿ ತುಂಡು.	ಅಳತೆ.	ನಂದೀ ನಾಟು.	ಅಳತೆ.	ಸಾಗವಾನಿ ಬೆಲಗು.	ಅಳತೆ.	ಮತ್ತೀ ನಾಟು.	ಅಳತೆ.	ದಿಂನ್ನಾಲ್ ನಾಟು.	ಅಳತೆ.	ಹೊನ್ನೇ ನಾಟು.	ಅಳತೆ	ಯತ್ಯಾಗದ ನಾಟು.	ಅಳತೆ.	ಜಂಬೆ ತುಂಡು.	ಜಾಲಾರಿ ತುಂಡು.	
			No.	C.ft.	No.	C.ft.	No.	C.ft.	No.	C.ft.	No.	C.ft.	No.	C.ft.	No.	C.ft.	No.	C.ft.	No.	No.	
1	ತರೀಕೆರೆ ...	18ನೇ ಮೇ 1903	* 200	6,000	200	2,000	100	3,000	1,000	1,500	100	2,500	100	2,500	...	...	...	...	50	50	* ಕೆಲವು ಉತ್ತಮವಾದ ಸಾಗವಾನಿ ನಾಟುಗಳು ಹರಾಜು ಮಾಡಲ್ಪಡುತ್ತವೆ.
2	ಬೆಂಕೀಪುರ.	20ನೇ ಮೇ 1903	150	4,500	..	...	25	750	..	..	100	2,500	..	..	50	1,250	...	..	...	...	
3	ದಾನಿವಾಸ ..	22ನೇ ಮೇ 1903	...	....	..		25	750	..	..	100	2,500	..	...	50	1,250	30	600		...	

ಷರತ್ತು :—1895ನೇ ಇಸವಿ ಮಾರ್ಚಿ 10ನೇ ಮಾರ್ಸ್ಕಂ 1529—R. F. 155–92ನೇ ನಂಬರು ಇಸ್ತಿಹಾರ್ ನಾಮೆಯನ್ನು 1895ನೇ ಇಸವಿ ಏಪ್ರೈಲ್ 25ನೇ ಮಾರ್ಸ್ಕಂ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಛಾಪಿಯಿಷ್ ಮಾಡಿರುತ್ತೆ ನೋಡಬೇಕು.

ತಾರೀಖು 25ನೇ ಏಪ್ರೀಲ್ 1903, ಚಿಕ್ಕಮಗಳೂರು.

ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಸಮಸ್ತ ಜನಗಳಿಗೂ ತಿಳಿಸುವದೇನಂದರೆ—ಈ ಕೆಳಗೆ ವಿವರಿಸುವ ತಪಸೀಲ್ ಪಟ್ಟಿಯಲ್ಲಿ ಕಾಣುವ ಡಿಪೋಗಳಲ್ಲಿ ಜಮಾವಣೆ ಆಗಿರತಕ್ಕ ಫಸಾರೆ ಜಿನಸುಗಳನ್ನ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ಹರಾಜು ಷರತ್ತುಗಳು.—1895ನೇ ಇಸವಿ ಏಪ್ರೀಲ್ 15ನೇ ತಾರೀಖಿನ 15ನೇ ನಂಬರು ಗೆಜೆಟಿನಲ್ಲಿ ಫಾಯಿಷ್ಮಾಡಿಸಿ ಇರುವ ಆದೇ ಇಸವಿ ಮಾರ್ಚಿ 10ನೇ ತಾರೀಖಿನ ಗೌರ್ನಮೆಂಟ 1529—R. F. 1559-92ನೇ ನೋಟಿಫಿಕೇಷನಂತೆ ನಡೆದು ಕೊಳ್ಳಬೇಕು.

ಡಿಪೋ ಹೆಸರು.		ಹರಾಜು ತಾರೀಖು.	ಹರಾಜು ನಡಿಸುವ ಅಫಿಸರ ಹೆಸರು.	ಅಳಲೆಕಾಯಿ ಮಣ.	ಶೀಗೇಕಾಯಿ ಮಣ.	ಹುಣಸೇಹಣ್ಣು ಮಣ	ಜೇನುಮೇಣ ಮಣ.	ಷರಾ.
ಚಿಕ್ಕಮಗಳೂರು	..	15—5—03	ಡಿ॥ ಫಾರೆಸ್ಟು ಆಫಿಸರವರು	845	1,500	17	1-16	ಸ್ವಲ್ಪ ಹೆಚ್ಚು ಕಡಿಮೆ.
ಕಡೂರು	..	17—5—03		..	100	..	..	
ತರೀಕೆರೆ	...	19—5—03		400	50	..	..	

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ, ಕಡೂರು ಡಿಸ್ಟ್ರಿಕ್ಟು.

ತಾರೀಖು 23ನೇ ಏಪ್ರೀಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟ ಟಿಂಬರ ಡಿಪೋಗಳಲ್ಲಿ ನಾಟು ಮತ್ತು ಬಂಬುಗಳು ಆಯಾಯ ಡಿಪೋಗಳಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದಾಗಲಿ ಅಥವಾ ಡೆಪ್ಯುಟಿ ಕಮಿಷನರ ಸಾಹೇಬರವರಿಂದ ಗೊತ್ತು ಮಾಡಲ್ಪಟ್ಟ ಇತರ ಆಫಿಸರವರಿಂದಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತವೆ:—

ನಂಬರು	ಡಿಪೋ ಹೆಸರು		ಹರಾಜು ತಾರೀಖು	ಸಾಗುವಾನಿ ಬೆಲಗು	ಜಂಗಲಿ ನಾಟುಗಳು	ಕಿರಿಬಿದರು	ಬೊಂಬು
1	ಉಬ್ರಾಣಿ ಡಿಪೋ	...	20—5—1903	940	....	2,000	150
2	ಶಿರಾಳಕೊಪ್ಪ ಡಿಪೋ	...	2—6—1903	..	139	455	130

ಹರಾಜ್ ಷರತ್ತು—(1895ನೇ ಇಸವಿ ಏಪ್ರೀಲ್ 25ನೇ ತಾರೀಖು ನೋಟಿಫಿಕೇಷನ ನಂಬರು 15) ಮೈಸೂರು ಗೆಜೆಟ ನಂಬರ 15—25-4-1895ನಲ್ಲಿ ಫಾಯಿಷ್ ಆಗಿ ಇರುವ ನಂಬರು 15229-ಆರ. ಎಫ್. 155—92ನೇ ನೋಟಿಫಿಕೇಷನನ್ನ ನೋಡತಕ್ಕದ್ದು.

ಜೆ. ಮಾರ್ಟೈರೋ,
ಫಾರ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ, ಶಿವಮೊಗ್ಗಾ ಡಿಸ್ಟ್ರಿಕ್ಟ.

ತಾರೀಖು 1ನೇ ಏಪ್ರಿಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರಿಂದಾಗಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು	ಹರಾಜು ತಾರೀಖು.	ಹರಾಜು ಸ್ಥಳ.
1	ಮೊಳಕಾಲ್ಮುರು ತಾಲ್ಲೂಕು ..	23—5—1903	ಮೊಳಕಾಲ್ಮುರು ತಾಲ್ಲೂಕು ಕಚೇರಿ
2	ಹೊಳಲಕೆರೆ ತಾಲ್ಲೂಕು ...	29-5—1903	ಹೊಳಲಕೆರೆ ತಾಲ್ಲೂಕು ಕಚೇರಿ
3	ಗಣಗಾ ಕಾವಲು ..		
4	ಹೊಸದುರ್ಗದ ತಾಲ್ಲೂಕು ...	30—5—1903	ಹೊಸದುರ್ಗ ತಾಲ್ಲೂಕು ಕಚೇರಿ
5	ದಾವಣಗೆರೆ ತಾಲ್ಲೂಕು ..	2—6—1903	ದಾವಣಗೆರೆ ತಾಲ್ಲೂಕು ಕಚೇರಿ
6	ಹರಿಹರ ತಾಲ್ಲೂಕು ..	3—6—1903	ಹರಿಹರ ಸಬ್ ತಾಲ್ಲೂಕು ಕಚೇರಿ

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ್ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ತಾರೀಖು 30ರ ವರಿಗಿನ 12 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಯೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್ದಾರರ ಮೊಬಲಗನ್ನ ಹರಾಜು ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಆಖೈರ್ ದರಖಾಸ್ತುದಾರರು ಹರಾಜು ಖೈದಾದ ವಡನೆ ಮೊದಲು ಅವರು ಇಟ್ಟುಇದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟಿದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫೀಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರದಾರನಿಗೆ ತಿಳಿಸಿದ 15 ದಿನಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜೂನ್ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರೆದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಒಳಪಡಿಸಲ್ಪಡುವದು. ಈ ಲಾಗಾಯಿತು ಸೆಸ್ಸು ವಸೂಲು ಮಾಡುವದಿಲ್ಲ.

ಷರತ್ತುಗಳು.

1. ಒಂದು ವರುಷಕ್ಕೆ ಮೇಲ್ಪಟ್ಟ ದೊಡ್ಡದಾದ ಯಾ ಸಣ್ಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.
2. ಒಂದು ವರುಷಕ್ಕೆ ಒಳಪಟ್ಟ ಎಳೇಗಿಡಗಳನ್ನು ಇಜಾರೆದಾರನ ನವಕರರಾಗಲಿ ಅಥವಾ ಆತನ ಷಿಕಿಮಿ ಕಂಟ್ರಾಕ್ಟುದಾರರಾಗಲಿ ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಒಂದು ಸರ್ಕಲಿನಲ್ಲಿ ನೇಮಿಸಲ್ಪಡುವ ಇಜಾರೆದಾರನ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟುದಾರರುಗಳ ಹೆಸರಿನ ಒಂದು ಲೀಸ್ಟು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.

4. ತೊಗಟೆ ತೆಗದನಂತರ ಆ ಸಮ್ಮಂಧವಾದ ವಿಷಿಷ್ಟ ಖಾದೆಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣೆ ಆದಬಗ್ಗೆ ತಪಶೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮ್ಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫೀಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿ ಜೂನ್ ಆಖೈರ್ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟಿದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟು ಸರಹದ್ದು ಹೊರಕ್ಕೆ ತೆಗದು ಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯು ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವೂ ಸರಕಾರಕ್ಕೆ ದಂಡವಾಗಿ ತೆಗದು ಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ 1,000 ಒಂದು ಸಾವಿರ ರೂಪಾಯಿವರಿಗೆ ಜುರ್ಮಾನೆ ವಿಧಿಸಲ್ಪಡುವದಕ್ಕೆ ಬದ್ಧನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ನೋಟೀಸ್.

ತಾರೀಖು 23ನೇ ಏಪ್ರೆಲ್ 1903ನೇ ಇಸವಿ.

ಸನ್ 1895ನೇ ಇಸವಿ ಮಾರ್ಚಿ 11ನೇ ಮೆರ್ಸ್ಕಂ 14523—30 R. F. 157–93ನೇ ನಂಬರ್ ಗವರ್ನ್ಮೆಂಟು ಪ್ರೊಸೀಡಿಂಗ್ಸ್ ಅನುಸರಿಸಿ ಈ ಕೆಳಗೆ ಕಂಡ ಗ್ರಾಮಗಳ ಬಗ್ಗೆ ಶಿದ್ಧಾರ್ಥಿ ಮತ್ತು ದುಂದುಭಿ ಸಂವತ್ಸರಗಳ ಬಾಬತು ಕುಳವಾರಿ ಚಿಟ್ಟಿಗಳನ್ನು 1903ನೇ ಇಸವಿ ಆಗಸ್ಟು ಮಾಹೆ 31ನೇ ತಾರೀಖಿನಲ್ಲಿ ನಾಶ ಮಾಡಲ್ಪಡುತ್ತೆ. ಇದರ ನಕಲನ್ನು ಪಡಿಯಲು ಅಪೇಕ್ಷೆವುಳ್ಳವರು ಮೇಲ್ಕಂಡ ತಾರೀಖಿನ ಒಳಗಾಗಿ ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಲ್ಲಿ ಕ್ರಮವಾಗಿ ಅರಬಾಸ್ತು ಕೊಟ್ಟು ಕಾಪಿ ಪಡಿಯಬಹುದು :—

ತಾಲ್ಲೂಕು.	ಹೋಬಳಿ.	ಗ್ರಾಮದ ಹೆಸರು.
ಕೋಲಾರ ..	ಹೋಳೂರು ..	1 ಐತರಸನಹಳ್ಳಿ
ಶ್ರೀನಿವಾಸಪುರ	ಶ್ರೀನಿವಾಸಪುರ ..	2 ಹೆಬ್ಬಟ
ಗುಮ್ಮನಾಯಕನಪಾಳ್ಯ ..	ಚೇಳೂರು ..	3 ಚಿನ್ನಮಂಡೆಂಪಲ್ಲಿ
		4 ಪೆಮ್ಮಯ್ಯಗಾರಿಪಲ್ಲಿ
		5 ಷೇರುಖಾನ್ ಕೋಟೆ
	ಗುಟ್ಟಪಾಳ್ಯ ..	6 ಬೋಯಿನವಾರಿಪಲ್ಲಿ
		7 ಬಿಕನಪಲ್ಲಿ
		8 ಮರವೆಹಳ್ಳಿ
		9 ರಾಜುಗುಂಡ್ಲಪಲ್ಲಿ
		10 ಮುಗುವನಹಳ್ಳಿ
		11 ಭೀಮನವಡ್ಡು
		12 ನಾಚಿಗುಂಡ್ಲಪಲ್ಲಿ
		13 ಕಂಬದಿನ್ನೆ
		14 ಕಾನಗಲದಿನ್ನೆ
		15 ಹೊನ್ನಿಕೆರೆ
		16 ವಿಕಟಕವಿ ಹೊಸಹಳ್ಳಿ
		17 ವಡೆಹಳ್ಳಿ

ತಾಲ್ಲೂಕು.	ಹೋಬಳಿ.	ಗ್ರಾಮದ ಹೆಸರು.
	ದುಗ್ಗಸಂದ್ರ ಕೊತ್ತಮಂಗಲ	18 ವಳಗೆರೆಹಳ್ಳಿ 19 ರಾಜೇಂದ್ರಹಳ್ಳಿ 20 ಬ್ಯಾಡರಹಳ್ಳಿ 21 ನಾಗೇನಹಳ್ಳಿ 22 ಗುಂಡ್ಲಹಳ್ಳಿ 23 ಗುಡಿಪಲ್ಲಿ 24 ಕೊಡಿಹಳ್ಳಿ 25 ತಲರಸನಹಳ್ಳಿ 26 ಕಾಮಸಾನಹಳ್ಳಿ 27 ನಾಚಿಹಳ್ಳಿ 28 ಅನಂತಪುರ 29 ಅಲಗಾನಹಳ್ಳಿ 30 ಕೂತಾಂಡಹಳ್ಳಿ 31 ಕುರಬರಹಳ್ಳಿ 32 ಕೊತ್ತಮಂಗಲ 33 ಗೊಲ್ಲಹಳ್ಳಿ 34 ಜಗನ್ನಾಥಪುರ 35 ದೊಡ್ಡಿಗಾನಹಳ್ಳಿ 36 ದುಡುಗುರಿಕಿ 37 ನಲ್ಲೂರು 38 ನಾಗನಾಯಕನಹಳ್ಳಿ 39 ಬೊಮ್ಮೇನಹಳ್ಳಿ 40 ಬಳಂಬಳಿ 41 ಮಲೇರಿ 42 ವಿರುಪಾಕ್ಷಪುರ ಗುಟ್ಟಹಳ್ಳಿ 43 ಹೊಸಹಳ್ಳಿ 44 ಹನುಮನಹಳ್ಳಿ

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ವೃಪ್ಪಕುಂಟೆ ಗ್ರಾಮದ ಪೆಶ್ಕಾ ಅ|| ವೆಂಕಟ್ರಾಯರಿಂದ ಬರಬೇಕಾದ ಜವಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ ಕೋಲಾರ ತಾಲ್ಲೂಕು ಕಚೇರಿಯಲ್ಲಿ ಅ|| ಕಾ|| ಸಾಹೇಬರವರ ಅಥವಾ ಅಮಲ್‌ದಾರ್ರವರ ರೂಬರೂ ಸ್ 1903ನೇ ಇಸವಿ ಜೂನ್ 17ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 184—1—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಆವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ

ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ನ್ಯಂ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸ್ವತ್ತಿನ ತಖ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕ್ರಯ. (ರೂ. ಆ. ಪೈ.)	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ. (ಎ. ಗು.)	ಕಂದಾಯ. (ರೂ. ಆ. ಪೈ.)	ಹರಾಜಿಗೆ ಬರತಕ್ಕಾದ ಸೊತ್ತಿನ ಮೇಲೆ ಬರತಕ್ಕಾದ ಬಾಕಿ ಮೊಬಲಗು. (ರೂ. ಆ. ಪೈ.)
ಕೋಲಾರ	ಸುಗಟೂರು	ಹೊಳಲಿ ಹನುಮಂತಪುರ	ಕೋಲಾರದ ಪರ್ಷ ಅಮಲ್ದಾರ್ ವೆಂಕಟ್ರಾಯರು		...	ಹೊಳಲಿ ಹನುಮಂತಪುರ ಗ್ರಾಮ	ಪರಂಪೋಕು	204 23	6 8 0	35 9 8 ವಿಕಾರಿ
							ಖುಷ್ಕಿ	187 11	185 0 0	35 9 8 ಶಾರ್ವರಿ
							ತರಿ	18 29	35 4 0	35 9 8 ಪ್ಲವ
							ಬಾಗಾಯಿತು	5 5	26 0 0	76 4 3 ಶುಭಕೃತು
										0 8 0 ನೋಟಿಸ್ ಫೀ
							ಜುಮ್ಲಾ ...	415 28	252 12 0	0 8 0 ಇಸ್ತಿಹಾರ್ ಫೀ
										184 1 3 ಇದಕ್ಕೆ ಆಗುವ ಬಡ್ಡಿ ಸಹಾ

* ಹರಾ ಬಾಕೀ ಇರುವವುಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಹನುಮಂತಪುರ ಗ್ರಾಮದ ಪರ್ಷ ಅಮಲ್ದಾರಿ ವೆಂಕಟ್ರಾಯರವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡೀ ನಮೂದಿಸುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ ಮತ್ತು ಕೋಲಾರ ತಾಲ್ಲೂಕು ಅಮಲ್ದಾರ್ರ ರೂಬರೂಬ್ ಸನ 1903ನೇ ಇಸವಿ ಜೂನ್ 19ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕದಂ ಜಾಸ್ತಿ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಸೀಲ್ ಮೇರಿಗೆ 197—6—5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ

ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ, ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕನೂನಿಂದ ವಿಧಿಸಲ್ಪಟ್ಟ ಖಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.			
					ರೂ. ಆ. ಪೈ.			ಎ.	ಗು	ರೂ.	ಆ.	ಪೈ.	ರೂ.	ಆ	ಪೈ.	
ಕೋಲಾರ	ಸುಗಟೂರು	ಹನುಮಂತಪುರ	ಕೋಲಾರದಲ್ಲಿರುವ ಪೆನ್ಷನ್ ಅಮಲ್ದಾರ್ ವೆಂಕಟ್ರಾಯರವರು.		...	ಹನುಮಂತಪುರ ಪೂರಾ ಗ್ರಾಮ.	ಪರಂಬೋಕು	25	7	0	12	0	44	13	9	ವಿಕಾರಿ
							ಖುಷ್ಕಿ	143	0	113	10	0	44	13	9	ಶಾರ್ವರಿ
							ತರಿ	8	7	36	12	0	44	13	9	ಪ್ಲವ
							ಬಾಗಾಯತು	2	13	11	0	0	61	13	2	ಶುಭಕೃತು
													196	6	5	
							ಜುಮ್ಲಾ	178	27	162	2	0	0	8	0	ನೋಟಿಸ್ ಫೀಜು
													0	8	0	ಇಸ್ತಿಹಾರ್ ಫೀಜು
													197	6	5	
													ಪಾವತಿ ತಾರೀಖಿನವರಿವಿಗೆ ಆಗುವ ಬಡ್ಡಿ ಸಹ.			

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾಕ್ಸ್,
ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ತಾರೀಖು 17ನೇ ಏಪ್ರಿಲ್ 1903.

ತುಮಕೂರು ಡಿಸ್ಟ್ರಿಕ್ಟ್ 2ನೇ ಜನರಲ್ ಅ॥ ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೆನಿಯಸ್ ಕೇ॥ ನಂ. 78.

ಫಿರ್ಯಾದಿ. ಸರ್ಕಾರ — ಅಪರಾಧಿ. ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತ್ತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮರ್ಕ್ಯಂನಲ್ಲಿ ದೊರತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೋಲೀಸಿನವರಿಂದ ಹಾಜರಾಗಲ್ಪಟ್ಟಿತು.

ಈ ಮೊಕದ್ದಮಾ ವಿಚಾರಣೆ ನಡಿಶಿದ್ದರಲ್ಲಿ ಈ ಮಾಲುಗಳನ್ನು ಸದರೀ ಬೂಸಿಗನು ನ್ಯಾಯವಾಗಿ ಸಂಪಾದಿಸಿದ್ದಲ್ಲವೆಂತಲೂ ಚೋರೀ ಮಾಲುಗಳಾಗಿರಬಹುದೆಂದು ಗುಮಾನೀ ತೋರಿಬಂದಿರುತ್ತೆ. ಆದ್ದರಿಂದ ಈ ಮಾಲುಗಳಿಗೆ ವಾರಸದಾರ್ರು ಯಾರಾದರೂ ಇದ್ದಲ್ಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಆರು ತಿಂಗಳು ಒಳಗಾಗಿ ಈ ಕೋರ್ಟಿನ ರೂಬರೂ ಹಾಜರಾಗಿ ತಮ್ಮ ವಾರಸನ್ನು ದೃಢಪಡಿಸಿಕೊಟ್ಟು ಮಾಲುಗಳನ್ನು ಪಡೆಯಬಹುದು.

ತುಮಕೂರು ಡಿ॥ 2ನೇ ಜನರಲ್ ಅ॥ ಕಮಿಷನರ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು—ಕ್ರಿಮಿನಲ್ ಮಿಸಲೇನಿಯಸ್ ಕೇಸ್ ನಂಬರು 78 (1901—1902).

ಈ ಮೊಕದ್ದಮೆಯಲ್ಲಿ ಕೋರ್ಟಿಗೆ ರೂಬರೂಬ್ ಹಾಜರಾದ ಮಾಲುಗಳ ತಪಶೀಲು ತೋರಿಸುವ ಲೀಸ್ಟ್.

1	ಕಂಚಿನ ಲೋಟಾದಲ್ಲಿರುವ ನಗದು 233—0—0 ರೂಪಾಯಿಗಳು (ಜುಡಿಷಲ್ ಡಿಪಾಜಿಟ್ನಲ್ಲಿಧೆ).	
2	ಚಿನ್ನದ ವಾಲೆ ಜೊತೆ ...	1
3	ಚಿನ್ನದ ತಾಳಿ ಬಟ್ಟುಗಳು ..	3
4	ಚಿನ್ನದ ಬಾವಲಿ ಜೊತೆ ..	1
5	ಬಿಳಿ ಚಿನ್ನದ ಬಾವಲಿ ..	1
6	ಚಿನ್ನದ ಮೂಗನತ್ತು ..	1
7	ಕೆಂಪುಕಲ್ಲು ಮೂಗನತ್ತು	1
8	ಹತ್ತು ಕಡಕು ಜೊತೆ ..	1
9	ಬೆಳ್ಳಿ ಮುರು ಜೊತೆ ..	1
10	ಚಿನ್ನದ ಸಣ್ಣ ಗುಂಡುಗಳು ...	152
	ಅದರಲ್ಲಿ ಗುಂಡಿನ ತಾತಿಗಳು ...	2
	ಬಿಳಿ ಹರಳುತಾಳಿ ..	1
	ಕೆಂಪುಕಲ್ಲು ತಾಳಿ ..	1
11	ಭಂಗಾರದ ಗಂಟೆ ಜೊತೆ 3, ಒಕ್ಕಲಿಗರು ಕಿವಿಗೆ ಹಾಕತಕ್ಕದ್ದು.	
12	ಭಂಗಾರದ ಅರೆಮುರ ...	1
13	ಭಂಗಾರದ ಜಟ್ಟಿ ಗುಂಡು ...	1
14	ಭಂಗಾರದ ಗಿಣಿ ಮುರು ಮುತ್ತು ಸಮೇತ	1
15	ಚಿನ್ನದ ಮುರುಗಳು ...	3
16	ಚಿನ್ನದ ತಾಳಿ ಮುರಕು ...	1
17	ಬೆಳ್ಳಿ ಮುರ ..	1
18	ಬೆಳ್ಳಿ ಉಂಗರ .	1
19	ಬೆಳ್ಳಿ ಭಂಗಾರದ ತಾಳಿ ...	1
20	ನಗದು ರೂಪಾಯಿಗಳು 5, ಜುಡಿಷಲ್ ಡಿಪಾಜಿಟ್ನಲ್ಲಿಧೆ.	
21	ಸಣ್ಣ ತಾಂಬ್ರದ ಕಾಸು ..	1
22	ಬೊಂಬಾಯಿ ಮುತ್ತುಗಳು ..	16
23	ಬೆಳ್ಳಿ ಬಾಬತು ಬೇವಿನಕಾಯಿ ತಾತಿ ..	1
24	ಬೆಳ್ಳಿ ಕರಡಿಗೆ ಬಿರಟೆಸಹ	
25	ಬೆಳ್ಳಿ ಚಟ್ಟಿರತಕ್ಕ ಚವಲಿತುಂಬು ..	1
26	ಬೆಳ್ಳಿ ಸಾದಾ ಚವಲಿತುಂಬು ...	1
27	ಬೆಳ್ಳಿ ಛತ್ರಿ ..	1
28	ಬೆಳ್ಳಿ ನಾಗಮುರಿ ..	1
29	ಬೆಳ್ಳಿ ಮುದ್ರೆ ಉಂಗರ ..	1
30	ಬೆಳ್ಳಿ ಉಂಗರಗಳು ...	2
31	ಬೆಳ್ಳಿ ಪಾಪಟೆ ಉಂಗರ ...	1
32	ಕಾಲುಪಿಲ್ಲಿ ಜೊತೆ	2
33	ಬೆಳ್ಳಿ ಕಾಲುಸುತ್ತು ...	1
34	ಬೆಳ್ಳಿ ಸರಪಣಿಗಳು ಕೊಕ್ಕಿ ಸಮೇತ..	6
35	ಬೆಳ್ಳಿ ಚೂರುಗಳು	
36	ಬೊಂಬಾಯಿ ಮುತ್ತುಗಳು ...	21
37	ಮುಚ್ಚಳ ಸಮೇತ ಇರತಕ್ಕ ತಾಂಬ್ರದ ಭರಣಿಯಲ್ಲಿ ನಗದು ಎಂಟು ರೂಪಾಯಿ (ರಾಜಾ ಪಾವಲಿಗಳು ಎರಡು)	
38	ಹವಳ, ಚಿನ್ನದ ಗುಂಡುಗಳು, ತಾ? ವಗೈರೆ ಧಾರದಲ್ಲಿ ಪೋಣಿಸಿದ ಸರ ಬಂದು	
39	ಕೆಂಪು ರೇಷುಮೆ ವಸ್ತ್ರ ..	1
40	ಹಿತ್ತಾಳಿ, ತಾಲಿ ಒಂದು	

ಬಿ. ತಿರುಮಲಾಚಾರ್,
ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್.

ತಾರೀಖು 26ನೇ ಮಾರ್ಚಿ 1903.

1903ನೇ ಜುಲೈ ಮಾಹೆ ಗುರ್ರು ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರಿಗೆ ಷೆಡ್ಯೂಲ್ A ಯಲ್ಲಿ ನಮೂದುಮಾಡಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಅದರಲ್ಲಿ ಕಂಡ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದಾ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟದಾರನು ಷೆಡ್ಯೂಲ್ B ಯಲ್ಲಿ ನಮೂದ ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲೀ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖೈರು ಆದಕೂಡಲೆ, ಬಾಬನ್ನು ಪಡೆಯತಕ್ಕ ಕಂಟ್ರಾಕ್ಟದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಿಟ್ಟು ಬಗ್ಗೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖೈರಾದ ಕೂಡಲೆ ಡಿಪಾಜಿಟ್ಟು ಬಗ್ಗೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರಾಕ್ಟದಾರನನ್ನು ಗುರಿಪಡಿಸಿ, ಪುನಹಾ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ಮಾಯಿದೆವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನಾ ರೂಪಾಯಿಗೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರಾಕ್ಟನ್ನು ಪುನಹಾ ಹರಾಜುಮಾಡಿ ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರಾಕ್ಟದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇಬಂದಲ್ಲಿ, ಮೊದಲು ಕಂಟ್ರಾಕ್ಟದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲಾ.

6. ಮೇಲ್ಕಂಡ 5 ಮತ್ತು 4ನೇ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಒಳಪಟ್ಟು ಕಂಟ್ರಾಕ್ಟದಾರ್ರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸಸ್ಸನ್ನೂ ಸಹ ಶೇರಿಸಿ, ಪಾವತೀ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತೆ ಖರಾರ್ವಾಕವಾಗಿ ಲೆಖ್ಖವನ್ನು ಕಂಟ್ರಾಕ್ಟದಾರ್ರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೇ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕಿಗಳ ಲೆಖ್ಖಗಳನ್ನು ಖರಾರ್ವಾಕಾವಾಗಿ ಇಡಲು, ಕಂಟ್ರ್ಯಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿಯಿರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೇಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರ್ಯಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನ್ಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೇ ಮರ್‍ತುಂ 274ನೇ ನಂಬರು ನೋಟಿಫಿಕೇಷನ್ ನೊಡನೆ ಸಂದರ್ಮಾಡಿರುವ ರೂಲ್ಸುಗಳಿಗೆ ಕಂಟ್ರ್ಯಾಕ್ಟುದಾರರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿಗಾಡಿಯಂತೆ ಭಾವಿಸಿ, ಅದೇರೀತಿಯೇ ಸುಂಕವಸೂಲ್ಮಾಡಬೇಕು.

ಷೆಡ್ಯೂಲ್. A.

ರಸ್ತೆಗಳು.	ಸ್ಟೇಷನ್ಗಳು.	ಹರಾಜಾಗತಕ್ಕ ಸ್ಥಳ.	ಹರಾಜು ತಾರೀಖು.
1. ಬೆಂಗಳೂರು—ಮಂಗಳೂರು ರಸ್ತೆ, ಸಿದ್ಧಾಪುರದ ಬ್ರ್ಯಾಂಚು ರಸ್ತೆ	ಪೆರ್ಯಾಪಟ್ಣದ ಕೋಟೆಗೆ ಪಶ್ಚಿಮ ಎರಡು ರಸ್ತೆಗಳು ಸೇರುವ ಸ್ಥಳ	ಹುಣಸೂರು ತಾಲ್ಲೂಕ್ ಕಚೇರಿ	1903ನೇ ಮೇ ತಾರೀಖು 11ರಲ್ಲು
2. ಹಾಸನ—ಪೆರ್ಯಾಪಟ್ಣ—ಕನ್ನಾನೂರು ರಸ್ತೆ	ಪೆರ್ಯಾಪಟ್ಣಕ್ಕೂ ಅಂಕನಹಳ್ಳಿಗೂ ಮಧ್ಯೆ		
3. ಮಡಿಕೇರಿ—ಕನ್ನಾನೂರು ರಸ್ತೆ	ಪಂಚವಳ್ಳಿ		
4. ಮೈಸೂರು—ಮಾನಂದವಾಡಿ ರಸ್ತೆ	ಕಾರೆಪುರ	ಹೆಗ್ಗಡ ದೇವನ ಕೋಟೆ ತಾಲ್ಲೂಕ್ ಕಚೇರಿ	ಡಿಟೋ 13ರಲ್ಲು
5. ಗುಂಡ್ಲುಪೇಟೆ—ಸುಲ್ತಾನಬತೇರಿ ರಸ್ತೆ	ಮೂಲೆ ಹೊಳೆ	ಗುಂಡ್ಲುಪೇಟೆ ತಾಲ್ಲೂಕ್ ಕಚೇರಿ	ಡಿಟೋ 15ರಲ್ಲು
6. ಬೆಂಗಳೂರು—ನೀಲಗಿರಿ ರಸ್ತೆ	ಬಂಡೀಪುರ		
7. ನಂಜನಗೂಡು—ಹಾಸನೂರು ಗಾಟ್ ರಸ್ತೆ	ಸುವರ್ಣಾವತೀ ಬಳಿ ಅತ್ತಿಕಲ್‌ಪುರ	ಚಾಮರಾಜನಗರ ತಾಲ್ಲೂಕ್ ಕಚೇರಿ	ಡಿಟೋ 20ರಲ್ಲು

ಷೆಡ್ಯೂಲ್ B ರೇಟುಗಳು.

ತಪಶೀಲು.	ರೇಟುಗಳು. ರೂ.	ಅ.	ಪೈ.	ಷರಾ.
ಪ್ರಯಾಣಸ್ಥರೊಡನೆ ನಾಲ್ಕು ಚಕ್ರದ ಗಾಡಿ	0	12	0	
ಡಿಟೋ ಇಲ್ಲದೆ ಇರುವ ಡಿಟೋ	0	6	0	
ಡಿಟೋ ಇರುವ ಎರಡು ಚಕ್ರದ ಗಾಡಿ	0	8	0	
ಪ್ರಯಾಣಸ್ಥರೊಡನೆ ಇಲ್ಲದೆ ಇರುವ ಎರಡು ಚಕ್ರದಗಾಡಿ	0	4	0	
ಗಾಡಿ ಬೋಜಾ ಸಹಿತವಾದದ್ದು.	0	4	0	
ಡಿಟೋ ಬೋಜಾ ಇಲ್ಲದ್ದು	0	2	0	
ಆನೆ	1	0	0	
ಒಂಟೆ	0	4	0	
ಕುದುರೆ ಸವಾರನುಳ್ಳದ್ದು	0	1	6	
ಡಿಟೋ ಸವಾರನಿಲ್ಲದ್ದು	0	0	9	
ಕುದುರೆ ಮರಿ, ಸವಾರನುಳ್ಳದ್ದು	0	0	9	
ಡಿಟೋ ಸವಾರನಿಲ್ಲದ್ದು	0	0	6	
ಎತ್ತು ಬೋಜಾ ವುಳ್ಳದ್ದು	0	1	0	
ಡಿಟೋ ಬೋಜಾ ಇಲ್ಲದ್ದು	0	0	6	
ಕತ್ತೆ ಬೋಜಾ ವುಳ್ಳದ್ದು	0	0	6	
ಡಿಟೋ ಬೋಜಾ ಇಲ್ಲದ್ದು	0	0	3	
ಪಲ್ಲಕ್ಕಿ	0	4	0	
ಕುರಿ, ಆಡು ಯಾ ಹಂದಿ	0	0	1	

ತಾರೀಖು 26ನೇ ಮಾರ್ಚಿ 1903.

1903ನೇ ಇಸವಿ ಜುಲೈ ಮಾಹೇ ಗುರ್ರೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ ಮಾಹೆ 30ರ ವರೆಗೆ ಯಡತೊರೆ ಟೋಲ್ ಗೇಟಿನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ 9ನೇ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರ್ಯಾಕ್ಟುದಾರನು ಷೆಡ್ಯೂಲ್‌ನಲ್ಲಿ ನಮೂದು ಮಾಡುವ ರೇಟಿನಂತೆಯೇ ಗೇಟುಗಳ ಮುಖಾಂತರ ಹೋಗುವ ಮತ್ತು ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರ್ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರವರಲ್ಲಿ ಇರುತ್ತದೆ.

4. ಪ್ರತಿ ತಿಂಗಳು ಹತ್ತನೇ ತಾರೀಖಿನ ವೊಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಪಾವತೀ ಮಾಡಬೇಕು. ಹರಾಜು ಆಖ್ಯೆರು ಆದ ಕೂಡ್ಲೆ, ಬಾಬನ್ನು ಪಡೆಯುತಕ್ಕ ಕಂಟ್ರ್ಯಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮನಾದ ಮೊಬಲಗನ್ನು ಡಿಪಾಜಟ್ಟು ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರ್ಯಾಕ್ಟು ನಡದರೆ, ಡಿಪಾಜೆಟ್ಟಿನಲ್ಲಿರುವ ಮೊಬಲಗನ್ನು ಆಖ್ಯೆರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖ್ಯೆರಾದ ಕೂಡ್ಲೆ ಡಿಪಾಜೆಟ್ಟು ಬಗ್ಯೆ ಮೊಬಲಗನ್ನು ಹಾಜರ್ಮಾಡದಿದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವಲ್ ಕಂಟ್ರ್ಯಾಕ್ಟುದಾರನನ್ನು ಗುರಿಪಡಿಸಿ, ಪುನಹ ಹರಾಜು ಮಾಡಲ್ಪಡುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವೊಳಗೆ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡುವ ತಾರೀಖಿನ ವರಿವಿಗೆ ಮಾಹೇಯಾನಾ ರೂಪಾಯಿಗೆ ಒಂದು ಪೈ ನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಉಳಿದ ಕಂಟ್ರ್ಯಾಕ್ಟನ್ನು ಪುನಹ ಹರಾಜು ಮಾಡಿ, ಲುಕ್ಸಾನಾದಲ್ಲಿ, ಸದರಿ ಮೊಬಲಗನ್ನು ಅವಲ್ ಕಂಟ್ರ್ಯಾಕ್ಟುದಾರನಿಂದ ವಸೂಲ್ಮಾಡುತ್ತೆ. ಎರಡನೇ ಹರಾಜಿನಲ್ಲಿ ನಫೇ ಬಂದಲ್ಲಿ, ಮೊದಲು ಕಂಟ್ರ್ಯಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಮೇಲ್ಕಂಡ 5 ಮತ್ತು 4ನೇ ಪ್ಯಾರಾಗಳಲ್ಲಿ ನಮೂದು ಮಾಡಿರುವ ಷರತ್ತುಗಳ ಬಳಪಟ್ಟು ಕಂಟ್ರ್ಯಾಕ್ಟುದಾರು ಹರಾಜು ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸನ್ನೂ ಸಹ ಸೇರಿಸಿ, ಪಾವತಿ ಮಾಡಬೇಕು.

7. ಪ್ರತಿ ದಿವಸದಲ್ಲೂ ಉತ್ಪತ್ತಿ ಆಗುವ ಮೊಬಲಗನ್ನ ತೋರಿಸುವಂತ ಖುಲಾಸೆವಾಗಿ ಲೆಖ್ಖವನ್ನು ಕಂಟ್ರ್ಯಾಕ್ಟುದಾರು ಇಡಬೇಕು. ಡಿಸ್ಟ್ರಿಕ್ಟು ಮತ್ತು ತಾಲ್ಲೂಕು ಉದ್ಯೋಗಸ್ತರು ಅಪೇಕ್ಷಿಸಿದ ಕಾಲದಲ್ಲಿ, ಇನ್ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು.

8. ಮೇಲ್ಕಂಡ 7ನೇ ಪ್ಯಾರಾದಲ್ಲಿ ನಮೂದು ಮಾಡಿರುವಂತೆ ಗೇಟುಗಳ ಮುಖಾಂತರ ಹೋಗತಕ್ಕ ಗಾಡಿ ವಗೈರೆ ಟ್ರಾಫಿಕ್‌ಗಳ ಲೆಖ್ಖಗಳನ್ನು ಖರಾರ್ವಾಕಾವಾಗಿ ಇಡಲು ಕಂಟ್ರ್ಯಾಕ್ಟುದಾರನ ಸ್ವಂತ ಖರ್ಚಿನಿಂದ ಒಬ್ಬ ಮುತ್ಸದ್ದಿಯನ್ನು ಇಡಬೇಕು.

9. ಹಾಲಿ ಇರುವ ಟೋಲ್ ಗೇಟುಗಳನ್ನು ಮತ್ತು ಮನೆಗಳನ್ನು ಒಳ್ಳೆ ಸ್ಥಿತಿಯಲ್ಲಿ ಇಟ್ಟುಕೊಂಡು ಇರುವದು ಕಂಟ್ರ್ಯಾಕ್ಟುದಾರನ ಕೆಲಸವಾಗಿರುತ್ತೆ. ಹೊಸ ಗೇಟುಗಳೇ ಆಗಲಿ ಮನೆಗಳೇ ಆಗಲಿ ಅವಶ್ಯಕವಿದ್ದಲ್ಲಿ ಗವರ್ನಮೆಂಟಿನ ಖರ್ಚಿನಿಂದ ತಯಾರ್ಮಾಡಿಸಲ್ಪಡುತ್ತೆ.

10. ಲೇಟ್ ಚೀಫ್ ಕಮಿಷನರ್ ಸಾಹೇಬರವರ 4—11—1876ನೇ ಮುರ್ಕಂ 274ನೇ ನಂಬರು ನೋಟಿಫಿಕೇಷನ್ಸೊಡನೆ ಸಾದರ್ಮಾಡಿರುವ ರೂಲ್ಸುಗಳಿಗೆ ಕಂಟ್ರ್ಯಾಕ್ಟುದಾರು ಬದ್ಧರಾಗಿರಬೇಕು.

11. ಮೂಳೆ ಅಥವಾ ಗೊಬ್ಬರದಿಂದ ಭರ್ತಿಯಾಗಿರುವ ಗಾಡಿಗಳನ್ನು ಖಾಲಿ ಗಾಡಿಯಂತೆ ಭಾವಿಸಿ, ಆ ರೀತಿಯೇ ಸುಂಕ ವಸೂಲ್ಮಾಡಬೇಕು.

ಷೆಡ್ಯೂಲ್.

ನಂಬರು.	ತಪಸೀಲು.	ಬೋಜ ಉಳ್ಳದ್ದು.			ಬೋಜ ಇಲ್ಲದ್ದು.		
		ರೂ.	ಆ.	ಪೈ.	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಗಾಡಿ	0	8	0	0	4	0
2	,, ಎರಡು ಡಿಟೋ	0	4	0	0	2	0
3	,, ಎಮ್ಮೆ ಅಥವಾ ಎತ್ತು	0	0	6	..	...	
4	,, ಆನೆ	1	0	0	1	0	0
5	,, ಒಂಟೆ	0	8	0	0	8	0
6	,, ಕುದುರೆ ಸವಾರ ಅಥವಾ ಬೋಜ ಉಳ್ಳದ್ದು.... ...	0	1	0	...	...	...
7	,, ಡಿಟೋ ಡಿಟೋ ಇಲ್ಲದ್ದು	...	...	...	0	1	0
8	,, ಕತ್ತೆ ಸವಾರ ಅಥವಾ ಬೋಜ ಉಳ್ಳದ್ದು	0	0	6	...	..	..

ತಾರೀಖು 26ನೇ ಮಾರ್ಚಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1903ನೇ ಜುಲೈ 1ರ ಲಾಗಾಯತು 1904ನೇ ಜೂನ್ ಆಖ್ಯೆರ್ ವರಿವಿಗೆ ತರಿಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೋಲೀಸ್ ಸ್ಟೇಷನ್ ಬಳಿ ತಾಲ್ಲೂಕು ಅಮಲ್ದಾರ್ರಿಂದ 1903ನೇ ಮೇ 21ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯುತಕ್ಕವರು ಸಂತೆಯದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರ್ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರ್ಯಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖ್ಯೆರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರ್ಯಾಕ್ಟು

ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಒಗ್ಗೆ ಜಮಾ ತೆಗದುಕೊಳ್ಳಲ್ಪಡುತ್ತೆ.

5. ಹರಾಜಿನ ಕಾಲದಲ್ಲಿ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲ್ಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಸೀಲಾಗಿ ತಿಳಿಯುವಂತೆ ಒಂದು ಲೆಖ್ಖ ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	ಪ್ರತ್ಯೇಕ ಹರಾಜುಮಾಡಲ್ಪಡುತ್ತೆ.	
ಗುಡಾರ	ಪ್ರತಿಯೊಂದಕ್ಕೆ	4 ಆಣೆ.
ಎತ್ತಿನ ಗಾಡಿ	,,	2 ,,
ಒಡ್ಡರ ಗಾಡಿ	,,	1 ,,
ಎತ್ತಿನ ಬೋಜಾ	,,	6 ,,
ತಲೆ ಬೋಜಾ	,,	3 ,,

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ, ಈ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳು ವಿನಹ) ಹಿಡುವಳಿಯಲ್ಲಿ ಇಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1903ನೇ ಜುಲೈ 1ನೇ ತಾರೀಖು ಲಾಗಾಯತು 1904ನೇ ಇಸವಿ ಜೂನ್ 30ನೇ ತಾರೀಖು ವರಿಗೆ ಜಮಾಯಿಸಿ ತೆಗೆದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ನಮೂದಾಗುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಆಯಾಯ ತಾಲ್ಲೂಕು ಅಮಿಲ್ದಾರರಿಂದ ರೇಂಜರ್‌ಗಳೊಡನೆ ಹರಾಜಿಗೆ ಇಡಲ್ಪಡುತ್ತೆ.

ನಂ.	ತಾಲ್ಲೂಕುಗಳ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1	ಚಿಕ್ಕಮಗಳೂರು ...	20—5—1903	ತಾಲ್ಲೂಕು ಕಛೇರಿ
2	ಕಡೂರು	22—5—1903	ಡಿಟ್ಟೋ
3	ತರೀಕೆರೆ	25—5—1903	ಡಿಟ್ಟೋ

ನೋಟು:—ಈ ಹರಾಜು ಆವಶ್ಯಕ ಕಂಡು ಬಂದರೆ ಸಮ್ಮತವಾರು ಮಾಡಲ್ಪಡುತ್ತದೆ.

2. ಹರಾಜು ಆಯಾಯ ತಾರೀಖಿನಲ್ಲಿ ಮಧ್ಯಾಹ್ನದಲ್ಲಿ ಪ್ರಾರಂಭವಾಗುತ್ತೆ.

3. ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

4. ಸವಾಲ್ ಮಾಡಲು ಇಷ್ಟಪುಳ್ಳವರು ಖುದ್ದಾಗಿಯಾಗಲಿ ಅಥವಾ ಕ್ರಮ ಪ್ರಕಾರ ಮೊಖ್ತ್ಯಾರಿ ವಹಿಸಿ ಏಜಂಟರ ಮುಖಾಂತ್ರವಾಗಿ ಹಾಜರಾಗಿ ಸವಾಲ್ ಮಾಡತಕ್ಕದ್ದು.

5. ಹರಾಜು ಕೈದಾದ ಕೂಡ್ಲೆ ಚಡಸನಾಲ್‌ದಾರನು ನಗದಾಗಿಯಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರ ಹೆಸರಿಗೆ ಇಂಡಾರ್ಸು ಮಾಡಲ್ಪಟ್ಟ ಪ್ರಾಮಿಸರಿ ನೋಟ್ ಮೂಲಕವಾಗಲಿ ಹರಾಜು ಮೊಬಲಗು ಮತ್ತು ಇದಕ್ಕೆ ಲೋಕಲ್ ಸೆಸ್ಸು ರೂಪಾಯಿಗೆ ಒಂದಾಣೆ ಮೇರೆ ಸೇರಿಸಿ ಒಟ್ಟು ಹಣದಲ್ಲಿ ಹತ್ತನೇ ಒಂದುಭಾಗ ಮೊಬಲಗನ್ನು ಡಿಪಾಜಿಟ್ ಹಾಜರ್ಮಾಡಬೇಕು. ಹಾಗೆ ಕೊಡಲು ತಪ್ಪಿದರೆ ಈ ಸ್ವತಂತ್ರದ ಹಕ್ಕನ್ನು ಪುನಹ ಹರಾಜು ಮಾಡುತ್ತೆ.

6. ಮೇಲೆ ಹೇಳಿದಂತೆ ದುಸರೆ ಹರಾಜು ಮಾಡುವದರಲ್ಲಿ ಲುಕ್ಸಾನಿಗೆ ಅವಲ್ ಹರಾಜುದಾರ ಗುರಿಯಾಗತಕ್ಕದ್ದು. ಅವನಿಗೆ ಆ ದುಸರೆ ಹರಾಜಿನಲ್ಲಿ ಲಾಭ ಬಂದರೆ ಹಕ್ಕು ಏನೂ ಇರುವದಿಲ್ಲ. ನಷ್ಟಬಂದರೆ ಅವಲ್ ಹರಾಜಿನಲ್ಲಿ ಬಂದ ಸವಾಲಿನ ಮೊಬಲಿಗಿಗೂ ಎರಡನೇ ಹರಾಜಿನಲ್ಲಿ ಬಂದ ಹುಟ್ಟುವಳಿಗೂ ಇರುವ ಕಮ್ಮಿ ಮೊಬಲಗು ಅವಲ್ ಹರಾಜುದಾರನಿಂದ ರವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಲ್ಪಡುವುದು.

7. ಚಡಸನಾಲ್ದಾರನು ಹರಾಜು ಮೊಬಲಗನ್ನು ಮತ್ತು ಅದರ ಲೋಕಲ್ ಸೆಸ್ಸನ್ನು ಮುಂಗಡವಾಗಿ ನಾಲ್ಕು ಸಮವಾದ ಮಾಹೆವಾರು ಖಿಸ್ತಿನಲ್ಲಿ ಈ ಕೆಳಗೆ ನಮೂದಿಸಿ ಇರುವ ತಾರೀಖಿನಲ್ಲಿ ಸರಕಾರಕ್ಕೆ ಪಾವತಿ ಮಾಡಬೇಕು. ಈ ಪ್ರಕಾರ ಯಾವ ಖಿಸ್ತೇ ಆಗಲಿ ಪಾವತಿ ಮಾಡದೆ ತಪ್ಪಿದರೆ ಮೊದಲು ಡಿಪಾಜಿಟ್ ಇಟ್ಟ ಮೊಬಲಗು ಸರಕಾರಕ್ಕೆ ಸೇರಿಸಲ್ಪಡುತ್ತೆ. ಅಲ್ಲದೆ ಮುಂದಕ್ಕೆ ಜಮಾಯಿಸಿಕೊಳ್ಳುವದಕ್ಕೆ ಇಜಾರೆ ಹಕ್ಕು ಸಹ ತಪ್ಪಿ ಹೋಗುತ್ತೆ. ಬಾಕಿ ಏನಾದರೂ ಮೊಬಲಗು ನಿಂತರೆ ರವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಲ್ಪಡುತ್ತೆ.

1ನೇ ಖಿಸ್ತು	..	31ನೇ ಆಗಸ್ಟ್ 1903	3ನೇ ಖಿಸ್ತು	...	31ನೇ ಅಕ್ಟೋಬರ್ 1903
2ನೇ ಖಿಸ್ತು	..	30ನೇ ಸೆಪ್ಟಂಬರ್ 1903	4ನೇ ಖಿಸ್ತು	...	30ನೇ ನವಂಬರ್ 1903

ಹರಾಜುದಾರನು ತನ್ನ ಇಜಾರೆ ಷರತ್ತುಮೇರೆ ನಡಿಯುವದಕ್ಕೋಸ್ಕರ ಸೆಕ್ಯೂರಿಟಿಗಾಗಿ 5ನೇ ಪ್ಯಾರಾದಲ್ಲಿವಿಧಿಸಿದ ಡಿಪಾಜಿಟ್ ಮೊಬಲಗನ್ನು ಸರ್ಕಾರದಲ್ಲಿಯೇ ನಿಲ್ಲಿಸಿಕೊಳ್ಳಲ್ಪಡುತ್ತೆ.

8. ಹರಾಜು ಮಂಜೂರಿಯನ್ನು ಹರಾಜುದಾರನಿಗೆ ತಿಳಿಸಿದ 3 ದಿವಸಗಳ ಒಳಗಾಗಿ ಸರಿಯಾದ ಛಾಪಾಕಾಗದದಲ್ಲಿ 9ನೇ ಪ್ಯಾರಾದಲ್ಲಿ ಕಂಡ ಷರತ್ತುಮೇರೆ ನಡೆಕೊಳ್ಳಲು ಬದ್ಧನಾಗಿರುವದಕ್ಕೆ ಮುಚ್ಚಳಿಕೆ ಬರದು ರುಜುಮಾಡಿ ಕೊಡಬೇಕು.

9. ಈ ಕೆಳಗೆ ನಮೂದಾಗುವ ಷರತ್ತುಗಳಮೇರೆ ಹರಾಜುದಾರನು ನಡದುಕೊಳ್ಳಬೇಕು:—

2. ಒಂದು ವರುಷದ ಒಳಗಿನ ಗಿಡ ಕಡಿಯಕೂಡದು.

3. ಇಜಾರೆಮೇರೆ ಸಾಗಿಸಿಕೊಂಡ ಚಕ್ಕೆ ಮೊತ್ತದ ತಪ್ಶೀಲ್ ಲೆಖ್ಖ ಇಡಬೇಕು. ತಾಲ್ಲೂಕು ಅಮಿಲ್ದಾರು ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಿಸುವ ಇತರ ಆಫೀಸರು ಲೆಖ್ಖಾ ತನಿಖೆ ಮಾಡಲು ಬಂದಾಗ ಲೆಖ್ಖಾ ತೋರಿಸಬೇಕು.

4. ಡೆಪ್ಯುಟಿ ಕಮಿಷನರ್ ಸಾಹೇಬರವರು ವಿಧಿಸುವ ರೀತಿಯಂತೆ ಚಕ್ಕೆ ಸಾಗಿಸಿಕೊಳ್ಳತಕ್ಕ ಬಗ್ಯೆ ಪ್ಯಾಸು ಪಡಿಯಬೇಕು.

5. 1904ನೇ ಜೂನ್ ಆಖೈರ್ ಒಳಗಾಗಿ ಕಡದು ಜಮಾಯಿಸಿ ಇಟ್ಟುಕೊಂಡಿರುವ ಚಕ್ಕೆಯೆಲ್ಲಾ ಆಯಾಯ ತಾಲ್ಲೂಕು ಸರಹದ್ದಿನ ಹೊರಕ್ಕೆ ಸಾಗಿಸಿಬಿಡಬೇಕು.

6. ಮೇಲ್ಕಂಡ ಷರತ್ತುಗಳಲ್ಲಿ ಯಾವದಕ್ಕಾಗಲಿ ತಪ್ಪಿ ನಡದರೆ ಇಜಾರೆ ರದ್ದು ಮಾಡಲ್ಪಡುತ್ತೆ. ಅಲ್ಲದೆ ಸಾಗಿಸದೆ ನಿಂತಿರುವ ಚಕ್ಕೆ ವಿಸಿಷ್ಟವೂ ಸರಕಾರಕ್ಕೆ ಸೇರಿಸಲ್ಪಡುತ್ತೆ.

7. ತಂಗಡಿ ಗಿಡವನ್ನು ಚಕ್ಕೆಗೋಸ್ಕರ ಹೊರ್ತು ಗೊಬ್ಬರದ ಸಪ್ಪಿಗಾಗಿ ಆಗಲಿ ಸವುದೆ ಬಗ್ಯೆ ಆಗಲಿ ಅಥವಾ ಇನ್ಯಾವದಕ್ಕಾಗಿಯಾಗಲಿ ಕಡಿಯಕೂಡದು.

ಎಂ. ಜಿ. ರಾಮರಾವ್,
ಛಾರ್ ಡೆಪ್ಯುಟಿ ಕಮಿಷನರ್.

ಹಾಸನದ ಡಿಸ್ಟ್ರಿಕ್ಟು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ॥ ಅರ್ಜಿ ನಂಬರ್ 244.

ಹಾಸನ ತಾಲ್ಲೂಕು ಕಸಬಾ ಹೋಬಳಿ ಯಡೂರು ಗ್ರಾಮದಲ್ಲಿ ಇರುವ ಫವತಿ ಯಡೂರು ಪಟೇಲ ಕಾಳೇಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ಹಾಸನ ತಾಲ್ಲೂಕು ಕಸಬಾ ಹೋಬಳಿ ಯಡೂರಲ್ಲಿ ಇರುವ ಕೆಂಪೇಗೌಡನು, ಮೃತಪಟ್ಟ ತಂದೆ ಕಾಳೇಗೌಡರಿಗೆ ಖಾಸು ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಫವತಿಪಟ್ಟ ತಂದೆಗೆ ಬರತಕ್ಕ 53—8—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಈ ದರಖಾಸ್ತುದಾರರಾದ ಕೆಂಪೇಗೌಡರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಾಳೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರೈಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿ ಇದೆ.

ಸನ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ 245.

ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಹೆದ್ದುರ್ಗದ ಗ್ರಾಮದಲ್ಲಿ ಇರುವ ಕಲ್ಲೆಗೌಡನ ಮಗ ಫವತಿಪಟ್ಟ ಪಟೇಲ ಶಿದ್ದೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಹೆದ್ದುರ್ಗದಲ್ಲಿರುವ ಚೆನ್ನೆಗೌಡನ ಮಕ್ಕಳು 1ನೇ ನಿರ್ವಾಣಿಗೌಡ, 2ನೇ ಬಸವೆಗೌಡ, 3ನೇ ಕಲ್ಲೆಗೌಡ ಇವರುಗಳು ಮೈನರ್, ಗಾರ್ಡಿಯನ್ ಅಜ್ಜಿ (ತಂದೆಯ ತಾಯಿ) ಬಸಮ್ಮ, ಮೃತಪಟ್ಟ ಶಿದ್ದೆಗೌಡನಿಗೆ ಖಾಸಾ ತಮ್ಮನ ಮಕ್ಕಳು ಎಂಬ ಹಕ್ಕುದಾರಿ ಮೇಲೆ ಮೃತಪಟ್ಟ ದೊಡ್ಡಪ್ಪನಿಗೆ ಬರತಕ್ಕ 1,420—4—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಿರ್ವಾಣಿಗೌಡ, ಬಸವೇಗೌಡ, ಕಲ್ಲೆಗೌಡನ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಟೇಲ ಶಿದ್ದೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರಿಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತಿನ ಕೊಡೋಣಾಗಿದೆ.

ಸಿ. ಬಿ. ಶೇಷಗಿರಿರಾವ್,
ಸಬ್ ಜಡ್ಜು.

ತುಮಕೂರು ಮುನ್ಸೀಫ್ ಕೋರ್ಟಿನಲ್ಲಿ.

ಸನ್ 1902-1903ನೇ ಇಸವಿ ಮಿ॥ ಅರ್ಜೀ ನಂಬರ 673.

ಮೃತಪಟ್ಟ ಚಿದಂಬರಶೆಟ್ರು ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ಮೈಲಾರ ಶೆಟ್ಟಿ, 2ನೇ ಪಟ್ಟಾಭಿರಾಮ ಶೆಟ್ಟಿ, ಮೈನರ್ ಗಾರ್ಡಿಯನ್ 1ನೇ ಅರ್ಜೀದಾರ, ಇವರಗಳ ಪೈಕಿ 1ನೇ ಅರ್ಜೀದಾರನು ಮೃತಪಟ್ಟ ಚಿದಂಬರ ಶೆಟ್ರಿಗೆ ಖಾಸಾ ಅವಿಭಕ್ತ ಸಹೋದರನಾಗಬೇಕೆಂತಲು, 2ನೇ ಅರ್ಜೀದಾರನು ದತ್ತುಮಗನಾಗಬೇಕೆಂತಲು, ಈ ಹಕ್ಕುದಾರಿ ಮೇಲೆ ಚಿಕ್ಕನಾಯಿಕನಹಳ್ಳಿಯಲ್ಲಿ ವಾಸಮಾಡುವ ಸದರಿ ಅರ್ಜೀದಾರು ಸದರಿ ಚಿಕ್ಕನಾಯಿಕನ ಹಳ್ಳಿಯಲ್ಲಿ ವಾಸಮಾಡುತ್ತಿದ್ದ ಮೃತಪಟ್ಟ ಸದರಿ ಚಿದಂಬ್ರ ಶೆಟ್ಟರ ಜಿಂದಗಿ ಬಗ್ಯಾಗಿ ಬರತಕ್ಕ 1,579—3—4 ರೂಪಾಯಿಗಳ ಸಾಲವನ್ನು ವಸೂಲ್ ಮಾಡಿಕೊಳ್ಳತಕ್ಕ ಬಗ್ಗೆ ಸನ್ 1901ನೇ ಇಸವಿ VIIನೇ ನಂಬರ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರ ಅರ್ಜಿಯನ್ನು ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿದಂಬ್ರ ಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಏಪ್ರಿಲ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಶಿ ನಮ್ಮ ದಸ್ತುಖತ್ತಿನ ಡಶಿ ಕೊಡೋಣಾಗಿದೆ.

ಎಸ್. ಶೇಷಗಿರಿರಾವ್,
ಮುನ್ಸೀಫ್.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಕಾಶಿತ ಆದ್ದು. [ನಂ 18.

ಬೆಂಗಳೂರು, ಗುರುವಾರ, ಮೇ ತಾ॥ 7, ಸನ 1903.

IIನೇ ಭಾಗ.

ಇಂಡಿಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 22ನೇ ಏಪ್ರೆಲ್ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕೊಳ್ಳೇಗಾಲ ರೇಂಜ್ ಸಾರ್ವದುರ್ಗ ಮತ್ತು ಹಂದಿಗೊಂದಿ ಸ್ಟೇಟ್ ಫಾರೆಸ್ಟುಗಳಲ್ಲಿ ಇರುವ ಪಟ್ಟಿ ಚಕ್ಕೆಯನ್ನು 31—1—1904ರ ವರೆಗೆ ರೂಢಿಸಲು 30—5—1903ರಲ್ಲಿ ಡಿ॥ ಫಾ॥ ಆಫಿಸರವರಿಂದ ಅಥವಾ ರೇಂಜ್ ಆಫಿಸರವರಿಂದ ಕೊಳ್ಳೇಗಾಲದಲ್ಲಿ ಹರಾಜು ಹಾಕಲ್ಪಡುವದು.

ಷರತ್ತುಗಳು.—1. ಚಡದರಖಾಸ್ತುದಾರರು ಹರಾಜು ಖೈದಾದಕೂಡಲೆ ಕಾಲುಹಿಸ್ಸೆ ಮೊಬಲಗನ್ನು ಹಾಜರ್ಮಾಡಬೇಕು. ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಡಿ॥ ಫಾ॥ ಆಫಿಸರವರಿಂದ ಕೊಡೋಣಾಗುವ ಅಡ್ವೈಸ್ ಮೇರೆ ಸಮೀಪದಲ್ಲಿರುವ ತಾಲ್ಲೂಕು ಟ್ರೆಜರಿಗೆ ಹರಾಜು ತಾರೀಖು ಲಗಾಯತು ಮೂರು ದಿವಸದಲ್ಲಿ ಪಾವತಿ ಮಾಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ಪುನಹ ಹರಾಜ್ಮಾಡಲ್ಪಡುವದು.

2. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಿಗೆ ಅವಲ್ ಚಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಿಗ್ಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿ ಆಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

3. ಸದರಿ ಚಕ್ಕೆಯನ್ನು ಡಿ॥ ಫಾ॥ ಆಫಿಸರವರಿಂದ ಕೊಡೋಣಾಗುವ ಲೈಸೆನ್ಸ್ ಮೇರೆ ಅದರಲ್ಲಿ ನಮೂದಾಗುವ ಮಾಯಿದೆ ಅಂದರ್‌ವಾರ್ ಸಾಗಿಸಿಕೊಳ್ಳಬೇಕು.

4. ಸೂರ್ಯ ಅಸ್ತಮಾನವಾದ ನಂತರ ಮತ್ತು ಸೂರ್ಯ ಉದಯವಾಗುವದಕ್ಕೆ ಪೂರ್ವದಲ್ಲಿ ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಯಾವ ಮರಗಳು ಸಾಗಿಸಲ್ಪಡಕೂಡದು.

5. ಗುತ್ತಾದಾರನು, ಬಳ್ಳಿ ಯಾ ತಾಯಿಬೇರಿಗೆ ಇಜಾ ಇಲ್ಲದಂತೆ ಪಕ್ಕದ ಬೇರುಗಳಲ್ಲಿ ಮಾತ್ರ ಚಕ್ಕೆಯನ್ನು ರೂಢಿಸಿ ಕೊಳ್ಳಬೇಕು.

6. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟಿನಲ್ಲಿ ಬೆಂಕಿ ಸಂಭವಿಸಿದರೆ ಅವರನ್ನೇ ಶಿಕ್ಷೆಗೆ ಗುರಿಪಡಿಸಲಾದೀತು.

7. ಕಂಟ್ರಾಕ್ಟುದಾರನು ಚಕ್ಕೆ ರೂಢಿಸುವದರಲ್ಲಿ ತಾಯಿಬೇರಿನಲ್ಲಿ ತೆಗಿಯದೆ ಪಕ್ಕದ ಬೇರುಗಳಲ್ಲಿ ತೆಗದುಕೊಳ್ಳಬೇಕು.

ನೋಟಿಫಿಕೇಷನ್, ತಾರೀಖು 22ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಬೆಂಗಳೂರು ಡಿಸ್ಟ್ರಿಕ್ಟಿಗೆ ಫಾರೆಸ್ಟ್ಗಳಲ್ಲಿರತಕ್ಕ ಹಣ ಸಣ್ಣ ಮತ್ತು ಧಪ್ಪ ಬಿದರುಗಳನ್ನು 1904ನೇ ಇಸವಿ ಜನವರಿ 31ನೇ ತಾರೀಖಿನ ವರಿವಿಗೆ ಸಾಗಿಸುವ ಹಕ್ಕನ್ನು ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಈ ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ :—

ನಂಬರು	ತಾಲ್ಲೂಕು.	ಫಾರೆಸ್ಟ್ ಹೆಸರು.	ಹರಾಜು ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡುವ ಆಫೀಸರ ಹೆಸರು.
1	ಆನೇಕಲ್ ...	ಬಿಳವನಕುಪ್ಪೆಶೇರಿ ರಾಗಿಹಳ್ಳಿ	11—5—1903	ಬನ್ನೇರಘಟ್ಟ	ಡೆಪ್ಯುಟಿ ಕನ್ಸರ್ವೇಟರ್, ಬೆಂಗಳೂರು ಡಿಸ್ಟ್ರಿಕ್ಟ್
2	ಕನಕನಹಳ್ಳಿ ...	ಬಿಳಿಕಲ್	16—5—1903	ಕನಕನಹಳ್ಳಿ	
		ಬಾಣಂತಮಾರಿ			
3	ಡಿಟೋ ...	ಮೂಗೂರು	18—5—1903	ಕೋಡಿಹಳ್ಳಿ	
		ರಾಮದೇವರ ಬೆಟ್ಟ ರಿಜರ್ವ್			
		ಮುನೇಶ್ವರ ಬೆಟ್ಟ ರಿಜರ್ವ್			
		ಮಂಜನಾಥ ರಿಜರ್ವ್			
4	ಡಿಟೋ ...	ಚೀಲಂದಾಡಿ	20—5—1903	ಸಾತನೂರು	
		ಅಚ್ಚಲ್ ರಿಜರ್ವ್			
5	ಮಳವಳ್ಳಿ ...	ಬಸವನ ಬೆಟ್ಟ	21—5—1903	ಹಲಗೂರು	
6	ಕನಕನಹಳ್ಳಿ ...	ಕಬ್ಬಾಳ್	22—5—1903	ಹನಿಯೂರು	
		ಟೈಲೂರು ರಿಜರ್ವ್			
7	ಮಾಗಡಿ ...	ಸಾವನ್ದುರ್ಗ	25—5—1903	ಮಾಗಡಿ	

2. ಹರಾಜು ಖೈದಾದ ಕೂಡ್ಲೆ ಆಖೈರ್ ಸವಾಲ್ದಾರನು ಪೂರಾ ಮೊಬಲಗಿನ ಪೈಕಿ ಶೇಕಡ 25 ರೂಪಾಯಿ ಡಿಪಾಜಿಟ್ ಇಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು 30 ದಿವಸಗಳ ಒಳಗಾಗಿ ಸಂದಾಯ ಮಾಡಬೇಕು. ಈ ಮೇರೆ ಪಾವತಿ ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು. ಅಲ್ಲದೆ ಮೊದಲ್ ಸವಾಲ್ದಾರನಿಗೆ ನಷ್ಟಕ್ಕೆ ಗುರಿಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಈ ಹರಾಜಿನಲ್ಲಿ ಜಾಸ್ತಿ ಉತ್ಪತ್ತಿ ಆಗುವ ಪಕ್ಷ ಅದಕ್ಕೆ ಅವಲ್ ದರಖಾಸ್ತುದಾರನಿಗೆ ಏನೂ ಹಕ್ಕು ಇರುವದಿಲ್ಲ. ಪೂರಾ ಹಣ ಸಂದಾಯ ಮಾಡಿದಕೂಡ್ಲೆ ಗಳ ಜಮಾವಣೆ ಮಾಡಿಕೊಳ್ಳಲು ಲೈಸೆನ್ಸು ಕೊಡಲ್ಪಡುತ್ತೆ.

3. ಬಿದರು ಜಮಾಯಿಸುವ ಫಾರೆಸ್ಟು ಯಾ ಫಾರೆಸ್ಟಿನ ಯಾವ ಭಾಗದಲ್ಲಿಯೇ ಆಗಲಿ ಬೆಂಕಿ ಬಾಧೆ ಏನಾದರೂ ಉಂಟಾದಲ್ಲಿ ಕಂಟ್ರಾಕ್ಟುದಾರನು ಅದಕ್ಕೆ ಜವಾಬ್ದಾರನನ್ನಾಗಿ ಮಾಡುತ್ತೆ. ಕಂಟ್ರಾಕ್ಟುದಾರನಿಂದಾಗಲಿ ಅಥವಾ ಆತನ ಕಡೆ ಮನುಷ್ಯನಿಂದಾಗಲಿ ಯಾವದಾದರೂ ಫಾರೆಸ್ಟ್ ತಕಶೀರ್ ನಡದಲ್ಲಿ ಅಂಥಾದ್ದಕ್ಕೆ ಫಾರೆಸ್ಟ್ ರೂಲ್ ಮೇರೆ ಕ್ರಮ ಜರಗಿಸಲ್ಪಡುವದು.

4. ಒಣ ಬಿದರು ತೆಗೆದುಕೊಳ್ಳುವವರು ಸಾವಿರ ಗಳು ಕಟ್ಟುವದಕ್ಕೆ ಆಗುವ ಪಚ್ಚೆ ಗಳಗಳಿಗೆ 0—4—0 ಯಂತೆ ಬೇರೆ ಹಣ ಕೊಟ್ಟು ಲೈಸೆನ್ಸು ಮೂಲಕ ಕಟ್ಟುಗಳು ತೆಗೆದುಕೊಳ್ಳಬೇಕು.

ಟಿ. ಅಬ್ದುಲ್ ಕರೀಂ,
ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 26ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿಗೆ ಶೇರಿದ ಇದರಡೀ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಇಡುವಳಿಯಿಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟ್ಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿಬೇಲಿಗಳಲ್ಲಿ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1903ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1904ನೇ ಇಸವಿ ಜೂನ್ 30ನೇ ತಾರೀಖಿನವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫೀಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು. ಈ ಡಿಸ್ಟ್ರಿಕ್ಟ್ ಫಾರೆಸ್ಟುಗಳಿಗೆ ಫಾರೆಸ್ಟು ಪ್ಲಾಂಟೇಷನ್‌ಗಳು ಶೇರಿಯಿಲ್ಲ :—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫೀಸರು.
ಯಡತೊರೆ	10—6—1903	ಆಯಾ ತಾಲ್ಲೂಕು ಕಚೇರಿಗಳಲ್ಲಿ	ಆಯಾ ತಾಲ್ಲೂಕು ಅಮಲ್ದಾರರು ಮತ್ತು ರೇಂಜ್ ಆಫೀಸರು
ಹುಣಸೂರು	12—6—1903		
ಹೆಗ್ಗಡದೇವನಕೋಟೆ	15—6—1903		
ಗುಂಡ್ಲುಪೇಟೆ	18—6—1903		
ಚಾಮರಾಜನಗರ	20—6—1903		
ನಂಜನಗೂಡು	22—6—1903		
ಟಿ. ನರಶೀಪುರ	24—6—1903		
ಮೈಸೂರು	24—6—1903		
ಮಳವಳ್ಳಿ	25—6—1903		
ಮಂಡ್ಯ	27—6—1903		
ಶ್ರೀರಂಗಪಟ್ಟಣ	29—6—1903		
ನಾಗಮಂಗಲ	3—7—1903		
ಕೃಷ್ಣರಾಜಪೇಟೆ	6—7—1903		

ಹುಟ್ಟುವಳಿ ತಪಸೀಲು.

1. ತಾರೇಕಾಯಿ, 2. ಸೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡು ಅರಶಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚೆಲ್ಲದಬೀಜ, 12. ಹಾಲುಮಡ್ಡಿ, 13. ಚಗಚೇಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ಸಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಬೇಲದಹಣ್ಣು, 20. ಅರಗು, (ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ತಾಲ್ಲೂಕುಗಳದು ವಿನಹ) 21. ಸೀತಾಫಲದ ಹಣ್ಣು, 22. ಬೆಂಡೆನಾರು ; ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಸೇರಿಯಿಲ್ಲಾ :—

ಹುಣಸೂರು, ಹೆಗ್ಗಡದೇವನ ಕೋಟೆ, ಗುಡ್ಲು, ನಂಜನಗೂಡು ಮತ್ತು ಚಾಮರಾಜನಗರ ತಾಲ್ಲೂಕುಗಳು.

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಯಿಂಡಸಹಳ್ಳಿ, 6. ಮೂರಹಳ್ಳಿ, 7. ಜೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಹನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂದಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8. ಮಾದಿಗರ ಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಜಿಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡ್ಲೆ ಇಜಾರೆ ನೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ಮೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1903ನೇ ಜುಲೈ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ಉಳಿದ ಮೊಬಲಗನ್ನು ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ಮೊಬಲಗನ್ನು ಸಹ ಮೂರು ಸಮವಾದ ಬಿಸ್ತುಗಳಲ್ಲಿ ಅಂದರೆ :—

1903ನೇ ಇಸವಿ ಡಿಸೆಂಬರ 1ನೇ ತಾರೀಖು.

1904ನೇ ಇಸವಿ ಜನವರಿ 2ನೇ ತಾರೀಖು.

1904ನೇ ಇಸವಿ ಫೆಬ್ರವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾ ತಾರೀಖುಗಳಲ್ಲಿ ಬಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವಬಂದು ಬಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1904ನೇ ಜೂನ್ ಆಖೈರ್ ವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪಾಜಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಮತ್ತು ಜಾಮೀನ್ದಾರನು ಸಹ ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಮದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿಧೆ.

ತಾರೀಖು 26ನೇ ಏಪ್ರೈಲ್ 1903.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಸರ್ಕಾರಿ ಬಂಜರ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕುವಾರ್ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ 1903ನೇ ಇಸವಿ ಜೂನ್ ತಾರೀಖು 12ರಲ್ಲಿ ಬಹಿರಂಗವಾದ ಹರಾಜ್ ಮೂಲಕ್ಕ ವಿಕ್ರಯಿಸಲ್ಪಡುತ್ತೆ. [illegible]ಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಇದಕ್ಕೆ ಸೇರಿ ಇರುವದಿಲ್ಲ. ಅವುಗಳು ಅಲಾಯಿದಾ ವಿಲೇ ಮಾಡಲ್ಪಡು[illegible]

ತಾಲ್ಲೂಕುಗಳ ಹೆಸರು.

1. ಹೆಗ್ಗಡದೇವನಕೋಟೆ ...	3. ನಂಜನಗೂಡು ...	5. ಯಡತೊರೆ
2. ಗುಂಡ್ಲು ಪ್ಯಾಟೆ ...	4. ಹುಣಸೂರು ...	6. ಚಾಮರಾಜನಗರ

2. ಹರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸನೇ ಇದ್ದ ಪಕ್ಷದಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. ಈ ಮೇಲೆ ನಮೂದಿಸಿರುವ ಹಕ್ಕು ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿಧೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂಜೂರು ಮಾಡುವದಕ್ಕೂ ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿಧಾರೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡೆದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಚಡಸವಾಲ್ ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜ್ ಕೈದಾದ ವಡನೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತುದಾರನು ಅವನ ದರಖಾಸ್ತು ಮಂಜೂರಾತಿಯನ್ನ ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ಒಳಗಾಗಿ ಅವನು ಮೊದಲು ಇಟ್ಟು ಇರತಕ್ಕ ಡಿಪಾಜಿಟ್ ಮೊಬಲಗು ಶೇರಿ ಹರಾಜಿನ ಒಟ್ಟು ಮೊಬಲಗಿನ ಕಾಲು ಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ್ಟು ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದ ಕೂಡ್ಲೆ ಕೊಡದೆ ಇದ್ದರೆ ಅದನ್ನು ರವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳ ಮೇರೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ, ಡಿಪಾಜಿಟ್ ಹಣವನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1903ನೇ ಇಸವಿ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಖಿಸ್ತು ಮೇರೆ ಅಂದರೆ 1903ನೇ ಅಕ್ಟೋಬರ್ 1ನೇ ತಾರೀಖಿನಲ್ಲಿ ಒಂದನೇ ಖಿಸ್ತು 1904ನೇ ಇಸವಿ ಜನವರಿ 2ನೇ ತಾರೀಖಿನಲ್ಲಿ ಎರಡನೇ ಖಿಸ್ತು ಮತ್ತು 1904ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಮೂರನೇ ಖಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವ ಮೇರೆ ಖಿಸ್ತಿನ ಹಣ ಪಾವತಿ ಮಾಡಲ್ಪಡದೇ ಇದ್ದರೆ ಚಕ್ಕೆಯ ಜಮಾವಣೆ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕಡಿಯಕೂಡದು. ಅಥವಾ ಅದರ ತೊಗಟೆಯನ್ನು ತೆಗಿಯಕೂಡದು.
2. ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕಮಿ ಕಂಟ್ರಾಕ್ಟುದಾರನೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕಲ್‌ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.
4. ತೊಗಟೆ ತೆಗಿಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿಧೆ.
5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜಮಾವಣೆ ಮೊತ್ತ ತೋರಿಸುವ ತಪಶೀಲ್ ಲೆಖ್ಖವನ್ನು ಇಡಬೇಕು. ಮತ್ತು ಅಂಥಾ ಲೆಕ್ಕವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ, ಅಮಲ್ದಾರ್ರೇ ಆಗಲಿ ಅಥವಾ ಅವರುಗಳಿಂದ ನೇಮಿಸಲ್ಪಡುವ ಇತರ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.
6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.
7. ದಾಸ್ತಾನು ಇಡಲ್ಪಟ್ಟ, ಮತ್ತು ಜಮಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿಯ ಜೂನ್ ಆಖೈರ್ ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.
8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯು ರದ್ದು ಮಾಡಲ್ಪಡುವದಲ್ಲದೆ ಇದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹುಕುಂ ಆದಹಾಗೆ ಅವನಿಂದ ಪಾವತಿಯಾಗಿದ್ದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತದೆ.

ನೋಟಿಫಿಕೇಷನ್.

ತಾರೀಖು 23ನೇ ಏಪ್ರಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ಡಿಪೋಗಳಲ್ಲಿ ಜಮಾಯಿಸಿ ಇರುವ ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಗೆ 1903ನೇ ಇಸವಿ ಮೇ 29ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ಡಿಪೋ ಹೆಸರು.	ಬಾಬಿನ ತರಹ.	ಮೊತ್ತ ಹೆಚ್ಚು ಕಡಿಮೆ.
ಮೈಸೂರು—ಉಡಿಯಾರ್ಡ್ ..	ಅಳಲೆಕಾಯಿ ...	2233 ಮಣ
ಹುಣಸೂರು ಡಿಪೋ ..	ಅಳಲೆಕಾಯಿ ...	1141 ಮಣ
	ಹೊಂಗೇಬೀಜ	1120 ಸೇರು
ಚಾಮರಾಜನಗರ ಡಿಪೋ ...	ಅಳಲೆಕಾಯಿ ...	326 ಮಣ
ಗುಂಡ್ಲು ಡಿಪೋ ..	ಅಳಲೆಕಾಯಿ ...	2934 ಮಣ
	ಹೊಂಗೇಬೀಜ ...	90 ಸೇರು
ಶ್ರೀರಂಗಪಟ್ಟಣದ ಕೋಟೆ ...	ಅಳಲೆಕಾಯಿ ...	2354 ಮಣ

2. ಡಿಪೋ ಹೆಸರು, ಬಾಬಿನ ತರಹಾ, ಕೇಳುವ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿಯೊಂದು ದರಖಾಸ್ತಿನ ಜತೆನೆ ಒಂದು ನೂರು ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರವಾಗಿ ಲಿಫಾಪೆಯ ಮೇಲೆ "ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಗೆ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

4. ದರಖಾಸ್ತುಗಳ ಆಖೈರ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

5. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಆಫೀಸಿನಲ್ಲಿ 1903ನೇ ಇಸವಿ ಜೂನ್ 1ನೇ ತಾರೀಖು ದಿವ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಮತ್ತು ಡೆಪ್ಯುಟಿ ಕಮಿಷನರವರು ವ ಇವರ ಗೈರ್ ಹಾಜರಿಯಲ್ಲಿ ಹಾಜರು ಇರುವ ಅಸಿಸ್ಟೆಂಟ್ ಕಮಿಷನರವರು ಕಲೆತು ಹಾಜರು ಇರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡೆಯುವರು.

6. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 5 ದಿವಸಗಳ ಒಳಗಾಗಿ ಅವನು ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಸಮೀಪವಾದ ಮೈಸೂರ ಗವರ್ನಮೆಂಟ್ ಖಜಾನೆಯಲ್ಲಿ ಠೇವಣಿ ಇಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಅಡ್ವಾನ್ಸು ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ.

7. ಖರೀದಿ ಬಿಟ್ಟು ಮೊಬಲಗು 1903ನೇ ಇಸವಿ ಜೂನ್ 30ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆಯಾಗಲಿ ಪಾವತಿ ಮಾಡಿ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು ಒಂದು ತಿಂಗಳ ವಳಗಾಗಿ ಮಾಲನ್ನ ಸಾಗಿಸಬೇಕು. ಖರೀದಿಯು ಪೂರಾ ಮೊಬಲಗನ್ನ ವಾಯಿದೆ ವಳಗಾಗಿ ಪಾವತಿ ಮಾಡಲು ತಪ್ಪಿದಲ್ಲಿ ಪಸಾರೆ ಬಾಬು ಪುನಹ ಮಾರಲ್ಪಡುವದು. ದರಖಾಸ್ತುದಾರನಿಗೆ ಹರಾಜಿನಲ್ಲಿ ಸಂಭವಿಸುವ ಫಾಯಿದೆ ದೊರೆಯಲಾರದು. ಆದರೆ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಬದ್ಧನನ್ನಾಗಿ ಮಾಡಿ ನಷ್ಟದ ಮೊಬಲಗನ್ನ ರೆವಿನ್ಯೂ ರೂಲ್ಸು ಪ್ರಕಾರ ಅವನಿಂದ ರೆವಿನ್ಯೂ ಬಾಕಿಯಂತೆ ವಸೂಲು ಮಾಡಲ್ಪಡುವದು. ಮಾಲನ್ನ ವಾಯಿದೆ ಒಳಗೆ ಸಾಗಿಸದೇ ಹೋದ ಪಕ್ಷದಲ್ಲಿ ತಿಂಗಳು ಒಂದಕ್ಕೆ ಅಥವಾ ಕಮ್ಮಿ ದಿವಸಗಳಿಗೂನೂ ಮಣ ಒಂದಕ್ಕೆ ದರಮಾಹೆ ಮೂರು ಕಾಸಿನಂತೆ ಡಿಪೋ ಬಾಡಿಗೆ ದರಖಾಸ್ತುದಾರನು ಕೊಡಬೇಕಾದೀತು. ಈ ಭಾಗದಲ್ಲಿ ಹೆಚ್ಚಾದ ತಪಶೀಲು ಬೇಕಾದಲ್ಲಿ ಮೈಸೂರು ಉಡಿಯಾರ್ಡು ಫಾರೆಸ್ಟರಿಂದಾಗಲಿ ಹುಣಸೂರು, ಗುಂಡ್ಲು ಮತ್ತು ಚಾಮರಾಜನಗರದ ರೇಂಜ್ ಆಫಿಸರನಿಂದಾಗಲಿ ಅಥವಾ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಾಗಲಿ ತಿಳಿದುಕೊಳ್ಳಬಹುದು.

8. ಮೈಸೂರು ಉಡಿಯಾರ್ಡು ಫಾರೆಸ್ಟರಲ್ಲಿಯಾಗಲಿ ಹುಣಸೂರು, ಗುಂಡ್ಲು ಮತ್ತು ಚಾಮರಾಜನಗರದ ರೇಂಜ್ ಆಫಿಸರಲ್ಲಿಯಾಗಲಿ ಒಂದು ರೂಪಾಯಿ ಕಳುಹಿಸಿಕೊಟ್ಟಲ್ಲಿ ಪಸಾರೆ ಬಾಬಿನ ಮಾದ್ರಿಯು ದೊರಕುವದು. ಅಥವಾ ರೂಬರೂಬು ಮೇಲ್ಕಂಡ ಸ್ಥಳಗಳಲ್ಲಿ ಮುಖತಃ ಆಗಿ ನೋಡಬಹುದು.

9. ದರಖಾಸ್ತು ಮಂಜೂರಾತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಠೇವಣಿ ಮೊಬಲಗು ವಾಪಸು ಮಾಡಲ್ಪಡುವದು.

10. ಫಾರೆಸ್ಟು ನೌಕರಮಾನೇರಿಗು ಮತ್ತು ಖರೀದಿದಾರರಿಗೂ ಉಂಟಾಗುವ ತಕರಾರುಗಳಲ್ಲಿ (ವ್ಯತ್ಯಾಸಗಳಲ್ಲಿ) ಡೆಪ್ಯುಟಿ ಕಮಿಷನರವರ ತೀರ್ಮಾನವು ಆಖೈರಾದ್ದಾಗಿರುತ್ತೆ.

1903ನೇ ಇಸವಿ ಏಪ್ರೈಲ್ ತಾರೀಖು 28ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋಗಳಲ್ಲಿ ಚೌಬೀನಾ ಸಾಮಾನುಗಳು ಬಿದರು ಗಳುವು ಮತ್ತು ಪಸಾರೆ ಜಿನಸುಗಳು ಸಹಾ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು	ಹರಾಜು ತಾರೀಖು	ಹರಾಜು ಮಾಡತಕ್ಕಂಥ ಆಫೀಸರ ಹೆಸರು	ಹರಾಜಿಗೆ ಇಡಲ್ಪಡುವ ಚೌಬೀನೆಯ ಮೊತ್ತ												ಹರಾಜಿಗೆ ಇಡಲ್ಪಡುವ ಪಸಾರೆ ಜಿನಸುಗಳ ಮೊತ್ತ					ಬಿದು ಗಳು
				ಸಾಗುವಾನಿ ನಾಟಾ		ಮನ್ನಾಜಾತಿ ನಾಟಾ		ಕಾಡುಜಾತಿ ನಾಟಾ		ಸಾಗುವಾನಿ ಸರ ವಗೈರೆ		ಮನ್ನಾಜಾತಿ ಸರ ವಗೈರೆ		ಕಾಡುಜಾತಿ ಸರ ವಗೈರೆ		ಜೇನುತುಪ್ಪ	ಜೇನುಮೇಣ	ಕೊಂಬು	ಅಳಲೇಕಾಯಿ	[illegible]	
				ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಮ	ಮ	ಮ	ಮ	ಖಂ	ಅದದು
1	ಗುಂಡ್ಲು ಡಿಪೋ ...	18—5—03	ಡಿಸ್ಟ್ರಿಕ್ಟುಫಾರೆಸ್ಟು ಆಫಿಸರು ಅಥವ ರೇಂಜ್ ಆಫಿಸರು	..	...	2	39	...	...	130	132	152	300	12	30	55	9	3	...	...	
2	ಚಾಮರಾಜನಗರ ಡಿಪೋ ..	20—5—03	ಡಿಟೋ	1	18	24	615	2	44	3	13	43	699	514	762	20	2		4	2	
3	ಹುಣಸೂರು ಡಿಟೋ ..	15—6—03	ಡಿಟೋ	8	202	128	2,521	17	369	632	1,464	242	1,689	364	790	...	..	....	...	.	
4	ಅಂತರಸಂತೆ ಡಿಟೋ ..	25—5—03	ಹೆಗ್ಗಡದೇವನ ರೇಂಜ್ ಆಫಿಸರ್	9	209	13	303	1	35	437	1,029	35	226	3	10	..	...		..	...	
5	ಬೇಗೂರು ಡಿಟೋ ...	30—5—03		..	...	...	..	..	..	743	1,847	7	47	2	19	...	..	.	...	.	
6	ಬೇಗೂರು ಕಡು ..	31—5—03		14	273	10	219	1	24	72	665	15	138	...	...	..	...	..	..	...	
7	ಆಲದಮರದ ಕಡು	28—5—03		16	432	5	88	..	..	114	653	25	255	...	..	...	...	...	...	...	
8	ನರಗೂರು ಡಿಪೋ ..	6—6—03		1	16	1	19	1	16	298	453	15	76	12	76	..	..	...		...	
9	ಸೋಮೇಶ್ವರ ಕಡು ..	8—6—03		49	1,638	28	698	2	56	29	180	4	34	1	14	...	..	....	...	.	
10	ಸಂತೆಮರಹಳ್ಳಿ ಡಿಪೋ ...	22—5—03	ಡಿಸ್ಟ್ರಿಕ್ಟು ಆಫಿಸರು ಅಥವ ರೇಂಜ್ ಆಫಿಸರ್	..	...	102	2,210	3	78	80	125	27	313	107	164	..		...	..	...	8,032
11	ಹುಣಸೂರು ಕೋಠಿ ..	17—6—03		...	...	...	...	...	...	..	..	..	..	..	..	...	2	½	...	..	

ಷರತ್ತು:—1895ನೇ ಇಸವಿ 25ನೇ ಏಪ್ರೈಲ್ 15ನೇ ನಂಬರು ಮೈಸೂರು ಗೆಜಿಟ್ಟಿನಲ್ಲಿ ಪ್ರಕಟಿಸಿರುವ 1895ನೇ ಇಸವಿ ಮಾರ್ಚಿ ಮಹೆ 15ನೇ ಮುಕ್ಕಾಂ 1529—R. F. 155-92 ನಂಬರು ನೋಟಿಫಿಕೇಷನ್ ನೋಡಿ, ಚೌಬೀನಾ ಬಗ್ಗೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಮೈಸೂರು ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 27ನೇ ಏಪ್ರೈಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಷುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜ್ ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ನಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟಾ.		ಷರಾ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ ಸ್ಟೇಷನ್.	28-5-1903	30	879	7	171	3	77	3	73	5	131	[illegible]

ಹರಾಜು ಷರತ್ತು:—1895ನೇ ಇಸವಿ ಏಪ್ರೈಲ್ 25ನೇ ಮರ್ರ್ಕಂ ನಂಬರ್ 15ನೇ ಮೈಸೂರು ಗೆಜೆಟಿನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ರ್ಕಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ರಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೈಲ್ 1903.

ಕೋಲಾರ ತಾಲ್ಲೂಕಿಗೆ ಸೇರಿದ ಬಾಜೂದಲ್ಲಿ ನಮೂದಿಸಿರುವ ಗ್ರಾಮಗಳನ್ನು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್‌ದಾರ್ರು ಕಛೇರಿಯಲ್ಲಿ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಕೋಲಾರ ತಾಲ್ಲೂಕು.

ಸುಗಟೂರು ಹೋಬಳಿ.

ಜೋಡಿ ಉಪ್ಪುಕುಂಟೆ—17ನೇ ಜೂನ್ 1903.

ಜೋಡಿ ಹನುಮಂತಪುರ—19ನೇ ಜೂನ್ 1903.

(ಹೆಚ್ಚು ತಪಶೀಲ್ ಬಗ್ಗೆ 30—4—1903ನೇ ಮರ್ರ್ಕಂ 17ನೇ ನಂಬರ್ ಮೈಸೂರು ಗೆಜೆಟಿನ IIನೇ ಭಾಗದ 184—185ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಇಸ್ತಿಹಾರ್.

ತಾರೀಖು 17ನೇ ಏಪ್ರೈಲ್ 1903.

ತುಮಕೂರು ಡಿಸ್ಟ್ರಿಕ್ಟು 2ನೇ ಜನರಲ್ ಅ॥ ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ ಮೊ॥ ನಂ. 78.

ಫಿರ್ಯಾದಿ. ಅಪರಾಧಿ.

ಸರ್ಕಾರ ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತ್ತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮರ್ರ್ಕಂನಲ್ಲಿ ದೊರತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೋಲೀಸಿನವರಿಂದ ಹಾಜರಾಗಲ್ಪಟ್ಟಿತು.

ಈ ಮೊಕದ್ದಮಾ ವಿಚಾರಣೆ ನಡೆಸಿದ್ದರಲ್ಲಿ ಈ ಮಾಲುಗಳನ್ನು ಸದರೀ ಬೂಸಿಗನು ನ್ಯಾಯವಾಗಿ ಸಂಪಾದಿಸಿದ್ದಲ್ಲವೆಂತಲೂ ಚೋರೀ ಮಾಲುಗಳಾಗಿರಬಹುದೆಂದು ಗುಮಾನೀ ತೋರಿಬಂದಿರುತ್ತೆ. ಆದ್ದರಿಂದ ಈ ಮಾಲುಗಳಿಗೆ ವಾರಸ್‌ದಾರ್ರು ಯಾರಾದರೂ ಇದ್ದಲ್ಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಆರು ತಿಂಗಳು ಒಳಗಾಗಿ ಈ ಕೋರ್ಟಿನ ರೂಬರೂ ಹಾಜರಾಗಿ ತಮ್ಮ ವಾರಸನ್ನು ದೃಢಪಡಿಸಿಕೊಟ್ಟು ಮಾಲುಗಳನ್ನು ಪಡಿಯಬಹುದು.

ತುಮಕೂರು ಡಿ॥ 2ನೇ ಜನರಲ್ ಅ॥ ಕಮಿಷನರ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು—ಕ್ರಿಮಿನಲ್ ಮಿಸಲೇನಿಯಸ್ ಕೇಸ್ ನಂಬರು 8 (1901—1902).

ಈ ಮೊಕದ್ದಮೆಲಿ ಕೋರ್ಟಿ ರೂಬರೂಬ್ ಹಾಜರಾದ ಮಾಲುಗಳ ತಪಶೀಲು ತೋರಿಸುವ ಲೀಸ್ಟ್.

1	ಕೆಂಚಿನ ಲೋಟಾದಲ್ಲಿರುವ ನಗದು 238—0—0 ರೂಪಾಯಿಗಳು (ಜಾಡಿಷಲ್ ಡಿಪಾಜಟನಲ್ಲಿಧೆ).	
2	ಚಿನ್ನದ ವಾಲೆ ಜೊತೆ ...	1
3	ಚಿನ್ನದ ತಾಳಿ ಬಟ್ಟುಗಳು ..	3
4	ಚಿನ್ನದ ಬಾವಲಿ ಜೊತೆ ..	1
5	ಬಿಳಿ ಚಿನ್ನದ ಬಾವಲಿ ..	1
6	ಚಿನ್ನದ ಮೂಗನತ್ತು ..	1
7	ಕೆಂಪುಕಲ್ಲು ಮೂಗನತ್ತು	1
8	ಹತ್ತುಕಡಕು ಜೊತೆ ..	1
9	ಬೆಳ್ಳಿ ಮುರು ಜೊತೆ ..	1
10	ಚಿನ್ನದ ಸಣ್ಣಗುಂಡುಗಳು ..	152
	ಅದರಲ್ಲಿ ಗುಂಡಿನ ತಾಳಿಗಳು ...	2
	ಬಿಳಿ ಹರಳುತಾಳಿ ..	1
	ಕೆಂಪುಕಲ್ಲು ತಾಳಿ ...	1
11	ಭಂಗಾರದ ಗಂಟೆ ಜೊತೆ 3, ಒಕ್ಕಲಿಗರು ಕಿವಿಗೆ ಹಾಕತಕ್ಕದ್ದು.	
12	ಭಂಗಾರದ ಅರೆಮುರ ...	1
13	ಭಂಗಾರದ ಜಟ್ಟಿ ಗುಂಡು ...	1
14	ಭಂಗಾರದ ಗಿಣಿ ಮುರು ಮುತ್ತು ಸಮೇತ	1
15	ಚಿನ್ನದ ಮುರುಗಳು ...	3
16	ಚಿನ್ನದ ತಾಳಿ ಮುರಕು ...	1
17	ಬೆಳ್ಳಿ ಮುರ ..	1
18	ಬೆಳ್ಳಿ ಉಂಗರ .	1
19	ಬೆಳ್ಳಿ ಭಂಗಾರದ ತಾಳಿ ...	1
20	ನಗದು ರೂಪಾಯಿಗಳು 5, ಜಾಡಿಷಲ್ ಡಿಪಾಜಟನಲ್ಲಿಧೆ.	
21	ಸಣ್ಣ ತಾಂಬ್ರದಕಾಸು ..	1
22	ಬೊಂಬಾಯಿ ಮುತ್ತುಗಳು ..	16
23	ಬೆಳ್ಳಿಬಾಬತು ಜೀವಿನಕಾಯಿ ತಾತಿ ..	1
24	ಬೆಳ್ಳಿ ಕರಡಿಗೆ ಬಿರಟೆಸಹ	
25	ಬೆಳ್ಳಿ ಚಚ್ಚಿರತಕ್ಕ ಚವಲಿತುಂಬು ..	1
26	ಬೆಳ್ಳಿ ಸಾದಾ ಚವಲಿತುಂಬು ...	
27	ಬೆಳ್ಳಿ ಛತ್ರಿ ..	
28	ಬೆಳ್ಳಿ ನಾಗಮುರಿ ..	
29	ಬೆಳ್ಳಿ ಮುದ್ರೆ ಉಂಗರ ..	
30	ಬೆಳ್ಳಿ ಉಂಗರಗಳು ...	2
31	ಬೆಳ್ಳಿ ಪಾಪಟೆ ಉಂಗರ ...	1
32	ಕಾಲುಪಿಲ್ಲಿ ಜೊತೆ	2
33	ಬೆಳ್ಳಿ ಕಾಲುಸುತ್ತು ...	1
34	ಬೆಳ್ಳಿ ಸರಪಣಿಗಳು ಕೊಕ್ಕಿ ಸಮೇತ ..	6
35	ಬೆಳ್ಳಿ ಚೂರುಗಳು	
36	ಬೊಂಬಾಯಿ ಮುತ್ತುಗಳು ...	21
37	ಮುಚ್ಚಳ ಸಮೇತ ಇರತಕ್ಕ ತಾಂಬ್ರದ ಭರಣಿಯಲ್ಲಿ ನಗದು ಎಂಟು ರೂಪಾಯಿ (ರಾಜಾ ಪಾವಲಿಗಳು ಎರಡು)	
38	ಹವಳ, ಚಿನ್ನದ ಗುಂಡುಗಳು, ತಾಳಿ ವಗೈರೆ ಧಾರದಲ್ಲಿ ಪೋಣಿಸಿದ ಸರ ಒಂದು	
39	ಕೆಂಪು ರೇಷಮೆ ವಸ್ತ್ರ ..	1
40	ಹಿತ್ತಾಳಿ, ತಾಲಿ ಒಂದು	

ಬಿ. ತಿರುಮಲಾಚಾರ್,
ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 27ನೇ ಮಾಹೆ ಏಪ್ರೆಲ್ 1903.

ಸ 1903ನೇ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ಒಳಕ್ಕೆ ಬರುವ ಗಾಡಿಗಳು, ಜಾನವರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷ 49 ಮತ್ತು 51ನೇ ಸೆಕ್ಷನ್‌ಗಳಲ್ಲಿ ನಮೂದಿರುವ ಷರತ್ತುಗಳಿಗೆ ಒಳಪಡಿಸಿ ಟೋಲ್ ಅಥವಾ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ ಮಾಹೆ ತಾರೀಖು 16ನೇ ಮಧ್ಯಾನ್ಹ 1 ಘಂಟೆಮು ಲಾಗಾಯಿತು ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಶಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೇ ತಾರೀಖು ಒಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಿಟ್ ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದಕೂಡ್ಲೆ ಡಿಪಾಜಟ್ ಬಗ್ಯೆ ಮೊಬಲಗನ್ನು ಹಾಜರ್ಮಾಡದೇ ಇದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೆ ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ಒಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು, ಬಾಬನ್ನು ದುಸರಾ ಹರಾಜು ಮಾಡಿಸಿ, ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರ್ಯಾಕ್ಟುದಾರನು ರೋಜೇನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶ ಮಾಡುವ ತರಹಾವಾರಿ ಗಾಡಿ ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಖವನ್ನು ಕಂಟ್ರ್ಯಾಕ್ಟರು ಪ್ರತಿ ಮಾಹೆಯಲ್ಲಿಯು ಪ್ರೆಸಿಡೆಂಟರವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರ್ಯಾಕ್ಟುದಾರನು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೇ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಗೆ ಆಯಾಯ ಕಂಟ್ರ್ಯಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲುಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರ್ಯಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರ್ಯಾಕ್ಟು ಬಾಬನ್ನು ಸಲೀಸು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಪ್ರತಿ ಒಬ್ಬ ಕಂಟ್ರ್ಯಾಕ್ಟುದಾರನು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದುಕೊಡಬೇಕು.

10. ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರ್ಯಾಕ್ಟುದಾರನು ಟೋಲ್ ಯಾನೆ ಸುಂಕವನ್ನು ವಸೂಲ್ ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ನಮೆಂಟ್ ಯಾ ಮ್ಯುನಿಸಿಪಲ್ ಕಮಿಷನ್‌ಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ನೌಕರ್ಯಾಡಲ್ಪಟ್ಟ ಕ್ಯಾರೇಜುಗಳು ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, ಒಂದು ಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟರಿ ಅಥವಾ ಗವರ್ನಮೆಂಟ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫೀಸರರು ನೌಕರಮಾನೇರು ಅವರ ಕ್ಯಾರೇಜುಗಳು, ಗಾಡಿಗಳು, ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹಾ.

ನಂಬರು	ಷೆಡ್ಯೂಲ್ A.	
1	ರೈಲ್ವೆ ಸ್ಟೇಷನ್ ರಸ್ತೆ	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳಗುಳದ ರಸ್ತೆ	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ	ಎರೆಕಟ್ಟೆ ಉಕ್ಕಡ
4	ಬೆಂಗಳೂರು ರಸ್ತೆ	ವೀರನಗೆರೆ ಉಕ್ಕಡ
5	ನೆಮಿಟರಿ ರಸ್ತೆ	ಬಂಗ್ಲಿ ಸಂತ್ರಿ ಉಕ್ಕಡ
6	ಮಹದೇವಪುರದ ರಸ್ತೆ	ಜಲಪುರಿ ಉಕ್ಕಡ
7	ಆಲನಹಳ್ಳಿ ರಸ್ತೆ	ಇಟ್ಟಿಗೆ ಗೂಡು ಉಕ್ಕಡ
8	ರೇಸುಕೋರ್ಸು ರಸ್ತೆ	ರೋಣಸಂತ್ರಿ ಉಕ್ಕಡ
9	ನಂಜನಗೂಡು ರಸ್ತೆ	ನಂಜನಗೂಡು ಉಕ್ಕಡ
10	ಡಿಟೋ	ಹಾಲಿ ಉಕ್ಕಡದಬಳಿ ವಿಧಾಯಕ ಮಾಡುವಂತೆ ನಾಚನಹಳ್ಳಿ ಉಕ್ಕಡ.
11	ಮಾನಂದವಾಡಿ ರಸ್ತೆ	ಚಟ್ಟನಹಳ್ಳಿ ಉಕ್ಕಡ
12	ಮೈಸ್ಗಾಯಿ ರಸ್ತೆ	ಹೊಲಗೇರಿ ಉಕ್ಕಡ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜ್ಯುಬಿಲಿ ರಸ್ತೆ	ಕುಕ್ಕನಹಳ್ಳಿ ಉಕ್ಕಡ
15	ಇಲವಾಲದ ರಸ್ತೆ	ಮುನಿಸಿಪಲ್ ಸರಹದ್ದು ಖೈದಾಗುವ ಬಳಿ ಹಾಲಿ ಈ ರಸ್ತೆಯ ಪಕ್ಕದಲ್ಲಿ ವಿಧಾಯಕ ಮಾಡಿರುವ ಉಕ್ಕಡ.

ನಂಬರು.	ಷೆಡ್ಯೂಲ್ B.	ರೂ.	ಆ.	ಪೈ.
	ಟೋಲ್ ಗೇಟಿನಲ್ಲಿ ವಸೂಲ್ ಮಾಡತಕ್ಕ ದರಗಳ ತಪಶೀಲು.			
1	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ ..	0	4	0
2	ಡಿಟೋ 2 ಚಕ್ರದ ಕ್ಯಾರೇಜಿಗೆ ..	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು, ಇವುಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿಗಳು ಅಥವಾ ಹ್ಯಾಕ್ನಿಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿಒಂದು ಗಾಡಿಗೆ	0	1	0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ...	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲು ಮೀರಿದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ.	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಮ್ಯುನಿಸಿಪಲ್ ಲಾಂದ್ರಗಳನ್ನು ಹಚ್ಚಿಸತಕ್ಕ ಬಗ್ಗೆ ಟೆಂಡರು.

ಇಸ್ತಿಹಾರ್ನಾಮಾ.

ತಾರೀಖು 30ನೇ ಮಾಹೆ ಏಪ್ರೈಲ್ 1903ನೇ ಇಸವಿ.

ಸರ್ 1903ನೇ ಇಸವಿ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ತಾರೀಖು 30ರ ವರಿಗೆ ಮೈಸೂರು ಷಹರು ಮ್ಯುನಿಸಿಪಲ್ ಸರಹದ್ದಿನ ವಳಗೆ ರಸ್ತೆಗಳ ಬಾಜೂದಲ್ಲಿಯೂ, ಮತ್ತು ಗಲ್ಲಿಗಳಲ್ಲಿಯೂ ಸಹಾ ಇರತಕ್ಕ ಮ್ಯುನಿಸಿಪಲ್ ಲಾಂದ್ರಗಳನ್ನು ಶೀಮೆ ಎಣ್ಣೆಯಿಂದ ಹಚ್ಚಿಸುವ ಕಂಟ್ರಾಕ್ಟು ಬಾಬಿಗಾಗಿ ಅರಗು ಮೊಹರು ಮಾಡಿದ ಟೆಂಡರುಗಳನ್ನು 1903ನೇ ಇಸವಿ ಮೇ ತಾರೀಖು 15ನೇ ಶುಕ್ರವಾರದ ದಿನ ಮಧ್ಯಾಹ್ನ 3 ಘಂಟೆಯ ವರಿಗೂ, ಈ ಕೆಳಗೆ ರುಜು ಮಾಡಿರುವವರಿಂದ ತೆಗದುಕೊಳ್ಳಲ್ಪಡುವದು.

2. ಟೆಂಡರು ಇರತಕ್ಕ ಪ್ರತಿ ಒಂದು ಕವರಿನ ಮೇಲೂ, "ಮೈಸೂರು ಸಿಟಿ ಮ್ಯುನಿಸಿಪಲ್ ಲಾಂದ್ರಗಳನ್ನು ಹಚ್ಚಿಸತಕ್ಕ ಬಗ್ಗೆ ಟೆಂಡರು" ಎಂದು ಬರೆದು, ಮೈಸೂರು ಸಿಟಿ ಮ್ಯುನಿಸಿಪಲ್ ಕಮ್ಮಿಷರ್ ಪ್ರೆಸಿಡೆಂಟರವರ ಹೆಸರಿಗೆ ಎಂತ ವಿಳಾಸ ಬರೆಯಬೇಕು. ಕಂಟ್ರಾಕ್ಟರು ಟೆಂಡರಿನ ಸಂಗಡ, ಒಂದು ನೂರು ರೂಪಾಯಿಗಳನ್ನು ನಗದಾಗಿಯೇ ಆಗಲಿ ಅಥವಾ ಕರ್ರನ್ಸಿ ನೋಟುಗಳ ರೂಪಕವಾಗಿಯಾಗಲಿ ಡಿಪಾಜಿಟ್ ಬಗ್ಗೆ ಹಾಜರು ಮಾಡಬೇಕು. ಅಂಥಾ ಕಂಟ್ರಾಕ್ಟುದಾರನ ಟೆಂಡರು ಮಂಜೂರಾಗದಿದ್ದರೆ, ಡಿಪಾಜಿಟ್ ಬಗ್ಗೆ ಹಾಜರ್ಮಾಡಲ್ಪಟ್ಟ ಮೊಬಲಗು ವಾಪಸ್ ಮಾಡಲ್ಪಡುವದು.

3. ಪ್ರತಿ ಒಂದು ಟೆಂಡರಿನಲ್ಲಿಯೂ, ಈ ಕೆಳಗೆ ನಮೂದಿಸಿರತಕ್ಕ ತಃಖ್ತೆಯಲ್ಲಿ ಕಾಣುವ ಕಾಲವನ್ನು ಅನುಸರಿಸಿ ಲಾಂದ್ರ ಹಚ್ಚಿಸುವದಕ್ಕೆ ಮಾಹೆಯಾನಾ ಪ್ರತಿ ಒಂದು ಲಾಂದ್ರಕ್ಕೂ ಇರಾದೆ ಪಟ್ಟು ಒಪ್ಪಿಕೊಳ್ಳುವ ಮೊಬಲಗಿನ ದರವನ್ನೂ, ಸ್ಪಷ್ಟವಾಗಿ ನಮೂದು ಮಾಡಿರಬೇಕು.

4. ಈ ಲಾಂದ್ರಗಳಿಗೆ ಬೇಕಾಗುವ ಚಿಮ್ನಿಗಳನ್ನು ಮ್ಯುನಿಸಿಪಾಲಿಟಿಯಿಂದ ಸಪ್ಲೈ ಮಾಡುತ್ತೆ. ಚಿಮ್ನಿಗಳಲ್ಲಿ ಉರಿಸತಕ್ಕ ಬತ್ತಿಗಳು ಪ್ರತಿ ಒಂದೂ ಒಂದು ಅಂಗುಲ ಅಗಲ ವುಳ್ಳದ್ದಾಗಿಯೂ, 125° ಡಿಗ್ರಿಗಳ ಶೀಮೆ ಎಣ್ಣೆಯ ಹಪಯೊಡನೆ 18 ಮೇಣದ ಬತ್ತಿಗಳ ಕಾಂತಿಯಷ್ಟು ಬೆಳಕು ಉಳ್ಳದ್ದಾಗಿಯೂ ಇರಬೇಕು.

5. ಕಂಟ್ರಾಕ್ಟುದಾರನು ತನ್ನ ಹಾತ ಲಾಗವಡಿನಿಂದ ಚಿಮ್ನಿಗಳನ್ನು ಸರಬರಾಜು ಮಾಡಿಕೊಳ್ಳಬೇಕು. ಅಲ್ಲದೆ, ಅಂಥಾ ಚಿಮ್ನಿಗಳನ್ನು ನಿರ್ಮಲವಾಗಿಯೂ, ಒಳ್ಳೇ ಸ್ಥಿತಿಯಲ್ಲಿಯೂ, ಇಟ್ಟುಕೊಂಡಿರಬೇಕು. ಮತ್ತು ಮ್ಯುನಿಸಿಪಾಲಿಟಿಗೆ ಸಂಬಂಧಪಟ್ಟ ಸಾಮಾನುಗಳು ಅಂದರೆ, ದರೋಬಸ್ತು ಲಾಂದ್ರಗಳೂ, ಲಾಂದ್ರದ ಕಂಭಗಳೂ, ಮತ್ತು ಇತರ ವಿಶಿಷ್ಟ ಪದಾರ್ಥಗಳನ್ನೂ ಕಂಟ್ರಾಕ್ಟಿನ ಅವಧಿಯು ಪೂರೈಸುವವರಿಗೂ, ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಂಡಿದ್ದು ಅಂತಾ ವಾಯಿದೆಯು ಪೂರೈಸಿದ ಕೂಡ್ಲೆ ಮೇಲ್ಕಂಡ ದರೋಬಸ್ತು ಸಾಮಾನುಗಳನ್ನೂ ಉತ್ತಮಸ್ಥಿತಿಯಲ್ಲಿ ಮ್ಯುನಿಸಿಪಲ್ ಪ್ರೆಸಿಡೆಂಟರವರ ವಶಕ್ಕೆ ವಾಪಸು ಪಾವತಿ ಮಾಡಲು ಬದ್ಧನಾಗಿರತಕ್ಕದ್ದು.

6. ಕಂಟ್ರಾಕ್ಟುದಾರನು ತನ್ನ ಸ್ವಂತ ಖರ್ಚಿನಿಂದ ಪ್ರೆಸಿಡೆಂಟರವರಿಗೆ ತೃಪ್ತಿಕರವಾಗಿ ಕಂಡುಬರುವಂತೆ, ಅತ್ಯುತ್ತಮವಾದ ಸಾಮಾನುಗಳಿಂದ ಕಂಟ್ರಾಕ್ಟು ವಾಯಿದೆ ವಳಗೆ ಒಂದುಸಾರಿ ಮ್ಯುನಿಸಿಪಲ್ ಲಾಂದ್ರಗಳನ್ನೂ, ಲಾಂದ್ರದ ಕಂಭಗಳನ್ನೂ ನಂಬರು ಹಾಕಿಸಿ ಅಥವಾ ಬಣ್ಣ ವಗೈರೆ ಹಾಕಿಸಿ ರಿಪೇರಿ ಮಾಡುವದಕ್ಕೆ ಬದ್ಧನಾಗಿರಬೇಕು.

7. ಹಾಲಿ ಈ ಮ್ಯುನಿಸಿಪಾಲಿಟಿಯಲ್ಲಿ 900 ಲಾಂದ್ರದ ಕಂಭಗಳು ಇರುತ್ತವೆ. ಈ ಸಂಖ್ಯೆಯು ಪ್ರಾಯಶಃ ಇನ್ನೂ ಹೆಚ್ಚಬಹುದು.

8. ಮೇಲ್ಕಂಡ ಕಂಟ್ರಾಕ್ಟ್ನ ಬಗ್ಯೆ ಉಪಯೋಗಿಸತಕ್ಕ ಸಾಮಾನುಗಳು ವಗ್ಯೆರೆ ವಿಷಯಕವಾದ ಯಾವ ತಪಶೀಲುಗಳನ್ನೇ ಆಗಲಿ ಈ ಕೆಳಗೆ ರುಜುಮಾಡಿರುವವರ ಹೆಸರಿಗೆ ಬರೆದು ಆ ಮೂಲಕ ತಿಳಿದುಕೊಳ್ಳಬಹುದು.

ತಃಖ್ತೆ.

ಪ್ರತಿ ಒಂದು ಹಿಂದು ಮಾಸದ ಬಹುಳ ತದಿಗೆಯು ಲಾಗಾಯಿತು ಮುಂದಣ ಹಿಂದು ಮಾಸದ ಶುದ್ಧ ಪಂಚಮಿಯ ವರೆಗೆ (ಉಭಯ ದಿವಸಗಳು ಸೇರಿ) ಅಂದರೆ 18 ದಿವಸಗಳ ಕಾಲಕ್ಕೆ.

ಜಂಜರ್ ನಂಬರು.	ತಿಥಿಯ ಹೆಸರು.	ಘಂಟೆ.	
		ಇಂದ.	ವರೆಗೆ.
1	ಬಹುಳ ತದಿಗೆ	6 P. M.	9 P. M.
2	,, ಚೌತಿ	6 P. M.	9 P. M.
3	,, ಪಂಚಮಿ	6 P. M.	12 P. M.
4	,, ಷಷ್ಠಿ	6 P. M.	12 P. M.
5	,, ಸಪ್ತಮಿ	6 P. M.	12 P. M.
6	,, ಅಷ್ಟಮಿ	6 P. M.	12 P. M.
7	,, ನವಮಿ	6 P. M.	12 P. M.
8	,, ದಶಮಿ	6 P. M.	3 A. M.
9	,, ಏಕಾದಸಿ	6 P. M.	3 A. M.
10	,, ದ್ವಾದಸಿ	6 P. M.	3 A. M.
11	,, ತ್ರಯೋದಸಿ	6 P. M.	3 A. M.
12	,, ಚತುರ್ದಸಿ	6 P. M.	3 A. M.
13	,, ಅಮಾವಾದಸೆ	6 P. M.	3 A. M.
14	ಶುದ್ಧ ಪಾಡ್ಯಮಿ	6 P. M.	3 A. M.
15	,, ಬಿದಿಗೆ	6 P. M.	3 A. M.
16	,, ತದಿಗೆ	6 P. M.	3 A. M.
17	,, ಚೌತಿ	6 P. M.	3 A. M.
18	,, ಪಂಚಮಿ	6 P. M.	3 A. M.

ಕೆ. ಶ್ರೀನಿವಾಸರಾವ್,
ಛೇರ್ ಪ್ರೆಸಿಡೆಂಟ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ 19.

ಬೆಂಗಳೂರು, ಗುರುವಾರ, ಮೇ ತಾ|| 14, ಸನ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಹೊರಡೋಣಾದ ಇಸ್ತಿಹಾರ ನಾಮೆಗಳು.

ಎಕ್ಸೈಜ್ ಇಲಾಖೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಸನ 1903—1904ನೇ ಸರ್ಕಾರಿ ವರುಷಕ್ಕಾಗಿ ಮೈಸೂರು ರಾಜ್ಯದಲ್ಲಿ ಶೇಂದಿ ಉತಾರ್ಮಾಡಲಿಕ್ಕೆ ಎಲ್ಲಾ ಮರಗಳು ಹಸರು ಬಣ್ಣದಿಂದ ಸಂಖ್ಯೆ ಹಾಕಲ್ಪಡುವವು.

ಪಿ. ಎನ್. ಪೂರ್ಣಯ್ಯ,
ಮೈಸೂರು ಸೀಮೆಯ ಎಕ್ಸೈಜ್ ಕಮಿಷನರ್.

ಫಾರೆಸ್ಟು ಇಲಾಖಾ.

ನೋಟಿಫಿಕೇಷನ್, ತಾರೀಖು 22ನೇ ಏಪ್ರೈಲ್ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಕ್ಲೋಸ್‌ಪೇಟೆ ರೇಂಜ್ ಸಾವನ್‌ದುರ್ಗ ಮತ್ತು ಹಂದಿಗೊಂದಿ ಸ್ಟೇಟ್ ಫಾರೆಸ್ಟುಗಳಲ್ಲಿ ಇರುವ ಪಪ್ಲಿ ಚಕ್ಕೆಯನ್ನು 31—1—1904ರ ವರೆಗೆ ರೂಢಿಸಲು 30—5—1903ರಲ್ಲಿ ಡಿ|| ಫಾ|| ಆಫೀಸರವರಿಂದ ಅಥವಾ ರೇಂಜ್ ಆಫೀಸರವರಿಂದ ಕ್ಲೋಸ್‌ಪೇಟೆಯಲ್ಲಿ ಹರಾಜು ಹಾಕಲ್ಪಡುವದು.

ಷರತ್ತುಗಳು.—1. ಖಡದರಖಾಸ್ತುದಾರನು ಹರಾಜು ಖೈದಾದಕೂಡಲೆ ಕಾಲುಹಿಸ್ಸೆ ಮೊಬಲಗನ್ನು ಹಾಜರ್ಮಾಡಬೇಕು. ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಡಿ|| ಫಾ|| ಆಫೀಸರವರಿಂದ ಕೊಡೋಣಾಗುವ ಅಡ್ವೈಸ ಮೇರೆ ಸಮೀಪದಲ್ಲಿರುವ ತಾಲ್ಲೂಕು ಟ್ರೈಜರಿಗೆ ಹರಾಜು ತಾರೀಖು ಲಗಾಯತು ಮೂರು ದಿವಸದಲ್ಲಿ ಪಾವತಿ ಮಾಡಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳುವದಲ್ಲದೆ ಬಾಬು ಪುನಹ ಹರಾಜ್ಮಾಡಲ್ಪಡುವದು.

2. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಖಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಿಗೆ ಅವಲ್ ಖಡದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಆದರೆ ದುಸರ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಿಗ್ಗೆ ಕಮ್ಮಿಯಾದಲ್ಲಿ ಆರೀತಿ ಕಮ್ಮಿ ಆಗುವ ಮೊಬಲಗನ್ನು ಅವಲ್ ದರಖಾಸ್ತುದಾರನು ಪಾವತಿ ಮಾಡಲು ಬದ್ಧನಾಗಿರುತ್ತಾನೆ.

3. ಸದರಿ ಚಕ್ಕೆಯನ್ನು ಡಿ|| ಫಾ|| ಆಫೀಸರವರಿಂದ ಕೊಡೋಣಾಗುವ ಲೈಸೆನ್ಸ್ ಮೇರೆ ಅದರಲ್ಲಿ ನಮೂದಾಗುವ ವಾಯಿದೆ ಅಂದರ್‌ವಾರ್ ಸಾಗಿಸಿಕೊಳ್ಳಬೇಕು.

4. ಸೂರ್ಯ ಅಸ್ತಮಾನವಾದ ನಂತರ ಮತ್ತು ಸೂರ್ಯ ಉದಯವಾಗುವದಕ್ಕೆ ಪೂರ್ವದಲ್ಲಿ ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಯಾವ ಮರಗಳು ಸಾಗಿಸಲ್ಪಡಕೂಡದು.

5. ಗುತ್ತಾದಾರನು, ಬಳ್ಳಿ ಯಾ ತಾಯಿಬೇರಿಗೆ ಇಜಾ ಇಲ್ಲದಂತೆ ಪಕ್ಕದ ಬೇರುಗಳಲ್ಲಿ ಮಾತ್ರ ಚಕ್ಕೆಯನ್ನು ರೂಢಿಸಿಕೊಳ್ಳಬೇಕು.

6. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟಿನಲ್ಲಿ ಬೆಂಕಿ ಸಂಭವಿಸಿದರೆ ಅವರನ್ನೇ ಶಿಕ್ಷೆಗೆ ಗುರಿಪಡಿಸಲಾದೀತು.

7. ಕಂಟ್ರಾಕ್ಟುದಾರನು ಚಕ್ಕೆ ರೂಢಿಸುವದರಲ್ಲಿ ತಾಯಿಬೇರಿನಲ್ಲಿ ತೆಗಿಯದೆ ಪಕ್ಕದ ಬೇರುಗಳಲ್ಲಿ ತೆಗೆದುಕೊಳ್ಳಬೇಕು.

ನೋಟಿಫಿಕೇಷನ್, ತಾರೀಖು 22ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಾಗುವ ಬೆಂಗಳೂರು ಡಿಸ್ಟ್ರಿಕ್ಟಿಗೆ ಫಾರೆಸ್ಟ್ಟುಗಳಲ್ಲಿರತಕ್ಕ ಹಣ ಸಣ್ಣ ಮತ್ತು ಥಪ್ಪ ಬಿದರುಗಳನ್ನು 1904ನೇ ಇಸವಿ ಜನವರಿ 31ನೇ ತಾರೀಖಿನ ವರಿವಿಗೆ ಸಾಗಿಸುವ ಹಕ್ಕನ್ನು ಕೆಳಗೆ ನಮೂದಾಗುವ ತಾರೀಖು ಮತ್ತು ಸ್ಥಳಗಳಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಈ ಹರಾಜು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ :—

ನಂಬರು	ತಾಲ್ಲೂಕು.	ಫಾರೆಸ್ಟ್ಟು ಹೆಸರು.	ಹರಾಜು ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
1	ಆನೆಕಲ್ ...	ಬಿಳವನಕುಪ್ಪೆಶೇರಿ ರಾಗಿಹಳ್ಳಿ	11—5—1903	ಬನ್ನೇರಘಟ್ಟ	ಡೆಪ್ಯುಟಿ ಕನ್ಸರ್ವೇಟರ್, ಬೆಂಗಳೂರು
2	ಕನಕನಹಳ್ಳಿ ...	ಬಿಳಿಕಲ್ ಬಾಣಂತಮಾರಿ	16—5—1903	ಕನಕನಹಳ್ಳಿ	
3	ಡಿಟೋ ...	ಮೂಗೂರು ರಾಮದೇವರ ಬೆಟ್ಟ ರಿಜರ್ವ್ ಮುನೇಶ್ವರ ಬೆಟ್ಟ ರಿಜರ್ವ್ ಮಂಜನಾತ ರಿಜರ್ವ್	18—5—1903	ಕೋಡಿಹಳ್ಳಿ	
4	ಡಿಟೋ ...	ಚೀಲಂದಾಡಿ ಅಚ್ಚಲ್ ರಿಜರ್ವ್	20—5—1903	ಸಾತನೂರು	
5	ಮಲವಳ್ಳಿ ...	ಬಸವನ ಬೆಟ್ಟ	21—5—1903	ಹಲಗೂರು	
6	ಕನಕನಹಳ್ಳಿ ...	ಕಬ್ಬಾಳ ಟೈಲೂರು ರಿಜರ್ವ್	22—5—1903	ಹನಿಯೂರು	
7	ಮಾಗಡಿ ...	ಸಾವನದುರ್ಗ	25—5—1903	ಮಾಗಡಿ	

2. ಹರಾಜು ಖೈದಾದ ಕೂಡ್ಲೆ ಆಖೈರ್ ಸವಾಲ್ದಾರನು ಪೂರಾ ಮೊಬಲಗಿನ ಪೈಕಿ ಶೇಕಡ 25 ರೂಪಾಯಿ ಡಿಪಾಜಿಟ್ ಇಡಬೇಕು. ಬಾಕಿ ಮೊಬಲಗನ್ನು ಹರಾಜು ತಾರೀಖು ಲಾಗಾಯತು 30 ದಿವಸಗಳ ಒಳಗಾಗಿ ಸಂದಾಯ ಮಾಡಬೇಕು. ಈ ಮೇರೆ ಪಾವತಿ ಮಾಡಲು ತಪ್ಪಿದರೆ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು. ಅಲ್ಲದೆ ಮೊದಲ್ ಸವಾಲ್ದಾರನಿಗೆ ನಷ್ಟಕ್ಕೆ ಗುರಿಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಈ ಹರಾಜಿನಲ್ಲಿ ಜಾಸ್ತಿ ಉತ್ಪತ್ತಿ ಆಗುವ ಪಕ್ಷ ಅದಕ್ಕೆ ಅವಲ್ ದರಖಾಸ್ತುದಾರನಿಗೆ ಏನೂ ಹಕ್ಕು ಇರುವದಿಲ್ಲ. ಪೂರಾ ಹಣ ಸಂದಾಯ ಮಾಡಿದಕೂಡ್ಲೆ ಗಳ ಜಮಾವಣೆ ಮಾಡಿಕೊಳ್ಳಲು ಲೈಸೆನ್ಸು ಕೊಡಲ್ಪಡುತ್ತೆ.

3. ಬಿದರು ಜಮಾಯಿಸುವ ಫಾರೆಸ್ಟ್ಟು ಯಾ ಫಾರೆಸ್ಟಿನ ಯಾವ ಭಾಗದಲ್ಲಿಯೇ ಆಗಲಿ ಬೆಂಕಿ ಬಾಧೆ ಏನಾದರೂ ಉಂಟಾದಲ್ಲಿ ಕಂಟ್ರಾಕ್ಟುದಾರನು ಅದಕ್ಕೆ ಜವಾಬ್ದಾರನ್ನಾಗಿ ಮಾಡುತ್ತೆ. ಕಂಟ್ರಾಕ್ಟುದಾರನಿಂದಾಗಲಿ ಅಥವಾ ಆತನ ಕಡೆ ಮನುಷ್ಯನಿಂದಾಗಲಿ ಯಾವದಾದರೂ ಫಾರೆಸ್ಟ್ ತಕಶೀರ್ ನಡದಲ್ಲಿ ಅಂಥಾದ್ದಕ್ಕೆ ಫಾರೆಸ್ಟ್ ರೂಲ್ ಮೇರೆ ಕ್ರಮ ಜರುಗಿಸಲ್ಪಡುವದು.

4. ಹಣ ಬಿದರು ತೆಗೆದುಕೊಳ್ಳುವವರು ಸಾವಿರ ಗಳು ಕಟ್ಟುವದಕ್ಕೆ ಆಗುವ ಪಟ್ಟೆ ಗಳಗಳಿಗೆ 0—4—0 ಯಂತೆ ಬೇರೆ ಹಣ ಕೊಟ್ಟು ಲೈಸೆನ್ಸು ಮೂಲಕ ಕಟ್ಟುಗಳು ತೆಗೆದುಕೊಳ್ಳಬೇಕು.

ಟಿ. ಅಬ್ದುಲ್ ಕರೀಂ,
ಡೆಪ್ಯುಟಿ ಕನಸರ್ವೇಟರ್ ಆಫ್ ಫಾರೆಸ್ಟ್ಸ್, ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 30ನೇ ಏಪ್ರೆಲ್ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ಸರ್ಕಾರಿ ಜಮೀನ್ನಲ್ಲು, ಸ್ಟೇಟ್ ಫಾರೆಸ್ಟ್ಟು ಮತ್ತು ಪ್ಲಾನ್ಟೇಷನ್‌ಗಳಲ್ಲೂ ಇರತಕ್ಕ, ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಹನ್ನೆರಡು ತಿಂಗಳು ಕಾಲದಲ್ಲಿ ರೂಢಿಶಿ ಜಮಾಯಿಸತಕ್ಕ ಹಕ್ಕನ್ನು ಪಡೆಯಲು 1903ನೇ ಇಸವಿ ಜೂನ್ 20ನೇ ತಾರೀಖಿನ ವರಿಗೆ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ನಂಬರ್.	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟಿನ ಹೆಸರು.	ಷರಾ
1	ಚಿಕ್ಕಬಳ್ಳಾಪುರ.	ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.
2	ಗೋರಿಬಿದನೂರ್.	
3	ಗುಡಿಬಂಡೆ.	
4	ಬಾಗೇಪಲ್ಲಿ.	

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿಒಂದು ದರಖಾಸ್ತಿನೊಡನೆ (200) ರೂಪಾಯಿನ ಕರನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇನ್‌ಷೂರ್ ಮಾಡಿ ಲಿಫಾಫೆ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್‌ರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವದಾದರೊ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲಾ ಮತ್ತು ಯಾವ ಕಾರಣವನ್ನೂ ನಮೂದಿಸದೇನೆ ಯಾವ ದರಖಾಸ್ತನ್ನು ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್‍ರವರ ಆಫೀಸಿನಲ್ಲಿ 1903ನೇ ಇಸವಿ ಜೂನ್ 22ನೇ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್‍ರವರು ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಥವಾ ಇವರಿಂದ ನಿಯಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಶೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತು ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಮತ್ತು ಇದರ ಮೇಲೆ ಅರ್ಧ ಭಾಗವನ್ನು ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ವುಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ತಮಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನು ವಸೂಲ್ ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಎರಡು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತೀ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರೀಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾಧೀತು.

1ನೇ ಖಿಸ್ತು	...	...	1ನೇ ಸೆಪ್ಟಂಬರ್ 1903.
2ನೇ ಖಿಸ್ತು	...	...	1ನೇ ಜನವರಿ 1904.

ಇತರ ಷರತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕಮಿ ಕೆಂಟ್ರಾಕ್ಟರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಾಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರಾ ವುಳಿಯುವ ಆ ಸಂಬಂಧವಾದ ವಿಶಿಷ್ಟ ಸಾಮಯೂ ಇಜಾರೆದಾರನಿಗೆ ಶೇರಿದ್ದಾಗಿರುತ್ತೆ.

(V) ಇಜಾರೇ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್‍ರವರಾಗಲಿ ಅವರಿಂದ ನೇಮಕವಾದ ಇತರ ಆಫೀಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಜೋಡಾ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್‍ರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‍ಗಳಲ್ಲಿ ಬೆಂಕಿಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಬೇಕಲ್ಲದೆ; ಬೆಂಕಿಬೀಳುವದರಿಂದ ಬೆಲೇ ಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1904ನೇ ಜುಲೈ ಮಾಹೆ 15ನೇ ತಾರೀಖಿನೊಳಗಾಗಿ ಇಜಾರೆ ಮಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಕೋಲಾರ ಡಿಸ್ಟ್ರಿಕ್ಟ್ ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರವರು (1,000) ರೂಪಾಯಿ ವರಿಗೂ ಜರ್ಮಾನೆಯನ್ನು ಸಹಾ ವಿಧಿಸಬಹುದು.

ಎಸ್. ಎ. ಬಾಪುರಾವ್,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 26ನೇ ಏಪ್ರೈಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟಿಗೆ ಶೇರಿದ ಇದರಡಿ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಇಡುವಳಿಯಿಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟ್ಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿಬೇಲಿಗಳಲ್ಲಿ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1903ನೇ ಇಸವಿ ಜುಲೈ 1ನೇ ತಾರೀಖು ಲಗಾಯಿತು 1904ನೇ ಇಸವಿ ಜೂನ್ 30ನೇ ತಾರೀಖಿನವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು. ಈ ಡಿಸ್ಟ್ರಿಕ್ಟು ಫಾರೆಸ್ಟುಗಳಿಗೆ ಫಾರೆಸ್ಟು ಪ್ಲಾಂಟೇಷನ್‌ಗಳು ಶೇರಿಯಿಲ್ಲ:—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫಿಸರು.
ಯಡತೊರೆ	10—6—1903	ಆಯಾಯ ತಾಲ್ಲೂಕು ಹೆಡ್‌ಕ್ವಾರ್ಟರ್‌ನಲ್ಲಿರತಕ್ಕ ತಾಲ್ಲೂಕು ಕಚೇರಿಯಲ್ಲಿ.	ಆಯಾಯ ತಾಲ್ಲೂಕು ಅಮಲ್ದಾರ್ರವರು ಮತ್ತು ಫಾರೆಸ್ಟು ರೇಂಜಾಫಿಸರವರು.
ಹುಣಸೂರು	12—6—1903		
ಹೆಗ್ಗಡದೇವನಕೋಟೆ	15—6—1903		
ಗುಂಡ್ಲುಪೇಟೆ	18—6—1903		
ಚಾಮರಾಜನಗರ	20—6—1903		
ನಂಜನಗೂಡು	22—6—1903		
ಟಿ. ನರಸೀಪುರ	24—6—1903		
ಮೈಸೂರು	24—6—1903		
ಮಳವಳ್ಳಿ	25—6—1903		
ಮಂಡ್ಯ	27—6—1903		
ಶ್ರೀರಂಗಪಟ್ಟಣ	29—6—1903		
ನಾಗಮಂಗಲ	3—7—1903		
ಕೃಷ್ಣರಾಜಪೇಟೆ	6—7—1903		

ಹುಟ್ಟುವಳಿ ತಪಸೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡು ಅರಶಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಹಾಲುಮಡ್ಡಿ, 13. ಚಗಚೇಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ಸಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಬೇಲದಹಣ್ಣು, 20. ಅರಗು, (ಫ್ರೆಂಚ್‌ರಾಕ್ಸು ಸಬ್ ಡಿವಿಜನ್ ತಾಲ್ಲೂಕುಗಳದು ವಿನಹ) 21. ಶಿತಾಫಲದ ಹಣ್ಣು, 22. ಬೆಂಡೆನಾರು; ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಶೇರಿಯಿಲ್ಲ:—

ಹುಣಸೂರು, ಹೆಗ್ಗಡದೇವನ ಕೋಟೆ, ಗುಂಡ್ಲು, ನಂಜನಗೂಡು ಮತ್ತು ಚಾಮರಾಜನಗರ ತಾಲ್ಲೂಕುಗಳು.

ನಾಗಮಂಗಲದ ತಾಲ್ಲೂಕು ಬಾಬತು:—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂದ, 5. ಯಿಂಡಸಹಳ್ಳಿ, 6. ಮಾರಹಳ್ಳಿ, 7. ಜೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು:—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಡನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು:—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8. ಮಾದಿಗರ ಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಚಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡ್ಲೆ ಇಜಾರೆ ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ಮೀರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫೆ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರವಿನ್ಯೂ ರಿಕವರಿ ಆಕ್ಟಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1903ನೇ ಜುಲೈ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ಉಳಿದ ಮೊಬಲಗನ್ನು ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ಮೊಬಲಗನ್ನು ಸಹ ಮೂರು ಸಮವಾದ ಖಿಸ್ತುಗಳಲ್ಲಿ ಅಂದರೆ:—

1903ನೇ ಇಸವಿ ಡಿಸೆಂಬರ 1ನೇ ತಾರೀಖು.

1904ನೇ ಇಸವಿ ಜನವರಿ 2ನೇ ತಾರೀಖು.

1904ನೇ ಇಸವಿ ಫೆಬ್ರವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ-6-ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವದೊಂದು ಖಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1904ನೇ ಜೂನ್ ಆಖೈರ ವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಮತ್ತು ಜಾಮೀನ್ದಾರನು ಸಹ ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ.

ತಾರೀಖು 26ನೇ ಏಪ್ರೈಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, — ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳ ಸರ್ಕಾರಿ ಬಂಜರ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕುವಾರ್ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜೂನ್ ತಾರೀಖು 12ರಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಇದಕ್ಕೆ ಸೇರಿ ಇರುವದಿಲ್ಲ. ಅವುಗಳು ಅಲಾಯಿದಾ ವಿಲೇ ಮಾಡಲ್ಪಡುವವು.

ತಾಲ್ಲೂಕುಗಳ ಹೆಸರು.

1. ಹೆಗ್ಗಡದೇವನಕೋಟೆ ...	3. ನಂಜನಗೂಡು ...	5. ಯಡತೊರೆ
2. ಗುಂಡ್ಲುಪೇಟೆ ..	4. ಹುಣಸೂರು ...	6. ಚಾಮರಾಜನಗರ

2. ಹರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದೇ ಇದ್ದ ಪಕ್ಷದಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. ಈ ಮೇಲೆ ನಮೂದಿಸಿರುವ ಹಕ್ಕು ಜಾಸ್ತಿ ದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿಧೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂಜೂರು ಮಾಡುವದಕ್ಕೂ ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿಧಾರೆ.

4. ಜಾಸ್ತಿ ದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡೆದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಜಾಸ್ತಿ ಸವಾಲ್ ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಜಾಸ್ತಿ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನು ಹರಾಜ್ ಕೈದಾದ ಕೂಡಲೆ ವಾಪಸ್ ಮಾಡಲ್ಪಡುವದು. ಜಾಸ್ತಿ ದರಖಾಸ್ತುದಾರನು ಅವನ ದರಖಾಸ್ತು ಮಂಜೂರಾತಿಯನ್ನು ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ಒಳಗಾಗಿ ಅವನು ಮೊದಲು ಇಟ್ಟು ಇರತಕ್ಕ ಡಿಪಾಜಿಟ್ ಮೊಬಲಗು ಸೇರಿ ಹರಾಜಿನ ಒಟ್ಟು ಮೊಬಲಗಿನ ಕಾಲು ಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ್ಟ್ ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ರಕಾರದಲ್ಲಿ ನಮೂದಿಸಿದಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಜಾಸ್ತಿ ದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದ ಕೂಡ್ಲೆ ಕೊಡದೆ ಇದ್ದರೆ ಅದನ್ನು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳ ಮೇರೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರದಾರನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ವಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ, ಡಿಪಾಜಿಟ್ ಹಣವನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1903ನೇ ಇಸವಿ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಕಿಸ್ತಿ ಮೇರೆ ಅಂದರೆ 1903ನೇ ಅಕ್ಟೋಬರ್ 1ನೇ ತಾರೀಖಿನಲ್ಲಿ ಒಂದನೇ ಕಿಸ್ತು 1904ನೇ ಇಸವಿ ಜನವರಿ 2ನೇ ತಾರೀಖಿನಲ್ಲಿ ಎರಡನೇ ಕಿಸ್ತು ಮತ್ತು 1904ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಮೂರನೇ ಕಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವ ಮೇರೆ ಕಿಸ್ತಿನ ಹಣ ಪಾವತಿ ಮಾಡಲ್ಪಡದೇ ಇದ್ದರೆ ಚಕ್ಕೆಯ ಜಮಾವಣೆ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕಡಿಯಕೂಡದು. ಅಥವಾ ಅದರ ತೊಗಟೆಯನ್ನು ತೆಗೆಯಕೂಡದು.
2. ಇಜಾರದಾರನ ನೌಕರರೇ ಆಗಲಿ ಅಥವಾ ಷಿಕಮಿ ಕಂಟ್ರಾಕ್ಟುದಾರನೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕಲ್‌ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.
4. ತೊಗಟೆ ತೆಗಿಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿಧೆ.
5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜಮಾವಣೆ ಮೊತ್ತ ತೋರಿಸುವ ತಪಶೀಲ್ ಲೆಖ್ಖವನ್ನು ಇಡಬೇಕು. ಮತ್ತು ಅಂಥಾ ಲೆಕ್ಕವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ, ಅಮಲ್‌ದಾರರೇ ಆಗಲಿ ಅಥವಾ ಅವರುಗಳಿಂದ ನೇಮಿಸಲ್ಪಡುವ ಇತರ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.
6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.
7. ದಾಸ್ತಾನು ಇಡಲ್ಪಟ್ಟ ಮತ್ತು ಜಮಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿಯ ಜೂನ್ ಆಖೈರ್ ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.
8. ಈ ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಇದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹುಕುಂ ಆದಹಾಗೆ ಅವನಿಂದ ಪಾವತಿಯಾಗಿದ್ದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ.

ನೋಟಿಫಿಕೇಷನ್.

ತಾರೀಖು 28ನೇ ಏಪ್ರೈಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಸುಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ಡಿಪೋಗಳಲ್ಲಿ ಜಮಾಯಿಸಿ ಇರುವ ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಯೆ 1903ನೇ ಇಸವಿ ಮೇ 29ರ ವರೆಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ಡಿಪೋ ಹೆಸರು.	ಬಾಬಿನ ತರಹ.	ಮೊತ್ತ ಹೆಚ್ಚು ಕಡಿಮೆ.
ಮೈಸೂರು—ಉಡಿಯಾರ್ಡು ...	ಆಳಲೆಕಾಯಿ ...	2233 ಮಣ
ಹುಣಸೂರು ಡಿಪೋ ...	ಆಳಲೆಕಾಯಿ ...	1144 ಮಣ
	ಹೊಂಗೇಬೀಜ	1120 ಶೇರು
ಚಾಮರಾಜನಗರ ಡಿಪೋ	ಆಳಲೆಕಾಯಿ ...	326 ಮಣ
ಗುಂಡ್ಲು ಡಿಪೋ ...	ಆಳಲೆಕಾಯಿ ...	2934 ಮಣ
	ಹೊಂಗೇಬೀಜ ...	90 ಶೇರು
ಶ್ರೀರಂಗಪಟ್ಟಣದ ಕೋಠಿ ...	ಆಳಲೆಕಾಯಿ ...	2354 ಮಣ

2. ಡಿಪೋ ಹೆಸರು, ಬಾಬಿನ ತರಹಾ, ಕೇಳುವ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿಯೊಂದು ದರಖಾಸ್ತಿನ ಒಡನೆ ಒಂದು ನೂರು ರೂಪಾಯಿನ ಕರ್ರೆಸಿ ನೋಟ್ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಸ್ಟರ್ ಮತ್ತು ಇರ್ನಷೂರವಾಡಿ ಲಿಫಾಪೆಯ ಮೇಲೆ "ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಯೆ ದರಖಾಸ್ತು" ಎಂದು ಬರೆದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

4. ದರಖಾಸ್ತುಗಳ ಆಖೈರ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

5. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಆಫೀಸಿನಲ್ಲಿ 1903ನೇ ಇಸವಿ ಜೂನ್ 1ನೇ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಮತ್ತು ಡೆಪ್ಯುಟಿ ಕಮಿಷನರವರು ವ ಇವರ ಗೈರ್ ಹಾಜರಿಯಲ್ಲಿ ಹಾಜರು ಇರುವ ಆಸಿಸ್ಟೆಂಟ್ ಕಮಿಷನರವರು ಕಲೆತು ಹಾಜರು ಇರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

6. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 5 ದಿವಸಗಳ ಒಳಗಾಗಿ ಅವನು ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಸಮೀಪವಾದ ಮೈಸೂರ ಗವರ್ನಮೆಂಟ್ ಖಜಾನೆಯಲ್ಲಿ ಠೇವಣಿ ಇಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಅಡ್ವಾನ್ಸು ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತೆ.

7. ಖರೀದಿ ಒಟ್ಟು ಮೊಬಲಗು 1903ನೇ ಇಸವಿ ಜೂನ್ 30ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆಯಾಗಲಿ ಪಾವತಿ ಮಾಡಿ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು ಒಂದು ತಿಂಗಳ ವಳಗಾಗಿ ಮಾಲನ್ನ ಸಾಗಿಸಬೇಕು. ಖರೀದಿಯು ಪೂರಾ ಮೊಬಲಗನ್ನ ವಾಯಿದೆ ವಳಗಾಗಿ ಪಾವತೀ ಮಾಡಲು ತಪ್ಪಿದಲ್ಲಿ ಪಸಾರೆ ಬಾಬು ಪುನಹ ಮಾರಲ್ಪಡುವದು. ದರಖಾಸ್ತುದಾರನಿಗೆ ಹರಾಜಿನಲ್ಲಿ ಸಂಭವಿಸುವ ಫಾಯಿದೆ ದೊರೆಯಲಾರದು. ಆದರೆ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಬದ್ಧನನ್ನಾಗಿ ಮಾಡಿ ನಷ್ಟದ ಮೊಬಲಗನ್ನ ರೆವಿನ್ಯೂ ರೂಲ್ಸು ಪ್ರಕಾರ ಅವನಿಂದ ರೆವಿನ್ಯೂ ಬಾಕಿಯಂತೆ ವಸೂಲು ಮಾಡಲ್ಪಡುವದು. ಮಾಲನ್ನ ವಾಯಿದೆ ಒಳಗೆ ಸಾಗಿಸದೇ ಹೋದ ಪಕ್ಷದಲ್ಲಿ ತಿಂಗಳು ಒಂದಕ್ಕೆ ಅಥವಾ ಕಮ್ಮಿ ದಿವಸಗಳಿಗೂನೂ ಮಣ ಒಂದಕ್ಕೆ ದರ ಮಾಹೆ ಮೂರು ಕಾಸಿನಂತೆ ಡಿಪೋ ಬಾಡಿಗೆ ದರಖಾಸ್ತುದಾರನು ಕೊಡಬೇಕಾದೀತು. ಈ ಭಾಗದಲ್ಲಿ ಹೆಚ್ಚಾದ ತಪಶೀಲು ಬೇಕಾದಲ್ಲಿ ಮೈಸೂರು ಉಡಿಯಾರ್ಡು ಫಾರೆಸ್ಟರಿಂದಾಗಲಿ ಹುಣಸೂರು, ಗುಂಡ್ಲು ಮತ್ತು ಚಾಮರಾಜನಗರದ ರೇಂಜ್ ಆಫಿಸರವರಿಂದಾಗಲಿ ಅಥವಾ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಾಗಲಿ ತಿಳಿದುಕೊಳ್ಳಬಹುದು.

8. ಮೈಸೂರು ಉಡಿಯಾರ್ಡು ಫಾರೆಸ್ಟರಲ್ಲಿಯಾಗಲಿ ಹುಣಸೂರು, ಗುಂಡ್ಲು ಮತ್ತು ಚಾಮರಾಜನಗರದ ರೇಂಜ್ ಆಫಿಸರಲ್ಲಿಯಾಗಲಿ ಒಂದು ರೂಪಾಯಿ ಕಳುಹಿಸಿಕೊಟ್ಟಲ್ಲಿ ಪಸಾರೆ ಬಾಬಿನ ಮಾದ್ರಿಯು ದೊರಕುವದು. ಅಥವಾ ರೂಬರೂಬು ಮೇಲ್ಕಂಡ ಸ್ಥಳಗಳಲ್ಲಿ ಮುಫತ್ತಾಗಿ ನೋಡಬಹುದು.

9. ದರಖಾಸ್ತು ಮಂಜೂರಾತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಠೇವಣಿ ಮೊಬಲಗು ವಾಪಸು ಮಾಡಲ್ಪಡುವದು.

10. ಫಾರೆಸ್ಟು ನೌಕರಮಾನೇರಿಗು ಮತ್ತು ಖರೀದಿದಾರರಿಗೂ ಉಂಟಾಗುವ ತಕರಾರುಗಳಲ್ಲಿ (ವ್ಯತ್ಯಾಸಗಳಲ್ಲಿ) ಡೆಪ್ಯುಟಿ ಕಮಿಷನರವರ ತೀರ್ಮಾನವು ಆಖೈರಾದ್ದಾಗಿರುತ್ತೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋಗಳಲ್ಲಿ ಚೌಬೀನಾ ಸಾಮಾನುಗಳು ಬಿದರು ಗಳೂವು ಮತ್ತು ಪಸಾರೆ ಜಿನಸುಗಳು ಸಹಾ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು	ಹರಾಜು ತಾರೀಖು	ಹರಾಜು ಮಾಡತಕ್ಕ ಆಫೀಸರ ಹೆಸರು	ಹರಾಜಿಗೆ ಇಡಲ್ಪಡುವ ಚೌಬೀನೆಯು ಮೊತ್ತ												ಹರಾಜಿಗೆ ಇಡಲ್ಪಡುವ ಪಸಾರೆ ಜಿನಸುಗಳ ಮೊತ್ತ					ಬಿದರು ಗಳು
				ಸಾಗುವಾನಿ ನಾಟಾ		ಮನ್ನಾಜಾತಿ ನಾಟಾ		ಕಾಡುಜಾತಿ ನಾಟಾ		ಸಾಗುವಾನಿ ಸರ ವಗೈರೆ		ಮನ್ನಾಜಾತಿ ಸರ ವಗೈರೆ		ಕಾಡುಜಾತಿ ಸರ ವಗೈರ		ಜೇನುತುಪ್ಪ	ಜೇನುಮೇಣ	ಕೊಂಬು	ಶೀಗೆಕಾಯಿ	ಹೊಂಗೆಬೀಜ	
				ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಮ	ಮ	ಮ	ಮ	ಖಂ	ಅದದು
1	ಗುಂಡ್ಲು ಡಿಪೋ ...	18—5—03	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಅಥವ ರೇಂಜ್ ಆಫಿಸರು	..	...	2	39	...	...	130	132	152	300	12	30	55	9	3	...	...	
2	ಚಾಮರಾಜನಗರ ಡಿಪೋ ..	20—5—03	ಡಿಟೋ	1	18	24	615	2	44	3	13	43	699	514	762	20	2	..	4	2	
3	ಹುಣಸೂರು ಡಿಟೋ .	15—6—03	ಡಿಟೋ	8	202	128	2,521	17	369	632	1,464	242	1,689	364	790	...	..	....	...	.	
4	ಅಂತರಸಂತೆ ಡಿಟೋ ..	25—5—03	ಹೆಗ್ಗಡದೇವನ ರೇಂಜ್ ಆಫಿಸರ್	9	209	13	303	1	35	437	1,029	35	226	3	10	..	...	.	..	...	
5	ಬೇಗೂರು ಡಿಟೋ ..	30—5—03		..	...	...	..	..	..	743	1,847	7	47	2	19	...	..	..	...	..	
6	ಬೇಗೂರು ಕಡು ..	31—5—03		14	273	10	219	1	24	72	665	15	138	...	...	..	...	..	..	...	
7	ಆಲದಮರದ ಕಡು	28—5—03		16	432	5	88	..	..	114	653	25	255	...	..	...	...	...	...	...	
8	ನರಗೂರು ಡಿಪೋ ..	6—6—03		1	16	1	19	1	16	298	453	15	76	12	76	.	..	...	.	...	
9	ಸೋಮೇಶ್ವರ ಕಡು ..	8—6—03		49	1,638	28	698	2	56	29	180	4	34	1	14	...	..	....	...	.	
10	ಸಂತೆಮರಹಳ್ಳಿ ಡಿಪೋ ...	22—5—03	ಡಿಸ್ಟ್ರಿಕ್ಟ್ ಆಫಿಸರು ಅಥವ ರೇಂಜ್ ಆಫಿಸರ್	..	...	102	2,210	3	78	80	125	27	313	107	164	..		...	..	...	8,032
11	ಹುಣಸೂರು ಕೋರಿ ..	17—6—03		...	...	...	...	...	...	..	..	..	..	..	..	...	2	$\frac{1}{2}$	...	.	

ಪರತ್ತು:—1895ನೇ ಇಸವಿ 25ನೇ ಏಪ್ರಿಲ್ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ ಮಹೆ 15ನೇ ಮಾರ್ಕ್ಕಂ 1529—R. F. 155–92 ನಂಬರು ನೋಟಿಫಿಕೇಷನ್ ನೋಡಿ, ಚೌಬೀನಾ ಬಗ್ಗೆ.

1903ನೇ ಇಸವಿ ಮೇ ತಾರೀಖು 7ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಇದರಡೀ ಕಂಡ ಮೈಸೂರು ಡಿಸ್ಟ್ರಿಕ್ಟ್ ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆಯು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜಿ ತಾರೀಖು.	ಹರಾಜು ಮಾಡತಕ್ಕ ಅಧಿಕಾರಿಗಳು.	ಸುಮಾರು ಚೌಬೀನೆ ಮೊತ್ತ.											
				ಸಾಗವಾನಿ ನಾಟಾ ಮತ್ತು ಜಂತಿ.		ಮಿಶ್ರಾ ಜಾತಿ ನಾಟಾ ಮತ್ತು ಜಂತಿ.		ಕಾಡು ನಾಟಾ ಮತ್ತು ಜಂತಿ.		ಸಾಗವಾನಿ ಸರ.		ಮಿಶ್ರಾ ಜಾತಿ ಸರ.		ಕಾಡು ಸರ.	
				ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ
1	ಮೈಸೂರು ವುಡಿಯಾರ್ಡು	25-5-03	ಡಿಸ್ಟ್ರಿಕ್ಟ್ ಫಾರೆಸ್ಟ್ ಅಧಿಕಾರಿಗಳು.	343	7345	214	3785	6	94	63	72	..	..	..	..
2	ನಂಜನಗೂಡು ಡಿಪೋ	29-5-03		252	2606	54	903	8	145	...	..	..	..	.	..

ಷರತ್ತು:—1895ನೇ ಇಸವಿ ಮಾರ್ಚಿ 10ನೇ ಮರ್ಕುಂ 1529—R. F. 155-92ನೇ ನಂಬರು ಇಸ್ತಿಹಾರ್ ನಾಮೆಯನ್ನ 25—4—1895ನೇ ಮರ್ಕುಂ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿರುತ್ತೆ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಮೈಸೂರು ಡಿಸ್ಟ್ರಿಕ್ಟ್.

ತಾರೀಖು 10ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗಾ ಡಿಸ್ಟ್ರಿಕ್ಟಿನ ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ ಶೇರಿ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸರಕಾರ ಜಮೀನುಗಳಲ್ಲಿ ದೊರಿಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1903ನೇ ಜುಲೈ ಗುರ್ರೇ ಲಾಗಾಯತು 1904ನೇ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಟ್ಟು ಸ್ವಾತಂತ್ರ್ಯದ ಹಕ್ಕು ಬಹಿರಂಗವಾಗಿ ತಾಲ್ಲೂಕುವಾರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಅಥವಾ ಡೆಪ್ಯುಟಿ ಕಮಿಷನರಿಂದ ನೇಮಿಸಲ್ಪಟ್ಟ ಇತರ ಆಫಿಸರಿಂದ 1903ನೇ ಇಸವಿ ಜೂನ್ ತಾರೀಖು 15ರಲ್ಲು ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ:—

1. ಚೆನ್ನಗಿರಿ ತಾಲ್ಲೂಕು | 2. ಹೊನ್ನಾಳಿ

2. ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅವಶ್ಯವಿದ್ದಲ್ಲಿ ಮಾರನೇ ದಿವಸ ಅದೇ ಹೊತ್ತಿಗೆ ಹರಾಜು ಕ್ರಮ ಜರಿಗಿಸಲ್ಪಟ್ಟೀತು.

3. ಯಾವ ಕಾರಣವನ್ನು ನಮೂದಿಸದೆ ಈ ಹರಾಜನ್ನು ಅಂಗೀಕರಿಸಲಿಕ್ಕೂ ತಿರಸ್ಕರಿಸಲಿಕ್ಕು ಡೆಪ್ಯುಟಿ ಕಮಿಷನರವರು ಸ್ವಾತಂತ್ರರಾಗಿರುತ್ತಾರೆ.

4. ಹರಾಜ್ ಮಾಡತಕ್ಕವರು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಮೊಖ್ತ್ಯಾರಿ ಹೊಂದಿದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಿ ದರಖಾಸ್ತು ಮಾಡಬೇಕು. ಒಂದು ನೂರು ರೂಪಾಯಿ ಠೇವಣಿ ಇಟ್ಟ ಹೊರ್ತಾಗಿ ತನಿಗೋಸ್ಕರವೇಯಾಗಲಿ ಅಥವಾ ಎರಡನೇಯುವರಿಗೋಸ್ಕರವಾಗಿಯಾಗಲಿ ದರಖಾಸ್ತು ಮಾಡಲು ಯಾವನೊಬ್ಬ ಮನುಷ್ಯನಿಗೆ ಅಪ್ಪಣೆ ಕೊಡಲು ಆಗಲಾರದು. ಹರಾಜಾದಕೂಡ್ಲೇನೆ ಮಂಜೂರಾಗದೆ ಇರುವ ದರಖಾಸ್ತುದಾರ್ರ ಡಿಪಾಜಿಟ್ಟು ಮೊಬಲಗು ಅವರಿಗೆ ವಾಪಸು ಮಾಡಲಾದೀತು ಹರಾಜ್ ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ಆಗಲಿ ಯಾ ಅವರ ಏಜಂಟರಿಗೆ ಆಗಲಿ ತಿಳಿಸಿದ ತಾರೀಖು ಲಾಗಾಯತು 3 ದಿವಸದ ಒಳಗಾಗಿ ಡಿಪಾಜಿಟ್ ಹಣ ಶೇರಿಸಿಕೊಂಡು ಒಟ್ಟು ಗೊತ್ತಾದ ಮೊಬಲಗು ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿಯಲ್ಲಿ ಜಮಾ ಮಾಡಿಸಬೇಕು. ಅದರಂತೆ ಮಾಡಲು ತಪ್ಪಿದಲ್ಲಿ ಸದರೀ ನೂರು ರೂಪಾಯಿ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿಕೊಂಡು ಮೇಲ್ಕಂಡ ಹಕ್ಕನ್ನು ಹರಾಜ್ ಮಾಡಿಸುವ ಆಫಿಸರಿಂದ ತಪ್ಪಿಹೋದ ದರಖಾಸ್ತುದಾರನ್ನ ನಷ್ಟಕ್ಕೆ ಗುರಿಪಡಿಸಿ ಹರಾಜು ಮಾಡಲಾದೀತು. ಈ ಹಕ್ಕಿನಲ್ಲಿ ಏನಾದರು ಫಾಯಿದೆ ಬಂದರೆ ತಪ್ಪಿಹೋದ ದರಖಾಸ್ತುದಾರನಿಗೆ ಏನು ಹಕ್ಕು ಇರಲಾರದು.

5. ಈ ಕೆಳಗೆ ನಮೂದಿಸಿರುವ ಷರತ್ತುಗಳು ಅನುಸರಿಸಿ ನಡಿಯಲು ಹರಾಜು ಮಂಜೂರಾದ್ದು ದರಖಾಸ್ತುದಾರನಿಗೆ ಅಥವ ಅವನ ಏಜಂಟುದಾರನಿಗೆ ತಿಳದ ತಾರೀಖು ಲಾಗಾಯತು 5 ದಿವಸದ ವಳಗಾಗಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದರೆ ಠೇವಣಿ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುವದಲ್ಲದೆ ಸದರಿ ಹಕ್ಕು ದಾಖಿ ಪುನಹ ಹರಾಜು ಮಾಡಲ್ಪಡುವದು.

6. ಬಾಕಿಯಾಗುವ ಇಜಾರೆ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದಾಣೆ ಮೇರಿಗೆ ಆಗುವ ಲೋಕಲ್ ಸೆಸ್ ಸಹಾ 1903ನೇ ಆಗಸ್ಟು ಗುರ್ರೇ ಲಾಗಾಯತು ಮೂರು ತಿಂಗಳಲ್ಲಿ ಮಾಹೆಯಾನಾ ಖಿಸ್ತಿನಂತೆ ಕೊಡತಕ್ಕದ್ದು.

7. ಯಾವದಾದರೂ ಒಂದು ಖಿಸ್ತಿನ ಮೊಬಲಗು ಪಾವತಿ ಮಾಡದೆ ಇದ್ದಲ್ಲಿ ಇಜಾರೆಯನ್ನು ರದ್ದು ಮಾಡಿ ರಫ್ತಾಗದೆ ಬಾಕಿ ಇರತಕ್ಕ ಎಲ್ಲಾ ಚಕ್ಕೆಯು ಜಫ್ತಿ ಮಾಡಲ್ಪಟ್ಟು ಚಕ್ಕೆಯು ಜಮಾವಣಿ ಮತ್ತು ರಫ್ತು ಸಹಾ ನಿಲ್ಲಿಸಲ್ಪಟ್ಟು ಇಜಾರೆ ಮೊಬಲಗು ಸಂಪೂರ್ಣವಾಗಿ ರವಿನ್ಯೂ ಡಿಮ್ಯಾಂಡ್ ತರೀಕಾಗಿ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಒಂದು ವರುಷಕ್ಕೆ ಕಮ್ಮಿ ಇರುವ ಎಳೇ ಬುಡಗಳಲ್ಲಿ ಚಕ್ಕೆ ತೆಗಿಯದಂತೆಯು ಕಡಿಯದಂತೆಯು ನೋಡಿಕೊಳ್ಳತಕ್ಕದ್ದು.
2. ಬೇರೆ ಬೇರೆ ಸ್ಥಳಗಳಲ್ಲಿ ಚಕ್ಕೆಗಳನ್ನು ಜಮಾಯಿಸಲು ನೇಮಿಸಲ್ಪಡುವ ಮೇಸ್ತ್ರಿ ಮತ್ತು ಷಿಕ್ಮೀ ಕಂಟ್ರ್ಯಾಕ್ಟುದಾರುಗಳ ಹೆಸರುಗಳು ನಮೂದಿನಿಂದ ಒಂದು ಪಟ್ಟಿಯನ್ನ ಕೊಡಬೇಕು.
3. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಕೊಡುವ ನಮೂನೆಯಂತೆ ಸಾಗಿಸಿದ ಚಕ್ಕೆಯ ಮೊತ್ತವನ್ನು ತೋರಿಸುವ ಲೆಕ್ಕವನ್ನು ಇಡತಕ್ಕದ್ದು. ಫಾರೆಸ್ಟು ರೇಂಜರು ಮತ್ತು ಅಮಲ್ದಾರು ಯಾ ಪೋಲೀಸು ಇನ್ಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲ್ಪಟ್ಟ ಇತರ ಆಫಿಸರ ಅಜಮಾಯಿಷಿಗೆ ಸದರೀ ಲೆಖ್ಖಗಳು ಒಳಪಟ್ಟಿದ್ದಾಗಿರುತ್ತವೆ.
4. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಏರ್ಪಡಿಸುವ ಮೇರಿಗೆ ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಚಕ್ಕೆಗೆ ಪ್ಯಾಸ್ ಪಡಿಯತಕ್ಕದ್ದು.
5. ವಾಯಿದೆಯು ಪೂರೈಸಿದ ನಂತರ ಜಮಾಯಿಸಿಕೊಂಡು ಶಿವಮೊಗ್ಗ ಡಿಸ್ಟ್ರಿಕ್ಟಿನ ಗಡಿ ವಳಗಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಇರತಕ್ಕ ರೈಲ್ವೆ ಸ್ಟೇಷನ್ನುಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದು ಪಡಿಸತಕ್ಕದ್ದು.
6. ಮೇಲೆ ಕಂಡ ಷರತ್ತಿನ ಮೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರೆ ರದ್ದು ಮಾಡುವದಲ್ಲದೆ ಅದುವರಿಗು ಜಮಾಯಿಸಿ ಹಾಜರು ಇಟ್ಟುಕೊಂಡಿರತಕ್ಕ ಏಶಿಷ್ಟ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯುಟಿ ಕಮಿಷನ್ ಸಾಹೇಬರವರು ನಿಷ್ಕರ್ಷಿಸುವ ಮೇರೆ ಇಜಾರೆದಾರನಿಂದ ವಸೂಲಾದ ಪೂರಾ ಮೊಬಲಗಾಗಲಿ ಅಥವಾ ಆ ಪೈಕಿ ಕೆಲವು ಮೊಬಲಗಾಗಲಿ ಸರಕಾರಕ್ಕೆ ಸೇರಿಸಲ್ಪಡಲಾದೀತು. ಅಂಥಾ ತಪ್ಪಿತದ ಕಾಲದಲ್ಲಿ ಇಜಾರೆದಾರನಿಂದ ಬಾಕಿ ಇರತಕ್ಕ ಮೊಬಲಗು ರೆವಿನ್ಯೂ ಕಂದಾಯದ ರೀತಿ ವಸೂಲ್ಮಾಡತಕ್ಕದ್ದು.

ತಾರೀಖು 10ನೇ ಮೇ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಶಿವಗ್ಗಾ ಡಿಸ್ಟ್ರಿಕ್ಟಿನ ಯಲ್ಲಾ ತಾಲ್ಲೂಕುಗಳಲ್ಲಿನ ಸ್ಟೇಟು ಫಾರೆಸ್ಟು ಮತ್ತು ಪ್ಲಾಂಟೇಷನ್ನುಗಳು ಸೇರಿ ಸರ್ಕಾರಿ ಜಮೀನುಗಳಲ್ಲಿ ದೊರಿಯುವ ಪಪ್ಲಿ ಚಕ್ಕೆಯನ್ನ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು 1904ನೆ ಇಸವಿ ಜೂನ್ ಆಖ್ಯೆರವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಒಟ್ಟು ಸ್ವಾತಂತ್ರ್ಯದ ಹಕ್ಕು ಬಹಿರಂಗವಾಗಿ ತಾಲ್ಲೂಕುವಾರ್ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಅಥವಾ ಡೆಪ್ಯುಟಿ ಕಮಿಷನರಿಂದ ನೇಮಿಸಲ್ಪಟ್ಟ ಇತರ ಆಫಿಸರ್ರಿಂದ 1903ನೇ ಇಸವಿ ಜೂನ್ ತಾರೀಖು 15ರಲ್ಲು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

1. ಶಿವಮೊಗ್ಗಾ ತಾಲ್ಲೂಕು ಮತ್ತು ಕುಂಶಿ ಸಬ್ ತಾಲ್ಲೂಕು	5. ಸೊರಬ
2. ಚೆನ್ನಗಿರಿ	6. ಸಾಗರ
3. ಹೊನ್ನಾಳಿ	7. ನಗರ
4. ಶಿಕಾರಿಪುರ	8. ತೀರ್ಥಹಳ್ಳಿ

2. ಚಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಕಾಲುಹಿಸ್ಸೆ ಮೊಬಲಗನ್ನ ಹಾಜರ್ಮಾಡಬೇಕು. ಬಾಕಿ ಮುಕ್ಕಾಲುಹಿಸ್ಸೆ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 30 ದಿವಸಗಳ ವಳಗಾಗಿ ಜಮಾ ಮಾಡಿಸಬೇಕು. ಹಾಗೆ ಮಾಡಲು ತಪ್ಪಿದಲ್ಲಿ ಡಿಪಾಜಿಟ್ಟು ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ಪುನಹಾ ಹರಾಜು ಮಾಡಲ್ಪಡುವದು. ಮೇಲ್ಕಂಡಂತೆ ನಡಿಸಲ್ಪಡುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಚಡ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲ. ಪೂರಾ ಹಣ ಪಾವತಿ ಮಾಡಿದ ಕೂಡ್ಲೆ ಜಮಾವಣಿ ಬಗ್ಯೆ ಲೈಸೆನ್ಸು ಕೊಡಲ್ಪಡುತ್ತೆ.

3. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಕೊಡೋಣಾಗುವ ಲೈಸೆನ್ಸಿನಲ್ಲಿ ನಮೂದಾದ ವಾಯಿದೆ ಅಂದರವಾರ್ ಸದರಿ ಚಕ್ಕೆಯನ್ನು ಸಾಗಿಸಿಕೊಳ್ಳಬೇಕು.

4. ಸೂರ್ಯ ಅಸ್ತಮಾನವಾದನಂತರ ಮತ್ತು ಸೂರ್ಯೋದಯಾತ್ಪೂರ್ವ ಯಾವ ಸ್ಥಳದಲ್ಲೂ ಚೆಕ್ಕೆಯನ್ನು ರೂಢಿಸಕೂಡದು ಮತ್ತು ರಫ್ತು ಮಾಡಕೂಡದು.

5. ಕಂಟ್ರಾಕ್ಟುದಾರ ಅಥವಾ ಅವರ ಆಳುಗಳ ಅಜಾಗರೂಕತೆಯಿಂದ ಫಾರೆಸ್ಟಿನಲ್ಲಿ ಬೆಂಕಿ ಸಂಭವಿಸಿದರೆ ಇದರಿಂದ ವುಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನನ್ನೆ ಗುರಿಪಡಿಸಲ್ಪಡುತ್ತೆ.

6. ಕಂಟ್ರಾಕ್ಟುದಾರನು ಚೆಕ್ಕೆ ರೂಢಿಸುವದರಲ್ಲಿ ತಾಯಿಬೇರಿಗೆ ಜಾಯಾ ಆಗದಂತೆ ಪಕ್ಕದ ಬೇರುಗಳನ್ನೆ ಜವಾಯಿಸಿ ಕೊಳ್ಳಬೇಕು.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಷುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ಸಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟಾ.		ಷರಾ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ ಸ್ಟೇಷನ್.	28- 5-1903	30	879	7	171	3	77	3	73	5	131	[illegible]

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮರ್ಕ್ಕಂ ನಂಬರ 15ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕ್ಕಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೆಲ್ 1903.

ಕೋಲಾರ ತಾಲ್ಲೂಕಿಗೆ ಸೇರಿದ ಬಾಜೂದಲ್ಲಿ ನಮೂದಿಸಿರುವ ಗ್ರಾಮಗಳನ್ನು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಕೋಲಾರ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ ಬಾಜೂದಲ್ಲಿ ನಮೂದಿರುವ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಕೋಲಾರ ತಾಲ್ಲೂಕು.

ಸುಗಟೂರು ಹೋಬಳಿ.

ಜೋಡಿ ಉಪ್ಪುಕುಂಟೆ—17ನೇ ಜೂನ್ 1903.
ಜೋಡಿ ಹನುಮಂತಪುರ—19ನೇ ಜೂನ್ 1903.

(ಹೆಚ್ಚು ತಪಶೀಲ್ ಬಗ್ಗೆ 30—4—1903ನೇ ಮರ್ಕ್ಕಂ 17ನೇ ನಂಬರ್ ಮೈಸೂರು ಗೆಜೆಟಿನ IIನೇ ಭಾಗದ 184—185ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ಇಸಿ ಹಾರ್.

ತಾರೀಖು 17ನೇ ಏಪ್ರೆಲ್ 1903.

ತುಮಕೂರು ಡಿಸ್ಟ್ರಿಕ್ಟು 2ನೇ ಜನರಲ್ ಅ|| ಕಮಿಷನರ್ ಮತ್ತು 1ನೇ ಕ್ಲಾಸು ಮ್ಯಾಜಿಸ್ಟ್ರೇಟ್ ಕೋರ್ಟು.

1901—1902ನೇ ಇಸವಿ ಕ್ರಿಮಿನಲ್ ಮಿಸಲೇನಿಯಸ್ ಮೊ|| ನಂ. 78.

ಫಿರ್ಯಾದಿ. ಸರ್ಕಾರ — ಅಪರಾಧಿ. ಬೂಸಿಗಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಮೇಲ್ಕಂಡ ಮೊಕದ್ದಮಾ 1ನೇ ಅಪರಾಧಿ ತುರ್ವೇಕೆರೆ ಗ್ರಾಮದ ಬೂಸಿಗಾ ಎಂಬುವನ ಮನೆಯಲ್ಲಿ ಇದಕ್ಕೆ ಲಗತು ಇರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಮಾಲುಗಳು 1902ನೇ ಇಸವಿ ಮೇ 3ನೇ ಮರ್ಕ್ಕಂನಲ್ಲಿ ದೊರೆತದ್ದೆಂದು ತುರ್ವೇಕೆರೆ ಸಬ್ ತಾಲ್ಲೂಕು ಪೊಲೀಸಿನವರಿಂದ ಹಾಜರಾಗಲ್ಪಟ್ಟಿತ್ತು.

ಈ ಮೊಕದ್ದಮ್ಮೆ ವಿಚಾರಣೆ ನಡೆಸಿದ್ದರಲ್ಲಿ ಈ ಮಾಲುಗಳನ್ನು ಸದರೀ ಆಸಾಮಿಗನು ನ್ಯಾಯವಾಗಿ ಸಂಪಾದಿಸಿದ್ದಲ್ಲವೆಂತಲೂ ಚೋರೀ ಮಾಲುಗಳಾಗಿರಬಹುದೆಂದು ಗುಮಾನೀ ತೋರಿಬಂದಿರುತ್ತೆ. ಆದ್ದರಿಂದ ಈ ಮಾಲುಗಳಿಗೆ ವಾರಸ್‌ದಾರು) ಯಾರಾದರೂ ಇದ್ದಲ್ಲಿ ಈ ಇಸ್ತಿಹಾರ್ ತಾರೀಖು ಲಾಗಾಯತು ಆರು ತಿಂಗಳು ಒಳಗಾಗಿ ಈ ಕೋರ್ಟಿನ ರೂಬರೂ ಹಾಜರಾಗಿ ತಮ್ಮ ವಾರಸನ್ನು ದೃಢಪಡಿಸಿಕೊಟ್ಟು ಮಾಲುಗಳನ್ನು ಪಡಿಯಬಹುದು.

ತುಮಕೂರು ಡಿ|| 2ನೇ ಜನರಲ್ ಅ|| ಕಮಿಷನರ ಮತ್ತು 1ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟು–ಕ್ರಿಮಿನಲ್ ಮಿಸಲೇನಿಯಸ್ ಕೇಸ್ ನಂಬರು 8 (1901—1902).

ಈ ಮೊಕದ್ದಮೆಯಲ್ಲಿ ಕೋರ್ಟು ರೂಬರೂಗೆ ಹಾಜರಾದ ಮಾಲುಗಳ ತಪಶೀಲು ತೋರಿಸುವ ಲೀಸ್ಟು.

1 ಕಂಚಿನ ಲೋಟಾದಲ್ಲಿರುವ ನಗದು 238—0—0 ರೂಪಾಯಿಗಳು (ಜುಡಿಷಲ್ ಡಿಪಾಜಿಟಿನಲ್ಲಿದೆ).
2 ಚಿನ್ನದ ವಾಲೆ ಜೋತೆ ... 1
3 ಚಿನ್ನದ ತಾಳಿ ಬಟ್ಟುಗಳು .. 3
4 ಚಿನ್ನದ ಬಾವಲಿ ಜೋತೆ .. 1
5 ಬಿಳಿ ಚಿನ್ನದ ಬಾವಲಿ .. 1
6 ಚಿನ್ನದ ಮೂಗನತ್ತು .. 1
7 ಕೆಂಪುಕಲ್ಲು ಮೂಗನತ್ತು 1
8 ಹತ್ತು ಕಡಕು ಜೋತೆ .. 1
9 ಬೆಳ್ಳಿ ಮುರು ಜೋತೆ .. 1
10 ಚಿನ್ನದ ಸಣ್ಣ ಗುಂಡುಗಳು .. 152
ಅದರಲ್ಲಿ ಗುಂಡಿನ ತಾತಿಗಳು ... 2
ಬಿಳಿ ಹರಳು ತಾಳಿ .. 1
ಕೆಂಪುಕಲ್ಲು ತಾಳಿ .. 1
11 ಭಂಗಾರದ ಗಂಟೆ ಜೋತೆ 3, ಒಕ್ಕಲಿಗರು ಕಿವಿಗೆ ಹಾಕತಕ್ಕದ್ದು.
12 ಭಂಗಾರದ ಅರೆಮುರ ... 1
13 ಭಂಗಾರದ ಬಟ್ಟುಗುಂಡು ... 1
14 ಭಂಗಾರದ ಗುಣಿಮುರು ಮುತ್ತು ಸಮೇತ 1
15 ಚಿನ್ನದ ಮುರುಗಳು ... 3
16 ಚಿನ್ನದ ತಾಳಿ ಮುರಕು ... 1
17 ಬೆಳ್ಳಿ ಮುರ .. 1
18 ಬೆಳ್ಳಿ ಉಂಗರ . 1
19 ಬೆಳ್ಳಿ ಭಂಗಾರದ ತಾಳಿ ... 1
20 ನಗದು ರೂಪಾಯಿಗಳು 5, ಜುಡಿಷಲ್ ಡಿಪಾಜಿಟಿನಲ್ಲಿದೆ
21 ಸಣ್ಣ ತಾಂಬ್ರದಕಾಸು ..
22 ಬೊಂಬಾಯಿ ಮುತ್ತುಗಳು .. 16
23 ಬೆಳ್ಳಿಬಾಬತು ಬೇವಿನಕಾಯಿ ತಾತಿ .. 1
24 ಬೆಳ್ಳಿ ಕರಡಿಗೆ ಬಿರಟೇಹ
25 ಬೆಳ್ಳಿ ಚಟ್ಟಿರತಕ್ಕ ಚವಲಿತುಂಬು ... 1
26 ಬೆಳ್ಳಿ ಸಾಚಾ ಚವಲಿತುಂಬು ... 1
27 ಬೆಳ್ಳಿ ಛತ್ರಿ ... 1
28 ಬೆಳ್ಳಿ ನಾಗಮುರಿ .. 1
29 ಬೆಳ್ಳಿ ಮುದ್ರೆ ಉಂಗರ .. 1
30 ಬೆಳ್ಳಿ ಉಂಗರಗಳು ... 2
31 ಬೆಳ್ಳಿ ಪಾಪಟೆ ಉಂಗರ ... 1
32 ಕಾಲುಪಿಲ್ಲಾ ಜೋತೆ 2
33 ಬೆಳ್ಳಿ ಕಾಲುಸುತ್ತು ... 1
34 ಬೆಳ್ಳಿ ಸರಪಣಿಗಳು ಕೊಕ್ಕಿ ಸಮೇತ .. 6
35 ಬೆಳ್ಳಿ ಜೊರುಗಳು
36 ಬೊಂಬಾಯಿ ಮುತ್ತುಗಳು ... 21
37 ಮುಚ್ಚಳ ಸಮೇತ ಇರತಕ್ಕ ತಾಂಬ್ರದ ಭರಣಿಯಲ್ಲಿ ನಗದು ಎಂಟು ರೂಪಾಯಿ (ರಾಜಾ ಪಾವಲಿಗಳು ಎರಡು)
38 ಹವಳ, ಚಿನ್ನದ ಗುಂಡುಗಳು, ತಾಳಿ ವಗೈರೆ ಧಾರದಲ್ಲಿ ಪೋಣಿಸಿದ ಸರ ಒಂದು
39 ಕೆಂಪು ರೇಷಮೆ ವಸ್ತ್ರ .. 1
40 ಹಿತ್ತಾಳೆ, ತಾಲಿ ಒಂದು

ಬಿ. ತಿರುಮಲಾಚಾರ್,
ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 1ನೇ ಮೇ 1903.

1. ಕಂದಾಯದ ಬಾಕೀದಾರರಾದ ಕೊಪ್ಪಾಳು ಗ್ರಾಮದ ಜೋಡಿದಾರ್ರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಕೊಪ್ಪಾಳು ಗ್ರಾಮದಲ್ಲಿ ಅಮಲ್ದಾರ್ ಅಥವಾ ಸ್ಪೆಷಲ್ ಸಬ್ ಡಿವೀಜನ್ ಆಫೀಸರವರ ರೂಬರೂ 1903ನೇ ಇಸವಿ ಜೂನ್ 13ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದ್ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ 237—8—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂಪಾಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಆತನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಆದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು) ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸಕ್ಕಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರ್‍ಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಖ್ತೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರಿ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟೀಸು ವಗೈರೆ ಸಹಿತವಾದ ಬಾಕಿ ಮೊಬಲಗು. ರೂ.	ಆ.	ಪೈ.	
ತಿ. ನರಸೀಪುರ	ತಲಕಾಡು	ಹೊನ್ನಾಕ್ಷ	ಜಿಲ್ಲೇದಾರ್ ಬಾಳಪ್ಪನವರ ಗಂಡನಾಗರಾಜು	...	....		ಜೋಡಿ ಕೊಪ್ಪಳು ಗ್ರಾಮ		347	8	11	236	0	0	ಐನ್
												1	8	0	ನೋಟಿಸ್ ವಗೈರೆ
												237	8	0	

* ಯಾ ಬಾಕೀ ಇರುವವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 1ನೇ ಮೇ 1903.

1. ಕಂದಾಯದ ಬಾಕೀದಾರರಾದ ಮೇಗಡಹಳ್ಳಿ ಗ್ರಾಮದ ಖಾಯಂಗುತ್ತಾದಾರ್ರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಅದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ.॥ ನರಸೀಪುರ ತಾಲ್ಲೂಕು ಮೇಗಡಹಳ್ಳಿ ಗ್ರಾಮದಲ್ಲಿ ಸ್ಪೆಷಲ್ ಸಬ್ ಡಿವಿಜನ್ ಆಫಿಸರವರ ಅಥವಾ ಅಮಲ್ದಾರ್) ರೂಬರೂಬ್ ಸನ್ 1903ನೇ ಇಸವಿ ಜೂನ್ 12ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಅದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಸೀಲ್ ಮೇರೆಗೆ 161—1—3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುಖ್ತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ ಇತರರಿಗೋಸ್ಕರ ಮುಖ್ತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸ್ಪೈರ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸಕ್ಕಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಸ್ವತ್ತಿನ ತಪ್ಸೀಲ್. ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಅಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.			
					ರೂ. ಆ. ಪೈ.				ರೂ.	ಆ.	ಪೈ.	ರೂ.	ಆ.	ಪೈ.	
ಟಿ॥ ನರಸೀಪುರ	ತಲ್ಕಾಡು	ಖಾ॥ ಮೋಗಡಹಳ್ಳಿ	ಕೋಟಿ ಕನ್ಯಾದಾನಂ ನರಸಿಹ್ಮಾಚಾರ್ರು, ಮೊ॥ ನರಸಿಹ್ಮಾಚಾರ್ರು ಸಹ	...	..	ಮೋಗಡಹಳ್ಳಿ ಖಾಯಂಗುತ್ತ ಗ್ರಾಮ			251	12	2	159	9	3	ಐ.
												1	8	0	ನೋಟಿಸ್ ಫೀ ವಗೈರೆ.
												161	1	3	

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜೆ ಅರಸ್,
ಅಫಿಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್.

ತಾರೀಖು 26ನೇ ಮಾರ್ಚಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1903ನೇ ಜುಲೈ 1ರ ಲಾಗಾಯತು 1904ನೇ ಜೂನ್ ಆಖೈರ್ ವರಿವಿಗೆ ಸುಂಕ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೊಲೀಸ್ ಸ್ಟೇಷನ್ ಬಳಿ ತಾಲ್ಲೂಕು ಅಮಲ್ದಾರ್ರಿಂದ 1903ನೇ ಮೇ 26ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರ್ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೇರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜ್ ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	..	..	..	ಪ್ರತ್ಯೇಕ ಹರಾಜುಮಾಡಲ್ಪಡುತ್ತೆ.	
ಗುಡಾರ	..	..	..	ಪ್ರತಿಯೊಂದಕ್ಕೆ	4 ಆಣೆ.
ಎತ್ತಿನ ಗಾಡಿ	..	..	..	,,	2 ,,
ಒಡ್ಡರ ಗಾಡಿ	..	...	..	,,	1 ,,
ಎತ್ತಿನ ಬೋಜಾ	...	...	..	,,	6 ಕಾಸು
ತಲೆ ಬೋಜಾ	...	....	....	,,	3 ಕಾಸು

ನೋಟ್ :—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ಮೊಕ್ಕಾಂ ಕೊಪ್ಪ, ತಾರೀಖು 7ನೇ ಮೇ 1903.

1. ಕಂದಾಯದ ಬಾಕೀದಾರರಾದ ಲಕ್ಷ್ಮೀಸಾಗರದ ಜೋಡಿ ಗ್ರಾಮದ ದೊಡ್ಡ ದೇವರಪ್ಪನವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಪೂರ್ವಬಾಧ್ಯತೆಯನ್ನು ಕಳಕೊಂಡಿರುವದಾಗಿ ಕಂಠೋಕ್ತವಾದ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ತರಿಕೆರೆ ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂಬ್ ಸನ್ 1903ನೇ ಇಸವಿ ಜೂನ್ ತಿಂಗಳು 23ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು 23—6—1903ನೇ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಈ ವೃತ್ತಿದಾರ ದೊಡ್ಡ ದೇವರಪ್ಪನು ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 82—3—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗೆವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳೊಳಗೆ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗೆವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರನ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು: ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು: ನಂಬರು ಅಥವಾ ಬೆದ್ದಲಿನ ಹೆಸರು.	ಖುಷ್ಕಿ, ತರಿ, ಬಾಗಾಯತು.	ವಿಸ್ತೀರ್ಣ.	ಕಂದಾಯ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ಬಾಕೀ ಮತ್ತು ಸಂಬಂಧಪಟ್ಟ ಖರ್ಚುಗಳು.* ರೂ.	ಆ.	ಪೈ.	
[illegible]	[illegible]	[illegible] ಜೋಡಿ ಗ್ರಾಮ	[illegible]	...	ರೂ. ಆ. ಪೈ.										
					ವಿಸ್ತೀರ್ಣ ಬೀಜವರಿ		ಜೋಡಿ	..	71	0	0	81	11	10	ಐನುಸೆಸ್ಸು ದೇಖೀಲು.
					ಖುಷ್ಕಿ 271—4										
					ಪೇರೀಜು 171-13-8		ಸೆಸ್ಸು	...	10	11	10	0	8	0	ನೋಟೀಸ ಫೀ
					ಪೂರಾ ಗ್ರಾಮ		ಜುಮ್ಲಾ	....	81	11	10	82	3	10	

* ಯಾ ಬಾಕೀ ಇರುವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 5ನೇ ಮೇ 1903ನೇ ಇಸವಿ.

1867ನೇ ಇಸವಿ 50ನೇ ನಂಬರು ನೋಟಿಫಿಕೇಷನ್ 6ನೇ ರೂಲು ಅನುಸರಿಸಿ ಇದರಿಂದ ಸರ್ವತ್ರರಿಗೂ ಪ್ರಸಿದ್ಧಪಡಿಸುವದೇನೆಂದರೆ, ಸನ್ 1902ನೇ ಇಸವಿ ಸೆಪ್ಟಂಬರ್ 21ನೇ ತಾರೀಖು ಅಥವಾ ಆ ಸುಮಾರು ಕಾಲದಲ್ಲಿ ಲಂಬಾಣಿ ದಾನಿ ಎಂಬುವಳು ತನ್ನ ದನಗಳನ್ನು ಹೊಸದುರ್ಗದ ತಾಲ್ಲೂಕು ಗರಗ ಗ್ರಾಮದ ಸರಹದ್ದಿನಲ್ಲಿ ಸರ್ಕಾರಿ 78ನೇ ನಂಬರು ಜಮೀನಿಗೆ ಸೇರಿದ ಕಲ್ಲುಗುತ್ತಿಬಳಿ ಮೇಯಿಸುತ್ತಿದ್ದವಳಿಗೆ 2 ಭಂಗಾರದ ಚಂದ್ರಹಣಗಳು ಮತ್ತು ಇನ್ನು ಕೆಲವರಿಗೆ ಕೆಲವು ಭಂಗಾರದ ಶಿವರಾಯಿ ಹೊನ್ನುಗಳು ಶಿವರಾಯಿ ವರಹ ಈ ಕೆಳಗೆ ತಪಸೀಲು ಕಂಡಿರುವಂತೆ ಸಿಕ್ಕಿರುತ್ತವೆ.

30 ಭಂಗಾರದ ಚಂದ್ರಹಣಗಳು ಅಂದಾಜ ಬೆಲೆ ದರ 8 ಆಣೆಯಂತೆ.

5 ಭಂಗಾರದ ಶಿವರಾಯಿ ಹೊನ್ನುಗಳು ಅಂದಾಜ ಬೆಲೆ ದರ 3 ರೂಪಾಯಿನಂತೆ.

1 ಭಂಗಾರದ ಶಿವರಾಯಿ ವರಹ ಅಂದಾಜ ಕ್ರಯ ರೂಪಾಯಿ 6.

ಸದರಿ ನಿಕ್ಷೇಪಕ್ಕೆ ಆಗಲಿ ಅಥವಾ ಅದರ ಯಾವಭಾಗಕ್ಕಾಗಲಿ ಬಾಧ್ಯತೆಯುಳ್ಳವರು ಸ್ವತಃವಾಗಿಯಾಗಲಿ ಕ್ರಮವಾಗಿ ಅಧಿಕಾರವಂ ಪಡೆದ ವಿರ್ಕಿಲರ ಮೂಲಕವಾಗಲಿ ಡೆಪ್ಯುಟಿ ಕಮಿಷನರವರ ಮುಂದೆ ಈ ನೋಟಿಫಿಕೇಷನ್ ತಾರೀಖು ಲಾಗಾಯಿತು 6 ತಿಂಗಳುಗಳ ವಳಗೆ ಹಾಜರಾಗಿ ಅದಕ್ಕೆ ಇರುವ ತಮ್ಮ ಹಕ್ಕನ್ನು ರುಜುವಾತು ಮಾಡಿಕೊಡಬಹುದು.

ಹೆಚ್. ರಾಮಾನುಜಯ್ಯಂಗಾರಿ, ಡೆಪ್ಯುಟಿ ಕಮಿಷ್ನರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 152.

ಮೃತಪಟ್ಟ ತರೀಕೆರೆ ತಾಲ್ಲೂಕು ಲೇಟ್ ಹೆಡ್ ಗುಮಾಸ್ತೆ ತಿಮ್ಮಪ್ಪಯ್ಯಂಗಾರರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಗುಂಡೈಯ್ಯಂಗಾರು ಹಿರೆಮಗಳೂರು ವಾಸಿ, ಮೃತಪಟ್ಟ ಸದರೀ ತಿಮ್ಮಪ್ಪಯ್ಯಂಗಾರ್ರಿಗೆ ಭ್ರಾತರು ಆಗಬೇಕೆಂಬ ಹಕ್ಕುದಾರಿ ಮೇಲೆ ಹಿರೆಮಗಳೂರು ಸ್ಥಳದ ಅರ್ಜೀದಾರು ತರೀಕೆರೆ ವಾಸಸ್ಥರಾಗಿ ಮೃತಪಟ್ಟ ತಿಮ್ಮಪ್ಪಯ್ಯಂಗಾರ್ರ ಜಿಂದಗಿ ಬಗ್ಗ್ಯಾಗಿ ಬರತಕ್ಕ 499—0—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷರ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜೀದಾರರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಪ್ಪಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರಿಲ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿ ಇಧೆ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 154.

ಮೃತಪಟ್ಟ ಬೀರೂರಲ್ಲಿದ್ದ ನರಸಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಲಕ್ಕವಳ್ಳಿ ವೆಂಕಟಗಿರಿಯಪ್ಪನವರ ಮಗ ಪ್ರಭಾಕರೈಯ್ಯ, ಮೃತಪಟ್ಟ ಸದರೀ ನರಸಮ್ಮನವರಿಗೆ ಸೋದರ ಅಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ಕೊಪ್ಪದ ಸ್ಥಳದ ಅರ್ಜೀದಾರರು ಬೀರೂರು ವಾಸಸ್ಥರಾಗಿ ಮೃತಪಟ್ಟ ನರಸಮ್ಮನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 100 ಒಂದುನೂರು ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷರ್‌ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜೀದಾರರ ಅರ್ಜಿಯನ್ನು ಸರ್ 1903ನೇ ಇಸವಿ ಜೂನ್ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರಿಲ್ ತಿಂಗಳು ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 177

ಮೃತಪಟ್ಟ ಆರೂರ ವೀರಪ್ಪಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ತಿಮ್ಮಯ್ಯನವರು ಕೊಪ್ಪ ತಾಲ್ಲೂಕು ಕೇಡನಾಡ ಮಾ|| ತನೂಡಿ ಗ್ರಾಮದ ಮಜರೆ ಆರೂರು ವಾಸಿ, ಮೃತಪಟ್ಟ ಸದರೀ ವೀರಪ್ಪಯ್ಯನವರಿಗೆ ಖಾಸ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಕೊಪ್ಪ ತಾಲ್ಲೂಕು ಆರೂರು ಸ್ಥಳದ ತಿಮ್ಮಯ್ಯನವರು ಆರೂರು ವಾಸಸ್ಥರಾಗಿ ಮೃತಪಟ್ಟ ವೀರಪ್ಪಯ್ಯನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 996—9—10 ರೂಪಾಯಿಗಳ ಸಾಲವನ್ನು ವಸೂಲಿ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷರ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜೀದಾರರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ವೀರಪ್ಪಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಏಪ್ರಿಲ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 182.

ಮೃತಪಟ್ಟ ಹೇರಗಲ್ ಚನ್ನಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು 1ನೇ ಸವಲೆಪ್ಪ, 2ನೇ ಈರಪ್ಪ ಮೈನರ್, ಗಾರ್ಡಿಯನ್ ತಾಯಿ ಹಾಲಮ್ಮ, ಮೃತಪಟ್ಟ ಸದರೀ ಚನ್ನಬಸಪ್ಪನವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಅರ್ಜಿದಾರು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಹೇರಗಲ್ ಚನ್ನಬಸಪ್ಪನವರ ಜಿಂದಗಿ ಬಗ್ಗ್ಯಾಗಿ ಬರತಕ್ಕ 3,749—15—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷರ್ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜೀದಾರರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೇರಗಲ್ ಚನ್ನಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್1903ನೇ ಇಸವಿ ಏಪ್ರಿಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 191.

ಮೃತಪಟ್ಟ ಕಡೂರು ತಾ|| ಬ್ರಹ್ಮಸಮುದ್ರದಲ್ಲಿರುವ ಶ್ರೀನಿವಾಸೈಯ್ಯಂಗಾರ್ರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶ್ರೀನಿವಾಸೈಯ್ಯಂಗಾರ್ರು, 2ನೇ ರಾಮಸ್ವಾಮೈಯ್ಯಂಗಾರ್ರು, 3ನೇ ಗುಂಡಯ್ಯಂಗಾರ್ರು ಮೈನರ್, ಗಾರ್ಡಿಯನ್ ತಾಯಿ—ಅಂಣ ಕೃಷ್ಣೈಯ್ಯಂಗಾರ್ರು ಚಿಕ್ಕಮಗಳೂರು ವಾಸಿ, ಮೃತಪಟ್ಟ ಸದರೀ ಶ್ರೀನಿವಾಸೈಯ್ಯಂಗಾರ್ರವರಿಗೆ ಹೆಂಡತಿ ಅಂಣ (ಷ ಡ್ಡಕ) ನು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ಸ್ಥಳದ 1—2—3ನೇ ಮೈನರ್ ಗಾರ್ಡಿಯನ್ ಕೃಷ್ಣೈಯ್ಯಂಗಾರ್ರವರು ಕಡೂರು ತಾ|| ಬ್ರಹ್ಮಸಮುದ್ರದ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ರವರ ಜಿಂದಗಿ ಬಗ್ಯಾಗಿ ಬರತಕ್ಕ 647—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣೈಯ್ಯಂಗಾರ್ರವರ ಅರ್ಜಿಯನ್ನು ಸನ್ 1903ನೇ ಇಸವಿ ಜೂನ್ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸನ್ 1903ನೇ ಇಸವಿ ಮಾರ್ಚಿ ತಿಂಗಳು 31ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಥೆ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 192.

ಮೃತಪಟ್ಟ ಹಿರಿಯೂರು ರಂಗಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ಭಾಸ್ಕರರಾವು, 2ನೇ ಮಂಜಪ್ಪ, 3ನೇ ತಿಮ್ಮರಸೈಯ್ಯ ಯಾನೆ ಅಂಣೈಯ್ಯ, 4ನೇ ರಾಮಂಣ (ಮೈನರ್) ಗಾರ್ಡಿಯನ್ 1ನೇ ಅರ್ಜೀದಾರ, ಮೃತಪಟ್ಟ ಸದರೀ ರಂಗಂಣನವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಅರ್ಜೀದಾರರು ಷಿಕಾರಿಪುರ ವಾಸಸ್ಥರಾಗಿ ಮೃತಪಟ್ಟ ಸದರಿ ರಂಗಂಣನವರ ಜಿಂದಗಿ ಬಗ್ಯಾಗಿ ಬರತಕ್ಕ 360—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ ರೆಗ್ಯುಲೇಷನ್ ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜೀದಾರರ ಅರ್ಜಿಯನ್ನು ಸನ್ 1903ನೇ ಇಸವಿ ಮೇ ತಿಂಗಳು ತಾರೀಖು 29ಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ರಂಗಂಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸನ್ 1903ನೇ ಇಸವಿ ಏಪ್ರೈಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಥೆ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 203.

ಮೃತಪಟ್ಟ ಸಂಗಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೇ ಕಂಚಂಣ್ಣಾ, 2ನೇ ಪರಶುರಾಮ, 3ನೇ ಕಂನೆರಾಮ, 2—3ನೇ ಮೈನರ್, ಗಾರ್ಡಿಯನ್ 1ನೇ ಅರ್ಜೀದಾರ ಜೋರಡಿ ವಾಸಿ, ಮೃತಪಟ್ಟ ಸದರೀ ಸಂಗಪ್ಪನವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕುಂಶಿ ಸಬ್ ತಾ|| ಜೋರಡಿ ಸ್ಥಳದ ಅರ್ಜೀದಾರ್ರು ಜೋರಡಿ ವಾಸಸ್ಥರಾಗಿ ಮೃತಪಟ್ಟ ಸಂಗಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬರ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅರ್ಜೀದಾರರ ಅರ್ಜಿಯನ್ನು ಸನ್1903ನೇ ಇಸವಿ ಜೂನ್ ತಿಂಗಳು ತಾರೀಖು 19ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಂಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸನ್ 1903ನೇ ಇಸವಿ ಏಪ್ರೈಲ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಶಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಥೆ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 223.

ಅರ್ಜೀದಾರ್ರು ವೆಂಕಟಲಕ್ಷ್ಮಮ್ಮ ಕೋಂ ಬಾಗೂರು ಕೇಶವೈಯ್ಯಂಗಾರ್, 2ನೇ ಅಮ್ಮಕುಟ್ಟ, 3ನೇ ಶ್ರೀರಂಗಮ್ಮ, 4ನೇ ಮೂರ್ತಿ 2—3—4ನೇ ಮೈನರ್, ಗಾರ್ಡಿಯನ್ ತಾಯಿ 1ನೇ ಅರ್ಜೀದಾರ್ರು ಶಿವಮೊಗ್ಗ ವಾಸಿ, 2ನೇ ಅಮ್ಮಕುಟ್ಟ 3ನೇ ಶ್ರೀರಂಗಮ್ಮ, 4ನೇ ಮೂರ್ತಿ ಇವರು, ಶಿವಮೊಗ್ಗ ಸ್ಥಳದ ಬಾಗೂರು ಕೇಶವೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 2ನೇ ಅಮ್ಮಕುಟ್ಟ 3ನೇ ಶ್ರೀರಂಗಮ್ಮ 4ನೇ ಮೂರ್ತಿ ಇವರಿಗೆ 1ನೇ ಅರ್ಜೀದಾರ್ರು ಖಾಸ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಶಿವಮೊಗ್ಗ ಸ್ಥಳದ 1ನೇ ಅರ್ಜೀದಾರರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಗಾರ್ಡಿಯನ್ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1903ನೇ ಇಸವಿ ಜೂನ್ ತಿಂಗಳು 26ನೇ ತಾರೀಖಿನಲ್ಲು ಮೊಕರರ್ ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡಲಾಗಿಥೆ.

ಸನ್ 1903ನೇ ಇಸವಿ ಏಪ್ರೈಲ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಥೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 27ನೇ ಮಾಹೆ ಏಪ್ರೈಲ್ 1903.

ಸನ್ 1903ನೇ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು, ವಗೈರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ ರೆಗ್ಯುಲೇಷನ್ 49 ಮತ್ತು 51ನೇ ಸೆಕ್ಷನ್‌ಗಳಲ್ಲಿ ನಮೂದಿರುವ ಷರತ್ತುಗಳಿಗೆ ವಳಪಡಿಸಿ ಟೋಲ್ ಅಥವಾ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ ಮಾಹೆ ತಾರೀಖು 16ನೇ ಮಧ್ಯಾನ್ಹ 1 ಘಂಟೆಯು ಲಾಗಾಯಿತು ರಂಗಾಚಾರ್ಲು ಯವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗೈರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಶಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೇ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರಾದ ಕೂಡ್ಲೆ ಬಾಬನ್ನು ಪಡೆಯುತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಟ್ ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದಕೂಡ್ಲೆ ಡಿಪಾಜಟ್ ಬಗ್ಯೆ ಮೊಬಲಗನ್ನು ಹಾಜರ್ಮಾಡದೇ ಇದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ, ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್ಮಾಡಲು ತಪ್ಪಿದರೆ, ಡಿಪಾಜಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು, ಬಾಬನ್ನು ದುಸರಾ ಹರಾಜು ಮಾಡಿಸಿ, ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ಕಂಟ್ರಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟುದಾರನು ರೋಜೀನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶ ಮಾಡುವ ತರಹವಾರಿ ಗಾಡಿ ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯು ಪ್ರೆಸಿಡೆಂಟರವರ ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಯೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟುದಾರನು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೇ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಯೆ ಆಯಾಯ ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲುಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡಿಸಿಕೊಂಡು ಹೋಗತಕ್ಕ ವಿಚಾರದಲ್ಲಿ ಪ್ರತಿ ಒಬ್ಬ ಕಂಟ್ರಾಕ್ಟುದಾರನು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದುಕೊಡಬೇಕು.

10. ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರಾಕ್ಟುದಾರನು ಟೋಲ್ ಯಾನೆ ಸುಂಕವನ್ನು ವಸೂಲ್ ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ನಮೆಂಟ್ ಯಾ ಮ್ಯುನಿಸಿಪಲ್ ಕಮಿಷನ್‌ಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರ್ರರ್ಮಾಡಲ್ಪಟ್ಟ ಕ್ಯಾರೇಜುಗಳು ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, ಒಂದು ಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟೆರಿ ಅಥವಾ ಗವರ್ನಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫೀಸರರು ನೌಕರಮಾನೇರು ಅವರ ಕ್ಯಾರೇಜುಗಳು, ಗಾಡಿಗಳು, ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹಾ.

ನಂಬರು.	ಷೆಡ್ಯೂಲ್ A.	
1	ರೈಲ್ವೆ ಸ್ಟೇಷನ್ ರಸ್ತೆ	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳಗುಳದ ರಸ್ತೆ	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ	ಎರೆಕಟ್ಟೆ ಉಕ್ಕಡ
4	ಬೆಂಗಳೂರು ರಸ್ತೆ	ವೀರನಗೆರೆ ಉಕ್ಕಡ
5	ಸೆಮಿಟೆರಿ ರಸ್ತೆ	ಬಂಗ್ಲಿ ಸಂತ್ರಿ ಉಕ್ಕಡ
6	ಮಹದೇವಪುರದ ರಸ್ತೆ	ಜಲಪುರಿ ಉಕ್ಕಡ
7	ಆಲನಹಳ್ಳಿ ರಸ್ತೆ	ಇಟ್ಟಿಗೆ ಗೂಡು ಉಕ್ಕಡ
8	ರೇಸುಕೋರ್ಸು ರಸ್ತೆ	ರೋಣಸಂತ್ರಿ ಉಕ್ಕಡ
9	ನಂಜನಗೂಡು ರಸ್ತೆ	ನಂಜನಗೂಡು ಉಕ್ಕಡ
10	ಡಿಟೋ	ಹಾಲಿ ಉಕ್ಕಡದಬಳಿ ವಿಧಾಯಕ ಮಾಡುವಂತೆ ನಾಚನಹಳ್ಳಿ ಉಕ್ಕಡ.
11	ಮಾನಂದವಾಡಿ ರಸ್ತೆ	ಚಟ್ಟನಹಳ್ಳಿ ಉಕ್ಕಡ
12	ಮೈಸ್‌ರಾಯಿ ರಸ್ತೆ	ಹೊಲಗೇರಿ ಉಕ್ಕಡ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜ್ಯಾಬಿಲಿ ರಸ್ತೆ	ಕುಕ್ಕನಹಳ್ಳಿ ಉಕ್ಕಡ
15	ಇಲವಾಲದ ರಸ್ತೆ	ಮುನಿಸಿಪಲ್ ಸರಹದ್ದು ಬೈದಾಗುವ ಬಳಿ ಹಾಲಿ ಈ ರಸ್ತೆಯ ಪಕ್ಕದಲ್ಲಿ ವಿಧಾಯಕ ಮಾಡಿರುವ ಉಕ್ಕಡ.

ನಂಬರು.	ಷೆಡ್ಯೂಲ್ B.	ರೂ.	ಆ.	ಪೈ.
	ಟೋಲ್ ಗೇಟಿನಲ್ಲಿ ವಸೂಲ್ ಮಾಡತಕ್ಕ ದರಗಳ ತಪಶೀಲು.			
1	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ ..	0	4	0
2	ಡಿಟೋ 2 ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು, ಇವುಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ.	0	2	0
4	ಡಿಟೋ ಖಾಲಿ ಇರತಕ್ಕ ಪ್ರತಿಒಂದು ಗಾಡಿಗೆ	0	1	0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ...	0	0	6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲು ಮೀರಿದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ.	0	0	6
9	ಡಿಟೋ ಆನೆ 1ಕ್ಕೆ	0	8	0
10	ಡಿಟೋ ಒಂಟೆ 1ಕ್ಕೆ	0	1	0

ಕೆ. ಶ್ರೀನಿವಾಸರಾವ್,
ಫಾರ್ ಪ್ರೆಸಿಡೆಂಟ್.

ಬೆಂಗಳೂರ ಗವರ್ನಮೆಂಟ್ ಸೆಂಟ್ರಲ್ ಬುಕ್‌ಡಿಪೋ

ನೋಟಿಸ್ ಬೆಂಗಳೂರು ತಾರೀಖು 11ನೇ ಮೇ 1903.

ಇದರಡಿ ನಮೂದು ಮಾಡಿರುವ ಪುಸ್ತುಕಗಳು ಬಿಕರಿಗೆ ಸಿದ್ಧವಾಗಿರುತ್ತವೆ:—

		ರೂ. ಆ. ಪೈ.
1.	ಕನ್ನಡ Iನೇ ರೀಡರ್	0—3—0
2.	ಕನ್ನಡ Vನೇ ಲೇಖನ ಪುಸ್ತುಕ	0—1—0
3.	1904ನೇ ಸಾಲ್ ಸಂಸ್ಕೃತ ಲೋವರ್ ಸೆಕೆಂಡರಿ ಟೆಕ್ಸ್ಟ್ ...	0—2—0
4.	ಮೈಸೂರ್ ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ತಿದ್ದುಪಾಟು ..	0—4—0

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಸಿದ್ಧ ಪಡಿಸಿದ್ದು. [ಸಂ 20.

ಬೆಂಗಳೂರು, ಗುರುವಾರ, ಮೇ ತಾ|| 21, ಸರ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಸರ್ 1903—1904ನೇ ಸರ್ಕಾರಿ ವರುಷಕ್ಕಾಗಿ ಮೈಸೂರು ರಾಜ್ಯದಲ್ಲಿ ಸೇಂದಿ ಉತಾರ್ಮಾಡಲಿಕ್ಕೆ ಎಲ್ಲಾ ಮರಗಳು ಹಸರು ಬಣ್ಣದಿಂದ ಸಂಖ್ಯೆ ಹಾಕಲ್ಪಡುವವು.

ಪಿ. ಎರ್. ಪೂರ್ಣಯ್ಯ,
ಮೈಸೂರು ಸೀಮೆಯ ಎಕ್ಸೈಜ್ ಕಮ್ಮಿಷನರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮೆ.

ಸರ್ 1903ನೇ ಇಸವಿ ಮೇ 13ನೇ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸರ್ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಜೂರ್ ಆಖೈರ್ ವರಿಗೆ ಹನ್ನೆರಡು ತಿಂಗಳ ಪರ್ಯಂತರ ಬವರಿಂಗ್ ಪೇಟೆ ತಾಲ್ಲೂಕು ಕಾಮಸಂದ್ರದ ಸ್ಟೇಟ್ ಫಾರೆಸ್ಟ್ ಕುಂದರಸನ ಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟನಲ್ಲಿ ಟೋಲ್ ವಸೂಲ್ಮಾಡತಕ್ಕ ಹಕ್ಕು 1903ನೇ ಇಸವಿ ಜೂರ್ 22ನೇ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರ್ರಿಂದಾಗಲೀ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುತ್ತೆ.

(2) ಚಡಸವಾಲನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲೀ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರ ಯಕ್ತ್ಯಾರಿಯಲ್ಲಿರುತ್ತೆ.

(3) ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರು ಯಾವ ಸವಾಲುಗಳು ಅಂಗೀಕರಿಸುತ್ತಾರೋ ಅಂಥಾವರು ಸವಾಲ್ ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಟ್ ಇಡಬೇಕು. ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹರಾಜು ಮಂಜೂರಾದ ಸಂಗತಿ ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಇರತಕ್ಕ ಮೊಬಲಗು ಪೂರ್ಣ ಪಾವತೀ ಮಾಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಡಿಪಾಜಿಟ್ ಇಟ್ಟಿರತಕ್ಕ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಕಂಟ್ರಾಕ್ಟನ್ನು ದುಸರಾ ಹರಾಜು ಮಾಡಿಸುವದಲ್ಲದೆ ಇದರಲ್ಲಿ ಉಂಟಾಗುವ ಯಾವ ಫಾಯದೆಗೂ ಮೊದಲಿನ ಸವಾಲ್‌ದಾರನಿಗೆ ಹಕ್ಕು ಇರುವದಿಲ್ಲ. ಮತ್ತು ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಇವನನ್ನು ಗುರಿಪಡಿಸಿ ಈ ಮೊಬಲಗು ಇವನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(4) ಈ ಕೆಳಗೆ ಕಂಡ ಷರತ್ತುಗಳು ಕಂಡು ಷರತ್ತಿಗೆ ಬದ್ಧನಾಗಿರುವಂತೆ ಕಂಟ್ರಾಕ್ಟ್‌ದಾರನು ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಹರಾಜು ಮಂಜೂರಾದ ಒಂದು ವಾರದಲ್ಲಿ ಬರೆದುಕೊಟ್ಟ ವಿನಹಾ ಟೋಲ್ ವಸೂಲಿಗೆ ಅಪ್ಪಣೆ ದೊರಿಯಲಾಗದು. ಕಂಟ್ರಾಕ್ಟರು ಪ್ರತಿ ದಿನವೂ ವಸೂಲ್ಮಾಡುವ ಮೊಬಲಗಿಗೆ ಒಂದು ಲೆಖ್ಖದ ಬುಕ್ಕು ಇಟ್ಟಿರಬೇಕು. ಇದು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡುವದಕ್ಕೆ ಬಂದಾಗ ಖುಲ್ಲಾ ಇರಬೇಕು.

(5) ಕಂಟ್ರಾಕ್ಟ್‌ದಾರನು ಈ ಕೆಳಗೆ ಕಂಡ ಟೋಲ್ ಶಿವಾಯಿ ಮತ್ಯಾವದನ್ನು ವಸೂಲ್ಮಾಡಕೂಡದು. ಮತ್ತು ಅದರಲ್ಲಿ ನಮೂದಿಸುವ ದರದಂತೆಯೇ ವಸೂಲ್ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರ ಕಂಟ್ರಾಕ್ಟ್‌ದಾರನನ್ನು ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುವದಲ್ಲದೆ ಕಂಟ್ರಾಕ್ಟ್ ಸಹ ರದ್ದುಮಾಡಲ್ಪಡುವದು.

(6) ಕಂಟ್ರಾಕ್ಟ್‌ದಾರನು ಮೈಸೂರ್ ಸರಹದ್ದು ಹೊರಗಿನಿಂದ ಕಾಮಸಂದ್ರ ಸ್ಟೇಟ್ ಫಾರೆಸ್ಟ್ ಮಾರ್ಗವಾಗಿ ಬರತಕ್ಕ ಸಾದೆ ಭರ್ತಿ ಭಂಡಿಗೆ ಮಾತ್ರ ಟೋಲ್ ವಸೂಲ್ಮಾಡಬೇಕು.

(7) ಕಂಟ್ರಾಕ್ಟ್‌ದಾರನು (1) ಕುಂದರಸನಹಳ್ಳಿ, (2) ಮುತ್ತನಹಳ್ಳಿ, ಈ ಎರಡು ಟೋಲ್ ಗೇಟನಲ್ಲಿ ಶಿವಾಯಿ ಇತರ ಸ್ಥಳದಲ್ಲಿ ಟೋಲ್ ವಸೂಲ್ಮಾಡಕೂಡದು.

(8) ಇನ್ನೇನಾದರೂ ತಪಶೀಲು ಬೇಕಾದರೆ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಗೆ ಬರದುಕೊಂಡು ತಿಳದುಕೊಳ್ಳಬಹುದು. ಪ್ರತಿಯೊಂದು ಸಾದೆ ಭರ್ತಿ ಭಂಡಿಗೂ ಭಂಡಿ 1ಕ್ಕೆ ಎರಡಾಣೆಯಂತೆ ಕುಂದರಸನಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟ್‌ನಲ್ಲಿ ಟೋಲ್ ವಸೂಲ್ ಮಾಡಲ್ಪಡಬೇಕು.

ಎಸ್. ಎ. ಬಾಪುರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ತಾರೀಖು 26ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಇದರಡೀ ಕಂಡ ತಾಲ್ಲೂಕು ಗಳ ಡಿಸ್ಟ್ರಿಕ್ಟ್ ಫಾರೆಸ್ಟುಗಳಲ್ಲಿಯೂ ಇಡುವಳಿಯಿಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳ ಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟ್ಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿಬೇಲಿ ಗಳಲ್ಲಿ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1903ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1904ನೇ ಇಸವಿ ಜೂನ್ 30ನೇ ತಾರೀಖಿನವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜ್ ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವ ರಿಸಿರುವ ಆಫೀಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು. ಈ ಡಿಸ್ಟ್ರಿಕ್ಟ್ ಫಾರೆಸ್ಟುಗಳಿಗೆ ಫಾರೆಸ್ಟ್ ಪ್ಲಾಂಟೇಷನ್‌ಗಳು ಸೇರಿಯಿಲ್ಲ:—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫೀಸರು.
ಯಡತೊರೆ	10—6—1903	ಆಯಾ ತಾಲ್ಲೂಕು ಕಚೇರಿ ಇರುವ ಕಸಬಾ ತಾಲ್ಲೂಕು ಕಚೇರಿಯಲ್ಲಿ	ಆಯಾ ತಾಲ್ಲೂಕು ಅಮಲ್ದಾರರು ಇಲ್ಲವೆ ನಾಯಬ್ ಅಮಲ್ದಾರರು
ಹುಣಸೂರು	12—6—1903		
ಹೆಗ್ಗಡದೇವನಕೋಟೆ	15—6—1903		
ಗುಂಡ್ಲುಪೇಟೆ	18—6—1903		
ಚಾಮರಾಜನಗರ	20—6—1903		
ನಂಜನಗೂಡು	22—6—1903		
ಟಿ. ನರಸೀಪುರ	24—6—1903		
ಮೈಸೂರು	24—6—1903		
ಮಳವಳ್ಳಿ	25—6—1903		
ಮಂಡ್ಯ	27—6—1903		
ಶ್ರೀರಂಗಪಟ್ಟಣ	29—6—1903		
ನಾಗಮಂಗಲ	3—7—1903		
ಕೃಷ್ಣರಾಜಪೇಟೆ	6—7—1903		

ಹುಟ್ಟುವಳಿ ತಪಸೀಲು.

1. ತಾರೇಕಾಯಿ, 2. ಸೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡು ಅರಿಶಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಹಾಲುಮಡ್ಡಿ, 13. ಚಗಚೇಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ಸಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಬೇಲದಹಣ್ಣು, 20. ಅರಗು, (ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ತಾಲ್ಲೂಕುಗಳದು ವಿನಹ) 21. ಸೀತಾಫಲದ ಹಣ್ಣು, 22. ಬೆಂಡೆನಾರು; ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಸೇರಿಯಿಲ್ಲ:—

ಹುಣಸೂರು, ಹೆಗ್ಗಡದೇವನ ಕೋಟೆ, ಗುಂಡ್ಲು, ನಂಜನಗೂಡು ಮತ್ತು ಚಾಮರಾಜನಗರ ತಾಲ್ಲೂಕುಗಳು.

ನಾಗಮಂಗಲದ ತಾಲ್ಲೂಕು ಬಾಬತು:—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಯಿಂಡಸಹಳ್ಳಿ, 6. ಮಾರಹಳ್ಳಿ, 7. ಜೊಗಾಡಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು:—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ಗಾಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಡನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು:—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8. ಮಾದಿಗರ ಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಜಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡಲೆ ಇಜಾರೆ ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ಮೇರೆ ನಡೆಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು, ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1903ನೇ ಜುಲೈ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ಉಳಿದ ಮೊಬಲಗನ್ನು ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ಮೊಬಲಗನ್ನು ಸಹ ಮೂರು ಸಮವಾದ ಖಿಸ್ತುಗಳಲ್ಲಿ ಅಂದರೆ:—

1903ನೇ ಇಸವಿ ಡಿಸೆಂಬರ 1ನೇ ತಾರೀಖು.

1904ನೇ ಇಸವಿ ಜನವರಿ 2ನೇ ತಾರೀಖು.

1904ನೇ ಇಸವಿ ಫೆಬ್ರವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವದೊಂದು ಖಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1904ನೇ ಜೂನ್ ಆಖೈರ್ ವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನೂ ಮತ್ತು ಜಾಮೀನ್ದಾರನು ಸಹ ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ.

ತಾರೀಖು 26ನೇ ಏಪ್ರೈಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ವಿವರಿಸಿರುವ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಸರ್ಕಾರಿ ಬಂಜರ ಜಮೀನುಗಳಲ್ಲಿ ಇರತಕ್ಕ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1903ನೇ ಜುಲೈ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ತಾಲ್ಲೂಕುವಾರ್ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜೂನ್ ತಾರೀಖು 12ರಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ. ಸ್ಟೇಟ್ ಫಾರೆಸ್ಟುಗಳು ಮತ್ತು ಪ್ಲಾಂಟೇಷನ್‌ಗಳು ಇದಕ್ಕೆ ಸೇರಿ ಇರುವದಿಲ್ಲ. ಅವುಗಳು ಅಲಾಯಿದಾ ವಿಲೇ ಮಾಡಲ್ಪಡುವವು.

ತಾಲ್ಲೂಕುಗಳ ಹೆಸರು.

1. ಹೆಗ್ಗಡದೇವನಕೋಟೆ ...	3. ನಂಜನಗೂಡು ...	5. ಯಡತೊರೆ
2. ಗುಂಡ್ಲುಪೇಟೆ	4. ಹುಣಸೂರು ...	6. ಚಾಮರಾಜನಗರ

2. ಹರಾಜು, ಹರಾಜು ತಾರೀಖಿನ ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದೇ ಇದ್ದ ಪಕ್ಷದಲ್ಲಿ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುತ್ತದೆ.

3. ಈ ಮೇಲೆ ನಮೂದಿಸಿರುವ ಹಕ್ಕು ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಆದರೆ ಈ ಹರಾಜು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ. ಮತ್ತು ಅವರು ಯಾವ ಸವಾಲನ್ನಾದರೂ ಕಾರಣವನ್ನು ಕೊಡದೆ ಮಂಜೂರು ಮಾಡುವದಕ್ಕೂ ಅಥವಾ ತಿರಸ್ಕರಿಸತಕ್ಕದ್ದಕ್ಕೂ ಸ್ವತಂತ್ರರಾಗಿದ್ದಾರೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಕ್ರಮಪ್ರಕಾರ ಅಪ್ಪಣೆ ಪಡೆದ ಏಜಂಟರ ಮೂಲಕವಾಗಿಯಾಗಲಿ ಹಾಜರಾಗಬೇಕು. ಮತ್ತು ಯಾವ ಮನುಷ್ಯನಾಗಲಿ ಒಂದು ನೂರು ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರವಾಗಲಿ ಅಥವಾ ಇತರರಿಗೋಸ್ಕರವಾಗಲಿ ಚಡಸವಾಲ್ ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜ್ ಕೈದಾದ ಹಡನೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತುದಾರನು ಅವನ ದರಖಾಸ್ತು ಮಂಜೂರಾತಿಯನ್ನ ಅವನಿಗೆ ತಿಳಿಸಿದ ತಾರೀಖು ಲಾಗಾಯತು ಮೂರು ದಿವಸಗಳ ಒಳಗಾಗಿ ಅವನು ಮೊದಲು ಇಟ್ಟು ಇರತಕ್ಕ ಡಿಪಾಜಿಟ್ ಮೊಬಲಗು ಸೇರಿ ಹರಾಜಿನ ಒಟ್ಟು ಮೊಬಲಗಿನ ಕಾಲು ಹಿಸ್ಸೆ ಹಣವನ್ನು ಮೈಸೂರು ಡಿಸ್ಟ್ರಿಕ್ಟು ಖಜಾನೆಗೆ ಪಾವತಿ ಮಾಡಬೇಕು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲ್ ಇಟ್ಟದ್ದು ಠೇವಣಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರವರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ದರಖಾಸ್ತುದಾರನಿಗೆ ಇರುವದಿಲ್ಲ. ಆದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜ್ ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ. ಕಮ್ಮಿ ಬಂದ ಹಣವನ್ನು ಕೇಳಿದ ಕೂಡ್ಲೆ ಕೊಡದೆ ಇದ್ದರೆ ಅದನ್ನು ರೆವಿನ್ಯೂ ಡಿಮ್ಯಾಂಡಿನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಇಜಾರೆದಾರನು ಈ ಕೆಳಗೆ ನಮೂದಿಸಿರುವ ಷರತ್ತುಗಳ ಮೇರೆ ನಡದುಕೊಳ್ಳತಕ್ಕ ಬಗ್ಗೆ ಬದ್ಧನಾಗಿ ಒಂದು ಮುಚ್ಚಳಿಕೆ ಬರದುಕೊಡತಕ್ಕದ್ದು. ಮತ್ತು ಮುಚ್ಚಳಿಕೆಯು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ ತಾರೀಖು ಲಾಗಾಯ[illegible] ಮೂರು ದಿವಸಗಳ ಒಳಗಾಗಿ ಬರದುಕೊಡತಕ್ಕದ್ದಾಗಿರುತ್ತೆ. ಇದಕ್ಕೆ ತಪ್ಪಿದರೆ, ಡಿಪಾಜಿಟ್ ಹಣವನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಬಾಬು ದುಸರಾ ಹರಾಜು ಮಾಡಲ್ಪಡುವದು.

7. ಬಾಕಿ ಆಗುವ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಫಂಡ್ ಸಹ ಪೂರ್ತಿಯಾಗಿ 1903ನೇ ಇಸವಿ ಜುಲೈ ಆಖೈರು ಒಳಗಾಗಿ ಪಾವತಿ ಮಾಡಲ್ಪಡಬೇಕು. ಅಥವಾ ಅಡ್ವಾನ್ಸಾಗಿ ಕ್ವಾರ್ಟರ್ಲಿ ಖಿಸ್ತು ಮೇರೆ ಅಂದರೆ 1903ನೇ ಅಕ್ಟೋಬರ್ 1ನೇ ತಾರೀಖಿನಲ್ಲಿ ಒಂದನೇ ಖಿಸ್ತು 1904ನೇ ಇಸವಿ ಜನವರಿ 2ನೇ ತಾರೀಖಿನಲ್ಲಿ ಎರಡನೇ ಖಿಸ್ತು ಮತ್ತು 1904ನೇ ಇಸವಿ ಏಪ್ರೈಲ್ 1ನೇ ತಾರೀಖಿನಲ್ಲಿ ಮೂರನೇ ಖಿಸ್ತು ಪಾವತಿ ಮಾಡಬೇಕು. ಈ ಮೇಲೆ ನಮೂದಿಸಿರುವ ಮೇರೆ ಖಿಸ್ತಿನ ಹಣ ಪಾವತಿ ಮಾಡಲ್ಪಡದೇ ಇದ್ದರೆ ಚಕ್ಕೆಯ ಜಮಾವಣಿ ಮತ್ತು ರಫ್ತು ಕೆಲಸ ನಿಲ್ಲಿಸಲ್ಪಡುವದಲ್ಲದೆ ಇಜಾರೆಯ ಬಾಕಿ ಆಗುವ ವಿಸಿಷ್ಟ ಮೊಬಲಗು ಮತ್ತು ಲೋಕಲ್ ಫಂಡ್ ಸಹಾ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

ಷ ರ ತ್ತು ಗ ಳು.

1. ಒಂದು ವರುಷಕ್ಕೆ ಒಳಪಟ್ಟ ಎಳೇ ಗಿಡ ಯಾ ಕೊಂಬೆಯನ್ನು ಕಡಿಯಕೂಡದು. ಅಥವಾ ಅದರ ತೊಗಟೆಯನ್ನು ತೆಗಿಯಕೂಡದು.
2. ಇಜಾರೆದಾರನ ನೌಕರರೇ ಆಗಲಿ ಅಥವಾ ಷಿಕಮಿ ಕಂಟ್ರಾಕ್ಟುದಾರನೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.
3. ಕೆಲಸ ನಡಿಸಲು ವಿಂಗಡಿಸಲ್ಪಟ್ಟು ಇರುವ ಸರಕಲ್‌ಗಳಲ್ಲಿ ಚಕ್ಕೆ ಜಮಾಯಿಸುವದಕ್ಕೆ ನೇಮಿಸಲ್ಪಟ್ಟ ಮೇಸ್ತ್ರಿಗಳ ಮತ್ತು ಷಿಕಮಿ ಕಂಟ್ರಾಕ್ಟರುಗಳ ಹೆಸರಿನ ಒಂದು ಪಟ್ಟಿಯನ್ನು ಕೊಡತಕ್ಕದ್ದು.
4. ತೊಗಟೆ ತೆಗಿಯಲ್ಪಟ್ಟ ಸವದೆ ಇಜಾರೆದಾರನಿಗೆ ಸೇರಿದ್ದಾಗಿದೆ.
5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಯಾ ಜಮಾವಣೆ ಮೊತ್ತ ತೋರಿಸುವ ತಪಶೀಲ್ ಲೆಖ್ಖವನ್ನು ಇಡಬೇಕು. ಮತ್ತು ಅಂಥಾ ಲೆಕ್ಕವನ್ನು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರೇ ಆಗಲಿ, ಫಾರೆಸ್ಟ್ ರೇಂಜ್ ಆಫಿಸರೇ ಆಗಲಿ, ಅಮಲ್‌ದಾರರೇ ಆಗಲಿ ಅಥವಾ ಅವರುಗಳಿಂದ ನೇಮಿಸಲ್ಪಡುವ ಇತರ ಆಫಿಸರವರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.
6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಮೊಕರರ್ ಮಾಡುವ ರೀತಿಯಲ್ಲಿ ಪ್ಯಾಸು ಪಡಿಯತಕ್ಕದ್ದು.
7. ದಾಸ್ತಾನು ಇಡಲ್ಪಟ್ಟ ಮತ್ತು ಜಮಾಯಿಸಲ್ಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿಯ ಜೂನ್ ಆಖೈರ್ ಒಳಗಾಗಿ ಮೈಸೂರು ಡಿಸ್ಟ್ರಿಕ್ಟಿನ ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.
8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯ ಹಕ್ಕು ರದ್ದು ಮಾಡಲ್ಪಡುವದಲ್ಲದೆ ಇದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹುಕುಂ ಆದಹಾಗೆ ಅವನಿಂದ ಪಾವತಿಯಾಗಿದ್ದ ಪೂರಾ ಮೊಬಲಗಾಗಲಿ ಅಥವಾ ಅದರ ಒಂದು ಭಾಗವಾಗಲಿ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ.

ನೋಟಿಫಿಕೇಷನ್.

ತಾರೀಖು 28ನೇ ಏಪ್ರಿಲ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ಡಿಪೋಗಳಲ್ಲಿ ಜಮಾಯಿಸಿ ಇರುವ ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಯೆ 1903ನೇ ಇಸವಿ ಮೇ 29ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ಡಿಪೋ ಹೆಸರು.	ಬಾಬಿನ ತರಹ.	ಮೊತ್ತ ಹೆಚ್ಚು ಕಡಿಮೆ.
ಮೈಸೂರು—ಉಡಿಯಾರ್ಡು ..	ಅಳಲೆಕಾಯಿ ...	2233 ಮಣ
ಹುಣಸೂರು ಡಿಪೋ ..	ಅಳಲೆಕಾಯಿ ...	1144 ಮಣ
	ಹೊಂಗೇಬೀಜ	1120 ಸೇರು
ಚಾಮರಾಜನಗರ ಡಿಪೋ ...	ಅಳಲೆಕಾಯಿ ...	326 ಮಣ
ಗುಂಡ್ಲು ಡಿಪೋ ..	ಅಳಲೆಕಾಯಿ ...	2934 ಮಣ
	ಹೊಂಗೇಬೀಜ ...	90 ಸೇರು
ಶ್ರೀರಂಗಪಟ್ಟಣದ ಕೋಠಿ ...	ಅಳಲೆಕಾಯಿ ...	2354 ಮಣ.

2. ಡಿಪೋ ಹೆಸರು, ಬಾಬಿನ ತರಹಾ, ಕೇಳುವ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿಯೊಂದು ದರಖಾಸ್ತಿನ ಒಡನೆ ಒಂದು ನೂರು ರೂಪಾಯಿನ ಕರ್ರೆಸಿ ನೋಟ್ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರಮಾಡಿ ಲಿಫಾಪೆಯ ಮೇಲೆ "ಪಸಾರೆ ಬಾಬುಗಳು ಕೊಂಡುಕೊಳ್ಳುವ ಬಗ್ಯೆ ದರಖಾಸ್ತು" ಎಂದು ಬರದು ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

4. ದರಖಾಸ್ತುಗಳ ಆಖೈರ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ. ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

5. ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರ ಆಫೀಸಿನಲ್ಲಿ 1903ನೇ ಇಸವಿ ಜೂನ್ 1ನೇ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಮತ್ತು ಡೆಪ್ಯುಟಿ ಕಮಿಷನರವರು ವ ಇವರ ಗೈರ್ ಹಾಜರಿಯಲ್ಲಿ ಹಾಜರು ಇರುವ ಅಸಿಸ್ಟೆಂಟ್ ಕಮಿಷನರವರು ಕಲೆತು ಹಾಜರು ಇರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ವಡಿಯುವರು.

6. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 5 ದಿವಸಗಳ ಒಳಗಾಗಿ ಅವನು ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗು ಸಮಿಪವಾದ ಮೈಸೂರ ಗವರ್ನಮೆಂಟ್ ಖಜಾನೆಯಲ್ಲಿ ಠೇವಣಿ ಇಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಅಡ್ವಾನ್ಸು ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ.

7. ಖರೀದಿ ಒಟ್ಟು ಮೊಬಲಗು 1903ನೇ ಇಸವಿ ಜೂನ್ 30ನೇ ತಾರೀಖಿನಲ್ಲಿ ಅಥವಾ ಅದಕ್ಕೆ ಮುಂಚೆಯಾಗಲಿ ಪಾವತಿ ಮಾಡಿ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು ಒಂದು ತಿಂಗಳ ವಳಗಾಗಿ ಮಾಲನ್ನ ಸಾಗಿಸಬೇಕು. ಖರೀದಿಯು ಪೂರಾ ಮೊಬಲಗನ್ನ ವಾಯಿದೆ ವಳಗಾಗಿ ಪಾವತೀ ಮಾಡಲು ತಪ್ಪಿದಲ್ಲಿ ಪಸಾರೆ ಬಾಬು ಪುನಹ ಮಾರಲ್ಪಡುವದು. ದರಖಾಸ್ತುದಾರನಿಗೆ ಹರಾಜಿನಲ್ಲಿ ಸಂಭವಿಸುವ ಫಾಯಿದೆ ದೊರೆಯಲಾರದು. ಆದರೆ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಬದ್ಧನನ್ನಾಗಿ ಮಾಡಿ ನಷ್ಟದ ಮೊಬಲಗನ್ನ ರೆವಿನ್ಯೂ ರೂಲ್ಸು ಪ್ರಕಾರ ಅವನಿಂದ ರೆವಿನ್ಯೂ ಬಾಕಿಯಂತೆ ವಸೂಲು ಮಾಡಲ್ಪಡುವದು. ಮಾಲನ್ನ ವಾಯಿದೆ ಒಳಗೆ ಸಾಗಿಸದೇ ಹೋದ ಪಕ್ಷದಲ್ಲಿ ತಿಂಗಳು ಒಂದಕ್ಕೆ ಅಥವಾ ಕಮ್ಮಿ ದಿವಸಗಳಿಗೂನೂ ಮಣ ಒಂದಕ್ಕೆ ದರ ಮಾಹೆ ಮೂರು ಕಾಸಿನಂತೆ ಡಿಪೋ ಬಾಡಿಗೆ ದರಖಾಸ್ತುದಾರನು ಕೊಡಬೇಕಾದೀತು. ಈ ಭಾಗದಲ್ಲಿ ಹೆಚ್ಚಾದ ತಪಸೀಲು ಬೇಕಾದಲ್ಲಿ ಮೈಸೂರು ಉಡಿಯಾರ್ಡು ಫಾರೆಸ್ಟರಿಂದಾಗಲಿ ಹುಣಸೂರು, ಗುಂಡ್ಲು ಮತ್ತು ಚಾಮರಾಜನಗರದ ರೇಂಜ್ ಆಫಿಸರವರಿಂದಾಗಲಿ ಅಥವಾ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಾಗಲಿ ತಿಳದುಕೊಳ್ಳಬಹುದು.

8. ಮೈಸೂರು ಉಡಿಯಾರ್ಡು ಫಾರೆಸ್ಟರಲ್ಲಿಯಾಗಲಿ ಹುಣಸೂರು, ಗುಂಡ್ಲು ಮತ್ತು ಚಾಮರಾಜನಗರದ ರೇಂಜ್ ಆಫಿಸರಲ್ಲಿಯಾಗಲಿ ಒಂದು ರೂಪಾಯಿ ಕಳುಹಿಸಿಕೊಟ್ಟಲ್ಲಿ ಪಸಾರೆ ಬಾಬಿನ ಮಾದ್ರಿಯು ದೊರಕುವದು. ಅಥವಾ ರೂಬುರೂಬು ಮೇಲ್ಕಂಡ ಸ್ಥಳಗಳಲ್ಲಿ ಮುಫತ್ತಾಗಿ ನೋಡಬಹುದು.

9. ದರಖಾಸ್ತು ಮಂಜೂರಾತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಠೇವಣಿ ಮೊಬಲಗು ವಾಪಸು ಮಾಡಲ್ಪಡುವದು.

10. ಫಾರೆಸ್ಟು ನೌಕರಮಾನೇರಿಗು ಮತ್ತು ಖರೀದಿದಾರರಿಗೂ ಉಂಟಾಗುವ ತಕರಾರುಗಳಲ್ಲಿ (ವ್ಯತ್ಯಾಸಗಳಲ್ಲಿ) ಡೆಪ್ಯುಟಿ ಕಮಿಷನರವರ ತೀರ್ಮಾನವು ಆಖೈರಾದ್ದಾಗಿರುತ್ತೆ.

1903ನೇ ಇಸವಿ ಏಪ್ರೈಲ್ ತಾರೀಖು 28ಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಕೆಳಗೆ ನಮೂದಿಸುವ ಮೈಸೂರು ಡಿಸ್ಟ್ರಿಕ್ಟಿಗೆ ಸಂಬಂಧಪಟ್ಟ ಡಿಪೋಗಳಲ್ಲಿ ಚೌಬೀನಾ ಸಾಮಾನುಗಳು ಬಿದರು ಗಳುವು ಮತ್ತು ಪಸಾರೆ ಜಿನಸುಗಳು ಸಹಾ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು	ಹರಾಜು ತಾರೀಖು	ಹರಾಜು ಮಾಡಿಸಲ್ಪಡುವ ಆಫಿಸರ ಹೆಸರು	ಹರಾಜಿಗೆ ಇಡಲ್ಪಡುವ ಚೌಬೀನೆಯ ಮೊತ್ತ												ಹರಾಜಿಗೆ ಇಡಲ್ಪಡುವ ಪಸಾರೆ ಜಿನಸುಗಳ ಮೊತ್ತ					ಬಿದ್ರು ಗಳುವು
				ಸಾಗುವಾನಿ ನಾಟಾ		ಮನ್ನಾ ಜಾತಿ ನಾಟಾ		ಕಾಡುಜಾತಿ ನಾಟಾ		ಸಾಗುವಾನಿ ಸರ ವಗೈರೆ		ಮನ್ನಾ ಜಾತಿ ಸರ ವಗೈರೆ		ಕಾಡುಜಾತಿ ಸರ ವಗೈರೆ		ಜೇನುತುಪ್ಪ	ಜೇನುಮೇಣ	ಕೊಂಬು	ಶೀಗೆಕಾಯಿ	ಹುಣಸೆಹಂಣು	
				ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಅದದು	ಅಡಿ	ಮ	ಮ	ಮ	ಮ	ಖಂ	ಅದದು
1	ಗುಂಡ್ಲು ಡಿಪೋ ...	18—5—03	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಅಥವ ರೇಂಜ್ ಆಫಿಸರು	..	...	2	39	...	...	130	132	152	300	12	30	55	9	3	...	...	
2	ಚಾಮರಾಜನಗರ ಡಿಪೋ ..	20—5—03	ಡಿಟೋ	1	18	24	615	2	44	3	13	43	699	514	762	20	2	..	4	2	
3	ಹುಣಸೂರು ಡಿಟೋ .	15—6—03	ಡಿಟೋ	8	202	128	2,521	17	369	632	1,464	242	1,689	364	790	...	..	....	...	.	
4	ಅಂತರಸಂತೆ ಡಿಟೋ ..	25—5—03	ಹೆಗ್ಗಡದೇವನ ರೇಂಜ್ ಆಫಿಸರ	9	209	13	303	1	35	437	1,029	35	226	3	10	..	...	.	..	...	
5	ಬೇಗೂರು ಡಿಟೋ ..	30—5—03		..	...	...	..	..	..	743	1,847	7	47	2	19	...	..	.	...	...	
6	ಬೇಗೂರು ಕಡು ..	31—5—03		14	273	10	219	1	24	72	665	15	138	...	...	..	...	..	..	...	
7	ಆಲದಮರದ ಕಡು	28—5—03		16	432	5	88	..	..	114	653	25	255	...	..	...	...	...	...	...	
8	ಸರಗೂರು ಡಿಪೋ .	6—6—03		1	16	1	19	1	16	298	453	15	76	12	76	..	..	....	.	...	
9	ಸೋಮೇಶ್ವರ ಕಡು .	8—6—03		49	1,638	28	698	2	56	29	180	4	34	1	14	...	..	....	...	.	
10	ಸಂತೆಮರಹಳ್ಳಿ ಡಿಪೋ ...	22—5—03	ಡಿಸ್ಟ್ರಿಕ್ಟ್ ಆಫಿಸರು ಅಥವ ರೇಂಜ್ ಆಫಿಸರ	..	...	102	2,210	3	78	80	125	27	313	107	164	..	..	...	..	...	8,032
11	ಹುಣಸೂರು ಕೋಠಿ .	17—6—03		...	...	...	...	...	...	..	..	..	..	..	..	...	2	$\frac{1}{2}$	...	..	

ಷರತ್ತು:—1895ನೇ ಇಸವಿ 25ನೇ ಏಪ್ರೈಲ್ 15ನೇ ನಂಬರು ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ ಮಹೆ 15ನೇ ಮರು ೦ 1529—R. F. 155-92 ನಂಬರು ನೋಟಿಫಿಕೇಷನ್ ನೋಡಿ, ಚೌಬೀನಾ ಬಗ್ಗೆ.

೭ ಜ.

1903ನೇ ಇಸವಿ ಮೇ ತಾರೀಖು 7ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಇದರಡೀ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆಯು, ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಹರಾಜು ಮಾಡತಕ್ಕ ಅಧಿಕಾರರು.	ಸುಮಾರು ಚೌಬೀನೆ ಮೊತ್ತ.											
				ಸಾಗವಾನಿ ನಾಟಾ ಮತ್ತು ಜಂತಿ.		ಮನ್ನಾ ಜಾತಿ ನಾಟಾ ಮತ್ತು ಜಂತಿ.		ಕಾಡು ನಾಟಾ ಮತ್ತು ಜಂತಿ.		ಸಾಗವಾನಿ ಸರ.		ಮನ್ನಾ ಜಾತಿ ಸರ.		ಕಾಡು ಸರ.	
				ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ	ಅದದು	ಸಲೆ ಅಡಿ
1	ಮೈಸೂರು ವುಡಿಯಾರ್ಡು	25-5-03	ಡಿಸ್ಟ್ರಿಕ್ಟು ಫಾರೆಸ್ಟು ಅಧಿಕಾರರು.	343	7345	214	3785	6	94	63	72	..	..	..	..
2	ನಂಜನಗೂಡು ಡಿಪೋ	29-5-03		252	2606	54	903	8	145	...	..	..	..	.	..

ಷರತ್ತು:—1895ನೇ ಇಸವಿ ಮಾರ್ಚಿ 10ನೇ ಮರ್ಕುಂ 1529—R. F. 155-92ನೇ ನಂಬರು ಇಸ್ತಿಹಾರ್ ನಾಮೆಯನ್ನ 25—4—1895ನೇ ಮರ್ಕುಂ 15ನೇ ನಂಬರು ಮೈಸೂರು ಗೆಜೆಟ್ಟನಲ್ಲಿ ಘಾಯಿಷ್ ಮಾಡಿರುತ್ತೆ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 27ನೇ ಏಪ್ರೆಲ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾನ್ಹ 2 ಘಂಟೆಗೆ ಷುರು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟ.		ಮತ್ತಿ ನಾಟ.		ನಂದಿನಾಟ.		ಬೀಟೆನಾಟ.		ಕಾಡುಜಾತಿ ನಾಟಾ.		ಷರಾ.
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್ ಸ್ಟೇಷನ್.	28- 5-1903	30	879	7	171	3	77	3	73	5	131	[illegible]

ಹರಾಜು ಷರತ್ತು:—1895ನೇ ಇಸವಿ ಏಪ್ರೆಲ್ 25ನೇ ಮರ್ಕುಂ ನಂಬರ 15ನೇ ಮೈಸೂರು ಗೆಜೆಟನಲ್ಲಿ ಘಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕುಂ ನಂಬರು 15229—R. F. 155—92ನೇ ನೋಟಿಫಿಕೇಷನ್ ನೋಡಬೇಕು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 30ನೇ ಏಪ್ರೆಲ್ 1903.

1. ಕಂದಾಯದ ಬಾಕೀದಾರರಾದ ಜೋಡಿ ದಂಡೆನಹಳ್ಳಿ ಮಾಗಡಿ ಕರಣೀಕ ಕೃಷ್ಣಮೂರ್ತಿರಾಯರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕು ಕಛೇರಿಯಲ್ಲಿ 1903ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ. ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 160—14—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಪಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಮಾಗಡಿ	ತಿಪ್ಪಸಂದ್ರ	ಜೋಡಿ ದಂಡೇನಹಳ್ಳಿ	ಮಾಗಡಿ ಬಾಣಾದಾರ ಕರಣೀಕ ಕೃಷ್ಣಮೂರ್ತಿರಾಯ	..	..	ಜೋಡಿ ದಂಡೇನಹಳ್ಳಿ ಗ್ರಾಮ	ಖುಷ್ಕಿ	210	36	246	0	8	159	14	2
							ತರಿ	29	31	90	14	5	0	8	0
							ಬಾಗಾಯತು	6	21	13	6	7	0	8	0
							ಪರಂಪೋಕು	139	4	8	8	0			
								386	12	358	13	8	160	14	2

* ಯಾ ಬಾಕಿ ಇರುವ ಮೊಟ್ಟಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ನೋಟಿಸ್.

ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ,—ಕೋಲಾರದ ಭಂಗಾರದ ಗಣಿಗೆ ನೀರು ಸರಬರಾಯಿ ಮಾಡಲು, ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲ ದೊಡ್ಡಕೆರೆ ಮತ್ತು ಅದರ ನಾಲೆಗಳ ಮತ್ತು ಅದಕ್ಕೆ ಬೀಳತಕ್ಕ ಕ್ಷೀರನದಿ, ಕೋಲಾರ ತಾಲ್ಲೂಕು ಜೋಡಿ ಹೊಳಲಿಕೆರೆ, ಇವುಗಳ ನೀರನ್ನ ಸಾಗುವಳಿಗೆ ಬಿಡದೆ ಕರ್ನಸರ್ವ್ಯಯಾನೆ ಅಮಾನತ್ತು ಮಾಡಕ್ಕೇಕೆಂದು ವಗೈರೆ ಮೈಸೂರು ಸರ್ಕಾರದವರು ನಿಶ್ಚೈಸಿ ಹುಕ್ಕುಂ ಮಾಡಿರುತ್ತಾರಾಗಿ, ಆ ವಿಷಯದಲ್ಲಿ ಸದರಿ ಕೆರೆಗಳ ನೀರಿನಿಂದ ಸಾಗುವಳಿಯಾಗತಕ್ಕ ತರಿ ಮತ್ತು ಬಾಗಾಯಿತು ಯಾ ಖುಷ್ಕಿ ಬಾಗಾಯಿತು ಜಮೀನುಗಳು ಅಥವಾ ಸದರಿ ಜಮೀನುಗಳನ್ನು ಖುಷ್ಕಿ ಮಾಡಲು ಸರ್ಕಾರಕ್ಕೆ ಅವಶ್ಯಕವಾಗಿರುತ್ತೆ.

ನಮ್ಮ ಅಧಿಕಾರಕ್ಕೆ ಒಳಪಟ್ಟು ಮತ್ತು ನಮ್ಮ ಅಪ್ಪಣೆಯಂತೆ ಮೈಸೂರು ಲ್ಯಾಂಡ್ ಆಕ್ವಿಜಿಷನ್ ಆಕ್ಟು ಅನುಸರಿಸಿ ಪ್ರಥಮ ತನಿಖೆಯಾನೆ "Preliminary Enquiry" ಮಾಡಲು ಮ॥ ಎಸ್. ನಾರಾಯಣರಾಯರನ್ನ ಈ ಭಾಗದಲ್ಲಿ ಅಸಿಸ್ಟೆಂಟ್ ಸ್ಪೆಷಲ್ ಸೆಟಲ್ಮೆಂಟ್ ಆಫೀಸರನ್ನಾಗಿ ನೇಮಿಸಿರುತ್ತೆ.

ಈ ಜಮೀನುಗಳ ಮಾಲೀಕರುಗಳು ತಮಗೆ ಸದರಿ ಜಮೀನುಗಳಲ್ಲಿ ಇರುವ ಹಕ್ಕು ಬಾಧ್ಯತೆ ಮೊದಲಾದವುಗಳನ್ನ ರುಜುವಾತು ಮಾಡತಕ್ಕ ಬಾಬ್ತೆ, ಸಾಧಕವಾದ ಜಬಾನಿ ಯಾ ಲಿಖಿತಮೂಲಕವಾದ ದಾಖ್ಲೆಗಳ ಸಹಿತ ತಾವೇ ಖುದ್ದಾಗಿ ಅಥವಾ ತಮ್ಮ ತರಫೀ ಅಧಿಕಾರ ಪಡೆದ ಏಜಂಟ್‌ಮೂಲಕವಾಗಿ ಆಗಲಿ, ಸದರಿ ಅಸಿಸ್ಟೆಂಟ್ ಸ್ಪೆಷಲ್ ಸೆಟಲ್ಮೆಂಟ್ ಆಫೀಸರ ರೂಬರೂ ನಿಯಾಮಕ ಮಾಡಿ ತಿಳಿಸುವಕಾಲಕ್ಕೆ ಸರಿಯಾಗಿ ತನಿಖಿ ಬಗ್ಯೆ ಹಾಜರಾಗಬೇಕು.

ತಪ್ಪಿದರೆ ಮೇಲ್ಕಂಡ ಜನರುಗಳು ತಮ್ಮ ಗೈರ್‌ಹಾಜರಿಯಲ್ಲಿ ಆಗತಕ್ಕ ತೀರ್ಮಾನಕ್ಕೆ ಬದ್ಧರಾಗಿರಬೇಕು. ನಂತರ ಬರುವ ತಕರಾರುಗಳನ್ನು ಅಂಗೀಕರಿಸುವದಿಲ್ಲ ಮತ್ತು ಪುನಃ ಪುನಃ ವಿಚಾರಣೆ ಮಾಡುವದಿಲ್ಲವಾದ್ದು ಖಂಡಿತ ತಿಳಿಯುವದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್ ಮತ್ತು ಸೆಟಲ್‌ಮೆಂಟ್ ಆಫೀಸರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 26ನೇ ಮಾರ್ಚಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1903ನೇ ಜುಲೈ 1ರ ಲಾಗಾಯತು 1904ನೇ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೊಲೀಸ್ ಸ್ಟೇಷನ್ ಬಳಿ ತಾಲ್ಲೂಕು ಅಮಲ್‌ದಾರ್ರಿಂದ 1903ನೇ ಮೇ 26ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2\. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚಿನ ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್‌ದಾರ್ರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3\. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4\. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೀರೆ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5\. ಹರಾಜಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಶೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6\. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರ್ರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	..	..	..	ಪ್ರತ್ಯೇಕ ಹರಾಜುಮಾಡಲ್ಪಡುತ್ತೆ.	
ಗುಡಾರ	..	..	..	ಪ್ರತಿಯೊಂದಕ್ಕೆ	4 ಅಣೆ.
ಎತ್ತಿನ ಗಾಡಿ	..	..	..	,,	2 ,,
ಬಡ್ಡರ ಗಾಡಿ	..	...	..	,,	1 ,,
ಎತ್ತಿನ ಬೋಜಾ	...	...	...	,,	6 ಕಾಸು
ತಲೆ ಬೋಜಾ	...	....	....	,,	3 ಕಾಸು

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 14ನೇ ಮೇ 1903.

1. ಕಂದಾಯದ ಬಾಕೀದಾರನಾದ ಸೂಳೆಕೆರೆ ಗ್ರಾಮದ ಎಸ್ಟೇಟ್ ಪ್ರೊಪ್ರೈಟರ್ ಮ|| ಕೆ. ಶ್ಯಾಮೈಯ್ಯಂಗಾರ್ರಿಂದ ಬರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಚನ್ನಗಿರಿ ತಾಲ್ಲೂಕು ಇದರಡೀ ನಮೂದಾಗುವ ಗ್ರಾಮಗಳಲ್ಲಿ ಸನ್ 1903ನೇ ಇಸವಿ ಜೂನ್ ತಿಂಗಳಲ್ಲಿ ಈ ರೇಬಿನಲ್ಲಿ ನಮೂದಾದ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಸೂಳೆಕೆರೆ	1903ನೇ ಜೂನ್	ತಾ||	18
ದೊಡ್ಡಗಟ್ಟ	,,	,,	20
ಕಬ್ಬಳ	,,	,,	22
ತ್ಯಾವಣಿಗೆ	,,	,,	24
ರಾಮಗೊಂಡನಹಳ್ಳಿ		,,	23

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 1,719—15—7 ರೂಪಾಯಿ ಆಗಿರುತ್ತೆ. ಮತ್ತು ಬಡ್ಡಿ ಕೂಡ ಬರಬೇಕಾದ್ದು.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ

ವಾಯಿದೆಯಲ್ಲಿ ಗವರ್ರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲಿ. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಖಂದಾಯ.			ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಅ. ಪೈ.			ಎ.	ಗು.	ರೂ.	ಅ.	ಪೈ.	ರೂ. ಅ. ಪೈ.
						ಸರ್ವೆ ನಂ.							
ಚನ್ನಗಿರಿ	ನಲ್ಲೂರು	ನಲ್ಕೂರು	ಎಸ್ಸೆ ಹೊ|| ಬಿ|| ಕ. ಬ್ಯಾಡ್ರಪ್ಪಗೌಡರು	..	..	19	ಖುಷ್ಕಿ	18	24	12	0	0	899-11-3
							ಬಾಗಾಯತು	1	3	3	0	0	0- 8-0 ಇಸ್ತಿಹಾರ ಫೀ ಬಡ್ಡಿ ಸಹಾ ಬರಬೇಕು
						20	ಖುಷ್ಕಿ	15	22	11	0	0	
						88	ತರಿ	5	7	25	0	0	
						164	ಬಾಗಾಯತು	6	7	25	0	0	
						169	ತರಿ	5	21	30	0	0	
						85	ಡಿಟೋ	10	35	59	0	0	
						91	ಡಿಟೋ	8	23	38	0	0	
						87	ಡಿಟೋ	9	30	50	0	0	
						92	ಡಿಟೋ	5	18	22	0	0	
						10	ಖುಷ್ಕಿ	10	31	4	8	0	
						11	ಡಿಟೋ	9	2	5	8	0	
						70	ತರಿ	5	30	27	0	0	
						93	ಡಿಟೋ	2	19	11	0	0	
						94	ಡಿಟೋ	6	9	26	0	0	
						95	ಡಿಟೋ	10	31	51	0	0	
							ಖುಷ್ಕಿ	....	8	...	..	..	
						23	ಡಿಟೋ	9	28	4	8	0	
						103	ತರಿ	10	...	54	0	0	
						86	ಡಿಟೋ	9	29	46	0	0	
						12	ಖುಷ್ಕಿ	19	4	6	8	0	
						14	ಡಿಟೋ	12	16	4	8	0	
						17	ಡಿಟೋ	11	21	3	8	0	
						18	ಡಿಟೋ	11	21	4	0	0	
						ಇನಾಮು—							
						51	ಖುಷ್ಕಿ	..	18	0	4	0	
							ತರಿ	4	22	21	12	0	
							ಜೋಡಿ...			4	4	0	
						56-1	ತರಿ	5	9	20	12	0	
						2	ಡಿಟೋ	2	14	9	8	0	
						3	ಖುಷ್ಕಿ	...	12	....	...	...	
							ತರಿ	3	26	14	12	0	
						65	ಡಿಟೋ	3	37	23	0	0	
						73	ಖುಷ್ಕಿ	1	10	1	0	0	
							ತರಿ	1	21	29	0	0	
						ಇನಾಮು—							
						89	ತರಿ	8	34	45	0	0	
							ಜೋಡಿ..			15	0	0	
						ಇನಾಮು—							
						96	ತರಿ	7	6	34	0	0	
							ಜೋಡಿ..			3	4	0	

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಹಿಸ್ಸಾ ನಂಬರು.	ಜಮೀನು. ವ್ಯವಸಾಯ, ತರಿ ಖುಷ್ಕಿ ಬಾಗಾಯತು.	ವಿಸ್ತೀರ್ಣ. ಎ	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
					ರೂ. ಆ. ಪೈ.	ಸರ್ವೆ ನಂ.							ರೂ. ಆ. ಪೈ.
ಚನ್ನಗಿರಿ	ನಲ್ಲೂರು	ಸೂಳೆಕೆರೆ	ಎಸ್ಟೇಟ್ ಪ್ರೊ|| ಮು|| ಕೆ. ಬಾಬಯ್ಯಂಗಾರ್ರವರು			117-1	ತರಿ	3	36	18	8	0	
						2	ಡಿಟೋ	4	16	21	0	0	
						3	ಖುಷ್ಕಿ	1	26	1	8	0	
							ತರಿ	1	2	5	0	0	
						118	ಖುಷ್ಕಿ	7	4	7	0	0	
						123	ಡಿಟೋ	5	20	5	0	0	
						124-1	ತರಿ	3	26	16	4	0	
						2	ಖುಷ್ಕಿ	0	24	0	8	0	
							ತರಿ	3	25	16	4	0	
						125-1	ಡಿಟೋ	3	0	14	8	0	
						2	ಡಿಟೋ	5	5	24	8	0	
						126-1	ಡಿಟೋ	3	21	16	12	0	
						2	ಡಿಟೋ	5	2	24	0	0	
						3	ಡಿಟೋ	3	3	14	4	0	
						156	ಖುಷ್ಕಿ	0	17	0	8	0	
							ತರಿ	4	23	23	8	0	
						168	ಖುಷ್ಕಿ	10	38	5	0	0	
						170	ತರಿ	1	28	12	0	0	
						191	ಡಿಟೋ	3	14	18	0	0	
						192	ಡಿಟೋ	2	24	13	0	0	
						193	ಡಿಟೋ	6	9	22	0	0	
						194	ಡಿಟೋ	2	9	9	8	0	
						197	ಖುಷ್ಕಿ	11	1	3	0	0	
						201	ಡಿಟೋ	1	11	1	0	0	
							ತರಿ	1	36	9	0	0	
		ದೊಡ್ಡಘಟ್ಟ				31	ತರಿ	10	30	13	0	0	162-10-3
						34	ಡಿಟೋ	3	33	5	8	0	0- 8-0 ಇಸ್ತಿಹಾರ ಫೀ
						39	ಡಿಟೋ	15	22	30	0	0	
						40	ಡಿಟೋ	16	20	16	0	0	163- 2-3
						48	ಡಿಟೋ	4	12	8	8	0	ಬಡ್ಡಿ ಸಹ ಬರಬೇಕು.
						49-1	ಡಿಟೋ	7	22	15	0	0	
						2	ಡಿಟೋ	6	30	13	4	0	
						3	ಡಿಟೋ	5	19	11	0	0	
						4	ಡಿಟೋ	4	38	9	12	0	
						59	ಡಿಟೋ	7	6	14	0	0	
								ನೀರಸರ್ಜಿ		4	12	0	
							ಖುಷ್ಕಿ	5	26	3	0	0	
										143	12	0	
		ಕಬ್ಬಳ				3-1	ಖುಷ್ಕಿ	8	5	4	0	0	298-11-4
						2	ಡಿಟೋ	8	18	4	4	0	0- 8-0 ಇಸ್ತಿಹಾರ್ ಫೀ
						22	ತರಿ	6	9	19	0	0	
						24	ಡಿಟೋ	7	0	24	0	0	299- 3-4
						25	ಡಿಟೋ	5	35	20	0	0	ಬಡ್ಡಿ ಸಹ ಬರಬೇಕು.
						27	ಡಿಟೋ	3	22	12	0	0	
						43	ಡಿಟೋ	7	18	21	0	0	

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕ್ರಯ ರೂ.	ಜಮೀನು. ನಂಬರ್ ಅಥವಾ ಬ್ಲಾಕಿನ ಹೆಸರು.	ಜಮೀನು. ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ವಿಸ್ತೀರ್ಣ. ಗು.	ತೀರ್ವೆ. ರೂ.	ತೀರ್ವೆ. ಆ.	ತೀರ್ವೆ. ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.	ಸರ್ವೆ ನಂ.							ರೂ. ಆ. ಪೈ.
ಚನ್ನಗಿರಿ	ನಲ್ಲೂರು	ಕವಲಿ*	ಶ್ರೀ ಶ್ರೀ|| ರಾ|| ಕ. ಬಾವಯ್ಯಂಗಾರ್ರವರು			44	ತರಿ	6	31	20	0	0	
						45	ಡಿಟೋ	8	13	24	0	0	
						49	ಡಿಟೋ	2	19	7	0	0	
						56	ಡಿಟೋ	6	26	25	0	0	
						57	ಡಿಟೋ	6	18	22	0	0	
						59	ಡಿಟೋ	4	27	18	8	0	
						ಇನಾಂ—	ಡಿಟೋ	0	26	0	8	0	
						52	ಡಿಟೋ	4	10	12	0	0	
								ಜೋಡಿ		5	4	0	
										233	4	0	
		ರಾಮನಗೊಂಡನ ಹಳ್ಳಿ				25	ತರಿ	3	28	10	0	0	53— 7—0
						27	ಡಿಟೋ	5	6	13	0	0	0— 8—0 ಇಸ್ತಿಹಾರ್ ಫೀ
						31	ಡಿಟೋ	10	37	32	0	0	53—15—0
										55	0	0	ಬಡ್ಡಿ ಸಹ ಬರಬೇಕು.
		ತ್ಯಾವಣಿಗೆ				209	ಖುಷ್ಕಿ	4	28	38	0	0	250—15—9
						258	ತರಿ	10	0	40	0	0	0— 8—0 ಇಸ್ತಿಹಾರ್ ಫೀ
						218	ಬಾಗಾಯತು	1	38	23	0	0	251— 7—9
						190	ಡಿಟೋ	1	25	23	0	0	ಬಡ್ಡಿ ಸಹ ಬರಬೇಕು.
						159	ಖುಷ್ಕಿ	14	33	17	0	0	
						263	ತರಿ	14	35	56	0	0	
		ಕವಲಿ*				23	ತರಿ	9	28	33	0	0	51—8—0
						28	ಡಿಟೋ	2	20	8	8	0	0—8—0 ಇಸ್ತಿಹಾರ್ ಫೀ
													52—0—0
													ಬಡ್ಡಿ ಸಹ ಬರಬೇಕು.

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 310.

ಅರ್ಜೀದಾರು ಶ್ರೀರಂಗಪಟ್ಣದಲ್ಲಿರುವ ಶಲ್ಲಮ್ಮ ಮೈನರ್ ಗಾರ್ಡಿಯನ್ ತಂದೆ ಚಿತ್ರದುರ್ಗದ ತಾಲ್ಲೂಕು ಶಿರಸ್ತೆದಾರು ಕೃಷ್ಣಯ್ಯಂಗಾರು, ಮೈನರಾದ ಶ್ರೀರಂಗಪಟ್ಣ ಸ್ಥಳದ ಕರೀಗಟ್ಟದ ವೆಂಕಟಾಚಾರ್ರ ಹೆಂಡತಿ ಶಲ್ಲಮ್ಮನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಶಲ್ಲಮ್ಮನವರಿಗೆ ತಂದೆ ಆಗಬೇಕೆಂಬ ಹಕಿ ನಮೇಲೆ ಹಾಲಿ ಶ್ರೀರಂಗಪಟ್ಣ ಸ್ಥಳದ ಕೃಷ್ಣಯ್ಯಂಗಾರ್ಯ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1903ನೇ ಇಸವಿ ಜೂನ್ 12ನೇ ತಾರೀಖಿನಲ್ಲಿ ಮೊಕರರ್ ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸರ್ 1903ನೇ ಇಸವಿ ಏಪ್ರೆಲ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತಿನೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 261.

ಮೃತಪಟ್ಟ ವೆಂಕಟಲಕ್ಷ್ಮಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹೊಳೇನರಸೀಪುರದಲ್ಲಿರುವ ರಂಗಣ್ಣನವರ ಹೆಂಡತಿ ಸಾವಿತ್ರಮ್ಮ, ಮೃತಪಟ್ಟ ಸದರೀ ವೆಂಕಟಲಕ್ಷ್ಮಮ್ಮನವರಿಗೆ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಳೇನರಸೀಪುರದ ಸ್ಥಳದ ಸಾವಿತ್ರಮ್ಮನವರು ಸದರಿ ವಾಸಸ್ಥರಾಗಿ ಮೃತಪಟ್ಟ ವೆಂಕಟಲಕ್ಷ್ಮಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಾವಿತ್ರಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಮೇ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆಕಾಲದಲ್ಲಿ ಸದರಿ ಮೃತಪಟ್ಟ ವೆಂಕಟಲಕ್ಷ್ಮಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಏಪ್ರೆಲ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 284.

ಅರ್ಜೀದಾರು ಮೈಸೂರು ಕೃಷ್ಣರಾಜ ಮೊಹಲ್ಲಾ ಹಳೇ ಅಗ್ರಹಾರದಲ್ಲಿರುವ ಕಡ್ಲೆ ಅಂಗಡಿ ವೆಂಕಟರಮಣ್ಯೈಯ್ಯನ ಮಗ ಗಿರಿಯ, ಇವನು ಹುಚ್ಚ, ಇವನ ಗಾರ್ಡಿಯನ್ ಹೆಂಡತಿ ಮಾಲಮ್ಮ, ಹುಚ್ಚನಾದ ಮೈಸೂರು ಸ್ಥಳದ ವೆಂಕಟರಮಣ್ಯೈಯ್ಯನ ಮಗ ಗಿರಿಯನ ಆಸ್ತೀ ವಿಷಯದಲ್ಲಿ —

ಸದರೀ ಹುಚ್ಚನಾದ ಗಿರಿಯನಿಗೆ ಹೆಂಡತಿ ಆಗಬೇಕೆಂಬ ಹಕ್ಕಿನಮೇಲೆ ಮೈಸೂರು ಸ್ಥಳದ ಮಾಲಮ್ಮನ್ನು ಸದರೀ ಹುಚ್ಚನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೇ ಇಸವಿ ಮೇ ತಾರೀಖು 29ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡಲಾಗಿದೆ.

ಸರ್ 1903ನೇ ಇಸವಿ ಏಪ್ರೆಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ವಿ|| ಅರ್ಜೀ ನಂಬರ 364.

ಅರ್ಜೀದಾರು ಮೈಸೂರು ಚಾಮರಾಜಪೇಟೆಯಲ್ಲಿ ದಿವಾನರ ರಸ್ತೆಯಲ್ಲಿ ವಾಸವಾಗಿರುವ ಗೋಪಾಲಾಚಾರು, ಮೈನರಾದ ಮೈಸೂರು ಸ್ಥಳದ ಧೊರಸಾಮಿ ಶ್ರೀನಿವಾಸೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ —

ಸದರೀ ಮೈನರಾದ ಧೊರಸಾಮಿ ಶ್ರೀನಿವಾಸೈಯ್ಯಂಗಾರ್ರಿಗೆ ಸೋದರಮಾವನು ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ಗೋಪಾಲಾಚಾರ್ರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜೀ ಹಿಯರಿಂಗ್ ಬಗ್ಯೆ ಸರ್ 1903ನೇ ಇಸವಿ ಜೂನ್ ತಾರೀಖು 19ರಲ್ಲು ಮೊಕರರು ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸರ್ 1903ನೇ ಇಸವಿ ಏಪ್ರೆಲ್ ತಿಂಗಳು 13ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 27ನೇ ಮಾಹೆ ಏಪ್ರೆಲ್ 1903.

ಸರ್ 1903ನೇ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲ್ ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು, ವಗ್ಯೆರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ 49 ಮತ್ತು 51ನೇ ಸೆಕ್ಷನ್‌ಗಳಲ್ಲಿ ನಮೂದಿರುವ ಷರತ್ತುಗಳಿಗೆ ವಳಪಡಿಸಿ ಟೋಲ್ ಅಥವಾ ಸುಂಕವನ್ನು ವಸೂಲ್ಮಾಡುವ ಬಾಬನ್ನು 1903ನೇ ಇಸವಿ ಮೇ ಮಾಹೆ ತಾರೀಖು 16ನೇ ಮಧ್ಯಾನ್ನ 1 ಘಂಟೆಯ ಲಾಗಾಯಿತು ರಂಗಾಚಾರ್ಲುಯವರ ಮೆಮೋರಿಯಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫೀಸರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ಒಳಕ್ಕೆ ಬರುವ ಗಾಡಿ ವಗ್ಯೆರೆಗಳ ಮೇಲೆ ಸುಂಕ ವಸೂಲ್ಮಾಡಬೇಕು. ಹೆಚ್ಚು ರೇಟನ್ನು ವಸೂಲ್ಮಾಡಕೂಡದು. ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲ್ ಮಾಹೆ ತಾರೀಖು ನಿಶಿ ಟೋಲು ಪಾವತಿ ಮಾಡತಕ್ಕ ಆಸಾಮಿಗಳಿಗೆ ರಶೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೇ ತಾರೀಖು ವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ಪಾವತಿ ಮಾಡಬೇಕು. ಹರಾಜು ಆಖೈರಾದ ಕೂಡಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟುದಾರನು ಎರಡು ಮಾಹೆಗಳ ಖಿಸ್ತಿಗೆ ಸಮವಾದ ಮೊಬಲಗನ್ನು ಡಿಪಾಜಟ್ ಬಗ್ಯೆ ಹಾಜರ್ಮಾಡಬೇಕು. ಷರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಯೆ ಜಮೆಗೆ ತೆಗೆದುಕೊಳ್ಳುತ್ತೆ.

5. ಹರಾಜು ಆಖೈರಾದಕೂಡಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್‌ಮಾಡದೇ ಇದ್ದರೆ, ಖರ್ಚಿಗೂ ಮತ್ತು ಲುಕ್ಸಾನಿಗೂ ಅವ್ವಲ್ ಕಂಟ್ರ್ಯಾಕ್ಟುದಾರನನ್ನು ಗುರಿಪಡಿಸಿ ಪುನಹಾ ಹರಾಜು ಮಾಡಿಸುತ್ತೆ. ಬಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್‌ಮಾಡಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗೆದುಕೊಂಡು, ಬಾಬನ್ನು ದುಸರಾ ಹರಾಜು ಮಾಡಿಸಿ, ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತುದಾರನನ್ನು ಗುರಿಪಡಿಸುತ್ತೆ. ಎರಡನೇ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ಕಂಟ್ರ್ಯಾಕ್ಟುದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರ್ಯಾಕ್ಟುದಾರನು ರೋಜೀನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶ ಮಾಡುವ ತರಹಾವಾರಿ ಗಾಡಿ ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪ್ರೆಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು ಅಂಥಾ ಲೆಖ್ಖವನ್ನು ಕಂಟ್ರ್ಯಾಕ್ಟರು ಪ್ರತಿ ಮಾಹೆಯಲ್ಲಿಯು ಪ್ರೆಸಿಡೆಂಟರವರ ಇನ್ಸ್‌ಪೆಕ್ಷನ್ ಬಗ್ಗೆ ಹಾಜರ್‌ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್‌ಸ್ಪೆಕ್ಷನ್ ಬಗ್ಗೆ ಹಾಜರ್‌ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರ್ಯಾಕ್ಟುದಾರನು ಟೋಲುಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೇ ಕಲಂನಲ್ಲಿ ನಮೂದಿಸಿರುವಂತೆ ಇಡತಕ್ಕ ಬಗ್ಗೆ ಆಯಾಯ ಕಂಟ್ರ್ಯಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿ ಒಂದು ಟೋಲುಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲು ಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರ್ಯಾಕ್ಟರು ಒಳ್ಳೇ ಸ್ಥಿತಿಯಲ್ಲಿಟ್ಟುಕೊಂಡು ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಕಂಟ್ರ್ಯಾಕ್ಟು ಬಾಬನ್ನು ಸಲೀಸು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಪ್ರತಿ ಒಬ್ಬ ಕಂಟ್ರ್ಯಾಕ್ಟುದಾರನು ಪ್ರೆಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಛಾಪಾಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದುಕೊಡಬೇಕು.

10. ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರ್ಯಾಕ್ಟುದಾರನು ಟೋಲ್‌ಯಾನೆ ಸುಂಕವನ್ನು ವಸೂಲ್ ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಪಾವತಿ ಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು, ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್‌ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ನ್‌ಮೆಂಟ್ ಯಾ ಮ್ಯುನಿಸಿಪಲ್ ಕಮಿಷನರ್‌ಗೆ ಸೇರಿದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ನೊಕರರ್ಮಾಡಲ್ಪಟ್ಟ ಕ್ಯಾರೇಜುಗಳು ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆಯ ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜು ಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, ಒಂದು ಸಾಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟರಿ ಅಥವಾ ಗವರ್ನ್‌ಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಾನುಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೋಲೀಸು ಆಫೀಸರರು ನೌಕರಮಾನೇರು ಅವರ ಕ್ಯಾರೇಜುಗಳು, ಗಾಡಿಗಳು, ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳ ಮೇಲೆ ಸಹಾ.

ನಂಬರು	ಷೆಡ್ಯೂಲ್ A.	
1	ರೈಲ್ವೆ ಸ್ಟೇಷನ್ ರಸ್ತೆ	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ.
2	ಬಳಗುಳದ ರಸ್ತೆ	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ	ಎರೆಕಟ್ಟೆ ಉಕ್ಕಡ
4	ಬಂಗಳೂರು ರಸ್ತೆ	ವೀರನಗೆರೆ ಉಕ್ಕಡ
5	ಸೆಮಿಟೆರಿ ರಸ್ತೆ	ಬಂಗ್ಲಿ ಸಂತ್ರಿ ಉಕ್ಕಡ
6	ಮಹದೇವಪುರದ ರಸ್ತೆ	ಜಲಪುರಿ ಉಕ್ಕಡ
7	ಆಲನಹಳ್ಳಿ ರಸ್ತೆ	ಇಟ್ಟಿಗೆ ಗೂಡು ಉಕ್ಕಡ
8	ರೇಸುಕೋರ್ಸು ರಸ್ತೆ	ರೋಣಸಂತ್ರಿ ಉಕ್ಕಡ
9	ನಂಜನಗೂಡು ರಸ್ತೆ	ನಂಜನಗೂಡು ಉಕ್ಕಡ
10	ಡಿಟ್ಟೋ	ಹಾಲಿ ಉಕ್ಕಡದಬಳಿ ವಿಧಾಯಕ ಮಾಡುವಂತೆ ನಾಚನಹಳ್ಳಿ ಉಕ್ಕಡ.
11	ಮಾನಂದವಾಡಿ ರಸ್ತೆ	ಚಟ್ಟನಹಳ್ಳಿ ಉಕ್ಕಡ
12	ವೈಸರಾಯಿ ರಸ್ತೆ	ಹೊಲಗೇರಿ ಉಕ್ಕಡ
13	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ	ಡಿಟ್ಟೋ
14	ಜ್ಯಾಬಿಲಿ ರಸ್ತೆ	ಕುಕ್ಕನಹಳ್ಳಿ ಉಕ್ಕಡ
15	ಇಲವಾಲದ ರಸ್ತೆ	ಮುನಿಸಿಪಲ್ ಸರಹದ್ದು ಖೈದಾಗುವ ಬಳಿ ಹಾಲಿ ಈ ರಸ್ತೆಯ ಪಕ್ಕದಲ್ಲಿ ವಿಧಾಯಕ ಮಾಡಿರುವ ಉಕ್ಕಡ.

ನಂಬರು.	ಷೆಡ್ಯೂಲ್ B.	ರೂ.	ಆ.	ಪೈ.
	ಟೋಲ್ ಗೇಟಿನಲ್ಲಿ ವಸೂಲ್ ಮಾಡತಕ್ಕ ದರಗಳ ತಪಶೀಲು.			
1	ಸ್ಪ್ರಿಂಗು ಇರತಕ್ಕ ಪ್ರತಿ ಒಂದು ನಾಲ್ಕು ಚಕ್ರದ ಕ್ಯಾರೇಜಿಗೆ ..	0	4	0
2	ಡಿಟ್ಟೋ 2 ಚಕ್ರದ ಕ್ಯಾರೇಜಿಗೆ	0	2	0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು, ಇವುಗಳಿಂದ ಎಳೆಯಲ್ಪಟ್ಟ ಭರ್ತಿ ಗಾಡಿಗಳು ಅಥವಾ ಹ್ಯಾಕ್ನಿಗಾಡಿ 1ಕ್ಕೆ.	0	2	0
4	ಡಿಟ್ಟೋ ಖಾಲಿ ಇರತಕ್ಕ ಪ್ರತಿಒಂದು ಗಾಡಿಗೆ	0	1	0
5	ಡಿಟ್ಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ...	0	0	6
6	ಡಿಟ್ಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲು ಮೀರಿದ ಕುದುರೆ 1ಕ್ಕೆ.	0	1	0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ ..	0	0	6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದುರೆ 1ಕ್ಕೆ.	0	0	6
9	ಡಿಟ್ಟೋ ಆನೆ 1ಕ್ಕೆ	0	8	0
10	ಡಿಟ್ಟೋ ಒಂಟೆ 1ಕ್ಕೆ	0	1	0

ಕೆ. ಶ್ರೀನಿವಾಸರಾವ್,
ಛಾರ್ ಪ್ರೆಸಿಡೆಂಟ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೇ ಮೇ 1903.

ಸ್ 1903ನೇ ಇಸವಿ ಜುಲೈ 1ರ ಲಾಗಾಯತು ಸ್ 1904ನೇ ಇಸವಿ ಜೂನ್ 30ರ ವರಿವಿಗೆ, ಆ ಎರಡು ದಿವಸಗಳೂ ಸೇರಿ, 12 ತಿಂಗಳತನಕ, ಬೆಂಗಳೂರು ಸೆಂಟ್ರಲ್ ಜೈಲಿನ ಖೈದಿಗಳ ಉಪಯೋಗಕ್ಕಾಗಿ ಈ ಕೆಳಗೆ ನಮೂದಿಸುವ ಸರಕುಗಳನ್ನು ಸರಬರಾಯಿ ಮಾಡಲು ಕಂಟ್ರಾಕ್ಟು ತೆಗದುಕೊಳ್ಳುವದಕ್ಕಾಗಿ, ಕವರಿನಲ್ಲಿ ಹಾಕಿ ಮೊಹರು ಮಾಡಿದ ದರಖಾಸ್ತುಗಳನ್ನು ಸ್ 1903ನೇ ಇಸವಿ ಜೂನ್ 19ನೇ ಶುಕ್ರವಾರ ಹಗಲು 10 ಘಂಟೆಯ ವರಿಗೆ, ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರು ತೆಗದುಕೊಳ್ಳುವರೆಂದು ಇದರಿಂದ ಘಾಯಿಷ್ ಮಾಡಿಥೆ.

2. ಮೇಲೆ ಕಂಡ ತಾರೀಖಾದ ತರುವಾಯ ದರಖಾಸ್ತುಗಳನ್ನು ಹಿಡಿಯುವದಿಲ್ಲ.

3. ದರಖಾಸ್ತು ಕವರಿನ ಮೇಲ್‌ಭಾಗದಲ್ಲಿ ಬರೆದಿರಬೇಕಾದ ಮೇಲ್ವಿಳಾಸವೇನಂದರೆ,—

"I. ಕುರೀ ಮಾಂಸದ ಸರಬರಾಯಿ ದರಖಾಸ್ತು"

"II. ಸವದೆ ಸರಬರಾಯಿ ದರಖಾಸ್ತು"

4. ಕುರೀ ಮಾಂಸದ ಸರಬರಾಯಿಗೆ 75 ರೂಪಾಯಿ, ಸವದೇ ಸರಬರಾಯಿಗೆ 50 ರೂಪಾಯಿ, ಈ ಮೇರೆ ನಗದಾಗಿಯಾಗಲಿ ಕರೆನ್ಸೀ ನೋಟಿನ ಮೂಲಕವಾಗಿಯಾಗಲಿ ಠೇವಣಾತಿಯನ್ನು ದರಖಾಸ್ತಿನ ಸಂಗಡ ಹಾಜರ್ಮಾಡಿದ ಹೊರತು, ದರಖಾಸ್ತುಗಳನ್ನು ಹಿಡಿಯುವದಿಲ್ಲ.

5. ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮೇಲೆ ನಮೂದಾದ ತಾರೀಖಿನಲ್ಲಿ ಆ ಕಾಲದೊಳು ಹಾಜರಿರುವುದಕ್ಕೆ ಇಷ್ಟವುಳ್ಳಂಥಾ ದರಖಾಸ್ತುದಾರರ ರೂಬರೂ ಸದರೀ ದರಖಾಸ್ತುಗಳನ್ನು ತಮ್ಮ ಆಫೀಸಿನಲ್ಲಿ ಒಡೆಯುವರು.

6. ಈ ಕೆಳಗೆ ನಮೂದಿಸುವ ಪದಾರ್ಥಗಳನ್ನು ಒಂದು ರೂಪಾಯಿಗೆ ಇಷ್ಟುಪೌಂಡು ತೂಕದ ಮೇರೆ ಸರಬರಾಯಿ ಮಾಡಲಾದೀತೆಂದು ಎಲ್ಲಾ ದರಖಾಸ್ತುಗಳಲ್ಲಿಯೂ ದರವು ನಮೂದಾಗಿರತಕ್ಕದ್ದು. ಮತ್ತು ಸರಬರಾಯಿ ಮಾಡತಕ್ಕ ಪದಾರ್ಥಗಳೆಲ್ಲಾ ಒಳ್ಳೇದಾಗಿಯೂ ಸೂಪರಿಂಟೆಂಡೆಂಟರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಸಂವತ್ಸರದ ಅಂದಾಜಾ ಖರ್ಚು.

I. ಮೂಳೆ ಇಲ್ಲದ ಮಾಂಸ—20,000 ಪೌಂಡುಗಳು.

II. ಒಣಗಿದ ಸವದೆ—ಖೈದಿಗಳ ಕೈಲಿ ಕಡಿಸತಕ್ಕದ್ದು, ತುಂಡುಗಳ ಪ್ರಮಾಣ ಒಂದು ಮಳ ಪುದ್ದವೂ 1½ ಲಾಗಾಯತು 3 ಇಂಚು ಘಾತ್ರವಾಗಿಯೂ ಇರತಕ್ಕದ್ದು 300,000 ಪೌಂಡುಗಳು.

ಪದಾರ್ಥಗಳು ಮೇಲೆ ಕಂಡ ಪರಿಮಾಣದ ಮೇಲೆ ಇಷ್ಟಿಷ್ಟೆ ಆಗಬೇಕೆಂಬ ಖಾತರಿ ಯಾವದೂ ದೊರೆಯುವುದಿಲ್ಲ.

7. ಸೂಪರಿಂಟೆಂಡೆಂಟರವರು ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ಕೊಡದೆ ತಿರಸ್ಕರಿಸುವ ಹಕ್ಕನ್ನು ವುಳಿಸಿಕೊಂಡಿಧಾರೆ.

8. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾಗಿಥೆ ಯೆಂಬು ಅವರಿಗೆ ತಿಳಿಯಪಡಿಸಿದ ಒಂದು ವಾರದೊಳ

ಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವಾ ಕುರೀ ಮಾಂಸಕ್ಕೆ 150 ರೂಪಾಯಿ, ಸವೆಗೆ 100 ರೂಪಾಯಿ, ಈ ಮೇರ ನಗದಾಗಿಯಾಗಲಿ ಸರ್ಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ ಮೇಲೆ ಕಂಡ ಠೇವಣೀ ಮೊಬಲಗು ಸಿವಾಯಿ ಜಮೆಯಾಗಿ ತೆಗದುಕೊಳ್ಳಲಾದೀತು.

9. ಕಂಟ್ರಾಕ್ಟರು ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಪ್ರತಿ ತಿಂಗಳ ಗುರ್ರೆ ತಾರೀಖಾದ ತರುವಾಯ ಸಾಧ್ಯವಾದ ಮಟ್ಟಿಗೂ ಜಾಗ್ರತೆಯಲ್ಲಿ ಪಾವತಿ ಮಾಡುವರು.

10. ಸ್ಟೋರ ರೂಂ ಎಂಬ ಒಂದು ಉಗ್ರಾಣವನ್ನು ಸದರೀ ಇಜಾರೇದಾರರ ವಶಕ್ಕೆ ಕೊಡಲಾದೀತು; ಆತನು ಅದನ್ನು ಸವುದೆಯನ್ನು ಇಟ್ಟುಕೊಳ್ಳತಕ್ಕದ್ದು. ಮತ್ತು ಅದರಲ್ಲಿ ಯಾವಾಗ್ಯೂ ಒಂದು ತಿಂಗಳಿಗೆ ಕಡಮೆ ಇಲ್ಲದಂತೆ ಸರಬರಾಯಿಯನ್ನು ಇಟ್ಟಿರಬೇಕು. ಕುರೀ ಮಾಂಸವು ಪ್ರತಿ ದಿನವೂ ಬೆಳಿಗ್ಗೆ 7 ಘಂಟೆ ಒಳಗಾಗಿ ಜೈಲಿನಲ್ಲಿ ಸಿದ್ಧಪಡಿಸತಕ್ಕದ್ದು.

11. ಈ ಕಂಟ್ರಾಕ್ಟನ್ನು ಷಿಕ್ಮಿ ಇಜಾರೆಯಾಗಿ ಕೊಡಕೂಡದು.

12. ಕಂಟ್ರಾಕ್ಟು ಷರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ಮುನಾಸಬು ಅರಿತು 50 ರೂಪಾಯಿಗಳಿಗೆ ಹೆಚ್ಚದೆ ಜುರ್ಮಾನೆಯನ್ನು ವಸೂಲ್ಮಾಡಬಹುದು; ಪದೇ ಪದೇ ಕರಾರಿಗೆ ತಪ್ಪಿಹೋದರ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರ್ಕಾರಕ್ಕೆ ಮುಟ್ಟುಗೋಳಾಗಿ ತೆಗೆದುಕೊಳ್ಳಬಹುದು.

13. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂಗತಿಗಳಲ್ಲೆಲ್ಲಾ ಸದರೀ ಸೆಂಟ್ರಲ್‌ಜೈಲ್ ಸೂಪರಿಂಟೇಡೆಂಟರ ಫೈಸಲೇ ಆಖೈರಿ ಫೈಸಲಾಗಿರತಕ್ಕದ್ದು.

14. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರಿಂಟೇಡೆಂಟರ ಆಫೀಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

15. ಈ ಕಂಟ್ರಾಕ್ಟುಗಳು ಮೈಸೂರ ಜೈಲ್ ಇನ್ಸ್‌ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟು ಇರುವವು.

16. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡಿಯಲು ಇಷ್ಟ ಪಡದಿದ್ದರೆ ಒಂದು ತಿಂಗಳಿಗೆ ಮುಂಚಿತವಾಗಿಯೇ ನೋಟೀಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರ್ಕಾರಕ್ಕೆ ಬಿಟ್ಟುಬಿಡಬೇಕು.

17. ಇಜಾರೆದಾರರು ತಪ್ಪಿಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನೂ ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನೂ ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತಿ ಮಾಡಿ ಕೊಡಬೇಕು. ವಿಚಾರ ನೋಲೆ ನಮೂದಾದ ಕಂಟ್ರಾಕ್ಟುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯಿತಿಯೂ ದೊರೆಯಲಾರದು.

ಜೆ. ಹ್ಯೂಂ ರೈಟ್,
ಸೂಪರಿಂಟೆಂಡೆಂಟ್.

ಮೈಸೂರ್ ಜೈಲ್.

ತಾರೀಖು 11ನೇ ಮೇ 1903ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಮೈಸೂರು ಜೈಲಿನಲ್ಲಿ ಖೈದು ಮಾಡಲ್ಪಟ್ಟು ಇರುವ ಖೈದಿಗಳ ಉಪಯೋಗದ ಬಗ್ಯೆ ಸರ್ 1903ನೇ ಇಸವಿ ಜುಲೈ ಗುರ್ರ ಲಾಗಾಯತು 1904ನೇ ಇಸವಿ ಜೂನ್ 30ನೇ ತಾರೀಖಿನ ವರಿಗೂ (ಆ ಎರಡು ದಿನಗಳೂ ಸೇರಿ) ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟುಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು ಮೈಸೂರ ಜೈಲ್ ಸೂಪರಿಂಟೆಂಡೆಂಟರವರಿಂದ, ಸರ್ 1903ನೇ ಇಸವಿ ಜೂನ್ 10ನೇ ಬುಧವಾರ ಹಗಲು 9 ಘಂಟೆವರಿಗೆ ತೆಗೆದುಕೊಳ್ಳಲ್ಪಡುವದು:—

(2) ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದಿಲ್ಲಾ.

(3) ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ವಿಳಾಸ ಬರದು ಇರತಕ್ಕದ್ದು.

1ನೇ ಧಾನ್ಯ ಮತ್ತು ಚಿಲ್ಲರೆ ಸಾಮಾನುಗಳಿಗೆ	...	..	ದರಖಾಸ್ತು
2ನೇ ಮಾಂಸಕ್ಕೆ	...	...	ದರಖಾಸ್ತು
ಧಾನ್ಯ ಮತ್ತು ಇತರ ಚಿಲ್ಲರೆ ಸಾಮಾನುಗಳಿಗೆ	..	..	400 ರೂಪಾಯಿ
ಮಾಂಸಕ್ಕೆ ..	...	...	100 ರೂಪಾಯಿ.

(4) ಈ ಮೇಗೆ ನಗದಾಗಲಿ, ಕರೆನ್ಸಿ ನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಮತ್ತು ಅಕ್ಕಿ, ರಾಗಿ, ತೊಗರಿಬೇಳೆ ಈ ಮೂರು ದಿನಸುಗಳ ಸ್ಯಾಂಪಲ್ ಅಂದರೆ, ಮಾದರಿ ಇಲ್ಲದೆ ಬರುವ ದಾರಖಾಸ್ತುಗಳು ಸಹ ಅಂಗೀಕರಿಸಲ್ಪಡುವದಿಲ್ಲ.

(5) ದರಖಾಸ್ತುಗಳು ಮೈಸೂರು ಜೈಲ್ ಸೂಪರಿಂಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖಿನಲ್ಲಿ ಖುಲ್ಲಾ ಮಾಡಲ್ಪಡುವವು.

(6) ದರಖಾಸ್ತುಗಳೆಲ್ಲ ಕೆಳಗೆ ವಿವರಿಸುವ ಸರಬರಾಯಿ ಆಗುವ ಜಿನಸಿಗಳ ದರ ರೂಪಾಯಿ ಒಂದಕ್ಕೆ ಇಷ್ಟು ಪೌಂಡು ಯಂತೆ ನಮೂದಾಗಬೇಕು, ಮತ್ತು ಜಿನಸಿಗಳು ಒಳ್ಳೇದಾಗಿರಬೇಕು.

ಒಂದು ವರುಷಕ್ಕೆ ಬೇಕಾದ ಜಿನಸಿಗಳ ಪಟ್ಟಿ.

1ನೇ ಧಾನ್ಯ ಮತ್ತು ಇತರ ಚಿಲ್ಲರೆ ಸಾಮಾನುಗಳು.

	ಸುಮಾರು ಎಷ್ಟು ಪೌಂಡು ಬೇಕಾದ್ದು.		ಸುಮಾರು ಎಷ್ಟು ಪೌಂಡು ಬೇಕಾದ್ದು.
ಅಕ್ಕಿ (ಕುಸಲಕ್ಕಿ ಮತ್ತು ಬೆಣತಕ್ಕಿ)....	30,000	ತುಪ್ಪ (ಅವಲ್ ಥರಹ) ..	800
ರಾಗಿ (ಅವಲ್ ಥರಹಾ) ...	1,30,000	ವಳ್ಳೆಂಣೆ	1,340
ತೊಗರಿಬೇಳೆ ಡಿಟೋ ..	10,000	ತರಕಾರಿ	40,000
ಅವರೆಬೇಳೆ ಡಿಟೋ ...	8,000	ಒಣಗಿದ ಸೌದೆ	2,00,000
ಖಾರದ ಸಾಮಾನು ಯಾ ಪುಡಿ (ಮೆಣಸಿನ ಪುಡಿ)	2,400	ಸಕ್ರೆ	400
ಉಪ್ಪು	4,000	ರವೆ	500
ಈರುಳ್ಳಿ	4,000	ರೊಟ್ಟಿ	200
ಬೆಳ್ಳುಳ್ಳಿ	400	ಹಾಲು	3,600
ಹುಣಸೆಹಂಣು	4,000	ಮೊಸರು	8,400

2ನೇ ಮಾಂಸ.

ಮೂಳೆ ಇಲ್ಲದ ಮಾಂಸ ... 8,400 ಪೌಂಡು.

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗೆದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

(7) ಕಂಟ್ರಾಕ್ಟುದಾರನು ಖೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಖೈದಿಗಳಿಗೆ ಕೊಡಲ್ಪಡುವದು, ಹಾಗೆ ಸರಬರಾಯಿ ಮಾಡಲ್ಪಟ್ಟಂಥಾ ಹಿಟ್ಟಿನ ಮೊತ್ತಕ್ಕೆ ರಾಗಿ ಬಗ್ಯೆ ದಾಖಲಾಗಿ ಇರುವ ದರದಂತೆ ಖರೀದಿ ಕೊಡೋಣಾದೀತು.

(8) ಸೂಪರ್ರಿಟೆಂಡೆಂಟರವರು ಅತ್ಯಂತ ಕಮ್ಮಿ ದರದ ಅಥವಾ ಇತರ ದರಖಾಸ್ತನ್ನು ಒಪ್ಪಿಕೊಳ್ಳುವದಕ್ಕೆ ಕಾರಣ ಹೇಳಲು ಬದ್ಧರಾಗಿರುವದಿಲ್ಲ.

(9) ಮಂಜೂರಾದ ದರಖಾಸ್ತುದಾರರ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ಲಾಗಾಯತು ಒಂದು ವಾರದೊಳಗೆ ಅವರು ಸೂಪರ್ರಿಟೆಂಡೆಂಟರವರ ಆಫೀಸಿನಲ್ಲಿ ತೋರಿಸುವ ನಮ್ಮೂನೆ ಮೇರೆ ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವದಕ್ಕೆ ತಪ್ಪಿದರೆ ಆಗಲಿ ಅಥವಾ ನಗದಾಗಲಿ ಗವರ್ನ್‌ಮೆಂಟ್ ಬಾಂಡ್‌ಮೂಲಕ ಆಗಲಿ ಜಾಮೀನ್ ಕೊಡುವದಕ್ಕೆ ಅಂದರೆ,—

ಧಾನ್ಯಕ್ಕೆ ಮತ್ತು ಇತರ ಚಿಲ್ಲರೆ ಸಾಮಾನುಗಳಿಗೆ ... .. 400 ರೂಪಾಯಿ.
ಮಾಂಸಕ್ಕೆ .. .. 100 ರೂಪಾಯಿ.

ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುವದು.

(10) ಒಂದು ತಿಂಗಳಲ್ಲಿ ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನುಗಳ ಕಿಂಮತ್ತು ಮಾರನೇ ತಿಂಗಳ ಹತ್ತನೇ ತಾರೀಖಿನ ಒಳಗಾಗಿ ತಕ್ಕ ಪಟ್ಟಿಗೂ ಜಾಗ್ರತೆಯಾಗಿ ಕಂಟ್ರಾಕ್ಟುದಾರರಿಗೆ ಮೈಸೂರು ಜೈಲ್ ಸೂಪರ್ರಿಟೆಂಡೆಂಟ್ ಸಾಹೇಬರವರಿಂದ ಪಾವತಿ ಮಾಡಲ್ಪಡುವದು.

(11) ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವವು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನು ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲು ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ, ತರಕಾರಿ ಮುಂತಾದ್ದು ಪ್ರತಿದಿನವು ಬೆಳಿಗ್ಯೆ 7 ಘಂಟೆಗೆ ಸರಿಯಾಗಿ ಜೈಲ್‌ನಲ್ಲಿ ಹಾಜರ್‌ಮಾಡಬೇಕು.

(12) ಈ ಕಂಟ್ರಾಕ್ಟನ್ನು ಒಳಗುತ್ತಿಗೆಯಾಗಿ ಕೊಡಬಾರದು.

(13) ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಮತ್ತು ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ, ಮೈಸೂರು ಜೈಲ್ ಸೂಪರ್ರಿಟೆಂಡೆಂಟರವರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದ ಜುಲ್ಮಾನೆ ಹಾಕುವರು. ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದುಮಾಡಿ ಠೇವಣಾತಿ ಮೊಬಲಗು ಸರಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

(14) ಮುಚ್ಚಳಿಕೆ ಷರತ್ತಿಗೆ ನಡೆದ ಎಲ್ಲಾ ಪ್ರಮೆಯಗಳಲ್ಲೂ ಮೈಸೂರು ಜೈಲ್ ಸೂಪರ್ರಿಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

(15) ಜೈಲ್ ತೋಟದಲ್ಲಿ ಬೆಳೆಯತಕ್ಕ ತರಕಾರಿಯನ್ನು ಖೈದಿಗಳ ಉಪಯೋಗಕ್ಕಾಗಿ ಕೊಂಡುಕೊಳ್ಳಬೇಕೆಂತ ಅಪೇಕ್ಷಿಸಿದ ಪಕ್ಷದಲ್ಲಿ ಕಂಟ್ರಾಕ್ಟುದಾರನು ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಕೊಂಡುಕೊಳ್ಳಲು ಬದ್ಧನಾಗಿರುವನು.

(16) ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಆಗತ್ಯವಾದಲ್ಲಿ ಸೂಪರ್ರಿಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

(17) ಕಂಟ್ರಾಕ್ಟುಗಳು ಮೈಸೂರು ಸಂಸ್ಥಾನದ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

(18) ಕಂಟ್ರಾಕ್ಟುದಾರರು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರುಮೇರಿಗೆ ನಡಿಯಲು ಇಷ್ಟವಿಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟೀಸು ಕೊಟ್ಟು, ತಮ್ಮ ಠೇವಣಾತಿ ಹಣವನ್ನು ಸರ್ಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

(19) ಅಲ್ಲದೆ ಆಪ್ರಕಾರ ಸದರಿ ಕಂಟ್ರಾಕ್ಟುದಾರರು ತಮ್ಮ ಖರಾರಿಗೆ ತಪ್ಪಿದ್ದರಿಂದ ಅಥವಾ ತಮ್ಮ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರ್ಕಾರದವರು, ಸ್ಥಳೀಯವಾದ ಬಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದ್ದರಿಂದ ಸರ್ಕಾರದವರಿಗೆ ಉಂಟಾಗಬಹುದಾದ ನಷ್ಟನ್ನು ಭರ್ತಿ ಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟಿನಲ್ಲಿ ಯಾವ ವಿಧವಾದ ರಿಯಾಯತಿಯನ್ನು ಮಾಡೋಣಾಗಲಾರದು. ಎರಡು ಬಾಬುಗಳಿಗೂ ಒಬನೇ ಬೇಕಾದರೂ 500 ರೂಪಾಯಿಗಳನ್ನು ಠೇವಣಿ ಇಟ್ಟು ಟೆಂಡರ್ ಕೊಡಬಹುದು.

ಪಿ. ಎಸ್. ಅಚ್ಯುತರಾವ್,
ಸೂಪರಿಂಟೆಂಡೆಂಟ್.

ಬೆಂಗಳೂರ ಗವರ್ನ್‌ಮೆಂಟ್ ಸೆಂಟ್ರಲ್ ಬುಕ್ ಡಿಪೋ

ನೋಟಿಸ್, ಬೆಂಗಳೂರು, ತಾರೀಖು 11ನೇ ಮೇ 1903.

ಇದರಡಿ ನಮೂದು ಮಾಡಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ:—

		ರೂ. ಆ. ಪೈ.
1.	ಕನ್ನಡ Iನೇ ರೀಡರ್	0—3—0
2.	ಕನ್ನಡ Vನೇ ಲೇಖನ ಪುಸ್ತಕ	0—1—0
3.	1904ನೇ ಸಾಲ್ ಸಂಸ್ಕೃತ ಲೋವರ್ ಸೆಕಂಡರಿ ಟೆಕ್ಸ್ಟ್ ...	0—2—0
4.	ಮೈಸೂರ್ ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ತಿದ್ದುಪಾಟು ..	0—4—0

ಎಸ್. ಅಬ್ದುಲ್ ಹೈ, ಕ್ಯೂರೇಟರ್.

...e Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ನಂ 21.

ಬೆಂಗಳೂರು, ಗುರುವಾರ, ಮೇ ತಾ|| 28, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಸನ್ 1903—1904ನೇ ಸರ್ಕಾರಿ ವರುಷಕ್ಕಾಗಿ ಮೈಸೂರು ರಾಜ್ಯದಲ್ಲಿ ಕೇಂದಿ ಉತಾರ್ಮಾಡಲಿಕ್ಕೆ ಎಲ್ಲಾ ಮರಗಳು ಹಸರು ಬಣ್ಣದಿಂದ ಸಂಖ್ಯೆ ಹಾಕಲ್ಪಡುವವು.

1903—1904ನೇ ವರುಷಕ್ಕಾಗಿ ಬೆಂಗಳೂರು ಸಿಟಿಯಲ್ಲಿಯೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟಿಸ.

ನಂ. 7169—10—13, ತಾರೀಖು 24ನೇ ಮೇ 1903.

1. ಬೌರಿಂಗಪ್ಯಾಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರ್ಟರನ್ನು 1903ನೇ ಇಸವಿ ಜುಲೈ ಗುರ್‍ರೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಒಟ್ಟು ಸ್ವತಂತ್ರದ ಹಕ್ಕನ್ನು ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರು ಸದರಿ ಪಟ್ಟಿಯಲ್ಲಿ ನಮೂದುಮಾಡಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಪ್ರತಿ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 250 ರೂಪಾಯಿ ಯಾ ಹರಾಜು ಮಾಡತಕ್ಕ ಆಫಿಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನು ಗವರ್ನಮೆಂಟಿನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನು ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ.

6. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬೆಲೆಗನುಸಾರವಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಕೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸ್‌ಗಳನ್ನ ಪಡಿಯತಕ್ಕದ್ದು, ಮತ್ತು ಎದುರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

7. ಮೇಲಿನ 6ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದಲ್ಲಿ ಚಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಃಬಾಕಿ ಉಳಿಯುವದರನ್ನ ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು:—

8. ಮೇಲಿನ 6ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ, ಅಥವಾ ಕಿರ್ಕಿಯಲ್ಲಿ ಮರ್ಕಿ ಅಂಡ್‌ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಏಬ್ರಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಕಂತ್ರಿ ಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯು ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಪೀಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದ ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(4) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ರೂಪಾಯಿಗೆ 1 ಆಣೆ ಯಂತೆ ಲೋಕಲ್ ಸೆಸ್ ಸಹಿತವಾಗಿ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ ಆಫ್ ಅಡ್ವೈಸ್ ಎಂಬ ರಹದಾರಿಯನ್ನ ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮಿಷನರ್ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಲೋಕಲ್ ಸೆಸ್ ಸಹಿತವಾಗಿ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡದ ಇತರ ಆಫೀಸರ್ರು ಸರಕನ್ನ ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಬೆಂಗಳೂರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯ ಲೈಸೆನ್ಸ್‌ದಾರನು ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಯೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ್ ಕೊಟ್ಟಿರುವ ಕಾಲದ ಮಟ್ಟಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(7) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು. ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ಲೈಸೆನ್ಸ್‌ದಾರನು 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ಹಳೇ ಲೈಸೆನ್ಸ್‌ದಾರನ ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸ್‌ದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(9) ಈ ಗುತ್ತಿಗೆ ಎಕ್ಸೈಜ್ ಕಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(10) ದುಕಾನ್‌ದಾರನು ಲೈಸೆನ್ಸ್‌ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(11) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ್ ಶೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‌ಗಳು ಅಂದರೆ ನಾಲ್ಕು ಸೇರುಗಳಿಗಿಂತಾ ಹೆಚ್ಚಾಗಿರಕೂಡದು.

(12) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮ್ಮಿಷನ್ಡ್ ಆಫೀಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯುರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮೇಜಿಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂಕೂಡದು.

(13) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(14) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇಲೆಗೆ ನಗದಾಗಿ ಹಣ ತೆಗದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(15) ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಯಾ ಪೋರ್ಟರ್‌ನಲ್ಲಿ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಕೆಂಟು ದೇಶದಲ್ಲಿ ಬೆಳದಂಥಾ ಒಳ್ಳೇದಾಗಿ ಇರುವ ಮೂರು ಪೌಂಡ್ ಹಾಪಸ್ ಎಂಬ ಹುವ್ವುಗಳನ್ನೂ ಸೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟಿಯ ಷುರು ತೂಕವು ಫಾರನ್‌ಹೈಟಿನ 60° ಉಷ್ಣ ವಿರುವಾಗ 1070 ಸಂಖ್ಯೆಯನ್ನು ಮೀರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸ್‌ದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು. ಇಂಥಾ ಬೀರ್ ಯಾ ಪೋರ್ಟರ್‌ವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರ್ಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(16) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸೆನ್ಸ್‌ದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೇನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(17) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆಮೇಲೆ ಹೊರ್ತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

(18) ಕಮ್ಮಿಸರಿಯೂಟ್ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(19) ಸದರಿ ಅಂಗಡಿಗೆ ಒಂದೇಬಾಗಲಿರಬೇಕು. ಹಿಂಭಾಗದಲ್ಲಾದರೂ ಕೊನೇಭಾಗಗಳಲ್ಲಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

20) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನು ರದ್ದು ಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಪೂರ್ವಕಾಲದ ಗುತ್ತಿಗೆ ಹಣವು ಕೂಡ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನ್‌ಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತಿ ಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಪಟ್ಟಿ.

ತಾಲ್ಲೂಕಿನ ಹೆಸರು.	ಪ್ರತಿ ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ. ಬಾಗಲು ನಂಬರು.	ಅಂಗಡಿ ಇರುವ ಸ್ಥಳ. ಸ್ಥಳ.	ಚಾಲ್ತಿಲಿರುವ ಲೈಸೆನ್ಸದಾರರ ಹೆಸರು.	ಖರ್ಚು. 1899—1900	ಖರ್ಚು. 1900—1901	ಖರ್ಚು. 1901—1902	ಖರ್ಚು. 1902—1903 ಆರು ತಿಂಗಳ ಖರ್ಚು.	ಗುತ್ತಾ ಮೊಬಲಗು. 1899—1900	ಗುತ್ತಾ ಮೊಬಲಗು. 1900—1901	ಗುತ್ತಾ ಮೊಬಲಗು. 1901—1902	ಗುತ್ತಾ ಮೊಬಲಗು. 1902—1903	1902–03ನೇ ಸಾಲಿನಲ್ಲಿ 54 ಗ್ಯಾಲನಿಗೆ ಒಂದು ರೂಪಾಯಿ ಪ್ರಕಾರ ಸುಂಕ.	ಹರಾಜು ಸ್ಥಳ.	ಹರಾಜು ತಾರೀಖು.
					ಹಾಗ್ಸ ಹೆಡ್	ಹಾಗ್ಸ ಹೆಡ್	ಹಾಗ್ಸ ಹೆಡ್	ಹಾಗ್ಸ ಹೆಡ್	ರೂ.	ರೂ.	ರೂ.	ರೂ	ರೂ.		
ಬೆಂಗಳೂರು	1	42	ಮೈಸೂರು ರೋಡು	ಪಿ. ಕೃಷ್ಣಸ್ವಾಮಿ ಶೆಟ್ಟಿ	90	58	49	30	1320	2280	1400	2200		ಬೆಂಗಳೂರು ತಾಲ್ಲೂಕು ಕಚೇರಿ	13ನೇ ಜೂನ್ 1903.
	2	385	ಅರಳೇಪೇಟೆ ಟ್ಯಾಂಕ್‌ರೋಡ್		102	45	56	30	1410	1440					
	3	8	ಅವಿನ್ಯೂರೋಡ್ ಎಲಹಂಕದ ಬಾಗಲು		68	27	16	8	405	600					
ಬಂಗಾರಪೇಟೆ.	1		ಉರಿಗಂ ಟವರ್	ಮುನಿಸ್ವಾಮಿ ಚೆಟ್ಟಿ	..	..	...	248	...	...	...	..	47	ಗಡಿ [illegible] ಕೋಲಾರ	1? ಜೂನ್ 1903.
	1		ಬಾರಿಂಗ್‌ಪೇಟೆ ಟವರ್		...	..	...	24	...	...	..	..	43		

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮ್ಮಿಷನರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮೆ.

ಸರ್ 1903ನೇ ಇಸವಿ ಮೇ 13ನೇ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸರ್ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಜೂನ್ ಆಖೈರ್ ವರಿಗೆ ಹನ್ನೆರಡು ತಿಂಗಳ ಪರ್ಯಂತರ ಬವರಿಂಗ್ ಪೇಟೆ ತಾಲ್ಲೂಕು ಕಾಮಸಂದ್ರದ ಸ್ಟೇಟ್ ಫಾರೆಸ್ಟ್ ಕುಂದರಸನ ಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ಮಾಡತಕ್ಕ ಹಕ್ಕು 1903ನೇ ಇಸವಿ ಜೂನ್ 22ನೇ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಕೋಲಾಲ್ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸಿನಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಕ ಮಾಡಲ್ಪಡುವ ಇತರ ಆಫಿಸರ್ರಿಂದಾಗಲೀ ಬಹಿರಂಗವಾಗಿ ಹರಾಜು ಮಾಡಿ ಸಲ್ಪಡುತ್ತೆ.

(2) ಚಡಸವಾಲನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್ರವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲೀ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್ರವರ ಯಕ್ತ್ಯಾರಿಯಲ್ಲಿರುತ್ತೆ.

(3) ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್ರವರು ಯಾವ ಸವಾಲುಗಳು ಅಂಗೀಕರಿಸುತ್ತಾರೋ ಅಂಥಾವರು ಸವಾಲ್ ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಿಟ್ ಇಡಬೇಕು. ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹರಾಜು ಮಂಜೂರಾದ ಸಂಗತಿ ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಇರತಕ್ಕ ಮೊಬಲಗು ಪೂರ್ತಾ ಪಾವತೀ ಮಾಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಡಿಪಾಜಿಟ್ ಇಟ್ಟಿರತಕ್ಕ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಕಂಟ್ರಾಕ್ಟನ್ನು ದುಸರಾ ಹರಾಜು ಮಾಡಿಸುವದಲ್ಲದೆ ಇದರಲ್ಲಿ ಉಂಟಾಗುವ ಯಾವ ಫಾಯಿದೆಗೂ ಮೊದಲಿನ ಸವಾಲ್‌ದಾರನಿಗೆ ಹಕ್ಕು ಇರುವದಿಲ್ಲ. ಮತ್ತು ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಇವನನ್ನು ಗುರಿಪಡಿಸಿ ಈ ಮೊಬಲಗು ಇವನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(4) ಈ ಕೆಳಗೆ ಕಂಡ ಷರತ್ತುಗಳು ಕಂಡು ಷರತ್ತಿಗೆ ಬದ್ಧನಾಗಿರುವಂತೆ ಕಂಟ್ರಾಕ್ಟುದಾರನು ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನ ಹರಾಜು ಮಂಜೂರಾದ ಬಂದು ವಾರದಲ್ಲಿ ಬರದುಕೊಟ್ಟು ವಿನಹಾ ಟೋಲ್ ವಸೂಲಿಗೆ ಅಪ್ಪಣೆ ದೊರಿಯಲಾರದು. ಕಂಟ್ರಾಕ್ಟರು ಪ್ರತಿ ದಿನವೂ ವಸೂಲ್ಮಾಡುವ ಮೊಬಲಗಿಗೆ ಬಂದು ಲೆಖ್ಖದ ಬುಕ್ಕು ಇಟ್ಟಿರಬೇಕು. ಇದು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡುವದಕ್ಕೆ ಬಂದಾಗ ಖುಲ್ಲಾ ಇರಬೇಕು.

(5) ಕಂಟ್ರಾಕ್ಟುದಾರನು ಈ ಕೆಳಗೆ ಕಂಡ ಟೋಲ್ ಶಿವಾಯಿ ಮತ್ಯಾವದನ್ನು ವಸೂಲ್ಮಾಡಕೂಡದು. ಮತ್ತು ಅದರಲ್ಲಿ ನಮೂದಿಸುವ ದರದಂತೆಯೇ ವಸೂಲ್ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರೆ ಕಂಟ್ರಾಕ್ಟುದಾರನನ್ನ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುವದಲ್ಲದೆ ಕಂಟ್ರಾಕ್ಟು ಸಹ ರದ್ದು ಮಾಡಲ್ಪಡುವದು.

(6) ಕಂಟ್ರಾಕ್ಟುದಾರನು ಮೈಸೂರ್ ಸರಹದ್ದು ಹೊರಗಿನಿಂದ ಕಾಮಸಂದ್ರ ಸ್ಟೇಟ್ ಫಾರೆಸ್ಟ್ ಮಾರ್ಗವಾಗಿ ಬರತಕ್ಕ ಸಾವೆ ಭರ್ತಿ ಛಂಡಿಗೆ ಮಾತ್ರ ಟೋಲ್ ವಸೂಲ್ಮಾಡಬೇಕು.

(7) ಕಂಟ್ರಾಕ್ಟುದಾರನು (1) ಕುಂದರಸನಹಳ್ಳಿ, (2) ಮುತ್ತನಹಳ್ಳಿ ಈ ಎರಡು ಟೋಲ್ ಗೇಟಿನಲ್ಲಿ ಶಿವಾಯಿ ಇತರ ಸ್ಥಳದಲ್ಲಿ ಟೋಲ್ ವಸೂಲ್ಮಾಡಕೂಡದು.

(8) ಇನ್ನೇನಾದರೂ ತಪಶೀಲು ಬೇಕಾದರೆ ಕೋಲಾರ್ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಬರದುಕೊಂಡು ತಿಳದುಕೊಳ್ಳಬಹುದು. ಪ್ರತಿಯೊಂದು ಸಾವೆ ಭರ್ತಿ ಛಂಡಿಗೂ ಛಂಡಿ 1ಕ್ಕೆ ಎರಡಾಣೆಯಂತೆ ಕುಂದರಸನಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ ಮಾಡಲ್ಪಡಬೇಕು.

ಎಸ್. ಎ. ಬಾಪುರಾವ್, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ನೋಟಿಫಿಕೇಷನ್.

ತಾರೀಖು 18ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಡಿಸ್ಟ್ರಿಕ್ಟು ಜಂಗಲ್‌ಗಳಲ್ಲಿಯೂ ಆಕಾರ ಕಂಡ ಸರ್ಕಾರಿ ಖಡ ಜಮೀನುಗಳಲ್ಲಿಯೂ ಪ್ರಾಯ್ಯಲ್ ರಿಜರ್ವ್‌ಗಳಲ್ಲಿಯೂ ಅಂದರೆ ಈ ಕೆಳಗೆ ಕಂಡ ಸ್ಟೇಟ್ ಫಾರೆಷ್ಟುಗಳು ಮತ್ತು ಅಮೃತ ಮಹಲ್ ಕಾವಲ್‌ಗಳು ವಿನಾಯಿಸಿ ಇರುವ ಜಂಗಲಿ ಫಸಾಲೆ ಬಾಬು 1903-904ನೇ ಸಾಲಿಗೆ ಅಂದರೆ 1903ನೇ ಜುಲೈ ಗುರ್ರೇ ಲಾಗಾಯಿತು 1904ನೇ ಇಸವಿ ಜೂನ್ 30ರ ವರಿವಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕುದಾರಿಯು ಆಯಾಯ ತಾಲ್ಲೂಕು ಅಮಲ್‌ದಾರ್ರುಗಳಿಂದಲಾಗಲಿ ಅಥವಾ ಡೆಪ್ಯುಟಿ ಅಮಲ್‌ದಾರ್ರುಗಳಿಂದಲಾಗಲಿ ಮತ್ತು ಆಯಾಯ ತಾಲ್ಲೂಕಿಗೆ ಸಂಬಂಧಪಟ್ಟ ರೇಂಜ್ ಆಫಿಸರ್ರುಗಳು ಶೇರಿ ಈ ಕೆಳಗೆ ಕಂಡ ತಾರೀಖು ಮತ್ತು ಸ್ಥಳದಲ್ಲಿ ಮಧ್ಯಾಹ್ನ 12 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜಿಗೆ ಇಡಲ್ಪಡುತ್ತೆ.

1. ದೇವರಾಯದುರ್ಗ	ಸ್ಟೇಟ್ ಫಾರೆಷ್ಟು	6. ಬುಕ್ಕಾಪಟ್ಣ	ಸ್ಟೇಟ್ ಫಾರೆಷ್ಟು
2. ಮದ್ದಗಿರಿ	ಡಿಟೋ	7. ತೀರ್ಥರಾಂಪುರ	ಡಿಟೋ
3. ಕೋಳಿಕಲ್ಲು ಮತ್ತು ಚಿಕ್ಕ ಮದ್ದಗಿರಿ	ಡಿಟೋ	8. ಮಂಚಲ್‌ಧೋರೇ	ಡಿಟೋ
4. ಹುಲಿಯೂರು ದುರ್ಗ	ಡಿಟೋ	9. ಅಮೃತಮಹಲ್	ಕಾವಲ್
5. ಕಂಪ್ಲಾಪುರ	ಡಿಟೋ		

1. ಹರಾಜು ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಷರಾ.
1	ಮದ್ದಗಿರಿ ಮತ್ತು ಕೊರ್ಟಗಿರೆ ಸಬ್ ತಾಲ್ಲೂಕು	1—6—903	ಮದ್ದಗಿರಿ	ಹರಾಜು ತಾಲ್ಲೂಕ್ದಾರರು ಆಗಲಿ ಅಥವಾ ಅವರ್ದು ಬಂದ ಹೋಬಳಿದಾರರು ಆಗಲಿ ಮಾಡಲ್ಪಡುತ್ತೆ.
2	ಶಿರಾ ತಾಲ್ಲೂಕು ..	6—6—903	ಶಿರಾ	
3	ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಮತ್ತು ಹುಳಿಯಾರು ಯಳನಡು ಹೋಬಳಿಗಳು.	8—6—903	ಚಿಕ್ಕನಾಯಿಕನಹಳ್ಳಿ	
4	ತಿಪಟೂರು ಮತ್ತು ತುರುವೆಕೆರೆ ಸಬ್ ತಾಲ್ಲೂಕು.	10—6—903	ತಿಪಟೂರು	
5	ಗುಬ್ಬಿ ತಾಲ್ಲೂಕು ..	15—6—903	ಗುಬ್ಬಿ	
6	ಕುಣಿಗಲ್ ತಾಲ್ಲೂಕು ..	12—6—903	ಕುಣಿಗಲ್	
7	ತುಮಕೂರು ತಾಲ್ಲೂಕು ...	16—6—903	ತುಮಕೂರು	

2. ಪಸಾರೆ ಜಿನಸಿ ಹೆಸರುಗಳ ತಪಶೀಲ್:—

1. ಅಳಲೆಕಾಯಿ
2. ತಾರೆಕಾಯಿ
3. ಹೊಂಗೇಬೀಜ
4. ಶೀಗೆಕಾಯಿ
5. ಹುಣಸೇಹಣ್ಣು
6. ಬ್ಯಾಲದ ಹಣ್ಣು
7. ಶೀತಾಫಲದ ಹಣ್ಣು
8. ಗೇರುಬೀಜ
9. ಸಾಮೇಚಕ್ಕೆ
10. ಮಡ್ಡಿ ಚಕ್ಕೆ
11. ದೊಡ್ಡ ಅಗಸೇ
12. ದಿಂಡಗದ ಗೋಂದು
13. ಕಾಡು ಅರಸಿನ
14. ಮರಡಿಪಪ್ಪು
15. ಕಲ್ಲುಹುವ್ವು
16. ಕಪಿಲಾರಂಗು
17. ಜೇನುತುಪ್ಪ
18. ಜೇನುಮೇಣ
19. ತಗರಿಸಿ ಬೀಜ

3. ಹರಾಜು ಖೈದಾದ ಕೂಡ್ಲೆ ಛಡ ಸವಾಲ್‌ದಾರನು ಹರಾಜು ಮೊಬಲಗಿನಲ್ಲಿ ಶೇಕಡಾ 25 ರೂಪಾಯಿನಂತೆ ಮೊಬಲಗನ್ನು ಠೇವಣಿ ಇಡತಕ್ಕದ್ದು. ಬಾಕಿ ಹರಾಜು ಮೊಬಲಗು ಮಂಜೂರಾದ ಸಂಗತಿ ತಿಳಿಸಿದ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಈ ಹಕ್ಕುದಾರಿಯನ್ನು ಪುನಹ ಹರಾಜು ಮಾಡಿ ಅವನನ್ನು ಲುಕ್ಸಾನಿಗೆ ಗುರಿಮಾಡಲ್ಪಡುತ್ತೆ.

4. ಗೊತ್ತುಮಾಡಿದ ಕಾಲದೊಳಗಾಗಿ ಹರಾಜಿನ ಮೊಬಲಗನ್ನು ಕೊಡಲು ತಪ್ಪಿದರೆ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಜಮಾವಣೆ ಹಕ್ಕು ಪುನಹ ಹರಾಜು ಮಾಡಿ ಲುಕ್ಸಾನಿಗೆ ಆತನನ್ನು ಗುರಿಮಾಡುತ್ತೆ. ಈ ದುಸರೆ ಹರಾಜಿನಲ್ಲಿ ಏನಾದರು ನಷ್ಟ ಬಂದರೆ ಆ ನಷ್ಟಕ್ಕೆ ಅವಲ್ ಹರಾಜುದಾರ್ ಗುರಿಯಾಗತಕ್ಕದ್ದು. ಆದರೆ ಏನಾದರೂ ಜಾಸ್ತಿ ಹುಟ್ಟುವಳಿ ಆದರೆ ಅದರಲ್ಲಿ ಹಿಸ್ಸೆ ಸಲ್ಲಲಾರದು.

5. ಮುಂಚಿತವಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿ ಪಡದ ಹೊರ್ತು ಕಂಟ್ರಾಕ್ಟದಾರ್ ಸಬ್ ಕಂಟ್ರಾಕ್ಟು ಕೊಡಕೂಡದು.

6. ಇಜಾರೆದಾರನಾಗಲಿ ಅಥವಾ ಸಬ್ ಇಜಾರೆದಾರನಾಗಲಿ ಫಸಾರೆ ಜಿನಸಿ ಜಮಾಯಿಸುವ ಕೆಲಸಗಳಲ್ಲಿ ಅವನಕಡೆ ಏಜಂಟು ಅಥವಾ ನೌಕರರಗಳಿಂದ ನಡಿಯತಕ್ಕ ಕೃತ್ಯಗಳಿಗೆ ತಾನು ಖುದ್ದು ಸಮ್ಮಂಧಪಟ್ಟವನಾಗಿಯೂ ಮತ್ತು ಜವಾಬುದಾರನಾಗಿಯೂ ಇರಬೇಕು.

7. ಪೂರಾ ಹರಾಜು ಮೊಬಲಿಗಿಗೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ವಸೂಲ್ ಮಾಡಲ್ಪಡುವದು.

8. ಇಜಾರೆದಾರನು ಹಿಡುವಳಿ ಜಮೀನುಗಳಲ್ಲಿಯೂ ಮತ್ತು ಸ್ವಂತ ತೋಪುಗಳಲ್ಲಿಯೂ ಇರುವ ಮರಗಳ ಅಮರಾಯಿ ಫಸಲುಗಳನ್ನು ರೂಢಿಸಕೂಡದು.

9. ಗ್ರಾಮ ಅಮರಾಯಿ ಫಸಲ್ ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಸೇರಿರುವದಿಲ್ಲ.

ಎಸ್. ಶೇಷಗಿರಿರಾವ್,
ಫಾರ್ ಡೆಪ್ಯುಟಿ ಕಮಿಷನರ್, ತುಮಕೂರು ಡಿಸ್ಟ್ರಿಕ್ಟು.

ತಾರೀಖು 23ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಶಿವಮೊಗ್ಗಾ ಡಿಸ್ಟ್ರಿಕ್ಟು ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕಿನ ಬಾಬತು ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಯಲ್ಲಾ ತಾಲ್ಲೂಕುಗಳಲ್ಲಿರುವ ಪಪ್ಪಳಿ ಚಕ್ಕೆಯನ್ನು 1903ನೇ ಇಸವಿ ಜುಲೈ ಗುರ್ರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ವಟ್ಟು ಸ್ವಾತಂತ್ರದ ಹಕ್ಕು ಬಹಿರಂಗವಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜೂನ್ ತಾರೀಖು 15ರಲ್ಲು ಶಿವಮೊಗ್ಗಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

ಹರಾಜು ಷರತ್ತು ಬಗ್ಗೆ 14—5—1903ನೇ ಮಾರ್ಕುಂ 19ನೇ ನಂ. ಗೆಜೆಟ 2ನೇ ಭಾಗ 210—211ನೇ ಪೇಜಗಳನ್ನು ನೋಡಬೇಕು.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಪೋಲೀಸ್ ಇಲಾಖಾ.

ಖೈದಿ ಚಹರೆಪಟ್ಟಿ, ತಾಲ್ಲೂಕ್ ತೀರ್ಥಹಳ್ಳಿ.

ತಾರೀಖು 20ನೇ ಏಪ್ರೈಲ್ 1903.

ಬಾಬತ ನಂ.	ಕ್ರಿಂ ನಂ.	ಖೈದಿಗಳ ಹೆಸರು, ಜಾತಿ, ವಾಸಸ್ಥಾನ.	ಮೈಮೇಲೆ ಇರತಕ್ಕ ಕಲೆ ಗುರ್ತು ಮತ್ತು ವೃದ್ಧ ವಯಸ್ಸು ವಗೈರೆ.	ಹಿಂದೆ ಶಿಕ್ಷೆ ಆಗಿದ್ದು, ಗುನ್ಹೆ.	ಯಾವ ಸೆಕ್ಷನು.	ಯಾವ ಕೋರ್ಟಿಗೆ.
1	1 / 902—03	ಶಂಕರಭಟ್ಟ, ಕಮ್ಮಿ ಕರ್ನಾಟಕ ಬ್ರಾಹ್ಮಣ, ಭದ್ರರಾಜಪುರದ ವಾಶಿ, ಸುಮಾರು 24 ವರ್ಷ, ಬರಹ ಕಸಬು.	ಯಣೆಗೆಂಪು, ಸಮದೃಷ್ಟಿ, ಯಡ ಪಾರ್ಶ್ವದ ಬೆನ್ನುಮೇಲೆ 1 ಕಾಶಿನ ಅಗಲ ಕಲೆ ಹುಣ್ಣಿನದು ಇದೆ. ಬಲದ ಮುಂಗಾಲುಮೇಲೆ ಅಂದರೆ ಹರಡಿನ ಮೇಲೆ ಹಳೆ ಘಾಯದ ಕಲೆ, ಎತ್ತರ 5 ಅಡಿ 6 ಅಂಗುಲ.	ಸುಬ್ರಹ್ಮಣ್ಯದ ಜಾತ್ರೆ ಪೈರದ ನಾಶ.	ಇಂಡಿಯನ್ ಪಿನಲ್ ಕೋಡು 411.	ಶಿವಮೊಗ್ಗಾ ಡಿ. 1ನೇ ಕ್ಲಾ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆ ಆಗಿ ಸಜಾ ಕೋರ್ಟಿನಲ್ಲಿ 100 ರೂಪಾಯಿ ದಂಡ ಕಟ್ಟಲಿಕ್ಕೆ ತಪ್ಪಿದರೆ ಸಜಾ ಮಾಡಲ್ಪಡಬೇಕಾಗಿದೆ.

ಸಿ. ಹಾರ್ಡಿ,
ಪೋಲೀಸ್ ಸೂಪರಿಂಟೆಂಡೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮಾಗಡೀ ತಾಲ್ಲೂಕು ತಿಪ್ಪಸಂದ್ರದ ಹೋಬಳಿ ಜೋಡಿ ದಂಡನಹಳ್ಳಿ ಗ್ರಾಮವು ಸನ್ 1903ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಮಾಗಡಿ ತಾಲ್ಲೂಕು ಕಚೇರಿ ಬಳಿ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆಂದು 1903ನೇ ಇಸವಿ ಮೇ ತಿಂಗಳು 21ನೇ ತಾರೀಖು ಮೈಸೂರು ಗೆಜೆಟ್ 2ನೇ ಭಾಗದ 228ನೇ ಪೇಜಿನಲ್ಲಿ ಪ್ರಾಯಿಷ್ ಆಗಿ ಇದೆ.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರನಾದ ಖಾಯಂಗುತ್ತಾದಾರ ರಾಮಸ್ವಾಮೈಯ್ಯನವರಿಂದ ಬರಬೇಕಾದ ಜಮಿರ್ನ್ ಕಂದಾಯದ ...ಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಖಾಯಂಗುತ್ತಾ ಕೋಲೂರು ...ಪುರ ಗ್ರಾಮದಲ್ಲಿ ಅಮಲ್‌ದಾರರು ರೂಬರೂಬ್ 1903ನೇ ಇಸವಿ ಜೂನ್ 28ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾ...ತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 17—7—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಕಂದಾಯ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ನಗರ	ಹಾಸರಕೆರೆ	ಬಾಯಿಗಾಡಿ ಹೊಳಲೂರು ನಂಜುಂಡಪುರ	ರಾಮಸ್ವಾಮಯ್ಯ	..	..	ಹೊರಾಗ್ರಾಮ	ಖುಷ್ಕಿ	61	11	15	0	0	15	15	0	ಬಾಕಿ
							ಬಾಗಾಯತು ಮೊಬಲಗು	...	....	15	0	0	1	8	0	ನೋಟಿಸ್ ವಗೈರೆ ಖರ್ಚು
							ಸೆಸ್ಸು	...	..	0	15	0	17	7	0	
										15	15	0				

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಖಾಯಂ ಗುತ್ತಾದಾರ್ ನಂಜುಂಡಪ್ಪ, ಸುಬ್ಬಾಯಪ್ಪ ಇವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಖಾಯಂಗುತ್ತಾ ಕೋಲೂರು ಗುರ್ರಾಯಪುರ ಗ್ರಾಮದಲ್ಲಿ ಅಮಲ್‌ದಾರ್ರ ರೂಬರೂಬ್ ಸನ್ 1903ನೇ ಇಸವಿ ಜೂನ್ ತಿಂಗಳು 28ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 18—8—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮ್ಯಾದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ವಿಸ್ತೀರ್ಣ. ಗು.	ಆಕಾರ. ರೂ.	ಆಕಾರ. ಆ.	ಆಕಾರ. ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಮಾಗಡಿ	ತಾವರೆಕೆರೆ	ಖಾಯಂಗುತ್ತಾ ಕೋಲೂರು ಗುರ್ರಾಯಪುರ	ನಂಜುಂಡಪ್ಪ ಸುಬ್ಬಾಯಪ್ಪ	...		ಪೂರಾ ಗ್ರಾಮ	ಖುಷ್ಕಿ ...	158	34	24	0	0	17	0	0	ಐನ್
													0	8	0	ನೋಟೀಸ್ ಫೀ
							ಜೋಡಿ ..	...	...	24	0	0	0	8	0	ಜಪ್ತಿ ರುಸುಂ
							ನೆಸ್ಸು ...	...	...	1	8	0	0	8	0	ಹರಾಜು ಭತ್ತೆ
										25	8	0	18	8	0	

* ಯಾ ಬಾಕೀ ಇರುವವರೆಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟ್.

ತಾರೀಖು 26ನೇ ಮಾರ್ಚಿ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟು ಚಾಮರಾಜನಗರ ತಾಲ್ಲೂಕಿಗೆ ಸೇರಿದ ಸಂತೆಮರಹಳ್ಳಿ ಮಾರ್ಕೆಟ್ಟಿನಲ್ಲಿ 1903ನೇ ಜುಲೈ 1ರ ಲಾಗಾಯತು 1904ನೇ ಜೂನ್ ಆಖೈರ್ ವರಿವಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯು ಸಂತೆಮರಹಳ್ಳಿ ಪೋಲೀಸ್ ಸ್ಟೇಷನ್ ಬಳಿ ತಾಲ್ಲೂಕು ಅಮಲ್ದಾರರಿಂದ 1903ನೇ ಮೇ 26ನೇ ತಾರೀಖಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡೆಯತಕ್ಕವರು ಸಂತೆಯದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಸಾಮಾನುಗಳ ಮೇಲೆ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ರೇಟಿನಂತೆಯೇ ಫೀ ವಸೂಲ್ಮಾಡತಕ್ಕದ್ದು. ಸದರೀ ರೇಟಿಗಿಂತ ಹೆಚ್ಚು ರೇಟನ್ನು ವಸೂಲ್ ಮಾಡಕೂಡದು. ಮಾರ್ಕೆಟ್ಟಿನ ಸರಹದ್ದು ಇಷ್ಟೆಂದು ಅಮಲ್ದಾರರಿಂದ ಸ್ಪಷ್ಟವಾಗಿ ಗುರ್ತು ಮಾಡಲ್ಪಡುತ್ತೆ.

3. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲಾ. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

4. ಕಂಟ್ರಾಕ್ಟುದಾರನು ಪ್ರತಿ ತಿಂಗಳು 10ನೇ ತಾರೀಖಿನ ಒಳಗಾಗಿ ಹಿಂದಿನ ಮಾಹೆಯ ಖಿಸ್ತು ಮೊಬಲಗನ್ನು ಹಾಜರ್ಮಾಡಿ ರಶೀತಿ ಪಡೆಯಬೇಕು. ಹರಾಜು ಆಖೈರಾದ ಕೂಡಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳ ಕಂಟ್ರಾಕ್ಟು ಮೊಬಲಗನ್ನು ಅಮಾನತ್ತಿನಲ್ಲಿಡಬೇಕು. ಷರತ್ತುಗಳ ಮೀರಿ ನಡದುಕೊಂಡರೆ, ಅಮಾನತ್ತಿನಲ್ಲಿ ಇಟ್ಟಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮಾ ತೆಗೆದುಕೊಳ್ಳಲ್ಪಡುತ್ತೆ.

5. ಹರಾಜಾದ ಕೂಡಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೇ ಇದ್ದರೆ ಹರಾಜು ಹಕ್ಕುದಾರಿಯನ್ನು ಅವಲ್ ಕಂಟ್ರಾಕ್ಟುದಾರನ ಖರ್ಚಿಗೂ ಮತ್ತು ಲುಕ್ಸಾನಿಗೂ ಒಳಪಡಿಸಿ ಪುನಹ ಹರಾಜು ಮಾಡಲ್ಪಡುವದು. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ಹಾಜರ್ಮಾಡಲು ತಪ್ಪಿದರೆ, ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನವರಿವಿಗೆ ಮಾಹೆಯಾನ ರೂಪಾಯಿ ಒಂದಕ್ಕೆ ಒಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ್ಮಾಡಲ್ಪಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಡೆಪ್ಯುಟಿ ಕಮಿಷನರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಅವಲ್ ಕಂಟ್ರಾಕ್ಟುದಾರನನ್ನು ಒಳಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಿಂದ ನಫೇಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

6. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಒಂದು ಲೆಖ್ಖವನ್ನು ಇಟ್ಟಿರಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಆಫೀಸಿನ ಹುದ್ದೇದಾರರಿಗೆ ಅಪೇಕ್ಷಿಸಿದ ಕಾಲದಲ್ಲಿ ತೋರಿಸತಕ್ಕದ್ದಾಗಿರುತ್ತೆ.

7. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನಕಡೆ ನೌಕರರೇ ಆಗಲಿ ವಿರೋಧವಾಗಿ ನಡೆದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

ಷಾಪ್ ಯಾ ಮಳಿಗೆ	ಪ್ರತ್ಯೇಕ ಹರಾಜುಮಾಡಲ್ಪಡುತ್ತೆ.	
ಗುಡಾರ	ಪ್ರತಿಯೊಂದಕ್ಕೆ	4 ಆಣೆ.
ಎತ್ತಿನ ಗಾಡಿ	,,	2 ,,
ಒಡ್ಡರ ಗಾಡಿ	,,	1 ,,
ಎತ್ತಿನ ಬೋಜಾ	,,	6 ಕಾಸು
ತಲೆ ಬೋಜಾ	,,	3 ಕಾಸು

ನೋಟ್:—ಕೊನೇ ನಾಲ್ಕು ಐಟಂಗಳ ಮೇಲೆಯೂ ಮಾರ್ಕೆಟ್ಟು ಸರಹದ್ದನ್ನು ಪ್ರವೇಶಿಸುವಾಗಲೇ ಫೀ ವಸೂಲ್ಮಾಡತಕ್ಕದ್ದು. ಎರಡನೇ ಬಾಬಿನಮೇಲೆ ಗುಡಾರವನ್ನು ನೆಟ್ಟಾಗ ಫೀ ವಸೂಲ್ಮಾಡತಕ್ಕದ್ದು.

ಎಂ. ಕಾಂತರಾಜ ಅರಸ್,
ಪ್ರೆಸಿಡೆಂಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 14ನೇ ಮೇ 1903.

1902—1903ನೇ ಸಾಲಾಖೈರು ವರಿಗೆ ಮ॥ ಕೆ. ಶ್ಯಾಮೈಯ್ಯಂಗಾರ್‌ರಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿಗಾಗಿ

ಸೂಳೆಕೆರೆ ದೊಡ್ಡಗಟ್ಟೆ ಕಬ್ಬಳ	ತ್ಯಾವಣಿಗೆ ರಾಮಗೊಂಡನಹಳ್ಳಿ	ಚನ್ನಗಿರಿ ತಾಲ್ಲೂಕು ಈ ಇರೇಬಿನಲ್ಲಿ ಕಾಣುವ ಗ್ರಾಮಗಳಲ್ಲಿ ಜಮೀನುಗಳು 1903ನೇ ಜೂನ್ ತಿಂಗಳು 18, 20, 22, 23, 24 ತಾರೀಖುಗಳಲ್ಲಿ ಕ್ರಮವಾಗಿ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪ್ಸೀಲುಗಳ ಬಗ್ಯೆ 1903ನೇ ಇಸವಿ ಮೇ ತಾರೀಖು 21ನೇ ಮೈಸೂರು ಗಜೆಟ್ಟಿನಲ್ಲಿ ಛಾಯಿಪಾಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟು ತರೀಕರೆ ತಾಲ್ಲೂಕು ತರೀಕೆರೆ ಕಸಬಾ ಮಾರ್ಕೆಟ್ಟನಲ್ಲಿ ಸರ್ 1903ನೇ ಇಸವಿ ಜುಲೈ 1ರ ಲಾಗಾಯಿತು ಸರ್ 1904ನೇ ಇಸವಿ ಜೂನ್ ಆಖೈರು ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯನ್ನು ತರೀಕರೆ ತಾಲ್ಲೂಕು ಕಚೇರಿಯಲ್ಲಿ ಆ ತಾಲ್ಲೂಕು ಅಮಲ್ದಾರರವರಿಂದ ಸರ್ 1903ನೇ ಇಸವಿ ಜೂನ್ 22ನೇ ಸೋಮವಾರ ದಿವಿ 11 ಘಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡಿಯತಕ್ಕವರು ಸಂತೆಯ ದಿವಸ ಮಾರ್ಕೆಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ದರದಂತೆಯೆ ಗಾಡಿ ಮತ್ತು ಜಾನ್ವಾರು "ವಗೈರೆ" ಗಳ ಮೇಲೆ ಫೀ ವಸೂಲ್ ಮಾಡತಕ್ಕದ್ದು. ಸದರೀ ದರಕ್ಕಿಂತ ಜಾಸ್ತಿ ದರ ವಸೂಲು ಮಾಡಕೂಡದು.

3. ಈ ಹರಾಜು ಕಡೂರು ಡಿಸ್ಟ್ರಿಕ್ಟು ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರವರ ಮಂಜೂರಾತಿಗೆ ಒಳಪಟ್ಟಿರುತ್ತೆ. ಸದರೀಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ ಅಥವಾ ಇನ್ಯಾವ ದರಖಾಸ್ತುಗಳನ್ನ ಅಂಗೀಕರಿಸುವದಕ್ಕೆ ಆಗಲಿ ಅಥವಾ ಯಾವ ಸಬಬನ್ನೂ ತೋರಿಸದೆ ತಿರಸ್ಕರಿಸುವದಕ್ಕೆ ಆಗಲಿ ಅಧಿಕಾರ ಉಳ್ಳವರಾಗಿರುತ್ತಾರೆ.

4. ಕಂಟ್ರಾಕ್ಟುದಾರನು ಗುತ್ತಾ ಮೊಬಲಗನ್ನು ಹನ್ನೆರಡು ತಿಂಗಳ ಸಮಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆಯ ಕಂತನ್ನು ಆ ಮಾಹೆ ಆಖೈರಾದ ತಾರೀಖು 10ರ ಒಳಗೆ ವಸೂಲ ಕೊಟ್ಟು ರಶೀದಿ ಪಡಿಯತಕ್ಕದ್ದು.

5. ಹರಾಜು ಖೈದಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಎರಡು ತಿಂಗಳು ಬಾಬತು ಕಂಟ್ರಾಕ್ಟು ಯಾ ಕಂತು ಮೊಬಲಗನ್ನು ಡಿಪಾಜಿಟ್ಟಿನಲ್ಲಿಡಬೇಕು. ಕಂಟ್ರಾಕ್ಟು ಷರತ್ತುಗಳ ಮೇರೆ ಸರಿಯಾಗಿ ನಡದುಕೊಂಡರೆ ಡಿಪಾಜಿಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಂತು ಬಗ್ಗೆ ವಸೂಲ ಕೊಡುತ್ತೆ.

6. ಹರಾಜು ಖೈದಾದ ಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಹರಾಜು ಹಕ್ಕುದಾರಿಯನ್ನು ಪುನಹ ಹರಾಜು ಮಾಡುತ್ತೆ. ಎರಡನೆ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಷುರು ಕಂಟ್ರಾಕ್ಟುದಾರ ಯಾ ಹರಾಜುದಾರನನ್ನು ಗುರಿಪಡಿಸುತ್ತೆ.

7. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ವಸೂಲ ಕೊಡಲು ತಪ್ಪಿದರ ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನ ವರಿಗೆ ಮಾಹೆಯಾನಾ ರೂಪಾಯಿಬಂದಕ್ಕೆ ಬಂದು ಪೈನಂತೆ ಬಡ್ಡಿ ಸೇರಿಸಿ ಖಿಸ್ತು ಮೊಬಲಗನ್ನು ವಸೂಲ ಮಾಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಮ್ಯುನಿಸಿಪಲ್ ಪ್ರೆಸಿಡೆಂಟರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಷುರು ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಫೆಗೆ ಹಕ್ಕುದಾರನಾಗಿರುವದಿಲ್ಲ.

8. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನೂ ತಪಸೀಲಾಗಿ ತಿಳಿಯುವಂತೆ ಕರಾರುವಾಕಾ ಲೆಖ್ಖವನ್ನೂ ಇಡಬೇಕು. ಸದರೀ ಲೆಖ್ಖವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರ್ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೆ ಆಗಲಿ ಯಾ ಅವನ ಕಡೆ ನವುಕರನೆ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

		ರೂ.	ಆ.	ಪೈ.			ರೂ.	ಆ.	ಪೈ.
1. ಭರ್ತಿಗಾಡಿ	ಪ್ರತಿಯೊಂದಕ್ಕೆ	0	1	0	5. ತಲೆ ಹೊರೆ	ಪ್ರತಿಯೊಂದಕ್ಕೆ	0	0	1
2. ಖಾಲಿ ಗಾಡಿ	ಡಿಟೋ	0	0	3	6. ಖಾಲಿ, ಎತ್ತು, ಹಸ, ಯಮ್ಮೆ, ಕೋಣ, ಕುದುರೆ	ಡಿಟೋ	0	0	3
3. ಎತ್ತು, ಹಸ, ಯಮ್ಮೆ, ಕೋಣ ಮತ್ತು ಕುದುರೆ ಹೊರೆ	ಡಿಟೋ	0	0	6	7. ಆಡು ಅಥವಾ ಮೇಕೆ	ಡಿಟೋ	0	0	1
4. ಕತ್ತೆ ಹೊರೆ	ಡಿಟೋ	0	0	3					

ಎಂ. ನಾರಾಯಣರಾವ್,
ಮ್ಯುನಿಸಿಪಲ್ ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 20ನೇ ಮೇ 1903ನೇ ಇಸವಿ ಚಿತ್ರದುರ್ಗ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿ ಇರುವ ರಿಜಿಸ್ಟ್ರಾದ ದಸ್ತೈವಜುಗಳು 2 ವರುಷಗಳಿಗೆ ಮೇಲ್ಪಟ್ಟು ಮಾರ್ಜನ್ನಲ್ಲಿ ಬರದಿರುವ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ವಾರಸದಾರ್ರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಬಂದು ತಿಂಗಳುವಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ

ಯಾ ದಸ್ತೈವಜುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ್ ರಿಜಿಷ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತಮ್ಮ ದಸ್ತೈವಜು ವಾಪಸು ಪಡಿಯಬೇಕು ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ.

ನಬುಕ್ಕು ಇತ್ತು ಪರಿಜಿಷ್ಟರ ಂಬರು.	ದಸ್ತೈವಜು ಬರದು ಕೊಟ್ಟವರ ಹೆಸರು.	ಬರಿಶಿಕೊಂಡವನ ಹೆಸರು.	ದಸ್ತೈವಜು ತಾರೀಖು.	ರಿಜಿಷ್ಟ್ರಿದ ತಾರೀಖು.	ದಸ್ತೈವಜು ಸ್ವಭಾವ ಕಿಮ್ಮತ್ತು.
ಬುಕ್ಕು ನಂ. 1 ದಸ್ತೈವಜು ನಂ. 84	ನಾರಾಯಣನಾಯಿಕ.	ನಾರಣಂಮ ... ಪಾಪಂಣ ... ನಾರಾಯಣಸಾವಿ ..	6—8—1900	7— 8—1900	200 ರೂಪಾಯಿನ ದಾನ ಪತ್ರ
ಡಿಟೋ 86	ಡಿಟೋ ...	ಮಂಗವ್ವ ..	6— 8—1900	7— 8—1900	80 ರೂಪಾಯಿನ ಖುಲಾಸೆ ಪತ್ರ
ಡಿಟೋ 223	ರಾಘವೇಂದ್ರರಾವು...	ಅನಂತಶೆಟ್ರು ...	1—11—1600	5—11—1900	200 ರೂಪಾಯಿನ ಕ್ರಯಪತ್ರ

ಬಿ. ವೆಂಕೋಬರಾವ್,
ಫಾರ್ ರಿಜಿಷ್ಟ್ರಾರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ 590.

ಅರ್ಜೀದಾರ ಕೊಳದಪ್ಪನ ಮಗ ಕೆಂಚಪ್ಪ ಮೈನರಾದ ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆ ಸ್ಥಳದ ಮರಿಸಾಮಪ್ಪನ ಮಗ ರುದ್ರಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ರುದ್ರಪ್ಪನವರಿಗೆ ದೊಡ್ಡ ತಂದೆ ಆಗಬೇಕೆಂಬ ಹಕ್ಕಿನಮೇಲೆ ಶಿಡ್ಲಘಟ್ಟದ ತಾಲ್ಲೂಕು ಜಂಗಮಕೋಟೆ ಸ್ಥಳದ ಸರಾಫ್ ಕೊಳದಪ್ಪನ ಮಗ ಕೆಂಚಪ್ಪನವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೇ ಇಸವಿ ಜೂನ್ 6ನೇ ತಾರೀಖಿನಲ್ಲಿ ಮೊಕರರ್ ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸರ್ 1903ನೇ ಇಸವಿ ಮಾರ್ಚಿ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿ. ಶಿಂಗ್ರಾಚಾರ್,
ಸಬ್ ಜಡ್ಜಿ.

ಬೆಂಗಳೂರ ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ

ನೋಟಿಸ್, ಬೆಂಗಳೂರು, ತಾರೀಖು 11ನೇ ಮೇ 1903.

ಇದರಡಿ ನಮೂದು ಮಾಡಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ:—

		ರೂ. ಆ. ಪೈ.
1.	ಕನ್ನಡ Iನೇ ರೀಡರ್	.. 0—3—0
2.	ಕನ್ನಡ Vನೇ ಲೇಖನ ಪುಸ್ತಕ	.. 0—1—0
3.	1904ನೇ ಸಾಲ್ ಸಂಸ್ಕೃತ ಲೋವರ್ ಸೆಕೆಂಡರಿ ಟೆಕ್ಸ್ಟ್	... 0—2—0
4.	ಮೈಸೂರ್ ಲ್ಯಾಂಡ್ ರೆವಿನ್ಯೂ ನಿಬಂಧನೆಗಳ ತಿದ್ದುಪಾಟು	.. 0—4—0

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ನಂ. XXXVIII] ಸರ್ಕಾರದಿಂದ ಫರಾಂಯಿಷ್ ಆದ್ದು. [ನಂ 22.

ಬೆಂಗಳೂರು, ಗುರುವಾರ, ಜೂನ್ ತಾ|| 4, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಎಕ್ಸೈಜ್ ಇಲಾಖೆ.

1903–1904ನೇ ವರುಷಕ್ಕಾಗಿ ಬೆಂಗಳೂರು ಸಿಟಿಯಲ್ಲಿಯೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟಿಸ್.

ನಂ. 7169—10—13, ತಾರೀಖು 24ನೇ ಮೇ 1903.

1. ಬೌರಿಂಗ್‌ಪ್ಯಾಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರಟರನ್ನು 1903ನೇ ಇಸವಿ ಜುಲೈ ಗುರ್ರೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಒಟ್ಟು ಸ್ವತಂತ್ರದ ಹಕ್ಕನ್ನು ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರ್ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರರು ಸದರಿ ಪಟ್ಟಿಯಲ್ಲಿ ನಮೂದುಮಾಡಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ್ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಪ್ರತಿ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 250 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಧಡ ಸವಾಲ್‌ದಾರನಿಗೆ ಡೆಪ್ಯುಟಿ ಕಮಿಷ್ನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮಿಷ್ನರವರು ಸದರೀ ದರಖಾಸ್ತನ್ನು ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳಿಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನು ಗವರ[illegible]ನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನು ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ.

6. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬೆಲೆಗನುಸಾರವಾಗಿ ಡೆಪ್ಯುಟಿ ಕಮಿಷನರ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಶೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ಶೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸಗಳನ್ನ ಪಡಿಯತಕ್ಕದ್ದು, ಮತ್ತು ಎದುರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಶೇವಣಿ ಇಡುವದಕ್ಕೆ ಯಾ ಲೈಸೆನ್ಸ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ...ಡುಕೊಂಡವನು ಮೃತಪಟ್ಟರೆ ಜವಾಬ್ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

7. ಮೇಲಿನ 6ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೇ ಹ... ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದಲ್ಲಿ ಚಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದರನ್ನ ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಶೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಶೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಶೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು :—

8. ಮೇಲಿನ 6ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು :—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ, ಅಥವಾ ಕಿರ್ಕಿಯಲ್ಲಿ ಮಿರ್ಕಿ ಅಂಡ್‌ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಏಬ್ರಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಕಂತ್ರಿ ಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯು ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಪೀಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚಲನ್ ಮೂಲಕ ಪಾವತಿಯಾಗತಕ್ಕದ್ದು. ಲೈಸೆನ್ಸದಾರನಿಂದ ಶೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯು ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದ ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರುಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(4) ಲೈಸೆನ್ಸದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ರೂಪಾಯಿಗೆ 1 ಆಣೆ ಯಂತೆ ಲೋಕಲ ಸೆಸ್ ಸಹಿತವಾಗಿ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ ಬ್ರೂಯಿರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ ಆಫ್ ಅಡ್ವೈಸ್ ಎಂಬ ರಹದಾರಿಯನ್ನ ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮಿಷನರ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಲೋಕಲ ಸೆಸ್ ಸಹಿತವಾಗಿ ಹಾಸಲ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡದ ಇತರ ಆಫಿಸರ್ರು ಸರಕನ್ನ ಲೈಸೆನ್ಸದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಬೆಂಗಳೂರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯ ಲೈಸೆನ್ಸದಾರನು ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಯೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ ಕೊಟ್ಟಿರುವ ಕಾಲದ ಮಟ್ಟಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(7) ಲೈಸೆನ್ಸದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು: ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚಿನ ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ಲೈಸೆನ್ಸದಾರನು 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ಹಳೇ ಲೈಸೆನ್ಸದಾರನ ಬಾಬತು ಸದರಿ ... ಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(9) ಈ ಗುತ್ತಿಗೆ ಎಕ್ಸೈಜ್ ಕಮಿಷನರ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(10) ದುಕಾನದಾರನು ಲೈಸನ್ಸದಾರನಂತೆಯೇ ಈ ಲೈಸನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಅದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(11) ಅವನು ಮಂಜೂರ್ಮಾಡಲ್ಪಟ್ಟ ಬೀರ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟ ಶೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ ಒಂದು ಇಂಪೀರಿಯಲ್ ಗ್ಯಾಲನಗಳು ಅಂದರೆ ನಾಲ್ಕು ಶೀ ಸೆಗಳಿಗಿಂತಾ ಹೆಚ್ಚಾಗಿರಕೂಡದು.

(12) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯ ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮಿಷ್ಯಂಡ್ ಆಫಿಸರಿಗಾದರೂ, ಪ್ರೈವೇಟ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ [illegible] ಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿಯಲಿ [illegible] ಬಹಳ ನಿಷಾಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮ [illegible] ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ [illegible] ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರ [illegible] ತನ್ನ ಅಂಗ [illegible] ದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿ [illegible] ಬಂದ ಜನಗಳು ಕುಡಿದ [illegible] ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕ [illegible] ವಾಗಿ ನಡೆಯುವಂತೆಯೂ ಅಂಗಡಿಯಲ್ಲಿ [illegible] ನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆ [illegible] ದರೂ ಬಹಿರಂಗವಾದ ದುರ್ನಡತೆಯುಳ್ಳ [illegible] ಪೋಲೀಸ್ ಆಫಿಸರ ಯಾ ಮೇಜಿಸ್ಟ್ರೇಟರಿಗೆ ತಿಳಿಸತಕ್ಕದ್ದು. ವ [illegible] ರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಪೋಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸ [illegible] ದಾದರೂ, ಅಥವಾ ಅಂಥವರೆಂದು ಎಣಿಸುವದಕೆ ಪೂರ್ಟರನ್ನು ಮಾರಲೂಕೂಡದು.

(13) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾ [illegible] ಗೇ ಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸನ್ಸ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(14) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರೆಗೆ ನಗದಾಗಿ ಹಣ ತೆಗದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(15) ಈ ಲೈಸನ್ಸ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ ಹೆಡ್ಡಿಗೆ ಬೀರ ಯಾ ಪೋರ್ಟರನಲ್ಲಿ ಮಾಲ್ಟ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಕೆಂಟು ದೇಶದಲ್ಲಿ ಬೆಳದಂಥಾ ಬಳ್ಳೀದಾಗಿ ಇರುವ ಮೂರು ಪೌನ್ ಹಾಪಸ್ ಎಂಬ ಹುವ್ವುಗಳನ್ನೂ ಸೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರ್ತು ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟೆಯ ಷುರು ತೂಕವು ಫಾರನ್ಹೈಟಿನ 60° ಉಷ್ಣ ವಿರುವಾಗ 1070 ಸಂಖ್ಯೆಯನ್ನು ಮೀರಕೂಡದು. ಬೀರು ಮತ್ತು ಪೋರ್ಟರನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸನ್ಸದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನಗೆ ಗುರಿಯಾಗಿರುವನು. ಇಂಥಾ ಬೀರ ಯಾ ಪೋರ್ಟರವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವದಕ್ಕಾಗಿ ಭಟ್ಟೀ ಕಾರಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(16) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸನ್ಸನ್ನು ಅಂಗಡಿಯಲ್ಲಿ ಅವಶ್ಯಕವಾಗಿ ಲೈಸನ್ಸದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(17) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆಮೇಲೆ ಹೊರ್ತು ಬೆಳಿಗ್ಗೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

(18) ಕಮ್ಮಿಶನರಿಯಟ್ಟಿ ಇಲಾಖೆಯ ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(19) ಸದರಿ ಅಂಗಡಿಗೆ ಒಂದೇಬಾಗಲಿರಬೇಕು. ಹಿಂಭಾಗದಲ್ಲಾದರೂ ಕೊನೇಭಾಗಗಳಲ್ಲಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

20) ಲೈಸೆನ್ಸದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರು[illegible] ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸದಾರನಿಗೆ ಅಂಥಾ ಪ[illegible]ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟ[illegible] ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ [illegible] ಮಾಡಿ ಸದರೀ ಲೈಸೆನ್ಸದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು[illegible]ಲೀ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿ ಇರತಕ್ಕದ್ದು. ಇದರಿಂ[illegible]ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸ[illegible] ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸದಾರನು ಪಾವತಿ ಮಾಡತಕ್ಕ[illegible]ಲ್ಪಟ್ಟಿರೆ ಪೂರಾಕಾಲದ ಗುತ್ತಿಗೆ ಹಣವು ಕೂಡೆ ಪಾವತಿ ಮಾಡಲಿಕ್ಕೆ ಗುರಿಯಾಗ[illegible] ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕ[illegible]

10. ಮೇಲಿನ ಹಿಂದಿನ ಷರತ್ತಿನಲ್ಲಿ ಕಂಡ ಪ್ರಕಾರ ಜುರ್ಮಾನೆ ಯಾ ದಂಡಗಳನ್ನು ವಿಧಿಸೋಣವು ಹಾಲಿ ಜಾರೀಲಿರುವ ಎಕ್ಸೈಜ್ ಕಾನೂನುಗಳಿಗೆ ವಿರೋಧವಾಗಿ ನಡಿಸಿದ ತಕ್ಸೀರಿಗೆ ಲೈಸೆನ್ಸದಾರರನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತುಕ್ರಮ ನಡಿಸಲು ಆತಂಕ ಪಡಿಸುವದಿಲ್ಲ.

ಪಟ್ಟಿ.

ತಾಲ್ಲೂಕಿನ ಹೆಸರು.	ಪ್ರತಿ ಅಂಗಡಿಯ ಕ್ರಮ ನಂಬರು.	ಅಂಗಡಿ ಇರುವ ಸ್ಥಳ.		ಚಾಲ್ತಿಲಿರುವ ಲೈಸೆನ್ಸದಾರರ ಹೆಸರು.	ಖರ್ಚು.				ಗುತ್ತಾ ಮೊಬಲಗು.				1902-03ನೇ ಸಾಲಿನಲ್ಲಿ 54 ಗ್ಯಾಲನುಗಳುಳ್ಳ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಛಡ ಸವಾಲು.	ಹರಾಜು ಸ್ಥಳ.	ಹರಾಜು ತಾರೀಖು.
		ಬಾಗಲು ನಂಬರು.	ಸ್ಥಳ.		1899—1900	1900—1901	1901—1902	1902—1903 ಆರು ತಿಂಗಳ ಬಿಕರಿ.	1899—1900	1900—1901	1901—1902	1902—1903			
					ಹಾಗ್ಸ್ ಹೆಡ್	ಹಾಗ್ಸ್ ಹೆಡ್	ಹಾಗ್ಸ್ ಹೆಡ್	ಹಾಗ್ಸ್ ಹೆಡ್	ರೂ.	ರೂ.	ರೂ.	ರೂ	ರೂ.		
ಬೆಂಗಳೂರು	1	42	ಮೈಸೂರು ರೋಡು	ಎ. ಕಂದಸಾಮಿ ಮೊದಲಿಯಾರ್	90	58	49	30	1320	2280	1400	2200		ಬೆಂಗಳೂರು ತಾಲ್ಲೂಕು ಕಚೇರಿ	13ನೇ ಜೂನ್ 1903.
	2	385	ಅರಳೇಪೇಟೆ ಟ್ಯಾಂಕ್‌ರೋಡ್		102	45	56	30	1410	1440					
	3	8	ಅವಿನ್ಯೂರೋಡ್ ಎಲಹಂಕದ ಬಾಗಲು		68	27	16	8	405	600					
ಬೌರಿಂಗ್‌ಪೇಟೆ.	1		ಉರಿಗಂ ಟವರ್ನ್	ಮೆಸ್ಸರ್ಸ್ ಏಬ್ರಹಾಂ ಅಂಡ್ ಕೋ	..	..	...	248	...	...	....	..	47	ಭಂಗಾರ ಗಣಿ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟು	15ನೇ ಜೂನ್ 1903.
	1		ಬೌರಿಂಗ್‌ಪೇಟೆ ಟವರ್ನ್		...	..	...	24	...	...	..	..	43		

ಪಿ. ಎನ್. ಪೂರ್ಣಯ್ಯ,
ಮೈಸೂರು ಶೀಮೆಯ ಎಕ್ಸೈಜ್ ಕಮ್ಮಿಷನರ್.

ಫಾರೆಸ್ಟು ಇಲಾಖಾ.

ಇಸ್ತಿಹಾರ್ನಾಮೆ.

ಸನ್ 1903ನೇ ಇಸವಿ ಮೇ 13ನೇ ತಾರೀಖು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಸನ್ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಜೂನ್ ಆಖೈರ್ ವರಿಗೆ ಹನ್ನೆರಡು ತಿಂಗಳ ಪರ್ಯಂತರ ಬವರಿಂಗ್ ಪೇಟೆ ತಾಲ್ಲೂಕು ಕಾಮಸಂದ್ರದ ಸ್ಟೇಟ್ ಫಾರೆಸ್ಟಿ ಕುಂದರಸನ ಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ಮಾಡತಕ್ಕ ಹಕ್ಕು 1903ನೇ ಇಸವಿ ಜೂನ್ 22ನೇ ತಾರೀಖಿನ ದಿವಸ ಮಧ್ಯಾಹ್ನ 3 ಘಂಟೆಗೆ ಸರಿಯಾಗಿ ಕೋಲಾರ್ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದಾಗಲಿ ಅಥವಾ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನೇಮಕ ಮಾಡಲ್ಪಡುವ ಇತರ ಆಫೀಸರ್ರಿಂದಾಗಲೀ ಬಹಿರಂಗವಾಗಿ ಹರಾಜು ಮಾಡಿ ಲ್ಪಡುತ್ತೆ.

(2) ಚಡಸವಾಲನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್ರವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲೀ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ್ರವರ ಯಖ್ತ್ಯಾರಿಯಲ್ಲಿರುತ್ತೆ.

(3) ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್ರವರು ಯಾವ ಸವಾಲುಗಳು ಅಂಗೀಕರಿಸುತ್ತಾರೋ ಅಂಥಾವರು ಸವಾಲ್ ಮೊಬಲಗು ಪೈಕಿ ಕಾಲು ಭಾಗದ ಮೊಬಲಗು ತಕ್ಷಣ ಡಿಪಾಜಟ್ ಇಡಬೇಕು. ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಹರಾಜು ಮಂಜೂರಾದ ಸಂಗತಿ ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಇರತಕ್ಕ ಮೊಬಲಗು ಪೂರಾ ಪಾವತೀ ಮಾಡಬೇಕು. ಈ ಷರತ್ತುಗಳಿಗೆ ತಪ್ಪಿದರೆ ಡಿಪಾಜಿಟ್ ಇಟ್ಟಿರತಕ್ಕ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಕಂಟ್ರಾಕ್ಟನ್ನು ದುಸರಾ ಹರಾಜು ಮಾಡಿಸುವದಲ್ಲದೆ ಇದರಲ್ಲಿ ಉಂಟಾಗುವ ಯಾವ ಫಾಯಿದೆಗೂ ಮೊದಲಿನ ಸವಾಲ್‌ದಾರನಿಗೆ ಹಕ್ಕು ಇರುವದಿಲ್ಲ. ಮತ್ತು ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಇವನನ್ನು ಗುರಿಪಡಿಸಿ ಈ ಮೊಬಲಗು ಇವನಿಂದ ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(4) ಈ ಕೆಳಗೆ ಕಂಡ ಷರತ್ತುಗಳು ಕಂಡು ಷರತ್ತಿಗೆ ಬದ್ಧನಾಗಿರುವಂತೆ ಕಂಟ್ರಾಕ್ಟುದಾರನು ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನ ಹರಾಜು ಮಂಜೂರಾದ ಒಂದು ವಾರದಲ್ಲಿ ಬರದುಕೊಟ್ಟ ವಿನಹಾ ಟೋಲ್ ವಸೂಲಿಗೆ ಅಪ್ಪಣೆ ದೊರಿಯಲಾರದು. ಕಂಟ್ರಾಕ್ಟರು ಪ್ರತಿ ದಿನವೂ ವಸೂಲ್ಮಾಡುವ ಮೊಬಲಗಿಗೆ ಒಂದು ಲೆಖ್ಖದ ಬುಕ್ಕು ಇಟ್ಟಿರಬೇಕು. ಇದು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೇ ಮಾಡುವದಕ್ಕೆ ಬಂದಾಗ ಖುಲ್ಲಾ ಇರಬೇಕು.

(5) ಕಂಟ್ರಾಕ್ಟುದಾರನು ಈ ಕೆಳಗೆ ಕಂಡ ಟೋಲ್ ಶಿವಾಯಿ ಮತ್ತ್ಯಾವದನ್ನು ವಸೂಲ್ಮಾಡಕೂಡದು. ಮತ್ತು ಅದರಲ್ಲಿ ನಮೂದಿಸುವ ದರದಂತೆಯೇ ವಸೂಲ್ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರ ಕಂಟ್ರಾಕ್ಟುದಾರನನ್ನ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಪಡಿಸುವದಲ್ಲದೆ ಕಂಟ್ರಾಕ್ಟು ಸಹ ರದ್ದುಮಾಡಲ್ಪಡುವದು.

(6) ಕಂಟ್ರಾಕ್ಟುದಾರನು ಮೈಸೂರ್ ಸರಹದ್ದು ಹೊರಗಿನಿಂದ ಕಾಮಸಂದ್ರ ಸ್ಟೇಟ್ ಫಾರೆಸ್ಟು ಮಾರ್ಗವಾಗಿ ಬರತಕ್ಕ ಸಾದೆ ಭರ್ತಿ ಭಂಡಿಗೆ ಮಾತ್ರ ಟೋಲ್ ವಸೂಲ್ಮಾಡಬೇಕು.

(7) ಕಂಟ್ರಾಕ್ಟುದಾರನು (1) ಕುಂದರಸನಹಳ್ಳಿ, (2) ಮುತ್ತನಹಳ್ಳಿ ಈ ಎರಡು ಟೋಲ್ ಗೇಟಿನಲ್ಲಿ ಶಿವಾಯಿ ಇತರ ಸ್ಥಳದಲ್ಲಿ ಟೋಲ್ ವಸೂಲ್ಮಾಡಕೂಡದು.

(8) ಇನ್ನೇನಾದರೂ ತಪಶೀಲು ಬೇಕಾದರೆ ಕೋಲಾರ್ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಗೆ ಬರದುಕೊಂಡು ತಿಳದುಕೊಳ್ಳಬಹುದು. ಪ್ರತಿಯೊಂದು ಸಾದೆ ಭರ್ತಿ ಭಂಡಿಗೂ ಭಂಡಿ 1ಕ್ಕೆ ಎರಡಾಣೆಯಂತೆ ಕುಂದರಸನಹಳ್ಳಿ ಮತ್ತು ಮುತ್ತನಹಳ್ಳಿ ಟೋಲ್ ಗೇಟಿನಲ್ಲಿ ಟೋಲ್ ವಸೂಲ್ ಮಾಡಲ್ಪಡಬೇಕು.

ಇಸ್ತಿಹಾರ್, ತಾರೀಖು 23ನೇ ಮೇ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬವರಿಂಗ್‌ಪ್ಯಾಟೆ ತಾಲ್ಲೂಕಿನಲ್ಲಿರುವ ಕಾಮಸಂದ್ರದ ಸ್ಟೇಟ್ ಫಾರೆಸ್ಟು ಪೈಕಿ ಈ ಕೆಳಗೆ ಕಂಡ ತಾಕುಗಳಲ್ಲಿರುವ ಮರಗಳನ್ನು ಈ ಇಸ್ತಿಹಾರ್‌ನಲ್ಲಿ ಕಂಡ ಷರತ್ತುಗಳಿಗೆ ಒಳಪಟ್ಟು 1903ನೇ ಇಸವಿ ಜುಲೈ 15ರ ಲಾಗಾಯಿತು 1904ನೇ ಇಸವಿ ಜೂನ್ ಆಖೈರು ವರಿಗೆ ಕಡದುಸಾಗಿಸಿಕೊಂಡು ಹೋಗತಕ್ಕ ಹಕ್ಕನ್ನು 1903ನೇ ಇಸವಿ 24ನೇ ಜೂನ್ ತಾರೀಖು ಬುಧವಾರ ಮಧ್ಯಾಹ್ನ 2 ಘಂಟೆಗೆ ಡೆಪ್ಯುಟಿ ಕಮಿಷನರವರೊಂದಿಗಾಗಲಿ ಅಥವಾ ಅವರಿಂದ ನೇಮಕ ಮಾಡಲ್ಪಡುವ ಇತರ ಆಫೀಸರೊಂದಿಗಾಗಲಿ ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಬವರಿಂಗ್‌ಪ್ಯಾಟೆ ಮೊಕ್ಕಾಮಿನಲ್ಲಿ ಹರಾಜು ಮಾಡುವರು.

ಬ್ಲಾಕ್ ನಂಬರು.	ತಾಕು ನಂಬರು.	ಸುಮಾರು ವಿಸ್ತೀರ್ಣ ಎಕರೆ.	ಮುಖ್ಯವಾದ ಮರಗಳ ಜಾತಿ.	ಷರಾ.
I III	4 4	363 476	ಚಿಗರೆ ಅಥವಾ ಚುಜ್ಜಲು, ನಲ್ಲಬಲಸು, ದೇವದಾರಿ, ಗೊರವಿ, ಫಲ್ವರೇಣಿ ವಗೈರೆ.	1ನೇ ಬ್ಲಾಕಿನ ಮೊದಲು ನಾಲ್ಕು ಕೂಪುಗಳು ಮತ್ತು 3ನೇ ಬ್ಲಾಕಿನ ಮೊದಲು ನಾಲ್ಕು ಕೂಪುಗಳು ಶಿವಾಯಿ ಬಾಕಿ ಸ್ಟೇಟ್ ಫಾರೆಸ್ಟಿನಲ್ಲಿರತಕ್ಕ ವಿಶಿಷ್ಟ ಪಣಸಾದೆಯನ್ನು ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಮೇಲ್ಕಂಡ ತಾಕುಗಳು ಪ್ರತ್ಯೇಕವಾಗಿಯಾಗಲಿ ಒಟ್ಟಾಗಿಯಾಗಲಿ ಅಥವಾ ಎಕರೆ 1ಕ್ಕೆ ಇಷ್ಟು ಮೊಬಲಗಿಗೆಂದಾಗಲಿ ಹರಾಜು ಮಾಡುವಂಥ ಆಫೀಸರಿಗೆ ಸೂಕ್ತ ಕಂಡುಬರುವ ರೀತಿಯಲ್ಲಿ ಹರಾಜು ಮಾಡಲ್ಪಡುವದು. ಈ ಹರಾಜು ಕನ್ಸರ್ವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವದಲ್ಲದೆ, ಅನಂತರ ಬರುವ ಯಾವ ಮನಿವೆಯೂ, ತಕರಾರೂ ಅಂಗೀಕರಿಸಲ್ಪಡುವದಿಲ್ಲವು.

ಡಿಸ್ಟ್ರಿಕ್ಟು.	ತಾಲ್ಲೋಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಪ್ರಕೃತಿ ವಿವರ.	ಸ್ಥಳ ವ ಚಕ್ಕುಬಂದಿ.
ಶಿವಮೊಗ್ಗ.	ಸಾಗರ.	15 ಚದರ ಮೈಲಿಗಳು.	ಶೋಲಾ ಕಾಡು.	ಸ್ಥಳ.—ಪಶ್ಚಿಮ ಘಾಟಿಯಲ್ಲಿ ಷರಾವತಿ ನದಿಯಿಂದಲೂ ಮತ್ತು ಉತ್ತರ ಕನ್ನಡಾ ಎಲ್ಲೆಯಿಂದಲೂ ಉಂಟಾದ ಮೂಲೆಯಲ್ಲಿರುವ ಎರಡು ಬ್ಲಾಕುಗಳು ವುಳ್ಳ ಜಂಗಲಿನ ತುಂಡು. **ಚಕ್ಕುಬಂದಿ.** **A. ಬ್ಲಾಕು.** ಉತ್ತರಕ್ಕೆ.—ಷರಾವತಿ ನದಿ. ಪೂರ್ವಕ್ಕೆ.—ಕರಗಲ್ ಗ್ರಾಮದ ಸರ್ವೆ ನಂ. 2. ದಕ್ಷಿಣಕ್ಕೆ.—ಕರಗಲ್‌ದ ಸರ್ವೆ ನಂ. 2ರ ಅಂಚಿನಲ್ಲಿರುವ A. ಎಂಬ ಕಲ್ಲುಪ್ಪೆಯಿಂದ ಹೊರಟು ಎಲ್ಲೆಯು ವಾಯುವ್ಯದಿಕ್ಕಾಗಿ ನೆಟ್ಟಗೆ ಕರಗಲದ ಸರ್ವೆ ನಂ. 16ರ ಮಧ್ಯೆ ಕರಗಲದ ಸರ್ವೆ ನಂ. 16 ಮತ್ತು ತಲಕಳಲೆಯು ಸರ್ವೆ ನಂ. 61 ವ 62 ಇವುಗಳ ಬಹುತ್ವದ ಬಾಂದಿಗೆ ಹೋಗುತ್ತದೆ. ಆಖೈರು ಸ್ಥಳದಿಂದ ಲೈನು ದಕ್ಷಿಣಕ್ಕೆ ತಿರುಗಿ ನೆಟ್ಟಗೆ ತಲಕಳಲೆಯು ಸರ್ವೆ ನಂ. 61ರ ಮಧ್ಯೆ ಸದರೀ ಗ್ರಾಮದ ಸರ್ವೆ ನಂ. 63ರ ವಾಯುವ್ಯ ಬಾಂದಿಗೆ ಹೋಗುತ್ತದೆ. ಮೇಲ್ಕಂಡ ಸ್ಥಳದಿಂದ ಲೈನು ಸರ್ವೆ ನಂ. 63ರ ಪಶ್ಚಿಮ ಅಂಚಿನ ಉದ್ದಕ್ಕೂ ಹೋಗುತ್ತದೆ. ಆಮೇಲೆ ಆಖೈರ ಸರ್ವೆ ನಂಬರಿನಲ್ಲಿ ಸೇರುವ ಕಾಲುಹಾದಿಯನ್ನು ಅನುಸರಿಸಿ ಹೋಗಿ ಲೈನು B ಎಂಬ ಕಲ್ಲುಪ್ಪೆಯಲ್ಲಿ ಸರ್ವೆ ನಂ. 61 ವ 116 ಇವುಗಳ ಮಧ್ಯೆ ಇರುವ ಎಲ್ಲೆಯನ್ನು ಮುಟ್ಟುತ್ತದೆ. ಆಖೈರ ಸ್ಥಳದಿಂದ ಲೈನು ಸರ್ವೆ ನಂ. 61 ವ 60 ಇವುಗಳ ದಕ್ಷಿಣ ಅಂಚಿನ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ.—ಉತ್ತರ ಕನ್ನಡಾದ ಸೂಲಿಮನೆ ಗ್ರಾಮ. **B. ಬ್ಲಾಕು.** ಉತ್ತರಕ್ಕೆ.—ತಲಕಳಲೆಯು ಸರ್ವೆ ನಂ. 60ರ ಪಶ್ಚಿಮ ಭಾಗ. ಪೂರ್ವಕ್ಕೆ.—ಎಲ್ಲೆಯು ತಲಕಳಲೆಯು ಸರ್ವೆ ನಂ. 24, 25, 33 ವ 11 ಇವುಗಳ ಬಹುತ್ವದ ಬಾಂದನ್ನು ಮುಟ್ಟುವ ವರಿವಿಗೆ ಸರ್ವೆ ನಂ. 26ರ ಆಮೇಲೆ 25ರ ಪೂರ್ವ ಅಂಚನ್ನು ಅನುಸರಿಸಿ ಹೋಗುತ್ತದೆ. ಆಖೈರು ಸ್ಥಳದಿಂದ ಲೈನು ದಕ್ಷಿಣಕ್ಕೆ ನೆಟ್ಟಗೆ ಸರ್ವೆ ನಂ. 24 ವ 132 ಇವುಗಳ ಮಧ್ಯೆ ತಲಕಳಲೆಯು ಸರ್ವೆ ನಂ. 132, 130, ವ 126 ಇವುಗಳ ಬಹುತ್ವದ ಬಾಂದಿಗೆ ಹೋಗುತ್ತದೆ. ದಕ್ಷಿಣಕ್ಕೆ.—ಎಲ್ಲೆ ಲೈನು ಉತ್ತರ ಕನ್ನಡ ಎಲ್ಲೆಯನ್ನು ಮುಟ್ಟುವವರಿವಿಗೆ ಸರ್ವೆ ನಂ. 126 ವ 125 ಇವುಗಳೊಡನೆ ಸರ್ವೆ ನಂ. 132 ಸೇರತಕ್ಕ ಸ್ಥಳದ ಉದ್ದಕ್ಕೂ ವಕ್ರಾಕಾರವಾಗಿ ಹೋಗುತ್ತದೆ. ಪಶ್ಚಿಮಕ್ಕೆ.—ಉತ್ತರ ಕನ್ನಡಾ ಎಲ್ಲೆ.

ಸಿ. ಎಸ್. ಬಾಲಸುಂದರಂ ಅಯ್ಯರ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್, ಸಾಗರ ಸಬ್‌ಡಿವಿಜನ್.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮಾಗಡೀ ತಾಲ್ಲೂಕು ತಿಪ್ಪಸಂದ್ರದ ಹೋಬಳಿ ಜೋಡಿ... ಹಳ್ಳಿ ಗ್ರಾಮವು ಸನ್ 1903ನೇ ಇಸವಿ ಜೂನ್ 15ನೇ ತಾರೀಖಿನಲ್ಲಿ ಮಾಗಡಿ ತಾಲ್ಲೂಕು ಕಚೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1903ನೇ ಇಸವಿ ಮೇ ತಿಂಗಳು 21ನೇ ತಾರೀಖು ಮೈಸೂರು ಗೆಜೆಟ್ 2ನೇ ಭಾಗದ 228ನೇ ಪೇಜಿನಲ್ಲಿ ಪ್ರಖ್ಯಾಪಿಸಲಾಗಿದೆ.

ಅಬಸ್ಟ್ರ್ಯಾಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಮಾಗಡಿ ತಾಲ್ಲೂಕಿನ ಈ ಇರೇಬಿಯಲ್ಲಿ ನಮೂದಾಗುವ ಗ್ರಾಮಗಳನ್ನು 1902—1903ನೇ ಸಾಲಿನ ರೆವಿನ್ಯೂ ಬಾಕಿಗಾಗಿ 1903ನೇ ಇಸವಿ ಜೂನ್ 28ನೇ ತಾರೀಖಿನಲ್ಲಿ ತಾಲ್ಲೂಕ ಕಚೇರಿಯಲ್ಲಿ ಅಮಲ್ದಾರ್ರವರ ರೂಬರೂಬ್ ಹರಾಜ್ ಮಾಡಿಸಲ್ಪಡುತ್ತೆ.

ಖಾಯಂಗುತ್ತಾ ಕೋಲೂರು ಗುರ್ರಾಯಪುರ.
ಖಾಯಂಗುತ್ತಾ ಕೋಲೂರು ನಂಜುಂಡಪುರ.

ತಪಸೀಲ ಬಗ್ಯೆ 1903ನೇ ಇಸವಿ ಮೇ ತಾರೀಖು 28ನೇ ಮರ್ಕೂಂ 21ನೇ ನಂಬರು ಮೈಸೂರು ಗೆಜೆಟ್ 2ನೇ ಭಾಗದ 246-247-248ನೇ ನಂಬರು ಪೇಜುಗಳು ನೋಡತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ.

ಕೋಲಾರ ಡಿಸ್ಟ್ರಿಕ್ಟು.

ನೋಟಿಫಿಕೇಷನ್ ತಾರೀಖು 22ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ತ್ಯಾಕಲ್ ಹೋಬಳಿ ಮಾರ್ಜಿನ್ನಲ್ಲಿ ನಮೂದಾಗುವ ಗ್ರಾಮಗಳ ಬಳಿ ಇರುವ ಬಂಡೆ ಮೇಲೆ ಶೋಭಕೃತು ಸಂವತ್ಸರಕ್ಕೆ ಅಂದರೆ 1903ನೇ ಜುಲೈ 1ನೇ ತಾರೀಖು ಲಗಾಯಿತು 1904ನೇ ಜೂನ್ ಆಖೈರು ವರಿಗೆ ಕಲ್ಲು ತೆಗಿಯಲು 1903ನೇ ಜೂನ್ 30ನೇ ತಾರೀಖಿನಲ್ಲಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಹರಾಜು ಹಾಕಿಸಲ್ಪಡುತ್ತೆ. ಖಾಯಿಷು ಉಳ್ಳವರು ಆ ಟೈಂನಲ್ಲಿ ಹಾಜರಿದ್ದು ಧಾರಾಳವಾಗಿ ಸವಾಲ್ ಮಾಡಬಹುದು. ಛಡ ಸವಾಲ್ದಾರನು ಹರಾಜು ಖೈದಾದ ಕೂಡ್ಲೆ ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ಟು ಮೊಬಲಗು ಹಾಜರ್ಮಾಡುವದಕ್ಕೂ ಹರಾಜಾದ ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಬಾಕೀ ಪೂರಾ ಮೊಬಲಗು ಹಾಜರ್ಮಾಡುವದಕ್ಕೂ ಬದ್ಧನಾಗಿದ್ದಾನೆ. ಇದಕ್ಕೆ ತಪ್ಪಿದರೆ ಹಾಜರಾಗಿರುವ ಮೊಬಲಗು ದಂಡವಾಗಿ ತೆಗೆದುಕೊಂಡು ದುಸರಾ ಹರಾಜು ಮಾಡಿಸುವದರಲ್ಲಿ ಬರುತ್ತಲ್ಲದೇ ಮೊದಲು ಸವಾಲಿಗೆ ಕಮ್ಮಿ ಬೀಳುವ ಮೊಬಲಗನ್ನು ಮೊದಲು ಛಡ ಸವಾಲ್ದಾರನಿಂದ ಜಮೀನ್ ಕಂದಾಯದ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ. ಈ ಹರಾಜು ಡಿಸ್ಟ್ರಿಕ್ಟ್ ಮಂಜೂರಾತಿಗೂ ಮತ್ತು ಲ್ಯಾಂಡ್ ರೆವಿನ್ಯೂ ರೂಲ್ಸ್ 18ನೇ ಸೆಕ್ಷನ್ನಲ್ಲಿ ಕಂಡ ಷರತ್ತಿಗೂ ವಳಪಟ್ಟಿರುತ್ತೆ. ಈ ವಿವರ ತಿಳಿಯುವದು.

1. ತ್ಯಾಕಲ್
2. ಕಾವಲ್ ಗಿರಿಯನಹಳ್ಳಿ
3. ಕೊಂಡರಾಜನ ಹಳ್ಳಿ
4. ಕೊರಚನೂರು
5. ಹುಣಸಕೋಟೆ
6. ವುಳ್ಳೇರಹಳ್ಳಿ

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಮೇ 1903.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಗರುಡನಹಳ್ಳಿಯ ಸುಬ್ಬಣ್ಣಾಚಾರ್ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಛೇರಿಯಲ್ಲಿ ಸನ್ 1903ನೇ ಜುಲೈ 10ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 75—15—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಉಳಿದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳೊಳಗೆ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು: ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು: ನಂಬರ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.	ಕಂದಾಯ.	ಸರ್ಕಾರಕ್ಕೆ ಬರಬೇಕಾದ ಒಟ್ಟು ಬಾಕೀ ಮತ್ತು ಸಂಬಂಧವಾದ ಷರಾಗಳು.			
										ರೂ.	ಆ.	ಪೈ.	
ತುಮಕೂರು	ನರಸಾಪುರ	ಗರುಡನಪಾಳ್ಯ	ಶ್ಯಾನುಭೋಗ್ ಸುಬ್ಬಾಶ್ಯಾನುಭೋಗ್, ರಾಮಚಂದ್ರರಾವ್	..	1. ಪೂರ್ವಕ್ಕೆ—ಜೋಡಿ ಚೊಕ್ಕಪುರ ಸರಹದ್ದು 1. ಪಶ್ಚಿಮಕ್ಕೆ—ಚಾಉಡದೇನಹಳ್ಳಿ ಸರಹದ್ದು 1. ಉತ್ತರಕ್ಕೆ—ಚೆಟ್ಟಿಹೊಸಪುರ ಚಾಉಡದೇನಹಳ್ಳಿ ಸರಹದ್ದು 1. ದಕ್ಷಿಣಕ್ಕೆ—ಕುರಿಕಿದ ಸರಹದ್ದು ಈ ಮಧ್ಯೆ ಇರುವ ಗ್ರಾಮ ಪೂರಾ					75 0 75	7 8 15	6 0 6	ಗುತ್ತಾ ನೋಟೀಸ್ ಫೀ

* ಯಾ ಬಾಕೀ ಇರುವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್.

ತಾರೀಖು 1ನೇ ಜೂನ್ 1903ನೇ ಇಸವಿ.

ಇದರಿಂದ ಎಲ್ಲರಿಗೂ ತಿಳಿಯಪಡಿಸುವದೇನಂದರೆ:—ಪಾವಗಡ ತಾಲ್ಲೂಕು ಡಿಸ್ಟ್ರಿಕ್ಟ್ ಜಂಗಲ್ ಮತ್ತು ಸರಕಾರಿ ಆಕಾರ ಕಂಡ ಬಂಜರ ಜಮೀನು ಮತ್ತು ಪ್ಯೂಯಲ್ ರಿಜರ್ವ್ ಇವುಗಳಲ್ಲಿನ ಜಂಗಲಿ ಪಸಾರ ಬಾಬು 1903 - 1904ನೇ ಸಾಲಿಗೆ ಅಂದರೆ 1903ನೇ ಜುಲೈ 1ರ ಲಾಗಾಯತು 1904ನೇ ಜೂನ್ ಆಖೈರವರಿವಿಗೂ ರೂಢಿಸಿಕೊಳ್ಳತಕ್ಕ ಹಕ್ಕುದಾರಿಯು ಪಾವಗಡ ಮೊಕ್ಕಾಂನಲ್ಲಿ 1903ನೇ ಜೂನ್ 20ನೇ ತಾರೀಖು ಮಧ್ಯಾಹ್ನದಲ್ಲಿ ತಾಲ್ಲೂಕು ಅಮಲ್ದಾರ್ರು ಮತ್ತು ಮದ್ದಿಗಿರಿ ರೇಂಜ್ ಆಫಿಸರು ಸೇರಿ ಇವರಿಂದ ಬಹಿರಂಗವಾಗಿ ಹರಾಜು ಹಾಕಲ್ಪಡುವದು :—

ಷರತ್ತು ವಗೈರೆ 28-5-1903ನೇ ಮುಕ್ಕಾಂ ಮೈಸೂರು ಗೆಜೆಟ್ಟಿನ IIನೇ ಭಾಗ 620ನೇ ಪುಟದಲ್ಲಿ ಪ್ರಾಯಿಷ್ ಆಗಿರುವ ನೋಟಿಫಿಕೇಷನ್ ನೋಡತಕ್ಕದ್ದು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರ ಆಫೀಸಿನಿಂದ.

ತಾರೀಖು 29ನೇ ಮೇ ಮಾಹೆ 1903, ಮೊಕ್ಕಾಂ ತುಮಕೂರು.

ಇದರಿಂದ ಸಮಸ್ತ ಜನಗಳಿಗು ತಿಳಿಯಪಡಿಸುವದೇನಂದರೆ,—ಮೈಸೂರು ಶೀಮೆಯಲ್ಲಿ ಇಂಡಿಯನ್ ಮೈನ್ಸ್ ಡೆವಲೆಪ್‌ಮೆಂಟ್ ಸಿಂಡಿಕೇಟ್‌ಯೆಂದು ಸ್ಥಾಪಿತವಾಗಿರುವ ಕಂಪನಿಯವರಿಗೋಸ್ಕರ ಇದರ ಸೂಪರಿಂಟೆಂಡೆಂಟರವರಾದ ಸಾಮ್ಯುಯಲ್ ಜಾರ್ಜ್ ಯನ್ನುವರು—ಭಂಗಾರದ ಗಣಿಗೆ ವುಪಯೋಗಿಸುವದಕ್ಕೋಸ್ಕರ, ಬ್ಲಾಸ್ಟಿಂಗ್ ಜೆಲೆಟೀನ್, ತೋಟಾಗಳು ಮತ್ತು ಸುರಸುರಬತ್ತಿಗಳು—ಇವುಗಳನ್ನು ಇಟ್ಟುಕೊಳ್ಳಲಿಕ್ಕೆ ಚಿಕ್ಕನಾಯಿಕನಹಳ್ಳಿ ತಾಲ್ಲೂಕು ಬಳ್ಳಾರ ಗ್ರಾಮದಲ್ಲಿ ಶಿರಾ—ಹುಳಿಯಾರ್ ರೋಡು 42—43ನೇ ಮೈಲೀಗೆ ಮಧ್ಯೆ ಫೈಲ್‌ನಲ್ಲಿ ಒಂದು ಮೆಗಜೀನ್ ಕಟ್ಟಲು ಲೈಸೆನ್ಸ್ ಬಗ್ಗೆ ದರಖಾಸ್ತು ಮಾಡಿರುತ್ತಾರೆ. 29—6—98ನೇ ಮುಕ್ಕಾಂ ಜಿಯಲಾಜಿಕಲ್ ಡಿಪಾರ್ಟುಮೆಂಟ್ 311 M—1897—1898ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ 18ನೇ ರೂಲ್ 2 (ಬ)ನೇ ಪ್ರಕಾರ ಅನುಸರಿಸಿ ಈ ಮೆಗಜೀನ್ ಕಟ್ಟಕೂಡದೆಂದು ತಕರಾರು ಮಾಡುವರು ಯಾರಾದರು ಇದ್ದರೆ ಈ ಇಸ್ತಿಹಾರ್ ಜಾರಿ ಆದ 15 ದಿವಸಗಳ ವೊಳಗಾಗಿ ಅಂದರೆ 1903ನೇ ಇಸವಿ ಜೂನ್ ಮಾಹೆ 15ನೇ ತಾರೀಖಿನ ವೊಳಗಾಗಿ ತಕರಾರು ನಮೂದು ಮಾಡಿ ಸ್ಟೇಟುಮೆಂಟನ್ನು ತುಮಕೂರು ಮೊಕ್ಕಾಂ ನಮ್ಮ ಆಫೀಸಿನಲ್ಲಿ ಹಾಜರ್ಮಾಡಬೇಕು. ಈ ವಾಯಿದೆ ಕಳದು ಬರುವ ತಕರಾರನ್ನು ಅಂಗೀಕರಿಸುವದಿಲ್ಲ ತಿಳಿಯುವದು.

ಎಂ. ಎಸ್. ನಾರಾಯಣರಾವ್,
ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 25ನೇ ಮೇ 1903.

1. ಕಂದಾಯದ ಬಾಕೀದಾರರಾದ ಬೆಳಲಕಟ್ಟೆ ಗ್ರಾಮದ ಪುರಾಣೀಕ ಮಂಜಭಟ್ಟ ವಗೈರೆ 13 ಜನರಿಂದ ಬರಬೇಕಾದ ಜಮಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1903ನೇ ಇಸವಿ ಜುಲೈ 10ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ಆ ದಿವಸ ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 526—6—5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಖ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.
ಶಿವಮೊಗ್ಗ	ಹೊಳಲೂರು	ಬೆಳಲಕಟ್ಟೆ	ಪುರಾಣೀಕ ಮಂಜಭಟ್ಟ ವಗೈರೆ 13 ಜನರು		ರೂ. ಆ. ಪೈ. 5000—0—0	ಪೂರಾಗ್ರಾಮ	ಖರಾಬು	816	7	51	0	2	526	6	5
							ಖುಷ್ಕಿ	463	5	156	6	4			
							ತರಿ	266	3	649	13	11			
							ಬಾಗಾಯತು	13	19	67	6	0			
								1558	34	924	10	5			
							ಜೋಡಿ			379	0	0			

* ಯಾ ಬಾಕಿ ಇರುವ ಪಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಇಸ್ತಿಹಾರ.

ತಾರೀಖು 14ನೇ ಮೇ 1903.

1902—1903ನೇ ಸಾಲಾಖೈರು ವರಿಗೆ ಮೆ|| ಕೆ. ಕೃಷ್ಣಯ್ಯಂಗಾರ್ರಿಂದ ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿಗಾಗಿ

ಸೂಳೆಕೆರೆ ದೊಡ್ಡಗಟ್ಟೆ ಕಬ್ಬಳೆ	ತ್ಯಾವಣಿಗೆ ರಾಮಗೊಂಡನಹಳ್ಳಿ	ಚನ್ನಗಿರಿ ತಾಲ್ಲೂಕು ಈ ಇರೇಬಿನಲ್ಲಿ ಕಾಣುವ ಗ್ರಾಮಗಳಲ್ಲಿ ಜ ಮೀನುಗಳು 1903ನೇ ಜೂನ ತಿಂಗಳು 18, 20, 22, 23, 24 ತಾರೀಖುಗಳಲ್ಲಿ ಕ್ರಮವಾಗಿ ಹರಾಜು ಹಾಕಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪ್ಸೀಲುಗಳ ಬಗ್ಗೆ 1903ನೇ ಇಸವಿ ಮೇ ತಾರೀಖು 21ನೇ ಮೈಸೂರು ಗೆಜೆಟ್ಟಿನಲ್ಲಿ ಪ್ರಾಯಿ ಷಾಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮ್ಮಿಷನರ.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರನಾಮಾ.

ತಾರೀಖು 25ನೇ ಮೇ 1903, ಮೊಕ್ಕಾಂ ಚಿಕ್ಕಮಗಳೂರು.

ಮೈಸೂರು ಸರ್ಕಾರದವರ ನಂಬರು 9007—ಲೆಜಿಸ-56 ತಾರೀಖು 11ನೇ ಡಿಶಂಬರು 1901ರ ಇಸ್ತಿಹಾರಿನ ಪ್ಯಾರಾ 5ಕ್ಕೆ ಅನುಗುಣವಾಗಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಹರಿಯುವ ತುಂಗಾ ಮತ್ತು ಭದ್ರಾನದಿಗಳಲ್ಲಿ ಬರುವ ನವಂಬರು ಮಾಹೆ ಆಖೈರು ವ ರಿಗೂ ಯಾರೂ ಮೀನು ಹಿಡಿಯಕೂಡದೆಂಬದಾಗಿ ಇದರಿಂದ ವಿಧಿಶಿರುತ್ತೆ ತಿಳಿಯುವದು.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ.

ಚಿತ್ರದುರ್ಗ ಡಿಸ್ಟ್ರಿಕ್ಟು.

ಇಸ್ತಿಹಾರ.

ತಾರೀಖು 20ನೇ ಮೇ 1903ನೇ ಇಸವಿ ಚಿತ್ರದುರ್ಗ.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿ ಇರುವ ರಿಜಿಸ್ಟ್ರಾರದ ದಸ್ತೈವಜುಗಳು 2 ವರುಷಗಳಿಗೆ ಮೇಲ್ಪಟ್ಟು ಮೊಳಕಾಲ್ಮೂರುನಲ್ಲಿ ಬರದಿರುವ ಸಬ ರಿಜಿಸ್ಟ್ರಾರ್ ಆಫೀಸಿನಲ್ಲಿ ವಾರಸದಾರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳುವಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅಥವಾ ಅವರ ಪ್ರತಿನಿಧಿಗಳಾಗಲಿ ಯಾ ದಸ್ತೈವಜುಗಳಿಗೆ ಬಾಧ್ಯತೆ ವುಳ್ಳವರಾಗಲಿ ಸಬ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತಮ್ಮ ದಸ್ತೈವಜು ವಾಪಸು ಪಡಿಯಬೇಕು ತಪ್ಪಿದರೆ ರಿಜಿಸ್ಟ್ರೇಷನ ಆಕ್ಟು 85ನೇ ಸೆಕ್ಷನ ಮೇರಿಗೆ ನಾಶಪಡಿಸಲ್ಪಡುತ್ತೆ.

ಬುಕ್ಕು ಮತ್ತು ರಿಜಿಸ್ಟರ ನಂಬರು.	ದಸ್ತೈವಜು ಬರದು ಕೊಟ್ಟವರ ಹೆಸರು.	ಬರಶಿಕೊಂಡವನ ಹೆಸರು.	ದಸ್ತೈವಜು ತಾರೀಖು.	ರಿಜಿಸ್ಟ್ರಾರದ ತಾರೀಖು.	ದಸ್ತೈವಜು ಭಾವ ಕಿಮ್ಮತು.
ಬುಕ್ಕು ನಂ. 1 ದಸ್ತೈವಜು ನಂ. 84	ನಾರಾಯಣನಾಯಕ.	ನಾರಣಪ್ಪ ... ಪಾಪಣ್ಣ ... ನಾರಾಯಣಸಾಮಿ ..	6—8—1900	7—8—1900	200 ರೂಪಾಯಿನ ದಾನ ಪತ್ರ
ಡಿಟೋ 86	ಡಿಟೋ ...	ಮಂಗವ್ವ ..	6—8—1900	7—8—1900	80 ರೂಪಾಯಿನ ಖುಲಾಸೆ ಪತ್ರ
ಡಿಟೋ 223	ರಾಘವೇಂದ್ರರಾವು...	ಅನಂತಶೆಟ್ರು ...	1—11—1900	5—11—1900	200 ರೂಪಾಯಿನ ಕ್ರಯಪತ್ರ

ಬಿ. ವೆಂಕೋಬರಾವ್,
ಡಿಸ್ಟ್ರಿಕ್ಟ ರಿಜಿಸ್ಟ್ರಾರ.

ತಾರೀಖು 29ನೇ ಮೇ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ನಮ್ಮ ತಂದೆಯಾದ ತುಮಕೂರು ವಾಸಸ್ಥ ಜವಳಿ ಅಂಗಡಿ ಚನ್ನಪ್ಪನವರ ಮಗ ಕಂಬದೂರಯ್ಯನಿಗೆ ಪಿತ್ಥಭ್ರಮಣೆಯಿಂದ, ಜ್ಞಾನ ಸ್ವಾಧೀನವಿಲ್ಲದೆ ಮನಸ್ವೀ ಇರುತ್ತಾನೆ. ಈತನಿಂದ ಯಾರಾದರೂ, ಯಾವ ಮೂಲಕವಾದ ಲೇವಾದೇವಿಯನ್ನಾಗಲೀ, ಸೊತ್ತುಗಳು ಪರಭಾರೆಯನ್ನಾಗಲಿ ಇತರ ಯಾವವಿಧವಾದ ಟ್ರ್ಯಾನ್ಸ್ಆಕ್ಷನ ಆಗಲೀ ನಡಿಸಿದಲ್ಲಿ ನಮ್ಮ ಆಸ್ತಿಯು ಅಂಥಾ ಟ್ರ್ಯಾನ್ಸ್ ಆಕ್ಷನಿಗೆ ಈಡಾಗಲಾರದು.

ರುಜು—ತುಮಕೂರಲ್ಲಿರುವ ಜವಳಿ ಅಂಗಡಿ ಕಂಬದೂರಯ್ಯನ ಮಗ
ಚನ್ನಪ್ಪನ ರುಜುವು.

Mysore Government Central Press, Bangalore—1903.

ಮೈಸೂರ ಗೆಜೆಟ್.

ನಂ. XXXVIII] ಸರ್ಕಾರದಿಂದ ಪ್ರಾಂಮಿಷ್ ಆದ್ದು. [ನಂ 23.

ಬೆಂಗಳೂರು, ಗುರುವಾರ, ಜೂನ್ ತಾ|| 11, ಸನ 1903.

IIನೇ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರುವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಎಕ್ಸೈಜ್ ಇಲಾಖೆ.

1903—1904ನೇ ವರುಷಕ್ಕಾಗಿ ಬೆಂಗಳೂರು ಸಿಟಿಯಲ್ಲಿಯೂ ಬೌರಿಂಗ್‌ಪೇಟೆ ತಾಲ್ಲೂಕಿನಲ್ಲಿಯೂ ಇರತಕ್ಕ ಬೀರು ಅಂಗಡಿಗಳ ಹರಾಜು ನೋಟಿಸ.

ನಂ. 7169—10—13, ತಾರೀಖು 24ನೇ ಮೇ 1903.

1. ಬೌರಿಂಗ್‌ಪ್ಯಾಟೆ ತಾಲ್ಲೂಕಿನಲ್ಲಿರತಕ್ಕ ಇದಕ್ಕೆ ಲಗತ್ತು ಮಾಡಿರುವ ಪಟ್ಟಿಯಲ್ಲಿ ನಮೂದು ಮಾಡಿರುವ ಅಂಗಡಿಗಳಲ್ಲಿ ಬೀರು ಯಾ ಪೋರಟರನ್ನು 1903ನೇ ಇಸವಿ ಜುಲೈ ಒಂದ್ನೇ ತಾರೀಖಿಗೆ ಪ್ರಾರಂಭವಾಗಿ 1904ನೇ ಇಸವಿ ಜೂನ್ 30ಕ್ಕೆ ಅಂತ್ಯವಾಗುವ 12 ತಿಂಗಳ ಕಾಲಕ್ಕಾಗಿ ಬಿಕರೀ ಮಾಡತಕ್ಕ ಒಟ್ಟು ಸ್ವತಂತ್ರದ ಹಕ್ಕನ್ನು ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಅಥವಾ ಅವರಿಂದ ಅಧಿಕಾರ ಹೊಂದಿದ ಇತರ ಆಫೀಸರರು ಸದರಿ ಪಟ್ಟಿಯಲ್ಲಿ ನಮೂದುಮಾಡಿರುವ ಸ್ಥಳಗಳಲ್ಲಿ ಮತ್ತು ತಾರೀಖುಗಳಲ್ಲಿ ಹರಾಜು ಮಾಡುತ್ತಾರೆಂದು ಈ ಇಸ್ತಿಹಾರ ಮೂಲಕ ಪ್ರಕಟಿಸಲ್ಪಟ್ಟಿದೆ.

2. ಸದರಿ ಸ್ವತಂತ್ರ ಹಕ್ಕು ಪ್ರತಿ ಅಂಗಡಿಯಲ್ಲಿ ಬಿಕರಿ ಆಗುವ ಬೀರು ಯಾ ಪೋರ್ಟರಿನ ಪೀಪಾಯಿ 1ಕ್ಕೆ 35 ರೂಪಾಯಿ ಸರ್ಕಾರದ ಸವಾಲು ಎಂದು ಇಟ್ಟುಕೊಂಡು ಹರಾಜು ಹಾಕಲ್ಪಡುತ್ತೆ.

3. ಬೀರು ಕಾಯಿಸುವ ಭಟ್ಟೀದಾರರು ಅಂಗಡಿಗಳಿಗೆ ಸವಾಲು ಮಾಡಬಹುದು.

4. ಹರಾಜಿನಲ್ಲಿ ಪ್ರತಿ ಸವಾಲ್ದಾರನೂ ಸವಾಲು ಮಾಡುವದಕ್ಕೆ ಮುಂಚಿತವಾಗಿ 250 ರೂಪಾಯಿ ಯಾ ಹರಾಜು ಮಾಡತಕ್ಕ ಆಫೀಸರರು ಗೊತ್ತು ಮಾಡುವ ಬೇರೆ ಇತರ ನ್ಯಾಯವಾದ ಮೊಬಲಗನ್ನು ಠೇವಣಾತಿ ಇಡತಕ್ಕದ್ದು. ಪೀಪಾಯಿ 1ಕ್ಕೆ ಪ್ರತಿ ಒಂದು ಅಂಗಡಿಯು ಅಂಗೀಕರಿಸಲ್ಪಟ್ಟ ಛಡ ಸವಾಲ್‌ದಾರನಿಗೆ ಡೆಪ್ಯುಟಿ ಕಮಿಷನರವರ ಕ್ರಮವಾದ ಮಂಜೂರಾತಿಗೆ ಒಳಪಟ್ಟು ಕೊಡಲ್ಪಡುತ್ತದೆ. ಡೆಪ್ಯುಟಿ ಕಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ಉದಹರಿಸದೇ ಮಂಜೂರು ಯಾ ತಳ್ಳುವಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತನ್ನ ಗವರ್ನಮೆಂಟನವರು ತಿದ್ದುಪಡಿ ಮಾಡದೇ ಇರುವ ಪಕ್ಷದಲ್ಲಿ ಅಂಗೀಕರಿಸಿದಂತೆ ಭಾವಿಸತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿ ಹಾಜರಾಗಬೇಕು. ಅಥವಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದು ಇರುವ ಅವರ ತರಫ್ ಮುತಾಲೀಕರನ್ನ ಕಳುಹಿಸಬೇಕು.

5. ಹರಾಜು ಪೂರೈಸಿದ ಕೂಡ್ಲೆ ನಾ ಮಂಜೂರಾದ ಸವಾಲ್ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ರೀತಿಯಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸು ಮಾಡಲ್ಪಡುತ್ತವೆ.

6. ಯಾರ ಹೆಸರಿಗೆ ಹರಾಜಿನಲ್ಲಿ ಈ ಅಂಗಡಿಗಳು ಮಂಜೂರಾಗುತ್ತವೋ ಅವರು ಹರಾಜು ತಾರೀಖು ಲಾಗಾಯತು 7 ದಿನಗಳೊಳಗಾಗಿ ಹರಾಜಿನಲ್ಲಿ ಬಿಡಲ್ಪಡುವ ಪ್ರತಿ ಒಂದು ಅಂಗಡಿಗೆ ಒಟ್ಟು 500 ರೂಪಾಯಿಗಳಿಗೆ ಸರಿಯಾಗುವ ಹಾಗೆ ಯಾ ಪ್ರತಿ ಒಂದು ಅಂಗಡಿಯ ಬೆಲೆಗನುಸಾರವಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಗೊತ್ತು ಮಾಡಲ್ಪಡಬಹುದಾದ ಯುಕ್ತವಾದ ಇತರ ಮೊಬಲಗಿಗೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಠೇವಣಾತಿಗೆ ಸೇರಿಸಬೇಕಾಗಿರುತ್ತೋ ಅಷ್ಟು ಜಾಸ್ತಿ ಮೊಬಲಗನ್ನ ಠೇವಣಿ ಕಟ್ಟಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸ್‌ಗಳನ್ನ ಪಡೆಯತಕ್ಕದ್ದು, ಮತ್ತು ಎದುರು ಒಡಂಬಡಿಕೆಗಳನ್ನು ಬರೆದು ಕೊಡತಕ್ಕದ್ದು. ಈ ರೀತಿಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಎದುರು ಒಡಂಬಡಿಕೆಯನ್ನು ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್ದಾರೀಮೇಲೆ ಪುನಹ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇಸ್ತಿಹಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿ ಹೋಗಿರುವ ಪಕ್ಷಕ್ಕೆ ಡೆಪ್ಯುಟಿ ಕಮಿಷನರವರು ಅವರಿಗೆ ಯುಕ್ತತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ನಂತರ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

7. ಮೇಲಿನ 6ನೇ ಕಲಂ ಅನುಸರಿಸಿ ನಡಿಸಲ್ಪಡುವ ದುಸರೇ ಹರಾಜುಗಳು ಷರತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್ದಾರೀಮೇಲೆ ನಡಿಯತಕ್ಕದ್ದು. ಇದರಿಂದ ಆತನು ಆದಾಯವನ್ನೆಲ್ಲಾ ಕಳದುಕೊಂಡವನಾಗುತ್ತಾನೆ. ಮತ್ತು ದುಸರೇ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜಿನ ಷರತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರೇ ಹರಾಜಾದ್ದಲ್ಲಿ ಬಿಡ ಸವಾಲ್ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತಾಬಾಕಿ ಉಳಿಯುವದರನ್ನ ಆತನು ಭರ್ತಿ ಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರೇ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಲಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡಿರುವ ಠೇವಣಿ ಮೊಬಲಗುಗಳನ್ನ ವಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮೀನ್ ಕಂದಾಯದ ಬಾಕಿಯಂತೆ ವಸೂಲ್ಮಾಡೋಣಾಗುತ್ತೆ. ಆದರೆ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟ ಸದರೀ ಠೇವಣಿ ಮೊಬಲಗು ದುಸರೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಆ ಠೇವಣಿ ಮೊಬಲಗನ್ನೆಲ್ಲಾ ಸರಕಾರಕ್ಕೇನೆ ಜಮಾ ಮಾಡಿಕೊಳ್ಳತಕ್ಕದ್ದು:—

8. ಮೇಲಿನ 6ನೇ ಕಲಂನಲ್ಲಿ ಕಂಡ ಮೇರಿಗೆ ಹೊಂದಬೇಕಾದ ಲೈಸೆನ್ಸು ಈ ಕೆಳಗೆ ಉದಹರಿಸುವ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:—

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ, ಅಥವಾ ಕಿರ್ಕಿಯಲ್ಲಿ ಮಿರ್ಕಿ ಅಂಡ್‌ಕೋ ಯವರಿಂದ ಕಾಯಿಸಲ್ಪಟ್ಟ ಅಥವಾ ಬೆಂಗಳೂರು ಏಬ್ರಹಾಂ ಮತ್ತು ಗಂಗಾಧರಶೆಟ್ಟಿ ಅಂಡ್ ಕೋ ಯವರಿಂದ ಯಾ ಸರ್ಕಾರದಿಂದ ಮಂಜೂರ್ಮಾಡಲ್ಪಡಬಹುದಾದ ಇತರ ಯಾವ ಬ್ರೂಯರಿಯಲ್ಲಿಯಾಗಲಿ ಕಾಯಿಸಲ್ಪಟ್ಟ, ಕಂಟ್ರಿ ಬೀರು ಯಾ ಪೋರ್ಟರನ್ನು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಪ್ರತಿ ಅಂಗಡಿಯು ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ವಿವರಿಸಲ್ಪಟ್ಟಿರುವ ಹಾಲೀ ಜಾರೀಲಿರುವ ಅಂಗಡಿ ಒಳಗಾಗಲಿ ಯಾ ಅದರ ಸಮೀಪದಲ್ಲಿ ಆಗಲಿ ಇಡಲ್ಪಡಬೇಕು.

(3) ಪ್ರತಿ ತಿಂಗಳಿನಲ್ಲಿ ಮಾರಿದ ಬೀರು ಯಾ ಪೋರ್ಟರಿನ ಪೀಪಾಯಿಗಳಿಗಾಗಿ ಕೊಡಬೇಕಾದ ಮೊಬಲಗನ್ನು ಮಾರನೇ ತಿಂಗಳಿನ ಮೊದಲನೇ ವಾರದಲ್ಲಿ ತಾಲ್ಲೂಕು ಖಜಾನೆಗೆ ಇದಕ್ಕಾಗಿ ಗೊತ್ತಾಗಿರುವ ಚರ್ಲ ಮೂಲಕ ಪಾವತಿಯಾಗತಕ್ಕದ್ದು. ಲೈಸೆನ್ಸ್‌ದಾರನಿಂದ ಠೇವಣಿ ಇಡಲ್ಪಟ್ಟಿರುವ ಮೊಬಲಗು ಗುತ್ತಿಗೆ ಅವಧಿಯ ಕೊನೇ 2 ತಿಂಗಳಿನ ಮೊಬಲಗಿಗೋಸ್ಕರ ಉಪಯೋಗಿಸಲ್ಪಡತಕ್ಕದ್ದು. ಮೇಲೆ ಹೇಳಿದ ಹಾಗೆ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮಿಷನರವರು ಜಮೀನ್ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳ ಪ್ರಕಾರ ವರ್ಷಕ್ಕೆ ಶೇಕಡಾ 6 ರೂಪಾಯಿನಂತೆ ಬಡ್ಡಿ ಸಹಿತ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸ್‌ದಾರನು ತಾನು ಕೊಡಬೇಕಾಗಿರುವ ಸರ್ಕಾರದ ಹಣಗಳಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ವಜಾ ಮುಂತಾದ್ದನ್ನ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲಾ.

(4) ಲೈಸೆನ್ಸ್‌ದಾರನಿಂದ ಕೊಂಡುಕೊಳ್ಳಲ್ಪಡತಕ್ಕ ಬೀರು ಅಥವಾ ಪೋರ್ಟರ್ ಬಾಬತು ಪ್ರತಿ ಒಂದು ಗ್ಯಾಲನಿಗೂ ರೂಪಾಯಿಗೆ 1 ಆಣೆ ಯಂತೆ ಲೋಕಲ್ ಸೆಸ್ ಸಹಿತವಾಗಿ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(5) ಲೈಸೆನ್ಸ್‌ದಾರನು ಕೊಂಡುಕೊಂಡ ಬೀರು ಮತ್ತು ಪೋರ್ಟರ್ ಬ್ರೂಯರಿಯಿಂದ ತಾಲ್ಲೂಕು ಅಮಲ್ದಾರ್ರವರಲ್ಲಿಗೆ ಪ್ರಥಮತಃ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯನ್ನ ಅಮಲ್ದಾರ್ರಿಗೆ ಕಳುಹಿಸಬೇಕು. ಇದರ ಎರಡನೇ ಪ್ರತಿಯು ಎಕ್ಸೈಜ್ ಕಮಿಷನರ್ ಸಾಹೇಬರವರ ಆಫೀಸಿಗೆ ರವಾನಿಸಲ್ಪಡತಕ್ಕದ್ದು. ಮೇಲೆ ನಮೂದು ಮಾಡಲ್ಪಟ್ಟ ದರದ ಮೇರೆಗೆ ಲೋಕಲ್ ಸೆಸ್ ಸಹಿತವಾಗಿ ಹಾಸಲ್ ಮೊಬಲಗು ಗೊತ್ತಾದ ನಮೂನೆಯಲ್ಲಿ ಪಾವತಿ ಆದ ನಂತರ ಅಮಲ್ದಾರ್ರು ಅಥವಾ ಇವರಿಂದ ಈ ವಿಷಯದಲ್ಲಿ ಅಧಿಕಾರ ಪಡದ ಇತರ ಆಫೀಸರು ಸರಕನ್ನ ಲೈಸೆನ್ಸ್‌ದಾರನು ತನ್ನ ಅಂಗಡಿಗೆ ಒಯ್ಯಲು ತಮ್ಮ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(6) ಬೆಂಗಳೂರು ಸಿಟಿಯಲ್ಲಿರುವ ಪ್ರತಿ ಒಂದು ಬೀರು ಅಂಗಡಿಯ ಲೈಸೆನ್ಸ್‌ದಾರನು ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟ್ರೇಷನ್ ರುಸುಂ ಬಗ್ಯೆ ಸಾಲಿಯಾನಾ 180 ರೂಪಾಯಿಗಳನ್ನು ಈ ಲೈಸೆನ್ಸ್ ಕೊಟ್ಟಿರುವ ಕಾಲದ ಮಟ್ಟಿಗೆ ಮುಂಗಡವಾಗಿ ಪಾವತಿ ಮಾಡತಕ್ಕದ್ದು.

(7) ಲೈಸೆನ್ಸ್‌ದಾರನು ಸರ್ಕಾರದಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಅಳತೆ ಸಾಧನಗಳನ್ನು ಉಪಯೋಗಿಸತಕ್ಕದ್ದು, ಮತ್ತು ಲೆಕ್ಕ, ಬೀರು ಯಾ ಪೋರ್ಟರನ್ನು ಸಾಗಿಸುವ ಬಗ್ಯೆ ಬೇಕಾದ ರಹದಾರೀ ಅಥವಾ ಪ್ಯಾಸ್ ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫೀಸರುಗಳಿಂದ ಕೊಂಡುಕೊಂಡು ತಾನೇ ಒದಗಿಸಿಕೊಳ್ಳತಕ್ಕದ್ದು.

(8) ಲೈಸೆನ್ಸ್‌ದಾರನು 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ಹಳೇ ಲೈಸೆನ್ಸ್‌ದಾರನ ಬಾಬತು ಸದರಿ ಅಂಗಡಿಯಲ್ಲಿ ದಾಸ್ತಾನ್ ಇರಬಹುದಾದ ಬೀರು ಅಥವಾ ಪೋರ್ಟರನ್ನು ಎಕ್ಸೈಜ್ ಕಮಿಷನರ್ ಸಾಹೇಬರವರು ಗೊತ್ತು ಮಾಡಬಹುದಾದ ಪರಿಹಾರ ದ್ರವ್ಯವನ್ನು ಹಳೇ ಲೈಸೆನ್ಸ್‌ದಾರನಿಗೆ ಪಾವತಿಮಾಡಿ ತೆಗದುಕೊಳ್ಳಲು ಗುರಿಯಾಗಿರತಕ್ಕದ್ದು.

(9) ಈ ಗುತ್ತಿಗೆ ಎಕ್ಸೈಜ್ ಕಮಿಷನರ್ ಸಾಹೇಬರವರ ಮುಂಚಿತವಾದ ಅನುಮತಿ ಇಲ್ಲದೆ ಕ್ರಯ, ದಾನ, ಭೋಗ್ಯ ಅಥವಾ ಅನ್ಯಾವವಿಧದಿಂದಲೇ ಆಗಲಿ ವರ್ಗವಾಗತಕ್ಕದ್ದಲ್ಲ.

(10) ದುಕಾನ್‍ದಾರನು ಲೈಸೆನ್ಸ್‍ದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪಿ ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗುತ್ತಾನೆ.

(11) ಅವನು ಮಂಜೂರ್ಮಾಡಲ್ಪಟ್ಟ ಬೀರ್ ಯಾ ಪೋರ್ಟರನ್ನು ಮಾತ್ರವೇ ಮಾರತಕ್ಕದ್ದು. ಒಂದು ಇಂಪೀರಿಯಲ್ ಕ್ವಾರ್ಟು ಶೀಸೆವರಿವಿಗೂ ಅಂಗಡಿಯಲ್ಲಿ ಕುಡಿಯಲಿಕ್ಕೆ ಮಾರಬಹುದು. ಮತ್ತು ಸ್ಪೆಷಲ್ ಪ್ಯಾಸುಗಳ ಆಧಾರದ ಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಒಂದು ಇಂಪೀರಿಯಲ್ ಗ್ಯಾಲನ್‍ಗಳು ಅಂದರೆ ನಾಲ್ಕು ಶೀರುಗಳಿಗಿಂತಾ ಹೆಚ್ಚಾಗಿರಕೂಡದು.

(12) ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಯಾವ ತರಹೆಯು ಬೀರು ಯಾ ಪೋರ್ಟರು ಎಷ್ಟುಮಟ್ಟಿಗಾದರೂ ಯಾವ ಯೂರೋಪಿಯನಿಗೂ ಅಥವಾ ನಾನ್ ಕಮಿಷನ್ಡ್ ಆಫಿಸರಿಗಾದರೂ, ಪ್ರೈವೇಟ್ ಸೋಲ್ಜರಿಗಾದರೂ, ಸದರಿ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯನ್ ಅಥವಾ ಈಸ್ಟಿಂಡಿಯನ್ ಹೆಂಗಸರಿಗಾದರೂ ಮಾರಲೂ ಕೂಡದು. ಅವನು ಯಾ ಅವಳು ತನ್ನ ಅಂಗಡಿಯಲ್ಲಿ ಅಥವಾ ತನ್ನ ಅಂಗಡಿಯ ಆವರಣದಲ್ಲಿ ಅವರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿಯಲ್ಲಿ ಬಂದ ಜನಗಳು ಕುಡಿದು ಬಹಳ ನಿಷಾಹತ್ತಿ ಬೀಳುವಂತೆ ಮಾಡಕೂಡದು, ಮತ್ತು ಅವರು ಅಕ್ರಮವಾಗಿ ನಡೆಯುವಂತೆಯೂ ಅಂಗಡಿಯಲ್ಲಿ ಜೂಜು ವಗೈರೆ ಆಡುವಂತೆಯೂ ಮಾಡಕೂಡದು. ವ್ಯಭಿಚಾರಿಗಳನ್ನಾದರೂ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾದರೂ ತನಗೆ ತಿಳಿದು ತನ್ನ ಅಂಗಡಿಗೆ ಬರುವಂತೆಯಾದರೂ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಾದರೂ ಇತರರಾದರೂ ಫರಾರಿ ಆದವರೆಂದು ತಿಳಿದಾದರೂ, ಅಥವಾ ಅಂಥವರೆಂದು ಎಣಿಸುವದಕ್ಕೆ ಕಾರಣವಿದ್ದಾದರೂ ಅಂಥವರಿಗೆ ತನ್ನ ಅಂಗಡಿಯಲ್ಲಿ ಸ್ಥಳ ಕೊಡಲೂ ಕೂಡದು, ಮನಃಪೂರ್ತಿಯಾಗಿ ಅವರನ್ನು ಛಪಾಯಿಸಿ ಇಡಲೂಕೂಡದು. ಮತ್ತು ಗುಮಾನಿ ನಡತೆಯುಳ್ಳ ಜನಗಳು ಕಾಣಬಂದಲ್ಲಿ ಅವರ ವಿಷಯವಾಗಿ ಪೊಲೀಸ್ ಆಫಿಸರ್ ಯಾ ಮೇಜಸ್ಟ್ರೇಟರಿಗೆ ತಿಳಿಸತಕ್ಕದ್ದು. ಮತ್ತು ಉದ್ಯೋಗದ ಮೇಲೆ ಇರುವಾಗ ಯಾವ ಪೊಲೀಸ್ ಆಫಿಸರಿಗೆಯಾಗಲಿ, ರೈಲ್ವೆ ನೌಕರನಿಗೇಯಾಗಲಿ, ಎಕ್ಸೈಜ್ ಆಫಿಸರಿಗೆಯಾಗಲಿ ಬೀರ್ ಅಥವಾ ಪೋರ್ಟರನ್ನು ಮಾರಲೂಕೊಡದು.

(13) ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇ ಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರ್ ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ್ ಪಡೆದಿರುವ ಪದಾರ್ಥದ ಹೆಸರನ್ನೂ ಸಹ ವ್ಯಕ್ತವಾಗಿ ಬರಿಸಿ ಇಡಬೇಕು.

(14) ಅವನು ಯಾವ ದಿನಸು ಯಾ ನಗವನ್ನಾಗಲಿ ಬದಲಿಯಾಗಿಯಾದರೂ ಆಧಾರವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ದರ ಒಂದುವರೆ ರೂಪಾಯಿ ಮೇರಿಗೆ ನಗದಾಗಿ ಹಣ ತೆಗದುಕೊಳ್ಳಬೇಕು. ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರ ಖರೀದಿ ವಸೂಲ್ಮಾಡಬೇಕು.

(15) ಈ ಲೈಸೆನ್ಸ್ ಪ್ರಕಾರ ಮಾರುವ ಪ್ರತಿ ಒಂದು ಹಾಗ್ಸ್ ಹೆಡ್ಡಿಗೆ ಬೀರ್ ಯಾ ಪೋರ್ಟರ್‌ನಲ್ಲಿ ಮಾಲ್ಟ್ ಎಂಬ ಪದಾರ್ಥದ ಅಥವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಶೇಕಡಾ 75ರಷ್ಟನ್ನೂ ಕೆಂಟು ದೇಶದಲ್ಲಿ ಬೆಳದಂಥಾ ಒಳ್ಳೇದಾಗಿ ಇರುವ ಮೂರು ಪೌಂ ಹಾಪಸ್ ಎಂಬ ಹುವ್ವುಗಳನ್ನೂ ಸೇರಿಸಿರಬೇಕು. ಮತ್ತು ಮೇಲ್ಕಂಡ ಬೀರು ಯಾ ಪೋರ್ಟರನ್ನು ಭಟ್ಟೀ ಕಾರಖಾನೆಯಿಂದ ಖರೀದಿಗೆ ತಂದಕಾಲದಲ್ಲಿದ್ದ ಸ್ಥಿತಿಯಲ್ಲಿಡಬೇಕೇ ಹೊರತು ನೀರಿನಿಂದ ಮಿಶ್ರಪಡಿಸಕೂಡದು ಯಾ ಇತರ ಪದಾರ್ಥಗಳನ್ನ ಬೆರಸಿ ಕೆಡಿಸಕೂಡದು. ಬೀರಿನ ಊಟೆಯ ಷುರು ತೂಕವು ಫಾರನ್ಹೈಟಿನ 60° ಉಷ್ಣ ವಿರುವಾಗ 1070 ಸಂಖೆಯನ್ನು ಮೀರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಅಲ್ಕೋಹಾಲ್ ಯಾ ನಿಷಾ ಪದಾರ್ಥವು ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರಕೂಡದು. ಬೀರು ಮತ್ತು ಪೋರ್ಟರ್‌ನಲ್ಲಿ ಮೊತ್ತದಲ್ಲಿ ಶೇಕಡಾ 8ಕ್ಕೆ ಜಾಸ್ತಿಯಾಗಿರತಕ್ಕ ಎಲ್ಲಾ ಅಲ್ಕೋಹಾಲಿನ ಮೇಲೆ ಪ್ರೂಫ್ ಷರಾಬಿನ ಗ್ಯಾಲಾ 1ಕ್ಕೆ ವಿಧಾಯಕವಾಗಿರುವ ದರದಂತೆ ಲೋಕಲ್ ಸೆಸ್ ಸಹಿತ ಡ್ಯೂಟಿ ಯಾ ಹಾಸಲನ್ನು ಲೈಸೆನ್ಸ್‌ದಾರನು ಕೊಡಲು ಬದ್ಧನಾಗಿರುವನು ಮತ್ತು ಪ್ರಾಸಿಕ್ಯೂಷನ್‌ಗೆ ಗುರಿಯಾಗಿರುವನು. ಇಂಥಾ ಬೀರ್ ಯಾ ಪೋರ್ಟರ್‌ವುಳ್ಳ ಒಂದು ಸೀಸಾಯಿಯನ್ನು ಎಕ್ಸೈಜ್ ಇಲಾಖೆಯವರು ಅಪೇಕ್ಷಿಸಿದಾಗ ಅಜಮಾಯಿಷೀ ಮಾಡುವ ದಕ್ಕಾಗಿ ಭಟ್ಟೀ ಕಾರ್ಖಾನೆಯಿಂದ ಯಾ ಅಂಗಡಿಯಿಂದ ಕಳುಹಿಸಬೇಕು.

(16) ಸ್ಥಳದ ಅಧಿಕಾರವುಳ್ಳ ಯಾವ ಮ್ಯಾಜಿಸ್ಟ್ರೇಟರಾಗಲಿ ಅಥವಾ ಮ್ಯಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಅಥವಾ ಅಧಿಕಾರ ಹೊಂದಿದ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಿಯಾದರೂ ಅಂಗಡಿಯೊಳಗೆ ಪ್ರವೇಶಮಾಡಿ ಅಲ್ಲಿರುವ ಬೀರ್ ಮತ್ತು ಪೋರ್ಟರನ್ನು ಅಜಮಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸನ್ನು ಅಂಗಡಿಯಲ್ಲಿ ಆವಶ್ಯಕವಾಗಿ ಲೈಸೆನ್ಸ್‌ದಾರನಿಂದಲೂ, ವ ಮಾರುವವನಿಂದಲೂ ಇಡಲ್ಪಡಬೇಕಾದ ಲೆಖ್ಖಗಳನ್ನೂ ಅವರು ಪರಿಶೋಧನೆ ಮಾಡಲಿಕ್ಕೆ ಹಾಜರ್ಮಾಡಬೇಕು. ಮತ್ತು ಈ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾವಾಗಿರಬೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತಮಾಂ ಬೀರನ್ನೂ ನಾಶಪಡಿಸತಕ್ಕದ್ದು.

(17) ಸದರಿ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು. ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆಮೇರೆ ಹೊರತು ಬೆಳಿಗ್ಯೆ 6 ಘಂಟೆಗೆ ಮುಂಚಿತವಾಗಿ ಅಂಗಡಿ ಬಾಗಲು ತೆಗಿಯಕೂಡದು.

(18) ಕಮ್ಮಿಸರಿಯಾಟ್ ಇಲಾಖೆಯು ಉಪಯೋಗಕ್ಕಾಗಿ ತರಿಸಿ ಮಿಲಿಟೇರಿ ಅಥವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಅಂಗಡಿಯಲ್ಲಿ ಮಾರಲಿಕ್ಕೆ ಯಾವ ಕಾರಣಗಳಿಂದಲೂ ರವಾನಿಸಲ್ಪಡಕೂಡದು.

(19) ಸದರಿ ಅಂಗಡಿಗೆ ಒಂದೇಬಾಗಲಿರಬೇಕು. ಹಿಂಭಾಗದಲ್ಯಾದರೂ ಕೊನೇಭಾಗಗಳಲ್ಯಾದರೂ ಕಿಟಕಿ ಇರಕೂಡದು. ಬೀರ್ ಮಾರುವ ಜಗಲಿಯು, ಅಂಗಡಿಯೊಳಗೆ ಇರುವ ಜನಗಳು ಅಂಗಡೀ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆ ಎದುರಾಗಿ ಇರತಕ್ಕದ್ದು, ಮತ್ತು ಪಾಸೀಕರಿಗೆ ಇದಕ್ಕೆ ಸೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

(20) ಲೈಸೆನ್ಸ್‌ದಾರನು ಹಾಲಿ ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಯೆ ಸಾದರ್ಮಾಡಲ್ಪಡುವ ನಿಬಂಧನೆಗಳ ಪ್ರಕಾರ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

9. ಲೈಸೆನ್ಸ್‌ದಾರನ ಯಾ ಆತನ ತಿಳುವಳಿಕೆ ಯಾ ಪ್ರೋತ್ಸಾಹ ಯಾ ಉದಾಸೀನದ ದೆಶೆಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ತನ್ನ ಅಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸರಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಗಿಸಿದ ಸಂದರ್ಭದಲ್ಲಿ ಅಂಥಾ ಲೈಸೆನ್ಸ್‌ದಾರನಿಗೆ ಅಂಥಾ ಪ್ರತಿ ಒಂದು ಉಲ್ಲಂಘನೆಗೆ 10 ರೂಪಾಯಿಗಳಿಗೆ ಮೀರದ ಜುರ್ಮಾನೆಯನ್ನ ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಅವರಲ್ಲಿ ಇಡಲ್ಪಟ್ಟಿರುವ ಠೇವಣಿ ಮೊಬಲಗನ್ನ ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಂಡಿರುತ್ತೇದು ಹುಕುಂ ಮಾಡಲಿಕ್ಕೂ ಲೈಸೆನ್ಸನ್ನ ರದ್ದು ಮಾಡಿ ಸದರೀ ಲೈಸೆನ್ಸ್‌ದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನ ಪುನಹ ಹರಾಜು ಮಾಡಲಿಕ್ಕೂ ಯಾ ಇತರ ವಿಧವಾಗಿ ವಿಲೇ ಮಾಡಲಿಕ್ಕೂ ಡೆಪ್ಯುಟಿ ಕಮ್ಮಿಷನರವರು ಮೊಖ್ತ್ಯಾರ್ರಾಗಿ ಇರತಕ್ಕದ್ದು. ಇದರಿಂದ ಉಂಟಾಗುವ ಎಲ್ಲಾ ನಷ್ಟವನ್ನೂ 1903ನೇ ಇಸವಿ ಜುಲೈ ಗುರ್ರೇ ತಾರೀಖಿನಲ್ಲಿ ತನ್ನ ಅಂಗಡಿಯನ್ನು ತೆಗೆದು ಕೆಲಸ ನಡಿಸುವದರಲ್ಲಿ ಅಶ್ರದ್ಧೆ ಮಾಡೋಣದರಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಸದರೀ ಲೈಸೆನ್ಸ್‌ದಾರನು ಪಾವತಿ ಮಾಡತಕ್ಕದ್ದು. ಯಾವದಾದರೂ ಲೈಸೆನ್ಸ್ ರದ್ದು ಮಾಡಲ್ಪಟ್ಟರೆ ಪೂರಾಕಾಲದ ಗುತ್ತಿಗೆ ಹಣವು ಕೂಡ ಪಾವತಿ ಮಾಡಲಿಕ್ಕೆ ಗುರಿಯಾಗತಕ್ಕದ್ದು; ಮತ್ತು ಅಂಥಾ ಮೊಬಲಗು ಜಮೀನ್ ಕಂದಾಯದ ಬಾಕಿಯಂತೆ ಎಲ್ಲಾ ನಷ್ಟಗಳ ಸಹಿತವಾಗಿ ವಸೂಲ್ಮಾಡಲ್ಪಡತಕ್ಕದ್ದು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕು ಅಥವಾ ಸಬಬ್ ಇಲ್ಲದೆ ನಿರಾಕರಿಸುವದಕ್ಕು ಸಹ ಈ ಕೆಳಗೆ ಸೈನ್ ಮಾಡಿರುವವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ ಒಂದು ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನ ಕೂಡ್ಲೆ ಹಾಜರ್ಮಾಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಮುಚ್ಚಳಿಕೆಯನ್ನು ಬರೆದುಕೊಡಬೇಕು.

6. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಸೀತಿ ಪಡೆಯಬೇಕು.

7. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರ್ ಆಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಿಮೆ ವಿಷಯಗಳನ್ನು ಕೆಳಗೆ ಸೈನ್ ಮಾಡಿರುವವರ ಆಫೀಸನಲ್ಲಿ ತಿಳದುಕೊಳ್ಳಬಹುದು.

9. ಸದರೀ ಸ್ಥಳವನ್ನ ಬೋರ್ಡಿನವರು ಯಾವ ಕಾಲದಲ್ಲಿ ಬಿಟ್ಟುಕೊಡಬೇಕೆಂದು ಅಪೇಕ್ಷಿಸುತ್ತಾರೆಯೋ ಆಗ ಬಿಲಾ ತಕರಾರ್ ಕಾಂಪೆನ್ಸೇಷನ್ ವಗೈರೆ ಏನೂ ಕೇಳದೆ ಬಿಟ್ಟುಕೊಡಬೇಕು.

10. ರುಸುಂ ವಸೂಲ್ಮಾಡಿಕೊಳ್ಳತಕ್ಕ ರೇಟ್ ತಪಶೀಲ್

					ರೂ. ಆ. ಪೈ.
1.	ಚದುರ 10 ಅಡಿ ವುಳ್ಳ ಕಬ್ಬಿನ ಅಂಗಡಿ 1ಕ್ಕೆ		..	...	0—0—4
2.	ಕಬ್ಬಿನ ಭಂಡಿ 1ಕ್ಕೆ	...	...	...	0—1—0
3.	ಚದುರ 5 ಅಡಿ ಅಥವಾ ಅದಕ್ಕೆ ಕಮ್ಮಿ ವಿಸ್ತೀರ್ಣವುಳ್ಳ ಪ್ರತಿ ಕೊರಚರ ಅಂಗಡಿ 1ಕ್ಕೆ				0—0—2
4.	ಹುಲ್ಲುಹೊರೆ 1ಕ್ಕೆ	...	...	...	0—0—2
5.	ಚದುರ 15 ಅಡಿ ಅದಕ್ಕೆ ಕಮ್ಮಿ ವಿಸ್ತೀರ್ಣವುಳ್ಳ ಕುಂಬಾರ್ರ ಅಂಗಡಿ 1ಕ್ಕೆ			...	0—0—6
6.	ಒಟ್ಟಾಗಿ ಒಣಗಿದ ಹುಲ್ಲು ಬಣವಿ ಹಾಕಿರುವ ಒಂದು ಭಾಗದ ಜಮೀನಿನಲ್ಲಿ ಮಾರಾಟ ಮಾಡತಕ್ಕ ಬಗ್ಯೆ ಒಣಗಿದ ಹುಲ್ಲು ಜಮಾವಣಿ ಮಾಡಿಕೊಳ್ಳಲು ಮಾಹೇಯಾನಾ.				5—0—0

11. ಮೇಲೆ ನಮೂದು ಮಾಡಿರುವ ಷರತ್ತಿನ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಇದರ ಕೆಳಗೆ ನಮೂದಾಗುವ ರೇಟಿಗಿಂತ ಜಾಸ್ತಿಯಾಗಿ ರುಸುಂ ವಸೂಲ್ಮಾಡಿಕೊಂಡರು ಮತ್ತು ಡಿಟೋ ಸ್ಥಳ ವಿನಹ ಇತರ ಯಾವ ಸ್ಥಳಗಳಲ್ಲಿಯಾಗಲಿ ರುಸುಂ ವಸೂಲ್ಮಾಡಿಕೊಂಡರು ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬ್ಯಾರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿ ಜಫ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

12. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿಲಾ ತಕರಾರ ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

ತಾರೀಖು 16ನೇ ಮೇ 1903.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟವುನ್ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನ ಇದರೊಡನೆ ಜಂಟಿಸಿರುವ ಪಟ್ಟೀ ಮೇರೆಗೆ ರೂಢಿಸಿಕೊಳ್ಳುವ ಬಗ್ಯೆ ಸನ್ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಇಸವಿ ಜೂನ್ ಆಖೈರ್ ವಿನಹು ಇದರಡಿ ಕಂಡಿರುವ ಷರತ್ತುಗಳನ್ನ ಅನುಸರಿಸಿ ಜೂನ್ 16ನೇ ತಾರೀಖು ಮಂಗಳವಾರ ದಿವಿ 2 ಘಂಟೆಗೆ ಬೋರ್ಡಿನ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತಾಗಿ ಇದನ್ನ ದರಖಾಸ್ತು ಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸವಾಲ್ಮಾಡಿ ತೆಗದುಕೊಳ್ಳಬಹುದು. ಭಡಸವಾಲ್ದಾರನ ಸವಾಲ್ ಪೈದಾದ ಕೂಡ್ಲೆ ಶೇಕಡಾ 25 ರೂಪಾಯಿ ಮೇರೆಗೆ ಆಗುವ ಮೊಬಲಗನ್ನ ಡಿಪಾಜಿಟ್ ಹಾಜರ್ಮಾಡಬೇಕು. ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ಮಾಡಲ್ಪಟ್ಟು ಬಾಬು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನು ಅವ್ವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತೆ. ಎಲ್ಲಾ ಸವಾಲ್‌ಗಿಂತ ಹೆಚ್ಚಾದ ಅಥವಾ ಇನ್ನ್ಯಾವ ಸವಾಲನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನು ತೋರಿಸದೆ ಯಾವ ಸವಾಲನ್ನೇ ಆಗಲಿ ನಿರಾಕರಿಸಬಹುದು.

ಷರತ್ತುಗಳು.

1. ಆಯಾಯ ಡಿವಿಜನ್‌ಗೆ ಶೇರಿದ ರೋಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರ್‌ಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನು, ಮಳೆಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾಯಿತು 9 ಘಂಟೆ ವರಿಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರಿಗೂ ಬಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೇನಾ ಹೆಲ್ತ್ ಆಫಿಸರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನು ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನ ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದು ಹಾಕುವದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನ ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರ್ಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನ ಪ್ರತಿ ದಿನವೂ ಸಾಗಿಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನ ಪ್ರತಿ ದಿವಸವೂ ಖಯಿಂದ ನೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿಯಲ್ ಕೇಸುಗಳಲ್ಲಿ ತಲಬು ಮಾಡಿದವ್ಯಾಳೆ ಸಾಗಿಸಿಕೊಂಡು ಸಾಫ್ ಮಾಡಿಸುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೇ ಕಲಂನಲ್ಲಿ ಗೊತ್ತು ಮಾಡಿರುವ ಮೇರಿಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಬಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿಮಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತೀಮಾಡಿ ಅದರಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚೆಲ್ಲದಂತೆಯೂ ಮಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮಕ್ಕರಿಯು ಕಸದಮೇಲೆ ಚಾಪೆಯಿಂದ ಕಾಣದಂತೆ, ಮುಚ್ಚಿ ಇರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇಡತಕ್ಕ ಭಂಡಿಮಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟವಂಥವಾಗಿಯೂ ಇರಬೇಕು. ಎತ್ತುಗಳು ಎಳೇಪ್ರಾಯವುಳ್ಳವಾಗಿ ಧೃಢವಾಗಿ ಇರಬೇಕು.

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ನಾಲ್ಕು ಖಿಸ್ತಿನಲ್ಲಿ ಅಂದರೆ 1ನೇ ಖಿಸ್ತು 1903ನೇ ಇಸವಿ ಸೆಪ್ಟಂಬರ ಆಖೈರ್ ವರಿಗಿನದು 1903ನೇ ಜುಲೈ 1ನೇ ತಾರೀಖಿನಲ್ಲಿಯೂ, 2ನೇ ಖಿಸ್ತು 1903ನೇ ಇಸವಿ ಡಿಸೆಂಬರ್ ಆಖೈರ್ ವರಿಗಿನದು 1903ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿಯೂ, 3ನೇ ಖಿಸ್ತು 1904ನೇ ಮಾರ್ಚಿ ಆಖೈರ್ ವರಿಗಿನದು 1904ನೇ ಇಸವಿ ಜನವರಿ 1ನೇ ತಾರೀಖಿನಲ್ಲಿಯೂ, 4ನೇ ಖಿಸ್ತು 1904ನೇ ಜೂನ್ ಆಖೈರುವರಿಗಿನದು 1904ನೇ ಏಪ್ರೈಲ್ 1ನೇ ತಾರೀಖಿನಲ್ಲಿಯೂ ತಪ್ಪದೆ ಅಡ್ವಾನ್ಸಾಗಿ ಹಾಜರ್‍ಮಾಡಿ ರಸೀದಿ ಪಡಮುಕೊಳ್ಳಬೇಕು. ಈರೀತಿ ಮೊಬಲಗ ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನ ಬಂದೇ ಗಂಟನಲ್ಲಿ ಡಿಮ್ಯಾಂಡ್ ಮಾಡಿದ ಒಡನೇ ಬಿಲಾ ತಕರಾರ್ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟಾಂಪು ಕಾಗದ್ದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನು ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡದುಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನ ರದ್ದು ಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂಟ್ರಾಕ್ಟುದಾರನನ್ನು ಗುರಿಮಾಡಿ ಜಫ್ತಿ ಹರಾಜ್ ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೇ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ಪೂರಾ ಅಥವಾ ವುಳಿದದ್ದು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪ್ಯಾಸುಗಳು ದೊರಿಯಲಾರವು. ಟೋಲ್ ಗೇಟುಗಳಲ್ಲಿ ಈ ಸಿಟಿಗೆ ಶೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

ನಂಬರ್.	ಡಿವಿಜನ್.	ಬ್ಲಾಕ್.	ರೋಡುಗಳ ತಪಶೀಲ್ ಮತ್ತು ಚಕ್ಕುಬಂದಿ.
			1ನೇ ಡಿವಿಜನ್ ನಾರದರ್ನ್ ಎಕ್ಸ್ಟೆನ್ಷನ್ ಮಾಲೇನಹಳ್ಳಿ.
1	I	,,	ಪಿಂಡಾರ್‌ಚೆರಿ ಎಲ್ಲಾ ಸಬರ್ಬನ್ ರೋಡುಗಳು ಗುಟ್ಟಹಳ್ಳಿ ಮುನಿರಡ್ಡಿಪಾಳ್ಯ ವಗೈರೆ ಡಿವಿಜನಿಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ ಹಾಲಿ ಎತ್ತುತ್ತಿರುವ ಮುಂದೆ ಎತ್ತಲ್ಪಡುವ ಬಂಗ್ಲೆಗಳ ಪಾಯಿಖಾನೆ ವಿನಹ.
2	II	1	ಕಿಚ್ಚೆಶೆಟ್ಟಿ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕದವರಿಗೆ, ಅಲ್ಲಿಂದ ಗುಡುಮೈಯ್ಯನ ಪೇಟೆ ದೊಡ್ಡರೋಡ್‌ನಿಂದ ಬಳೇಪೇಟೆ ರೋಡಿನವರೆಗೆ, ಮತ್ತು ಉತ್ತರಕ್ಕೆ ಸುಬೇದಾರ್ ಛತ್ರ ರೋಡ್ ಆಖೈರು ವರಿಗೆ. ಈ ಮಧ್ಯೆ ಇರುವ ಬೀದಿಗಳು ಗಲ್ಲಿಗಳು.
3	,,	2	ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರ್‌ದಾರ ಮನೆ ಚವುಕ ಬಳೇಪೇಟೆ ಗುಡುಮೈಯ್ಯನ ಪೇಟೆ ರೋಡ್ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
4	,,	3	ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ಮೊದಲು ಮದರಾಸ್ ಗೂಡ್ಸ್ ಗೇಟ್ ವರಿಗೆ ಅಲ್ಲಿಂದ ರೈಲ್ವೆ ಸ್ಟೇಷನ್ ಸ್ಟಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸಗಳು ಮತ್ತು ಮನೆಗಳು ಧರ್ಮಾಂಬುಧಿಕೆರೆ ಸುತ್ತಲೂ ರೋಡ್ ಹಳೆ ಸವಾರ ಲೈನಿಗೆ ಸೇರಿದ ಪೊಲೀಸ್ ಸ್ಟೇಷನ್ ವಗೈರೆ, ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
5	III	1	ಮಾರ್ಕೆಟ್ ಚವುಕದ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಮೆಟಿಕಲ್ ರೋಡ್‌ವರಿಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ ಬಳಿ ಚವುಕದಿಂದ ಮಾರ್ಕೆಟ್ ಚವುಕದವರಿಗೆ, ಈ ಮಧ್ಯೆ ಗುಂಡೋಪಂತರ ರೋಡ್ ತರಗಿನಪೇಟೆ, ಮಾಮೂಲಿ ಪೇಟೆ ರಸ್ತೆಗಳು, ಒಳಗಲ್ಲಿಗಳು.
6	,,	2	ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ಮೊದಲು ಪೊಲೀಸ್ ರೋಡ್ ಅಕ್ಕಿಪೇಟೆ ರೋಡ್ ವರಿಗೂ, ಅಲ್ಲಿಂದ ಅಕ್ಕಿಪೇಟೆ ರೋಡ್ ಅನಾಮತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ಮೆಟಿಕಲ್ಲು ರೋಡ್ ಚವುಕದವರಿಗೂ, ಈ ಮಧ್ಯೆ ಇರುವ ಜಂಖಾನಪೇಟೆ, ಸುಲ್ತಾನ್‌ಪೇಟೆ, ಸಂತೂಸಾಪೇಟೆ, ಮನವಾರ್ತೇಪೇಟೆ ರೋಡ್‌ಗಳು, ಗಲ್ಲಿಗಳು.
7	,,	3	ಪೊಲೀಸ್ ರೋಡ್ ಅಕ್ಕಿಪೇಟೆ ಚವುಕದ ಲಾಗಾಯಿತು ತೋಟದ್ದೇವರ ಮಠದ ವರಿಗೂ, ಅಲ್ಲಿಂದಾ ಉಲ್ಲನ್‌ಮಿಲ್ ಟ್ಯಾಂಕ್ ಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್‌ಗೇಟ್ ತಾಲ್ಲೂಕ್ ಕಚೇರಿ ರೋಡ್ ಅಕ್ಕಿಪೇಟೆ ಚವುಕದವರೆಗೆ. ಈ ಮಧ್ಯೆ ಇರುವ ಗಾರ್ಡನ್‌ಪೇಟೆ, ಅರಳೇಪೇಟೆ, ಅಕ್ಕಿಪೇಟೆ ಗಲ್ಲಿಗಳು, ರಸ್ತೆಗಳು.
8	,,	4	ತರಕಾರಿ ಮಾರ್ಕೆಟ್ ಬಳಿ ಆಸ್ಪತ್ರೆ ಮೊದಲು ಮೈಸೂರು ರೋಡ್ ಬಾರ್‌ಲೈನ್‌ವರೆಗೂ, ಅಲ್ಲಿಂದ ಕೆಂಗೇರಿ ಬಾಗಲ್ ಪೊಲೀಸ್ ಸ್ಟೇಷನ್‌ವರಿಗೆ, ಸ್ಟೇಷನ್ನಿಂದ ರಾಣಾಸಿಂಗನ ಪೇಟೆ ಚೇಲಿ. ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈನ್ ಬಾಜಾ ಇರುವ ಪೆನ್ಷನ್ ಲೈನ್, ಚಲವಾದಿ ಪಾಳ್ಯ ವಗೈರೆ.
9	IV	1	ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಮೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರಪೇಟೆ ಅಣ್ಣೈಯಪ್ಪ ಶೆಟ್ಟರ ಮನೆವರಿಗೂ, ಅಲ್ಲಿಂದಾ ಉತ್ತರಕ್ಕೆ ಸೈಚಶೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಶೆಟ್ಟಿ ಪೇಟೆ ರೋಡ್ ಸೇರಿ ಕಬ್ಬನ್‌ಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಅಲ್ಲಿಂದಾ ಕಬ್ಬನ್‌ಸಾಬರಪೇಟೆ ರೋಡ್ ಸೇರಿ ಹಲಸೂರು ಗೇಟಿನ ವರಿಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
10	,,	2	ನಗರ್ತರಪೇಟೆ ಅಣ್ಣೈಯಪ್ಪಶೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಸೇರಿ ಎಲಹಂಕದ ಬಾಗಲ್ ಪೊಲೀಸ್ ಸ್ಟೇಷನ್‌ವರಿಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ್ ರೋಡ್ ಸೆನಟೂಫ್ ಕಬ್ಬನ್‌ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರಿಗೆ, ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಾಂಚಾಳದಪೇಟೆ ಮಕ್ಕಳು ಬಸವಣ್ಣನ ಗುಡಿ ರೋಡ್ ಕವಾಡಿ ರೇವಣ್ಣನಪೇಟೆ ರಸ್ತೆಗಳು, ಗಲ್ಲಿಗಳು.

ನಂಬರ್.	ಡಿವೀಜನ್.	ಬ್ಲಾಕ್.	ರೋಡ್‍ಗಳ ತಪಶೀಲ್ ಮತ್ತು ಚೆಕ್ಕುಬಂದಿ.
11	V	2	5ನೇ ಡಿವಿಜನ್ ಮಾಮೂಲ್ ಮೇರಿಗೆ.
12	VI	1	ಮಾರ್ಕೆಟ್ ಚವುಕದ ಮೊದಲು ಬೊಂಬು ಬಜಾರ್ ರೋಡ್, ಮಿಷನ್‍ರೋಡ್, ಲಾಲ್‍ಬಾಗ್ ರೋಡ್, ಬ್ಯಾಟಪ್ಪನ ತೋಪುನಿಂದ ಬಿಕಟ್ಟೆಭಾವಿ ಬಳಿ ಗಲ್ಲಿಯಿಂದ ಮಾವಹಳ್ಳಿ ಕೆರೆಕಟ್ಟೆ ಕಲಾಸಿ ರೋಡ್, ಹಳೇ ಪೊಲೀಸ್ ಸ್ಟೇಷನ್ ಚವುಕದ ವರಿಗೆ. ಈ ಮಧ್ಯೆ ಇರುವ ಅಮ್ಮಾಚವುಡಿ ಪಾಳ್ಯ, ಗಂಗಮ್ಮಚೇರಿ ರಸ್ತೆಗಳು, ಗಲ್ಲಿಗಳು.
13	,,	2	ಕಲಾಸಿ ಲೈನು ಹಳೇ ಪೊಲೀಸ್ ಸ್ಟೇಷನ್ನಿಂದ ಕೊರಚರ ಪಾಳ್ಯದ ರೋಡ್ ಕಾರಂಜಿ ಕೆರೆಕಟ್ಟೆ ಬುಚ್ಚಣ್ಣನ ತೋಪುವರಿಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕಮಾವಹಳ್ಳಿ, ದೊಡ್ಡ ಮಾವಹಳ್ಳಿ, ಕನಕನಪಾಳ್ಯ ಲಾಲ್‍ಬಾಗ್ ರೋಡ್ ಗೇಟಿನ ವರಿಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
14	VII	,,	7ನೇ ಡಿವೀಜನ್ ಕೋಟೆ ಮಾಮೂಲ್ ಮೇರಿಗೆ.
15	,,	,,	ಚಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರೆ ಡಿವಿಜನ್‍ಗೆ ಸೇರಿದ ರೋಡ್‍ಗಳು, ಗಲ್ಲಿಗಳು ಯಾವತ್ತು.
16	,,	,,	ಬಸವಣ್ಣನಗುಡಿ ಎಕ್ಸ್‍ಟೆನ್ಷನ್.
17	,,	,,	ಮಲ್ಲೇಶ್ವರ ಎಕ್ಸ್‍ಟೆನ್ಷನ್.

ತಾರೀಖು 22ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1903—04ನೇ ಸಾಲಿಗೆ ಅಂದರೆ 1903ನೇ ಇಸವಿ ಜುಲೈ ಗುರ್‍ರೆ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾದಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನ ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‍ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್‍ವಾರ್ ಹೇಳಿದ ಕೂಡ್ಲೆ ಬಿನ್ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‍ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಇಟ್ಟುಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ.
1	ಧರ್ಮಾಂಬುಧಿಕೆರೆ ಒಳಗೆರೆ ಮತ್ತು ಕೆರೆಕಟ್ಟೆ ಹುಲ್ಲು ...	ಹುಲ್ಲು ಕೊಯಿದುಕೊಳ್ಳುವ ಮಾತ್ರವೆ ದನಗಳನ್ನು ಬಿಟ್ಟು ಮೇಯಿಸಕೂಡದು.
2	ಧರ್ಮಾಂಬುಧಿ ಕಟ ಕಾಲ್ವೆ 2ಕ್ಕೆ ...	ಡಿಟೋ
3	ಮ್ಯುನಿಸಿಪಲ್ ತೋಟ	ಡಿಟೋ
4	ಜಕ್ಕರಾಯನ ಕೆರೆಕಟ್ಟೆ ಕೆಳಗೆ	ದನಗಳನ್ನ ಮೇಯಿಸಿಕೊಳ್ಳುವದಕ್ಕೆ.
5	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು	ಡಿಟೋ
6	ಕೋಟೆ ಕ್ಯಾಂಪಾರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆವರಿಗೆ. ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
7	ಲಾಲ್‌ಬಾಗ ಮಾವಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯ ವಿಲ್ಲದಂತೆ.
8	ದೊಡ್ಡ ಬೈಲ್‌ಖಾನೆ	ಡಿಟೋ
9	ಕುಂಬಾರಗುಂಡಿ ಹುಲ್ಲುಗಾವಲ್ ...	ಡಿಟೋ
10	ಆರ್ಸಿಕಂಟಿಪಕ್ಕದ ಮತ್ತು ಒಳಗಿನ ಹುಲ್ಲು ..	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ, ವಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
11	ದಂಡಿಗೆ ಹೋಗುವ ಶಿಡ್ನಿ ರೋಡ್ ರಸ್ತೆಗೆ ಪಶ್ಚಿಮ ಭಾಗ ಇರತಕ್ಕ ಹುಲ್ಲು.	ಡಿಟೋ
12	ಲಂಡೆನ್ ಮಿಷನ್ ಸ್ಕೂಲ್ ಪಕ್ಕದ ಹುಲ್ಲುಗಾವಲ್ ...	ಡಿಟೋ
13	ಎಲಹಂಕದಬಾಗಲಿನಿಂದ ಬಳ್ಳೇಬಾಗಲಿಗೆ ಹೋಗುವ ರಸ್ತೆ ಬಲಭಾಗದ ಕಾಲವೆದಡದ ಹುಲ್ಲು	ಡಿಟೋ
14	ಸಂಪಂಗಿಕೆರೆ ಒಳಗೆರೆ ಹುಲ್ಲುಗಾವಲ್, ಬ್ರೌನ ಸಾಹೇಬರಿಗೆ ಸೇರಿದ್ದು ವಿನಹಾ, ಮ್ಯುನಿಸಿಪಾಲಿಟಿಗೆ ಸೇರಿದ್ದು	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
15	ಕೆಂಗೇರಿಬಾಗಲ್ ಬಾರಕೋಸಿಬಳಿ ಇರುವ ಕಾವಲ್ ಜಮೀನಿನಲ್ಲಿ, ನಾಟುಗಳು ಹಾಕತಕ್ಕ ಬಗ್ಯೆ ಉಪಯೋಗಿಸಿಕೊಂಡಿರುವ ಜಮೀನ ಶಿವಾಯಿ, ಮಕಾನ ಹದ್ದುಬಸ್ತು ಮಾರ್ಕ ಮಾಡಿರುವ ಸ್ಥಳ ವಿನಹ, ನಿಂತ ಜಮೀನನಲ್ಲಿ ಬೀಳತಕ್ಕ ಹುಲ್ಲು	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
16	ಮ್ಯುನಿಸಿಪಲ್ ಲಿಮಿಟಿಗೆ ಸೇರಿದ ವೆಸ್ಟ್ರನ ಎಕ್ಸ್‌ಟೆನ್ಷನನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ಉಳಿದ ಬೋರ್ಡಿಗೆ ಸೇರಿದ ಜಮೀನನಲ್ಲಿಯೂ, ಭೋಗೇನಹಳ್ಳಿ, ಬಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನನಲ್ಲಿಯೂ ಸಹಾ	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗ್ಯೆರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.
17	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು	ಮೇಯಿಸಿಕೊಳ್ಳುವದಕ್ಕೆ.
18	ದಂಡು ಪುಟ್ಟಪ್ಪರಹಳ್ಳಿ ಪೂರುಮುಂದಿನ ಹುಲ್ಲುಗಾವಲು ..	ರೈಲ್ವೆ ಕಾಂಪೌಂಡಿನ ಬೇಲಿ ಮತ್ತು ಜಮೀನ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
19	ಮಿಲ್ಲರ ಒಳಗೆರೆ ಹುಲ್ಲು	ಕೊಯಿದುಕೊಳ್ಳುವದಕ್ಕೆ.

ನೋಟಿಸ.

ತಾರೀಖು 30ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟುಗಳಲ್ಲಿ 1903ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1904ನೇ ಇಸವಿ ಜೂನ 30ನೇ ತಾರೀಖಿನ ವರಿಗೆ, ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆಯನ್ನ ವಸೂಲ್ಮಾಡುವದಕ್ಕೆ ಮೊಹರ ನಿಶಿ ದರಖಾಸ್ತುಗಳು

ಇಷ್ಟವಿದ್ದವರು ಈ ಕೆಳಗೆ ಸ್ಪರ್ಧೆ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 3 ಘಂಟೆ ಒಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ ಒಳಗೆ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಉರುಳಗೆಡ್ಡೆ, ಈರುಳ್ಳಿ, ಕಡ್ಲೆಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ, ಗಾಡಿಗಳಿಗೂ, ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್‌ಗಳಿಗೆ ತರುವ ಮೀನು, ಕೋಳಿ, ಕೋಳಿ ಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟುಗಳು ಅನುಸರಿಸಿ ತೆರಿಗೆ ವಸೂಲ್ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಪೈಲ್	ಮಾರ್ಕೆಟ್
ಉಪ್ಪಾರಪೇಟೆ	ಡಿಟ್ಟೋ
ತಿಗಳರಪೇಟೆ ಧರ್ಮರಾಯನ ಗುಡಿ ಬಳಿ ಪೈಲ್	ಡಿಟ್ಟೋ
ಕಲಾಸಿಪಾಳ್ಯ	ಡಿಟ್ಟೋ
ಅಕ್ಕಿಪೇಟೆಯಲ್ಲಿರುವ	ಡಿಟ್ಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ರುಸುಂ ವಸೂಲ್ಮಾಡುವದಕ್ಕೆ.

IV. ತಗರದ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ರುಸುಂ ವಸೂಲ್ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ.

ಮೇಲ್ಕಂಡ ಮಾರ್ಕೆಟುಗಳಲ್ಲಿ ತಿಂಗಳಗಟ್ಲೆ ತೆರಿಗೆ ಕೊಡುವವರಿಂದ ತೆರಿಗೆಯನ್ನು ವಸೂಲ್ಮಾಡಕೂಡದು. ಮತ್ತು ಹಗಲು ರಾತ್ರೆ ಸಹ ಸಾಮಾನುಗಳು ತೆಗೆಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ತೆರಿಗೆಯನ್ನು ವಸೂಲ್ಮಾಡಕೂಡದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟುಗಳಲ್ಲಿ ತೆರಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

೩. ದರಖಾಸ್ತು ಕೂಡಾ ನಗದಾಗಲಿ, ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣೀ ಹಣವನ್ನು ಹಾಜರಿ ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸ್ಪರ್ಧೆ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಅವನು ಒಡನೆ ಹಾಜರ್ಮಾಡಬೇಕು. ಮತ್ತು ಅಂತಾ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವಶ್ಯಕವಾದ ಇಜಾರ ಮುಚ್ಚಳಿಕೆಯನ್ನು ಬರದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ಹಣ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ.

A. ಶಿದ್ದಿಕಟ್ಟೆಯಲ್ಲಿ ಇರುವ ಎನ್‌ಕ್ಲೋಜಡ್ ವೆಜಿಟೆಬಿಲ್ ಮಾರ್ಕೆಟ್ಟನಲ್ಲಿ. } ಇದರ ತಪಸೀಲ್ ನಮೂದಿನಿಂದ ಕಂಟ್ರಾಕ್ಟುದಾರನು ಕಂಟ್ರಾಕ್ಟಿಗೆ ಸಂಬಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಸ್ವಂತಲಾಗವಡಿನಿಂದ ಒಂದು ಬೋರ್ಡು ಹಾಕಿರಬೇಕು.

		ರೂ.	ಆ.	ಪೈ.
1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	0	2
2.	ಹರಿವೆಸೊಪ್ಪುಗಳ ಮಂಕ್ರಿ 1ಕ್ಕೆ	0	0	1
3.	ಭಂಡಿ ತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರಿಗೆ ಬಂದರೆ ..	0	2	0
4.	ಮಾರ್ಕೆಟ್ಟನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ	0	1	0
5.	5 × 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸ್ಥಾಯಿಂ ಕಾಲದ ಅಂಗಡಿಗೆ ..	0	0	3
6.	ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಕ್ಕೆ	0	1	0
7.	ವೆಜಿಟೆಬಿಲ್ ಮಾರ್ಕೆಟ್ ಒಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ	0	0	2
[illegible]	ನೇಬು, ಅಂಜೂರ, ದಾಳಿಂಬ, ಚಕ್ಕೋತ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	0	3
[illegible]	ಮಾರ್ಕೆಟನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ತರಗಿನಪೇಟೆ ವಗೈರೆ ಸ್ಥಳದಿಂದ ಬರುವ ಉರುಳಗೆಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗೈರೆ ಮೂಟೆ 1ಕ್ಕೆ ..	0	0	3
10.	ರೈಲ್‌ನಿಂದ ಬರುವ ಮೂಟೆ ಭಂಡಿ ಭರ್ತಿ ಕಡ್ಲೆಕಾಯಿ, ಉರುಳಗೆಡ್ಡೆ, ಈರುಳ್ಳಿ, ಮಾವಿನಹಣ್ಣು, ಬಾಳೆಹಣ್ಣು, ವಗೈರೆ ಒಂದೇ ವಿಧವಾದ ಬಾಬಿಗೆ .. .	0	1	0
11.	ಕೋಳಿ, ಕೋಳಿ ಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ	0	0	3
12.	ಮೀನಿನ ಸ್ಟಾಲ್ 1ಕ್ಕೆ	0	0	2

7. ವೆಜಿಟೆಬಿಲ್ ಮಾರ್ಕೆಟ್ ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ, ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹಾ ತೆಗೆಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

8. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಕಂಟ್ರಾಕ್ಟ್ ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಸೀತಿ ಪಡದುಕೊಳ್ಳಬೇಕು.

9. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೋರ್ಯಿ ಡ್ರೈನ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು ವೆಜಿಟೆಬಿಲ್ ಮಾರ್ಕೆಟ್ ಕಂಟ್ರಾಕ್ಟುದಾರ್ರೇ ವಸೂಲ್ಮಾಡಿಕೊಂಡು ಮಾಹೆ 1ಕ್ಕೆ ಎರಡು ರೂಪಾಯಿಗಳಂತೆ ಡಿಟೋ ದೇವಸ್ಥಾನದ ಏಜಂಟರಿಗಾಗಿ ಅವರಿಗೆ ಪಾವತಿ ಬಗ್ಗೆ ಕಂಟ್ರಾಕ್ಟ್ ಮೊಬಲಗಿನ ಸಂಗಡ ಇರಸಾಲ್ ಮಾಡಬೇಕು.

10. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ್ ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟ ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟ್ ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

11. ಕೋಟೆ ಗ್ಲೇಸಸ್ ಬಳಿ ಇರತಕ್ಕ ಕಬ್ಬಿನ ಅಂಗಡಿಗಳು ಮತ್ತು ಇತರ ಅಂಗಡಿಗಳವರಿಂದ ರುಸುಂ ವಸೂಲ್ಮಾಡತಕ್ಕ ಬಾಬು ಈ ಕಂಟ್ರಾಕ್ಟಿಗೆ ಸೇರಿ ಇರುವದಿಲ್ಲ.

12. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕೀಗೆ ಭರ್ತಿಯಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬ್ದಾರಿ ಮಾಡಿ ಅವನ ಜೆಂದಿಗಿ ಜಫ್ತಿ ಹರಾಜು ಮೂಲಕ ವಸೂಲ್ಮಾಡಲ್ಪಡುತ್ತೆ.

13. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬೇಕು.

14. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟ್ ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರ ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

ಪಿ. ಪಲ್ಪ್, ಫಾರ್ ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

ನೋಟಿಸ್.

ತಾರೀಖು 5ನೇ ಜೂನ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು ಸನ್ 1904ನೇ ಇಸವಿ ಜೂನ್ ಆಖೈರುವರಿಗೆ ಅಂದರೆ ಒಂದು ವರುಷಕ್ಕೆ ಮೈಸೂರು ಟವರ್ನನಲ್ಲಿರತಕ್ಕ ಮ್ಯುನಿಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗೆ ನಮೂದು ಮಾಡುವ ಕೆರೊಸೀನ್ ಯಂಣೆ ಟಿನ್‌ಗಳನ್ನು ಸರಬರಾಯಿ ಮಾಡಲು ಇಚ್ಛೆಯುಳ್ಳವರು ಡಿಟೋ ಯಂಣೆ ಟಿನ್ ಒಂದಕ್ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನು ಲಖೋಟೆಗಳಲ್ಲಿ ಗರ್ಭೀಕರಿಸಿ ಮೊಹರು ಮಾಡಬೇಕು. ಡಿಪಾಜಟ್‌ಗಾಗಿ (50—0—0) ಐವತ್ತು ರೂಪಾಯಿಗಳನ್ನು ನಗದೇ ಆಗಲಿ ಅಥವಾ ಮದ್ರಾಸ್ ಕರೆನ್ಸಿ ನೋಟ್ ಮೂಲಕವೇ ಆಗಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ ಜೂನ್ ಮಾಹೆ 22ನೇ ತಾರೀಖಿನ ವಳಗಾಗಿ ಡಿಟೋ ದರಖಾಸ್ತುಗಳ ಕೂಡ ಕಳುಹಿಸಬೇಕು.

ಡಿಟೋ ಮಾಹೆ ತಾರೀಖು 22ರ ವರಿಗೂ ಮೇಲ್ಕಂಡ ದರಖಾಸ್ತುಗಳನ್ನು ತೆಗದುಕೊಳ್ಳಲ್ಪಡುವದು.

ಸನ್ 1903ನೇ ಇಸವಿ ಜೂನ್ 22ನೇ ತಾರೀಖಿನ ಮಧ್ಯಾಹ್ನ 2 ಘಂಟೆಗೆ ಟವರ್ನ ಹಾಲ್‌ನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರಿಂದ ಹಾಜರು ಇರತಕ್ಕ ದರಖಾಸ್ತುದಾರ್ರುಗಳ ರೂಬರೂಬ್ ಸದರಿ ದರಖಾಸ್ತುಗಳು ತೆರಿಯಲ್ಪಡುವವು.

ಪ್ರೆಸಿಡೆಂಟ್ ಸಾಹೇಬರವರು ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನೂ ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲಿ ಅಥವಾ ಇತರ ಯಾವ ದರಖಾಸ್ತುಗಳನ್ನೇ ಆಗಲಿ ವಜಾ ಮಾಡಲು ಅಧಿಕಾರ ವುಳ್ಳವರಾಗಿ ಇರುತ್ತಾರೆ.

ಮಂಜೂರಾದ ದರಖಾಸ್ತುದಾರ್ರು ಡಿಟೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 5 ಐದು ದಿವಸಗಳ ವಳಗಾಗಿ ಮೊದಲು ಹಾಜರು ಮಾಡಿದ (50—0—0) ಐವತ್ತು ರೂಪಾಯಿಗಳು ಡಿಪಾಜಟ್ ಅಲ್ಲದೆ ಜಾಸ್ತಿ (150—0—0) ಒಂದುನೂರ ಐವತ್ತು ರೂಪಾಯಿಗಳು ಡಿಪಾಜಟ್ಟಿಗಾಗಿ ಪಾವತಿ ಮಾಡಿ ರೂಲ್ಸ್ ಪ್ರಕಾರ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಮೊದಲು ಹಾಜರು ಮಾಡಿದ ಡಿಪಾಜಟ್ ಮೊಬಲಗನ್ನು ಕಳದುಕೊಳ್ಳುವರು.

ಬರದುಕೊಡತಕ್ಕ ಮುಚ್ಚಳಿಕೆಯ ಖರಾರುಗಳು ಮತ್ತು ಇತರ ತಪಶೀಲುಗಳು ಸಹಾ ಮ್ಯುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(1) ಛಸ್ಟರ್ ಮಾರ್ಕ್ ಸೀಮೆಯಂಣೆ ಟಿನ್‌ಗಳು.
(2) ರಷ್ಯನ್ ಯಂಣೆ ಟಿನ್ 125ನೇ ಡಿಗ್ರಿ ಬಾಬತು.

ತಿಂಗಳು ಒಂದಕ್ಕೆ ಸುಮಾರು ಇನ್ನೂರು ಟಿನ್‌ಗಳ ವರಿಗೆ ಛಸ್ಟರ್ ಮಾರ್ಕ್ ಸೀಮೆಯಂಣೆ ಟಿನ್‌ಗಳು ಖರೀದಿಗೆ ತೆಗದುಕೊಳ್ಳಲ್ಪಡುತ್ತೆ.

ಕೆ. ಶ್ರೀನಿವಾಸರಾವ್, ವೈಸ್ ಪ್ರೆಸಿಡೆಂಟ್.

ತಾರೀಖು 29ನೇ ಮೇ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ನಮ್ಮ ತಂದೆಯಾದ ತುಮಕೂರು ವಾಸಸ್ಥ ಜ[illegible]ಡಿ ಚನ್ನಪ್ಪನವರ ಮಗ ಕಂಬದೂರಯ್ಯನಿಗೆ ಪಿತ್ಥಭ್ರಮಣೆಯಿಂದ, ಜ್ಞಾನ ಸ್ವಾಧೀನವಿಲ್ಲದೆ ಮನಸ್ವೀ ಇರುತ್ತಾನೆ. [illegible]ಂದ ಯಾರಾದರೂ, ಯಾವ ಮೂಲಕವಾದ ಲೇವಾದೇವಿಯನ್ನಾಗಲೀ, ಸೊತ್ತುಗಳು ಪರಭಾರೆಯನ್ನಾಗಲಿ ಇತರ ಯಾವವಿಧವಾದ ಟ್ರಾನ್ಸ್ಯಾಕ್ಷನ್ ಆಗಲೀ ನಡಿಸಿದಲ್ಲಿ ನಮ್ಮ ಆಸ್ತಿಯು ಅಂಥಾ ಟ್ರಾನ್ಸ್ಯಾಕ್ಷನ್‌ಗೆ ಈಡಾಗಲಾರದು.

ರುಜು—ತುಮಕೂರಲ್ಲಿರುವ ಜವಳಿ ಅಂಗಡಿ ಕಂಬದೂರೈಯ್ಯನ ಮಗ ಚನ್ನಪ್ಪನ ರುಜು.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ 24.

ಬೆಂಗಳೂರು, ಗುರುವಾರ, ಜೂನ್ ತಾ|| 18, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯವರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 10ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ: —1903ನೇ ಇಸವಿ ಏಪ್ರೆಲ್ 26ನೇ ತಾರೀಖು ಮೈಸೂರು ಗೆಜೆಟ್ಟಿನ IIನೇ ಭಾಗದ 540ನೇ ಪೇಜಿನಲ್ಲಿ ಮೈಸೂರು ಡಿಸ್ಟ್ರಿಕ್ಟು ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟು ಪಸಾರೆ ಜಿನಸಿ ಜವಾವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತೆಂದು ಪ್ರಕಟಿಸಿ ಮಾಡಿರುವದು ಸರಿಯಷ್ಟೆ. ಸದರೀ ಹರಾಜು ಮಾಡಲ್ಪಡುವದನ್ನು ಸದ್ಯಕ್ಕೆ ವಜಾ ಮಾಡಿರುತ್ತೆ. ಮುಂದೆ ಹರಾಜು ಮಾಡಲ್ಪಡುವದನ್ನು ಇತಃಪರ ಪ್ರಕಟಿಸಿ ಮಾಡಲ್ಪಡುತ್ತಾಗಿ ತಿಳಿಸಿರುತ್ತೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

1903ನೇ ಇಸವಿ ಜೂನ್ ತಾರೀಖು 10ರಲ್ಲು.
ಫಾರೆಸ್ಟ್ ಸೆಟ್ಲಮೆಂಟ್, ಹಾಸನ ಡಿಸ್ಟ್ರಿಕ್ಟ್.
ಅರಸೀಕೆರೆ ತಾಲ್ಲೂಕು, ಬಿಸಲೆಕಲ್ಲು ಬ್ಲಾಕು.

ಸನ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸನ್ 1901ನೇ ಇಸವಿ ಮೇ ಮಾಹೆ 16ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಛಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸುದ್ದಾರಿಯಿಂದ ಪಡದ ಹಕ್ಕೂ, 1901ನೇ ಇಸವಿ ಮೇ ಮಾಹೆ 16ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದೃಶ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಛಾಯಿಷಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಯೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥಾ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ಯಾ ಚಕ್ಕುಬಂದಿ.
ಹಾಸನ	ಅರಸೀಕೆರೆ	2863 ಎಕರೆಗಳು, 1 ಗುಂಟೆ ಅಥವಾ ಸುಮಾರು 4½ ಚದರ ಮೈಲಿಗಳು	ಬಿಸಲೆಕಲ್ಲು ಬ್ಲಾಕು	**ಸ್ಥಳ.**—ಅರಸೀಕೆರೆ ತಾಲ್ಲೂಕಿನ ಅರಸೀಕೆರೆ ವ ಹಾರ್‍ನಹಳ್ಳಿ ಹೋಬಳಿಗಳಲ್ಲಿ ಇಧೆ. **ಚಕ್ಕುಬಂದಿ.** ಉತ್ತರಕ್ಕೆ.—15 ಗಜ ಅಗಲವುಳ್ಳ ಪಾಕು ಮಾಡಿದ ಲೈನು ಬೈರಾಂಬುದಿಯ ಸರ್ವೆ ನಂ. 10, ಬಿಸಲೆಹಳ್ಳಿಯ ಸರ್ವೆ ನಂ. 38 ಮತ್ತು ಸಂಕೋನಹಳ್ಳಿಯ ಸರ್ವೆ ನಂ. 49 47 ವ 46 ಇವುಗಳ ಮಧ್ಯೆ ಹೋಗುತ್ತದೆ. ಪೂರ್ವಕ್ಕೆ.—15 ಗಜ ಅಗಲವುಳ್ಳ ಪಾಕು ಮಾಡಿದ ಲೈನು ಸಂಕೋನಹಳ್ಳಿಯ ಸರ್ವೆ ನಂ. 46, ಯಾಚಾಪುರದ ಸರ್ವೆ ನಂ. 7, ಜಾವನ್ನಹಳ್ಳಿಯ ಸರ್ವೆ ನಂ. 8, ಮುರುಂಡಿಯ ಸರ್ವೆ ನಂ. 16, ವ 17 ಮತ್ತು ಅಂಣಾಯಿಕನಹಳ್ಳಿಯ ಸರ್ವೆ ನಂ. 59, ಇವುಗಳ ಮಧ್ಯೆ ಹೋಗುತ್ತದೆ. ದಕ್ಷಿಣಕ್ಕೆ.—15 ಗಜ ಅಗಲವುಳ್ಳ ಪಾಕು ಮಾಡಿದ ಲೈನು ಈ ಸ್ಥಳದಿಂದ ಹೊರಟು ಗೊಲ್ಲರಹಳ್ಳಿಯ ಸರ್ವೆ ನಂ. 45, ಗೋವಿಂದಪುರದ ಸರ್ವೆ ನಂ. 19 ಮತ್ತು ದೇಶಾಣಿಯ ಸರ್ವೆ ನಂ. 37 ಇವುಗಳ ಮಧ್ಯೆ ಹೋಗುತ್ತದೆ. ಪಶ್ಚಿಮಕ್ಕೆ.—15 ಗಜ ಅಗಲವುಳ್ಳ ಪಾಕು ಮಾಡಿದ ಲೈನು ಈ ಸ್ಥಳದಿಂದ ಹೊರಟು ಕುರುಡಹಳ್ಳಿ, ಸರ್ವೆ ನಂ. 10, ಮುದ್ದೇನಹಳ್ಳಿಯ ಸರ್ವೆ ನಂ. 53, 52, 26, 25 ವ 10 ಇವುಗಳ ಮಧ್ಯೆ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

1903ನೇ ಇಸವಿ ಜೂನ್ ತಾರೀಖು 10ರಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್, ಹಾಸನ ಡಿಸ್ಟ್ರಿಕ್ಟ್.

ಅರಸೀಕೆರೆ ತಾಲ್ಲೂಕು, ದೇಶಾಣಿ ಬ್ಲಾಕು.

ಸನ್ 1901ನೇ ಇಸವಿ 11ನೇ ಕಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸನ್ 1901ನೇ ಇಸವಿ ಜೂನ್ ಮಾಹೆ 18ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿದೆಯಾದ್ದರಿಂದ, ಈ ಇಸ್ತಿಹಾರು ಫಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರೆಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1901ನೇ ಇಸವಿ ಜೂನ್ ಮಾಹೆ 18ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರಕ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟಿ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೊಖಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲಿ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮೂಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ಮ ಚಕ್ಕುಬಂದಿ.
ಹಾಸನ	ಅರಸೀಕೆರೆ	1178 ಎಕರೆಗಳು, 8 ಗುಂಟೆಗಳು ಅಥವಾ ಸುಮಾರು 2 ಚದರ ಮೈಲಿಗಳು	ದೇಶಾಣಿ ಬ್ಲಾಕು	ಸ್ಥಳ— ಅರಸೀಕೆರೆ ತಾಲ್ಲೂಕಿನ ಹಾರ್‍ನಹಳ್ಳಿ ವ ಜಾವಗಲ್ ಹೋಬಳಿಗಳಲ್ಲಿ ಇದೆ. **ಚಕ್ಕುಬಂದಿ.** ಉತ್ತರಕ್ಕೆ—15 ಗಜ ಅಗಲವುಳ್ಳ ಸಾಕುಮಾಡಿದ ಲೈನು ಕುರುಬರ ಹಳ್ಳಿಯ ಸರ್ವೆ ನಂ. 16, ಕುರುಡಹಳ್ಳಿ ಸರ್ವೆ ನಂ. 65 ವ 32 ಇವುಗಳ ಮಧ್ಯೆ ಹೋಗುತ್ತದೆ. ಪೂರ್ವಕ್ಕೆ—15 ಗಜ ಅಗಲವುಳ್ಳ ಸಾಕುಮಾಡಿದ ಲೈನು ಮೇಲ್ಕಂಡ ಸ್ಥಳದಿಂದ ಕುರುಡಹಳ್ಳಿಯ ಸರ್ವೆ ನಂ. 32ರ ಮಧ್ಯೆ, ದೇಶಾಣಿಯ ಸರ್ವೆ ನಂ. 65 ವ 63 ಇವುಗಳ ಮಧ್ಯೆ ಹೊರಟು ಸರ್ವೆ ನಂ. 65ರಲ್ಲಿರುವ ದೇವಸ್ಥಾನದ ಪಕ್ಕದಲ್ಲಿಯೂ ಮತ್ತು ಡಿಗ್ಗೇನಹಳ್ಳಿಯ ಸರ್ವೆ ನಂ. 24ರ ಮಧ್ಯೆ ಹೋಗುತ್ತದೆ. ದಕ್ಷಿಣಕ್ಕೆ—ಈ ಸ್ಥಳದಿಂದ 15 ಗಜ ಅಗಲವುಳ್ಳ ಸಾಕುಮಾಡಿದ ಲೈನು ದೇಶಾಣಿಯ ಸರ್ವೆ ನಂ. 63 ಮತ್ತು ಸಿಂಗಟಗೆರೆಯ ಸರ್ವೆ ನಂ. 5 ಇವುಗಳ ಮಧ್ಯೆ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ 15 ಗಜ ಅಗಲವುಳ್ಳ ಸಾಕುಮಾಡಿದ ಲೈನು ಉಂಡಿಗನಾಳಿನ ಸರ್ವೆ ನಂ. 105 ಮತ್ತು ಹಂದ್ರಾಳಿನ ಸರ್ವೆ ನಂ. 24 ವ 23 ಇವುಗಳ ಮಧ್ಯೆ ಹಾದು ಹೊರಟಸ್ಥಳವನ್ನು ಸೇರುತ್ತದೆ.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರವರು, ಹಾಸನ ಡಿಸ್ಟ್ರಿಕ್ಟ್.

1902ನೇ ಇಸವಿ ಜೂನ್ ತಾರೀಖು 10ರಲ್ಲು.

ಫಾರೆಸ್ಟ್ ಸೆಟಲ್ಮೆಂಟ್, ಹಾಸನ ಡಿಸ್ಟ್ರಿಕ್ಟು.

ಅರಸೀಕೆರೆ ತಾಲ್ಲೂಕು, ಬೆಟ್ಟದಪುರ ಬ್ಲಾಕು.

ಸನ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸನ್ 1901ನೇ ಇಸವಿ ಜುಲೈ ಮಾಹೆ 18ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಫಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1901ನೇ ಇಸವಿ ಜುಲೈ ಮಾಹೆ 18ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲೀ, ಫಾರೆಸ್ಟ್ ಸೆಟಲ್ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವುದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಹಾಸನ	ಅರಸೀಕೆರೆ	3070 ಎಕರೆಗಳು, 12 ಗುಂಟೆಗಳು ಅಥವಾ ಸುಮಾರು 5 ಚದರ ಮೈಲಿಗಳು	ಬೆಟ್ಟದಪುರ ಬ್ಲಾಕು	ಸ್ಥಳ—ಅರಸೀಕೆರೆ ತಾಲ್ಲೂಕಿನ ಬಾಣಾವಾರ ವ ಅರಸೀಕೆರೆ ಹೋಬಳಿಗಳಲ್ಲಿ ಇಧೆ. ಚಕ್ಕುಬಂದಿ. ಉತ್ತರಕ್ಕೆ—15 ಗಜ ಅಗಲವುಳ್ಳ ಪಾಕು ಮಾಡಿದ ಲೈನು ಭೈರಾಪುರದ ಸರ್ವೆ ನಂ. 17, ಅರಕೆರೆಯ ಸರ್ವೆ ನಂ. 144 ವ 145, ಕೆಂಚನಹಳ್ಳಿಯ ಸರ್ವೆ ನಂ. 16, 14 ವ 13 ಮತ್ತು ಹಿರಿಯೂರಿನ ಸರ್ವೆ ನಂ. 131 ಇವುಗಳ ಮಧ್ಯೆ ಹೋಗುತ್ತದೆ. ಪೂರ್ವಕ್ಕೆ—15 ಗಜ ಅಗಲವುಳ್ಳ ಪಾಕುಮಾಡಿದ ಲೈನು ಈ ಸ್ಥಳದಿಂದ ಹೊರಟು ಬೆಟ್ಟದಪುರದ ಸರ್ವೆ ನಂ. 1, ಸರ್ವೆ ನಂ. 17ರ ಅಂಚಿನಲ್ಲಿಯೂ ಮತ್ತು ಬೈರಾಂಬುದಿಯ ಸರ್ವೆ ನಂ. 10ರ ಮಧ್ಯೆ ಹೋಗುತ್ತದೆ. ದಕ್ಷಿಣಕ್ಕೆ—15 ಗಜ ಅಗಲವುಳ್ಳ ಪಾಕುಮಾಡಿದ ಲೈನು ಈ ಸ್ಥಳದಿಂದ ಹೊರಟು ಸಿಂಗನಹಳ್ಳಿಯ ಸರ್ವೆ ನಂ. 9ರ ಮಧ್ಯೆ ಹೋಗುತ್ತದೆ. ಪಶ್ಚಿಮಕ್ಕೆ—ಮೇಲ್ಕಂಡ ಸ್ಥಳದಿಂದ 15 ಗಜ ಅಗಲವುಳ್ಳ ಪಾಕುಮಾಡಿದ ಲೈನು ಮದರಹಳ್ಳಿಯ ಸರ್ವೆ ನಂ. 55ರ ಮಧ್ಯೆ ಮತ್ತು ಸದರೀ ಗ್ರಾಮದ ಸರ್ವೆ ನಂ. 40ರ ಅರಗಿನಲ್ಲಿಯೇ ಹೊರಟು ಉಪ್ಪರಕಲನ ಹಳ್ಳಿಯ ಸರ್ವೆ ನಂ. 12, 10 ವ 9, ತಿಮ್ಮಲಾಪುರದ ಸರ್ವೆ ನಂ. 29 ವ 30 ಮತ್ತು ಭೈರಾಪುರದ ಸರ್ವೆ ನಂ. 17, 20 ವ 18 ಇವುಗಳ ಮಧ್ಯೆ ಹೋಗಿ ಹೊರಟಸ್ಥಳವನ್ನು ಸೇರುತ್ತದೆ.

ತಾರೀಖು 6ನೇ ಜೂನ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುತ್ತೆ.

ನಂಬರು	ಡಿಪೋ ಹೆಸರು	ಹರಾಜು ತಾರೀಖು	ಸಾಗುವಾನಿ ನಾಟೂ		ಮತ್ತಿನಾಟ		ನಂದಿನಾಟ		ಬೀಟೆನಾಟ		ಕಾಸುಜಾತಿ ನಾಟ		ಸಾಗುವಾನಿ ಬೆಲಗು		ಷರಾ
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	[illegible]
1	ಹೊಳಲಕೆರೆ ರೈಲ್ವೆಸ್ಟೇಷನ್	23–6–1903	26	879	7	171	2	77	3	73	4	131	..	...	
2	ಹೊಳಲಕೆರೆ ಡಿಪೋ ...	24–6–1903	...	...	..	...	..	..	..	..	..	...	350 1300	300 ..	

ಹರಾಜ್ ಷರತ್ತು :—1895ನೇ ಇಸವಿ ಏಪ್ರೈಲ್ 25ನೇ ಮರ್ಕ್ಯಂ ನಂಬರು 15ನೇ ಮೈಸೂರು ಗೆಜೆಟನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್ಕ್ಯಂ ನಂಬರು 15229–R. F. 155—92ನೇ ನೋಟಿಫಿಕೇಷನ್ ನೋಡಬೇಕು.

ತಾರೀಖು 6ನೇ ಜೂನ್ 1903

1. ಚಿತ್ರದುರ್ಗದ ಡಿಸ್ಟ್ರಿಕ್ಟು ಬಾಬತು ಫಾರೆಸ್ಟು ಇಲಾಖೆ ಮಾರೀಫತ್ತು ಜಮಾವಣೆಯಾಗಿ ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಇಡಲ್ಪಟ್ಟು ಇರುವ ಪಸಾರೆ ಜಿನಸಿಯು ಈ ಕೆಳಗೆ ನಮೂದಿರುವ ಸ್ಥಳ ತಾರೀಖುಗಳಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಹರಾಜು ಮಾಡಲ್ಪಡುವದು. ಇಷ್ಟವುಳ್ಳವರು ರೂಬರೂಬ್ ಹಾಜರಾಗಿ ಸವಾಲು ಮಾಡಬಹುದು.

2. ಹರಾಜು ತಾರೀಖು ಲಾಗಾಯಿತು ಅಥವಾ ಮೊಬಲಗು ಕೊಟ್ಟ ಲಾಗಾಯಿತು ಈ ಸಾಮಾನುಗಳ ದೇಖರೇಖೆಯು ಹರಾಜುದಾರನಿಗೆ ಸಂಬಂಧಪಟ್ಟು ಇರುತ್ತವೆ.

3. ಹರಾಜು ಷರತ್ತುಗಳು—ಹರಾಜು ಕೈದಾದ ವಡನೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಛಡ ಸವಾಲುದಾರನು ಡಿಪಾಜಿಟ್ ಇಡಬೇಕು. ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು ಮೂರು ದಿವಸದೊಳಗಾಗಿ ಪಾವತಿ ಮಾಡಲ್ಪಡಬೇಕು. ಹಾಗೆ ಹಾಜರ್ಮಾಡಲು ತಪ್ಪಿದರೆ ಸದರಿ ಜಿನಸಿಯನ್ನು ದುಸರಾ ಹರಾಜು ಮಾಡಿ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಮತ್ತು ಡಿಪಾಜಿಟ್ ಇಟ್ಟಿರತಕ್ಕ ಮೊಬಲಗನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲಾಗುತ್ತೆ. ದುಸರೆ ಹರಾಜಿನಲ್ಲಿ ಮೊದಲು ಹರಾಜಿಗಿಂತ ಹೆಚ್ಚಿಗೆ ಮೊಬಲಗು ಉತ್ಪತ್ತಿಯಾದರೆ ಆ ಫಾಯಿದಾಂಶಕ್ಕೆ ಅವಲ್ ಹರಾಜುದಾರನು ಭಾಗಿಯಾಗಲಾರನು.

4. ಇನ್ನೂ ಹೆಚ್ಚಿಗೆ ತಪಶೀಲ್ ಬಗ್ಗೆ 1887ನೇ ಇಸವಿ ಸೆಪ್ಟಂಬರ್ ಮಾಹೆ 3ನೇ ಮರ್ಕ್ಯಂ ಮೈಸೂರು ಗೆಜೆಟನಲ್ಲಿ ಪ್ರಾಯಿಷ್ ಆಗಿರುವ 30—8—1887ನೇ ಮರ್ಕ್ಯಂ 99ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನು ನೋಡತಕ್ಕದ್ದು.

ನಂಬರು	ಸ್ಥಳ	ಜಿನಸಿ ವಿವರ	ಅದದು ಸ್ವಲ್ಪ ಹೆಚ್ಚು ಕಡಮೆ	ಹರಾಜು ಸ್ಥಳ	ಹರಾಜು ತಾರೀಖು
1	ಹೊಳಲಕೆರೆ ..	ಗೋಂದು	247 ಮಣ	ಹೊಳಲಕೆರೆ ರೇಂಜ್ ಆಫೀಸ್	24–6–1903
	ಡಿಟೋ ...	ಅಳಲೆಕಾಯಿ	100 ಮಣ	ಡಿಟೋ	ಡಿಟೋ
	ಡಿಟೋ ...	ಹೊಂಗೆಬೀಜ	30 ಮಣ	ಡಿಟೋ	ಡಿಟೋ
	ಡಿಟೋ ...	ತಾರೆಕಾಯಿ	20 ಮಣ	ಡಿಟೋ	ಡಿಟೋ
2	ಚಿತ್ರದುರ್ಗ	ಗೋಂದು	26 ಮಣ	ಚಿತ್ರದುರ್ಗದ ಡಿಪೋ	26–6–1903
	ಡಿಟೋ ...	ಅಳಲೆಕಾಯಿ	261 ಮಣ	ಡಿಟೋ	ಡಿಟೋ

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

1903ನೇ ಇಸವಿ ಮೇ ತಾರೀಖು 26ರಲ್ಲು.
ಫಾರೆಸ್ಟು ಸೆಟಲ್ಮೆಂಟ್, ಶಿವಮೊಗ್ಗಾ ಡಿಸ್ಟ್ರಿಕ್ಟ್.
ಜೋಗದ ಫಾರೆಸ್ಟು ಸಾಗರ ತಾಲ್ಲೂಕು.

ಸನ್ 1900ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟು ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸನ್ 1902ನೇ ಇಸವಿ ಜೂನ್ ಮಾಹೆ 26ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಪ್ರಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಸದರಿ ಜಮೀನು ಮನ್ನಾ ಜಂಗ್ಲಿಯಾಗಿ ಮಾಡಿ ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಿಶಿ ಮೂಲಕವಾಗಿಯಾಗಲಿ ಸರ್ಕಾರದಿಂದಲಾಗಲೀ, ಅಥವಾ ಅಂಥಾ ಹಕ್ಕನ್ನ ವುಂಟುಮಾಡಲಿಕ್ಕೆ ಅಧಿಕಾರವುಳ್ಳ ಇತರ ಯಾರಿಂದಲೇ ಆಗಲಿ ಅಥವಾ ಲಿಖಿತಮೂಲಕವಾದ ಒಪ್ಪಿಗೆಯಿಂದಲೇ ಆಗಲಿ ಉಂಟಾದ ಯಾವ ಬಾಧ್ಯತೆಯೂ ಇದರಿಂದ ನಿರೋಧಿಸಲ್ಪಡುವದಿಲ್ಲವು.

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ನ್ಯಾವ ಉದ್ದೇಶಕ್ಕಾಗಲಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು ಮತ್ತು ಸದರಿ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದರಿಂದಾಗಲಿ, ಅದರ ವುತ್ಪತ್ತಿಗೆ ಆದರು ಯಾವವಿಧವಾದ ಹಕ್ಕಿದೆ ಎಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಛಾಯಿಸಾದ ತಾರೀಖು ಲಾಗಾಯಿತು, ಮೂರು ತಿಂಗಳೊಳಗಾಗಿ ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ ಮೂಜಬಾನಿಯಿಂದಾಗಲೀ ಅಥವಾ ರಿಟರ್ನ್ ಸ್ಟೇಟ್‌ಮೆಂಟ್ ಮೂಲಕವಾಗಿಯಾಗಲೀ ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರು ಗೆಜೆಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ, (ಅಂದರೆ ಮೇಲ್ಕಂಡ ಮಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವದಲ್ಲದೆ, ಅನಂತರ ಬರುವ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಡಿಸ್ಟ್ರಿಕ್ಟು.	ತಾಲ್ಲೂಕು, ಜಹಗೀರು ಅಥವಾ ಗ್ರಾಮ.	ಸುಮಾರು ವಿಸ್ತೀರ್ಣ.	ಜಂಗಲಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಶಿವಮೊಗ್ಗ.	ಸಾಗರ.	15 ಚದರ ಮೈಲಿಗಳು.	ಜೋಗ ಕಾಡು.	ಸ್ಥಳ.—ಪಶ್ಚಿಮ ಘಾಟಿಯಲ್ಲಿ ಶರಾವತಿ ನದಿಯಿಂದಲೂ ಮತ್ತು ಉತ್ತರ ಕನ್ನಡಾ ಎಲ್ಲೆಯಿಂದಲೂ ಉಂಟಾದ ಮೂಲೆಯಲ್ಲಿರುವ ಎರಡು ಬ್ಲಾಕುಗಳು ವುಳ್ಳ ಜಂಗಲಿನ ತುಂಡು. **ಚಕ್ಕುಬಂದಿ.** A. ಬ್ಲಾಕು. ಉತ್ತರಕ್ಕೆ.—ಶರಾವತಿ ನದಿ. ಪೂರ್ವಕ್ಕೆ.—ಕರಗಲ್ ಗ್ರಾಮದ ಸರ್ವೆ ನಂ. 2. ದಕ್ಷಿಣಕ್ಕೆ.—ಕರಗಲ್ದ ಸರ್ವೆ ನಂ. 2ರ ಅಂಚಿನಲ್ಲಿರುವ A. ಎಂಬ ಕಲ್ಲುಪ್ಪೆಯಿಂದ ಹೊರಟು ಎಲ್ಲೆಯು ವಾಯುವ್ಯದಿಕ್ಕಾಗಿ ನೆಟ್ಟಗೆ ಕರಗಲದ ಸರ್ವೆ ನಂ. 16ರ ಮಧ್ಯೆ ಕರಗಲದ ಸರ್ವೆ ನಂ. 16 ಮತ್ತು ತಲಕಳಲೆಯ ಸರ್ವೆ ನಂ. 61 ವ 62 ಇವುಗಳ ಬಹುತ್ವದ ಬಾಂದಿಗೆ ಹೋಗುತ್ತದೆ. ಆಖೈರು ಸ್ಥಳದಿಂದ ಲೈನು ದಕ್ಷಿಣಕ್ಕೆ ತಿರುಗಿ ನೆಟ್ಟಗೆ ತಲಕಳಲೆಯ ಸರ್ವೆ ನಂ. 61ರ ಮಧ್ಯೆ ಸದರೀ ಗ್ರಾಮದ ಸರ್ವೆ ನಂ. 63ರ ವಾಯುವ್ಯ ಬಾಂದಿಗೆ ಹೋಗುತ್ತದೆ. ಮೇಲ್ಕಂಡ ಸ್ಥಳದಿಂದ ಲೈನು ಸರ್ವೆ ನಂ. 63ರ ಪಶ್ಚಿಮ ಅಂಚಿನ ಉದ್ದಕ್ಕೂ ಹೋಗುತ್ತದೆ. ಆಮೇಲೆ ಆಖೈರ ಸರ್ವೆ ನಂಬರಿನಲ್ಲಿ ಸೇರುವ ಕಾಲುಹಾದಿಯನ್ನು ಅನುಸರಿಸಿ ಹೋಗಿ ಲೈನು B ಎಂಬ ಕಲ್ಲುಪ್ಪೆಯಲ್ಲಿ ಸರ್ವೆ ನಂ. 61 ವ 116 ಇವುಗಳ ಮಧ್ಯೆ ಇರುವ ಎಲ್ಲೆಯನ್ನು ಮುಟ್ಟುತ್ತದೆ. ಆಖೈರ ಸ್ಥಳದಿಂದ ಲೈನು ಸರ್ವೆ ನಂ. 61 ವ 60 ಇವುಗಳ ದಕ್ಷಿಣ ಅಂಚಿನ ಉದ್ದಕ್ಕೂ ಹೋಗುತ್ತದೆ. ಪಶ್ಚಿಮಕ್ಕೆ.—ಉತ್ತರ ಕನ್ನಡಾವಿನ ಸೂಲಿಮನೆ ಗ್ರಾಮ. B. ಬ್ಲಾಕು. ಉತ್ತರಕ್ಕೆ.—ತಲಕಳಲೆಯ ಸರ್ವೆ ನಂ. 60ರ ಪಶ್ಚಿಮ ಭಾಗ. ಪೂರ್ವಕ್ಕೆ.—ಎಲ್ಲೆಯು ತಲಕಳಲೆಯ ಸರ್ವೆ ನಂ. 24, 25, 33 ವ 11 ಇವುಗಳ ಬಹುತ್ವದ ಬಾಂದನ್ನು ಮುಟ್ಟುವ ವರಿವಿಗೆ ಸರ್ವೆ ನಂ. 26ರ ಆಮೇಲೆ 25ರ ಪೂರ್ವ ಅಂಚನ್ನು ಅನುಸರಿಸಿ ಹೋಗುತ್ತದೆ. ಆಖೈರು ಸ್ಥಳದಿಂದ ಲೈನು ದಕ್ಷಿಣಕ್ಕೆ ನೆಟ್ಟಗೆ ಸರ್ವೆ ನಂ. 24 ವ 132 ಇವುಗಳ ಮಧ್ಯೆ ತಲಕಳಲೆಯ ಸರ್ವೆ ನಂ. 132, 130, ವ 126 ಇವುಗಳ ಬಹುತ್ವದ ಬಾಂದಿಗೆ ಹೋಗುತ್ತದೆ. ದಕ್ಷಿಣಕ್ಕೆ.—ಎಲ್ಲೆ ಲೈನು ಉತ್ತರ ಕನ್ನಡ ಎಲ್ಲೆಯನ್ನು ಮುಟ್ಟುವವರಿವಿಗೆ ಸರ್ವೆ ನಂ. 126 ವ 125 ಇವುಗಳೊಡನೆ ಸರ್ವೆ ನಂ. 132 ಸೇರತಕ್ಕ ಸ್ಥಳದ ಉದ್ದಕ್ಕೂ ವಕ್ರಾಕಾರವಾಗಿ ಹೋಗುತ್ತದೆ. ಪಶ್ಚಿಮಕ್ಕೆ.—ಉತ್ತರ ಕನ್ನಡಾ ಎಲ್ಲೆ.

ಸಿ. ಎಸ್. ಬಾಲಸುಂದರಂ ಅಯ್ಯರ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್, ಸಾಗರ ಸಬ್ ಡಿವಿಜನ್.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಖಾಯಂಗುತ್ತಾ ಕೆಂಪಗೊಂಡನಹಳ್ಳಿ ಗ್ರಾಮವು 10—7—1903ರಲ್ಲಿಯೂ ಖಾಯಂಗುತ್ತಾ ಗಂಗಪ್ಪನಹಳ್ಳಿ ಗ್ರಾಮವು 11—7—1903 ರಲ್ಲಿ ಯೂ ಆಯಾಯ ಗ್ರಾಮಗಳ ಚಾವಡಿಗಳಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 1903ನೇ ಜೂನ್ 11ನೇ ತಾರೀಖಿನ ಮೈಸೂರು ಗೆಜೆಟ್ 2ನೇ ಭಾಗದಲ್ಲಿ ಫಾಯಿಷ್ ಆಗಿ ಇಧೆ.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಅಬಸ್ಟ್ರಾಕ್ಟ್.

ಇಸ್ತಿಹಾರ್ನಾಮೆ, ತಾರೀಖು 22ನೇ ಮೇ 1903.

ಮಾಲೂರು ತಾಲ್ಲೂಕು ತ್ಯಾಕಲ್ ಹೋಬಳಿಗೆ ಸೇರಿದ ಮರ್ಜೆನ್ನಲ್ಲಿ ನಮೂದಾಗುವ ಗ್ರಾಮಗಳ ಬಳಿ ಇರತಕ್ಕ ಬಂಡೆ ಮೇಲೆ ಕಲ್ಲು ತೆಗೆಯಲು ಶೋಭಕೃತು ಸಂವತ್ಸರಕ್ಕೆ (1903-1904) ಅಂದರೆ 1903ನೇ ಜುಲೈ 1ನೇ ತಾರೀಖು ಲಾಗಾಯತು 1904ನೇ ಜೂನ್ ಆಖೈರು ವರಿಗೆ ಕಲ್ಲು ತೆಗಿಯುವದಕ್ಕೋಸ್ಕರ 1903ನೇ ಇಸವಿ ಜೂನ್ 30ನೇ ತಾರೀಖಿನಲ್ಲಿ ಮಾಲೂರು ತಾಲ್ಲೂಕು ಕಛೇರಿಯಲ್ಲಿ ಈ ಬಾಬನ್ನು ಹರಾಜು ಹಾಕಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿಧೆ.

1. ತ್ಯಾಕಲ್	4. ಕೊರಚನೂರು
2. ಕಾವಲಗಿರಿಯನಹಳ್ಳಿ	5. ಹುಣಸಕೋಟೆ
3. ಕೊಂಡರಾಜನಹಳ್ಳಿ	6. ಪುಳ್ಳೇರಹಳ್ಳಿ

ಹೆಚ್ಚು ತಪಸೀಲ್ ಬಗ್ಯೆ 1903ನೇ ಇಸವಿ ಜೂನ್ ತಾರೀಖು 4ನೇ ಮರ್ಕುಂ 22ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 260—261ನೇ ನಂಬರ್ ಪೇಜು ನೋಡತಕ್ಕದ್ದು.

ಮಾಲೂರು ತಾಲ್ಲೂಕು ನರಸಾಪುರದ ಹೋಬಳಿಗೆ ಸೇರಿದ ಕಾಯಂಗುತ್ತಾ ಗರುಡನಪಾಳ್ಯ ಗ್ರಾಮವು ಸರಕಾರಕ್ಕೆ ಬರಬೇಕಾದ ಗುತ್ತಾ ಬಾಕೀಗೋಸ್ಕರವಾಗಿ ಮಾಲೂರು ತಾಲ್ಲೂಕು ಆಮಿಲರವರ ಕಚೇರಿಯಲ್ಲಿ 1903ನೇ ಇಸವಿ ಜುಲೈ 10ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿಧೆ.

ಹೆಚ್ಚು ತಪಸೀಲ್ ಬಗ್ಯೆ 1903ನೇ ಇಸವಿ ಜೂನ್ ತಾರೀಖು 4ನೇ ಮರ್ಕುಂ 22ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 260-261ನೇ ನಂಬರು ಪೇಜು ನೋಡತಕ್ಕದ್ದು.

ಇಸ್ತಿಹಾರನಾಮೆ.

ತಾರೀಖು 1ನೇ ಜೂನ್ 1903.

ಮಾಲೂರು ತಾಲ್ಲೂಕಿಗೆ ಸೇರಿದ ಮಾರ್ಜೆನ್ನಲ್ಲಿ ಕಂಡ ಇನಾಂ ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ಮಾಲೂರು ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಜುಲೈ ತಾರೀಖು 20ರಲ್ಲು ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿಧೆ.

1. ಜೋಡಿ ನಲ್ಲಪ್ಪನಹಳ್ಳಿ.	1. ,, ಚೊಕ್ಕಪುರ.
1. ,, ಬೆಳ್ಳೂರು.	1. ಕಾಯಂಗುತ್ತಾ ಬೈರಸಂದ್ರ.

ಹೆಚ್ಚು ತಪಸೀಲ್ ಬಗ್ಯೆ 1903ನೇ ಜೂನ್ ತಾರೀಖು 11ನೇ ಮರ್ಕುಂ 23ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 274-275-276-277ನೇ ನಂಬರ್ ಪೇಜುಗಳು ನೋಡತಕ್ಕದ್ದು.

ಇದರಿಂದ ಬವರಿಂಗಪೇಟೆ ತಾಲ್ಲೂಕು ಬೇತಮಂಗಲ ಸಮ್ಮತು ಪೇತಮಂಗಲ ದೊಡ್ಡಕೆರೆ ಮತ್ತು ಅದರ ಬಾಬತು ನಾಲೆಗಳ ನೀರಿನಿಂದ ಸಾಗುವಳಿಯಾಗುತ್ತಿದ್ದ ತರಿ ಮತ್ತು ಬಾಗಾಯತು ಜಮೀನ್ ಕಂದಾಯದಾರರಿಗೆ ತಿಳಿಯಪಡಿಸುವದೇನಂದರೆ.—ಕೋಲಾರ ಗೋಲ್ಡ್ ಫೀಲ್ಡ್ಸಿಗೆ ನೀರನ್ನ ಸರಬರಾಯಿ ಮಾಡತಕ್ಕ ಸಂದರ್ಭದಲ್ಲಿ ಬೇತಮಂಗಲ ದೊಡ್ಡಕೆರೆ ನೀರನ್ನ ಸಾಗುವಳಿಗೆ ಬಿಡದೆ "Conserve" ಯಾನೆ ಅಮಾನತ್ತು ಮಾಡಬೇಕೆಂತ ಮಗ್ಯೆರೆ ಆಗಿರುವ ಗವರ್ನ್ಮೆಂಟ್ ತೀರ್ಮಾನವನ್ನನುಸರಿಸಿ 1903ನೇ ಇಸವಿ ಮಾರ್ಚಿ 15ನೇ ತಾರೀಖು ಲಾಗಾಯತು ಸದರಿ ಕೆರೆ ಮತ್ತು ನಾಲಾಗಳ ನೀರನ್ನ ಸಾಗುವಳಿಗೆ ಕೊಡಲಾಗಲಾರದೆಂಬ ಸಂಗತಿಯನ್ನ ಸಂಬಂಧಪಟ್ಟ ಎಲ್ಲಾ ರೈತರಿಗೂ ಮೊದಲೇ ಪ್ರಸಿದ್ಧಪಡಿಸಿರುತ್ತಷ್ಟೆ.

ಹಾಲಿ ಮುಂಗಾರು ಮಳೆ ಬಿದ್ದು ಫಸಲಿಡಲಿಕ್ಕೆ ಆಯಾಂಕಾಲವಾಗಿರುವದ್ದರಿಂದ ಬೇತಮಂಗಲ ಕೆರೆ ಮತ್ತು ಅದರ ನಾಲೆಗಳ ನೀರಿನಿಂದ ಸಾಗುವಳಿಯಾಗುತ್ತಿದ್ದ ತಮಾಂ ತರಿ ಮತ್ತು ಬಾಗಾಯತು ಜಮೀನ್ ಮಾಲೀಕರುಗಳು ತಮ್ಮ ತಮ್ಮ ಜಮೀನುಗಳಲ್ಲಿ ತಮಗೆ ಇಷ್ಟಬಂದ ಯಾವ ಖುಷ್ಕಿ ಬೆಳೆಯನ್ನಾದರೂ ಇಟ್ಟುಕೊಳ್ಳಬಹುದು. ಸರ್ಕಾರದವರ ಅಡ್ಡಿ ಇಲ್ಲವೆಂಬ ಸಂಗತಿ ಪುನಹ ತಿಳಿಸಿರುತ್ತೆ.

ಮತ್ತು ಬೇತಮಂಗಲದಿಂದ ರಾಮಸಾಗರಕಡೆಗೆ ಹರಿಯುವ ಕೋಡಿ, ಕ್ಷೀರನದಿ, ವ ಇತರ ಯಾವ ಸರ್ಕಾರ ನೀರನ್ನೇ ಆಗಲಿ ಮೇಲ್ಕಂಡ ಕಂದಾಯದಾರರು ತಮ್ಮ ಜಮೀನ್‌ಗಳಿಗೆ ಉಪಯೋಗಿಸಿಕೊಳ್ಳಲು ಮತ್ತು ತಮ್ಮ ತಮ್ಮ ಜಮೀನ್‌ಗಳಲ್ಲಿ ಭಾವಿ ತೆಗಿಯಬೇಕೆಂಬ ಇರಾದೆಯುಳ್ಳವರು ಕ್ರಮವರಿತು ದರಖಾಸ್ತು ಕೊಟ್ಟು ನಮ್ಮಿಂದ ಲಿಖಿತಮೂಲಕವಾದ ಅಪ್ಪಣೆಯನ್ನ ಪಡೆದನಂತರವೇ ಸಾಗುವಳಿ ಬಗ್ಯೆ ಸದರೀ ನೀರನ್ನ ತೆಗೆದುಕೊಳ್ಳಬಹುದಾಗಿರುತ್ತೆ.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 29ನೇ ಮಾಹೆ 1903.

1. ಕಂದಾಯದ ಬಾಕೀದಾರರಾದ ಜೋಡಿದಾರ್ ನಂಜುಂಡೈಯ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ತುಮಕೂರ ಡಿಸ್ಟ್ರಿಕ್ಟು ತುಮಕೂರ ತಾಲ್ಲೂಕು ಜೋಡಿ ವಡ್ಡರಹಳ್ಳಿ ಗ್ರಾಮದಲ್ಲಿ 1903ನೇ ಇಸವಿ ಆಗಸ್ಟು 3ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟುಇದೆ.

ಹರಾಜು ಸದರಿ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಬಡದರಖಾಸ್ತುದಾರನ ಹೆಸ[illegible] ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901–1902ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 64—0—9 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25ರೂಪಾಯಿಯಂತೆ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ [illegible]ರ್ಣಮೆಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್.						ಸರಕಾರಕ್ಕೆ ಬರಬೇಕಾದ ಮತ್ತು ಇತರ ಸಂಬಂಧವಾದ ಬಾಕಿ ಮೊಬಲಗು.
				ಕಟ್ಟಡಗಳು.		ಜಮೀನು.				
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ ಅಥವಾ ಹಿಸ್ಸಾದ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	
					ರೂ. ಆ. ಪೈ.			ಖ. ಕೊ. ಪಡಿ.	ರೂ. ಆ. ಪೈ.	ಪ್ಲವ ಸಂವತ್ಸರದ ಬಗೆ (1901—02) ರೂ. ಆ. ಪೈ.
ತುಮಕೂರು	ತುಮಕೂರು	ಜೋಡಿ ವಡ್ಡರಹಳ್ಳಿ	ನಂಜುಂಡಯ್ಯ ವಗೈರೆ	...	..		ಖುಷ್ಕಿ ತರಿ ಪರಂಪೋಕು	9—15— 4 0— 3— 0 7—17—11 7/8 17—15—15 7/8	150 0 0	63—0—9 1—0—0 64—0—[illegible]

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

1902—03ನೇ ಸಾಲುಖೈರು ವರಿಗೆ ಸರಕಾರಕ್ಕೆ ಬರಬೇಕಾದ ಕಂದಾಯದ ಬಾಕೀಗಾಗಿ ಶಿವಮೊಗ್ಗಾ ತಾಲ್ಲೂಕು ಹೊಳಲೂರು ಹೋಬಳಿಯಲ್ಲಿರುವ ಬೆಳಲಕಟ್ಟೆ ಅಗ್ರಹಾರದ ಇನಾಂ ಜಮೀನ್ ಸನ್ 1903ನೇ ಇಸವಿ ಜುಲೈ 10ನೇ ತಾರೀಖಿನ ದಿವಸ ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ ಹರಾಜ್ ಹಾಕಿಸಲ್ಪಡುತ್ತೆ.

ಈ ವಿಷಯದಲ್ಲಿ ಹೆಚ್ಚಿಗೆ ತಪಶೀಲುಗಳ ಬಗ್ಗೆ 1903ನೇ ಇಸವಿ ಜೂನ್ ತಾರೀಖು 4ನೇ ಮರ್ಕ್ಕಂ 22ನೇ ನಂಬರ ಮೈಸೂರು ಗೆಜೆಟಿನ 2ನೇ ಭಾಗದ 262ನೇ ಪೇಜಿನಲ್ಲಿ ಪ್ರಾಯಿಷಾಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ತಾರೀಖು 21ನೇ ಮೇ 1903ನೇ ಇಸವಿ.

1903ನೇ ಇಸವಿ ಮೇ ಮಾಹೆ ತಾರೀಖು 21ನೇ ಗುರುವಾರ ಶಿವಮೊಗ್ಗಾದಲ್ಲಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಆಫೀಸಿನಲ್ಲಿ ನಡೆದ ಡಿಸ್ಟ್ರಿಕ್ಟು ಫಂಡು ಬೋರ್ಡ್ ಮೀಟಿಂಗ್ ಪ್ರೊಸೀಡಿಂಗ್ಸಯಾನೆ ನಡವಳಿಕೆಗಳು.

ಹಾಜರು.

ಉದ್ಯೋಗಸ್ಥ ಮೆಂಬರುಗಳು.

ಮ|| ಕೆ. ಪಿ. ಪುಟ್ಟಣ್ಣಶೆಟ್ಟರವರು, ಡೆಪ್ಯುಟಿ ಕಮಿಷನರ್ ಮತ್ತು ಪ್ರೆಸಿಡೆಂಟರವರು, ಸಭಾಧ್ಯಕ್ಷರು.

1. ,, ಕೆ. ಪ್ರಹ್ಲಾದರಾಯರವರು, ಎಗ್ಸಿಕ್ಯೂಟಿವ್ ಇಂಜಿನಿಯರವರು.
2. ,, ಸಿ. ಎಸ್. ಬಾಲಸುಂದರಮ್ಮೈಯ್ಯರವರು, ಸಾಗರ ಸಬ್ ಡಿವೀಜನ್ ಚಾರ್ಜಿನಲ್ಲಿ ಇರುವ ಅ|| ಕ|| ಮತ್ತು 2ನೇ ಆಸಿಸ್ಟೆಂಟ್ ಕಮಿಷನರವರು.
3. ,, ಡಬ್ಳ್ಯು. ಶ್ರೀನಿವಾಸಯ್ಯಂಗಾರ್ರವರು, ಶಿವಮೊಗ್ಗಾ ಸಿವಿಲ್ ಆಸ್ಪತ್ರೆ ಇನ್‌ಚಾರ್ಜ್ ಅಸಿಸ್ಟೆಂಟ್ ಸರ್ಜನ್‌ರವರು.
4. ,, ಎ. ಆನಂದರಾಯರವರು, 1ನೇ ಅಸಿಸ್ಟೆಂಟ್ ಕಮಿಷನರವರು.
5. ,, ಟಿ. ಕೆ. ಲಕ್ಷ್ಮಣ ಐಯ್ಯರ್ರವರು, ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್.
6. ,, ಎಸ್. ಕೃಷ್ಣೈಯ್ಯರ್ರವರು, ಚನ್ನಗಿರಿ ತಾಲ್ಲೂಕು ಅಮಲ್ದಾರ್.
7. ,, ಜೆ. ಡಿ. ಚಿನ್ನಪ್ಪಾವುಪಿಳ್ಳೆ, ಹೊನ್ನಾಳಿ ತಾಲ್ಲೂಕು ಅಮಲ್ದಾರ್.
8. ,, ಕೆ. ಆರ್. ಸುಬ್ಬರಾವ್, ಶಿಕಾರಿಪುರ ತಾಲ್ಲೂಕು ಅಮಲ್ದಾರ್.
9. ,, ಎಸ್. ಕೃಷ್ಣಪ್ಪ, ಸೊರಬ ತಾಲ್ಲೂಕು ಅಮಲ್ದಾರ್.
10. ,, ಜಿ. ಹನುಮಂತರಾವ್, ಸಾಗರ ತಾಲ್ಲೂಕು ಅಮಲ್ದಾರ್.
11. ,, ಎಸ್. ವೆಂಕಟರಮಣ ಶ್ರೋತ್ರಿ, ತೀರ್ಥಹಳ್ಳಿ ತಾಲ್ಲೂಕು ಅಮಲ್ದಾರ್.

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮ|| ಸಿ. ಚನ್ನಬಸಪ್ಪನವರು, ಶಿವಮೊಗ್ಗಾ ತಾಲ್ಲೂಕು.
2. ,, ಕೆ. ಅನಂತರಾಮೈಯ್ಯಂಗಾರು, ಚನ್ನಗಿರಿ ತಾಲ್ಲೂಕು.
3. ,, ಸಿ. ಗೋಪಾಲಪ್ಪನವರು, ಹೊನ್ನಾಳಿ ತಾಲ್ಲೂಕು.
4. ,, ಜವಳಿ ಮಂಜಪ್ಪನವರು, ತೀರ್ಥಹಳ್ಳಿ ತಾಲ್ಲೂಕು.

ಗೈರ್ ಹಾಜರು.

ಉದ್ಯೋಗಸ್ಥ ಮೆಂಬರುಗಳು.

1. ಮ|| ಬಿ. ಎಸ್. ರಾಣೋಜಿರಾವ್, ನಗರದ ತಾಲ್ಲೂಕು ಅಮಲ್ದಾರ್ (ರಜ).

ಉದ್ಯೋಗಸ್ಥರಲ್ಲದ ಮೆಂಬರುಗಳು.

1. ಮ|| ಹೊಸಬಾಳೆ ತಿಮ್ಮಪ್ಪನವರು, ಸೊರಬ ತಾಲ್ಲೂಕು.
2. ,, ಅರಮನೆ ಕೊಪ್ಪದ ರಾಮಪ್ಪನವರು, ನಗರ ತಾಲ್ಲೂಕು.
3. ಇನಾಂದಾರ್ ಮೆಂಬರ (ಖಾಲಿ).

1. ಡಿಸ್ಟ್ರಿಕ್ಟು ಫಂಡು ಲೆಖ್ಖಗಳು.—1902ನೇ ಇಸವಿ ಜುಲೈ ಲಾಗಾಯಿತು 1903ನೇ ಜನವರಿ ತಿಂಗಳು ವರಿಗಿನ ಕಂಟ್ರೋಲರವರಿಂದ ಪ್ಯಾಸಾಗಿ ಬಂದ ಡಿಸ್ಟ್ರಿಕ್ಟು ಫಂಡು ಜವಾಖರ್ಚು ಲೆಖ್ಖಗಳನ್ನು ಓದಿ ರಿಕಾರ್ಡು ಮಾಡಲಾಯಿತು.

2. ಹಾಲಿ ಸಾಲಾಖೈರ ಸಮೀಪಿಸುತ್ತಾ ಬಂದು ಇರುವದ್ದರಿಂದ ಗ್ರಾಮಾಂತ್ರಗಳಲ್ಲಿ ಪಾಕೀಜಾ ಸ್ಥಿತಿಯನ್ನು ಸೀನೀರಿನ ವಸತಿಯನ್ನು ಉತ್ತಮ ಸ್ಥಿತಿಗೆ ತರತಕ್ಕ ವಿಷಯದಲ್ಲಿ ಬಂದ ಸಲಹೆಗಳಿಗೋಸ್ಕರ ಲೋಕಲ್ ಫಂಡ್ಸು ಜನರಲ್‌ನಿಂದ ಹಣ ಮಂಜೂರು ಮಾಡಲಿಕ್ಕಾಗುವದಿಲ್ಲವೆಂತ ಬಂದ 1903ನೇ ಇಸವಿ ಮಾರ್ಚಿ 19ನೇ ಮರ್ಕೂಂ ನಂಬರು 13967–74 ಎಲ್. ಎಫ್. 93–97ನೇ ಗೌರ್ನಮೆಂಟ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು. ಈ ಪ್ರಯೋಜನಕರವಾದ ಕೆಲಸಕ್ಕಾಗಿ ಬರುವ ಸಾಲಿನಲ್ಲಿ ಹಣ ಮಂಜೂರಾಗಬಹುದಾಗಿ ಬೋರ್ಡಿನವರು ನಿರೀಕ್ಷಿಸುತ್ತಾರೆ.

3. ನ್ಯಾಮತಿ ಹಂಗಾಮಿ ಡಿಸ್ಪೆನ್ಸರಿ:—ಹೊನ್ನಾಳಿ ತಾಲ್ಲೂಕು ನ್ಯಾಮತಿಯಲ್ಲಿ ಹಂಗಾಮಿಯಾಗಿ ಡಿಸ್ಪೆನ್ಸರಿ ಇಡುವ ವಿಚಾರದಲ್ಲಿ ಜನರಲ್ ಮತ್ತು ರೆವಿನ್ಯು ಸೆಕ್ರಿಟೆರಿಯರವರ 1903ನೇ ಫೆಬ್ರವರಿ 28ನೇ ಮರ್ಕೂಂ 13194 ಎಲ್. ಎಫ್. 104–02ನೇ ನಂಬರು ಡಾಕೀಟ್ ಅನುಸರಿಸಿ ಬಂದ ಹಜರತ್ ಸೀನಿಯರ್ ಸರ್ಜ್ಜ ಸಾಹೇಬರವರ 1903ನೇ ಮಾರ್ಚಿ 10ನೇ ಮರ್ಕೂಂ 2519ನೇ ನಂಬರು ಡಾಕೀಟ್ ಓದಲಾಗಿ ಈ ನ್ಯಾಮತಿಯಲ್ಲಿ ಹಂಗಾಮಿಯಾಗಿ ಇಡುವ ಡಿಸ್ಪೆನ್ಸರಿ ಖರ್ಚಿನಲ್ಲಿ ಅರ್ಧ ಖರ್ಚನ್ನು ನ್ಯಾಮತಿ ಮುನಿಸಿಪಾಲಿಟಿಯವರು ವಹಿಸುವದಾಗಿ ಒಪ್ಪಿ ಇರುವದ್ದರಿಂದ ಬಾಕಿಅರ್ಧ ಖರ್ಚನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಬಹುದಾಗಿ ಬೋರ್ಡಿನವರು ಒಪ್ಪಿಕೊಂಡರು.

4. ಗೋಡೆ ಕೊಪ್ಪದ ಮುಸಾಫರ್‌ಖಾನೆ:—ಸಾಗರ ತಾಲ್ಲೋಕು ಗೋಡೆ ಕೊಪ್ಪದಲ್ಲಿ ಒಂದು ಮುಸಾಫರ್‌ಖಾನೆ ತಯಾರಾಗತಕ್ಕ ವಿಚಾರದಲ್ಲಿ 691—0—0 ರೂಪಾಯಿನ ಅಂದಾಜಾ ನಿಸಿ ಬಂದ ಸಾಗರ ತಾಲ್ಲೋಕು ಅಮಲ್ದಾರ್ರ 1903ನೇ ಮಾರ್ಚಿ 31ನೇ ಮರ್ಕೂಂ 307ನೇ ನಂಬರು ರಿಪೋರ್ಟು ಓದಲಾಗಿ ಹಣ ವದಗಿದಾಗ ಈ ಗೋಡೆ ಕೊಪ್ಪದಲ್ಲಿ ಗೌರ್ನಮೆಂಟಿನಿಂದ ಮಂಜೂರಾಗಿ ಇರತಕ್ಕ ಸ್ಟ್ಯಾಂಡರ್ಡ್ ಪ್ಲಾನ್ ಅನುಸರಿಸಿ 4ನೇ ತರಗತಿಯ ಮುಸಾಫರ್‌ಖಾನೆ ಕಟ್ಟಿಸಬಹುದಾಗಿ ತೀರ್ಮಾನವಾಯಿತು.

5. ಕಳೂರು ಕಟ್ಟೆ ಮುಸಾಫರ್‌ಖಾನೆ:—ನಗರ ತಾಲೋಕು ಕಳೂರು ಕಟ್ಟೆಯಲ್ಲಿ ಒಂದು ಮುಸಾಫರ್‌ಖಾನೆ ತಯಾರಾಗತಕ್ಕದ್ದೆಂಬುವ ವಿಚಾರದಲ್ಲಿ ನಗರ ತಾಲ್ಲೋಕು ಅಮಲ್ದಾರ್ರ 1903ನೇ ಫೆಬ್ರವರಿ 16ನೇ ಮರ್ಕೂಂ 348—584ನೇ ನಂಬರು ರಿಪೋರ್ಟಿನೊಡನೆ ಬಂದ ಸಾಗರದ ಸಬ್ ಡಿವಿಜನ್ ಚಾರ್ಜಿನಲ್ಲಿ ಇರುವ ಅಸಿಸ್ಟೆಂಟ್ ಕಮಿಷನರವರ 1903ನೇ ಫೆಬ್ರವರಿ 22ನೇ ಮರ್ಕೂಂ 710–436ನೇ ನಂಬರು ಯಾದಾಸ್ತು ಓದಲಾಗಿ ಈ ಕಳೂರು ಕಟ್ಟೆಯಲ್ಲಿ ಒಂದು ಮುಸಾಫರ್‌ಖಾನೆಯು ಅತಿ ಜರೂರಾಗಿ ಆಗಬೇಕಾಗಿ ಇರುತ್ತೆಯಾದ್ದರಿಂದ ಈ ತಾಲ್ಲೋಕು ಹೆಡ್‌ಕ್ವಾರ್ಟರನ್ನು ಅಭಿವೃದ್ಧಿಸ್ಥಿತಿಗೆ ತರಲು ಮತ್ತು ಪ್ರಯಾಣಸ್ಥರಿಗೆ ಅನುಕೂಲ ಪಡಿಸಿ ಕೊಡಲು ಪ್ರೊವಿನ್ಷಿಯಲ್ ಫಂಡ್ಸಿನಿಂದ ಒಂದು 2ನೇ ತರಗತಿಯ ಮುಸಾಫರ್‌ಖಾನೆ ಕಟ್ಟಿಸುವ ವಿಚಾರದಲ್ಲಿ ಗೌರ್ನಮೆಂಟಿನವರನ್ನು ಕೇಳಿಕೊಳ್ಳಬೇಕಾಗಿ ಬೋರ್ಡಿನವರು ತೀರ್ಮಾನಿಸಿದರು.

6. ರಿವೈಜಾದ ಡಿಸ್ಟ್ರಿಕ್ಟ್ ಫಂಡ್ ಬಡ್ಜಟ್:—1903ನೇ ಫೆಬ್ರವರಿ 21ನೇ ಮರ್ಕೂಂ 12186—9 ಎಲ್. ಎಫ್. 8–02ನೇ ನಂಬರು ಗೌರ್ನಮೆಂಟ್ ಪ್ರೊಸೀಡಿಂಗ್ಸು ಮೇರೆ ಮಂಜೂರಾದ ಶಿವಮೊಗ್ಗಾ ಸರ್ಕಲ್ 1902–03ನೇ ಸಾಲ್ ರಿವೈಜಾದ ಡಿಸ್ಟ್ರಿಕ್ಟು ಫಂಡ್ ಬಡ್ಜಟ್ ಓದಿ ರಿಕಾರ್ಡು ಮಾಡಲಾಯಿತು.

7. ನಗರದ ಡಿಸ್ಪೆನ್ಸರಿ ಝಾಡಮಾಲಿಗೆ ಅಲೋಯೆನ್ಸು:—ಹಜರತ್ ಸೀನಿಯರ್ ಸರ್ಜ್ಜ ಸಾಹೇಬರವರ ಶಿಫಾರಸ್ ಮೇರೆ ನಗರದ ಡಿಸ್ಪೆನ್ಸರಿ ಝಾಡಮಾಲಿಗೆ ಮಾಹೆಯಾನಾ ಒಂದು ರೂಪಾಯಿ ಅಲೋಯೆನ್ಸ್ ಕೊಡುವದನ್ನು ಮಂಜೂರ್ಮಾಡಲು ಆಗುವದಿಲ್ಲವೆಂಬುವ 1903ನೇ ಏಪ್ರೆಲ್ 18ನೇ ಮರ್ಕೂಂ ನಂಬರು 15035–6 ಎಲ್. ಎಫ್. 28–92ನೇ ಗವರ್ನಮೆಂಟ್ ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

8. ಹೊಸೂರು ಮುಸಾಫರ್‌ಖಾನೆ ಬಳಿ ಹುಲ್ಲು ಕೊಟ್ಟಿಗೆ:—ಶಿಕಾರಿ ಪುರ ತಾಲ್ಲೋಕು ಹೊಸೂರು ಮುಸಾಫರ್‌ಖಾನೆ ಬಳಿ ಪ್ರಯಾಣಸ್ಥರ ಅನುಕೂಲತೆಗಾಗಿ ಒಂದು ಹುಲ್ಲಿನ ಕೊಟ್ಟಿಗೆ ತಯಾರಾಗತಕ್ಕದ್ದು ತುಂಬಾ ಅವಶ್ಯಕವೆಂತ ಶಿಕಾರಿಪುರ ತಾಲ್ಲೋಕು ಅಮಲ್ದಾರ್ರ 1903ನೇ ಮಾರ್ಚಿ 26ನೇ ಮರ್ಕೂಂ 356–388ನೇ ನಂಬರು ರಿಪೋರ್ಟು ನಿಸಿ ಬಂದ 2ನೇ ಅ॥ ಕ॥ ರವರ 1903ನೇ ಮೇ ಮಾಹೆ 5ನೇ ಮರ್ಕೂಂ 454–547ನೇ ನಂಬರು ಯಾದಾಸ್ತು ಮತ್ತು (50—0—0) ಐವತ್ತು ರೂಪಾಯಿನ ಅಂದಾಜಾ ಸಹ ಓದಲಾಗಿ ಹುಲ್ಲಿನ ಯಾ ಹಂಚಿನ ಕಟ್ಟಡ ಕಟ್ಟತಕ್ಕ ವಿಷಯದಲ್ಲಿ ಎಗ್ಜಿಕ್ಯೂಟಿವ್ ಇಂಜಿನಿಯರುವರು ತಮ್ಮ ಅಭಿಪ್ರಾಯವನ್ನು ತಿಳಿಸಲೂ ಸದರಿಯವರನ್ನು ಕೇಳಿಕೊಳ್ಳಬೇಕಾಗಿ ತೀರ್ಮಾನವಾಯಿತು.

9. ಭೀಮನಕಟ್ಟೆ ರಸ್ತೆ:—ಒಂದುನೂರೈವತ್ತು (150—0—0) ರೂಪಾಯಿ ಲಾಗವಡು ಮುಟ್ಟಿಸಿ ಶಿವಮೊಗ್ಗಾ—ಆಗುಂಬೆ ಹೈರೋಡಿನಿಂದ ತೀರ್ಥಹಳ್ಳಿ ತಾಲ್ಲೋಕಿನಲ್ಲಿ ಇರುವ ಭೀಮನಕಟ್ಟೆಗೆ ಹೋಗುವ ಬಂಡಿ ದಾರಿಯನ್ನು ದುರಸ್ತು ಪಡಿಸಿ ಅನುಕೂಲಪಡಿಸತಕ್ಕದ್ದೆಂತ 1ನೇ ಅಸಿಸ್ಟೆಂಟ್ ಕಮಿಷನರವರು ಅಭಿಪ್ರಾಯಪಟ್ಟದ್ದನ್ನು ಅನುಮೋದಿಸಿ (150—0—0) ಒಂದುನೂರೈವತ್ತು ರೂಪಾಯಿಗಳಿಗೆ ಮೀರದಂತೆ ಸದರಿ ಬಂಡಿ ದಾರಿಯನ್ನು ದುರಸ್ತು ಮಾಡಿಸುವದರ ಮೂಲಕ ಅನುಕೂಲಪಡಿಸತಕ್ಕದ್ದೆಂತ ಬೋರ್ಡಿನವರು ತೀರ್ಮಾನಿಸಿದರು.

ಕೆ. ಪಿ. ಪುಟ್ಟಣ್ಣಶೆಟ್ಟಿ,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ್ ಫಂಡ್ ಬೋರ್ಡು.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 149.

ಮೃತಪಟ್ಟ ಟಿ. ವಿ. ಶಿವಗುರುನಾಥ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಚಾಮರಾಜನಗರದಲ್ಲಿರುವ ಟಿ. ವಿ. ವೀರಾಸಾಮಿ ಮೊದಲಿಯಾರ್ರು, ಮೃತಪಟ್ಟ ಸದರೀ ಟಿ. ವಿ. ಶಿವಗುರುನಾಥ ಮೊದಲಿಯಾರ್ರಿಗೆ ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಕೋಟೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಟಿ. ವಿ. ಶಿವಗುರುನಾಥ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಟಿ. ವಿ. ವೀರಾಸಾಮಿ ಮೊದಲಿಯಾರ್ರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಟಿ. ವಿ. ಶಿವಗುರುನಾಥ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 190.

ಮೃತಪಟ್ಟ ಕೃಷ್ಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕೋಲಾರದಲ್ಲಿರುವ ಸ|| ಓವರಿಶಿಯರ್ ಲಕ್ಷ್ಮಣರಾಯರು, ಮೃತಪಟ್ಟ ಸದರೀ ಕೃಷ್ಣರಾಯರಿಗೆ ಸಹೋದರ ರಾಗಬೇಕೆಂಬ ಹಕ್ಕುದಾರಿ ಮೇಲೆ ಕೋಲಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಣರಾಯರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಕೃಷ್ಣರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 195.

ಮೃತಪಟ್ಟ ಚಿಕ್ಕ ರುದ್ರಪ್ಪ ಮತ್ತು ಮಣ್ಯಪ್ಪ ಇವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಲ್ಲಿರುವ ನಂದೀಶಪ್ಪನವರು, ಮೃತಪಟ್ಟ ಸದರೀ ಚಿಕ್ಕ ರುದ್ರಪ್ಪ ಎಂಬುವರಿಗೆ ಖಾಸಾ ತಂಗಿಯ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಚಿಕ್ಕರುದ್ರಪ್ಪ, ಮಣ್ಯಪ್ಪ ಇವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರು ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂದೀಶಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು (24) ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕರುದ್ರಪ್ಪ, ಮಣ್ಯಪ್ಪ ಇವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 196.

ಮೃತಪಟ್ಟ ಸರಿಗೆ ಮುತ್ತಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರಲ್ಲಿರುವ ಅಕ್ಕಯ್ಯಮ್ಮ ಉರಫ್ ಚಲುವಮ್ಮ, ಮೃತಪಟ್ಟ ಸದರೀ ಸರಿಗೆ ಮುತ್ತಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸರಿಗೆ ಮುತ್ತಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಅಕ್ಕಯ್ಯಮ್ಮ ಉರಫ್ ಚಲುವಮ್ಮನವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು (24)ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸರಿಗೆ ಮುತ್ತಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 204.

ಮೃತಪಟ್ಟ A. B. ಅಂಣಾಮಾಲೆ ಮೊದಲಿಯಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಾಮರಾಜಪೇಟೆಲಿರುವ ಎ. ಷಣ್ಮುಗಂ ಯವರು, ಮೃತಪಟ್ಟ ಸದರೀ A. B. ಅಂಣಾಮಾಲೆ ಮೊದಲಿಯಾರ್ರಿಗೆ ಮಗನಾಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ A. B. ಅಂಣಾಮಾಲೆ ಮೊದಲಿಯಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಎ. ಷಣ್ಮುಗಂ ಯವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ A. B. ಅಂಣಾಮಾಲೆ ಮೊದಲಿಯಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ 208.

ಮೃತಪಟ್ಟ ಯಲೆ ವೆಂಕಟಸ್ವಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ದೇವನಹಳ್ಳಿಯಲ್ಲಿರುವ ರಾಮೈಯ್ಯ ಮೈನರ್, ಗಾರ್ಡಿಯನ್ ಯಲೆ ರಾಮಸ್ವಾಮಪ್ಪ, ಮೃತಪಟ್ಟ ಸದರೀ ಯಲೆ ವೆಂಕಟಸ್ವಾಮಪ್ಪನವರಿಗೆ ದತ್ತು ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ದೇವನಹಳ್ಳೀಲಿದ್ದು ಹಾಲಿ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಯಲೆ ವೆಂಕಟಸ್ವಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ನಂಬರ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಾಮೈಯ್ಯ ಮೈ|| ಗಾ|| ರಾಮಸ್ವಾಮಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಯಲೆ ವೆಂಕಟಸ್ವಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟಿನ ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡಲ್ಪೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ.

ಹಾಸನದ ಸಬ್ ಜಡ್ಜರವರ ಕೋರ್ಟಿನ 1902—1903ನೇ ಇಸವಿ ಜಾರಿ ನಂಬರ 756.

ಮೈಸೂರು ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನ 1898—99ನೇ ಇಸವಿಯ ಒರಿಜಿನಲ್ ದಾವೆ ನಂಬರ 16.

ವಾದಿ—ಹಾಸನದ ಕಸಬಾದಲ್ಲಿರುವ ಚಲುವ ಶೆಟ್ಟರ ವೆಂಕಟರಮಣ ಶೆಟ್ಟರ ಮಗ ಸುಬ್ಬ ಶೆಟ್ಟಿ.

ಪ್ರತಿವಾದಿ—ಹಾಸನದ ಕಸಬಾದಲ್ಲಿರುವ ಮುಸಲ್ಮಾನರ ಸೈದ್ ಅಹಮದ್ ಸಾಹೇಬರ ಮಗ ಸೈದ್ ಖಾದರಸಾಬ್.

ಸದರೀ ಮೊಕದ್ದಮೆಯಲ್ಲಿ ಹುಟ್ಟಿದ ಮೈಸೂರು ಡಿ|| ಜಡ್ಜರವರ ಕೋರ್ಟಿನ—ಸನ್ 1899ನೇ ಇಸವಿ ಫೆಬ್ರವರಿ ಮಾಹೆ 23ನೇ ತಾರೀಖು ವುಳ್ಳ ಡಿಕ್ರೀ ಪ್ರಕಾರ 15,890—2—6 ರೂಪಾಯಿಗಳನ್ನ ಸದರೀ ಪ್ರತಿವಾದಿ ಎಂಬುವನು ವಾದಿ ಎಂಬುವನಿಗೆ ಕೊಡತಕ್ಕದ್ದಾಗಿ ತೀರ್ಮಾನವಾಗಿ ಇರುವದರನ್ನನುಸರಿಸಿ ಜಫ್ತೀ ಮಾಡಲ್ಪಟ್ಟ ಸ್ವತ್ತನ್ನು ಹರಾಜು ಮಾಡುವದರ ಮೂಲಕ ಸದರೀ ಡಿಕ್ರಿಯ ಅಮಲ್‌ಜಾರಿ ಮಾಡುವದಕ್ಕೆ ಸನ್ 1899ನೇ ಇಸವಿ ಜುಲೈ ಮಾಹೆ 13ನೇ ತಾರೀಖುವುಳ್ಳ ವಾರಂಟನ್ನು ಜಾರಿಮಾಡುವದರಲ್ಲಿ ಇದರಿಂದ ತಿಳಿಯಪಡಿಸುವದೇನಂದರೆ—ಸನ್ 1903ನೇ ಇಸವಿ ಜುಲೈ ಮಾಹೆ 28ನೇ ತಾರೀಖು 11 ಘಂಟೆಗೆ ಈ ಕೋರ್ಟಿನ ನಾಜರು (ಅಥವಾ ನೌಕರರಾದ ಇತರ ಮನುಷ್ಯನು) ಕೋರ್ಟಿನ ರೂಬರೂ ಸ್ಥಳದಲ್ಲಿ ಚಿಡದರಖಾಸ್ತುದಾರರಿಗೆ ಮತ್ತು ಉಳಿಕೆ ಇಲ್ಲದೆ ಪ್ರತಿವಾದಿ ಮನುಷ್ಯರ ಈ ಕೆಳಗೆ ನಮೂದಾದ ಸ್ಥಿರಸೊತ್ತಿನ ಆಯಾ ಪದಾರ್ಥಗಳಲ್ಲಿ ಇರುವ ಹಕ್ಕು ಬಾಧ್ಯತೆ ಸಂಬಂಧವನ್ನು ಹರಾಜು ಮೂಲಕ ವಿಕ್ರಯಿಸುತ್ತಾರಲ್ಲದೆ ಅವುಗಳನ್ನಾಗಲೀ ಆಪೈಕಿ ಯಾವದನ್ನಾಗಲೀ ಅದರಿಂದ ಬರುವ ಲಾಭವನ್ನಾಗಲೀ ಕಾನೂನಿಗನುಗುಣವಾಗಿ ತಮ್ಮ ಪ್ರಯೋಜನಕ್ಕೋಸ್ಕರ ಸದರೀ ಯವನು ವಿಕ್ರಯಿಸಲು ಈಗ ಚಲಾಯಿಸಬಹುದಾದ ವಿಶಿಷ್ಟ ಅಧಿಕಾರವನ್ನು ಹರಾಜು ಮೂಲಕ ನಾಜರು ವಿಕ್ರಯಿಸುತ್ತಾರೆ.

ಸ್ಥಾವರ ಸ್ವತ್ತು.

ಮಂಜರಾಬಾದು ತಾಲ್ಲೂಕು ಮಾರ್ನಹಳ್ಳಿ ಹೋಬಳಿ ನಡಹಳ್ಳಿ ಗ್ರಾಮದಲ್ಲಿರುವದು.

1. ಸರ್ವೆ ನಂಬರ್ 215, ಎಕರೆ 64, ಆಕಾರ 64-0-0 ವುಳ್ಳ ಹೊನ್ನೆ ತೋಟ ಎಂಬ ಕಾಫಿ ತೋಟಕ್ಕೆ ಚೆಕ್ಕು ಬಂದಿ:—ಪೂರ್ವಕ್ಕೆ—ಗುಡ್ಡದ ನೆತ್ತಿ ಬರೆ, ಪಶ್ಚಿಮಕ್ಕೆ—ಹನ್ನೆಗದ್ದೆ ಮತ್ತು ಹೊಸ ಗದ್ದೆ ಬೈಲು, ದಕ್ಷಿಣಕ್ಕೆ—ಹೊಸಗದ್ದೆ ಇರೀಬೀಳು ಮತ್ತು ಹಂಗೆಗದ್ದೆಗಂಡಿ, ಉತ್ತರಕ್ಕೆ—ಜಂಬೂರೈಯ್ಯನ ಹಿತ್ತಲು ದಿಣ್ಣೆ. ಈ ಮಧ್ಯೆ ಇರುವದು ಒಂದು.

2. ಸರ್ವೆ ನಂಬರು 68, ಎಕರೆ 16, ಗುಂಟೆ 27, ಆಕಾರ 16—0—0 ವುಳ್ಳ ಗೊದ್ದನ ಮೂಲೆ ಎಂಬ ಕಾಫಿ ತೋಟ ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ನಡಹಳ್ಳಿಯಿಂದ ಜಂಭಳ್ಳೀಗೆ ಮತ್ತು ಮಲ್ಲಿಗೆ ಗದ್ದೆಗೆ ತಿರಗುವ ದಾರಿ, ದಕ್ಷಿಣಕ್ಕೆ—ಕುಂಠಿಕಲ್ಲು ಚಟ್ಟು, ಉತ್ತರಕ್ಕೆ—ಗದ್ದೆ. ಈ ಮಧ್ಯೆ ಇರುವ ತೋಟ ಒಂದು.

3. ಸರ್ವೆ ನಂಬರು 250ನೇ ಎಕರೆ 6, ಆಕಾರ 6—0—0 ವುಳ್ಳ ಜಂಬೂರೈಯ್ಯನ ಹಿತ್ತಲು ಎಂಬ ಕಾಫಿ ತೋಟ ಪೂರ್ವಕ್ಕೆ—ಕುಂಠಿಕಲ್ಲು ದಿಣ್ಣೆ, ಪಶ್ಚಿಮಕ್ಕೆ—ಹೊನ್ನನಗದ್ದೆ ಕುರಾವ್, ದಕ್ಷಿಣಕ್ಕೆ—ಹೊನ್ನೆಕೂಲು ತೋಟದ ವತ್ತು, ಉತ್ತರಕ್ಕೆ—ಹೊನ್ನನಗದ್ದೆ. ಈ ಮಧ್ಯೆ ಇರುವದು ಒಂದು.

4. ಸರ್ವೆ ನಂಬರು 260, ಎಕರೆ 23, ಗುಂಟೆ 21, ಆಕಾರ 6—0—0 ವುಳ್ಳ ಖುಷ್ಕಿ ಜಮೀನು ಪೂರ್ವಕ್ಕೆ—ಗೊದ್ದನಮೂಲೆ ತೋಟದ ವತ್ತು ತರಿ ಜಮೀನು, ಪಶ್ಚಿಮಕ್ಕೆ—ಪ್ರತಿವಾದಿ ಬಾಬತು ಹೊನ್ನೆಕೂಲು ತೋಟ, ದಕ್ಷಿಣಕ್ಕೆ—ಪ್ರತಿವಾದಿಯ ಗೊದ್ದನ ಮೂಲೆ ಕಾಫಿ ತೋಟ, ಉತ್ತರಕ್ಕೆ—ಮಡೆಕೆರೆ ಗದ್ದೆ ಬೀಳು ಬಸರಿಗದ್ದೆ ಸಹಾ. ಈ ಮಧ್ಯೆ ಇರುವದು ಒಂದು.

5. ಸರ್ವೆ ನಂಬರು 248ನೇ ಎಕರೆ 2, ಗುಂಟೆ 24, ಆಕಾರ 7—0—0 ವುಳ್ಳ ತರಿ ಜಮೀನು ಪೂರ್ವಕ್ಕೆ—ಬೀಳು ಬಸರಿಗದ್ದೆ, ಪಶ್ಚಿಮಕ್ಕೆ—ಸರ್ಕಾರಿ ಬೀಳು ಜಮೀನು, ದಕ್ಷಿಣಕ್ಕೆ—ಜಂಬೂರೈಯ್ಯನ ಹಿತ್ತಲು, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವದು ಒಂದು.

6. ಸರ್ವೆ ನಂಬರು 253ನೇ ಎಕರೆ 1, ಗುಂಟೆ 25, ಆಕಾರ 5—0—0 ವುಳ್ಳ ತರಿ ಮತ್ತು ಸರ್ವೆ ನಂಬರು 254ನೇ ಎಕರೆ 1, ಗುಂಟೆ 32, ಆಕಾರ 4—8—0 ವುಳ್ಳ ತರಿ ಈ ಎರಡಕ್ಕೂ ಚೆಕ್ಕು ಬಂದಿ:—ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ಬಂಜರು, ದಕ್ಷಿಣಕ್ಕೆ—ಕುರಾವ್, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವ ಬಾಬತು ಜಮೀನು ಎರಡು.

7. ಸರ್ವೆ ನಂಬರು 247ನೇ ಎಕರೆ 5, ಗುಂಟೆ 20, ಆಕಾರ 1—12—0 ವುಳ್ಳ ಖುಷ್ಕಿ ಜಮೀನು ಪೂರ್ವಕ್ಕೆ—ಜಂಬೂರೈಯ್ಯನ ಹಿತ್ತಲು, ಪಶ್ಚಿಮಕ್ಕೆ—ಹೊನ್ನೆಕೂಲು ತೋಟ, ದಕ್ಷಿಣಕ್ಕೆ—ಹಳ್ಳ ಮತ್ತು ಹೊನ್ನೆಕೂಲು ತೋಟ, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವದು ಜಮೀನು ಪೈಕಿ ಅರ್ಧ ಮಾತ್ರ.

ಮಂಜರಾಬಾದು ತಾಲ್ಲೂಕು ಹೆಗ್ಗದ್ದೆ ಗ್ರಾಮದಲ್ಲಿರುವ ಜಮೀನುಗಳು.

8. ಸರ್ವೆ ನಂಬರು 165ನೇ ಎಕರೆ 21, ಗುಂಟೆ 2, ಆಕಾರ 21—0—0 ವುಳ್ಳ ದಿಂಬದ ವುಡವೆ ಕಾಫಿ ತೋಟ ಎರಡಕ್ಕೆ:—ಪೂರ್ವಕ್ಕೆ—ಬೀಕಿಬನದ ವುಡವೆ, ಪಶ್ಚಿಮಕ್ಕೆ—ಸರ್ಕಾರಿ ಫೈಸಾರಿ ದಿಣ್ಣೆ, ದಕ್ಷಿಣಕ್ಕೆ—ಬಂಜರು, ಉತ್ತರಕ್ಕೆ—ಕೊಮಾರೆ ನಿಂಗೆಗೌಡನ ಹಿತ್ತಲು. ಈ ಮಧ್ಯೆ ಇರುವದು ಒಂದು.

9. ಸರ್ವೆ ನಂಬರು 120ನೇ ಎಕರೆ 18, ಗುಂಟೆ 4, ಆಕಾರ 18—0—0 ವುಳ್ಳ ಬೀಕಿಬನದ ವುಡವೆ ಎಂಬ ಕಾಫಿ ತೋಟ:—ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ದಿಂಬದ ವುಡವೆ ನಂದಿನ ಅಗಳು, ದಕ್ಷಿಣಕ್ಕೆ—ನೂಕಳಿ ಮತ್ತು ಓಣಿ, ಉತ್ತರಕ್ಕೆ—ಮುದಿಗೌಡನ ಹಿತ್ತಲು. ಈ ಮಧ್ಯೆ ಇರುವದು ಒಂದು.

10. ಸರ್ವೆ ನಂಬರು 179ನೇ ಎಕರೆ 21, ಗುಂಟೆ 16, ಆಕಾರ 21-0-0 ವುಳ್ಳ ಭೋರವುಡವೆ ಎಂಬ ಕಾಫಿ ತೋಟ:—ಪೂರ್ವಕ್ಕೆ—ಗದ್ದೆ, ಪಶ್ಚಿಮಕ್ಕೆ—ಬಂಜರು, ದಕ್ಷಿಣಕ್ಕೆ—ನೀರು ಕಾಲವೆ ತಿಟ್ಟು, ಉತ್ತರಕ್ಕೆ—ಶೆಟ್ಟಿಹಳ್ಳಿಗೆ ತಿರುಗುವದಾರಿ. ಈ ಮಧ್ಯೆ ಇರುವದು ಒಂದು.

11. ಸರ್ವೆ ನಂಬರು 188ನೇ ಎಕರೆ 33, ಗುಂಟೆ 25, ಆಕಾರ 33—0—0 ವುಳ್ಳ ಮಕ್ಕೆ ಇಕ್ಕಲೆಂಬ ಕಾಫಿತೋಟ:—ಪೂರ್ವಕ್ಕೆ—ಖುಷ್ಕಿ ಸಾಗುವಳಿ ಜಮೀನು, ಪಶ್ಚಿಮಕ್ಕೆ—ದಿಣ್ಣೆ, ದಕ್ಷಿಣಕ್ಕೆ—ಸರ್ಕಾರಿ ಬಂಜರು, ಉತ್ತರಕ್ಕೆ—ಶುಕ್ರವಾರ ಸಂತೆಗೆ ತಿರಗುವ ದಾರಿ ವತ್ತು. ಈ ಮಧ್ಯೆ ಇರುವದು ಒಂದು.

12. ಸರ್ವೆ ನಂಬರ್ 79ನೇ ಎಕರೆ 19, ಗುಂಟೆ 34, ಆಕಾರ 19—8—0 ವುಳ್ಳ ದೊಡ್ಡ ವುಡವೆಯೆಂಬ ಕಾಫೀತೋಟು:—ಪೂರ್ವಕ್ಕೆ—ನಂಜೆಗೌಡನ ತೋಟು, ಪಶ್ಚಿಮಕ್ಕೆ—ನೂಕಳಿ, ದಕ್ಷಿಣಕ್ಕೆ—ಕಾಡುಮನೆಗೆ ತಿರುಗುವದಾರಿ, ಉತ್ರಕ್ಕೆ—ಜಂಬೂರು ವುಡವೆ. ಈ ಮಧ್ಯೆ ಇರುವದು ಒಂದು.

ಹಾಸನದ ಕಸಬಾದಲ್ಲಿರತಕ್ಕದ್ದು.

13. ಅಜ್ಜಪ್ಪನವರ ಮುದ್ದಂಣನವರ ಮಕ್ಕಳು ಪದ್ಮರಾಜೈಯ್ಯ, ಚಂದ್ರಯ್ಯ, ಪಾಯಂಣನವರ ಮಕ್ಕಳು ಆದಿರಾಜೈಯ್ಯ, ಅಂತಪ್ಪ, ಜಿನ್ನಪ್ಪ ಈ 5 ಜನಗಳಿಂದ ಪ್ರತಿವಾದಿಯು ಖರೀದಿಗೆ ಪಡದು ಇರುವ ಇದೇ ಕಸಬಾ ಅಂಗಡೀಬೀದಿಯಲ್ಲಿರುವದು:—ಪೂರ್ವಕ್ಕೆ—ದೊಡ್ಡಹಳ್ಳಿ ಪಾಯಪ್ಪಶೆಟ್ರಿಂದ ಪ್ರತಿವಾದಿಗೆ ಖರೀದಿಯಾಗಿರುವ ಅಂಗಡಿ ಮತ್ತು ಮನೆ ಅರೆಗಿನ ಪೋಣಿ ಮತ್ತು ಗರು

ಡಗಂಬು, ಪಶ್ಚಿಮಕ್ಕೆ—ಷಾಪುರಜಾ ಮೊಹರ್ದೀನ್ ಸಾಬರು ಹರಾಜಿನಲ್ಲಿ ತೆಗದುಕೊಂಡಿರುವ ಮನೆ ಅರಗಿನಪ್ರೋಣಿ, ದಕ್ಷಿಣಕ್ಕೆ—ಮಾಡಿ ಮನೆ ಕೇಶವೈಯ್ಯನವರ ಮನೆ ಹಿತ್ತಲುಗೋಡೆ, ಉತ್ತರಕ್ಕೆ—ರಾಜಬೀದಿ. ಈ ಮಧ್ಯೆ ಇರುವ ಹೆಂಚಿನ ಮಾಳಿಗೆಗಳೂ ಶೇರಿ ಅಂಕಣ 15ವುಳ್ಳ ಮಹಡಿ ಕಟ್ಟಡ ಇದಕ್ಕೆ ಶೇರಿದ ಹಿತ್ತಲುಸಹಾ ಪೂರ್ವ ಪಶ್ಚಿಮ ಗಜ 12, ದಕ್ಷಿಣೋತ್ತರ ಚರಂಡಿ ಲಾಗಾಯಿತು ದಕ್ಷಿಣಕ್ಕೆ ಗಜ 12, ಈ ಮಧ್ಯೆ ಇರತಕ್ಕ ಮನೆ ಮತ್ತು ಮಳಿಗೆಗಳ ಪೈಕಿ ಪಶ್ಚಿಮ ಭಾಗದ ಮಾಳಿಗೆ, ಎಂದರೆ, ಪೂರ್ವಕ್ಕೆ—ಈ ಮನೆ ಬೀದಿಬಾಗಲು, ಪಶ್ಚಿಮಕ್ಕೆ—ಡಿಟೋ ಮನೆಗೆ ಶೇರಿದ ಮಾಳಿಗೆ, ದಕ್ಷಿಣಕ್ಕೂ—ಡಿಟೋ ಮನೆ, ಉತ್ತರಕ್ಕೆ—ರಾಜಬೀದಿ. ಈ ಮಧ್ಯೆ ಇರತಕ್ಕ ನಾಗಪ್ಪಶೆಟ್ರು ಧರಣಯ್ಯನವರ ಮಳಿಗೆ 1ಕ್ಕೆ ಅಂಕಣ 1, ಇದರ ಅಳತೆ ಪೂರ್ವಪಶ್ಚಿಮ ಗಜ 3, ದಕ್ಷಿಣೋತ್ತರ ಗಜ 5, ವುಳ್ಳ ಕಟ್ಟಡಾ ಶಿವಾಯಿ ಬಾಕೀ ದರ ಅಂಕಣ 14, ಇದರ ಹಿತ್ತಲು ಸಹಾ.

14. ನಾಗಪ್ಪ ಶೆಟ್ರು ಮಕ್ಕಳು ಧರಣೈಯ್ಯ, ಶ್ರಿನಿವಾಸ ಈ ಎರಡು ಜನರಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಅಂಗಡಿಬೀದಿ ಸಾಲಿನಲ್ಲಿರುವದು:—ಪೂರ್ವಕ್ಕೆ ಪಶ್ಚಿಮಕ್ಕೆ ದಕ್ಷಿಣಕ್ಕೆ ಸಹಾ ಮೇಲ್ಕಂಡ ಪ್ರತಿವಾದಿ ಮನೆ, ಉತ್ತರಕ್ಕೆ ರಾಜಬೀದಿ. ಈ ಮಧ್ಯೆ ಇರುವ ಅಂಗಡಿ ಪೂರ್ವ ಪಶ್ಚಿಮ ಗಜ 5, ದಕ್ಷಿಣೋತ್ತರ ಗಜ 3 ವುಳ್ಳ ಮಹಡಿ ಕಟ್ಟಡ ಒಂದು.

15. ಶ್ಯಾನುಭೋಗ ಶಿವರಾಮೈಯ್ಯನವರ ಮಗ ಕೃಷ್ಣಪ್ಪನವರಿಂದ ಪ್ರತಿವಾದಿಯು ಭೋಗ್ಯಕ್ಕೆ ಪಡದಿರುವ ಅಂಗಡಿಬೀದಿಯಲ್ಲಿರುವ ಮ್ಯುನಸಿಪಲ್ ನಂಬರ 51, 52, 53, 54, 55 ವುಳ್ಳ ತೊಟ್ಟಿಮನೆ ಪೈಕಿ ಆದರ ಪೂರ್ವಕ್ಕೆ—ಶ್ಯಾನುಭೋಗ ವೆಂಕಟಸುಬ್ಬೈಯ್ಯನವರ ಮನೆ, ಪಶ್ಚಿಮಕ್ಕೆ—ಕಡಗದ ಕೃಷ್ಣಪ್ಪನವರ ಮಗ ವೆಂಕಟರಂಗೈಯ್ಯನವರ ಮನೆ, ದಕ್ಷಿಣಕ್ಕೆ—ಅಂಗಡಿಬೀದಿ, ಉತ್ತರಕ್ಕೆ—ಸದರಿ ಕೃಷ್ಣಪ್ಪನವರು ವಾಸವಾಗಿರುವ ಮನೆ, ಈ ಮಧ್ಯೆ ಇರುವ ಹೆಂಚಿನ ಕಟ್ಟಡದ ಮಳಿಗೆಗಳು 2ಕ್ಕೆ ಅಂಕಣ 6, ಇದರ ಅಳತೆ ಪೂರ್ವ ಪಶ್ಚಿಮ ಗಜ $6\frac{1}{2}$, ದಕ್ಷಿಣೋತ್ತರ ಗಜ 5, ಇದರಲ್ಲಿ ಭೋಗ್ಯದ ಹಕ್ಕು ಮಾತ್ರ.

16. ಇದೇ ಕಸಬಾ ದೊಡ್ಡಹಟ್ಟಿ ಪಾಯಪ್ಪನವರ ಹೆಂಡತಿ ಪದ್ಮಾವತಿ ಅಮ್ಮನವರಿಂದ ಪ್ರತಿವಾದಿಯು ಭೋಗ್ಯ ಮಾಡಿಕೊಂಡಿರುವ ಹಾಸನದ ಕಸಬಾ ಅಂಗಡಿಬೀದಿಯಲ್ಲಿರುವದು:—ಪೂರ್ವಕ್ಕೆ—ಬೈಲ್ ರಸ್ತೆ, ಪಶ್ಚಿಮಕ್ಕೆ—ಗರುಡಗಂಬದ ಪ್ರದೇಶ, ದಕ್ಷಿಣಕ್ಕೆ—ಭೀಮಣ್ಣನವರ ಮನೆ, ಉತ್ತರಕ್ಕೆ—ಅಂಗಡಿಬೀದಿ, ಈ ಮಧ್ಯೆ ಇರುವ ಅಂಗಡಿ ಮನೆ ಪೈಕಿ ಪೂರ್ವಪಶ್ಚಿಮ ಗಜ $6\frac{1}{2}$, ದಕ್ಷಿಣೋತ್ತರ ಗಜ 12 ವುಳ್ಳ ಅಂಗಡಿ ಮನೆ ಭೋಗ್ಯದ ಹಕ್ಕು ಮಾತ್ರ.

17. ಹಾಸನದ ಕಸಬಾ ಈರರಶಿಂಗ್ ಅಣ್ಣಯ್ಯನ ಮಗ ಕೃಷ್ಣಸಿಂಗಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಹಾಸನದ ಕಸಬಾ ಹೊಸಲೈನು ಬೀದಿಯಲ್ಲಿರುವ ಮ್ಯುನಸಿಪಲ್ ನಂಬರ 982ನೇ ಹೆಂಚಿನ ಮನೆ 1ಕ್ಕೆ ಅಂಕಣ 9, ಹಿತ್ತಲು ಶೇರಿ ಪೂರ್ವಪಶ್ಚಿಮ ಗಜ 20, ದಕ್ಷಿಣೋತ್ತರ ಗಜ 8, ವುಳ್ಳ ಮನೆಗೆ ಚಕ್ಕುಬಂದಿ:—ಪೂರ್ವಕ್ಕೆ—ಹೊಸ ಲೈನ್ ರಸ್ತೆ, ಪಶ್ಚಿಮಕ್ಕೆ—ಮಸೀತಿ ಬೀದಿ, ದಕ್ಷಿಣಕ್ಕೆ—ಮಸೀತಿಗೆ ಹೋಗುವ ದಾರಿ ಉತ್ತರಕ್ಕೆ—ಸೈದಲ್ಲಿಸಾಬರ ಮನೆ, ಈ ಮಧ್ಯೆ ಇರುವ ಮನೆ ಒಂದು.

18. ಬಾಬಾಮಿಯಾನಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಹಾಸನದ ಕಸಬಾ ಹೊಸ ಲೈನ್‌ನಲ್ಲಿರತಕ್ಕ ನಿವೇಶನಾ:—ಪೂರ್ವಕ್ಕೆ—ಪ್ರತಿವಾದಿ ವಾಸಮಾಡುವ ಮನೆ, ಪಶ್ಚಿಮಕ್ಕೆ—ಕೋಟೆ, ದಕ್ಷಿಣಕ್ಕೆ—ಮಸೀತಿ ಮನೆ ಮತ್ತು ಅಂಗಳಾ, ಉತ್ತರಕ್ಕೆ—ಪ್ರತಿವಾದಿಯು ಸ್ವಂತ ಮನೆ. ಈ ಮಧ್ಯೆ ಇರುವದು ಪೂರ್ವ ಪಶ್ಚಿಮ ಗಜ 22, ದಕ್ಷಿಣೋತ್ತರ ಗಜ 18, ವುಳ್ಳ ಮನೆ ನಿವೇಶನಾ.

19. ಹಾಸನದ ಕಸಬಾ ಹೊಸ ಲೈನ್‌ನಲ್ಲಿರುವದು:—ಪೂರ್ವಕ್ಕೆ—ಮಸೀತಿ ಬೀದಿ, ಪಶ್ಚಿಮಕ್ಕೆ—ಕೋಟೆ, ದಕ್ಷಿಣಕ್ಕೆ—ಹಾಶೀಂಸಾಬರ ಮನೆ, ಉತ್ತರಕ್ಕೆ—ಫಕೋರುದ್ದೀನ್ ಸಾಬರ ಮನೆ, ಈ ಮಧ್ಯೆ ಇರತಕ್ಕ ಹೆಂಚಿನ ಕಟ್ಟಡದ ಮನೆ ಇದಕ್ಕೆ ಶೇರಿದ ಹಿತ್ತಲೂ ಸಹಾ ಅಂಕಣ 20 ವುಳ್ಳದ್ದು.

ಈ ಸೊತ್ತುಗಳು ಡಿಕ್ರಿಗೆ ಈಡಾಗಿರುವದ್ದರಿಂದ ಜಫ್ತಿ ಇಲ್ಲದೆ ಹರಾಜು ಆಗುವದಕ್ಕೆ ಆರ್ಡರ್ ಆಗಿರುವದರಿಂದ ಇತರ ತಪಶೀಲುಗಳು ನಮೂದಿಸಲು ಅವಕಾಶವಿಲ್ಲವೆಂದು ಇಸ್ತಿಹಾರಿನಲ್ಲಿ ನಮೂದು ಆಗುತ್ತೆ.

ಈ ನಂಬರು ಡಿಕ್ರಿಗೆ ಈಡಾಗಿರುವ ಆಧಾರ ಸೊತ್ತುಗಳು ಪ್ರತಿವಾದಿ ಸ್ವಯಾರ್ಜಿತವಾದದ್ದು. ಇವುಗಳಲ್ಲಿ ಈ ಪ್ರತಿವಾದಿಗೆ ಪೂರಾ ಹಕ್ಕು ಬಾಧ್ಯತೆ ಇರುತ್ತೆ. ಈ ಸೊತ್ತಿನಲ್ಲಿ ಜೀವನಾಂಶವಾಗಲಿ ಹಿಸ್ಸೆಯಾಗಲಿ ಮೊಹರ್ ಆಗಲಿ ಸಲ್ಲಬೇಕಾದವರು ಯಾರೂ ಇರುವದಿಲ್ಲಾ. ರಿಜಿಸ್ಟರ್ ಇಲಾಖೆಯಲ್ಲಿ ಹುಡುಕಿ ನೋಡಿದ್ದರಲ್ಲೂ ವಾದಿಗೆ ಆಧಾರವಾಗಿರುವದಕ್ಕೆ ಮುಂಚೆ ಯಾವವಿಧವಾಗಿಯೂ ಈ ಪ್ರತಿವಾದಿಯಿಂದ ಯಾರಿಗೂ ಆಧಾರ ಮೊದಲಾದ ಯಾವವಿಧವಾದ ಪರಭಾರೆಯೂ ಆದ ದಾಖ್ಲೆಯೇ ಇರುವದಿಲ್ಲಾ. 24—5—1894ರಲ್ಲೂ ಬೋಸ್ಮೇನಹಳ್ಳಿ ವೆಂಕಟೇಶೈಯ್ಯನವರ ಹೆಸರಿಗೆ (12,000) ರೂಪಾಯಿಗಳಿಗೆ ಈ ವಾದಿಸಾಲಾ ತೀರಿಸುವದಕ್ಕಾಗಿ ಆಧಾರ ಮಾಡಿರುವದಾಗಿ ದಾಖ್ಲೆ ಇರುತ್ತೆ. ಆಪ್ರಕಾರ ಅವರು ವಾದಿಸಾಲಾ ತೀರಿಸಿಯೂ ಇಲ್ಲಾ. ಆ ನಡವಳಿಕೆ ನಿಜವಾದ್ದು ಅಲ್ಲಾ. ಇವನಿಗೆ ಮಗ 1ನೇ ಸೈದ್‌ಅಹಮುದ್ ಸುಮಾರು 8—10. 2ನೇ ಸೈದ್‌ಗಫೂರ್ ಸುಮಾರು 4—5. 3ನೇ ಸೈದ್ ಹುಸೇನ್ ಸುಮಾರು 2—3. ಹೆಣ್ಣುಮಗಳು 1ನೇ ಅಮೀನಾಬಿ ಸುಮಾರು 10—12 ವರುಷಗಳು ಈಮೇರೆ ಇರುತ್ತಾರೆ. ಅವರಿಗೆ ಈ ಸೊತ್ತಿನ ಮೇಲೆ ಲಾ ಪ್ರಕಾರ ಯಾವ ಹಕ್ಕು ಬಾಧ್ಯತೆ ಇರುವದಿಲ್ಲಾ ಎಂದು ವಾದಿಯು ಹಾಜರ್ಮಾಡಲ್ಪಟ್ಟ ಪ್ರಮಾಣ ಪತ್ರಿಕೇಲಿ ನಮೂದಿಸುತ್ತಾನೆಂತ ಇಸ್ತಿಹಾರಿನಲ್ಲಿ ನಮೂದು ಆಗುತ್ತೆ.

ಸಿ. ಬಿ. ಶೇಷಗಿರಿರಾವ್,
ಸಬಾರ್ಡಿನೇಟ್ ಜಡ್ಜ್.

ಬೆಂಗಳೂರು ಸಬ್ ಜಡ್ಜಿರವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಭೇರಿ ಚನ್ನಪ್ಪನವರ ವಿಷಯದಲ್ಲಿ—

ಸನ್ 1902–1903ನೇ ಇಸವಿ ದಿವಾಳೀ ಕೇಸ್ ನಂಬರ 301.

ಅರ್ಜೀದಾರ ಬೆಂಗಳೂರು ನಗರ್ತರ ಪ್ಯಾಟೆಲಿರುವ ಭೇರಿ ಚನ್ನಪ್ಪನು ಮೇಲ್ಕಂಡ ನಂಬರಿನಲ್ಲಿ ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟಿನವರ ರೂಬರೂ ಅರ್ಜೀದಾರನಾದ ಭೇರಿ ಚನ್ನಪ್ಪ ಖುದ್ದು ಹಾಜರುನ್ನು ಮತ್ತು ಸದರಿಯವರ ಲೇಣೇದಾರರಾದ 1ನೇ ಚಿತ್ರದುರ್ಗ ಪುಟ್ಟಣ್ಣ, 2ನೇ ಡಿಟ್ಟೋ ಯವರು, 3ನೇ ಅಡಿಕೆ ಅಂಗಡಿ ಗುರುಬಸಪ್ಪ ಮತ್ತು ಹುಚ್ಚಪ್ಪ, 4ನೇ ಕಿರಾಣಿ ವೆಂಕಟಸುಬ್ಬಯ್ಯ ಗೈರುಹಾಜರು. ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಅರ್ಜೀದಾರ್ ಭೇರಿ ಚನ್ನಪ್ಪನವರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರೀಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1903ನೇ ಇಸವಿ ಏಪ್ರೆಲ್ 8ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ ಮತ್ತು ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರು ಅಥವಾ ಹಕ್ಕುದಾರರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಉಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಳ ಮತ್ತು ಗಿರ್ವಿ ಏನಾದರೂ ಇದ್ದರೆ.
1	ಬೆಂಗಳೂರು ಕೋಮಟಿಗರ ಪ್ಯಾಟೆಲಿರುವ ಚಿತ್ರದುರ್ಗದ ಪುಟ್ಟಣ್ಣ.	63—12—8	...	ಬೆಂಗಳೂರು ಸಬ್ ಕೋರ್ಟು ಜಾರಿ 909—901–02ನೇ ನಂಬರು ವಾರೆಂಟ್ ಪ್ರಕಾರ.
2	ಡಿಟ್ಟೋ	342— 8— 6	..	ಡಿಟ್ಟೋ ಕೋರ್ಟು ಜಾರಿ 908—901–02ನೇ ನಂಬರು ಬಾಬತು.
3	ಅಡಿಕೆ ಅಂಗಡಿ ಗುರುಬಸಪ್ಪ, ಹುಚಪ್ಪನವರು ಮಾಮೂಲ್‌ಪ್ಯಾಟೆ.	325— 0— 0	..	ಆಧಾರದ ಬಡ್ಡಿ ಪತ್ರದ ಬಗೆ.
4	ಬೀರೂರುನಲ್ಲಿ ಇರುವ ಕೋಮಟಿಗರ ಕಿರಾಣಿ ವೆಂಕಟಸುಬ್ಬಯ್ಯನವರು.	200— 0— 0	..	ಬೆಂಗಳೂರು ಮುನ್ಸಿಫ್ ಕೋರ್ಟು ಡಿಕ್ರಿ ಬಾಬತು.

ಸನ್ 1902—1903ನೇ ಇಸವಿ ಮಿ॥ ಅರ್ಜೀ ನಂಬರ 648.

ಅರ್ಜೀದಾರ್ ಬೆಂಗಳೂರು ಬಳೇ ಪ್ಯಾಟೆಯಲ್ಲಿರುವ ವೆಂಕಟಸಾಮಿ ಹೆಂಡತಿ ಸಾಕಮ್ಮ, ಹುಚ್ಚನಾದ ಬೆಂಗಳೂರು ಬಳೇಪ್ಯಾಟೆ ಸ್ಥಳದ ಬಳೇ ನಂಜುಂಡಪ್ಪನ ಮಗ ವೆಂಕಟಸಾಮಿಯ ಆಸ್ತೀ ವಿಷಯದಲ್ಲಿ—

ಸದರೀ ಹುಚ್ಚನಾದ ವೆಂಕಟಸಾಮಿಗೆ ಹೆಂಡತಿ ಆಗಬೇಕೆಂಬ ಹಕ್ಕಿನ ಮೇಲೆ ಸಾಕಮ್ಮನೆಂಬುವರು ಸದರೀ ಹುಚ್ಚನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸನ್ 1903ನೇ ಇಸವಿ ಜೂನ್ ತಾರೀಖು 19ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ್ 1903ನೇ ಇಸವಿ ಮೇ ತಿಂಗಳು 28ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ಸಿಂಗ್ರಾಚಾರ್, ಸಬ್ ಜಡ್ಜಿ.

ಮೈಸೂರು ಸಬ ಜಡ್ಜರವರ ಕೋರ್ಟಿನಲ್ಲಿ.

ಸನ 1902—1903ನೇ ಇಸವಿ ಮಿ|| ಅರ್ಜೀ ನಂಬರು 538.

ಮೃತಪಟ್ಟ M. A. ಶ್ರೀನಿವಾಸ ಅಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ರಮಾವಿಳಾಸ ಅಗ್ರಹಾರದಲ್ಲಿರುವ ಆಜಿ ಶ್ರೀನಿವಾಸ ಅಯ್ಯಂಗಾರ್ರ ಮಕ್ಕಳು 1ನೇ M. A. ವೆಂಕಟಾಚಾರ, 2ನೇ M. A. ಶ್ರೀನಿವಾಸ ಅಯ್ಯಂಗಾರ, 3ನೇ M. A. ನಾರಣೈಯ್ಯಂಗಾರ, ಮೈನರ ಗಾರ್ಡಿಯನ M. A. ವೆಂಕಟಾಚಾರ, ಮೃತಪಟ್ಟ ಸದರೀ ಶ್ರೀನಿವಾಸ ಅಯ್ಯಂಗಾರ್ರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಶ್ರೀವಾಸ ಅಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1903ನೇ ಇಸವಿ ಜುಲೈ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸ ಅಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಜೂನ ತಿಂಗಳು 10ನೇ ತಾರೀಖಿನಲ್ಲಿ ಕೋರ್ಟು ಮೊಹರ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1902—1903ನೇ ಇಸವಿ ಮಿ|| ಅರ್ಜೀ ನಂಬರ 539.

ಮೃತಪಟ್ಟ ಗಂಗಾಧರರಾವ್‌ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ದೇವರಾಜ ಮೊಹಲ್ಲಾ ಕೊತ್ವಾಲ ರಾಮಣ್ಣನವರ ಬೀದಿಲಿರುವ ಹಾಗಲವಾಡಿ ರಾಮರಾಯರ ಮಗ ಗಂಗಾಧರರಾವ ಮಕ್ಕಳು 1ನೇ ಸುಬ್ಬರಾವ 2ನೇ ಕೃಷ್ಣರಾವ ಮೈನರ ಗಾರ್ಡಿಯನ್ನ ತಾಯಿ ಗಂಗಾಬಾಯಿ ಮತ್ತು ಭವಾನೂಬಾಯಿ, ಮೃತಪಟ್ಟ ಸದರೀ ಗಂಗಾಧರರಾವ್‌ಯವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಗಂಗಾಧರರಾವ್‌ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1903ನೇ ಇಸವಿ ಜೂನ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗಂಗಾಧರರಾವ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಜೂನ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1902—1903ನೇ ಇಸವಿ ಅರ್ಜೀ ನಂಬರ 512.

ಮೃತಪಟ್ಟ ದೊಡ್ಡ ನರಸೇ ಅರಸರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಕಿಲ್ಲೇಯಲ್ಲಿರುವ ದೊಡ್ಡ ನರಸೇ ಅರಸರವರ ಕುಟುಂಬ ಸುಬ್ಬಮ್ಮಣ್ಣಿಯವರು, ಮೃತಪಟ್ಟ ಸದರೀ ದೊಡ್ಡ ನರಸೇ ಅರಸರವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ದೊಡ್ಡ ನರಸೇ ಅರಸರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಮ್ಮಣ್ಣಿಯವರ ಅರ್ಜಿಯನ್ನು ಸನ 1903ನೇ ಇಸವಿ ಜೂನ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೊಡ್ಡ ನರಸೇ ಅರಸರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಜೂನ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1902—1903ನೇ ಇಸವಿ ಅರ್ಜೀ ನಂಬರ 553.

ಮೃತಪಟ್ಟ ಮಿರಜಾ ಮಹಮದ್ ಅಬ್ಬಾಬೇಗರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಮಂಡಿ ಮೊಹಲ್ಲಾದಲ್ಲಿ ಪೆನ್ಷನ ಅಮಲ್ದಾರ ಹಸನ ಅಲಿ ಬೇಗರವರ ಮನೇಲಿರುವ ಇವರ ಸೊಸೆ ಫಕರುನ್ನಿಸಾಬೇಗಂ, ಮೃತಪಟ್ಟ ಸದರೀ ಮಿರಜಾ ಮಹಮದ್ ಅಬಾಬೇಗರವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಮಿರಜಾ ಮಹಮದ್ ಅಬಾಬೇಗರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1903ನೇ ಇಸವಿ ಜೂನ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಿರಜಾ ಮಹಮದ್ ಅಬಾಬೇಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1903ನೇ ಇಸವಿ ಜೂನ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ. ಪರೇರಾಜ ಐಯ್ಯಂಗಾರ,
ಸಬ ಜಡ್ಜ.

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ನೋಟಿಸ್.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾಲ್ಕನೇ ಡಿವಿಜನ್ ತಾರಾಮಂಡಲಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ, ಜಮೀನ್ ಬಾಡಿಗೆಯನ್ನು 1903ನೇ ಇಸವಿ ಜುಲೈ ಗುರ್ರೆ ಲಾಗಾಯತು 1904ನೇ ಇಸವಿ ಜೂನ್ ಆಖೈರವರೆಗೆ ರೋಜಿನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು :—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಸೀಲ್ :—

		ರೂ. ಆ. ಪೈ.
1.	ಕಟ್ಟಿಗೆ ಮತ್ತು ಹುಲ್ಲುಭಂಡಿ 1ಕ್ಕೆ	0—2—0
2.	ಕಟ್ಟಿಗೆ ಹೊರೆ 1ಕ್ಕೆ ..	0—0—1
3.	ಹುಲ್ಲುಹೊರೆ 1ಕ್ಕೆ	0—0—2
4.	ತರಕಾರಿ ಅಂಗಡಿ ಜಾಗಾಕ್ಕೆ	0—0—2
5.	ಕುಂಬಾರ್ರು ಸಾಮಾನು ಮಂಕ್ರಿ 1ಕ್ಕೆ	0—0—2
6.	ವಿರ್ಣ ವಗೈರೆ ಅಂಗಡಿ 1ಕ್ಕೆ	0—0—2

3. ದರಖಾಸ್ತುಗಳ ಮೇಲ್‌ಭಾಗದಲ್ಲಿ "ತಾರಾಮಂಡಲಪೇಟೆ ನಾಲ್ಕು ಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು "ಹುಲ್ಲುಭಂಡಿ ವಗೈರೆ ಇಟ್ಟುಕೊಂಡು ಮಾರುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರ್ಯಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೇ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಸೀತಿ ಪಡೆಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಗೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಒಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರ್ಯಾಕ್ಟುದಾರನು ತನ್ನ ಕಂಟ್ರ್ಯಾಕ್ಟು ಆಖೈರಾಗುವವರಿಗೂ ಕಂಟ್ರ್ಯಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಶಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಶಿಡೆಂಟ್ ಸಾಹೇಬರು ಇವನಿಗೆ ವಿಧಿಶಿದ ಜುಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಶಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಶಿನಲ್ಲಿ ತಿಳಿದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಭಂಡಿಗಳ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರೆಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಶಿಡೆಂಟರ ಆಫೀಶಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟೌನ್ ಮಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿ ನಡಿಯುತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಶೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡಿ ಮಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧ ಹಿಸ್ಸೆ ಫಸಲನ್ನು 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರುವರಿವಿಗೂ ಒಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಶೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮಂಜೂರಾದ ಸಂಗತಿಯನ್ನ ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಕಂಟ್ರಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾ ಕಾಗದ್ದಲ್ಲಿ ಇಜಾರೆ ಮುಚ್ಚಳಿಕೆಯನ್ನ ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಆಗುವ ಲುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ್ ಅನುಕೂಲತೆ ಬಗ್ಯೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನ ಕಡಿಸಿದಲ್ಲಿ ಆ ಬಗ್ಯೆ ಯಾವ ಲುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯುಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸಿಟಿ ಮಜಕೂರ್ ತರಕಾರಿ ಮಾರ್ಕಟ್ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದ ಜಮೀನಿನಲ್ಲಿ ಕಬ್ಬು, ಹುಲ್ಲು ವಗೈರೆ ವ್ಯಾಪಾರ ಮಾಡತಕ್ಕವರಿಂದ 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ವರಿಗೆ ಈ ಕೆಳಗೆ ತೋರಿಸಿ ಇರುವ ದರಗಳ ಅನುಸರಿಸಿ ರೋಜೀನ ರುಸುಂ ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ದಿವಿ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಕಬ್ಬು ಮತ್ತು ಹುಲ್ಲಂಗಡಿ ರುಸುಂ ದರಖಾಸ್ತು" ಎಂಬದಾಗಿ ಬರದಿರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಮೊಬಲಗನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲಾ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕು ಅಥವಾ ಸಬಬ್ ಇಲ್ಲದೆ ನಿರಾಕರಿಸುವದಕ್ಕು ಸಹ ಈ ಕೆಳಗೆ ಸೈನ್ ಮಾಡಿರುವವರು ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ ಒಂದು ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನ ಕೂಡ್ಲೆ ಹಾಜರ್ಮಾಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಮುಚ್ಚಳಿಕೆಯನ್ನು ಬರೆದುಕೊಡಬೇಕು.

6. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಸೀತಿ ಪಡೆಯಬೇಕು.

7. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರ ಆಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಆಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಿಮೆ ವಿಷಯಗಳನ್ನು ಕೆಳಗೆ ಸೈನ ಮಾಡಿರುವವರ ಆಫೀಸನಲ್ಲಿ ತಿಳದುಕೊಳ್ಳಬಹುದು.

9. ಸದರೀ ಸ್ಥಳವನ್ನ ಬೋರ್ಡಿನವರು ಯಾವ ಕಾಲದಲ್ಲಿ ಬಿಟ್ಟುಕೊಡಬೇಕೆಂದು ಅಪೇಕ್ಷಿಸುತ್ತಾರೆಯೋ ಆಗ ಬೇ ತಕರಾರ ಕಂಪೆನ್ಸೇಷನ ವಗೈರೆ ಏನೂ ಕೇಳದೆ ಬಿಟ್ಟುಕೊಡಬೇಕು.

10. ರುಸುಂ ವಸೂಲ್ಮಾಡಿಕೊಳ್ಳತಕ್ಕ ರೇಟ ತಪಶೀಲ ರೂ. ಆ. ಪೈ.

1.	ಚದುರ 10 ಅಡಿ ವುಳ್ಳ ಕಬ್ಬಿನ ಅಂಗಡಿ 1ಕ್ಕೆ	0—0—4
2.	ಕಬ್ಬಿನ ಭಂಡಿ 1ಕ್ಕೆ	0—1—0
3.	ಚದುರ 5 ಅಡಿ ಅಥವಾ ಅದಕ್ಕೆ ಕಮ್ಮಿ ವಿಸ್ತೀರ್ಣವುಳ್ಳ ಪ್ರತಿ ಕೊರಚರ ಅಂಗಡಿ 1ಕ್ಕೆ	0—0—2
4.	ಹುಲ್ಲುಹೊರೆ 1ಕ್ಕೆ	0—0—2
5.	ಚದುರ 15 ಅಡಿ ಅದಕ್ಕೆ ಕಮ್ಮಿ ವಿಸ್ತೀರ್ಣವುಳ್ಳ ಕುಂಬಾರರ ಅಂಗಡಿ 1ಕ್ಕೆ	0—0—6
6.	ಒಟ್ಟಾಗಿ ಒಣಗಿದ ಹುಲ್ಲು ಒಣವಿ ಹಾಕಿರುವ ಒಂದು ಭಾಗದ ಜಮೀನಿನಲ್ಲಿ ಮಾರಾಟ ಮಾಡತಕ್ಕ ಬಗ್ಯೆ ಒಣಗಿದ ಹುಲ್ಲು ಜಮಾವಣಿ ಮಾಡಿಕೊಳ್ಳಲು ಮಾಹೇಯಾನಾ.	5—0—0

11. ಮೇಲೆ ನಮೂದು ಮಾಡಿರುವ ಷರತ್ತಿನ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಇದರ ಕೆಳಗೆ ನಮೂದಾಗುವ ರೇಟಗಿಂತ ಜಾಸ್ತಿಯಾಗಿ ರುಸುಂ ವಸೂಲ್ಮಾಡಿಕೊಂಡರು ಮತ್ತು ಡಿಟೋ ಸ್ಥಳ ವಿನಹ ಇತರ ಯಾವ ಸ್ಥಳಗಳಲ್ಲಿ ಯಾಗಲಿ ರುಸುಂ ವಸೂಲ್ಮಾಡಿಕೊಂಡರು ಕೂಡ್ಲೆ ಕಂಟ್ರಾಕ್ಟನ್ನು ರದ್ದುಮಾಡಿ ಬ್ಯಾರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಜವಾಬುದಾರನನ್ನಾಗಿ ಮಾಡಿ ಅವನ ಜಿಂದಗಿ ಜಫ್ತಿ ಮೂಲಕ ವಸೂಲ್ಮಾಡಲ್ಪಡುತ್ತೆ.

12. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬೇ ತಕರಾರ ತೆಗದುಕೊಳ್ಳಲು ಸಲೀಸ ಏರ್ಪಾಡು ಇಡತಕ್ಕದ್ದು.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು ಕಸಾಯಿ ಮಾರ್ಕೆಟ್ಟಿನಲ್ಲಿ ರೋಜೀನಾ ಸಾಯಂಕಾಲದ ವ್ಯಾಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ 1ಕ್ಕೆ 0—2—0 ಎರಡು ಆಣೆ ಮ್ಯಾರಿಗೆ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು 1904ನೇ ಇಸವಿ ಜೂನ ಆಖೈರ ಮಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ ಮಾಡಿರುವವರಿಗೆ ಸನ 1903ನೇ ಇಸವಿ ಜೂನ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಮ್ಯುನಿಸಿಪಲ ಸ್ಲಾಟರ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಒಂದು ತಿಂಗಳ ಕಂಟ್ರಾಕ್ಟು ಮೊಬಲಗು ಅಮಾನತ್ತು ಇಡಬೇಕು. ಮತ್ತು ಮಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ವುಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಸ್ಲಾಟರ ಹೌಸನ್ನ ಸಾಕ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷ್ಮೆಂಟ ಛಾರ್ಜಿಗಾಗಿ ಮಾಹೇಯಾನ 25 ರೂಪಾಯಿ ಮ್ಯಾರಿಗೆ ಹರಯೇಕ ತಿಂಗಳು 5ನೇ ತಾರೀಖು ಒಳಗಾಗಿ ಕಂಟ್ರಾಕ್ಟು ಮೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರಹೌಸಿನಲ್ಲಿ ಬೀಳುವ ಕಚರಾ, ಕಂಟ್ರಾಕ್ಟುದಾರ್ರಿಗೆ ಶೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖು ಒಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ಮೊಬಲಗನ್ನು ಮತ್ತು ಎಸ್ಟಾಬ್ಲಿಷ್ಮೆಂಟ ಛಾರ್ಜನ್ನ ಮುಂದಾಗಿಯೇ ಹಾಜರ್ಮಾಡಿ ರಶೀತಿ ಪಡಿಯಬೇಕಾಗಿದೆ.

8. ಅಮಾನತ'ನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರ್ಯಾಕ್ಟ್‍ದಾರನು ತನ್ನ ಕಂಟ್ರ್ಯಾಕ್ಟ್ ಆಖೈರ ಆಗುವವರಿಗೂ ಕಂಟ್ರ್ಯಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ' ಉಳಿಸಿಕೊಳ್ಳಲ್ಪಡುವದು ಇವನ ಕಂಟ್ರ್ಯಾಕ್ಟ ಕಾಲದಲ್ಲಿ ಪ್ರೆಸಿಡೆಂಟ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರ್ಯಾಕ್ಟದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರ್ಯಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರ್ಯಾಕ್ಟದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನ ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸದರೀ ಸ್ಲಾಟರ ಹಾಸನ್ನ ಕಂಟ್ರ್ಯಾಕ್ಟು ಕಾಲದಲ್ಲಿ ಬ್ಯಾರೆ ಸ್ಥಳಕ್ಕೆ ವರ್ಗ ಮಾಡಿದ್ರೇ ಆದರೆ ಬಿನ್ ತಕರಾರ ಅಲ್ಲಿ[illegible] ಹೋಗಬೇಕು.

11. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರ್ಯಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

12. ಮಾರ್ಕಟಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೊ ಅದಕ್ಕೆ ಹಿಂದಿನ ದಿನ ಸ್ಲಾಟರ ಹಾಸಿನಲ್ಲಿ ಮಾರ್ಕಟಷೋಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳ ಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿಮಿಷನ್ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಮೇಲಿನ ರೇಟಗಿಂತ ಜಾಸ್ತಿಯಾಗಿಯೂ ಮತ್ತು ಸ್ಲಾಟರ ಹಾಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೂಡ್ಲೆ ಕಂಟ್ರ್ಯಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರ್ಯಾಕ್ಟದಾರ್ರನ್ನ ಜವಾಬ್ದಾರನನ್ನಾಗಿಮಾಡಿ ಅವನ ಸ್ಥಿರ ಚರ ಜಿಂದಗಿ ಜಪ್ತು ಮೂಲಕ ವಸೂಲ್ಮಾಡಲ್ಪಡುತ್ತೆ.

ತಾರೀಖು 16ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು ತರ್ಕಾರಿ ಮಾರ್ಕೆಟ್ಟು ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದಲ್ಲಿ ಭಂಡಿಗಳು ನಿಲ್ಲುವದಕ್ಕೆ ಹದ್ದು ಮಾಡಿ ಇರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತಿ ಪ್ರತಿ ಭಂಡಿಗೂ 1903ನೇ ಇಸವಿ ಜುಲೈ ಗುರ್ರೇ ಲಾಗಾಯತು 1904ನೇ ಇಸವಿ ಜೂನ್ ಆಖೈರ ವರಿಗೂ ರೋಜೀನಾ ದರ ಭಂಡಿ 1ಕ್ಕೆ 0—0—6 ಆರು ಪೈ ಮ್ಯಾರಿಗೆ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಆದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು ಸದರೀ ಸ್ಥಳದ ಪ್ಲಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮಜಕೂರು ತರ್ಕಾರಿ ಮಾರ್ಕೆಟ್ಟು ಮುಂಭಾಗದಲ್ಲಿ ಕಲ್ಯಾಣಿ ಇದ್ದ ಬೈಲು ಜಮೀನಿನಲ್ಲಿ ಕಲ್ಲುಭಂಡಿ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು ; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಕಂಟ್ರ್ಯಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

6. ಕಂಟ್ರ್ಯಾಕ್ಟದಾರನು ಅವನ ಕಂಟ್ರ್ಯಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೇ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರ್ಯಾಕ್ಟದಾರನು ಅವನ ಕಂಟ್ರ್ಯಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರ್ಯಾಕ್ಟು ಮಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

7. ಠೇವಣಿ ಹಣವು ಕಂಟ್ರ್ಯಾಕ್ಟದಾರನು ತನ್ನ ಕಂಟ್ರ್ಯಾಕ್ಟು ಆಖೈರಾಗುವ ವರಿಗೂ ಕಂಟ್ರ್ಯಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರ್ಯಾಕ್ಟುಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರ್ಯಾಕ್ಟದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರ್ಯಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರ್ಯಾಕ್ಟದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರ್ಯಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರ್ಯಾಕ್ಟು ಹದ್ದಿನ ಸ್ಥಳಕ್ಕೆ ಭಂಡಿ ಬಾರದೇ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕಮಿ ಕಂಟ್ರ್ಯಾಕ್ಟು ವಗ್ಯೆರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪಿಕೊಂಡರೆ ತಕ್ಷಣ ಕಂಟ್ರ್ಯಾಕ್ಟನ್ನ ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರ್ಯಾಕ್ಟದಾರನನ್ನ ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

ತಾರೀಖು 16ನೇ ಮೇ 1903.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟವರ್ನ ಸರಹದ್ದಿನಲ್ಲಿ ಜಮಾಯಿಸತಕ್ಕ ಕಚರಾವನ್ನು ಇದರೊಡನೆ ಜಂಟಿಸಿರುವ ಪಟ್ಟೀ ಮೇರೆಗೆ ರೂಢಿಸಿಕೊಳ್ಳುವ ಬಗ್ಗೆ ಸನ್ 1903ನೇ ಇಸವಿ ಜುಲೈ ಗುರ್ರೇ ಲಾಗಾಯಿತು 1904ನೇ ಇಸವಿ ಜೂನ್ ಆಖೈರ್ ಮಿನಹು ಇದರಡಿ ಕಂಡಿರುವ ಷರತ್ತುಗಳನ್ನ ಅನುಸರಿಸಿ ಜೂನ್ 16ನೇ ತಾರೀಖು ಮಂಗಳವಾರ ದಿವಿ 2 ಘಂಟೆಗೆ ಬೋರ್ಡ್ನ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತಾಗಿ ಇದನ್ನ ದರಖಾಸ್ತು ಮಾಡಿ ತೆಗದುಕೊಳ್ಳತಕ್ಕ ಇಷ್ಟವುಳ್ಳವರು ಹಾಜರಾಗಿ ಸವಾಲ್ಮಾಡಿ ತೆಗದುಕೊಳ್ಳಬಹುದು. ಛಡಸವಾಲ್ದಾರನ ಸವಾಲ್ ಖೈದಾದ ಕೂಡ್ಲೆ ಶೇಕಡಾ 25 ರೂಪಾಯಿ ಮೇರೆಗೆ ಆಗುವ ಮೊಬಲಗನ್ನ ಡಿಪಾಜಿಟ್ ಹಾಜರ್ಮಾಡಬೇಕು. ತಪ್ಪಿದಲ್ಲಿ ಸದರೀ ಸವಾಲ್ ಕ್ಯಾನ್ಸಲ್ಮಾಡಲ್ಪಟ್ಟು, ಬಾಬು ಪುನಹ ಹರಾಜ್ ಮಾಡಿಸುವದರಲ್ಲಿ ಉಂಟಾಗುವ ಲುಕ್ಸಾನು ಅವ್ವಲ್ ದರಖಾಸ್ತುದಾರನಿಂದಲೇ ವಸೂಲ್ಮಾಡಲ್ಪಡುತ್ತೆ. ಎಲ್ಲಾ ಸವಾಲ್ಗಿಂತ ಹೆಚ್ಚಾದ ಅಥವಾ ಇನ್ಯಾವ ಸವಾಲನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನು ತೋರಿಸದೆ ಯಾವ ಸವಾಲನ್ನೇ ಆಗಲಿ ನಿರಾಕರಿಸಬಹುದು.

ಷರತ್ತುಗಳು.

1. ಆಯಾಯ ಡಿವಿಜನಿಗೆ ಸೇರಿದ ರೋಡ್ಡುಗಳಲ್ಲಿಯೂ, ಗಲ್ಲಿಗಳಲ್ಲಿಯೂ ಸಹ ಸ್ವೀಪರಿಗಳಿಂದ ಗುಡಿಸಿ ತೊಟ್ಟಿಗಳಲ್ಲಿ ಮತ್ತು ರಸ್ತೆ ಬಾಜೂದಲ್ಲಿ ಜಮಾಯಿಸಲ್ಪಡುವ ಕಚರಾವನ್ನ, ಮಳೆಕಾಲದಲ್ಲಿಯೂ ಬೇಸಿಗೆಕಾಲದಲ್ಲಿಯೂ ಸಹ ಬೆಳಿಗ್ಯೆ 5 ಘಂಟೆ ಲಾಗಾಯಿತು 9 ಘಂಟೆ ವರಿಗೂ, ಮಧ್ಯಾಹ್ನ 2 ಘಂಟೆ ಲಾಗಾಯಿತು 5 ಘಂಟೆ ವರಿಗೂ ಒಂದು ದಿನವೂ ತಪ್ಪದೆ ಕ್ಲುಪ್ತವಾದ ಕಾಲಕ್ಕೆ ಸರಿಯಾಗಿ ಆಯಾಯ ದಿವಸವೇ ಟೌನ್ ಸರಹದ್ದಿನಿಂದ ಹೊರಕ್ಕೆ ಸಾಗಿಸಿಕೊಂಡು ಹೋಗಬೇಕು. ತಪ್ಪಿದಲ್ಲಿ ರೋಜೇನಾ ಹೆಲ್ತು ಆಫಿಸರು ನೇಮಿಸತಕ್ಕ 5 ರೂಪಾಯಿಗೆ ಮೀರದ ಜುರ್ಮಾನೆ ಕೊಡುವದಕ್ಕೆ ಬದ್ಧರಾಗಿರಬೇಕು. ಮತ್ತು ಆ ಪ್ರಕಾರ ಕಚರಾವನ್ನ ಸಾಗಿಸುವದಕ್ಕೆ ತಪ್ಪಿಹೋದ ದಿವಸದಲ್ಲಿ ಇತರ ಭಂಡಿಗಳನ್ನ ಇಡಿಸಿ ಮ್ಯುನಿಸಿಪಲ್ ಅಧಿಕಾರಸ್ಥರು ತೆಗದು ಹಾಕುವದಕ್ಕೆ ತಗಲುವ ಲಾಗವಡು ಎಷ್ಟು ಆಗುತ್ತದೆಯೋ ಅದನ್ನ ಕೊಡುವದಕ್ಕೆ ಸಹ ಬದ್ಧರಾಗಿರಬೇಕು.

2. ಆಯಾ ಭಾಗದ ಸರಹದ್ದಿನಲ್ಲಿ ಮ್ಯುನಿಸಿಪಲ್ ಮಾರ್ಫತ್ತು ಮನೆಗಳ ಪಾಯಿಖಾನೆ ಗೊಬ್ಬರವನ್ನ ಪ್ರತಿ ದಿನವೂ ಸಾಗಿಸತಕ್ಕ ಬಗ್ಯೆ ಹಾಲಿ ಗೊತ್ತಾಗಿರುವ ಮತ್ತು ಆಗಿಂದಾಗ್ಯೆ ಗೊತ್ತು ಮಾಡಲ್ಪಡುವ ಮನೆಗಳ ಪಾಯಿಖಾನೆಯನ್ನ ಪ್ರತಿ ದಿವಸವೂ ಇಯಿಂದ ಸೇಮಕವಾಗುತ್ತಾ ಬರುವ ಮನೆಗಳ ಪಾಯಿಖಾನೆ ಗೊಬ್ಬರವೂ ತಪ್ಪದೆ ತಿಂಗಳಿಗೊಂದಾವರ್ತಿ ಅಥವಾ ಕೆಲವು ಸ್ಪೆಷಿಯಲ್ ಕೇಸುಗಳಲ್ಲಿ ತಲಬು ಮಾಡಿದವ್ಯಾಳೆ ಸಾಗಿಸಿಕೊಂಡು ಪಾಕ್ ಮಾಡುತ್ತಾ ಬರಬೇಕು. ಇದಕ್ಕೆ ತಪ್ಪಿದರೆ ಮೇಲೆ ಕಂಡ 1ನೇ ಕಲಂನಲ್ಲಿ ಗೊತ್ತು ಮಾಡಿರುವ ಮೇರಿಗೆ ಜುರ್ಮಾನೆಗೂ ಮತ್ತು ಲುಕ್ಸಾನ್ ಮೊಬಲಗು ಕೊಡುವದಕ್ಕೂ ಕಂಟ್ರಾಕ್ಟುದಾರ ಬಳಪಟ್ಟಿರಬೇಕು.

3. ಹಾಗೆ ಪಾಯಿಖಾನೆ ಗೊಬ್ಬರ ಸಾಗಿಸುವಲ್ಲಿ ಭಂಡಿಮುಕ್ಕರಿಗಳಲ್ಲಿ ಮೊದಲು ಕಚರಾ ಹಾಕಿ ಮಧ್ಯದಲ್ಲಿ ಪಾಯಿಖಾನೆ ಗೊಬ್ಬರ ಭರ್ತೀಮಾಡಿ ಅದರಮೇಲೆ ಪುನಹ ಕಸ ಹಾಕಿ ಅದರ ದುರ್ಗಂಧ ಹೊರಗೆ ಬಾರದಂತೆಯೂ, ದಾರಿಗಳಲ್ಲಿ ಚೆಲ್ಲದಂತೆಯೂ ಮುಕ್ಕರಿ ಹಿಂಭಾಗದಲ್ಲಿ ಜಾಕಾಯಿ ಹಲಿಗೆಯಿಂದ ತಡೆ ಕಟ್ಟಿರಬೇಕು. ಮತ್ತು ಮುಕ್ಕರಿಯು ಕಸಗನ್ನೋಳೆ ಚಾಪೆಯಿಂದ ಕಾಣದಂತೆ ಮುಚ್ಚಿ ಇರಬೇಕು.

4. ಭಂಡಿಗಳು ಮತ್ತು ಅವುಗಳ ಮೇಲೆ ಇಡತಕ್ಕ ಭಂಡಿಮುಕ್ಕರಿಗಳೂ ಸಹ ದೊಡ್ಡವಾಗಿಯೂ ಮಜಬೂತಾಗಿಯೂ, ಸಗಣಿಯಿಂದ ಸಾರಿಸಲ್ಪಟ್ಟವಂಥವಾಗಿಯೂ ಇರಬೇಕು. ಎತ್ತುಗಳು ಎಳೇಪ್ರಾಯವುಳ್ಳವಾಗಿ ದೃಢವಾಗಿ ಇರಬೇಕು

5. ದರಖಾಸ್ತು ಮಂಜೂರಾದ ನಂತರ ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ನಾಲ್ಕು ಖಿಸ್ತಿನಲ್ಲಿ ಅಂದರೆ 1ನೇ ಖಿಸ್ತು 1903ನೇ ಇಸವಿ ಸೆಪ್ಟಂಬರಿ ಆಖೈರ್ ವರಿಗಿನದು 1903ನೇ ಜುಲೈ 1ನೇ ತಾರೀಖಿನಲ್ಲಿಯೂ, 2ನೇ ಖಿಸ್ತು 1903ನೇ ಇಸವಿ ಡಿಸೆಂಬರಿ ಆಖೈರ್ ವರಿಗಿನದು 1903ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿಯೂ, 3ನೇ ಖಿಸ್ತು 1904ನೇ ಮಾರ್ಚಿ ಆಖೈರ್ ವರಿಗಿನದು 1904ನೇ ಇಸವಿ ಜನವರಿ 1ನೇ ತಾರೀಖಿನಲ್ಲಿಯೂ, 4ನೇ ಖಿಸ್ತು 1904ನೇ ಜೂನ್ ಆಖೈರು ವರಿಗಿನದು 1904ನೇ ಏಪ್ರೆಲ್ 1ನೇ ತಾರೀಖಿನಲ್ಲಿಯೂ ತಪ್ಪದೆ ಅಡ್ವಾನ್ಸಾಗಿ ಹಾಜರ್ಮಾಡಿ ರಸೀದಿ ಪಡದುಕೊಳ್ಳಬೇಕು. ಈರೀತಿ ಮೊಬಲಗು ಪಾವತಿ ಮಾಡಲು ತಪ್ಪಿದರೆ ಕಂಟ್ರಾಕ್ಟಿನ ಒಟ್ಟು ಮೊಬಲಗನ್ನ ಒಂದೇ ಗಂಟಿನಲ್ಲಿ ಡಿಮ್ಯಾಂಡ್ ಮಾಡಿದ ಒಡನೇ ಬಿಲಾ ತಕರಾರಿ ಪಾವತಿ ಮಾಡಬೇಕು. ಇದಕ್ಕಾಗಿ ಸ್ಟಾಂಪು ಕಾಗದದಲ್ಲಿ ಕಂಟ್ರಾಕ್ಟುದಾರನು ಮೇಲೆ ಹೇಳಿದ ಎಲ್ಲಾ ಷರತ್ತುಗಳನ್ನು ಕಾಣಿಸಿ ಕಂಟ್ರಾಕ್ಟು ಮಂಜೂರಾದ 3 ದಿವಸದಲ್ಲಿ ಮುಚ್ಚಳಿಕೆ ಬರೆದುಕೊಡಬೇಕು. ಈ ಷರತ್ತುಗಳ ಪೈಕಿ ಯಾವದಕ್ಕೇ ಆಗಲಿ ವಿರೋಧವಾಗಿ ನಡದುಕೊಂಡರೆ ಆ ಕೂಡ್ಲೆ ಅವನ ಕಂಟ್ರಾಕ್ಟನ್ನ ರದ್ದು ಮಾಡಿ ಬೇರೆ ಜನರಿಗೆ ಕಂಟ್ರಾಕ್ಟು ಕೊಡುವದಲ್ಲದೆ ಲುಕ್ಸಾನ್ ಮೊಬಲಗಿಗೆ ಅವಲ್ ಕಂಟ್ರಾಕ್ಟುದಾರನನ್ನು ಗುರಿಮಾಡಿ ಜಫ್ತಿ ಹರಾಜ್ ಮೂಲಕ ಹಣ ವಸೂಲ್ಮಾಡಿಕೊಳ್ಳಲ್ಪಡುತ್ತೆ.

6. ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವ ವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟುಕಾಲದಲ್ಲಿ 1ನೇ ಷರತ್ತಿನಲ್ಲಿ ಕಂಡಂತೆ ಇವನಿಗೆ ವಿಧಿಸುವ ಜುಲ್ಮಾನೆಗಳನ್ನು ಅಥವಾ ಖರ್ಚುಗಳನ್ನು ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ಪೂರಾ ಅಥವಾ ಪುಳಿದದ್ದು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಶಿಕ್ಮಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿಲಾ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

9. ಗೊಬ್ಬರದ ಭಂಡಿಗಳಿಗಾಗಿ ಮಾಫೀ ಪ್ಯಾಸುಗಳು ದೊರಿಯಲಾರವು. ಟೋಲ್ ಗೇಟ್‌ಗಳಲ್ಲಿ ಈ ಸಿಟಿಗೆ ಸೇರಿ ಲೈಸೆನ್ಸು ಪಡೆಯದೆ ಇರುವ ಭಂಡಿಗಳು ಬಂದರೆ ಅವುಗಳಿಗಾಗಿ ಟೋಲ್ ಪಾವತಿ ಮಾಡಬೇಕು.

2 F

ನಂಬರ್.	ಡಿವಿಜನ್.	ಬ್ಲಾಕ್.	ರೋಡಗಳ ತಪಶೀಲ್ ಮತ್ತು ಚಕ್ಕುಬಂದಿ.
			1ನೇ ಡಿವಿಜನ್ ನಾರದರ್ನ್ ಎಕ್ಸ್‌ಟೆನ್‌ಷನ್ ಮಾಲೇನಹಳ್ಳಿ.
1	I	,,	ಪಿಂಡಾರಿಚೆರಿ ಎಲ್ಲಾ ಸಬರ್ಬನ್ ರೋಡುಗಳು ಗುಟ್ಟಹಳ್ಳಿ ಮುನಿರೆಡ್ಡಿಪಾಳ್ಯ ವಗೈರೆ ಡಿವಿಜನಿಗೆ ಸೇರಿದ ಎಲ್ಲಾ ಭಾಗಗಳು ರಾತ್ರಿ ಕಾಲದಲ್ಲಿ ಹಾಲಿ ಎತ್ತುತ್ತಿರುವ ಮುಂದೆ ಎತ್ತಲ್ಪಡುವ ಬಂಗ್ಲೆಗಳ ಪಾಯಿಖಾನೆ ವಿನಹ.
2	II	1	ಕಿಚ್ಚೆಶೆಟ್ಟಿ ಛತ್ರದ ರೋಡು ಸೇರಿ ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕದವರಿಗೆ, ಅಲ್ಲಿಂದ ಗುಡುಮೈಯ್ಯನ ಪೇಟೆ ದೊಡ್ಡರೋಡಿನಿಂದ ಬಳೇಪೇಟೆ ರೋಡಿನವರೆಗೆ, ಮತ್ತು ಉತ್ತರಕ್ಕೆ ಸುಬೇದಾರ್ ಛತ್ರ ರೋಡ್ ಆಖೈರು ವರೆಗೆ. ಈ ಮಧ್ಯೆ ಇರುವ ಬೀದಿಗಳು ಗಲ್ಲಿಗಳು.
3	,,	2	ಅವಿನ್ಯೂ ರೋಡ್ ಆಂಜನೇಯನ ಗುಡಿ ಚವುಕ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಜಹಗೀರ್‌ದಾರ್ ಮನೆ ಚವುಕ ಬಳೇಪೇಟೆ ಗುಡುಮೈಯ್ಯನ ಪೇಟೆ ರೋಡ್ ವರೆಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
4	,,	3	ತಾಲ್ಲೂಕು ಕಚೇರಿ ರೋಡ್ ಬಳೇಪೇಟೆ ಚವುಕದ ಮೊದಲು ಮದರಾಸ್ ಗೂಡ್ಸ್ ಗೇಟ್ ವರೆಗೆ ಅಲ್ಲಿಂದ ರೈಲ್ವೆ ಸ್ಟೇಷನ್ ಸ್ಟಾಫ್ ಕ್ವಾರ್ಟರ್ಸ್ ವಗೈರೆ ಕಕ್ಕಸ್‌ಗಳು ಮತ್ತು ಮನೆಗಳು ಧರ್ಮಾಂಬುಧಿಕೆರೆ ಸುತ್ತಲೂ ರೋಡ್ ಹಳೆ ಸವಾರ ಲೈನಿಗೆ ಸೇರಿದ ಪೊಲೀಸ್ ಸ್ಟೇಷನ್ ವಗೈರೆ, ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
5	III	1	ಮಾರ್ಕೆಟ್ ಚವುಕದ ಮೊದಲು ದೊಡ್ಡಪೇಟೆ ಚವುಕದಿಂದ ತಾಲ್ಲೂಕ್ ಕಚೇರಿ ರೋಡ್ ಮೆಟಿಕಲ್ ರೋಡ್‌ವರೆಗೂ, ಅಲ್ಲಿಂದ ಮ್ಯುನಿಸಿಪಲ್ ಸ್ಕೂಲ ಬಳಿ ಚವುಕದಿಂದ ಮಾರ್ಕೆಟ್ ಚವುಕದವರೆಗೆ, ಈ ಮಧ್ಯೆ ಗುಂಡೋಪಂತರ ರೋಡ್ ತರಗಿನಪೇಟೆ, ಮಾಮೂಲ್ ಪೇಟೆ ರಸ್ತೆಗಳು, ಒಳಗಲ್ಲಿಗಳು.
6	,,	2	ಮ್ಯುನಿಸಿಪಲ್ ಸ್ಕೂಲ್ ಬಳಿ ಚವುಕದ ಮೊದಲು ಪೊಲೀಸ್ ರೋಡ್ ಅಕ್ಕಿಪೇಟೆ ರೋಡ್ ವರೆಗೂ, ಅಲ್ಲಿಂದ ಅಕ್ಕಿಪೇಟೆ ರೋಡ್ ಅನಾಮತ್ತು ತಾಲ್ಲೂಕು ಕಚೇರಿ ರೋಡ್ ರಾಘವಾಚಾರ್ಲು ಮನೆಬಳಿ ಚವುಕದಿಂದ ತಾಲ್ಲೂಕು ಕಚೇರಿ ರೋಡ್ ಮೆಟಿಕಲ್ಲು ರೋಡ್ ಚವುಕದವರೆಗೂ, ಈ ಮಧ್ಯೆ ಇರುವ ಜಂಖಾನಪೇಟೆ, ಸುಲ್ತಾನ್‌ಪೇಟೆ, ಸಂತೂಸಾಪೇಟೆ, ಮನವರ್ತೇಪೇಟೆ ರೋಡ್‌ಗಳು, ಗಲ್ಲಿಗಳು.
7	,,	3	ಪೊಲೀಸ್ ರೋಡ್ ಅಕ್ಕಿಪೇಟೆ ಚವುಕದ ಲಾಗಾಯಿತು ತೋಟದ್ದೇವರ ಮಠದ ವರೆಗೂ, ಅಲ್ಲಿಂದಾ ಉರ್ಲನ್‌ಮಿಲ್ ಟ್ಯಾಂಕ್ ಬಂಡ್ ರೋಡ್ ಮೈಸೂರು ರೈಲ್ವೆ ಗೂಡ್ಸ್‌ಗೇಟ್ ತಾಲ್ಲೂಕ್ ಕಚೇರಿ ರೋಡ್ ಅಕ್ಕಿಪೇಟೆ ಚವುಕದವರೆಗೆ. ಈ ಮಧ್ಯೆ ಇರುವ ಗೌಡನ್‌ಪೇಟೆ, ಅರಳೇಪೇಟೆ, ಅಕ್ಕಿಪೇಟೆ ಗಲ್ಲಿಗಳು, ರಸ್ತೆಗಳು.
8	,,	4	ತರಕಾರಿ ಮಾರ್ಕೆಟ್ ಬಳಿ ಆಸ್ಪತ್ರೆ ಮೊದಲು ಮೈಸೂರು ರೋಡ್ ಬಾರ್‌ಲೈನ್‌ವರೆಗೂ, ಅಲ್ಲಿಂದ ಕೆಂಗೇರಿ ಬಾಗಲ್ ಪೊಲೀಸ್ ಸ್ಟೇಷನ್‌ವರೆಗೆ, ಸ್ಟೇಷನ್ನಿಂದ ರಾಣಾಸಿಂಗನ ಪೇಟೆ ಜೇಲಿ. ಈ ಮಧ್ಯೆ ಇರುವ ರಸ್ತೆಗಳು, ಗಲ್ಲಿಗಳು ಮತ್ತು ಹಳೇ ಬಾರ್ ಲೈನ್ ಬಾಜೂ ಇರುವ ಪೆನ್‌ಷನ್ ಲೈನ್, ಚಲವಾದಿ ಪಾಳ್ಯ ವಗೈರೆ.
9	IV	1	ಹಲಸೂರು ಗೇಟ್ ಪೊಲೀಸ್ ಸ್ಟೇಷನ್ ಮೊದಲು ತಾಲ್ಲೂಕ್ ಕಚೇರಿ ರೋಡ್ ನಗರ್ತರಪೇಟೆ ಅಣ್ಣೈಯಪ್ಪ ಶೆಟ್ಟರ ಮನೆವರೆಗೂ, ಅಲ್ಲಿಂದಾ ಉತ್ತರಕ್ಕೆ ಸೈಬಶೆಟ್ಟರ ಗಲ್ಲಿಯಿಂದಾ ಜುಮ್ಮಾ ಮಸೀತಿ ಮುಂಭಾಗದಿಂದ ನಾರಾಯಣಶೆಟ್ಟಿ ಪೇಟೆ ರೋಡ್ ಸೇರಿ ಕಬ್ಬನ್‌ಪೇಟೆ ಸಾರಾಯಿ ಅಂಗಡಿ ಗಲ್ಲಿ ಚವುಕದವರೆಗೆ, ಅಲ್ಲಿಂದಾ ಕಬ್ಬನ್‌ಸಾಬರಪೇಟೆ ರೋಡ್ ಸೇರಿ ಹಲಸೂರು ಗೇಟಿನ ವರೆಗೆ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
10	,,	2	ನಗರ್ತರಪೇಟೆ ಅಣ್ಣೈಯಪ್ಪಶೆಟ್ಟರ ಮನೆ ಲಾಗಾಯಿತು ದೊಡ್ಡಪೇಟೆ ಚವುಕ ಅವಿನ್ಯೂ ರೋಡ್ ಶೇರಿ ಎಲಹಂಕದ ಬಾಗಲ್ ಪೊಲೀಸ್ ಸ್ಟೇಷನ್‌ವರೆಗೂ, ಅಲ್ಲಿಂದ ಡಿಸ್ಟ್ರಿಕ್ಟ್ ಆಫೀಸ್ ರೋಡ್ ಸೆನಟೂಫ್ ಕಬ್ಬನ್‌ರೋಡ್ ಸಾರಾಯಿ ಅಂಗಡಿ ಗಲ್ಲಿ ಚವುಕದವರೆಗೆ, ಈ ಮಧ್ಯೆ ಇರುವ ಚವುಡೇಶ್ವರಿ ರೋಡ್ ಪಾಂಚಾಳದಪೇಟೆ ಮಕ್ಕಳು ಬಸವಣ್ಣನ ಗುಡಿ ರೋಡ್ ಕವಾಡಿ ರೇವಣ್ಣನಪೇಟೆ ರಸ್ತೆಗಳು, ಗಲ್ಲಿಗಳು.

ನಂಬರ್.	ಡಿವಿಜನ್.	ಬ್ಲಾಕ್.	ರೋಡ್‌ಗಳ ತಪಶೀಲ್ ಮತ್ತು ಚಕ್ಕುಬಂದಿ.
11	V	2	5ನೇ ಡಿವಿಜನ್ ಮಾಮೂಲ್ ಮೇರಿಗೆ.
12	VI	1	ಮಾರ್ಕೆಟ್ ಚವುಕದ ಮೊದಲು ಬೊಂಬು ಬಜಾರ್ ರೋಡ್, ಮಿರ್ಷರೋಡ್, ಲಾಲ್‌ಬಾಗ್ ರೋಡ್, ಜ್ಯೋಟಪ್ಪನ ತೋಪಿನಿಂದ ಬಿಕಟ್ಟಭಾವಿ ಬಳಿ ಗಲ್ಲಿಯಿಂದ ಮಾವಹಳ್ಳಿ, ಕೆರೆಕಟ್ಟೆ, ಕಲಾಸಿ ರೋಡ್, ಹಳೇ ಪೋಲೀಸ್ ಸ್ಟೇಷನ್ ಚವುಕದ ವರೆಗೆ. ಈ ಮಧ್ಯೆ ಇರುವ ಅಮ್ಮಾ ಚವುದ್ರಿ ಪಾಳ್ಯ, ಗಂಗಮ್ಮಚೇರಿ ರಸ್ತೆಗಳು, ಗಲ್ಲಿಗಳು.
13	,,	2	ಕಲಾಸಿ ಲೈನು ಹಳೇ ಪೊಲೀಸ್ ಸ್ಟೇಷನ್ನಿಂದ ಕೊರಚರ ಪಾಳ್ಯದ ರೋಡ್ ಕಾರಂಜಿ ಕೆರೆಕಟ್ಟೆ ಬುಚ್ಚಣ್ಣನ ತೋಪುವರೆಗೂ, ಅಲ್ಲಿಂದ ಉಪ್ಪಾರಹಳ್ಳಿ, ಚಿಕ್ಕಮಾವಹಳ್ಳಿ, ದೊಡ್ಡ ಮಾವಹಳ್ಳಿ, ಕನಕನಪಾಳ್ಯ ಲಾಲ್‌ಬಾಗ್ ರೋಡ್ ಗೇಟಿನ ವರೆಗೂ. ಈ ಮಧ್ಯೆ ಇರುವ ಬೀದಿಗಳು, ಗಲ್ಲಿಗಳು.
14	VII	,,	7ನೇ ಡಿವಿಜನ್ ಕೋಟೆ ಮಾಮೂಲ್ ಮೇರಿಗೆ.
15	,,	,,	ಚಾಮರಾಜೇಂದ್ರಪೇಟೆ, ಹೊಸ ತರಗಿನಪೇಟೆ, ಗುಟ್ಟಹಳ್ಳಿ, ಗವಿಪುರ, ಮಾದಿಗರ ಪಾಳ್ಯ ವಗೈರೆ ಡಿವಿಜನ್‌ಗೆ ಸೇರಿದ ರೋಡ್‌ಗಳು, ಗಲ್ಲಿಗಳು ಯಾವತ್ತು.
16	,,	,,	ಬಸವಣ್ಣನಗುಡಿ ಎಕ್ಸ್‌ಟೆನ್ಷನ್.
17	,,	,,	ಮಲ್ಲೇಶ್ವರ ಎಕ್ಸ್‌ಟೆನ್ಷನ್.

ತಾರೀಖು 22ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1903—04ನೇ ಸಾಲಿಗೆ ಅಂದರೆ 1903ನೇ ಇಸವಿ ಜುಲೈ ಗುರ್ರೆ ಲಾಗಾಯತು 1904ನೇ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾದಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನ ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜುರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರವಾರ್ ಹೇಳಿದ ಕೂಡ್ಲೆ ಬಿನ್ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆನ್ಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗೆದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಠೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ಏಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಮೊಬಲಗು ಕಂಟ್ರಾಕ್ಟು ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅಮಾನತ್ತು ಮಿಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ್.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಧರ್ಮಾಂಬುಧಿಕೆರೆ ಒಳಗೆರೆ ಮತ್ತು ಕೆರೆಕಟ್ಟೆ ಹುಲ್ಲು ...	ಹುಲ್ಲು ಕೊಯಿದುಕೊಳ್ಳುವ ಮಾತ್ರವೆ ದನಗಳನ್ನು ಬಿಟ್ಟು ಮೇಯಿಸಕೂಡದು.
2	ಧರ್ಮಾಂಬುಧಿ ಕಟ್ ಕಾಲ್ವೆ 2ಕ್ಕೆ ...	ಡಿಟೋ
3	ಮ್ಯುನಿಶಿಪಲ್ ತೋಟ	ಡಿಟೋ
4	ಚಿಕ್ಕರಾಯನ ಕೆರೆಕಟ್ಟೆ ಕೆಳಗೆ	ದನಗಳನ್ನ ಮೇಯಿಸಿಕೊಳ್ಳುವದಕ್ಕೆ.
5	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು ..	ಡಿಟೋ
6	ಕೋಟೆ ರ್ಯಾಂಪಾರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆವರಿಗೆ. ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
7	ಲಾಲ್‌ಬಾಗ ಮಾವಹಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯ ವಿಲ್ಲದಂತೆ.
8	ದೊಡ್ಡ ಜೈಲ್‌ಖಾನೆ ...	ಡಿಟೋ
9	ಕುಂಬಾರಗುಂಡಿ ಹುಲ್ಲುಗಾವಲ್ ...	ಡಿಟೋ
10	ಆರ್ಸಿಕುಂಟೆಪಕ್ಕದ ಮತ್ತು ಒಳಗಿನ ಹುಲ್ಲು ..	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ, ಒಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
11	ದಂಡಿಗೆ ಹೋಗುವ ಶಿಡ್ಲು ರೋಡ್ ರಸ್ತೆಗೆ ಪಶ್ಚಿಮ ಭಾಗ ಇರತಕ್ಕ ಹುಲ್ಲು.	ಡಿಟೋ
12	ಲಂಡರ್ ಮಿಷನ್ ಸ್ಕೂಲ್ ಪಕ್ಕದ ಹುಲ್ಲುಗಾವಲ್ ...	ಡಿಟೋ
13	ಎಲಹಂಕದಬಾಗಲಿನಿಂದ ಬಳ್ಳೇಬಾಗಲಿಗೆ ಹೋಗುವ ರಸ್ತೆ ಬಲಭಾಗದ ಕಾಲವೆದಡದ ಹುಲ್ಲು	ಡಿಟೋ
14	ಸಂಪಂಗಿಕೆರೆ ಒಳಗೆರೆ ಹುಲ್ಲುಗಾವಲ್, ಬ್ರೌನ್ ಸಾಹೇಬರಿಗೆ ಸೇರಿದ್ದು ವಿನಹಾ, ಮ್ಯುನಿಸಿಪಾಲಿಟಿಗೆ ಸೇರಿದ್ದು	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
15	ಕೆಂಗೇರಿಬಾಗಲ್ ಬಾರಕೋಸ್‌ಬಳಿ ಇರುವ ಕಾವಲ್ ಜಮೀನಿನಲ್ಲಿ, ನಾಟುಗಳು ಹಾಕತಕ್ಕ ಬಗ್ಯೆ ಉಪಯೋಗಿಸಿಕೊಂಡಿರುವ ಜಮೀನ್ ಶಿವಾಯಿ, ಮರ್ಕಾ ಹದ್ದುಬಸ್ತು ಮಾರ್ಕ್ ಮಾಡಿರುವ ಸ್ಥಳ ವಿನಹ, ನಿಂತ ಜಮೀನ್‌ನಲ್ಲಿ ಬೀಳತಕ್ಕ ಹುಲ್ಲು	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
16	ಮ್ಯುನಿಸಿಪಲ್ ಲಿಮಿಟ್‌ಗೆ ಸೇರಿದ ವೆಸ್ಟರ್ನ್ ಎಕ್ಸ್‌ಟೆನ್‌ಷನ್‌ನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ಮಿಳಿದ ಬೋರ್ಡಿಗೆ ಸೇರಿದ ಜಮೀನ್‌ನಲ್ಲಿಯೂ, ಭೋಗೇನಹಳ್ಳಿ ದಿನ್ನೇಬಳಿಯಲ್ಲಿಯೂ ಇರತಕ್ಕ ಜಮೀನ್‌ನಲ್ಲಿಯೂ ಸಹಾ	ಮನೆ ಸಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.
17	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು	ಮೇಯಿಸಿಕೊಳ್ಳುವದಕ್ಕೆ.
18	ದಂಡು ಮುಪ್ಪಾರಹಳ್ಳಿ ಮಾರುಮುಂದಿನ ಹುಲ್ಲುಗಾವಲು ..	ರೈಲ್ವೆ ಕಾಂಪೌಂಡಿನ ಬೇಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
19	ಮಿಲ್ಲರ್ ಒಳಗೆರೆ ಹುಲ್ಲು	ಕೊಯಿದುಕೊಳ್ಳುವದಕ್ಕೆ.

ನೋಟಿಸ.

ತಾರೀಖು 30ನೇ ಮೇ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಸಿಟಿ ಮ್ಯೂನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟ್‌ಗಳಲ್ಲಿ 1903ನೇ ಇಸವಿ ಜುಲೈ 1ನೇ ತಾರೀಖು ಲಾಗಾಯಿತು 1904ನೇ ಇಸವಿ ಜೂನ್ 30ನೇ ತಾರೀಖಿನ ವರಿಗ್ಗೆ, ಮಂಜೂರಾಗಿರುವ ದರಗಳ ಮೇರಿಗೆ ತೆರಿಗೆಯನ್ನ ವಸೂಲ್ಮಾಡುವದಕ್ಕೆ ಮೊಹರ್ ಸಿಕ್ಕೆ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1903ನೇ ಇಸವಿ ಜೂನ್ 20ನೇ ತಾರೀಖು ಮಧ್ಯಾಹ್ನ 3 ಘಂಟೆ ವಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ ವಳಗೆ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಉರಳುಗೆಡ್ಡೆ, ಈರುಳ್ಳಿ, ಕಡ್ಲೆಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ, ಗಾಡಿಗಳಿಗೂ, ಮತ್ತು ಮೀನು ಮತ್ತು ಕೋಳಿ ಮಾರ್ಕೆಟ್‌ಗಳಿಗೆ ತರುವ ಮೀನು, ಕೋಳಿ, ಕೋಳಿ ಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟ್‌ಗಳು ಅನುಸರಿಸಿ ತೆರಿಗೆ ವಸೂಲ್ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಜೈಲ್	..	ಮಾರ್ಕೆಟ್
ಉಪ್ಪಾರಪೇಟೆ	..	ಡಿಟೋ
ತಿಗಳರಪೇಟೆ ಧರ್ಮರಾಯನ ಗುಡಿ ಬಳಿ ಜೈಲ್	..	ಡಿಟೋ
ಕಲಾಸಿಪಾಳ್ಯ	..	ಡಿಟೋ
ಅಕ್ಕಿಪೇಟೆಯಲ್ಲಿರುವ	..	ಡಿಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜಮೀನಿಗೆ ರುಸುಂ ವಸೂಲ್ಮಾಡುವದಕ್ಕೆ.

IV. ತಗರದ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ಬಿಕರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ರುಸುಂ ವಸೂಲ್ಮಾಡುವದಕ್ಕೆ.

V. ಮೀನು ಮತ್ತು ಕೋಳಿ ಮಾರ್ಕೆಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ತೆರಿಗೆ ವಸೂಲ್ಮಾಡುವದಕ್ಕೆ.

ಮೇಲ್ಕಂಡ ಮಾರ್ಕೆಟುಗಳಲ್ಲಿ ತಿಂಗಳಗಟ್ಟೆ ತೆರಿಗೆ ಕೊಡುವವರಿಂದ ತೆರಿಗೆಯನ್ನು ವಸೂಲ್ಮಾಡಕೂಡದು. ಮತ್ತು ಹಗಲು ರಾತ್ರಿ ಸಹ ಸಾಮಾನುಗಳು ತೆಗೆಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ತೆರಿಗೆಯನ್ನು ವಸೂಲ್ಮಾಡಕೂಡದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮ್ಯುನಿಸಿಪಲ್ ತರಕಾರಿ, ಮೀನು ಮತ್ತು ಕೋಳಿ ಮಾರ್ಕೆಟುಗಳಲ್ಲಿ ತೆರಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

೩. ದರಖಾಸ್ತು ಕೂಡಾ ನಗದಾಗಲಿ, ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿ ಠೇವಣೀ ಹಣವನ್ನು ಹಾಜರ್ ಮಾಡಿದ ಹೊರತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ, ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸಹಿ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಅವನು ಒಡನೆ ಹಾಜರ್ಮಾಡಬೇಕು. ಮತ್ತು ಅಂತಾ ದರಖಾಸ್ತುದಾರನು ಅವನ ದರಖಾಸ್ತನ್ನ ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದೊಳಗೆ ಅವಶ್ಯಕವಾದ ಇಜಾರ ಮುಚ್ಚಳಿಕೆಯನ್ನು ಬರದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟುದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ಹಣ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ.

A. ಶಿದ್ದಿಕಟ್ಟೆಯಲ್ಲಿ ಇರುವ ಎನ್‌ಕ್ಲೋಜಡ್ ವೆಜಿಟಬಲ್ ಮಾರ್ಕೆಟ್ಟಿನಲ್ಲಿ. } ಇದರ ತಪಸೀಲ್ ನಮೂದಿನಿಂದ ಕಂಟ್ರಾಕ್ಟುದಾರನು ಕಂಟ್ರಾಕ್ಟಿಗೆ ಸಂಬಂಧಪಟ್ಟ ಪ್ರತಿ ಒಂದು ಸ್ಥಳದಲ್ಲಿಯೂ ಸ್ವಂತಲಾಗವಡಿನಿಂದ ಒಂದು ಬೋರ್ಡ್ ಹಾಕಿರಬೇಕು.

		ರೂ.	ಆ.	ಪೈ.
1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	0	2
2.	ಹರಿವೆಸೊಪ್ಪಿನಗಳ ಮಂಕ್ರಿ 1ಕ್ಕೆ	0	0	1
3.	ಭಂಡಿ ತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರೀಗೆ ಬಂದರ	0	2	0
4.	ಮಾರ್ಕೆಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದೇಶ್ಯ ಬರುವ ತರಕಾರಿ ಭಂಡಿ 1ಕ್ಕೆ	0	1	0
5.	5 x 5 ಅಡಿಯುಳ್ಳ ಪ್ರತಿ ಜಮೀನಿನಲ್ಲಿ ಸಾಯಂಕಾಲದ ಅಂಗಡಿಗೆ	0	0	3
6.	ಸದರಿ ಅಳತೆಯುಳ್ಳ ಜಮೀನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ	0	1	0
7.	ವಜಿಟೆಬಿಲ್ ಮಾರ್ಕೆಟ್ ಏಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮಾರಾಟಕ್ಕೆ			
8.	ಸೇಬು, ಅಂಜೂರ, ದಾಳಿಂಬ, ಚಕ್ಕೋತ ಮತ್ತು ಮಾವು ವಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	0	2
9.	ಮಾರ್ಕೆಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದೇಶ್ಯ ತರಗಿನಪೇಟೆ ವಗೈರೆ ಸ್ಥಳದಿಂದ ಬರುವ ಉರಳಗೆಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗೈರೆ ಮೂಟೆ 1ಕ್ಕೆ	0	0	3
10.	ರೈಲ್‌ನಿಂದ ಬರುವ ಮೂಟೆ ಭಂಡಿ ಭರ್ತಿ ಕಡ್ಲೆಕಾಯಿ, ಉರಳಗೆಡ್ಡೆ, ಈರುಳ್ಳಿ, ಮಾವಿನಹಣ್ಣು, ಬಾಳೆಹಣ್ಣು, ವಗೈರೆ ಒಂದೇ ವಿಧವಾದ ಬಾಬಿಗೆ	0	0	3
11.	ಕೋಳಿ, ಕೋಳಿ ಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ	0	1	0
12.	ಮೀನಿನ ಸ್ಟಾಲ್ 1ಕ್ಕೆ	0	0	3
		0	0	2

7. ವೆಜಿಟೆಬಿಲ್ ಮಾರ್ಕೆಟ್ ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ, ಕಬ್ಬಿಣ ವಗೈರೆ ಸಾಮಾನುಗಳು ರಾತ್ರಿ ಹಗಲು ಸಹಾ ತೆಗೆಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟುದಾರನು ವಸೂಲ್ಮಾಡಿಕೊಳ್ಳಬಹುದು.

8. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೇ ತಾರೀಖಿನೊಳಗಾಗಿ ಕಂಟ್ರಾಕ್ಟ ಬಾಬತು ಆಯಾಯ ತಿಂಗಳ ಮೊಬಲಗನ್ನು ಮುಂದಾಗಿಯೇ ಹಾಜರ್ಮಾಡಿ ರಸೀತಿ ಪಡದುಕೊಳ್ಳಬೇಕು.

9. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೆಯಿನ್ ಡ್ರೈನ್ ಪಕ್ಕದ ಖಾಲಿ ಜಮೀನಿನಲ್ಲಿ ವಸೂಲಾಗತಕ್ಕದ್ದು ವೆಜಿಟೆಬಿಲ್ ಮಾರ್ಕೆಟ್ ಕಂಟ್ರಾಕ್ಟುದಾರನೇ ವಸೂಲ್ಮಾಡಿಕೊಂಡು ಮಾಹೆ 1ಕ್ಕೆ ಎರಡು ರೂಪಾಯಿಗಳಂತೆ ಡಿಟೋ ದೇವಸ್ಥಾನದ ಪಿಜಂಟರಿಗಾಗಿ ಅವರಿಗೆ ಪಾವತಿ ಬಗ್ಗೆ ಕಂಟ್ರಾಕ್ಟ ಮೊಬಲಗಿನ ಸಂಗಡ ಇರಸಾಲ್ ಮಾಡಬೇಕು.

10. ಠೇವಣಿ ಮೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ ಆಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಆಲಾಹಿದ ಪಾವತಿ ಮಾಡದೆ ಸಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾಮಾಡಿಕೊಳ್ಳಲ್ಪಟ್ಟ ಠೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟ ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

11. ಕೋಟೆ ಗ್ಲೇಸಸ್ ಬಳಿ ಇರತಕ್ಕ ಕಬ್ಬಿನ ಅಂಗಡಿಗಳು ಮತ್ತು ಇತರ ಅಂಗಡಿಗಳವರಿಂದ ರುಸುಂ ವಸೂಲ್ಮಾಡತಕ್ಕ ಬಾಬು ಈ ಕಂಟ್ರಾಕ್ಟಿಗೆ ಸೇರಿ ಇರುವದಿಲ್ಲ.

12. ಈ ಷರತ್ತುಗಳಿಗೆ ವಿರೋಧವಾಗಿ ನಡೆದುಕೊಳ್ಳುವ ಪಕ್ಷಕ್ಕೆ ಕೂಡಲೆ ಕಂಟ್ರಾಕ್ಟು ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ಮೊಬಲಗನ್ನು ದಂಡವಾಗಿ ಅಥವಾ ಅವನ ಬಾಕೀಗೆ ಭರ್ತಿಯಾಗಿ ತೆಗದುಕೊಂಡು ಲುಕ್ಸಾನ್ ಮೊಬಲಗಿಗೆ ಕಂಟ್ರಾಕ್ಟದಾರನನ್ನು ಜವಾಬ್ದಾರಿ ಮಾಡಿ ಅವನ ಜಿಂದಿಗಿ ಜಫ್ತಿ ಹರಾಜು ಮೂಲಕ ವಸೂಲ್ಮಾಡಲ್ಪಡುತ್ತೆ.

13. ಮಿಕ್ಕ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬೇಕು.

14. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟ ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿಲಾ ತಕರಾರಿ ತೆಗದುಕೊಳ್ಳಲು ಸಲೀಸ್ ಏರ್ಪಾಡು ಇಡತಕ್ಕದ್ದು.

ಪಿ. ಪಲ್ಪ, ಫಾರ್ ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

ನೋಟಿಸ್.

ತಾರೀಖು 5ನೇ ಜೂನ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು ಸನ್ 1904ನೇ ಇಸವಿ ಜೂನ್ ಆಖೈರುವರಿಗೆ ಅಂದರೆ ಒಂದು ವರುಷಕ್ಕೆ ಮೈಸೂರು ಟವರ್ನನಲ್ಲಿರತಕ್ಕ ಮ್ಯುನಿಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗೆ ನಮೂದು ಮಾಡುವ ಕೆರೊಸೀನ್ ಯಂಣೆ ಟಿನ್‌ಗಳನ್ನು ಸರಬರಾಯಿ ಮಾಡಲು ಇಚ್ಛೆಯುಳ್ಳವರು ಡಿಟ್ಟೋ ಯಂಣೆ ಟಿನ್ ಒಂದಕ್ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನು ಲಖೋಟೆಗಳಲ್ಲಿ ಗರ್ಭೀಕರಿಸಿ ಮೊಹರು ಮಾಡಬೇಕು. ಡಿಪಾಜಟ್ಟಿಗಾಗಿ (50-0—0) ಐವತ್ತು ರೂಪಾಯಿಗಳನ್ನು ನಗದೇ ಆಗಲಿ ಅಥವಾ ಮದ್ರಾಸ ಕರೆನ್ಸಿ ನೋಟ್ ಮೂಲಕವೇ ಆಗಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ ಜೂನ್ ಮಾಹೆ 22ನೇ ತಾರೀಖಿನ ವಳಗಾಗಿ ಡಿಟ್ಟೋ ದರಖಾಸ್ತುಗಳ ಕೂಡ ಕಳುಹಿಸಬೇಕು.

ಡಿಟ್ಟೋ ಮಾಹೆ ತಾರೀಖು 22ರ ವರಿಗೂ ಮೇಲ್ಕಂಡ ದರಖಾಸ್ತುಗಳನ್ನು ತೆಗದುಕೊಳ್ಳಲ್ಪಡುವದು.

ಸನ್ 1903ನೇ ಇಸವಿ ಜೂನ್ 22ನೇ ತಾರೀಖಿನ ಮಧ್ಯಾಹ್ನ 2 ಘಂಟೆಗೆ ಟವನ್ ಹಾಲಿನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವಂದ ಹಾಜರು ಇರತಕ್ಕ ದರಖಾಸ್ತುದಾರರುಗಳ ರೂಬರೂಬ್ ಸದರಿ ದರಖಾಸ್ತುಗಳು ತೆರಿಯಲ್ಪಡುವವು.

ಪ್ರೆಸಿಡೆಂಟ್ ಸಾಹೇಬರವರು ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನೂ ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲಿ ಅಥವಾ ಇತರ ಯಾವ ದರಖಾಸ್ತುಗಳನ್ನೇ ಆಗಲಿ ವಜಾ ಮಾಡಲು ಅಧಿಕಾರವುಳ್ಳವರಾಗಿ ಇರುತ್ತಾರೆ.

ಮಂಜೂರಾದ ದರಖಾಸ್ತುದಾರು, ಡಿಟ್ಟೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 5 ಐದು ದಿವಸಗಳ ವಳಗಾಗಿ ಮೊದಲು ಹಾಜರು ಮಾಡಿದ (50—0—0) ಐವತ್ತು ರೂಪಾಯಿಗಳು ಡಿಪಾಜಟ್ ಅಲ್ಲದೆ ಜಾಸ್ತಿ (150—0—0) ಒಂದುನೂರ ಐವತ್ತು ರೂಪಾಯಿಗಳು ಡಿಪಾಜಟ್ಟಿಗಾಗಿ ಪಾವತಿ ಮಾಡಿ ರೂಲ್ಸ್ ಪ್ರಕಾರ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಮೊದಲು ಹಾಜರು ಮಾಡಿದ ಡಿಪಾಜಟ್ ಮೊಬಲಗನ್ನು ಕಳದುಕೊಳ್ಳುವರು.

ಬರದುಕೊಡತಕ್ಕ ಮುಚ್ಚಳಿಕೆಯು ಕರಾರುಗಳು ಮತ್ತು ಇತರ ತಪಶೀಲುಗಳು ಸಹಾ ಮ್ಯುನಿಸಿಪಲ್ ಆಫೀಸಿನಲ್ಲಿ ತಿಳದುಕೊಳ್ಳಬಹುದು.

(1) ಛಪ್ಪರ್ ಮಾರ್ಕ್ ಸೀಮೆಯಂಣೆ ಟಿನ್‌ಗಳು.
(2) ರಷ್ಯನ್ ಯಂಣೆ ಟಿನ್ 125ನೇ ಡಿಗ್ರಿ ಬಾಬತು.

ತಿಂಗಳು ಒಂದಕ್ಕೆ ಸುಮಾರು ಇನ್ನೂರು ಟಿನ್‌ಗಳ ವರಿಗೆ ಛಪ್ಪರ್ ಮಾರ್ಕ್ ಸೀಮೆಯಂಣೆ ಟಿನ್‌ಗಳು ಖರೀದಿಗೆ ತೆಗದುಕೊಳ್ಳಲ್ಪಡುತ್ತೆ.

ಕೆ. ಶ್ರೀನಿವಾಸರಾವ್, ವೈಸ್ ಪ್ರೆಸಿಡೆಂಟ್.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್—ಬ ತಾರೀಖು 15ನೇ ಜೂನ್ 1903.

ಇದರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ:—

				ರೂ. ಆ. ಪೈ.
1.	1904ನೇ ಲೋವರ್ ಸೆಕಂಡರೀ ಪರೀಕ್ಷೆಯ ಟೆಕ್ಸ್ಟ್—ಗದ್ಯಕಾವ್ಯ (ಧರ್ಮಾಶರ್ಮಾಭ್ಯುದಯ ಪರಿಷ್ಕರಿಸಿದ ಇಲಾಖಾ ಛಾಪಾ)			0—2—6
2.	ಕನ್ನಡ ಲೇಖನ ಪುಸ್ತಕ 6ನೇ ನಂಬರ್	...	..	0—1—0
3.	ಡಿಟ್ಟೋ 7ನೇ ಡಿಟ್ಟೋ	..		0—1—6
4.	ಕನ್ನಡ ಬಾಲಬೋಧೆ IIನೇ ಭಾಗ	..	....	0—2—6

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ತಾರೀಖು 29ನೇ ಮೇ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ನಮ್ಮ ತಂದೆಯಾದ ತುಮಕೂರು ವಾಸಸ್ಥ ಜವಳಿ ಅಂಗಡಿ ಚನ್ನಪ್ಪನವರ ಮಗ ಕಂಬದೂರಯ್ಯನಿಗೆ ಪಿತ್ಥಭ್ರಮಣೆಯಿಂದ, ಜ್ಞಾನ ಸ್ವಾಧೀನವಿಲ್ಲದೆ ಮಸಸ್ವೀ ಇರುತ್ತಾನೆ. ಈತನಿಂದ ಯಾರಾದರೂ, ಯಾವ ಮೂಲಕವಾದ ಲೇವಾದೇವಿಯನ್ನಾಗಲೀ, ಸೊತ್ತುಗಳು ಪರಭಾರೆಯನ್ನಾಗಲಿ ಇತರ ಯಾವವಿಧವಾದ ಟ್ರಾನ್ಸ್ಆಕ್ಷನ್ ಆಗಲೀ ನಡಿಸಿದಲ್ಲಿ ನಮ್ಮ ಆಸ್ತಿಯು ಅಂಥಾ ಟ್ರಾನ್ಸ್ಆಕ್ಷನ್‌ಗೆ ಈಡಾಗಲಾರದು.

ರುಜು—ತುಮಕೂರಲ್ಲಿರುವ ಜವಳಿ ಅಂಗಡಿ ಕಂಬದೂರೈಯ್ಯನ ಮಗ
ಚನ್ನಪ್ಪನ ರುಜು.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 25.

ಬೆಂಗಳೂರು, ಗುರುವಾರ, ಜೂನ್ ತಾ|| 25, ಸನ್ 1903.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಪ್ರಕಟನ ಪತ್ರಿಕೆ ಡಿ. ನಂಬರು 34 ಸನ್ 1900ನೇ ಇಸವಿ ಫೆಬ್ರುವರಿ ತಾರೀಖು 7.

ಕರ್ನಾಟಕ ಪಂಡಿತ ಪರೀಕ್ಷೆ.

1. ಕರ್ನಾಟಕ ಪಂಡಿತ ಪರೀಕ್ಷೆಯು ಮೈಸೂರಿನಲ್ಲಿ ಪ್ರತಿ ವರ್ಷವೂ ನವಂಬರು ತಿಂಗಳು 15ನೇ ತಾರೀಖು ಅಥವಾ ಆ ದಿವಸ ಭಾನುವಾರವಾದಪಕ್ಷದಲ್ಲಿ ನವಂಬರು 16ನೇ ತಾರೀಖಿನಲ್ಲಿ ಆರಂಭವಾಗಿ ಆ ದಿವಸದಲ್ಲಿಯೂ ಮುಂದಿನ ದಿವಸಗಳಲ್ಲಿಯೂ ನಡೆಯಿಸಲ್ಪಡುವದು.

2. ಈ ಪರೀಕ್ಷೆಗೆ ಸೇರಬೇಕೆಂಬುವರಿಗೆ ದೇಶೀಯೋಪಾಧ್ಯಾಯ ಪರೀಕ್ಷೆ, "ಅಪ್ಪರ್ ಸೆಕಂಡರಿ" ಪರೀಕ್ಷೆ, "ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್" ಪರೀಕ್ಷೆ, ಇವುಗಳಲ್ಲಿ ಯಾವದಾದರೂ ಒಂದು ಪರೀಕ್ಷೆಯಾಗಿರಬೇಕು. ಅಲ್ಲದೆ ಈ ಪರೀಕ್ಷೆಯಾದ ಕಾಲಕ್ಕೂ ಅವರು ಹೋಗಬೇಕೆಂದು ಅಪೇಕ್ಷಿಸುವ ಪಂಡಿತ ಪರೀಕ್ಷೆಯು ನಡೆಯುವ ಕಾಲಕ್ಕೂ ದರಿದ್ರಪಕ್ಷ ಎರಡುವರ್ಷ ಅಂತರವಿರಬೇಕು.

3. ಈ ಪರೀಕ್ಷೆಗೆ ಸೇರಬೇಕೆಂಬುವರು ಬೆಂಗಳೂರಲ್ಲಿರುವ ದೇಶೀಯ ಪರೀಕ್ಷೆಗಳ ಮ್ಯಾನೇಜರವರಿಗೆ ಆಗಸ್ಟ್ 15ನೇ ತಾರೀಖನ್ನು ಅತಿಕ್ರಮಿಸದೆ ತಲಪುವಂತೆ ದರಖಾಸ್ತುಗಳನ್ನು ಬರೆದುಕೊಳ್ಳಬೇಕು. ಈ ದರಖಾಸ್ತಿನ ಜೊತೆಯಲ್ಲಿ ಒಬ್ಬೊಬ್ಬ ಪರೀಕ್ಷ್ಯನೂ (Candidate) ತನಗೆ ದೇಶೀಯೋಪಾಧ್ಯಾಯ ಪರೀಕ್ಷೆ ಅಪ್ಪರ ಸೆಕಂಡರಿ ಪರೀಕ್ಷೆ, ಮದ್ರಾಸ್ ಯೂನಿವರ್ಸಿಟಿಯ ಮೆಟ್ರಿಕ್ಯುಲೇಷನ್ ಪರೀಕ್ಷೆ, ಇವುಗಳಲ್ಲಿ ಯಾವದಾದರೂ ಒಂದು ಆಗಿರುವ ಬಗ್ಗೆ ಕೊಟ್ಟಿರುವ ನಿರ್ಣಯಪತ್ರಿಕೆ (ಸರಟಫಿಕೇಟು) ಯನ್ನೂ ಕೂಡ ಕಳುಹಿಸಬೇಕು.

4. ಈ ಪರೀಕ್ಷೆಗೆ ಸೇರಿಸಿಕೊಳ್ಳುವುದಕ್ಕಾಗಿ ಕೊಡತಕ್ಕ ವೇತನ ರೂಪಾಯಿಗಳು 5.

5. ಪರೀಕ್ಷ್ಯರು ಕೆಳಗೆ ಹೇಳುವ ವಿಷಯಗಳಲ್ಲಿ ಪರೀಕ್ಷಿಸಲ್ಪಡುವರು :—

I. ಕರ್ನಾಟಕ ಭಾಷೆ ಮತ್ತು ಸಾಹಿತ್ಯ.

		ಅಂಕಗಳು (Marks)
(*a*) ಕನ್ನಡ ವ್ಯಾಕರಣ—		
	ಶಬ್ದಮಣಿದರ್ಪಣ, ಎಲ್ಲಾ ...	ಒಂದು ಪತ್ರಿಕೆ 120
	ಶಬ್ದಾನುಶಾಸನ, ಎಲ್ಲಾ, ವ್ಯಾಖ್ಯಾನವಿಲ್ಲ ..	
	ರಘುನಾಥರಾಯರ ವ್ಯಾಕರಣೋಪನ್ಯಾಸ, ಎಲ್ಲಾ	
(*b*) ಕನ್ನಡ ಛಂದಸ್ಸು ಮತ್ತು ಅಲಂಕಾರ—		
(1)	ನಾಗವರ್ಮ ಛಂದಸ್ಸು ..	ಅದೇ .. 80
(2)	ಅಪ್ರತಿಮವೀರ ಚರಿತ, ಪ್ರಕರಣಗಳು I ಮತ್ತು II ..	
(3)	ಲಿಂಗರಾಜರ ನರಪತಿ ಚರಿತ ..	
(4)	ಶೃಂಗಾರ ರತ್ನಾಕರ ..	
(*c*) ಕನ್ನಡ ಪ್ರಬಂಧರಚನೆ—		
	ಪರೀಕ್ಷಕರಿಂದ ನಿಯಮಿತವಾದ ಎರಡು ವಿಷಯಗಳೊಳಗೆ ಯಾವದಾದರೂ ಒಂದನ್ನು ಕುರಿತು ಒಂದು ಉಪನ್ಯಾಸ ..	ಅದೇ ... 100
(*d*) ಕೆಳಗೆ ಹೇಳುವ ಗ್ರಂಥಗಳು—		
(1)	ಮಲ್ಲಿನಾಥ ಪುರಾಣ, ಆಶ್ವಾಸಗಳು 1—8 ..	ಅದೇ ... 100
	ಜೈಮಿನಿ ಭಾರತ, ಸಂಧಿಗಳು 1—4 ...	

(2) ಕಾದಂಬರಿ, ಎರಡನೇ ಭಾಗ	..	ಅಂಕಗಳು (Marks)
ಜಗನ್ನಾಥ ವಿಜಯ, ಆಶ್ವಾಸಗಳು 4—6	..	ಒಂದು ಪತ್ರಿಕೆ 100
(3) ಶಬರಶಂಕರ ವಿಲಾಸ	...	ಅದೇ .. 100
ಚಿಕ್ಕದೇವರಾಜ ವಂಶಾವಳಿ	...	
(4) ಲೀಲಾವತಿ, ಆಶ್ವಾಸಗಳು, 1 ಮತ್ತು 3	...	ಅದೇ .. 100
ಪಾರ್ವತೀ ಪರಿಣಯ	..	
ಶಾಕುಂತಳೆ	..	

II. ಸಂಸ್ಕೃತ ಭಾಷೆ ಮತ್ತು ಸಾಹಿತ್ಯ.

(*a*) ಸಂಸ್ಕೃತ ವ್ಯಾಕರಣ—		
ಲಘು ಕೌಮುದಿ	..	ಅದೇ .. 80
(*b*) ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ—		
ಶೃತಬೋಧ	...	ಅದೇ .. 120
ಪ್ರತಾಪ ರುದ್ರೀಯ ; ಅರ್ಥಾಲಂಕಾರ ಪ್ರಕರಣವಿಲ್ಲ	..	
ಕುವಲಯಾನಂದ	..	
(*c*) ಕೆಳಗೆ ಹೇಳುವ ಗ್ರಂಥಗಳು—		
ಮಾಳವಿಕಾಗ್ನಿಮಿತ್ರ ..	..	ಅದೇ .. 100
ಮುದ್ರಾ ರಾಕ್ಷಸ	..	
ಕಾದಂಬರಿ, ಚಂದ್ರಪೀಡನ ಪಟ್ಟಾಭಿಷೇಕದಿಂದ Iನೇ ಭಾಗದ ಕಡೇವರೆಗೆ	...	ಅದೇ ... 100

III. ಭಾಷಾಂತರೀಕರಣ.

ಕನ್ನಡದಿಂದ ಸಂಸ್ಕೃತಕ್ಕೆ 60 ಅಂಕಗಳು	..	ಅದೇ ... 100
ಸಂಸ್ಕೃತದಿಂದ ಕನ್ನಡಕ್ಕೆ 40 ಅಂಕಗಳು	..	

6. ಕೆಳಗಿನ ಪಟ್ಟಿಯಲ್ಲಿ ವಿವರಿಸಿರುವ ಕಾಲ ವಿಷಯ ಕ್ರಮಾನುಸಾರವಾಗಿ ಪರೀಕ್ಷೆಯು ನಡೆಯುವುದು :—

ದಿನ.	ಘಂಟೆ.	ವಿಷಯ.	ಅಂಕಗಳು.	
ಮೊದಲನೇ ದಿನ ...	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ	80	
ಎರಡನೇ ದಿನ ..	10—1	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ	100	400
	2—5	ಅದೇ ಎರಡನೇ ಪತ್ರಿಕೆ	100	
ಮೂರನೇ ದಿನ ..	10—1	ಅದೇ ಮೂರನೇ ಪತ್ರಿಕೆ	100	
	2—5	ಅದೇ ನಾಲ್ಕನೇ ಪತ್ರಿಕೆ	100	
ನಾಲ್ಕನೇ ದಿನ ..	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರೀಕರಣ	100	
ಐದನೇ ದಿನ ..	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಆರನೇ ದಿನ ..	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	100	200
	2—5	ಅದೇ ಎರಡನೇ ಪತ್ರಿಕೆ	100	

7. ಪರೀಕ್ಷಾ ವಿಷಯಗಳ ಒಂದೊಂದು ಸಮುದಾಯದಲ್ಲಿಯೂ ಪೂರ್ಣಾಂಕದಲ್ಲಿ ಶೇಕಡಾ 40ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆಯಾದಂತೆ ಭಾವಿಸಲ್ಪಡುವರು.

ಪರೀಕ್ಷಾ ವಿಷಯಗಳು ಕೆಳಗೆ ಕಾಣಿಸಿರುವಂತೆ 6 ಸಮುದಾಯಗಳಾಗಿ ಮಾಡಲ್ಪಟ್ಟಿವೆ :—

(1) I *a* ಮತ್ತು *b*	(3) I *d*.	(5) II *c*.
(2) I *c*.	(4) II *a* ಮತ್ತು *b*.	(6) III.

ತೇರ್ಗಡೆಯಾದವರೊಳಗೆ, ಒಟ್ಟು ಅಂಕ ಸಂಖ್ಯೆಯಲ್ಲಿ ಶೇಕಡಾ 60ಕ್ಕೆ ಕಡಮೆ ಇಲ್ಲದೆ ಅಂಕಗಳನ್ನು ಪಡೆದವರು ಮೊದಲನೇ ವರ್ಗದಲ್ಲಿಯೂ, ಉಳಿದವರು ಎರಡನೇ ವರ್ಗದಲ್ಲಿಯೂ ಸೇರಿಸಲ್ಪಡುವರು.

8. ಕರ್ನಾಟಕ ಪಂಡಿತ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ "ಅಪ್ಪರ್ ಸೆಕಂಡರಿ" ಅಂತಸ್ತಿನ ಉಪಾಧ್ಯಾಯನಿರ್ಣಯ ಪತ್ರಿಕಾ ಪರೀಕ್ಷೆಯೂ ಕೂಡ ಆಗಿದ್ದ ಪಕ್ಷದಲ್ಲಿ, ಕಾಲೇಜುಗಳಲ್ಲಿಯೂ ಹೈ ಸ್ಕೂಲುಗಳಲ್ಲಿಯೂ ಕನ್ನಡ ಮುನಷಿಗಳ ಕೆಲಸವನ್ನೂ, ತಾಲ್ಲೂಕು ಕನ್ನಡ ಸ್ಕೂಲಗಳಲ್ಲಿ ಹೆಡ್ಮಾಸ್ಟರುಗಳ ಕೆಲಸವನ್ನೂ ಕೊಡುವಾಗ ಇತರ ದರಖಾಸ್ತುದಾರರಿಗಿಂತ ಇವರಿಗೆ ಹೆಚ್ಚು ಪ್ರಾಮುಖ್ಯವು ಕೊಡಲ್ಪಡುವುದು.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮಾ.

ಸನ್ 1903ನೇ ಇಸವಿ ಜೂನ್ ತಿಂಗಳು ತಾರೀಖು 2.

ಸನ್ 1901ನೇ ಇಸವಿ ಆಗಸ್ಟ್ 15ನೇ ಮರ್ಕುಂ 33ನೇ ನಂಬರ್ ಗೆಜೆಟನಲ್ಲಿ ಪ್ರಾಯಿಷ್ ಆಗಿರುವ ಮೈಸೂರು ಗವರ್ನ್ಮೆಂಟ್ ಇಸ್ತಿಹಾರ್‌ನಾಮಾದಲ್ಲಿ ಇದರಡಿ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿವುಳ್ಳ ಪ್ರದೇಶಗಳನ್ನು ಸ್ಟೇಟ್ ಫಾರೆಸ್ಟಾಗಿ ಮಾಡಬೇಕೆಂದು ವುದ್ದೇಶಿಸಿರುವದರಿಂದ 1900ನೇ ಇಸವಿ XIನೇ ನಂಬರ್ ಮೈಸೂರು ಶೀಮೆಯ ಫಾರೆಸ್ಟ್ ರೆಗ್ಯುಲೇಷನ್ 5ನೇ ಸೆಕ್ಷನ್ ಅನುಸರಿಸಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ಈ ಇಸ್ತಿಹಾರ್‌ನಾಮಾ ತಾರೀಖಿಗೂ ಷೆಡ್ಯೂಲಿನಲ್ಲಿ ಕಂಡ ಚಕ್ಕುಬಂದಿಯುಳ್ಳ ಪ್ರದೇಶಗಳು ಸ್ಟೇಟ್ ಫಾರೆಸ್ಟಾಗಿ ಮಾಡಲ್ಪಟ್ಟಿರುತ್ತೆಂದು ಫಾರೆಸ್ಟ್ ರೆಗ್ಯುಲೇಷನ್ 17ನೇ ಸೆಕ್ಷನ್ ಮೇರೆ ಮುಂದೆ ಪ್ರಾಯಿಷ್ ಮಾಡಲ್ಪಡುವ ತಾರೀಖಿಗೂ ಮಧ್ಯಕಾಲದಲ್ಲಿ—

(1) ಸದರಿ ಸರಹದ್ದಿನೊಳಗೆ ಇರುವ ಯಾವ ಪ್ರದೇಶದ ಮೇಲೂ ಪರಂಪರೆಯಾಗಿ ಬರುವ ಅಥವ ಸರ್ಕಾರದ ಹುಕುಂ ಯಾ ಕಂಟ್ರಾಕ್ಟು ದೆಶೆಯಿಂದ ಹೊಂದುವ ಹಕ್ಕು ಅಥವ ಇದಕ್ಕೆ ಮುಂಚೆಯೇ ಸ್ವಾಧೀನವುಳ್ಳಂಥಾವನಿಂದ ಹೊಂದುವ ಹಕ್ಕು ಶಿವಾಯಿ ಇತರ ಯಾವ ವಿಧವಾದ ಹಕ್ಕನ್ನು ಹೊಂದಲು ನಿಷೇಧಿಸಲ್ಪಟ್ಟಿರುತ್ತೆ.

(2) ಸದರಿ ಪ್ರದೇಶಗಳಲ್ಲಿ ಸಾಗುವಳೀ ಬಗ್ಯಾಗಲಿ ಇತರ ಯಾವ ಕೆಲಸಕ್ಕಾಗಲಿ ಜಂಗಲ್ ಕತರಾಯಿಸುವದನ್ನ ನಿಷೇಧಿಸಿರುತ್ತೆ ಮತ್ತು

(3) ಸದರಿ ಸರಹದ್ದಿಗೆ ಒಳಪಟ್ಟ ಯಾವ ಪ್ರದೇಶದಲ್ಲಾಗಲಿ ಸಾಗುವಳೀ ಬಗ್ಯೆ ಅಪ್ಪಣೆ ಕೊಡುವದನ್ನ ನಿಷೇಧಿಶಿರುತ್ತೆ.

ಆದ್ದರಿಂದ ಸರಹದ್ದಿನೊಳಗೆ ಇರುವ ಯಾವ ಜಮೀನಿನಲ್ಲಾಗಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂಥಾ ಜಮೀನಿನ ಯಾವ ಫಾರೆಸ್ಟ್ ಉತ್ಪತ್ತಿಗಾದರೂ ಹಕ್ಕು ಉಳ್ಳ ತಮಾಂ ಜನಗಳು ಈ ಇಸ್ತಿಹಾರ್ ಪ್ರಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗೆ ನಮ್ಮ ರೂಬರೂಬ್ ಖುದ್ದು ಹಾಜರಾಗಿ ಅವರಿಗೆ ಇರುವ ಹಕ್ಕಿನ ಸ್ವಭಾವ ಮತ್ತು ವ್ಯಾಪ್ತಿಯನ್ನು ಕುರಿತು ಲಿಖಿತ ಮೂಲಕವಾಗಿಯಾಗಲಿ ಜುಬಾನಿಯಾಗಿ ಆಗಲಿ ತಿಳಿಸತಕ್ಕದ್ದಲ್ಲದೆ ಅಂಥಾ ಹಕ್ಕಿನ ಸಮ್ಮಂಧವಾದ ಅವರಲ್ಲಿರಬಹುದಾದ ದಾಖಲಾತುಗಳನ್ನು ಹಾಜರ್ಮಾಡತಕ್ಕದ್ದಿದೆ.

ಈ ಇಸ್ತಿಹಾರನಲ್ಲಿ ಕಂಡ ವಾಯಿದೆಯೊಳಗೆ ತಿಳಿಯಪಡಿಸದೆ ತಪ್ಪಿಹೋದಂಥ ಹಕ್ಕುಗಳು ಷೆಡ್ಯೂಲ್‌ನಲ್ಲಿ ಕಂಡ ಪ್ರದೇಶಗಳು ಫಾರೆಸ್ಟ್ ರೆಗ್ಯುಲೇಷನ್ 17ನೇ ಸೆಕ್ಷನ್ ಮೇರೆ ಸ್ಟೇಟ್ ಫಾರೆಸ್ಟಾಗಿ ಮಾಡಿರುತ್ತೆಂದು ನೋಟಿಫಿಕೇಷನ್ ಪ್ರಾಯಿಷಾದ ನಂತರ ಊರ್ಜಿತವಾಗಲಾರವು.

ಷೆಡ್ಯೂಲ್.

ಜಿಲ್ಲೆ.	ತಾಲ್ಲೂಕು ಯ ಗ್ರಾಮ.	ಸುಮಾರು ವಿಸ್ತೀರ್ಣ.	ಪ್ಲಾಟಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಮೈಸೂರು.	ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರು ಯ ನಿಸ್ಸನಹಳ್ಳಿ ಹೋಬಳಿಗಳು.	10,479 ಎಕರೆಗಳು.	ನಾಗನಪುರ ಫಾರೆಸ್ಟಿನ Iನೇ ನಂಬರ ಬ್ಲಾಕು.	ಸ್ಥಳ—ಐನೂನು ಮಾರಿಗುಡಿಯ ಸ್ಟೇಟ್ ಫಾರೆಸ್ಟಿನ ಪೂರ್ವ ದಿಕ್ಕಿನಲ್ಲಿಯೂ ಬೇರಂಬಾಡಿ ಸ್ಟೇಟ್ ಫಾರೆಸ್ಟಿನ ಉತ್ತರ ದಿಕ್ಕಿನಲ್ಲಿಯು ಇಧೆ. ಉತ್ತರಕ್ಕೆ ಸಾಗುವಳಿಯಾದ ಗ್ರಾಮುಗಳು ಇವೆ. ಅತ್ಯಂತ ಸಮೀಪದ ಸ್ಥಳವು ಸರಗೂರು—ಬೇಗೂರು ಹೈರೋಡಿನಿಂದ 5 ಮೈಲಿ ದೂರದಲ್ಲಿಧೆ. **ಚಕ್ಕುಬಂದಿ.** ಉತ್ತರಕ್ಕೆ—ಚನ್ನಗುಂಡಿ, ಅಳಲಹಳ್ಳಿ ಮತ್ತು ಮರಬುಗಾತನಪುರ ಇವುಗಳ ಮೂರು ಬಾಂದುಗಳು ಸೇರತಕ್ಕ ಎಲ್ಲೆಯಿಂದ ಪ್ರಾರಂಭವಾಗಿ ಎಲ್ಲೆಯ ಲೈನು ಹೆಗ್ಗಡದೇವನಕೋಟೆ ತಾಲ್ಲೂಕಿನ ಮರಬುಗಾತನಪುರ, ಅಳಲಹಳ್ಳಿ ಮತ್ತು ನಂಜಿನಗೂಡು ತಾಲ್ಲೂಕಿನ ಬಂಕಹಳ್ಳಿ ಇವುಗಳ 3 ಬಾಂದುಗಳು ಸೇರುವ ಸ್ಥಳಕ್ಕೆ ಈಶಾನ್ಯದಿಕ್ಕಾಗಿ ಹೋಗುತ್ತದೆ. ಅಲ್ಲಿಂದ $4\frac{1}{2}$ ಫರ್ಲಾಂಗುಗಳ ವರಿವಿಗೆ ಈಶಾನ್ಯದಿಕ್ಕಾಗಿ ಹೋಗಿ ತರುವಾಯ ಹೆಗ್ಗಡದೇವನಕೋಟೆ ತಾಲ್ಲೂಕಿನ ಮರಬುಗಾತನಪುರ, ನಂಜಿನಗೂಡು ತಾಲ್ಲೂಕಿನ ಕೋಡಕಲ್ಲು ಮತ್ತು ಬಂಕಹಳ್ಳಿ ಇವುಗಳ 3 ಬಾಂದುಗಳು ಸೇರುವ ಸ್ಥಳದ ವರಿವಿಗೆ ನಂಜಿನಗೂಡು ತಾಲ್ಲೂಕಿನ ಬಂಕಹಳ್ಳಿಯ ಎಲ್ಲೆಯನ್ನು ಅನುಸರಿಸಿ ಕೇವಲ ಪೂರ್ವದಿಕ್ಕಾಗಿ ಹೋಗುತ್ತದೆ. ಪೂರ್ವಕ್ಕೆ—ಕಲ್ಲಹಳ್ಳಿ ಕೆರೆಯ ಸಮೀಪದಲ್ಲಿರುವ ಸರ್ವೆ ಎಲ್ಲೆಯ ಕಲ್ಲಿನವರಿವಿಗೆ ನಂಜಿನಗೂಡು ತಾಲ್ಲೂಕಿನ ಕೋಡಕಲ್ ಗ್ರಾಮದ ಸರ್ವೆಯಾದ ಮತ್ತು ಹದ್ದು ವಿಂಗಡಿಸಲ್ಪಟ್ಟ ಪಶ್ಚಿಮ ಎಲ್ಲೆ ಮತ್ತು ಗುಂಡ್ಲುಪೇಟೆ ತಾಲ್ಲೂಕಿನ ಬೇರಂಬಾಡಿ ಸ್ಟೇಟ್ ಫಾರೆಸ್ಟಿನ ಪಾಕು ಮಾಡಿದ ಉತ್ತರ ಎಲ್ಲೆ. ದಕ್ಷಿಣಕ್ಕೆ—ಈ ಸ್ಥಳದಿಂದ ಲೈನು ವಾರಂಚಿನ ಹಳ್ಳವು ನುಗು ನದಿಯುನ್ನು ಸೇರುವ ಸ್ಥಳದ ವರಿವಿಗೆ ಬೇರಂಬಾಡಿ ಸ್ಟೇಟ್ ಫಾರೆಸ್ಟಿನ ಪಾಕು ಮಾಡಿದ ಮತ್ತು ಸರ್ವೆಯಾದ ಉತ್ತರ ಎಲ್ಲೆಯನ್ನು ಅನುಸರಿಸಿ ಹೋಗುತ್ತದೆ. ಪಶ್ಚಿಮಕ್ಕೆ—ಈ ಸ್ಥಳದಿಂದ ಲೈನು ನುಗು ನದಿಯನ್ನು ಅನುಸರಿಸಿ ಹೆಬ್ಬಳ್ಳವು ಈ ನದಿಯನ್ನು ಸೇರತಕ್ಕ ಸ್ಥಳದ ವರಿವಿಗೆ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ಆಗ್ನೇಯದ ಪೂರ್ವದಿಕ್ಕಾಗಿ ವಡೇರಹಳ್ಳಿಯ ಸರ್ವೆ ನಂ. 1ರ ನೈರುತ್ಯ ಮೂಲಿಗೆ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ಆಗ್ನೇಯದ ಪೂರ್ವದಿಕ್ಕಾಗಿ ವಡೇರಹಳ್ಳಿ, ಹಿರೇಹಳ್ಳಿ ಮತ್ತು ಬರಗಿಹಳ್ಳಿ ಗ್ರಾಮುಗಳ 3 ಬಾಂದುಗಳು ಸೇರುವ ಸ್ಥಳದ ವರಿವಿಗೆ ಹೋಗುತ್ತದೆ. ಅಲ್ಲಿಂದ 5 ಫರ್ಲಾಂಗುಗಳ ದೂರ ಈಶಾನ್ಯದ ಪೂರ್ವದಿಕ್ಕಾಗಿ ಹಿರೇಹಳ್ಳಿ ಮತ್ತು ಬರಗಿ ಇವುಗಳ ಎಲ್ಲೆ ವುದ್ದಕ್ಕೂ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ವಾಯುವ್ಯ ದಿಕ್ಕಾಗಿ ಬರಗಿ, ಮೂಗುತನಮೂಲೆ ಮತ್ತು ಚನ್ನಗುಂಡಿ ಗ್ರಾಮುಗಳ 3 ಬಾಂದುಗಳು ಸೇರುವ ಸ್ಥಳದ ವರಿವಿಗೆ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ಈಶಾನ್ಯ ದಿಕ್ಕಾಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕಕ್ಕು ಬಂದಿ.
ಮೈಸೂರು.	ನಂಜನಗೂಡು ತಾಲ್ಲೂಕು ಹುರ ಹೋಬಳಿ.	9,271 ಎಕರೆಗಳು.	ನಾಗನಪುರ ಫಾರೆಸ್ಟಿನ IIನೇ ನಂಬರು ಬ್ಲಾಕು.	ಸ್ಥಳ.—ನಂಜಿನಗೂಡು ತಾಲ್ಲೂಕಿನ ಆಗ್ನೇಯ ಭಾಗದಲ್ಲಿ ಇರುವ ಸರಗೂರು-ಬೇಗೂರು ಹೈರೋಡಿನ ದಕ್ಷಿಣ ದಿಕ್ಕಿನಲ್ಲಿಯೂ ಮತ್ತು ಬೇರಂಬಾಡಿ ಸ್ಟೇಟ್ ಫಾರೆಸ್ಟಿನ ... ದಿಕ್ಕಿನಲ್ಲಿಯೂ ಇದೆ. **ಚಕಕ್ಕುಬಂದಿ.** ಉತ್ತರಕ್ಕೆ.—ಸರಗೂರು- ಬೇಗೂರು ರಸ್ತೆಯಲ್ಲಿ ಇರುವ ತೊಟ್ಟಿಮರದ ಬಾಂದಿನಿಂದ ಪ್ರಾರಂಭವಾಗಿ ಲೈನು ಆಗ್ನೇಯ ದಿಕ್ಕಾಗಿ ಹೆಡಿಯಾಲ ಮದುವನಹಳ್ಳಿಯ ಸರ್ವೆ ಮಾಡಲ್ಪಟ್ಟ ಗ್ರಾಮದ ಎಲ್ಲೆಯನ್ನು ಅನುಸರಿಸಿ ನಾಗನಪುರ, ಅಮುಕಹಳ್ಳಿ, ಮದುವಿನಹಳ್ಳಿ ಮತ್ತು ಹೆಡಿಯಾಲ ಇವುಗಳ ಚತುರ್ಗಡಿಗೆ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ಆಗ್ನೇಯದ ದಕ್ಷಿಣ ದಿಕ್ಕಾಗಿ ನಂಜಹಳ್ಳಿ ಮತ್ತು ಬಳ್ಳೂರು ಇವುಗಳ ಎಲ್ಲೆ ಲೈನಿನಲ್ಲಿ ಇರುವ ಸೋಪ್ಪನಪುರದ ಮಂಟಿಯ ತುದಿಗೆ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ಕೇವಲ ಪೂರ್ವ ದಿಕ್ಕಾಗಿ ಬಳ್ಳೂರು ಕೆರೆ ಏರಿಯ ಆಗ್ನೇಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಲೈನು ನೆಟ್ಟಗೆ ಈಶಾನ್ಯ ದಿಕ್ಕಾಗಿ ನಾಗನಪುರದ ಸರ್ವೆ ನಂ. 20ರ ದಕ್ಷಿಣ ಭಾಗವನ್ನು ಕೆಬ್ಬೆಕೆರೆಹಳ್ಳವು ನಡುವೆ ಹಾಯುವ ಸ್ಥಳಕ್ಕೆ ಹೋಗುತ್ತದೆ. ಅಲ್ಲಿಂದ ಲೈನು ಉತ್ತರ ದಿಕ್ಕಾಗಿ ನೆಟ್ಟಗೆ ಹಂಚೀಪುರದಿಂದ ನಾಗನಪುರಕ್ಕೆ ಹೋಗುವ ಭಂಡಿ ಜಾಡಿನಲ್ಲಿ ದೇವರಾಯಶೆಟ್ಟಿಪುರದ ಸರ್ವೆ ನಂ. 116ರಲ್ಲಿರುವ ಫಾರೆಸ್ಟಿನ ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ಲೈನು ಕೇವಲ ಪೂರ್ವದಿಕ್ಕಾಗಿ ನೆಟ್ಟಗೆ ಕೋತನಹಳ್ಳಿ ವ ದೇವರಾಯಶೆಟ್ಟಿಪುರದ ಸರ್ವೆಯಾದ ಗ್ರಾಮದ ಎಲ್ಲೆಯಲ್ಲಿರುವ ಬೈರನತಕ್ಕಲ್ ಕಟ್ಟೆಗೆ ಹೋಗುತ್ತದೆ. ಅಲ್ಲಿಂದ ಲೈನು ಈಶಾನ್ಯ ದಿಕ್ಕಾಗಿ ನೆಟ್ಟಗೆ ಕೋತನಹಳ್ಳಿ ವ ಕೋಟೆಕೆರೆಯ ಗ್ರಾಮದ ಎಲ್ಲೆಯು ಸಲೆಯುವನ ಕಟ್ಟೆ ಹಳ್ಳವನ್ನು ಮುಟ್ಟುವ ಸ್ಥಳದಲ್ಲಿ ಇರುವ ಸರ್ವೆ ಬಾಂದಿಗೆ ಹೋಗುತ್ತದೆ. ಪೂರ್ವಕ್ಕೆ.—ಗುಂಡ್ಲುಪೇಟೆ ತಾಲ್ಲೂಕಿನ ಕೋಟೆಕೆರೆ, ಮಂಚಹಳ್ಳಿ, ಸಾವಕನಹಳ್ಳಿ ವ ಅಲತೂರು ಗ್ರಾಮಗಳ ಸರ್ವೆ ಮಾಡಲ್ಪಟ್ಟ ಮತ್ತು ಹದ್ದು ವಿಂಗಡಿಸಲ್ಪಟ್ಟ ಪಶ್ಚಿಮ ಎಲ್ಲೆ. ದಕ್ಷಿಣಕ್ಕೆ.—ಬೇರಂಬಾಡಿ ಉತ್ತರ ಡಿಸ್ಟ್ರಿಕ್ಟು ಫಾರೆಸ್ಟಿನ ಮತ್ತು ಬೇರಂಬಾಡಿ ಸ್ಟೇಟ್ ಫಾರೆಸ್ಟಿನ ಸರ್ವೆ ಮಾಡಲ್ಪಟ್ಟ ಮತ್ತು ಹದ್ದು ವಿಂಗಡಿಸಲ್ಪಟ್ಟ ಉತ್ತರ ಎಲ್ಲೆ. ಪಶ್ಚಿಮಕ್ಕೆ.—ನಂಜಿನಗೂಡು ತಾಲ್ಲೂಕಿನ ಕೊಡಕಲ್, ಬಂಕಹಳ್ಳಿ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನ ಮರಬುಗಾತನಪುರ ಇವುಗಳ 3 ಬಾಂದುಗಳ ಸೇರತಕ್ಕ ಸ್ಥಳದ ವರಿವಿಗೆ ಕೊಡಕಲ್ ಗ್ರಾಮದ ಸರ್ವೆ ಮಾಡಲ್ಪಟ್ಟ ವ ಹದ್ದು ವಿಂಗಡಿಸಲ್ಪಟ್ಟ ಪಶ್ಚಿಮ ಎಲ್ಲೆ ಅಲ್ಲಿಂದ ಫಾರೆಸ್ಟಿನ ಎಲ್ಲೆ ಗುರ್ತಿನ ವರಿವಿಗೆ ಹೆಗ್ಗಡದೇವನಕೋಟೆ ತಾಲ್ಲೂಕಿನ ಮರಬುಗಾತನಪುರದ ಉತ್ತರ ಎಲ್ಲೆಯಲ್ಲಿ 3 ಫರ್ಲಾಂಗುಗಳು. ಅಲ್ಲಿಂದ ಲೈನು ಈಶಾನ್ಯದ ಪೂರ್ವ ದಿಕ್ಕಾಗಿ ನೆಟ್ಟಗೆ ನಂಜಿನಗೂಡು ತಾಲ್ಲೂಕಿನ ಬಂಕಹಳ್ಳಿ, ಕೊಡಕಲ್ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕಿನ ಹದನೂರು ಇವುಗಳ 3 ಬಾಂದುಗಳು ಸೇರತಕ್ಕಸ್ಥಳದ ವರಿವಿಗೆ ಹೋಗುತ್ತದೆ. ಅಲ್ಲಿಂದ ಹೆಗ್ಗಡದೇವನಕೋಟೆ ತಾಲ್ಲೂಕಿನ ಹದನೂರು ಮತ್ತು ನಂಜಿನಗೂಡು ತಾಲ್ಲೂಕಿನ ವಡೆಯನಪುರ ವ ಕೊಡಕಲ್ ಇವುಗಳ 3 ಬಾಂದುಗಳು ಸೇರುವ ಸ್ಥಳದ ವರಿವಿಗೆ ಕೊಡಕಲ್ಲಿನ ಸರ್ವೆ ಮಾಡಲ್ಪಟ್ಟ ವ ಹದ್ದು ವಿಂಗಡಿಸಲ್ಪಟ್ಟ ಪಶ್ಚಿಮ ಎಲ್ಲೆ. ಅಲ್ಲಿಂದ ಲೈನು ಫಾರೆಸ್ಟಿನ ಎಲ್ಲೆ ಗುರ್ತಿನ ವರಿವಿಗೆ ಕೊಡಕಲ್ಲಿನ ಸರ್ವೆ ಮಾಡಲ್ಪಟ್ಟ ವ ಹದ್ದು ವಿಂಗಡಿಸಲ್ಪಟ್ಟ ಪಶ್ಚಿಮ ಎಲ್ಲೆಯನ್ನು 4 ಫರ್ಲಾಂಗುಗಳ ದೂರ ಅನುಸರಿಸಿ ಹೋಗುತ್ತದೆ. ಅಲ್ಲಿಂದ ಲೈನು ಕೇವಲ ಉತ್ತರ ದಿಕ್ಕಾಗಿ ನೆಟ್ಟಗೆ ಹೆಡಿಯಾಲ ಮತ್ತು ಕೊಡಕಲ್ ಗ್ರಾಮಗಳ ಎಲ್ಲೆ ಲೈನಿನಲ್ಲಿರುವ ಫಾರೆಸ್ಟಿನ ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ಲೈನು ವಾಯುವ್ಯ ದಿಕ್ಕಾಗಿ 4 ಫರ್ಲಾಂಗುಗಳ ದೂರ ನೆಟ್ಟಗೆ ಹೆಡಿಯಾಲದ ಸರ್ವೆ ನಂ. 36ರ ಪಶ್ಚಿಮ ಭಾಗದಲ್ಲಿ ಇರುವ ಫಾರೆಸ್ಟಿನ ಎಲ್ಲೆ ಗುರ್ತಿಗೆ ಹೋಗುತ್ತದೆ. ಈ ಸ್ಥಳದಿಂದ ಲೈನು ಹೊರಟ ಸ್ಥಳವನ್ನು ಸೇರುತ್ತದೆ.

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೋಕು ಹೋಬಳಿ ಗ್ರಾಮ.	ಸುಮಾರು ವಿಸ್ತೀರ್ಣ.	ಪ್ರಾಕೃತ ಚಿಹರು.	ಸ್ಥಳದ ಚಕ್ಕುಬಂದಿ.
ಮೈಸೂರು.	ಹುಣಸೂರು ತಾಲ್ಲೋಕು ಬಿಳಿಕೆರೆ ಹೋಬಳಿ.	3,489 ಎಕರೆ, 2 ಗುಂಟೆ.	ಅರಣ್ಯ ಮತ್ತು ಕೃಷಿ ಪ್ರಾಂತ್ಯ.	ಸ್ಥಳ—ಮೈಸೂರು ಡಿಸ್ಟ್ರಿಕ್ಟು ಹುಣಸೂರು ತಾಲ್ಲೂಕಿನಲ್ಲಿ 99 ಮತ್ತು 101ನೇ ಮೈಲಿ ಕಲ್ಲುಗಳ ಮಧ್ಯೆ ಮೈಸೂರು—ಹುಣಸೂರು ಹೈರೋಡಿನ ದಕ್ಷಿಣ ದಿಕ್ಕಿನಲ್ಲಿದೆ. **ಚಕ್ಕುಬಂದಿ.** ಉತ್ತರಕ್ಕೆ—ಮೈಸೂರು—ಹುಣಸೂರು ಹಳೇ ಹೈರೋಡಿನಲ್ಲಿರುವ ಕುಪ್ಪೆಕೊಳಗಟ್ಟ ಗ್ರಾಮದ ಸರ್ವೆ ನಂ. 84ರ ಮೂರು ಬಾಂದುಗಳು ಸೇರತಕ್ಕ ಸ್ಥಳದ ವಾಯುವ್ಯ ಮೂಲೆಯಿಂದ ಹೊರಟು ಲೈನು ಪೆಚ್ಚೆಹಳ್ಳ ಸೇತುವೆ ಮತ್ತು 99ನೇ ಮೈಲಿ ಕಲ್ಲಿನ 4ನೇ ಫರ್ಲಾಂಗಿನ ಸಮೀಪದಲ್ಲಿರುವ ಮಲ್ಲಿನಾಥಪುರದ ಸರ್ವೆ ನಂ. 67ರ ಈಶಾನ್ಯ ಮೂಲೆಯ ಬಾಂದಿನವರಿಗೆ ಮೇಲ್ಕಂಡ ಹಳೇ ರಸ್ತೆಯನ್ನು ಅನುಸರಿಸಿ ಹೋಗುತ್ತದೆ. ಪೂರ್ವಕ್ಕೆ—ಈ ಆಖೈರ ಸ್ಥಳದಿಂದ ಲೈನು ಮಲ್ಲಿನಾಥಪುರದ ಸರ್ವೆ ನಂ. 67ರ ಪೂರ್ವ ದಿಕ್ಕಿನ ಉದ್ದಕ್ಕೂ ಅದರ ಆಗ್ನೇಯ ಮೂಲೆ ಬಾಂದಿನ ವರಿವಿಗೆ ಹೋಗುತ್ತದೆ. ಅಲ್ಲಿಂದ ಸರ್ವೆ ನಂ. 46ರ ವಾಯುವ್ಯ ಮೂಲೆಯ ಬಾಂದಿಗೆ ನೆಟ್ಟಗೆ ಹೋಗುತ್ತದೆ. ಅಲ್ಲಿಂದ ಅದೇ ನಂಬರಿನ ಪಶ್ಚಿಮ ದಿಕ್ಕಿನ ಉದ್ದಕ್ಕೂ ಅದರ ನೈರುತ್ಯ ಮೂಲೆಯ ಬಾಂದಿನ ವರಿವಿಗೆ ಹೋಗುತ್ತದೆ. ಅಲ್ಲಿಂದ ಮಲ್ಲಿನಾಥಪುರದ ಸರ್ವೆ ನಂ. 47 ಮತ್ತು ಜರ್ಹಳ್ಳಿಯ ಸರ್ವೆ ನಂ. 66 ಇವುಗಳ ಮಧ್ಯೆ ನೆಟ್ಟಗೆ ಜರ್ಹಳ್ಳಿ, ಗಾಗೇನಳ್ಳಿ ಮತ್ತು ದಲಳು ಗ್ರಾಮಗಳ ಮೂರುಬಾಂದುಗಳು ಸೇರತಕ್ಕ ಸ್ಥಳದಿಂದ 4 ಫರ್ಲಾಂಗುಗಳಲ್ಲಿರುವ ಜರ್ಹಳ್ಳಿ ಗ್ರಾಮದ ದಕ್ಷಿಣ ಎಲ್ಲೆಯಲ್ಲಿನ 1ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ದಕ್ಷಿಣಕ್ಕೆ—ಈ ಆಖೈರ ಸ್ಥಳದಿಂದ ಲೈನು ಗಾಗೇನಹಳ್ಳಿಯ ಸರ್ವೆ ನಂ. 118 ವ 80 ಇವುಗಳ ಮಧ್ಯೆ ಮೈಸೂರಿಂದ ಕೊಡಗುಗೆ ಹೋಗುವ ಯೋಚಿಸಲ್ಪಟ್ಟ ರೈಲ್ವೆ ಲೈನಿನ ಸಂಗಡ ಕುಪ್ಪೆಕೊಳಗಟ್ಟ ಗ್ರಾಮದ ಸರ್ವೆ ನಂ. 21, 12, 84, 89 ಮತ್ತು ಗಾಗೇನಹಳ್ಳಿ ಗ್ರಾಮದ ಸರ್ವೆ ನಂ. 53, 80 ಇವುಗಳ ಮೂರು ಬಾಂದುಗಳು ಸೇರತಕ್ಕ ಸ್ಥಳದ ಪೂರ್ವ ದಿಕ್ಕಿಗೆ 2½ ಫರ್ಲಾಂಗುಗಳಲ್ಲಿರುವ 2ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ಮೇಲ್ಕಂಡ ಮೂರು ಬಾಂದುಗಳು ಸೇರತಕ್ಕ ಸ್ಥಳಕ್ಕೆ ನೆಟ್ಟಗೆ ಹೋಗುತ್ತದೆ. ಅಲ್ಲಿಂದ ನೈರುತ್ಯ ದಿಕ್ಕಾಗಿ ಹೊಡದುಹೋದ ಮುತ್ತಾಯನ ಕಟ್ಟೆಗೂ ಮತ್ತು ಭಂಡಿ ಜಾಡು ಗಾಗೇನಹಳ್ಳಿಯ ಪಶ್ಚಿಮ ಎಲ್ಲೆಯನ್ನು ನಡುವೆ ಹಾಯುವ ಸ್ಥಳದಲ್ಲಿರುವ 3ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ಪಶ್ಚಿಮ ದಿಕ್ಕಾಗಿ ಹಾಲೆಪುರದ ಪಶ್ಚಿಮ ಎಲ್ಲೆಯಲ್ಲಿ 2 ಕಲ್ಲಿನ ಬಾಂದುಗಳು ಹಾಕಿದ ಸ್ಥಳದಲ್ಲಿರುವ 4ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ಪಶ್ಚಿಮಕ್ಕೆ—ಈ ಆಖೈರ ಸ್ಥಳದಿಂದ ಬನ್ನಿಕುಪ್ಪೆ, ಹಾಲೆಪುರ ಮತ್ತು ಕುಪ್ಪೆಕೊಳಗಟ್ಟ ಇವುಗಳ ಮೂರು ಬಾಂದುಗಳು ಸೇರತಕ್ಕ ಸ್ಥಳದ ವರಿವಿಗೆ ಹಾಲೆಪುರದ ಸರ್ವೆ ಆದ ಪಶ್ಚಿಮ ಎಲ್ಲೆ ಅಲ್ಲಿಂದ ಕುಪ್ಪೆಕೊಳಗಟ್ಟದ ಸರ್ವೆಯಾದ ಪಶ್ಚಿಮ ಎಲ್ಲೆ ಉದ್ದಕ್ಕೂ ಮೇಲ್ಕಂಡ ಮೂರು ಬಾಂದುಗಳು ಸೇರತಕ್ಕ ಸ್ಥಳದಿಂದ 73 ಸರಪಣಿಗಳಲ್ಲಿರುವ 5ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ನೆಟ್ಟಗೆ ಈಶಾನ್ಯದಿಕ್ಕಾಗಿ ಕುಪ್ಪೆಕೊಳಗಟ್ಟದ ಸರ್ವೆ ನಂ. 21 ವ 12 ಇವುಗಳ ಮಧ್ಯೆ ಸರ್ವೆ ನಂ. 17ರ ಆಗ್ನೇಯ ಮೂಲೆ ಬಾಂದಿಗೆ ಹೋಗುತ್ತದೆ. ಅಲ್ಲಿಂದ 42 ಸರಪಣಿಗಳು ನೆಟ್ಟಗೆ ಈಶಾನ್ಯ ದಿಕ್ಕಾಗಿ ಗಾಗೇನಹಳ್ಳಿಯಿಂದ ಕುಪ್ಪೆಕೊಳಗಟ್ಟಗೆ ಹೋಗುವ ಭಂಡಿ ಜಾಡಿನಲ್ಲಿರುವ 6ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ನೆಟ್ಟಗೆ ಈಶಾನ್ಯ ದಿಕ್ಕಾಗಿ 7ನೇ ನಂಬರ್ ಫಾರೆಸ್ಟು ಎಲ್ಲೆ ಗುರ್ತಿಗೆ ಹೋಗುತ್ತದೆ. ಅಲ್ಲಿಂದ ಉತ್ತರ ದಿಕ್ಕಾಗಿ ಕುಪ್ಪೆಕೊಳಗಟ್ಟ ಗ್ರಾಮದ ಸರ್ವೆ ನಂ. 84ರ ಪಶ್ಚಿಮ ಎಲ್ಲೆಯನ್ನು ಅನುಸರಿಸಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸರ್ಕಾರದವರು, ಅಂತಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂತಾ ಜಮೀನಿನ ಯಾವ ಫಾರೆಸ್ಟು ಉತ್ಪತ್ತೀಗಾದರೂ ಯಾವ ಮನುಷ್ಯನಿಂದ್ದಾಗಲಿ ನಮೂದಾಗುವ ಅಥವಾ ಅವನ ಪಕ್ಷವಾಗಿ ಇರುವದಾಗಿ ಹೇಳಿಕೊಳ್ಳುವ ಯಾವ ಹಕ್ಕುಗಳ ಇರುವಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತಿರ್ಮಾನಿಸಲು ಮತ್ತು ಮೇಲ್ಕಂಡ ರೆಗ್ಯುಲೇಷನಿನ IIನೇ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರಣೆವಾಗಿ ಅಮಲ್ ನಡಿಸಲು, ಅಸಿಸ್ಟೆಂಟ್ ಕಮಿಷನರಾದ ಮ|| ಬಿ. ಕೃಷ್ಣರಾಯರವರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿರಬೇಕೆಂದು ನೇಮಕರಮಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸಹಾಯ ಮಾಡಲು ತತ್ಕಾಲದ ಮೈಸೂರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರು ಸರ್ಕಾರದ ತರ್ಫನಲ್ಲಿ ಹಾಜರು ಇರಬೇಕೆಂತಲೂ ಆಜ್ಞಾಪಿಸಿರುತ್ತಾರೆ.

ಬಿ. ಕೃಷ್ಣರಾವ್,
ಅಡಿಷನಲ್ ಅಸಿಸ್ಟೆಂಟ್ ಕಮಿಷನರ್, ಮೈಸೂರು ಡಿಸ್ಟ್ರಿಕ್ಟು.

ತಾರೀಖು 4ನೇ ಜೂನ್ 1903.

ಫಾರೆಸ್ಟ್ ಸೆಟ್ಲ್‌ಮೆಂಟ್ ಮೈಸೂರು ಡಿಸ್ಟ್ರಿಕ್ಟು ಬೇರಂಬಾಡಿ ಪೂರ್ವ ಬಡಾವಣೆ, ತಾಲ್ಲೂಕು ಗುಂಡ್ಲುಪೇಟೆ.

ಸನ್ 1900ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಸನ್ 1901ನೇ ಇಸವಿ ಆಗಸ್ಟ್ 29ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರೆಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕು, 1901ನೇ ಆಗಸ್ಟ್ ಮಾಹೆ 29ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದೃಶ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ತಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

2. ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಇವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

3. ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

4. ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ತಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೌಜುಬಾನಿಯಿಂದಾಗಲೀ ಅರ್ಜಿ ಮೂಲಕವಾಗಿಯಾಗಲಿ, ಮನವಿ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಹಾಜರ್ಮಾಡತಕ್ಕದ್ದಿಧೆ.

5. ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆವೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯಲ್ಲಿ ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನವಿಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಮೈಸೂರು.	ಗುಂಡ್ಲುಪೇಟೆ ತಾಲ್ಲೂಕು ಕೂತನೂರು ಹೋಬಳಿ.	750 ಎಕರೆಗಳು.	ಬೇರಂಬಾಡಿ ಪೂರ್ವ ಬಡಾವಣೆ.	ಸ್ಥಳ.—ಮುಮ್ಮೂಲೆ ಯಾಕಾರವಾಗಿರುವ ಪ್ರದೇಶವು ಗುಂಡ್ಲುಪೇಟೆ ತಾಲ್ಲೂಕು ಕೂತನೂರು ಹೋಬಳಿ ಬೇರಂಬಾಡಿ ಗ್ರಾಮದ ದಕ್ಷಿಣ ದಿಕ್ಕಿನಲ್ಲಿರುವ ಬೇರಂಬಾಡಿ ದಕ್ಷಿಣ ಡಿಸ್ಟ್ರಿಕ್ಟು ಫಾರೆಸ್ಟೆಂದು ಕರಿಯಲ್ಪಟ್ಟ ವಿಶಿಷ್ಟ ಪ್ರದೇಶವು ಪೊಳಿತವಾಗಿರುತ್ತೆ. **ಚಕ್ಕುಬಂದಿ.** ಉತ್ತರಕ್ಕೆ—ಬೇರಂಬಾಡಿ ಗ್ರಾಮ, ಬೇರಂಬಾಡಿ ದಕ್ಷಿಣ ಡಿಸ್ಟ್ರಿಕ್ಟು ಫಾರೆಸ್ಟು ವ ಬೇರಂಬಾಡಿ ದಕ್ಷಿಣ ಸ್ಟೇಟ್ ಫಾರೆಸ್ಟ್ ಈ ಊರುಗಳ ಮೂರು ಬಾಂದುಗಳು ಚಿಕ್ಕ ನೀರವಸ್ತಿ ಹಳ್ಳದಲ್ಲಿ ಸೇರತಕ್ಕ ಸ್ಥಳದಿಂದ ಲೈನು ಪ್ರಾರಂಭವಾಗಿ ನೆಟ್ಟಗೆ ಈಶಾನ್ಯದ ಪೂರ್ವ ದಿಕ್ಕಾಗಿ ಹೊರಟು ಬೇರಂಬಾಡಿ ವ ಲಕ್ಕಿಪುರ ಗ್ರಾಮಗಳು ಮತ್ತು ಬೇರಂಬಾಡಿ ದಕ್ಷಿಣ ಡಿಸ್ಟ್ರಿಕ್ಟು ಫಾರೆಸ್ಟ್ ಇವುಗಳ ಮೂರು ಬಾಂದುಗಳು ಸೇರತಕ್ಕ ಸ್ಥಳದವರಿಗೆ ಬೇರಂಬಾಡಿ ಗ್ರಾಮದ ದಕ್ಷಿಣ ಎಲ್ಲೆಯನ್ನು ಅನುಸರಿಸಿ ಹೋಗುತ್ತದೆ. ಪೂರ್ವಕ್ಕೆ—ಈ ಸ್ಥಳದಿಂದ ಲೈನು ನೆಟ್ಟಗೆ ಕೇವಲ ದಕ್ಷಿಣ ದಿಕ್ಕಾಗಿ ಲಕ್ಕಿಪುರದ ಪಶ್ಚಿಮ ಎಲ್ಲೆಯ ವುದ್ದಕ್ಕು ಲಕ್ಕಿಪುರ—ಕನ್ನೆಗಾಲ ಗ್ರಾಮಗಳು ಬೇರಂಬಾಡಿ ದಕ್ಷಿಣ ಸ್ಟೇಟ್ ಫಾರೆಸ್ಟ್ ಮತ್ತು ದಕ್ಷಿಣ ಡಿಸ್ಟ್ರಿಕ್ಟು ಫಾರೆಸ್ಟ್ ಇವುಗಳ ಚತುರ್ಗಡಿ ಬಾಂದುಗಳವರಿಗೆ ಹೋಗುತ್ತದೆ. ದಕ್ಷಿಣ-ಪಶ್ಚಿಮಕ್ಕೆ—ಅಲ್ಲಿಂದ ಲೈನು ನೆಟ್ಟಗೆ ವಾಯುವ್ಯ ದಿಕ್ಕಾಗಿ ಬೇರಂಬಾಡಿ ಸ್ಟೇಟ್ ಫಾರೆಸ್ಟಿನ ಸರ್ವೆಯಾದ ಮತ್ತು ಹದ್ದು ವಿಂಗಡಿಸಲ್ಪಟ್ಟ ಎಲ್ಲೆಯು ಉದ್ದಕ್ಕು ಹೋಗಿ ಹೊರಟ ಸ್ಥಳಗಳನ್ನು ಸೇರುತ್ತದೆ.

ತಾರೀಖು 4ನೇ ಜೂನ್ 1903.

ಫಾರೆಸ್ಟು ಸೆಟ್ಲ್ಮೆಂಟ್, ಮೈಸೂರು ಡಿಸ್ಟ್ರಿಕ್ಟು ನಾಗನಾಪುರ ಫಾರೆಸ್ಟಿನ IIIನೇ ನಂಬರ್ ಬ್ಲಾಕು ಏಡಾವಣೆ, ತಾಲ್ಲೂಕು ಗುಂಡ್ಲು ಪೇಟೆ.

ಸನ್ 1900ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಸನ್ 1901ನೇ ಇಸವಿ ಆಗಸ್ಟ್ 15ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿರುವದರಿಂದ, ಈ ಇಸ್ತಿಹಾರು ಪ್ರಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಇನ್ನೊಂದು ಹೊಸಇಸ್ತಿಹಾರು ಕೊಡಲ್ಪಡುವವರಿಗೆ ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲಿ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕು 1901ನೇ ಆಗಸ್ಟ್ ಮಾಹೆ 29ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ತಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

2. ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ನ್ಯಾವ ಉದ್ದೇಶಕ್ಕಾಗಲೀ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

3. ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

4. ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ತಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವೆಜು ವಗೈರೆಗಳನ್ನು ಹಾಜರ್ಮಾಡತಕ್ಕದ್ದಿದೆ.

5. ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯಲ್ಲಿ ವಾದಿಸಲ್ಪಡುವದಿಲ್ಲವೊ ಅಂಥ ತಮಾಮ್ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯು, ತಕರಾರು ಅಂಗೀಕರಿಸಲ್ಪಡುವುದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು ವ ಹೋಬಳಿ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಮೈಸೂರು.	ಗುಂಡ್ಲು ಪೇಟೆ ತಾಲ್ಲೂಕು ರಾಘವಾಪುರ ಮತ್ತು ತೂತನೂರು ಹೋಬಳಿಗಳು	3,485 ಎಕರೆಗಳು, 12 ಗುಂಟೆಗಳು.	ನಾಗನಾಪುರ ಫಾರೆಸ್ಟಿನ IIIನೇ ನಂಬರ್ ಬ್ಲಾಕು.	ಸ್ಥಳ—ಗುಂಡ್ಲು ಪೇಟೆ ತಾಲ್ಲೂಕಿನ ಈಶಾನ್ಯ ಮೂಲೆಯಲ್ಲಿ ಸರಗೂರು—ಬೇಗೂರು ಹೈರೋಡಿನ ಉಭಯ ಪಾರ್ಶ್ವದಲ್ಲಿಯೂ ಇಧೆ. ಇದರ ಪೂರ್ವದಿಕ್ಕಿಗೆ ಗುಂಡ್ಲು ಪೇಟೆ ತಾಲ್ಲೂಕಿನ ಸಾಗುವಳಿಯಲ್ಲಿರುವ ಗ್ರಾಮಗಳು ಇವೆ. ಚಕ್ಕುಬಂದಿ. ಉತ್ತರಕ್ಕೆ—ನಂಜನಗೂಡು ತಾಲ್ಲೂಕಿನ ಭೋಗವಾಲ, ವಡಿಯನಪುರ, ಗುಂಡ್ಲು ಪೇಟೆ ತಾಲ್ಲೂಕಿನ ಯಡವನಹಳ್ಳಿ ವ ಕೋಟೆಕೆರೆ ಗ್ರಾಮಗಳು ಇವುಗಳ ಮೂರು ಬಾಂದುಗಳು ಸೇರತಕ್ಕ ಎಲ್ಲೆಯಿಂದಾ ಪ್ರಾರಂಭವಾಗಿ ಲೈನು ಆಗ್ನೇಯದ ಪೂರ್ವದಿಕ್ಕಾಗಿ ಯಡವನಹಳ್ಳಿ ವ ಕೋಟೆಕೆರೆಯ ಎಲ್ಲೆಯನ್ನು ಅನುಸರಿಶಿ ಯಡವನಹಳ್ಳಿಯ ಸರ್ವೆ ನಂಬರ್ 439 ವ 440 ಮತ್ತು ಕೋಟೆಕೆರೆಯ ಸರ್ವೆ ನಂಬರ್ 286 ಇವುಗಳ ಮೂರು ಬಾಂದು ಸೇರತಕ್ಕ ಸ್ಥಳಕ್ಕೆ ಹೋಗುತ್ತದೆ. ಅಲ್ಲಿಂದ $3\frac{3}{4}$ ಫರ್ಲಾಂಗುಗಳ ದೂರ ಕೇವಲ ಪೂರ್ವಕ್ಕೆ ಎಡವನಹಳ್ಳಿ ಮತ್ತು ಕೋಟೆಕೆರೆಯ ಎಲ್ಲೆಯ ವುದ್ದಕ್ಕೂ ಹೋಟು ಫಾರೆಸ್ಟಿನ ಎಲ್ಲೆಯ ಗುರ್ತಿಗೆ ಹೋಗುತ್ತದೆ. ಪೂರ್ವಕ್ಕೆ—ಈ ಸ್ಥಳದಿಂದ ಲೈನು ನೈರುತ್ಯದ ದಕ್ಷಿಣದಿಕ್ಕಾಗಿ ನೆಟ್ಟಗೆ ಹೋಗಿ 40ನೇ ಮೈಲಿ ಕಲ್ಲಿನ ಪೂರ್ವಕ್ಕೆ 150 ಗಜಗಳ ದೂರದಲ್ಲಿ ಸರಗೂರು—ಬೇಗೂರು ರಸ್ತೆಯನ್ನು ನಡಿವೆ ಹಾದು ಕೋಟೆಕೆರೆ, ಮಂಚಹಳ್ಳಿ, ಸಂಕನಹಳ್ಳಿ ವ ಅಲತೂರು ಜಂಗಲಿಗಳ ಮಧ್ಯೆ ಹೊರಟು ಅಲತೂರು ವ ದೇಷೀಪುರ ಗ್ರಾಮಗಳ ಎಲ್ಲೆಯಲ್ಲಿರುವ ಅಲತೂರಿನ ಸರ್ವೆ ನಂಬರ್ 150 ವ 149 ಇವುಗಳ ಸರ್ವೆ ಬಾಂದುಗಳಿಗೆ ಹೋಗುತ್ತದೆ. ದಕ್ಷಿಣಕ್ಕೆ—ಅಲ್ಲಿಂದ ಅಲತೂರು ವ ದೇಷೀಪುರ ಗ್ರಾಮಗಳು, ಗುಂಡ್ಲು ಪೇಟೆ ತಾಲ್ಲೂಕಿನ ಬೇರಂಬಾಡಿ ವುತ್ತರ ಡಿಸ್ಟ್ರಿಕ್ಟು ಫಾರೆಸ್ಟು ಮತ್ತು ನಂಜನಗೂಡು ತಾಲ್ಲೂಕಿನ ನಾಗನಾಪುರ ಇವುಗಳ ಚತುರ್ಗಡಿಯ ವರಿವಿಗೆ ಅಲತೂರು ವ ದೇಷೀಪುರ ಗ್ರಾಮಗಳ ಎಲ್ಲೆಯ ವುದ್ದಕ್ಕೂ ಲೈನ್ ಪಶ್ಚಿಮದಿಕ್ಕಾಗಿ ನೆಟ್ಟಗೆ ಹೋಗುತ್ತದೆ. ಪಶ್ಚಿಮಕ್ಕೆ—ಹೊರಟ ಸ್ಥಳದವರಿವಿಗೆ ನಂಜನಗೂಡು ತಾಲ್ಲೂಕಿನ ನಾಗನಪುರ, ತೊತನಹಳ್ಳಿ, ಭೋಗವಾಲ ವ ವಡಿಯನಪುರ ಈ ಗ್ರಾಮಗಳ ಸರ್ವೆಯಾದ ಮತ್ತು ಹದ್ದು ವಿಂಗಡಿಸಲ್ಪಟ್ಟ ಪೂರ್ವ ಎಲ್ಲೆಗಳು.

ತಾರೀಖು 4ನೇ ಜೂನ್ 1903.

ಫಾರೆಸ್ಟ್ ಸೆಟ್ಲಮೆಂಟ್, ಮೈಸೂರು ಡಿಸ್ಟ್ರಿಕ್ಟ್.

ಬೇರಂಬಾಡಿ ಈಶಾನ್ಯ ಬಡಾವಣೆ, ತಾಲ್ಲೂಕು ಗುಂಡ್ಲುಪೇಟೆ.

ಸನ್ 1900ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಸನ್ 1901ನೇ ಆಗಸ್ಟ್ 29ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟ ಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚಯಿಸ ಲ್ಪಟ್ಟಿಧೆಯಾದ್ದರಿಂದ, ಈ ಇಸ್ತಿಹಾರು ಪ್ರಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರೆಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1901ನೇ ಆಗಸ್ಟ್ ಮಾಹೆ 29ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ ಅಥವಾ ಪೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸ ಲ್ಪಟ್ಟಿರುವ ದಾನ, ದೃಶ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಿಗೆ ಬರೆದುಕೊಂಡು ಲಿಖಿತ ಮೂಲಕವಾದ ಅಪ್ಪಣೆ ಪಡದುಕೊಳ್ಳತಕ್ಕದ್ದು.]

2. ಸದರೀ ಪ್ರದೇಶದಲ್ಲಿ ಯಾವಕಡೆಯಲ್ಲೂ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲೀ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸ ರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

3. ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪ ಡುವದಿಲ್ಲವು.

4. ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿಧೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ, ತಮ್ಮ ತಮ್ಮ ಹಕ್ಕುಗಳ ಸ್ವ ಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾ ಗಲೀ, ಅರ್ಜಿ ಮೂಲಕವಾಗಿಯಾಗಲೀ, ವ-ನಿವ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾ ಗಬಹುದಾದ ದಸ್ತೈವಜು ವಗೈರೆಗಳನ್ನು ಹಾಜರ್ಮಾಡತಕ್ಕದ್ದಿಧೆ.

5. ಫಾರೆಸ್ಟ್ ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿ ಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆವೊ ಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯಲ್ಲಿ ವಾದಿಸಲ್ಪಡುವದಿಲ್ಲವೊ ಅಂಥಾ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ.	ಸುಮಾರು ವಿಸ್ತೀರ್ಣ.	ಕಾಡಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಮೈಸೂರು.	ಗುಂಡ್ಲುಪೇಟೆ ಕೂತನೂರು ಹೋಬಳಿ.	5,916 ಎಕರೆಗಳು ವ 23 ಗುಂಟೆಗಳು.	ಬೇರಂಬಾಡಿ ಈಶಾನ್ಯ ಬಡಾವಣೆ.	ಸ್ಥಳ—ಪ್ರದೇಶವು ಗುಂಡ್ಲುಪೇಟೆ ತಾಲ್ಲೂಕು ಕೂತನೂರು ಹೋಬಳಿಯಲ್ಲಿರುವ ಬೇರಂ ಬಾಡಿ ಉತ್ತರ ಡಿಸ್ಟ್ರಿಕ್ಟ್ ಫಾರೆಸ್ಟ್ ಸರ್ವೆ ನಂಬರ್ 1 ಮತ್ತು 2 ಮತ್ತು ಮ ದ್ದೂರು, ಚೆನ್ನಮಲ್ಲಪುರ, ಬರಗಿ ವ ದೇಷೀಪುರ ಇವುಗಳ ಪಶ್ಚಿಮಭಾಗಗಳಂದ ಫಾ ರೆಸ್ಟು ಕ್ಲಾಸ್ಬೈತ್ ಯೆಂದು ಕರೆಯಲ್ಪಟ್ಟ ಎರಡು ಅಮಾನಿ ಡಿಸ್ಟ್ರಿಕ್ಟು ಫಾರೆಸ್ಟುಗಳ ಪ್ರದೇಶಗಳು ಪಳಿತವಾಗಿರುತ್ತೆ. ಚಕ್ಕುಬಂದಿ. ಉತ್ತರಕ್ಕೆ—ನಂಜಿನಗೂಡು ತಾಲ್ಲೂಕು ನಾಗನಾಪುರದ ಕಿರುಕೋಣಪೆಟ್ಟ ಗುಂಡ್ಲುಪೇಟೆ ತಾಲ್ಲೂಕಿನಲ್ಲಿರುವ ಬೇರಂಬಾಡಿ ಉತ್ತರ ಸ್ಟೇಟು ಫಾರೆಸ್ಟು ಮತ್ತು ಬೇರಂಬಾಡಿ ಉ ತ್ತರ ಡಿಸ್ಟ್ರಿಕ್ಟು ಫಾರೆಸ್ಟಿನ ಸರ್ವೆ ನಂಬರ್ 2 ಇವುಗಳ ಮೂರು ಬಾಂದುಗಳು ಸೇರ ತಕ್ಕ ಸ್ಥಳದಿಂದ ಲೈನು ಪ್ರಾರಂಭವಾಗಿ ನಾಗನಾಪುರದ ಹದ್ದು ವಿಂಗಡಿಸಲ್ಪಟ್ಟ ಮತ್ತು ಸರ್ವೆ ಆದ ದಕ್ಷಿಣ ಎಲ್ಲೆಯನ್ನು ಅನುಸರಿಸಿ ಆಗ್ನೇಯದಿಕ್ಕಾಗಿ ನಾಗನಾಪುರ ಆಲತ್ತೂರು, ದೇಷಿಪುರ ವ ಬೇರಂಬಾಡಿ ಉತ್ತರ ಡಿಸ್ಟ್ರಿಕ್ಟು ಫಾರೆಸ್ಟು (ಸರ್ವೆ ನಂ ಬರ್ 2) ಇವುಗಳ ಚತುರ್ಗಡಿಗೆ ಹೋಗುತ್ತದೆ. ಅಲ್ಲಿಂದ ಕೇವಲ ಪೂರ್ವದಿಕ್ಕಾಗಿ ಆಲತ್ತೂರು ದೇಷೀಪುರ ಗ್ರಾಮಗಳ ಹದ್ದು ವಿಂಗಡಿಸಲ್ಪಟ್ಟ ಮತ್ತು ಸರ್ವೆಯಾದ ಎಲ್ಲೆಯನ್ನು ಅನುಸರಿಸಿ ಆಲತ್ತೂರಿನ ಸರ್ವೆ ನಂಬರು 149 ವ 150 ಇವುಗಳ ಸರ್ವೆ ಬಾಂದಿಗೆ ಹೋಗುತ್ತದೆ. ಅಲ್ಲಿಂದ ನಾಲ್ಕು ಫರ್ಲಾಂಗುಗಳ ದೂರ ಪೂರ್ವ ದಿಕ್ಕಾಗಿ ಸದರಿ ಎಲ್ಲೆಯ ವೃದ್ಧಕ್ಕ ಈ ಎಲ್ಲೆಯಲ್ಲಿರುವ ಫಾರೆಸ್ಟಿನ ಎಲ್ಲೆ ಗುರ್ತಿನ ವರೆಗೂ ಹೋಗುತ್ತದೆ.

ತಾರೀಖು 6ನೇ ಜೂನ್ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ; ಈ ಕೆಳಗೆ ನಮೂದಿಸಿರುವ ಚಿತ್ರದುರ್ಗದ ಡಿಸ್ಟ್ರಿಕ್ಟಿನ ಡಿಪೋದಲ್ಲಿ ಚೌಬೀನವನ್ನು ಈ ಕೆಳಗೆ ನಮೂದಿಸಿದ ತಾರೀಖಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರಿಂದ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುವುದು. ಹರಾಜು ಮಧ್ಯಾಹ್ನ 2 ಘಂಟೆಗೆ ಷುರು ಮಾಡಲ್ಪಡುತ್ತೆ.

ಸಂಖ್ಯೆ	ಡಿಪೋ ಹೆಸರು	ಹರಾಜು ತಾರೀಖು	ಸಾಗುವಾನಿ ನಾಟಾ		ಮತ್ತಿನಾಟ		ನಂದಿನಾಟ		ಬೀಟೆನಾಟ		ಕಾಡುಜಾತಿ ನಾಟ		ಸಾಗುವಾನಿ ಬೆಲಗು		ಷರಾ
			ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	ಅ.	ಅಡಿ.	
1	ಹೊಳಲಕೆರೆ ರೈಲ್‌ಸ್ಟೇಷನ್	23–6–1903	26	879	7	171	2	77	3	73	4	131	..	...	[illegible]
2	ಹೊಳಲಕೆರೆ ಡಿಪೋ ...	24–6–1903	...	...	..	...	..	..	..	.	..	...	350	300	
													1300	..	

ಹರಾಜ್ ಷರತ್ತು :—1895ನೇ ಇಸವಿ ಏಪ್ರೆಲ್ 25ನೇ ಮರ್‍ಕ್ಕಂ ನಂಬರು 15ನೇ ಮೈಸೂರು ಗೆಜೆಟನಲ್ಲಿ ಪ್ರಾಯಿಷಾಗಿರುವ 1895ನೇ ಇಸವಿ ಮಾರ್ಚಿ 15ನೇ ಮರ್‍ಕ್ಕಂ ನಂಬರು 15229–R. F. 155—92ನೇ ನೋಟಿಫಿಕೇಷನ್ ನೋಡಬೇಕು.

ತಾರೀಖು 6ನೇ ಜೂನ್ 1903

1. ಚಿತ್ರದುರ್ಗದ ಡಿಸ್ಟ್ರಿಕ್ಟು ಬಾಬತು ಫಾರೆಸ್ಟು ಇಲಾಖೆ ಮಾರ್ಫತ್ತು ಜಮಾವಣೆಯಾಗಿ ಈ ಕೆಳಗೆ ನಮೂದಿಸಿರುವ ಸ್ಥಳಗಳಲ್ಲಿ ಇಡಲ್ಪಟ್ಟು ಇರುವ ಪಸಾರೆ ಜಿನಸಿಯು ಈ ಕೆಳಗೆ ನಮೂದಿರುವ ಸ್ಥಳ ತಾರೀಖುಗಳ ಲ್ಲಿ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ ವರಿಂದ ಹರಾಜು ಮಾಡಲ್ಪಡುವದು. ಇಷ್ಟವುಳ್ಳವರು ರೂಬರೂಬ್ ಹಾಜರಾಗಿ ಸವಾಲು ಮಾಡಬಹುದು.

2. ಹರಾಜು ತಾರೀಖು ಲಾಗಾಯಿತು ಅಥವಾ ಮೊಬಲಗು ಕೊಟ್ಟ ಲಾಗಾಯಿತು ಈ ಸಾಮಾನುಗಳ ದೇಖರೇಖೆಯು ಹರಾಜುದಾರನಿಗೆ ಸಂಬಂಧಪಟ್ಟು ಇರುತ್ತದೆ.

3. ಹರಾಜು ಷರತ್ತುಗಳು—ಹರಾಜು ಕೈದಾದ ಮಡನೆ ಹರಾಜು ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಛಡ ಸವಾಲುದಾರನು ಡಿಪಾಜಿಟ್ ಇಡಬೇಕು. ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯಿತು ಮೂರು ದಿವಸದೊಳಗಾಗಿ ಪಾವತಿ ಮಾಡಲ್ಪಡಬೇಕು. ಹಾಗೆ ಹಾಜರ್ಮಾಡಲು ತಪ್ಪಿದರೆ ಸದರಿ ಜಿನಸಿಯನ್ನು ದುಸರಾ ಹರಾಜು ಮಾಡಿ ಲುಕ್ಸಾನಿಗೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಮತ್ತು ಡಿಪಾಜಿಟ್ ಇಟ್ಟಿರತಕ್ಕ ಮೊಬಲಗನ್ನು ಸರ್ಕಾರಕ್ಕೆ ಶೇರಿಸಿಕೊಳ್ಳಲಾಗುತ್ತೆ. ದುಸರೆ ಹರಾಜಿನಲ್ಲಿ ಮೊದಲು ಹರಾಜಿಗಿಂತ ಹೆಚ್ಚಿಗೆ ಮೊಬಲಗು ಉತ್ಪತ್ತಿಯಾದರೆ ಆ ಫಾಯಿದಾಂಶಕ್ಕೆ ಅವಲ್ ಹರಾಜುದಾರನು ಭಾಗಿಯಾಗಲಾರನು.

4. ಇನ್ನೂ ಹೆಚ್ಚಿಗೆ ತಪಶೀಲ್ ಬಗ್ಗೆ 1887ನೇ ಇಸವಿ ಸೆಪ್ಟಂಬರ್ ಮಾಹೆ 3ನೇ ಮರ್‍ಕ್ಕಂ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ ಆಗಿರುವ 30—8—1887ನೇ ಮರ್‍ಕ್ಕಂ 99ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸನ್ನು ನೋಡತಕ್ಕದ್ದು.

ಸಂಖ್ಯೆ	ಸ್ಥಳ	ಜಿನಸಿ ವಿವರ	ಅದದು ಸ್ವಲ್ಪ ಹೆಚ್ಚು ಕಡಮೆ	ಹರಾಜು ಸ್ಥಳ	ಹರಾಜು ತಾರೀಖು
1	ಹೊಳಲಕೆರೆ ..	ಗೋಂದು	247 ಮಣ	ಹೊಳಲಕೆರೆ ರೇಂಜ್ ಆಫೀಸ್	24–6–1903
	ಡಿಟೋ ...	ಅಳಲೆಕಾಯಿ	100 ಮಣ	ಡಿಟೋ	ಡಿಟೋ
	ಡಿಟೋ ...	ಹೊಂಗೆಬೀಜ	30 ಮಣ	ಡಿಟೋ	ಡಿಟೋ
	ಡಿಟೋ ...	ತಾರೆಕಾಯಿ	20 ಮಣ	ಡಿಟೋ	ಡಿಟೋ
2	ಚಿತ್ರದುರ್ಗ	ಗೋಂದು	26 ಮಣ	ಚಿತ್ರದುರ್ಗದ ಡಿಪೋ	26–6–1903
	ಡಿಟೋ ...	ಅಳಲೆಕಾಯಿ	261 ಮಣ	ಡಿಟೋ	ಡಿಟೋ

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಖಾಯಂಗುತ್ತಾ ಕೆಂಪಗೊಂಡನಹಳ್ಳಿ ಗ್ರಾಮವು 10—7—1903 ರಲ್ಲಿಯೂ ಖಾಯಂಗುತ್ತಾ ಗಂಗಪ್ಪನಹಳ್ಳಿ ಗ್ರಾಮವು 11—7—1903 ರಲ್ಲಿ ಮಾಗಡಿ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಮೆ॥ ಸಭಾಪತ್ಯೆಯ್ಯನವರಿಂದ ಬರಬೇಕಾದ ಜವಿರ್ಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಕಚೇರಿಯಲ್ಲಿ 1903ನೇ ಇಸವಿ ಜುಲೈ ತಿಂಗಳ 27ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 111—14—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜ್‌ದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರಿ, ಬಾಗಾಯಿತು.	ಜಮೀನು. ವಿಸ್ತೀರ್ಣ.		ಜಮೀನು. ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಮಾಗಡಿ	ತಾವರೆಕೆರೆ	ಬಾಯಂಗುತ್ತಾ ಚೌಡಗುಪ್ಪೆ	ವೆಂಕಟರ ಶೆ॥ ಸಭಾಪತ್ಯೆಯ್ಯನವರು	...	..	ಪೂರಾಗ್ರಾಮ							110	6	6	ಬಾಯಂಗುತ್ತಾ
													1	8	0	ನೋಟಿಸ್ ಫೀ ವಗೈರೆ
							ಪರಂಪೋಕ್	113	31	...	...	...	111	14	6	
							ಖುಷ್ಕಿ	154	0	135	14	0				ಸಾಲಿಯಾನಾ ಸರ್ಕಾರಕ್ಕೆ ಪಾವತಿಯಾಗಬೇಕಾದ್ದು.
							ತರಿ	11	4	40	0	0				
							ಬಾಗಾಯಿತು	4	22	18	0	0	101	0	0	ಬಾಯಂಗುತ್ತಾ
													2	0	0	ಮೈನರ್ ಇನಾಂ
							ಜುಮ್ಲಾ...	283	17	193	14	0	7	6	6	ಸೆಸ್
													110	6	6	

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾದಾರ್ ವೆ|| ಸಭಾಪತ್ಯಯ್ಯನವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಕಚೇರಿಯಲ್ಲಿ 1903ನೇ ಜುಲೈ 28ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಕ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—03ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯು ...ವೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 373—0—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ವೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿ ರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ವೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪ ಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ವೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ವೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ವೊಬಲಗು ಪಾವತಿ ಮಾಡಲ್ಪ ಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂ ಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವ ನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿ ಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ವೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರ ...ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವ... ...ದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸ್ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ... ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ... ...ು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

... ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗ ...ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ...ಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿ ...ಸೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ ಯಾ ಭಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ಕಂದಾಯದ ಬಾಕಿ ಮತ್ತು ಇತರೆ ಸಹತಾದ ವೊಬಲಗು.
ಮಾಗಡಿ	ತಾವರೆಕೆರೆ	ಮಾಯಗಂಗಾ ಗಂಗೇನಹಳ್ಳಿ	ವೆ|| ಸಭಾಪತ್ಯಯ್ಯನವರು	ಒಂದು ಮನೆ	ರೂ. 3,000	ಪೂರಾ ಗ್ರಾಮ	ಪರಂಪೋಕು	464	6	..	...	..	
							ಖುಷ್ಕಿ	405	28	384	0	0	
							ತರಿ	20	6	94	4	0	
							ಬಾಗಾಯತು	11	2	40	0	0	
							ಜುಮ್ಲಾ	901	2	518	4	0	
							ಖಾಯಂಗುತ್ತಾ ..						371—8—6
							ನೋಟಿಸ್ ಫೀ ವಗೈರೆ ...						1—8—0
							ಜುಮ್ಲಾ ..						373—0—6

* ಯಾ ಬಾಕೀ ಇರುವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿದಾರ್ ಸುಬ್ಬರಾಯಪ್ಪನವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಕಛೇರಿಯಲ್ಲಿ ಸನ್ 1903ನೇ ಜುಲೈ 29ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 152—6—6 ರೂಪಾಯಿ ಆಗಿರ...

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿ...

8 ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯು... ರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮ... ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪ... ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವ... ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿ... ಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.								ರೂ. ಆ. ಪೈ.
ಮಾಗಡಿ	ತಾವರೆಕೆರೆ	ಜೋಡಿ ಚಿಕ್ಕೇ ಊರು	ಸುಬ್ಬರಾಯಪ್ಪ	..	..	ಪೂರಾಗ್ರಾಮ	ಪರಂಪೋಕು	40	...	2	8	0	150 14 6 ಜೋಡಿ
							ಖುಷ್ಕಿ	504	19	204	8	11	1 8 0 ನೋಟಸ್ ಫೀ ವಗೈರೆ ಖರ್ಚು
							ತರಿ	26	28	94	11	4	
							ಬಾಗಾಯತು	6	3	24	11	3	152 6 6
							ಜುಮ್ಲಾ..	577	10	326	7	6	

* ಯಾ ಬಾಕಿ ಇರುವವರೆಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರನಾದ ಜೋಡಿ ಕೊಟ್ಟಗಾರನಹಳ್ಳಿ ಸುಬ್ಬಯ್ಯನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಮಾಗಡಿ ತಾಲ್ಲೂಕು ಕಛೇರಿಯಲ್ಲಿ ಸನ್ 1903ನೇ ಇಸವಿ ಜುಲೈ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕಡ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಪ್ಸೀಲಿನಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 29—1—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಚಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫ ನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಸರ್ವೆ ನಂಬರು.	ಜಮೀನು. ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು	ಕಂದಾಯ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ.	ಆ.	ಪೈ.	
ಮಾಗಡಿ	ಮಾಡಬಾಳ್	ಜೋಡಿ ಕೊಟ್ಟಗಾರನಹಳ್ಳಿ	ಅನಂತಯ್ಯನ ಮಗ ಸುಬ್ಬಯ್ಯ	..	ರೂ. ಆ. ಪೈ. ...	ಈ ಗ್ರಾಮದ 6 ಸರ್ವೆ ನಂಬರ್ ಜಮೀನು (ಪೈಕಿ 1⅜ ಹಿಸ್ಸೆ)	ಪರಂಬೋಕು	324	30	20	0	0	27	9	0	ಜೋಡಿ
							ಖುಷ್ಕಿ	318	39	278	14	9	0	8	0	ನೋಟಿಸ ಫೀ
							ಬಾಗಾಯತು	2	2	7	14	9	0	8	0	ಜಫ್ತಿ ಫೀ
							ತರಿ	9	28	40	3	3	0	8	0	ಹರಾಜು ಫೀ
							ಜುಮ್ಲಾ..	655	19	347	0	9	29	1	0	
							ಈಪೈಕಿ ಬಾಕಿದಾರನ 1⅜ನೇ ಹಿಸ್ಸೆಮಾತ್ರ									

* ಯಾ ಬಾಕಿ ಇರುವವರುಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಸಾಗುವಳಿಗೋಸ್ಕರ ಜಮೀನ್ ಹಿಡುವಳಿ ಹರಾಜ್.

ಇಸ್ತಿಹಾರ್.

ತಾರೀಖು 19ನೇ ಜೂನ್ 1903ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್ ಮೇರೆ ಇದರಡೀಲಿ ಕಂಡ ಶಿಡ್ಲಘಟ್ಟ ತಾಲ್ಲೂಕು ರಾಮಸಮುದ್ರ ಕೆರೆಯಿಂದ ಸಾಗುವಳಿಯಾಗುವ ಜಮೀನ್ ಹಿಡುವಳಿಯು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸರ್ಕಾರದ ಸವಾಲಿಗೆ ಮೇಲ್ಪಟ್ಟು ಆಖೈರ ಜಡ ಸವಾಲ್ ಮಾಡತಕ್ಕವರಿಗೆ ಸ್ವತ್ತು ಕೊಡಿಸಲ್ಪಡುವದು.

2. ಹರಾಜ್ ಖೈದಾದ ಕೂಡ್ಲೆ ಜಡ ಸವಾಲ್ದಾರನು ತನ್ನ ಸವಾಲ್ ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಪ್ರಕಾರ ಆಗುವ ಮೊಬಲಗನ್ನು ಠೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜ್ ಮಾಡಲ್ಪಡುವದು.

3. ಹರಾಜ್ ತಾರೀಖು ಲಾಗಾಯಿತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರಿ ರಜಾ ದಿನವಾಗಿದ್ದರೆ ಆ ತರುವಾಯ ಆಫೀಸ್ ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತಮಯಕ್ಕೆ ಪೂರ್ವವೇ ಪೂರಾ ಹರಾಜ್ ಮೊಬಲಗನ್ನ ಪಾವತಿ ಮಾಡಬೇಕು.

4. ಪೂರಾ ಹರಾಜ್ ಮೊಬಲಗನ್ನು ಮೇಲ್ಕಂಡಂತೆ ಗೊತ್ತಾದ ಕಾಲದೊಳಗಾಗಿ ಪಾವತಿ ಮಾಡಲು ತಪ್ಪಿದರೆ, ಠೇವಣಿ ಮೊಬಲಗಿನಲ್ಲಿ ಹರಾಜಿನ ಖರ್ಚು ಜಾತಾ ಬಾಕಿ ಉಳಿದದ್ದನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿ ಕೊಳ್ಳಲ್ಪಡುವದಲ್ಲದೆ, ಸ್ವತ್ತು ಪುನಹ ಹರಾಜ್ ಮಾಡಲ್ಪಡುವದು. ಮತ್ತು ಹಣ ಕೊಡಲು ತಪ್ಪಿದಂಥಾ ಪುರೂ ಹರಾಜ್ದಾರನು ಸದರೀ ಸ್ವತ್ತಿಗೆ ಆಗಲಿ, ಅಥವಾ ಅಂಥಾ ಸ್ವತ್ತು ನಂತರ ಎಷ್ಟು ಮೊಬಲಗಿಗೆ ಹರಾಜ್ ಮಾಡಲ್ಪಡುವದೋ ಅಂಥಾ ಮೊಬಲಗಿನ ಯಾವ ಭಾಗಕ್ಕೇ ಆಗಲಿ, ಎಲ್ಲಾ ಹಕ್ಕನ್ನು ಹೋಗಲಾಡಿಸಿಕೊಳ್ಳುವನು ; ಆದರೆ, ಮೇಲ್ಕಂಡ ಷರತ್ತನ್ನ ಜಾರೀಗೆ ತರೋಣದರಿಂದ ವಿಶೇಷ ತೊಂದರೆ ಉಂಟಾಗುವದೆಂದು ತೋರಿಬರುವ ಸಂದರ್ಭದಲ್ಲಿ, ಡೆಪ್ಯುಟಿ ಕಮಿಷನರು ಅವಶ್ಯಕವಾದ ಶಿಫಾರಸ್ಸಿನೊಡನೆ ಗವರ್ನಮೆಂಟಿನವರ ಅಪ್ಪಣೆ ಪಡೆಯಬಹುದು. ನಂತರ ನಡೆದ ಹರಾಜಿನಲ್ಲಿ ಹುಟ್ಟಿದ ಮೊಬಲಗು ಹಣ ಕೊಡಲು ತಪ್ಪಿದಂಥಾ ಪುರೂ ಹರಾಜ್ದಾರನ ಸವಾಲ್ ಮೊಬಲಗಿಗಿಂತಲೂ ಕಮ್ಮಿಯಾದಲ್ಲಿ, ಆ ಮೇರೆ ಕಮ್ಮಿಯಾದಷ್ಟು ಮೊಬಲಗನ್ನ ಸದರೀ ಯವನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

5. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗದೆ ಇರುವ ಸಂದರ್ಭದಲ್ಲಿ ಹರಾಜ್ ಡೆಪ್ಯುಟಿ ಕಮಿಷನರ ಮಂಜೂರಾತಿಗೆ ಒಳಪಟ್ಟಿರುತ್ತೆ. ಹರಾಜ್ ಮೊಬಲಗು 50 ರೂಪಾಯಿಗಿಂತಲೂ ಕಮ್ಮಿಯಾಗಿದ್ದ ಪಕ್ಷದಲ್ಲಿ ಅಂಥಾ ಹರಾಜನ್ನ ಹದಿನೈದು ದಿವಸಗಳ ತರುವಾಯ ತಾಲ್ಲೂಕು ಅಮಲ್ದಾರ್ರೇ ಮಂಜೂರ್‌ಮಾಡಬಹುದು.

6. ಹರಾಜಿನಲ್ಲಿ ಸವಾಲ್ ಮಾಡತಕ್ಕಂಥಾವರು, ತಮ್ಮ ಸ್ವಂತಕ್ಕಾಗಿ ಸವಾಲ್ ಮಾಡುವದನ್ನೂ ; ಅಥವಾ ಮತ್ತೊಬ್ಬರ ಮುತಾಲೀಕರಾಗಿ ಸವಾಲ್ ಮಾಡುವದನ್ನೂ ತಿಳಿಸಬೇಕು. ಮತ್ತೊಬ್ಬರಿಗೋಸ್ಕರ ಸವಾಲ್‌ಮಾಡುವ ಸಂದರ್ಭದಲ್ಲಿ ಯಾರಿಗೋಸ್ಕರ ತಾವು ಮುತಾಲೀಕರಾಗಿರುವರೋ ಅಂಥಾವರ ಬರಹಮೂಲಕವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡಬೇಕು. ಹಾಗಿಲ್ಲದೆ ಇದ್ದಲ್ಲಿ ಅವರ ಸವಾಲ್‌ಗಳನ್ನು ಅಂಗೀಕರಿಸುವದಿಲ್ಲ.

7. ಹರಾಜ್ ಪೂರಾ ಮೊಬಲಗು ಪಾವತಿಯಾಗಿ ಹರಾಜು ಕಾಯಮಾದ ನಂತರ ಜಮೀನನ್ನು ಹಿಡುವಳಿಯಲ್ಲಿ ಬಿಟ್ಟು ಕೊಳ್ಳತಕ್ಕ ಬಗ್ಗೆ ಸಾಗುವಳಿ ಚೀಟಿ ಯಾನೆ ಬರಹಮೂಲಕವಾದ ಅಪ್ಪಣೆಯನ್ನ (ಲ್ಯಾಂಡ್ ರೆವಿನ್ಯೂ ರೂಲ್ಸ್ ಅಪೆಂಡಿಕ್ಸ್ "ಡಿ" ಯಲ್ಲಿ ಕಂಡ 2ನೇ ನಂಬರ್ ಫಾರಂ) ಸವಾಲ್ದಾರನು ಅಮಲ್ದಾರ್ರಿಂದ ಹೊಂದುವನು.

8. ಮೇಲ್ಕಂಡ ಮೇರೆ ಅಮಲ್ದಾರ್ರು ಕೊಡುವ ಅಪ್ಪಣೆಯು ಲ್ಯಾಂಡ್ ರೆವಿನ್ಯೂ ಕೊಡ್ XXIIIನೇ ಪ್ರಕರಣ ಪ್ರಕಾರ ಅಪ್ಪಿಲ್‌ಗಳು ಏನಾದರೂ ಆದರೆ ಅವುಗಳೆಲ್ಲಾ ವ್ಯವಸ್ಥೆಯಾಗುವ ನಿರೀಕ್ಷಣೆಮೇಲೆ ಷರತ್ ಬಂದಿಯಾಗಿರುವದೆಂದು ಎಣಿಸತಕ್ಕದ್ದು.

ತಾಲ್ಲೂಕು	ಹೋಬಳಿ	ಗ್ರಾಮ	ಸ್ವತ್ತಿನ ವಿವರ — ಜಮೀನ್ — ಸರ್ವೆ ನಂಬರು	ಬಾಬು ಖುಷ್ಕಿ, ತರೀ, ಬಾಗಾಯತು ಅಥವಾ ಕಾಫಿ	ವಿಸ್ತೀರ್ಣ	ಆಕಾರ	ಮರಗಳು ಭಾವಿಗಳು ವಗೈರೆ — ಕೂಡಿದಮಟ್ಟಿಗೂ ಕರಾರ್ವಾಕ ತಪಶೀಲ್	ಹರಾಜು ಸ್ಥಳ, ತಾರೀಖು ಮತ್ತು ಕಾಲ	ಹರಾಜ್ ನಡಿಸತಕ್ಕವರ ಹೆಸರು	ಕ್ಲುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ
1	2	3	4	5	6	7	8	9	10	11
					ಎ. ಗುಂಟೆ.	ರೂ. ಆ.				
ಶಿಡ್ಲಘಟ್ಟ.	ಸಾದಲಿ.	ದೇವಗಾನಹಳ್ಳಿ.	11	ತರೀ	0—12	2—0		ಆಯಾಯ ನಂಬರುಗಳಬಳಿ 1903ನೇ ಜುಲೈ ತಾರೀಖು 25, 26, 27, 28, 29, 30 ಈ ತಾರೀಖುಗಳಲ್ಲಿ ಪ್ರತಿ ದಿನವು ದಿವಿ 11 ಘಂಟೆ ಲಾಗಾಯಿತು 5 ಘಂಟೆ ವರಿಗೆ	ತಾಲ್ಲೂಕು ಅಮಲ್ದಾರ್ರವರ ರೂಬರೂಬು.	ಶೋಭಕೃತು ಸಾಲು ಲಾಗಾಯಿತು ಕಂದಾಯ ಕೊಡುವ ಷರತ್ತಿನಮೇಲೆಹರಾಜ್.
			12	ಡಿಟ್ಟೋ	0—20	3—8				
			29	ಡಿಟ್ಟೋ	1— 6	6—0				
			149	ಡಿಟ್ಟೋ	2—23	14—0				
			155	ಡಿಟ್ಟೋ	4—24	29—0				
			156	ಡಿಟ್ಟೋ	3—21	20—0				
			176	ಡಿಟ್ಟೋ	2—35	20—0				

ತಾಲ್ಲೂಕು	ಹೋಬಳಿ	ಗ್ರಾಮ	ಸ್ವತ್ತಿನ ವಿವರ — ಜಮೀನ್ — ಸರ್ವೆ ನಂಬರು	ಸ್ವತ್ತಿನ ವಿವರ — ಜಮೀನ್ — ಖುಷ್ಕಿ, ತರಿ, ಬಾಗಾಯಿತು ಇವುಗಳ ಪೈಕಿ	ಸ್ವತ್ತಿನ ವಿವರ — ಜಮೀನ್ — ವಿಸ್ತೀರ್ಣ	ಸ್ವತ್ತಿನ ವಿವರ — ಜಮೀನ್ — ಕಂದಾಯ	ಸ್ವತ್ತಿನ ವಿವರ — ಮರಗಳು, ಭಾವಿಗಳು, ವಗೈರೆ — ಕೊಡತಕ್ಕ ಗುತ್ತಿಗೆ ವಗೈರೆ	ಹರಾಜು ಸ್ಥಳ, ತಾರೀಖು ಮತ್ತು ಕಾಲ	ಹರಾಜ್ ನಡಸತಕ್ಕವರ ಹೆಸರು	ಸ್ವತ್ತಿನ ಬಾಬ್ತಿನಲ್ಲಿ ಸರ್ಕಾರದ ಸವಾಲ್ ಬಗ್ಗೆ ಷರ್ತುಗಳು ಏನಾದರೂ ಇದ್ದರೆ
1	2	3	4	5	6	7	8	9	10	11
					ಎ. ಗು.	ರೂ. ಆ.				
[illegible]	ಹಾಸನ.	ದೇವಗೊಂಡನಹಳ್ಳಿ.	178	ತರಿ	2—29	19—0	ಆಯಾಯ ನಂಬರುಗಳ ಪಿ 1903ನೇ ಜುಲೈ ತಾರೀಖು 25—26—27—28—29—30 ನೇ ತಾರೀಖುಗಳಲ್ಲಿ ಪ್ರತಿದಿನವೂ ದಿವ 11 ಘಂಟೆ ಆಗಾಯಿತು 5 ಘಂಟೆ ವರೆಗೆ		ತಾಲ್ಲೂಕು ಅಮಲ್ದಾರರ ಕಚೇರಿಯು	ಕೊಳ್ಳತಕ್ಕವರು ಹಾಲು ಆಗಾಯಿತು ಕಂದಾಯ ಕೊಡತಕ್ಕದ್ದು ಷರತ್ತಿನಮೇಲೆ ಹರಾಜು.
			180	ಡಿಟೋ	2—10	16—0				
			182	ಡಿಟೋ	3—38	27—0				
			183	ಡಿಟೋ	2—22	16—0				
			184	ಡಿಟೋ	2—33	19—0				
			196	ಡಿಟೋ	3—29	24—0				
			210	ಡಿಟೋ	2—37	21—0				
			211	ಡಿಟೋ	3—25	27—0				
			212	ಡಿಟೋ	2—15	17—0				
			213	ಡಿಟೋ	2—14	17—0				
			214	ಡಿಟೋ	2—8	16—0				
			215	ಡಿಟೋ	2—12	16—0				
			216	ಡಿಟೋ	2—14	16—0				
			217	ಡಿಟೋ	2—18	18—0				
			218	ಡಿಟೋ	2—5	16—0				
			219	ಡಿಟೋ	2—9	16—0				
			220	ಡಿಟೋ	2—20	19—0				
			221	ಡಿಟೋ	2—8	16—0				
			222	ಡಿಟೋ	2—10	16—0				
			223	ಡಿಟೋ	2—16	17—0				
			224	ಡಿಟೋ	2—9	16—0				
			225	ಡಿಟೋ	2—1	15—0				
			226	ಡಿಟೋ	2—1	15—0				
			227	ಡಿಟೋ	2—19	18—0				
			228	ಡಿಟೋ	3—7	22—0				
			229	ಡಿಟೋ	2—15	16—0				
			230	ಡಿಟೋ	2—18	17—0				
			231	ಡಿಟೋ	1—29	12—0				
			232	ಡಿಟೋ	2—7	14-12				
			ಪೈಕಿ	ಖುಷ್ಕಿ	0—4	0—4				
					2—11	15—0				
		ಕುರುಬರಹಳ್ಳಿ.	5	ತರಿ	0—29	4—8				
			13	ಡಿಟೋ	1—15	9—0				
			23	ಡಿಟೋ	0—22	3—8				
			24	ಡಿಟೋ	3—12	22—0				
			32	ಡಿಟೋ	2—8	14—0				
			33	ಡಿಟೋ	0—33	5—0				
			40	ಡಿಟೋ	7—18	8—12				
			ಪೈಕಿ	ತರಿ	0—27	4—4				
					8—5	13—0				
			41	ತರಿ	0—29	5—0				
			62	ಬಾಗಾ.	1—0	6—8				
			114	ತರಿ	2—28	18—0				
			116	ಡಿಟೋ	1—32	12—0				

ತಾಲ್ಲೂಕು	ಹೋಬಳಿ	ಗ್ರಾಮ	ಸ್ವತ್ತಿನ ವಿವರ — ಜಮೀನ್ — ಸರ್ವೆ ನಂಬರು	ಬಾಬು ಖುಷ್ಕಿ, ತರೀ, ಬಾಗಾಯಿತು ಅಥವಾ ಕಾಫಿ	ವಿಸ್ತೀರ್ಣ	ಆಕಾರ	ಮರಗಳು, ಭಾವಿಗಳು, ವಗೈರೆ — ಕೂಡಿದವುಟ್ಟಿಗೂ ಕರಾರ್ವಾಕಾ ತಪಶೀಲ್	ಹರಾಜು ಸ್ಥಳ, ತಾರೀಖು ಮತ್ತು ಕಾಲ	ಹರಾಜ್ ನಡಿಸತಕ್ಕವರ ಹೆಸರು	ಕ್ರುಪ್ತವಾಗಿದ್ದಲ್ಲಿ ಸರ್ಕಾರದ ಸವಾಲ್ ಮೊಬಲಗು ಮತ್ತು ಇತರ ಷರಾ
1	2	3	4	5	6	7	8	9	10	11
ಶಿಡ್ಲಘಟ್ಟ	ಸಾದಲಿ	ಕುರುಬರಹಳ್ಳಿ			ಎ. ಗು.	ರೂ. ಆ.	ಆಯಾಯ ನಂಬರುಗಳ ಬಳಿ 1903ನೇ ಜುಲೈ ತಾರೀಖು 25—26—27—28—29—30 ಈ ತಾರೀಖುಗಳಲ್ಲಿ ಪ್ರತಿದಿನವೂ ದಿವಿ 11 ಘಂಟೆ ಲಾಗಾಯಿತು 5 ಘಂಟೆವರಿಗೆ.		ತಾಲ್ಲೂಕು ಅಮಲ್ದಾರ್ರವರ ರೂಬರೂಬು	ಶೋಭಕೃತು ಸಾಲು ಲಾಗಾಯಿತು ಕಂದಾಯುಕೊಡುವ ಷರತ್ತಿನಮೇಲೆ ಹರಾಜು
			117	ತರಿ	1 - 23	10—0				
			118	ಡಿಟೋ	0—27	3 - 8				
			119	ಡಿಟೋ	2— 3	14 - 0				
			120	ಖುಷ್ಕಿ	0— 1	0 - 4				
			ಪೈಕಿ	ತರಿ	2—24	17 12				
					2—25	18—0				
			121	ಖುಷ್ಕಿ	0 — 2	0—4				
			ಪೈಕಿ	ತರಿ	1— 8	8—4				
					1—10	8 - 8				
			122	ತರಿ	1—38	14—0				
			123	ಡಿಟೋ	1—31	13—0				
			124	ಡಿಟೋ	2— 8	16—0				
			125	ಖುಷ್ಕಿ	0— 9	0—4				
			ಪೈಕಿ	ತರಿ	0—39	6-12				
					1— 8	7—0				
			126	ಖುಷ್ಕಿ	1— 1	1—4				
			ಪೈಕಿ	ತರಿ	1—27	11-12				
					2—28	13 - 0				
			127	ತರಿ	2—38	20—0				
			128	ಡಿಟೋ	2—15	16—0				
			129	ಡಿಟೋ	2— 2	15—0				
			130	ಡಿಟೋ	1—25	11—0				
			131	ಡಿಟೋ	1—27	12—0				
			132	ಡಿಟೋ	1—28	12—0				
			133	ಡಿಟೋ	2— 3	14 - 0				
			134	ಡಿಟೋ	1 —26	12—0				
			135	ಡಿಟೋ	2—22	17—0				
			136	ಡಿಟೋ	2— 6	15—0				
			137	ಡಿಟೋ	2— 8	15—0				
			138	ಡಿಟೋ	2 —23	18—0				
			139	ಡಿಟೋ	1 —29	12—0				
			140	ಡಿಟೋ	0—34	5—8				
		ಗಡಿಮಂಚೇನಹಳ್ಳಿ	107	ಖುಷ್ಕಿ	0— 7	0—4				
			ಪೈಕಿ	ತರಿ	1—23	9 12				
					1—30	10—0				

ತಾಲ್ಲೂಕು	ಹೋಬಳಿ	ಗ್ರಾಮ	ಸ್ವತ್ತಿನ ವಿವರ — ಜಮೀನ್ — ಸರ್ವೆ ನಂಬರು	ಬಾಬು ಖುಷ್ಕಿ, ತರಿ, ಬಾಗಾಯಿತು ಇವುಗಳ ಪೈಕಿ	ವಿಸ್ತೀರ್ಣ	ಆಕಾರ	ಮರಗಳು, ಭಾವಿಗಳು, ವಗೈರೆ — ಹೊಡುವುತ್ತಿಗೆ ಕಾರಾಜ್ಯ ಶಾಮೀಲ್	ಹರಾಜು ಸ್ಥಳ, ತಾರೀಖು ಮತ್ತು ಕಾಲ	ಹರಾಜ್ ನಡಿಸತಕ್ಕ ಅಧಿಕಾರಿ	ಕ್ರಯದ ಸಾಗಣೆಯಲ್ಲಿ ಸರ್ಕಾರದ ಸವಾಲ್ ಹೊಂದಿರುವ ಷರತ್ತುಗಳು ಇತರ ಷರಾ
1	2	3	4	5	6	7	8	9	10	11
					ಎ. ಗು.	ರೂ. ಆ.				
ಚಿಕ್ಕಮಗಳೂರು	ಸಾವಳಿ	ಗಡಿಮಂಚೇನಹಳ್ಳಿ	108	ತರಿ	1—32	11—0	ಆಯಾ ನಂಬರುಗಳ ಬಳಿ 1903ನೇ ಜುಲೈ ತಾರೀಖು 25—26—27—28—29—30 ಈ ತಾರೀಖುಗಳಲ್ಲಿ ಪ್ರತಿದಿನ ಬೆ|| 11 ಘಂಟೆ ಮೊದಲುಗೊಂಡು 5 ಘಂಟೆವರೆಗೆ.		ತಾಲ್ಲೂಕು ಅಮಲ್ದಾರ್ರವರ ರೂಬರೂಬು	ಕೀಳ್ಕಂಡ ಸಾಲು ಬಾಗಾಯಿತು ಕಂದಾಯ ಕೊಡುವ ಷರತ್ತಿನ ಹರಾಜು.
			109	ಡಿಟೋ	1—35	12—0				
			110	ಡಿಟೋ	1—35	12—0				
			111	ಡಿಟೋ	2—14	15—0				
			112	ಡಿಟೋ	1—15	8—5				
			113	ಡಿಟೋ	1—11	8—0				
			114	ಡಿಟೋ	1—27	10—0				
			115	ಡಿಟೋ	1—26	10—0				
			116	ಡಿಟೋ	1—26	11—0				
			117	ಡಿಟೋ	1—11	8—0				
			118	ಡಿಟೋ	1—12	8—0				
			119	ಡಿಟೋ	1—22	10—0				
			120	ಡಿಟೋ	2—12	14—0				
			121	ಖುಷ್ಕಿ	0—7	0—4				
			ಪೈಕಿ	ತರಿ	2—8	13—12				
					2—15	14—0				
			122	ಖುಷ್ಕಿ	1—4	1—8				
			ಪೈಕಿ	ತರಿ	1—11	7—8				
					2—15	9—0				
			123	ತರಿ	2—13	14—0				
			124	ಡಿಟೋ	2—8	13 8				
			ಪೈಕಿ	ಖುಷ್ಕಿ	0—13	0—8				
					2—21	14—0				
			130	ತರಿ	2—10	15—0				
			131	ಡಿಟೋ	1—21	9—0				
			136	ಡಿಟೋ	0—9	1—4				
		ಮರನಾಗೇನಹಳ್ಳಿ	45	ತರಿ	3—32	18—0				
			83	ಬಾಗಾ.	0—9	1—8				
			84	ಡಿಟೋ	0—8	1—4				
			85	ಡಿಟೋ	0—26	4—8				
			87	ತರಿ	0—6	1—0				
			88	ಬಾಗಾ.	0—13	2—0				
			ಪೈಕಿ	ತರಿ	3—5	21—0				
			94	ತರಿ	1—3	7—8				
		ಗುಂಡೇಹಳ್ಳಿ	42	ತರಿ	2—29	16—0				
			43	ಡಿಟೋ	2—31	18—0				

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರ ಡಿಸ್ಟ್ರಿಕ್ಟು ತುಮಕೂರ ತಾಲ್ಲೂಕು ಜೋಡಿ ವಡ್ಡರಹಳ್ಳಿ ಗ್ರಾಮವು 1903ನೇ ಇಸವಿ ಆಗಸ್ಟ್ ಮಾಹೆ 3ನೇ ತಾರೀಖಿನಲ್ಲಿ ತುಮಕೂರ ತಾಲ್ಲೂಕು ಕಚೇರಿ ರೂಬರೂಬ್ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆಂದು 1903ನೇ ಇಸವಿ ಜೂನ್ ತಿಂಗಳು 18ನೇ ಮರ್ಕುಂ 24ನೇ ನಂಬರ ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷ ಆಗಿ ಇಧೆ.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 19ನೇ ಜೂನ್ 1903.

1. ಕಂದಾಯದ ಬಾಕೀದಾರರಾದ ರಂಗಾಭಟ್ಟ ವಗೈರೆ ವೃತ್ತಿವಂತರಿಂದ ಅಗ್ರಹಾರ ಜಿನವಳ್ಳಿ ಗ್ರಾಮಕ್ಕೆ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ ಸನ್ 1903ನೇ ಇಸವಿ ಜೂನ್ 30ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ಆ ದಿವಸ ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ... ಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡ... ದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 190—9—2 ರೂಪಾಯಿ

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜ...ಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪ... ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾ

ಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ಸರ್ವೆ ನಂಬರ ಅಥವಾ ಬ್ಲಾಕಿನ ಹೆಸರು.	ಜಮೀನು. ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟೀಸ ಫೀ ವಗೈರೆ ಸೇರಿದ ಬಾಕೀ ಮೊಬಲಗು.			
					ರೂ. ಆ. ಪೈ.			ಎಕರೆ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಶಿವಮೊಗ್ಗ	ಬದರೆ	ಅಗ್ರಹಾರ ಬಿಣಕಿ	ರಂಗಾಚಾರ್ಯ ಜಗನ್ನಾಥ ರಾಂತಾ	...	ಗ್ರಾಮದ ಅಂದಾಜು 2,000	ಪೂರಾಗ್ರಾಮ	ಬಾಗಾಯತು	3	27	18	7	3				
							ಖುಷ್ಕಿ	815	26	299	15	1	190	9	2	
							ತರಿ	273	4	711	12	6	0	8	0	ನೋಟಿಸ ಫೀ
							ಪರಂಬೋಕ	735	11	45	15	3	0	8	0	ಇಸ್ತಿಹಾರ ಫೀ
								1827	28	1076	2	1				
						ಜೋಡಿ....	...	.	.	167						

* ಯಾ ಬಾಕೀ ಇರುವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸಿ. ನ. ರಾಯ. ಣರಾವ್,
ಫಾರ್ ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ 150.

ಮೃತಪಟ್ಟ ಟಿ. ಕುಪ್ಪಸಾಮಿಪಿಳ್ಳೆ ಮತ್ತು ಟಿ. ರಮಾಬಾಯಿ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಧಾರವಾಡದಲ್ಲಿರುವ ಸದರ್ನ ಮರಾಟ ರೈಲ್ವೆ ಯಗ್ಸಾಮಿನರ ಆಫೀಸು ಕ್ಲಾರ್ಕ್ ಟಿ ಸಭಾಪತಿಪಿಳ್ಳೆ, ಮೃತಪಟ್ಟ ಸದರೀ ಟಿ. ಕುಪ್ಪಸಾಮಿ ಪಿಳ್ಳೆಯವರಿಗೆ ಮುಖ್ಯವಾರಸ್‌ದಾರ ಆಗಬೇಕೆಂಬ ಹಕ್ಕುದಾರಿ ಮೇಲೆ ಧಾರವಾಡದಲ್ಲಿ ವಾಸಸ್ಥರಾಗಿ ಮೃತಪಟ್ಟ ಟಿ. ಕುಪ್ಪಸಾಮಿಪಿಳ್ಳೆ ಮತ್ತು ಟಿ. ರಮಾಬಾಯಿ ಯವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಟಿ. ಸಭಾಪತಿ ಪಿಳ್ಳೆಯವರ ಅರ್ಜಿಯನ್ನು 1903ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಟಿ. ಕುಪ್ಪಸಾಮಿಪಿಳ್ಳೆ ಮತ್ತು ಟಿ. ರಮಾಬಾಯಿ ಯವರ ಆಸ್ತಿಗ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರನಿಚ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ

ಸನ್ 1902—1903ನೇ ಇಸವಿ ಅರ್ಜೀ ನಂಬರ 189.

ಮೃತಪಟ್ಟ ಎಸ್. ರಾಮಸ್ವಾಮ್ಯೆಯ್ಯಂಗಾರು ಮತ್ತು ಶ್ರೀರಂಗಮ್ಮಾಳ್ ಯುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ವಾಸಸ್ಥರಾದ ಸುಂದರಮ್ಮನವರು ಮೃತಪಟ್ಟ ಸದರೀ ಎಸ್. ರಾಮಸ್ವಾಮ್ಯೆಯ್ಯಂಗಾರು ಮತ್ತು ಶ್ರೀರಂಗಮ್ಮಾಳ್ ಯವರಿಗೆ ಮಗಳ ಮಗಳಾಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗ ಮೃತಪಟ್ಟ ಎಸ್. ರಾಮಸ್ವಾಮ್ಯೆಯ್ಯಂಗಾರು ಮತ್ತು ಶ್ರೀ ರಂಗಮ್ಮಾಳ್ ಯುವರ ಜಿಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತು ದಾರರಾದ ಸುಂದರಮ್ಮನವರ ಅರ್ಜಿಯನ್ನು ಸನ್ 1903ನೇ ಇಸವಿ ಆಗಸ್ಟ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಸ್. ರಾಮಸ್ವಾಮ್ಯೆಯ್ಯಂಗಾರು ಮತ್ತು ಶ್ರೀರಂಗಮ್ಮಾಳ್ ಯುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 17ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತುಖತ್ತೂಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜಿ ನಂಬರ್ 207.

ಮೃತಪಟ್ಟ ಖಾದರಮೊಹದೀನ್‌ಖಾಲೀಲ್‌ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಬಸವನಗುಡಿ ಎಕ್ಸ್‌ಟೆನ್‌ಷನ್ನಲ್ಲಿರುವ ಚಂದಾಬಿ, ಮೃತಪಟ್ಟ ಸದರೀ ಖಾದರಮೊಹದೀನ್‌ಖಾಲೀಲ್‌ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿಗೆ ಸೇರಿದ ಬಸವನಗುಡಿ ವಾಸಸ್ಥರಾಗಿ ಮೃತಪಟ್ಟ ಖಾದರಮೊಹದೀನ್‌ಖಾಲೀಲ್ ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಂದಾಬಿಯವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಖಾದರಮೊಹದೀನ್ ಖಾಲೀಲ್ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 16ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತಿನೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್

ಹಾಸನದ ಸಬ್ ಜಡ್ಜರವರ ಕೋರ್ಟು 1902—1903ನೇ ಇಸವಿ ಜಾರಿ ನಂಬರ್ 756.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟು 1898—99ನೇ ಇಸವಿಯ ಒರಿಜಿನಲ್ ದಾವೆ ನಂಬರ್ 16.

ವಾದಿ—ಹಾಸನದ ಕಸಬಾದಲ್ಲಿರುವ ಚಲುವ ಶೆಟ್ಟರ ವೆಂಕಟರಮಣ ಶೆಟ್ಟರ ಮಗ ಸುಬ್ಬಶೆಟ್ಟಿ. } ಪ್ರತಿವಾದಿ—ಹಾಸನದ ಕಸಬಾದಲ್ಲಿರುವ ಮುಸಲ್ಮಾನ ಸೈದ್ ಅಹಮದ್ ಸಾಹೇಬರ ಮಗ ಸೈದ್ ಖಾದರಸಾಬ್.

ಸದರೀ ಮೊಕದ್ದಮೆಯಲ್ಲಿ ಹುಟ್ಟಿದ ಮೈಸೂರು ಡಿ|| ಜಡ್ಜರವರ ಕೋರ್ಟಿನ—ಸನ್ 1899ನೇ ಇಸವಿ ಫೆಬ್ರವರಿ ಮಾಹೆ 23ನೇ ತಾರೀಖು ವುಳ್ಳ ಡಿಕ್ರೀ ಪ್ರಕಾರ 15,890—2—6 ರೂಬಲಗನ್ನ ಸದರೀ ಪ್ರತಿವಾದಿ ಎಂಬುವನು ವಾದಿ ಎಂಬುವನಿಗೆ ಕೊಡತಕ್ಕದ್ದಾಗಿ ತೀರ್ಮಾನವಾಗಿ ಇರುವದರನ್ನನುಸರಿಸಿ ಜಫ್ತೀ ಮಾಡಲ್ಪಟ್ಟ ಸ್ವತ್ತನ್ನು ಹರಾಜು ಮಾಡುವದರ ಮೂಲಕ ಸದರಿ ಡಿಕ್ರಿಯ ಅಮಲ್‌ಜಾರಿ ಮಾಡುವದಕ್ಕೆ ಸನ್ 1899ನೇ ಇಸವಿ ಜುಲೈ ಮಾಹೆ 13ನೇ ತಾರೀಖುವುಳ್ಳ ವಾರಂಟನ್ನು ಜಾರಿಮಾಡು... ದರಲ್ಲಿ ಇದರಿಂದ ತಿಳಿಯಪಡಿಸುವದೇನಂದರೆ—ಸನ್ 1903ನೇ ಇಸವಿ ಜುಲೈ ಮಾಹೆ 28ನೇ ತಾರೀಖು 11 ಘಂಟೆಗೆ ಈ ಕೋರ್ಟಿನ ನಾಜರು (ಅಥವಾ ಮೊಕರರಾದ ಇತರ ಮನುಷ್ಯನು) ಕೋರ್ಟು ರೂಬರೂ ಸ್ಥಳದಲ್ಲಿ ಡಿಕ್ರಿದರಖಾಸ್ತುದಾರರಿಗೆ ಮತ್ತು ಇಲ್ಲದೆ ಪ್ರತಿವಾದಿ ಮನುಷ್ಯರ ಈ ಕೆಳಗೆ ನಮೂದಾದ ಸ್ಥಿರಸೊತ್ತಿನ ಆಯಾ ಪದಾರ್ಥಗಳಲ್ಲಿ ಇರುವ ಹಕ್ಕು ಬಾಧ್ಯತೆಯನ್ನು ಹರಾಜು ಮೂಲಕ ವಿಕ್ರಯಿಸುತ್ತಾರಲ್ಲದೆ ಅವುಗಳನ್ನಾಗಲೀ ಆ ಪೈಕಿ ಯಾವದನ್ನಾಗಲೀ ಅದರಿಂದ ಬರ... ಗಲೀ ಕಾನೂನಿಗನುಗುಣವಾಗಿ ತಮ್ಮ ಪ್ರಯೋಜನಕ್ಕೋಸ್ಕರ ಸದರೀ ಯವನು ವಿಕ್ರಯಿಸಲು ಈಗ ಚಲಾಯಿಷ್ಟ ಅಧಿಕಾರವನ್ನು ಹರಾಜು ಮೂಲಕ ನಾಜರು ವಿಕ್ರಯಿಸುತ್ತಾರೆ.

ಸ್ಥಾವರ ಸ್ವತ್ತು.

ಮಂಜರಾಬಾದು ತಾಲ್ಲೂಕು ಮಾರ್ನಹಳ್ಳಿ ಹೋಬಳಿ ನಡಹಳ್ಳಿ ಗ್ರಾಮದಲ್ಲಿರುವದು.

1. ಸರ್ವೆ ನಂಬರ್ 215, ಎಕರೆ 64, ಆಕಾರ 64-0-0 ವುಳ್ಳ ಹೊನ್ನೆ ತೋಟ ಎಂಬ ಕಾಫಿ ತೋಟಕ್ಕೆ ಚಕ್ಕುಬಂದಿ :—ಪೂರ್ವಕ್ಕೆ—ಗುಡ್ಡದ ನೆತ್ತಿ ಬರೆ, ಪಶ್ಚಿಮಕ್ಕೆ—ಹನ್ನೆಗದ್ದೆ ಮತ್ತು ಹೊಸ ಗದ್ದೆ ಬೈಲು, ದಕ್ಷಿಣಕ್ಕೆ—ಹೊಸಗದ್ದೆ ಇರೀಬೀಳು ಮತ್ತು ಹಂಗೆಗದ್ದೆ ಗಂಡಿ, ಉತ್ತರಕ್ಕೆ—ಜಂಬೂರೈಯ್ಯನ ಹಿತ್ತಲು ದಿಣ್ಣೆ. ಈ ಮಧ್ಯೆ ಇರುವದು ಬಂದು.

2. ಸರ್ವೆ ನಂಬರು 68, ಎಕರೆ 16, ಗುಂಟೆ 27, ಆಕಾರ 16—0—0 ವುಳ್ಳ ಗೊದ್ದನ ಮೂಲೆ ಎಂಬ ಕಾಫಿ ತೋಟ ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ನಡಹಳ್ಳಿಯಿಂದ ಜಂಭಳ್ಳೀಗೆ ಮತ್ತು ಮಲ್ಲಿಗೆ ಗದ್ದೆಗೆ ತಿರಗುವ ದಾರಿ, ದಕ್ಷಿಣಕ್ಕೆ—ಶುಂಠಿಕಲ್ಲು ಬೆಟ್ಟ, ಉತ್ತರಕ್ಕೆ—ಗದ್ದೆ. ಈ ಮಧ್ಯೆ ಇರುವ ತೋಟ ಬಂದು.

3. ಸರ್ವೆ ನಂಬರು 250ನೇ ಎಕರೆ 6, ಆಕಾರ 6—0—0 ವುಳ್ಳ ಜಂಬೂರೈಯ್ಯನ ಹಿತ್ತಲು ಎಂಬ ಕಾಫಿ ತೋಟ ಪೂರ್ವಕ್ಕೆ—ಶುಂಠಿಕಲ್ಲು ದಿಣ್ಣೆ, ಪಶ್ಚಿಮಕ್ಕೆ—ಹೊನ್ನನಗದ್ದೆ ಕುರಾವ್, ದಕ್ಷಿಣಕ್ಕೆ—ಹೊನ್ನೆಕೂಲು ತೋಟದ ವತ್ತು, ಉತ್ತರಕ್ಕೆ—ಹೊನ್ನನಗದ್ದೆ. ಈ ಮಧ್ಯೆ ಇರುವದು ಬಂದು.

4. ಸರ್ವೆ ನಂಬರು 260, ಎಕರೆ 23, ಗುಂಟೆ 21, ಆಕಾರ 6—0—0 ವುಳ್ಳ ಖುಷ್ಕಿ ಜಮೀನು ಪೂರ್ವಕ್ಕೆ—ಗೊದ್ದನಮೂಲೆ ತೋಟದ ವತ್ತು ತರಿ ಜಮೀನು, ಪಶ್ಚಿಮಕ್ಕೆ—ಪ್ರತಿವಾದಿ ಬಾಬತು ಹೊನ್ನೆಕೂಲು ತೋಟ, ದಕ್ಷಿಣಕ್ಕೆ—ಪ್ರತಿವಾದಿಯ ಗೊದ್ದನ ಮೂಲೆ ಕಾಫಿ ತೋಟ, ಉತ್ತರಕ್ಕೆ—ಮಡಕೆರೆ ಗದ್ದೆ ಬೀಳು ಬಸರಿಗದ್ದೆ ಸಹಾ. ಈ ಮಧ್ಯೆ ಇರುವದು ಬಂದು.

5. ಸರ್ವೆ ನಂಬರು 248ನೇ ಎಕರೆ 2, ಗುಂಟೆ 24, ಆಕಾರ 7—0—0 ವುಳ್ಳ ತರಿ ಜಮೀನು ಪೂರ್ವಕ್ಕೆ—ಬೀಳು ಬಸರಿಗದ್ದೆ, ಪಶ್ಚಿಮಕ್ಕೆ—ಸರ್ಕಾರಿ ಬೀಳು ಜಮೀನು, ದಕ್ಷಿಣಕ್ಕೆ—ಜಂಬೂರೈಯ್ಯನ ಹಿತ್ತಲು, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವದು ಬಂದು.

6. ಸರ್ವೆ ನಂಬರು 253ನೇ ಎಕರೆ 1, ಗುಂಟೆ 25, ಆಕಾರ 5—0—0 ವುಳ್ಳ ತರಿ ಮತ್ತು ಸರ್ವೆ ನಂಬರು 254ನೇ ಎಕರೆ 1, ಗುಂಟೆ 32, ಆಕಾರ 4—8—0 ವುಳ್ಳ ತರಿ ಈ ಎರಡಕ್ಕೂ ಚಕ್ಕುಬಂದಿ:—ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ಬಂಜರು, ದಕ್ಷಿಣಕ್ಕೆ—ಕುರಾವ್, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವ ಬಾಬತು ಜಮೀನು ಎರಡು.

7. ಸರ್ವೆ ನಂಬರು 247ನೇ ಎಕರೆ 5, ಗುಂಟೆ 20, ಆಕಾರ 1—12—0 ವುಳ್ಳ ಖುಷ್ಕಿ ಜಮೀನು ಪೂರ್ವಕ್ಕೆ—ಜಂ ...ರೈಯ್ಯನ ಹಿತ್ತಲು, ಪಶ್ಚಿಮಕ್ಕೆ—ಹೊನ್ನೆಕೂಲು ತೋಟ, ದಕ್ಷಿಣಕ್ಕೆ—ಹಳ್ಳ ಮತ್ತು ಹೊನ್ನೆಕೂಲು ತೋಟ, ಉತ್ತರಕ್ಕೆ—...ಳ್ಳ. ಈ ಮಧ್ಯೆ ಇರುವದು ಜಮೀನು ಪೈಕಿ ಅರ್ಧ ಮಾತ್ರ.

ಮಂಜರಾಬಾದು ತಾಲ್ಲೂಕು ಹೆಗ್ಗದ್ದೆ ಗ್ರಾಮದಲ್ಲಿರುವ ಜಮೀನುಗಳು.

8. ಸರ್ವೆ ನಂಬರು 165ನೇ ಎಕರೆ 21, ಗುಂಟೆ 2, ಆಕಾರ 21—0—0 ವುಳ್ಳ ದಿಂಬದ ವುಡವೆ ಕಾಫಿ ತೋಟ ಎರಡಕ್ಕೆ:—ಪೂರ್ವಕ್ಕೆ—ಬೀಕಿಬನದ ವುಡವೆ, ಪಶ್ಚಿಮಕ್ಕೆ—ಸರ್ಕಾರಿ ಫೈಸಾರಿ ದಿಣ್ಣೆ, ದಕ್ಷಿಣಕ್ಕೆ—ಬಂಜರು, ಉತ್ತರಕ್ಕೆ—ಕೊಮಾರ ನಿಂಗೆಗೌಡನ ಹಿತ್ತಲು. ಈ ಮಧ್ಯೆ ಇರುವದು ಒಂದು.

9. ಸರ್ವೆ ನಂಬರು 120ನೇ ಎಕರೆ 18, ಗುಂಟೆ 4, ಆಕಾರ 18—0—0 ವುಳ್ಳ ಬೀಕಿಬನದ ವುಡವೆ ಎಂಬ ಕಾಫಿ ತೋಟ:—ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ದಿಂಬದ ವುಡವೆ ನಂದಿನ ಅಗಳು, ದಕ್ಷಿಣಕ್ಕೆ—ಸೂಕಳಿ ಮತ್ತು ಓಣಿ, ಉತ್ತರಕ್ಕೆ—ಮುದಿಗೌಡನ ಹಿತ್ತಲು. ಈ ಮಧ್ಯೆ ಇರುವದು ಒಂದು.

10. ಸರ್ವೆ ನಂಬರು 179ನೇ ಎಕರೆ 21, ಗುಂಟೆ 16, ಆಕಾರ 21-0-0 ವುಳ್ಳ ಬೋರವುಡವೆ ಎಂಬ ಕಾಫಿ ತೋಟ:—ಪೂರ್ವಕ್ಕೆ—ಗದ್ದೆ, ಪಶ್ಚಿಮಕ್ಕೆ—ಬಂಜರು, ದಕ್ಷಿಣಕ್ಕೆ—ನೀರು ಕಾಲವೆ ತಿಟ್ಟು, ಉತ್ತರಕ್ಕೆ—ಶೆಟ್ಟಿಹಳ್ಳಿಗೆ ತಿರುಗುವದಾರಿ. ಈ ಮಧ್ಯೆ ಇರುವದು ಒಂದು.

11. ಸರ್ವೆ ನಂಬರು 188ನೇ ಎಕರೆ 33, ಗುಂಟೆ 25, ಆಕಾರ 33—0—0 ವುಳ್ಳ ಮಕ್ಕೆ ಇಕ್ಕಲೆಂಬ ಕಾಫಿತೋಟ:—ಪೂರ್ವಕ್ಕೆ—ಖುಷ್ಕಿ ಸಾಗುವಳಿ ಜಮೀನು, ಪಶ್ಚಿಮಕ್ಕೆ—ದಿಣ್ಣೆ, ದಕ್ಷಿಣಕ್ಕೆ—ಸರ್ಕಾರಿ ಬಂಜರು, ಉತ್ತರಕ್ಕೆ—ಶುಕ್ರವಾರ ಸಂತೆಗೆ ತಿರಗುವ ದಾರಿ ವತ್ತು. ಈ ಮಧ್ಯೆ ಇರುವದು ಒಂದು.

12. ಸರ್ವೆ ನಂಬರ್ 79ನೇ ಎಕರೆ 19, ಗುಂಟೆ 34, ಆಕಾರ 19—8—0 ವುಳ್ಳ ದೊಡ್ಡ ವುಡವೆಯೆಂಬ ಕಾಫೀತೋಟಾ:—ಪೂರ್ವಕ್ಕೆ—ನಂಜೆಗೌಡನ ತೋಟಾ, ಪಶ್ಚಿಮಕ್ಕೆ—ಸೂಕಳಿ, ದಕ್ಷಿಣಕ್ಕೆ—ಕಾಡುಮನೆಗೆ ತಿರುಗುವದಾರಿ, ಉತ್ರಕ್ಕೆ—ಜಂಬೂರು ವುಡವೆ. ಈ ಮಧ್ಯೆ ಇರುವದು ಒಂದು.

ಹಾಸನದ ಕಸಬಾದಲ್ಲಿರತಕ್ಕದ್ದು.

13. ಅಜ್ಜಪ್ಪನವರ ಮುದ್ದಣ್ಣನವರ ಮಕ್ಕಳು ಪದ್ಮರಾಜೈಯ್ಯ, ಚಂದ್ರಯ್ಯ, ಪಾಯಣ್ಣನವರ ಮಕ್ಕಳು ಆದಿರಾಜೈಯ್ಯ, ಅಂತಪ್ಪ, ಜಿನ್ನಪ್ಪ ಈ 5ಜನಗಳಿಂದ ಪ್ರತಿವಾದಿಯು ಖರೀದಿಗೆ ಪಡದು ಇರುವ ಇದೇ ಕಸಬಾ ಅಂಗಡೀಬೀದಿಯಲ್ಲಿರುವದು:—ಪೂರ್ವಕ್ಕೆ—ದೊಡ್ಡಹಳ್ಳಿ ಪಾಯಪ್ಪಶೆಟ್ರಿಂದ ಪ್ರತಿವಾದಿಗೆ ಖರೀದಿಯಾಗಿರುವ ಅಂಗಡಿ ಮತ್ತು ಮನೆ ಅರಗಿನ ವೋಣಿ ಮತ್ತು ಗರುಡಗಂಬ, ಪಶ್ಚಿಮಕ್ಕೆ—ಷಾಪುರಜಾ ಮೊಹದೀಗ್ ಸಾಬರು ಹರಾಜಿನಲ್ಲಿ ತೆಗದುಕೊಂಡಿರುವ ಮನೆ ಅರಗಿನವೋಣಿ, ದಕ್ಷಿಣಕ್ಕೆ—ಮಾಡಿಮನೆ ಕೇಶವೈಯ್ಯನವರ ಮನೆ ಹಿತ್ತಲುಗೋಡೆ, ಉತ್ರಕ್ಕೆ—ರಾಜಬೀದಿ. ಈ ಮಧ್ಯೆ ಇರುವ ಹೆಂಚಿನ ಮಾಳಿಗೆಗಳೂ ಶೇರಿ ಅಂಕಣ 15ವುಳ್ಳ ಮಹಡಿ ಕಟ್ಟಡ ಇದಕ್ಕೆ ಶೇರಿದ ಹಿತ್ತಲುಸಹಾ ಪೂರ್ವ ಪಶ್ಚಿಮ ಗಜ 12, ದಕ್ಷಿಣೋತ್ತರ ಚರಂಡಿ ಲಾಗಾಯಿತು ದಕ್ಷಿಣಕ್ಕೆ ಗಜ 12, ಈ ಮಧ್ಯೆ ಇರತಕ್ಕ ಮನೆ ಮತ್ತು ಮಳಿಗೆಗಳ ಪೈಕಿ ಪಶ್ಚಿಮ ಭಾಗದ ಮಾಳಿಗೆ, ಎಂದರೆ, ಪೂರ್ವಕ್ಕೆ—ಈ ಮನೆ ಬೀದಿಬಾಗಲು, ಪಶ್ಚಿಮಕ್ಕೆ—ಡಿಟೋ ಮನೆಗೆ ಶೇರಿದ ಮಾಳಿಗೆ, ದಕ್ಷಿಣಕ್ಕೂ—ಡಿಟೋ ಮನೆ, ಉತ್ರಕ್ಕೆ—ರಾಜಬೀದಿ. ಈ ಮಧ್ಯೆ ಇರತಕ್ಕ ನಾಗಪ್ಪಶೆಟ್ರು ಧರಣಯ್ಯನವರ ಮಳಿಗೆ 1ಕ್ಕೆ ಅಂಕಣ 1, ಇದರ ಅಳತೆ ಪೂರ್ವಪಶ್ಚಿಮ ಗಜ-3, ದಕ್ಷಿಣೋತ್ತರ ಗಜ 5, ವುಳ್ಳ ಕಟ್ಟಡಾ ಶಿವಾಯಿ ಬಾಕೀ ದರ ಅಂಕಣ 14, ಇದರ ಹಿತ್ತಲು ಸಹಾ.

14. ನಾಗಪ್ಪ ಶೆಟ್ರು ಮಕ್ಕಳು ಧರಣೈಯ್ಯ, ಶ್ರಿನಿವಾಸ ಈ ಎರಡು ಜನರಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಅಂಗಡಿಬೀದಿ ಸಾಲಿನಲ್ಲಿರುವದು:—ಪೂರ್ವಕ್ಕೆ ಪಶ್ಚಿಮಕ್ಕೆ ದಕ್ಷಿಣಕ್ಕೆ ಸಹಾ ಮೇಲ್ಕಂಡ ಪ್ರತಿವಾದಿ ಮನೆ, ಉತ್ರಕ್ಕೆ ರಾಜಬೀದಿ. ಈ ಮಧ್ಯೆ ಇರುವ ಅಂಗಡಿ ಪೂರ್ವ ಪಶ್ಚಿಮ ಗಜ 5, ದಕ್ಷಿಣೋತ್ತರ ಗಜ 3 ವುಳ್ಳ ಮಹಡಿ ಕಟ್ಟಡ ಒಂದು.

15. ಶ್ಯಾನುಭೋಗ ಶಿವರಾಮೈಯ್ಯನವರ ಮಗ ಕೃಷ್ಣಪ್ಪನವರಿಂದ ಪ್ರತಿವಾದಿಯು ಭೋಗ್ಯಕ್ಕೆ ಪಡದಿರುವ ಅಂಗಡಿಬೀದಿಯಲ್ಲಿರುವ ಮ್ಯುನಿಸಿಪಲ್ ನಂಬರ್ 51, 52, 53, 54, 55 ವುಳ್ಳ ತೊಟ್ಟಿಮನೆ ಪೈಕಿ ಅದರ ಪೂರ್ವಕ್ಕೆ—ಶ್ಯಾನುಭೋಗ ವೆಂಕಟಸುಬ್ಬೈಯ್ಯನವರ ಮನೆ, ಪಶ್ಚಿಮಕ್ಕೆ—ಕಡಗದ ಕೃಷ್ಣಪ್ಪನವರ ಮಗ ವೆಂಕಟರಂಗೈಯ್ಯನವರ ಮನೆ, ದಕ್ಷಿಣಕ್ಕೆ—ಅಂಗಡಿಬೀದಿ, ಉತ್ರಕ್ಕೆ—ಸದರಿ ಕೃಷ್ಣಪ್ಪನವರು ವಾಸವಾಗಿರುವ ಮನೆ, ಈ ಮಧ್ಯೆ ಇರುವ ಹೆಂಚಿನ ಕಟ್ಟಡದ ಮಳಿಗೆಗಳು 2ಕ್ಕೆ ಅಂಕಣ 6, ಇದರ ಅಳತೆ ಪೂರ್ವ ಪಶ್ಚಿಮ ಗಜ $6\frac{1}{2}$, ದಕ್ಷಿಣೋತ್ತರ ಗಜ 5, ಇದರಲ್ಲಿ ಭೋಗ್ಯದ ಹಕ್ಕು ಮಾತ್ರ.

16. ಇದೇ ಕಸಬಾ ದೊಡ್ಡಹಟ್ಟಿ ಪಾಯಪ್ಪನವರ ಹೆಂಡತಿ ಪದ್ಮಾವತಿ ಅಮ್ಮನವರಿಂದ ಪ್ರತಿವಾದಿಯು ಭೋಗ್ಯ ಮಾಡಿಕೊಂಡಿರುವ ಹಾಸನದ ಕಸಬಾ ಅಂಗಡಿಬೀದಿಯಲ್ಲಿರುವದು:—ಪೂರ್ವಕ್ಕೆ—ಬೈಲ್ ರಸ್ತೆ, ಪಶ್ಚಿಮಕ್ಕೆ—ಗರುಡಗಂಬದ ಪ್ರದೇಶ, ದಕ್ಷಿಣಕ್ಕೆ—ಭೀಮಣ್ಣನವರ ಮನೆ, ಉತ್ರಕ್ಕೆ—ಅಂಗಡಿಬೀದಿ, ಈ ಮಧ್ಯೆ ಇರುವ ಅಂಗಡಿ ಮನೆ ಪೈಕಿ ಪೂರ್ವಪಶ್ಚಿಮ ಗಜ $6\frac{1}{2}$, ದಕ್ಷಿಣೋತ್ತರ ಗಜ 12 ವುಳ್ಳ ಅಂಗಡಿ ಮನೆ ಭೋಗ್ಯದ ಹಕ್ಕು ಮಾತ್ರ.

17. ಹಾಸನದ ಕಸಬಾ ಈರರಂಗ ಅಂಣಯ್ಯನ ಮಗ ಕೃಷ್ಣಸಿಂಗಿಂದ ಪ್ರತಿವಾದಿಯು ಖರೀದಿಗೆ ಪಡೆದಿರುವ ಹಾಸನದ ಕಸಬಾ ಹೊಸಲೈನು ಬೀದಿಯಲ್ಲಿರುವ ಮ್ಯುನಿಸಿಪಲ್ ನಂಬರ್ 982ನೇ ಹೆಂಚಿನ ಮನೆ 1ಕ್ಕೆ ಅಂಕಣ 9, ಹಿತ್ತಲು ಶೇರಿ ಪೂರ್ವಪಶ್ಚಿಮ ಗಜ 20, ದಕ್ಷಿಣೋತ್ತರ ಗಜ 8, ವುಳ್ಳ ಮನೆಗೆ ಚಕ್ಕುಬಂದಿ:—ಪೂರ್ವಕ್ಕೆ—ಹೊಸ ಲೈನ್ ರಸ್ತೆ, ಪಶ್ಚಿಮಕ್ಕೆ—ಮಸೀತಿ ಬೀದಿ, ದಕ್ಷಿಣಕ್ಕೆ—ಮಸೀತಿಗೆ ಹೋಗುವ ದಾರಿ ಉತ್ತರಕ್ಕೆ—ಸೈದಲ್ಲಿಸಾಬರ ಮನೆ, ಈ ಮಧ್ಯೆ ಇರುವ ಮನೆ ಒಂದು.

18. ಬುಡಾಮಿಯಾನಿಂದ ಪ್ರತಿವಾದಿಯು ಖರೀದಿಗೆ ಪಡೆದಿರುವ ಹಾಸನದ ಕಸಬಾ ಹೊಸ ಲೈನನಲ್ಲಿರತಕ್ಕ ನಿವೇಶನಾ:—ಪೂರ್ವಕ್ಕೆ—ಪ್ರತಿವಾದಿ ವಾಸಮಾಡುವ ಮನೆ, ಪಶ್ಚಿಮಕ್ಕೆ—ಕೋಟೆ, ದಕ್ಷಿಣಕ್ಕೆ—ಮಸೀತಿ ಮನೆ ಮತ್ತು ಅಂಗಳಾ, ಉತ್ತರಕ್ಕೆ—ಪ್ರತಿವಾದಿಯ ಸ್ವಂತ ಮನೆ. ಈ ಮಧ್ಯೆ ಇರುವದು ಪೂರ್ವಪಶ್ಚಿಮ ಗಜ 22, ದಕ್ಷಿಣೋತ್ತರ ಗಜ 18, ವುಳ್ಳ ಮನೆ ನಿವೇಶನಾ.

19. ಹಾಸನದ ಕಸಬಾ ಹೊಸ ಲೈನನಲ್ಲಿರುವದು:—ಪೂರ್ವಕ್ಕೆ—ಮಸೀತಿ ಬೀದಿ, ಪಶ್ಚಿಮಕ್ಕೆ—ಕೋಟೆ, ದಕ್ಷಿಣಕ್ಕೆ—ಹಾಶೀಂಸಾಬರ ಮನೆ, ಉತ್ತರಕ್ಕೆ—ಫಕ್ರೋದ್ದೀನ್ ಸಾಬರ ಮನೆ, ಈ ಮಧ್ಯೆ ಇರತಕ್ಕ ಹೆಂಚಿನ ಕಟ್ಟಡದ ಮನೆ ಇದಕ್ಕೆ ಶೇರಿದ ಹಿತ್ತಲೂ ಸಹಾ ಅಂಕಣ 20 ವುಳ್ಳದ್ದು.

ಈ ಸೊತ್ತುಗಳು ಡಿಕ್ರಿಗೆ ಈಡಾಗಿರುವದ್ದರಿಂದ ಜಫ್ತಿ ಇಲ್ಲದೆ ಹರಾಜು ಆಗುವದಕ್ಕೆ ಆರ್ಡರ್ ಆಗಿರುವದರಿಂದ ಇತರ ತಪಶೀಲುಗಳು ನಮೂದಿಸಲು ಅವಕಾಶವಿಲ್ಲವೆಂದು ಇಸ್ತಿಹಾರಿನಲ್ಲಿ ನಮೂದು ಆಗುತ್ತೆ.

ಈ ನಂಬರು ಡಿಕ್ರಿಗೆ ಈಡಾಗಿರುವ ಆಧಾರ ಸೊತ್ತುಗಳು ಪ್ರತಿವಾದಿ ಸ್ವಯಾರ್ಜಿತವಾದದ್ದು. ಇವುಗಳಲ್ಲಿ ಈ ಪ್ರತಿವಾದಿಗೆ ಪೂರಾ ಹಕ್ಕು ಬಾಧ್ಯತೆ ಇರುತ್ತೆ. ಈ ಸೊತ್ತಿನಲ್ಲಿ ಜೀವನಾಂಶವಾಗಲಿ ಹಿಸ್ಸೆಯಾಗಲಿ ಮೊಹರ್ ಆಗಲಿ ಸಲ್ಲಬೇಕಾದವರು ಯಾರೂ ಇರುವದಿಲ್ಲಾ. ರಿಜಸ್ಟರ್ ಇಲಾಖೆಯಲ್ಲಿ ಹುಡುಕಿ ನೋಡಿದ್ದರಲ್ಲೂ ವಾದಿಗೆ ಆಧಾರವಾಗಿರುವದಕ್ಕೆ ಮುಂಚೆ ಯಾವವಿಧವಾಗಿಯೂ ಈ ಪ್ರತಿವಾದಿಯಿಂದ ಯಾರಿಗೂ ಆಧಾರ ಮೊದಲಾದ ಯಾವವಿಧವಾದ ಪರಭಾರೆಯೂ ಆದ ದಾಖ್ಲೆಯೇ ಇರುವದಿಲ್ಲಾ. 24—5—1894ರಲ್ಲೂ ಬೋಸ್ಮೇನಹಳ್ಳಿ ವೆಂಕಟೇಶೈಯ್ಯನವರ ಹೆಸರಿಗೆ (12,000) ರೂಪಾಯಿಗಳಿಗೆ ಈ ವಾದಿಸಾಲಾ ತೀರಿಸುವದಕ್ಕಾಗಿ ಆಧಾರ ಮಾಡಿರುವದಾಗಿ ದಾಖ್ಲೆ ಇರುತ್ತೆ. ಆಪ್ರಕಾರ ಅವರು ವಾದಿಸಾಲಾ ತೀರಿಸಿಯೂ ಇಲ್ಲಾ. ಆ ನಡವಳಿಕೆ ನಿಜವಾದ್ದು ಅಲ್ಲಾ. ಇವನಿಗೆ ಮಗ 1ನೇ ಸೈದಅಹಮದ್ ಸುಮಾರು 8—10. 2ನೇ ಸೈದಗಫೂರ್ ಸುಮಾರು 4—5. 3ನೇ ಸೈದಿ ಕುರ್ಸ್ ಸುಮಾರು 2—3. ಹೆಣ್ಣುಮಗಳು 1ನೇ ಅಮೀನಾಬಿ ಸುಮಾರು 10—12 ವರುಷಗಳು ಈಮೇರೆ ಇರುತ್ತಾರೆ. ಅವರಿಗೆ ಈ ಸೊತ್ತಿನ ಮೇಲೆ ಲಾ ಪ್ರಕಾರ ಯಾವ ಹಕ್ಕು ಬಾಧ್ಯತೆ ಇರುವದಿಲ್ಲಾ ಎಂದು ವಾದಿಯು ಹಾಜರ್‍ಮಾಡಲ್ಪಟ್ಟ ಪ್ರಮಾಣಪತ್ರಿಕೇಲಿ ನಮೂದಿಸುತ್ತಾನೆಂತ ಇಸ್ತಿಹಾರಿನಲ್ಲಿ ನಮೂದು ಆಗುತ್ತೆ.

ಸಿ. ಬಿ. ಶೇಷಗಿರಿರಾವ್,
ಸಬಾರ್ಡಿನೇಟ್ ಜಡ್ಜ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 572.

ಮೃತಪಟ್ಟ ಲಿಂಗಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಶ್ರೀರಂಗಪಟ್ಟಣ ತಾಲ್ಲೂಕು ಸೋಮವಾರ ಪೇಟೆಲಿರುವ ಅಂದರೆ ಫ್ರೆಂಚ್‍ರಾಕ್ಸ್ ಸಬ್ ತಾಲ್ಲೂಕು ಕೇತನಹಳ್ಳಿ ಹೋಬಳಿ ಸೋಮವಾರ ಪೇಟೆಲಿರುವ ಹಿರಿಮರಳು ಜವರೇಗೌಡನ ಮಗ ಕಾಳೇಗೌಡ, ಮೃತಪಟ್ಟ ಸದರೀ ಲಿಂಗಮ್ಮನಿಗೆ ಗಂಡನು ಆಗಬೇಕೆಂಬ ಹಕ್ಕುದಾರಿ ಮೇಲೆ ಸೋಮವಾರಪೇಟೆ ವಾಸಸ್ಥರಾಗಿ ಮೃತಪಟ್ಟ ಲಿಂಗಮ್ಮನ ಜೀಂದಗಿ ಬಗ್ಗೆ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ. ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಲಿಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೇ ಇಸವಿ ಜೂನ್ ತಿಂಗಳು 15ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ಸಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಎಸ್. ವರದರಾಜ ಐಯ್ಯಂಗಾರ್,
ಸಬ್ ಜಡ್ಜ್.

ಮೈಸೂರು ಅಡಿಷನಲ್ ಮುನ್ಸೀಫ್ ಕೋರ್ಟಿನಲ್ಲಿ.

1902—1903ನೇ ಇಸವಿ ಸಿವಿಲ್ ನಂ. 49.

ವಾದಿ.	ಪ್ರತಿವಾದಿಗಳು.
ಹುಣಸೂರು ಕಸಬಾದಲ್ಲಿರುವ ಪಟೇಲ್ ಇಬ್ರಾಹಿಂಸಾಬಿ.	1ನೇ ಹುಣಸೂರು ಕಸಬಾದಲ್ಲಿರುವ ಮಹಮದ್ ಸುಲ್ತಾನ್‍ಸಾಬರ ಮಗ ಗುಲಾಂ ಅಬ್ದುಲ್ ಖಾಸಿಂಸಾಬ್. 2ನೇ ಹೈದರ್‌ಖಾನ್‌ಸಾಬ್ ವಗೈರೆ 383 ಜನಗಳು.

ಮೇಲ್ಕಂಡ ನಂಬರಿನಲ್ಲಿ ವಾದಿಯು ಪ್ರತಿವಾದಿಗಳ ಮೇಲೆ ಹುಣಸೂರು ಟೌನನಲ್ಲಿರುವ ಅಷೂರ್‌ಖಾನೆ ಜಾಗವನ್ನು ಬಿಟ್ಟುಮಾಡಿಕೊಡಲು ಈ ಕೋರ್ಟಿನಲ್ಲಿ ದಾವಾ ತಂದಿರುತ್ತಾನೆ. ಸದ್ರಿ ಮೊಕದ್ದಮೆಯಲ್ಲಿ ಪ್ರತಿವಾದಿಯಾಗಿ ಕ್ರಮ ನಡಿಸಲು ಅಪೇಕ್ಷೆಯುಳ್ಳವರು 1903ನೇ ಇಸವಿ ಜುಲೈ ತಿಂಗಳು 25ನೇ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬ್ ಹಾಜರಾಗಬೇಕು.

ಆನಂದರಾವ್ ಸಿರಿಸಿ,
ಅಡಿಷನಲ್ ಮುನ್ಸೀಫ್.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು ಹೋಬಳಿ.	ಸುಮಾರು ವಿಸ್ತೀರ್ಣ.	ಪ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಮೈಸೂರು.	ಗುಂಡ್ಲುಪೇಟೆ ಕುಂತನೂರು ಹೋಬಳಿ.	5,916 ಎಕರೆಗಳು ವ 23 ಗುಂಟೆಗಳು.	ಬೇರಂಬಾಡಿ ಈಶಾನ್ಯ ಬಡಾವಣೆ.	ಪೂರ್ವಕ್ಕೆ—ಅಲ್ಲಿಂದ ಲೈನು ನೆಟ್ಟಗೆ ನೈರುತ್ಯದಿಕ್ಕಿನ ದಕ್ಷಿಣ ದಿಕ್ಕಾಗಿ ದೇಷಿಪುರ ಬೇರಂಬಾಡಿ ಉತ್ತರ ಡಿಸ್ಟ್ರಿಕ್ಟು ಫಾರೆಸ್ಟು ಸರ್ವೆ ನಂಬರು 2 ಮತ್ತು ಬರಗಿ ಗ್ರಾಮಗಳ ಮಧ್ಯೆ ಹಾದು ಹೊಂಗಹಳ್ಳಿ ಬರಗಿ ವ ಬೇರಂಬಾಡಿ ಉತ್ತರ ಡಿಸ್ಟ್ರಿಕ್ಟು ಫಾರೆಸ್ಟು ಸರ್ವೆ ನಂ. 1 ಇವುಗಳ ಮೂರು ಬಾಂದುಗಳು ಸೇರಿರತಕ್ಕ ಸ್ಥಳದ ಪೂರ್ವ ದಿಕ್ಕಿನ 6½ ಫರ್ಲಾಂಗುಗಳ ದೂರದಲ್ಲಿ ಹೊಂಗಳ್ಳಿಗೂ ಮತ್ತು ಬರಗೀಗು ಮಧ್ಯೆಯು ಎಲ್ಲೆಯಲ್ಲಿರುವ ಫಾರೆಸ್ಟು ಎಲ್ಲೆಯ ಗುರ್ತಿನ ವರಿವಿಗೆ ಹೋಗುತ್ತದೆ. ಅಲ್ಲಿಂದ ಮೇಲ್ಕಂಡ ಮೂರು ಬಾಂದುಗಳು ಸೇರತಕ್ಕ ಸ್ಥಳದ ವರಿವಿಗೆ ಹೊಂಗಹಳ್ಳಿ ವ ಬರಗಿ ಇವುಗಳ ಸರ್ವೆಯಾದ ಮತ್ತು ಹದ್ದು ವಿಂಗಡಿಸಲ್ಪಟ್ಟ ಎಲ್ಲೆ. ಅಲ್ಲಿಂದ ಹೊಂಗಹಳ್ಳಿ, ಚನ್ನಮಲ್ಲಪುರ ವ ಬೇರಂಬಾಡಿ ಉತ್ತರ ಡಿಸ್ಟ್ರಿಕ್ಟು ಫಾರೆಸ್ಟು ಸರ್ವೆ ನಂಬರು 1 ಇವುಗಳ ಮೂರು ಬಾಂದುಗಳು ಸೇರತಕ್ಕ ಸ್ಥಳದ ವರಿವಿಗೆ ಹೊಂಗವಳ್ಳಿಯ ಪಶ್ಚಿಮದ ಎಲ್ಲೆ ಅಲ್ಲಿಂದ ಲೈನು ನೆಟ್ಟಗೇನೆ ನೈರುತ್ಯ ದಿಕ್ಕಾಗಿ ಗುಂಡ್ಲುಪೇಟೆ—ಸುಲ್ತಾನ್ ಬತೇರಿ ರಸ್ತೆಯಲ್ಲಿ 135ನೇ ಮೈಲಿ ಕಲ್ಲಿಗೆ ಪೂರ್ವ ದಿಕ್ಕಿನಲ್ಲಿ ಅರ್ಧ ಮೈಲಿ ದೂರದಲ್ಲಿರುವ ಫರ್ಲಾಂಗು ಕಲ್ಲಿನವರಿಗೆ ಹೋಗುತ್ತದೆ. ದಕ್ಷಿಣಕ್ಕೆ—ಈ ಸ್ಥಳದಿಂದ 135ನೇ ಮೈಲಿ ಕಲ್ಲಿನ ವರಿಗೆ ಸುಲ್ತಾನ್ ಬತೇರಿಯ ರಸ್ತೆಯನ್ನು ಅನುಸರಿಸಿ ಹೋಗುತ್ತದೆ. ಪಶ್ಚಿಮಕ್ಕೆ—ಈ ಸ್ಥಳದಿಂದ ಲೈನು ಬೇರಂಬಾಡಿ ಉತ್ತರ ಸ್ಟೇಟು ಫಾರೆಸ್ಟಿನ ಸರ್ವೆಯಾದ, ಹದ್ದು ವಿಂಗಡಿಸಲ್ಪಟ್ಟ ಮತ್ತು ಪಾಕು ಮಾಡಿದ ಪೂರ್ವ ಎಲ್ಲೆಯನ್ನು ಅನುಸರಿಸಿ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಸಿ. ವೆಂಕಟರಾವ್,
ಫಾರೆಸ್ಟು ಸೆಟಲ್‌ಮೇಂಟ್ ಆಫೀಸರ್, ಮೈಸೂರ ಡಿಸ್ಟ್ರಿಕ್ಟು.

ನೋಟೀಸು ತಾರೀಖು 13ನೇ ಜೂನ್ 1903ನೇ ಇಸವಿ.

ಮೈಸೂರು ಗೆಜೆಟ್ IIನೇ ಭಾಗ 588ನೇ ಪುಟದಲ್ಲಿ ಇರುವ 26—4—03ನೇ ಮರ್ಕಂ ನೋಟಿಫಿಕೇಷನ್ ಅನುಸರಿಸಿ ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳ ಸರ್ಕಾರಿ ಬಂಜರು ಜಮೀನುಗಳಲ್ಲಿರುವ (ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್ ವಿನಃ) ಆವರಿಕೆ ಮತ್ತು ಕಕ್ಕೆಚಕ್ಕೆ ಜಮಾಯಿಸುವ ಹಕ್ಕನ್ನ ಎರಡು ವರುಷಗಳಿಗೆ ಅಂದರೆ 1903ನೇ ಆಗಸ್ಟ್ 1ರ ಲಾಗಾಯಿತು 1905ನೇ ಜೂನ್ 30ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟು ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರವರಿಂದ 1903ನೇ ಇಸವಿ ಜುಲೈ 21ನೇ ತಾರೀಖಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡಲ್ಪಡುತ್ತೆ.

(1) ಹೆಗ್ಗಡದೇವನಕೋಟೆ
(2) ಗುಂಡ್ಲುಪೇಟೆ
(3) ನಂಜನಗೂಡು
(4) ಹುಣಸೂರು
(5) ಯಡತೊರೆ
(6) ಚಾಮರಾಜನಗರ

ಷರತ್ತು:—ಮೇಲೆ ನಮೂದಿಸಿರುವ 26—4—03ನೇ ಮಾ॥ ನೋಟಿಫಿಕೇಷನ್ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 16ನೇ ಜೂನ್ 1903.

ಇದರಿಂದ ಸಮಸ್ತ ಜನರಿಗೆಗೂ ತಿಳಿಯಪಡಿಸುವದೇನಂದರೆ,— ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್ ವಿನಹ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸರಕಾರ ಜಮೀನುಗಳಲ್ಲಿ ದೊರಿಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1903ನೇ ಆಗಸ್ಟ್ ಗುರ್ರ ಲಾಗಾಯಿತು 1905ನೇ ಜೂನ್ ಆಖೈರುವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಬಿಟ್ಟು ಸ್ವಾತಂತ್ರದ ಹಕ್ಕು ಬಹಿರಂಗವಾಗಿ ತಾಲ್ಲೂಕುವಾರ್ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರು ಅಥವಾ ಡೆಪ್ಯುಟಿ ಕಮಿಷನರ್‌ರಿಂದ ನೇಮಿಸಲ್ಪಟ್ಟ ಇತರ ಆಫೀಸರಿಂದ 1903ನೇ ಇಸವಿ ಜುಲೈ ತಾರೀಖು 20ರಲ್ಲು ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

2. ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಶುರು ಮಾಡಲ್ಪಡುವದು. ಅವಶ್ಯವಿದ್ದಲ್ಲಿ ಮಾರನೇ ದಿವಸ ಆದೇಹೊತ್ತಿಗೆ ಹರಾಜು ಕ್ರಮ ಜರಿಗಿಸಲ್ಪಟ್ಟೀತು.

3. ಯಾವ ಕಾರಣವನ್ನು ನಮೂದಿಸದೆ ಈ ಹರಾಜನ್ನು ಅಂಗೀಕರಿಸಲಿಕ್ಕೂ ತಿರಸ್ಕರಿಸಲಿಕ್ಕೂ ಡೆಪ್ಯುಟಿ ಕಮಿಷನರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

4. ಹರಾಜು ಮಾಡತಕ್ಕವರು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಮುಖ್ತ್ಯಾರಿ ಹೊಂದಿದ ಏಜಂಟರ ಮೂಲಕವಾಗಲಿ ಹಾಜರಾಗಿ ದರಖಾಸ್ತು ಮಾಡಬೇಕು. ಒಂದು ನೂರು ರೂಪಾಯಿ ಠೇವಣಿ ಇಟ್ಟ ಹೊರ್ತಾಗಿ ತನಿಗೋಸ್ಕರವೇಯಾಗಲಿ ಅಥವಾ ಎರಡನೇಯವರಿಗೋಸ್ಕರವಾಗಿಯಾಗಲಿ ದರಖಾಸ್ತು ಮಾಡಲು ಯಾವನೊಬ್ಬ ಮನುಷ್ಯನಿಗೆ ಅಪ್ಪಣೆ ಕೊಡಲು ಆಗಲಾರದು. ಹರಾಜು ಆದಕೂಡ್ಲೆ ನೆ ಮಂಜೂರಾಗದೆ ಇರುವ ದರಖಾಸ್ತುದಾರರ ಡಿಪಾಜಿಟ ಮೊಬಲಗು ಅವರಿಗೆ ವಾಪಸ್ ಮಾಡಲಾದೀತು. ಹರಾಜು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ಆಗಲಿ ಯಾ ಅವರ ಏಜಂಟರಿಗೆ ಆಗಲಿ ತಿಳಿಸಿದ ತಾರೀಖು ಲಾಗಾಯಿತು ಮೂರು ದಿವಸಗಳೊಳಗಾಗಿ ಡಿಪಾಜಿಟ್ ಹಣ ಶೇರಿಸಿಕೊಂಡು ಪಟ್ಟು ಗೊತ್ತಾದ ಮೊಬಲಗು ಪೈಕಿ ಎಂಟರಲ್ಲಿ ಒಂದು ಹಿಸ್ಸೆ ಮೊಬಲಗನ್ನ ಶಿವಮೊಗ್ಗಾ ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಜಮಾ ಮಾಡಿಸಬೇಕು. ಅದರಂತೆ ಮಾಡಲು ತಪ್ಪಿದಲ್ಲಿ ಸದರಿ 100 ರೂಪಾಯಿ ಡಿಪಾಜಿಟ್ ಮೊಬಲಗನ್ನ ಸರಕಾರಕ್ಕೆ ಶೇರಿಸಿಕೊಂಡು ಮೇಲ್ಕಂಡ ಹಕ್ಕನ್ನು ಹರಾಜು ಮಾಡಿಸುವ ಆಫಿಸರಿಂದ ತಪ್ಪಿಹೋದ ದರಖಾಸ್ತುದಾರನ್ನ ನಷ್ಟಕ್ಕೆ ಗುರಿಪಡಿಸಿ ಹರಾಜು ಮಾಡಲಾದೀತು. ಈ ಹಕ್ಕಿನಲ್ಲಿ ಏನಾದರು ಫಾಯಿದೆ ಬಂದರೆ ತಪ್ಪಿಹೋದ ದರಖಾಸ್ತುದಾರನಿಗೆ ಏನು ಹಕ್ಕು ಇರಲಾರದು.

5. ಈ ಕೆಳಗೆ ನಮೂದಿಸಿರುವ ಷರತ್ತುಗಳನುಸರಿಸಿ ನಡಿಯಲು ಬದ್ಧನಾಗಿರತಕ್ಕ ಬಗ್ಗೆ ಇಜಾರದಾರನು ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರವರ ಹೆಸರಿನಲ್ಲಿ 200 ರೂಪಾಯಿ ಶಿಕ್ಯೂರಿಟಿ ಇಡಬೇಕಲ್ಲದೆ ಛಾಪಾಕಾಗದ್ದಲ್ಲಿ ಮುಚ್ಚಳಿಕೆಯನ್ನು ಬರೆದು ಕೊಡಬೇಕು. ಹರಾಜು ಮಂಜೂರಾದ್ದು ದರಖಾಸ್ತುದಾರನಿಗೆ ಅಥವಾ ಅವನ ಏಜಂಟದಾರನಿಗೆ ತಿಳದ ತಾರೀಖು ಲಾಗಾಯಿತು 5 ದಿವಸಗಳೊಳಗಾಗಿ ಸದರಿ ಹಣ ಪಾವತಿ ಮಾಡಿ ಮುಚ್ಚಳಿಕೆ ಬರೆದು ಕೊಡಬೇಕು. ಇದಕ್ಕೆ ತಪ್ಪಿದರೆ ಮೊದಲು ಇಟ್ಟ ಠೇವಣಿ 100 ರೂಪಾಯಿಯನ್ನು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರಿ ಹಕ್ಕುದಾರಿ ಪುನಹ ಹರಾಜು ಮಾಡಲ್ಪಡುವದು.

6. ಬಾಕಿ ಆಗುವ ಇಜಾರೆ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದುಆಣೆ ಮೇರಿಗೆ ಆಗುವ ಲೋಕಲ್ ಸೆಸ್ 1903ನೇ ಇಸವಿ ಅಕ್ಟೋಬರು ಗುರ್ರ್ಯ ಲಾಗಾಯಿತು ಈ ಕೆಳಗೆ ಕಾಣಿಸಲ್ಪಟ್ಟಿರುವ ಏಳು ಕ್ವಾರಟರಲ್ಲಿ ಖಿಸ್ತಿನಲ್ಲಿ ಕ್ರಮವಾಗಿ ಕೊಡಲ್ಪಡತಕ್ಕದ್ದು.

1903ನೇ ಅಕ್ಟೋಬರ್ ಗುರ್ರ್ಯಯಲ್ಲಿ
1904ನೇ ಜನವರಿ ಗುರ್ರ್ಯಯಲ್ಲಿ
1904ನೇ ಏಪ್ರೆಲ್ ಗುರ್ರ್ಯಯಲ್ಲಿ
1904ನೇ ಜುಲೈ ಗುರ್ರ್ಯಯಲ್ಲಿ
1904ನೇ ಅಕ್ಟೋಬರ್ ಗುರ್ರ್ಯಯಲ್ಲಿ
1905ನೇ ಜನವರಿ ಗುರ್ರ್ಯಯಲ್ಲಿ
1905ನೇ ಏಪ್ರೆಲ್ ಗುರ್ರ್ಯಯಲ್ಲಿ

7. ಯಾವದಾದರು ಒಂದು ಖಿಸ್ತಿನ ಮೊಬಲಗು ಮೇಲ್ಕಂಡ ವಾಯಿದೆ ಕೆಳಗೆ ಪಾವತಿ ಆಗದೆ ಇದ್ದಲ್ಲಿ ಇಜಾರೆಯನ್ನು ರದ್ದು ಮಾಡಿ ರಫ್ತಾಗದೆ ಬಾಕಿ ಇರತಕ್ಕ ಎಲ್ಲಾ ಚಕ್ಕೆಯು ಜಫ್ತು ಮಾಡಲ್ಪಟ್ಟು ಚಕ್ಕೆಯ ಜಮಾವಣೆ ಮತ್ತು ರಫ್ತು ಸಹಾ ನಿಲ್ಲಿಸಲ್ಪಟ್ಟು ಇಜಾರೆ ಮೊಬಲಗು ಸಂಪೂರ್ಣವಾಗಿ ರೆವಿನ್ಯೂ ಡಿಮ್ಯಾಂಡ್ ತರೀಕಾಗಿ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಒಂದು ವರುಷಕ್ಕೆ ಕಮ್ಮಿ ಇರುವ ಎಳೇ ಬುಡಗಳಲ್ಲಿ ಚಕ್ಕೆ ತೆಗಿಯದಂತೆಯು ಕಡಿಯದಂತೆಯು ನೋಡಿಕೊಳ್ಳತಕ್ಕದ್ದು.

2. ಬೇರೆ ಬೇರೆ ಸ್ಥಳಗಳಲ್ಲಿ ಚಕ್ಕೆಗಳನ್ನು ಜಮಾಯಿಸಲು ನೇಮಿಸಲ್ಪಡುವ ಮೇಸ್ತ್ರಿ ಮತ್ತು ಷಿಕ್ಮಿ ಕಂಟ್ರಾಕ್ಟುದಾರುಗಳ ಹೆಸರುಗಳು ನಮೂದಿನಿಂದ ಒಂದು ಪಟ್ಟಿಯನ್ನು ಕೊಡಬೇಕು.

3. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಕೊಡುವ ನಮೂನೆಯಂತೆ ಸಾಗಿಸಿದ ಚಕ್ಕೆಯ ಮೊತ್ತವನ್ನು ತೋರಿಸುವ ಲೆಖ್ಖವನ್ನು ಇಡತಕ್ಕದ್ದು. ಫಾರೆಸ್ಟ ರೇಂಜರ್ ಮತ್ತು ಅಮಲ್ದಾರು ಯಾ ಪೋಲೀಸು ಇನ್ಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲ್ಪಟ್ಟ ಇತರ ಆಫಿಸರ ಅಜಮಾಯಿಷಿಗೆ ಸದರಿ ಲೆಖ್ಖಗಳು ವಳಪಟ್ಟದ್ದಾಗಿರುತ್ತವೆ.

4. ಡಿ|| ಫಾರೆಸ್ಟು ಆಫಿಸರವರಿಂದ ಏರ್ಪಡಿಸುವ ಮೇರಿಗೆ ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಚಕ್ಕೆಗೆ ಪ್ಯಾಸ್ ಪಡಿಯತಕ್ಕದ್ದು.

5. ವಾಯಿದೆಯು ಪೂರೈಸಿದ ನಂತರ ಜಮಾಯಿಸಿಕೊಂಡು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಗಡಿ ವಳಗಾಗಲಿ ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರತಕ್ಕ ರೈಲ್ವೆ ಸ್ಟೇಷನ್‌ಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದು ಪಡಿಸತಕ್ಕದ್ದು.

6. ಮೇಲ್ಕಂಡ ಷರತ್ತಿನ ಮೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರೆ ರದ್ದು ಮಾಡುವದಲ್ಲದೆ ಅದುವರಿಗೂ ಜಮಾಯಿಸಿ ಹಾಜರು ಇಟ್ಟುಕೊಂಡಿರತಕ್ಕ ವಿಶಿಷ್ಟ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯುಟಿ ಕಮಿಷನರ್ ಸಾಹೇಬರವರು ನಿಷ್ಕರ್ಷಿಸುವ ಮೇರೆ ಇಜಾರದಾರನಿಂದ ವಸೂಲಾದ ಪೂರಾ ಮೊಬಲಗಾಗಲಿ ಅಥವಾ ಆ ಪೈಕಿ ಕೆಲವು ಮೊಬಲಗಾಗಲಿ ಸೇರಿಸಲ್ಪಡಲಾದೀತು. ಅಂಥಾ ತಪ್ಪಿದ ಕಾಲದಲ್ಲಿ ಇಜಾರೆದಾರನಿಂದ ಬಾಕಿ ಇರತಕ್ಕ ಮೊಬಲಗು ರೆವಿನ್ಯೂ ಕಂದಾಯದ ರೀತಿ ವಸೂಲ್ಮಾಡತಕ್ಕದ್ದು.

ಎಂ. ವೆಂಕಟನಾರಣಪ್ಪ.
ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್, ಶಿವಮೊಗ್ಗಾ ಡಿಸ್ಟ್ರಿಕ್ಟು.

ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿನಿಂದ.

ನೋಟಿಸ್.

ತಾರೀಖು 5ನೇ ಜೂನ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಸನ್ 1903ನೇ ಇಸವಿ ಜುಲೈ ಗುರ್ರೆ ಲಾಗಾಯಿತು ಸನ್ 1904ನೇ ಇಸವಿ ಜೂನ್ ಆಖೈರುವರಿಗೆ ಅಂದರೆ ಒಂದು ವರುಷಕ್ಕೆ ಮೈಸೂರು ಟವನ್ನಲ್ಲಿರತಕ್ಕ ಮ್ಯುನಿಸಿಪಲ್ ದೀಪಗಳಿಗೆ ಬೇಕಾಗುವ ಈ ಕೆಳಗೆ ನಮೂದು ಮಾಡುವ ಕೆರೊಸೀನ್ ಯಂಣೆ ಟಿನ್ನುಗಳನ್ನು ಸರಬರಾಯಿ ಮಾಡಲು ಇಚ್ಛೆಯುಳ್ಳವರು ಡಿಟೋ ಯಂಣೆ ಟಿನ್ ಒಂದಕ್ಕೆ ಯಾವ ದರದ ಮೇರೆಗೆ ಖರೀದಿಗೆ ಕೊಡುವರೆಂಬುವದಕ್ಕೆ ದರಖಾಸ್ತು ಕೊಡಬಹುದು.

ದರಖಾಸ್ತುಗಳನ್ನು ಲಖೋಟೆಗಳಲ್ಲಿ ಗರ್ಭೀಕರಿಸಿ ಮೊಹರು ಮಾಡಬೇಕು. ಡಿಪಾಜಿಟಿಗಾಗಿ (50—0—0) ಐವತ್ತು ರೂಪಾಯಿಗಳನ್ನು ನಗದೇ ಆಗಲಿ ಅಥವಾ ಮದ್ರಾಸ್ ಕರೆನ್ಸಿ ನೋಟ್ ಮೂಲಕವೇ ಆಗಲಿ ವೈಸ್ ಪ್ರೆಸಿಡೆಂಟ್ ಸಾಹೇಬರವರ ಆಫೀಸಿಗೆ ಜೂನ್ ಮಾಹೆ 22ನೇ ತಾರೀಖಿನ ಒಳಗಾಗಿ ಡಿಟೋ ದರಖಾಸ್ತುಗಳ ಕೂಡ ಕಳುಹಿಸಬೇಕು.

ಡಿಟೋ ಮಾಹೆ ತಾರೀಖು 22ರ ವರಿಗೂ ಮೇಲ್ಕಂಡ ದರಖಾಸ್ತುಗಳನ್ನು ತೆಗದುಕೊಳ್ಳಲ್ಪಡುವದು.

ಸನ್ 1903ನೇ ಇಸವಿ ಜೂನ್ 22ನೇ ತಾರೀಖಿನ ಮಧ್ಯಾಹ್ನ 2 ಘಂಟೆಗೆ ಟವನ್ ಹಾಲಿನಲ್ಲಿ ಪ್ರೆಸಿಡೆಂಟ್ ಸಾಹೇಬರವರಿಂದ ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರಿಂದ ಹಾಜರು ಇರತಕ್ಕ ದರಖಾಸ್ತುದಾರ್ರುಗಳ ರೂಬರೂಬ್ ಸದರಿ ದರಖಾಸ್ತುಗಳು ತೆರೆಯಲ್ಪಡುವವು.

ಪ್ರೆಸಿಡೆಂಟ್ ಸಾಹೇಬರವರು ಅಥವಾ ವೈಸ್ ಪ್ರೆಸಿಡೆಂಟ್ ಸಾಹೇಬರವರು ಯಾವದೊಂದು ಕಾರಣವನ್ನೂ ಹೇಳದೆ ಕಮ್ಮಿ ದರಕ್ಕೆ ಕೇಳುವ ದರಖಾಸ್ತುಗಳನ್ನೇ ಆಗಲಿ ಅಥವಾ ಇತರ ಯಾವ ದರಖಾಸ್ತುಗಳನ್ನೇ ಆಗಲಿ ವಜಾ ಮಾಡಲು ಅಧಿಕಾರ ವುಳ್ಳವರಾಗಿ ಇರುತ್ತಾರೆ.

ಮಂಜೂರಾದ ದರಖಾಸ್ತುದಾರ್ರು ಡಿಟೋ ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 5 ಐದು ದಿವಸಗಳ ಒಳಗಾಗಿ ಮೊದಲು ಹಾಜರು ಮಾಡಿದ (50—0—0) ಐವತ್ತು ರೂಪಾಯಿಗಳು ಡಿಪಾಜಿಟ್ ಅಲ್ಲದೆ ಜಾಸ್ತಿ (150—0—0) ಒಂದುನೂರ ಐವತ್ತು ರೂಪಾಯಿಗಳು ಡಿಪಾಜಿಟ್ಟಿಗಾಗಿ ಪಾವತಿ ಮಾಡಿ ರೂಲ್ಸ್ ಪ್ರಕಾರ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ಮಾಡಲು ತಪ್ಪಿದರೆ ಮೊದಲು ಹಾಜರು ಮಾಡಿದ ಡಿಪಾಜಿಟ್ ಮೊಬಲಗನ್ನು ಕಳದುಕೊಳ್ಳುವರು.

ಬರದುಕೊಡತಕ್ಕ ಮುಚ್ಚಳಿಕೆಯ ಖರಾರುಗಳು ಮತ್ತು ಇತರ ತಪಶೀಲುಗಳು ಸಹಾ ಮ್ಯುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(1) ಥಸ್ಟರ್ ಮಾರ್ಕ್ ಸೀಮೆಯಂಣೆ ಟಿನ್ನುಗಳು.

(2) ರಷ್ಯನ್ ಯಂಣೆ ಟಿನ್ 125ನೇ ಡಿಗ್ರಿ ಬಾಬುತು.

ತಿಂಗಳು ಒಂದಕ್ಕೆ ಸುಮಾರು ಇನ್ನೂರು ಟಿನ್ನುಗಳ ವರಿಗೆ ಥಸ್ಟರ್ ಮಾರ್ಕ್ ಸೀಮೆಯಂಣೆ ಟಿನ್ನುಗಳು ಖರೀದಿಗೆ ತೆಗದುಕೊಳ್ಳಲ್ಪಡುತ್ತೆ.

ಕೆ. ಶ್ರೀನಿವಾಸರಾವ್, ವೈಸ್ ಪ್ರೆಸಿಡೆಂಟ್.

ಇಸ್ತಿಹಾರ್.

ಬೆಂಗಳೂರಿನಲ್ಲಿ ಇರುವ ಮೈಸೂರು ಸ್ಟೇಟ್ ಹುಜೂರು ಖಜಾನೆಯಲ್ಲಿ ಭಂಗಾರದ ಹಣಗಳು ವರಹಾಗಳು ಮತ್ತು ನಗಗಳು ಹರಾಜು ಮಾಡಲ್ಪಡುವದು.

ಮೈಸೂರು ಗೌರ್ನಮೆಂಟ್ ನಂ. 16644-7—Mis. 2555, 1903ನೇ ಇಸವಿ ಮೇ ತಿಂಗಳು 23ನೇ ತಾರೀಖಿನ ಪ್ರೊಸಿಡಿಂಗ್ಸ್‌ನಲ್ಲಿ ಅಪ್ಪಣೆ ಆಗಿ ಇರುವದನ್ನು ಅನುಸರಿಸಿ ಈ ಕೆಳಗೆ ನಮೂದಿಸಿರುವ ಹಣಗಳು ವರಹಗಳು ನಗಗಳು 1903ನೇ ಇಸವಿ ಜುಲೈ ತಾರೀಖು 8ರಲ್ಲು ಮಧ್ಯಾನ್ಹ 2 ಘಂಟೆ ಲಾಗಾಯಿತು ಹರಾಜು ಮಾಡಲ್ಪಡುತ್ತೆಂದು ಈ ನೋಟಿಸ್ ಮೂಲಕ ಪ್ರಸಿದ್ಧಪಡಿಸಿ ಇರುತ್ತೆ.

ತಪಶೀಲ್.

ಜಗಲೂರು ತಾಲ್ಲೂಕು ಚಿಳಕಟ್ಟೆ ಗ್ರಾಮದಲ್ಲಿ ವಡ್ಡರ ಹುಲಿಯ ಎಂಬುವನು ಅವನ ಹೊಲ ಉಳುವಾಗ ದೊರಕಿದ್ದು.	(I) 441 ಭಂಗಾರದ ಹಣಗಳು, ಬೋರ (ಹಂದಿ ತಲೆ) ಸ್ಟಾಂಪು ವುಳ್ಳದ್ದು. 1 ಜೊತೆ ಭಂಗಾರದ ಕಡಗಗಳು 2—15—6 ತೂಕವುಳ್ಳದ್ದು. 1 ಭಂಗಾರದ ಅಸಲಿ (ಕತ್ತಿನ ಆಭರಣ) ತೂಕ 1—15—0. 1 ಡಿಟೋ ತೂಕ ರೂ. 1—0—0 ಒಂದು ಗುಲಗಂಜಿ ತೂಕ. 2 ಭಂಗಾರದ ಉಂಗರಗಳು ತೂಕ 15 ಆಣೆಗೆ ಒಂದು ಗುಲಗಂಜಿ (ವೆಳಪಡಿ).
ಹೊಳಲಕೆರೆ ತಾಲ್ಲೂಕು ಸಾಸಲ್ಲಿ ಗ್ರಾಮದಲ್ಲಿ ಸರಕಾರಿ ಸರ್ವೆ 35ನೇ ನಂಬರ ಜಮೀನಿನಲ್ಲಿ ಇರುವ ಕಲ್ಲಿನ ಬಳಿ ಬೇಗಾರ ಹುಡಗಿ ಚೆನ್ನಿಗೆ ದೊರಕಿದ್ದು.	67 ಭಂಗಾರದ ವರಹಾಗಳು ಅನೇಕಮಾದ್ರಿವುಳ್ಳದ್ದು.

ಹರಾಜು ನಿಬಂಧನೆಗಳು.

I. ನಾಣ್ಯಗಳು ಮತ್ತು ನಗಗಳು ತೆಗೆದುಕೊಳ್ಳುವರು ಹರಾಜಿನ ಹಣ ನಗದು ಪಾವತಿಮಾಡಿ ಪಡೆಯತಕ್ಕದ್ದು.

II. ಸವಾಲ್ ತಿರಸ್ಕಾರ ಮಾಡಿದ ಬಗ್ಗೆ ಕಾರಣ ತಿಳಿಯಪಡಿಸುವದಿಲ್ಲ.

III. ಹರಾಜಿನ ನಿಬಂಧನೆ ವಿಷಯದಲ್ಲಿಯೂ ಖಾಯಂಮಾಡುವ ವಿಷಯದಲ್ಲಿಯೂ ತಿರಸ್ಕರಿಸುವ ವಿಷಯದಲ್ಲಿಯೂ ಈ ಕೆಳಗೆ ರುಜು ಮಾಡಿ ಇರುವವರು ಪೂರಾ ಅಧಿಕಾರ ವುಳಿಸಿಕೊಂಡು ಇರುತ್ತಾರೆ.

ಬಿ. ಗೋಪಾಲಯ್ಯಂಗಾರ್,
ಆಫೀಸರಿ ಇನ್‌ಚಾರ್ಜ್, ಸ್ಟೇಟ್ ಹುಜೂರ್ ಟ್ರೆಜರಿ.

ಬೆಂಗಳೂರ್ ಗೌರ್ನ್ಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್—ಬಿ ತಾರೀಖು 15ನೇ ಜೂನ್ 1903.

ಇದರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ :—

				ರೂ. ಅ. ಪೈ.
1.	ಕನ್ನಡ ಲೇಖನ ಪುಸ್ತಕ 6ನೇ ನಂಬರ್	...	..	0—1—0
2.	ಡಿಟ್ಟೋ 7ನೇ ಡಿಟ್ಟೋ	..	..	0—1—6
3.	ಕನ್ನಡ ಬಾಲಬೋಧೆ IIನೇ ಭಾಗ	..	....	0—2—6

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ತಾರೀಖು 12—18ನೇ ಜೂನ್ 1903.

ಚನ್ನಪಟ್ಟಣದ ಕಸಬೆಯಲ್ಲಿ ವಾಸವಾಗಿ ಇರುವ ದಳ್ಳಾಳಿ ಮಾಕುಂ ಪಾತಿ ರಾಮಸೆಟ್ರ ಹೆಂಡತಿ ನಿಂಗಮ್ಮನು, ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ—

ಮೇಲ್ಕಂಡ ನಿಂಗಮ್ಮನಿಗೂ ಮತ್ತು ಡಿಟ್ಟೋ ಈಕೆ ಗಂಡ ಹಾಲಿ ಪಾತಿಯಾಗಿ ಇರುವ ರಾಮಶೆಟ್ರಿಗೂ ಸಹ ಕೊಡಬೇಕಾಗಿ ಇರುವ ಸಾಲದ ಮೊಬಲಗನ್ನು ಡಿಟ್ಟೋ ನಿಂಗಮ್ಮನಿಗೆ ಖುದ್ದು ಪಾವತಿಯಿಂದ ಕ್ರಮಪ್ರಕಾರ ರಶೀದಿ ವಗ್ಗೈರೆ ದಾಖಲೆ ಪಡೆಯಬೇಕೇ ಹೊರ್ತು ಡಿಟ್ಟೋ ನಿಂಗಮ್ಮನಿಂದ ಮೊಖ್ತ್ಯಾರುನಾಮಾ ಪಡೆದಿಯಿದ್ದ ಭಂಗಾರ ತಿಪ್ಪಯ್ಯಶೆಟ್ರಿಗೆ ಆಗಲಿ ಮತ್ತ್ಯಾರಿಗೆ ಆಗಲಿ ಕೊಡಕೂಡದೆಂದು ಈ ಮೂಲಕ ತಿಳಿಸಿ ಇದೆ.

ನಿಂಗಮ್ಮನವರ ಅಡ್ವೋಕೇಟ್,
ಹೆಚ್. ಕ್ರಿಷ್ಣಪ್ಪ.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಯಿಷ ಆದ್ದು. [ನಂ. 26.

ಬೆಂಗಳೂರು, ಗುರುವಾರ, ಜುಲೈ ತಾ|| 2, ಸ್ 1903.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೇಯಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮಾ.

ನೋಟೀಸು ತಾರೀಖು 13ನೇ ಜೂನ್ 1903ನೇ ಇಸವಿ.

ಮೈಸೂರು ಗೆಜೆಟ್ IIನೇ ಭಾಗ 588ನೇ ಪುಟದಲ್ಲಿ ಇರುವ 26—4—03ನೇ ಮುರ್ಕಂ ನೋಟಿಫಿಕೇಷನ್ ಅನುಸಾರ ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳ ಸರ್ಕಾರಿ ಬಂಜರು ಜಮೀನುಗಳಲ್ಲಿರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ ವಿನಃ) ಆವರಿಕೆ ಮತ್ತು ಕಕ್ಕೆಚಕ್ಕೆ ಜಮಾಯಿಸುವ ಹಕ್ಕನ್ನು ಎರಡು ವರುಷಗಳಿಗೆ ಅಂದರೆ 1903ನೇ ಆಗಸ್ಟ್ 1ರ ಲಾಗಾಯಿತು 1905ನೇ ಜೂನ್ 30ರ ವರೆಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜುಲೈ 21ನೇ ತಾರೀಖಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡಲ್ಪಡುತ್ತೆ.

(1)	ಹೆಗ್ಗಡದೇವನಕೋಟೆ	(4)	ಹುಣಸೂರು
(2)	ಗುಂಡ್ಲುಪೇಟೆ	(5)	ಯಡತೊರೆ
(3)	ನಂಜನಗೂಡು	(6)	ಚಾಮರಾಜನಗರ

ಷರತ್ತು:—ಮೇಲೆ ನಮೂದಿಸಿರುವ 26—4—03ನೇ ಮು|| ನೋಟಿಫಿಕೇಷನ್ ನೋಡಿ.

ಸಿ ಅಪ್ಪಯ್ಯ,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಮೊಕ್ಕಾಂ ಮುತ್ತೋಡಿ, ತಾರೀಖು 22ನೇ ಜೂನ್ 1903.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಹೋಬಳಿ ಹುಲಿತಿಮ್ಮಾಪುರದ ಊರು ಮುಂದೆ ಈ ಮಾರ್ಜಿನಲ್ಲಿ ಕಂಡ ಅಳತೆವುಳ್ಳ 2 ಮತ್ತಿ ನಾಟಾಗಳು ಬಿದ್ದು ಇವೆ. ಇದಕ್ಕೆ ವಾರಿಸ್‌ದಾರು ಇಂಥಾವರೆಂಬುವದು ಗೊತ್ತಿಲ್ಲವೆಂದು ಲಕ್ಕವಳ್ಳಿ ರೇಂಜು ಫಾರೆಸ್ಟ್ ಆಫಿಸರವರು 693—28-5-03ನೇ ರಿಪೋರ್ಟು ಮೂಲಕ ತಿಳಿಸುತ್ತಾರೆ. ಈ ನಾಟುಗಳ ಬಾಧ್ಯಸ್ಥರ್ಯಾರಾದರೂ ಇದ್ದ ಪಕ್ಷದಲ್ಲಿ ಅಂಥಾವರು ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಈ ಬಗ್ಗೆ ತಮ್ಮಲ್ಲಿರತಕ್ಕ ಸಾಧನೆಗಳಸಹಿತ ನಮ್ಮ ರೂಬರೂಬು ಹಾಜರಾಗಿ ಮನವೇ ಮಾಡಿಕೊಳ್ಳಬೇಕು. ಆ ಪ್ರಕಾರ ಮಾಯಿದೇಲಿ ಹಾಜರಾಗಿ ತಮ್ಮ ಹಕ್ಕು ಬಾಧ್ಯತೆ ಸ್ಥಿರಪಡಿಸಿಕೊಳ್ಳದೆ ಇದ್ದಲ್ಲಿ ಸನ್ 1900ನೇ ಇಸವಿ XIನೇ ನಂಬರು ಫಾರೆಸ್ಟ್ ರೆಗ್ಯುಲೇಷನ್ 42ನೇ ಸೆಕ್‌ಷನ್ ಅನುಸರಿಸಿ ಹರಾಜು ಮಾಡಿಸಲ್ಪಡುತ್ತೆ. ನಂತರ ತರುವ ತಕರಾರು ಅಂಗೀಕರಿಸುವದಿಲ್ಲ ತಿಳಿಯುವದು.

ನಂ.	ಜಾತಿ.	ಲಾಂಬಿ.	ಸುತ್ತು.
1.	ಮತ್ತಿ	14—0	4—7
2.	ಮತ್ತಿ	15—6	4—3

ಎಂ. ಜಿ. ರಾಮರಾವ್,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಕೊಡಗು ಫಾರೆಸ್ಟ್ ಇಲಾಖಾ.

ನೋಟಿಸ್.

ಕರೀಮರದ ಮಾರಾಟ.

ಮಲಬಾರು ಜಿಲ್ಲಾ ಬೆವಿಯೂಪಟ್ಟಣದಲ್ಲಿ ಈಗ ಜಮಾಯಿಸಿ ಇಟ್ಟಿರುವ ಹೆಚ್ಚು ಕಡಿಮೆ 1100 ಕ್ಯೂಬಿಕ್ ಫೂಟು ಉಳ್ಳ 5 ಲಾಟು ಸಾಧಾರಣ ಕೆತ್ತಿರುವ ಕರೀ ಮರವನ್ನು ಕೊಂಡುಕೊಳ್ಳುವ ಬಗ್ಗೆ 1903ನೇ ಇಸವಿ ಆಗಸ್ಟ್ ತಾರೀಖು 1ನೇ ವರಗೆ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವವು. ತೊಲೆಗಳ ಪಟ್ಟಿಯನ್ನು ಕೊಡಗುಜಿಲ್ಲಾ ಡೆಪ್ಯುಟಿ ಕನ್ಸರ್ವೇಟರ್, ಮಡಿಕೇರಿ, ಇವರುಗಳಿಗೆ ಬರೆದು ತರಿಸಿಕೊಳ್ಳಬಹುದು.

2. ಪ್ರತಿ ಒಂದು ದರಖಾಸ್ತಿನೊಡನೆ ಒಂದುನೂರು ರೂಪಾಯಿನ ಕರೆನ್ಸಿ ನೋಟನ್ನು ಅಡ್ವಾನ್ಸಾಗಿ ಕಳುಹಿಸತಕ್ಕದ್ದು; ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತು ಇರುವ ಲಿಫಾಫೆಗಳನ್ನು "ಕೊಡಗು ಫಾರೆಸ್ಟ್ ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರವರಿಗೆ-ಮಡಿಕೇರಿ" ಎಂದು ವಿಳಾಸ ಬರೆದು ಇಸ್ಪೂರ್ ರಿಜಿಸ್ಟರ್ ಮಾಡಿದ್ದಲ್ಲಿ "ಕರೀಮರ ಕೊಂಡುಕೊಳ್ಳುವ ಬಗ್ಗೆ ದರಖಾಸ್ತು" ಎಂದು ಲಿಫಾಫೆಯ ಮೇಲೆ ಬರೆದಿರಬೇಕು.

3. ತಲಪಿರುವ ದರಖಾಸ್ತುಗಳನ್ನೆಲ್ಲಾ 1903ನೇ ಇಸವಿ ಆಗಸ್ಟ್ 1ನೇ ತಾರೀಖಿನಲ್ಲಿ ಒಡೆಯಲ್ಪಡುವವು. ಈ ತಾರೀಖು ನಂತರ ತಲಪುವ ದರಖಾಸ್ತುಗಳನ್ನು ಒಡೆಯದೇನೇ ಟಪ್ಪಾಲು ಆಫೀಸಿಗೆ ವಾಪಸು ಕಳುಹಿಸಲ್ಪಡುವವು.

4. ದರಖಾಸ್ತುದಾರನು ಮೇಲ್ಕಂಡ ತೊಲೆಗಳ ಪಟ್ಟಿಯಲ್ಲಿ ಕಾಣುವ ಪ್ರತಿ ಒಂದು ಲಾಟಿಗೆ ಪ್ರತ್ಯೇಕವಾಗಿ ತನ್ನ ದರವನ್ನು ನಮೂದಿಸತಕ್ಕದ್ದು. ದರಖಾಸ್ತುಗಳನ್ನು ಒಂದೊಂದು ಕ್ಯೂಬಿಕ್ ಫೂಟಿಗಾಗಲಿ ಯಾ ಇಂಥಿಂಥಾ ತೊಲೆಗಳಿಗೆಂತಾಗಲಿ ಯಾ ಎರಡು ಯಾ ಹೆಚ್ಚು ಲಾಟುಗಳಿಗೆ ಇಷ್ಟು ಒಟ್ಟು ಹಣ ಯೆಂತಾಗಲಿ ಯಾ ಎಲ್ಲಾ ಮರಕ್ಕೆ ಇಷ್ಟೇ ಹಣ ಯೆಂತಾಗಲಿ ಕೇಳಕೂಡದು.

5. ಜಾಸ್ತಿ ದರದ ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲೇಬೇಕೆಂಬುವದಕ್ಕೆ ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ದರಖಾಸ್ತು ಮಂಜೂರಾತಿಯನ್ನು ಸದರಿ ದರಖಾಸ್ತುದಾರನಿಗೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಅಡ್ವಾನ್ಸು ಮೊಬಲಗು ಸ್ಟಾಂಪು ಹಚ್ಚಿಸಿರುವ ರಸೀತಿಗಳನ್ನು ಹಾಜರು ಮಾಡಿದ ವಡನೆ ಅವರಿಗೆ ವಾಪಾಸು ಮಾಡಲ್ಪಡುವದು.

6. ಖರೀದಿದಾರನು ದರಖಾಸ್ತು ಮಂಜೂರಾದ ಏಳುದಿವಸಗಳೊಳಗೆ ಅವನಿಗೆ ಕೊಡಲ್ಪಡುವ ಅಡ್ವಾಯಿಸು ಮೇರೆ ಖರೀದಿ ಮೊಬಲಗಿನ ದಶಾಂಶವನ್ನು ಕೇವಣಿ ಬಗ್ಗ್ಯೂ ಬಾಕಿ ಹಣವನ್ನು (ಮೊದಲು ಇಟ್ಟ ಅಡ್ವಾನ್ಸು ಹಣ ವಜಾಮಾಡಿ) ಮಂಜೂರಾದ 30 ದಿವಸಗಳೊಳಗೂ ಖಜಾನೆಗೆ ಪಾವತಿ ಮಾಡತಕ್ಕದ್ದು. ಸದರಿ ಎರಡು ಮೊಬಲಗುಗಳಲ್ಲಿ ಯಾವದಾದರೂ ಒಂದನ್ನೇ ಆಗಲಿ ಪಾವತಿ ಮಾಡಲು ತಪ್ಪಿದ್ದಲ್ಲಿ ದರಖಾಸ್ತು ರದ್ದುಮಾಡಿ ಅಡ್ವಾನ್ಸು ಹಣ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಮಾರಾಟ ಪುನಹ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲನೇ ದರಖಾಸ್ತುದಾರನನ್ನು ಬದ್ಧನನ್ನಾಗಿ ಮಾಡಲ್ಪಡುವದು.

7. ಮಾರಲ್ಪಟ್ಟ ಮರವು ಮಂಜೂರಾದ ತಾರೀಖು ಲಾಗಾಯಿತು ದರಖಾಸ್ತುದಾರನ ಜವಾಬ್ದಾರಿಯಲ್ಲೇ ಇರುವದು. ಆದರೆ ಮರ ಸಾಗಿಸಲು ಪೂರಾ ಮೊಬಲಗು ಪಾವತಿ ಮಾಡಿದ್ದಲ್ಲದೆ ಬಿಡಲ್ಪಡುವದಿಲ್ಲಾ.

8. ಖರೀದಿದಾರರು ಅವಶ್ಯವಿದ್ದರೆ ತೊಲೆಗಳನ್ನು ಪುನಹ ಅಳತೆ ಮಾಡಬಹುದು. ಆದರೆ ಮರ ಸಾಗಿಸಿದನಂತರ ಕಂಡುಬರುವ ವ್ಯತ್ಯಾಸಗಳನ್ನಾಗಲಿ ಅಥವಾ ಯಾವ ಸಂಗತಿಯಲ್ಲಾದರೂ ಅಂಥಾ ವ್ಯತ್ಯಾಸಗಳನ್ನ ಕುರಿತು ಸಮಾಧಾನ ಪಡಿಸಿದ್ದಲ್ಲದೆ ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರವರು ಒಪ್ಪಿಕೊಳ್ಳಲಿಕ್ಕಿಲ್ಲಾ. ಒಪ್ಪಿಕೊಂಡ ವ್ಯತ್ಯಾಸಗಳಲ್ಲಿ ಹೆಚ್ಚು ಬಂದರೆ ಅದಕ್ಕೆ ಸರಿಯಾಗುವ ಮೊಬಲಗು ಕೊಡಲೂ ಯಾ ಕಡಿಮೆ ಬಂದಲ್ಲಿ ವಜಾ ಪಡೆಯಲೂ ದರಖಾಸ್ತುದಾರರು ಅರ್ಹರಾಗುತ್ತಾರೆ.

9. ತಪ್ಸೀಲು ಪಟ್ಟಿಗಳ ಮತ್ತು ಕಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರಿಗೆ ಬರೆದು ತರಿಸಿಕೊಳ್ಳಬಹುದು.

ಸಿ. ಮೆಕ್ಕಾರ್ತಿ,
ಕೊಡಗು ಡೆಪ್ಯುಟಿ ಕನ್ಸರ್ವೇಟರ್, ಮಡಿಕೇರಿ.

ಬೆಂಗಳೂರು ಡಿಸ್ಟ್ರಿಕ್ಟು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರ ಇರೇಬಿಯುಲ್ಲಿ ನಮೂದಾಗುವ ಗ್ರಾಮಗಳು ಅದರ ಬಾಜೂದಲ್ಲಿ ನಮೂದಾಗುವ ತಾರೀಖುಗಳಲ್ಲಿ ಕಂದಾಯದ ಬಾಕಿಗೋಸ್ಕರ ಮಾಗಡಿ ತಾಲ್ಲೂಕು ಅಮಲ್ದಾರ್‌ರವರ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜೂನ್ 25ನೇ ತಾರೀಖಿನ ಮೈಸೂರು ಗೆಜೆಟ್ 2ನೇ ಭಾಗದಲ್ಲಿ ಪ್ರಾಯಿಷಾಗಿದೆ.

			ಹರಾಜು ತಾರೀಖು.
ಖಾಯಂಗುತ್ತಾ	ಬೈಚಗುಪ್ಪೆ	...	27—7—1903.
"	ಗಂಗೇನಹಳ್ಳಿ	...	28—7—1903.
ಜೋಡಿ	ಚಿಕ್ಕಲೂರು	...	29—7—1903.
"	ಕೊಟಗಾರಹಳ್ಳಿ	...	30—7—1903.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ತಾರೀಖು 19ನೇ ಜೂನ್ 1903.

ಶಿಡ್ಲಘಟ್ಟ ತಾಲ್ಲೂಕು ಸಾದಲಿ ಹೋಬಳಿಗೆ ಸೇರಿದ ದೇವಗಾನಹಳ್ಳಿ, ಕುರುಬರಹಳ್ಳಿ, ಗಡಿಮಂಚೇನಹಳ್ಳಿ, ಯರನಾಗೇನಹಳ್ಳಿ, ಗೊಂಡಹಳ್ಳಿ, ಈ ಗ್ರಾಮಗಳಿಗೆ ಸೇರಿದ ಹಿಡುವಳಿ ಇಲ್ಲದ ಜಮೀನುಗಳನ್ನು ತಾಲ್ಲೂಕ್ ಅಮಲ್ದಾರ್‌ರವರ ರೂಬರೂಬ್, 1903ನೇ ಇಸವಿ ಜುಲೈ 25, 26, 27, 28, 29, 30 ಈ ತಾರೀಖುಗಳಲ್ಲೂ ಆಯಾಯ ನಂಬರ್‌ಗಳ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ 1903ನೇ ಜೂನ್ ತಾರೀಖು 25ನೇ ಮರ್ಕುಂ 25ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 331–332–333–334ನೇ ನಂಬರ್ ಪೇಜುಗಳು ನೋಡತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ತುಮಕೂರ ಡಿಸ್ಟ್ರಿಕ್ಟು ತುಮಕೂರ ತಾಲ್ಲೂಕು ಜೋಡಿ ವಡ್ಡರಹಳ್ಳಿ ಗ್ರಾಮವು 1903ನೇ ಇಸವಿ ಆಗಸ್ಟ್ ಮಾಹೆ 3ನೇ ತಾರೀಖಿನಲ್ಲಿ ತುಮಕೂರ ತಾಲ್ಲೂಕು ಕಚೇರಿ ರೂಬರೂಬ್ ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆಂದು 1903ನೇ ಇಸವಿ ಜೂನ್ ತಿಂಗಳು 18ನೇ ಮುರ್ಕಂ 24ನೇ ನಂಬರ ಮೈಸೂರ ಗೆಜೆಟ್ಟಿನಲ್ಲಿ ಪ್ರಾಯಿಷ್ ಆಗಿ ಇದೆ.

ಎಂ. ಎಸ್. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಜೂನ್ 1903.

1. ಕಂದಾಯದ ಬಾಕೀದಾರರಾದ ಜೋಡಿ ಹೆಮ್ಮಿಗೆ ಗ್ರಾಮದ ವೃತ್ತಿವಂತರಿಂದ ಬರಬೇಕಾದ ಜಮೀನ್ ಕಂದಾಯದ ಬಾಕಿಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಮೈಸೂರ ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಹೆಮ್ಮಿಗೆ ಗ್ರಾಮದಲ್ಲಿ 1903ನೇ ಇಸವಿ ಜುಲೈ 30ನೇ ತಾರೀಖಿನಲ್ಲಿ ಚಾಮರಾಜನಗರ ಸ|| ಡಿ|| ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಹೆಚ್ಚದರಖಾಸು ದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902-1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 467—2—8 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕ್ರಯ.	ಜಮೀನು. ನಂಬರ ಅಥವಾ ಹೊಲಗದ್ದೆಗಳ ಹೆಸರು.	ಜಮೀನು. ವಿಸ್ತೀರ್ಣ ಎಕರೆ ಅಥವಾ ಖಾತೆ.	ಜಮೀನು. ಸಾಗುವಳಿ.	ಜಮೀನು. ಕಂದಾಯ.			ಸರಕಾರಕ್ಕೆ ಬರಬೇಕಾದ ಹಣ ಮತ್ತು ಖರ್ಚು ಸಹಾ ಬಾಕೀ ಮೊಬಲಗು.
					ರೂ. ಆ. ಪೈ.				ರೂ.	ಆ.	ಪೈ.	ರೂ. ಆ. ಪೈ.
ಟಿ. ನರಸೀಪುರ	ತಲಕಾಡು	ಜೋಡಿ ಹೆಮ್ಮಿಗೆ	ಗ್ರಾಮಸ್ಥರು	...	..	ಜೋಡಿ ಹೆಮ್ಮಿಗೆ ಗ್ರಾಮ		...	403	0	2	465—10—8 ಐನ್ 1—8—0 ಖರ್ಚು 467—2—8

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಜೂನ 1903.

1. ಕಂದಾಯದ ಬಾಕೀದಾರರಾದ ಜೋಡಿ ಕಲಿಯೂರು ಗ್ರಾಮದ ವೃತ್ತಿವಂತರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ ಟಿ. ನರಸೀಪುರ ತಾಲ್ಲೂಕು ಕಲಿಯೂರು ಗ್ರಾಮದ ತಾಲ್ಲೂಕು ಕಛೇರಿಯಲ್ಲಿ 1903ನೇ ಇಸವಿ ಜುಲೈ 27ನೇ ತಾರೀಖಿನಲ್ಲಿ ಚಾಮರಾಜನಗರದ ಸ|| ಡಿ|| ಛಾರ್ಜಿನಲ್ಲಿರುವ ಅಸಿಸ್ಟೆಂಟ ಕಮೀಷನರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–1903ನೇ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ ಮೇರಿಗೆ 879—15—5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜು ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಮತ್ತು ಜಮೀನಿನ ಹೆಸರು.	ಜಮೀನು. ಖುಷ್ಕಿ ತರಿ ಬಾಗಾಯತು.	ಜಮೀನು. ವಿಸ್ತೀರ್ಣ.	ಜಮೀನು. ಕಂದಾಯ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.	
					ರೂ. ಆ. ಪೈ.				ರೂ. ಆ. ಪೈ.	ರೂ. ಆ. ಪೈ.	
ತಿ. ನರಸೀಪುರ	ತಲಕಾಡು	ಜೋಡಿ ಕಲಿಯೂರು	ವೃತ್ತಿವಂತರು	...	....	ಜೋಡಿ ಕಲಿಯೂರು ಗ್ರಾಮ...			545 14 9	75 10 2 802 13 3 ——— 878 7 5 1 8 0 ——— 879 15 5 ಬಡ್ಡಿ ಸಹ	ಪ್ಲವ ಸ|| ಕ್ಕೆ ಶುಭಕೃತು ಸ|| ಕ್ಕೆ ಜನ ನೋಟಿಸ್ ವಗೈರೆ

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಜೂನ್ 1903.

1. ಕಂದಾಯದ ಬಾಕೀದಾರರಾದ ಮಡವಾಡಿ ಗ್ರಾಮದ ಇನಾಂದಾರರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಮಡವಾಡಿ ಗ್ರಾಮದಲ್ಲಿ ಸನ್ 1903ನೇ ಆಗಸ್ಟ್ 4ನೇ ತಾರೀಖಿನಲ್ಲಿ ಚಾಮರಾಜನಗರದ ಸ|| ಡಿ|| ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್‍ರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 626—7—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್‍ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್‍ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‍ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್‍ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‍ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್‍ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್‍ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
					ರೂ. ಆ. ಪೈ.	ಸ|| ಮಡವಾಡಿ ಗ್ರಾಮ									
ಟಿ. ನರಸೀಪುರ	ತಲ್ಕಾಡು	ಮಡವಾಡಿ	ಕೋಟೆ ಕನ್ಯಾದಾನಂ ನರಸಿಹ್ಮಾಚಾರ್, ಕಲ್ಯಾಣಮ್ಮ	...	.				336	5	10	624	15	2	ಐನ್
												1	8	0	ಖರ್ಚು
												626	7	2	

* ಯಾ ಬಾಕೀ ಇರುವವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಜೂನ 1903.

1. ಕಂದಾಯದ ಬಾಕೀದಾರರಾದ ಜೋಡಿ ಮುತ್ತತ್ತಿ ಗ್ರಾಮದ ವೃತ್ತಿವಂತರು ವೆಂಕಟಸುಬ್ಬಯ್ಯನವರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಶೀಪುರ ತಾಲ್ಲೂಕು ಜೋಡಿ ಮುತ್ತತ್ತಿ ಗ್ರಾಮದಲ್ಲಿ ಸನ 1903ನೇ ಆಗಸ್ಟ 1ನೇ ತಾರೀಖಿನಲ್ಲಿ ಚಾಮರಾಜನಗರದಲ್ಲಿರುವ ಅ॥ ಕ॥ ರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ ಮೇರೆಗೆ 834—10—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ ಮೊಹರ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರರ ಹೆಸರು.	ಸ್ವತ್ತಿನ ತಪ್ಸೀಲ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯತು.	ವಿಸ್ತೀರ್ಣ.	ಖರಾರು.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.				ರೂ. ಆ. ಪೈ. ಬೇರೀಜು	ರೂ. ಆ. ಪೈ.
ಟಿ. ನರಶೀಪುರ	ರಂಗಸಮುದ್ರ	ಜೋಡಿ ಮುತ್ತತ್ತಿ	ವೃತ್ತಿವಂತರು ವೆಂಕಟಸುಬ್ಬಯ್ಯ ವಗೈರೆ	..	..	ಜೋಡಿ ಮುತ್ತತ್ತಿ ಗ್ರಾಮಕ್ಕೆ ..			474 14 10	907— 2—6 ಜಮಾಬಂದು 74— 0—0 ವಸೂಲ್ 833— 2—6 ಜೋಡಿವಗೈರೆ 1— 8—0 ನೋಟೀಸ್ ಫೀ ವಗೈರೆ 834—10—6

* ಯಾ ಬಾಕಿ ಇರುವವರೆಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಜೂನ್ 1903.

1. ಕಂದಾಯದ ಬಾಕೀದಾರರಾದ ಜೋಡಿದಾರ್ ಪರಮೇಶ್ವರೈಯ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ಟಿ. ನರಸೀಪುರ ತಾಲ್ಲೂಕು ಜೋಡಿ ಬಸವನಪುರ ಗ್ರಾಮದಲ್ಲಿ 1903ನೇ ಇಸವಿ ಆಗಸ್ಟ್ ತಿಂಗಳು 3ನೇ ತಾರೀಖಿನಲ್ಲಿ ಚಾಮರಾಜನಗರದ ಸ|| ಡಿ|| ಛಾರ್ಜಿನಲ್ಲಿರುವ ಅ|| ಕ|| ರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 42 – 0 – 3 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಾದಿನಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧನಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ. ಕಟ್ಟಡಗಳು. ಕಟ್ಟಡದ ಹೆಸರು	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಪೈಕಿ ಜಮೀನಿನ ಹೆಸರು.	ಖುಷ್ಕಿ, ತರಿ, ಬಾಗಾಯ್ತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟೀಸ್ ಫೀ ವಗೈರ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
					ರೂ. ಆ. ಪೈ.				ರೂ. ಆ. ಪೈ.				
ಟಿ. ನರಸೀಪುರ	ರಂಗಸಮುದ್ರ	ಜೋಡಿ ಬಸವನಪುರ	ಜೋಡಿದಾ. ಪರಮೇಶ್ವರಯ್ಯ ವಗೈರೆ ಗಾಂ.	...	..	ಜೋಡಿ ಬಸವನಪುರ ಗ್ರಾಮಕ್ಕೆ			ಜೋಡಿ 52-9-11	40	8	3	ಲೋಕಲ್ ವಗೈರೆ
										1	8	0	ನೋಟಿಸ್ ಫೀ ವಗೈರೆ
										42	0	3	

* ಯಾ ಬಾಕಿ ಇರುವ ವಷ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

ಹಾಸನದ ಸಬ್ ಜಡ್ಜರವರ ಕೋರ್ಟು 1902—1903ನೇ ಇಸವಿ ಜಾರಿ ನಂಬರ್ 756.

ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟು 1898—99ನೇ ಇಸವಿಯ ಒರಿಜಿನಲ್ ದಾವೆ ನಂಬರ್ 16.

ವಾದಿ—ಹಾಸನದ ಕಸಬಾದಲ್ಲಿರುವ ಚಲುವ ಶೆಟ್ಟರ ವೆಂಕಟರಮಣ ಶೆಟ್ಟರ ಮಗ ಸುಬ್ಬಶೆಟ್ಟಿ. } ಪ್ರತಿವಾದಿ—ಹಾಸನದ ಕಸಬಾದಲ್ಲಿರುವ ಮುಸಲ್ಮಾನರ ಸೈದ್ ಅಹಮದ್ ಸಾಹೇಬರ ಮಗ ಸೈದ್ ಖಾದರ್‌ಸಾಬ್.

ಸದರೀ ಮೊಕದ್ದಮೆಯಲ್ಲಿ ಹುಟ್ಟಿದ ಮೈಸೂರು ಡಿ|| ಜಡ್ಜರವರ ಕೋರ್ಟಿನ—ಸರ್ 1899ನೇ ಇಸವಿ ಫೆಬ್ರವರಿ ಮಾಹೆ 23ನೇ ತಾರೀಖು ವುಳ್ಳ ಡಿಕ್ರೀ ಪ್ರಕಾರ 15,890—2—6 ರೂಬಲಗನ್ನು ಸದರೀ ಪ್ರತಿವಾದಿ ಎಂಬುವನು ವಾದಿ ಎಂಬುವನಿಗೆ ಕೊಡತಕ್ಕದ್ದಾಗಿ ತೀರ್ಮಾನವಾಗಿ ಇರುವದರನ್ನನುಸರಿಸಿ ಜಪ್ತೀ ಮಾಡಲ್ಪಟ್ಟ ಸ್ವತ್ತನ್ನು ಹರಾಜು ಮಾಡುವದರ ಮೂಲಕ ಸದರೀ ಡಿಕ್ರಿಯ ಅಮಲ್‌ಜಾರಿ ಮಾಡುವದಕ್ಕೆ ಸರ್ 1899ನೇ ಇಸವಿ ಜುಲೈ ಮಾಹೆ 13ನೇ ತಾರೀಖುವುಳ್ಳ ವಾರಂಟನ್ನು ಜಾರಿಮಾಡುವದರಲ್ಲಿ ಇದರಿಂದ ತಿಳಿಯಪಡಿಸುವದೇನೆಂದರೆ—ಸರ್ 1903ನೇ ಇಸವಿ ಜುಲೈ ಮಾಹೆ 28ನೇ ತಾರೀಖು 11 ಘಂಟೆಗೆ ಈ ಕೋರ್ಟಿನ ನಾಜರು (ಅಥವಾ ಮೊಕರರಾದ ಇತರ ಮನುಷ್ಯನು) ಕೋರ್ಟು ರೂಬರೂ ಸ್ಥಳದಲ್ಲಿ ಚಡದರಖಾಸ್ತುದಾರರಿಗೆ ಮತ್ತು ಉಳಿಕೆ ಇಲ್ಲದೆ ಪ್ರತಿವಾದಿ ಮನುಷ್ಯರ ಈ ಕೆಳಗೆ ನಮೂದಾದ ಸ್ಥಿರಸೊತ್ತಿನ ಆಯಾ ಪದಾರ್ಥಗಳಲ್ಲಿ ಇರುವ ಹಕ್ಕು ಬಾಧ್ಯತೆ ಸಂಬಂಧವನ್ನು ಹರಾಜು ಮೂಲಕ ವಿಕ್ರಯಿಸುತ್ತಾರಲ್ಲದೆ ಅವುಗಳನ್ನಾಗಲೀ ಆ ಪೈಕಿ ಯಾವದನ್ನಾಗಲೀ ಅದರಿಂದ ಬರುವ ಲಾಭವನ್ನಾಗಲೀ ಕಾನೂನಿಗನುಗುಣವಾಗಿ ತಮ್ಮ ಪ್ರಯೋಜನಕ್ಕೋಸ್ಕರ ಸದರೀ ಯವನು ವಿಕ್ರಯಿಸಲು ಈಗ ಚಲಾಯಿಸಬಹುದಾದ ವಿಶಿಷ್ಟ ಅಧಿಕಾರವನ್ನು ಹರಾಜು ಮೂಲಕ ನಾಜರು ವಿಕ್ರಯಿಸುತ್ತಾರೆ.

ಸ್ಥಾವರ ಸ್ವತ್ತು.

ಮಂಜರಾಬಾದು ತಾಲ್ಲೂಕು ಮಾರ್ನಹಳ್ಳಿ ಹೋಬಳಿ ನಡಹಳ್ಳಿ ಗ್ರಾಮದಲ್ಲಿರುವದು.

1. ಸರ್ವೆ ನಂಬರ್ 215, ಎಕರೆ 64, ಆಕಾರ 64-0-0 ವುಳ್ಳ ಹೊನ್ನೆ ತೋಟ ಎಂಬ ಕಾಫಿ ತೋಟಕ್ಕೆ ಚಕ್ಕುಬಂದಿ:—ಪೂರ್ವಕ್ಕೆ—ಗುಡ್ಡದ ನೆತ್ತಿಬರೆ, ಪಶ್ಚಿಮಕ್ಕೆ—ಹನ್ನೆಗದ್ದೆ ಮತ್ತು ಹೊಸ ಗದ್ದೆ ಬೈಲು, ದಕ್ಷಿಣಕ್ಕೆ—ಹೊಸಗದ್ದೆ ಇರೀಬೀಳು ಮತ್ತು ಹಂಗೆಗದ್ದೆಗಂಡಿ, ಉತ್ತರಕ್ಕೆ—ಜಂಬೂರೈಯ್ಯನ ಹಿತ್ತಲು ದಿಣ್ಣೆ. ಈ ಮಧ್ಯೆ ಇರುವದು ಒಂದು.

2. ಸರ್ವೆ ನಂಬರು 68, ಎಕರೆ 16, ಗುಂಟೆ 27, ಆಕಾರ 16—0—0 ವುಳ್ಳ ಗೊದ್ದನ ಮೂಲೆ ಎಂಬ ಕಾಫಿ ತೋಟ. ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ನಡಹಳ್ಳಿಯಿಂದ ಜಂಭಳ್ಳಿಗೆ ಮತ್ತು ಮಲ್ಲಿಗೆ ಗದ್ದೆಗೆ ತಿರಗುವ ದಾರಿ, ದಕ್ಷಿಣಕ್ಕೆ—ಕುಂತಿಕಲ್ಲು ಬೆಟ್ಟ, ಉತ್ತರಕ್ಕೆ—ಗದ್ದೆ. ಈ ಮಧ್ಯೆ ಇರುವ ತೋಟ ಒಂದು.

3. ಸರ್ವೆ ನಂಬರು 250ನೇ ಎಕರೆ 6, ಆಕಾರ 6—0—0 ವುಳ್ಳ ಜಂಬೂರೈಯ್ಯನ ಹಿತ್ತಲು ಎಂಬ ಕಾಫಿ ತೋಟ ಪೂರ್ವಕ್ಕೆ—ಕುಂತಿಕಲ್ಲು ದಿಣ್ಣೆ, ಪಶ್ಚಿಮಕ್ಕೆ—ಹೊನ್ನನಗದ್ದೆ ಕುರಾವ್, ದಕ್ಷಿಣಕ್ಕೆ—ಹೊನ್ನೆಕೂಲು ತೋಟದ ವತ್ತು, ಉತ್ತರಕ್ಕೆ—ಹೊನ್ನನಗದ್ದೆ. ಈ ಮಧ್ಯೆ ಇರುವದು ಒಂದು.

4. ಸರ್ವೆ ನಂಬರು 260, ಎಕರೆ 23, ಗುಂಟೆ 21, ಆಕಾರ 6—0—0 ವುಳ್ಳ ಖುಷ್ಕಿ ಜಮೀನು ಪೂರ್ವಕ್ಕೆ—ಗೊದ್ದನಮೂಲೆ ತೋಟದ ವತ್ತು ತರಿ ಜಮೀನು, ಪಶ್ಚಿಮಕ್ಕೆ—ಪ್ರತಿವಾದಿ ಬಾಬತು ಹೊನ್ನೆಕೂಲು ತೋಟ, ದಕ್ಷಿಣಕ್ಕೆ—ಪ್ರತಿವಾದಿಯ ಗೊದ್ದನ ಮೂಲೆ ಕಾಫಿ ತೋಟ, ಉತ್ತರಕ್ಕೆ—ಮಡಕೆರೆ ಗದ್ದೆ ಬೀಳು ಬಸಂಗದ್ದೆ ಸಹಾ. ಈ ಮಧ್ಯೆ ಇರುವದು ಒಂದು.

5. ಸರ್ವೆ ನಂಬರು 248ನೇ ಎಕರೆ 2, ಗುಂಟೆ 24, ಆಕಾರ 7—0—0 ವುಳ್ಳ ತರಿ ಜಮೀನು ಪೂರ್ವಕ್ಕೆ—ಬೀಳು ಬಸಂಗದ್ದೆ, ಪಶ್ಚಿಮಕ್ಕೆ—ಸರ್ಕಾರಿ ಬೀಳು ಜಮೀನು, ದಕ್ಷಿಣಕ್ಕೆ—ಜಂಬೂರೈಯ್ಯನ ಹಿತ್ತಲು, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವದು ಒಂದು.

6. ಸರ್ವೆ ನಂಬರು 253ನೇ ಎಕರೆ 1, ಗುಂಟೆ 25, ಆಕಾರ 5—0—0 ವುಳ್ಳ ತರಿ ಮತ್ತು ಸರ್ವೆ ನಂಬರು 254ನೇ ಎಕರೆ 1, ಗುಂಟೆ 32, ಆಕಾರ 4—8—0 ವುಳ್ಳ ತರಿ ಈ ಎರಡಕ್ಕೂ ಚಕ್ಕುಬಂದಿ:—ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ಬಂಜರು, ದಕ್ಷಿಣಕ್ಕೆ—ಕುರಾವ್, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವ ಬಾಬತು ಜಮೀನು ಎರಡು.

7. ಸರ್ವೆ ನಂಬರು 247ನೇ ಎಕರೆ 5, ಗುಂಟೆ 20, ಆಕಾರ 1—12—0 ವುಳ್ಳ ಖುಷ್ಕಿ ಜಮೀನು ಪೂರ್ವಕ್ಕೆ—ಜಂಬೂರೈಯ್ಯನ ಹಿತ್ತಲು, ಪಶ್ಚಿಮಕ್ಕೆ—ಹೊನ್ನೆಕೂಲು ತೋಟ, ದಕ್ಷಿಣಕ್ಕೆ—ಹಳ್ಳ ಮತ್ತು ಹೊನ್ನೆಕೂಲು ತೋಟ, ಉತ್ತರಕ್ಕೆ—ಹಳ್ಳ. ಈ ಮಧ್ಯೆ ಇರುವದು ಜಮೀನು ಪೈಕಿ ಅರ್ಧ ಮಾತ್ರ.

ಮಂಜರಾಬಾದು ತಾಲ್ಲೂಕು ಹೆಗ್ಗದ್ದೆ ಗ್ರಾಮದಲ್ಲಿರುವ ಜಮೀನುಗಳು.

8. ಸರ್ವೆ ನಂಬರು 165ನೇ ಎಕರೆ 21, ಗುಂಟೆ 2, ಆಕಾರ 21—0—0 ವುಳ್ಳ ದಿಂಬದ ವುಡವೆ ಕಾಫಿ ತೋಟ ಎರಡಕ್ಕೆ:—ಪೂರ್ವಕ್ಕೆ—ಬೀಕಿಬನದ ವುಡವೆ, ಪಶ್ಚಿಮಕ್ಕೆ—ಸರ್ಕಾರಿ ಪೈಸಾರಿ ದಿಣ್ಣೆ, ದಕ್ಷಿಣಕ್ಕೆ—ಬಂಜರು, ಉತ್ತರಕ್ಕೆ—ಕೊಮಾರೆ ನಿಂಗೆಗೌಡನ ಹಿತ್ತಲು. ಈ ಮಧ್ಯೆ ಇರುವದು ಒಂದು.

9. ಸರ್ವೆ ನಂಬರು 120ನೇ ಎಕರೆ 18, ಗುಂಟೆ 4, ಆಕಾರ 18—0—0 ವುಳ್ಳ ಬೀಕಿಬನದ ವುಡವೆ ಎಂಬ ಕಾಫಿ ತೋಟ:—ಪೂರ್ವಕ್ಕೆ—ದಿಣ್ಣೆ, ಪಶ್ಚಿಮಕ್ಕೆ—ದಿಂಬದ ವುಡವೆ ನಂದಿನ ಅಗಳು, ದಕ್ಷಿಣಕ್ಕೆ—ಸೂಕಳಿ ಮತ್ತು ಓಣಿ, ಉತ್ತರಕ್ಕೆ—ಮುದಿಗೌಡನ ಹಿತ್ತಲು. ಈ ಮಧ್ಯೆ ಇರುವದು ಒಂದು.

10. ಸರ್ವೆ ನಂಬರು 179ನೇ ಎಕರೆ 21, ಗುಂಟೆ 16, ಆಕಾರ 21-0-0 ವುಳ್ಳ ಬೋರವುಡವೆ ಎಂಬ ಕಾಫಿ ತೋಟ:—ಪೂರ್ವಕ್ಕೆ—ಗದ್ದೆ, ಪಶ್ಚಿಮಕ್ಕೆ—ಬಂಜರು, ದಕ್ಷಿಣಕ್ಕೆ—ನೀರು ಕಾಲವೆ ತಿಟ್ಟು, ಉತ್ತರಕ್ಕೆ—ಶೆಟ್ಟಿಹಳ್ಳಿಗೆ ತಿರುಗುವದಾರಿ. ಈ ಮಧ್ಯೆ ಇರುವದು ಒಂದು.

11. ಸರ್ವೆ ನಂಬರು 188ನೇ ಎಕರೆ 33, ಗುಂಟೆ 25, ಆಕಾರ 33—0—0 ವುಳ್ಳ ಮಕ್ಕೆ ಇಕ್ಕಲೆಂಬ ಕಾಫಿತೋಟ:—ಪೂರ್ವಕ್ಕೆ—ಖುಷ್ಕಿ ಸಾಗುವಳಿ ಜಮೀನು, ಪಶ್ಚಿಮಕ್ಕೆ—ದಿಣ್ಣೆ, ದಕ್ಷಿಣಕ್ಕೆ—ಸರ್ಕಾರಿ ಬಂಜರು, ಉತ್ತರಕ್ಕೆ—ಶುಕ್ರವಾರ ಸಂತೆಗೆ ತಿರಗುವ ದಾರಿ ವತ್ತು. ಈ ಮಧ್ಯೆ ಇರುವದು ಒಂದು.

12. ಸರ್ವೆ ನಂಬರ್ 79ನೇ ಎಕರೆ 19, ಗುಂಟೆ 34, ಆಕಾರ 19—8—0 ವುಳ್ಳ ದೊಡ್ಡ ವುಡವೆಯೆಂಬ ಕಾಫೀತೋಟಾ:—ಪೂರ್ವಕ್ಕೆ—ನಂಜೆಗೌಡನ ತೋಟು, ಪಶ್ಚಿಮಕ್ಕೆ—ಸೊಕಳ್ಳಿ, ದಕ್ಷಿಣಕ್ಕೆ—ಕಾಡುಮನೆಗೆ ತಿರುಗುವದಾರಿ, ಉತ್ರಕ್ಕೆ—ಜಂಬೂರು ವುಡವೆ. ಈ ಮಧ್ಯೆ ಇರುವದು ಒಂದು.

ಹಾಸನದ ಕಸಬಾದಲ್ಲಿರತಕ್ಕದ್ದು.

13. ಅಜ್ಜಪ್ಪನವರ ಮುದ್ದಣ್ಣನವರ ಮಕ್ಕಳು ಪದ್ಮರಾಜೈಯ್ಯ, ಚಂದ್ರಯ್ಯ, ಪಾಯಣ್ಣನವರ ಮಕ್ಕಳು ಆದಿರಾಜೈಯ್ಯ, ಅಂತಪ್ಪ, ಜಿನ್ನಪ್ಪ ಈ 5ಜನಗಳಿಂದ ಪ್ರತಿವಾದಿಯು ಖರೀದಿಗೆ ಪಡದು ಇರುವ ಇದೇ ಕಸಬಾ ಅಂಗಡೀಬೀದಿಯಲ್ಲಿರುವದು:—ಪೂರ್ವಕ್ಕೆ—ದೊಡ್ಡಹಳ್ಳಿ ಪಾಯಪ್ಪಶೆಟ್ರಿಂದ ಪ್ರತಿವಾದಿಗೆ ಖರೀದಿಯಾಗಿರುವ ಅಂಗಡಿ ಮತ್ತು ಮನೆ ಅರಗಿನ ವೋಣಿ ಮತ್ತು ಗರುಡಗಂಬ, ಪಶ್ಚಿಮಕ್ಕೆ—ಷಾಪುರಜಾ ಮೊಹದೀನ್ ಸಾಬರು ಹರಾಜಿನಲ್ಲಿ ತೆಗದುಕೊಂಡಿರುವ ಮನೆ ಅರಗಿನವೋಣಿ, ದಕ್ಷಿಣಕ್ಕೆ—ಮಾಡಿಮನೆ ಕೇಶವೈಯ್ಯನವರ ಮನೆ ಹಿತ್ತಲುಗೋಡೆ, ಉತ್ರಕ್ಕೆ—ರಾಜಬೀದಿ. ಈ ಮಧ್ಯೆ ಇರುವ ಹೆಂಚಿನ ಮಾಳಿಗೆಗಳೂ ಶೇರಿ ಅಂಕಣ 15ವುಳ್ಳ ಮಹಡಿ ಕಟ್ಟಡ ಇದಕ್ಕೆ ಶೇರಿದ ಹಿತ್ತಲುಸಹಾ ಪೂರ್ವ ಪಶ್ಚಿಮ ಗಜ 12, ದಕ್ಷಿಣೋತ್ತರ ಚರಂಡಿ ಲಾಗಾಯಿತು ದಕ್ಷಿಣಕ್ಕೆ ಗಜ 12, ಈ ಮಧ್ಯೆ ಇರತಕ್ಕ ಮನೆ ಮತ್ತು ಮಳಿಗೆಗಳ ಪೈಕಿ ಪಶ್ಚಿಮ ಭಾಗದ ಮಾಳಿಗೆ, ಎಂದರೆ, ಪೂರ್ವಕ್ಕೆ—ಈ ಮನೆ ಬೀದಿಬಾಗಲು, ಪಶ್ಚಿಮಕ್ಕೆ—ಡಿಟೋ ಮನೆಗೆ ಶೇರಿದ ಮಾಳಿಗೆ, ದಕ್ಷಿಣಕ್ಕೊ—ಡಿಟೋ ಮನೆ, ಉತ್ರಕ್ಕೆ—ರಾಜಬೀದಿ. ಈ ಮಧ್ಯೆ ಇರತಕ್ಕ ನಾಗಪ್ಪಶೆಟ್ರು ಧರಣಯ್ಯನವರ ಮಳಿಗೆ 1ಕ್ಕೆ ಅಂಕಣ 1, ಇದರ ಅಳತೆ ಪೂರ್ವಪಶ್ಚಿಮ ಗಜ 3, ದಕ್ಷಿಣೋತ್ತರ ಗಜ 5, ವುಳ್ಳ ಕಟ್ಟಡಾ ಶಿವಾಯಿ ಬಾಕೀ ದರ ಅಂಕಣ 14, ಇದರ ಹಿತ್ತಲು ಸಹಾ.

14. ನಾಗಪ್ಪ ಶೆಟ್ರು ಮಕ್ಕಳು ಧರಣೈಯ್ಯ, ಶ್ರಿನಿವಾಸ ಈ ಎರಡು ಜನರಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಅಂಗಡಿಬೀದಿ ಸಾಲಿನಲ್ಲಿರುವದು:—ಪೂರ್ವಕ್ಕೆ ಪಶ್ಚಿಮಕ್ಕೆ ದಕ್ಷಿಣಕ್ಕೆ ಸಹಾ ಮೇಲ್ಕಂಡ ಪ್ರತಿವಾದಿ ಮನೆ, ಉತ್ರಕ್ಕೆ ರಾಜಬೀದಿ. ಈ ಮಧ್ಯೆ ಇರುವ ಅಂಗಡಿ ಪೂರ್ವ ಪಶ್ಚಿಮ ಗಜ 5, ದಕ್ಷಿಣೋತ್ತರ ಗಜ 3 ವುಳ್ಳ ಮಹಡಿ ಕಟ್ಟಡ ಒಂದು.

15. ಶ್ಯಾನುಭೋಗ ಶಿವರಾಮೈಯ್ಯನವರ ಮಗ ಕೃಷ್ಣಪ್ಪನವರಿಂದ ಪ್ರತಿವಾದಿಯು ಭೋಗ್ಯಕ್ಕೆ ಪಡದಿರುವ ಅಂಗಡಿಬೀದಿಯಲ್ಲಿರುವ ಮ್ಯುನಿಸಿಪಲ್ ನಂಬರ್ 51, 52, 53, 54, 55 ವುಳ್ಳ ತೊಟ್ಟಿಮನೆ ಪೈಕಿ ಅದರ ಪೂರ್ವಕ್ಕೆ—ಶ್ಯಾನುಭೋಗ ವೆಂಕಟಸುಬ್ಬೈಯ್ಯನವರ ಮನೆ, ಪಶ್ಚಿಮಕ್ಕೆ—ಕಡಗದ ಕೃಷ್ಣಪ್ಪನವರ ಮಗ ವೆಂಕಟರಂಗೈಯ್ಯನವರ ಮನೆ, ದಕ್ಷಿಣಕ್ಕೆ—ಅಂಗಡಿಬೀದಿ, ಉತ್ರಕ್ಕೆ—ಸದರಿ ಕೃಷ್ಣಪ್ಪನವರು ವಾಸವಾಗಿರುವ ಮನೆ, ಈ ಮಧ್ಯೆ ಇರುವ ಹೆಂಚಿನ ಕಟ್ಟಡದ ಮಳಿಗೆಗಳು 2ಕ್ಕೆ ಅಂಕಣ 6, ಇದರ ಅಳತೆ ಪೂರ್ವ ಪಶ್ಚಿಮ ಗಜ $6\frac{1}{3}$, ದಕ್ಷಿಣೋತ್ತರ ಗಜ 5, ಇದರಲ್ಲಿ ಭೋಗ್ಯದ ಹಕ್ಕುಮಾತ್ರ.

16. ಇದೇ ಕಸಬಾ ದೊಡ್ಡಕಟ್ಟೆ ಪಾಯಪ್ಪನವರ ಹೆಂಡತಿ ಪದ್ಮಾವತಿ ಅಮ್ಮನವರಿಂದ ಪ್ರತಿವಾದಿಯು ಭೋಗ್ಯ ಮಾಡಿಕೊಂಡಿರುವ ಹಾಸನದ ಕಸಬಾ ಅಂಗಡಿಬೀದಿಯಲ್ಲಿರುವದು:—ಪೂರ್ವಕ್ಕೆ ಬೈಲ್ ರಸ್ತೆ, ಪಶ್ಚಿಮಕ್ಕೆ—ಗರುಡಗಂಬದ ಪ್ರದೇಶ, ದಕ್ಷಿಣಕ್ಕೆ—ಭೀಮಣ್ಣನವರ ಮನೆ, ಉತ್ರಕ್ಕೆ—ಅಂಗಡಿಬೀದಿ, ಈ ಮಧ್ಯೆ ಇರುವ ಅಂಗಡಿ ಮನೆ ಪೈಕಿ ಪೂರ್ವಪಶ್ಚಿಮ ಗಜ $6\frac{1}{2}$, ದಕ್ಷಿಣೋತ್ತರ ಗಜ 12 ವುಳ್ಳ ಅಂಗಡಿ ಮನೆ ಭೋಗ್ಯದ ಹಕ್ಕುಮಾತ್ರ.

17. ಹಾಸನದ ಕಸಬಾ ಈರರಸಿಂಗ್ ಅಣ್ಣಯ್ಯನ ಮಗ ಕೃಷ್ಣಸಿಂಗಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಹಾಸನದ ಕಸಬಾ ಹೊಸಲೈನು ಬೀದಿಯಲ್ಲಿರುವ ಮ್ಯುನಿಸಿಪಲ್ ನಂಬರ್ 982ನೇ ಹೆಂಚಿನ ಮನೆ 1ಕ್ಕೆ ಅಂಕಣ 9, ಹಿತ್ತಲು ಶೇರಿ ಪೂರ್ವಪಶ್ಚಿಮ ಗಜ 20, ದಕ್ಷಿಣೋತ್ತರ ಗಜ 8, ವುಳ್ಳ ಮನೆಗೆ ಚಕ್ಕುಬಂದಿ:—ಪೂರ್ವಕ್ಕೆ—ಹೊಸ ಲೈನ್ ರಸ್ತೆ, ಪಶ್ಚಿಮಕ್ಕೆ—ಮಶೀತಿ ಬೀದಿ, ದಕ್ಷಿಣಕ್ಕೆ—ಮಶೀತಿಗೆ ಹೋಗುವ ದಾರಿ ಉತ್ರಕ್ಕೆ—ಸೈದಲ್ಲಿಸಾಬರ ಮನೆ, ಈ ಮಧ್ಯೆ ಇರುವ ಮನೆ ಒಂದು.

18. ಬಾಬಾಮಿಯಾನಿಂದ ಪ್ರತಿವಾದಿಯು ಖರೀದಿಗೆ ಪಡದಿರುವ ಹಾಸನದ ಕಸಬಾ ಹೊಸ ಲೈನ್‌ನಲ್ಲಿರತಕ್ಕ ನಿವೇಶನಾ:—ಪೂರ್ವಕ್ಕೆ—ಪ್ರತಿವಾದಿ ವಾಸಮಾಡುವ ಮನೆ, ಪಶ್ಚಿಮಕ್ಕೆ—ಕೋಟೆ, ದಕ್ಷಿಣಕ್ಕೆ—ಮಶೀತಿ ಮನೆ ಮತ್ತು ಅಂಗಳಾ, ಉತ್ರಕ್ಕೆ—ಪ್ರತಿವಾದಿಯ ಸ್ವಂತ ಮನೆ. ಈ ಮಧ್ಯೆ ಇರುವದು ಪೂರ್ವ ಪಶ್ಚಿಮ ಗಜ 22, ದಕ್ಷಿಣೋತ್ತರ ಗಜ 18, ವುಳ್ಳ ಮನೆ ನಿವೇಶನಾ.

19. ಹಾಸನದ ಕಸಬಾ ಹೊಸ ಲೈನ್‌ನಲ್ಲಿರುವದು:—ಪೂರ್ವಕ್ಕೆ—ಮಶೀತಿ ಬೀದಿ, ಪಶ್ಚಿಮಕ್ಕೆ—ಕೋಟೆ, ದಕ್ಷಿಣಕ್ಕೆ—ಹಾಶೀಂಸಾಬರ ಮನೆ, ಉತ್ರಕ್ಕೆ—ಫಕ್ರೋದೀನ್ ಸಾಬರ ಮನೆ, ಈ ಮಧ್ಯೆ ಇರತಕ್ಕ ಹೆಂಚಿನ ಕಟ್ಟಡದ ಮನೆ ಇದಕ್ಕೆ ಶೇರಿದ ಹಿತ್ತಲೂ ಸಹಾ ಅಂಕಣ 20 ವುಳ್ಳದ್ದು.

ಈ ಸೊತ್ತುಗಳು ಡಿಕ್ರಿಗೆ ಈಡಾಗಿರುವದ್ದರಿಂದ ಜಫ್ತಿ ಇಲ್ಲದೆ ಹರಾಜು ಆಗುವದಕ್ಕೆ ಆರ್ಡರ್ ಆಗಿರುವದರಿಂದ ಇತರ ತಪಶೀಲುಗಳು ನಮೂದಿಸಲು ಅವಕಾಶವಿಲ್ಲವೆಂದು ಇಸ್ತಿಹಾರಿನಲ್ಲಿ ನಮೂದು ಆಗುತ್ತೆ.

ಈ ನಂಬರು ಡಿಕ್ರಿಗೆ ಈಡಾಗಿರುವ ಆಧಾರ ಸೊತ್ತುಗಳು ಪ್ರತಿವಾದಿ ಸ್ವಯಾರ್ಜಿತವಾದದ್ದು. ಇವುಗಳಲ್ಲಿ ಈ ಪ್ರತಿವಾದಿಗೆ ಪೂರಾ ಹಕ್ಕು ಬಾಧ್ಯತೆ ಇರುತ್ತೆ. ಈ ಸೊತ್ತಿನಲ್ಲಿ ಜೀವನಾಂಶವಾಗಲಿ ಹಿಸ್ಸೆಯಾಗಲಿ ಮೊಹರ್ ಆಗಲಿ ಸಲ್ಲಬೇಕಾದವರು ಯಾರೂ ಇರುವದಿಲ್ಲಾ. ರಿಜಿಸ್ಟರ್ ಇಲಾಖೆಯಲ್ಲಿ ಹುಡುಕಿ ನೋಡಿದ್ದರಲ್ಲೂ ವಾದಿಗೆ ಆಧಾರವಾಗಿರುವದಕ್ಕೆ ಮುಂಚೆ ಯಾವವಿಧವಾಗಿಯೂ ಈ ಪ್ರತಿವಾದಿಯಿಂದ ಯಾರಿಗೂ ಆಧಾರ ಮೊದಲಾದ ಯಾವವಿಧವಾದ ಪರಭಾರೆಯೂ ಆದ ದಾಖ್ಲೆಯೇ ಇರುವದಿಲ್ಲಾ. 24—5—1894ರಲ್ಲೂ ಬೋಸ್ಮೇನಹಳ್ಳಿ ವೆಂಕಟೇಶೈಯ್ಯನವರ ಹೆಸರಿಗೆ (12,000) ರೂಪಾಯಿಗಳಿಗೆ ಈ ವಾದಿಸಾಲಾ ತೀರಿಸುವದಕ್ಕಾಗಿ ಆಧಾರ ಮಾಡಿರುವದಾಗಿ ದಾಖ್ಲೆ ಇರುತ್ತೆ. ಆಪ್ರಕಾರ ಅವರು ವಾದಿಸಾಲಾ ತೀರಿಸಿಯೂ ಇಲ್ಲಾ. ಆ ನಡವಳಿಕೆ ನಿಜವಾದ್ದು ಅಲ್ಲಾ. ಇವನಿಗೆ ಮಗ 1ನೇ ಸೈದ್‌ಅಹಮುದ್ ಸುಮಾರು 8—10. 2ನೇ ಸೈದ್‌ಗಫೂರ್ ಸುಮಾರು 4—5. 3ನೇ ಸೈದ್ ಹುಸೇನ್ ಸುಮಾರು 2—3. ಹೆಣ್ಣುಮಗಳು 1ನೇ ಅಮೀನಾಬಿ ಸುಮಾರು 10—12 ವರುಷಗಳು ಈಮೇರೆ ಇರುತ್ತಾರೆ. ಅವರಿಗೆ ಈ ಸೊತ್ತಿನ ಮೇಲೆ ಲಾ ಪ್ರಕಾರ ಯಾವ ಹಕ್ಕು ಬಾಧ್ಯತೆ ಇರುವದಿಲ್ಲಾ ಎಂದು ವಾದಿಯು ಹಾಜರ್ಮಾಡಲ್ಪಟ್ಟ ಪ್ರಮಾಣಪತ್ರಿಕೇಲಿ ನಮೂದಿಸುತ್ತಾನೆಂತ ಇಸ್ತಿಹಾರಿನಲ್ಲಿ ನಮೂದು ಆಗುತ್ತೆ.

ಸಿ. ಬಿ. ಶೇಷಗಿರಿರಾವ್,
ಸಬಾರ್ಡಿನೇಟ್ ಜಡ್ಜ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 711.

ಅರ್ಜೀದಾರ (1) ಆನೇಕಲ್ ತಾಲ್ಲೂಕು ಅತ್ತಿಬೆಲೆಯಲ್ಲಿ ಇರುವ 1ನೇ ರಾಮಸ್ವಾಮಯ್ಯ, (2) ಬೆಂಗಳೂರು ಸಿದ್ದಿಕಟ್ಟೆಯಲ್ಲಿರುವ ಕಾವೇರಮ್ಮ, ಮೈನರಾದ ಬೆಂಗಳೂರು ಸಿದ್ದಿಕಟ್ಟೆ ಸ್ಥಳದ ಅಶ್ವತ್ಥ ನಾರಾಯಣಯ್ಯನ ಮಗ ಶ್ರೀನಿವಾಸಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಶ್ರೀನಿವಾಸಯ್ಯನಿಗೆ ತಾತ ಮತ್ತು ಅಜ್ಜಿ ಆಗಬೇಕೆಂಬ ಹಕ್ಕಿನ ಮೇಲೆ 1ನೇ ರಾಮಸ್ವಾಮಯ್ಯ, 2ನೇ ಕಾವೇರಮ್ಮ ಎಂಬುವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1903ನೇ ಇಸವಿ ತಾರೀಖು ಜುಲೈ 17ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

ಸರ್ 1903ನೇ ಇಸವಿ ಜೂನ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 712.

ಅರ್ಜೀದಾರರು ಆನೇಕಲ್ಲು ತಾಲ್ಲೂಕು ಕೊಳಕೂರಿನಲ್ಲಿ ಇರುವ 1ನೇ ಈಶ್ವರಭಟ್ಟ, 2ನೇ ಈತನ ಮಗ ಸುಬ್ಬಯ್ಯ, ಮೈನರಾದ ಆನೇಕಲ್ಲು ತಾಲ್ಲೂಕು ಕೊಳಕೂರು ವೆಂಕಟರಾಮಭಟ್ಟರ ಮಕ್ಕಳು 1ನೇ ಸುಬ್ಬಯ್ಯ, 2ನೇ ಶೇಷಮ್ಮನ ಆಸ್ತೀವಿಷಯದಲ್ಲಿ—

ಸದರೀ ಮೈನರಾದ 1ನೇ ಸುಬ್ಬಯ್ಯ, 2ನೇ ಶೇಷಮ್ಮನಿಗೆ ಚಿಕ್ಕತಂದೆ ಆಗಬೇಕೆಂಬ ಹಕ್ಕಿನಮೇಲೆ 1ನೇ ಈಶ್ವರಭಟ್ಟ, 2ನೇ ಸುಬ್ಬಯ್ಯನೆಂಬುವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1903ನೇ ಇಸವಿ ಜುಲೈ 17ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

ಸರ್ 1903ನೇ ಇಸವಿ ಜೂನ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಪಿ. ರಂಗಾಚಾರ್,
ಸಬಾರ್ಡಿನೇಟ್ ಜಡ್ಜ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 540.

ಮೃತಪಟ್ಟ P. V. ರುದ್ರಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಚಾಮರಾಜಮೊಹಲ್ಲಾದಲ್ಲಿರುವ ಪಂಡಿತ ವೀರಣ್ಣನವರ ಮಗ P. V. ರುದ್ರಪ್ಪ ಪಾತಿ ಇವನ ಮಗ ವೀರಭದ್ರಪ್ಪ ಮೈ|| ಗಾ|| ಪಂಡಿತ ವೀರಣ್ಣನವರು, ಮೃತಪಟ್ಟ ಸದರೀ ರುದ್ರಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ರುದ್ರಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜುಲೈ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರುದ್ರಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಜೂನ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ್ 551.

ಮೃತಪಟ್ಟ ವೆಂಕಟರಮಣೈಯ್ಯನವರ ಶೀನಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಡಿಸ್ಟ್ರಿಕ್ಟು ಫಾರೆಸ್ಟ್ ಡೆಪ್ಯುಟಿ ಕ್ಲಾರ್ಕು ಹುಣಸೂರು ಸುಬ್ಬಣ್ಣನವರ ಮನೇಲಿರುವ ವೆಂಕಟರಮಣೈಯ್ಯನವರ ಮಗಳು ತುಳಸಮ್ಮ, ಮೃತಪಟ್ಟ ಸದರೀ ಶೀನಪ್ಪನವರಿಗೆ ತಂಗಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಶೀನಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ಆಕ್ಟು ಮೇರೆಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸರ್ 1903ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶೀನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಜೂನ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 567.

ಮೃತಪಟ್ಟ ನರಹರಿ ಪುಟ್ಟಕೂಸಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಲಕ್ಷ್ಮೀವಿಲಾಸ ಅಗ್ರಹಾರದಲ್ಲಿರುವ ನರಹರಿ ಪುಟ್ಟಕೂಸಾಚಾರ್ ಪುರಫ್ ಅಪ್ಪಣ್ಣಾಚಾರ್ರ ಮಕ್ಕಳು ನರಸಮ್ಮ ಪುರಫ್ ಲಕ್ಷ್ಮಂಬಾಯಿ, ಮೃತಪಟ್ಟ ಸದರೀ ಪುಟ್ಟಕೂಸಾಚಾರ್ರಿಗೆ ಮಗಳು ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಪುಟ್ಟ ಕೂಸಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಪುಟ್ಟಕೂಸಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 580.

ಮೃತಪಟ್ಟ ಬಸವಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜಿನಗೂಡು ತಾ|| ದಾಸನೂರು ಹೋಬಳಿ ಕಾರ್‍ಯ ಗ್ರಾಮದಲ್ಲಿ ಇರುವ ಪಾತಿಯಾದ ಗುರುಶಿದ್ದನ ಬಸವೈಯ್ಯನ ಹೆಂಡತಿ ಮಲ್ಲಮ್ಮ, ಮೃತಪಟ್ಟ ಸದರೀ ಬಸವಯ್ಯನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ತಾ|| ಕಾರ್ಯದಲ್ಲಿ ವಾಸಸ್ಥರಾಗಿ ಮೃತಪಟ್ಟ ಬಸವಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ VIIನೇ ನಂಬರ್ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟುಮೋಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 582.

ಮೃತಪಟ್ಟ ಬೆಂಗಳೂರು ಶೇಷಗಿರಿರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀರಂಗಪಟ್ಟಣದಲ್ಲಿರುವ ಗಂಜಾಂ ವರ್ಕ್ಸ್ ಇನ್ಸ್‌ಪೆಕ್ಟರು ಆಗಿದ್ದ ಶೇಷಗಿರಿರಾಯರ ಮಗ ಬಾಳಾಜಿರಾವ್ ಮೈನರ್, ಗಾರ್ಡಿಯನ್ ತಾಯಿ ನಾಗೂಬಾಯಿ, ಮೃತಪಟ್ಟ ಸದರೀ ಶೇಷಗಿರಿರಾಯರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಗಂಜಾಂದಲ್ಲಿ ವಾಸಸ್ಥರಾಗಿ ಮೃತಪಟ್ಟ ಶೇಷಗಿರಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶೇಷಗಿರಿರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 22ನೇ ತಾರೀಖಿನಲ್ಲಿ ಕೋರ್ಟುಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜೈಯ್ಯಂಗಾರಿ,
ಸಬ್ ಜಡ್ಜ್.

ತುಮಕೂರು ಮುನ್ಸೀಫ್ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಮಿ|| ಅರ್ಜೀ ನಂಬರ್ 738.

ಮೃತಪಟ್ಟ ಕಂಟ್ರಾಕ್ಟರ್ ಶಿವೈಯ್ಯನಾಯಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ ರಂಗರಾವುನಾಯಡು, ಮೃತಪಟ್ಟ ಸದರೀ ಶಿವೈಯ್ಯನಾಯಡರಿಗೆ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರಲ್ಲಿ ಮೃತಪಟ್ಟ ಶಿವೈಯ್ಯನಾಯಡರ ಜಿಂದಗಿ ಬಗ್ಯಾಗಿ ಬರತಕ್ಕ 2,500—0—0 ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರ್ರ ಅರ್ಜಿಯನ್ನು ಸನ್ 1903ನೇ ಇಸವಿ ಜುಲೈ ತಿಂಗಳು ತಾರೀಖು 10ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿವೈಯ್ಯನಾಯಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಶೇಷಗಿರಿರಾವ್,
ಮುನ್ಸೀಫ್.

ಇಸ್ತಿಹಾರ.

ಬೆಂಗಳೂರಿನಲ್ಲಿ ಇರುವ ಮೈಸೂರು ಸ್ಟೇಟ್ ಹುಜೂರು ಖಜಾನೆಯಲ್ಲಿ ಭಂಗಾರದ ಹಣಗಳು ವರಹಾಗಳು ಮತ್ತು ನಗಗಳು ಹರಾಜು ಮಾಡಲ್ಪಡುವದು.

ಮೈಸೂರು ಗಾರ್ವಮೆಂಟ್ ನಂ. 16644-7—Mis. 2555, 1903ನೇ ಇಸವಿ ಮೇ ತಿಂಗಳು 23ನೇ ತಾರೀಖಿನ ಪ್ರೊಸಿಡಿಂಗ್ಸನಲ್ಲಿ ಅಪ್ಪಣೆ ಆಗಿ ಇರುವದನ್ನು ಅನುಸರಿಸಿ ಈ ಕೆಳಗೆ ನಮೂದಿಸಿರುವ ಹಣಗಳು ವರಹಗಳು ನಗಗಳು 1903ನೇ ಇಸವಿ ಜುಲೈ ತಾರೀಖು 8ರಲ್ಲು ಮಧ್ಯಾನ್ಹ 2 ಘಂಟೆ ಲಾಗಾಯಿತು ಹರಾಜು ಮಾಡಲ್ಪಡುತ್ತೆಂದು ಈ ನೋಟಿಸ ಮೂಲಕ ಪ್ರಸಿದ್ಧಪಡಿಸಿ ಇರುತ್ತೆ.

ತಪಶೀಲ್.

ಜಗಲೂರು ತಾಲ್ಲೂಕು ಚಿಳಕಟ್ಟೆ ಗ್ರಾಮದಲ್ಲಿ ವಡ್ಡರ ಹುಲಿಯು ಎಂಬುವನು ಅವನ ಹೊಲ ಉಳುವಾಗ ದೊರಕಿದ್ದು.	(I) 441 ಭಂಗಾರದ ಹಣಗಳು, ಜೋರ (ಹಂದಿ ತಲೆ) ಸ್ಟ್ಯಾಂಪು ವುಳ್ಳದ್ದು. 1 ಜೊತೆ ಭಂಗಾರದ ಕಡಗಗಳು 2—15—6 ತೂಕವುಳ್ಳದ್ದು. 1 ಭಂಗಾರದ ಅಸಲಿ (ಕತ್ತಿನ ಆಭರಣ) ತೂಕ 1—15—0. 1 ಡಿಟ್ಟೋ ತೂಕ ರೂ. 1—0—0 ಒಂದು ಗುಲಗಂಜಿ ತೂಕ. 2 ಭಂಗಾರದ ಉಂಗರಗಳು ತೂಕ 15 ಆಣೆಗೆ ಒಂದು ಗುಲಗಂಜಿ (ವೆಳಪಡಿ).
ಹೊಳಲಕೆರೆ ತಾಲ್ಲೂಕು ಸಾಸಲ್ಲಿ ಗ್ರಾಮದಲ್ಲಿ ಸರಕಾರಿ ಸರ್ವೆ 35ನೇ ನಂಬರ ಜಮೀನಿನಲ್ಲಿ ಇರುವ ಕಲ್ಲಿನ ಬಳಿ ಜೇಗಾರಿ ಹುಡಗಿ ಚೆನ್ನಿಗೆ ದೊರಕಿದ್ದು.	67 ಭಂಗಾರದ ವರಹಾಗಳು ಅನೇಕಮಾದ್ರಿವುಳ್ಳದ್ದು.

ಹರಾಜು ನಿಬಂಧನೆಗಳು.

I. ನಾಣ್ಯಗಳು ಮತ್ತು ನಗಗಳು ತೆಗದುಕೊಳ್ಳುವರು ಹರಾಜಿನ ಹಣ ನಗದು ಪಾವತಿಮಾಡಿ ಪಡಿಯತಕ್ಕದ್ದು.

II. ಸವಾಲ್ ತಿರಸ್ಕಾರ ಮಾಡಿದ ಬಗ್ಯೆ ಕಾರಣ ತಿಳಿಯಪಡಿಸುವದಿಲ್ಲ.

III. ಹರಾಜಿನ ನಿಬಂಧನೆ ವಿಷಯದಲ್ಲಿಯೂ ಖಾಯಂಮಾಡುವ ವಿಷಯದಲ್ಲಿಯೂ ತಿರಸ್ಕರಿಸುವ ವಿಷಯದಲ್ಲಿಯೂ ಈ ಕೆಳಗೆ ರುಜು ಮಾಡಿ ಇರುವವರು ಪೂರಾ ಅಧಿಕಾರ ವುಳಿಸಿಕೊಂಡು ಇರುತ್ತಾರೆ.

ಬಿ. ಗೋಪಾಲಯ್ಯಂಗಾರ್,
ಆಫೀಸರ ಇನಚಾರ್ಜ್, ಸ್ಟೇಟ್ ಹುಜೂರ್ ಟ್ರೆಜರಿ.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ—ಬ ತಾರೀಖು 15ನೇ ಜೂನ 1903.

ಇದರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ :—

				ರೂ. ಆ. ಪೈ.
1.	ಕನ್ನಡ ಲೇಖನ ಪುಸ್ತಕ 6ನೇ ನಂಬರ	...	..	0—1—0
2.	ಡಿಟ್ಟೋ 7ನೇ ಡಿಟ್ಟೋ	..	..	0—1—6
3.	ಕನ್ನಡ ಬಾಲಬೋಧೆ IIನೇ ಭಾಗ	..	....	0—2—6

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಬಿಷ ಆದ್ದು. [ಸಂ. 27.

ಬೆಂಗಳೂರು, ಗುರುವಾರ, ಜುಲೈ ತಾ|| 9, ಸನ್ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜಿರುವಗೈರೇರಿಂದ ಹೊರಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟು ಇಲಾಖಾ.

ಇಸ್ತಿಹಾರ್ನಾಮಾ.

ನೋಟಿಫಿಕೇಷನ್, ತಾರೀಖು 6ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟು ಚನ್ನಪಟ್ಣದ ತಾಲ್ಲೂಕು ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಕ್ಲೋಸ್‌ಪೇಟೆ ಫಾರೆಸ್ಟು ರೇಂಜಿಗೆ ಸೇರಿದ ಮಾಕಳೀ ಮತ್ತು ತೆಂಗಿನಕಲ್ ಸ್ಟೇಟ್ ಫಾರೆಸ್ಟುಗಳಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದಿಸಿರುವ ಕೂಪುಗಳಲ್ಲಿನ ಫಾರೆಸ್ಟು ಬೆಳೆ ಅಂದರೆ, ಸಾದೆಯನ್ನು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಕಡಿದು ಸಾಗಿಸಿಕೊಳ್ಳುವ ಹಕ್ಕುದಾರಿಯನ್ನು ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದ ಸನ್ 1903ನೇ ಇಸವಿ ಜುಲೈ ಮಾಹೆ ತಾರೀಖು 18ರಲ್ಲು ಚನ್ನಪಟ್ಣದ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು:—

ಫಾರೆಸ್ಟಿನ ಮತ್ತು ಕೂಪಿನ ಹೆಸರು.	ಕೆಲಸವಮಾಡುವ ಸರ್ಕಲ್ ನಂಬರ್.	ಕೂಪು ನಂಬರ್.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಎಕರೆ ಒಂದಕ್ಕೆ ಸಿಕ್ಕತಕ್ಕ ಮೊತ್ತ.	ರೈಲ್ವೆ ಸ್ಟೇಷನ್‌ಗೆ ಫಾಸಲೆ.
ಮಾಕಳೀ ಫಾರೆಸ್ಟು ನಾಗವಾರದ ಕೂಪು	I	I	130	ಜಾಜ್ಜಲು, ಹುಲುವೆ, ಈಜಿ, ಪಚಾರಿ, ಗೇದರಿ, ಕಗ್ಗಲಿ, ದೇವದಾರು, ಚನ್ನಂಗಿ, ಗೊರವಿ, ನಾಲಾಡಿ, ದಿಂಡಗ ವಗೈರೆ	ಎಕರೆ ಒಂದಕ್ಕೆ ಸುಮಾರು ಅರ್ಧ ಟನ್	ಚನ್ನಪಟ್ಣದ ರೈಲ್ವೆ ಸ್ಟೇಷನ್‌ಗೆ 6 ಮೈಲಿ
ಡಿಟೋ	II	I	90	ಡಿಟೋ	$2\frac{1}{2}$ ಟನ್	ಡಿಟೋ
ಮಾಕಳೀ ಫಾರೆಸ್ಟು ಕ್ಯಾಸಾಪುರದ ಕೂಪು	III	I	120	ಡಿಟೋ	3 ಟನ್	ಕ್ಲೋಸ್‌ಪೇಟೆ ರೈಲ್ವೆ ಸ್ಟೇಷನ್‌ಗೆ 8 ಮೈಲಿ
ಮಾಕಳೀ ಫಾರೆಸ್ಟು ಅನಮಾನಹಳ್ಳಿ ಕೂಪು	IV	I	200	ಡಿಟೋ	2 ಟನ್	ಡಿಟೋ
ತೆಂಗಿನಕಲ್ ಫಾರೆಸ್ಟು ದ್ಯಾವಾಪುರದ ಕೂಪು	II	I	100	ನಾಯಿಬ್ಯಾಲಾ, ಜಾಜ್ಜಲು, ಹುಲುವೆ, ಪಚಾರಿ, ಈಜಿ, ಕಗ್ಗಲಿ, ದೇವದಾರಿ, ಚನ್ನಂಗಿ ವಗೈರೆ	$2\frac{1}{2}$ ಟನ್	ಚನ್ನಪಟ್ಣದ ರೈಲ್ವೆ ಸ್ಟೇಷನ್‌ಗೆ 9 ಮೈಲಿ
ತೆಂಗಿನಕಲ್ ಫಾರೆಸ್ಟು ಮಲ್ಲಂಗೆರೆ ಕೂಪು	III	I	200	ಡಿಟೋ	ಡಿಟೋ	ಡಿಟೋ ಸ್ಟೇಷನ್‌ಗೆ 6 ಮೈಲಿ

2. ಈ ಹರಾಜು ಪ್ರತ್ಯೇಕ ಪ್ರತ್ಯೇಕ ಕೂಪುವಾರಾಗಿಯೂ, ಇಲ್ಲವೆ ಒಟ್ಟಾಗಿಯೂ, ಅಥವಾ ಎಕರೆ 1ಕ್ಕೆ ಯಾ ಟನ್ 1ಕ್ಕೆ ಇಷ್ಟೆಂದು ನಿರ್ಧರಿಸಿ ಹರಾಜು ಮಾಡತಕ್ಕದ್ದು. ಹರಾಜು ಕ್ರಮ ನಡಿಸತಕ್ಕ ಆಫೀಸರ ಅನುಮತೀಗೆ ಒಳಪಟ್ಟು ಇರುತ್ತೆ. ಅಲ್ಲದೆ ಈ ಹರಾಜು ಫಾರೆಸ್ಟು ಕನಸರವೇಟರ್ ಸಾಹೇಬರವರ ಮಂಜೂರಾತ್ರಿಗೆ ಒಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವೂ ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸತಕ್ಕ ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಆಫೀಸರಿಗೆ ಅಧಿಕಾರವಿರುತ್ತೆ. ಮತ್ತು ಹರಾಜಾಗದೆ ಉಳಕೊಳ್ಳುವ ಕೂಪುಗಳನ್ನು ಅವರಿಗೆ ಕಾಣಬರುವ ರೀತಿಯಲ್ಲಿ ವ್ಯವಸ್ಥೆಹೊಂದಿಸುವ ಅಧಿಕಾರವು ಅವರದಾಗಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ “ 25—0—0 ” ಇಪ್ಪತ್ತೈದು ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕು. ಈ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು.

5. ಮಂಜೂರಾದ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಸವಾಲ್ ಮಂಜೂರಾದ ತಾರೀಖು ಲಾಗಾಯತು ಒಂದು ವಾರದೊಳಗಾಗಿ ಸರಿಯಾದ ಸ್ಟಾಂಪು ಕಾಗದದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪೇ ಯಾ ಕಂಪಾರ್ಟಮೆಂಟನ್ನು ದುಸರಾ ಹರಾಜು ಮಾಡಿಸಲಾದೀತು. ಲುಕ್ಸಾನಿಗೆ ಮೊದಲಿನ ಹರಾಜುದಾರನು ಗುರಿಯಾಗಿರಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೆಗೆ ಈತನು ಭಾಗಿಯಾಗುವದಿಲ್ಲ ಮತ್ತು ಮೊದಲನೇ ಹರಾಜಿನಲ್ಲಿ ಡಿಪಾಜಿಟ್ಟಾಗಿ ಠೇವಣೀ ಇರಿಸಿದ ಮೊಬಲಗು ಜುಲ್ಮಾನೆ ತರೀಖು ಸರ್ಕಾರಕ್ಕೆ ದಂಡವಾಗಿ ಸೇರಿಸಲ್ಪಡುತ್ತೆ.

1. ಸೌದೆ ಮತ್ತು ಚಾಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನು ಸನ 1904ನೇ ಜೂನ್ ಮಾಹೇ ಆಖೈರಿನೊಳಗಾಗಿ ಪೂರೈಸತಕ್ಕದ್ದು, ತಪ್ಪಿದಲ್ಲಿ ಈ ಮೊದಲೆ ಪಾವತಿಯಾಗಿರತಕ್ಕ ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಲ್ಪಡುತ್ತೆ.

2. ಫಾರೆಸ್ಟ್ ಇಲಾಖಾ ಮಾರ್ಫತ್ತು ಗುರ್ತು ಅಥವ ನಿಶಾನೆ ಮಾಡಿರತಕ್ಕ ಮರಗಳೂ, ಮತ್ತು ಮೂರು ಅಂಗುಲ ಸುತ್ತಳತೆ ವೊಳಗಿರುವ ಸೊಸಿಗಳನ್ನು ಅಥವಾ ಗಿಡಗಳನ್ನು ವಿನಃ ಇತರ ಎಲ್ಲಾ ಮರ, ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಒಂದು ಕೊನೆಯಿಂದ ಇನ್ನೊಂದು ಕೊನೆಯ ವರಿವಿಗೆ ಸದರೀ ಕಡಿಯತಕ್ಕ ಕೂಪು ಪೂರೈಸುವ ವರಿವಿಗೂ ಕಡಿಯತಕ್ಕದ್ದು. ಈ ಹರಾಜಿನಲ್ಲಿ ತಂಗಡಿ, ಕಕ್ಕೆ, ಫಲಗಳು ಬಿಡುವ ಅಂದರೆ, ಬ್ಯಾಲ, ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಸೇ, ಅಳಲೆ, ವಗೈರೆಯೂ, ಹುಲ್ಲು ಸಹಾ ಸೇರಿರುವದಿಲ್ಲಾ. ಷರತ್ತುಗಳಿಗೆ ವತಿರಿಕ್ತವಾಗಿ ಮನಸೋಯಿಚ್ಛೆಯಾಗಿ ಮರಗಳನ್ನು, ಗಿಡಗಳನ್ನು ಕಡಿಯುವದು ಮತ್ತು ಇತರ ಯಾವ ತರವಾದ ಖರಾಬ್ ಕೆಲಸ ಅಂದರೆ, ನೆಲಮಟ್ಟದ ಮೇಲೆ ಮೂರು ಅಂಗುಲ ವೃದ್ಧಕ್ಕಿಂತ ಕಡದು ಮೋಟುಗಳು ಇಡುವದು ವಗೈರೇ ಕಂಡುಬಂದಲ್ಲಿ ಅಂಥಾವೆಲ್ಲಾ ಖರಾಬ್ ಕೆಲಸ ದುರಸ್ತು ಪೂರೈಸುವ ವರಿವಿಗೂ ಕೂಪು ಯಾ ಕೂಪುಗಳಲ್ಲಿ ಸೌದೆ ಯಾ ಚಾಬೀನೆ ಕತ್ರಾಯಿಸಿ ಸಾಗಿಸುವದನ್ನು ನಿಲ್ಲಿಸಲ್ಪಡುತ್ತೆ.

3. ಕೂಪು ಯಾ ಕೂಪುಗಳಲ್ಲಿ ಬಾಬು ರೂಢಿಸಿ ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿ ಫಾರೆಸ್ಟ್ ಇಲಾಖಾದಿಂದ ಮೊಕರೂರ್ ಮಾಡಲ್ಪಟ್ಟ ನೌಕರರಿಂದ ರಹದಾರಿಗಳು ಕೊಡಲ್ಪಡುತ್ತೆ. ಈ ರಹದಾರಿಗಳನ್ನು ರಫ್ತಾಗುತ್ತಿರುವ ಮಾಲು ಸಹಿತ ಹಾಜರು ಇರತಕ್ಕದ್ದಲ್ಲದೆ ಕ್ಲೋಸುಪ್ಯಾಟಿ, ಚನ್ನಪಟ್ಣ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ನೇಮಕ ಮಾಡಲ್ಪಟ್ಟ ಯಾವ ಸ್ಥಳ, ಸ್ಟೇಷನ್‌ಗಳ ಬಳಿ ಅಜಮಾಯಿಷೀ ಬಗ್ಗೆ ಹಾಜರ್ಮಾಡಬೇಕು.

4. ಕೂಪು ಯಾ ಕೂಪುಗಳಿಂದ ಸೌದೆ ಮತ್ತು ಚಾಬೀನೇಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆಯೂ, ಅಥವಾ ಸೂರ್ಯಾಸ್ತಮಯವಾದಮೇಲೆಯೂ ಸಾಗಿಸಕೂಡದು.

5. ಇಜಾರೆದಾರನಿಗೆ ಕತ್ರಾವಣಿ ಕೆಲಸಕ್ಕೆ ಕೊಟ್ಟು ಇರುವ ಕೂಪು ಯಾ ಕೂಪುಗಳೊಳಗೆಯಾಗಲೀ ಅಥವಾ ಭಂಡಿ ಮಾರ್ಗದಲ್ಲಿಯಾಗಲೀ ಬೆಂಕೀ ಬಿದ್ದು ಅಂಥಾ ಕೃತ್ಯ ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದದ್ದೆಂದು ಫಾರೆಸ್ಟು ಇಲಾಖಾ ಆಫೀಸರುಗಳಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್‌ದಾರನಾಗಬೇಕು.

6. ಕಂಟ್ರಾಕ್ಟುದಾರನಿಗೂ ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರಿಗೂ ಈ ಸಂದರ್ಭಗಳಲ್ಲಿ ಉಂಟಾಗಬಹುದಾದ ನಿಬಂಧನೆಗಳಿಗೂ ಅಂಥಾ ನಿಬಂಧನೆಗಳಿಗೆ ವಿರೋಧವಾಗಿ ನಡದ ಕೃತ್ಯಗಳ ವಿಷಯವಾಗಿಯೂ ಮತ್ತು ಯಾವ ತರವಾದ ಎಲ್ಲಾ ಹೆಚ್ಚು ಕುಂದುಗಳ ಮೇಲೆ ಫಾರೆಸ್ಟು ಕನಸರವೇಟರ್ ಸಾಹೇಬರವರ ಆರ್ಡರ್ ಆಖೈರ್ ಆಗಿರುತ್ತೆ.

7. ಕಂಟ್ರಾಕ್ಟುದಾರನು ಬರದುಕೊಡತಕ್ಕ ಮುಚ್ಚಳಿಕೆಯು ಹರಾಜು ಕಾಲದಲ್ಲಿ ತಿಳುವಳಿಕೆ ಬಗ್ಗೆ ಓದಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟೀಸು ತಾರೀಖು 13ನೇ ಜೂನ್ 1903ನೇ ಇಸವಿ.

ಮೈಸೂರು ಗೆಜೆಟ್ IIನೇ ಭಾಗ 588ನೇ ಪುಟದಲ್ಲಿ ಇರುವ 26—4—03ನೇ ಮಾರ್ಕಂ ನೋಟಿಫಿಕೇಷನ್ ಅನುಸರಿಸಿ ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳ ಸರ್ಕಾರಿ ಬಂಜರು ಜಮೀನುಗಳಲ್ಲಿರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್ ವಿನಾ) ಆವರಿಕೆ ಮತ್ತು ಕಕ್ಕೆಚಕ್ಕೆ ಜಮಾಯಿಸುವ ಹಕ್ಕನ್ನ ಎರಡು ವರುಷಗಳಿಗೆ ಅಂದರೆ 1903ನೇ ಆಗಸ್ಟ್ 1ರ ಲಾಗಾಯಿತು 1905ನೇ ಜೂನ್ 30ರ ವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1903ನೇ ಇಸವಿ ಜುಲೈ 21ನೇ ತಾರೀಖಿನಲ್ಲಿ ಮಧ್ಯಾಹ್ನ 2 ಘಂಟೆಗೆ ಹರಾಜು ಮಾಡಲ್ಪಡುತ್ತೆ.

(1) ಹೆಗ್ಗಡದೇವನಕೋಟೆ
(2) ಗುಂಡ್ಲುಪೇಟೆ
(3) ನಂಜನಗೂಡು
(4) ಹುಣಸೂರು
(5) ಯಡತೊರೆ
(6) ಚಾಮರಾಜನಗರ

ಷರತ್ತು:—ಮೇಲೆ ನಮೂದಿಸಿರುವ 26—4—03ನೇ ಮಾ॥ ನೋಟಿಫಿಕೇಷನ್ ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

1903ನೇ ಇಸವಿ ಜುಲೈ ತಾರೀಖು 4ರಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್, ಕಡೂರು ಡಿಸ್ಟ್ರಿಕ್ಟ್.

ಕೊಪ್ಪ ತಾಲ್ಲೂಕು, ಲಕ್ಕವಳ್ಳಿ ಫಾರೆಸ್ಟು ಬಡಾವಣೆ (ಹೊಸಹಳ್ಳಿ ಬ್ಲಾಕು).

ಸರ್ 1901ನೇ ಇಸವಿ 11ನೇ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷನ್ 5ನೇ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

ಸರ್ 1903ನೇ ಇಸವಿ ಏಪ್ರೆಲ್ ಮಾಹೆ 30ನೇ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚೈಸಲ್ಪಟ್ಟಿದೆಯಾದ್ದರಿಂದ, ಈ ಇಸ್ತಿಹಾರು ಘಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1903ನೇ ಇಸವಿ ಏಪ್ರೆಲ್ ಮಾಹೆ 30ನೇ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದೃಶ್ಯ, ವಗೈರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇವರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡೆದು ನಡೆದುಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳಿಗಾಗಲೀ, ಇನ್ನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯಿ, ಗಿಡ ಕತರಾವಣೆ ವಗೈರೆ ಮಾಡಲ್ಪಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಈ ಪ್ರದೇಶದಲ್ಲಿ ಯಾವ ಜಮೀನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೊಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟು ರೆಗ್ಯುಲೇಷನ್ 17ನೇ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರು ಗೆಜೆಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ಮಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ವಾದಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನವಿಯೂ, ತಕರಾರೂ, ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಕಡೂರು.	ತರೀಕೆರೆ.	7 ಚದರ ಮೈಲಿಗಳು, 479 ಎಕರೆಗಳು.	ಲಕ್ಕವಳ್ಳಿ ಫಾರೆಸ್ಟ್ ಬಡಾವಣೆ.	ಸ್ಥಳ.—ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ವ ವಾಯುವ್ಯ ದಿಕ್ಕಿನಲ್ಲಿರುವ ಫಾರೆಸ್ಟ್ ಪ್ರದೇಶ. ಚಕ್ಕುಬಂದಿ. ಉತ್ತರಕ್ಕೆ.—ಹೊಸಹಳ್ಳಿಯ ಸರ್ವೆ ನಂ. 61ರ ವಾಯುವ್ಯ ಮೂಲೆಯಿಂದ ಹೊರಟು ಲೈನು ಭದ್ರಾನದಿಯ ಬಲದಡದ ಉದ್ದಕ್ಕೂ ಅದೇ ಸರ್ವೆ ನಂಬರ್ 61ರ ಈಶಾನ್ಯ ಮೂಲೆಯಲ್ಲಿ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಹೊಸಹಳ್ಳಿಯ ಸರ್ವೆ ನಂ. 60ರ ಆಗ್ನೇಯ ಮೂಲೆಯಲ್ಲಿ ತರೀಕೆರೆ-ಯಡಹಳ್ಳಿ ಹೈರೋಡನ್ನು ಮುಟ್ಟುವ ವರಿವಿಗೆ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ತರುವಾಯ ಅದೇ ಹೈರೋಡಿನ ಉದ್ದಕ್ಕೂ ಹೊಸಹಳ್ಳಿಯ ಸರ್ವೆ ನಂ. 51ರ ನೈರುತ್ಯ ಮೂಲೆಯನ್ನು ಸದರೀ ಹೈರೋಡು ಮುಟ್ಟುವ ಸ್ಥಳದ ವರಿವಿಗೆ ಹೋಗುತ್ತದೆ. ಆಮೇಲೆ ಅದೇ ಹೈರೋಡು ತಡಸದ ಸರ್ವೆ ನಂ. 8ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಎಲ್ಲೆಯು ದಕ್ಷಿಣ ದಿಕ್ಕಿಗೆ ತಿರುಗಿಕೊಳ್ಳುವ ಸ್ಥಳದ ವರಿವಿಗೆ ಹೋಗುತ್ತದೆ. ತರುವಾಯ ಲಕ್ಕವಳ್ಳಿ ಸ್ಟೇಟ್ ಫಾರೆಸ್ಟಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಮೇಲ್ಕಂಡ ಸ್ಟೇಟ್ ಫಾರೆಸ್ಟು ಮತ್ತು ನಂದೀಗಾವೆ ಗ್ರಾಮದ ಸರ್ವೆ ನಂ. 53, 52 ವ 41 ಇವುಗಳ ಎಲ್ಲೆ ಬಾಂದುಗಳು ಮುಟ್ಟುವ ಸ್ಥಳದ ವರಿವಿಗೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ನಂದಿಗಾವೆಯ ಸರ್ವೆ ನಂ. 52ರ ಉತ್ತರ ಪಾರ್ಶ್ವದ ಉದ್ದಕ್ಕೂ ತಡಸದಿಂದ ದೊಡ್ಡಕರ್ಾ ಎಸ್ಟೇಟಿಗೆ ಹೋಗುವ ಭಂಡಿ ಜಾಡನ್ನು ಮುಟ್ಟುವ ವರಿವಿಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ದೊಡ್ಡಕರ್ಾ-ತಡಸು ಭಂಡಿ ಜಾಡಿನ ಉದ್ದಕ್ಕೂ ನಂದಿಗಾವೆಯ ಸರ್ವೆ ನಂ. 41, 30 ವ 29 ಇವುಗಳ ಮಧ್ಯೆ ವರುವುದು ಹಳ್ಳವನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 29ರ ಮಧ್ಯೆ ತಡಸದ ಸರ್ವೆ ನಂ. 92ರ ಆಗ್ನೇಯ ಮೂಲೆಗೆ ಮತ್ತು ನಂದಿಗಾವೆಯ ಸರ್ವೆ ನಂ. 30 ವ 29 ಇವುಗಳ ಮಧ್ಯೆ ಹೋಗುತ್ತದೆ. ಆಮೇಲೆ ತಡಸದ ಸರ್ವೆ ನಂ. 91, 74 ವ 61 ಇವುಗಳ ಮಧ್ಯೆ ತರೀಕೆರೆ-ಯಡಹಳ್ಳಿ ಹೈರೋಡುನಿಂದ ದೊಡ್ಡ ಕರ್ಾ ಎಸ್ಟೇಟಿಗೆ ಅಡ್ಡ ರಸ್ತೆ ಹೋಗುವ ಸ್ಥಳದ ವರಿವಿಗೆ ಹೋಗುತ್ತದೆ. ತರುವಾಯ ತಡಸದ ಸರ್ವೆ ನಂ. 8 ವ 50 ಮತ್ತು ಹೊಸಹಳ್ಳಿಯ ಸರ್ವೆ ನಂ. 27, 50, 52, 59, 58 ವ 61 ಇವುಗಳ ಮಧ್ಯೆ ಭದ್ರಾನದಿಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ಭದ್ರಾನದಿಯ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರವರು, ಕಡೂರು ಡಿಸ್ಟ್ರಿಕ್ಟು.

ತಾರೀಖು 1ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಆಗಸ್ಟ್ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು

ಸ್ಥಳದಲ್ಲಿ ಡೆಪ್ಯುಟಿ ಕಮ್ಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರಿಂದಾಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಕೂಡಾ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ :—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.
1	ಹರಿಹರ ಸಬ್ ತಾಲ್ಲೂಕು ..	20-7-1903	ಹರಿಹರ ಸಬ್ ತಾಲ್ಲೂಕು ಕಛೇರಿ
2	ಮಲೆಬೆನ್ನೂರು ಸ್ಟೇಟ್ ಫಾರೆಸ್ಟ್ ..		
3	ಜಗಲೂರು ತಾಲ್ಲೂಕು ..	25-7-1903	ತಾಲ್ಲೂಕು ಕಛೇರಿ
4	ಚಳ್ಳಕೆರೆ ತಾಲ್ಲೂಕು ..	27-7-1903	ಚಳ್ಳಕೆರೆ ತಾಲ್ಲೂಕು ಕಛೇರಿ
5	ಹಿರಿಯೂರು ತಾಲ್ಲೂಕು ..	29-7-1903	ಹಿರಿಯೂರು ಡಿಟೋ
6	ಚಿತ್ರದುರ್ಗದ ತಾಲ್ಲೂಕು ..	30-7-1903	ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸ್
7	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟ್ ..		
8	ನೀರ್ಥಡಿ ಸ್ಟೇಟ್ ಫಾರೆಸ್ಟ್		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

3. ಮೇಲೆ ನಮೂದಿಸುವ ತಂಗಡಿ ಚಕ್ಕೆ ಜಮಾವಣಿ ಹಕ್ಕನ್ನು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ ಚಡದರಖಾಸ್ತುದಾರನಿಗೆ ವಹಿಸಲ್ಪಡುವದು. ಈ ರೀತಿಯಾದ ಆಖೈರ ಚಡಸವಾಲನ್ನ ಮಂಜೂರ್ಮಾಡುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಡೆಪ್ಯುಟಿ ಕಮ್ಮಿಷನರವರು ಸ್ವತಂತ್ರರಾಗಿ ಇರುತ್ತಾರೆ. ಅಂಗೀಕರಿಸಲ್ಪಟ್ಟ ಸವಾಲ್ ಮೊಬಲಗು 1903ನೇ ಸಾಲ್ ಆಗಸ್ಟ್ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ ತಾರೀಖು 30ರ ವರಿಗಿನ 11 ತಿಂಗಳುಗಳಲ್ಲಿ ತಂಗಡಿ ಚಕ್ಕೆ ಜಮಾವಣಿ ಬಗ್ಗೆ ಪಾವತಿ ಮಾಡತಕ್ಕ ಮೊಬಲಗಾಗಿ ಇರುತ್ತದೆ.

4. ಚಡದರಖಾಸ್ತು ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಲಿ ಅಥವಾ ಅವರುಗಳಿಂದ ಕ್ರಮಪ್ರಕಾರ ಅಪ್ಪಣೆಯನ್ನು ಪಡೆದ ಏಜಂಟರುಗಳ ಮೂಲಕವಾಗಲಿ ಹಾಜರಾಗಬಹುದು. ಯಾವ ಮನುಷ್ಯನಾಗಲಿ 50 ರೂಪಾಯಿಗಳು ಡಿಪಾಜಿಟ್ ಇಡುವದಕ್ಕೆ ಮುಂಚಿತವಾಗಿ ತನಗೋಸ್ಕರ ಅಥವಾ ಇತರರಿಗೋಸ್ಕರವಾಗಿಯಾಗಲಿ ಚಡ ಸವಾಲ್ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಚಡ ಸವಾಲ್ದಾರನಲ್ಲದ ಇತರ ಡಿಪಾಜಿಟ್‌ದಾರರ ಮೊಬಲಗನ್ನ ಹರಾಜು ಖೈದಾದ ಮಡನೆ ವಾಪಸ್ ಮಾಡಲ್ಪಡುವದು. ಆಖೈರ ದರಖಾಸ್ತುದಾರರು ಹರಾಜು ಖೈದಾದ ಮಡನೆ ಮೊದಲು ಅವರು ಇಟ್ಟುಇದ್ದ ಡಿಪಾಜಿಟ್ ಮೊಬಲಗು ಸೇರಿ ಹರಾಜ್ ಮೊಬಲಗಿನ ಕಾಲು ಹಿಸ್ಸೆ ಹಣವನ್ನ ಆಯಾ ತಾಲ್ಲೂಕು ಖಜಾನೆಗೆ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಮೊದಲು ಇಟ್ಟದ್ದ ಠೇವಣಿ ಮೊಬಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಹರಾಜು ಮಾಡುತ್ತಾ ಇದ್ದ ಆಫಿಸರರಿಂದ ದುಸರಾ ಹರಾಜು ಮಾಡಲ್ಪಡುವದು.

5. ಮೇಲ್ಕಂಡ ಪ್ಯಾರಾದಲ್ಲಿ ನಮೂದಿಸುವಂತೆ ನಡಿಸಲ್ಪಡುವ ದುಸರಾ ಹರಾಜು ಹಣ ಕೊಡಲು ತಪ್ಪಿದ ಅವಲ್ ಚಡದರಖಾಸ್ತುದಾರನ ರಿಸ್ಕಿಗೆ ಒಳಪಟ್ಟಿರುತ್ತೆ. ದುಸರಾ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿ ಆದಲ್ಲಿ ಅಂಥಾ ಜಾಸ್ತಿ ಮೊಬಲಗಿನ ಹಕ್ಕು ಅವಲ್ ಚಡದರಖಾಸ್ತುದಾರನಿಗೆ ಇರುವದಿಲ್ಲ. ಅದರೆ ಈ ರೀತಿ ನಡಿಸುವ ದುಸರಾ ಹರಾಜಿನಲ್ಲಿ ಹುಟ್ಟುವ ಮೊಬಲಗು ಮೊದಲಿನ ಹರಾಜು ಮೊಬಲಗ್ಗೆ ಕಡಮೆ ಆದಲ್ಲಿ ಅಂಥಾ ಕಮ್ಮಿ ಆಗುವ ಮೊಬಲಗು ಅವಲ್ ದರಖಾಸ್ತುದಾರನು ಪಾವತಿ ಮಾಡತಕ್ಕದ್ದಾಗಿರುತ್ತದೆ.

6. ಇಜಾರೆದಾರನು ಕೆಳಗೆ ನಮೂದಿಸುವ ಷರತ್ತುಗಳ ಅನುಸರಿಸಿ ಒಂದು ಮುಚ್ಚಳಿಕೆ ಬರದು ಕೊಡತಕ್ಕದ್ದು. ಮುಚ್ಚಳಿಕೆಯನ್ನು ಇಜಾರೆ ಮಂಜೂರಾದ ಸಂಗತಿ ಇಜಾರೆದಾರನಿಗೆ ತಿಳಿಸಿದ 15 ದಿನಗಳ ಒಳಗಾಗಿ ಬರದುಕೊಡತಕ್ಕದ್ದಾಗಿರುತ್ತದೆ.

7. ಬಾಕಿ ಉಳಿಯುವ ಮೊಬಲಗನ್ನು 1903ನೇ ಇಸವಿ ಜುಲೈ ಆಖೈರ್ ಒಳಗಾಗಿ ಪಾವತಿ ಮಾಡತಕ್ಕದ್ದು. ಹೀಗೆ ಮಾಡದೆ ತಪ್ಪಿದಲ್ಲಿ ಇಜಾರೆದಾರನು ಮೊದಲು ಇಟ್ಟು ಇದ್ದ ಠೇವಣಿ ಮೊಬಲಗನ್ನು ದಂಡವಾಗಿ ಸರಕಾರಕ್ಕೆ ದಾಖಲ್ಮಾಡಿಕೊಳ್ಳುವದಲ್ಲದೆ ಇಜಾರೇ ಹಕ್ಕಿನ ಬಾಧ್ಯತೆ ಹೋಗಲಾಡಿಸಿಕೊಳ್ಳುವದಲ್ಲದೆ, ಬಾಬು ದುಸರಾ ಹರಾಜಿಗೆ ಒಳಪಡಿಸಲ್ಪಡುವದು. ರೂಪಾಯಿ 1ಕ್ಕೆ ಒಂದಾಣೆ ಮೇರೆಗೆ ಸೆಸ್ಸ್ ವಸೂಲ್ಮಾಡಲ್ಪಡುತ್ತೆ.

ಷರತ್ತುಗಳು.

1. ಎರಡು ವರುಷಕ್ಕೆ ಮೇಲ್ಪಟ್ಟ ದೊಡ್ಡದಾದ ಯಾ ಸಣ್ಣದಾದ ಎಲ್ಲಾ ಗಿಡಗಳನ್ನ ನೆಲಮಟ್ಟಕ್ಕೆ ಕಡಿಯತಕ್ಕದ್ದು.

2. ಎರಡು ವರುಷಕ್ಕೆ ಒಳಪಟ್ಟ ಎಳೇಗಿಡಗಳನ್ನು ಇಜಾರೆದಾರನ ನವಕರರಾಗಲಿ ಅಥವಾ ಆತನ ಷಿಕಮಿ ಕಂಟ್ರಾಕ್ಟದಾರರಾಗಲಿ ಕಡಿಯದಂತೆ ಅಡ್ಡಿ ಮಾಡಲು ಇಜಾರೆದಾರನು ಜವಾಬುದಾರನಾಗಿ ಇರತಕ್ಕದ್ದು.

3. ಕೆಲಸ ನಡಿಸಲು ವಿಂಗಡಿಸಲ್ಪಡುವ ಪ್ರತಿ ಒಂದು ಸರ್ಕಲಿನಲ್ಲಿ ನೇಮಿಸಲ್ಪಡುವ ಇಜಾರದಾರನ ಮೇಸ್ತ್ರಿಗಳ ಮತ್ತು ಪೆಟಿಮಿ ಕಂಟ್ರಾಕ್ಟುದಾರರುಗಳ ಹೆಸರಿನ ಒಂದು ಲೀಸ್ಟು ಕೊಡತಕ್ಕದ್ದು. ಮತ್ತು ಚಕ್ಕೆ ದಾಸ್ತಾನುಮಾಡುವ ಕೋಠಿ ಸಹ ನಮೂದಿಸಬೇಕು.

4. ತೊಟಿ ತೆಗದನಂತರ ಆ ಸಮ್ಮಂಧವಾದ ವಿಸಿಷ್ಟ ಸಾದೆಯು ಇಜಾರೆದಾರನಿಗೆ ಸೇರಿದ್ದಾಗಿ ಇರುತ್ತದೆ.

5. ಇಜಾರೆಗೆ ಸಂಬಂಧಪಟ್ಟ ಚಕ್ಕೆ ಜಮಾವಣೆ ಆದಬಗ್ಗೆ ತಪಸೀಲ್ ಲೆಕ್ಕ ಇಡತಕ್ಕದ್ದಲ್ಲದೆ ಅಂಥಾ ಲೆಕ್ಕವನ್ನು ಡೆಪ್ಯುಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರರೇ ಆಗಲಿ ಅಥವಾ ಇವರುಗಳ ಪೈಕಿ ಯಾರಿಂದಲೇ ಆಗಲಿ ನೇಮಿಸಲ್ಪಡುವ ಇತರ ಯಾವ ಆಫಿಸರರೇ ಆಗಲಿ ತನಿಖೆಗೆ ಬಂದಾಗ ಅವರ ತನಿಖೆಗೆ ಮೇಲ್ಕಂಡ ಲೆಖ್ಖಗಳನ್ನು ಹಾಜರ್ಮಾಡತಕ್ಕದ್ದು.

6. ಸಾಗಿಸಿಕೊಂಡು ಹೋಗುವ ಪ್ರತಿ ಒಂದು ಗಾಡಿ ಬೋಜ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರರು ಮೊಕರರ್ ಮಾಡುವ ರೀತಿಯಲ್ಲಿ ವ್ಯಾಸು ಪಡಿಯತಕ್ಕದ್ದು.

7. ಇಜಾರೆಗೆ ಸಂಬಂಧಪಟ್ಟ ವಿಸಿಷ್ಟ ಚಕ್ಕೆಯನ್ನು 1904ನೇ ಇಸವಿ ಜೂನ್ ಆಖೈರ್ ಒಳಗಾಗಿ ಜಮಾಯಿಸಿ ದಾಸ್ತಾನು ಇಟ್ಟುಯಿದ್ದ ಕೋಠಿಗಳ ಯಾ ರೈಲ್ವೆ ಸ್ಟೇಷನ್ನುಗಳಲ್ಲಿನ ಚಕ್ಕೆಯನ್ನು ಡಿಸ್ಟ್ರಿಕ್ಟು ಸರಹದ್ದು ಹೊರಕ್ಕೆ ತೆಗದುಕೊಂಡು ಹೋಗತಕ್ಕದ್ದು.

8. ಮೇಲೆ ನಮೂದಿಸುವ ಷರತ್ತಿನ ಯಾವದಾದರೂ ಒಂದು ಷರತ್ತಿಗಾದರೂ ತಪ್ಪಿ ನಡದಲ್ಲಿ ಇಜಾರೆಯು ಹಕ್ಕು ರದ್ದು ಮಾಡಲ್ಪಡುವದಲ್ಲದೆ ಅದುವರಿಗೆ ಜಮಾಯಿಸೋಣವಾಗಿದ್ದ ಚಕ್ಕೆ ವಿಸಿಷ್ಟವೂ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡತಕ್ಕದ್ದು. ಮತ್ತು ಇಜಾರೆದಾರನು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ 1,000 ಒಂದು ಸಾವಿರ ರೂಪಾಯಿವರಿಗೆ ಜರ್ಮಾನೆ ವಿಧಿಸಲ್ಪಡುವದಕ್ಕೆ ಬದ್ಧನಾಗಿರುತ್ತಾನೆ.

ಕೆ. ಶಾಮಯ್ಯಂಗಾರ್,

ಫಾರ್ ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೊಡಗು ಫಾರೆಸ್ಟು ಇಲಾಖಾ.

ನೋಟಿಸ್.

ಕರೀಮರದ ಮಾರಾಟ.

ಮಲಬಾರು ಜಿಲ್ಲಾ ಚೆವಿಯಾಪಟ್ಟದಲ್ಲಿ ಈಗ ಜಮಾಯಿಸಿ ಯಿಟ್ಟಿರುವ ಹೆಚ್ಚು ಕಡಿಮೆ 1100 ಕ್ಯೂಬಿಕ್ ಫೂಟು ಉಳ್ಳ 5 ಲಾಟು ಸಾಧಾರಣ ಕೆತ್ತಿರುವ ಕರೀ ಮರವನ್ನು ಕೊಂಡುಕೊಳ್ಳುವ ಬಗ್ಗೆ 1903ನೇ ಇಸವಿ ಆಗಸ್ಟು ತಾರೀಖು 1ನೇ ವರೆಗೆ ದರಖಾಸ್ತುಗಳು ತೆಗದುಕೊಳ್ಳಲ್ಪಡುವವು. ತೋಲೆಗಳ ಪಟ್ಟಿಯನ್ನು ಕೊಡಗುಜಿಲ್ಲಾ ಡೆಪ್ಯುಟಿ ಕನ್ಸರ್ವೇಟರ್, ಮಡಿಕೇರಿ, ಇವರುಗಳಿಗೆ ಬರೆದು ತರಿಸಿಕೊಳ್ಳಬಹುದು.

2. ಪ್ರತಿ ಒಂದು ದರಖಾಸ್ತಿನೊಡನೆ ಒಂದುನೂರು ರೂಪಾಯಿನ ಕರೆನ್ಸಿ ನೋಟನ್ನು ಅಡ್ವಾನ್ಸಾಗಿ ಕಳಿಹಿಸತಕ್ಕದ್ದು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತು ಇರುವ ಲಿಫಾಫೆಗಳನ್ನು "ಕೊಡಗು ಫಾರೆಸ್ಟು ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರವರಿಗೆ-ಮಡಿಕೇರಿ" ಎಂದು ವಿಳಾಸ ಬರೆದು ಇನ್ಷೂರ್ ರಿಜಿಸ್ಟರ್ ಮಾಡಿದ್ದಲ್ಲಿ "ಕರೀಮರ ಕೊಂಡುಕೊಳ್ಳುವ ಬಗ್ಗೆ ದರಖಾಸ್ತು" ಎಂದು ಲಿಫಾಫೆಯ ಮೇಲೆ ಬರದಿರಬೇಕು.

3. ತಲಪಿರುವ ದರಖಾಸ್ತುಗಳನ್ನೆಲ್ಲಾ 1903ನೇ ಇಸವಿ ಆಗಸ್ಟು 1ನೇ ತಾರೀಖಿನಲ್ಲಿ ಪಡಿಯಲ್ಪಡುವವು. ಈ ತಾರೀಖು ನಂತರ ತಲಪುವ ದರಖಾಸ್ತುಗಳನ್ನು ಪಡಿಯದೇನೇ ಟಪ್ಪಾಲು ಆಫೀಸಿಗೆ ವಾಪಸು ಕಳಿಹಿಸಲ್ಪಡುವವು.

4. ದರಖಾಸ್ತುದಾರನು ಮೇಲ್ಕಂಡ ತೋಲೆಗಳ ಪಟ್ಟಿಯಲ್ಲಿ ಕಾಣುವ ಪ್ರತಿ ಒಂದು ಲಾಟಿಗೆ ಪ್ರತ್ಯೇಕವಾಗಿ ತನ್ನ ದರವನ್ನು ನಮೂದಿಸತಕ್ಕದ್ದು. ದರಖಾಸ್ತುಗಳನ್ನು ಒಂದೊಂದು ಕ್ಯೂಬಿಕ್ ಫೂಟಿಗಾಗಲಿ ಯಾ ಇಂಥಿಂಥಾ ತೋಲೆಗಳಿಗೆಂತಾಗಲಿ ಯಾ ಎರಡು ಯಾ ಹೆಚ್ಚು ಲಾಟುಗಳಿಗೆ ಇಷ್ಟು ಒಟ್ಟು ಹಣ ಯೆಂತಾಗಲಿ ಯಾ ಎಲ್ಲಾ ಮರಕ್ಕೆ ಇಷ್ಟೇ ಹಣ ಯೆಂತಾಗಲಿ ಕೇಳಕೂಡದು.

5. ಜಾಸ್ತಿ ದರದ ಯಾವ ದರಖಾಸ್ತನ್ನಾಗಲಿ ಅಂಗೀಕರಿಸಲೇಬೇಕೆಂಬುವದಕ್ಕೆ ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರವರು ಬದ್ಧರಾಗಿರುವದಿಲ್ಲಾ. ದರಖಾಸ್ತು ಮಂಜೂರಾತಿಯನ್ನು ಸದರಿ ದರಖಾಸ್ತುದಾರನಿಗೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಅಡ್ವಾನ್ಸು ಮೊಬಲಗು ಸ್ಟ್ಯಾಂಪು ಹಚ್ಚಿಸಿರುವ ರಸೀತಿಗಳನ್ನು ಹಾಜರು ಮಾಡಿದ ವಡನೆ ಅವರಿಗೆ ವಾಪಾಸು ಮಾಡಲ್ಪಡುವದು.

6. ಖರೀದಿದಾರನು ದರಖಾಸ್ತು ಮಂಜೂರಾದ ಏಳುದಿವಸಗಳೊಳಗೆ ಅವನಿಗೆ ಕೊಡಲ್ಪಡುವ ಅಡ್ವಾಯಿಸು ಮೇರೆ ಖರೀದಿ ಮೊಬಲಗಿನ ದಶಾಂಶವನ್ನು ಠೇವಣಿ ಬಗ್ಗೂ ಬಾಕಿ ಹಣವನ್ನು (ಮೊದಲು ಇಟ್ಟ ಅಡ್ವಾನ್ಸು ಹಣ ವಜಾಮಾಡಿ) ಮಂಜೂರಾದ 30 ದಿವಸಗಳೊಳಗೂ ಖಜಾನೆಗೆ ಪಾವತಿ ಮಾಡತಕ್ಕದ್ದು. ಸದರಿ ಎರಡು ಮೊಬಲಗುಗಳಲ್ಲಿ ಯಾವದಾದರೂ ಒಂದನ್ನೇ ಆಗಲಿ ಪಾವತಿ ಮಾಡಲು ತಪ್ಪಿದ್ದಲ್ಲಿ ದರಖಾಸ್ತು ರದ್ದುಮಾಡಿ ಅಡ್ವಾನ್ಸು ಹಣ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಮಾರಾಟ ಪುನಹ ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲನೇ ದರಖಾಸ್ತುದಾರನನ್ನು ಬದ್ಧನನ್ನಾಗಿ ಮಾಡಲ್ಪಡುವದು.

7. ಮಾರಲ್ಪಟ್ಟ ಮರವು ಮಂಜೂರಾದ ತಾರೀಖು ಲಾಗಾಯಿತು ದರಖಾಸ್ತುದಾರನ ಜವಾಬ್ದಾರಿಯಲ್ಲೇ ಇರುವದು. ಆದರೆ ಮರ ಸಾಗಿಸಲು ಪೂರಾ ಮೊಬಲಗು ಪಾವತಿ ಮಾಡಿದ್ದಲ್ಲದೆ ಬಿಡಲ್ಪಡುವದಿಲ್ಲಾ.

8. ಖರೀದಿದಾರರು ಆವಶ್ಯವಿದ್ದರೆ ತೋಲೆಗಳನ್ನು ಪುನಹ ಅಳತೆ ಮಾಡಬಹುದು. ಆದರೆ ಮರ ಸಾಗಿಸಿದನಂತರ ಕಂಡುಬರುವ ವ್ಯತ್ಯಾಸಗಳನ್ನಾಗಲಿ ಅಥವಾ ಯಾವ ಸಂಗತಿಯಲ್ಲಾದರೂ ಅಂಥಾ ವ್ಯತ್ಯಾಸಗಳನ್ನ ಕುರಿತು ಸಮಾಧಾನ ಪಡಿಸಿದ್ದಲ್ಲದೆ ಡೆಪ್ಯುಟಿ ಕನ್ಸರ್ವೇಟರ್ ಸಾಹೇಬರವರು ಒಪ್ಪಿಕೊಳ್ಳಲಿಕ್ಕಿಲ್ಲಾ. ಒಪ್ಪಿಕೊಂಡ ವ್ಯತ್ಯಾಸಗಳಲ್ಲಿ ಹೆಚ್ಚು ಬಂದರೆ ಅದಕ್ಕೆ ಸರಿಯಾಗುವ ಮೊಬಲಗು ಕೊಡಲೂ ಯಾ ಕಡಿಮೆ ಬಂದಲ್ಲಿ ವಜಾ ಪಡಿಯಲೂ ದರಖಾಸ್ತುದಾರರು ಅರ್ಹರಾಗುತ್ತಾರೆ.

9. ತಪ್ಸೀಲು ಪಟ್ಟಿಗಳ ಮತ್ತು ಇಡಿಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರಿಗೆ ಬರೆದು ತರಿಸಿಕೊಳ್ಳಬಹುದು.

ಸಿ. ಮುಕ್ಕಾರ್ಜಿ,

ಕೊಡಗು ಡೆಪ್ಯುಟಿ ಕನ್ಸರ್ವೇಟರ್, ಮಡಿಕೇರಿ.

ಬೆಂಗಳೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಮರಳೆ ಬೇಕುಪ್ಪೆ ಗ್ರಾಮದ ಗುರುಬಸಮ್ಮನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಕಾರ್ ಹಳ್ಳಿ ತಾಲ್ಲೂಕು ಕಚೇರಿಯಲ್ಲಿ 1903ನೇ ಆಗಸ್ಟ್ 3ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—03ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 471—10—1 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನ್ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ಖಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು: ಕಟ್ಟಡದ ಹೆಸರು.	ಕಟ್ಟಡಗಳು: ಅಂದಾಜು ಕಿಮ್ಮತ್ತು.	ಜಮೀನು: ನಂಬರ ಅಥವಾ ಭಾಗದ ಹೆಸರು.	ಜಮೀನು: ಖುಷ್ಕಿ, ತರಿ ವ ಭಾಗಾಯತು.	ಜಮೀನು: ವಿಸ್ತೀರ್ಣ.		ಜಮೀನು: ಬೀರಿಜು.			ಸರ್ಕಾರಕ್ಕೆ ಬರಬೇಕಾದ ಮೊಬಲಗು ವ ಸ್ವತ್ತಿನ ವಿಕ್ರಯಕ್ಕೆ ಕಾರಣವಾದ ಬಾಕೀ ಮೊಬಲಗು			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಕಾರ್ಕಾರ್ ಹಳ್ಳಿ	ಉಯ್ಯಂಬಳ್ಳಿ	ಮರಳೆ ಬೇಕುಪ್ಪೆ	ಗುರುಬಸಮ್ಮ	...	...	ಪೂರಾ ಗ್ರಾಮ		4749	23	1338	12	0	471	10	1	
													ಸಾಲಿಯಾನಾ ಪಾವತಿ ಮಾಡತಕ್ಕ ಮೊಬಲಗು.			
													167	0	0	ಜೋಡಿ
													83	10	9	ಸಸ್ತು
													250	10	9	ಜುಮ್ಲಾ

* ಯಾ ಬಾಕೀ ಇರುವವುಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರ ಇರೇಬಿ ಯಲ್ಲಿ ನಮೂದಾಗುವ ಗ್ರಾಮಗಳು ಅದರ ಜಾಜುದಲ್ಲಿ ನಮೂದಾಗುವ ತಾರೀಖುಗಳಲ್ಲಿ ಕಂದಾಯದ ಬಾಕಿಗೋಸ್ಕರ ಮಾಗಡಿ ತಾಲ್ಲೂಕು ಅಮಲ್ದಾರ್ರವರ ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತೆಂದು 1903ನೇ ಜೂನ್ 25ನೇ ತಾರೀಖಿನ ಮೈಸೂರು ಗೆಜೆಟ 2ನೇ ಭಾಗದಲ್ಲಿ ಛಾಯಿಸಾಗಿದೆ.

			ಹರಾಜು ತಾರೀಖು.
ಖಾಯಂಗುತ್ತಾ	ಬೈಚಗುಪ್ಪೆ	...	27—7—1903.
,,	ಗಂಗೇನಹಳ್ಳಿ	...	28—7—1903.
ಜೋಡಿ	ಚಿಕ್ಕಲೂರು	...	29—7—1903.
,,	ಕೊಟಗಾರಹಳ್ಳಿ	...	30—7—1903.

ಹೆಚ್. ಹೆಚ್. ಸ್ಪಾರ್ಕ್ಸ್,
ಡೆಪ್ಯುಟಿ ಕಮಿಷನರ.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ತಾರೀಖು 19ನೇ ಜೂನ್ 1903.

ಶಿಡ್ಲಘಟ್ಟ ತಾಲ್ಲೂಕು ಸಾದಲಿ ಹೋಬಳಿಗೆ ಶೇರಿದ ದೇವಗಾನಹಳ್ಳಿ, ಕುರುಬರಹಳ್ಳಿ, ಗಡಿಮಂಚೇನಹಳ್ಳಿ, ಯರನಾಗೇನಹಳ್ಳಿ, ಗುಂಡ್ಲಹಳ್ಳಿ, ಈ ಗ್ರಾಮಗಳಿಗೆ ಶೇರಿದ ಹಿಡುವಳಿ ಇಲ್ಲದ ಜಮೀನುಗಳನ್ನು ತಾಲ್ಲೂಕ್ ಅಮಲ್ದಾರ್ರವರ ರೂಬರೂಬ್, 1903ನೇ ಇಸವಿ ಜುಲೈ 25, 26, 27, 28,29, 30 ಈ ತಾರೀಖುಗಳಲ್ಲೂ ಆಯಾಯ ನಂಬರಗಳ ಬಳಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ್ ಬಗ್ಗೆ 1903ನೇ ಜೂನ್ ತಾರೀಖು 25ನೇ ಮುಕ್ಕಾಂ 25ನೇ ನಂಬರ್ ಮೈಸೂರು ಗೆಜೆಟ್ಟಿನ 2ನೇ ಭಾಗದ 331–332–333–334ನೇ ನಂಬರ್ ಪೇಜುಗಳು ನೋಡತಕ್ಕದ್ದು.

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನರ.

ಕಡೂರು ಡಿಸ್ಟ್ರಿಕ್ಟು.

ನೋಟಿಸ.

ಸ್1903ನೇ ಇಸವಿ ಜೂನ್ 27ನೇ ತಾರೀಖು, ಮೊಕ್ಕಾಂ ಚಿಕ್ಕಮಗಳೂರು.

ಕಡೂರು ಡಿಸ್ಟ್ರಿಕ್ಟು ಕೊಪ್ಪ ತಾಲ್ಲೂಕು ಅಂಬಿಡಿಕ್ಲಾ ಕಾಫಿ ಯಸ್ಟೇಟಿನಲ್ಲಿ ಕೆಲವು ಕಾಡು ದನಗಳು ಬಂದು ಕಾಫಿಗಿಡಗಳನ್ನು ನಷ್ಟಪಡಿಸುವದಾಗಿಯೂ, ಅವುಗಳನ್ನ ಹಿಡಿದು ದೊಡ್ಡಿಗೆ ಕೇರಿಸುವದಕ್ಕೆ ಸಾಧ್ಯವಿಲ್ಲವೆಂತಲೂ, ಸದರಿ ಯಸ್ಟೇಟಿನ ಮಿ॥ ರಾಸ್ಪೋರ್ಬರ್ ಸಾಹೇಬರವರು ಫಿರ್ಯಾದು ಮಾಡಿರುವದ್ದರಿಂದ ಈ ನೋಟೀಸಿನ ತಾರೀಖು ಲಾಗಾಯಿತು ಬಂದು ತಿಂಗಳ ವಳಗೆ ಸದರಿ ಯಸ್ಟೇಟಿನಿಂದ ಸದರಿ ದನಗಳನ್ನು ಸಮ್ಮಂಧಪಟ್ಟ ಮಾಲೀಕರು ತೆಗದುಕ್ಕೊಂಡು ಹೋಗದೆ ಇದ್ದರೆ ಅವರು ಕೇಳಿಕೊಂಡ ಪ್ರಕಾರ ಅವುಗಳನ್ನ ಕೊಂದುಹಾಕಲು ಸ್1895ನೇ ಇಸವಿ ಅಕ್ಟೋಬರು ತಾರೀಖು 8ನೇ ಮುಕ್ಕಾಂ ನಂ. 4014 – ಮಿ. 646ನೇ ಗೌರ್ನಮೆಂಟು ಪ್ರೊಸೀಡಿಂಗ್ಸ್ ಪ್ರಕಾರ ಲೈಸೆನ್ಸ್ ಕೊಡಲ್ಪಡುತ್ತೆ.

2. ಈ ಲಾಗಾಯತು ಬಂದು ತಿಂಗಳೊಳಗೆ ಅಂಥಾ ಕಾಡು ದನಗಳ ಗುಂಪನ್ನು ಹಿಡಿದು ಕೊಪ್ಪ ತಾಲ್ಲೋಕು ಕಛೇರಿಗೆ ಹಾಜರು ಪಡಿಸತಕ್ಕವರಿಗೆ ದೊಡ್ಡ ರಾಸು 1ರ 3 ರೂಪಾಯಿನಂತೆಯೂ ಇತರ ರಾಸು ಬಂದರ 2 ರೂಪಾಯಿನಂತೆಯೂ ಇನಾಂ ಕೊಡುವದರಲ್ಲಿ ಬರುತ್ತೆ — ತಿಳಿಯುವದು.

ಸ್1903ನೇ ಇಸವಿ ಜೂನ್ ತಾರೀಖು 27, ಚಿಕ್ಕಮಗಳೂರು.

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೋಕಿನಲ್ಲಿರುವ ತಮ್ಮ ಚಿಕ್ಕಲಿ ಕಾಫಿ ಯಸ್ಟೇಟಿಗೆ ಕೆಲವು ಕಾಡು ದನಗಳ ಗುಂಪುಗಳು ಬಂದು ಕೆಡಕು ಮಾಡುತ್ತವೆಯೆಂತಲೂ, ಅವುಗಳನ್ನು ಹಿಡಿದು ದೊಡ್ಡಿಗೆ ಕಳುಹಿಸುವದಕ್ಕೆ ಅಸಾಧ್ಯವಾಗಿರುತ್ತೆಂತಲೂ, ಸದರಿ ಯಸ್ಟೇಟಿನ ಮಿ॥ ಎಂ. ಎಸ್. ಬಿಸ್ಕೊ ಸಾಹೇಬರವರು ಫಿರ್ಯಾದು ಮಾಡಿರುವದ್ದರಿಂದಲೂ, ಕ್ರಮವಾಗಿ ನೋಟೀಸು ಕೊಟ್ಟಾಗ್ಯಾದರೂ ಕೂಡಾ ಈ ಯಸ್ಟೇಟಿನ ಅತರಾಫ್ ಇರತಕ್ಕ ಗ್ರಾಮಸ್ಥರು ಸದರಿ ಯಸ್ಟೇಟಿನಿಂದ ಆ ದನಗಳನ್ನು ತೆಗದುಕ್ಕೊಂಡು ಹೋಗಲು ತಪ್ಪಿಹೋದ್ದರಿಂದಲೂ, ಹಿಡಿಯುವದಕ್ಕೆ ಸಾಧ್ಯವಿಲ್ಲದೆ ಇರುವ ಅಂಥಾ ದನಗಳನ್ನು ಕೊಂದುಹಾಕಲು ಸದರಿ ಮಿ॥ ಎಂ. ಎಸ್. ಬಿಸ್ಕೋ ಸಾಹೇಬರವರಿಗೆ ಅಪ್ಪಣೆ ಕೊಟ್ಟಿರುತ್ತದೆ.

2. ಸದರಿ ಗುಂಪಿಗೆ ಶೇರಿದ ದನಗಳನ್ನು ಯಾರಾದರೂ ಹಿಡಿದು ಚಿಕ್ಕಮಗಳೂರು ತಾಲ್ಲೂಕು ಕಛೇರಿಗೆ ತಂದು ಹಾಜರ್ಪಡಿಶಿದಲ್ಲಿ ಅಂಥಾವರಿಗೆ ದೊಡ್ಡ ರಾಸು 1ಕ್ಕೆ 3 ರೂಪಾಯಿನಂತೆಯೂ, ಇತರ ರಾಸು ಬಂದಕ್ಕೆ 2 ರೂಪಾಯಿನಂತೆಯೂ ಇನಾಂ ಕೊಡಲಾದೀತು — ತಿಳಿಯುವದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜ್ ರವರ ಕೋರ್ಟಿನಲ್ಲಿ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 209.

ಮೃತಪಟ್ಟ ಕೆಂಪೆಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕ್ಲೋಸ್‌ಪೇಟೆ ತಾಲ್ಲೂಕು ಕೊತ್ತಿಪುರದಲ್ಲಿರುವ ವೆಂಕಟಪ್ಪ ಮೈನರ್, ಗಾರ್ಡಿಯನ್ ವೆಂಕಟಪ್ಪ, ಮೃತಪಟ್ಟ ಸದರೀ ಕೆಂಪೆಗೌಡರಿಗೆ ದೌಹಿತ್ರ ಮತ್ತು ದತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕ್ಲೋಸ್‌ಪೇಟೆ ತಾಲ್ಲೂಕು ಕೊತ್ತಿಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ಕೆಂಪೆಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಪ್ಪ ಮೈನರ್, ಗಾರ್ಡಿಯನ್ ವೆಂಕಟಪ್ಪನವರ ಅರ್ಜಿಯನ್ನು ಸನ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪೆಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜೂನ್ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 214.

ಮೃತಪಟ್ಟ ಶಿಡ್ಲಗಟ್ಟದ ವೆಂಕಟರಮಣ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಬಸವನಗುಡಿ ಎಕ್ಸ್‌ಟೆನ್ಷನ್‌ನಲ್ಲಿರುವ ವೆಂಕಟಸುಬ್ಬಮ್ಮ, ಮೃತಪಟ್ಟ ಸದರೀ ಶಿಡ್ಲಗಟ್ಟದ ವೆಂಕಟರಮಣ್ಣಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಬಸವನ ಗುಡೀಲಿ ವಾಸಸ್ಥರಾಗಿ ಮೃತಪಟ್ಟ ಶಿಡ್ಲಗಟ್ಟದ ವೆಂಕಟರಮಣ್ಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಸುಬ್ಬಮ್ಮನವರ ಅರ್ಜಿಯನ್ನು ಸನ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶಿಡ್ಲಗಟ್ಟದ ವೆಂಕಟರಮಣ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜುಲೈ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 234.

ಮೃತಪಟ್ಟ ನರಸಿಂಹನಾಯಿಕರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ತಾಲ್ಲೂಕು ಲಗ್ಗೆರೆಯಲ್ಲಿರುವ ಶೀಬೈಯ್ಯ ಮೈನರ್, ಗಾರ್ಡಿಯನ್ ನಂಜುಂಡನಾಯಕ, ಮೃತಪಟ್ಟ ಸದರೀ ನರಸಿಂಹನಾಯಿಕರಿಗೆ ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ನರಸಿಹ್ಮನಾಯಿಕರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶೀಬೈಯ್ಯ ಮೈನರ್, ಗಾರ್ಡಿಯನ್ ನಂಜುಂಡನಾಯಿಕರ ಅರ್ಜಿಯನ್ನು ಸನ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನರಸಿಹ್ಮನಾಯಿಕರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜುಲೈ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1902—1903ನೇ ಇಸವಿ ಅರ್ಜೀ ನಂಬರ್ 238.

ಮೃತಪಟ್ಟ ಬಿ. ಶಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ತಾಲ್ಲೂಕು ಮಲ್ಲತ್ತಹಳ್ಳೀಲಿರುವ ವೆಂಕಟಲಕ್ಷ್ಮಮ್ಮ, ಮೃತಪಟ್ಟ ಸದರೀ ಬಿ. ಶ್ಯಾಮರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಲ್ಲಿ ವಾಸಸ್ಥರಾಗಿ ಮೃತಪಟ್ಟ ಬಿ. ಶ್ಯಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಲಕ್ಷ್ಮಮ್ಮನವರ ಅರ್ಜಿಯನ್ನು ಸನ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಬಿ. ಶ್ಯಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೇ ಇಸವಿ ಜುಲೈ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟಿನ ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 241.

ಮೃತಪಟ್ಟ ಪಿ. ನಂಜುಂಡನಾಯಿಡುಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಬಸವನಗುಡಿ ಎಕ್ಸ್ಟೆನ್ಶನ್ನಲ್ಲಿರುವ ಗೋಪಮ್ಮ ಮತ್ತು ಪಿ. ಲಕ್ಷ್ಮೀಪತಿನಾಯಿಡು, ಮೃತಪಟ್ಟ ಸದರೀ ಪಿ. ನಂಜುಂಡನಾಯಿಡು ಯವರಿಗೆ ಹೆಂಡತಿ ಮತ್ತು ಹಿರೀ ಮಗನಾಗಬೇಕೆಂಬ ಹಕ್ಕು ದಾರಿ ಮೇಲೆ ಮುಳಬಾಗಲಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಪಿ. ನಂಜುಂಡನಾಯಿಡು ಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಶನ್ ಪ್ರಕಾರ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋಪಮ್ಮ ಮತ್ತು ಪಿ. ಲಕ್ಷ್ಮೀಪತಿ ನಾಯಿಡು ಯವರ ಅರ್ಜಿಯನ್ನು ಸರ್ 1903ನೇ ಇಸವಿ ಆಗಸ್ಟ ತಿಂಗಳು ತಾರೀಖು 20ರಲ್ಲು ಕೇಳಿ ಸರಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಿ. ನಂಜುಂಡನಾಯಿಡು ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಜುಲೈ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ. ಆರ. ಸುಬ್ರಾಯ ಐಯ್ಯರ,
ಡಿಸ್ಟ್ರಿಕ್ಟ ಜಡ್ಜ.

ಮೈಸೂರು ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೇ ಇಸವಿ ಅರ್ಜೀ ನಂಬರ 246.

ಮೃತಪಟ್ಟ ವೆಂಕಟಲಕ್ಷ್ಮಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮಂಗಳೂರು ತಾಲ್ಲೂಕು ಪುಟ್ಟಗೆ ಗ್ರಾಮದಲ್ಲಿ ವಾಸವಾಗಿರುವ ರಾಮಪ್ಪಯ್ಯನ ಮಗ ಸೋಮಯ್ಯ, ಮೃತಪಟ್ಟ ಸದರೀ ವೆಂಕಟಲಕ್ಷ್ಮಮ್ಮನವರಿಗೆ ಮೊಮ್ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಪುಟ್ಟಗೆ ಸ್ಥಳದ ಸೋಮಯ್ಯನು ಅರಕಲಿಗೂಡು ವಾಸಸ್ಥರಾಗಿ ಮೃತಪಟ್ಟ ವೆಂಕಟಲಕ್ಷ್ಮಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ 2,192-0-0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ಆಕ್ಟು ಮೇರೆಗೆ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೋಮಯ್ಯನವರ ಅರ್ಜಿಯನ್ನು ಸರ್ 1903ನೇ ಇಸವಿ ಜುಲೈ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ವೆಂಕಟಲಕ್ಷ್ಮಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಜುಲೈ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 250.

ಮೃತಪಟ್ಟ ವೇದಾಂತ್ಯೆಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಡಿಕೆರೆಯಲ್ಲಿರುವ ಫವುತಿ ಆದ ಹೆಡ್ ಮುನಷಿ ವೇದಾಂತ್ಯೆಯ್ಯಂಗಾರ್ರ ಹೆಂಡತಿ ರಂಗನಾಯಿಕಮ್ಮ, ಮೃತಪಟ್ಟ ಸದರೀ ವೇದಾಂತ್ಯೆಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮಡಿಕೆರೆ ಸ್ಥಳದ ರಂಗನಾಯಿಕಮ್ಮನವರು ಹೊಳೆನರಶೀಪುರ ವಾಸಸ್ಥರಾಗಿ ಮೃತಪಟ್ಟ ವೇದಾಂತ್ಯೆಯ್ಯಂಗಾರ್ರವರ ಜಿಂದಗಿ ಬಗ್ಯಾಗಿ ಬರತಕ್ಕ 1,000—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗನಾಯಿಕಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಜುಲೈ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ವೇದಾಂತ್ಯೆಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಜೂನ್ ತಿಂಗಳು 12ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 262.

ಮೃತಪಟ್ಟ ದ್ಯಾವೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಂಜರಾಬಾದು ತಾಲ್ಲೂಕು ಕಿರೆಹಳ್ಳಿಯಲ್ಲಿರುವ ದ್ಯಾವೆಗೌಡನ ಮಗ ಬಸವೆಗೌಡ ಮೈನರ, ಗಾರ್ಡಿಯನ್ ದೇವೀರಮ್ಮ ಮತ್ತು ಲಿಂಗಮ್ಮ, ಮೃತಪಟ್ಟ ಸದರೀ ದ್ಯಾವೆಗೌಡನಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬಸವೇಗೌಡನು ಕಿರೆಹಳ್ಳಿ ಸ್ಥಳದ ವಾಸಸ್ಥರಾಗಿ ಮೃತಪಟ್ಟ ದ್ಯಾವೆಗೌಡನ ಜಿಂದಗಿ ಬಗ್ಯಾಗಿ ಬರತಕ್ಕ 490—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ಆಕ್ಟು ಮೇರಿಗೆ ಸರ್ಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬಸವೆಗೌಡನ ಅರ್ಜಿಯನ್ನು ಸರ್ 1903ನೇ ಇಸವಿ ಆಗಸ್ಟ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದ್ಯಾವೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಜೂನ್ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 396.

ಅರ್ಜೀದಾರರು ಮೈಸೂರಿನಲ್ಲಿರುವ ಘವತಿ ಆದ ಡಿ. ಸುಬ್ಬಯ್ಯನವರ ಮಗ ಧೂಳಿಪಟಿ ರಾಮಯ್ಯ ಮೈನರ್, ಗಾರ್ಡಿಯನ್ ತಾಯಿ ಲಕ್ಷ್ಮಮ್ಮ, ಮೈನರಾದ ಧೂಳಿಪಟಿ ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಧೂಳಿಪಟಿ ರಾಮಯ್ಯನವರಿಗೆ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಮೈಸೂರು ಸ್ಥಳದ ಲಕ್ಷ್ಮಮ್ಮನೆಂಬುವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೇ ಇಸವಿ ಆಗಸ್ಟು ತಾರೀಖು 14ರಲ್ಲು ಮೊಕದ್ದಮೆ ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿಧೆ.

ಸರ್ 1903ನೇ ಇಸವಿ ಜುಲೈ ತಿಂಗಳು 3ನೇ ತಾರೀಖಿನಲ್ಲಿ ಕೊರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್1902—1903ನೇ ಇಸವಿ ಅರ್ಜೀ ನಂಬರ 576.

ಮೃತಪಟ್ಟ ಶ್ರೀರಂಗಪಟ್ಟಣ ತಾಲ್ಲೂಕು ಚಂದಗಾಲು ಹೋಬಳಿ ನಗೋನಹಳ್ಳಿಲಿರುವ ಬೊಮ್ಮಗೌಡರ ಮಗ ಸುಬ್ಬೆ ಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀರಂಗಪಟ್ಟಣದ ತಾಲ್ಲೂಕು ಚಂದಗಾಲು ಹೋಬಳಿ ನಗೋನಹಳ್ಳಿಲಿರುವ ಬೊಮ್ಮಗೌಡರ ಮಗ ಸುಬ್ಬೆಗೌಡರ ಹೆಂಡತಿ ಲಕ್ಷ್ಮಮ್ಮ, ಮೃತಪಟ್ಟ ಸದರೀ ಸುಬ್ಬೆಗೌಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದ ತಾಲ್ಲೂಕು ಚಂದಗಾಲು ಹೋಬಳಿ ನಗೋನಹಳ್ಳಿಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬೆಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1903ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬೆ ಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಜೂನ್ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವರದರಾಜೈಯ್ಯಂಗಾರ್,
ಸಬ್ ಜಡ್ಜ್.

ಇಸ್ತಿಹಾರ್.

ಬೆಂಗಳೂರುನಲ್ಲಿ ಇರುವ ಮೈಸೂರು ಸ್ಟೇಟ್ ಹುಜೂರು ಖಜಾನೆಯಲ್ಲಿ ಭಂಗಾರದ ಹಣಗಳು ವರಹಾಗಳು ಮತ್ತು ನಗಗಳು ಹರಾಜು ಮಾಡಲ್ಪಡುವದು.

ಮೈಸೂರು ಗೌರ್ನಮೆಂಟ್ ನಂ. 16644-7—Mis. 2555, 1903ನೇ ಇಸವಿ ಮೇ ತಿಂಗಳು 23ನೇ ತಾರೀಖಿನ ಪ್ರೊಸಿಡಿಂಗ್ಸನಲ್ಲಿ ಅಪ್ಪಣೆ ಆಗಿ ಇರುವದನ್ನು ಅನುಸರಿಸಿ ಈ ಕೆಳಗೆ ನಮೂದಿಸಿರುವ ಹಣಗಳು ವರಹಗಳು ನಗಗಳು 1903ನೇ ಇಸವಿ ಜುಲೈ ತಾರೀಖು 8ರಲ್ಲು ಮಧ್ಯಾನ್ಹ 2 ಘಂಟೆ ಲಾಗಾಯಿತು ಹರಾಜು ಮಾಡಲ್ಪಡುತ್ತೆಂದು ಈ ನೋಟಿಸ್ ಮೂಲಕ ಪ್ರಸಿದ್ಧಪಡಿಸಿ ಇರುತ್ತೆ.

ತಪಶೀಲ್.

ಜಗಲೂರು ತಾಲ್ಲೂಕು ಚಿಳಕಟ್ಟೆ ಗ್ರಾಮದಲ್ಲಿ ವಡ್ಡರ ಹುಲಿಯ ಎಂಬುವನು ಅವನ ಹೊಲ ಉಳುವಾಗ ದೊರಕಿದ್ದು.	(I) 441 ಭಂಗಾರದ ಹಣಗಳು, ಜೋರ್ (ಹಂದಿ ತಲೆ) ಸ್ಟಾಂಪು ವುಳ್ಳದ್ದು. 1 ಜೊತೆ ಭಂಗಾರದ ಕಡಗಗಳು 2—15—6 ತೂಕವುಳ್ಳದ್ದು. 1 ಭಂಗಾರದ ಅಸಲಿ (ಕತ್ತಿನ ಆಭರಣ) ತೂಕ 1—15—0. 1 ಡಿಟೋ ತೂಕ ರೂ. 1—0—0 ಒಂದು ಗುಲಗಂಜಿ ತೂಕ. 2 ಭಂಗಾರದ ಉಂಗರಗಳು ತೂಕ 15 ಆಣೆಗೆ ಒಂದು ಗುಲಗಂಜಿ (ವಳಪಡಿ).
ಹೊಳಲಕೆರೆ ತಾಲ್ಲೂಕು ಸಾಸಲ್ಲಿ ಗ್ರಾಮದಲ್ಲಿ ಸರಕಾರಿ ಸರ್ವೆ 35ನೇ ನಂಬರ ಜಮೀನಿನಲ್ಲಿ ಇರುವ ಕಲ್ಲಿನ ಬಳಿ ಜೇಗಾರಿ ಹುಡಗಿ ಚನ್ನಿಗೆ ದೊರಕಿದ್ದು.	67 ಭಂಗಾರದ ವರಹಾಗಳು ಅನೇಕಮಾದ್ರಿವುಳ್ಳದ್ದು.

ಹರಾಜು ನಿಬಂಧನೆಗಳು.

I. ನಾಣ್ಯಗಳು ಮತ್ತು ನಗಗಳು ತೆಗೆದುಕೊಳ್ಳುವರು ಹರಾಜಿನ ಹಣ ನಗದು ಪಾವತಿಮಾಡಿ ಪಡಿಯತಕ್ಕದ್ದು.

II. ಸವಾಲ್ ತಿರಸ್ಕಾರ ಮಾಡಿದ ಬಗ್ಗೆ ಕಾರಣ ತಿಳಿಯಪಡಿಸುವದಿಲ್ಲ.

III. ಹರಾಜಿನ ನಿಬಂಧನೆ ವಿಷಯದಲ್ಲಿಯೂ ಖಾಯಂಮಾಡುವ ವಿಷಯದಲ್ಲಿಯೂ ತಿರಸ್ಕರಿಸುವ ವಿಷಯದಲ್ಲಿಯೂ ಈ ಕೆಳಗೆ ರುಜು ಮಾಡಿ ಇರುವವರು ಪೂರಾ ಅಧಿಕಾರ ವುಳಿಸಿಕೊಂಡು ಇರುತ್ತಾರೆ.

ಬಿ. ಗೋಪಾಲಯ್ಯಂಗಾರ್,
ಆಫೀಸರ್ ಇನ್‌ಚಾರ್ಜ್, ಸ್ಟೇಟ್ ಹುಜೂರ ಟ್ರೆಜರಿ.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್—ಬ ತಾರೀಖು 15ನೇ ಜೂನ್ 1903.

ಇದರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ :—

			ರೂ. ಆ. ಪೈ.
1.	ಕನ್ನಡ ಲೇಖನ ಪುಸ್ತಕ	6ನೇ ನಂಬರ	0—1—0
2.	ಡಿಟೋ	7ನೇ ಡಿಟೋ ...	0—1—6
3.	ಕನ್ನಡ ಬಾಲಬೋಧೆ	IIನೇ ಭಾಗ	0—2—6

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ನೋಟಿಸ್—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಹುಣಸೂರು ತಾಲ್ಲೂಕು ಪೆರಿಯಾಪಟ್ಣದಲ್ಲಿದ್ದು ಈಗ್ಯೆ ಸುಮಾರು 7–8 ತಿಂಗಳಲ್ಲಿ ಕಾಲವಾದ ಶಿವಾಚಾರದ ಹೆಮ್ಮರಗಾಲದ ವೀರಣ್ಣನೆಂಬುವರಿಗೆ ನಾಲ್ಕು ಜನ ಹೆಣ್ಣು ಮಕ್ಕಳ ಪೈಕಿ ಎರಡನೇ ಮಗಳನ್ನ ನನಿಗೆ ಕೊಟ್ಟು ಲಗ್ನವಾಗಿದೆ. ಮೊದಲನೇ ಮೂರು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳು ಇರುತ್ತಾರೆ. ನಾಲ್ಕನೆ ಮಗಳಿಗೆ ಹೆಣ್ಣು ಮಗಳು ಇರುತ್ತಾಳೆ. ಸದರಿ ಹೆಮ್ಮರಗಾಲದ ವೀರಣ್ಣನವರು ಮೂರು ಸಾವಿರ ರೂಪಾಯಿನ ಚರ ಆಸ್ತಿಯನ್ನೂ ಮತ್ತು ಎರಡುಸಾವಿರ ರೂಪಾಯಿನ ಸ್ಥಿರ ಆಸ್ತಿಯನ್ನೂ ಬಿಟ್ಟು ಕಾಲವಾಗಿ ಇರುತ್ತಾರೆ, ಆತನಿಗೆ ಸಾಲವೇನೂ ಇರುವದಿಲ್ಲ. ಆತನ ಹೆಂಡತಿ ಭದ್ರಕಾಳಮ್ಮನವರು ಆಸ್ತಿ ಕಲಸ್ಮಾಡುವದಕ್ಕೆ ಉಪಕ್ರಮಿಸಿ ಇದ್ದಾರೆ. ಆಕೆಯಿಂದ ಯಾವ ಸ್ವತ್ತನ್ನೂ ಯಾರೇ ಆಗಲಿ ಕ್ರಯ, ಭೋಗ್ಯ, ಆಧಾರ, ದಾನಾದಿಗಳು ಮಾಡಿಕೊಳ್ಳಕೂಡದು. ಒಂದುವೇಳೆ ಮಾಡಿಕೊಂಡರ ಅಂಥಾವುಗಳು ರದ್ದಾಗಿ ನಷ್ಟಕ್ಕೆ ಗುರಿಯಾದಾರೆಂದು ಇದರಿಂದ ಯಚ್ಚರಿಸಿದೆ.

ಮೈಸೂರು ಶ್ರೀರಾಂಪೇಟೆಯಲ್ಲಿರುವ ಪಟ್ಟದಪುರದ ನಾಗಣ್ಣನ ರುಜುವು.

Mysore Government Central Press, Bangalore—1903

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಫ್ರಾಯಿಷ್ ಆದ್ದು. [ಸಂ. 28.

ಬೆಂಗಳೂರು, ಗುರುವಾರ, ಜುಲೈ ತಾ|| 16, ಸನ್ 1903.

IIನೇ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಹೊರಟಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ನಾಮಾ.

ನೋಟಿಫಿಕೇಷನ್, ತಾರೀಖು 6ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ಚನ್ನಪಟ್ಣದ ತಾಲ್ಲೂಕು ಕ್ಲೋಸ್‌ಪೇಟೆ ಸಬ್ ತಾಲ್ಲೂಕು ಕ್ಲೋಸ್‌ಪೇಟೆ ಫಾರೆಸ್ಟ್ ರೇಂಜಿಗೆ ಸೇರಿದ ಮಾಕಳೀ ಮತ್ತು ತೆಂಗಿನಕಲ್ ಸ್ಟೇಟ್ ಫಾರೆಸ್ಟುಗಳಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದಿಸಿರುವ ಕೂಪುಗಳಲ್ಲಿನ ಫಾರೆಸ್ಟ್ ಬೆಳೆ ಅಂದರೆ, ಸೌದೆಯನ್ನು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು ಕಡಿದು ಸಾಗಿಸಿಕೊಳ್ಳುವ ಹಕ್ಕುದಾರಿಯನ್ನು ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಅಥವಾ ಅವರಿಂದ ನೇಮಿಸಲ್ಪಟ್ಟ ಆಫಿಸರಿಂದ ಸನ್ 1903ನೇ ಇಸವಿ ಜುಲೈ ಮಾಹೆ ತಾರೀಖು 18ರಲ್ಲು ಚನ್ನಪಟ್ಣದ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು :—

ಫಾರೆಸ್ಟಿನ ಮತ್ತು ಕೂಪಿನ ಹೆಸರು.	ಕೆಲಸಮಾಡುವ ಸರ್ಕಲ್ ನಂಬರ್.	ಕೂಪು ನಂಬರ್.	ಸುಮಾರು ವಿಸ್ತೀರ್ಣ ಎಕರೆ.	ಕಡಿಯತಕ್ಕ ಮರಗಳ ಜಾತಿ.	ಎಕರೆ ಒಂದಕ್ಕೆ ಸಿಕ್ಕತಕ್ಕ ಮೊತ್ತ.	ರೈಲ್ವೆ ಸ್ಟೇಷನ್‌ಗೆ ಫಾಸಲೆ.
ಮಾಕಳೀ ಫಾರೆಸ್ಟು ನಾಗವಾರದ ಕೂಪು	I	I	130	ಜುಜ್ಜಲು, ಹುಲುವೆ, ಈಜಿ, ಪಚಾರಿ, ಗೇದರಿ, ಕಗ್ಗಲಿ, ದೇವದಾರು, ಚನ್ನಂಗಿ, ಗೊರವಿ, ನೌಲಾಡಿ, ದಿಂಡಗ ವಗೈರೆ	ಎಕರೆ ಒಂದಕ್ಕೆ ಸುಮಾರು ಅರ್ಧ ಟನ್	ಚನ್ನಪಟ್ಣದ ರೈಲ್ವೆ ಸ್ಟೇಷನ್‌ಗೆ 6 ಮೈಲಿ
ಡಿಟೋ	II	I	90	ಡಿಟೋ	$2\frac{1}{2}$ ಟನ್	ಡಿಟೋ
ಮಾಕಳೀ ಫಾರೆಸ್ಟು ಕ್ಯಾಸಾಪುರದ ಕೂಪು	III	I	120	ಡಿಟೋ	3 ಟನ್	ಕ್ಲೋಸ್‌ಪೇಟೆ ರೈಲ್ವೆ ಸ್ಟೇಷನ್‌ಗೆ 8 ಮೈಲಿ
ಮಾಕಳೀ ಫಾರೆಸ್ಟು ಅನಮಾನಹಳ್ಳಿ ಕೂಪು	IV	I	200	ಡಿಟೋ	2 ಟನ್	ಡಿಟೋ
ತೆಂಗಿನಕಲ್ ಫಾರೆಸ್ಟು ದ್ಯಾವಾಪುರದ ಕೂಪು	II	I	100	ನಾಯಿಬ್ಯಾಲಾ, ಜುಜ್ಜಲು, ಹುಲುವೆ, ಪಚಾರಿ, ಈಜಿ, ಕಗ್ಗಲಿ, ದೇವದಾರಿ, ಚನ್ನಂಗಿ ವಗೈರೆ	$2\frac{1}{2}$ ಟನ್	ಚನ್ನಪಟ್ಣದ ರೈಲ್ವೆ ಸ್ಟೇಷನ್‌ಗೆ 9 ಮೈಲಿ
ತೆಂಗಿನಕಲ್ ಫಾರೆಸ್ಟು ಮಲ್ಲಂಗೆರೆ ಕೂಪು	III	I	200	ಡಿಟೋ	ಡಿಟೋ	ಡಿಟೋ ಸ್ಟೇಷನ್‌ಗೆ 6 ಮೈಲಿ

2. ಈ ಹರಾಜು ಪ್ರತ್ಯೇಕ ಪ್ರತ್ಯೇಕ ಕೂಪುವಾರಾಗಿಯೂ, ಇಲ್ಲವೆ ಒಟ್ಟಾಗಿಯೂ, ಅಥವಾ ಎಕರೆ 1ಕ್ಕೆ ಯಾ ಟನ್ 1ಕ್ಕೆ ಇಷ್ಟೆಂದು ನಿರ್ಧರಿಸಿ ಹರಾಜು ಮಾಡತಕ್ಕದ್ದು. ಹರಾಜು ಕ್ರಮ ನಡಿಸತಕ್ಕ ಆಫಿಸರ ಅನುಮತಿಗೆ ಒಳಪಟ್ಟು ಇರುತ್ತೆ. ಅಲ್ಲದೆ ಈ ಹರಾಜು ಫಾರೆಸ್ಟು ಕನ್ಸರವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

3. ಸವಾಲುಗಳು ಒಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವೂ ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸತಕ್ಕ ಡೆಪ್ಯುಟಿ ಕಮಿಶನರ್ ಸಾಹೇಬರವರಿಗೆ ಅಥವಾ ಅವರಿಂದ ನೇಮಕ ಮಾಡಲ್ಪಟ್ಟ ಆಫಿಸರಿಗೆ ಅಧಿಕಾರವಿರುತ್ತೆ. ಮತ್ತು ಹರಾಜಾಗದೆ ಉಳಕೊಳ್ಳುವ ಕೂಪುಗಳನ್ನು ಅವರಿಗೆ ಕಾಣಬರುವ ರೀತಿಯಲ್ಲಿ ವ್ಯವಸ್ಥೆಹೊಂದಿಸುವ ಅಧಿಕಾರವು ಅವರದಾಗಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ "25—0—0" ಇಪ್ಪತ್ತೈದು ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕು. ಈ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು.

5. ಮಂಜೂರಾದ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಸವಾಲ್ ಮಂಜೂರಾದ ತಾರೀಖು ಲಾಗಾಯತು ಒಂದು ವಾರದೊಳಗಾಗಿ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರೆದುಕೊಡಬೇಕು. ತಪ್ಪಿದಲ್ಲಿ ಕೂಪೀ ಯಾ ಕಂಪಾರ್ಟಮೆಂಟನ್ನು ದುಸರಾ ಹರಾಜು ಮಾಡಿಸಲಾದೀತು. ಲುಕ್ಸಾನಿಗೆ ಮೊದಲಿನ ಹರಾಜುದಾರನು ಗುರಿಯಾಗಿರಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೆಗೆ ಈತನು ಭಾಗಿಯಾಗುವದಿಲ್ಲ ಮತ್ತು ಮೊದಲನೇ ಹರಾಜಿನಲ್ಲಿ ಡಿಪಾಜಿಟ್ಟಾಗಿ ಶೇವಣೀ ಇರಿಸಿದ ಮೊಬಲಗು ಜುಲ್ಮಾನೆ ತರ್ಹೆಖು ಸರ್ಕಾರಕ್ಕೆ ದಂಡವಾಗಿ ಶೇರಿಸಲ್ಪಡುತ್ತೆ.

1. ಸೌದೆ ಮತ್ತು ಚಾಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನು ಸನ್ 1904ನೇ ಜೂನ್ ಮಾಹೇ ಆಖೈರಿನೊಳಗಾಗಿ ಪೂರೈಸತಕ್ಕದ್ದು, ತಪ್ಪಿದಲ್ಲಿ ಈ ಮೊದಲೆ ಪಾವತಿಯಾಗಿರತಕ್ಕ ಮೊಬಲಗು ದಂಡವಾಗಿ ಸರ್ಕಾರಕ್ಕೆ ಶೇರಿಸಲ್ಪಡುತ್ತೆ.

2. ಫಾರೆಸ್ಟ್ ಇಲಾಖಾ ಮಾರಿಫತ್ತು ಗುರ್ತು ಅಥವ ನಿಶಾನೆ ಮಾಡಿರತಕ್ಕ ಮರಗಳೂ, ಮತ್ತು ಮೂರು ಅಂಗುಲ ಸುತ್ತಳತೆ ಪೊಳೆಗಿರುವ ಸೊಸಿಗಳನ್ನು ಅಥವಾ ಗಿಡಗಳನ್ನು ವಿನಃ ಇತರ ಎಲ್ಲಾ ಮರ, ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಒಂದು ಕೊನೆಯಿಂದ ಇನ್ನೊಂದು ಕೊನೆಯ ವರಿವಿಗೆ ಸದರೀ ಕಡಿಯತಕ್ಕ ಕೂಪು ಪೂರೈಸುವ ವರಿವಿಗೂ ಕಡಿಯತಕ್ಕದ್ದು. ಈ ಹರಾಜಿನಲ್ಲಿ ತಂಗಡಿ, ಕಕ್ಕೆ, ಫಲಗಳು ಬಿಡುವ ಅಂದರೆ, ಬ್ಯಾಲ, ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಶೇ, ಅಳಲೆ, ವಗೈರೆಯೂ, ಹುಲ್ಲು ಸಹಾ ಶೇರಿರುವದಿಲ್ಲಾ. ಷರತ್ತುಗಳಿಗೆ ವತಿರಿಕ್ತವಾಗಿ ಮನಸೋಯಿಚ್ಛೆಯಾಗಿ ಮರಗಳನ್ನು, ಗಿಡಗಳನ್ನು ಕಡಿಯುವದು ಮತ್ತು ಇತರ ಯಾವ ತರವಾದ ಖರಾಬ್ ಕೆಲಸ ಅಂದರೆ, ನೆಲಮಟ್ಟದ ಮೇಲೆ ಮೂರು ಅಂಗುಲ ವೃದ್ಧಕ್ಕಿಂತ ಕಡದು ಮೋಟುಗಳು ಇರುವದು ವಗೈರೇ ಕಂಡುಬಂದಲ್ಲಿ ಅಂಥಾವೆಲ್ಲಾ ಖರಾಬ್ ಕೆಲಸ ದುರಸ್ತು ಪೂರೈಸುವ ವರಿವಿಗೂ ಕೂಪು ಯಾ ಕೂಪುಗಳಲ್ಲಿ ಸೌದೆ ಯಾ ಚಾಬೀನೆ ಕತ್ರಾಯಿಸಿ ಸಾಗಿಸುವದನ್ನು ನಿಲ್ಲಿಸಲ್ಪಡುತ್ತೆ.

3. ಕೂಪು ಯಾ ಕೂಪುಗಳಲ್ಲಿ ಬಾಬು ರೂಢಿಸಿ ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿ ಫಾರೆಸ್ಟ್ ಇಲಾಖಾದಿಂದ ಮೊಕರರೂರ್ ಮಾಡಲ್ಪಟ್ಟ ನೌಕರರಿಂದ ರಹದಾರಿಗಳು ಕೊಡಲ್ಪಡುತ್ತೆ. ಈ ರಹದಾರಿಗಳನ್ನು ರಫ್ತಾಗುತ್ತಿರುವ ಮಾಲು ಸಹಿತ ಹಾಜರು ಇರತಕ್ಕದ್ದಲ್ಲದೆ ಕ್ಲೋಸುಪ್ಯಾಟೆ, ಚನ್ನಪಟ್ಣ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ನೇಮಕ ಮಾಡಲ್ಪಟ್ಟು ಯಾವ ಸ್ಥಳ, ಸ್ಟೇಶನ್‌ಗಳ ಬಳಿ ಅಜಮಾಯಿಷಿ ಬಗ್ಯೆ ಹಾಜರ್ಮಾಡಬೇಕು.

4. ಕೂಪು ಯಾ ಕೂಪುಗಳಿಂದ ಸೌದೆ ಮತ್ತು ಚಾಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆಯೂ, ಅಥವಾ ಸೂರ್ಯಾಸ್ತಮಯವಾದಮೇಲೆಯೂ ಸಾಗಿಸಕೂಡದು.

5. ಇಜಾರೆದಾರನಿಗೆ ಕತ್ರಾವಣಿ ಕೆಲಸಕ್ಕೆ ಕೊಟ್ಟು ಇರುವ ಕೂಪು ಯಾ ಕೂಪುಗಳೊಳಗೆಯಾಗಲೀ ಅಥವಾ ಭಂಡಿ ಮಾರ್ಗದಲ್ಲಿಯಾಗಲೀ ಬೆಂಕೀ ಬಿದ್ದು ಅಂಥಾ ಕೃತ್ಯ ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದದ್ದೆಂದು ಫಾರೆಸ್ಟು ಇಲಾಖಾ ಆಫಿಸರುಗಳಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್‌ದಾರನಾಗಬೇಕು.

6. ಕಂಟ್ರಾಕ್ಟುದಾರನಿಗೂ ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಗೂ ಈ ಸಂದರ್ಭಗಳಲ್ಲಿ ಉಂಟಾಗಬಹುದಾದ ನಿಬಂಧನೆಗಳಿಗೂ ಅಂಥಾ ನಿಬಂಧನೆಗಳಿಗೆ ವಿರೋಧವಾಗಿ ನಡದ ಕೃತ್ಯಗಳ ವಿಷಯವಾಗಿಯೂ ಮತ್ತು ಯಾವ ತರವಾದ ಎಲ್ಲಾ ಹೆಚ್ಚು ಕುಂದುಗಳ ಮೇಲೆ ಫಾರೆಸ್ಟು ಕನ್ಸರವೇಟರ್ ಸಾಹೇಬರವರ ಆರ್ಡರ್ ಆಖೈರ್ ಆಗಿರುತ್ತೆ.

7. ಕಂಟ್ರಾಕ್ಟುದಾರನು ಬರದುಕೊಡತಕ್ಕ ಮುಚ್ಚಳಿಕೆಯು ಹರಾಜು ಕಾಲದಲ್ಲಿ ತಿಳುವಳಿಕೆ ಬಗ್ಯೆ ಓದಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,

ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಕಟನೆ.

ತಾರೀಖು 6ನೇ ಜುಲೈ 1903ನೇ ಇಸವಿ.

ತುಮಕೂರು ಡಿಸ್ಟ್ರಿಕ್ಟು ಮದ್ದಗಿರಿ ರೇಂಜಿನಲ್ಲಿ ನಡದ ಒಂದು ನಾಟು ಕಳವು ಮೊಕದ್ದಮೆ ಪತ್ತೆಯಿಂದ ಅಪರಾಧಿಗಳಿಗೆ ಶಿಕ್ಷೆಗೆ ಗುರಿಪಡಿಸಿದ ಬಾಬೇ ಶ್ಲಾಘ್ಯವಾದ ಮೆಹನತ್ತು ಮಾಡಿದ್ದಕ್ಕಾಗಿ ಫಾರೆಸ್ಟು ಇಲಾಖಾ ನಾಕರುಮೂನೇರಿಗೆ ಮಾರ್ಜನ್ನಲ್ಲಿ ಕಂಡಂತೆ ಬಹುಮಾನಗಳು ತುಮಕೂರುಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಕೊಡಲ್ಪಟ್ಟಿರುತ್ತೆ.

20 ರೂಪಾಯಿಗಳು—ಮದ್ದಗಿರಿ ಫಾರೆಸ್ಟರು ಕೆ. ಶ್ಯಾಮರಾಯರಿಗೆ.
15 ಡಿಟೋ ಮದ್ದಗಿರಿ ಫಾರೆಸ್ಟು ಗಾರ್ಡ್ ಕಿಕ್ಕೇರಿಗೆ.
10 ಡಿಟೋ ಮದ್ದಗಿರಿ ಫಾರೆಸ್ಟು ಫೈರ್ ಗಾರ್ಡ್ ಸಾಬಜ್ಜಸಾಬೀಗೆ.

ಎಂ. ಮುತ್ತಣ್ಣ,
ಮೈಸೂರು ಶೀಮೆಯ ಅಫಿಷಿಯೇಟಿಂಗ್ ಫಾರೆಸ್ಟು ಕನ್ಸರ್ವೇಟರವರು.

ನೋಟಿಫಿಕೇಷನ್, ತಾರೀಖು 8ನೇ ಜುಲೈ 1903.

ಸನ್ 1901ನೇ ಇಸವಿ ಅಕ್ಟೋಬರ್ 2ನೇ ಮುರ್ಕ್ಕಂ 245—1300ನೇ ನಂಬರು ಗವರ್ನ್ಮೆಂಟ್ ನೋಟಿಫಿಕೇಷನ್ XIIನೇ ರೂಲ್ಸು ಅನುಸರಿಸಿ ಈ ಕೆಳಗೆ ಕಂಡ ರೆವಿನ್ಯೂ ಮತ್ತು ಫಾರೆಸ್ಟು ಆಫಿಸರುಗಳಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಉಳಿಸಿಕೊಳ್ಳಲ್ಪಡದೆ ಇರುವ ಡಿಸ್ಟ್ರಿಕ್ಟು ಫಾರೆಸ್ಟುಗಳಿಂದ ಚಾಬೀನೆ, ಬೊಂಬು ಮತ್ತು ಸೌದೆ ಕಡಿದು ಸಾಗಿಸಿಕೊಂಡು ಬರಲು ಹಾಸಲು ತೆಗದುಕೊಂಡು ಲೈಸೆನ್ಸು ಕೊಡಲು ಅಧಿಕಾರ ಕೊಟ್ಟಿರುವ ಸಂಗತಿಯನ್ನು ಈ ಮೂಲಕ ತಿಳಿಯುವಂತೆ ಪ್ರಸಿದ್ಧಪಡಿಸಿರುತ್ತೆ :—

ನಂಬರು	ಉದ್ಯೋಗಸ್ಥರ ಹೆಸರು.	ಅಧಿಕಾರ.	ಅಧಿಕಾರ ಎಲ್ಲಿ ಚಲಾಯಿಸ ತಕ್ಕದ್ದು.
1	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು	ರಿಜರ್ವಡ ಮತ್ತು ಅನ್ ರಿಜರ್ವಡ ಜಾತಿ ಚಾಬೀನೆ, ಬೊಂಬು ಮತ್ತು ಹಸಿ ಸೌದೆ ಕಡದು ಸಾಗಿಸಿಕೊಂಡುಹೋಗಲು ಹಾಸಲ್ ವಸೂಲ್ಮಾಡಿಕೊಂಡು ಲೈಸೆನ್ಸು ಕೊಡತಕ್ಕ ಅಧಿಕಾರ	ಅವರ ಡಿಸ್ಟ್ರಿಕ್ಟಿನಲ್ಲಿ
2	ಅಮಲ್ದಾರರು ..	ಈ ಕೆಳಗೆ ವಿವರಿಸಿರುವ ಬಾಬುಗಳಿಗೆ ಫೀ ವಸೂಲ್ಮಾಡಿಕೊಂಡು ಕಡಿದು ಸಾಗಿಸಿಕೊಂಡು ಹೋಗಲು ಲೈಸೆನ್ಸು ಕೊಡತಕ್ಕ ಅಧಿಕಾರ (1) ಅನ್ ರಿಜರ್ವಡ ಜಾತಿ ಚಾಬೀನೆ (2) ಬೊಂಬು (3) ಒಣ ಸೌದೆ	ಅವರ ತಾಲ್ಲೂಕಿನಲ್ಲಿ
3	ಶೇಕದಾರು ...	ಒಣಸೌದೆ ಕಡಿದು ಸಾಗಿಸಿಕೊಂಡು ಹೋಗತಕ್ಕ ಬಗ್ಯೆ ಫೀ ವಸೂಲ್ಮಾಡಿಕೊಂಡು ಲೈಸೆನ್ಸು ಕೊಡತಕ್ಕ ಅಧಿಕಾರ	ಅವರ ಹೋಬಳಿಯಲ್ಲಿ
4	ಫಾರೆಸ್ಟರು ..	ಡಿಟೋ ಡಿಟೋ	ಅವರ ಸಬ್ ರೇಂಜಿನಲ್ಲಿ
5	ಡೆಪ್ಯುಟಿ ಕಮಿಷನ್ ಸಾಹೇಬರವರು ಸ್ವಪಲಾಗಿ ನೇಮಕ ಮಾಡುವ— (ಎ) ಪಟೇಲ-ಶ್ಯಾನಭೋಗರುಗಳು. (ಬಿ) ಹೋಬಳಿ ಸ್ಕೂಲ್‌ಮಾಸ್ಟರಗಳು. (ಸಿ) ಇತರೆ ಬರಹಗಾರ ಜನಗಳು.	ಡಿಟೋ ಡಿಟೋ	ಡೆಪ್ಯುಟಿ ಕಮಿಷನ್ ಸಾಹೇಬರವರಿಂದ ನಿಷ್ಕರ್ಷೆ ಮಾಡಲ್ಪಡುವ ಸ್ಥಳಗಳಲ್ಲಿ

(2) ರಿಫ್ತಿನಲ್ಲಿರುವ ಚಾಬೀನೆ, ಬೊಂಬು ಮತ್ತು ಸೌದೆ ತನಿಖೆ ಮಾಡತಕ್ಕ ಬಗ್ಯೆ ಎಲ್ಲಾ ರೆವಿನ್ಯೂ ಫಾರೆಸ್ಟು ಮತ್ತು ಪೊಲೀಸು ಆಫಿಸರುಗಳಿಗೆ ಇದರಿಂದ ಅಧಿಕಾರ ಕೊಟ್ಟಿದೆ.

ಎಂ. ವೆಂಕಟನಾರಣಪ್ಪ,
ಫಾರ್ ಡೆಪ್ಯುಟಿ ಕಮಿಷನರ್ ಶಿವಮೊಗ್ಗ ಡಿಸ್ಟ್ರಿಕ್ಟು.

ತಾರೀಖು 1ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಈ ಕೆಳಗೆ ನಮೂದಿರುವ ತಾಲ್ಲೂಕಿನ ಸರ್ಕಾರಿ ಬಂಜರ್ ಮತ್ತು ಅಮೃತಮಹಲ್ ಕಾವಲುಗಳಲ್ಲಿ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿ ಇರತಕ್ಕ ತಂಗಡಿ ಚಕ್ಕೆಯನ್ನು 1903ನೇ ಆಗಸ್ಟ್ ತಾರೀಖು 1ರ ಲಾಗಾಯತು 1904ನೇ ಇಸವಿ ಜೂನ್ 30ರ ವರಿಗೆ ಜಮಾಯಿಸಿಕೊಳ್ಳತಕ್ಕ ಹಕ್ಕು ಈ ಕೆಳಗೆ ನಮೂದಿಸುವ ತಾರೀಖು ಮತ್ತು ಸ್ಥಳದಲ್ಲಿ ಡೆಪ್ಯುಟಿ ಕಮಿಷನರವರಿಂದಾಗಲಿ ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರಿಂದಾಗಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ಕೂಡಾ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ:—

ನಂಬರು.	ತಾಲ್ಲೂಕುಗಳ ಮತ್ತು ಸ್ಟೇಟ್ ಫಾರೆಸ್ಟುಗಳ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.
1	ಹರಿಹರ ಸಬ್ ತಾಲ್ಲೂಕು ..	20-7-1903	ಹರಿಹರ ಸಬ್ ತಾಲ್ಲೂಕು ಕಛೇರಿ
2	ಮಲೆಬೆನ್ನೂರು ಸ್ಟೇಟ್ ಫಾರೆಸ್ಟ್ ..		
3	ಜಗಲೂರು ತಾಲ್ಲೂಕು ..	25-7-1903	ತಾಲ್ಲೂಕು ಕಛೇರಿ
4	ಚಳ್ಳಕೆರೆ ತಾಲ್ಲೂಕು ..	27-7-1903	ಚಳ್ಳಕೆರೆ ತಾಲ್ಲೂಕು ಕಛೇರಿ
5	ಹಿರಿಯೂರು ತಾಲ್ಲೂಕು ..	29-7-1903	ಹಿರಿಯೂರು ಡಿಟ್ಟೋ
6	ಚಿತ್ರದುರ್ಗದ ತಾಲ್ಲೂಕು ..	30-7-1903	ಚಿತ್ರದುರ್ಗದ ಡಿಸ್ಟ್ರಿಕ್ಟ್ ಆಫೀಸ
7	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟ್ ..		
8	ನೀರ್ಥಡಿ ಸ್ಟೇಟ್ ಫಾರೆಸ್ಟ್ ..		

2. ಹರಾಜು ಪಟ್ಟಿಯಲ್ಲಿ ಕಂಡಂತೆ ಹರಾಜು ತಾರೀಖಿನ ಪ್ರತಿ ದಿವಸಗಳಲ್ಲಿಯೂ ಮಧ್ಯಾಹ್ನ 2 ಘಂಟೆಗೆ ಹರಾಜು ಷುರು ಮಾಡಲ್ಪಡುವದು. ಅದೇ ದಿವಸದಲ್ಲಿ ಹರಾಜು ಪೂರೈಸದ ಪಕ್ಷಕ್ಕೆ ಮಾರನೇ ದಿವಸ ಅದೇ ಕಾಲಕ್ಕೆ ಸರಿಯಾಗಿ ಹರಾಜು ನಡಿಸಲ್ಪಡುವದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಮಿಷ್ ಆದ್ದು. [ಸಂ. 32.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 13, ಸ‌ 1903.

IIನೇ ಭಾಗ.

ಇಂಡ್ಯ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷ‌, ತಾರೀಖು 24ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಇದರಡಿ ನಮೂದಾಗಿ ಇರುವ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟು ಪ್ಲಾಂಟೇಷ‌ಗಳ ಹುಲ್ಲನ್ನು ಕುಯಿದು ಸಾಗಿಸಿಕೊಳ್ಳುವ ಹಕ್ಕನ್ನು ಸದರೀ ಪ್ಲಾಂಟೇಷ‌ಗಳ ಬಾಜೂದಲ್ಲಿ ನಮೂದಾಗಿರುವ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದಲಾಗಲಿ ರೇಂಜು ಫಾರೆಸ್ಟ್ ಆಫೀಸರವರಿಂದಲಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ತಾಲ್ಲೂಕು.	ಪ್ಲಾಂಟೇಷ‌ಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.	ಹರಾಜು ಮಾಡುವ ಆಫೀಸರ ಹೆಸರು.
ಬೆಂಗಳೂರು ..	ಜಕ್ಕೂರು ಅಳ್ಳಾಳಸಂದ್ರ ..	300	13—8—03	ಪೀಣ್ಯ ಫಾರೆಸ್ಟ್ ಲಾಡ್ಜ್	ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಅಥವಾ ರೇಂಜು ಫಾರೆಸ್ಟ್ ಆಫೀಸರವರು
	ಬ್ರಹ್ಮಸಂದ್ರ ..	48	ಡಿಟೋ		
	ಬಟ್ಸ್ ಹೆಬ್ಬಾಳ ...	100	15—8—03	ಬೆಂಗಳೂರು	
	ಕೆಂಚನ ಹಳ್ಳಿ ...	77	ಡಿಟೋ		
ನೆಲಮಂಗಲ ...	ಮಾಚೋಹಳ್ಳಿ ..	270	ಡಿಟೋ		
ಬೆಂಗಳೂರು ..	ಮಲತ್ತಹಳ್ಳಿ ..	255	ಡಿಟೋ	ಬೆಂಗಳೂರು	
	ನಾಗರಭಾವಿ ..	250	ಡಿಟೋ		
ನೆಲಮಂಗಲ ..	ಕೃಷ್ಣರಾಜಪುರ ..	423	12—8—03	ನೆಲಮಂಗಲ	
	ಮಾವಿನಕೋಮನಹಳ್ಳಿ	435	ಡಿಟೋ		
	ಗೋವಿಂದಪುರ	48	ಡಿಟೋ		
	ಕಲ್ಲುಪಾಳ್ಯ ..	106	ಡಿಟೋ		
	ಕೆಂಚನಪುರ ..	535	ಡಿಟೋ		
	ಬಳ್ಳಗೆರೆ	400	ಡಿಟೋ		
	ಭೈರಶೆಟ್ಟಿಹಳ್ಳಿ (ಗೊಲ್ಲಹಳ್ಳಿ)	86	ಡಿಟೋ		
	ಬೊಮ್ಮೇನಹಳ್ಳಿ ..	174	ಡಿಟೋ		

ತಾಲ್ಲೂಕು.	ಪ್ಲಾಂಟೇಷನ್ಗಳ ಹೆಸರು.	ಎಕರೆ.	ಹರಾಜು ಮಾಡುವ ತಾರೀಖು.	ಹರಾಜು ಮಾಡುವ ಸ್ಥಳ.	ಹರಾಜು ಮಾಡುವ ಆಫಿಸರ ಹೆಸರು.
ಹೊಸಕೋಟೆ ...	ಹಳೇಜಡಿಗೇನಹಳ್ಳಿ ...	455	16—8—03	ಕಾಡಗೋಡಿ	ಬೆಂಗಳೂರು ಡೆಪ್ಯುಟಿ ಕನ್ಸರ್ವೇಟರ್ ಆಫ್ ಫಾರೆಸ್ಟ್ಸ್ ಅಥವಾ ರೇಂಜು ಫಾರೆಸ್ಟ್ ಆಫಿಸರ
	ನಲ್ಲಾಲ್ ಎ. ಬಿ. ...	734	ಡಿಟೋ		
	ಡಿಟೋ ಶಿ. ..	486	ಡಿಟೋ		
	ಅಪ್ಪಸಂದ್ರ	547	ಡಿಟೋ		
ಆನೆಕಲ್ಲು ..	ಕುಂಬಾರನಹಳ್ಳಿ ...	$135\frac{1}{2}$	19—8—03	ಬನ್ನೇರುಗಟ್ಟ	
	ಕಂನಮನಹಳ್ಳಿ ...		ಡಿಟೋ		

ಷರಾ—2. ಹರಾಜು ಖೈದಾದ ಕೂಡ್ಲೆ ಖರೀದಿದಾರನು $\frac{1}{4}$ ಹಿಸ್ಸೆ ಮೊಬಲಗನ್ನು ಕಟ್ಟಬೇಕು. ವುಳಿದ ಮುಕ್ಕಾಲು ಹಿಸ್ಸೆಯನ್ನು ಖರೀದಿ ತಾರೀಖು ಲಾಗಾಯಿತು 7 ದಿವಸಗಳ ಒಳಗಾಗಿ ಕಟ್ಟಬೇಕು. ಇದಕ್ಕೆ ತಪ್ಪಿದಲ್ಲಿ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ಶೇರಿಸಿಕೊಳ್ಳುವದಲ್ಲದೆ ಹುಲ್ಲನ್ನು ದುಸರಾ ಹರಾಜು ಮಾಡಿ ಅದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಖರೀದಿದಾರನನ್ನು ಗುರಿಮಾಡಲಾಗುತ್ತೆ. ಏನಾದರೂ ಹೆಚ್ಚು ಉತ್ಪತ್ತಿ ಆದಲ್ಲಿ ಅವಲ್ ಖರೀದಿದಾರನು ಯಾವವಿಧದಲ್ಲು ಭಾಗಿಯಾಗುವದಿಲ್ಲ. ಪೂರ್ತ ಹಣ ಪಾವತಿ ಮಾಡಿದ ಕೂಡಲೆ ಹುಲ್ಲು ಕುಯ್ಯುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

3. ಪ್ಲಾಂಟೇಷನ್ನಲ್ಲಿ ಹರಾಜುದಾರನ ಅಜಾಗ್ರತೆಯಿಂದ ಬೆಂಕೀ ವಗ್ಯೆರೆ ಸಂಭವಿಸಿದಲ್ಲಿ ಖರೀದಿದಾರನು ಜವಾಬ್ದಾರನಾಗಿರುತ್ತಾನೆ. ಖರೀದಿದಾರನಿಂದಲಾಗಲೀ ಅವನ ಕಡೆ ಜನಗಳಿಂದಲಾಗಲೀ ಏನಾದರೂ ಫಾರೆಸ್ಟು ತಕಶೀರು ನಡದಲ್ಲಿ ಫಾರೆಸ್ಟು ರೆಗ್ಯುಲೇಷನ್ ರೀತ್ಯಾ ಶೀಕ್ಷೆಗೆ ಗುರಿಮಾಡಲ್ಪಡುವನು.

4. ಮೇಲಿನ ಪ್ಲಾಂಟೇಷನ್ಗಳ ಹುಲ್ಲನ್ನು ಹಗಲಿನಲ್ಲಿ ಹರಾಜು ತಾರೀಖು ಲಾಗಾಯತು 1904ನೇ ಮಾರ್ಚಿ 31ನೇ ತಾರೀಖು ವರಿವಿಗೂ ತೆಗದುಕೊಳ್ಳಬಹುದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 6ನೇ ಆಗಸ್ಟು 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1903—1904ನೇ ಇಸವಿಗೆ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಸ್ಟುಗಳ ಪಸಾರೆ ಜಿನಶಿಯು ಹಕ್ಕುದಾರಿಯನ್ನು ರೇಂಜ್ ಫಾರೆಸ್ಟು ಆಫಿಸರುಗಳು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿಯು ಆಯಾಯ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ.

ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಗೆ ವಳಪಟ್ಟಿರುತ್ತೆ. ಹರಾಜು ಆಯಾಯ ತಾರೀಖಿನ ಮಧ್ಯಾನ್ಹ 12 ಘಂಟೆಗೆ ಷುರು ಮಾಡಲ್ಪಡುವದು.

ನಂಬರು.	ರೇಂಜು.	ಸ್ಟೇಟ್ ಫಾರೆಸ್ಟುಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಶಿವಮೊಗ್ಗ ...	ಆಲದ ಹಾರ	ಶಿವಮೊಗ್ಗಾ ರೇಂಜ್ ಆಫೀಸು	3—9—1903
		ಚೋರನ್ನೆಡೆಹಳ್ಳಿ		
		ಕುಂಶಿ		
		ಕುಂಚೇನಹಳ್ಳಿ		
		ಮಸರೂರು		
		ಪುರದಾಳು		
		ಸಕ್ರೆಬೈಲು		
		ಶಂಕರ		
		ವುಂಬಳಿ ಬೈಲ		
2	ಚನ್ನಗಿರಿ ...	ಕುಕ್ಕವಾಡಾ ಪ್ರೊಬ್ರಾಣಿ	ಚನ್ನಗಿರಿ ರೇಂಜ್ ಆಫೀಸು	7—9—1903
3	ಶಿಕಾರಿಪುರ ...	ಬಸವನಂದಿಹಳ್ಳಿ	ಶಿಕಾರಿಪುರ ರೇಂಜ್ ಆಫೀಸು	8—9—1903
		ಬೆಳೆಂದೂರು		
		ಚಂದ್ರಕಲ		
		ಗಂಗವನಸರ		
		ಕರ್ಡಿಬೆಟ್ಟ		
		ಕವಲಿ		
		ತೊಗರಶಿ		

ನಂಬರು.	ರೇಂಜು.	ಸ್ಟೇಟ್ ಫಾರೆಸ್ಟುಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
4	ಸೊರಬ ...	ತೆಲಗಡ್ಡೆ ಅರೆತೆಲಗಡ್ಡೆ ಬೆಟ್ಟದ ಕುರ್ಲಿ ಚಂದ್ರಗುತ್ತಿ ಕವಡಿ	ಸೊರಬ ಟ್ರಾವಲರ್ಸ್ ಬಂಗ್ಲೆಯಲ್ಲಿ	12—9—1903
		ಮಲಂದೂರು	ಸಾಗರ ರೇಂಜ್ ಆಫೀಸ್	15—9—1903

ಜೆನಸಿ ತಪಶೀಲು.

1. ಹುಣಸೇಹಂಣು
2. ಹೊಂಗೆ ಬೀಜ
3. ಶೀಗೆಕಾಯಿ
4. ಗೋಂದು
5. ಜೇನುತುಪ್ಪ
6. ಜೇನುಮ್ಯಾಣ
7. ಕಪಿಲಾರಂಗು
8. ಗೇರು
9. ಬ್ಯಾಲದಹಂಣು
10. ಕಲ್ಲುಹುವ್ವು
11. ಮರ್ಡಿಬೀಜ ಅಥವಾ ಚಾರಪಪ್ಪು
12. ತಾರೆಕಾಯಿ
13. ಅಳಲೆಕಾಯಿ
14. ಕಾಡು ಜಗಜೆಬೀಜ
15. ಅಂಟುವಾಳದ ಕಾಯಿ
16. ಗುರಿಗೆ ಹರಳು
17. ಕಾಡು ಹರಳು
18. ಕಾನ ಮೆಣಸು
19. ಕಾನ ಯಾಲಕ್ಕಿ
20. ನಸರಿ ಜೇನು
21. ಹಾಲಮಡ್ಡಿ
22. ಹುಳಗಲ ಬೀಜ
23. ವಾಟೆಹುಳಿ
24. ದಾಲಚಿನ್ನಿ ಮಗ್ಗು
25. ಬೆಂಡೆನಾರು
26. ಕಾಡು ಇಪ್ಪೆ
27. ಬೂರಗದ ಹತ್ತಿ
28. ಕಿರಿ ಈಚಲು
29. ಬೆಂಡು
30. ಆಗಸೆ ಬೀಜ
31. ಬೊಲಾರ ಬಾರಕ್ಕು
32. ಬಳಾಪುಕಲ್ಲು
33. ರಾಮಪತ್ರಿ—ಕಾನಪತ್ರಿ

2. ಚಡ ದರಖಾಸ್ತುದಾರನು ಹರಾಜು ಕೈದು ಆದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈರೀತಿ ಪಾವತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರಕಾರಕ್ಕೆ ಉಂಟಾಗುವ ನಷ್ಟಕ್ಕೆ ಷುರು ದರಖಾಸ್ತುದಾರನನ್ನು ಗುರಿಮಾಡಲಾಗುತ್ತೆ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ಉಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ಮಾಡಲಾಗುತ್ತೆ.

4. ಹರಾಜು ಮೊಬಲಗ್ಯೆ ರೂಪಾಯಿ ಒಂದರ ಒಂದಾಣೆಯಂತೆ ಲೋಕಲ್ ಸೆಸ್ಸು ಕೊಡತಕ್ಕದ್ದು.

5. ರೇಂಜ್ ಫಾರೆಸ್ಟು ಆಫಿಸರು ಯಾವದೊಂದು ಕಾರಣವನ್ನು ತಿಳಿಸದೆ ದರಖಾಸ್ತು ಮಂಜೂರು ಮಾಡುವದಕ್ಕೆ ಆಗಲಿ ತಿರಸ್ಕರಿಸುವದಕ್ಕಾಗಲಿ ಸ್ವತಂತ್ರರಾಗಿರುತ್ತಾರೆ.

6. ದರಖಾಸ್ತುದಾರನು ಇನಾಮದಾರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

7. ದರಖಾಸ್ತುದಾರನಾಗಲಿ ಅಥವಾ ಅವನ ಆಳುಗಳ ಆಗಲಿ ಪಸಾರೆ ಜಿನಸಿ ಜಮಾವಣಿ ನೆಪದಮೇಲೆ ಯಾವ ಗಿಡಗಳನ್ನಾಗಲಿ ನಾಶಪಡಿಸಕೂಡದು.

8. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜಿನಸಿ ವಿನಹ ಇತರೆ ಯಾವ ಜಿನಸಿಯನ್ನು ಜಮಾಯಿಸಕೂಡದು.

9. ದರಖಾಸ್ತುದಾರನ ಏಜಂಟರುಗಳಾಗಲಿ ಅಥವಾ ಆಳುಗಳಾಗಲಿ ಪಸಾರೆ ಜಿನಸಿ ಜಮಾವಣಿ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೆ ಗುರಿಪಡಿಸಲಾಗುತ್ತೆ.

10. ದರಖಾಸ್ತುದಾರನು 1904ನೇ ಇಸವಿ ಏಪ್ರೆಲ್ ಆಖ್ಯೆರೊಳಗಾಗಿ ಎಲ್ಲಾ ಪಸಾರೆ ಜಿನಸಿಯನ್ನು ಸ್ಟೇಟ್ ಫಾರೆಸ್ಟು ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

11. ಸ್ಟೇಟ್ ಫಾರೆಸ್ಟಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಲಾಗಲಿ ಅಥವಾ ಈತನ ಆಳುಗಳಿಂದಲಾಗಲಿ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಅಕೃತ್ಯಕ್ಕೆ ದರಖಾಸ್ತುದಾರನನ್ನ ಗುರಿಪಡಿಸಲಾಗುತ್ತೆ.

12. ದರಖಾಸ್ತುದಾರನೆ ಆಗಲಿ ಅಥವ ಈತನ ನವುಕರರೆ ಆಗಲಿ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತ ನಂತರ ಸ್ಟೇಟ್ ಫಾರೆಸ್ಟಿನಲ್ಲಿ ಪ್ರವೇಶ ಮಾಡಕೂಡದು.

13. ಈ ಮೇಲ್ಕಂಡ ಷರತ್ತುಗಳಿಗೆ ವ್ಯತಿರಿಕ್ತವಾಗಿ ನಡದಲ್ಲಿ ದರಖಾಸ್ತು ರದ್ದುಮಾಡುವದಲ್ಲದೆ ಜಮಾಯಿಸಿದ ಎಲ್ಲಾ ಪಸಾರೆ ಜಿನಸಿಯನ್ನು ಸರಕಾರಕ್ಕೆ ದಂಡವಾಗಿ ಶೇರಿಸಿಕೊಂಡು ಒಂದು ನೂರು ರೂಪಾಯಿ ವರಿಗೆ ಜುರ್ಮಾನೆ ವಿಧಿಸುವದಕ್ಕು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಸ್ವತಂತ್ರರಾಗಿರುತ್ತಾರೆ.

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ತಂಗಡಿ ಚಕ್ಕೆ.

ಇಸ್ತಿಹಾರು, ತಾರೀಖು 7ನೇ ಆಗಸ್ಟು 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ಸರ್ಕಾರಿ ಜಮೀನ್ನಲ್ಲು, ಮತ್ತು ಪ್ಲಾಂಟೇಷನ್‌ಗಳಲ್ಲೂ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿಯೂ ಇರತಕ್ಕ, ತಂಗಡಿ ಚಕ್ಕೆಯನ್ನು 1903ನೇ ಇಸವಿ ಅಕ್ಟೋಬರ ಗುರ್ರೇ ಲಾಗಾಯತು 1905ನೇ ಇಸವಿ ಜೂನ 30ರ ವರಿಗೆ ಇಪ್ಪತ್ತೊಂದು ತಿಂಗಳು ಕಾಲದಲ್ಲಿ ರೂಢಿಶಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1903ನೇ ಇಸವಿ ಸೆಪ್ಟಂಬರ 20ನೇ ತಾರೀಖಿನ ವರಿಗೆ ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರ.	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟಿನ ಹೆಸರು.	ಷರಾ.
1	ಹರಿಹರದ ಸಬ್ ತಾಲ್ಲೂಕು.	ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.
2	ಜಗಲೂರು ತಾಲ್ಲೂಕು.	
3	ಚಳ್ಳಕೆರೆ ಡಿಟೋ	
4	ಚಿತ್ರದುರ್ಗ ಡಿಟೋ	
5	ಮಲೇಬೆನ್ನೂರು ಸ್ಟೇಟ್ ಫಾರೆಸ್ಟು.	
6	ನೀರಥಡಿ ಡಿಟೋ	
7	ಜೋಗೀಮಟ್ಟಿ ಡಿಟೋ	

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿಒಂದು ದರಖಾಸ್ತಿನೊಡನೆ (200) ರೂಪಾಯಿನ ಕರ್ನ್ಸಿ ನೋಟ್ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಫೀ ಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರದು ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನು ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿನಲ್ಲಿ 1903ನೇ ಇಸವಿ ಸೆಪ್ಟಂಬರ 12ನೇ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಥವಾ ಇವರಿಂದ ನಿಯಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಸೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತು ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಮತ್ತು ಇದರಮೇಲೆ ಅರ್ಧ ಭಾಗವನ್ನು ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಯೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ವುಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ತಮಿಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತುನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಶಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೇನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತೀ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರೀಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾಧೀತು.

1ನೇ ಖಿಸ್ತು	...	...	31ನೇ ಜನವರಿ 1904.
2ನೇ ಖಿಸ್ತು	...	....	31ನೇ ಮೇ 1904.
3ನೇ ಖಿಸ್ತು	...	...	30ನೇ ಸೆಪ್ಟಂಬರ 1904.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕಿಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡಿಯುವ್ವ ತಿಯಾಯಿ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗೆದನಂತರಾ ಪುಳಿಯುವ ಆ ಸಂಬಂಧವಾದ ವಿಸಿಷ್ಟ ಸೌದೆಯೂ ಇಜಾರೆದಾರನಿಗೆ ಶೇರಿದ್ದಾಗಿರುತ್ತೆ.

(V) ಇಜಾರೇ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಜೋಜಾ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1905ನೇ ಜುಲೈ ಮಾಹೆ 15ನೇ ತಾರೀಖಿನೊಳಗಾಗಿ ಇಜಾರೆ ಮಾಯಿದೆಯಲ್ಲಿ ಕಡದು ಜಮಾವಣೇ ಮಾಡಿ ದಾಸ್ತಾ ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿವರಿಗೂ ಜುರ್ಮಾನೆಯನ್ನು ಸಹಾ ವಿಧಿಸಬಹುದು.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್, ಚಿತ್ರದುರ್ಗದ ಡಿಸ್ಟ್ರಿಕ್ಟು.

ತಾರೀಖು 31ನೇ ಜುಲೈ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ಜನಗಳು ಅವರವರ ಹೆಸರಿನ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿ ಚಾಬೀನೆ ಮತ್ತು ಬಿದರು ವಗೈರೆ ಬಗ್ಗೆ ಲೈಸೆನ್ಸುಗಳು ಕೊಡುವ ಬಗ್ಗೂ ಲೈಸೆನ್ಸುಗಳು ಛಕ್ಕು ಮಾಡುವಬಗ್ಗೂ ಲೈಸೆನ್ಸ್ ವೆಂಡರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ :—

ತಾಲ್ಲೂಕು ಹೆಸರು.	ಸ್ಥಳದ ಹೆಸರು.	ಲೈಸೆನ್ಸ್ ವೆಂಡರುಗಳ ಹೆಸರು.
ಹುಣಸೂರು ತಾಲ್ಲೂಕು ...	ಬಿಳಿಕೆರೆ	ಶೇಕದಾರ್ ಕೃಷ್ಣೈಯ್ಯಂಗಾರ್
	ಹುಣಸೂರು	ಸಿ. ಕೆ. ತಿರುಮಲರಾವ್
	ಪಿರ್ಯಾಪಟ್ಣ	ಪಟೇಲ ದೇವಣ್ಣಾ
	ಮುತ್ತೂರು	ಅಯ್ಯಣ್ಣ ವುರುಫ್ ತಿಮ್ಮಪ್ಪಯ್ಯ
ಹೆಗ್ಗಡದೇವನಕೋಟೆ ...	ಬೇಗೂರು	ಪಟೇಲ ಕಾಳೇಗೌಡ ವುರುಫ್ ಲಿಂಗೇಗೌಡ
	ಅಂತರಸಂತೆ	ಕಪ್ಪಣ್ಣ
	ಸರಗೂರು	ವೆಂಕಟನಾರಣಪ್ಪ
	ಹೆಗ್ಗಡದೇವನಕೋಟೆ	ಪಡೂಕೋಟೆ ಸುಬ್ಬಯ್ಯ
	ಹಂಪಾಪುರ	ಶೇಷಮ್ಮನಾಯುಡು
ಗುಂಡ್ಲು ಪೇಟೆ ...	ಮಡುವಿನಹಳ್ಳಿ	ಚಿಕ್ಕ ನಂಜಪ್ಪಾ
	ಕುರುಬರಹುಂಡಿ	ಪುಟ್ಟಯ್ಯಾ
	ಗುಂಡ್ಲುಪೇಟೆ	ಟಿ. ಸಂಪತ್ಕೈಯ್ಯಂಗಾರ್
	ಹಂಗಳಾ	ಶ್ರೀಕಂಠೈಯ್ಯಾ
	ಬರಗಿ	ಸುಬ್ಬರಾವ್
ಚಾಮರಾಜನಗರ ...	ಸಂತೆಮರಹಳ್ಳಿ	ಪಟೇಲ್ ಮಾದಪ್ಪಾ
	ಚಾಮರಾಜನಗರ	ಲಕ್ಷ್ಮಣಾಚಾರ್
	ಜ್ಯೋತಿಗೌಡ್ನಪುರ	ವೆಂಕಟರಮಣಯ್ಯ
ಮೈಸೂರು ತಾಲ್ಲೂಕು ...	ಚಟ್ನಹಳ್ಳಿ	ಕಾಳಿಂಗೈಯ್ಯಾ

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮಿಷನರ್, ಮೈಸೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 1ನೇ ಆಗಸ್ಟು 1903.

1. ಕಂದಾಯದ ಬಾಕೀದಾರರಾದ ಕೋಲಾರ ಕಸಬೆ ವಾಸಸ್ಥರಾದ ನಂಜುಂಡಾವಧಾನಿ ವಗ್ಯೆರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಚೇರಿಯಲ್ಲಿ ಸ್ 1903ನೇ ಇಸವಿ ಸೆಪ್ಟಂಬರ ಮಾಹೆ 18ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–03ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 181—11—11 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿನ್ನು ಡಿಪಾಜಿಟ್ಟು ಹಾಜರ್‌ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್‌ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‌ಮಾಡಲ್ಪಡಡೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‌ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್‌ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರೆ ಖರ್ಚುಗಳ ಸಮೇತ ಹಾಜರ್‌ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷ್ನರವರಿಂದ ಮಂಜೂರ್‌ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷ್ನರವರಿಂದ ಹರಾಜು ಮಂಜೂರ್‌ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮಿಷ್ನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷ್ನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಅವಧಿಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಯೆರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಕೋಲಾರ	ಕಸಬಾ ಕೋಲಾರ	ಜೋಡಿ ಕೋಡಿ ರಾಮಸಂದ್ರಗ್ರಾಮ	ನಂಜುಂಡಾವಧಾನಿ ವಗ್ಯೆರೇರು	...	..	..	ಪರಂಪೋಕು	15	32	...	...	...	181	11	11	ಒಟ್ಟು ಬಾಕಿ
							ಖುಷ್ಕಿ	220	21	241	0	0	110	13	9	ಪೈಕಿ ವಸೂಲ್
							ಬಾಗಾಯತು	...	21	1	0	0				
													70	14	2	
								236	34	242	0	0	1	0	0	ನೋಟಿಸ್ ಫೀ ವಗ್ಯೆರೆ
					ಗ್ರಾಮದ ಚಕ್ಕುಬಂದಿ.								71	14	2	ಬಾಕಿ
					ಪೂರ್ವಕ್ಕೆ—ಹೊನ್ನೇನಹಳ್ಳಿ											
					ಪಶ್ಚಿಮಕ್ಕೆ—ಕೋಲಾರ ಅಮಾನಿಕೆರೆ											
					ಉತ್ತರಕ್ಕೆ—ಟಮಕ ಸರಹದ್ದು											
					ದಕ್ಷಿಣಕ್ಕೆ—ಬಸವನತ್ತದ ಸರಹದ್ದು											
					(ಜಾರೀಯಲ್ಲಿರುವ ಚಿಲ್ಲರೆ ಇನಾಂತಿ ವಿನಹ ಪೂರಾಗ್ರಾಮ)											

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 25ನೇ ಜುಲೈ 1903.

ಬವರಿಂಗಪೇಟೆ ತಾಲ್ಲೂಕು ಕ್ಯಾಸಂಬಳ್ಳಿ ಹೋಬಳಿ ಜೋಡಿ ದೊಡ್ಡಗಾಂಡ್ಲಹಳ್ಳಿ, ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ ಮಾಹೆ 7ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂಪು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿಥೆ.

(ಹೆಚ್ಚು ತಪಶೀಲ್ ಬಗ್ಗೆ 6—8—1903ನೇ ಮರ್ಸ್ಕಂ 31ನೇ ನಂಬರ್ ಮೈಸೂರು ಗೆಜೆಟ್ಟಿನ IIನೇ ಭಾಗದ 435ನೇ ನಂಬರ್ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ್.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರ ಡಿಸ್ಟ್ರಿಕ್ಟು ತಿಪಟೂರು ತಾಲ್ಲೂಕು ಜೋಡಿ ಹುಳಿಸಂದ್ರ ಗ್ರಾಮವು 1903ನೇ ಇಸವಿ ಜುಲೈ ಮಾಹೆ 30ನೇ ಮರ್ಸ್ಕಂನಲ್ಲಿ ತಿಪಟೂರು ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 30ನೇ ಮರ್ಸ್ಕಂ 30ನೇ ನಂಬರ್ ಮೈಸೂರ ಗೆಜೆಟನಲ್ಲಿ ಫ್ರಾಯಿಷ್ ಆಗಿ ಇಧೆ.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ—ತುಮಕೂರ ಡಿಸ್ಟ್ರಿಕ್ಟು ಮದ್ದಗಿರಿ ತಾಲ್ಲೂಕು ಕಾಯಂಗುತ್ತಾ ಮ್ಯಾಕೆತಿಮ್ಮನಹಳ್ಳಿ, ಗ್ರಾಮವು 1903ನೇ ಇಸವಿ ಜುಲೈ ಮಾಹೆ 30ನೇ ಮರ್ಸ್ಕಂನಲ್ಲಿ ಮದ್ದಗಿರಿ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು 30ನೇ ಮರ್ಸ್ಕಂ 30ನೇ ನಂಬರ್ ಮೈಸೂರ ಗೆಜೆಟನಲ್ಲಿ ಫ್ರಾಯಿಷ್ ಆಗಿ ಇಧೆ.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 20ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮೈಸೂರು ಡಿಸ್ಟ್ರಿಕ್ಟು ಎಡತೊರೆ ತಾಲ್ಲೂಕು ರಾಮಸಮುದ್ರದ ನಾಲಾ ಬಿಡಾವಣೆಗಾಗಿ ಅಕ್ವೈರು ಮಾಡಿಕೊಂಡಿರುವ ಜಮೀನುಗಳ ಕಂಪೆನ್ಸೇಷನ್ ಮೊಬಲಗು ಇದೆ ಸಾಲ್ ಆಗಸ್ಟು ಗುರ್ರೇ ಲಾಗಾಯಿತು ಪಾವತಿ ಮಾಡಲ್ಪಡುತ್ತೆ.

ಸದರಿ ಜಮೀನುಗಳಲ್ಲಿ ಹಕ್ಕು ಯಾ ಬಾಧ್ಯತೆವುಳ್ಳವರು ತಮ್ಮಲ್ಲಿರುವ ವಿಶಿಷ್ಟ ಟೈಟಲ್ ಡೀಡುಯಾನೆ ದಾಖಲಾತುಗಳು ನಿತಿ ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ನಮ್ಮ ರೂಬರೂ ಹಾಜರಾಗಿ ವಾಂಗ್ಮೂಲ ಕೊಟ್ಟು ತಮ್ಮ ಹಕ್ಕನ್ನು ಊರ್ಜಿತ ಮಾಡಿಕೊಟ್ಟು ವಿಧಾಯಕವಾದ ಕಂಪೆನ್ಸೇಷನ್ ಮೊಬಲಗನ್ನು ಪಡೆಯಬಹುದು.

ಬಿ. ಕೃಷ್ಣರಾವ್,
ಅಡಿಷನಲ್ ಅಸಿಸ್ಟೆಂಟ್ ಕಮಿಷನರ್.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಉಕ್ಕಲಗೆರೆ ಗ್ರಾಮದ ಇನಾಂದಾರ್ ಶ್ರೀನಿವಾಸರಾಘವಾಚಾರ್ರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ತಿ|| ನರಸೀಪುರದ ತಾಲ್ಲೂಕು ಉಕ್ಕಲಗೆರೆ ಗ್ರಾಮದಲ್ಲಿ 1903ನೇ ಇಸವಿ ಸೆಪ್ಟಂಬರು ಮಾಹೆ 16ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ* ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 207—0—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಯನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು.		ಜಮೀನು.				ಸರ್ಕಾರಕ್ಕೆ ಬರಬೇಕಾದ ನೋಟಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.	
				ಕಟ್ಟಡದ ಹೆಸರು.	ಅಂದಾಜು ಕ್ರಯ.	ಸರ್ವೆ ನಂಬರು ಅಥವಾ ಹೆಸರು.	ಹಿಸ್ಸೆ ಅಥವಾ ಪೋಟ್ ನಂಬರು.	ವಿಸ್ತೀರ್ಣ.	ಬೆರಿಜು.		
					ರೂ. ಆ. ಪೈ.			ಎ. ಗು.	ರೂ. ಆ. ಪೈ.	ರೂ. ಆ. ಪೈ.	
ತಿ॥ ನರಸೀಪುರ	ಸೋಸಲೆ	ಕ॥ ಬಿಕ್ಕಲಿ	ಆನಂದೂರು ಬ್ರಹ್ಮಸರಸ್ವತಿಗಳವರು	..	...	ಪೂರಾ ಗ್ರಾಮ		...	207 0 0	110 14 6	ಗುದಸ್ತು
										96 1 6	ಮಜಕೂರು
										207 0 0	
										1 8 0	
										208 8 0	

* ಯಾ ಬಾಕೀ ಇರುವವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 30ನೇ ಜುಲೈ 1903.

1. ಕಂದಾಯದ ಬಾಕೀದಾರರಾದ ಭಂಡಾರಹಳ್ಳಿ ಗ್ರಾಮದ ವಿಶ್ವೇಶ್ವರಾರಾಧ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಕಸಬಾ ಶಿವಮೊಗ್ಗ ತಾಲ್ಲೂಕು ಕಚೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ್ 10ನೇ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಅಥೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 188—11—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‍ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್‍ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್‍ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟ್ಸು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್‍ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್‍ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್‍ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್‍ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್‍ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನಮೆಂಟನವರು ಜವಾಬ್‍ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ. ಆ. ಪೈ.
ಶಿವಮೊಗ್ಗ	ಚಂಕೀಪುರ	ಜೋಡಿ ಭಂಡಾರಹಳ್ಳಿ ಗ್ರಾಮ	ವಿಶ್ವೇಶ್ವರಾರಾಧ್ಯ ವಗೈರೇರು	...	ರೂ. 5,000	ಪೂರಾಗ್ರಾಮ	ಪರಂಪೋಕು	278	28	17	6	8	188—11—2 ಚಾಲ್ತಿ ವರಿಗಿನ ಬಡ್ಡೀ ಫೀ ಸಹ ಬರಬೇಕು.
							ಖುಷ್ಕಿ ...	360	33	166	14	10	
							ತರಿ ...	281	27	760	7	8	
							ಬಾಗಾಯತು	3	32	4	0	0	
								925	0	948	13	2	
							ಜೋಡಿ ...			94	0	0	

* ಯಾ ಬಾಕಿ ಇರುವ ವಾಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮಿಷನರ್.

2 c

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೇ ಇಸವಿ ಅರ್ಜೀ ನಂಬರ 41.

ಮೃತಪಟ್ಟ ವೀರಭದ್ರಪ್ಪನೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಆನೇಕಲ್ಲು ತಾ॥ ಕಮ್ಮನಾಯಿಕನಹಳ್ಳಿಲಿರುವ ರುದ್ರಮ್ಮನೆಂಬುವರು, ಮೃತಪಟ್ಟ ಸದರೀ ವೀರಭದ್ರಪ್ಪನೆಂಬುವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಆನೇಕಲ್ಲಿನಲ್ಲಿ ವಾಸಸ್ಥರಾಗಿ ಮೃತಪಟ್ಟ ವೀರಭದ್ರಪ್ಪ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುದ್ರಮ್ಮನೆಂಬುವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪಟಂಬರ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ವೀರಭದ್ರಪ್ಪನೆಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 6ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1903—04ನೇ ಇಸವಿ ಅರ್ಜೀ ನಂಬರ 42.

ಮೃತಪಟ್ಟ ಕೊತ್ತವಾಲ ಚಾವಡಿ ವೆಂಕಟಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರಿನಲ್ಲಿ ಇರುವ ಸರ್‌ಸೆಸ್ ಆಫೀಸ್ ದಫೇದಾರ ವೆಂಕಟರಮಣಪ್ಪ ಎಂಬುವರು, ಮೃತಪಟ್ಟ ಸದರೀ ಕೊತ್ತವಾಲ ಚಾವಡಿ ವೆಂಕಟಪ್ಪನವರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಹಳ್ಳಿಕಾರ್ರ ಪ್ಯಾಟೇಲಿ ವಾಸಸ್ಥರಾಗಿ ಮೃತಪಟ್ಟ ಕೊತ್ತವಾಲ ಚಾವಡಿ ವೆಂಕಟಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ದಫೇದಾರ ವೆಂಕಟರಮಣಪ್ಪನೆಂಬುವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪಟಂಬರ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಕೊತ್ತವಾಲ ಚಾವಡಿ ವೆಂಕಟಪ್ಪನೆಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 6ನೇ ತಾರೀಖಿನಲ್ಲಿ ಕೋರ್ಟುಮೊಹರ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1903—1904ನೇ ಇಸವಿ ಅರ್ಜೀ ನಂಬರ 44.

ಮೃತಪಟ್ಟ ರಾಘವೇಂದ್ರರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಗೋರಿಬಿದನೂರು ತಾಲ್ಲೂಕು ಗೌಡಗೆರೇಲಿರುವ ಭಾರ್ತಮ್ಮನವರು, ಮೃತಪಟ್ಟ ಸದರೀ ರಾಘವೇಂದ್ರರಾಯರವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ದೊಡ್ಡಬಳ್ಳಾಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಘವೇಂದ್ರರಾಯರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನಿನ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭಾರ್ತಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪಟಂಬರ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನವಿಮರ್ಶೆ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ಮೃತಪಟ್ಟ ರಾಘವೇಂದ್ರರಾಯರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 6ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಸರ್ 1903—1904ನೇ ಇಸವಿ ಅರ್ಜೀ ನಂಬರ 45.

ಮೃತಪಟ್ಟ ವೆಂಕೋಜಿ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮಾಗಡಿ ಕಸಬೆಯಲ್ಲಿರುವ ಶಿವಾಜಿ ಮಗ ರಂಗರಾವು ಎಂಬುವರು, ಮೃತಪಟ್ಟ ಸದರೀ ವೆಂಕೋಜಿ ಎಂಬುವರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ಕಸಬೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ವೆಂಕೋಜಿ ಎಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿವಾಜಿ ಮಗ ರಂಗರಾವು ಎಂಬುವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕೋಜಿ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೇ ಇಸವಿ ಆಗಸ್ಟ್ ತಿಂಗಳು 6ನೇ ತಾರೀಖಿನಲ್ಲಿ ಕೋರ್ಟುಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿ ಇದೆ.

ಸರ್ 1902–1903ನೇ ಇಸವಿ ಅರ್ಜೀ ನಂಬರ 245.

ಮೃತಪಟ್ಟ ಸದರ್ನ ಮರಾಟಾ ರೈಲ್ವೆ ಕಂಪೆನೀಲಿ ರಿಲೀವಿಂಗ್ ಸ್ಟೇಷನ್ ಮಾಸ್ಟರಾಗಿದ್ದ ಬಿ. ಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜಮ್ಮ, ಮೃತಪಟ್ಟ ಸದರೀ ಬಿ. ಸುಬ್ಬಯ್ಯನವರಿಗೆ ಮುಖ್ಯವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಆನೆಕಲ್ಲು ತಾಲ್ಲೂಕು ನೆರಿಗ ವಾಸಸ್ಥರಾಗಿ ಮೃತಪಟ್ಟ ಬಿ. ಸುಬ್ಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಿ. ಸುಬ್ಬಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಅರ್ಜೀ ನಂಬರ 246.

ಮೃತಪಟ್ಟ ಡಿ. ಸುಬ್ಬಾಶಾಸ್ತ್ರಿಗಳವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು–ಹಲಸೂರುಪೇಟೆಲಿರುವ 1ನೇ ರಂಗಶೇಷಶಾಸ್ತ್ರಿ, 2ನೇ ದಕ್ಷಿಣಾಮೂರ್ತಿಶಾಸ್ತ್ರಿ, ಮೈನರು, ಸಬಬ್ ಗಾರ್ಡಿಯನ್ ತಾಯಿ ವೆಂಕಟಲಕ್ಷಮ್ಮ, ಮೃತಪಟ್ಟ ಸದರೀ ಡಿ. ಸುಬ್ಬಾಶಾಸ್ತ್ರಿಗಳವರಿಗೆ ಮುಖ್ಯ ವಾರಸದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು–ಹಲಸೂರುಪೇಟೇಲಿ ವಾಸಸ್ಥರಾಗಿ ಮೃತಪಟ್ಟ ಡಿ. ಸುಬ್ಬಾ ಶಾಸ್ತ್ರಿಗಳವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೇ ರಂಗಶೇಷಶಾಸ್ತ್ರಿ, 2ನೇ ದಕ್ಷಿಣಾಮೂರ್ತಿಶಾಸ್ತ್ರಿ, ಮೈನರ್, ಗಾರ್ಡಿಯನ್ ವೆಂಕಟಲಕ್ಷಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪ್ಟಂಬರ ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಡಿ. ಸುಬ್ಬಾಶಾಸ್ತ್ರಿಗಳವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟು ಜಡ್ಜ.

ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೇ ಇಸವಿ ಅರ್ಜೀ ನಂಬರ 55.

ಅರ್ಜೀದಾರು ಶ್ರೀರಂಗಪಟ್ಟಣದ ಕಸಬಾದಲ್ಲಿರುವ ತೆಲಗುಬಣಜಿಗರ ಜಾತಿ ರಾಗಿ ಗುರುವೈಯ್ಯನ ಪುಟ್ಟಯ್ಯನ ಮಗ ಸುಬ್ಬಯ್ಯ, ಮೈನರಾದ ಶ್ರೀರಂಗಪಟ್ಟಣ ಸ್ಥಳದ ಪವತಿ ಆದ ಪುಟ್ಟಮ್ಮನ ಮಗಳು ಇದಿರಮ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಇದಿರಮ್ಮನಿಗೆ ತಂದೆ ಆಗಬೇಕೆಂಬ ಹಕ್ಕಿನ ಮೇಲೆ ಶ್ರೀರಂಗಪಟ್ಟಣ ಸ್ಥಳದ ಸುಬ್ಬಯ್ಯನು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೇ ಇಸವಿ ಆಗಸ್ಟ್ ತಾರೀಖು 21ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೇ ಇಸವಿ ಮಿ|| ಅರ್ಜೀ ನಂಬರ 41.

ಅರ್ಜೀದಾರು ಶಿಕಾರಿಪುರ ತಾಲ್ಲೂಕು ಹಿರೆಜಂಬೂರಲ್ಲಿರುವ ಬರಡಿಕಟ್ಟೆ ಶಿವಬಸಪ್ಪ ಬಿನ್ ಶಿವಲಿಂಗಪ್ಪನವರು, ಮೈನರಾದ ಈರಪ್ಪಾ ಬಿನ್ ಬರಡಿಕಟ್ಟೆ ಬಸಪ್ಪ, ಹಿರೆಜಂಬೂರು ಸ್ಥಳದ ಪೌತಿ ಬರಡಿಕಟ್ಟೆ ಬಸಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಈರಪ್ಪನಿಗೆ ಅರ್ಜಿದಾರನವಿಭಕ್ತ ಚಿಕ್ಕಪ್ಪನು ಆಗಬೇಕೆಂಬ ಹಕ್ಕಿನಮೇಲೆ ಶಿಕಾರಿಪುರ ತಾಲ್ಲೂಕು ಹಿರೆಜಂಬೂರಲ್ಲಿರುವ ಬರಡಿಕಟ್ಟೆ ಶಿವಬಸಪ್ಪ ಬಿನ್ ಶಿವಲಿಂಗಪ್ಪನು ಸದರೀ ಮೈನರಿನ 135—0—0 ರೂಪಾಯಿನ ಸ್ಥಿರ ಚರ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಗಾರ್ಡಿಯನ್ನಾಗಿ ನೇಮಿಸಲು ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೇ ಇಸವಿ ಆಗಸ್ಟು ತಾರೀಖು 28ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1902—1903ನೇ ಇಸವಿ ಮಿ|| ಅರ್ಜೀ ನಂಬರ 218.

ಶಿವಮೊಗ್ಗದಲ್ಲಿದ್ದು ಮೃತಪಟ್ಟ ಲೇಟ್ ಸಬ್ ಓವರಶೀರ್ ಮೈಲಾರೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಎಸ್. ಕಾಳಿಂಗಪ್ಪ ಬಿ‍ನ್ ಮೈಲಾರೈಯ್ಯ, ಶಿವಮೊಗ್ಗವಾಸಿ, ಮೃತಪಟ್ಟ ಸದರೀ ಮೈಲಾರೈಯ್ಯನವರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಎಸ್. ಕಾಳಿಂಗಪ್ಪನವರು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಮೈಲಾರೈಯ್ಯನವರ ಜಿಂದಗಿ ಬಗ್ಗೆಯಾಗಿ ಬರತಕ್ಕ 1,930—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಎಸ್. ಕಾಳಿಂಗಪ್ಪನವರ ಅರ್ಜಿಯನ್ನು ಸರ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೈಲಾರೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಜುಲೈ ತಿಂಗಳು 26ನೇ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್,
ಶಿರಿಸ್ತೇದಾರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೇ ಇಸವಿ ಮಿಸ್ ನಂಬರ್ 34.

ಅರ್ಜೀದಾರು ಬೆಂಗಳೂರು ತಾಲ್ಲೂಕು ವರ್ತೂರು ಹೋಬಳಿ ದೊಡ್ಡನೆಕ್ಕುಂದಿ ಗ್ರಾಮದಲ್ಲಿ ಇರುವ ಮನ್ನಾಕೋಳಾಳದ ವೆಂಕಟೇಗೌಡನ ಮಗ ಅಂಜೈಯ್ಯ, ಮೈನರಾದ ನೆಕ್ಕುಂದಿ ಗ್ರಾಮದಲ್ಲಿ ಇರುವ ಮುನೆಪ್ಪನ ಮಕ್ಕಳು 1ನೇ ಮುನಿವೆಂಕಟಪ್ಪನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೇ ಮುನಿವೆಂಕಟಪ್ಪನಿಗೆ ಚಿಕ್ಕ ತಂದೆ ಆಗಬೇಕೆಂಬ ಹಕ್ಕಿನಮೇಲೆ ವೆಂಕಟೇಗೌಡನ ಮಗ ಅಂಜೈಯ್ಯನು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1903ನೇ ಇಸವಿ ಆಗಸ್ಟ್ ತಾರೀಖು 14ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿಧೆ.

ಸರ್ 1903ನೇ ಇಸವಿ ಜುಲೈ ತಿಂಗಳು 25ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿ. ಶಿಂಗ್ರಾಚಾರ್,
ಸಬ್ ಜಡ್ಜ.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ್.

ತಾರೀಖು 21ನೇ ಜುಲೈ 1903.

ಬೆಂಗಳೂರು ಸಿಟಿ 4 ವ 5, 6 ಮತ್ತು 7ನೇ ಡಿವೀಜನ್‌ಗಳಿಗೆ ಇದುವರಿವಿಗೂ ಇದ್ದ ರಿಜಿಸ್ಟ್ರಾರ್‌ಗಳನ್ನು ವಜಾ ಮಾಡಿದ್ದರಿಂದ 4 ವ 5ನೇ ಡಿವೀಜನ್‌ಗಳ ನಿವಾಸಿಗಳು ಜನನ ಮರಣ ಇತ್ಯಾದಿಗಳನ್ನು 2ನೇ ಡಿವೀಜನ್ ಚಿಕ್ಕಪ್ಯಾಟೆಯಲ್ಲಿ ಇರುವ ತಾಲ್ಲೂಕು ಕಛೇರಿ ಕಟ್ಟಡದಲ್ಲಿ ಇರತಕ್ಕ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಪೋರ್ಟು ಮಾಡಬೇಕೆಂತಲೂ, ಮತ್ತು 6 ವ 7ನೇ ಡಿವೀಜನ್‌ಗಳ ನಿವಾಸಿಗಳು 3ನೇ ಡಿವೀಜನ್ ಅರಳೇಪ್ಯಾಟಿ ಆಸ್ಪತ್ರೆಯಲ್ಲಿ ಇರುವ ರಿಜಿಸ್ಟ್ರಾರ್ ಆಫೀಸಿನಲ್ಲಿ ರಿಪೋರ್ಟು ಮಾಡಬೇಕೆಂತಲೂ ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸಿ ಇರುತ್ತೆ.

ಪಿ. ಪಲ್ಪ್, ಛೇರ್ ಪ್ರೆಸಿಡೆಂಟ್.

ನೋಟಿಸ್.

ತಾರೀಖು 29ನೇ ಜುಲೈ 1903.

ಮೈಸೂರು ಕಿಲ್ಲೆಯಲ್ಲಿರುವ ನೇತ್ರವೈದ್ಯ ನಾರಣಪಂಡಿತರ ಹಿರೀಮಗ ನೇತ್ರವೈದ್ಯ ನಂಜುಂಡಪಂಡಿತನಾದ ನಾನು ಇದರಿಂದ ಸರ್ವರಿಗೂ ತಿಳಿಸುವುದೇನಂದರೆ:—

ಸೀತಾವಿಳಾಸ ಸನ್ನಿಧಾನದಿಂದ ನಮ್ಮ ತಂದೆಗಳ ಹೆಸರಿಗೆ ಬಂದು ವೃತ್ತಿಯು ಬಂದಿರುತ್ತೆ. ಈ ವೃತ್ತಿಗೆ ಸೇರಿದ ಸೀತಾವಿಳಾಸ ಅಗ್ರಹಾರದಲ್ಲಿನ ಬಂದು ಮನೆಯೂ, ಮತ್ತು ಇದಕ್ಕೆ ಸೇರಿದ ಎಡತೊರೆ ತಾಲ್ಲೂಕು ಗಂಧನಹಳ್ಳಿ ನಾಲಾ ಕೆಳಗೆ ಇರುವ (5) ಐದು ಎಕರೆ ಜಮೀನನ್ನು ಸಹಾ ಸದರಿ ನಾರಣಪಂಡಿತರು ಕ್ರಯ ವಗ್ಯೆರೆ ಮಾಡುವುದಕ್ಕೆ ಉದ್ಯುಕ್ತರಾಗಿರುವದಾಗಿ ವರ್ತಮಾನ ಕೇಳುತ್ತೇನೆ. ಡಿಟೋ ವೃತ್ತಿಯಲ್ಲಿ ಜ್ಯೇಷ್ಠಪುತ್ರನಾದ ನಾನು ಅರ್ಧ ಹಿಸ್ಸೆಗೆ ಬಾಧ್ಯನಾಗಿರುತ್ತೇನೆ. ಆದ್ದರಿಂದ ಯಾರೂ ಕ್ರಯ ವಗ್ಯೆರೆ ಮಾಡಿಕೊಳ್ಳಕೂಡದೆಂಬದಾಗಿ ತಿಳಿಯಪಡಿಸಿರುತ್ತೇನೆ.

ನೇತ್ರವೈದ್ಯ ನಂಜುಂಡಪಂಡಿತನ ರುಜು.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ: 33.

ಬೆಂಗಳೂರು, ಗುರುವಾರ, ಆಗಸ್ಟು ತಾ|| 20, ಸನ್ 1903.

IIನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯಿಂದ ಹೊರಟ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ಬೊಂಬಾಯಿ ಅಧಿಪತ್ಯದ ದಕ್ಷಿಣ ಸರ್ಕಲಿಗೆ ಸೇರಿದ ಧಾರವಾಡ ಮತ್ತು ಉತ್ತರ ಕನ್ನಡಾ ಡಿಸ್ಟ್ರಿಕ್ಟ್‌ಗಳಿಗೆ ಮೈಸೂರು ಸೀಮೆಯಿಂದ ಜಂಗ್ಲಿ ಉತ್ಪನ್ನವನ್ನು ಸಾಗಿಸುವವರ ತಿಳುವಳಿಕೆ ಬಗ್ಯೆ 1878ನೇ ಇಸವಿ ಇಂಡಿಯನ್ ಫಾರೆಸ್ಟ್ ಆಕ್ಟ್ (1890ನೇ ಇಸವಿ 5ನೇ ಆಕ್ಟ್ ಮೇರಿಗೆ ಬದಲಾಯಿಸಿದ ಹಾಗೆ) 41ನೇ ಸೆಕ್ಷನ್ ಮೇರೆಗೆ ಏರ್ಪಾಟಾದ ಬೊಂಬಾಯಿ ಅಧಿಪತ್ಯದಲ್ಲಿ ಜಾರೀಲಿರುವ ಟ್ರಾನ್ಸಿಟ್ (Transit Rules) ಯಾನೆ ರಹದಾರಿ ರೂಲ್ಸಿನ ಈ ಕೆಳಗೆ ನಮೂದಾಗುವ ಭಾಗಗಳನ್ನು ಇದರಿಂದ ಪ್ರಸಿದ್ಧಪಡಿಸಿ ಇದೆ.

ರೂಲ್ 3:—ಫಾರೆಸ್ಟ್ ಕನ್ಸರ್ವೇಟರವರಿಂದಲಾಗಲಿ, ಅಥವಾ ಅವರಿಂದ ಅಧಿಕಾರ ಹೊಂದಿದ ಯಾವ ಆಫಿಸರಿಂದಲೇ ಆಗಲಿ, ಅಥವಾ 13ನೇ ರೂಲಿನ ಪ್ರಕಾರ ಪ್ಯಾಸ್ ಕೊಡುವದಕ್ಕೆ ಅಧಿಕಾರ ಹೊಂದಿದ ಯಾವ ಮನುಷ್ಯನಿಂದಲೇ ಆಗಲಿ ಪ್ಯಾಸ್ ಪಡಿಯದ ವಿನಹ, ಅಥವಾ ಇಂಥಾ ಪ್ಯಾಸಿನಲ್ಲಿ ನಮೂದಾಗುವ ಷರತ್ತುಗಳಿಗೆ ಅನುಗುಣವಾಗಿಲ್ಲದ ವಿನಹ ರಿಜರ್ವ್ಡ್ ಫಾರೆಸ್ಟ್ (ಅಂಥಾ ಜಂಗ್ಲಿಯು ಗ್ರಾಮಜಂಗ್ಲಿಯಾಗಿರಲಿ ಅಥವಾ ಇಲ್ಲದಿರಲಿ) ಅಥವಾ ಸ್ಟೇಟ್ ಫಾರೆಸ್ಟಿನ ಸರಹದ್ದಿನೊಳಗೆ ಹೊರತು ಬೊಂಬಾಯಿ ಅಧಿಪತ್ಯದ ಯಾವ ಜಿಲ್ಲಾದೊಳಗಾಗಲಿ ಮತ್ತು ಮುಂದೆ ಉದಹರಿಸಿರುವ ರೀತಿಯಿಂದಲ್ಲದೆ ಒಂದು ಡಿಸ್ಟ್ರಿಕ್ಟಿನಿಂದ ಇನ್ನೊಂದು ಡಿಸ್ಟ್ರಿಕ್ಟಿಗೆ ಯಾವ ನಾಟಾ ಅಥವಾ ಜಂಗ್ಲಿ ಉತ್ಪನ್ನವನ್ನು ಸಾಗಿಸಕೂಡದು. ಆದರೆ

(a) ಸರ್ಕಾರದ ಮಾಲಾಗಿರುವ ನಾಟಾ ಅಥವಾ ಜಂಗ್ಲಿ ಉತ್ಪನ್ನಕ್ಕಾಗಲಿ, ಅಥವಾ

(b) ಒಬ್ಬ ಮನುಷ್ಯನಿಗೆ ಸೇರಿದ ಅಥವಾ ಎರಡು ಮತ್ತು ಹೆಚ್ಚು ಜನಗಳಿಗೆ ಒಟ್ಟಾಗಿ ಸೇರಿದ ನಾಟಾ ಅಥವಾ ಜಂಗ್ಲಿ ಉತ್ಪನ್ನವು 24 ಘಂಟೆಗಳೊಳಗೆ ಒಂದುಸಾರಿ ಒಂದು ತಲೆಹೊರೆಗೆ ಮೀರದಂತೆ ತೆಗದುಕೊಂಡು ಹೋಗುವದಕ್ಕಾಗಲಿ ಮೇಲಿನ ರೂಲ್ಸಿನಲ್ಲಿ ಹೇಳಿರುವದು ಲಗಾವಾಗುವದಿಲ್ಲ ಅಥವಾ

(c) ಒಂದು ಗ್ರಾಮದಲ್ಲಿ ಉತ್ಪತ್ತಿಯಾದ ನಾಟಾ ಮತ್ತು ಜಂಗ್ಲಿ ಉತ್ಪನ್ನವನ್ನು ಆ ಗ್ರಾಮದ ಸರಹದ್ದಿನೊಳಗೆ ಸ್ಥಳಾಂತರ ಮಾಡುವದಕ್ಕೆ ಮೇಲಿನ ರೂಲ್‌ನಿಂದ ಪ್ಯಾಸ್ ಅವಶ್ಯಕವಿರುವದಿಲ್ಲ.

ರೂಲ್ 5:—ಬ್ರಿಟಿಷ ಹಿಂದೂಸ್ಥಾನದ ಸರಹದ್ದಿನ ಹೊರಗಿನ ಯಾವದಾದರೂ ಸ್ಥಳದಿಂದ ಜಲಮಾರ್ಗದಿಂದಲ್ಲದೆ ಇತರ ರೀತಿಯಿಂದ ಆಮದು ಮಾಡಲ್ಪಡುವ ನಾಟಾ ಮತ್ತು ಜಂಗ್ಲಿ ಉತ್ಪನ್ನದ ಬಗ್ಯೆ ಪರದೇಶದಿಂದ ಕೊಡಲ್ಪಟ್ಟ ಪ್ಯಾಸ್ (Foreign pass) ಹಾಜರ್ಮಾಡದ ವಿನಹ, ಅಥವಾ ಅಂಥಾ ನಾಟಾ ಮತ್ತು ಜಂಗ್ಲಿ ಉತ್ಪನ್ನವು ದೊಡ್ಡ ಜಂತೆಗಳಾಗಿದ್ದಲ್ಲಿ ಪರದೇಶದ ಮಾಲಿನ ಗುರ್ತು (Foreign property mark) ಅದರ ಮೇಲೆ ಇಲ್ಲದ ವಿನಹ 3ನೇ ನಿಬಂಧನೆ ಮೇರೆಗೆ ಪ್ಯಾಸ್ ಕೊಡಕೂಡದು.

ರೂಲ್ 6 :—ಅಂಥಾ ಪ್ರತಿ ಒಂದು ಪರದೇಶದ ಪ್ಯಾಸ್ ಅಂಥಾ ನಾಟಾ ಮತ್ತು ಜಂಗ್ಲಿ ಉತ್ಪನ್ನವು ಯಾವ ಫಾರೆಸ್ಟ್ ಕನ್ಸರ್ವೇಟರವರ ಡಿವಿಜನ್ ಒಳಗೆ ಆಮದು ಮಾಡಲ್ಪಡುತ್ತೋ ಅಂಥಾ ಕನ್ಸರ್ವೇಟರವರ ಆಫೀಸಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ನಮೂನೆಯಲ್ಲಿರಬೇಕು. ಮತ್ತು ಅಂಥಾ ಪರದೇಶದ ಮಾಲಿನ ಗುರ್ತು ಸದರಿ ಆಫೀಸಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ವಿವರಣೆಗೆ ಅನುಸಾರವಾಗಿರಬೇಕು. ಮತ್ತು ಅಂಥಾ ಪರದೇಶದ ಪ್ಯಾಸಿಗೆ ಯಾವ ಆಫೀಸರ ಯಾ ಇತರ ಮನುಷ್ಯನು ರುಜು ಮಾಡುವದಕ್ಕೆ ಅಧಿಕಾರ ವುಳ್ಳವನೆಂದು ಸದರಿ ಆಫೀಸಿನಲ್ಲಿ ಅವರ ಹೆಸರು ಮತ್ತು ಹುದ್ದೆ ರಿಜಿಸ್ಟರ್ ಮಾಡಲ್ಪಟ್ಟಿರುತ್ತೋ ಅಂಥಾ ಆಫೀಸರ ಅಥವ ಇತರ ಮನುಷ್ಯನ ರುಜು ಆಗಿರಬೇಕು.

ರೂಲ್ 7 :—ಬ್ರಿಟಿಷ್ ಹಿಂದೂಸ್ಥಾನದ ಸರಹದ್ದಿನ ಹೊರಗಿನ ಯಾವದಾದರೂ ಸ್ಥಳದಿಂದ ಜಲಮಾರ್ಗದಿಂದಲ್ಲದೆ ಇತರ ರೀತಿಯಿಂದ ಯಾವದಾದರೂ ನಾಟಾ ಅಥವಾ ಜಂಗ್ಲಿ ಉತ್ಪನ್ನವನ್ನು ತರಬೇಕೆಂಬ ಇರಾದೆ ಇದ್ದಲ್ಲಿ ಅಂಥಾ ನಾಟಾ ಅಥವಾ ಜಂಗ್ಲಿ ಉತ್ಪನ್ನವು ಅಂಥಾ ಸರಹದ್ದಿನೊಳಗೆ ಉಪಭಾಗದ (A) ದಲ್ಲಿ ಹೇಳಿರುವ ಮಾರ್ಗಗಳ ಪೈಕಿ ಯಾವದಾದರೂ ಮಾರ್ಗದಿಂದ ಅಥವಾ ಫಾರೆಸ್ಟ್ ಕನ್ಸರ್ವೇಟರವರು ಅಥವಾ ಅವರಿಂದ ಈ ಬಾಬಿನಲ್ಲಿ ಅಧಿಕಾರ ಹೊಂದಿದ ಯಾವ ಗವರ್ನ್ಮೆಂಟ್ ಆಫೀಸರಿಂದಲೇ ಆಗಲಿ ಗೊತ್ತು ಮಾಡಲ್ಪಡುವ ಮಾರ್ಗದಿಂದ 15ನೇ ರೂಲಿನ ಮೇರಿಗೆ ಅಂಥಾ ಮಾರ್ಗದ ಮೇಲೆ ಸ್ಥಾಪಿಸಲ್ಪಡುವ ಮೊದಲನೇ ಡಿಪೋವರಂವಿಗೆ ಅವುಗಳ ಬಗ್ಯೆ ಕ್ರಮವಾದ ನಮೂನೆಯಲ್ಲಿದ್ದು ರುಜು ಮಾಡಲ್ಪಟ್ಟಿರುವ ಪರದೇಶದ ಪ್ಯಾಸ್ ಕೊಡಲ್ಪಟ್ಟಿದ್ದಲ್ಲಿ ಮತ್ತು ಅಂಥಾ ನಾಟಾ ಮತ್ತು ಜಂಗ್ಲಿ ಉತ್ಪನ್ನವು ದೊಡ್ಡ ಜಂತೆಗಳಾಗಿರುವಲ್ಲಿ ಅವುಗಳ ಮೇಲೆ ಪರದೇಶದ, ರಿಜಿಸ್ಟರ್ ಮಾಡಲ್ಪಟ್ಟ ಮಾಲಿನ ಗುರ್ತು ಹಾಕಲ್ಪಟ್ಟಿರುವಲ್ಲಿ ಅವುಗಳನ್ನು 3ನೇ ರೂಲಿನ ಪ್ರಕಾರ ಪ್ಯಾಸ್ ಇಲ್ಲದೇನೇ ಸಾಗಿಸಬಹುದು.

ರೂಲ್ 8 :—ಫಲಾನಾ ಡಿವಿಜನ್ ಫಾರೆಸ್ಟ್ ಕನ್ಸರ್ವೇಟರವರು ಅಪ್ಪಣೆ ಮಾಡುವಲ್ಲಿ, ಅಂಥಾ ಮಾರ್ಗದಿಂದ ಮೇಲೆ ಹೇಳಿದ ರೀತಿಯಾಗಿ ಆಮದು ಮಾಡಲ್ಪಟ್ಟ ಯಾವದಾದರೂ ನಾಟಾ ಅಥವಾ ಜಂಗ್ಲಿ ಉತ್ಪನ್ನವನ್ನು ಅವುಗಳ ಮೇಲೆ ಅಂಥಾ ಕನ್ಸರ್ವೇಟರವರು ಗೊತ್ತು ಮಾಡಿದ ವಿವರಣೆದ ಗುರ್ತು ಛಾಪಿಸಲ್ಪಟ್ಟಿರದೆ ಹೊರತು ಸಾಗಿಸಕೂಡದು.

ರೂಲ್ 13 :—ಫಾರೆಸ್ಟ್ ಕನ್ಸರ್ವೇಟರವರಿಗೆ ಯೋಗ್ಯ ಕಂಡಲ್ಲಿ ಬರಹ ಮೂಲಕವಾಗಿ ಯಾವ ಕಾಲದಲ್ಲಾಗಲಿ

(a) ನಾಟಾ ಅಥವ ಇತರ ಜಂಗ್ಲಿ ಉತ್ಪನ್ನದ ಮಾಲೀಕನಿಗೆ ಆಗಲಿ ಅಥವ ಅವನ ಕಡೆ ಮುತಾಲೀಕನಿಗೆ ಆಗಲಿ, ಅಂಥಾ ಮುತಾಲೀಕನಿಗೆ ಅಥವಾ ಅವನ ಯಜಮಾನನಿಗೆ ಸೇರಿದ ಯಾವದಾದರೂ ನಾಟಾ ಅಥವ ಇತರ ಜಂಗ್ಲಿ ಉತ್ಪನ್ನದ ಬಗ್ಯೆ 3ನೇ ರೂಲಿನ ಪ್ರಕಾರ ಪ್ಯಾಸ್ ಕೊಡುವ ಅಧಿಕಾರವನ್ನು ಕೊಡಬಹುದು. ಮತ್ತು

(b) ಅಂಥಾ ಅಧಿಕಾರವನ್ನು ರದ್ದು ಮಾಡಬಹುದು.

ಈ ರೂಲಿನ (a) ಕ್ಲಾಜಿನ ಮೇರೆಗೆ ಫಾರೆಸ್ಟ್ ಕನ್ಸರ್ವೇಟರವರು ಯಾ ಮನುಷ್ಯನಿಗಾದರೂ ಅಧಿಕಾರ ಕೊಟ್ಟಲ್ಲಿ ಅಂಥಾ ಮನುಷ್ಯನಿಗೆ 4ನೇ ರೂಲಿನ 4 ಮತ್ತು 5ನೇ ಕ್ಲಾಜಿನ ಮೇರೆಗೆ ತಪಶೀಲ್ ನಮೂದಿರುವ ಸಾಚಾ ಖಾಲಿ ಛಾಪಾ ಪ್ಯಾಸ್ ಬುಕ್ಕುಗಳನ್ನು ಆಗಾಗ್ಯೆ ಸಪ್ಲೈ ಮಾಡಬೇಕು. ಮತ್ತು ಅಂಥಾ ಮನುಷ್ಯನು ಅದರಲ್ಲಿ ನಮೂದಾಗುವ ತಪಸೀಲಿನಲ್ಲಿ ಯಾವ ಬದಲಾವಣೆಗಳನ್ನು ಮಾಡಕೊಡದು. ಹಾಗೆ ಮಾಡಿದ್ದೇ ಆದರೆ ಅವುಗಳನ್ನು ಅಂಗೀಕರಿಸುವದಕ್ಕಾಗುವದಿಲ್ಲ.

ಅಂಥಾ ಮನುಷ್ಯನು ಫಾರೆಸ್ಟ್ ಕನ್ಸರ್ವೇಟರವರಿಂದ ಆಗಾಗ್ಯೆ ನಿಷ್ಕರ್ಷೆ ಮಾಡಲ್ಪಡುವ ಕಿಮ್ಮತ್ತನ್ನು ಅಂಥಾ ಪ್ರತಿ ಒಂದು ಬುಕ್ಕಿಗೂ ಕೊಡಬೇಕು. ಮತ್ತು ಈ ರೂಲಿನ (b) ಕ್ಲಾಜಿನ ಮೇರೆಗೆ ಫಾರೆಸ್ಟ್ ಕನ್ಸರ್ವೇಟರವರು ಅಪ್ಪಣೆ ಮಾಡುವಲ್ಲಿ ಅಂಥಾ ಕನ್ಸರ್ವೇಟರವರಿಗೆ ತನ್ನ ಸ್ವಾಧೀನದಲ್ಲಿರುವ ಪ್ರತಿ ಒಂದು ಉಪಯೋಗಿಸದೇ ಇರುವ ಬುಕ್ಕನ್ನು ಮತ್ತು ಬುಕ್ಕಿನ ಉಪಯೋಗಿಸದೇ ಇರುವ ಪ್ರತಿ ಒಂದು ಭಾಗವನ್ನು ಕೂಡ ವಾಪಸು ಕೊಡಬೇಕು. ಈ ರೀತಿಯಾಗಿ ವಾಪಸು ಮಾಡಲ್ಪಟ್ಟ ಪ್ರತಿ ಉಪಯೋಗಿಸದೇ ಇರುವ ಬುಕ್ಕಿಗಾಗಲಿ ಅಥವಾ ಭಾಗಕ್ಕಾಗಲಿ ತಾನು ಕೊಟ್ಟಿರುವ ಮೊಬಲಗನ್ನು ವಾಪಸು ಹೊಂದಲು ಹಕ್ಕುದಾರನಾಗಿರುತ್ತಾನೆ.

ರೂಲಿನ (b) ಕ್ಲಾಜಿನ ಮೇರೆಗೆ ಆರ್ಡರಾದನಂತರ ಅಂಥಾ ಯಾವ ಮನುಷ್ಯನಿಂದ ಕೊಡಲ್ಪಡುವ ಪ್ಯಾಸೇ ಆಗಲಿ ಮತ್ತು ಮೇಲೆ ಹೇಳಿದ ರೀತಿಯಾಗಿ ಅವನಿಗೆ ಸರಬರಾಯಿ ಮಾಡಲ್ಪಟ್ಟ ನಮೂನೆಗೆ ಅನುಸಾರವಾಗಿ ಇಲ್ಲದೇ ಇರುವ ಪ್ಯಾಸೇ ಆಗಲಿ, ಒಪ್ಪುವದಕ್ಕಾಗುವದಿಲ್ಲ.

ರೂಲ್ 15 :—ಕಾನೂನ್ ಮೇರೆಗೆ ನಾಟಾ ಅಥವಾ ಇತರ ಜಂಗ್ಲಿ ಉತ್ಪನ್ನವನ್ನು ಸಾಗಿಸಬಹುದಾದ ಮಾರ್ಗಗಳ ಮೇಲೆ ಫಾರೆಸ್ಟ್ ಕನ್ಸರ್ವೇಟರವರಿಗೆ ಯೋಗ್ಯಕಾಣುವ ಅನುಕೂಲವಾದ ಸ್ಥಳಗಳಲ್ಲಿ ಡಿಪೋಗಳನ್ನು ಸ್ಥಾಪಿಸಬಹುದು. ಮತ್ತು ಅಂಥಾ ಡಿಪೋಗಳಿಗೆ ಈ ಕೆಳಗೆ ನಮೂದಾಗುವ ಎಲ್ಲಾ ಅಥವಾ ಯಾವದಾದರೂ ಉದ್ದೇಶಕ್ಕಾಗಿ ಅಂಥಾ ನಾಟಾ ಅಥವಾ ಇತರ ಜಂಗ್ಲಿ ಉತ್ಪನ್ನವನ್ನು ತೆಗೆದುಕೊಂಡು ಹೋಗಬೇಕು.

3 ಅಥವಾ 13ನೇ ರೂಲಿಗೆ ಅನುಸಾರವಾಗಿ ಆ ಬಗ್ಯೆ ಪ್ಯಾಸು ಕೊಡುವದಕ್ಕೆ ಮುಂಚೆ ಪರೀಕ್ಷಾರ್ಥವಾಗಿ ಅಥವ,

ಆ ಬಗ್ಯೆ ಸರ್ಕಾರಕ್ಕೆ ಕೊಡಬೇಕಾದ ಮೊಬಲಗು ಏನಾದರೂ ಇದ್ದಲ್ಲಿ ಅಂಥಾ ಮೊಬಲಗಿನ ಮೊತ್ತವನ್ನು ನಿರ್ಧರಿಸುವದಕ್ಕೂ ಮತ್ತು ಅಂಥಾ ಮೊಬಲಗನ್ನು ಕೊಡುವದಕ್ಕೂ, ಅಥವ

ಕಾನೂನ್ ಅಥವ ಈ ರೂಲ್ಸ್ ಮೇರೆಗೆ ಅವುಗಳ ಮೇಲೆ ಹಾಕಬೇಕಾದ ಗುರ್ತುಗಳನ್ನು ಹಾಕುವದಕ್ಕೂ.

ಉಪಭಾಗ A.

ಈ ಕೆಳಗೆ ನಮೂದಾಗುವ ಡಿಸ್ಟ್ರಿಕ್ಟುಗಳಿಗೆ ಅಥವ ಅವುಗಳಿಂದ ಹೊರಕ್ಕೆ ನಾಟಾ ಮತ್ತು ಇತರ ಜಂಗ್ಲಿ ಉತ್ಪನ್ನವನ್ನು ಸಾಗಿಸತಕ್ಕ ಮಾರ್ಗಗಳ್ಯಾವವೆಂದರೆ :—

ಕೆನರಾ ಡಿಸ್ಟ್ರಿಕ್ಟು.

1. ಚಿನ್ನಘಟ್ಟದ ಮಾರ್ಗ.
2. ಮಣ್ಣಾಳಿ ಮಾರ್ಗ.
3. ಕಾಳಿ ನದಿಯ ಮುಖ, ಸದಾಶಿವಘಡ, ಕೋಡಿಬಾಗ ಮತ್ತು ಕಾರವಾ ಬಂದರಗಳು.
4. ಕಾರವಾರ ಬಂದ್ರರ.
5. ಬೇಲೇಕೇರಿ ಬಂದರ.
6. ಅಂಕೋಲೆ ಬಂದರ.
7. ಗಂಗಾವಳಿ ನದಿಯ ಮುಖ, ಮಂಜಗುಣಿ, ಗಂಗಾವಳಿ ಮತ್ತು ಗುಂಡಬಾಳೆ.
8. ತದಡಿ ನದಿಯ ಮುಖ, ತದಡಿ, ಅಘನಾಶಿನಿ, ಮಿರಜಾನ, ಹೆಗಡೆ, ದೀವಗಿ, ಮಾಕಿ ಮತ್ತು ಉಪ್ಪಿನ ಪಟ್ಟಣ ಬಂದರಗಳು.
9. ಮುರ್ಡೇಶ್ವರ ಬಂದರ.
10. ವೆಂಕಟಾಪುರ ನದಿಯ ಮುಖ (ಶಿರಾಲಿ ಮತ್ತು ವೆಂಕಟಾಪುರ ಬಂದರಗಳು).
11. ಭಟ್ಕಳನದಿ (ಭಟ್ಕಳ ಬಂದರ).
12. ಗೇರಸಪ್ಪೆಘಾಟ ರಸ್ತೆಯಿಂದ ಕಾಳಗುಪ್ಪದ ವರಿವಿಗೆ (ಗೇರಸೊಪ್ಪೆ ಹೊನ್ನಾವರ ಬಂದರಗಳು).
13. ಶಿದ್ದಾಪುರದ ರಸ್ತೆಯಿಂದ ಸೊರಬಕ್ಕೆ ವರದಾ ಮಾರ್ಗವಾಗಿ.
14. ಬನವಾಸಿ ಮಾರ್ಗವಾಗಿ ಸಿರ್ಸಿಯಿಂದ ಸೊರಬವರೆಗೆ.
15. ಸಿರ್ಸಿಯಿಂದ ದಾಸನ ಕೊಪ್ಪದ ಮಾರ್ಗವಾಗಿ ಸಮಸಿಗಿಗೆ.
16. ಸಿರ್ಸಿಯಿಂದ ಹಾನಗಲ್ ಮತ್ತು ಬಂಕಾಪುರಕ್ಕೆ ಪಾಳಾದ ಮಾರ್ಗವಾಗಿ.
17. ಕಾವೂರಿಂದ ಮರಗುಡಿಗೆ.
18. ಮುಂಡಗೋಡಿಂದ ಬಂಕಾಪುರಕ್ಕೆ ಸಾವಲಿ ಮಾರ್ಗವಾಗಿ.
19. ಮುಂಡಗೋಡಿಂದ ತಡಸಕ್ಕೆ ಮರಗಟ್ಟ ಮಾರ್ಗವಾಗಿ.
20. ಎಲ್ಲಾಪುರದಿಂದ ಹುಬ್ಬಳ್ಳಿಗೆ ಕಿರವತ್ತಿಯ ಮಾರ್ಗವಾಗಿ.
21. ಹಳಿಯಾಳದಿಂದ ಧಾರವಾಡಕ್ಕೆ ಮಾವಿನಕೊಪ್ಪದ ಮೇಲಿಂದ.
22. ಹಳಿಯಾಳದಿಂದ ಬೆಳಗಾಂ, ಮದನಹಳ್ಳಿಗೆ.
23. ಉನಶಿ ಘಟ್ಟದ ರಸ್ತೆ, ಸೂಪ, ಮತ್ತು ಸಿತೋಡೆಯಿಂದ ಬೆಳಗಾಂ ಮಾರ್ಗವಾಗಿ.
24. ಸೂಪ, ಜಗಲಪೇಟ, ಆವೋದ ಮತ್ತು ಹೇಮಾರ್ಗಯಿಂದ ಖಾನಾಪುರ ಮಾರ್ಗವಾಗಿ.

ಧಾರವಾಡ, ಬೆಳಗಾಂ ಮತ್ತು ಕಲದ್ಗಿ ಡಿಸ್ಟ್ರಿಕ್ಟುಗಳು. ಇಂಪೀರಿಯಲ್, ಪ್ರೋವಿನ್ಸಿಯಲ್, ಲೋಕಲ್ ಅಥವಾ ಫಾರೆಸ್ಟ್ ಫಂಡುಗಳಿಂದ ಉಸ್ತುವಾರಿ ಮಾಡಲ್ಪಡುವ ಪ್ರತಿ ಒಂದು ರಸ್ತೆ.

ಶಿಕ್ಷೆಗಳು :—

ಮೇಲೆ ಹೇಳಿರುವ ಯಾವದಾದರೂ ನಿಬಂಧನೆಗೆ ವ್ಯತಿರಿಕ್ತವಾಗಿ ಯಾವನು ನಡಿಯುತ್ತಾನೋ ಅಂಥಾವನು ಆರು ತಿಂಗಳ ಕಾಲದವರಿಗಿನ ಸಜಾ ಅಥವಾ 500 ರೂಪಾಯಿಗಳ ವರಿಗಿನ ಜುರ್ಮಾನೆ ಅಥವಾ ಈ ಎರಡರಿಂದಲೂ ಶಿಕ್ಷೆ ಮಾಡಲ್ಪಡುತ್ತಾನೆ.

ನೋಟ್ :—ಪರದೇಶದ ಪ್ಯಾಸ್ ಹೊಂದಿರುವವನು ಬೊಂಬಾಯಿ ಟ್ರಾನ್ಸಿಟ್ ರೂಲ್ಸಿನ (Transit Rules) 5ನೇ ರೂಲಿನ ಪ್ರಕಾರ ತೆಗದುಕೊಳ್ಳಬೇಕಾದ ಸ್ಥಳಿಕ ಪ್ಯಾಸಿಗೆ ಏನೊಂದ ಫೀ ವಸೂಲ್ಮಾಡಲ್ಪಡುವದಿಲ್ಲ. ಆದರೆ, ಅದರ ಛಾಪಾ ಖರ್ಚಿನ ಬಗ್ಯಾಗಿ ಪ್ಯಾಸ್ ಒಂದಕ್ಕೆ 0—0—2 ಪೈ ನಂತೆ ಮಾತ್ರ ವಸೂಲ್ಮಾಡಲ್ಪಡುತ್ತೆ.

(Sd.) CAMPBELL WALKER, *Col.*,
Conservator of Forests in Mysore.

"True Translation."
C. NARAYANA RAO, for *Dy.*, *Comr. Shimoga District.*

ಸಂದಲ್ ಹರಾಜು ಇಸ್ತಿಹಾರ್ನಾಮಾ.

ತಾರೀಖು 14ನೇ ಆಗಸ್ಟು 1903ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನ್ನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫೀಸರು ಮತ್ತು ಡಿಸ್ಟ್ರಿಕ್ಟ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವದು.

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಮೊತ್ತ.	ಸ್ವಲ್ಪ ಹೆಚ್ಚು ಕಡಿಮೆ.
ಶಿವಮೊಗ್ಗ ...	ತೀರ್ಥಹಳ್ಳಿ ..	1903ನೇ ನವಂಬರ 16	125 ಟನ್	(*a*) ಕಡೂರು ಡಿಸ್ಟ್ರಿಕ್ಟ ಸಂದಲ್ ಸಹ
ಡಿಟೋ ..	ಸಾಗರ ...	,, 20	100 ,,	(*b*) ಕಡೂರು–ಚಿತ್ರದುರ್ಗದ ಸಂದಲ್ ಸಹ
ಡಿಟೋ ...	ಶಿವಮೊಗ್ಗ ...	,, 24	525 ,,	
ಕಡೂರು ...	ತರೀಕೆರೆ ...	,, 26	150 ,,	
ಡಿಟೋ ..	ಚಿಕ್ಕಮಗಳೂರು ..	,, 28	200 ,,	
ಹಾಸನ ...	ಹಾಸನ ...	,, ಡಿಶೆಂಬರು 3	200 ,,	
ಬೆಂಗಳೂರು ..	ಬೆಂಗಳೂರು ...	,, 7	84 ,,	ಕೋಲಾರ–ತುಂಕೂರು ಡಿಸ್ಟ್ರಿಕ್ಟುಗಳ ಸಂದಲ್ ಸಹ
ಮೈಸೂರು ..	ಶ್ರೀರಂಗಪಟ್ಣ ..	,, 10	200 ,,	
ಡಿಟೋ	ಹುಣಸೂರು ...	,, 14	500 ,,	

ಪ್ರತಿ ಒಂದು ಕೋಠಿಯಲ್ಲಿಯೂ ಹರಾಜು ಮಾಡಲ್ಪಡುವ ಸಂದಲ್ ಲಾಟ ಮತ್ತು ಮೊತ್ತ ವಗೈರೆ ತಪಶೀಲು ಅಯಿಂದ ಇದೇ ಸಾಲ್ ಅಕ್ಟೋಬರು ಆಖೈರ್ ಒಳಗಾಗಿ ಪ್ರಾಯಿಷ್ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ, ಆಫೀಷಿಯೇಟಿಂಗ್ ಫಾರೆಸ್ಟು ಕನ್ಸರ್ವೇಟರು.

ನೋಟಿಫಿಕೇಷನ್.

ತಾರೀಖು 17ನೇ ಆಗಸ್ಟ್ 1903.

ಈ ಕೆಳಗೆ ಕಂಡ ಪ್ಲಾಂಟೇಷನ್‌ಗಳಲ್ಲಿರುವ ಕ್ಯಾಸರಿನಾ ಸೌದೆಯನ್ನು ಕಡದು ಸಾಗಿಸಿಕೊಳ್ಳುವದಕ್ಕೆ ಟೆಂಡರ ಕೊಡತಕ್ಕವರು ಕೊಡಬಹುದು :—

ಟೆಂಡರ ಮೇಲಕಡೆ "ಕ್ಯಾಸರಿನಾ ಸವುದೆ ಬಗ್ಯೆ" ಎಂದು ಬರದಿರಬೇಕು. ಬಿಲೆಟ್ಟುಗಳು ಅಂದರೆ, ಮಯದಲ್ಲಿ 3 ಅಥವಾ ಹೆಚ್ಚು ಇಂಚವುಳ್ಳ ಬಿಲ್ಲೆಟುಗಳು ಮತ್ತು $1\frac{1}{2}$ ಲಾಗಾಯತು 3 ಇಂಚು ವಳಗೆ ಇರುವ ಬಿಲ್ಲೆಟುಗಳು. ಇವಗಳಿಂದ ಕಟ್ಟದ 68 ಅಡಿ ಸಲೆವುಳ್ಳ ಸ್ಟ್ಯಾಕ 1ಕ್ಕೆ ದರಖಾಸ್ತುದಾರನು ಸರಕಾರಕ್ಕೆ ಏನು ಧರ ಕೊಡಲು ಇಷ್ಟ ಉಂಟೋ ಆ ದರದ ಮೊಬಲಗು ಟೆಂಡರನಲ್ಲಿ ನಮೂದಿಸಿರಬೇಕು.

ದರಖಾಸ್ತುಗಳನ್ನು ಇನ್ಷ್ಯೂರ್ ಪೋಸ್ಟ್ ಮೂಲಕ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಹೆಸರಿಗೆ ಈ ಚಾಲತಿ ಮಾಹೆ ಆಖೈರ ಬಳಗಾಗಿ ತಲಪುವಂತೆ ಕಳುಹಿಸಬೇಕು. ಅಂಥಾ ಟೆಂಡರಗಳನ್ನು ಬರುವ ಮಾಹೆ 5ನೇ ತಾರೀಖು ಅಥವಾ ಆ ಸುಮಾರಿನಲ್ಲಿ ಆಗ್ಯೆ ಹಾಜರಾಗುವ ದರಖಾಸ್ತುದಾರಗಳ ರೂಬರೂಬ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಒಡದು ನೋಡುವರು.

ಪ್ರತಿ ದರಖಾಸ್ತಿನ ಜೊತೇಲಿಯೆ ಡಿಪಾಜಟ್ಟು 200 ರೂಪಾಯನ್ನು ನೋಟು ಮೂಲಕವಾಗಿ ಕಳುಹಿಸಬೇಕು. ಸವಾಲ್ ಮಂಜೂರಾದ ದರಖಾಸ್ತುದಾರನ ಮೊಬಲಗು ಹೊರ್ತು ಬಾಕಿ ಯವರ ಮೊಬಲಗೆಲ್ಲಾ ಕೂಡ್ಲೆಯೆ ವಾಪಸು ಮಾಡುತ್ತೆ. ಬರುವ ದರಖಾಸ್ತುಗಳಲ್ಲಿ ಯಾವದನ್ನಾದರೂ ಮಂಜೂರ್ಮಾಡಿಕೊಳ್ಳಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಗೆ ಸ್ವತಂತ್ರ ಇರುತ್ತೆ.

ಕ್ರಮನಂ.	ಪ್ಲಾಂಟೇಷನ್ ಹೆಸರು.	ಒಣ ಕ್ಯಾಸರಿನಾ ಸವುದೆ ಮೊತ್ತ ಸುಮಾರು.
1	ಪಂಡಿತನಹಳ್ಳಿ	500 ಟನ್.
2	ದಾಸರಹಳ್ಳಿ	
3	ಗೊಲ್ಲಹಳ್ಳಿ, ಮಲ್ಲಸಂದ್ರ	
4	ಬಳ್ಳಾಪುರ, ಲಿಂಗನಹಳ್ಳಿ	
5	ಆಡಗೂರು	
6	ಚನ್ನಶೆಟ್ಟಿಹಳ್ಳಿ	
7	ಹೊನ್ನವಳ್ಳಿ	
8	ನಿಟಗಾಂಟೆ	
9	ಅಮ್ಮನಘಟ್ಟ	
10	ಗೊರವಿಪುರ	
11	ಉದ್ದಿಹೊಸಕೆರೆ	
12	ಅಂಕಾಪುರ	
13	ಮಾರಶೆಟ್ಟಿಹಳ್ಳಿ	
14	ಹರೇನಹಳ್ಳಿ	

ಷರತ್ತುಗಳು :—

ಜಡ ದರಖಾಸ್ತುದಾರನು ತನ್ನ ಸವಾಲ್ ಮಂಜೂರಾದ ಒಂದು ವಾರದ ವಳಗಾಗಿ ಈ ಕೆಳಗೆ ಕಾಣಿಸುವ ಷರತ್ತುಗಳ ಪ್ರಕಾರ ನಡಿಯಲು ಬದ್ಧನಾಗಿ ಛಾಪಾಕಾಗದ ಮುಚ್ಚಳಿಕೆ ಬರಕೊಡಬೇಕು. ಷರತ್ತು ಮೇರೆ ನಡಿಯಲು ಶಿಕ್ಯೂರ್ಟಿಗಾಗಿ 200 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಟ ಇಟ್ಟುಕೊಳ್ಳಲ್ಪಡುತ್ತೆ.

(a) ಕಡಿಯತಕ್ಕ ಗಿಡಗಳಿಗೆ ಮುಂಚಿತವಾಗಿ ರೇಂಜ್ ಆಫಿಸರು ಗುರ್ತು ಹಾಕಿ ಕೊಡುತ್ತಾರೆ. ಕಡಿಯುವದರಲ್ಲಿ ಒಂದು ಕಂಪಾರ್ಟುಮೆಂಟ ಪೂರೈಸಿದ ನಂತರ ಇನ್ನೊಂದು ಕಂಪಾರ್ಟುಮೆಂಟ ಈ ಮೇರೆ ಕ್ರಮವಾಗಿ ಕತ್ತಾವಣಿ ಕೆಲಸ ಮಾಡಬೇಕು.

(b) ಕಡಿಯುವದಕ್ಕೆ ಕೊಡ್ಲಿಗಳನ್ನು ಉಪಯೋಗಿಸಕೂಡದು. ಆದರೆ ಸಾಧ್ಯವಾದ ಮಟ್ಟಿಗೂ ಮರಗಳನ್ನು ಭೂಮಿ ಮಟ್ಟಕ್ಕೆ ಗರಗಸದಿಂದ ಕೊಯಿದುಕೊಳ್ಳಬೇಕು. ಬೇಕಾದಷ್ಟು ವುದ್ದಕ್ಕೆ ಅಂದರೆ, ಮೂರು ಅಡಿ ವುದ್ದಕ್ಕೆ ಮೀರದೆ ತುಕ್ಕಡೆಗಳನ್ನು ಗರಗಸದಿಂದ ಕೊಯ್ಯಬೇಕು.

(c) ಕಂಪಾರ್ಟಮೆಂಟ ಲೈನಿನಲ್ಲಿ ಆಗಲಿ ಅಥವಾ ಡಿ॥ ಫಾರೆಸ್ಟ್ ಆಫಿಸರು ಒಪ್ಪುವ ಜಾಗಾದಲ್ಲಿ ಹುಷಾರಿಯಿಂದ ಸವುದೆಯನ್ನು ಬೇರೆಬೇರೆ ವಿಂಗಡಿಸಿ ಸ್ಟ್ಯಾಕ ಕಟ್ಟತಕ್ಕದ್ದು. ಸ್ಟ್ಯಾಕಗಳು ಚೌಕ ನೀಳವಾಗಿ ಕಟ್ಟಬೇಕಲ್ಲದೆ ಅಳತೇಲಿ 68 ಸಲೆ ಅಡಿ ಬರುವಂತೆ ಕಟ್ಟಿರಬೇಕು.

(d) ಥಪ್ಪದಲ್ಲಿ ಒಂದುವರೆ ಇಂಚಿಗಿಂತ ಜಾಸ್ತಿ ಇರುವ ಸವ್ವದೆ ತುಂಡುಗಳೆಲ್ಲವನ್ನು ಮಂಜೂರಾದ ದರದಂತೆ ಮೊಬಲಗು ಕೊಟ್ಟು ಸಾಗಿಸಿಕೊಳ್ಳಲು ಕಂಟ್ರಾಕ್ಟರನು ಬದ್ಧನಾಗಿರತಕ್ಕದ್ದು. ಆದರಂತೆ ಕಮ್ಮಿ ಅಳತೆವುಳ್ಳ ಸವುದೆಯು ಬೇಕಾದರೆ ತಾನೆ ಗಾಡಿ ಬೋಜಾ 1ಕ್ಕೆ 8 ಆಣೆ ಮೇರೆ ಕೊಟ್ಟು ತೆಗದುಕೊಳ್ಳತಕ್ಕದ್ದು. ಹಾಗೆ ತೆಗದುಕೊಳ್ಳದಿದ್ದರೆ ಸ್ಥಳದಲ್ಲಿ ಬಿಕರಿಗೆ ವೃಳಸಲ್ಪಡುತ್ತೆ.

(e) ಮಂಜೂರಾದ ದರದಮೇರೆ ಸಾಗಿಸಿಕೊಳ್ಳುವ ಎಲ್ಲಾ ಸವುದೆಗೂ ಮೊಬಲಗನ್ನು ಪಾವತಿ ಮಾಡಿ ಸಾಗಿಸಿಕೊಳ್ಳಬೇಕು. ಪ್ಲಾಂಟೇಷನ್ ಹೊರಗೆ ಸಾಗಿಸಿಕೊಳ್ಳುವದಕ್ಕೆ ಮೊದಲೇ ರೇಂಜ್ ಆಫೀಸರಿಂದ ಪ್ಯಾಸ್ ಪಡಿಯಬೇಕು.

(f) ಸೂರ್ಯೋದಯಕ್ಕೆ ಮುಂಚೆ ಸೂರ್ಯಾಸ್ತಮಯ ಆದ ನಂತರ ಸವುದೆ ಸಾಗಿಸಿಕೊಳ್ಳಕೂಡದು.

(g) ಕಂಟ್ರಾಕ್ಟರನು ಈ ಕಂಟ್ರಾಕ್ಟುಮೇರೆ ಕೆಲಸ ಮಾಡುತ್ತಿರುವಾಗ ಅಜುಬಾಜು ಇರುವ ಜನರ ಸ್ವಂತ ಪ್ಲಾಂಟೇಷನ್‌ಗಳ ಸವುದೆಯನ್ನು ಖರೀದಿಗೆ ತೆಗದುಕೊಳ್ಳಕೂಡದು. ಅಲ್ಲದೆ ಸರಕಾರ ಪ್ಲಾಂಟೇಷನಿಗೆ ಲಗತ್ತು ಇರುವ ತನ್ನ ಸ್ವಂತ ಪ್ಲಾಂಟೇಷನ್ ಇದ್ದರೆ ಅದರಲ್ಲಿಯೂ ಕೆಲಸ ನಡಸಕೂಡದು.

(h) ಮೇಲಿನಂತೆ ಬಾಂಡು ಬರಕೊಟ್ಟ ತಾರೀಖು ಲಾಗಾಯತು ಆರು ತಿಂಗಳ ವಳಗಾಗಿ ಕತ್ತಾವಣಿ ಮತ್ತು ಗಾಡಿಗಳ ಮೇಲೆ ಸಾಗಿಸಿಕೊಳ್ಳತಕ್ಕದ್ದೆಲ್ಲ ಪೂರೈಸಬೇಕು.

(i) ಗುರ್ತು ಮಾಡಿಕೊಟ್ಟ ಮರ ಕಡಿಯುವಾಗ ಸಮೀಪದಲ್ಲಿರುವ ಸಂದಲ್ ಅಥವಾ ಇತರ ಮರಕ್ಕೆ ಏನೂ ಇಜಾ ಆಗದಂತೆ ಹುಷಾರಾಗಿ ಇರಬೇಕು. ಹಾಗೆ ಏನಾದರೂ ಅಜುಬಾಜು ಇರುವ ಬೆಳೆಯತಕ್ಕ ಮರಗಳಿಗೆ ಕಂಟ್ರಾಕ್ಟರನಿಂದಲೆ ಆಗಲಿ ಅಥವಾ ಆತನಕಡೆ ಜನರಿಂದಲೇ ಆಗಲಿ ಮನಃಪೂರ್ವಕವಾಗಿ ಅಥವಾ ವುದಾಶೀನದಿಂದಾಗಲಿ ಇಜಾ ಸಂಭವಿಶಿದರೆ ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರು ಗೊತ್ತು ಮಾಡುವಷ್ಟು ನಷ್ಟದ ಮೊಬಲಗನ್ನು ಸರಕಾರಕ್ಕೆ ಕಂಟ್ರಾಕ್ಟರನು ಕೊಡಲು ಬದ್ಧನಾಗಿರುತ್ತಾನೆ.

(j) ಯಾವ ಸಂದರ್ಭದಲ್ಲಿಯೂ ಪ್ಲಾಂಟೇಷನ್‌ನಲ್ಲಿ ಬೆಂಕಿ ಹಚ್ಚಕೂಡದು.

(k) ಕಂಟ್ರಾಕ್ಟರನು ರೈಲಮೇಲೆ ಸಾಗಿಸುವ ಸವುದೆ ಮೊತ್ತಾ ಅಂದರೆ, ವ್ಯಾಗಿನ್ ನಂಬರ—ಯಲ್ಲಿಗೆ ಸಾಗಿಸತಕ್ಕದ್ದು—ತೂಕಾ ಈ ತಪಸೀಲ್‌ಗಳನ್ನು ಆಗಾಗ್ಯ ರೇಂಜ್ ಆಫೀಸರಿಗೆ ರಿಪೋರ್ಟು ಮಾಡುತ್ತಾ ಬರಬೇಕು.

(l) ಕಂಟ್ರಾಕ್ಟರನೆ ಆಗಲಿ ಅವನ ಕಡೆ ಜನರೆ ಆಗಲಿ ಮೇಲೆ ಕಂಡ ಷರತ್ತುಗಳಲ್ಲಿ ಯಾವ ಷರತ್ತಿಗಾದರು ತಪ್ಪಿ ನಡದರೆ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳುತ್ತೆ. ಅಲ್ಲದೆ 1900ನೇ ಇಸವಿ ಫಾರೆಸ್ಟ್ ರೂಲ್ಸು 84ನೇ ಸೆಕ್ಷನ್ ಮೇರೆ ಕಂಟ್ರಾಕ್ಟನ್ನೇ ರದ್ದು ಮಾಡಿ ಅದುವರಿಗೆ ಶೀನಿರೇಜ್ ಪಾವತಿಮಾಡಿ ಸಾಗಿಸಿಕೊಳ್ಳದೆ ಬಿಟ್ಟಿರುವ ಎಲ್ಲಾ ಸವುದೆಯು ಸರಕಾರಕ್ಕೆ ಶೇರಿಹೋಗುತ್ತೆ.

ಬಿ. ಹಿರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ತುಮಕೂರು ಡಿಸ್ಟ್ರಿಕ್ಟು.

ತಾರೀಖು 31ನೇ ಜುಲೈ 1903ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ಜನಗಳು ಅವರವರ ಹೆಸರಿನ ಬಾಜೂದಲ್ಲಿ ಕಂಡ ಸ್ಥಳಗಳಲ್ಲಿ ಚಾಬೀನ ಮತ್ತು ಬಿದರು ವಗ್ಯರ ಬಗ್ಗೆ ಲೈಸೆನ್ಸುಗಳ ಕೊಡುವ ಬಗ್ಗೂ ಲೈಸೆನ್ಸುಗಳು ಛಕ್ಕು ಮಾಡುವಬಗ್ಗೂ ಲೈಸೆನ್ಸ್ ವೆಂಡರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ :—

ತಾಲ್ಲೂಕು ಹೆಸರು.	ಸ್ಥಳದ ಹೆಸರು.	ಲೈಸೆನ್ಸ್ ವೆಂಡರುಗಳ ಹೆಸರು.
ಹುಣಸೂರು ತಾಲ್ಲೂಕು ...	ಬಿಳಿಕೆರೆ	ಶೇಕದಾರ್ ಕೃಷ್ಣೈಯ್ಯಂಗಾರ್
	ಹುಣಸೂರು	ಸಿ. ಕೆ. ತಿರುಮಲರಾವ್
	ಪಿರ್‍ಯಾಪಟ್ಣ	ಪಟೇಲ ದೇವಣ್ಣಾ
	ಮುತ್ತೂರು	ಅಯ್ಯಂಣ ವುರುಫ್ ತಿಮ್ಮಪ್ಪಯ್ಯ
ಹೆಗ್ಗಡದೇವನಕೋಟೆ ...	ಬೇಗೂರು	ಪಟೇಲ ಕಾಳೇಗೌಡ ವುರುಫ್ ಲಿಂಗೇಗೌಡ
	ಅಂತರಸಂತೆ	ಕಪ್ಪಂಣ
	ಸರಗೂರು	ವೆಂಕಟನಾರಣಪ್ಪ
	ಹೆಗ್ಗಡದೇವನಕೋಟೆ	ಪಡೂಕೋಟೆ ಸುಬ್ಬಾಯ
	ಹಂಪಾಪುರ	ಶೇಷಮ್ಮನಾಯಡು
ಗುಂಡ್ಲುಪೇಟೆ ...	ಮಡುವಿನಹಳ್ಳಿ	ಚಿಕ್ಕ ನಂಜಪ್ಪಾ
	ಕುರುಬರಹುಂಡಿ	ಪುಟ್ಟಯ್ಯಾ
	ಗುಂಡ್ಲುಪೇಟೆ	ಟಿ. ಸಂಪತ್ತೈಯ್ಯಂಗಾರ್
	ಹಂಗಳ್ಳಾ	ಶ್ರೀಕಂಠೈಯ್ಯಾ
	ಬರಗಿ	ಸುಬ್ಬರಾವ್
ಚಾಮರಾಜನಗರ ...	ಸಂತೆಮರಹಳ್ಳಿ	ಪಟೇಲ್ ಮಾದಪ್ಪಾ
	ಚಾಮರಾಜನಗರ	ಲಕ್ಷ್ಮಣಾಚಾರ್
	ಜ್ಯೋತಿಗೌಡ್ನಪುರ	ವೆಂಕಟರಮಣಯ್ಯಾ
ಮೈಸೂರು ತಾಲ್ಲೂಕು ...	ಚಟ್ನಹಳ್ಳಿ	ಕಾಳಿಂಗೈಯ್ಯಾ

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮ್ಮಿಷನರ್, ಮೈಸೂರು ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 11ನೇ ಆಗಸ್ಟು 1903.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ—ಹಾಸನದ ಡಿಸ್ಟ್ರಿಕ್ಟಿನಲ್ಲಿ 1903ನೇ ಅಕ್ಟೋಬರ್ ಸುರ್ರೇ ಲಾಗಾಯತು 1905ನೇ ಇಸವಿ ಜೂನ್ 30ರ ವರವಿಗೆ ಸರ್ಕಾರಿ ಬಂಜರು ಜಮೀನುಗಳಲ್ಲಿ ಇರುವ ತಂಗಡಿ ಮತ್ತು ಚಕ್ಕೆ ಇವುಗಳ ಜಮಾವಣೆ ಮಾಡಿಕೊಳ್ಳುವದನ್ನು ಬಹಿರಂಗವಾಗಿ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರವರು ಮತ್ತು ಡೆಪ್ಯುಟಿ ಕಮೀಷನರವರು ಅಥವಾ ಅವರಿಂದ ನೇಮಕವಾಗಿರುವ ಛಾಪ್ಪು ಅಸಿಸ್ಟೆಂಟ್ ಕಮೀಷನರವರು ಇವರ ಮುಂದೆ ಇದರಡಿ ಕಾಣುವಂತೆ ಆಯಾಯ ಸ್ಥಳಗಳಲ್ಲಿ ಮತ್ತು ಆಯಾಯ ತಾರೀಖುಗಳಲ್ಲಿ ಹರಾಜು ಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಹಾಜರಾಗಿ ಛಡ ಸವಾಲ್ ಮಾಡಬಹುದು. ಈ ಹರಾಜು ಡೆಪ್ಯುಟಿ ಕಮೀಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿರುತ್ತೆ:—

ತಾಲೋಕು.	ಹರಾಜು ತಾರೀಖು.	ಹರಾಜು ಸ್ಥಳ.
ಅರಶೀಕೆರೆ ...	7—9—1903	ಅರಸೀಕೆರೆ
ಚೆನ್ನರಾಯಪಟ್ಣ ...		
ಹೊಳೇ ನರಶೀಪುರ ...		
ಅರಕಲಗೂಡು ...		
ಹಾಸನ ...		
ಮಂಜರಾಬಾದು ...		
ಬೇಲೂರು ...		

2. ಹರಾಜು ಆ ದಿವಸ ದಿವಿ 2 ಘಂಟೆಗೆ ಪ್ರಾರಂಭವಾಗಿ ಅವಶ್ಯಕವಿದ್ದಲ್ಲಿ ಮಾರನೇ ದಿನವೂ ನಡಿಸುವದರಲ್ಲಿ ಬರುತ್ತೆ. ರೂಪಾಯಿಗೆ ಬಂದಾಣೆಯಂತೆ ಲೋಕಲ್ ಸೆಸ್ ವಸೂಲ್ಮಾಡುತ್ತದೆ.

3. ಸವಾಲ್ ಮಾಡ್ಲಲು ಇಚ್ಛೆವುಳ್ಳವರು ಖುದ್ದಾ ಹಾಜರಾಗಬೇಕು. ಅಥವಾ ಸರಿಯಾದ ಏಜಂಟದಾರ್ರುಗಳನ್ನು ಕಳಿಸಬೇಕು. ಯಾವ ದರಖಾಸ್ತುದಾರನಾಗಲೀ (100) ರೂಪಾಯಿಗಳನ್ನ ಶೇವಣಿ ಇಡದ ವಿನಹ ತನಿಗೋಸ್ಕರವಾಗಿ ಆಗಲಿ ಅಥವಾ ಇತರರಿಗೋಸ್ಕರವಾಗಿ ಆಗಲಿ ಸವಾಲ್ ಮಾಡಕೂಡದು. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರರಲ್ಲದ ಇತರ ದರಖಾಸ್ತುದಾರರಿಂದ ಹಾಜರಾದ ಶೇವಣಿ ಮೊಬಲಗು ಹರಾಜು ಖೈದಾದ ಪಡನೆಯೇ ವಾಪಸು ಮಾಡಲ್ಪಡುತ್ತೆ.

4. ಹರಾಜು ಖೈದಾದ ತರುವಾಯ ಒಂದು ವಾರದೊಳಗೆ ಆಖೈರ ಸವಾಲ್ದಾರನು ಹರಾಜು ಮೊಬಲಗು ಪೈಕಿ ಕಾಲು ಹಿಸ್ಸೆಯನ್ನ ಹಾಜರ್ಮಾಡಬೇಕು. ಮತ್ತು ಬಾಕಿ ಮೊಬಲಗನ್ನು ಮೂರು ಹಿಸ್ಸೆಯಾಗಿ 1—10—1903, 1—1—04 ಮತ್ತು 1—4—04 ರಲ್ಲು ಪಾವತಿ ಮಾಡಬೇಕು. ಹೀಗೆ ಮಾಡಲು ತಪ್ಪಿದಲ್ಲಿ ಅದುವರಿಗೆ ಕೊಟ್ಟಿರುವ ಮೊಬಲಗನ್ನೆಲ್ಲಾ ಸರ್ಕಾರಕ್ಕೆ ವುಳಿಸಿಕೊಂಡು ಈ ಹಕ್ಕನ್ನು ಅವಲ್ ದರಖಾಸ್ತುದಾರನು ದಂಡ ತೆರುವ ಷರತ್ತಿಗೆ ಒಳಪಟ್ಟು ಪುನಹ ಹರಾಜು ಮಾಡಿಸಲ್ಪಡುತ್ತೆ. ಅವಲ್ ದರಖಾಸ್ತುದಾರನು ದುಸರೇ ಹರಾಜಿನಲ್ಲಿ ವುಂಟಾಗುವ ನಷ್ಟಕ್ಕೆಲ್ಲಾ ಬದ್ಧನಾಗಿರಬೇಕಲ್ಲದೆ ಈ ದುಸರ ಹರಾಜಿನಲ್ಲಿ ಆದಾಯ ಬಂದಲ್ಲಿ ಆ ಆದಾಯದ ಯಾವ ಭಾಗಕ್ಕೂ ಅರ್ಹನಾಗಿರುವದಿಲ್ಲ.

5. 15—9—1903ರ ಒಳಗಾಗಿ ಹರಾಜುದಾರನು ಈ ಕೆಳಗೆ ವಿವರಿಸಿ ಇರುವ ಷರತ್ತುಗಳುಳ್ಳ ಒಂದು ಮುಚ್ಚಳಿಕೆಯನ್ನು ಬರದುಕೊಟ್ಟು ಅದರಂತೆ ನಡದುಕೊಳ್ಳಲು ತನ್ನ ದಸ್ಕತ್ ಮಾಡಿಕೊಡಬೇಕು. ನಂತರ ಬಾಬು ರೂಢಿಸುವದಕ್ಕೆ ಲೈಸೆನ್ಸು ಕೊಡಲ್ಪಡುತ್ತೆ.

ಷರತ್ತುಗಳು.

1. ಒಂದು ವರುಷದ ವಳಗಿರುವ ಸಸಿಗಳ ತಂಟೆಗೆ ಹೋಗಬಾರದ್ದು.
2. ಹರಾಜುದಾರರ ಕೈಕೆಳಗೆ ಕೆಲಸ ಮಾಡಲು ಗೊತ್ತು ಮಾಡಿಕೊಂಡಿರುವ ಸಬ್ ಕಂಟ್ರಾಕ್ಟದಾರು ಮತ್ತು ಮೇಸ್ತ್ರಿಗಳ ಹೆಸರನ್ನ ಬರದು ಒಂದು ಲಿಸ್ಟನ್ನ ಕೊಡಬೇಕು.
3. ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರು ಕೊಡುವ ನಮೂನೆಯನ್ನ ಅನುಸರಿಸಿ ಸರಿಯಾದ ಲೆಖ್ಖ ಇಡಬೇಕು. ಈ ಲೆಖ್ಖವು ಯಾವ ಫಾರೆಸ್ಟು ಮತ್ತು ರೆವಿನ್ಯೂ ಅಧಿಕಾರಿಯ ತನಿಖೆಗೆ ವಳಪಟ್ಟಿರಬೇಕು.
4. ಸಾಗಿಸುವ ಪ್ರತಿ ಒಂದು ಗಾಡಿ ಬೋಜಾ ಚಕ್ಕೆಗೂ ಒಂದೊಂದು ರಹದಾರಿಯು ಇರಲೇಬೇಕು.
5. ಡಿಸ್ಟ್ರಿಕ್ಟು ಸರಹದ್ದಿನೊಳಗೆ 30—6—1905 ಕಳೆದ ತರುವಾಯ ಬಿಡಲ್ಪಟ್ಟಿರುವ ಚಕ್ಕೆ ಯಾವತ್ತು ಸರ್ಕಾರದ ಮಾಲಾಗಿಯೇ ಇರುತ್ತೆ.
6. ಯಾವದಾದರೂ ವ್ಯತ್ಯಸ್ಥಗಳ ಸಂದರ್ಭದಲ್ಲಿ ಡೆಪ್ಯುಟಿ ಕಮಿಷನರವರ ತೀರ್ಮಾನವು ಆಖೈರಾಗಿರತಕ್ಕದ್ದು.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್, ಹಾಸನದ ಡಿಸ್ಟ್ರಿಕ್ಟ್.

ತಂಗಡಿ ಚಕ್ಕೆ.

ಇಸ್ತಿಹಾರು, ತಾರೀಖು 7ನೇ ಆಗಸ್ಟು 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ಸರ್ಕಾರಿ ಜಮೀನ್ನಲ್ಲು, ಮತ್ತು ಪ್ಲಾಂಟೇಷನುಗಳಲ್ಲೂ ಮತ್ತು ಸ್ಟೇಟ್ ಫಾರೆಸ್ಟುಗಳಲ್ಲಿಯೂ ಇರತಕ್ಕ, ತಂಗಡಿ ಚಕ್ಕೆಯನ್ನು 1903ನೇ ಇಸವಿ ಅಕ್ಟೋಬರ್ ಗುರ್ರೇ ಲಾಗಾಯತು 1905ನೇ ಇಸವಿ ಜೂನ್ 30ರ ವರಿಗೆ ಇಪ್ಪತ್ತೊಂದು ತಿಂಗಳು ಕಾಲದಲ್ಲಿ ರೂಢಿಶಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1903ನೇ ಇಸವಿ ಸೆಪ್ಟಂಬರ್ 10 ಹತ್ತನೇ ತಾರೀಖಿನ ವರಿಗೆ ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ನಂಬರ್.	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟಿನ ಹೆಸರು.	ಷರಾ.
1	ಹರಿಹರದ ಸಬ್ ತಾಲ್ಲೂಕು.	ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.
2	ಜಗಲೂರು ತಾಲ್ಲೂಕು.	
3	ಚಳ್ಳಕೆರೆ ಡಿಟೋ	
4	ಚಿತ್ರದುರ್ಗ ಡಿಟೋ	
5	ಮಲೇಬೆನ್ನೂರು ಸ್ಟೇಟ್ ಫಾರೆಸ್ಟು.	
6	ನೀರಥಡಿ ಡಿಟೋ	
7	ಜೋಗೀಮಟ್ಟಿ ಡಿಟೋ	

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿಬಂದು ದರಖಾಸ್ತಿನೊಡನೆ (200) ರೂಪಾಯಿನ ಕರ್ರೆನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್ಷೂರ್ ಮಾಡಿ ಲಿಫಾಫೇ ಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರದು ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮೀಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮೀಷನರ್ ಸಾಹೇಬರವರು ಬದ್ಧರಾಗಿರುವದಿಲ್ಲಾ ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನು ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಚಿತ್ರದುರ್ಗ ಡಿಸ್ಟ್ರಿಕ್ಟ ಆಫೀಸಿನಲ್ಲಿ 1903ನೇ ಇಸವಿ ಸೆಪ್ಟಂಬರ್ 12ನೇ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಮತ್ತು ಡೆಪ್ಯುಟಿ ಕಮೀಷನರ್ ಸಾಹೇಬರವರು ಅಥವಾ ಇವರಿಂದ ನಿಯಮಿಸಲ್ಪಟ್ಟ ಅಸಿಸ್ಟೆಂಟ್ ಕಮೀಷನರ್ ಸಾಹೇಬರವರು ಸೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಬಿಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನ ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತು ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು "ಮತ್ತು ಇದರ ಮೇಲೆ" ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ವುಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ತಮಿಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತುನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಶಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಆದಕ್ಕಾಗಿ ಡೆಪ್ಯುಟಿ ಕಮೀಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೇನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ಶ್ರೀವರ್ಣಯನ್ನ ವಸೂಲ್ ಮಾಡಲು ಡೆಪ್ಯುಟಿ ಕಮೀಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಆದರ ಮೇಲೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತೀ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರೀಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ

ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಮಾವಣಿ ಮತ್ತು ಧವಾನಿ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾಧೀತು.

1ನೇ ಖಿಸ್ತು	... ...	31ನೇ ಜನವರಿ 1904.
2ನೇ ಖಿಸ್ತು	... ...	31ನೇ ಮೇ 1904.
3ನೇ ಖಿಸ್ತು	... ...	30ನೇ ಸೆಪ್ಟಂಬರ 1904.

ಇತ್ತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕಿಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣಿ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗದನಂತರಾ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸೌದೆಯೂ ಇಜಾರೆದಾರನಿಗೆ ಶೇರಿದ್ದಾಗಿರುತ್ತೆ.

(V) ಇಜಾರೇ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಸ್ಯೆರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಜೋಡಾ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕಿ ಬೀಳುವದರಿಂದ ಬೆಲೆಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1905ನೇ ಜುಲೈ ಮಾಹೆ 15ನೇ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ ಸಾಹೇಬರು (1,000) ರೂಪಾಯಿವರಿಗೂ ಜುರ್ಮಾನೆಯನ್ನು ಸಹಾ ವಿಧಿಸಬಹುದು.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗದ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ಇಸ್ತಿಹಾರ್‌ನಾಮೆ, ತಾರೀಖು 1ನೇ ಆಗಸ್ಟು 1903ನೇ ಇಸವಿ.

ಕೋಲಾರ ತಾಲ್ಲೂಕು ಕಸಬಾ ಹೋಬಳಿ ಜೋಡಿ ಕೋಡಿ ರಾಮಸಂದ್ರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿ ಗೋಸ್ಕರವಾಗಿ, ತಾಲ್ಲೂಕು ಅಮಲ್‌ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪಟಂಬರು ಮಾಹೆ 18ನೇ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

(ಹೆಚ್ಚು ತಪಶೀಲ್ ಬಗ್ಯೆ 13ನೇ ಮರ್ಕುಂ 32ನೇ ನಂಬರ ಮೈಸೂರ ಗೆಜೆಟಿನ 2ನೇ ಭಾಗದ 447ನೇ ಪೇಜು ನೋಡತಕ್ಕದ್ದು.)

ಇಸ್ತಿಹಾರ್ನಾಮಾ, ತಾರೀಖು 25ನೇ ಜುಲೈ 1903.

ಬವರಿಂಗಪೇಟೆ ತಾಲ್ಲೂಕು ಕ್ಯಾಸಂಬಳ್ಳಿ ಹೋಬಳಿ ಜೋಡಿ ದೊಡ್ಡಗಾಂಡ್ಲಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೇ ಇಸವಿ ಸೆಪ್ಟಂಬರ ಮಾಹೆ 7ನೇ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಯೆ 6—8—1903ನೇ ಮರ್ಕುಂ 31ನೇ ನಂಬರ ಮೈಸೂರು ಗೆಜೆಟ್ಟಿನ IIನೇ ಭಾಗದ 435ನೇ ನಂಬರ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ.

ಮೈಸೂರು ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೇ ಜುಲೈ 1903.

1. ಕಂದಾಯದ ಬಾಕೀದಾರರಾದ ಸರ್ವಮಾನ್ಯ ರಾಂಪುರದ ಮಾನ್ಯದಾರು) ಶಾಮೈಯ್ಯಂಗಾರ್ರು, ಕುಟ್ಟೈಯ್ಯಂಗಾರ್ರು, ಶ್ರೀನಿವಾಸೈಯ್ಯಂಗಾರ್ರುಂಬವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಮಂಡ್ಯಾ ತಾಲ್ಲೂಕು ಸರ್ವಮಾನ್ಯ ರಾಂಪುರ ಗ್ರಾಮದಲ್ಲಿ 1903ನೇ ಇಸವಿ ಅಕ್ಟೋಬರ 10ನೇ ತಾರೀಖಿನಲ್ಲಿ ಮಂಡ್ಯಾ ತಾಲ್ಲೂಕು ಅಮಲ್‌ದಾರ್ರವರ ಮೂಲಕ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ. ಹರಾಜು ಆ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೇ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 357—7—1 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಬ್ಲಾಕಿನ ಹೆಸರು.	ಜಮೀನಿನ ವರ್ಗ.	ವಿಸ್ತೀರ್ಣ. ಎ.	ಗು.	ಕಂದಾಯ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಮಂಡ್ಯಾ	ಕಸಬೆ	ಸರ್ವಮಾನ್ಯ ರಾಂಪುರ	ಶಾಮಯ್ಯಂಗಾರ್ರು, ಕುಟ್ಟೈಯ್ಯಂಗಾರ್ರು, ಶ್ರೀನಿವಾಸಯ್ಯಂಗಾರ್ರು	...	ರೂ. 1,000	ಪೂರಾಗ್ರಾಮ	ಖುಷ್ಕಿ ...	162	18	140	0	0	52	14	5	ವಿಳಂಬಿ
							ತರಿ ...	40	10	172	0	0	52	14	5	ವಿಕಾರಿ
							ಬಾಗಾಯತು	6	29	28	0	0	71	5	9	ಶಾರ್ವರಿ
							ಖರಾಬ್ ...	110	16	1	12	0	71	5	9	ಪ್ಲವ
													71	5	9	ಶುಭಕೃತು
								319	33	341	12	0	1	8	0	ಇತರ ಪ್ರೊಸೆಸರುಸುಂ
													36	1	0	ಬಡ್ಡಿ
													357	7	1	

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜ ಅರಸ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 30ನೇ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಜೋಡಿ ಭಂಡಾರಿಹಳ್ಳಿ ಗ್ರಾಮವು ಕಂದಾಯದ ಬಾಕಿಗಾಗಿ 1903ನೇ ಸೆಪ್ಟಂಬರ್ 10ನೇ ತಾರೀಖಿನಲ್ಲಿ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಈ ವಿಷಯದಲ್ಲಿ ತಪಸೀಲು ಇಸ್ತಿಹಾರ್ 1903ನೇ ಇಸವಿ ಆಗಸ್ಟ್ ತಿಂಗಳು 13ನೇ ಮರ್ಸ್ಯಂ 32ನೇ ನಂಬರ್ ಮೈಸೂರು ಗೆಜೆಟ್ ಎರಡನೇ ಭಾಗದ 450ನೇ ಪೇಜಿನಲ್ಲಿ ಛಾಯಿಷಾಗಿ ಇಧೆ.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮಿಷನರ್.

ಹಾಸನದ ಡಿಸ್ಟ್ರಿಕ್ಟು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ 1903—1904ನೇ ಇಸವಿ ಮಿ॥ ಅರ್ಜೀ ನಂಬರ 33.

ಅರಕಲಗೂಡು ತಾಲ್ಲೂಕು ಕಸಬಾ D. P. W. ಇಲಾಖಾ ತಾಲ್ಲೂಕು ಮೇಸ್ತ್ರಿಯಾಗಿದ್ದು ಫವತಿಪಟ್ಟ ಬೇವಹಳ್ಳಿ ವೆಂಕಟರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ಳು ಹಾಲಿ ಗೋರಿಬಿದನೂರು ತಾಲ್ಲೂಕು ಕಡಬೂರಲ್ಲಿ ಲೋಕಲ್‌ಫಂಡು ಓವರ್‌ಶಿಯರು ಕೆ. ಲಕ್ಷ್ಮಿನಾರಣ್ಯೆಯ್ಯನವರ ಮನೇಲಿ ಇರುವ ಬೇವಹಳ್ಳಿ ವೆಂಕಟರಾಯರ ಹೆಂಡತಿ ಗೌರಮ್ಮನೆಂಬಾಕೆಯು, ಫವತಿ ಬೇವಹಳ್ಳಿ ವೆಂಕಟರಾಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೃತಪಟ್ಟ ಗಂಡನಿಗೆ ಬರತಕ್ಕ 2,185—15—0 ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೇ ಇಸವಿ VIIನೇ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರಳಾದ ಗೌರಮ್ಮನ ಅರ್ಜಿಯನ್ನು ಸ್ 1903ನೇ ಇಸವಿ ಸೆಪಟಂಬರು ತಿಂಗಳು 11ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೇವಹಳ್ಳಿ ವೆಂಕಟರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಆಗಸ್ಟ್ ತಿಂಗಳು 4ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1903—1904ನೇ ಮಿಸಲೇನಿಯಸ್ ಅರ್ಜೀ ನಂಬರ 60.

ಹಾಸನ ಡಿಸ್ಟ್ರಿಕ್ಟು ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಶಿಂಗೋಡನಹಳ್ಳಿ ಗ್ರಾಮದಲ್ಲಿರುವ ಫವತಿ ಬೆಟ್ಟೇಗೌಡನಿಗೆ ಬರಬೇಕಾದ ಸಾಲವನ್ನು ಬರಮಾಡಿಕೊಳ್ಳತಕ್ಕ ವಿಷಯದಲ್ಲಿ—

ಅರ್ಜಿದಾರರಾದ ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಶಿಂಗೋಡನಹಳ್ಳೀಲಿರುವ ರಂಗೇಗೌಡ ಮೈನರು, ಗಾರ್ಡಿಯನ್ ತಾಯಿ 1ನೇ ಜವರಮ್ಮ, 2ನೇ ಜವರಮ್ಮ ಸಹಾ, ಮೃತಪಟ್ಟ ಬೆಟ್ಟೇಗೌಡನಿಗೆ ಮಗು ಮತ್ತು ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೃತಪಟ್ಟ ಬೆಟ್ಟೇಗೌಡನಿಗೆ ಬರತಕ್ಕ 100 ನೂರು ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೇ ಇಸವಿ VIIನೇ ನಂಬರ್ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರು ರಂಗೇಗೌಡ ಮೈನರ್, ಗಾರ್ಡಿಯನ್ ತಾಯಿ ಜವರಮ್ಮ 2. ಜವರಮ್ಮ ಇವರ ಅರ್ಜಿಯನ್ನು ಸ್ 1903ನೇ ಇಸವಿ ಸೆಪ್ಟಂಬರ್ ಮಾಹೆ 18ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬೆಟ್ಟೇಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೇ ಇಸವಿ ಆಗಸ್ಟು 12ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಬಿ. ಶೇಷಗಿರಿರಾವ್,
ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜ್ ರವರ ಕೋರ್ಟಿನಲ್ಲಿ.

ಸರ್ 1903—1904ನೇ ಇಸವಿ ಅರ್ಜೀ ನಂಬರ್ 1.

ಮೃತಪಟ್ಟ ಗೂಳಪ್ಪನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಕಡೂರುನಲ್ಲಿರುವ ಹೊನ್ನಪ್ಪನ ಹೆಂಡತಿ ಕಾಳಮ್ಮ, ಮೃತಪಟ್ಟ ಗೂಳಪ್ಪನವರಿಗೆ ತಾಯಿಯಾಗಬೇಕೆಂಬ ಹಕ್ಕುದಾರಿ ಮೇಲೆ ಕಡೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಗೂಳಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹೊನ್ನಪ್ಪನ ಹೆಂಡತಿ ಕಾಳಮ್ಮನವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪ್ಟಂಬರ ತಿಂಗಳು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೂಳಪ್ಪನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 12ನೇ ತಾರೀಖಿನಲ್ಲಿ ಕೋರ್ಟುಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1903—1904ನೇ ಇಸವಿ ಅರ್ಜೀ ನಂಬರ್ 34.

ಮೃತಪಟ್ಟ ಕುಂಡ್ರದ ಮಂಚೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕು ಕೋಳೂರು ಮಾಗಣಿ ಹೊಸಹಳ್ಳಿ ದಾಖಲೆ ಬೆಳಗೂರು ವಾಸಸ ಕಲ್ಲೇಗೌಡ, ಮೃತಪಟ್ಟ ಕುಂಡ್ರದ ಮಂಚೆಗೌಡನಿಗೆ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಬೆಳಗೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಕುಂಡ್ರದ ಮಂಚೆಗೌಡನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೇ ಇಸವಿ 7ನೇ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಲ್ಲೇಗೌಡ ರವರ ಅರ್ಜಿಯನ್ನು ಸರ್ 1903ನೇ ಇಸವಿ ಸೆಪಟಂಬರ್ ತಿಂಗಳು ತಾರೀಖು 24ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಂಡ್ರದ ಮಂಚೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಆಗಸ್ಟ್ ತಿಂಗಳು 5ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮಶಿವ ಐಯ್ಯರ್,
ಸಬ್ ಜಡ್ಜ್.

ತುಮಕೂರು ಮುನ್ಸೀಫ್ ಕೋರ್ಟಿನಲ್ಲಿ.

ಸರ್ 1903—1904ನೇ ಇಸವಿ ಮಿಸಲೇನಿಯಸ್ ನಂಬರ್ 36.

ಮೃತಪಟ್ಟ ಕುಣಿಗಲ್ ರಾಮೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೇ ವೆಂಕಟ್ರಾವು, 2ನೇ ಕೆ. ಶ್ರೀನಿವಾಸರಾವು, 3ನೇ ಕೃಷ್ಣರಾವು, 4ನೇ ಸುಬ್ಬರಾವು, 5ನೇ ಭೀಮರಾವು, 3—4—5ನೇ ಮೈನರ್, ಗಾರ್ಡಿಯನ್ 1ನೇ ಅರ್ಜಿದಾರ ವೆಂಕಟ್ರಾವು, ಇವರುಗಳು ಫವುತಿ ರಾಮೈಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಸದರೀ ರಾಮೈಯ್ಯನವರಿಗೆ ಮೈಸೂರ ಗೌವರ್ನ್ಮೆಂಟ್ ಸ್ಟೇಟ್ ಲೈಫ್ ಇನ್ಷ್ಯೂರೆನ್ಸ್ ಪಾಲಿಸಿಗಳ ಬಾಬತು 345—0—0 ರೂಪಾಯಿಗಳನ್ನ ವಸೂಲ್ ಮಾಡಿಕೊಳ್ಳತಕ ಬಗ್ಯೆ 1901ನೇ ಇಸವಿ VIIನೇ ನಂಬರ್ ಸಕ್ಸೆಷನ್ ಸರ್ಟಿಫಿಕೇಟ್ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರ ಅರ್ಜಿಯನ್ನು ಸರ್ 1903ನೇ ಇಸವಿ ಆಗಸ್ಟು ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುಣಿಗಲ್ ರಾಮೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟ್ಯರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೇ ಇಸವಿ ಆಗಸ್ಟು ತಿಂಗಳು 10ನೇ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಶೇಷಗಿರಿರಾವ್, ಮುನ್ಸೀಫ್.

ಗೆಜೆಟ್ ಇಸ್ತಿಹಾರ್.

ಮೈಸೂರ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಪೋಸ್ಟಿಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಟ್ಟಿರೋಣದರಿಂದ ಸದರೀ ಕಾಪಿಗಳು ಗೈರಿವಿಲೆ ಅಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರ್ರವರು ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರಿವಿಲೆಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.

ಮೈಸೂರ ಗೆಜೆಟ ಚಂದಾದಾರು ವಗ್ಯೆರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಷ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	

	ರೂ.	ಆ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ್ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೇ ಇಸವಿ ಜುಲೈ 2ನೇ ಮರ್ಕುಂ 155ನೇ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೇ ಇಸವಿ ಜೂನ 21ನೇ ಮರ್ಕುಂ 24205—6—ಜಿ. 6200ನೇ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟನಿಂದ ಕೊಡಲ್ಪಡುವ 1860ನೇ ಇಸವಿ XXVIIನೇ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು:—

		ರೂ.	ಆ.
ಮೊದಲನೇ ದಫಾ ಘಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	..	2	8
ಎರಡನೇ ಸಲ ವ ಆತರುವಾಯು ಪ್ರತಿ ಆವರ್ತಿಗೂ ಡಿಟೋ	..	1	4

ಸಿವಿಲ ಪ್ರೊಸಿಡ್ಯೂರ ಕೋಡಿನ 347ನೇ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನ್ಗಳ ಬಗ್ಯೆ ನೋಟಿಸಗಳಿಗೆ:—

				ರೂ.	ಆ.
ಮೊದಲನೇ ಸಲಕ್ಕೆ	..	..	..	5	0
ಎರಡನೇ ವ ಆತರುವಾಯು ಪ್ರತಿ ದಫಾಕ್ಕೆ			..	2	0

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೇ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗ್ಯೆರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯು ಪ್ರತಿ ಸಲಕ್ಕೂ	,,	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ		ಪಙ್ತಿ 1ಕ್ಕೆ	..	0	8
ಎರಡನೇ ದಫಾ	ಡಿಟೋ	ಡಿಟೋ		0	6
ಮೂರನೇ ವ ಆತರುವಾಯು ಪ್ರತಿ ಸಲಕ್ಕೆ	..	..		0	4

ಷರಾ.—ಚಂದಾ ವಗ್ಯೆರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಆದೇ ವಾರದ [illegible]ಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Central Press, Baugalore—1903.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 34.

ಬೆಂಗಳೂರು, ಗುರುವಾರ, ಆಗಸ್ಟು ತಾ|| 27, ಸ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಡೋಣಾದ ಇಸ್ತಿಹಾರ ನಾಮೆಗಳು.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು—1. ತಾರೀಖು 18ನೆ ಆಗಸ್ಟ್ 1903ನೆ ಇಸವಿ.

ಇನಾಂದಾರ್ರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್‌ಡೀಡ್ ಯಾನೆ ಖಾಯಂ ಪಟ್ಟೆಗಳು (1479) ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಯೆ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ, ಪ್ರತ್ಯೇಕ, ನೋಟೀಸುಗಳು ಬಂದಮೇಲೆ ಅವುಗಳನ್ನು (ಪಟ್ಟೆಗಳನ್ನು) ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರ್ರುಗಳು ಐರ್ಜಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತವೆಂದು ಇದರ ದೆಸೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್ಇಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 17ನೆ ಆಗಸ್ಟ್ 1903.

ಈ ಕೆಳಗೆ ಕಂಡ ಪ್ಲಾಂಟೇಷನ್‌ಗಳಲ್ಲಿರುವ ಕ್ಯಾಸರಿನಾ ಸೌದೆಯನ್ನು ಕಡದು ಸಾಗಿಸಿಕೊಳ್ಳುವದಕ್ಕೆ ಟೆಂಡರ ಕೊಡತಕ್ಕವರು ಕೊಡಬಹುದು :—

ಟೆಂಡರ ಮೇಲಕಡೆ "ಕ್ಯಾಸರಿನಾ ಸವುದೆ ಬಗ್ಯೆ" ಎಂದು ಬರದಿರಬೇಕು. ಬಿಲೆಟ್ಟುಗಳು ಅಂದರೆ, ಮಧ್ಯದಲ್ಲಿ 3 ಅಥವಾ ಹೆಚ್ಚು ಇಂಚವುಳ್ಳ ಬಿಲ್ಲೆಟುಗಳು ಮತ್ತು $1\frac{1}{2}$ ಲಾಗಾಯತು 3 ಇಂಚು ವಳಗೆ ಇರುವ ಬಿಲ್ಲೆಟುಗಳು. ಇವಗಳಿಂದ ಕಟ್ಟಿದ 68 ಅಡಿ ಸಲೆವುಳ್ಳ ಸ್ಟ್ಯಾಕ್ 1ಕ್ಕೆ ದರಖಾಸ್ತುದಾರನು ಸರಕಾರಕ್ಕೆ ಏನು ದರ ಕೊಡಲು ಇಷ್ಟ ಉಂಟೋ ಆ ದರದ ಮೊಬಲಗು ಟೆಂಡರನಲ್ಲಿ ನಮೂದಿಸಿರಬೇಕು.

ದರಖಾಸ್ತುಗಳನ್ನು ಇನ್‌ಷ್ಯೂರ್ ಪೋಸ್ಟ್ ಮೂಲಕ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಹೆಸರಿಗೆ ಈ ಚಾಲತಿ ಮಾಹೆ ಆಖೈರ ಬಳಗಾಗಿ ತಲಪುವಂತೆ ಕಳುಹಿಸಬೇಕು. ಅಂಥಾ ಟೆಂಡರಗಳನ್ನು ಬರುವ ಮಾಹೆ 5ನೆ ತಾರೀಖು ಅಥವಾ ಆ ಸುಮಾರಿನಲ್ಲಿ ಆಗ್ಯೆ ಹಾಜರಾಗುವ ದರಖಾಸ್ತುದಾರಗಳ ರೂಬರೂಬ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರು ಒಡದು ನೋಡುವರು.

ಪ್ರತಿ ದರಖಾಸ್ತಿನ ಜೊತೇಲಿಯೆ ಡಿಪಾಜಟ್ಟು 200 ರೂಪಾಯನ್ನು ನೋಟು ಮೂಲಕವಾಗಿ ಕಳುಹಿಸಬೇಕು. ಸವಾಲ್ ಮಂಜೂರಾದ ದರಖಾಸ್ತುದಾರನ ಮೊಬಲಗು ಹೊರ್ತು ಬಾಕಿ ಯವರ ಮೊಬಲಗೆಲ್ಲಾ ಕೂಡ್ಲೆಯೆ ವಾಪಸು ಮಾಡುತ್ತೆ. ಬರುವ ದರಖಾಸ್ತುಗಳಲ್ಲಿ ಯಾವದನ್ನಾದರೂ ಮಂಜೂರ್ಮಾಡಿಕೊಳ್ಳಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಿಗೆ ಸ್ವತಂತ್ರ ಇರುತ್ತೆ.

ಕ್ರಮ ನಂ.	ಪ್ಲಾಂಟೇಷನ್ ಹೆಸರು.	ಒಟ್ಟು ಕ್ಯಾಸರಿನಾ ಸವುದೆ ಮೊತ್ತ ಸುಮಾರು.
1	ಪಂಡಿತನಹಳ್ಳಿ	500 ಟನ್.
2	ದಾಸರಹಳ್ಳಿ	
3	ಗೊಲ್ಲಹಳ್ಳಿ, ಮಲ್ಲಸಂದ್ರ	
4	ಬಳ್ಳಾಪುರ, ಲಿಂಗನಹಳ್ಳಿ	
5	ಆಡಗೂರು	
6	ಚನ್ನಶೆಟ್ಟಿಹಳ್ಳಿ	
7	ಹೊನ್ನವಳ್ಳಿ	
8	ನಿಟಗಂಟಿ	
9	ಅಮ್ಮನಗಟ್ಟ	
10	ಗೋರವಿಪುರ	
11	ಉದ್ದಿ ಹೊಸಕೆರೆ	
12	ಅಂಕಾಪುರ	
13	ಮಾರಶೆಟ್ಟಿಹಳ್ಳಿ	
14	ಹರೇನಹಳ್ಳಿ	

ಷರತ್ತುಗಳು :—

ಟೆಂಡ ದರಖಾಸ್ತುದಾರನು ತನ್ನ ಸವಾಲ್ ಮಂಜೂರಾದ ಒಂದು ವಾರದ ವಳಗಾಗಿ ಈ ಕೆಳಗೆ ಕಾಣಿಸುವ ಷರತ್ತುಗಳ ಪ್ರಕಾರ ನಡಿಯಲು ಬದ್ಧನಾಗಿ ಛಾಪಾಕಾಗದ ಮುಚ್ಚಳಿಕೆ ಬರಕೊಡಬೇಕು. ಷರತ್ತು ಮೇರೆ ನಡಿಯಲು ಶಿಕ್ಯೂರ್ಟಿಗಾಗಿ 200 ರೂಪಾಯಿಗಳನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಹೆಸರಿನಲ್ಲಿ ಸೇವಿಂಗ್ಸ್ ಬ್ಯಾಂಕಿನಲ್ಲಿ ಡಿಪಾಜಟಿ ಇಟ್ಟುಕೊಳ್ಳಲ್ಪಡುತ್ತೆ.

(a) ಕಡಿಯತಕ್ಕ ಗಿಡಗಳಿಗೆ ಮುಂಚಿತವಾಗಿ ರೇಂಜ್ ಆಫಿಸರು ಗುರ್ತು ಹಾಕಿ ಕೊಡುತ್ತಾರೆ. ಕಡಿಯುವದರಲ್ಲಿ ಒಂದು ಕಂಪಾರ್ಟುಮೆಂಟೆ ಪೂರೈಸಿದ ನಂತರ ಇನ್ನೊಂದು ಕಂಪಾರ್ಟುಮೆಂಟೆ ಈ ಮೇರೆ ಕ್ರಮವಾಗಿ ಕತ್ರಾವಣಿ ಕೆಲಸ ಮಾಡಬೇಕು.

(b) ಕಡಿಯುವದಕ್ಕೆ ಕೊಡ್ಲಿಗಳನ್ನು ಉಪಯೋಗಿಸಕೂಡದು. ಆದರೆ ಸಾಧ್ಯವಾದ ಪುಟ್ಟಗೂ ಮರಗಳನ್ನು ಭೂಮಿ ಮಟ್ಟಕ್ಕೆ ಗರಗಸದಿಂದ ಕೊಯಿದುಕೊಳ್ಳಬೇಕು. ಬೇಕಾದಷ್ಟು ವುದ್ದಕ್ಕೆ ಅಂದರೆ, ಮೂರು ಅಡಿ ವುದ್ದಕ್ಕೆ ಮೀರದೆ ತುಕ್ಕಡೆಗಳನ್ನು ಗರಗಸದಿಂದ ಕೊಯ್ಯಬೇಕು.

(c) ಕಂಪಾರ್ಟ್‌ಮೆಂಟ್ ಲೈನಿನಲ್ಲಿ ಆಗಲಿ ಅಥವಾ ಡಿ॥ ಫಾರೆಸ್ಟ್ ಆಫಿಸರು ಒಪ್ಪುವ ಜಾಗಾದಲ್ಲಿ ಹುಷಾರಿಯಿಂದ ಸವುದೆಯನ್ನು ಬೇರೆಬೇರೆ ವಿಂಗಡಿಸಿ ಸ್ಟ್ಯಾಕ್ ಕಟ್ಟತಕ್ಕದ್ದು. ಸ್ಟ್ಯಾಕಗಳು ಚೌಕ ನೀಳವಾಗಿ ಕಟ್ಟಬೇಕಲ್ಲದೆ ಅಳತೇಲಿ 68 ಸಲೆ ಅಡಿ ಬರುವಂತೆ ಕಟ್ಟಿರಬೇಕು.

(d) ಥಪ್ಪದಲ್ಲಿ ಒಂದುವರೆ ಇಂಚಿಗಿಂತ ಜಾಸ್ತಿ ಇರುವ ಸವುದೆ ತುಂಡುಗಳೆಲ್ಲವನ್ನು ಮಂಜೂರಾದ ದರದಂತೆ ಮೊಬಲಗು ಕೊಟ್ಟು ಸಾಗಿಸಿಕೊಳ್ಳಲು ಕಂಟ್ರಾಕ್ಟರನು ಬದ್ಧನಾಗಿರತಕ್ಕದ್ದು. ಅದರಂತೆ ಕಮ್ಮಿ ಅಳತೆವುಳ್ಳ ಸವುದೆಯು ಬೇಕಾದರೆ ತಾನೆ ಗಾಡಿ ಬೋಜಾ 1ಕ್ಕೆ 8 ಆಣೆ ಮೇರೆ ಕೊಟ್ಟು ತೆಗದುಕೊಳ್ಳತಕ್ಕದ್ದು. ಹಾಗೆ ತೆಗದುಕೊಳ್ಳದಿದ್ದರೆ ಸ್ಥಳದಲ್ಲಿ ಬಿಕರಿಗೆ ಇಳಸಲ್ಪಡುತ್ತೆ.

(e) ಮಂಜೂರಾದ ದರದಮೇರೆ ಸಾಗಿಸಿಕೊಳ್ಳುವ ಎಲ್ಲಾ ಸವುದೆಗೂ ಮೊಬಲಗನ್ನು ಪಾವತಿ ಮಾಡಿ ಸಾಗಿಸಿಕೊಳ್ಳಬೇಕು. ಪ್ಲಾಂಟೇಷನ್ ಹೊರಗೆ ಸಾಗಿಸಿಕೊಳ್ಳುವದಕ್ಕೆ ಮೊದಲೇ ರೇಂಜ್ ಆಫಿಸರಿಂದ ಪ್ಯಾಸಿ ಪಡಿಯಬೇಕು.

(f) ಸೂರ್ಯೋದಯಕ್ಕೆ ಮುಂಚೆ ಸೂರ್ಯಾಸ್ತಮಯ ಆದ ನಂತರ ಸವುದೆ ಸಾಗಿಸಿಕೊಳ್ಳಕೂಡದು.

(g) ಕಂಟ್ರಾಕ್ಟರನು ಈ ಕಂಟ್ರಾಕ್ಟುಮೇರೆ ಕೆಲಸ ಮಾಡುತ್ತಿರುವಾಗ ಅಜೂಬಾಜು ಇರುವ ಜನರ ಸ್ವಂತ ಪ್ಲಾಂಟೇಷನ್‌ಗಳ ಸವುದೆಯನ್ನು ಖರೀದಿಗೆ ತೆಗೆದುಕೊಳ್ಳಕೂಡದು ಅಲ್ಲದೆ ಸರಕಾರ ಪ್ಲಾಂಟೇಷನ್ನಿಗೆ ಲಗತ್ತು ಇರುವ ತನ್ನ ಸ್ವಂತ ಪ್ಲಾಂಟೇಷನ್ ಇದ್ದರೆ ಅದರಲ್ಲಿಯೂ ಕೆಲಸ ನಡಸಕೂಡದು.

(h) ಮೇಲಿನಂತೆ ಬಾಂಡು ಬರಕೊಟ್ಟ ತಾರೀಖು ಲಾಗಾಯತು ಆರು ತಿಂಗಳ ವಳಗಾಗಿ ಕತ್ರಾವಣಿ ಮತ್ತು ಗಾಡಿಗಳ ಮೇಲೆ ಸಾಗಿಸಿಕೊಳ್ಳತಕ್ಕದ್ದೆಲ್ಲ ಪೂರೈಸಬೇಕು.

(i) ಗುರ್ತು ಮಾಡಿಕೊಟ್ಟ ಮರ ಕಡಿಯುವಾಗ ಸಮೀಪದಲ್ಲಿರುವ ಸಂದಲ್ ಅಥವಾ ಇತರ ಮರಕ್ಕೆ ಏನೂ ಇಜಾ ಆಗದಂತೆ ಹುಷಾರಾಗಿ ಇರಬೇಕು. ಹಾಗೆ ಏನಾದರೂ ಅಜೂಬಾಜು ಇರುವ ಬೆಳೆಯತಕ್ಕ ಮರಗಳಿಗೆ ಕಂಟ್ರಾಕ್ಟರನಿಂದಲೆ ಆಗಲಿ ಅಥವಾ ಆತನಕಡೆ ಜನರಿಂದಲೇ ಆಗಲಿ ಮನಃಪೂರ್ವಕವಾಗಿ ಅಥವಾ ಉದಾಶೀನದಿಂದಾಗಲಿ ಇಜಾ ಸಂಭವಿಸಿದರೆ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರು ಗೊತ್ತು ಮಾಡುವಷ್ಟು ನಷ್ಟದ ಮೊಬಲಗನ್ನು ಸರಕಾರಕ್ಕೆ ಕಂಟ್ರಾಕ್ಟರನು ಕೊಡಲು ಬದ್ಧನಾಗಿರುತ್ತಾನೆ.

(j) ಯಾವ ಸಂದರ್ಭದಲ್ಲಿಯೂ ಪ್ಲಾಂಟೇಷನ್‌ನಲ್ಲಿ ಬೆಂಕಿ ಹಚ್ಚಕೂಡದು.

(k) ಕಂಟ್ರಾಕ್ಟರನು ರೈಲುಮೇಲೆ ಸಾಗಿಸುವ ಸವುದೆ ಮೊತ್ತಾ ಅಂದರೆ, ವಾಗಿನ್ ಸಂಖೆ—ಯಲ್ಲಿಗೆ ಸಾಗಿಸತಕ್ಕದ್ದು—ತೂಕಾ ಈ ತಪಸೀಲ್‌ಗಳನ್ನು ಆಗಾಗ್ಯೆ ರೇಂಜ್ ಆಫಿಸರಿಗೆ ರಿಪೋರ್ಟು ಮಾಡುತ್ತಾ ಬರಬೇಕು.

(l) ಕಂಟ್ರಾಕ್ಟರನೆ ಆಗಲಿ ಅವನ ಕಡೆ ಜನರೆ ಆಗಲಿ ಮೇಲೆ ಕಂಡ ಷರತ್ತುಗಳಲ್ಲಿ ಯಾವ ಷರತ್ತಿಗಾದರು ತಪ್ಪಿ ನಡದರೆ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ಶೇರಿಸಿಕೊಳ್ಳುತ್ತೆ. ಅಲ್ಲದೆ 1900ನೆ ಇಸವಿ ಫಾರೆಸ್ಟು ರೂಲ್ಸು 84ನೆ ಸೆಕ್ಷನ್ ಮೇರೆ ಕಂಟ್ರಾಕ್ಟನ್ನೇ ರದ್ದುಮಾಡಿ ಅದುವರಿಗೆ ಶೀನಿರೇಜ್ ಪಾವತಿಮಾಡಿ ಸಾಗಿಸಿಕೊಳ್ಳದೆ ಬಿಟ್ಟಿರುವ ಎಲ್ಲಾ ಸವುದೆಯು ಸರಕಾರಕ್ಕೆ ಶೇರಿಹೋಗುತ್ತೆ.

ಬಿ. ಹಿರಾಸಿಂಗ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ತುಮಕೂರು ಡಿಸ್ಟ್ರಿಕ್ಟು.

ತಾರೀಖು 22ನೆ ಆಗಸ್ಟು 1903.

ಇದರಿಂದ ಸಮಸ್ತಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಇದರಡೀ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿ[illegible] ಅಮೃತ ಮಹಲ್ ಮತ್ತು ಪಬ್ಲಿಕ್ ಕ್ಯಾಟ್ಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗ[illegible]ಲ್ಲಿಯೂ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1903ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1904ನೆ ಇಸವಿ ಸೆಪ್ಟಂಬರ್ 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು. ಈ ಡಿಸ್ಟ್ರಿಕ್ಟು ಫಾರೆಸ್ಟುಗಳಿಗೆ ಫಾರೆಸ್ಟು ಪ್ಲಾಂಟೇಷನ್‌ಗಳು ಶೇರಿಯಿಲ್ಲ :—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫಿಸರು.
ಯಡತೊರೆ	10—9—1903	ಆಯಾಯಾ ತಾಲ್ಲೂಕು ಹೆಡ್ಕ್ವಾರ್ಟರ್‌ನಲ್ಲಿರತಕ್ಕ ತಾಲ್ಲೂಕು ಕಚೇರಿಯಲ್ಲಿ.	ಆಯಾಯ ತಾಲ್ಲೂಕು ಅಮಲ್ದಾರ್ರವರು ಮತ್ತು ಫಾರೆಸ್ಟು ರೇಂಜಾಫಿಸರವರು.
ಹುಣಸೂರು	12—9—1903		
ಹೆಗ್ಗಡದೇವನಕೋಟೆ	15—9—1903		
ಗುಂಡ್ಲುಪೇಟೆ	18—9—1903		
ಚಾಮರಾಜನಗರ	23—9—1903		
ನಂಜನಗೂಡು	24—9—1903		
ಟಿ. ನರಸೀಪುರ	25—9—1903		
ಮೈಸೂರು	24—9—1903		
ಮಳವಳ್ಳಿ	10—9—1903		
ಮಂಡ್ಯ	12—9—1903		
ಶ್ರೀರಂಗಪಟ್ಟಣ	15—9—1903		
ನಾಗಮಂಗಲ	18—9—1903		
ಕೃಷ್ಣರಾಜಪೇಟೆ	24—9—1903		

ಹುಟ್ಟುವಳಿ ತಪಸೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡು ಅರಶಿನ, 6. ಜೇನುಮೇಣ, 7. ಜೇನುತುಪ್ಪ, 8. ಕಟಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಹಾಲುಮಡ್ಡಿ, 13. ಚಗ

ಚೇಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ಸಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಜೇಲದ ಹಣ್ಣು, 20. ಅರಗು, (ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ತಾಲ್ಲೂಕುಗಳದು ವಿನಹ) 21. ಶೀತಾಫಲದಹಣ್ಣು, 22. ಬೆಂಡೆನಾರು; ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಶೇರಿಯಿಲ್ಲಾ:—

ಹುಣಸೂರು, ಹೆಗ್ಗಡದೇವನಕೋಟೆ, ಗುಂಡ್ಲು, ನಂಜನಗೂಡು ಮತ್ತು ಚಾಮರಾಜನಗರ ತಾಲ್ಲೂಕುಗಳು.

ನಾಗಮಂಗಲದ ತಾಲ್ಲೂಕು ಬಾಬತು:—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡನಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು:—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಡನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು:—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8. ಮಾದಿಗರ ಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಹಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಚಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡಲೆ ಇಜಾರೆ ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ನೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1903ನೆ ಅಕ್ಟೋಬರ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ಉಳಿದ ಮೊಬಲಗನ್ನು ಮತ್ತು ಕಂಟ್ರಾಕ್ಟು ಮೊಬಲಗಿನಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ ಮೊಬಲಗನ್ನು ಸಹ ಮೂರು ಸಮವಾದ ಖಿಸ್ತುಗಳಲ್ಲಿ ಅಂದರೆ:—

1903ನೆ ಇಸವಿ ಡಿಸೆಂಬರ 31ನೆ ತಾರೀಖು.

1904ನೆ ಇಸವಿ ಮಾರ್ಚಿ 31ನೆ ತಾರೀಖು.

1904ನೆ ಇಸವಿ ಜೂನ್ 1ನೆ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವ ಒಂದು ಖಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾಫಿಲ್ ಮಾಡಿದರೂ 1904ನೆ ಜೂನ್ ಆಖೈರ ವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪಾಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಮತ್ತು ಜಾಮೀನ್‌ದಾರನು ಸಹ ಆದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ ಫಾರೆಸ್ಟು ಆಫಿಸರ, ಮೈಸೂರು ಡಿಸ್ಟ್ರಿಕ್ಟ.

1903ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನ IIನೇ ಭಾಗದ 459ನೆ ಪುಟದಲ್ಲಿ ತಂಗಡಿ ಮತ್ತು ಕಕ್ಕೆ ಚೆಕ್ಕೆ ಹರಾಜು ವಿಷಯದಲ್ಲಿ ಘಾಯಿಷಾಗಿ ಇರುವ ನೋಟಿಫಿಕೇಷನನ್ನು ಎಲ್ಲರೂ ನೋಡತಕ್ಕದ್ದು.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ, ಹಾಸನದ ಡಿಸ್ಟ್ರಿಕ್ಟ.

ತಂಗಡಿ ಚಕ್ಕೆ.

ಇಸ್ತಿಹಾರು, ತಾರೀಖು 7ನೆ ಆಗಸ್ಟು 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ಸರ್ಕಾರಿ ಜಮೀನ್ನಲ್ಲು, ಮತ್ತು ಪ್ಲಾನ್‌ಟೇಷನ್‌ಗಳಲ್ಲೂ ಮತ್ತು ಸ್ಟೇಟ ಫಾರೆಸ್ಟುಗಳಲ್ಲಿಯೂ ಇರತಕ್ಕ, ತಂಗಡಿ ಚಕ್ಕೆಯನ್ನು 1903ನೆ ಇಸವಿ ಅಕ್ಟೋಬರ ಗುರ್ರೇ ಲಾಗಾಯತು 1905ನೆ ಇಸವಿ ಜೂನ್ 30ರ ವರಿಗೆ ಇಪ್ಪತ್ತೊಂದು ತಿಂಗಳು

ಕಾಲದಲ್ಲಿ ರೂಢಿಶಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1903ನೆ ಇಸವಿ ಸೆಪ್ಟಂಬರ 10 ಹತ್ತನೇ ತಾರೀಖಿನ ವರಿಗೆ ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು :—

ನಂಬರ.	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟಿನ ಹೆಸರು.	ಷರಾ.
1	ಹರಿಹರದ ಸಬ್ ತಾಲ್ಲೂಕು.	ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮಿನುಗಳಲ್ಲಿನ ಫಸಲು ಈ ಹರಾಜಿಗೆ ಶೇರಿರುವದಿಲ್ಲ.
2	ಜಗಲೂರು ತಾಲ್ಲೂಕು.	
3	ಚಳ್ಳಕೆರೆ ಡಿಟೋ	
4	ಚಿತ್ರದುರ್ಗ ಡಿಟೋ	
5	ಮಲೇಬೆನ್ನೂರು ಸ್ಟೇಟ್ ಫಾರೆಸ್ಟು.	
6	ನೀರಥಡಿ ಡಿಟೋ	
7	ಜೋಗೀಮಟ್ಟಿ ಡಿಟೋ	

(2) ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿಒಂದು ದರಖಾಸ್ತಿನೊಡನೆ (200) ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ ಮತ್ತು ಇನ್‌ಷೂರ್ ಮಾಡಿ ಲಿಫಾಫೆ ಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರದು ಚಿತ್ರದುರ್ಗ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ ಸಾಹೇಬರವರು ಬದ್ಧರಾಗಿರುವದಿಲ್ಲಾ ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನು ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಚಿತ್ರದುರ್ಗ ಡಿಸ್ಟ್ರಿಕ್ಟ ಆಫೀಸಿನಲ್ಲಿ 1903ನೆ ಇಸವಿ ಸೆಪ್ಟಂಬರ 12ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಮತ್ತು ಡೆಪ್ಯುಟಿ ಕಮಿಷನರ ಸಾಹೇಬರವರು ಅಥವಾ ಇವರಿಂದ ನಿಯಮಿಸಲ್ಪಟ್ಟ ಅಸಿಸ್ಟೆಂಟ ಕಮಿಷನರ ಸಾಹೇಬರವರು ಸೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತು ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ವಾಪಸ ಮಾಡಲ್ಪಡುವದು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ಠೇವಣಿ ಮೊಬಲಗು ಶೇರಿ ಅರ್ಧ ಭಾಗವನ್ನು "ಮತ್ತು ಇದರ ಮೇಲೆ" ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಯೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ವುಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ತಮಿಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ ಮಾಡಲು ಡೆಪ್ಯುಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ ಸಹಾ ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತೀ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಯೆ ಸರಿಯಾದ ಖಾತರೀಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜಪ್ತಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾಧೀತು.

1ನೆ ಖಿಸ್ತು	...	....	31ನೆ ಜನವರಿ 1904.
2ನೆ ಖಿಸ್ತು	...	....	31ನೆ ಮೇ 1904.
3ನೆ ಖಿಸ್ತು	...	....	30ನೆ ಸೆಪ್ಟಂಬರ 1904.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕಿಮಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜವಾವಣಿ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನನೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆಯನ್ನು ವರ್ಗಮಾಡಿ ಕೊಡಕೂಡದು.

(IV) ತೊಗಟೆ ತೆಗೆದನಂತರಾ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸೌದೆಯೂ ಇಜಾರೆದಾರನಿಗೆ ಶೇರಿದ್ದಾಗಿರುತ್ತೆ.

(V) ಇಜಾರೇ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ ದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಚಕ್ಕೆಗೂ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರ್ರವರಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪ್ಯಾಸ್ ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷನ್ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇಬಾಳುವ ಫಾರೆಸ್ಟಿಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1905ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜವಾವಣೀ ಮಾಡಿ ದಾಸ್ತಾನು ಮಾಡಿರುವ ಎಲ್ಲಾ ಚಕ್ಕೆಯನ್ನು ಚಿತ್ರದುರ್ಗ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜವಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರು (1,000) ರೂಪಾಯಿವರಿಗೂ ಜುರ್ಮಾನೆಯನ್ನು ಸಹಾ ವಿಧಿಸಬಹುದು.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಚಿತ್ರದುರ್ಗದ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಅಬಸ್ಟ್ರಾಕ್ಟ್.

ಇಸ್ತಿಹಾರನಾಮೆ, ತಾರೀಖು 1ನೆ ಆಗಸ್ಟು 1903ನೆ ಇಸವಿ.

ಕೋಲಾರ ತಾಲ್ಲೂಕು ಕಸಬಾ ಹೋಬಳಿ ಜೋಡಿ ಕೋಡಿರಾಮಸಂದ್ರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿ ಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1903ನೆ ಇಸವಿ ಸೆಪಟಂಬರು ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

(ಹೆಚ್ಚು ತಪಶೀಲ್ ಬಗ್ಯೆ 13ನೆ ಮಾರ್ಕುಂ 32ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 447ನೆ ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್.

ತಾರೀಖು 30ನೆ ಜುಲೈ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಶಿವಮೊಗ್ಗ ಡಿಸ್ಟ್ರಿಕ್ಟು ಶಿವಮೊಗ್ಗ ತಾಲ್ಲೂಕು ಜೋಡಿ ಭಂಡಾರಿಹಳ್ಳಿ ಗ್ರಾಮವು ಕಂದಾಯದ ಬಾಕಿಗಾಗಿ 1903ನೆ ಸೆಪ್ಟಂಬರ 10ನೆ ತಾರೀಖಿನಲ್ಲಿ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಈ ವಿಷಯದಲ್ಲಿ ತಪಸೀಲು ಇಸ್ತಿಹಾರ 1903ನೆ ಇಸವಿ ಆಗಸ್ಟ ತಿಂಗಳು 13ನೆ ಮಾರ್ಕುಂ 32ನೆ ನಂಬರ್ ಮೈಸೂರು ಗೆಜೆಟ್ ಎರಡನೇ ಭಾಗದ 450ನೆ ಪೇಜಿನಲ್ಲಿ ಛಾಯಿಷಾಗಿ ಇದೆ.

ಕೆ. ಪಿ. ಪುಟ್ಟಣ್ಣ ಶೆಟ್ಟಿ,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸ್ 1903—1904ನೆ ಇಸವಿ ಅರ್ಜೀ ನಂಬರ್ 63.

ಮೃತಪಟ್ಟ ಎ. ಬಿ. ನರಸಿಹ್ಮಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕುಂಚಿಗರ ಪ್ಯಾಟೆಲಿರುವ ವಿ. ಎ. ಕೇಶವಾಚಾರ್ರು, ಮೃತಪಟ್ಟ ಸದರೀ ಎ. ಬಿ. ನರಸಿಹ್ಮಯ್ಯಂಗಾರ್ರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಎ. ಬಿ. ನರಸಿಹ್ಮಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ನಂಬರ್ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವಿ. ಎ. ಕೇಶವಾಚಾರ್ರ ಅರ್ಜಿಯನ್ನು ಸ್ 1903ನೆ ಇಸವಿ ಸೆಪಟಂಬರು ತಿಂಗಳು ತಾರೀಖು 16ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎ. ಬಿ. ನರಸಿಹ್ಮಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೆ ಇಸವಿ ಆಗಸ್ಟು ತಿಂಗಳು 18ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗಾ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸ್ 1903—1904ನೆ ಇಸವಿ ವಿ॥ ಅರ್ಜೀ ನಂಬರು 44.

ಮೃತಪಟ್ಟ ಹೊನ್ನಾಳಿಯಲ್ಲಿದ್ದ ಸವುದಾಘರ ಜಿಗರೇಖಾ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಸವುದಾಘರ ಖಾದ್ರಖಾ ಈತನ ತಮ್ಮ ಮಾಸುಂಖಾ ಮೈನರ್ ಬಿ॥ ಸವುದಾಘರ ಜಿಗರೇಖಾ, ಗಾರ್ಡಿಯನ್ ಸವುದಾಘರ ಅಪರಂಜೀ ರಸೂಲ್‌ಖಾ ವಲ್ಲದ ಬುಡ್ಡಾಖಾ ಹೊನ್ನಾಳಿ ವಾಸಸ್ಥರು, ಮೃತಪಟ್ಟ ಸದರೀ ಸವುದಾಘರ ಜಿಗರೇಖಾ ಇವರಿಗೆ 1—2ನೆ ಯವರು ಖಾಸಾ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊನ್ನಾಳಿ ಸ್ಥಳದ 1ನೆ ಸವುದಾಘರ ಖಾದರಖಾ, 2ನೆ ಮಾಸುಂಖಾ, ಮೈನರ್, ಗಾ॥ ಸೋದರಮಾವ ಅಪರಂಜೀ ರಸೂಲ್‌ಖಾ, ಹೊನ್ನಾಳಿ ವಾಸಸ್ಥರಾಗಿ ಮೃತಪಟ್ಟ ಜಿಗರೇಖಾ ಎಂಬವರ ಜಿಂದಗಿ ಬಗ್ಯಾಗಿ ಬರತಕ್ಕ 93—15—6 ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸವುದಾಘರ ಖಾದರಖಾ, 2ನೆ ಡಿಟೋ ಮಾಸುಂಖಾ, ಮೈನರ್, ಗಾ॥ ಸೋದರಮಾವನಾದ ಅಪರಂಜೀ ರಸೂಲ್‌ಖಾ ವಲ್ಲದ ಬುಡ್ಡಾಸಾಬಿ ಎಂಬವರ ಅರ್ಜಿಯನ್ನು ಸ್ 1903ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜಿಗರೇಖಾರವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೆ ಇಸವಿ ಆಗಸ್ಟ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸ್ 1903—1904ನೆ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಹೊನ್ನಾಳಿ ವಾಸಸ್ಥರಾದ ಅಪರಂಜೀ ಖಲಂದರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹೊನ್ನಾಳಿವಾಸಿಯಾದ ಅಪರಂಜೀ ಬುಡ್ಡಾಸಾಬರ ಮಗ ರಸೂಲ್‌ಖಾ ಎಂಬವರು, ಮೃತಪಟ್ಟ ಸದರೀ ಅಪರಂಜೀ ಖಲಂದರಖಾಯವರಿಗೆ ಅಂಣನು ಆಗಬೇಕೆಂಬ ಹಕ್ಕು ದಾರಿ ಮೇಲೆ ಹೊನ್ನಾಳಿ ಸ್ಥಳದ ಅಪರಂಜೀ ರಸೂಲ್‌ಖಾ ಎಂಬವರು ಮೃತಪಟ್ಟ ಅಪರಂಜೀ ಖಲಂದರಖಾ ಎಂಬವರ ಜಿಂದಗಿ ಬಗ್ಯಾಗಿ ಬರತಕ್ಕ 25—14—0 ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಸೂಲ್‌ಖಾ ಎಂಬವರ ಅರ್ಜಿಯನ್ನು ಸ್ 1903ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಖಲಂದರಖಾ ಎಂಬವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೆ ಇಸವಿ ಆಗಸ್ಟ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್, ಶಿರಸ್ತೆದಾರ್.

ನೋಟಿಸ್.

ನಂಜನಗೂಡು ಮುನ್ಸಿಫ್ ಕೋರ್ಟಿನಲ್ಲಿ.

ಬ ತಾರೀಖು 18ನೆ ಆಗಸ್ಟ್ 1903ನೆ ಇಸವಿ.

1902—03ನೆ ಇಸವಿ ಶಿವಲ್ ನಂಬರು 114.

ವಾದಿ.	ಪ್ರತಿವಾದಿ.
ಎಳಂದೂರು ತಾಲ್ಲೂಕು ಜೋಡೀ ಗುಂಭಳ್ಳಿಯಲ್ಲಿರುವ ಆ ಗ್ರಾಮದ ಏಜಂಟ್ ನರಸಿಹ್ಮ ಉಪಾಧ್ಯರು.	ಯಳಂದೂರು ತಾಲ್ಲೂಕು ಗುಂಭಳ್ಳಿಯಲ್ಲಿರುವ ವೀರತ್ತಗಾಡನ ಪುಟ್ಟಮಾದೇಗೌಡ.

ಇದರಿಂದ ಜೋಡೀ ಗುಂಭಳ್ಳಿ ಗ್ರಾಮದ ಜೋಡೀದಾರರಾದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಪ್ರತಿವಾದಿ ಪುಟ್ಟಮಾದೇಗೌಡ ಜೋಡೀ ಗುಂಭಳ್ಳಿ ಗ್ರಾಮಕ್ಕೆ ಸೇರಿದ 167ನೆ ನಂಬರು ಪ್ರದೇಶದಲ್ಲಿ ಪ್ರತಿವಾದಿಯು ಸಾಮಾನಿಗೆ ಉಪಯೋಗವಾ

ಗತಕ್ಕ ನಾಲ್ಕು ಗಾಡೀ ಕಗ್ಗಲೀ ಮರಗಳನ್ನು 21—10—1901ರಲ್ಲಿ ಅಕ್ರಮವಾಗಿ ಕತರಾಯಿಸಿ 5—11—1901ರಲ್ಲು ಅವುಗಳನ್ನು ಸಾಗಿಸಿಕೊಂಡು ಹೋಗಿ ಇಧಾನೆಂತಲೂ—ಇದಕ್ಕಾಗಿ ಡ್ಯಾಮೇಜು (20) ರೂಪಾಯಿಗಳೂ ಖರ್ಚೂ ಸಹಾ ಬರಬೇಕೆಂತಲೂ—ಮೇಲ್ಕಂಡ ಏಜಂಟ್ ನರಸಿಹ್ಮೋಪಾಧ್ಯಾಯರು ದಾವಾ ಮಾಡಿಧಾರೆ. ಸದರೀ ಜೋಡಿ ಗುಂಭಳ್ಳಿ ಗ್ರಾಮಕ್ಕೆ ಇನಾಂದಾರರಾಗಿ ಹಕ್ಕು ಬಾಧ್ಯತೆ ಇರತಕ್ಕ ಸಮಸ್ತರೂ 1903ನೆ ಇಸವಿ ಅಕ್ಟೋಬರು 12ನೆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂಬ್ ಹಾಜರಾಗಿ ಈ ಮೊಕದ್ದಮಾಕ್ಕೆ ಕಕ್ಷಿಗಾರರಾಗಿ ಶೇರಬಹುದು.

ಕೆ. ಲಕ್ಷ್ಮೀನಾರಣಯ್ಯ,
ಮುನ್ಸೀಫ್.

ಮೈಸೂರು ಸಿಟಿ ಮ್ಯುನಿಸಿಪ್ಯಾಲಿಟಿ.

ತಾರೀಖು 20ನೆ ಮಾಹೆ ಆಗಸ್ಟು 1903ನೆ ಇಸವಿ.

ಎಲೆಕ್ಷನಲ್ಲಿ ಮ್ಯುನಿಸಿಪಲ್ ಕಮಿಷನರುಗಳನ್ನ ಚುನಾಯಿಸಲು ಅರ್ಹತೆವುಳ್ಳ ದೊಡ್ಡ ಮನುಷ್ಯರುಗಳ ಲಿಸ್ಟು.

ನಂಬರು.	ಹೆಸರು.	ಡೋರ ನಂಬರು.	ವಾಸಸ್ಥಳ.
	ಕಿಲ್ಲೆ ಮೊಹಲ್ಲಾ.		
1	ಮ|| ಶ್ರೀ|| ಲಕ್ಷ್ಮೀನಾರಣಪ್ಪನವರು ..	425	ತ್ರಿನೇಶ್ವರಸ್ವಾಮಿ ದೇವಸ್ಥಾನದ ಬೀದಿ
	ನಜರುಬಾದು ಮೊಹಲ್ಲಾ.		
1	ಮ|| ಶ್ರೀ|| ಕೆ. ರಾಮಕೃಷ್ಣಯ್ಯನವರು ...	739	ಇಟ್ಟಿಗೆಗೂಡು
	ಲಷ್ಕರು ಮೊಹಲ್ಲಾ.		
1	ಮ|| ಶ್ರೀ|| ಎಂ. ಕೃಷ್ಣರಾಯರು, ಬಿ. ಎ. ...	18	ದೊಡ್ಡ ಬೀದಿ
2	,, ಬಿ. ವಿ. ಕೃಷ್ಣಮೂರ್ತಿ ರಾಯರು, ಬಿ. ಎ. & ಬಿ. ಎಲ್. ..	2890	ಹಳ್ಳದ ಕೇರಿ
	ಮಂಡಿ ಮೊಹಲ್ಲಾ.		
1	ಮ|| ಶ್ರೀ|| ಬಿ. ಶ್ರೀನಿವಾಸಯ್ಯಂಗಾರ್ಯರು, ಬಿ. ಎ. & ಬಿ. ಎಲ್. ...	290	ಕಾಳಮ್ಮನ ಗುಡಿ ಬೀದಿ
	ದೇವರಾಜ ಮೊಹಲ್ಲಾ.		
1	ಮ|| ಶ್ರೀ|| ಎಂ. ಎಚ್. ರಂಗಯ್ಯಂಗಾರ್ಯರು	1665	ಕೃಷ್ಣವಿಳಾಸ ಅಗ್ರಹಾರ
2	,, ಎಂ. ಎಸ್. ಸುಬ್ರಹ್ಮಣ್ಯಯ್ಯರು, ಬಿ. ಎ.	425	ಇಲವಾಲದ ರಸ್ತೆ
3	,, ಎಂ. ನರಸಪ್ಪಯ್ಯನವರು, ಬಿ. ಎ. & ಬಿ. ಎಲ್. ..	1942	ಸಂತೇಪೇಟೆ
4	,, ಎಸ್. ಕೃಷ್ಣರಾಯರು, ಬಿ. ಎ. ...	..	ಲಕ್ಷ್ಮೀವಿಳಾಸ ಅಗ್ರಹಾರ
5	,, ಬಿ. ವೆಂಕೋಬರಾಯರು ...	1411	ಭೀಮೈಯ್ಯನ ಗಲ್ಲಿ
	ಚಾಮರಾಜ ಮೊಹಲ್ಲಾ.		
1	ಮ|| ಶ್ರೀ|| ಬಿ. ರಂಗಯ್ಯಂಗಾರ್ಯರು, ಬಿ. ಎ. & ಬಿ. ಎಲ್. ...	327	ವೈಸ್ರಾಯಿ ರಸ್ತೆ
	ಕೃಷ್ಣರಾಜ ಮೊಹಲ್ಲಾ.		
1	ಮ|| ಶ್ರೀ|| ಸಿ. ನರಸಿಂಹಯ್ಯನವರು, ಬಿ. ಎ. & ಬಿ. ಎಲ್. ...	262	ರಮಾವಿಳಾಸ ಅಗ್ರಹಾರ

ತಾರೀಖು 20ನೆ ಮಾಹೆ ಆಗಸ್ಟು 1903.

ಎಲೆಕ್ಷನಲ್ಲಿ ಮ್ಯುನಿಸಿಪಲ್ ಕಮಿಷನರು ಆಗಲು ಅರ್ಹತೆವುಳ್ಳ ದೊಡ್ಡ ಮನುಷ್ಯರುಗಳ ಲಿಸ್ಟು.

ನಂಬರು.	ಹೆಸರು.	ಡೋರು ನಂಬರು.	ವಾಸಸ್ಥಳ.
	ದೇವರಾಜ ಮೊಹಲ್ಲಾ.		
1	ಮ|| ಶ್ರೀ|| ಎಂ. ಎಚ್. ರಂಗಯ್ಯಂಗಾರ್ಯರು	1665	ಕೃಷ್ಣವಿಳಾಸ ಅಗ್ರಹಾರ

ಕೆ. ಶ್ರೀನಿವಾಸರಾವ್,
ಫಾರ್ ಪ್ರೆಸಿಡೆಂಟ್.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಬಿಷ್ ಆದ್ದು. [ನಂ. 35.

ಬೆಂಗಳೂರು, ಗುರುವಾರ, ಸೆಪ್ಟೆಂಬರ ತಾ|| 3, ಸನ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು—1. ತಾರೀಖು 18ನೆ ಆಗಸ್ಟ್ 1903ನೆ ಇಸವಿ.

ಇನಾಂದಾರ್ರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ದೇವನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್‌ಡೀಡ್ ಯಾನೆ ಖಾಯಂ ಪಟ್ಟೆಗಳು (1479) ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷ್ನರ ಸಾಹೇಬರವರ ಬಳಿಗೆ ಬಟವಾಡೆ ಬಗ್ಗೆ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ, ಪ್ರತ್ಯೇಕ, ನೋಟೀಸುಗಳು ಬಂದಮೇಲೆ ಅವುಗಳನ್ನು (ಪಟ್ಟೆಗಳನ್ನು) ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರ್ರುಗಳು ಐರ್ಜಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,

ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.

ಫಾರೆಸ್ಟ್ ಇಲಾಖಾ.

ನೋಟಿಸ್.

ತಾರೀಖು 22ನೆ ಆಗಸ್ಟು 1903ನೆ ಇಸವಿ.

1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ—ಈ ಕೆಳಗೆ ನಮೂದಿಸಿರುವ ತೊಲೆಗಳು ಕಪಿಲಾನದಿ ನೀರಿನ ಕೆಳೆಯಿಂದ ಹೊಡೆದುಕೊಂಡು ಬಂದು ಹಾಲಿ ನಂಜನಗೂಡು ಡಿಪೋದಲ್ಲಿ ಇರುವದು. ಇದರ ಹಕ್ಕುದಾರ್ರು ಯಾರಾದರೂ ಇದ್ದಲ್ಲಿ ಸದರಿ ತೊಲೆಗಳ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟ್‌ಮೆಂಟನ್ನು ಈ ಲಾಗಾಯಿತು ಒಂದು ತಿಂಗಳ ವೊಳಗಾಗಿ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರು ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ತೊಲೆಗಳ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರ್ಕಾರಕ್ಕೆ ವಶಪಡಿಸಿಕೊಳ್ಳುವದು.

ಸದರಿ ತೊಲೆಗಳನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆದಾರಿ ಮತ್ತು ಭದ್ರಪಡಿಸಿದ್ದಕ್ಕೆ ತಗಲಿದ ಖರ್ಚುವನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ:—

ನಂಬರು.	ತೊಲೆ ವಿವರ.	ಗುರ್ತು.	ಲಾಂಬಿ.		ಸುತ್ತು.		ಸಲೆ ಅಡಿ.
			ಅಡಿ.	ಅಂ.	ಅಡಿ.	ಅಂ.	
1	ಸಾಗುವಾನಿ ತೊಲೆ ...	3 ಭಾಗದಲ್ಲಿ ಸೋಲ್ಡ್ ಎಂದು ಇದೆ. V ಗುರ್ತು ಇದೆ.	13	5	6	..	30

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

1903ನೆ ಇಸವಿ ಆಗಸ್ಟು ತಿಂಗಳು 20ನೆ ತಾರೀಖಿನ IIನೇ ಭಾಗದ 459ನೆ ಪುಟದಲ್ಲಿ ತಂಗಡಿ ಮತ್ತು ಕಕ್ಕೆ ಚೆಕ್ಕೆ ಹರಾಜು ವಿಷಯದಲ್ಲಿ ಥಾಯಿಪಾಗಿ ಇರುವ ನೋಟಿಫಿಕೇಷನನ್ನು ಎಲ್ಲರೂ ನೋಡತಕ್ಕದ್ದು.

ವೈ. ಶೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನದ ಡಿಸ್ಟ್ರಿಕ್ಟ್.

ಕಡೂರು ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ಸನ 1903ನೆ ಇಸವಿ ಜುಲೈ ತಾರೀಖು.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—1903ನೆ ಇಸವಿ ಅಕ್ಟೋಬರ ಗುರ್ರೆ ಲಾಗಾಯಿತು 1904ನೆ ಇಸವಿ ಜೂನ್ ಆಖೈರುವರಿಗೆ 9 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಇದರಡೀ ಕಾಣಿಶಿರುವ ಟೋಲ್ ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಆವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ:—

ನಂಬರು.	ಟೋಲುಗೇಟು ಹೆಸರು.	ಹರಾಜ್ ತಾರೀಖು.	ಹರಾಜು ನಡಿಸುವ ಸ್ಥಳ.
1	ಕೊಟ್ಟಿಗೆಹಾರ (ಬೂಂದುಘಾಟ್)	7ನೆ ಸೆಪಟಂಬರ 1903	ಮೂಡಿಗೆರೆ ತಾಲ್ಲೂಕು ಕಚೇರಿಯಲ್ಲಿ
2	ಬಾಳೆಹೊನ್ನೂರು (ಭದ್ರಾನದೀಸೇತುವೆ)	10ನೆ ಸೆಪಟಂಬರ 1903	ಬಾಳೆಹೊನ್ನೂರು ಮುಸಾಫರ ಬಂಗಲೆಯಲ್ಲಿ
3	ತಡಸ (ಭದ್ರಾನದಿ ಸೇತುವೆ)	7ನೆ ಸೆಪಟಂಬರ 1903	ಎಡೇಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ
4	ಹರಿಹರಪುರ (ತುಂಗಾನದೀ ಸೇತುವೆ)	10ನೆ ಸೆಪಟಂಬರ 1903	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ

2. ಎಲ್ಲಾ ಸವಾಲುಗಳಿಗಿಂತಲೂ ಜಾಸ್ತಿಯಾದ ಚಡದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗೌರ್ನಮೆಂಟ ಮಂಜೂರಿಗೆ ಒಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾವ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಶಿಕೊಂಡಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಾದ ಕೂಡಲೇ ಹರಾಜು ಮೊಬಲಗಿನ ಪೈಕಿ ಮೂರನೇ ಒಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಷರಾ ಬರಿಯಲ್ಪಟ್ಟ ಗೌರ್ನಮೆಂಟ ಆಫ್ ಇಂಡಿಯಾ ಪ್ರೋನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಒಂದರ ಒಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ ಸೆಸ್ಸು ಸಹಾ ಕೊಡಬೇಕು. ಗೌರ್ನಮೆಂಟಿನಿಂದ ಹರಾಜು ಮಂಜೂರಾಗಿ ಬಂದ ಕೂಡಲೇ ಬಾಕಿ ಮೊಬಲಗನ್ನು ಲೋಕಲ ಸೆಸ್ಸಿನಿಶಿ ಸದರ ಟೋಲುಗೇಟು ಯಾವ ತಾಲ್ಲೂಕಿನಲ್ಲಿ ಇದೆಯೋ ಆ ತಾಲ್ಲೂಕು ಖಜಾನೆಗೆ 1903ನೆ ನವಂಬರು ತಾರೀಖು 10ರ ಲಾಗಾಯಿತು ಸಮನಾದ ಆರು ಖಿಸ್ತುಗಳಾಗಿ ಪ್ರತಿ ತಿಂಗಳ 10ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು 7—8 ಮತ್ತು 9ನೆ ಖಿಸ್ತುಗಳಿಗೆ ಜಮಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮಾಹೆವಾರ ಖಿಸ್ತು ಮೊಬಲಗನ್ನು ತಪ್ಪದೆ ಕೊಡುತ್ತಾ ಬರುವದಕ್ಕೆ ಇಬ್ಬರನ್ನು ಜಾಮೀನ ಕೊಡಬೇಕು. ಮತ್ತು ಹರಾಜು ಮಂಜೂರಿ ಸಂಗತಿ ತಿಳಿದ ತಾರೀಖು ಲಾಗಾಯಿತ್ತು ಮೂರು ದಿವಸದೊಳಗೆ ಅವಶ್ಯಕವಿರುವ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದೇ ಇದ್ದರೆ ಅಥವಾ ಜಾಮೀನ ಕೊಡದೆ ಇದ್ದರೆ ಡಿಪಾಜಿಟ ಮೊಬಲಗು ದಂಡವಾಗಿ ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಸದರಿ ಕಂಟ್ರಾಕ್ಟು ಎರಡನೇ ಹರಾಜು ಮಾಡಲ್ಪಡುವದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ಲುಕ್ಸಾನು ಸಂಭವಿಸಿದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನುದಾರರ ಜೆಂದಿಗೆ ಹರಾಜು ಮಾಡಿಶಿ ವಸೂಲ ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹೆಯಲ್ಲಿಯೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದ್ದರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ಮೇರೆ ಬಡ್ಡಿ ಸೇರಿಶಿ ಖಿಸ್ತು ಮೊಬಲಗು ವಸೂಲ ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಹಿಡಿಯುವ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲಸೆಸ್ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನದಾರ್ರಿಂದ ಬಾಕಿ ಮೊಬಲಗು ಬಾರದೆ ಇದ್ದಲ್ಲಿ ಲ್ಯಾಂಡ ರವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯಲ್ಲಿರುವ ನಿಬಂಧನೆ ಅನುಸರಿಸಿ ವಸೂಲು ಮಾಡಲ್ಪಡುತ್ತೆ.

7. ಪ್ರತಿ ದಿವಸದ ಟೋಲು ವಸೂಲಿ ತೋರಿಸುವ ಲೆಖ್ಖವನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲೆಖ್ಖವು ಡೆಪ್ಯುಟಿ ಕಮಿಷನರ ಅಸಿಸ್ಟೆಂಟ ಕಮಿಷನರ ಮತ್ತು ಸದರಿ ಟೋಲು ಯಾವ ತಾಲ್ಲೂಕು ಅಥವಾ ಸಬ ತಾಲ್ಲೂಕಿನಲ್ಲಿದೆಯೋ ಆಯಾ ತಾಲ್ಲೂಕು ಅಮಲ್ದಾರ್ರು ಅಥವಾ ಸಬ ತಾಲ್ಲೂಕು ಅಮಲ್ದಾರ ಡೆಪ್ಯುಟಿ ಅಮಲ್ದಾರ್ರು ತನಿಖೆಗೆ ಒಳಗಾಗಿರತಕ್ಕದ್ದು.

8. ಕಂಟ್ರಾಕ್ಟರು ಇದರಡಿ ಕಾಣಿಶಿರುವ ಷೆಡ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದೆ ಅನ್ಯಥಾ ಟೋಲು ಸುಂಕವನ್ನು ವಸೂಲ ಮಾಡಕೂಡದು. ಹಾಗೆ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದು ಮಾಡುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ ತರ್ಫೆ ಪ್ರಾಸಿಕ್ಯೂಷನಗೆ ಗುರಿಪಡಿಸುತ್ತೆ.

9. ದಂಡು—ಮಿಲಿಟೆರಿ ಸಾಮಾನು ಅಥವಾ ಸರಕಾರ ಡ್ಯೂಟಿ ಮೇಲೆ ಪ್ರಯಾಣ ಮಾಡುವ ಪೊಲೀಸು ಯಾ ಇತರ ಉದ್ಯೋಗಸ್ಥರು ಸರ್ಕಾರದ ಸಾಮಾನುಗಳು ಅಂದರೆ ಸಮ್ಮಂಧಪಟ್ಟ ಇಲಾಖಾ ಮೊಖ್ತೆಸರರ ಸರಟಫಿಕೇಟಿನಿಶಿ ಬರತಕ್ಕ ಸಾಮಾನುಗಳು ಇವುಗಳ ಮೇಲೆ ಕಂಟ್ರಾಕ್ಟುದಾರನು ಸುಂಕ ವಸೂಲ ಮಾಡಕೂಡದು.

10. ಕಂಟ್ರಾಕ್ಟುದಾರನು ಸುಂಕ ವಸೂಲು ಮಾಡುವ ಒಂದು ದರವಾರು ಪಟ್ಟಿಯನ್ನು ಇಂಗ್ಲೀಷ ಮತ್ತು ಕನ್ನಡದಲ್ಲಿ ಸ್ಪಷ್ಟವಾಗಿ ಬರೆದು ಟೋಲುಗೇಟು ಬಳಿ ಚನ್ನಾಗಿ ಕಾಣುವ ಜಾಗದಲ್ಲಿ ತಗಲುಹಾಕಬೇಕು.

11. ಗೌರ್ನಮೆಂಟಿನಿಂದ ನೇಮಿಸಲ್ಪಟ್ಟ ಟೋಲುಗೇಟು ಬಳಿಯಲ್ಲಲ್ಲದೆ ಮತ್ತೆಲ್ಲಿಯೂ ಕಂಟ್ರಾಕ್ಟುದಾರನು ಸುಂಕವನ್ನು ವಸೂಲು ಮಾಡಕೂಡದು.

12. ಇನ್ನು ಜಾಸ್ತಿ ಅಂಶವೇನಾದರೂ ತಿಳಿಯಬೇಕಾಗಿದ್ದಲ್ಲಿ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಸಾಹೇಬರವರಿಗೆ ಬರೆಯುವದರ ಮೂಲಕ ತಿಳಿದುಕೊಳ್ಳಬಹುದು.

ಬಾಳೆಹೊನ್ನೂರು, ತಡಸ, ಹರಿಹರಪುರದ ಸೇತುವೆಗಳ ಮೇಲೆ ಇರುವ ಟೋಲುಗೇಟು ಬಳಿ ಸುಂಕ ವಸೂಲ್ಮಾಡುವ ದರಗಳ ಪಟ್ಟಿ:—

ನಂಬರು.	ತಪಶೀಲು.	ಭರ್ತಿಆಗಿದ್ದರೆ.			ಖಾಲಿ ಇದ್ದರೆ.		
		ರೂ	ಆ.	ಪೈ.	ರೂ	ಆ.	ಪೈ.
1	ನಾಲ್ಕು ಚಕ್ರದ ಗಾಡಿ 1ಕ್ಕೆ	0	8	0	0	8	0
2	ಎರಡು ಚಕ್ರದ ಪೆಟ್ಟಿಗೆ ಗಾಡಿ ಅಥವಾ ಛಂಡಿ 1ಕ್ಕೆ	0	4	0	0	4	0
3	ಎಮ್ಮೆಗಳು ಎತ್ತುಗಳು ರಾಸು 1ಕ್ಕೆ	0	0	6	0	0	3
4	ಆನೆ 1ಕ್ಕೆ	1	0	0	1	0	0
5	ಒಂಟೆ 1ಕ್ಕೆ	0	8	0	0	8	0
6	ಪ್ರತಿ ಕುದುರೆ—ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	0	...	...	...
7	ಡಿಟ್ಟೋ ಹೊರೆ ಇಲ್ಲದ್ದು ಅಥವಾ ಹಿಡದುಕೊಂಡು ಹೋಗಲ್ಪಡುವದಕ್ಕೆ ...	...	...	...	0	1	0
8	ಪ್ರತಿ ಕತ್ತೆ—ಹೊರೆ ಸಹಿತವಾಗಿದ್ದರೆ ಅಥವಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6	...	...	...

ನೋಟ:—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ ವಸೂಲ ಮಾಡತಕ್ಕದ್ದಲ್ಲಾ.

ಕೊಟ್ಟಿಗೆಹಾರ ಟೋಲುಗೇಟು ಮೇಲೆ ವಸೂಲು ಮಾಡಬೇಕಾದ ದರಗಳ ಪಟ್ಟಿ.

ನಂಬರು.	ವಿವರ.	ರೂ.	ಆ.	ಪೈ.
1	ಪ್ರತಿ ನಾಲ್ಕು ಚಕ್ರದ ಭಂಡಿಗೆ	2	0	0
2	ಪ್ರತಿ ಎರಡು ಡಿಟೋ	1	0	0
3	ಪ್ರತಿ ಯಕ್ಕಾ ಮೇಲೂ	0	4	0
4	ಸ್ಪ್ರಿಂಗ್ ಯಾನೆ ಬಿಲ್ಲಿನಮೇಲೆ ಇರುವ ಬಾಡಿಗೆ ಭಂಡಿ ಪ್ರತಿ 1ಕ್ಕೆ ..	0	2	0
5	ಎಂಟು ಎತ್ತುಗಳಿಂದ ಯಾ ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಕತ್ತೆಗಳಿಂದ ಯಾ ಹೇಸರು ಕತ್ತೆಗಳಿಂದ ಯಳೆಯಲ್ಪಡುವ ಬಿಲ್ಲಿನಮೇಲೆ ಇಲ್ಲದ ಪ್ರತಿಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ.	1	8	0
6	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	8	0
7	ಆರು ಎತ್ತುಗಳು ವಗೈರೆಗಳಿಂದ ಯಳೆಯಲ್ಪಟ್ಟ ಗಾಡಿ ವ ಬಾಡಿಗೆ ಭಂಡಿ 1ಕ್ಕೆ ಭರ್ತಿ ಆಗಿದ್ದರೆ ..	0	12	0
8	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	6	0
9	ನಾಲ್ಕು ಎತ್ತುಗಳಿಂದ, ಕೋಣಗಳಿಂದ, ಕುದುರೆಗಳಿಂದ, ಟಾಕಣಗಳಿಂದ, ಹೇಸರಕತ್ತೆಗಳಿಂದ ಯಳೆಯಲ್ಪಟ್ಟ ಗಾಡಿ ಮತ್ತು ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ ..	0	8	0
10	ಡಿಟೋ ಡಿಟೋ ಭರ್ತಿ ಇಲ್ಲದಿದ್ದರೆ	0	4	0
11	ಎರಡು ಎತ್ತುಗಳು ವಗೈರೆಯಿಂದ ಯಳೆಯಲ್ಪಟ್ಟ ಗಾಡಿ ಯಾ ಬಾಡಿಗೆ ಭಂಡಿ 1ಕ್ಕೆ ಭರ್ತಿಯಾಗಿದ್ದರೆ. ...	0	4	0
12	ಡಿಟೋ ಡಿಟೋ ಇಲ್ಲದಿದ್ದರೆ	0	2	0
13	ಕೋಣಗಳು ಯಾ ಎತ್ತುಗಳು ರಾಸು 1ಕ್ಕೆ ಹೊರೆ ಹೊರಿಸಲ್ಪಟ್ಟದ್ದರೆ ...	0	1	0
14	ಡಿಟೋ ಡಿಟೋ ಹೊರೆ ಇಲ್ಲದಿದ್ದರೆ ...	0	0	3
15	ಪ್ರತಿ ಆನೆಗೂ ..	1	8	0
16	ಪ್ರತಿ ಒಂಟೆಗೂ ಹೊರೆ ಹೊರಿಸಲ್ಪಟ್ಟದ್ದರೆ ..	0	8	0
17	ಡಿಟೋ ಹೊರೆ ಇಲ್ಲದಿದ್ದರೆ ...	0	4	0
18	ಪ್ರತಿ ಕುದುರೆಗೂ ಹೊರೆ ಹೊರಿಸಲ್ಪಟ್ಟದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	1	6
19	ಹೊರೆಯಿಲ್ಲದ ಯಾ ಹಿಡಿದುಕೊಂಡು ಹೋಗುವ ಪ್ರತಿ ಕುದುರೆಗೂ ..	0	0	9
20	ಪ್ರತಿ ತಟ್ಟು ಯಾ ಹೇಸರ ಕತ್ತೆಗೂ ಹೊರೆ ಹೊರಿಸಲ್ಪಟ್ಟದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ.	0	0	9
21	ಡಿಟೋ ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವದಕ್ಕೆ	0	0	6
22	ಪ್ರತಿ ಕತ್ತೆಗೂ ಹೊರೆ ಹೊರಿಸಲ್ಪಟ್ಟದ್ದರೆ ಯಾ ಸವಾರಿ ಮಾಡಲ್ಪಡುತ್ತಿದ್ದರೆ ...	0	0	6
23	ಹೊರೆ ಇಲ್ಲದ ಯಾ ಹಿಡಿದುಕೊಂಡು ಹೋಗಲ್ಪಡುವ ಪ್ರತಿ ಕತ್ತೆಗೂ ..	0	0	1
24	ಪ್ರತಿ ಕುರಿ, ಮೇಕೆ ಯಾ ಹಂದಿಗೂ ..	0	0	1
25	ಎಂಟು ಭೋಯಿಗಳೊಡನೆ ಪ್ರತಿ ಡೋಲಿ, ಪಾಲಕಿ ಯಾ ಟಾಂಜಾನಿಗೂ ..	1	0	0
26	ಆರು ಭೋಯಿಗಳೊಡನೆ ಡಿಟೋ ..	0	12	0
27	ನಾಲ್ಕು ಭೋಯಿಗಳೊಡನೆ ಡಿಟೋ	0	8	0
28	ಇಬ್ಬರು ಭೋಯಿಗಳೊಡನೆ ಡಿಟೋ	0	4	0

ನೋಟ್ :—ನಡೆದು ಬರುವ ಮಾರ್ಗಸ್ಥರ ಮೇಲೆ ಟೋಲ್ ಸುಂಕ ವಸೂಲ್ ಮಾಡತಕ್ಕದ್ದಲ್ಲಾ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿ॥ ಅರ್ಜಿ ನಂಬರ್ 93.

ಮಂಜ್ರಾಬಾದು ತಾಲ್ಲೂಕು ಅಮಲ್ದಾರ್ರಾಗಿಯಿದ್ದ ಮೃತಪಟ್ಟ ಶಂಕರೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟ್ ಕಡೂರು ತಾಲ್ಲೂಕು ಬುಕ್ಕಾಸಗರದ ಗ್ರಾಮದಲ್ಲಿರುವ ಬಿ. ಶಂಕರೈಯ್ಯನವರ ಮಗ ...ಬಿ. ಎಸ್. ರಂಗಂಣನು, ಮೃತಪಟ್ಟ ಶಂಕರೈಯ್ಯನವರಿಗೆ ಖಾಸಾ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಮೃತಪಟ್ಟ ತಂದೆಗೆ ಬರ...ಕ್ಕ 4,000 ನಾಲ್ಕು ಸಾವಿರ ರೂಪಾಯಿಗಳನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರು ರೆಗ್ಯುಲೇಷನ್ ಮೇ...ಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗಣ್ಣನ ಅರ್ಜಿಯನ್ನು ಸನ್ 1903ನೆ ಇಸವಿ ಸೆಪ್ಟೆಂಬರ್ 24ನೆ ತಾರೀಖಿನಲ್ಲಿ ಕೇಳಿ ಸರ್ಟಿಫಿ...ಕೇಟ್ ಪಡಿಯುತ... ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಂಕರೈಯ್ಯನವರ ಆಸ್ತಿಗೆ ...ಹಕ್ಕುದಾರರಾದ ವಿಸಿಷ್ಟರೂ ಮೇಲ್ಕಂಡ ತಾರೀಖಿನಲ್ಲಿ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ಆಗಸ್ಟು 21ನೆ ತಾರೀಖಿನಲ್ಲಿ ಈ ಕೋರ್ಟು ಮೊಹರ್‌ನಿಸಿ ನಮ್ಮ ಹಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಬಿ. ಶೇಷಗಿರಿರಾವ್, ಸಬ್ ಜಡ್ಜ್.

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಂಸಿದ್ಧ ಆದ್ದು [ನಂ. 36.

ಬೆಂಗಳೂರು, ಗುರುವಾರ, ಸೆಪ್ಟೆಂಬರ ತಾ॥ 10, ಸ 1903.

IIನೇ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಇನಾಂ ಇಲಾಖೆ.

ಇಸ್ತಿಹಾರ್‌ನಾಮೆ.

ನಂಬರು—1. ತಾರೀಖು 19ನೆ ಆಗಸ್ಟ್ 1903ನೆ ಇಸವಿ.

ಇನಾಂದಾರ್ರುಗಳಿಗೆ ಇದರಿಂದ ತಿಳಿಯಪಡಿಸುವದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟು ದೇವನಹಳ್ಳಿ ತಾಲ್ಲೂಕಿನಲ್ಲಿರತಕ್ಕ ಚಿಲ್ಲರೆ ಇನಾಂಗಳ ಬಾಬತು ಫೈನಲ್ ಟೈಟಲ್‌ಡೀಡ್ ಯಾನೆ ಖಾಯಂ ಪಟ್ಟೆಗಳು (1479) ಬೆಂಗಳೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರ ಬಳಿಗೆ ಬಟವಾಡೆ ಬಗ್ಯೆ ಕಳುಹಿಸಲ್ಪಟ್ಟಿವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ, ಪ್ರತ್ಯೇಕ, ನೋಟೀಸುಗಳು ಬಂದಮೇಲೆ ಅವುಗಳನ್ನು (ಪಟ್ಟೆಗಳನ್ನು) ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರ್ರುಗಳು ಐರ್ಜಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಚಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೇ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಶೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.

ಫಾರೆಸ್ಟ್ ಇಲಾಖಾ.

ಮೊಕ್ಕಾಂ ಸುಕಾಲರಹಟ್ಟಿ, ತಾರೀಖು 7ನೆ ಸೆಪ್ಟಂಬರು 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗಿನ ತಖ್ತೆಯಲ್ಲಿ ವಿವರಿಸಿರುವಂತೆ ಕಡೂರು ಡಿಸ್ಟ್ರಿಕ್ಟ್ ತರೀಕೆರೆ ಮತ್ತು ಬೆಂಕೀಪುರದ ಡಿಪೋಗಳಲ್ಲಿ ಆಯಾಯ ಡಿಪೋಗಳ ಬಾಜೂದಲ್ಲಿ ನಮೂದಿಸಿರುವಂತೆ ಆಯಾಯ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಕೂಗಿಸಲ್ಪಡುತ್ತೆ:—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ನಾಟುಗಳ ಜಾತಿ.	ಸಲೆ ಅಡಿ:		ಷರಾ.
				ನಾಟುಗಳ ಅದದು.	ಅಡಿ.	
1	ತರೀಕೆರೆ ..	8ನೆ ಅಕ್ಟೋಬರು 1903	ಸಾಗ್ವಾನಿ ನಾಟುಗಳು ..	134	3,821	[illegible]
			ಸಾಗ್ವಾನಿ ತುಂಡುಗಳು ..	213	2,631	
			ಸಾಗ್ವಾನಿ ಜೆಲಗುಗಳು ...	799	1,773	
			ನಂದಿನಾಟು (ಬ್ಲೆಕ್-ಟೀಕು) ...	27	788	
			ಮತ್ತಿನಾಟು ..	131	3,224	
			ಮತ್ತಿ ತೀರುಗಳು ...	210	419	
			ನಂದೀ ತೀರುಗಳು ..	8	24	
			ಯತ್ಯಾಗ (ಹಲ್ದು) ..	43	1,250	
			ಹುನ್ನಲ್ ನಾಟು ...	52	1,416	
			ಜಂಬೆ ಮತ್ತು ಜಾಲಾರಿ ಬೆಲಗು ..	105	700	
2	ಬೆಂಕೀಪುರ ...	10ನೆ ಅಕ್ಟೋಬರು 1903	ಸಾಗ್ವಾನಿ ನಾಟುಗಳು ...	150	4,000	
			ಮತ್ತಿ ನಾಟುಗಳು ...	50	1,500	

ಹರಾಜು ಷರತ್ತು:—1895ನೆ ಇಸವಿ ಏಪ್ರೆಲ್ 25ನೆ ಮರ್ಕುಂ ನಂಬರು 15ನೆ ಗೆಜೆಟ್ಟಿನಲ್ಲಿ ಪ್ರಾಯಿಷು ಆಗಿರುವ 95ನೆ ಇಸವಿ ಮಾರ್ಚಿ 10ನೆ ಮಾರ್ಕುಂ ನಂಬರು 1529—R. F.—155-92ನೆ ಇಸ್ತಿಹಾರಿನಂತೆ ನಡದುಕೊಳ್ಳಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಕಡೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 27ನೆ ಆಗಸ್ಟ್ 1903.

1. ಕಂದಾಯದ ಬಾಕೀದಾರರಾದ ಹಿಂಡಿಗನಾಳ್ ಗ್ರಾಮದ ಕೋಲಾರದ ತಾ|| ಬಾಲನಾಗೇನಹಳ್ಳಿ, ಕಾಯಂ ಗುತ್ತಾದಾರ್ 1ನೆ ಶೀನಣ್ಣನವರು 2ನೆ ರುಕ್ಮಿಣಮ್ಮನವರು ಇವರಿಂದ ಬರಬೇಕಾದ ಜಮಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗಿರುವ ಸ್ಥಿರ ಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್ ರೂಬರೂಬ್ 1903ನೆ ಇಸವಿ ಅಕ್ಟೋಬರ್ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡಮರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಮತ್ತು ಹಿಂದಿನ ಸಾಲ್‌ಗಳಬಗ್ಗೆ ಸಹಾ ಕಾಯಂಗುತ್ತಾದಾರ್ರು ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 211—15—4 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್‍ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್‍ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್‍ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

ಹೆಸರಘಟ್ಟದ ಕೆರೆ ಬಡಾವಣೆಗಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಟ್ಟ ಜಮೀನುಗಳಿಗೆ ಕಂಪರ್ಸೇಷನ ಠರಾವಾಗಲ್ಪಟ್ಟು ಇದರಡಿ ಕಂಡ ಮೂರು ಕೇಸುಗಳು ಶಿವಾಯಿ ಬಾಕಿ ಎಲ್ಲಾ ಕೇಸುಗಳ ವಿಚಾರ ಫೈಸಲ್ ಆಗಿರುತ್ತೆ. ಸದರಿ 3 ಕೇಸುಗಳ ಪೈಕಿ ಒಂದು ಕೇಸ್‌ನಲ್ಲಿ ಮಾಲೀಕರು ಮೊಬಲಗು ತೆಗದುಕೊಳ್ಳದೇಲು ನಿಂತ ಎರಡು ಕೇಸ್‌ಗಳಲ್ಲಿ ಮಾಲೀಕರು ಇರತಕ್ಕ ಸ್ಥಳ ಗೊತ್ತು ಇಲ್ಲದೆ ಇರುತ್ತೆ. ಈ ಕಾರಣದಿಂದ ಇಸ್ತಿಹಾರ್ ಗೆಜಟ್ಟಿನಲ್ಲಿ ಪ್ರಾಯಿಷ್ ಮಾಡಿರುತ್ತೆ. ಇಸ್ತಿಹಾರ್ ಪ್ರಾಯಿಷ್ ಆದ ತಾರೀಖು ಲಾಗಾಯಿತು (3) ಮೂರು ತಿಂಗಳು ವಳಗಾಗಿ ಮಾಲೀಕರೆ ಆಗಲಿ ಅಥವಾ ಅವರಿಗೆ ಸಂಬಂಧಪಟ್ಟವರ ಆಗಲಿ ತಮ್ಮಲ್ಲಿ ಇರತಕ್ಕ ದಾಖಲೆ ನಿಶಿ ಬೆಂಗಳೂರು ಮೊಕ್ಕಾಂ ನಮ್ಮ ಕಛೇರಿ ರೂಬರೂ ಹಾಜರಾಗಿ ಅವರ ಹಕ್ಕನ್ನ ಸ್ಥಿರಪಡಿಶಿಕೊಟ್ಟು ಮೊಬಲಗನ್ನ ಪಡದುಕೊಳ್ಳಬಹುದು. ತಪ್ಪಿದರೆ ಮೊಬಲಗನ್ನ ಶಿವಾಯಿ ಜಮೆಗೆ ದಾಖಲ್ಮಾಡಲ್ಪಡುತ್ತೆ ತಿಳಿಯುವದು.

1. ನೆಲಮಂಗಲ ತಾಲ್ಲೂಕು ಜೋಡಿ ಐವರಕಂಡಪುರ ಗ್ರಾಮದ ವನಮುಲವೃತ್ತಿ ಬಾ|| ಮೂಲಪುರುಷ ರಾಮಾಪಂಡಿತ, ಭೋಗ್ಯದಾರ ಮತಪ್ಪೂರು ಶೀನಪ್ಪ 1, ಡಿಟೋ ನರಸಾಪಂಡಿತ 1, ಇದರ ಬಗೆ ಕಂಪರ್ಸೇಷನ ಮೊಬಲಗು 12 ರೂಪಾಯಿ.

2. ದೊಡ್ಡಬಳ್ಳಾಪುರ ತಾಲ್ಲೂಕು ಗೊಂದಿಹಳ್ಳಿ ಕೃಷ್ಣಾಚಾರ್ರು ಬಗೆ ಇನಾಂ $\frac{1}{3}$ ಹಿಸ್ಸೆ ಮೊಬಲಗು ರೂ. 71—5—4 ಇನಾಂದಾರ್ರು ಇರತಕ್ಕ ಸ್ಥಳ ಪತ್ತೆಯಿಲ್ಲ.

3. ದೊಡ್ಡಬಳ್ಳಾಪುರ ತಾಲ್ಲೂಕು ಚಿಕ್ಕ ದೇವನಪುರ ಗ್ರಾಮದ ಮುನಿವೆಂಕಟನ ಭಾವಿ ಮತ್ತು ಹುಣಶೆ ಮರಕ್ಕೆ ಸಲ್ಲಬೇಕಾದ ಮೊಬಲಗು ರೂ. 66—0—0 ಇಸಂ ಇರತಕ್ಕ ಸ್ಥಳ ಗೊತ್ತು ಇಲ್ಲ.

ಬಿ. ಜೆ. ಕುಮಾರಸ್ವಾಮಿ ನಾಯಿಕ್,
ಅಸಿಸ್ಟೆಂಟ ಕಮಿಷನರ.

ಮೈಸೂರು ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 147.

ಅರ್ಜೀದಾರ್ರು ಶ್ರೀರಂಗಪಟ್ಟಣದ ತಾಲ್ಲೂಕು ಬಿಳಗುಳದಲ್ಲಿರುವ ಪವತಿ ಕಸಾಯಿ ಮಾದಪ್ಪನ ಮಗಳು ಶಿದ್ದಮ್ಮ ಮೈನರು, ಗಾರ್ಡಿಯನ್ ಡಿಟೋ ಸ್ಥಳದಲ್ಲಿರುವ ಖಸಾಯಿ ದಾಸಪ್ಪ ಸದರೀ ಮೈನರಾದ ಶಿದ್ದಮ್ಮನಿಗೆ ಗಾರ್ಡಿಯನ್ ಆಗಬೇಕೆಂಬ ಹಕ್ಕಿನ ಮೇಲೆ ಶ್ರೀರಂಗಪಟ್ಟಣ ಸ್ಥಳದ ದಾಸಪ್ಪನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಫಿಕೇಟ್ ಬಗ್ಗೆ ಅರ್ಜಿ ಕೊಟ್ಟಿ [illegible]ರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1903ನೆ ಇಸವಿ ನವಂಬರ 27ನೆ ತಾರೀಖು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸರ್ 1903ನೆ ಇಸವಿ ಅಕ್ಟೋಬರ ತಿಂಗಳು 31ನೆ ತಾರೀಖಿನಲ್ಲಿ ಕೋರ್ಟು ಮೊಹರಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 123.

ಮೃತಪಟ್ಟ ಶಿವಮೊಗ್ಗ ಕಾಟೋಟಿರಾಜೆರಾಯರ ವಿಧವೆ ರಾಜಿಬಾಯಿ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಿವಮೊಗ್ಗಾ ವಾಶಿ ಗುಡಿ ಭೀಮಾಚಾರ್, ಸಂಜೀವ ಮುಖ್ಯಪ್ರಾಣದೇವರ ಪೂಜಾರಿ ಮೃತಪಟ್ಟ ಸದರಿ ರಾಜಿಬಾಯಿ ಯವರಿಗೆ ವಿಲ್ ಪ್ರಕಾರ ಹಕ್ಕುದಾರನು ಆಗಬೇಕೆಂಬ ಹಕ್ಕುದಾರ ಮೇಲೆ ಶಿವಮೊಗ್ಗಾ ಸ್ಥಳದ ಗುಡಿ ಭೀಮಾಚಾರ್ಯರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ರಾಜಿಬಾಯಿ ಎಂಬವರ ಜಿಂದಗಿ ಬಗ್ಗೆಗಿ ಬರತಕ್ಕ 160—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಮೇರೆಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಪ್ರಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುಡಿ ಭೀಮಾಚಾರ್ಯರ ಅರ್ಜಿಯನ್ನು ಸರ್ 1903ನೆ ಇಸವಿ ನವಂಬರ್ ತಿಂಗಳು ತಾರೀಖು 27 ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಜಿಬಾಯಿ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ಅಕ್ಟೋಬರ ತಿಂಗಳು 18ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1903—1904ನೆ ಇಸವಿ ವಿ|| ಅರ್ಜೀ ನಂಬರ್ 142.

ಮೃತಪಟ್ಟ ತೀರ್ಥಹಳ್ಳಿಯಲ್ಲಿ ವಾಸವಾಗಿದ್ದ ಚಿನ್ನಭಂಡಾರದ ಕೃಷ್ಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ತೀರ್ಥಹಳ್ಳಿ ಕಸಬಾದಲ್ಲಿರುವ ಕೃಷ್ಣರಾಯರ ವಿಧವೆ ತಂಗಮ್ಮನ ಮಗ 2ನೆ ರಂಗಣ್ಣಾ ಮೈನರ್, ತಾಯಿ ತಂಗಮ್ಮ ಮೃತಪಟ್ಟ ಸದರೀ ಕೃಷ್ಣರಾಯರಿಗೆ ಖಾಸಾ ಹೆಂಡತಿ ಮತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ತೀರ್ಥಹಳ್ಳಿ ಸ್ಥಳದ 1ನೆ ತಂಗಮ್ಮ, 2ನೆ ರಂಗಣ್ಣನವರು ತೀರ್ಥಹಳ್ಳಿ ವಾಸಸ್ಥರಾಗಿ ಮೃತಪಟ್ಟ ಕೃಷ್ಣರಾಯರ ಜಿಂದಗಿ ಬಗ್ಗೆ ಬರತಕ್ಕ 489—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ತಂಗಮ್ಮ, 2ನೆ ರಂಗಣ್ಣನವರ ಅರ್ಜಿಯನ್ನು ಸ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೆ ಇಸವಿ ನವಂಬರ್ 3ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್,
ಶಿರಸ್ತೇದಾರ್.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ 1903—1904ನೆ ಇಸವಿ ಅರ್ಜೀ ನಂಬರ್ 191.

ಮೃತಪಟ್ಟ ಎಂ. ಶ್ರೀಕಂಠೈಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗಳೂರು ಟವ್ನನಲ್ಲಿರುವ 1ನೆ ರಾಮಸ್ವಾಮಯ್ಯ, 2ನೆ ದೇವರು, 3ನೆ ಶಾಮಣ್ಣ ಮೈನರಗಳು, ಗಾರ್ಡಿಯನ್ ಖಾಸಾ ಚಿಕ್ಕಪ್ಪ, ತಾಲ್ಲೂಕು ಆಫೀಸಿನಲ್ಲಿ ಎಕ್ಸೈಜ್ ಸರಾಫ್ ಶಿವರಾಮೈಯ್ಯನು, ಮೃತಪಟ್ಟ ಶ್ರೀಕಂಠೈಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ತಾಲ್ಲೂಕು ಯಳ್ಳಂಬಳಸೆ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀಕಂಠೈಯ್ಯನವರ ಜಿಂದಗಿ ಬಗ್ಗೆ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ರಾಮಸ್ವಾಮಯ್ಯ, 2ನೆ ದೇವರು, 3ನೆ ಶಾಮಣ್ಣ ಮೈನರ್, ಗಾರ್ಡಿಯನ್ ಶಿವರಾಮಯ್ಯನವರ ಅರ್ಜಿಯನ್ನು ಸ್ 1903ನೆ ಇಸವಿ ಡಿಶಂಬರು ತಿಂಗಳು ತಾರೀಖು 11ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶ್ರೀಕಂಠಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೆ ಇಸವಿ ನವಂಬರ್ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟಿನ ಮೊಹರು ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಡಿ. ಅಳಸಿಂಗ್ರಾಚಾರ್,
ಶಿರಸ್ತೇದಾರ್.

ಸ್ 1903—1904ನೆ ಇಸವಿ ಅರ್ಜೀ ನಂಬರ್ 212.

ಮೃತಪಟ್ಟ ಇಮತಮಲ್ ಎಂಬುವನ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ತಾಲ್ಲೂಕು ಕಸಬಾದಲ್ಲಿರುವ ಜೋಧಪುರದ ಶೀಮೆ ಸೊಜತ್ತದ ತಾಲ್ಲೂಕು ದುತ್ತೋದ ವಾಸಸ್ಥಳಾದ ಮಾರವಾಡಿ ಲಾಲಾಜಿ ಹೆಂಡತಿ ದಾಮಾಬಾಯಿ, ಮೃತಪಟ್ಟ ಇಮತಮಲ್ ಯವರಿಗೆ ತಾಯಿಯಾಗಬೇಕೆಂಬ ಹಕ್ಕುದಾರಿ ಮೇಲೆ ಬೊಂಬೈವಳಗೆ ವಾಸಸ್ಥರಾಗಿ ಮೃತಪಟ್ಟ ಇಮತಮಲ್ ಯವರ ಜಿಂದಗಿ ಬಗ್ಗೆ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ದಾಮಾಬಾಯಿಯವರ ಅರ್ಜಿಯನ್ನು ಸ್ 1904ನೆ ಇಸವಿ ಜನವರಿ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಇಮತಮಲ್ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ 1903ನೆ ಇಸವಿ ಅಕ್ಟೋಬರ್ 30ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸರ್ 1903 — 1904ನೆ ಇಸವಿ ಅರ್ಜೀ ನಂಬರು 213.

ಮೃತಪಟ್ಟ ಕೇಶವಾಚಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರುಗಳು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಹಿರೇಮಗಳೂರಲ್ಲಿರುವ 1ನೆ ಶ್ರೀನಿವಾಸೈಯ್ಯಂಗಾರ್, 2ನೆ ರಾಮಸ್ವಾಮೈಯ್ಯಂಗಾರ್, 3ನೆ ಗುಂಡೈಯ್ಯಂಗಾರ್ ಮೈನರುಗಳು, ಬ್ರಹ್ಮಸಮುದ್ರದ ಕೇಶವಾಚಾರ್ಯರ ಮಕ್ಕಳು, ಗಾರ್ಡಿಯನ್ ಮಾವ ನಾರಣೈಯ್ಯಂಗಾರ್, ಮೃತಪಟ್ಟ ಬ್ರಹ್ಮಸಮುದ್ರದ ಕೇಶವಾಚಾರ್ರಿಗೆ ಮಕ್ಕಳು ಎಂಬ ಹಕ್ಕುದಾರಿಮೇಲೆ ಕಡೂರು ತಾಲ್ಲೂಕ್ ಬ್ರಹ್ಮಸಮುದ್ರದಲ್ಲಿ ವಾಸಸ್ಥರಾಗಿ ಮೃತಪಟ್ಟ ಬ್ರಹ್ಮಸಮುದ್ರದ ಕೇಶವಾಚಾರ್ರವರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸೈಯ್ಯಂಗಾರ್, ರಾಮಸ್ವಾಮೈಯ್ಯಂಗಾರ್, ಗುಂಡೈಯ್ಯಂಗಾರ್ ಮೈನರುಗಳು, ಗಾರ್ಡಿಯನ್ ನಾರಣೈಯ್ಯಂಗಾರ್ ಇವರ ಅರ್ಜಿಯನ್ನು ಸರ್ 1904ನೆ ಇಸವಿ ಜನರಿ ತಿಂಗಳು ತಾರೀಖು 8ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬ್ರಹ್ಮಸಮುದ್ರದ ಕೇಶವಾಚಾರ್ರರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ಅಕ್ಟೋಬರ್ ತಿಂಗಳು 31ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಗೌರ್ನ್ಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್.

ತಾರೀಖು 7ನೆ ಅಕ್ಟೋಬರು 1903.

ಮೆಸ್ಸರ್ಸ್ ಲಾಂಗ್‌ಮ್ಯಾನ್ಸ್ ಗ್ರೀನ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಈ ಕೆಳಗಡೆ ನಮೂದಿಸಿರುವ ಹೊರಗಡೆ ಆಕಾರವನ್ನು ಮಾತ್ರ ತೋರಿಸುವ (Out line maps) ಮ್ಯಾಪುಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ ಒಂದಕ್ಕೆ ನಾಲ್ಕು ಕಾಸುಗಳು:—

ಯೂರೋಪ್—ವರ್ಲ್ಡ್—ಏಷಿಯಾ—ಇಂಗ್ಲೆಂಡ್ ಮತ್ತು ವೇಲ್ಸ್—ಸ್ಕಾಟ್ಲೆಂಡ್—ಮತ್ತು ಇಂಡಿಯಾ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಗೆಜೆಟ್ ಇಸ್ತಿಹಾರ್.

ಮೈಸೂರ್ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಪೋಸ್ಟಿಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಟ್ಟಿರೋಣದರಿಂದ ಸದರೀ ಕಾಪಿಗಳು ಗೈರಿವಿಲೆ ಅಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರ್ರವರು ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರಿವಿಲೆಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.

ಜೆ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. 38]   ಸರ್ಕಾರದಿಂದ ಫಾಯಿಷ್ ಆದ್ದು.   [ಸಂ. 45.

ಬೆಂಗಳೂರು, ಗುರುವಾರ, ನವಂಬರ್ ತಾ|| 19, ಸನ 1903.

IIನೆ ಭಾಗ.

ಇಂಡ್ಯ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಹೊರಡೋಣಾದ ಇಸ್ತಿಹಾರ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 8ನೆ ನವಂಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಗವರ್ನಮೆಂಟ್ ಪ್ರೊಸಿಡಿಂಗ್ಸ್ 17–8–1903ನೆ ಮ[illegible] 185—2560ನೆ ನಂಬರ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ರೇಂಜಿಗೆ ಸೇರಿದ ಹೀಣ್ಯ ಪ್ಲ್ಯಾಂಟೇಷನ್ನಿನಲ್ಲಿ ಇದರಿಂದ ನಮೂದಿಸಿರುವ ಮಾರ್ಗಗಳು ಇದರಿಂದ ಮಂಜೂರ್ಮಾಡಲ್ಪಟ್ಟಿವೆ.

I. ಹೀಣ್ಯ ಬ್ಲಾಕ್:—ಮೈಸೂರು ಇಂಜಿನಿಯರ್ ಇಲಾಖೆಯವರ ಉಪಯೋಗಕ್ಕೆ ಮಾತ್ರ ಬಳಸಲ್ಪಟ್ಟ ಸುಮಾರು 30 ಗಜ ಅಗಲವುಳ್ಳ ಮೈಸೂರು ವಾಟರ್ ವರ್ಕ್ಸ್ ಪೈಪ್ ಲೈನ್—ಹೀಣ್ಯ ಗ್ರಾಮದ ಸರ್ವೆ 131ನೆ ನಂಬರಿಗೆ ಪೂರ್ವ ದಿಕ್ಕಿನಲ್ಲಿ ಇರುವ ಪ್ಲ್ಯಾಂಟೇಷನ್ನಿನ ನೈರುತ್ಯ ಮೂಲೆಗೆ ಉತ್ತರದಲ್ಲಿ ಸುಮಾರು ಒಂದು ಫರ್ಲಾಂಗಿನಲ್ಲಿ ಹೀಣ್ಯ ಪ್ಲ್ಯಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಆಗ್ನೇಯವಾಗಿ ಸುಮಾರು 2,512 ಗಜ ದೂರ ಹೋಗಿ ಪ್ಲ್ಯಾಂಟೇಷನ್ನಿಗೆ ಆಗ್ನೇಯ ಮೂಲೆಗೆ ಉತ್ತರಕ್ಕೆ ಸುಮಾರು 20 ಗಜ ದೂರದಲ್ಲಿ ಪ್ಲ್ಯಾಂಟೇಷನನ್ನು ಬಿಟ್ಟು ಹೀಣ್ಯ ಗ್ರಾಮದ ಸರ್ವೆ 72ನೆ ನಂಬರನ್ನು ಪ್ರವೇಶಿಸುತ್ತದೆ.

II. ಜಾಲಹಳ್ಳಿ ಬ್ಲಾಕ್:—ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಇಂಜಿನಿಯರ್ ಡಿಪಾರ್ಟ್ಮೆಂಟಿನವರ ಹಕ್ಕಿಗೆ ಬಳಸಲ್ಪಟ್ಟ ಸುಮಾರು 30 ಗಜ ಅಗಲವುಳ್ಳ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ವಾಟರ್ ವರ್ಕ್ಸ್ ಲೈನ್—ಜಾಲಹಳ್ಳಿ ಗ್ರಾಮದ ಸರ್ವೆ 5ನೆ ನಂಬರು ಈಶಾನ್ಯ ಮೂಲೆಗೆ ಪಶ್ಚಿಮವಾಗಿ ಮೊದಲನೇ ಮೂಲೆಗೆ ಪೂರ್ವ ಸುಮಾರು 150 ಗಜದಲ್ಲಿ ಪ್ಲ್ಯಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಸುಮಾರು 1,819 ಗಜಗಳ ದೂರ ನೇರವಾಗಿ ಆಗ್ನೇಯಕ್ಕೆ ಹೊರಟು ಜಾಲಹಳ್ಳಿ ಪ್ಲ್ಯಾಂಟೇಷನ್ನಿನ ಆಗ್ನೇಯ ಮೂಲೆಗೆ ಪಶ್ಚಿಮಕ್ಕೆ ಸುಮಾರು 1 ಫರ್ಲಾಂಗ್ ದೂರದಲ್ಲಿ ಪ್ಲ್ಯಾಂಟೇಷನನ್ನು ಬಿಟ್ಟು ಜಾಲಹಳ್ಳಿ ಗ್ರಾಮದ ಸರ್ವೆ 11ನೆ ನಂಬರನ್ನು ಪ್ರವೇಶಿಸುತ್ತದೆ.

ನೋಟೀಸು, ತಾರೀಖು 14ನೆ ನವಂಬರ್ 1903ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಕಾರ್ಕಾರ್ಹಳ್ಳಿ ತಾಲ್ಲೂಕು ಕಬ್ಬಾಳ ಫಾರೆಸ್ಟು ಗಾರ್ಡು ಆಗಿದ್ದ ಶಿತಾರಾಮೈಯ್ಯನೆ 1902ನೆ ಇಸವಿ ನವಂಬರ್ ಮಾಹೆ ತಲಬು 4–12–9 ಬಟವಾಡೆ ಆಗದೆ ಸದರಿ ಮೊಬಲಗು ಕಾರ್ಕಾರ್ಹಳ್ಳಿ ಫಾರೆಸ್ಟು ರೇಂಜಾಫೀಸಿನಲ್ಲಿ ಅಮಾನತ್ತು ನಿಲ್ಲುತ್ತಾ ಬಂದಿರುತ್ತೆ. ಈ ಮೊಬಲಗು ಸದರಿ ಶಿತಾರಾಮೈಯ್ಯನೇ ಆಗಲಿ ಅಥವಾ ಈತನ ಕಡೆ ನ್ಯಾಯವಾದ ವಾರಸ್ದಾರರೇ ಆಗಲಿ ಈ ತಾರೀಖು ಲಾಗಾಯಿತು ಎರಡು ತಿಂಗಳು ವಳಗಾಗಿ ಸದರಿ ಮೊಬಲಗು 4—12—9 ಯನ್ನು ಪಡಿಯದೆ ತಪ್ಪಿದಲ್ಲಿ ಸರ್ಕಾರಕ್ಕೆ ಮೇಲ್ಕಂಡ ಮೊಬಲಗು ಶೇರಿಸಿಕೊಳ್ಳಲಾಗುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ.

1903ನೆ ಇಸವಿ ಆಗಸ್ಟು ತಿಂಗಳು 27ನೆ ತಾರೀಖಿನ IIನೆ ಭಾಗದ 467ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟುಗಳ ಪಸಾರೆ ಜಿನಸಿ ಜವಾವಣಿ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಲಾಗಿರುವದು ಸರಿಯಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜಿನಸಿ ಜವಾವಣಿ ಹಕ್ಕನ್ನು 1903ನೆ ಇಸವಿ ನವಂಬರು 17ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರವರ ಮತ್ತು ರೇಂಜಾಫೀಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಯಲ್ಲರಿಗೂ ತಿಳಿಸಲ್ಪಟ್ಟಿದೆ.

ನೋಟೀಸು, ತಾರೀಖು 7ನೆ ನವಂಬರ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರಗೂರು ಸೋಮೇಶ್ವರ ದಳಿಕಡು ಡಿಪೋದಲ್ಲಿ ಕಪಿಲಾನದೀ ನೀರಿನ ಶಳಿಯಿಂದ ಹೊಡದುಕೊಂಡುಬಂದ ಚವುಬೀನಾ ಹಕ್ಕುದಾರೀ ವಿಷಯದಲ್ಲಿ 1903ನೆ ಇಸವಿ ನವಂಬರು ಮಾಹೆ 12ನೆ ತಾರೀಖು ಮೈಸೂರು ಗೆಜೆಟ್ಟಿನ IIನೆ ಭಾಗದ 544ನೆ ಪೇಜನ್ನು ನೋಡತಕ್ಕದ್ದು.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಮೈಸೂರು ಡಿಸ್ಟ್ರಿಕ್ಟ.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 30ನೆ ಅಕ್ಟೋಬರ 1903ನೆ ಇಸವಿ.

ಕೋಲಾರ ತಾಲ್ಲೂಕು ಹುತ್ತೂರು ಹೋಬಳೀಗೆ ಸೇರಿದ ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು,

1. ಜೋಡಿ ಚಾಮರಹಳ್ಳಿ,
2. ಜೋಡಿ ಕೊಟ್ಟೂರು ಬಸವಾಪುರ,

ಸದರಿ ಜೋಡಿದಾರ್ರುಗಳಿಂದ ಸರ್ಕಾರಕ್ಕೆ ಬರಬೇಕಾದ ಜೋಡೀ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್‌ದಾರ್ರು ಕಚೇರಿಯಲ್ಲಿ 1903ನೆ ಇಸವಿ ಡಿಸೆಂಬರ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟು ಇದೆ.

(ಹೆಚ್ಚು ತಪಶೀಲ್ ಬಗ್ಗೆ 12ನೆ ಮಾರ್ಚು 44ನೆ ನಂಬರ ಮೈಸೂರ ಗೆಜೆಟ್ಟಿನ 2ನೆ ಭಾಗದ 544—545—546ನೆ ನಂಬರು ಪೇಜು ನೋಡತಕ್ಕದ್ದು.)

ಎಫ್. ಸಿ. ಕಾರ್,
ಡೆಪ್ಯುಟಿ ಕಮಿಷನ[illegible]

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ನವಂಬರ 1903.

1. ಕಂದಾಯದ ಬಾಕೀದಾರರಾದ ಜೋಡಿ ಹಾಲತ್ತಿ ಗ್ರಾಮದ ಶಾಂಭಟ್ಟ ವಗೈರೇ 18 ಜನರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸರ್ಕಾರಕ್ಕೆ ಶೇರಿಸಿಕೊಂಡ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ಹಾಲತ್ತಿ ಗ್ರಾಮದಲ್ಲಿ 1904ನೆ ಜನವರಿ 4ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರೀ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 245—5—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡವೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ ಮಾಡುತ್ತಾರೆಯೋ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರ್ರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	[illegible]	ಖಾತೇದಾರರ ಹೆಸರು.	ಕುಳದ ಹೆಸರು.	ಸ್ವತ್ತಿನ ತಪ್ಸೀಲ. — ಕಟ್ಟಡಗಳು: ಅಂದಾಜು ಕ್ರಯ	ಜಮಾನು: ನಂಬರು ಇತ್ಯಾದಿ ವಿವರಗಳ ಹೆಸರು	ಜಮಾನು: ಖುಷ್ಕಿ ತರಿ ಬಾಗಾಯಿತು	ಜಮಾನು: ವಿಸ್ತೀರ್ಣ		ಜಮಾನು: ಆಕಾರ			ಬಾಕಿ ಸಹಿತ ವಸೂಲಾಗಬೇಕಾದ ಮೊಬಲಗು			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ನಾಗಮಂಗಲ	ನಾಗಮಂಗಲ	ಜೋಡಿ ಹಾಲತಿ	ಬಾಂಷೆಟ್ಟಿ ನಗ್ಗೆ 18 ಜನ	...	...	..	ಪರಂಬೋಕು	498	22	...	..	..	121	14	11	ಪ್ಲವ
							ಖುಷ್ಕಿ	319	10	253	0	0	121	14	11	ಶುಭಕೃತು
							ಬಾಗಾಯಿತು	8	20	25	0	0	0	8	0	ನೋಟಿಸ ಫೀ
													0	8	0	ಜಪ್ತಿ ಫೀ
								826	12	278	0	0	0	8	0	ಹರಾಜ್ ಫೀ
													245	5	10	
						ಅಂದಾಜು (1668–0–0)										ವಸೂಲ ತಾರೀಖು ವರೆಗೆ ಬಡ್ಡಿ ಬರಬೇಕು.

* ಯಾ ಬಾಕಿ ಇರುವವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮ್ಮಿಷನರ.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿರವರ ಕೋರ್ಟಿನಲ್ಲಿ.

ಸ್ 1903—1904ನೆ ಇಸವಿ ಅರ್ಜೀ ನಂಬರ 105.

ಮೃತಪಟ್ಟ ಸುಬ್ಬಣ್ಣನೆಂಬವರ ಆಸ್ತೀ ವಿಷಯದಲ್ಲಿ—

ಅರ್ಜಿದಾರರು ಬೆಂಗಳೂರು ಕೋಟೆಯಲ್ಲಿರುವ 1ನೆ ಸುಬ್ಬಯ್ಯ, 2ನೆ ರಾಮಯ್ಯ, 3ನೆ ಅಶ್ವತ್ಥನಾರಾಯಣ, 4ನೆ ಕೃಷ್ಣ, (2-3-4) ಮೈನರ್, ಗಾರ್ಡಿಯನ್ ತಾಯಿ ಅಚ್ಚಮ್ಮ, ಮೃತಪಟ್ಟ ಸದರೀ ಸುಬ್ಬಣ್ಣನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮಾಗಡಿ ತಾಲ್ಲೂಕು ತಾವರೆಕೆರೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣನವರ ಜೆಂದಿಗೆ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸುಬ್ಬಯ್ಯ, 2ನೆ ರಾಮಯ್ಯ, 3ನೆ ಅಶ್ವತ್ಥನಾರಾಯಣ, 4ನೆ ಕೃಷ್ಣ, (2-3-4) ಮೈನರ್, ಗಾರ್ಡಿಯನ್ ಅಚ್ಚಮ್ಮನ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ನವಂಬರು ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 147.

ಮೃತಪಟ್ಟ ಜೆ. ಸುಬ್ಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ತಾಲ್ಲೂಕು ಯಲಹಂಕದಲ್ಲಿರುವ ಜೆ. ಗೋಪಾಲರಾಯರೆಂಬುವರು, ಮೃತಪಟ್ಟ ಸದರೀ ಜೆ. ಸುಬ್ಬರಾಯರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಜೆ. ಸುಬ್ಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜೆ. ಗೋಪಾಲರಾಯರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಜೆ. ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ನವಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 154.

ಮೃತಪಟ್ಟ ಮಹಮ್ಮದ್ ಇಕ್ರಾಮುಲ್ಲಿ ಖಾನ್ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನೆಲಮಂಗಲದ ತಾಲ್ಲೂಕಿನಲ್ಲಿರುವ ಪೇಷ್ಕರದಾರು ಮೊಹದೀನ್ ಹುಸೇನ್ ಖಾನರು, ಮೃತಪಟ್ಟ ಸದರೀ ಮಹಮ್ಮದ ಇಕ್ರಾಮುಲ್ಲಿಖಾನರಿಗೆ ಮುಖ್ಯ ವಾರಸದಾರು ಆಗಬೇಕೆಂಬ ಹಕ್ಕುದಾರಿ ಮೇಲೆ ನೆಲಮಂಗಲದಲ್ಲಿ ವಾಸಸ್ಥರಾಗಿ ಮೃತಪಟ್ಟ ಮಹಮ್ಮದ್ ಇಕ್ರಾಮುಲ್ಲಿ ಖಾನರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೊಹದೀನ್ ಹುಸೇನ್ ಖಾನರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಹಮ್ಮದ್ ಇಕ್ರಾಮುಲ್ಲಿಖಾನರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ನವಂಬರು ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 180.

ಮೃತಪಟ್ಟ ದಂಡಿಗಾನಹಳ್ಳಿ ಗೋಪಾಲಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಚಿಕ್ಕಬಳ್ಳಾಪುರದ ಕಸಬೇಲಿರುವ ಅನ್ನಪೂರ್ಣಮ್ಮನೆಂಬುವರು, ಮೃತಪಟ್ಟ ಸದರೀ ದಂಡಿಗಾನಹಳ್ಳಿ ಗೋಪಾಲಯ್ಯನವರಿಗೆ ಹಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಬಳ್ಳಾಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ದಂಡಿಗಾನಹಳ್ಳಿ ಗೋಪಾಲಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಅನ್ನಪೂರ್ಣಮ್ಮನವರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಂಡಿಗಾನಹಳ್ಳಿ ಗೋಪಾಲಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ನವಂಬರ 16ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿನಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 231.

ಅರ್ಜೀದಾರು ಮೈಸೂರು ಲಷ್ಕರ್ ಮೊಹಲ್ಲಾ ಚಮಾಲ್ ಮಠದ ಬೀದಿಯಲ್ಲಿರುವ ವೈಶ್ಯರ ಜಾತಿ ಪೋಲೇಟಿ ಸೂರ್ಯನಾರಣಶೆಟ್ಟಿ ಹೆಂಡತಿ ಚಿಕ್ಕ ಸುಬ್ಬಮ್ಮ, ಮೈನರಾದ ಮೈಸೂರು ಸ್ಥಳದ ಸೂರನಾರಣಶೆಟ್ಟಿ ಮಗ ಲಕ್ಷ್ಮೀನಾರಾಯಣಶೆಟ್ಟರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಲಕ್ಷ್ಮೀನಾರಾಯಣ ಶೆಟ್ಟರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ಚಿಕ್ಕ ಸುಬ್ಬಮ್ಮನವರು ಸದರಿ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೆ ಇಸವಿ ನವಂಬರು ತಾರೀಖು 27ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸರ್ 1903ನೆ ಇಸವಿ ನವಂಬರ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 138.

ಮೃತಪಟ್ಟ ಕನ್ನಡಾ ಜಿಲ್ಲಾ ಮಂಗಳೂರಲ್ಲಿದ್ದ ಹೋತನಕಟ್ಟೆ ಶ್ಯಾನುಭೋಗ ಶ್ಯಾಮಾಚಾರ್ರ ಹೆಂಡತಿ ರಂಗಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ತೀರ್ಥಹಳ್ಳಿ ತಾಲ್ಲೂಕು ಶೀಕೂರು ಮಾಗಣಿ ಮುಳಬಾಗಲ ವಾಸಿ ಭಾಗೀರಥಮ್ಮ, ಕೋಂ ವಿಶ್ವರೂಪರ ಶ್ಯಾಮಾಚಾರ್ರು, ಮೃತಪಟ್ಟ ಸದರೀ ರಂಗಮ್ಮನವರಿಗೆ ಖಾಸಾ ಮಗಳು ಆಗಪೇಕೆಂಬ ಹಕ್ಕುದಾರಿ ಮೇಲೆ ಶೀಕೂರು ಮಾಗಣಿ ಮುಳಬಾಗಲು ಸ್ಥಳದ ಭಾಗೀರಥಮ್ಮನವರು ಮಂಗಳೂರು ವಾಸಸ್ಥರಾಗಿ ಮೃತಪಟ್ಟ ರಂಗಮ್ಮನವರ [illegible] ಬಗ್ಯಾಗಿ ಬರತಕ್ಕ 330—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ ರಗ್ಯುಲೇಷನ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಭಾಗೀರಥಮ್ಮನವರ ಅರ್ಜಿಯನ್ನು ಸರ್ 1903ನೆ ಇಸವಿ ನವಂಬರ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೆ ಇಸವಿ ನವಂಬರ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸಿ. ಶೇಷಯ್ಯಂಗಾರ್,
ಶಿರಸ್ತೆದಾರ.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 290.

ಅರ್ಜೀದಾರು ಆನೆಕಲ್ಲು ತಾಲ್ಲೂಕು ಸರ್ಜಾಪುರದ ಹೋಬಳಿ ಕಾಡ ಅಗ್ರಹಾರದಲ್ಲಿ ಇರುವ ನಂಜುಂಡರೆಡ್ಡಿ 2ನೆ ನಂಜಾರೆಡ್ಡಿ ಪವತಿ ವೇಮಾರೆಡ್ಡಿ ಮಕ್ಕಳು, ಮೈನರಾದ ಕಾಡ ಅಗ್ರಹಾರ ಸ್ಥಳದ 1ನೆ ಸಿಕ್ಕಾರೆಡ್ಡಿ, 2ನೆ ಅಕ್ಕಮ್ಮನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೆ ಸಿಕ್ಕಾರೆಡ್ಡಿ ವಗೈರೇರಿಗೆ ಮಾವನು ಆಗಬೇಕೆಂಬ ಹಕ್ಕಿನ ಮೇಲೆ ಕಾಡ ಅಗ್ರಹಾರದ 1ನೆ ನಂಜುಂಡರೆಡ್ಡಿ, 2ನೆ ನಂಜಾರೆಡ್ಡಿ ಎಂಬವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೆ ಇಸವಿ ಡಿಶಂಬರ್ ತಾರೀಖು 4ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ ಕೊಡಲಾಗಿಧೆ.

ಸರ್ 1903ನೆ ಇಸವಿ ನವಂಬರು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿ. ತಿಂಗ್ರಾಚಾರ್,
ಸಬ್ ಜಡ್ಜ.

ಹಾಸನ ಡಿಸ್ಟ್ರಿಕ್ಟ್ ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 260.

ಅರ್ಕಲಗೂಡು ತಾಲ್ಲೂಕು ಅರ್ಕಲಗೂಡು ಕಸಬಾದಲ್ಲಿ ಇದ್ದು ಮೃತಪಟ್ಟ ಕಂದಾಚಾರದ ರಾಮಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಅರ್ಕಲಗೂಡು ಕಸಬಾದಲ್ಲಿ ಇರುವ ಕಂದಾಚಾರದ ರಾಮಣ್ಣನವರ ಮಗ ಸುಬ್ಬಯ್ಯನವರು, ಫವತಿ ರಾಮಣ್ಣನವರಿಗೆ ಖಾಸಾ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಫವತಿ ಕಂದಾಚಾರದ ರಾಮಣ್ಣನವರಿಗೆ ಬರತಕ್ಕ 230 ರೂಪಾಯಿಗಳನ್ನು ವಸೂಲ್ ಮಾಡಿಕೊಳ್ಳಲು ಸರ್ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರೆ ಸರ್ಟಿಫಿಕೇಟ್ ಪಡಿಯಲು ಅರ್ಜಿಕೊಟ್ಟಿರುತ್ತಾರೆ.

ಸದರೀ ಅರ್ಜಿಯನ್ನು ಸರ್ 1903ನೆ ಇಸವಿ ಡಿಸೆಂಬರು ತಿಂಗಳು 12ನೆ ತಾರೀಖಿನಲ್ಲಿ ವಿಮರ್ಶೆ ಮಾಡಿ ಸರ್ಟಿಫಿಕೇಟ್ ಕೊಡಲ್ಪಡುತ್ತೆ. ಫವತಿ ಕಂದಾಚಾರದ ರಾಮಣ್ಣನವರ ಆಸ್ತಿಗೆ ಹಕ್ಕುದಾರರು ಯಾರಾದರು ಇದ್ದರೆ ಮೇಲ್ಕಂಡ ತಾರೀಖಿಗೆ ಈ ಕೋರ್ಟಿನಲ್ಲಿ ರೂಬರೂ ಹಾಜರಾಗಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ನವಂಬರು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಬಿ. ಶೇಷಗಿರಿರಾವ್,
ಸಬ್ ಜಡ್ಜಿ.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಅರ್ಜೀ ನಂಬರ್ 174.

ಮೃತಪಟ್ಟ ಬಸವೇಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕಡೂರು ಡಿಸ್ಟ್ರಿಕ್ಟು ಮಿರ್ಲೆ ತಿಮ್ಮನಹಳ್ಳಿಲಿರುವ ಕಂಟ್ರಾಕ್ಟು ಬಸವೇಗೌಡರ ಹೆಂಡತಿ ಚೆನ್ನಮ್ಮ, ಮೃತಪಟ್ಟ ಬಸವೇಗೌಡರವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮಿರ್ಲೆ ತಿಮ್ಮನ ಹಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ಬಸವೇಗೌಡರವರ ಜಿಂದಗಿ ಬಗ್ಗಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ [illegible]ಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚನ್ನಮ್ಮನ ಅರ್ಜಿಯನ್ನು ಸರ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 17ನಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸವೇಗೌಡರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ನವಂಬರು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟಿನ ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಡಿ. ಅಳಸಿಂಗ್ರಾಚಾರ್,
ಶಿರಸ್ತೇದಾರ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ.

ತಾರೀಖು 7ನೆ ಅಕ್ಟೋಬರು 1903.

ಮೆಸ್ಸರ್ಸ್ ಲಾಂಗ್‌ಮ್ಯಾನ್ಸ್ ಗ್ರೀನ್ ಅಂಡ್ ಕೋ ಯವರಿಂದ ರಚಿಸಲ್ಪಟ್ಟ ಈ ಕೆಳಗಡೆ ನಮೂದಿಸಿರುವ ಹೊರಗಡೆ ಆಕಾರವನ್ನು ಮಾತ್ರ ತೋರಿಸುವ (Out line maps) ಮ್ಯಾಪುಗಳು ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ ಒಂದಕ್ಕೆ ನಾಲ್ಕು ಕಾಸುಗಳು:—

ಯೂರೋಪ್— ವರ್ಲ್ಡ್—ಏಷಿಯಾ—ಇಂಗ್ಲೆಂಡ್ ಮತ್ತು ವೇಲ್ಸ್—ಸ್ಕಾಟ್ಲೆಂಡ್—ಮತ್ತು ಇಂಡಿಯಾ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಗೆಜೆಟ್ ಇಸ್ತಿಹಾರ್.

ಮೈಸೂರ್ ಗೆಜೆಟ್ ಕಂಪೈಲರವರು ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಪೋಸ್ಟಿಗೆ ಕಳುಹಿಸಲ್ಪಡುವ ದರೋಬಸ್ತು ಗೆಜೆಟ್ ಕಾಪಿಗಳು ಅವುಗಳು ರವಾನಿಸುವದಕ್ಕೆ ತತ್ಪೂರ್ವವೆ ಕ್ರಮವಾದ ತನಿಖೆ ಮತ್ತು ಮೊಕಾಬಿಲೆ ಮಾಡುವ ಪದ್ಧತಿಯು ಇಟ್ಟರೋಣದರಿಂದ ಸದರೀ ಕಾಪಿಗಳು ಗೈರಿವಿಲೆ ಅಥವಾ ವಿಳಾಸದಾರರುಗಳಿಗೆ ಪಾವತಿ ಆಗದೆ ಇರುವ ವಿಷಯದಲ್ಲಿ ಕಂಪೈಲರವರು ಜವಾಬುದಾರರಾಗಿರುವದಿಲ್ಲ ಮತ್ತು ಅಂಥಾ ಗೈರಿವಿಲೆಯಾದ ಕಾಪಿಗಳಿಗೆ ಬದಲಾಗಿ ಎರಡನೇ ಕಾಪಿಗಳು ಕೊಡಲ್ಪಡಲಾರವು.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 46.

ಬೆಂಗಳೂರು, ಗುರುವಾರ, ನವಂಬರ್ ತಾ|| 26, ಸನ್ 1903.

IIನೆ ಭಾಗ.

ಇಂಡ್ಯಾ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜಿಯರು ವಗೈರೆಯಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 8ನೆ ನವಂಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಗವರ್ನ್‌ಮೆಂಟ್ ಪ್ರೊಸಿಡಿಂಗ್ಸ್ 17-8-1903ನೆ ಮರ್ಕೂಂ 185—2560ನೆ ನಂಬರ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಬೆಂಗಳೂರು ರೇಂಜಿಗೆ ಸೇರಿದ ಪೀಣ್ಯ ಪ್ಲಾಂಟೇಷನ್ನಿನಲ್ಲಿ ಇದರಡಿ ನಮೂದಿಸಿರುವ ಮಾರ್ಗಗಳು ಇದರಿಂದ ಮಂಜೂರ್ಮಾಡಲ್ಪಟ್ಟವೆ.

I. ಪೀಣ್ಯ ಬ್ಲಾಕ್:—ಮೈಸೂರು ಇಂಜಿನಿಯರ್ ಇಲಾಖೆಯವರ ಉಪಯೋಗಕ್ಕೆ ಮಾತ್ರ ಬಿಳಪಟ್ಟ ಸುಮಾರು 30ಗಜ ಅಗಲವುಳ್ಳ ಮೈಸೂರು ವಾಟರ್ ವರ್ಕ್ಸ್ ಪೈಪ್ ಲೈನ್—ಪೀಣ್ಯ ಗ್ರಾಮದ ಸರ್ವೆ 131ನೆ ನಂಬರಿಗೆ ಪೂರ್ವ ದಿಕ್ಕಿನಲ್ಲಿ ಇರುವ ಪ್ಲಾಂಟೇಷನ್ನಿನ ನೈರುತ್ಯ ಮೂಲೆಗೆ ಉತ್ತರದಲ್ಲಿ ಸುಮಾರು ಒಂದು ಫರ್ಲಾಂಗಿನಲ್ಲಿ ಪೀಣ್ಯ ಪ್ಲಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಆಗ್ನೇಯವಾಗಿ ಸುಮಾರು 2,512 ಗಜ ದೂರ ಹೋಗಿ ಪ್ಲಾಂಟೇಷನ್ನಿಗೆ ಆಗ್ನೇಯ ಮೂಲೆಗೆ ಉತ್ತರಕ್ಕೆ ಸುಮಾರು 20 ಗಜ ದೂರದಲ್ಲಿ ಪ್ಲಾಂಟೇಷನನ್ನು ಬಿಟ್ಟು ಪೀಣ್ಯ ಗ್ರಾಮದ ಸರ್ವೆ 72ನೆ ನಂಬರನ್ನು ಪ್ರವೇಶಿಸುತ್ತದೆ.

II. ಜಾಲಹಳ್ಳಿ ಬ್ಲಾಕ್:—ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಇಂಜಿನಿಯರ್ ಡಿಪಾರ್ಟ್‌ಮೆಂಟಿನವರ ಹಕ್ಕಿಗೆ ಬಿಳಪಟ್ಟ ಸುಮಾರು 30 ಗಜ ಅಗಲವುಳ್ಳ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ವಾಟರ್ ವರ್ಕ್ಸ್ ಲೈನ್—ಜಾಲಹಳ್ಳಿ ಗ್ರಾಮದ ಸರ್ವೆ 5ನೆ ನಂಬರು ಈಶಾನ್ಯ ಮೂಲೆಗೆ ಪಶ್ಚಿಮವಾಗಿ ಮೊದಲನೇ ಮೂಲೆಗೆ ಪೂರ್ವ ಸುಮಾರು 150 ಗಜದಲ್ಲಿ ಪ್ಲಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಸುಮಾರು 1,819 ಗಜಗಳ ದೂರ ನೇರವಾಗಿ ಆಗ್ನೇಯಕ್ಕೆ ಹೊರಟು ಜಾಲಹಳ್ಳಿ ಪ್ಲಾಂಟೇಷನ್ನಿನ ಆಗ್ನೇಯ ಮೂಲೆಗೆ ಪಶ್ಚಿಮಕ್ಕೆ ಸುಮಾರು 1 ಫರ್ಲಾಂಗ್ ದೂರದಲ್ಲಿ ಪ್ಲಾಂಟೇಷನನ್ನು ಬಿಟ್ಟು ಜಾಲಹಳ್ಳಿ ಗ್ರಾಮದ ಸರ್ವೆ 11ನೆ ನಂಬರನ್ನು ಪ್ರವೇಶಿಸುತ್ತದೆ.

ನೋಟೀಸು, ತಾರೀಖು 14ನೆ ನವಂಬರ್ 1903ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಕಾರ್ಕಾಹಳ್ಳಿ ತಾಲ್ಲೂಕು ಕಬ್ಬಾಳ ಫಾರೆಸ್ಟು ಗಾರ್ಡು ಆಗಿದ್ದ ಶಿತಾರಾಮೈಯ್ಯನ 1902ನೆ ಇಸವಿ ನವಂಬರ್ ಮಾಹೆ ತಲಬು 4-12-9 ಬಟವಾಡೆ ಆಗದೆ ಸದರಿ ಮೊಬಲಗು ಕಾರ್ಕಾಹಳ್ಳಿ ಫಾರೆಸ್ಟು ರೇಂಜಾಫೀಸನಲ್ಲಿ ಅಮಾನತ್ತಾಗಿ ನಿಲ್ಲುತ್ತಾ ಬಂದಿರುತ್ತೆ. ಈ ಮೊಬಲಗು ಸದರಿ ಶಿತಾರಾಮೈಯ್ಯನೇ ಆಗಲಿ ಅಥವಾ ಈತನ ಕಡೆ ನ್ಯಾಯವಾದ ವಾರಸುದಾರರೇ ಆಗಲಿ ಈ ತಾರೀಖು ಲಗಾಯಿತು ಎರಡು ತಿಂಗಳು ಒಳಗಾಗಿ ಸದರಿ ಮೊಬಲಗು 4—12—9 ಯನ್ನು ಪಡಿಯದೆ ತಪ್ಪಿದಲ್ಲಿ ಸರ್ಕಾರಕ್ಕೆ ಮೇಲ್ಖಂಡ ಮೊಬಲಗು ಸೇರಿಸಿಕೊಳ್ಳಲಾಗುತ್ತೆ.

ತಾರೀಖು 23ನೆ ನವಂಬರ 1903.

1903ನೆ ಇಸವಿ ಅಕ್ಟೋಬರ 30ನೆ ಮಾರ್ಕಂ 194—2893ನೆ ನಂಬರ ಗೌರ್ನಮೆಂಟ ಆರ್ಡರ ಅನುಸರಿಸಿ

ಕೊಡೋಣಾದ ಇಸ್ತಿಹಾರನಾಮಾ—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟು ಕಾರ್ಕಾನಹಳ್ಳಿ ರೇಂಜ್ ಆಫೀಸರ ಮೇಲ್ವಿಚಾರಣೆಯಲ್ಲಿರುವ, ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಬಸವನ ಬೆಟ್ಟದ ಸ್ಟೇಟ ಫಾರೆಸ್ಟಿನಲ್ಲಿ ಈ ಕೆಳಗೆ ವಿವರಿಸುವ ಮೇರೆ ದಾರಿಗಳೂ ಮತ್ತು ಜಲಾಶಯಗಳಿಗೆ ಮಾರ್ಗಗಳು ಜನೋಪಯೋಗಕ್ಕಾಗಿ ಬಿಡಲ್ಪಟ್ಟಿವೆ.

1. ಹರಿಹರದಿಂದ ಸಾಂಬಾಪುರಕ್ಕೆ ಹೋಗುವ ಕಾಲುದಾರಿ ಇದು ನಾಲ್ಕು ಅಡಿ ಅಗಲವುಳ್ಳದ್ದು—ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಈ ದಾರಿಯು ಹರಿಹರದ ಸರ್ವೆ 69ನೆ ನಂಬರಿನ ದಕ್ಷಿಣ ದಿಕ್ಕಿನ ಎಲ್ಲೆಯ ನಾಲಾ ಯೇರಿ ಮೇಲಣ ಎರಡು ಬಾಂದುಗಳ ಬಳಿ ಫಾರೆಸ್ಟನ್ನು ಹೊಕ್ಕು ಸುಮಾರು ಎರಡು ಮೈಲಿಗಳ ವರಿಗೆ ದಕ್ಷಿಣಕ್ಕೆ ಹೋಗಿ ನಂತರ 2 ಮೈಲಿಗಳು ನೈರುತ್ಯವಾಗಿ ಹೋಗಿ ಸಾಂಬಾಪುರದ ಸರ್ವೆ 3ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ 30 ಗಜ ಉತ್ತರವಾಗಿ (ಸಾಂಬಾಪುರದ) ಎಲ್ಲೆಯೊಳಕ್ಕೆ ಪ್ರವೇಶಿಸುತ್ತದೆ.

2. ಸಾಂಬಾಪುರ (ಎಲ್ಲೆಕಟ್ಟು) ನಿಂದ ಸೋಲ್ಗೆರೆ (ಎಲ್ಲೆ) ಗೆ ಹೋಗುವ ನಾಲ್ಕು ಅಡಿ ಅಗಲವುಳ್ಳ ಕಾಲುದಾರಿ—ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಇರತಕ್ಕದ್ದು. ಈ ದಾರಿಯು ಸಾಂಬಾಪುರದ ಸರ್ವೆ 3ನೆ ನಂಬರ ಜಮೀನಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ ದಿಕ್ಕಿನಲ್ಲಿ ಸಾಂಬಾಪುರದ (ಎಲ್ಲೆ) ಯನ್ನು ಬಿಟ್ಟು ಸುಮಾರು $1\frac{1}{2}$ ಮೈಲಿ ದಕ್ಷಿಣಕ್ಕೆ ಹೋಗಿ ಸೋಲ್ಗೆರೆಯ ಸರ್ವೆ 4ನೆ ನಂಬರಿನ ಈಶಾನ್ಯ ಬಾಂದುಗಳ ಹತ್ತಿರ (ಸೋಲ್ಗೆರೆ) ಎಲ್ಲೆಯನ್ನು ಸೇರುತ್ತದೆ.

3. ಸೋಲ್ಗೆರೆಯಿಂದ ಭಾವಿಗೆ ಹೋಗುವ ಎರಡು ಗಜ ಅಗಲ ಸುಮಾರು 150 ಗಜ ಉದ್ದವುಳ್ಳ ಕಾಲುದಾರಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಾರ್ಥವಾದದ್ದು. ಇದು ಸೋಲ್ಗೆರೆ ಸರ್ವೆ 15ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಂದ ಪೂರ್ವಕ್ಕೆ 160 ಗಜಗಳ ದೂರದಲ್ಲಿ ಎಲ್ಲೆಯನ್ನು ಬಿಟ್ಟು ಸ್ವಲ್ಪ ನೈರುತ್ಯಕ್ಕೆ ಹೋಗಿ ಭಾವಿಯ ಬಳಿ ಖೈದಾಗುತ್ತದೆ.

4. ಸೋಲಿಗೆರೆಯಿಂದ ಬಸವನಹಳ್ಳಿ (ಎಲ್ಲೆ) ಗೆ ಹೋಗುವ ಕಾಲುದಾರಿ 4 ಅಡಿ ಅಗಲ 3 ಮೈಲಿ ಉದ್ದವುಳ್ಳದ್ದು—ಜನರ ಮತ್ತು ದನಕರಗಳ ಉಪಯೋಗಕ್ಕೆ. ಇದು ಸೋಲಗೆರೆ ಸರ್ವೆ 15ನೆ ನಂಬರು ನೈರುತ್ಯ ಮೂಲೆಯ ಬಾಂದುಗಳು ಶೇರುವ ಬಳಿ ಸೋಲಿಗೆರೆ (ಎಲ್ಲೆ) ಬಿಟ್ಟು ಉತ್ತರಕ್ಕೆ ಹೋಗಿ ನಂತರ ಪಶ್ಚಿಮಕ್ಕೆ ಹೋಗಿ ಅಲ್ಲಿಂದ ಪುನಃ ಉತ್ತರವಾಗಿ ಬಸವನಹಳ್ಳಿಗೆ ಹೋಗುತ್ತದೆ.

5. ನಂದೀಪುರದಿಂದ ಬಸವನಹಳ್ಳಿ (ಎಲ್ಲೆ) ಗೆ ಜನರು ಮತ್ತು ಜಾನುವಾರುಗಳು ತಿರಗಾಡುವ ಎರಡು ಅಡಿ ಅಗಲವುಳ್ಳ ಕಾಲುದಾರಿ—ಇದು ನಂದೀಪುರದ ಸರ್ವೆ 69ನೆ ನಂಬರಿನ ನೈರುತ್ಯ ಮೂಲೆಯ ಬಾಂದಿನ ಹತ್ತಿರ ಫಾರೆಸ್ಟನ್ನು ಹೊಕ್ಕು ಆಗ್ನೇಯವಾಗಿ ಸುಮಾರು 2 ಮೈಲಿಗಳ ವರಿವಿಗೆ ಹೋಗಿ ಬಸವನಹಳ್ಳಿ ಸರ್ವೆ 22ನೆ ನಂಬರಿನ ನೈರುತ್ಯ ಬಾಂದುಗಳಿಗೆ ಉತ್ತರ [illegible] ಗಜ ದೂರದಲ್ಲಿ ಯಲ್ಲೆಯನ್ನು ಶೇರುತ್ತದೆ.

6. ದೇವೀರಹಳ್ಳಿಯಿಂದ ಬಸವನಹಳ್ಳಿ(ಎಲ್ಲೆ) ಗೆ ಜನರು ಮತ್ತು ದನಕರಗಳು ತಿರಗಾಡುವ ಕಾಲುದಾರಿ 4 ಅಡಿ ಅಗಲ—ಇದು ದೇವರಹಳ್ಳಿ ಸರ್ವೆ 53ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ 20 ಗಜ ದೂರದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣಕ್ಕೆ ಹೋಗಿ ಅಲ್ಲಿಂದ ಸುಮಾರು $1\frac{1}{2}$ ಮೈಲಿ ನೈರುತ್ಯವಾಗಿ ಹೋಗಿ ಬಸವನಹಳ್ಳಿ ಸರ್ವೆ 5ನೆ ನಂಬರಿನ ವಾಯುವ್ಯ ದಿಕ್ಕಿನ ಬಾಂದಿನ ಬಳಿ ಎಲ್ಲೆಯನ್ನು ಶೇರುತ್ತದೆ.

7. ಬಸವಾಪುರದಿಂದ ಬಸವನಹಳ್ಳಿ (ಎಲ್ಲೆ)ಗೆ ಜನರು ಮತ್ತು ದನಕರಗಳು ತಿರುಗಾಡುವ ನಾಲ್ಕು ಅಡಿ ಅಗಲ ಉಳ್ಳ ಕಾಲು ದಾರಿ—ಇದು ಬಸವಾ ಪುರದ ಸರ್ವೆ 73ನೆ ನಂಬರ ಜಮೀನಿನ ನೈರುತ್ಯ ಬಾಂದಿನ ಬಳಿ ಫಾರೆಸ್ಟನ್ನು ಹೊಕ್ಕು ಆಗ್ನೇಯವಾಗಿಯೂ ದಕ್ಷಿಣವಾಗಿಯೂ ಸುಮಾರು ಎರಡು ಮೈಲಿಗಳು ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

8. ಹರಿಹರದಿಂದ ಕೋಣನ ಗುಂಡಿ (ಎಲ್ಲೆ)ಗೆ ಹೋಗುವ 2 ಗಜ ಅಗಲವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರಗಳ ಉಪಯೋಗಾರ್ಥವಾಗಿ ಇರತಕ್ಕದ್ದು. ಇದು ಡಿಮಾರ್ಕೇಷನ ಲೈನಿಗೆ ಸುಮಾರು 2 ಮೈಲಿಯಲ್ಲಿ ಮೇಲ್ಕಂಡ 1ನೆ ನಂಬರು ದಾರಿಯಿಂದ ಕವಲೊಡೆದು ಆಗ್ನೇಯಕ್ಕೆ ಹೋಗಿ ನಂತರ ದಕ್ಷಿಣಕ್ಕೆ ಸುಮಾರು $2\frac{1}{2}$ ಮೈಲಿಗಳ ವರಿಗೂ ಹೋಗಿ ಕೋಣನಗುಂಡಿ ಸರ್ವೆ 11ನೆ ನಂಬರಿನ ಈಶಾನ್ಯದ ಬಾಂದಿಗೆ ಪಶ್ಚಿಮ 40 ಗಜ ದೂರದಲ್ಲಿ (ಕೋಣನಗುಂಡಿ) ಎಲ್ಲೆಯನ್ನು ಪ್ರವೇಶಿಸುತ್ತದೆ.

9. ಬೇಡರಹಳ್ಳಿಯಿಂದ ತಾಳವಾಡಿ (ಎಲ್ಲೆ) ಗೆ ಹೋಗುವ 5 ಗಜ ಅಗಲವುಳ್ಳ ಬಂಡೀದಾರಿ—ಇದು ಜನರು, ಜಾನುವಾರುಗಳು ಮತ್ತು ಬಂಡಿಗಳಿಗಾಗಿ ಇರತಕ್ಕದ್ದು. ಇದು ಬೇಡರಹಳ್ಳಿ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಉತ್ತರ 5 ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣಕ್ಕೂ ಆಗ್ನೇಯಕ್ಕೂ ಡಿಮಾರ್ಕೇಷನ ಲೈನ ಮಾರ್ಗವಾಗಿ 5 ಫರ್ಲಾಂಗ ವರಿಗೆ ಹೋಗಿ ನಂತರ ಆಗ್ನೇಯಕ್ಕೆ ತಿರುಗಿ ಸುಮಾರು $2\frac{1}{2}$ ಮೈಲಿಗಳು ಹೋಗಿ ತಾಳವಾಡಿ ಸರ್ವೆ 16ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿಗೆ ಪೂರ್ವ 30 ಗಜ ದೂರದಲ್ಲಿ ಎಲ್ಲೆಯನ್ನು ಪ್ರವೇಶಿಸುತ್ತದೆ.

10. ಬೇಡರಹಳ್ಳಿಯಿಂದ ದಾಳನಕಟ್ಟೆ (ಎಲ್ಲೆ) ಗೆ ಹೋಗುವ 2 ಗಜ ಅಗಲವುಳ್ಳ ಬಂಡೀದಾರಿ—ಇದು ಜನರು, ಜಾನುವಾರುಗಳ ಮತ್ತು ಬಂಡಿಗಳಿಗಾಗಿ ಇರತಕ್ಕದ್ದು. ಇದು ಮೇಲ್ಕಂಡ 9ನೆ ಪ್ಯಾರಾದಲ್ಲಿ ನಮೂದಿಸಿರುವಂತೆ ಫಾರೆಸ್ಟನ್ನು ಹೊಕ್ಕು ಡಿಮಾರ್ಕೇಷನ ಲೈನಿನಿಂದ ಸುಮಾರು 1 ಫರ್ಲಾಂಗಿನಲ್ಲಿ ಒಡೆದು 1 ಮೈಲಿ ದೂರದಲ್ಲಿ ಫಾರೆಸ್ಟಿನಲ್ಲೇ ದಕ್ಷಿಣ ದಿಕ್ಕಿಗೆ ಹೋಗಿ ದಾಳನಕಟ್ಟೆ ಸರ್ವೆ 4ನೆ ನಂಬರಿನ ವಾಯುವ್ಯದ ಬಾಂದಿಗೆ ಪೂರ್ವ 40 ಗಜ ದೂರದಲ್ಲಿ ಎಲ್ಲೆಯನ್ನು ಸೇರುತ್ತದೆ.

11. ದಾಳನಕಟ್ಟೆ (ಎಲ್ಲೆ) ಯಿಂದ ಬಸವೇಗೌಡನ ದೊಡ್ಡಿ (ಎಲ್ಲೆ) ಗೆ ಹೋಗುವ ಎರಡು ಗಜ ಅಗಲ ಸುಮಾರು $\frac{1}{2}$ ಫರ್ಲಾಂಗ ಉದ್ದವಿರುವ ಬಂಡೀದಾರಿ—ಇದು ಜನರು, ಜಾನುವಾರು ಮತ್ತು ಬಂಡಿಗಳು ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ದಾಳನಕಟ್ಟೆ ಸರ್ವೆ 2ನೆ ನಂಬರಿನ ನೈರುತ್ಯ ಮೂಲೆಯ ಬಾಂದಿಗೆ 30 ಗಜ ದೂರದಲ್ಲಿ ಎಲ್ಲೆಯನ್ನು ಬಿಟ್ಟು ದಕ್ಷಿಣಕ್ಕೆ ಹೋಗಿ ಬಸವೇಗೌಡನ ದೊಡ್ಡಿ ಸರ್ವೆ 1ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿನಿಂದ ಪೂರ್ವಕ್ಕೆ 20 ಗಜ ದೂರದಲ್ಲಿ (ಬಸವೇಗೌಡನ ದೊಡ್ಡಿ) ಎಲ್ಲೆಯನ್ನು ಪ್ರವೇಶಿಸುತ್ತದೆ.

12. ಬಸವೇಗೌಡನ ದೊಡ್ಡಿಯಿಂದ ತಾಳವಾಡಿಗೆ ಹೋಗುವ 4 ಅಡಿ ಅಗಲ ಸುಮಾರು 100 ಗಜ ಉದ್ದವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರುಗಳು ತಿರುಗುವದಕ್ಕಾಗಿ ಇರತಕ್ಕದ್ದು. ಇದು ಬಸವೇಗೌಡನ ದೊಡ್ಡಿ ಸರ್ವೆ 7ನೆ ನಂಬರಿನ ಈಶಾನ್ಯ ದಿಕ್ಕಿನ ಮೂಲೆಯ ಬಾಂದಿಗೆ ದಕ್ಷಿಣ 20 ಗಜ ದೂರದಲ್ಲಿ (ಬಸವೇಗೌಡನ ದೊಡ್ಡಿ) ಎಲ್ಲೆಯನ್ನು ಬಿಟ್ಟು ಆಗ್ನೇಯವಾಗಿ ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

13. ಬಿರೋಟದಿಂದ ಬಸವೇಗೌಡನ ದೊಡ್ಡಿ (ಎಲ್ಲೆ) ಗೆ ಹೋಗುವ 4 ಅಡಿ ಅಗಲವುಳ್ಳ ಕಾಲುದಾರಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಇರತಕ್ಕದ್ದು. ಇದು ಬಿರೋಟದ ಸರ್ವೆ 79ನೆ ನಂಬರಿನಲ್ಲಿರುವ ನಾಲೆಯ ಹತ್ತರ ಫಾರೆಸ್ಟನ್ನು ಪ್ರವೇಶಿಸಿ ಸ್ವಲ್ಪ ಆಗ್ನೇಯವಾಗಿ ಹೋಗಿ ಅಲ್ಲಿಂದ ಸುಮಾರು 2 ಮೈಲಿ ಈಶಾನ್ಯಕ್ಕೆ ಹೋಗಿ ಬಸವೇಗೌಡನ ದೊಡ್ಡಿ ಸರ್ವೆ 3ನೆ ನಂಬರಿನ ನೈರುತ್ಯದ ಬಾಂದಿಗೆ ಪೂರ್ವ 30 ಗಜ ದೂರದಲ್ಲಿ ಬಸವೇಗೌಡನ ದೊಡ್ಡಿ (ಎಲ್ಲೆ) ಯನ್ನು ಪ್ರವೇಶಿಸುತ್ತದೆ.

14. ಗಣಾಲಿನಿಂದ ಬಸವೇಗೌಡನ ದೊಡ್ಡಿಗೆ ಹೋಗುವ 3 ಅಡಿ ಅಗಲವುಳ್ಳ ಕಾಲುದಾರಿ—ಇದು ಜನರ ಮತ್ತು ದನಕರಗಳ ಉಪಯೋಗಾರ್ಥವಾದದ್ದು. ಇದು ಗಣಾಲಿನ ಸರ್ವೆ 81ನೆ ನಂಬರಿನ ಈಶಾನ್ಯದ ಬಾಂದಿಗೆ ದಕ್ಷಿಣ $3\frac{1}{2}$ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯವಾಗಿ ಸುಮಾರು $1\frac{1}{2}$ ಮೈಲಿ ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

15. ಮುತ್ತಲಕಟ್ಟೆಯಿಂದ ಸೋಲ್ಬಾಕ್ಕೆ ಹೋಗುವ 2 ಗಜ ಅಗಲವುಳ್ಳ ಬಂಡೀದಾರಿ—ಇದು ಬಂಡಿಗಳೂ, ಜನರೂ, ದನಕರಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ಮುತ್ತಲಕಟ್ಟೆ 1–2ನೆ ಸರ್ವೇ ನಂಬರುಗಳ ಬಾಂದುಗಳು ಕೂಡುವ ಈಶಾನ್ಯ ಮೂಲೆಯ ಬಳಿ ಫಾರೆಸ್ಟನ್ನು ಹೊಕ್ಕು ಸುಮಾರು 1 ಮೈಲಿ ವರೆಗೆ ಆಗ್ನೇಯವಾಗಿ ಹೋಗಿ ಸೋಲ್ಬದ ಸರ್ವೆ 4ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿಗೆ ದಕ್ಷಿಣ ಸುಮಾರು 50 ಗಜ ದೂರದಲ್ಲಿ ಎಲ್ಲೆಯನ್ನು ಸೇರುತ್ತದೆ.

16. ತಾಳವಾಡಿ (ಎಲ್ಲೆ) ಯಿಂದ ಮುತ್ತತ್ತಿ (ಎಲ್ಲೆ)ಗೆ ಹೋಗುವ 5 ಜ ಅಗಲವೂ 7 ಮೈಲಿ ಉದ್ದವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರುಗಳು ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ತಾಳವಾಡಿಯ ಸರ್ವೆ 14ನೆ ನಂಬರಿನ ಈಶಾನ್ಯದ ಬಾಂದಿಗೆ 50 ಗಜ ದಕ್ಷಿಣದಲ್ಲಿ ಎಲ್ಲೆಯನ್ನು ಬಿಟ್ಟು ಆಗ್ನೇಯಕ್ಕೂ, ಪೂರ್ವಕ್ಕೂ, ಅಲ್ಲಿಂದ ಪುನಃ ಆಗ್ನೇಯಕ್ಕೂ ನಂತರ ಪೂರ್ವಕ್ಕೂ ಹೋಗಿ ಮುತ್ತತ್ತಿ ಸರ್ವೆ 1ನೆ ನಂಬರಿನ ಆಗ್ನೇಯ ಮೂಲೆಯ ಬಾಂದಿನಿಂದ 40 ಗಜ ಪಶ್ಚಿಮದಲ್ಲಿ ಮುತ್ತತ್ತಿ (ಎಲ್ಲೆ) ಯನ್ನು ಸೇರುತ್ತದೆ.

17. ಮುತ್ತತ್ತಿಯಿಂದ ಪಾದ್ದರೆಗೆ ಹೋಗುವ 4 ಅಡಿ ಅಗಲವಾದ ಕಾಲುದಾರಿ—ಜನರು, ಜಾನುವಾರುಗಳೂ ತಿರುಗುವದಕ್ಕಾಗಿರುವದು. ಇದು ಮುತ್ತತ್ತಿ ಸರ್ವೆ 2ನೆ ನಂಬರಿನ ಈಶಾನ್ಯದ ಬಾಂದಿನ ಪಕ್ಕದಲ್ಲಿ ಎಲ್ಲೆಯನ್ನು ಬಿಟ್ಟು ಪೂರ್ವಕ್ಕೂ ಮತ್ತು ಈಶಾನ್ಯವಾಗಿಯೂ ಸುಮಾರು 1 ಮೈಲಿ ಹೋಗಿ ಚಿಲಂದ್ವಾಡಿ ಸ್ಟೇಟ್ ಫಾರೆಸ್ಟಿನಲ್ಲಿ ಪಾದ್ದರೆಯ ಕಾಲುದಾರಿಗೆ ಕೂಡಿಕೊಳ್ಳುತ್ತದೆ.

18. ತಾಳವಾಡಿ (ಎಲ್ಲೆ)ಯಿಂದ ಬನ್ನಾಣಿ (ಎಲ್ಲೆ)ಗೆ ಹೋಗುವ 5 ಗಜ ಅಗಲವುಳ್ಳ ಕಾಲುಹಾದಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕೆ. ಇದು ತಾಳವಾಡಿ ಗ್ರಾಮದ ಎಲ್ಲೆಕಟ್ಟೆಗೆ $4\frac{1}{2}$ ಮೈಲಿಯಲ್ಲಿರುವ ಕಾಲುದಾರಿಯಿಂದ ಕವಲೊಡೆದು ಸುಮಾರು $1\frac{1}{2}$ ಮೈಲಿ ಈಶಾನ್ಯವಾಗಿ ಹೋಗಿ ಬನ್ನಾಣಿಗೆ ಹೋಗುತ್ತದೆ.

ಈ ಕೆಳಗೆ ವಿವರಿಸುವ ದೇವಸ್ಥಾನಗಳಿಗೆ ಮಾರ್ಗಗಳು ಬಿಡಲ್ಪಟ್ಟಿವೆ :—

ದೇವಾಲಯದ ಹೆಸರು.	ಇರುವ ಸ್ಥಳ.	ದಾರಿ.
1. ಬೇಟರಾಯಸ್ವಾಮಿ ಗುಡಿ	ಸೋಲ್ಬಾದಿಂದ ಮುತ್ತತ್ತಿಗೆ ಹೋಗುವ ಮಾರ್ಗದಲ್ಲಿದೆ.	ಸೋಲ್ಬಾದ ಸರ್ವೆ 2–3ನೇ ನಂಬರುಗಳು ಸೇರುವಲ್ಲಿ ದಕ್ಷಿಣದ ಬಾಂದಿನಿಂದ 30 ಗಜ ದೂರದಲ್ಲಿ 4 ಅಡಿ ಅಗಲವುಳ್ಳ ದಾರಿಯು ಫಾರೆಸ್ಟನ್ನು ಹೊಕ್ಕು ಸುಮಾರು 6 ಮೈಲಿಗಳ ದೂರ ದಕ್ಷಿಣಕ್ಕೂ ನೈರುತ್ಯವಾಗಿಯೂ ಹೋಗಿ ತಾಳವಾಡಿಗೆ 3 ಮೈಲಿ ದೂರದಲ್ಲಿ ತಾಳವಾಡಿಯಿಂದ ಮುತ್ತತ್ತಿಗೆ ಹೋಗುವ ದೊಡ್ಡದಾರಿಗೆ ಸೇರಿಕೊಳ್ಳುತ್ತದೆ.
2. ಭೀಮೇಶ್ವರಿ ದೇವಸ್ಥಾನ	ಕಾವೇರಿ ನದಿಯ ದಡದಲ್ಲಿದೆ.	4 ಅಡಿ ಅಗಲವುಳ್ಳ ದಾರಿಯು (ತಾಳವಾಡಿಯಿಂದ ಮುತ್ತತ್ತಿಗೆ ಹೋಗುವ) ದೊಡ್ಡ ಹಾದಿಯಿಂದ ತಾಳವಾಡಿ ಗ್ರಾಮದ ಎಲ್ಲೆಕಟ್ಟೆಗೆ $5\frac{1}{4}$ ಮೈಲಿಯಲ್ಲಿ ಕವಲೊಡೆದು ಭೀಮೇಶ್ವರಿ ಗುಡಿಗೆ ಸುಮಾರು 1 ಮೈಲಿ ದಕ್ಷಿಣವಾಗಿ ಹೋಗುತ್ತದೆ.

ಫಾರೆಸ್ಟಿನಲ್ಲಿರುವ ಜಲಾಶಯು (ನೀರಿನ ಆಸರೆ) ಗಳನ್ನು ಈ ಕೆಳಗೆ ವಿವರಿಸುವ ಮೇರೆ ಉಪಯೋಗಿಸಿಕೊಳ್ಳಬಹುದು:—

(ಎ) ಮುರಡೀಬಸವನಕೆರೆ..........ಬಸವಾಪುರ ಮತ್ತು ಬಸವನ ಹಳ್ಳಿಗಳ ಜನಗಳು ವರ್ಷಾಕಾಲವೂ ಈ ದಾರಿಯಲ್ಲಿ ತಿರುಗಬಹುದು. ಬಸವಾಪುರದ ಜನರು ಬೇಸಿಗೆಯಲ್ಲಿ ತಮ್ಮ ದನಕರಗಳನ್ನ ಬಸವಾಪುರದ ಸರ್ವೆ 73ನೆ ನಂಬರಿನಲ್ಲಿ ಸ್ಟೇಟ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಅರ್ಧ ಮೈಲಿ ವರಿಗೂ ಹೊಡೆದುಕ್ಕೊಂಡು ಹೋಗಿ ನಂತರ ಕೆರೆಗೆ ಹೊಡಿಯಬಹುದು. ಬಸವನಹಳ್ಳಿ ಗ್ರಾಮಸ್ಥರು ಬೇಸಿಗೆಯಲ್ಲಿ ತಮ್ಮ ಜಾನುವಾರು ಗಳನ್ನ ಬಸವನಹಳ್ಳಿ ಸರ್ವೆ 22ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಸುಮಾರು ಅರ್ಧಮೈಲಿ ವರಿಗೂ ಹೊಡೆದುಕ್ಕೊಂಡು ಹೋಗಿ ನಂತರ ಬಸವಾಪುರಕ್ಕೂ ಬಸವನಹಳ್ಳಿಗೂ ಪಕ್ಕದಲ್ಲಿರುವ ಕಾಲುದಾರಿಯಿಂದ ಕೆರೆಗೆ ಹೊಡೆದುಕ್ಕೊಂಡು ಹೋಗಬಹುದು.

(ಬಿ) ಭಾವಿ..........ಸೋಲ್ಗೆರೆಯವರು ಈ ದಾರಿಯನ್ನು ವರ್ಷಾಕಾಲವೂ ಉಪಯೋಗಿಸಿಕೊಳ್ಳಬಹುದು. ಸೊಲ್ಗೆರೆ ಸರ್ವೆ 15ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಇವರುಗಳು ಭಾವಿಗೆ ತಿರುಗಾಡತಕ್ಕದ್ದು.

(ಸಿ) ಮಣೇಗಾರಕಟ್ಟೆ........ಬೇಡರಹಳ್ಳಿ ಮತ್ತು ದಾಳನಕಟ್ಟೆ ಗ್ರಾಮಸ್ಥರುಗಳು ಈ ದಾರಿಯನ್ನ ವರ್ಷಾಕಾಲವೂ ಉಪಯೋಗಿಸಿಕೊಳ್ಳಬಹುದು. ಬೇಡರಹಳ್ಳಿ ಗ್ರಾಮದವರು ಬೇಡರಹಳ್ಳಿ ಸರ್ವೆ 5ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಬಂಡೀಹಾದಿಯಲ್ಲಿ ದನಕರುಗಳನ್ನ ಡಿಮಾರ್ಕೇಷನ ಲೈನಬಳಿ ಸುಮಾರು 1 ಮೈಲಿ ದೂರದವರಿವಿಗೂ ಹೊಡೆದುಕ್ಕೊಂಡು ಹೋಗಿ ಫಾರೆಸ್ಟಿನಲ್ಲಿ ಸುಮಾರು 1 ಫರ್ಲಾಂಗ ವರಿವಿಗೂ ಬಂಡೀದಾರಿಯಲ್ಲಿ ಸಾಗಿಸಿ ನಂತರ ಕಟ್ಟೆಗೆ ಹೋಗತಕ್ಕದ್ದು. ದಾಳನಕಟ್ಟೆ ಗ್ರಾಮದವರು ಬೇಸಿಗೆಯಲ್ಲಿ ತಮ್ಮ ಜಾನುವಾರು ಗಳನ್ನ ದಾಳನಕಟ್ಟೆ ಸರ್ವೆ 4ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಬಂಡೀದಾರಿಯಲ್ಲಿ ಹೊಡೆದುಕ್ಕೊಂಡು ಸುಮಾರು ಅರ್ಧಮೈಲಿ ದೂರ ಬಂಡೀಹಾದಿಯಲ್ಲೇ ಹೋಗಿ ನಂತರ ಕಟ್ಟೆಗೆ ಸಾಗಿಸತಕ್ಕದ್ದು.

(ಡಿ) ಷಿಂಷಾನದಿ..........ತಾಳವಾಡಿ ಗ್ರಾಮದವರು ಬೇಸಿಗೆಯಲ್ಲಿ ಈ ದಾರಿಯನ್ನು ಉಪಯೋಗಿಸಿಕ್ಕೊಳ್ಳಬಹುದು. ಬಸವೇಗೌಡನದೊಡ್ಡಿ ಸರ್ವೆ 3ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಡಿಮಾರ್ಕೇಷನ ಲೈನ ವರಿವಿಗೂ ತಮ್ಮ ಜಾನುವಾರುಗಳನ್ನ ಹೊಡೆದುಕ್ಕೊಂಡು ಹೋಗಿ ನಂತರ ಡಿಮಾರ್ಕೇಷನ ಲೈನ ಮಾರ್ಗವಾಗಿಯೆ ಷಿಂಷಾನದಿಗೆ ಹೊಡಿಯತಕ್ಕದ್ದು.

(ಇ) ಮಜ್ಜನಮಡು
(ಎಫ್) ದೇವರೋಣಿ .. } ತಾಳವಾಡಿಯ ದನ ಕಾಯುವವರೂ ಮತ್ತು ಜಾನುವಾರುಗಳ ಮಾಲೀಕರೂ ಸಹಾ ತಮ್ಮ ದನಕರುಗಳನ್ನು ಹುಲ್ಲುಗಾಲದಲ್ಲಿ ಮೇಲೆ ಹೇಳಿದ ಸ್ಥಳಗಳಿಗೆ ಸಾಗಿಸಬಹುದು.

(ಜಿ) ಕಾವೇರೀನದಿ..........ಬನ್ನಾಣಿ ಮತ್ತು ಮುತ್ತತ್ತಿ ದನಾ ಕಾಯುವವರೂ ಮತ್ತು ದನಗಳನ್ನಿಟ್ಟುಕ್ಕೊಂಡಿರತಕ್ಕವರೂ ತಮ್ಮ ದನಕರಗಳನ್ನ ನದಿಗೆ ಸಾಗಿಸಬಹುದು. ಬನ್ನಾಣಿಯ ದನಕರುಗಳುಳ್ಳ ರೈತರು ತಮ್ಮ ಜಾನುವಾರುಗಳನ್ನ ಬೇಸಿಗೆಯಲ್ಲಿ ಬನ್ನಾಣಿಯಿಂದ ಕಾಲುದಾರಿಯಲ್ಲೇ ಸಾಗಿಸಿ ಮುತ್ತತ್ತಿ ಘಾಟಾಮಾರ್ಗಕ್ಕೆ ಸೇರಿ ನಂತರ ಭೀಮೇಶ್ವರಿಯಗುಡಿಯಬಳಿ ನದಿಗೆ ಹೊಡೆಯಬಹುದು. ಮುತ್ತತ್ತಿಯ ಜಾನುವಾರುಗಳುಳ್ಳ ರೈತರು ಮುತ್ತತ್ತಿ ದೇವಸ್ಥಾನದಿಂದ ನದಿಗೆ ಹೋಗುವ ಕಾಲುದಾರಿಯಲ್ಲಿ ತಿರುಗಾಡತಕ್ಕದ್ದು.

ಟಿ. ಅಬ್ದುಲ ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟೀಸು, ತಾರೀಖು 7ನೆ ನವಂಬರ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರಗೂರು ಸೋಮೇಶ್ವರ ದಳಿಕಡು ಡಿಪೋದಲ್ಲಿ ಕಪಿಲಾನದೀ ನೀರಿನ ಕಳೆಯಿಂದ ಹೊಡದುಕೊಂಡುಬಂದ ಚವುಬೀನಾ ಹಕ್ಕುದಾರೀ ವಿಷಯದಲ್ಲಿ 1903ನೆ ಇಸವಿ ನವಂಬರು ಮಾಹೆ 12ನ ತಾರೀಖು ಮೈಸೂರು ಗೆಜೆಟ್ಟಿನ IIನೆ ಭಾಗದ 544ನೆ ಪೇಜನ್ನು ನೋಡತಕ್ಕದ್ದು.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ, ಮೈಸೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 30ನೆ ಅಕ್ಟೋಬರ 1903ನೆ ಇಸವಿ.

ಕೋಲಾರ ತಾಲ್ಲೂಕು ಹುತ್ತೂರು ಹೋಬಳೀಗೆ ಸೇರಿದ ಮಾರ್ಜನ್ನಲ್ಲಿ ನಮೂದು ಮಾಡಿ ಇರತಕ್ಕ ಜೋಡಿ ಗ್ರಾಮಗಳು,

1. ಜೋಡಿ ಚಾಮರಹಳ್ಳಿ,
2. ಜೋಡಿ ಕೊಟ್ಟೂರು ಬಸವಾಪುರ,

ಸದರಿ ಜೋಡಿದಾರ್ರುಗಳಿಂದ ಸರ್ಕಾರಕ್ಕೆ ಬರಬೇಕಾದ ಜೋಡೀ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1903ನೆ ಇಸವಿ ಡಿಸೆಂಬರ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

(ಹೆಚ್ಚು ತಪಶೀಲ್ ಬಗ್ಗೆ 12ನೆ ಮರ್ಕ್ಕಂ 44ನೆ ನಂಬರ ಮೈಸೂರ ಗೆಜೆಟ್ಟಿನ 2ನೆ ಭಾಗದ 544—545—546ನೆ ನಂಬರು ಪೇಜು ನೋಡತಕ್ಕದ್ದು.)

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧ ಪತ್ರಿಕೆ.

ತಾರೀಖು 7ನೆ ನವೆಂಬರ 1903.

1. ಕಂದಾಯದ ಬಾಕೀದಾರರಾದ ಜೋಡಿ ಹೊಲ್ಲಂಬಳ್ಳಿ ಗ್ರಾಮದ ನಾರಾಯಣ ದೀಕ್ಷಿತರು ವಗೈರೆರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1903ನೆ ಇಸವಿ ಡಿಸೆಂಬರು ಮಾಹೆ 22ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–03ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 328—14—11 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಸ್ವತ್ತಿನ ತಪ್ಸೀಲ್.							ಸರಕಾರಕ್ಕೆ ಬರಬೇಕಾದ ಹೆಚ್ಚು ಕಡಮೆ ಬಾಕೀ ಮೊಬಲಗು.
				ಕಟ್ಟಡಗಳು.		ಜಮೀನು.					
				ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ನಂಬರ್ ಅಥವಾ ಹಿಸ್ಸಾ ನಂಬರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.	
					ರೂ. ಆ. ಪೈ.			ಎ.	ಗು.	ರೂ. ಆ. ಪೈ.	ರೂ. ಆ. ಪೈ.
ಕೋಲಾರ	ಸುಗಟೂರು	ಜೋಡಿ ಹೊಲ್ಲಂಬಳ್ಳಿ	ನಾರಾಯಣ ದೀಕ್ಷಿತರು ಸುತ್ತಾ ಕೃಷ್ಣನ ದೀಕ್ಷಿತರು	...	..	ಪರಂಪೋಕು ..		473	9	...	327 14 11 ಶುಭಕೃತು
						ಖುಷ್ಕಿ ..		340	2	570 12 0	1 0 0 ಪ್ರೋಸೆಸ್ ಫೀ
						ತರಿ ..		75	2	335 14 0	—
						ಬಾಗಾಯತು ...		14	2	67 0 0	328 14 11
								902	15	973 10 0	

ಚಕ್ಕುಬಂದಿ.
ಪೂರ್ವಕ್ಕೆ—ಯರ್ರಂಗಟ್ಟ.
ಪಶ್ಚಿಮಕ್ಕೆ—ದೊಡ್ಡನಹಳ್ಳಿ.
ಉತ್ತರಕ್ಕೆ—ಬೆಳಗಾನಹಳ್ಳಿ.
ದಕ್ಷಿಣಕ್ಕೆ—ಹಾಳು ಹೊಸೂರು ತಿಪ್ಪಸಂದ್ರ.
(ಈ ಮಧ್ಯೆ ಇರುವ ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ನವಂಬರ್ 1903.

1. ಕಂದಾಯದ ಬಾಕೀದಾರರಾದ ಜೋಡಿ ಹೋಳೂರು ಗ್ರಾಮದ ಶೀನಪ್ಪ ವಗೈರೇರಿಂದ ಬರಬೇಕಾದ ಜವಿರ್ಹಾ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಛೇರಿಯಲ್ಲಿ ಸರ್ 1903ನೆ ಇಸವಿ ಡಿಸೆಂಬರ್ ಮಾಹೆ 22ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–03ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 440–11–6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೊ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನ ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಸ್ಥಳದ ಹೆಸರು.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ಹಣದ ಬಾಬ್ತು ಮತ್ತು ಮೊಬಲಗು. ರೂ.	ಆ.	ಪೈ.	
ಕೋಲಾರ	ಹೋಳೂರು	ಜೋಡಿ ಹೋಳೂರು	ಶೀನಪ್ಪ ವಗೈರೆ	...	ರೂ. ಆ. ಪೈ. ...		ಖುಷ್ಕಿ ..	871	36	1,760	0	0	439	11	6	ಶುಭಕೃತು
							ತರಿ ..	2	24	13	0	0	1	0	0	ಪ್ರೊಸೆಸ್ ಫೀ
							ಬಾಗಾಯತು...	40	30	169	0	0				
													440	11	6	
								915	10	1,942	0	0				
							ಚಕ್ಕುಬಂದಿ. ಪೂರ್ವಕ್ಕೆ—ಮಾರೇನಹಳ್ಳಿ ಸರಹದ್ದು. ಪಶ್ಚಿಮಕ್ಕೆ—ಚನ್ನಗಟ್ಟ ಸರಹದ್ದು. ಉತ್ತರಕ್ಕೆ—ಗಟ್ಟಹಳ್ಳಿ ಸರಹದ್ದು. ದಕ್ಷಿಣಕ್ಕೆ—ಸೋಮಸಂದ್ರ ಸರಹದ್ದು. (ಈಮಧ್ಯೆ ಇರುವ ಪೂರಾಗ್ರಾಮ.)									

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾಕ್, ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧ ಪತ್ರಿಕೆ.

ತಾರೀಖು 3ನೆ ನವಂಬರ 1903.

1. ಕಂದಾಯದ ಬಾಕೀದಾರರಾದ ಜೋಡಿ ಹಾಲತ್ತಿ ಗ್ರಾಮದ ಶಾಂಭಟ್ಟ ವಗ್ಯೆರೇ 18 ಜನರಿಂದ ಖರಪೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸರ್ಕಾರಕ್ಕೆ ಸೇರಿಸಿಕೊಂಡ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟು ನಾಗಮಂಗಲ ತಾಲ್ಲೂಕು ಜೋಡಿ ಹಾಲತ್ತಿ ಗ್ರಾಮದಲ್ಲಿ 1904ನೆ ಜನವರಿ 4ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜ್ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಸದರೀ ತಾರೀಖು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 245—5—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸ್ಯೆನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಪ್ರಾಕೃತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ಮಿಯಾದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. [illegible]	ಖುಷ್ಕಿ, ತರಿ ಬಾಗಾಯಿತು.	ವಿಸ್ತೀರ್ಣ.		[illegible]			ಸರ್ಕಾರಕ್ಕೆ ಬರಬೇಕಾದ ಬಾಕಿ [illegible]			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ನಾಗಮಂಗಲ	ನಾಗಮಂಗಲ	ಜೋಡಿ ಹಾಲತ್ತಿ	ಶಾಂಭಟ್ಟ ವಗ್ಯೆರೆ 18 ಜನ	...	...	.	ಪರಂಬೋಕು	498	22	...		..	121	14	11	ಪವ
							ಖುಷ್ಕಿ	319	10	253	0	0	121	14	11	ಶುಭಕೃತು
							ಬಾಗಾಯಿತು	8	20	25	0	0	0	8	0	ನೋಟಿಸ್ ಫೀ
													0	8	0	ಜಪ್ತಿ ಫೀ
								826	12	278	0	0	0	8	0	ಹರಾಜ್ ಫೀ
													245	5	10	
						ಅಂದಾಜು (1,668-0-0)										
													ವಸೂಲ್ ತಾರೀಖು ವರೆಗೆ ಬಡ್ಡಿ ಬರಬೇಕು.			

* ಯಾ ಬಾಕಿ ಇರುವವಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಕಾಂತರಾಜೆ ಅರಸ್, ಡೆಪ್ಯುಟಿ ಕಮ್ಮಿಷನರ.

ಕಡೂರು ಡಿಸ್ಟ್ರಿಕ್ಟು.

ತಾರೀಖು 19ನೆ ನವಂಬರು 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ತರೀಕೆರೆ ತಾಲ್ಲೂಕು ಕಲ್ಲತ್ತಿಪುರ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸೆ 1904ನೆ ಇಸವಿ ಜನವರಿ ತಾರೀಖು 7ನೆ ಸೋಮವಾರ ಹಗಲು 11 ಘಂಟೆಗೆ ಕಡೂರು ಡಿ॥ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ವಳಪಡಿಸಿ ತರೀಕೆರೆ ತಾಲ್ಲೂಕು ಅಮಲ್ದಾರ್ರ ರೂಬರೂ ತರೀಕೆರೆ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಪ್ಸೆಟ್ ಪ್ರೈಜ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಅಖೈರ್ ಚಡ ದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನ ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಪ್ಸೆಟ್ ಪ್ರೈಸ್ ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಸೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಕೇವಣಿ ಮೊಬಲಗನ್ನು ವಾಪಸ್ ಮಾಡೋಣಾಗುತ್ತದೆ. ಹರಾಜುದಾರು ಹರಾಜು ಮೊಬಲಗಿನಮೇಲೆ ಲೋಕಲ್ ಫಂಡು ಸಹಾ ಕೊಡುವದಕ್ಕೆ ಬದ್ಧರಾಗಿರತಕ್ಕದ್ದು.

3. ಮೇಲ್ಕಂಡ ಅಪ್ಸೆಂಟ್ ಪ್ರೈಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೆ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಎಲ್ಲಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಸೇಕಡಾ 25 ರೂಪಾಯಿಗಳ ಮೇರೆ ಆಗುವ ಕೇವಣಿ ಮೊಬಲಗನ್ನು ಹರಾಜ್ ಖೈದಾದ ವಡನೆಯೇ 2ನೆ ಪ್ಯಾರಾದಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗಿನ ಭರ್ತಿಗೆ ವಳಪಟ್ಟು ಅಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನು ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೆ ದಿವಸ ಸೂರ್ಯಾಸ್ತಮಯಕ್ಕೆ ಮುಂಚಿಯೇ ಅಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ಹಾಗೆ ಚಡ ದರಖಾಸ್ತುದಾರನು ಡಿಪಾಜಿಟ್ ಅಥವಾ ವಿಕ್ರಯದ ಬಾಕೀ ಮೊಬಲಗನ್ನು ಕೊಡದೆ ತಪ್ಪಿದರೆ ಅವನ ಖರ್ಚಿನಿಂದಲೂ ಅವನಿಗೆ ನಷ್ಟಕರವಾಗಿಯೂ ಸದರೀ ಜಮೀನ್ ಪುನಃ ಹರಾಜು ಮಾಡಲ್ಪಡುವದು. ಎರಡನೇ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕೆ ಅವನು ಗುರಿಯಾಗಿರಬೇಕು. ಆದರೆ ಜಾಸ್ತಿ ಏನಾದರೂ ಹುಟ್ಟಿದರೆ ಅದಕ್ಕೆ ಅವನಿಗೆ ಯಾವ ಹಕ್ಕೂ ಇರಲಾರದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮೀನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೆ 5ನೆ ಸಾಲ್ ಅರ್ಧ ಆಕಾರ 6ನೆ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತಿ ಕೊಡುವದಕ್ಕೆ ಮುಂಚೆ ಜಮೀನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟಾವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಫೈಲ್ ಮಾಡಿಯೇ ಆಗಲಿ ಸದರೀ ಜಮೀನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮೀನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮೀನಿನ.		ಷರಾ.
				ವಿಸ್ತೀರ್ಣ.	ಆಕಾರ.	
ಸರ್ವೆನಂಬರ್ 4ರಲ್ಲಿ ಆದ ಹೊಸ ನಂಬರ್ 32	ಕಲ್ಲತ್ತಿ ಯಸ್ಟೇಟು ಮಿಸ್ಟರ್ ಸೇಂಟ್‌ಕ್ಲೇರ್ ಜಾರ್ಸ್ ಸಾಹೇಬರವರು.	ತರೀಕೆರೆ ತಾಲ್ಲೂಕು ಲಿಂಗದಹಳ್ಳಿ ಹೋಬಳಿ ಕಲ್ಲತ್ತಿಪುರ ಗ್ರಾಮ.	ಸರ್ವೆ ಬಾಂದು ಅನುಸಾರ.	100 ಎಕರೆ 11 ಗುಂಟೆ.	(ಹರಾಜುದಾರ) ಖಾಯಿಷ ಪ್ರಕಾರ ಎಕರೆ 1ರ ರೂ. 1-[illegible]-0 ಅಥವಾ ರೂ. 1-0-0 ಮೇರೆ.	

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿರವರ ಕೋರ್ಟಿನಲ್ಲಿ.

ಸ್ 1903 –1904ನೆ ಇಸವಿ ಅರ್ಜೀ ನಂಬರ್ 176.

ಮೃತಪಟ್ಟ ಉದ್ದಿ ಶ್ಯಾಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕೋಲಾರದಲ್ಲಿರುವ ಲಕ್ಷ್ಮೀದೇವಮ್ಮನೆಂಬುವರು, ಮೃತಪಟ್ಟ ಸದರೀ ಉದ್ದಿ ಶ್ಯಾಮರಾಯರಿಗೆ ಸೊಸೆ ಆಗಬೇಕೆಂಬ ಹಕ್ಕುದಾರೀ ಮೇಲೆ ಮಳವಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ಉದ್ದಿ ಶ್ಯಾಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ಆಕ್ಟ್ಯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮೀದೇವಮ್ಮನವರ ಅರ್ಜಿಯನ್ನು ಸ್ 1903ನೆ ಇಸವಿ ಡಿಸೆಂಬರು ತಿಂಗಳು ತಾರೀಖು 21 ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಉದ್ದಿ ಶ್ಯಾಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1903ನೆ ಇಸವಿ ನವಂಬರ್ ತಿಂಗಳು 19ನೆ ತಾರೀಖಿನಲ್ಲಿ ಕೋರ್ಟಿನ ಮೊಹರು ಮತ್ತು ನನ್ನ ದಸ್ತುಖತ್ತಿನೊಡನೆ ಕೊಡೋಣಾಗಿದೆ.

ಸ್ 1903—1904ನೆ ಇಸವಿ ಅರ್ಜೀ ನಂಬರು 181.

ಮೃತಪಟ್ಟ ರಡ್ಡೆಪ್ಪ ಎಂಬವರ ಆಸ್ತೀ ವಿಷಯದಲ್ಲಿ —

ಅರ್ಜೀದಾರು ಪಾವಗಡದ ತಾಲ್ಲೂಕು ಕನ್ನಂಪಲ್ಲಿಯಲ್ಲಿರುವ ವಿರೂಪಾಕ್ಷಪ್ಪ ಎಂಬುವರು, ಮೃತಪಟ್ಟ ಸದರೀ ರೆಡ್ಡೆಪ್ಪ ಎಂಬವರಿಗೆ ಸಹೋದರನು ಆಗಬೇಕೆಂಬ ಹಕ್ಕುದಾರಿ ಮೇಲೆ ಪಾವಗಡದ ತಾಲ್ಲೂಕು ಕನ್ನಂಪಲ್ಲಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ರಡ್ಡೆಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವಿರೂಪಾಕ್ಷಪ್ಪನವರ ಅರ್ಜಿಯನ್ನು ಸ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಡ್ಡೆಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1903ನೆ ಇಸವಿ ನವಂಬರ್ ತಿಂಗಳು ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನನ್ನ ದಸ್ತುಖತ್ತಿನೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜಿ.

ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 47.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 3, ಸನ್ 1903.

IIನೆ ಭಾಗ.

ಇಂಡ್ಯಾ ಗವರ್ನಮೆಂಟು, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 8ನೆ ನವಂಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಗವರ್ನಮೆಂಟ್ ಪ್ರೊಸಿಡಿಂಗ್ಸ್ 17–8–1903ನೆ ಮರ್ಕಂ 185—2560ನೆ ನಂಬರ್ ಅನುಸರಿಸಿ ಬೆಂಗಳೂರು ಡಿಸ್ಟ್ರಿಕ್ಟು ಬೆಂಗಳೂರು ರೇಂಜಿಗೆ ಸೇರಿದ ಪೀಣ್ಯ ಪ್ಲಾಂಟೇಷನ್ನಿನಲ್ಲಿ ಇದರಡಿ ನಮೂದಿಸಿರುವ ಮಾರ್ಗಗಳು ಇದರಿಂದ ಮಂಜೂರ್ ಮಾಡಲ್ಪಟ್ಟಿವೆ.

I. ಪೀಣ್ಯ ಬ್ಲಾಕ್:—ಮೈಸೂರು ಇಂಜಿನಿಯರ್ ಇಲಾಖೆಯವರ ಉಪಯೋಗಕ್ಕೆ ಮಾತ್ರ ಬಳಪಟ್ಟ ಸುಮಾರು 30ಗಜ ಅಗಲವುಳ್ಳ ಮೈಸೂರು ವಾಟರ್ ವರ್ಕ್ಸ್ ಪೈಪ್ ಲೈನ್—ಪೀಣ್ಯ ಗ್ರಾಮದ ಸರ್ವೆ 131ನೆ ನಂಬರಿಗೆ ಪೂರ್ವ ದಿಕ್ಕಿನಲ್ಲಿ ಇರುವ ಪ್ಲಾಂಟೇಷನ್ನಿನ ನೈರುತ್ಯ ಮೂಲೆಗೆ ಉತ್ತರದಲ್ಲಿ ಸುಮಾರು ಒಂದು ಫರ್ಲಾಂಗಿನಲ್ಲಿ ಪೀಣ್ಯ ಪ್ಲಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಆಗ್ನೇಯವಾಗಿ ಸುಮಾರು 2,512 ಗಜ ದೂರ ಹೋಗಿ ಪ್ಲಾಂಟೇಷನ್ನಿಗೆ ಆಗ್ನೇಯ ಮೂಲೆಗೆ ಉತ್ತರಕ್ಕೆ ಸುಮಾರು 20 ಗಜ ದೂರದಲ್ಲಿ ಪ್ಲಾಂಟೇಷನನ್ನು ಬಿಟ್ಟು ಪೀಣ್ಯ ಗ್ರಾಮದ ಸರ್ವೆ 72ನೆ ನಂಬರನ್ನು ಪ್ರವೇಶಿಸುತ್ತದೆ.

II. ಜಾಲಹಳ್ಳಿ ಬ್ಲಾಕ್:—ಬೆಂಗಳೂರು ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ಇಂಜಿನಿಯರ್ ಡಿಪಾರ್ಟ್‌ಮೆಂಟಿನವರ ಹಕ್ಕಾಗಿ ಬಳಪಟ್ಟ ಸುಮಾರು 30 ಗಜ ಅಗಲವುಳ್ಳ ಸಿವಿಲ್ ಅಂಡ್ ಮಿಲಿಟರಿ ಸ್ಟೇಷನ್ ವಾಟರ್ ವರ್ಕ್ಸ್ ಲೈನ್—ಜಾಲಹಳ್ಳಿ ಗ್ರಾಮದ ಸರ್ವೆ 5ನೆ ನಂಬರು ಈಶಾನ್ಯ ಮೂಲೆಗೆ ಪಶ್ಚಿಮವಾಗಿ ಮೊದಲನೇ ಮೂಲೆಗೆ ಪೂರ್ವ ಸುಮಾರು 150 ಗಜದಲ್ಲಿ ಪ್ಲಾಂಟೇಷನನ್ನು ಪ್ರವೇಶಿಸಿ ಅಲ್ಲಿಂದ ಸುಮಾರು 1,819 ಗಜಗಳ ದೂರ ನೇರವಾಗಿ ಆಗ್ನೇಯಕ್ಕೆ ಹೊರಟು ಜಾಲಹಳ್ಳಿ ಪ್ಲಾಂಟೇಷನ್ನಿನ ಆಗ್ನೇಯ ಮೂಲೆಗೆ ಪಶ್ಚಿಮಕ್ಕೆ ಸುಮಾರು 1 ಫರ್ಲಾಂಗ್ ದೂರದಲ್ಲಿ ಪ್ಲಾಂಟೇಷನನ್ನು ಬಿಟ್ಟು ಜಾಲಹಳ್ಳಿ ಗ್ರಾಮದ ಸರ್ವೆ 11ನೆ ನಂಬರನ್ನು ಪ್ರವೇಶಿಸುತ್ತದೆ.

ನೋಟೀಸು, ತಾರೀಖು 14ನೆ ನವಂಬರ್ 1903ನೆ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ—ಕಾರ್ಕಾರ್ಹಳ್ಳಿ ತಾಲ್ಲೂಕು ಕಬ್ಬಾಳ ಫಾರೆಸ್ಟು ಗಾರ್ಡು ಆಗಿದ್ದ ಶಿತಾರಾಮಯ್ಯನ 1902ನೆ ಇಸವಿ ನವಂಬರ್ ಮಾಹೆ ತಲಬು 4–12–9 ಬಟವಾಡೆ ಆಗದೆ ಸದರಿ ಮೊಬಲಗು ಕಾರ್ಕಾರ್ಹಳ್ಳಿ ಫಾರೆಸ್ಟು ರೇಂಜಾಫೀಸಿನಲ್ಲಿ ಅಮಾನತ್ತು ನಿಲ್ಲುತ್ತಾ ಬಂದಿರುತ್ತೆ. ಈ ಮೊಬಲಗು ಸದರಿ ಶಿತಾರಾಮಯ್ಯನೇ ಆಗಲಿ ಅಥವಾ ಈತನ ಕಡೆ ನ್ಯಾಯವಾದ ವಾರಸದಾರರೇ ಆಗಲಿ ಈ ತಾರೀಖು ಲಾಗಾಯಿತು ಎರಡು ತಿಂಗಳು ವಳಗಾಗಿ ಸದರಿ ಮೊಬಲಗು 4—12—9 ಯನ್ನು ಪಡಿಯದೆ ತಪ್ಪಿದಲ್ಲಿ ಸರ್ಕಾರಕ್ಕೆ ಮೇಲ್ಕಂಡ ಮೊಬಲಗು ಸೇರಿಸಿಕೊಳ್ಳಲಾಗುತ್ತೆ.

ತಾರೀಖು 23ನೆ ನವಂಬರ 1903.

1903ನೆ ಇಸವಿ ಅಕ್ಟೋಬರ 30ನೆ ಮರ್ಕ್ಯಂ 194—2893ನೆ ನಂಬರ ಗೌರ್ನಮೆಂಟ್ ಆರ್ಡರ ಅನುಸರಿಸಿ

ಕೊಡೋಣಾದ ಇಸ್ತಿಹಾರ್‌ನಾಮಾ—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟು ಕಾಕಾನಹಳ್ಳಿ ರೇಂಜ್ ಆಫೀಸರ ಮೇಲ್ವಿಚಾರಣೆಯಲ್ಲಿರುವ, ಮೈಸೂರು ಡಿಸ್ಟ್ರಿಕ್ಟು ಮಳವಳ್ಳಿ ತಾಲ್ಲೂಕು ಬಸವನ ಬೆಟ್ಟದ ಸ್ಟೇಟ್ ಫಾರೆಸ್ಟಿನಲ್ಲಿ ಈ ಕೆಳಗೆ ವಿವರಿಸುವ ಮೇರೆ ದಾರಿಗಳೂ ಮತ್ತು ಜಲಾಶಯಗಳಿಗೆ ಮಾರ್ಗಗಳು ಜನೋಪಯೋಗಕ್ಕಾಗಿ ಬಿಡಲ್ಪಟ್ಟಿವೆ.

1. ಹರಿಹರದಿಂದ ಸಾಂಬಾಪುರಕ್ಕೆ ಹೋಗುವ ಕಾಲುದಾರಿ ಇದು ನಾಲ್ಕು ಅಡಿ ಅಗಲವುಳ್ಳದ್ದು—ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಈ ದಾರಿಯು ಹರಿಹರದ ಸರ್ವೆ 69ನೆ ನಂಬರಿನ ದಕ್ಷಿಣ ದಿಕ್ಕಿನ ಎಲ್ಲೆಯ ನಾಲಾ ಯೇರಿ ಮೇಲಣ ಎರಡು ಬಾಂದುಗಳ ಬಳಿ ಫಾರೆಸ್ಟನ್ನು ಹೊಕ್ಕು ಸುಮಾರು ಎರಡು ಮೈಲಿಗಳ ವರಿಗೆ ದಕ್ಷಿಣಕ್ಕೆ ಹೋಗಿ ನಂತರ 2 ಮೈಲಿಗಳು ನೈರುತ್ಯವಾಗಿ ಹೋಗಿ ಸಾಂಬಾಪುರದ ಸರ್ವೆ 3ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ 30 ಗಜ ಉತ್ತರವಾಗಿ (ಸಾಂಬಾಪುರದ) ಎಲ್ಲೆಯೊಳಕ್ಕೆ ಪ್ರವೇಶಿಸುತ್ತದೆ.

2. ಸಾಂಬಾಪುರ (ಎಲ್ಲೆ ಕಟ್ಟು) ನಿಂದ ಸೋಲ್ಗೆರೆ (ಎಲ್ಲೆ) ಗೆ ಹೋಗುವ ನಾಲ್ಕು ಅಡಿ ಅಗಲವುಳ್ಳ ಕಾಲುದಾರಿ—ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಇರತಕ್ಕದ್ದು. ಈ ದಾರಿಯು ಸಾಂಬಾಪುರದ ಸರ್ವೆ 3ನೆ ನಂಬರ ಜಮೀನಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ ದಿಕ್ಕಿನಲ್ಲಿ ಸಾಂಬಾಪುರದ (ಎಲ್ಲೆ) ಯನ್ನು ಬಿಟ್ಟು ಸುಮಾರು 1½ ಮೈಲಿ ದಕ್ಷಿಣಕ್ಕೆ ಹೋಗಿ ಸೋಲ್ಗೆರೆಯ ಸರ್ವೆ 4ನೆ ನಂಬರಿನ ಈಶಾನ್ಯ ಬಾಂದುಗಳ ಹತ್ತಿರ (ಸೋಲ್ಗೆರೆ) ಎಲ್ಲೆಯನ್ನು ಸೇರುತ್ತದೆ.

3. ಸೋಲ್ಗೆರೆಯಿಂದ ಭಾವಿಗೆ ಹೋಗುವ ಎರಡು ಗಜ ಅಗಲ ಸುಮಾರು 150 ಗಜ ಉದ್ದವುಳ್ಳ ಕಾಲುದಾರಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಾರ್ಥವಾದದ್ದು. ಇದು ಸೋಲ್ಗೆರೆ ಸರ್ವೆ 15ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಂದ ಪೂರ್ವಕ್ಕೆ 160 ಗಜಗಳ ದೂರದಲ್ಲಿ ಎಲ್ಲೆಯನ್ನು ಬಿಟ್ಟು ಸ್ವಲ್ಪ ನೈರುತ್ಯಕ್ಕೆ ಹೋಗಿ ಭಾವಿಯ ಬಳಿ ಖೈದಾಗುತ್ತದೆ.

4. ಸೋಲಿಗೆರೆಯಿಂದ ಬಸವನಹಳ್ಳಿ (ಎಲ್ಲೆ) ಗೆ ಹೋಗುವ ಕಾಲುದಾರಿ 4 ಅಡಿ ಅಗಲ 3 ಮೈಲಿ ಉದ್ದವುಳ್ಳದ್ದು—ಜನರ ಮತ್ತು ದನಕರಗಳ ಉಪಯೋಗಕ್ಕೆ. ಇದು ಸೋಲಿಗೆರೆ ಸರ್ವೆ 15ನೆ ನಂಬರು ನೈರುತ್ಯ ಮೂಲೆಯ ಬಾಂದುಗಳು ಶೇರುವ ಬಳಿ ಸೋಲಿಗೆರೆ (ಎಲ್ಲೆ) ಬಿಟ್ಟು ಉತ್ತರಕ್ಕೆ ಹೋಗಿ ನಂತರ ಪಶ್ಚಿಮಕ್ಕೆ ಹೋಗಿ ಅಲ್ಲಿಂದ ಪುನಃ ಉತ್ತರವಾಗಿ ಬಸವನಹಳ್ಳಿಗೆ ಹೋಗುತ್ತದೆ.

5. ನಂದೀಪುರದಿಂದ ಬಸವನಹಳ್ಳಿ (ಎಲ್ಲೆ) ಗೆ ಜನರು ಮತ್ತು ಜಾನುವಾರುಗಳು ತಿರಗಾಡುವ ಎರಡು ಅಡಿ ಅಗಲವುಳ್ಳ ಕಾಲುದಾರಿ—ಇದು ನಂದೀಪುರದ ಸರ್ವೆ 69ನೆ ನಂಬರಿನ ನೈರುತ್ಯ ಮೂಲೆಯ ಬಾಂದಿನ ಹತ್ತಿರ ಫಾರೆಸ್ಟನ್ನು ಹೊಕ್ಕು ಆಗ್ನೇಯವಾಗಿ ಸುಮಾರು 2 ಮೈಲಿಗಳ ವರಿವಿಗೆ ಹೋಗಿ ಬಸವನಹಳ್ಳಿ ಸರ್ವೆ 22ನೆ ನಂಬರಿನ ನೈರುತ್ಯ ಬಾಂದುಗಳಿಗೆ ಉತ್ತರ 20 ಗಜ ದೂರದಲ್ಲಿ ಯಲ್ಲೆಯನ್ನು ಶೇರುತ್ತದೆ.

6. ದೇವೀರಹಳ್ಳಿಯಿಂದ ಬಸವನಹಳ್ಳಿ (ಎಲ್ಲೆ) ಗೆ ಜನರು ಮತ್ತು ದನಕರಗಳು ತಿರಗಾಡುವ ಕಾಲುದಾರಿ 4 ಅಡಿ ಅಗಲ—ಇದು ದೇವರಹಳ್ಳಿ ಸರ್ವೆ 53ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ 20 ಗಜ ದೂರದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣಕ್ಕೆ ಹೋಗಿ ಅಲ್ಲಿಂದ ಸುಮಾರು 1½ ಮೈಲಿ ನೈರುತ್ಯವಾಗಿ ಹೋಗಿ ಬಸವನಹಳ್ಳಿ ಸರ್ವೆ 5ನೆ ನಂಬರಿನ ವಾಯುವ್ಯ ದಿಕ್ಕಿನ ಬಾಂದಿನ ಬಳಿ ಎಲ್ಲೆಯನ್ನು ಶೇರುತ್ತದೆ.

7. ಬಸವಾಪುರದಿಂದ ಬಸವನಹಳ್ಳಿ (ಎಲ್ಲೆ)ಗೆ ಜನರು ಮತ್ತು ದನಕರಗಳು ತಿರುಗಾಡುವ ನಾಲ್ಕು ಅಡಿ ಅಗಲ ಉಳ್ಳ ಕಾಲು ದಾರಿ—ಇದು ಬಸವಾ ಪುರದ ಸರ್ವೆ 73ನೆ ನಂಬರ ಜಮೀನಿನ ನೈರುತ್ಯ ಬಾಂದಿನ ಬಳಿ ಫಾರೆಸ್ಟನ್ನು ಹೊಕ್ಕು ಆಗ್ನೇಯವಾಗಿಯೂ ದಕ್ಷಿಣವಾಗಿಯೂ ಸುಮಾರು ಎರಡು ಮೈಲಿಗಳು ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

8. ಹರಿಹರದಿಂದ ಕೋಣನ ಗುಂಡಿ (ಎಲ್ಲೆ)ಗೆ ಹೋಗುವ 2 ಗಜ ಅಗಲವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರಗಳ ಉಪಯೋಗಾರ್ಥವಾಗಿ ಇರತಕ್ಕದ್ದು. ಇದು ಡಿಮಾರ್ಕೇಷನ್ ಲೈನಿಗೆ ಸುಮಾರು 2 ಮೈಲಿಯಲ್ಲಿ ಮೇಲ್ಕಂಡ 1ನೆ ನಂಬರು ದಾರಿಯಿಂದ ಕವಲೊಡೆದು ಆಗ್ನೇಯಕ್ಕೆ ಹೋಗಿ ನಂತರ ದಕ್ಷಿಣಕ್ಕೆ ಸುಮಾರು 2½ ಮೈಲಿಗಳ ವರಿಗೂ ಹೋಗಿ ಕೋಣನಗುಂಡಿ ಸರ್ವೆ 11ನೆ ನಂಬರಿನ ಈಶಾನ್ಯದ ಬಾಂದಿಗೆ ಪಶ್ಚಿಮ 40 ಗಜ ದೂರದಲ್ಲಿ (ಕೋಣನಗುಂಡಿ) ಎಲ್ಲೆಯನ್ನು ಪ್ರವೇಶಿಸುತ್ತದೆ.

9. ಬೇಡರಹಳ್ಳಿಯಿಂದ ತಾಳವಾಡಿ (ಎಲ್ಲೆ) ಗೆ ಹೋಗುವ 5 ಗಜ ಅಗಲವುಳ್ಳ ಬಂಡೀದಾರಿ—ಇದು ಜನರು, ಜಾನುವಾರುಗಳು ಮತ್ತು ಬಂಡಿಗಳಿಗಾಗಿ ಇರತಕ್ಕದ್ದು. ಇದು ಬೇಡರಹಳ್ಳಿ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಉತ್ತರ 5 ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣಕ್ಕೂ ಆಗ್ನೇಯಕ್ಕೂ ಡಿಮಾರ್ಕೇಷನ್ ಲೈನ್ ಮಾರ್ಗವಾಗಿ 5 ಫರ್ಲಾಂಗ ವರಿಗೆ ಹೋಗಿ ನಂತರ ಆಗ್ನೇಯಕ್ಕೆ ತಿರುಗಿ ಸುಮಾರು 2½ ಮೈಲಿಗಳು ಹೋಗಿ ತಾಳವಾಡಿ ಸರ್ವೆ 16ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿಗೆ ಪೂರ್ವ 30 ಗಜ ದೂರದಲ್ಲಿ ಎಲ್ಲೆಯನ್ನು ಪ್ರವೇಶಿಸುತ್ತದೆ.

10. ಬೇಡರಹಳ್ಳಿಯಿಂದ ದಾಳನಕಟ್ಟೆ (ಎಲ್ಲೆ) ಗೆ ಹೋಗುವ 2 ಗಜ ಅಗಲವುಳ್ಳ ಬಂಡೀದಾರಿ—ಇದು ಜನರು, ಜಾನುವಾರುಗಳ ಮತ್ತು ಬಂಡಿಗಳಿಗಾಗಿ ಇರತಕ್ಕದ್ದು. ಇದು ಮೇಲ್ಕಂಡ 9ನೆ ಪ್ಯಾರಾದಲ್ಲಿ ನಮೂದಿಸಿರುವಂತೆ ಫಾರೆಸ್ಟನ್ನು ಹೊಕ್ಕು ಡಿಮಾರ್ಕೇಷನ್ ಲೈನಿನಿಂದ ಸುಮಾರು 1 ಫರ್ಲಾಂಗಿನಲ್ಲಿ ಒಡೆದು 1 ಮೈಲಿ ದೂರದಲ್ಲಿ ಫಾರೆಸ್ಟಿನಲ್ಲೇ ದಕ್ಷಿಣ ದಿಕ್ಕಿಗೆ ಹೋಗಿ ದಾಳನಕಟ್ಟೆ ಸರ್ವೆ 4ನೆ ನಂಬರಿನ ವಾಯುವ್ಯದ ಬಾಂದಿಗೆ ಪೂರ್ವ 40 ಗಜ ದೂರದಲ್ಲಿ ಎಲ್ಲೆಯನ್ನು ಸೇರುತ್ತದೆ.

11. ದಾಳನಕಟ್ಟೆ (ಎಲ್ಲೆ) ಯಿಂದ ಬಸವೇಗೌಡನ ದೊಡ್ಡಿ (ಎಲ್ಲೆ) ಗೆ ಹೋಗುವ ಎರಡು ಗಜ ಅಗಲ ಸುಮಾರು ½ ಫರ್ಲಾಂಗ್ ಉದ್ದವಿರುವ ಬಂಡೀದಾರಿ—ಇದು ಜನರು, ಜಾನುವಾರು ಮತ್ತು ಬಂಡಿಗಳು ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ದಾಳನಕಟ್ಟೆ ಸರ್ವೆ 2ನೆ ನಂಬರಿನ ನೈರುತ್ಯ ಮೂಲೆಯ ಬಾಂದಿಗೆ 30 ಗಜ ದೂರದಲ್ಲಿ ಎಲ್ಲೆಯನ್ನು ಬಿಟ್ಟು ದಕ್ಷಿಣಕ್ಕೆ ಹೋಗಿ ಬಸವೇಗೌಡನ ದೊಡ್ಡಿ ಸರ್ವೆ 1ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿನಿಂದ ಪೂರ್ವಕ್ಕೆ 20 ಗಜ ದೂರದಲ್ಲಿ (ಬಸವೇಗೌಡನ ದೊಡ್ಡಿ) ಎಲ್ಲೆಯನ್ನು ಪ್ರವೇಶಿಸುತ್ತದೆ.

12. ಬಸವೇಗೌಡನ ದೊಡ್ಡಿಯಿಂದ ತಾಳವಾಡಿಗೆ ಹೋಗುವ 4 ಅಡಿ ಅಗಲ ಸುಮಾರು 100 ಗಜ ಉದ್ದವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರುಗಳು ತಿರುಗುವದಕ್ಕಾಗಿ ಇರತಕ್ಕದ್ದು. ಇದು ಬಸವೇಗೌಡನ ದೊಡ್ಡಿ ಸರ್ವೆ 7ನೆ ನಂಬರಿನ ಈಶಾನ್ಯ ದಿಕ್ಕಿನ ಮೂಲೆಯ ಬಾಂದಿಗೆ ದಕ್ಷಿಣ 20 ಗಜ ದೂರದಲ್ಲಿ (ಬಸವೇಗೌಡನ ದೊಡ್ಡಿ) ಎಲ್ಲೆಯನ್ನು ಬಿಟ್ಟು ಆಗ್ನೇಯವಾಗಿ ಹೋಗಿ ಫಾರೆಸ್ಟಿನಲ್ಲಿ ಬೈದಾಗುತ್ತದೆ.

13. ಬಿರೋಟದಿಂದ ಬಸವೇಗೌಡನ ದೊಡ್ಡಿ (ಎಲ್ಲೆ) ಗೆ ಹೋಗುವ 4 ಅಡಿ ಅಗಲವುಳ್ಳ ಕಾಲುದಾರಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಇರತಕ್ಕದ್ದು. ಇದು ಬಿರೋಟದ ಸರ್ವೆ 79ನೆ ನಂಬರಿನಲ್ಲಿರುವ ನಾಲೆಯ ಹತ್ತಿರ ಫಾರೆಸ್ಟನ್ನು ಪ್ರವೇಶಿಸಿ ಸ್ವಲ್ಪ ಆಗ್ನೇಯವಾಗಿ ಹೋಗಿ ಅಲ್ಲಿಂದ ಸುಮಾರು 2 ಮೈಲಿ ಈಶಾನ್ಯಕ್ಕೆ ಹೋಗಿ ಬಸವೇಗೌಡನ ದೊಡ್ಡಿ ಸರ್ವೆ 3ನೆ ನಂಬರಿನ ನೈರುತ್ಯದ ಬಾಂದಿಗೆ ಪೂರ್ವ 30 ಗಜ ದೂರದಲ್ಲಿ ಬಸವೇಗೌಡನ ದೊಡ್ಡಿ (ಎಲ್ಲೆ) ಯನ್ನು ಪ್ರವೇಶಿಸುತ್ತದೆ.

14. ಗಣಾಲಿನಿಂದ ಬಸವೇಗೌಡನ ದೊಡ್ಡಿಗೆ ಹೋಗುವ 3 ಅಡಿ ಅಗಲವುಳ್ಳ ಕಾಲುದಾರಿ—ಇದು ಜನರ ಮತ್ತು ದನಕರಗಳ ಉಪಯೋಗಾರ್ಥವಾದದ್ದು. ಇದು ಗಣಾಲಿನ ಸರ್ವೆ 81ನೆ ನಂಬರಿನ ಈಶಾನ್ಯದ ಬಾಂದಿಗೆ ದಕ್ಷಿಣ 3½ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯವಾಗಿ ಸುಮಾರು 1½ ಮೈಲಿ ಹೋಗಿ ಫಾರೆಸ್ಟಿನಲ್ಲಿ ಬೈದಾಗುತ್ತದೆ.

15. ಮುತ್ತಲಕಟ್ಟೆಯಿಂದ ಸೊಲ್ಬಾಕ್ಕೆ ಹೋಗುವ 2 ಗಜ ಅಗಲವುಳ್ಳ ಬಂಡೀದಾರಿ—ಇದು ಬಂಡಿಗಳೂ, ಜನರೂ, ದನಕರಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ಮುತ್ತಲಕಟ್ಟೆ 1–2ನೆ ಸರ್ವೇ ನಂಬರುಗಳ ಬಾಂದುಗಳು ಕೂಡುವ ಈಶಾನ್ಯ ಮೂಲೆಯ ಬಳಿ ಫಾರೆಸ್ಟನ್ನು ಹೊಕ್ಕು ಸುಮಾರು 1 ಮೈಲಿ ವರಿಗೆ ಆಗ್ನೇಯವಾಗಿ ಹೋಗಿ ಸೊಲ್ಬದ ಸರ್ವೆ 4ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿಗೆ ದಕ್ಷಿಣ ಸುಮಾರು 50 ಗಜ ದೂರದಲ್ಲಿ ಎಲ್ಲೆಯನ್ನು ಸೇರುತ್ತದೆ.

16. ತಾಳವಾಡಿ (ಎಲ್ಲೆ) ಯಿಂದ ಮುತ್ತತ್ತಿ (ಎಲ್ಲೆ)ಗೆ ಹೋಗುವ 5ಜ ಅಗಲವೂ 7 ಮೈಲಿ ಉದ್ದವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರುಗಳು ತಿರಗಾಡುವದಕ್ಕಾಗಿ ಇರತಕ್ಕದ್ದು. ಇದು ತಾಳವಾಡಿಯ ಸರ್ವೆ 14ನೆ ನಂಬರಿನ ಈಶಾನ್ಯದ ಬಾಂದಿಗೆ 50 ಗಜ ದಕ್ಷಿಣದಲ್ಲಿ ಎಲ್ಲೆಯನ್ನು ಬಿಟ್ಟು ಆಗ್ನೇಯಕ್ಕೂ, ಪೂರ್ವಕ್ಕೂ, ಅಲ್ಲಿಂದ ಪುನಃ ಆಗ್ನೇಯಕ್ಕೂ ನಂತರ ಪೂರ್ವಕ್ಕೂ ಹೋಗಿ ಮುತ್ತತ್ತಿ ಸರ್ವೆ 1ನೆ ನಂಬರಿನ ಆಗ್ನೇಯ ಮೂಲೆಯ ಬಾಂದಿನಿಂದ 40 ಗಜ ಪಶ್ಚಿಮದಲ್ಲಿ ಮುತ್ತತ್ತಿ ಎಲ್ಲೆಯನ್ನು ಸೇರುತ್ತದೆ.

17. ಮುತ್ತತ್ತಿಯಿಂದ ಪಾದ್ದರೆಗೆ ಹೋಗುವ 4 ಅಡಿ ಅಗಲವಾದ ಕಾಲುದಾರಿ—ಜನರು, ಜಾನುವಾರುಗಳೂ ತಿರುಗುವದಕ್ಕಾಗಿರುವದು. ಇದು ಮುತ್ತತ್ತಿ ಸರ್ವೆ 2ನೆ ನಂಬರಿನ ಈಶಾನ್ಯದ ಬಾಂದಿನ ಪಕ್ಕದಲ್ಲಿ ಎಲ್ಲೆಯನ್ನು ಬಿಟ್ಟು ಪೂರ್ವಕ್ಕೂ ಮತ್ತು ಈಶಾನ್ಯವಾಗಿಯೂ ಸುಮಾರು 1 ಮೈಲಿ ಹೋಗಿ ಚಿಲಂದ್ವಾಡಿ ಸ್ಟೇಟ ಫಾರೆಸ್ಟಿನಲ್ಲಿ ಪಾದ್ದರೆಯ ಕಾಲುದಾರಿಗೆ ಕೂಡಿಕೊಳ್ಳುತ್ತದೆ.

18. ತಾಳವಾಡಿ (ಎಲ್ಲೆ)ಯಿಂದ ಬನ್ನಾಣಿ (ಎಲ್ಲೆ)ಗೆ ಹೋಗುವ 5 ಗಜ ಅಗಲವುಳ್ಳ ಕಾಲುಹಾದಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕೆ. ಇದು ತಾಳವಾಡಿ ಗ್ರಾಮದ ಎಲ್ಲೆಕಟ್ಟಿಗೆ 4½ ಮೈಲಿಯಲ್ಲಿರುವ ಕಾಲುದಾರಿಯಿಂದ ಕವಲೊಡೆದು ಸುಮಾರು 1½ ಮೈಲಿ ಈಶಾನ್ಯವಾಗಿ ಹೋಗಿ ಬನ್ನಾಣಿಗೆ ಹೋಗುತ್ತದೆ.

ಈ ಕೆಳಗೆ ವಿವರಿಸುವ ದೇವಸ್ಥಾನಗಳಿಗೆ ಮಾರ್ಗಗಳು ಬಿಡಲ್ಪಟ್ಟಿವೆ :—

ದೇವಾಲಯದ ಹೆಸರು.	ಇರುವ ಸ್ಥಳ.	ದಾರಿ.
1. ಬೇಟರಾಯಸ್ವಾಮಿ ಗುಡಿ	ಸೊಲ್ಬಾದಿಂದ ಮುತ್ತತ್ತಿಗೆ ಹೋಗುವ ಮಾರ್ಗದಲ್ಲಿದೆ.	ಸೊಲ್ಬದ ಸರ್ವೆ 2–3ನೇ ನಂಬರುಗಳು ಸೇರುವಲ್ಲಿ ದಕ್ಷಿಣದ ಬಾಂದಿನಿಂದ 30 ಗಜ ದೂರದಲ್ಲಿ 4 ಅಡಿ ಅಗಲವುಳ್ಳ ದಾರಿಯು ಫಾರೆಸ್ಟನ್ನು ಹೊಕ್ಕು ಸುಮಾರು 6 ಮೈಲಿಗಳ ದೂರ ದಕ್ಷಿಣಕ್ಕೂ, ನೈರುತ್ಯವಾಗಿಯೂ ಹೋಗಿ ತಾಳವಾಡಿಗೆ 3 ಮೈಲಿ ದೂರದಲ್ಲಿ ತಾಳವಾಡಿಯಿಂದ ಮುತ್ತತ್ತಿಗೆ ಹೋಗುವ ದೊಡ್ಡ ದಾರಿಗೆ ಸೇರಿಕೊಳ್ಳುತ್ತದೆ.
2. ಭೀಮೇಶ್ವರಿ ದೇವಸ್ಥಾನ	ಕಾವೇರಿ ನದಿಯ ದಡದಲ್ಲಿದೆ.	4 ಅಡಿ ಅಗಲವುಳ್ಳ ದಾರಿಯು (ತಾಳವಾಡಿಯಿಂದ ಮುತ್ತತ್ತಿಗೆ ಹೋಗುವ) ದೊಡ್ಡ ಹಾದಿಯಿಂದ ತಾಳವಾಡಿ ಗ್ರಾಮದ ಎಲ್ಲೆಕಟ್ಟಿಗೆ 5¼ ಮೈಲಿಯಲ್ಲಿ ಕವಲೊಡೆದು ಭೀಮೇಶ್ವರಿ ಗುಡಿಗೆ ಸುಮಾರು 1 ಮೈಲಿ ದಕ್ಷಿಣವಾಗಿ ಹೋಗುತ್ತದೆ.

ಫಾರೆಸ್ಟಿನಲ್ಲಿರುವ ಜಲಾಶಯ (ನೀರಿನ ಆಸರೆ) ಗಳನ್ನು ಈ ಕೆಳಗೆ ವಿವರಿಸುವ ಮೇರೆ ಉಪಯೋಗಿಸಿಕೊಳ್ಳಬಹುದು :—

(ಎ) ಮುರಡೀಬಸವನಕೆರೆ.........ಬಸವಾಪುರ ಮತ್ತು ಬಸವನ ಹಳ್ಳಿಗಳ ಜನಗಳು ವರ್ಷಾಕಾಲವೂ ಈ ದಾರಿಯಲ್ಲಿ ತಿರುಗಬಹುದು. ಬಸವಾಪುರದ ಜನರು ಬೇಸಿಗೆಯಲ್ಲಿ ತಮ್ಮ ದನಕರಗಳನ್ನ ಬಸವಾಪುರದ ಸರ್ವೆ 73ನೆ ನಂಬರಿನಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಅರ್ಧ ಮೈಲಿ ವರಿಗೂ ಹೊಡೆದುಕ್ಕೊಂಡು ಹೋಗಿ ನಂತರ ಕೆರೆಗೆ ಹೊಡಿಯಬಹುದು. ಬಸವನಹಳ್ಳಿ ಗ್ರಾಮಸ್ಥರು ಬೇಸಿಗೆಯಲ್ಲಿ ತಮ್ಮ ಜಾನುವಾರುಗಳನ್ನ ಬಸವನಹಳ್ಳಿ ಸರ್ವೆ 22ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಸುಮಾರು ಅರ್ಧಮೈಲಿ ವರಿಗೂ ಹೊಡೆದುಕ್ಕೊಂಡು ಹೋಗಿ ನಂತರ ಬಸವಾಪುರಕ್ಕೂ ಬಸವನಹಳ್ಳಿಗೂ ಪಕ್ಕದಲ್ಲಿರುವ ಕಾಲುದಾರಿಯಿಂದ ಕೆರೆಗೆ ಹೊಡೆದುಕ್ಕೊಂಡು ಹೋಗಬಹುದು.

(ಬಿ) ಭಾವಿ...........ಸೋಲ್ಗೆರೆಯವರು ಈ ದಾರಿಯನ್ನು ವರ್ಷಾಕಾಲವೂ ಉಪಯೋಗಿಸಿಕೊಳ್ಳಬಹುದು. ಸೋಲ್ಗೆರೆ ಸರ್ವೆ 15ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಇವರುಗಳು ಭಾವಿಗೆ ತಿರುಗಾಡತಕ್ಕದ್ದು.

(ಸಿ) ಮಣೇಗಾರ್‌ಕಟ್ಟೆ............ಬೇಡರಹಳ್ಳಿ ಮತ್ತು ದಾಳನಕಟ್ಟೆ ಗ್ರಾಮಸ್ಥರುಗಳು ಈ ದಾರಿಯನ್ನ ವರ್ಷಾಕಾಲವೂ ಉಪಯೋಗಿಸಿಕೊಳ್ಳಬಹುದು. ಬೇಡರಹಳ್ಳಿ ಗ್ರಾಮದವರು ಬೇಡರಹಳ್ಳಿ ಸರ್ವೆ 5ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಬಂಡೀಹಾದಿಯಲ್ಲಿ ದನಕರುಗಳನ್ನ ಡಿಮಾರ್ಕೇಷನ್ ಲೈನ್‌ಬಳಿ ಸುಮಾರು 1 ಮೈಲಿ ದೂರದವರಿವಿಗೂ ಹೊಡೆದುಕ್ಕೊಂಡು ಹೋಗಿ ಫಾರೆಸ್ಟಿನಲ್ಲಿ ಸುಮಾರು 1 ಫರ್ಲಾಂಗ್ ವರಿವಿಗೂ ಬಂಡೀದಾರಿಯಲ್ಲಿ ಸಾಗಿಸಿ ನಂತರ ಕಟ್ಟೆಗೆ ಹೋಗತಕ್ಕದ್ದು. ದಾಳನಕಟ್ಟೆ ಗ್ರಾಮದವರು ಬೇಸಿಗೆಯಲ್ಲಿ ತಮ್ಮ ಜಾನುವಾರುಗಳನ್ನ ದಾಳನಕಟ್ಟೆ ಸರ್ವೆ 4ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಬಂಡೀದಾರಿಯಲ್ಲಿ ಹೊಡೆದುಕ್ಕೊಂಡು ಸುಮಾರು ಅರ್ಧಮೈಲಿ ದೂರ ಬಂಡೀಹಾದಿಯಲ್ಲೇ ಹೋಗಿ ನಂತರ ಕಟ್ಟೆಗೆ ಸಾಗಿಸತಕ್ಕದ್ದು.

(ಡಿ) ಷಿಂಷಾನದಿ...........ತಾಳವಾಡಿ ಗ್ರಾಮದವರು ಬೇಸಿಗೆಯಲ್ಲಿ ಈ ದಾರಿಯನ್ನು ಉಪಯೋಗಿಸಿಕ್ಕೊಳ್ಳಬಹುದು. ಬಸವೇಗೌಡನದೊಡ್ಡಿ ಸರ್ವೆ 3ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಡಿಮಾರ್ಕೇಷನ್ ಲೈನ್ ವರಿವಿಗೂ ತಮ್ಮ ಜಾನುವಾರುಗಳನ್ನ ಹೊಡೆದುಕ್ಕೊಂಡು ಹೋಗಿ ನಂತರ ಡಿಮಾರ್ಕೇಷನ್ ಲೈನ್ ಮಾರ್ಗವಾಗಿಯೆ ಷಿಂಷಾನದಿಗೆ ಹೊಡಿಯತಕ್ಕದ್ದು.

(ಇ) ಮಜ್ಜನಮಡು ..
(ಎಫ್) ದೇವರೋಣಿ .. } ತಾಳವಾಡಿಯ ದನ ಕಾಯುವವರೂ ಮತ್ತು ಜಾನುವಾರುಗಳ ಮಾಲೀಕರೂ ಸಹಾ ತಮ್ಮ ದನಕರುಗಳನ್ನು ಹುಲ್ಲುಗಾಲದಲ್ಲಿ ಮೇಲೆ ಹೇಳಿದ ಸ್ಥಳಗಳಿಗೆ ಸಾಗಿಸಬಹುದು.

(ಜಿ) ಕಾವೇರೀನದಿ..........ಬನ್ನಾಣಿ ಮತ್ತು ಮುತ್ತತ್ತಿ ದನಾ ಕಾಯುವವರೂ ಮತ್ತು ದನಗಳನ್ನಿಟ್ಟುಕ್ಕೊಂಡಿರತಕ್ಕವರೂ ತಮ್ಮ ದನಕರಗಳನ್ನ ನದಿಗೆ ಸಾಗಿಸಬಹುದು. ಬನ್ನಾಣಿಯ ದನಕರುಗಳುಳ್ಳ ರೈತರು ತಮ್ಮ ಜಾನುವಾರುಗಳನ್ನ ಬೇಸಿಗೆಯಲ್ಲಿ ಬನ್ನಾಣಿಯಿಂದ ಕಾಲುದಾರಿಯಲ್ಲೇ ಸಾಗಿಸಿ ಮುತ್ತತ್ತಿ ಘಾಟುಮಾರ್ಗಕ್ಕೆ ಸೇರಿ ನಂತರ ಭೀಮೇಶ್ವರಿಯಗುಡಿಯಬಳಿ ನದಿಗೆ ಹೊಡೆಯಬಹುದು. ಮುತ್ತತ್ತಿಯ ಜಾನುವಾರುಗಳುಳ್ಳ ಮುತ್ತತ್ತಿ ದೇವಸ್ಥಾನದಿಂದ ನದಿಗೆ ಹೋಗುವ ಕಾಲುದಾರಿಯಲ್ಲಿ ತಿರುಗಾಡತಕ್ಕದ್ದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 30ನೆ ನವಂಬರ್ 1903ನೆ ಇಸವಿ.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಈ ಕೆಳಗೆ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ, ಆಕಾರ ಕಂಡ ಬಂಜರು ಜಮೀನುಗಳಲ್ಲಿಯೂ, ಅಮೃತಮಹಲ್ ಕಾವಲ್‌ಗಳಲ್ಲಿಯೂ, ದೊರಿಯುವ ಕೆಳಗೆ ವಿವರಿಸುವ ಫಸಾರೀ ಜಿನಸಿಗಳನ್ನು 1903—04ನೆ ಸಾಲಿಗೆ ಜಮಾಯಿಸುವ ಹಕ್ಕನ್ನ ಬಹಿರಂಗವಾಗಿ ಕೆಳಗಿನ ತಪಸೀಲ್ ಪಟ್ಟಿಯಲ್ಲಿ ಕಾಣುವ ಆಫೀಸರರಿಂದ ಹರಾಜ್ ಹಾಕಿಸಲ್ಪಡುತ್ತೆ :—

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫೀಸರರ ಹೆಸರು.
ಚಿಕ್ಕಮಗಳೂರು	14—12—03	ಆಯಾ ತಾಲ್ಲೂಕು ಕಛೇರಿಯಲ್ಲಿ	ಆಯಾ ತಾಲ್ಲೂಕು ಅಮಲ್ದಾರರು) ಗಳು ಪೇಷ್ಕಾರರಿಂದ
ಕಡೂರು	16—12—03		
ತರೀಕೆರೆ ..	17—12—03		
ಕೊಪ್ಪ	22—12—03		
ಯಡೆಹಳ್ಳಿ ಸಬ್ ತಾಲ್ಲೂಕು	19—12—03		
ಮೂಡಿಗೆರೆ	23—12—03		

ಪಸಾರಿ ಜಿನಸಿಗಳ ತಪ್ಸೀಲು.

1 ತಾರೇಕಾಯಿ, 2 ಅಂಟವಾಳದಕಾಯಿ, 3 ದಿಂಡಗದಗೋಂದು, 4 ಕಾಡ ಅರಶಿನಾ, 5 ಜೇನುಮೇಣ, 6 ಜೇನುತುಪ್ಪಾ, 7 ಕಪಿಲಾರಂಗು, 8 ಪತಂಗ, 9 ಮಡ್ಡಿ, 10 ಚಿಲ್ಲಬೀಜ, 11 ಹಾಲುಮಡ್ಡಿ, 12 ಚಗಚೀಬೀಜ, 13 ಹೊಂಗೇಬೀಜ, 14 ಗೇರುಬೀಜ, 15 ಸೊರಗದ ಕೊಂಬು, 16 ಗುಗ್ಗುಳ, 17 ಬ್ಯಾಲದಹಣ್ಣು, 18 ಅರಗು, 19 ಸೀತಾಫಲದ ಹಣ್ಣು, 20 ಹುಣಸೇಹಣ್ಣು, 21 ಕಿರೀಚಲು, 22 ಕಲ್ಲುಹುವ್ವು, 23 ಕಲನಾರು, 24 ಕಾಡು ಯಾಲಕ್ಕಿ, 25 ಅಳಲೇಕಾಯಿ, 26 ಶೀಗೆಕಾಯಿ.

2. ಚಡದರಖಾಸ್ತುದಾರನು ಹರಾಜು ಮಂಜೂರಾದ ಕೂಡ್ಲೆ ಶೇಕಡಾ 25ರಂತೆ ಆಗುವ ಮೊಬಲಗನ್ನ ಠೇವಣೀ ಕಟ್ಟತಕ್ಕದ್ದು. ಅಲ್ಲದೇ ಕಂಟ್ರಾಕ್ಟ ಷರತ್‌ಮೇರೆ ನಡಿಯಲೂ ತಕ್ಕ ಖಾತರೇ ಜಾಮೀನು ಸಹಾ ಕೊಡಬೇಕು. ಹಾಗೆ ಮಾಡದೇ ತಪ್ಪಿದಲ್ಲಿ ಕೂಡ್ಲೆ ಬಾಬು 2ನೆ ದಫಾ ಹರಾಜು ಮಾಡಲ್ಪಟ್ಟು ಉಂಟಾಗುವ ನಷ್ಟಕ್ಕೆ ಅವನನ್ನ ಗುರಿಪಡಿಸುತ್ತೆ—ಮತ್ತು ಸದರಿ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡನಂತೆ ವಸೂಲ್ಮಾಡಿಕೊಳ್ಳಲ್ಪಡುತ್ತೆ.

3. ದರಖಾಸ್ತುದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನ ತಿಳಿಸಿದ ಒಂದು ತಿಂಗಳ ವಳಗಾಗಿ ಬಾಕೀ ಮೊಬಲಗನ್ನೆಲ್ಲಾ ಪಾವತೀ ಮಾಡಬೇಕು. ತಪ್ಪಿದರೇ ಮೊದಲು ಕೊಟ್ಟ $\frac{1}{4}$ ಹಿಸ್ಸೆ ಹಣವನ್ನ ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೇ ಬಾಕೀ ಆಗುವ ಹಣವನ್ನ ರೆವಿನ್ಯೂ ಕಂದಾಯ್ಬದ ಬಾಕೀಯಂತೆ ವಸೂಲ್ಮಾಡಲ್ಪಡುತ್ತೆ.

4. ಹರಾಜು ಮೊಬಲಗ್ಯೆ ರೂಪಾಯಿ 1ಕ್ಕೆ ಒಂದಾಣೆಯಂತೆ ಲೋಕಲ್ ಸೆಸ ಕೊಡತಕ್ಕದ್ದು.

5. ಹಿಡುವಳೀ ಜಮೀನುಗಳಲ್ಲಿರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಸಲನ್ನ ರೊಥಿಸಲು ಹಕ್ಕು ಇರುವದಿಲ್ಲಾ.

6. ಇನಾಂದಾರು ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಇಜಾರೇದಾರು ಪ್ರವೇಶಿಸತಕ್ಕದ್ದಲ್ಲಾ.

7. ಗ್ರಾಮ ಅಮರಾಯಿ ಫಲದ ಉತ್ಪತ್ತಿ ಮೇಲ್ಕಂಡ ಹರಾಜಿಗೆ ಶೇರುವದಿಲ್ಲಾ.

8. ಹರಾಜು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ ಸಾಹೇಬರವರ ಮಂಜೂರಾತೀಗೆ ಬಳಪಟ್ಟಿರುತ್ತೆ.

ಎಂ. ಜಿ. ರಾಮರಾವ್,
ಫಾರ್ ಡೆಪ್ಯುಟಿ ಕಮಿಷನರ, ಕಡೂರು ಡಿಸ್ಟ್ರಿಕ್ಟು.

ನೋಟಿಸ.

ತಾರೀಖು 18ನೆ ನವಂಬರ 1903.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ—ಚಿತ್ರದುರ್ಗದ ಡಿಸ್ಟ್ರಿಕ್ಟು ಹೊಳಲಕೆರೆ ರೇಂಜಿನಲ್ಲಿರುವ ಮನ್ನಾ ಜಂಗಲಿಗಳಲ್ಲಿ ಕಟ್ಟಿಗೆಯನ್ನು ಕಡಿದು ಸಾಗಿಸುವ ಹಕ್ಕು ಕೊಡಗನೂರು ಮೊಕ್ಕಾಂನಲ್ಲಿ ಈ ನವಂಬರು ಮಾಹೆ 30ಕ್ಕೆ ಹರಾಜು ಮಾಡಲ್ಪಡುತ್ತೆ. ಹೆಚ್ಚಿಗೆ ತಪಶೀಲಿಗೆ ತಾರೀಖು 5ನೆ ನವಂಬರ 1903ನೆ ಮುರ್ಕ್ಕಾಂ ಮೈಸೂರು ಗೆಜೆಟ 2ನೆ ಭಾಗದ 534ನೆ ಸಂಪುಟದಲ್ಲಿ ಫಾಯಿಷ್ ಆಗಿರುವ ಇಸ್ತಿಹಾರನ್ನು ನೋಡಬೇಕು.

ಕೆ. ಶಾಮೈಯ್ಯಂಗಾರ್,
ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ, ಚಿತ್ರದುರ್ಗ ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು.

ಸನ್ 1903ನೆ ಇಸವಿ ನವಂಬರ್ ತಾರೀಖು 19.

ಕಾಫಿ ಸಾಗುವಳಿಗೆ ಕಲ್ಲತ್ತಿ ಎಸ್ಟೇಟ್ ಮೆ॥ ಸೆಂಟಕ್ಲೇರ್ ಜಾರ್ಜ್ ಸಾಹೇಬರವರು ದರಖಾಸ್ತು ಮಾಡಿರುವ ತರೀಕೆರೆ ತಾಲ್ಲೂಕು ಕಲ್ಲತ್ತಿಪುರ ಗ್ರಾಮದಲ್ಲಿರುವ ಸರ್ವೆ ನಂಬರು 4ರಲ್ಲಿ ಪೋಡಾಗಿರುವ 100 ಎಕರೆ 11 ಗುಂಟೆ ಉಳ್ಳ ನಂಬರು 32ನೆ ಜಮೀನನ್ನು ತರೀಕೆರೆ ತಾಲ್ಲೂಕು ಅಮಲ್ದಾರ್ರವರು ಸನ್ 1904ನೆ ಇಸವಿ ಜನವರಿ ತಾರೀಖು 7ನೆ ಗುರುವಾರ ದಿವಿ 11 ಘಂಟೆಗೆ ತರೀಕೆರೆ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮಾಡಿಸುವರು ಯಂತಲೂ—ಜಾಸ್ತಿ ತಪಸೀಲು ಇದರೆ ಹಿಂದಿನ ವಾರದ ಗೆಜೆಟ್ಟಿನಲ್ಲಿ ನಮೂದಿರುತ್ತೆಯಂತಲೂ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿಸ್ ಅರ್ಜೀ ನಂಬರ್ 140.

ಮೃತಪಟ್ಟ ಚೆನ್ನಗಿರಿ ತಾಲ್ಲೂಕು ಹೊದಿಗೆರೆ ಮಾಗಣಿ ಕಂಚಿಗನಹಾಳಲ್ಲಿದ್ದ ಗಂಗೋನಹಳ್ಳಿ ತಿಮ್ಮಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚೆನ್ನಗಿರಿ ತಾಲ್ಲೂಕು ಹೊದಿಗೆರೆ ಮಾಗಣಿ ಕಂಚಿಗನಹಾಳಲ್ಲಿರುವ 1. ಗಂಗೋನಹಳ್ಳಿ ತಿಮ್ಮಣ್ಣ, 2. ಈತನ ತಮ್ಮ ಹನುಮಣ್ಣ, ಮೃತಪಟ್ಟ ಸದರೀ ತಿಮ್ಮಣ್ಣನವರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕಂಚಿಗನಹಾಳ ಸ್ಥಳದ 1. ತಿಮ್ಮಣ್ಣ, 2. ಹನುಮಣ್ಣನವರು ಕಂಚಿಗನಹಾಳ್ ವಾಸಸ್ಥರಾಗಿ ಮೃತಪಟ್ಟ ತಿಮ್ಮಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ 226—10—8 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ 1. ತಿಮ್ಮಣ್ಣ, 2. ಹನುಮಣ್ಣನವರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿ[illegible]

ಸನ್ 1903ನೆ ಇಸವಿ ನವಂಬರ್ ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಮಿಸ್ ಅರ್ಜೀ ನಂಬರ್ 141.

ಮೃತಪಟ್ಟ ಹರಿಹರದಲ್ಲಿದ್ದ ಅಬ್ದುಲ್‌ಖಾದರ್ ಸಾಹೇಬರ ಹೆಂಡತಿ ಖತ್ತಿಜಾಬೀ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಅಬ್ದುಲ್‌ಖಾದರ್ ಸಾಹೇಬ್ ಬಿನ್ ಮಹಮದ್‌ಗಾಲೀಬ್, 2ನೆ ಅಬ್ದುಲ್‌ಅಜೀಜ್, 3ನೆ ಅಬ್ದುಲ್‌ರಹೀಂ ಮೈನರ್, ಗಾರ್ಡಿಯನ್ 1ನೆ ಅರ್ಜಿದಾರು [illegible] ಅರ್ಜಿದಾರು, 5ನೆ ಜೈನಾಬಿ ಬಿನ್ ಅಬ್ದುಲ್‌ಖಾದರ್, 6ನೆ ದರಬಿ[illegible] ಜಾಬಿ ಎಂಬುವರಿಗೆ 1ನೆ ಅರ್ಜಿದಾರ್ ಗಂಡ, 2ರ ಲಾಗಾಯಿ[illegible]ಲೆ ಹರಿಹರದ ಸ್ಥಳದ ಅರ್ಜಿದಾರು ಹರಿಹರದ ವಾಸಸ[illegible]

ಸ 1903—1904ನೆ ಇಸವಿ ಮಿಸ್ ಅರ್ಜೀ ನಂಬರ್ 159.

ಮೃತಪಟ್ಟ ಶಿವಮೊಗ್ಗ ತಾಲ್ಲೂಕು ಹರಕೆರೆಪೇಟೆ ಸಿದ್ದಣ್ಣನ ಹೆಂಡತಿ ಹನುಮಕ್ಕನೆಂಬುವಳ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಕುರುಬರ ಫಕೀರ ಬಿನ್ ನಾಗಣ್ಣ, 2ನೆ ಇವನ ತಮ್ಮ ಸಿದ್ದ ಶಿವಮೊಗ್ಗ ತಾಲ್ಲೂಕು ಶ್ರಿಂಗೇರಿ ಇನಾಂ ಗ್ರಾಮದ ಹರಕೇರಿ ವಾಸಿಗಳು, ಮೃತಪಟ್ಟ ಸದರೀ ಹನುಮಕ್ಕನಿಗೆ ಖಾಸಾ ಮೈದನ ಮಕ್ಕಳಾಗಬೇಕೆಂಬ ಹಕ್ಕು ದಾರಿ ಮೇಲೆ ಹರಿಕೇರಿ ಸ್ಥಳದ ಅರ್ಜೀದಾರರು ಹರಕೇರಿ ವಾಸಸ್ಥರಾಗಿ ಮೃತಪಟ್ಟ ಹನುಮಕ್ಕನ ಜಿಂದಗಿ ಬಗ್ಯಾಗಿ ಬರತಕ್ಕ 128—12—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರಟಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರನಾದ 2ನೆ ಸಿದ್ದನ ಅರ್ಜಿಯನ್ನು ಸ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹನುಮಕ್ಕನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸ 1903ನೆ ಇಸವಿ ನವಂಬರು ತಿಂಗಳು 20ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಸಿ. ಶೇಷಯ್ಯಂಗಾರ್,
ಶಿರಿಸ್ತೇದಾರ್.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ 1903—1904ನೆ ಇಸವಿ ಅರ್ಜೀ ನಂಬರ್ 223.

ಮೃತಪಟ್ಟ ಸಿದ್ದಯ್ಯನ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಮತ್ತಾವಾರದಲ್ಲಿರುವ ಲಕ್ಷ್ಮಮ್ಮ ಮೈನರ್, ಗಾರ್ಡಿಯನ್ ತಾಯಿ ಸಿದ್ದಮ್ಮ, ಮೃತಪಟ್ಟ ಸಿದ್ದಯ್ಯನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮತ್ತಾವಾರದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಿದ್ದಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಮ್ಮ ಮೈನರ್, ಗಾರ್ಡಿಯನ್ ತಾಯಿ ಸಿದ್ದಮ್ಮ ಇವರ ಅರ್ಜಿಯನ್ನು 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದ[illegible]ತಪಟ್ಟ ಸಿದ್ದಯ್ಯನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸ 1903ನೆ ಇಸವಿ ನವಂಬರ್ 24ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಸ 1903—1904ನೆ ಇಸವಿ ಅರ್ಜೀ ನಂಬರ್ 224.

ಮೃತಪಟ್ಟ ರಾಮಸ್ವಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರುನಲ್ಲಿರುವ 1ನೆ ನಾರಾಯಣ, 2ನೆ ವೆಂಕಟೇಶ ಮೈನರಗಳು, ಗಾರ್ಡಿಯನ್ ತಾಯಿ ವೆಂಕಟಮ್ಮ, ಮೃತಪಟ್ಟ ರಾಮಸ್ವಾಮಯ್ಯನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ಜೋಡಿ ಚಾಮರಹಳ್ಳಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ರಾಮಸ್ವಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣ, ವೆಂಕಟೇಶ ಮೈನರ್, ಗಾರ್ಡಿಯನ್ ತಾಯಿ ವೆಂಕಟಮ್ಮನವರ ಅರ್ಜಿಯನ್ನು ಸ 1903ನೆ ಇಸವಿ ಡಿಸೆಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಾಮಸ್ವಾಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಥೆ.

ಸ 1903ನೆ ಇಸವಿ ನವಂಬರ್ 27ನೆ ತಾರೀಖಿನಲ್ಲಿ ಕೋರ್ಟಿನ ಮೊಹರು ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿಥೆ.

ಡಿ. ಅಳಸಿಂಗ್ರಾಚಾರ್,
ಶಿರಿಸ್ತೇದಾರ್.

ಸಾಗರ ಮುನ್ಸೀಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರರು ಹುಲಿಕೋಡ್ ಸುಬ್ಬಯ್ಯ ಬಿನ್ ತಿಮ್ಮಯ್ಯ ಎಂಬುವರ ವಿಷಯದಲ್ಲಿ—

ಸರ್ 1903—04ನೆ ಇಸವಿ ದಿವಾಳಿ ಮಿ|| ವ್ಯಾಜ್ಯದ ನಂಬರು 49.

ಹುಕುಂ.

ಮೇಲ್ಕಂಡ ಸುಬ್ಬಯ್ಯನು ಖುಲಾಸೆ ಮಾಡಿಸಬೇಕೆಂದು ಬರೆದುಕೊಂಡ ಅರ್ಜಿಯು ಅಂಶವು ಸಾಗರ ಮುನ್ಸೀಫರವರಾದ ಮಿ|| ಎಸ್. ಕ್ರಿಷ್ಣರಾವ್ ಯವರ ರೂಬರೂ ದಿವಾಳಿಯಾದವರ ತರಫ್ ಪ್ಲೀಡರ ಮಿ|| ಹೆಚ್. ಶಾಮರಾವ್‌ರವರ ಸಮಕ್ಷಮದಲ್ಲಿಯೂ ಮತ್ತು ಈ ಕೆಳಗೆ ನಮೂದಾದ ಐರ್ಜ ದಿವಾಳಿಯಾದವರ ಲೇಣೇದಾರರಾದ 1—2—3—4—5—6ನೆ ಯವರು ಗೈರಹಾಜರು, ದರ್ಯಾಫ್ತು ಮಾಡಲ್ಪಟ್ಟಿತು. ಇದರಡೀಲಿ ನಮೂದಿಸಲ್ಪಟ್ಟ ಲೇಣೇದಾರರಿಗೆ ಈ ದರ್ಯಾಫ್ತು ನೋಟಿಸ್ ಜಾರಿಯಾಗಿದ್ದನ್ನು ಅವರು ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು.

ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಬಹುಸಂಖ್ಯಾತವಾದ ಜನರು ಅವರ ಹೆಸರುಗಳಿಗೆ ಎದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿಥಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ:—

ನಂ.	ಲೇಣೇದಾರರ ಹೆಸರು, ವಿವರ ಮತ್ತು ವಾಸಸ್ಥಳ.	ಸಾಲವೆಂದು ರುಜು ವಾಥ ಮೊಬಲಗು.	ಸಾಲಗಳ ಸ್ವಾಭಾವ, ಪ್ರತಿಫಲ ಮತ್ತು (ಏನಾದರು) ಯಿಡು.
1	1ನೆ ಪುಟ್ಟಪ್ಪ, 2ನೆ ಬಿಷ್ಟಪ್ಪ } ಮೈನರ ಗಾ|| ತಾಯಿ ಪರಮಮ್ಮ, ಸಾಗರ ತಾ|| ಶಿರವಂತೆ ಮಾ|| ಕಂಡ್ಗದ ವಾಶಿಗಳು.	24—0—0	ಈ ಕೋರ್ಟು O. S. 66—01-02. Ex. 66-02-03ನೆ ಕೆ|| ಸಮ್ಮಂಧ.
2	3ನೆ ಪುಟ್ಟಭಟ್ಟು 4ನೆ ನಾರಣಭಟ್ಟು } ಮೈನರ ಗಾ|| ತಾಯಿ ವೆಂಕಮ್ಮ, ಹುಳಿಗಾರವಾಶಿ.	30—0—0	ಘವತಿ ಹುಳಿಗಾರ ಮರಿಭಟ್ಟನು ಹುಲಿಕೋಡ್ ಸುಬ್ಬಯ್ಯನಮೇಲೆ ಪಡೆಕೊಂಡ ಡಿಕ್ರಿ ಮೊಬಲಗು.
3	5ನೆ ಮಾಳೇರ ಚಿಕ್ಕರಂಗ, ಸಾಗರ ತಾ|| ಕಡಗಳಲೆ ಮಾ|| ಮಂಡಗದ್ದೆ ವಾಶಿ.	48—0—0	ದಸ್ತೈವಜು ಸಮ್ಮಂಧ ಅಸಲ್ ಬಡ್ಡಿ ಮೊಬಲಗು
4	6ನೆ ಕಾನ್ಗೆ ದೇವಪ್ಪ, ಸಾಗರ ಕಸಬಾ ವಾಶಿ.	20—0—0	ಕಂತು ದಸ್ತೈವಜು ಮೊಬಲಗು
	ಜುಮ್ಲಾ ..	122—0—0	

ಸರ್ 1903ನೆ ಇಸವಿ ಅಕ್ಟೋಬರು ತಾರೀಖು 30ರಲ್ಲು ಕೋರ್ಟು ಮೊಹರ್ ನಮ್ಮ ದಸ್ತುಖತ್ತುನಿಸಿ ಕೊಡಲ್ಪಟ್ಟಿಥೆ.

ಎಸ್. ಕ್ರಿಷ್ಣರಾವ್,
ಮುನ್ಸೀಫ್.

ಅಮೃತಮಹಲ್ ಇಲಾಖಾ.

ಇಸ್ತಿಹಾರನಾಮೆ.

ತಾರೀಖು 28ನೆ ನವಂಬರ 1903, ಮೊಕ್ಕಾಂ ಮೈಸೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಶೀಮೆಯು ಅಮೃತಮಹಲ್ ಇಲಾಖಾದಲ್ಲಿರುವ ನಾಲ್ಕು ವರ್ಷ ವಯಸ್ಸುಳ್ಳ ಕೆಲವು ಹೋರಿಗಳನ್ನು ಮತ್ತು ಕೆಲವು ಹಸುಗಳನ್ನು ಹಾಸನದ ತಾಲ್ಲೋಕು ಸೋಮನಹಳ್ಳಿ ಕಾವಲಿನಲ್ಲಿ ಸರ್ 1903ನೆ ಇಸವಿ ಡಿಸೆಂಬರು 17ನೆ ತಾರೀಖು ಗುರುವಾರದ ಲಾಗಾಯಿತು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಛಡ ದರಖಾಸ್ತು ಮಾಡಿ ಪಡೆಯಬಹುದು.

ಹೆಚ್. ನಂಜುಂಡರಾಜೆ ಅರಸ್,
ಸೂಪರಿಂಟೆಂಡೆಂಟ್.

ಮೈಸೂರ ಗೆಜೆಟ್.

ಸಂ. 38.] ಸರ್ಕಾರದಿಂದ ಪ್ರಸಿದ್ಧಿಸಲ್ಪಟ್ಟುದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರು ತಾ॥ 10, ಸರ್ 1903.

IIನೆ ಭಾಗ.

ಇಂಡ್ಯ ಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್, ಡಿ. ನಂಬರು 20.

ತಾರೀಖು 1ನೆ ಡಿಸೆಂಬರ್ ಸರ್ 1903ನೆ ಇಸವಿ.

ತಿಪಟೂರು ತಾಲ್ಲೂಕು ನೊಣವಿನಕೆರೆ ಕನ್ನಡ ಗರ್ಲ್‌ಸ್ಕೂಲ್ ಕಮಿಟಿಯ ಆಡಳತಗಳನ್ನು ನಡಿಸಲು ಇದರಡಿ ಕಂಡ ಮೆಂಬರುಗಳನ್ನು ಮೊಕರರ್ ಮಾಡಿರುತ್ತೆ :—

ಪ್ರೆಸಿಡೆಂಟ್.

ತಿಪಟೂರು ತಾಲ್ಲೂಕು ಅಮಲ್ದಾರರು (ಎಕ್ಸ್ ಅಫಿಷಿಯೊ)

ಮೆಂಬರುಗಳು.

1. ಮ॥ ರಾ॥ ಚಿಕ್ಕಣ್ಣಶೆಟ್ಟರು
2. ,, ಶ್ಯಾನುಭೋಗ ಸುಬ್ಬರಾಯಪ್ಪನವರು
3. ,, ಕಸ್ತೂರಿ ರಂಗೈಯ್ಯಂಗಾರ್ಯರು
4. ,, ಲಕ್ಷ್ಮೀನಾರಾಯಣಾವಧಾನಿಗಳು
5. ,, ದೇವಾಂಗದ ಕಾಡಸಿದ್ದಪ್ಪನವರು
6. ಮ॥ ರಾ॥ ಬಿಳೀಮಗ್ಗದ ನಾಗಣ್ಣಶೆಟ್ಟರು
7. ,, ನಿರಂಜನಪ್ಪನವರು
8. ,, ನೊಣವಿನಕೆರೆ ತಾಲ್ಲೂಕು ಬ್ರಾಂಚು ಕನ್ನಡ ಬಾಲಕ ಪಾಠಶಾಲೆಯ ಹೆಡ್ಮಾಸ್ಟರು (ಎಕ್ಸ್ ಅಫಿಷಿಯೊ) ಆನರರಿ ಸೆಕ್ರೆಟರಿ

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷ್ನ.

ತಾರೀಖು 23ನೆ ನವಂಬರ 1903.

1903ನೆ ಇಸವಿ ಅಕ್ಟೋಬರ 30ನೆ ಮರ್ಸ್ತಂ 194—2893ನೆ ನಂಬರ ಗೌರ್ನ್ಮೆಂಟ್ ಆರ್ಡ್ಡರ ಅನುಸರಿಸಿ

ಕೊಡೋಣಾದ ಇಷ್ತಿಹಾರ್ನಾಮಾ—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಬೆಂಗಳೂರು ಡಿಸ್ಟ್ರಿಕ್ಟ್ ಕಾರ್ಖಾನಹಳ್ಳಿ ರೇಂಜ್ ಆಫೀಸರ ಮೇಲ್ವಿಚಾರಣೆಯಲ್ಲಿರುವ, ಮೈಸೂರು ಡಿಸ್ಟ್ರಿಕ್ಟ್ ಮಳವಳ್ಳಿ ತಾಲ್ಲೂಕು ಬಸವನ ಬೆಟ್ಟದ ಸ್ಟೇಟ್ ಫಾರೆಸ್ಟಿನಲ್ಲಿ ಈ ಕೆಳಗೆ ವಿವರಿಸುವ ಮೇರೆ ದಾರಿಗಳೂ ಮತ್ತು ಜಲಾಶಯಗಳಿಗೆ ಮಾರ್ಗಗಳು ಜನೋಪಯೋಗಕ್ಕಾಗಿ ಬಿಡಲ್ಪಟ್ಟವೆ.

1. ಹರಿಹರದಿಂದ ಸಾಂಬಾಪುರಕ್ಕೆ ಹೋಗುವ ಕಾಲುದಾರಿ ಇದು ನಾಲ್ಕು ಅಡಿ ಅಗಲವುಳ್ಳದ್ದು—ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಈ ದಾರಿಯು ಹರಿಹರದ ಸರ್ವೆ 69ನೆ ನಂಬರಿನ ದಕ್ಷಿಣ ದಿಕ್ಕಿನ ಎಲ್ಲೆಯ ನಾಲಾ ಯೇರಿ ಮೇಲಣ ಎರಡು ಬಾಂದುಗಳ ಬಳಿ ಫಾರೆಸ್ಟನ್ನು ಹೊಕ್ಕು ಸುಮಾರು ಎರಡು ಮೈಲಿಗಳ ವರಿಗೆ ದಕ್ಷಿಣಕ್ಕೆ ಹೋಗಿ ನಂತರ 2 ಮೈಲಿಗಳು ನೈರುತ್ಯವಾಗಿ ಹೋಗಿ ಸಾಂಬಾಪುರದ ಸರ್ವೆ 3ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ 30 ಗಜ ಉತ್ತರವಾಗಿ (ಸಾಂಬಾಪುರದ) ಎಲ್ಲೆಯೊಳಕ್ಕೆ ಪ್ರವೇಶಿಸುತ್ತದೆ.

2. ಸಾಂಬಾಪುರ (ಎಲ್ಲೆಕಟ್ಟು) ನಿಂದ ಸೋಲ್ಗೆರೆ (ಎಲ್ಲೆ) ಗೆ ಹೋಗುವ ನಾಲ್ಕು ಅಡಿ ಅಗಲವುಳ್ಳ ಕಾಲುದಾರಿ—ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಇರತಕ್ಕದ್ದು. ಈ ದಾರಿಯು ಸಾಂಬಾಪುರದ ಸರ್ವೆ 3ನೆ ನಂಬರ ಜಮೀನಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ ದಿಕ್ಕಿನಲ್ಲಿ ಸಾಂಬಾಪುರದ (ಎಲ್ಲೆ) ಯನ್ನು ಬಿಟ್ಟು ಸುಮಾರು $1\frac{1}{2}$ ಮೈಲಿ ದಕ್ಷಿಣಕ್ಕೆ ಹೋಗಿ ಸೋಲ್ಗೆರೆಯ ಸರ್ವೆ 4ನೆ ನಂಬರಿನ ಈಶಾನ್ಯ ಬಾಂದುಗಳ ಹತ್ತರ (ಸೋಲ್ಗೆರೆ) ಎಲ್ಲೆಯನ್ನು ಸೇರುತ್ತದೆ.

3. ಸೋಲ್ಗೆರೆಯಿಂದ ಭಾವಿಗೆ ಹೋಗುವ ಎರಡು ಗಜ ಅಗಲ ಸುಮಾರು 150 ಗಜ ಉದ್ದವುಳ್ಳ ಕಾಲುದಾರಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಾರ್ಥವಾದದ್ದು. ಇದು ಸೋಲ್ಗೆರೆ ಸರ್ವೆ 15ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಂದ ಪೂರ್ವಕ್ಕೆ 160 ಗಜಗಳ ದೂರದಲ್ಲಿ ಎಲ್ಲೆಯನ್ನು ಬಿಟ್ಟು ಸ್ವಲ್ಪ ನೈರುತ್ಯಕ್ಕೆ ಹೋಗಿ ಭಾವಿಯ ಬಳಿ ಖೈದಾಗುತ್ತದೆ.

4. ಸೋಲಿಗೆರೆಯಿಂದ ಬಸವನಹಳ್ಳಿ (ಎಲ್ಲೆ) ಗೆ ಹೋಗುವ ಕಾಲುದಾರಿ 4 ಅಡಿ ಅಗಲ 3 ಮೈಲಿ ಉದ್ದವುಳ್ಳದ್ದು—ಜನರ ಮತ್ತು ದನಕರಗಳ ಉಪಯೋಗಕ್ಕೆ. ಇದು ಸೋಲಿಗೆರೆ ಸರ್ವೆ 15ನೆ ನಂಬರು ನೈರುತ್ಯ ಮೂಲೆಯ ಬಾಂದುಗಳು ಶೇರುವ ಬಳಿ ಸೋಲಿಗೆರೆ (ಎಲ್ಲೆ) ಬಿಟ್ಟು ಉತ್ತರಕ್ಕೆ ಹೋಗಿ ನಂತರ ಪಶ್ಚಿಮಕ್ಕೆ ಹೋಗಿ ಅಲ್ಲಿಂದ ಪುನಃ ಉತ್ತರವಾಗಿ ಬಸವನಹಳ್ಳಿಗೆ ಹೋಗುತ್ತದೆ.

5. ನಂದೀಪುರದಿಂದ ಬಸವನಹಳ್ಳಿ (ಎಲ್ಲೆ) ಗೆ ಜನರು ಮತ್ತು ಜಾನುವಾರುಗಳು ತಿರಗಾಡುವ ಎರಡು ಅಡಿ ಅಗಲವುಳ್ಳ ಕಾಲುದಾರಿ—ಇದು ನಂದೀಪುರದ ಸರ್ವೆ 69ನೆ ನಂಬರಿನ ನೈರುತ್ಯ ಮೂಲೆಯ ಬಾಂದಿನ ಹತ್ತರ ಫಾರೆಸ್ಟನ್ನು ಹೊಕ್ಕು ಆಗ್ನೇಯವಾಗಿ ಸುಮಾರು 2 ಮೈಲಿಗಳ ವರಿಗೆ ಹೋಗಿ ಬಸವನಹಳ್ಳಿ ಸರ್ವೆ 22ನೆ ನಂಬರಿನ ನೈರುತ್ಯ ಬಾಂದುಗಳಿಗೆ ಉತ್ತರ 20 ದೂರದಲ್ಲಿ ಯಲ್ಲೆಯನ್ನು ಶೇರುತ್ತದೆ.

6. ದೇವೀರಹಳ್ಳಿಯಿಂದ ಬಸವನಹಳ್ಳಿ (ಎಲ್ಲೆ) ಗೆ ಜನರು ಮತ್ತು ದನಕರಗಳು ತಿರಗಾಡುವ ಕಾಲುದಾರಿ 4 ಅಡಿ ಅಗಲ—ಇದು ದೇವರಹಳ್ಳಿ ಸರ್ವೆ 53ನೆ ನಂಬರಿನ ನೈರುತ್ಯ ಮೂಲೆಯ ಬಾಂದುಗಳಿಗೆ ಪೂರ್ವ 20 ಗಜ ದೂರದಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣಕ್ಕೆ ಹೋಗಿ ಅಲ್ಲಿಂದ ಸುಮಾರು $1\frac{1}{2}$ ಮೈಲಿ ನೈರುತ್ಯವಾಗಿ ಹೋಗಿ ಬಸವನಹಳ್ಳಿ ಸರ್ವೆ 5ನೆ ನಂಬರಿನ ವಾಯುವ್ಯ ದಿಕ್ಕಿನ ಬಾಂದಿನ ಬಳಿ ಎಲ್ಲೆಯನ್ನು ಶೇರುತ್ತದೆ.

7. ಬಸವಾಪುರದಿಂದ ಬಸವನಹಳ್ಳಿ (ಎಲ್ಲೆ)ಗೆ ಜನರು ಮತ್ತು ದನಕರಗಳು ತಿರುಗಾಡುವ ನಾಲ್ಕು ಅಡಿ ಅಗಲ ಉಳ್ಳ ಕಾಲು ದಾರಿ—ಇದು ಬಸವಾ ಪುರದ ಸರ್ವೆ 73ನೆ ನಂಬರ ಜಮೀನಿನ ನೈರುತ್ಯ ಬಾಂದಿನ ಬಳಿ ಫಾರೆಸ್ಟನ್ನು ಹೊಕ್ಕು ಆಗ್ನೇಯವಾಗಿಯೂ ದಕ್ಷಿಣವಾಗಿಯೂ ಸುಮಾರು ಎರಡು ಮೈಲಿಗಳು ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

8. ಹರಿಹರದಿಂದ ಕೋಣನ ಗುಂಡಿ (ಎಲ್ಲೆ)ಗೆ ಹೋಗುವ 2 ಗಜ ಅಗಲವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರಗಳ ಉಪಯೋಗಾರ್ಥವಾಗಿ ಇರತಕ್ಕದ್ದು. ಇದು ಡಿಮಾರ್ಕೇಷ್ನ ಲೈನ್ಗೆ ಸುಮಾರು 2 ಮೈಲಿಯಲ್ಲಿ ಮೇಲ್ಕಂಡ 1ನೆ ನಂಬರು ದಾರಿಯಿಂದ ಕವಲೊಡೆದು ಆಗ್ನೇಯಕ್ಕೆ ಹೋಗಿ ನಂತರ ದಕ್ಷಿಣಕ್ಕೆ ಸುಮಾರು $2\frac{1}{2}$ ಮೈಲಿಗಳ ವರಿಗೂ ಹೋಗಿ ಕೋಣನಗುಂಡಿ ಸರ್ವೆ 11ನೆ ನಂಬರಿನ ಈಶಾನ್ಯದ ಬಾಂದಿಗೆ ಪಶ್ಚಿಮ 40 ಗಜ ದೂರದಲ್ಲಿ (ಕೋಣನಗುಂಡಿ) ಎಲ್ಲೆಯನ್ನು ಪ್ರವೇಶಿಸುತ್ತದೆ.

9. ಬೇಡರಹಳ್ಳಿಯಿಂದ ತಾಳವಾಡಿ (ಎಲ್ಲೆ) ಗೆ ಹೋಗುವ 5 ಗಜ ಅಗಲವುಳ್ಳ ಬಂಡೀದಾರಿ—ಇದು ಜನರು, ಜಾನುವಾರುಗಳು ಮತ್ತು ಬಂಡಿಗಳಿಗಾಗಿ ಇರತಕ್ಕದ್ದು. ಇದು ಬೇಡರಹಳ್ಳಿ ಸರ್ವೆ 5ನೆ ನಂಬರಿನ ಆಗ್ನೇಯ ಮೂಲೆಯ ಬಾಂದುಗಳಿಗೆ ಉತ್ತರ 5 ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ದಕ್ಷಿಣಕ್ಕೂ ಆಗ್ನೇಯಕ್ಕೂ ಡಿಮಾರ್ಕೇಷ್ನ ಲೈನ್ ಮಾರ್ಗವಾಗಿ 5 ಫರ್ಲಾಂಗ್ ವರಿಗೆ ಹೋಗಿ ನಂತರ ಆಗ್ನೇಯಕ್ಕೆ ತಿರುಗಿ ಸುಮಾರು $2\frac{1}{2}$ ಮೈಲಿಗಳು ಹೋಗಿ ತಾಳವಾಡಿ ಸರ್ವೆ 16ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿಗೆ ಪೂರ್ವ 30 ಗಜ ದೂರದಲ್ಲಿ ಎಲ್ಲೆಯನ್ನು ಪ್ರವೇಶಿಸುತ್ತದೆ.

10. ಬೇಡರಹಳ್ಳಿಯಿಂದ ದಾಳನಕಟ್ಟೆ (ಎಲ್ಲೆ) ಗೆ ಹೋಗುವ 2 ಗಜ ಅಗಲವುಳ್ಳ ಬಂಡೀದಾರಿ—ಇದು ಜನರ, ಜಾನುವಾರುಗಳ ಮತ್ತು ಬಂಡಿಗಳಿಗಾಗಿ ಇರತಕ್ಕದ್ದು. ಇದು ಮೇಲ್ಕಂಡ 9ನೆ ಪ್ಯಾರಾದಲ್ಲಿ ನಮೂದಿಸಿರುವಂತೆ ಫಾರೆಸ್ಟನ್ನು ಹೊಕ್ಕು ಡಿಮಾರ್ಕೇಷ್ನ ಲೈನ್ನಿಂದ ಸುಮಾರು 1 ಫರ್ಲಾಂಗಿನಲ್ಲಿ ಒಡೆದು 1 ಮೈಲಿ ದೂರದಲ್ಲಿ ಫಾರೆಸ್ಟಿನಲ್ಲೇ ದಕ್ಷಿಣ ದಿಕ್ಕಿಗೆ ಹೋಗಿ ದಾಳನಕಟ್ಟೆ ಸರ್ವೆ 4ನೆ ನಂಬರಿನ ವಾಯುವ್ಯದ ಬಾಂದಿಗೆ ಪೂರ್ವ 40 ಗಜ ದೂರದಲ್ಲಿ ಎಲ್ಲೆಯನ್ನು ಸೇರುತ್ತದೆ.

11. ದಾಳನಕಟ್ಟೆ (ಎಲ್ಲೆ) ಯಿಂದ ಬಸವೇಗೌಡನ ದೊಡ್ಡಿ (ಎಲ್ಲೆ) ಗೆ ಹೋಗುವ ಎರಡು ಗಜ ಅಗಲ ಸುಮಾರು ½ ಫರ್ಲಾಂಗ್ ಉದ್ದವಿರುವ ಬಂಡೀದಾರಿ—ಇದು ಜನರು, ಜಾನುವಾರು ಮತ್ತು ಬಂಡಿಗಳು ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ದಾಳನಕಟ್ಟೆ ಸರ್ವೆ 2ನೆ ನಂಬರಿನ ನೈರುತ್ಯ ಮೂಲೆಯ ಬಾಂದಿಗೆ 30 ಗಜ ದೂರದಲ್ಲಿ ಎಲ್ಲೆಯನ್ನು ಬಿಟ್ಟು, ದಕ್ಷಿಣಕ್ಕೆ ಹೋಗಿ ಬಸವೇಗೌಡನ ದೊಡ್ಡಿ ಸರ್ವೆ 1ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿನಿಂದ ಪೂರ್ವಕ್ಕೆ 20 ಗಜ ದೂರದಲ್ಲಿ (ಬಸವೇಗೌಡನ ದೊಡ್ಡಿ) ಎಲ್ಲೆಯನ್ನು ಪ್ರವೇಶಿಸುತ್ತದೆ.

12. ಬಸವೇಗೌಡನ ದೊಡ್ಡಿಯಿಂದ ತಾಳವಾಡಿಗೆ ಹೋಗುವ 4 ಅಡಿ ಅಗಲ ಸುಮಾರು 100 ಗಜ ಉದ್ದವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರುಗಳು ತಿರುಗುವದಕ್ಕಾಗಿ ಇರತಕ್ಕದ್ದು. ಇದು ಬಸವೇಗೌಡನ ದೊಡ್ಡಿ ಸರ್ವೆ 7ನೆ ನಂಬರಿನ ಈಶಾನ್ಯ ದಿಕ್ಕಿನ ಮೂಲೆಯ ಬಾಂದಿಗೆ ದಕ್ಷಿಣ 20 ಗಜ ದೂರದಲ್ಲಿ (ಬಸವೇಗೌಡನ ದೊಡ್ಡಿ) ಎಲೆ ಯನ್ನು ಬಿಟ್ಟು ಆಗ್ನೇಯವಾಗಿ ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

13. ಬಿರೋಟದಿಂದ ಬಸವೇಗೌಡನ ದೊಡ್ಡಿ (ಎಲ್ಲೆ) ಗೆ ಹೋಗುವ 4 ಅಡಿ ಅಗಲವುಳ್ಳ ಕಾಲುದಾರಿ—ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಇರತಕ್ಕದ್ದು. ಇದು ಬಿರೋಟದ ಸರ್ವೆ 79ನೆ ನಂಬರಿನಲ್ಲಿರುವ ನಾಲೆಯ ಹತ್ತರ ಫಾರೆಸ್ಟನ್ನು ಪ್ರವೇಶಿಸಿ ಸ್ವಲ್ಪ ಆಗ್ನೇಯವಾಗಿ ಹೋಗಿ ಅಲ್ಲಿಂದ ಸುಮಾರು 2 ಮೈಲಿ ಈಶಾನ್ಯಕ್ಕೆ ಹೋಗಿ ಬಸವೇಗೌಡನ ದೊಡ್ಡಿ ಸರ್ವೆ 3ನೆ ನಂಬರಿನ ನೈರುತ್ಯದ ಬಾಂದಿಗೆ ಪೂರ್ವ 30 ಗಜ ದೂರದಲ್ಲಿ ಬಸವೇಗೌಡನ ದೊಡ್ಡಿ (ಎಲ್ಲೆ) ಯನ್ನು ಪ್ರವೇಶಿಸುತ್ತದೆ.

14. ಗಣಾಲಿನಿಂದ ಬಸವೇಗೌಡನ ದೊಡ್ಡಿಗೆ ಹೋಗುವ 3 ಅಡಿ ಅಗಲವುಳ್ಳ ಕಾಲುದಾರಿ—ಇದು ಜನರ ಮತ್ತು ದನ ಕರಗಳ ಉಪಯೋಗಾರ್ಥವಾದದ್ದು. ಇದು ಗಣಾಲಿನ ಸರ್ವೆ 81ನೆ ನಂಬರಿನ ಈಶಾನ್ಯದ ಬಾಂದಿಗೆ ದಕ್ಷಿಣ 3½ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ ಆಗ್ನೇಯವಾಗಿ ಸುಮಾರು 1½ ಮೈಲಿ ಹೋಗಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

15. ಮುತ್ತಲಕಟ್ಟೆಯಿಂದ ಸೊಲ್ಬಕ್ಕೆ ಹೋಗುವ 2 ಗಜ ಅಗಲವುಳ್ಳ ಬಂಡೀದಾರಿ—ಇದು ಬಂಡಿಗಳೂ, ಜನರೂ, ದನಕರಗಳೂ ತಿರುಗಾಡುವದಕ್ಕಾಗಿ ಇರತಕ್ಕದ್ದು. ಇದು ಮುತ್ತಲಕಟ್ಟೆ 1–2ನೆ ಸರ್ವೇ ನಂಬರುಗಳ ಬಾಂದುಗಳು ಕೂಡುವ ಈಶಾನ್ಯ ಮೂಲೆಯ ಬಳಿ ಫಾರೆಸ್ಟನ್ನು ಹೊಕ್ಕು ಸುಮಾರು 1 ಮೈಲಿ ವರಿಗೆ ಆಗ್ನೇಯವಾಗಿ ಹೋಗಿ ಸೊಲ್ಬದ ಸರ್ವೆ 4ನೆ ನಂಬರಿನ ವಾಯುವ್ಯ ಮೂಲೆಯ ಬಾಂದಿಗೆ ದಕ್ಷಿಣ ಸುಮಾರು 50 ಗಜ ದೂರದಲ್ಲಿ ಎಲ್ಲೆಯನ್ನು ಸೇರುತ್ತದೆ.

16. ತಾಳವಾಡಿ (ಎಲ್ಲೆ) ಯಿಂದ ಮುತ್ತತ್ತಿ (ಎಲ್ಲೆ)ಗೆ ಹೋಗುವ 5ಜ ಅಗಲವೂ 7 ಮೈಲಿ ಉದ್ದವುಳ್ಳ ಕಾಲುದಾರಿ—ಇದು ಜನರು ಮತ್ತು ಜಾನುವಾರುಗಳು ತಿರಗಾಡುವದಕ್ಕಾಗಿ ಇರತಕ್ಕದ್ದು. ಇದು ತಾಳವಾಡಿಯ ಸರ್ವೆ 14ನೆ ನಂಬರಿನ ಈಶಾನ್ಯದ ಬಾಂದಿಗೆ 50 ಗಜ ದಕ್ಷಿಣದಲ್ಲಿ ಎಲ್ಲೆಯನ್ನು ಬಿಟ್ಟು ಆಗ್ನೇಯಕ್ಕೂ, ಪೂರ್ವಕ್ಕೂ, ಅಲ್ಲಿಂದ ಪುನಃ ಆಗ್ನೇಯಕ್ಕೂ ನಂತರ ಪೂರ್ವಕ್ಕೂ ಹೋಗಿ ಮುತ್ತತ್ತಿ ಸರ್ವೆ 1ನೆ ನಂಬರಿನ ಆಗ್ನೇಯ ಮೂಲೆಯ ಬಾಂದಿನಿಂದ 40 ಗಜ ಪಶ್ಚಿಮದಲ್ಲಿ ಮುತ್ತತ್ತಿ (ಎಲ್ಲೆ) ಯನ್ನು ಸೇರುತ್ತದೆ.

17. ಮುತ್ತತ್ತಿಯಿಂದ ಪಾದ್ದರೆಗೆ ಹೋಗುವ 4 ಅಡಿ ಅಗಲವಾದ ಕಾಲುದಾರಿ—ಜನರು, ಜಾನುವಾರುಗಳೂ ತಿರುಗುವದಕ್ಕಾಗಿರುವದು. ಇದು ಮುತ್ತತ್ತಿ ಸರ್ವೆ 2ನೆ ನಂಬರಿನ ಈಶಾನ್ಯದ ಬಾಂದಿನ ಪಕ್ಕದಲ್ಲಿ ಎಲ್ಲೆಯನ್ನು ಬಿಟ್ಟು ಪೂರ್ವಕ್ಕೂ ಮತ್ತು ಈಶಾನ್ಯವಾಗಿಯೂ ಸುಮಾರು 1 ಮೈಲಿ ಹೋಗಿ ಚಿಲಂದ್ವಾಡಿ ಸ್ಟೇಟ್ ಫಾರೆಸ್ಟಿನಲ್ಲಿ ಪಾದ್ದರೆಯ ಕಾಲುದಾರಿಗೆ ಕೂಡಿಕೊಳ್ಳುತ್ತದೆ.

18. ತಾಳವಾಡಿ (ಎಲ್ಲೆ)ಯಿಂದ ಬನ್ನಾಣಿ (ಎಲ್ಲೆ)ಗೆ ಹೋಗುವ 5 ಗಜ ಅಗಲವುಳ್ಳ ಕಾಲುಹಾದಿ – ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕೆ. ಇದು ತಾಳವಾಡಿ ಗ್ರಾಮದ ಎಲ್ಲೆಕಟ್ಟೆಗೆ 4½ ಮೈಲಿಯಲ್ಲಿರುವ ಕಾಲುದಾರಿಯಿಂದ ಕವಲೊಡೆದು ಸುಮಾರು 1½ ಮೈಲಿ ಈಶಾನ್ಯವಾಗಿ ಹೋಗಿ ಬನ್ನಾಣಿಗೆ ಹೋಗುತ್ತದೆ.

ಈ ಕೆಳಗೆ ವಿವರಿಸುವ ದೇವಸ್ಥಾನಗಳಿಗೆ ಮಾರ್ಗಗಳು ಬಿಡಲ್ಪಟ್ಟಿವೆ :—

ದೇವಾಲಯದ ಹೆಸರು.	ಇರುವ ಸ್ಥಳ.	ದಾರಿ.
1. ಬೇಟರಾಯಸ್ವಾಮಿ ಗುಡಿ	ಸೊಲ್ಬದಿಂದ ಮುತ್ತತ್ತಿಗೆ ಹೋಗುವ ಮಾರ್ಗದಲ್ಲಿದೆ.	ಸೊಲ್ಬದ ಸರ್ವೆ 2–3ನೇ ನಂಬರುಗಳು ಸೇರುವಲ್ಲಿ ದಕ್ಷಿಣದಬಾಂದಿನಿಂದ 30 ಗಜ ದೂರದಲ್ಲಿ 4 ಅಡಿ ಅಗಲವುಳ್ಳ ದಾರಿಯು ಫಾರೆಸ್ಟನ್ನು ಹೊಕ್ಕು ಸುಮಾರು 6 ಮೈಲಿಗಳ ದೂರ ದಕ್ಷಿಣಕ್ಕೂ ನೈರುತ್ಯವಾಗಿಯೂ ಹೋಗಿ ತಾಳವಾಡಿಗೆ 3 ಮೈಲಿ ದೂರದಲ್ಲಿ ತಾಳವಾಡಿಯಿಂದ ಮುತ್ತತ್ತಿಗೆ ಹೋಗುವ ದೊಡ್ಡ ದಾರಿಗೆ ಸೇರಿಕೊಳ್ಳುತ್ತದೆ.
2. ಭೀಮೇಶ್ವರಿ ದೇವಸ್ಥಾನ	ಕಾವೇರಿ ನದಿಯ ದಡದಲ್ಲಿದೆ.	4 ಅಡಿ ಅಗಲವುಳ್ಳ ದಾರಿಯು (ತಾಳವಾಡಿಯಿಂದ ಮುತ್ತತ್ತಿಗೆ ಹೋಗುವ) ದೊಡ್ಡ ಹಾದಿಯಿಂದ ತಾಳವಾಡಿ ಗ್ರಾಮದ ಎಲ್ಲೆಕಟ್ಟೆಗೆ 5¼ ಮೈಲಿಯಲ್ಲಿ ಕವಲೊಡೆದು ಭೀಮೇಶ್ವರಿ ಗುಡಿಗೆ ಸುಮಾರು 1 ಮೈಲಿ ದಕ್ಷಿಣವಾಗಿ ಹೋಗುತ್ತದೆ.

ಫಾರೆಸ್ಟಿನಲ್ಲಿರುವ ಜಲಾಶಯ (ನೀರಿನ ಆಸರೆ) ಗಳನ್ನು ಈ ಕೆಳಗೆ ವಿವರಿಸುವ ಮೇರೆ ಉಪಯೋಗಿಸಿಕೊಳ್ಳಬಹುದು :—

(ಬಿ) ಮುರಡೀಬಸವನಕೆರೆ.........ಬಸವಾಪುರ ಮತ್ತು ಬಸವನ ಹಳ್ಳಿಗಳ ಜನಗಳು ವರ್ಷಾಕಾಲವೂ ಈ ದಾರಿಯಲ್ಲಿ ತಿರುಗಬಹುದು. ಬಸವಾಪುರದ ಜನರು ಬೇಸಿಗೆಯಲ್ಲಿ ತಮ್ಮ ದನಕರಗಳನ್ನ ಬಸವಾಪುರದ ಸರ್ವೆ 73ನೆ ನಂಬರಿನಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಅರ್ಧ ಮೈಲಿ ವರಿಗೂ ಹೊಡೆದುಕೊಂಡು ಹೋಗಿ ನಂತರ ಕೆರೆಗೆ ಹೊಡಿಯಬಹುದು. ಬಸವನಹಳ್ಳಿ ಗ್ರಾಮಸ್ಥರು ಬೇಸಿಗೆಯಲ್ಲಿ ತಮ್ಮ ಜಾನುವಾರು ಗಳನ್ನ ಬಸವನಹಳ್ಳಿ ಸರ್ವೆ 22ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಸುಮಾರು ಅರ್ಧಮೈಲಿ ವರಿಗೂ ಹೊಡೆದುಕೊಂಡು ಹೋಗಿ ನಂತರ ಬಸವಾಪುರಕ್ಕೂ ಬಸವನಹಳ್ಳಿಗೂ ಪಕ್ಕದಲ್ಲಿರುವ ಕಾಲುದಾರಿಯಿಂದ ಕೆರೆಗೆ ಹೊಡೆದುಕೊಂಡು ಹೋಗಬಹುದು.

(ಬಿ) ಭಾವಿ..........ಸೋಲೆಗ್ಗೆರೆಯವರು ಈ ದಾರಿಯನ್ನು ವರ್ಷಾಕಾಲವೂ ಉಪಯೋಗಿಸಿಕೊಳ್ಳಬಹುದು. ಸೊಲ್ಗೆರೆ ಸರ್ವೆ 15ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಇವರುಗಳು ಭಾವಿಗೆ ತಿರುಗಾಡತಕ್ಕದ್ದು.

(ಸಿ) ಮಣೇಗಾರಕಟ್ಟೆ..........ಬೇಡರಹಳ್ಳಿ ಮತ್ತು ದಾಳನಕಟ್ಟೆ ಗ್ರಾಮಸ್ಥರುಗಳು ಈ ದಾರಿಯನ್ನ ವರ್ಷಾಕಾಲವೂ ಉಪಯೋಗಿಸಿಕೊಳ್ಳಬಹುದು. ಬೇಡರಹಳ್ಳಿ ಗ್ರಾಮದವರು ಬೇಡರಹಳ್ಳಿ ಸರ್ವೆ 5ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಬಂಡೀಹಾದಿಯಲ್ಲಿ ದನಕರುಗಳನ್ನ ಡಿಮಾರ್ಕೇಷನ್ ಲೈನ್ ಬಳಿ ಸುಮಾರು 1 ಮೈಲಿ ದೂರದವರಿವಿಗೂ ಹೊಡೆದುಕೊಂಡು ಹೋಗಿ ಫಾರೆಸ್ಟಿನಲ್ಲಿ ಸುಮಾರು 1 ಫರ್ಲಾಂಗ್ ವರಿವಿಗೂ ಬಂಡೀದಾರಿಯಲ್ಲಿ ಸಾಗಿಸಿ ನಂತರ ಕಟ್ಟೆಗೆ ಹೋಗತಕ್ಕದ್ದು. ದಾಳನಕಟ್ಟೆ ಗ್ರಾಮದವರು ಬೇಸಿಗೆಯಲ್ಲಿ ತಮ್ಮ ಜಾನುವಾರು ಗಳನ್ನ ದಾಳನಕಟ್ಟೆ ಸರ್ವೆ 4ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಬಂಡೀದಾರಿಯಲ್ಲಿ ಹೊಡೆದುಕೊಂಡು ಸುಮಾರು ಅರ್ಧಮೈಲಿ ದೂರ ಬಂಡೀಹಾದಿಯಲ್ಲೇ ಹೋಗಿ ನಂತರ ಕಟ್ಟೆಗೆ ಸಾಗಿಸತಕ್ಕದ್ದು.

(ಡಿ) ಷಿಂಷಾನದಿ..........ತಾಳವಾಡಿ ಗ್ರಾಮದವರು ಬೇಸಿಗೆಯಲ್ಲಿ ಈ ದಾರಿಯನ್ನು ಉಪಯೋಗಿಸಿಕೊಳ್ಳಬಹುದು. ಬಸವೇಗೌಡನದೊಡ್ಡಿ ಸರ್ವೆ 3ನೆ ನಂಬರಿನಲ್ಲಿ ಫಾರೆಸ್ಟನ್ನು ಪ್ರವೇಶಿಸುವ ಕಾಲುದಾರಿಯಲ್ಲಿ ಡಿಮಾರ್ಕೇಷನ್ ಲೈನ್ ವರಿವಿಗೂ ತಮ್ಮ ಜಾನುವಾರುಗಳನ್ನ ಹೊಡೆದುಕೊಂಡು ಹೋಗಿ ನಂತರ ಡಿಮಾರ್ಕೇಷನ್ ಲೈನ್ ಮಾರ್ಗವಾಗಿಯೆ ಷಿಂಷಾನದಿಗೆ ಹೊಡಿಯತಕ್ಕದ್ದು.

(ಇ) ಮಜ್ಜನಮಡು ..
(ಎಫ್) ದೇವರಾಣಿ } ತಾಳವಾಡಿಯ ದನ ಕಾಯುವವರೂ ಮತ್ತು ಜಾನುವಾರುಗಳ ಮಾಲೀಕರೂ ಸಹಾ ತಮ್ಮ ದನಕರುಗಳನ್ನು ಹುಲ್ಲುಗಾಲದಲ್ಲಿ ಮೇಲೆ ಹೇಳಿದ ಸ್ಥಳಗಳಿಗೆ ಸಾಗಿಸಬಹುದು.

(ಜಿ) ಕಾವೇರೀನದಿ..........ಬನ್ನಾಣಿ ಮತ್ತು ಮುತ್ತತ್ತಿ ದನಾ ಕಾಯುವವರೂ ಮತ್ತು ದನಗಳನ್ನಿಟ್ಟುಕೊಂಡಿರತಕ್ಕವರೂ ತಮ್ಮ ದನಕರಗಳನ್ನ ನದಿಗೆ ಸಾಗಿಸಬಹುದು. ಬನ್ನಾಣಿಯ ದನಕರುಗಳುಳ್ಳ ರೈತರು ತಮ್ಮ ಜಾನುವಾರುಗಳನ್ನ ಬೇಸಿಗೆಯಲ್ಲಿ ಬನ್ನಾಣಿಯಿಂದ ಕಾಲುದಾರಿಯಲ್ಲೇ ಸಾಗಿಸಿ ಮುತ್ತತ್ತಿ ಘಾಟಮಾರ್ಗಕ್ಕೆ ಸೇರಿ ನಂತರ ಭೀಮೇಶ್ವರಿಯಗುಡಿಯಬಳಿ ನದಿಗೆ ಹೊಡೆಯಬಹುದು. ಮುತ್ತತ್ತಿಯ ಜಾನುವಾರುಗಳುಳ್ಳ ರೈತರು ಮುತ್ತತ್ತಿ ದೇವಸ್ಥಾನದಿಂದ ನದಿಗೆ ಹೋಗುವ ಕಾಲುದಾರಿಯಲ್ಲಿ ತಿರುಗಾಡತಕ್ಕದ್ದು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 7ನೆ ನವಂಬರ 1903ನೆ ಇಸವಿ.

ಮಾರ್ಜಿನ್ನಲ್ಲಿ ನಮೂದುಮಾಡಿ ಇರತಕ್ಕ ಇನಾಂ ಗ್ರಾಮಗಳು ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1903ನೆ ಇಸವಿ ಡಿಸಂಬರು ಮಾಹೆ 22ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿ ಇದೆ.

1. ಕೋಲಾರ ತಾಲ್ಲೂಕು ಹುತ್ತೂರು ಹೋಬಳಿ ಜೋಡಿ ಹೊಲ್ಲಂಬಳ್ಳಿ ಗ್ರಾಮ.
2. ಕೋಲಾರ ತಾಲ್ಲೂಕು ಹೋಳೂರು ಹೋಬಳಿ ಜೋಡಿ ಹೋಳೂರು ಗ್ರಾಮ.

(ಹೆಚ್ಚು ತಪಶೀಲ್ ಬಗ್ಗೆ 26ನೆ ಮಾರ್ಚ್ಂ 46ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 563—564ನೆ ನಂಬರು ಪೇಜು ನೋಡತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 25ನೆ ನವಂಬರ್ 1903.

1. ಕಂದಾಯದ ಬಾಕೀದಾರರಾದ ಜೋಡಿ ವಡಗೂರು ಗ್ರಾಮದ ವೆಂಕಟಪ್ಪನ ಮಗ ಕೃಷ್ಣಪ್ಪ ವಗೈರೇರಿಂದ ಬರಬೇಕಾದ ಜಮೀನ್ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಜನವರಿ ಮಾಹೆ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902–03ನೆ ಸಾಲವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 237—14—8 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು, ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯುತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಮತ್ತು ಜಮೀನಿನ ಹೆಸರು.	ಖುಷ್ಕಿ, ತರಿ ಬಾಗಾಯತು.	ವಿಸ್ತೀರ್ಣ. ಎ.	ಗು.	ಕಂದಾಯ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
ಕೋಲಾರ	ಹುತ್ತೂರು	ಜೋಡಿ ವಡಗೂರು ಗ್ರಾಮ	ಕೃಷ್ಣಪ್ಪ ವಗೈರೆಯರು	...	ರೂ. ..		ಖರಾಬ್ ಪೋಕು.	312	23	...	...	...	ರೂ. ಆ. ಪೈ. 236—14—8 ಬಾಕಿ
							ಖುಷ್ಕಿ ...	368	4	508	10	0	1—0—0 ಪ್ರೊಸೆಸ್ ಫೀ
							ತರಿ ...	137	14	343	2	0	
							ಬಾಗಾಯತು	12	14	49	8	0	237—14—8
								830	15	901	4	0	

ಚಕ್ಕು ಬಂದಿ.
ಪೂರ್ವಕ್ಕೆ—ವೆಂಕಟಾಪುರ ಸರಹದ್ದು.
ಪಶ್ಚಿಮಕ್ಕೆ—ಕಾಳಹಸ್ತಿಪುರದ ಸರಹದ್ದು.
ಉತ್ತರಕ್ಕೆ—ಕೆಂಬೋಡಿ ಸರಹದ್ದು.
ದಕ್ಷಿಣಕ್ಕೆ—ತಿಮ್ಮಸಂದ್ರದ ಸರಹದ್ದು.
(ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 25ನೆ ನವಂಬರ್ 1903.

1. ಕಂದಾಯದ ಬಾಕೀದಾರರಾದ ಜೋಡಿ ವಿಟ್ಟಪ್ಪಲ್ಲಿ ಗ್ರಾಮದ ರಾಜಪ್ಪ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಜನವರಿ ಮಾಹೆ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902-03ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 369–4–5 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸಕ್ಕಲಿತ್ಯಗಳಿಗೆ ಗವರ್ನಮೇಂಟಿನವರು ಜವಾಬುದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೇಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಆ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಅಂದಾಜು ಕಿಮ್ಮತು.	ಸ್ವತ್ತಿನ ತಪ್ಸೀಲ್. ಜಮೀನು. ನಂಬರ್ ಅಥವಾ ಜಮೀನಿನ ಹೆಸರು. / ಖುಷ್ಕೀ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎ	ಗು.	ಜಮೀನು. ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
ಕೋಲಾರ	ಹುತ್ತೂರು	ಜೋಡಿ ವಿಟ್ಟಪ್ಪಲ್ಲಿ	ರಾಜಪ್ಪ ವಗೈರೇರು	..	.. (ರೂ. ಆ. ಪೈ.)	ಪರಂಪೋಕು ..	147	37	..			ರೂ. 368 ಆ. 4 ಪೈ. 5 ಬಾಕಿ
						ಖುಷ್ಕಿ ..	480	18	451	14	0	1 0 0 ಪ್ರೊಸೆಸ್ ಫೀ
						ಬಾಗಾಯತು ...	99	24	291	12	0	
							727	39	743	10	0	369 4 5

ಚಕ್ಕುಬಂದಿ.
ಪೂರ್ವಕ್ಕೆ—ನೆಲ್ಲೂರು ಸರಹದ್ದು
ಪಶ್ಚಿಮಕ್ಕೆ—ಶ್ಯಾನಭಾಗನಹಳ್ಳಿ ಸರಹದ್ದು
ಉತ್ತರಕ್ಕೆ—ಗಂಗರಸನಹಳ್ಳಿ ಸರಹದ್ದು
ದಕ್ಷಿಣಕ್ಕೆ—ಯಾನಾದಹಳ್ಳಿ ಸರಹದ್ದು
(ಪೂರಾ ಗ್ರಾಮ)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 4ನೆ ಡಿಸೆಂಬರ್ 1903

1. ಕಂದಾಯದ ಬಾಕೀದಾರರಾದ ಭಂಡಾರಹಳ್ಳಿ ಗ್ರಾಮದ ವಿಶ್ವೇಶ್ವರಾಚಾರ್ಯರು ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಸಬಾ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ 1904ನ ಜನವರಿ 20ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ! ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 183—11-2 ರೂಪಾಯಿ ಆಗಿರುತ್ತೆ.

3. ಹರಾಜ್ ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜ್ ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿರವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಿಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ [illegible]ಗುವ ಫೈಸಲ್ ಹುಕುಮಿಗೆ ಒದ್ದವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತ್ತು.	ಜಮೀನು. ಸರ್ವೆ ನಂಬರು.	ಜಮೀನು. ಖುಷ್ಕಿ ತರಿ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎ.	ಗು.	ಜಮೀನು. ಆಕಾರ. ರೂ.	ಆ.	ಪೈ.	ಸದರಿ ಸ್ವತ್ತಿನ ಬಾಬ್ತು ಬಾಕಿ. ರೂ.	ಆ.	ಪೈ.	
[illegible]	[illegible]	[illegible]	[illegible]	[illegible]	[illegible]	[illegible]	[illegible]ಪೋಕು	278	28	17	6	8	188	11	2	ಬಾಕಿ ವರೆಗಿನ
							[illegible]	[illegible]	[illegible]3	166	14	10				ಬಡ್ಡಿ ಫೀಸಹ
							[illegible]	[illegible]	[illegible]	760	7	[illegible]				ಖರ್ಚು

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 2ನೆ ಡಿಸೆಂಬರ್ 1903, ಚಿಕ್ಕಮಗಳೂರು.

1. ಕಂದಾಯದ ಬಾಕೀದಾರರಾದ ಮರಣಿಸಿಗೆ ಗ್ರಾಮದ ಮಿಸ್ಟರ್ ಜೆ. ಜೆ. ರಬೆಲ್ಲೊ ಇವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಹಿಡುವಳಿ ಬಾಧ್ಯತೆ ಕಳದುಕೊಂಡ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಜನವರಿ ಮಂಗಳವಾರ 19ನೆ ತಾರೀಖಿನಲ್ಲಿ 2ನೆ ಅ॥ ಕ॥ ರವರಿಂದ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಾಸ್ತಿ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1901–02 ಮತ್ತು 1902–03ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 803—10—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು: ಕಟ್ಟಡದ ಹೆಸರು.	ಕಟ್ಟಡಗಳು: ಅಂದಾಜು ಕಿಮ್ಮತ್ತು.	ಜಮೀನು: ಸರ್ವೆ ನಂಬರು.	ಜಮೀನು: ಖುಷ್ಕಿ, ತರಿ ಯಾ ಬಾಗಾಯತು.	ಜಮೀನು: ವಿಸ್ತೀರ್ಣ.	ಜಮೀನು: ಕಂದಾಯ.	ಸರ್ಕಾರಕ್ಕೆ ಬರಬೇಕಾದ ಬಾಕಿ ಮತ್ತು ಖರ್ಚುಗಳು.
								ಎ. ಗು.	ರೂ. ಆ	ಆ. ಪೈ.
			[illegible]	1 ಮನೆ		120	ತರಿ	0 37	2 [illegible]	[illegible] ಬಾಕಿ
				1 ಆಫೀಸು		130	ಕಾಫಿ	56 34	[illegible]	[illegible] ಫೀಸ್ ಫೀ

ಸನ್ 1903ನೆ ಇಸವಿ ನವಂಬರ್ ತಾರೀಖು 19.

ಕಾಫಿ ಸಾಗವಳಿಗೆ ಕಲ್ಲತ್ತಿ ಎಸ್ಟೇಟ್ ಮೆ|| ಸೆಂಟಕ್ಲೇರ್ ಜಾರ್ಜ್ ಸಾಹೇಬರವರು ದರಖಾಸ್ತು ಮಾಡಿರುವ ತರೀಕೆರೆ ತಾಲ್ಲೂಕು ಕಲ್ಲತ್ತಿಪುರ ಗ್ರಾಮದಲ್ಲಿರುವ ಸರ್ವೆ ನಂಬರು 4ರಲ್ಲಿ ಪೋಡಾಗಿರುವ 100 ಎಕರೆ 11 ಗುಂಟೆ ಉಳ್ಳ ನಂಬರು 32ನೆ ಜಮೀನನ್ನು ತರೀಕೆರೆ ತಾಲ್ಲೂಕು ಅಮಲ್ದಾರ್ರವರು ಸನ್ 1904ನೆ ಇಸವಿ ಜನವರಿ ತಾರೀಖು 7ನೆ ಗುರುವಾರ ದಿವಿ 11 ಘಂಟೆಗೆ ತರೀಕೆರೆ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮಾಡಿಸುವರು ಯಂತಲೂ–ಜಾಸ್ತಿ ತಪಸೀಲು ಇದರ ಹಿಂದಿನ ವಾರದ ಗೆಜೆಟ್ಟಿನಲ್ಲಿ ನಮೂದಿರುತ್ತೆಯಂತಲೂ ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸಿರುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 187.

ಮೃತಪಟ್ಟ ಎಸ್. ಹನುಮಂತರಾಯರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹಿಂದೂಪುರದಲ್ಲಿ ಇರುವ 1ನೆ ವೆಂಕೋಬರಾವು, 2ನೆ ಶ್ರೀನಿವಾಸರಾವು ಮೈನರಗಳು, ಗಾರ್ಡಿಯನ್ ತಾಯಿ ತುಳಶಮ್ಮನವರು, ಮೃತಪಟ್ಟ ಸದರೀ ಎಸ್. ಹನುಮಂತರಾಯರವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಅನೆಕಲ್ಲು ತಾಲ್ಲೂಕು ಜಿಗಣಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ಎಸ್. ಹನುಮಂತರಾಯರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ವೆಂಕೋಬರಾವು, 2ನೆ ಶ್ರೀನಿವಾಸರಾವು, ಮೈನರ ಗಾರ್ಡಿಯನ್ ತುಳಶಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಜನವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಸ್. ಹನುಮಂತರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ಡಿಸೆಂಬರು ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 198.

ಮೃತಪಟ್ಟ ಹೊಸಮನೆ ಸುಬ್ರಾಯ ಶಾಸ್ತ್ರಿಗಳವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕುಣಿಗಲು ಕಸಬಾದಲ್ಲಿರುವ ನಾರಾಯಣ ಶಾಸ್ತ್ರಿಗಳು, ಮೃತಪಟ್ಟ ಸದರೀ ಹೊಸಮನೆ ಸುಬ್ರಾಯ ಶಾಸ್ತ್ರಿಗಳವರಿಗೆ ಮೊಮ್ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಗಂಗೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ಹೊಸಮನೆ ಸುಬ್ರಾಯ ಶಾಸ್ತ್ರಿಗಳವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣಶಾಸ್ತ್ರಿಗಳವರ ಅರ್ಜಿಯನ್ನು ಸನ್ 1904ನೆ ಇಸವಿ ಜನವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೊಸಮನೆ ಸುಬ್ರಾಯ ಶಾಸ್ತ್ರಿಗಳವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 199.

ಮೃತಪಟ್ಟ ಸರಜಾಪುರದ ನಾರಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು–ಹಲಸೂರು ಪೇಟೆಯಲ್ಲಿರುವ ಶ್ರೀನಿವಾಸಯ್ಯ ಮೈನರ್, ಗಾರ್ಡಿಯನ್ ತಾಯಿ ನಾರಣಮ್ಮನವರು, ಮೃತಪಟ್ಟ ಸದರೀ ಸರಜಾಪುರದ ನಾರಣಯ್ಯನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು–ಹಲಸೂರು ಪೇಟೇಲಿ ವಾಸಸ್ಥರಾಗಿ ಮೃತಪಟ್ಟ ಸರಜಾಪುರದ ನಾರಣಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯ ಮೈನರ, ಗಾರ್ಡಿಯನ್ ನಾರಣಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಜನವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸರಜಾಪುರದ ನಾರಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1903ನೆ ಇಸವಿ ಡಿಸೆಂಬರು ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1903—1904ನೆ ಇಸವಿ ಅರ್ಜೀ ನಂಬರು 201.

ಮೃತಪಟ್ಟ ಚೊಕೊಳಿ ಅಪ್ಪರಾಯಾಚಾರ್ಯುಲುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಚಾಮರಾಜ ಪೇಟೆಯಲ್ಲಿರುವ 1ನೆ ಜಯರಾಜಿಬಾಯಿ, 2ನೆ ಕಮಲಾಬಾಯಿ, 3ನೆ ಸಾವಿತ್ರಿಬಾಯಿ ಯವರು, ಮೃತಪಟ್ಟ ಸದರೀ ಚೊಕೊಳಿ ಅಪ್ಪರಾಯಾಚಾರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಚೊಕೊಳಿ ಅಪ್ಪರಾಯಾಚಾರ್ಯ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಜಯರಾಜಿಬಾಯಿ, 2ನೆ ಕಮಲಾಬಾಯಿ, 3ನೆ ಸಾವಿತ್ರಿಬಾಯಿ ಯವರ ಅರ್ಜಿಯನ್ನು ಸರ್ 1904ನೆ ಇಸವಿ ಜನವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚೊಕೊಳಿ ಅಪ್ಪರಾಯಾಚಾರ್ಯ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೆ ಇಸವಿ ಡಿಸೆಂಬರ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1903—1904ನೆ ಇಸವಿ ಅರ್ಜೀ ನಂಬರ 203.

ಮೃತಪಟ್ಟ ದಿಬ್ಬೂರು ವೀರಸೆಟ್ಟಿ ಎಂಬವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಬೆಂಗಳೂರು ಚಿಕ್ಕಪ್ಯಾಟೇಲಿರುವ 1ನೆ ರುದ್ರಪ್ಪ, 2ನೆ ರಾಚಪ್ಪ, ಮೃತಪಟ್ಟ ಸದರೀ ದಿಬ್ಬೂರು ವೀರಸೆಟ್ಟಿ ಯವರಿಗೆ ತಮ್ಮನ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ದಿಬ್ಬೂರು ವೀರಸೆಟ್ಟಿಯವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ರುದ್ರಪ್ಪ, 2ನೆ ರಾಚಪ್ಪ ಇವರ ಅರ್ಜಿಯನ್ನು ಸರ್ 1904ನೆ ಇಸವಿ ಜನವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದಿಬ್ಬೂರು ವೀರಸೆಟ್ಟಿ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೆ ಇಸವಿ ಡಿಸೆಂಬರ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಸರ್ 1903—1904ನೆ ಇಸವಿ ಅರ್ಜೀ ನಂಬರ 204.

ಮೃತಪಟ್ಟ ವೈ. ಲಕ್ಷ್ಮಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಾಮರಾಜಪೇಟೆಲಿರುವ ವೈ. ಭಾರತಿಬಾಯಿ ಉರುಫ್ ಕಮಲಾಬಾಯಿಯವರು, ಮೃತಪಟ್ಟ ಸದರೀ ವೈ. ಲಕ್ಷ್ಮಣರಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ವೈ. ಲಕ್ಷ್ಮಣರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೈ. ಭಾರತಿಬಾಯಿ ಉರುಫ್ ಕಮಲಾಬಾಯಿ ಯವರ ಅರ್ಜಿಯನ್ನು ಸರ್ 1904ನೆ ಇಸವಿ ಜನವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೈ. ಲಕ್ಷ್ಮಣರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸರ್ 1903ನೆ ಇಸವಿ ಡಿಸೆಂಬರ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟುಮೊಹರನಿಸಿ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 265.

ಅರ್ಜೀದಾರು ಯಡತೊರೆ ತಾಲ್ಲೂಕು ತಿಪ್ಪೂರು ಹೋಬಳಿ ಕಗ್ಗೆರೆ ಗ್ರಾಮದಲ್ಲಿರುವ ಕಾಳೆಗೌಡನ ಮಗ ಪುಟ್ಟೆಗೌಡ, ಮೈನರಾದ ಕಗ್ಗೆರೆ ಸ್ಥಳದ ಕಗ್ಗೆರೆ ಗ್ರಾಮದ ಬಸವೆಗೌಡನ ಮಕ್ಕಳು 1ನೆ ಬಸವ, 2ನೆ ಲಿಂಗನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಬಸವ—ಲಿಂಗನಿಗೆ ಗಾರ್ಡಿಯರ್ ಆಗಬೇಕೆಂಬ ಹಕ್ಕಿನ ಮೇಲೆ ಕಗ್ಗೆರೆ ಸ್ಥಳದ ಪುಟ್ಟೆಗೌಡನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1903ನೆ ಇಸವಿ ಡಿಸೆಂಬರ ತಾರೀಖು 18ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸರ್ 1903ನೆ ಇಸವಿ ನವಂಬರ ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತುಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿಸ್ ಅರ್ಜೀ ನಂಬರ್ 154.

ಮೃತಪಟ್ಟ ಶಿವಮೊಗ್ಗಾ ತಾಲ್ಲೂಕು ಕೊಡ್ಲಿ ಗ್ರಾಮದಲ್ಲಿ ಇದ್ದ ಅಯೋಚಿತ ಸುಬ್ಬಣ್ಣಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೊಡ್ಲಿ ಸಾವಿತ್ರಿಬಾಯಿ ಕೋಂ ಅಯೋಚಿತ ಸುಬ್ಬಣ್ಣಾಚಾರ್ಯ, ಶಿವಮೊಗ್ಗಾ ವಾಸಿ, ಮೃತಪಟ್ಟ ಸದರೀ ಅಯೋಚಿತ ಸುಬ್ಬಣ್ಣಾಚಾರ್ಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಕೊಡ್ಲಿ ಸಾವಿತ್ರಿಬಾಯಿ ಯವರು ಕೊಡ್ಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬಣ್ಣಾಚಾರ್ರು ಜಿಂದಗಿ ಬಗ್ಯಾಗಿ ಬರತಕ್ಕ 429—1—0 ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ನಂಬರ್ ರೆಗ್ಯುಲೇಷನ್ ಮೇರೆಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿ ರುತ್ತಾರೆ.

ಸದರೀ ದರಖಾಸ್ತುದಾರರಾದ ಕೊಡ್ಲಿ ಸಾವಿತ್ರಿಬಾಯಿ ಯವರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಣ್ಣಾಚಾರ್ರು ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ನವಂಬರು ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿದೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 165.

ಮೃತಪಟ್ಟ ಶಿವಮೊಗ್ಗದಲ್ಲಿರುವ ಕೃಷ್ಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಾರ್ತಾಂಡೈಯ್ಯ ಬಿನ್ ತಮ್ಮಡ್ಡಿ ಕೃಷ್ಣಪ್ಪ ಮೈನರ್, ಗಾರ್ಡಿಯನ್ ತಾಯಿ ಚಲುವಮ್ಮ, ಶಿವಮೊಗಾ ವಾಸಿ, ಮೃತಪಟ್ಟ ಸದರೀ ಕೃಷ್ಣಪ್ಪನವರಿಗೆ ಖಾಸ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಮಾರ್ತಾಂಡೈ ಯ್ಯನವರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಕೃಷ್ಣಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಶಿವಮೊಗ್ಗಾ ಡಿಸ್ಟ್ರಿಕ್ಟು ಟ್ರಿಜರಿ ಯಲ್ಲಿ ಛವತಿ ಯವರು ಇಟ್ಟಿರುವ ಸು|| 300 ರೂಪಾಯಿನ ಅಂದಾಜು ಜಿಂದಿಗಿ ಅಡಗಿ ಇರುವ ಸಂದೂಕಾ, ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮಾರ್ತಾಂಡೈಯ್ಯನವರ ಅರ್ಜಿಯನ್ನು 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೃಷ್ಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ನವಂಬರ್ 24ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋ ಣಾಗಿದೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 172.

ಮೃತಪಟ್ಟ ಚೆನ್ನಗಿರಿ ತಾಲ್ಲೂಕು ಉಬ್ರಾಣಿ ದುರ್ವಿಗೆರ ವಾಸಿ ಕಲ್ಲಣ್ಣನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬಸಪ್ಪ ಬಿನ್ ಕಲ್ಲಣ್ಣ, ಮೈನರ್ ಗಾರ್ಡಿಯನ್ ತಾಯಿ ಶಿದ್ದಮ್ಮ, ಚೆನ್ನಗಿರಿ ತಾಲ್ಲೂಕು ಉಬ್ರಾಣಿ ಮಾ|| ದು ರ್ವಿಗೆರೆ ವಾಸಿ, ಮೃತಪಟ್ಟ ಸದರೀ ಕಲ್ಲಣ್ಣನವರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕಿನ ಮೇಲೆ ಚೆನ್ನಗಿರಿ ತಾ|| ಉಬ್ರಾಣಿ ಮಾ|| ದು ರ್ವಿಗೆರೆ ಸ್ಥಳದ ಬಸಪ್ಪನವರು ಡಿಟೋ ವಾಸಸ್ಥರಾಗಿ ಮೃತಪಟ್ಟ ಕಲ್ಲಣ್ಣನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಬಸಪ್ಪನವರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಲ್ಲಣ್ಣನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ಡಿಸೆಂಬರಿ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಸಿ ನಮ್ಮ ದಸ್ತಖತ್ತೊಡನೆ ಕೊ ಡೋಣಾಗಿದೆ.

ಸನ್ 1903—1904ನೆ ಇಸವಿ ಮಿಸ್ ಅರ್ಜೀ ನಂಬರ್ 175.

ಮೃತಪಟ್ಟ ಶಿವಮೊಗ್ಗ ಟವ್ನನಲ್ಲಿರುವ ಮುಕುಂದರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶಿವಮೊಗ್ಗ ವಾಸಿ ಗೋಪಾಲರಾವ್ ಬಿನ್ ಮುಕುಂದರಾವ್, ಮೃತಪಟ್ಟ ಸದರೀ ಮುಕುಂದರಾಯರಿಗೆ ಖಾಸಾ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗ ಸ್ಥಳದ ಗೋಪಾಲರಾಯರು ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ಮುಕುಂದ ರಾಯರ ಜಿಂದಗಿ ಬಗ್ಯಾಗಿ ಬರತಕ್ಕ 1,550—0—0 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗೋಪಾಲರಾಯರ ಅರ್ಜಿಯನ್ನು ಸನ್ 1903ನೆ ಇಸವಿ ಡಿಸೆಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುಕುಂದರಾ ಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ನವಂಬರು ತಿಂಗಳು 24ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊ ಡೋಣಾಗಿದೆ.

ಸಿ. ಶೇಷಯ್ಯಂಗಾರ್,
ಶಿರಿಸ್ತೇದಾರ್.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನೋಟಿಸ.

ತಾರೀಖು 4ನೆ ಡಿಸೆಂಬರ್ 1903.

ಸ್ 1903ನೆ ಇಸವಿ ಡಿಸೆಂಬರು 17ನೆ ತಾರೀಖು ಗುರುವಾರ ಪ್ರಾತಃಕಾಲ 8 ಘಂಟೆಗೆ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಷನರುಗಳು ತಮ್ಮ ಆಫೀಸ ಕಟ್ಟಡದಲ್ಲಿ ಸಾಮಾನ್ಯ ಸಭೆ ಸೇರುವಾಗ ಇದರಡಿ ತಿಳಿಸಲ್ಪಡುವ ಕೆಲಸಗಳು ನಡೆಸಲ್ಪಡುವವು.—

ಡೆಫರಡ್ ಪ್ರಾಪೋಜೆಷನ್ಗಳು.

1. ಸಿಟಿಯಲ್ಲಿ ಹೆಚ್ಚಾಗಿ ದನ ಕರುಗಳನ್ನು ಇಟ್ಟುಕೊಳ್ಳತಕ್ಕ ರೀತಿ ಮತ್ತು ಆ ವಿಷಯದಲ್ಲಿ ಕವಾಡಿಗರ ಕರ್ತವ್ಯ ವಗೈರೆ ಸಂಗತಿಗಳಿಗೆ ಸಂಬಂಧಪಟ್ಟ ಮುಸವಿದಾ ಬೈಲಾಗಳು.

2. ಗುಂಡು ಟಾಪು ಜಟ್ಕಾ ಬಂಡಿಗಳಿಗೆ ಬಂಡಿ ಹೊಡಿಯುವವನ ತಲೆಗೆ ನೇರವಾಗಿ ಎರಡು ಪಾರ್ಶ್ವದಲ್ಲೂ ಕಿಟಕಿಗಳನ್ನು ಇಡುವದರ ಮೂಲಕ, ಪಕ್ಕದಲ್ಲಿ ಹೋಗತಕ್ಕ ಗಾಡಿಗಳಿಗೆ ಜಟ್ಕಾ ಗಾಡಿ ತಗಲಿ ಉಂಟಾಗಬಹುದಾದ ಅಪಾಯವನ್ನು ತಪ್ಪಿಸತಕ್ಕ ವಿಷಯ.

ಆರ್ಡಿನರಿ ಪ್ರಾಪೋಜೆಷನ್ಗಳು.

1. ಸ್ 1903ನೆ ಇಸವಿಯ ನವಂಬರ್ ಮಾಹೆ ಚಾಲತಿ ನಗದು ಜಮಾ ಖರ್ಚು ಲೆಖ್ಖಗಳು, ತಗಾದೆ ವಸೂಲಿ ಮತ್ತು ಬಾಕಿ ಸ್ಟೇಟಮೆಂಟ್, ಮರಣದ ಲೆಖ್ಖ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು, ಶ್ರೀನಿವಾಸ ಮಂದಿರದ ಲೈಬ್ರರಿಗೆ ಹೋಗಿದ್ದ ಜನರ ಕುರಿತ ಯಾದಿ, ಸಿಟಿ ಮ್ಯುನಿಸಿಪಲ್ ಇಂಗ್ಲೀಷ್ ಮತ್ತು ಕನ್ನಡ ಸ್ಕೂಲುಗಳ ಲೆಖ್ಖಗಳು, ಪ್ರಸುವಾಸ್ಪತ್ರೆಯ ಲೆಖ್ಖ, ಲಂಗರು ಖಾನೆಯ ಲೆಖ್ಖ, ದಳವಾಡಾ ಲೆಖ್ಖ, ನಾಯಿಗಳನ್ನು ಕೊಲ್ಲಲ್ಪಟ್ಟ ಇನಾಂಗಳ ಲೆಖ್ಖ ಮತ್ತು ಪ್ರಾಸಿಕ್ಯೂಷನ್ ಮಾಡಲ್ಪಟ್ಟವರ ತಖ್ತೆ.

2. ಇಂಡಿಯಾ ಗೌರ್ನಮೆಂಟಿನವರ ಮಂಜೂರಾತಿ ಇಲ್ಲದೆ ಮದ್ರಾಸ್ ರೈಲ್ವೆ ಕಂಪೆನಿಯವರಿಂದ ಸಿಟಿ ರೈಲ್ವೆ ಸ್ಟೇಷನ್ ಕಟ್ಟಡಗಳ ಮೇಲೆ ಇದುವರಿಗೂ ವಸೂಲ್ ಮಾಡಿರುವ ದೀಪದ ಕಂದಾಯವನ್ನು ರೀಫಂಡು ಮಾಡುವ ವಿಷಯದಲ್ಲಿ ಬೋರ್ಡಿನವರ ಮನೋಗತ ತಿಳಿಯಲಪೇಕ್ಷಿಸಿ ಮೈಸೂರು ಶ್ರೀಮನ್ ಮಹಾರಾಜಾ ಸರ್ಕಾರದ ಜನರಲ್ ವ ರವಿನ್ಯೂ ಸೆಕ್ರೆಟರಿಯವರಿಂದ ಬಂದಿರುವ ಚಾಲತಿ ಇಸವಿ ಅಕ್ಟೋಬರ್ 17ನೆ ಮುರ್ಕ್ಕಂ 1455—L. F. 210-93ನೆ ನಂಬರು ಚಾಕಿಟಿ.

3. ಮಲ್ಲೇಶ್ವರದಿಂದ ಗುಟ್ಟಹಳ್ಳಿ ರಸ್ತೆ ವರಿಗೆ ಹೊಸದಾಗಿ ರೋಡ್ ಹಾಕುವದಕ್ಕಾಗಿ ತಯಾರಾದ 581 ರೂಪಾಯಿನ ಅಂದಾಜು.

4. ಚಾಲತಿ ಇಸವಿ ಏಪ್ರೆಲ್ 30ನೆ ಮುರ್ಕ್ಕಂನ ಬೋರ್ಡು ಮೀಟಿಂಗ್ನಲ್ಲಿ ತೀರ್ಮಾನವಾಗಿರುವಂತೆ ಮ್ಯುನಿಸಿಪಲ್ ಕಮಿಷನರಗಳಿಗೆ ಅವರ ತಿಳುವಳಿಕೆಗೋಸ್ಕರ ಕೊಡಬೇಕಾಗಿರುವ ಸಿಟಿ ಮ್ಯಾಪುಗಳ ತಯಾರಿ ಬಗ್ಯೆ 3,000 ರೂಪಾಯಿ ಲಾ[illegible] 4,000 ರೂಪಾಯಿ ವರಿಗೆ ಲಾಗವಡು ಆಗಬಹುದೆಂದು ಮ್ಯುನಿಸಿಪಲ್ ಎಕ್ಸಿಕ್ಯುಟಿವ್ ಇಂಜನಿಯರವರು ವ[illegible]ರುವ 814—20-10-03ನೆ ನಂಬರು ರಿಪೋರ್ಟು.

5. ಲಂಗರಖಾನೆ, ಅನ್ನಛತ್ರ ಮತ್ತು ಇನ್ಕ್ಯೂರಬಲ್ ವಾರಡ್ ವಹಿವಾಟ ವಿಷಯದಲ್ಲಿ ಸಬ್ ಕಮಿಟಿಯವರು ಮಾಡಿರುವ ರಿಪೋರ್ಟು.

ಪಿ. ಪಲಿಪ್,
ಫಾರ್ ಪ್ರೆಸಿಡೆಂಟ್.

ಅಮೃತಮಹಲ್ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 28ನೆ ನವಂಬರ್ 1903, ಮೊಕ್ಕಾಂ ಮೈಸೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸೀಮೆಯ ಅಮೃತಮಹಲ್ ಇಲಾಖಾದಲ್ಲಿರುವ ನಾಲ್ಕು ವರ್ಷ ವಯಸ್ಸುಳ್ಳ ಕೆಲವು ಹೋರಿಗಳನ್ನು ಮತ್ತು ಕಲವು ಹಸುಗಳನ್ನು ಹಾಸನದ ತಾಲ್ಲೋಕು ಸೋಮನಹಳ್ಳಿ ಕಾವಲಿನಲ್ಲಿ ಸ್ 1903ನೆ ಇಸವಿ ಡಿಸೆಂಬರು 17ನೆ ತಾರೀಖು ಗುರುವಾರದ ಲಾಗಾಯಿತು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಇಷ್ಟವುಳ್ಳವರು ಥಡ ದರಖಾಸ್ತು ಮಾಡಿ ಪಡೆಯಬಹುದು.

ಹೆಚ್. ನಂಜುಂಡರಾಜೆ ಅರಸ್,
ಸೂಪರಿಂಟೆಂಡೆಂಟ್.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್, ತಾರೀಖು 8ನೆ ಡಿಸೆಂಬರ 1903.

ಈ ಕೆಳಗಡೆ ನಮೂದಿಸಿರುವ ಪುಸ್ತಕಗಳು ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿಗುತ್ತವೆ. ಇದರ ಕ್ರಯ ಪ್ರತಿ 1ಕ್ಕೆ ನಾಲ್ಕು ಆಣೆ.

1901ನೆ ಇಸವಿ ಖಾನಿಷುಮಾರಿ ಲೆಖ್ಖದ ಬಾಬತು ಜಾತಿವಾರ್ ತೋರಿಸುವ ತಖ್ತೆಯುಳ್ಳ ಪುಸ್ತಕ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಮೈಸೂರ ಗೆಜೆಟ್.

ನಂ. 38.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರು ತಾ॥ 17, ಸನ್ 1903.

IIನೆ ಭಾಗ.

ಇಂಡ್ಯ ಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್, ಡಿ. ನಂಬರು 21, ತಾರೀಖು 9ನೆ ಡಿಸೆಂಬರ್ 1903ನೆ ಇಸವಿ.

ಮೈಸೂರು ಶಾರದಾ ವಿಲಾಸ ಪಾಠಶಾಲಾ ಕಮಿಟಿಯಲ್ಲಿ ಈ ಕೆಳಗೆ ನಮೂದಿಸುವ ಬದಲಾವಣೆಗಳನ್ನು ಮಾಡಲಾಯಿತು.

ಪ್ರೆಸಿಡೆಂಟ್.

1. ಹೆಚ್. ನಂಜುಂಡರಾಜೇ ಅರಸ್, ಎಸ್ಕ್ವೈರ್, ಯವರಿಗೆ ಬದಲಾಗಿ ಮೈಸೂರು ಮ್ಯುನಿಸಿಪಲ್ ಬೋರ್ಡಿನ ವೈಸ್ ಪ್ರೆಸಿಡೆಂಟ್ ಕೆ. ಶ್ರೀನಿವಾಸರಾವ್, ಎಸ್ಕ್ವೈರ್.

ಮೆಂಬರುಗಳು.

2. ಫ್ರೆಂಚ್‌ರಾಕ್ಸ್ ಡೆಪ್ಯುಟಿ ಅಮಲ್ದಾರರಾಗಿದ್ದ ಮ॥ ರಾ॥ ಸಿ. ವೆಂಕಟರಾವ್, ಬಿ. ಎ., ಯವರಿಗೆ ಬದಲಾಗಿ ಅಸಿಸ್ಟೆಂಟ್ ಕಮಿಷನರ್ ಸಿ. ವೆಂಕಟರಾವ್, ಬಿ. ಎ., ಯವರು.
3. ಮ॥ ರಾ॥ ವಿ. ನರಸಿಂಹಐಯ್ಯಂಗಾರ್, ಬಿ. ಎ., ಬಿ. ಎಲ್., ಯವರಿಗೆ ಬದಲಾಗಿ ಮ॥ ರಾ॥ ವಿ. ಕೃಷ್ಣರಾವ್, ಬಿ. ಎ., ಬಿ. ಎಲ್., ಯವರು.
4. ಮ॥ ರಾ॥ ಎಸ್. ಮಲ್ಲಾರಿರಾವ್, ಬಿ. ಎ., ಯವರಿಗೆ ಬದಲಾಗಿ ಮ॥ ರಾ॥ ಹೆಚ್. ಆರ್. ಕೃಷ್ಣಮೂರ್ತಿ, ಬಿ. ಎ., ಯವರು.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 14ನೆ ಡಿಸೆಂಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ಕ್ಲೋಸ್‌ಪೇಟೆ ರೇಂಜಿಗೆ ಸೇರಿದ ಹಂದಿಗೊಂದಿ ಫಾರೆಸ್ಟಿನಲ್ಲಿ ಗುರ್ತು ಮಾಡಿರುವ ಈ ಕೆಳಗೆ ನಮೂದಿಸಿರುವ ಕೂಪುಗಳಲ್ಲಿ 500 (ಐನೂರು) ಟನ್ ಸೌದೆಯನ್ನು ಈ ಕೆಳಗಣ ಷರತ್ತುಗಳಿಗೆ ಒಳಪಟ್ಟು ಕಡಿದು ಬೆಂಗಳೂರು ಡಿಪೋಕ್ಕೆ ಸರಬರಾಯಿ ಮಾಡತಕ್ಕ ಹಕ್ಕುದಾರಿಯು ಬೆಂಗಳೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಂದಲೇ ಯಾಗಲಿ ಅಥವಾ ಕ್ಲೋಸ್‌ಪೇಟೆ ರೇಂಜ್ ಆಫಿಸರವರಿಂದಾಗಲಿ 1903ನೆ ಇಸವಿ ಡಿಸೆಂಬರ್ ತಾರೀಖು 23ರಲ್ಲು ಬಿಡದಿ ಮೊಕ್ಕಾಮಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆ :—

ನಂಬರ್	ಫಾರೆಸ್ಟು ಮತ್ತು ಕೂಪಿನ ಹೆಸರು	ಕೆಲಸ ಮಾಡುವ ಸರ್ಕಲ್ ನಂಬರು	ಕೂಪು ನಂಬರು	ಸುಮಾರು ವಿಸ್ತೀರ್ಣ ಎಕರೆ	ಕಡಿಯತಕ್ಕ ಮರಗಳ ಜಾತಿ	ರೈಲ್ವೆ ಸ್ಟೇಷನ್‌ಗೆ ಸುಮಾರು ಫಾಸಲೆ	ಚಕ್ಕುಬಂದಿ ಮತ್ತು ಷರಾ.
1	ಹಂದಿಗೊಂದಿ ಫಾರೆಸ್ಟು ಪುರಗಹಳ್ಳಿ ಕೂಪು.	I	1	130	ಚುಜ್ಜಲು, ಹುಲುವೆ, ಈಚಿ, ಪಚ್ಚಾರಿ, ಹೆಸರೆ, ಆಲ, ಹುರುಗಲು, ಕಗ್ಗಲಿ, ದೇವದಾರಿ, ತೂಪರೆ, ಚನ್ನಂಗಿ, ಗೊರವಿ, ನೌಲಾಡಿ, ದಿಂಡಿಗ, ಆಲೆ, ಜಗಳಗಂಟಿ, ನಾಯಿಬೇಲ, ಮೂಕರ್ತಿ ವಗೈರೆ.	ಬಿಡದಿ ರೈಲ್ವೆ ಸ್ಟೇಷನ್ನಿಗೆ 3ರ ಲಾಗಾಯತು ನಾಲ್ಕೂವರೆ ಮೈಲಿಫಾಸಲೆ	ಕೂಪಿನ ಎರಡು ಭಾಗದಲ್ಲಿಯೂ ಡಿಮಾರ್ಕೇಷನ್ ಮತ್ತು ಕೂಪು ಲೈನುಗಳೂ ಬೇರೆ ಎರಡು ಭಾಗದಲ್ಲಿಯೂ ನಾಲೆಯೂ, ನೀರು ಹರಿಯುವ ಹಳ್ಳಗಳೂ ಚಕ್ಕುಬಂದಿಯಾಗಿರುತ್ತೆ. ಕೂಪು ಮಟ್ಟ ಭೂಮಿಯುಳ್ಳ ಫಾರೆಸ್ಟು.
2	ಡಿಟೋ ಫಾರೆಸ್ಟು ಡಿಟೋ ಕೂಪು.	I	2	120	ಡಿಟೋ	ಡಿಟೋ	ಕೂಪಿನ ಮೂರು ಭಾಗಗಳಲ್ಲಿಯೂ ನಾಲಾಗಳೂ ಮತ್ತು ನೀರು ಹರಿಯುವ ಹಳ್ಳಗಳೂ ಮತ್ತೊಂದು ಭಾಗದಲ್ಲಿ ಅಂದರೆ ಉತ್ತರದಲ್ಲಿ (ವಿ[illegible]ಯಕವಾದ ಕೂಪು ಲೈನು [illegible]ತ್ತವೆ. ಈ ಕೂಪು ಸುಮಾರಾಗಿ ಎಲ್ಲಾ ಬೆಟ್ಟಕಾಡಾಗಿರುತ್ತೆ.
3	ಹುಲ್ತಾರು ಸ್ಟೇಟ್ ಫಾರೆಸ್ಟು ಗುಡ್ಡದಹಳ್ಳಿ ಕೂಪು.	I	1	130	ಡಿಟೋ	ಬಿಡದಿ ರೈಲ್ವೆ ಸ್ಟೇಷನ್ನಿಗೆ 7 ಮೈಲಿ ಫಾಸಲೆ	ಕೂಪಿನ ಮೂರು ಭಾಗಗಳಲ್ಲಿಯೂ ಡಿಮಾರ್ಕೇಷನ್ ಲೈನು ಇರುತ್ತೆ. ಮತ್ತೊಂದು ಕಡೆ ನಾಲಾ ಮತ್ತು ವಿಧಾಯಕವಾದ ಪಾಕಾದ ಕೂಪು ಲೈನು. ಬಂದು ಫರ್ಲಾಂಗು ವರಿವಿಗ ಇರುತ್ತೆ. ಕೂಪೆಲ್ಲಾ ಬೆಟ್ಟಗಾಡಾಗಿದೆ.
4	ಡಿಟೋ ಫಾರೆಸ್ಟು ಡಿಟೋ ಕೂಪು.	I	2	115	ಡಿಟೋ	ಡಿಟೋ	ಉತ್ತರಕ್ಕೆ 1ನೆ ನಂಬರ್ ಕೂಪಿನ ದಕ್ಷಿಣ ಎಲೆ ಯೂ ಮತ್ತು ಡಿಮಾರ್ಕೇಷನ್ ಲೈನೂ, ಪೂರ್ವಕ್ಕೆ ಪಾಕಾದ ಕೂಪು ಲೈನು, [illegible]ಕ್ಷಿಣಕ್ಕೆ ನೀರಿನ ಹಳ್ಳ, ಪಶ್ಚಿಮಕ್ಕೆ ಹೆಗ್ಗಲಹಳ್ಳಿಕಡೆ ಡಿಮಾರ್ಕೇಷನ್ ಲೈನು. ಚಕ್ಕುಬಂದಿಯಾಗಿದೆ.

II. ಸದರಿ ಕೂಪಿನಿಂದ ಸೌದೆಯನ್ನು ಮೇಲ್ಕಂಡ ಡಿಪೋವಿಗೆ ಸಾಗಿಸಲು ತಗಲಬಹುದಾದ ಆಖೈರು ದರವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರ ಮಂಜೂರಾತಿಗೆ ಒಳಪಡಿಸಿ ಅಂಗೀಕರಿಸಲಾದೀತು.

III. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವು ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸುವ ಆಫೀಸರವರಿಗೆ ಅಧಿಕಾರವಿರುತ್ತೆ.

IV. ಸವಾಲ್ದಾರನು ಸವಾಲ್ ಮಾಡುವದಕ್ಕೆ ಮುಂಚೆಯೆ 50 ರೂಪಾಯಿಗಳು ಡಿಪಾಜಿಟ್ಟು ಹಾಜರ್ಮಾಡಬೇಕು. ಆ ಮೊಬಲಗು ಮಂಜೂರಾದ ಸವಾಲ್ದಾರನ ಹೊರ್ತು ಹರಾಜು ಕೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು. ಆ ಮೊಬಲಗನ್ನು ಷರತ್ತು ಮೇರೆ ನಡಿಯಲು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಇಡುತ್ತೆ.

V. ಮಂಜೂರಾದ ಸವಾಲುದಾರನು ಸರಿಯಾದ ಸ್ಟಾಂಪು ಕಾಗದ್ದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಸದರಿ ಹಕ್ಕನ್ನು ಪುನಹಾ ಹರಾಜು ಮಾಡಿಸಲಾದೀತು. ದುಸರಾ ಹರಾಜಿನಲ್ಲಿ ಏನಾದರೂ ಲುಕ್ಸಾನು ಬಂದರೆ ಮೊದಲಿನ ಸವಾಲುದಾರನು ಭರ್ತಿಮಾಡಿ ಕೊಡಬೇಕು. ಆದರೆ ಫಾಯಿದೆ ಯೇನಾದರೂ ಬಂದರೆ ಅಂಥಾ ಫಾಯಿದೇಗೆ ಈತನು ಭಾಗಿಯಾಗುವದಿಲ್ಲ.

ಷರತ್ತುಗಳು.

1. ಸಂದಲ್, ಆಳಲೆ, ಹುಣಸೆ, ಜಾಲಾರಿ ಗಿಡಗಳು ಎಕರೆ ಒಂದಕ್ಕೆ ಸರಾಸರಿ 40ರ ಕ್ಕಿಂತ ಜಾಸ್ತಿ ಇಲ್ಲದೆ ಗುರ್ತು ಮಾಡಿರುವ ಮತ್ತು ಸೊಶಿಗಳು ಅಂದರೆ ಸುತ್ತು ಅಳತೆ 9 ಅಂಗುಲದ ಒಳಗಿರುವ ಗಿಡಗಳು ಇವುಗಳನ್ನು ಬಿಟ್ಟು ಎಲ್ಲಾ ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಕತರಾಯಿಸಬೇಕು.

2. ಸೌದೆಯನ್ನು ಕಡಿಯುವಾಗ ಅಥವಾ ಗಾಡಿಯಲ್ಲಿ ಸಾಗಿಸುವಾಗ ಯಾವದಾದರೂ ಸಂದಲ್ ಗಿಡಕ್ಕೆ ಉಪಹತಿ ಉಂಟಾದರೆ, ಕಂಟ್ರಾಕ್ಟುದಾರನು ಡಿ॥ ಫಾರೆಸ್ಟ್ ಆಫೀಸರವರು ಗೊತ್ತು ಮಾಡುವ ಲುಕ್ಸಾನ್ ಮೊಬಲಗನ್ನು ಸರಕಾರಕ್ಕೆ ಪಾವತಿ ಮಾಡಬೇಕು.

3. ತಂಗಡಿ ಮತ್ತು ಕಕ್ಕೆ ಇವುಗಳು ಈ ಹರಾಜಿನಲ್ಲಿ ಶೇರಿ ಇಲ್ಲ. ಅಲ್ಲದೆ ಫಲಗಳು ಬಿಡುವ ಅಂದರೆ ಬ್ಯಾಲ ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಶೆ, ಆಳಲೆ ಇವೇ ಮೊದಲಾದ ಯಾವದೂ ಹರಾಜಿಗೆ ಶೇರಿ ಇಲ್ಲ. ಉಳಿಸಿಕೊಂಡಿರುವ ಸಂದಲ್, ಆಳಲೆ, ಹುಣಸೆ, ಗುರ್ತಿಗೋಸ್ಕರ ಬಿಟ್ಟಿರುವ ಮರಗಳ ವಿನಹಾ ಕಡಿಯಬಹುದಾದ ಇನ್ಯಾವ ಮರಗಳನ್ನು ಆದರೂ ಮನ್ಮಾನೆಯಾಗಿ ಕಡದರೆ ಅಂಥಾದ್ದೆಲ್ಲಾ ಇಲಾಖಾ ಮಾರೀಫತ್ತು ಕಾಪಿಸ್ಟು ಮಾಡಿಸಿ ತಗಲುವ ಲಾಗವಡನ್ನು 50 ರೂಪಾಯಿನ ಸೆಕ್ಯೂರಿಟಿ ಹಣದಿಂದ ವಸೂಲ್ಮಾಡುತ್ತೆ.

4. ಸೌದೆ ಮತ್ತು ಚೌಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನೆಲ್ಲಾ 1904ನೆ ಇಸವಿ ಜುಲೈ ಆಖೈರು ವಳಗಾಗಿ ಪೂರೈಸಿಕೊಳ್ಳಬೇಕು. ಹಾಗೆ ಮಾಡದೆ ಇದ್ದರೆ ಕಂಟ್ರಾಕ್ಟುದಾರನು ಪಾವತಿಮಾಡಿರುವ ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಳ್ಳುವದಲ್ಲದೆ ಮೇಲ್ಕಂಡ ಸೌದೆ ಮತ್ತು ಚೌಬೀನೆ ಕತರಾವಣಿ ವ ಸಾಗಿಸತಕ್ಕ ಹಕ್ಕುದಾರಿಯು ಸಹಾ ಆ ತಾರೀಖಿನಿಂದ ರದ್ದು ಆಗಿರುತ್ತೆ. ರೂಢಿಸಿದ ಬಾಬು ರಫ್ತು ಮಾಡಿಕೊಳ್ಳಲು ಸ್ಥಳದಲ್ಲಿರುವ ಫಾರೆಸ್ಟ್ ನೌಕರರು ರಹದಾರಿ ಕೊಡುತ್ತಾರೆ.

5. ಕೂಪು ಯಾ ಕಂಪಾರ್ಟುಮೆಂಟಿನಿಂದ ಚೌಬೀನೆ ಮತ್ತು ಸೌದೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆ ಅಥವಾ ಸೂರ್ಯಾಸ್ತಮಯವಾದ ಮೇಲೆ ಸಾಗಿಸಕೂಡದು. ಕತರಾವಣಿ ಕೆಲಸಕ್ಕಾಗಿ ಕೊಟ್ಟು ಇರುವ ಕೂಪಿನಲ್ಲಿ ಆಗಲಿ ಅಥವಾ ಸೌದೆಗಾಡಿ ಮಾರ್ಗಗಳಲ್ಲಿ ಆಗಲಿ ಬೇಸಿಗೆ ಕಾಲದಲ್ಲಿ ಅಂದರೆ 1904ನೆ ಫೆಬ್ರವರಿ 1ರ ಲಾಗಾಯಿತು 1904ನೆ ಮೇ 31ರ ವರಿಗೆ ಏನಾದರೂ ಬೆಂಕಿ ಬಿದ್ದು ಅದು ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದ್ದೆಂದು ಡಿ॥ ಫಾರೆಸ್ಟ್ ಆಫೀಸರವರಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್ ಮಾಡಬೇಕು.

6. ಕಂಟ್ರಾಕ್ಟುದಾರನ ಕಡೆ ಗಾಡಿಯವರು ರೈಲ್ವೆ ಸ್ಟೇಷನ್‌ಗೆ ಬರುವಾಗ್ಯೆ ಸ್ಟೇಟು ಯಾ ಡಿಸ್ಟ್ರಿಕ್ಟ್ ಫಾರೆಸ್ಟಿನಲ್ಲಿ ಹಶಿ ಸೌದೆಯನ್ನು ಕಡದ್ದೇ ಆಗಲಿ ಅಥವಾ ಕಡದು ರಫ್ತು ಮಾಡುವದೇ ಆಗಲಿ ಕಂಡುಬಂದಲ್ಲಿ ಅಂಥಾವರನ್ನು ಫಾರೆಸ್ಟ್ ರೆಗ್ಯುಲೇಷನ್ ಪ್ರಕಾರ ಪ್ರಾಸಿಕ್ಯೂಷನ್‌ಗೆ ಗುರಿಮಾಡಲ್ಪಡುತ್ತೆ.

ನೋಟಿಫಿಕೇಷನ್, ತಾರೀಖು 14ನೆ ಡಿಸೆಂಬರ್ 1903.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟ್ ಚನ್ನಪಟ್ಣದ ತಾಲ್ಲೂಕು ಕ್ಲೋಸ್ ಪೇಟೆ ಸಬ್ ತಾಲ್ಲೂಕು, ಕ್ಲೋಸ್‌ಪೇಟೆ ರೇಂಜಿಗೆ ಸೇರಿದ ಹಂದಿಗೊಂದಿ ಫಾರೆಸ್ಟಿನಲ್ಲಿನ ಈ ಕೆಳಗೆ ನಮೂದಿಸಿರುವ ಕೂಪುಗಳಲ್ಲಿನ ಸೌದೆಯನ್ನು ಈ ಕೆಳಗಿನ ಷರತ್ತುಗಳಿಗೆ ಒಳಪಟ್ಟು 1904ನೆ ಇಸವಿ ಜನವರಿ ಲಾಗಾಯಿತು 1904ನೆ ಇಸವಿ ಜೂನ್ ಮಾಹೆ ವರೆಗೆ ಕಡಿದು ಸಾಗಿಸಿಕೊಳ್ಳುವ ಹಕ್ಕುದಾರಿಯು ಬೆಂಗಳೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಅಥವಾ ಅವರಿಂದ ನೇಮಿಸಲ್ಪಡುವ ಆಫಿಸರವರಿಂದ ಯಾ ಕ್ಲೋಸ್‌ಪೇಟೆ ರೇಂಜ್ ಆಫಿಸರವರಿಂದ 1903ನೆ ಇಸವಿ ಡಿಸೆಂಬರ್ ಮಾಹೆ ತಾರೀಖು 23ರಲ್ಲು ಬಿಡದಿ ಮೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು :—

ನಂಬರ್	ಫಾರೆಸ್ಟಿನ ಮತ್ತು ಕೂಪಿನ ಹೆಸರು	ಕೆಲಸ ಮಾಡುವ ಸರ್ಕಲ್ ನಂಬರು	ಕೂಪು ನಂಬರ್	ಸುಮಾರು ವಿಸ್ತೀರ್ಣ ಎಕರ	ಕಡಿಯತಕ್ಕ ಮರಗಳ ಜಾತಿ	ರೈಲ್ವೆ ಸ್ಟೇಷನ್ನಿಗೆ ಫಾಸಲೆ	ಚಕ್ಕುಬಂದಿ ಮತ್ತು ಷರಾ
1	ಹುಲ್ತಾರು ಫಾರೆಸ್ಟ್ ಕರೇನಹಳ್ಳಿ ಕೂಪು.	II	2	130	ಚುಜ್ಜಲು, ಹುಲುವೆ, ಈಚಿ, ಆಲ, ಪಚ್ಚಾರಿ, ಹೆಸರೆ, ಉರಗಲು, ಕಗ್ಗಲಿ, ದೇವದಾರಿ, ತೂಪರೆ, ಚನ್ನಂಗಿ, ಗೊರವಿ, ಆಲೆ, ನೌಲಾಡಿ, ದಿಂಡಿಗ, ಜಗಳಗಂಟ, ನಾಯಿಬೇಲ, ಮೂಕರ್ತಿ.	ಬಿಡದಿ ರೈಲ್ ಸ್ಟೇಷನ್ನಿಗೆ 2–3 ಮೈಲಿ ಫಾಸಲೆ	ಉತ್ತರಕ್ಕೆ ಪಾಕಾದಕೂಪ್ ಲೈನು,—ಅಂದರೆ 1ನೆ ನಂಬರು ಕೂಪಿನ ದಕ್ಷಿಣ ಮೇರೆ, ಪೂರ್ವಕ್ಕೆ ಡಿಮಾರ್ಕೇಷನ್ ಲೈನು, ದಕ್ಷಿಣ ಮತ್ತು ಪಶ್ಚಿಮಕ್ಕೆ ಪಾಕಾದ ಕೂಪು ಲೈನುಗಳು. ಈ ಮೇರೆ ಚಕ್ಕುಬಂದಿ ವುಳ್ಳದ್ದಾಗಿದೆ. ಈ ಕೂಪು ಅರ್ಧ ಬೆಟ್ಟಗಾಡು, ಅರ್ಧ ಮಟ್ಟಭೂಮಿಯಾಗಿದೆ.
2	ಹಂದಿಗೊಂದಿ ಸ್ಟೇಟ್ ಫಾರೆಸ್ಟ್ ಅಂಣಹಳ್ಳಿ ಕೂಪು.	II	1	200	ಡಿಟೋ	ಬಿಡದಿ ರೈಲ್ವೇ ಸ್ಟೇಷನ್ನಿಗೆ 6 ಮೈಲಿ	ಪೂರ್ವ, ಉತ್ತರ, ದಕ್ಷಿಣ ಈ ಮೂರು ದಿಕ್ಕುಗಳಲ್ಲಿಯೂ ಪಾಕಾದ ಲೈನು ಇರುತ್ತೆ. ಪಶ್ಚಿಮ ದಿಕ್ಕು ಮಾತ್ರ ಬೆಟ್ಟದ ವಾರಡಿಯಾಗಿದೆ.
3	ಡಿಟೋ ಫಾರೆಸ್ಟ್ ಜಾಲದಕೆರೆ ಕೂಪು.	II	2	150	ಡಿಟೋ	ಡಿಟೋ	ಉತ್ತರಕ್ಕೆ ಸಾಸಿನಪಾಳ್ಯದ ಬೈಲು ಹಳ್ಳ, ಪೂರ್ವಕ್ಕೆ ಎಲ್ಲೆ ಹಳ್ಳ, ದಕ್ಷಿಣಕ್ಕೆ ಪಾಕಾದ ಕೂಪು ಲೈನು, ಅಂದರೆ 1ನೆ ನಂಬರು ಕೂಪಿನ ಉತ್ತರ ಮೇರೆಯಾದ ಲೈನು, ಪಶ್ಚಿಮಕ್ಕೆ ಜಾಲದಕೆರೆಯಿಂದ ಸಾಸಿನ ಪಾಳ್ಯದ ಬೈಲು ಹಳ್ಳಕ್ಕೆ ಹೋಗುವ ಪಾಕಾದ ಬಂಡೀ ದಾರಿ. ಕೂಪು ಸಾಮಾನ್ಯವಾಗಿ ಮಟ್ಟವಾದ ಫಾರೆಸ್ಟ್ ಪ್ರದೇಶವಾಗಿದೆ.
4	ಡಿಟೋ ಫಾರೆಸ್ಟ್ ಅಂಣಹಳ್ಳಿ ಕೂಪು.	III	1	80	ಡಿಟೋ	ಬಿಡದಿ ರೈಲ್ವೇ ಸ್ಟೇಷನ್ನಿಗೆ 6–7 ಮೈಲಿ ಫಾಸಲೆ	ಉತ್ತರ, ದಕ್ಷಿಣ, ಪಶ್ಚಿಮಗಳಲ್ಲಿ ಪಾಕಾದ ಕೂಪು ಲೈನುಗಳೂ, ಪೂರ್ವಕ್ಕೆ ಡಿಮಾರ್ಕೇಷನ್ ಲೈನು ಸಹಾ ಇವೆ.
5	ಡಿಟೋ ಫಾರೆಸ್ಟ್ ಪಿಚ್ಚಿನಕೆರೆಬೆಟ್ಟ ಕೂಪು.	III	2	80	ಡಿಟೋ	ಡಿಟೋ	ಉತ್ತರಕ್ಕೆ ಪಾಕಾದ ಫಾರೆಸ್ಟ್ ಕೂಪು ಲೈನು ಅಂದರೆ 1ನೆ ನಂಬರು ಕೂಪಿನ ದಕ್ಷಿಣ ಮೇರೆ ಮತ್ತು 3ನೆ ನಂಬರು ವರ್ಕಿಂಗ್ ಸರ್ಕಲ್. ಪೂರ್ವಕ್ಕೆ ಡಿಮಾರ್ಕೇಷನ್ ಲೈನು. ಪಶ್ಚಿಮಕ್ಕೆ ಪಾಕಾದ ಲೈನು.

2. ಈ ಹರಾಜು ಪ್ರತ್ಯೇಕ ಪ್ರತ್ಯೇಕ ಕೂಪುವಾರಾಗಿಯೂ, ಇಲ್ಲವೆ ಒಟ್ಟಾಗಿಯೂ, ಅಥವಾ ಎಕರೆ 1ಕ್ಕೆ ಯಾ ಟನ್ 1ಕ್ಕೆ ಇಷ್ಟೆಂದು ನಿರ್ಧರಿಸಿ ಹರಾಜು ಮಾಡತಕ್ಕದ್ದು. ಹರಾಜು ಕ್ರಮ ನಡಿಸತಕ್ಕ ಆಫೀಸರ ಅನುಮತಿಗೆ ಒಳಪಟ್ಟು ಇರುತ್ತೆ. ಅಲ್ಲದೆ ಈ ಹರಾಜು ಫಾರೆಸ್ಟು ಕನ್‌ಸರವೇಟರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

3. ಸವಾಲುಗಳು ಬಂದದ್ದನ್ನು ಅಂಗೀಕರಿಸುವದಕ್ಕೂ ಅಥವಾ ಯಾವ ಕಾರಣವನ್ನೂ ಹೇಳದೆ ತಿರಸ್ಕರಿಸುವದಕ್ಕೂ ಹರಾಜು ಕ್ರಮ ನಡಿಸತಕ್ಕ ಆಫೀಸರಿಗೆ ಅಧಿಕಾರವಿರುತ್ತೆ. ಮತ್ತು ಹರಾಜಾಗದೆ ಉಳಿಕೊಳ್ಳುವ ಕೂಪುಗಳನ್ನು ಅವರಿಗೆ ಕಾಣಬರುವ ರೀತಿಯಲ್ಲಿ ವ್ಯವಸ್ಥೆ ಹೊಂದಿಸುವ ಅಧಿಕಾರವು ಅವರದಾಗಿರುತ್ತೆ.

4. ಸವಾಲ್‌ದಾರನು ಸವಾಲ್ ಮಾಡುವದಕ್ಕೆ ಮುಂಚೆಯೇ "25—0—0" ಇಪ್ಪತ್ತೈದು ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕು. ಈ ಮೊಬಲಗು ಮಂಜೂರಾದ ಸವಾಲ್‌ದಾರನ ಹೊರ್ತು ಹರಾಜು ಖೈದಾದ ಮೇಲೆ ಇತರರದು ವಾಪಸು ಮಾಡಲ್ಪಡುವದು.

5. ಮಂಜೂರಾದ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಸವಾಲ್ ಮಂಜೂರಾದ ತಾರೀಖು ಲಾಗಾಯತು ಒಂದು ವಾರದೊಳಗಾಗಿ ಸರಿಯಾದ ಸ್ಟಾಂಪು ಕಾಗದದಲ್ಲಿ ಈ ಕೆಳಗಣ ಷರತ್ತು ಪ್ರಕಾರ ನಡಿಯಲು ಮುಚ್ಚಳಿಕೆ ಬರದುಕೊಡಬೇಕು. ತಪ್ಪಿದಲ್ಲಿ ಕೂಪೇ ಯಾ ಕಂಪಾರ್ಟ್‌ಮೆಂಟನ್ನು ದುಸರಾ ಹರಾಜು ಮಾಡಿಸಲಾದೀತು. ನುಕ್ಸಾನಿಗೆ ಮೊದಲಿನ ಹರಾಜುದಾರನು ಗುರಿಯಾಗಿರಬೇಕು. ಆದರೆ ಫಾಯಿದೆ ಏನಾದರೂ ಬಂದರೆ ಅಂಥಾ ಫಾಯಿದೆಗೆ ಈತನು ಭಾಗಿಯಾಗುವದಿಲ್ಲ ಮತ್ತು ಮೊದಲನೇ ಹರಾಜಿನಲ್ಲಿ ಡಿಪಾಜಿಟ್ಟಾಗಿ ತೇವಣೀ ಇರಿಸಿದ ಮೊಬಲಗು ಜುಲ್ಮಾನೆ ತರೀಕು ಸರ್ಕಾರಕ್ಕೆ ದಂಡವಾಗಿ ಸೇರಿಸಲ್ಪಡುತ್ತೆ.

1. ಸೌದೆ ಮತ್ತು ಚೌಬೀನೆ ಕತರಾವಣಿ ಮತ್ತು ಸಾಗಿಸತಕ್ಕದ್ದನ್ನು ಸನ್ 1904ನೇ ಜೂನ್ ಮಾಹೇ ಆಖೈರಿನೊಳಗಾಗಿ ಪೂರೈಸತಕ್ಕದ್ದು, ತಪ್ಪಿದಲ್ಲಿ ಈ ಮೊದಲೆ ಧಾಪತಿಯಾಗಿರತಕ್ಕ ಮೊಬಲಗು ದಂಡವಾಗಿ ಸರ್ಕಾರಕ್ಕೆ ಸೇರಿಸಲ್ಪಡುತ್ತೆ.

2. ಫಾರೆಸ್ಟ್ ಇಲಾಖಾ ಮಾರ್ಫತ್ತು ಗುರ್ತು ಅಥವಾ ನಿಶಾನೆ ಮಾಡಿರತಕ್ಕ ಮರಗಳೂ, ಮತ್ತು ಒಂಭತ್ತು ಅಂಗುಲ ಸುತ್ತಳತೆ ವೊಳಗಿರುವ ಸೊಸಗಳನ್ನು ಅಥವಾ ಗಿಡಗಳನ್ನು ವಿನಾ ಇತರ ಎಲ್ಲಾ ಮರ, ಗಿಡಗಳನ್ನು ಭೂಮಿ ಮಟ್ಟಕ್ಕೆ ಸರಿಯಾಗಿ ಒಂದು ಕೊನೆಯಿಂದ ಇನ್ನೊಂದು ಕೊನೆಯ ವರಿವಿಗೆ ಸದರೀ ಕಡಿಯುತಕ್ಕ ಕೂಪು ಪೂರೈಸುವ ವರಿವಿಗೂ ಕಡಿಯುತಕ್ಕದ್ದು. ಈ ಹರಾಜಿನಲ್ಲಿ ತಂಗಡಿ, ಕಕ್ಕೆ, ಫಲಗಳು ಬಿಡುವ ಅಂದರೆ, ಬ್ಯಾಲ, ವಗೈರೆ ಮತ್ತು ಪಸಾರೆ ಬಾಬುಗಳು ಅಂದರೆ ಹುಣಸೇ, ಆಳಲೆ, ವಗೈರೆಯೂ, ಹುಲ್ಲು ಸಹಾ ಸೇರಿರುವದಿಲ್ಲಾ. ಷರತ್ತುಗಳಿಗೆ ವೆತಿರಿಕ್ತವಾಗಿ ಮನಸೋಯಿಚ್ಛೆಯಾಗಿ ಮರಗಳನ್ನು, ಗಿಡಗಳನ್ನು ಕಡಿಯುವದು ಮತ್ತು ಇತರ ಯಾವ ತರವಾದ ಖರಾಬ್ ಕೆಲಸ ಅಂದರೆ, ನೆಲಮಟ್ಟದ ಮೇಲೆ ಮೂರು ಅಂಗುಲ ಉದ್ದಕ್ಕಿಂತ ಕಡದ ಮೋಟುಗಳು ಇರುವದು ವಗೈರೇ ಕಂಡುಬಂದಲ್ಲಿ ಅಂಥಾವೆಲ್ಲಾ ಖರಾಬ್ ಕೆಲಸ ದುರಸ್ತು ಪೂರೈಸುವ ವರಿವಿಗೂ ಕೂಪು ಯಾ ಕೂಪುಗಳಲ್ಲಿ ಸೌದೆ ಯಾ ಚೌಬೀನೆ ಕತ್ರಾಯಿಸಿ ಸಾಗಿಸುವದನ್ನು ನಿಲ್ಲಿಸಲ್ಪಡುತ್ತೆ.

3. ಕೂಪು ಯಾ ಕೂಪುಗಳಲ್ಲಿ ಬಾಬು ರೂಢಿಸಿ ರಪ್ತು ಮಾಡಿಕೊಳ್ಳಲು ಸ್ಥಳದಲ್ಲಿ ಫಾರೆಸ್ಟ್ ಇಲಾಖಾದಿಂದ ಮೊಕರೂರ್ ಮಾಡಲ್ಪಟ್ಟ ನೌಕರರಿಂದ ರಹದಾರಿಗಳು ಕೊಡಲ್ಪಡುತ್ತೆ. ಈ ರಹದಾರಿಗಳು ರಪ್ತಾಗುತ್ತಿರುವ ಮಾಲು ಸಹಿತ ಹಾಜರು ಇರತಕ್ಕದ್ದಲ್ಲದೆ ಬಿಡಿ, ಕ್ಲೋಸುಪ್ಯಾಟಿ, ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಂದ ನೇಮಕ ಮಾಡಲ್ಪಟ್ಟ ಯಾವ ಸ್ಥಳ, ಸ್ಟೇಷನ್‌ಗಳ ಬಳಿ ಆದರೂ ಅಜಮಾಯಿಷೀ ಬಗ್ಗೆ ಹಾಜರ್ಮಾಡಬೇಕು.

4. ಕೂಪು ಯಾ ಕೂಪುಗಳಿಂದ ಸೌದೆ ಮತ್ತು ಚೌಬೀನೆಯನ್ನು ಯಾವ ದಿವಸವೂ ಸೂರ್ಯೋದಯಕ್ಕೆ ಮುಂಚೆಯೂ, ಅಥವಾ ಸೂರ್ಯಾಸ್ತಮಯವಾದಮೇಲೆಯೂ ಸಾಗಿಸಕೂಡದು.

5. ಇಜಾರೆದಾರನಿಗೆ ಕತ್ರಾವಣಿ ಕೆಲಸಕ್ಕೆ ಕೊಟ್ಟು ಇರುವ ಕೂಪು ಯಾ ಕೂಪುಗಳೊಳಗೆಯಾಗಲೀ ಅಥವಾ ಭಂಡಿ ಮಾರ್ಗದಲ್ಲಿಯಾಗಲೀ ಬಂಕೀ ಬಿದ್ದು ಅಂಥಾ ಕೃತ್ಯ ಕಂಟ್ರಾಕ್ಟುದಾರನ ಅಥವಾ ಆತನಕಡೆ ಜನರ ಅಜಾಗ್ರತೆಯಿಂದ ಉಂಟಾದದ್ದೆಂದು ಫಾರೆಸ್ಟ್ ಇಲಾಖಾ ಆಫೀಸರುಗಳಿಗೆ ಕಾಣಬಂದರೆ ಅದಕ್ಕೆ ಕಂಟ್ರಾಕ್ಟುದಾರನೇ ಜವಾಬ್‌ದಾರನಾಗಬೇಕು.

6. ಕಂಟ್ರಾಕ್ಟುದಾರನಿಗೂ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರವರಿಗೂ ಈ ಸಂದರ್ಭಗಳಲ್ಲಿ ಉಂಟಾಗಬಹುದಾದ ನಿಬಂಧನೆಗಳಿಗೂ ಅಂಥಾ ನಿಬಂಧನೆಗಳಿಗೆ ವಿರೋಧವಾಗಿ ನಡೆದ ಕೃತ್ಯಗಳ ವಿಷಯವಾಗಿಯೂ ಮತ್ತು ಯಾವತರವಾದ ಎಲ್ಲಾ ಹೆಚ್ಚು ಕುಂದುಗಳ ಮೇಲೆ ಫಾರೆಸ್ಟ್ ಕನ್‌ಸರವೇಟರ್ ಸಾಹೇಬರವರ ಆರ್ಡರ್ ಆಖೈರ್ ಆಗಿರುತ್ತೆ.

7. ಕಂಟ್ರಾಕ್ಟುದಾರನು ಬರದುಕೊಡತಕ್ಕ ಮುಚ್ಚಳಿಕೆಯು ಹರಾಜು ಕಾಲದಲ್ಲಿ ತಿಳುವಳಿಕೆ ಬಗ್ಗೆ ಓದಲ್ಪಡುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 7ನೆ ಡಿಸೆಂಬರ್ 1903ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ವಿಶಿಷ್ಟ ಸ್ಟೇಟ್ ಫಾರೆಸ್ಟ್, ಪ್ಲಾಂಟೇಷನ್ ಮತ್ತು ಇತರ ಸರ್ಕಾರಿ ಜಮೀನುಗಳಲ್ಲಿ ಇರುವ ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನು 1906ನೆ ಇಸವಿ ಜೂನ್ 30ರ ವರಿಗೆ ಸುಮಾರು 2½ ವರುಷ ಕಾಲದಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1904ನೆ ಇಸವಿ ಜನವರಿ 6ನೆ ತಾರೀಖಿನ ವರಿಗೆ ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತುಗಳು ತೆಗದುಕೊಳ್ಳಲ್ಪಡುವದು:—

ನೋಟು:—ಇನಾಂ ಜೋಡಿ ಕಾಯಂಗುತ್ತಾ ಸರ್ವಮಾನ್ಯ ಕಂದಾಯ ಮತ್ತು ಹಿಡುವಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಸೇರಿರುವದಿಲ್ಲ.

(2) ದರಖಾಸ್ತುಗಳಲ್ಲಿ ಕೋಲಾರ್ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿರುವ ತಂಗಡಿ ಮತ್ತು ಕಕ್ಕೆ ಚಕ್ಕೆಗೆ 2½ ವರುಷಕ್ಕೆ ಒಂದೇ ಮೊತ್ತವಾಗಿ ಮೊಬಲಗು ನಮೂದಿಸಬೇಕು. ಅಂದರೆ ಟೆಂಡರ್ ಮಾಡಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ (200) ರೂಪಾಯಿನ ಕರ್ರೆನ್ಸಿ ನೋಟ್ ಠೇವಣಿ ಬಗ್ಯೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ ಮತ್ತು ಇನ್ಷೂರ್ ಮಾಡಿ ಲಿಫಾಫಿ ಮೇಲೆ "ತಂಗಡಿ ಮತ್ತು ಕಕ್ಕೆ ಚಕ್ಕೆಯ ದರಖಾಸ್ತು" ಎಂದು ಬರದು ಕೋಲಾರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರ ವಿಳಾಸಕ್ಕೆ ರವಾನಿಸಬೇಕು.

(4) ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್ರವರ ಆಫೀಸಿನಲ್ಲಿ 1904ನೆ ಇಸವಿ ಜನವರಿ 11ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರು ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ನಿಯಮಿಸಲ್ಪಡುವ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಸಹಾ ಕೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ ದರಖಾಸ್ತುಗಳನ್ನು ಒಡೆಯುವರು. ದರಖಾಸ್ತುದಾರುಗಳೆಲ್ಲಾ ಹಾಜರಿರಬೇಕೆಂದು ಇದರಿಂದ ತಿಳಿಕಿರುತ್ತೆ.

(5) ಮೇಲ್ಕಂಡ ಆಫೀಸರುಗಳು ಯಾವ ದರಖಾಸ್ತುಗಳನ್ನಾಗಲಿ ಅಂಗೀಕರಿಸುವದಕ್ಕೆ ಮತ್ತು ಯಾವ ಕಾರಣವು ನಮೂದಿಸದೇನೆ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿರುತ್ತಾರೆ.

(6) ಮಂಜೂರ್ಮಾಡಲ್ಪಟ್ಟ ದರಖಾಸ್ತು ಬಾಬತು ಠೇವಣಿ ಮೊಬಲಗು ಉಳಿಸಿಕೊಳ್ಳಲ್ಪಡುತ್ತೆ. ಬಾಕಿ ದರಖಾಸ್ತುಗಳ ಬಾಬತು ಮೊಬಲಗು ಕೂಡ್ಲೆ ವಾಪಸು ಮಾಡಲ್ಪಡುತ್ತೆ.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ಮೊಬಲಗಿನ ಒಟ್ಟು ಮೊತ್ತದ ಪೈಕಿ ಆರ್ರಲ್ಲಿ ಒಂದು ಭಾಗವನ್ನು ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಕೋಲಾರ ಡಿಸ್ಟ್ರಿಕ್ಟ್ ಖಜಾನೆಗೆ ಪಾರಖಾವಣೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಯೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕು ಇರುವದಿಲ್ಲಾ. ಆದರೆ ಇದರಿಂದ ವುಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟಪಟ್ಟಲ್ಲಿ ಅದಕ್ಕಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ ಮಾಡಲು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಸ್ವತಂತ್ರರಾಗಿರುತ್ತಾರೆ.

(10) ಇಜಾರೆದಾರನು ಒಟ್ಟು ಇಜಾರೆ ಮೊಬಲಗಿನಲ್ಲಿ 7ನೆ ಪ್ಯಾರಾದಲ್ಲಿ ಕಂಡಂತೆ ಸರ್ಕಾರಕ್ಕೆ ಪಾವತಿ ಮಾಡಿದ್ದು ಜಾತಾ ಬಾಕಿ ಉಳಿಯುವ ಮೊಬಲಗನ್ನು ಐದು ಕಿಸ್ತುಗಳಲ್ಲಿ ಈ ಕೆಳಗೆ ನಮೂದಿಸಿರುವ ತಾರೀಖು ಒಳಗಾಗಿ ಖಜಾನೆಗೆ ಪಾವತಿ ಮಾಡಬೇಕು.

ಒಂದನೇ ಕಿಸ್ತು	....	1904ನೆ ಇಸವಿ	ಏಪ್ರೆಲ್ ಒಂದನೇ ತಾರೀಖಿನೊಳಗಾಗಿ.	
ಎರಡನೇ ಕಿಸ್ತು	...	ಡಿಟೋ	ಜುಲೈ	ಡಿಟೋ
ಮೂರನೇ ಕಿಸ್ತು	....	1905ನೆ ಇಸವಿ	ಜನವರಿ	ಡಿಟೋ
ನಾಲ್ಕನೇ ಕಿಸ್ತು	...	ಡಿಟೋ	ಜುಲೈ	ಡಿಟೋ
ಐದನೇ ಕಿಸ್ತು	....	1906ನೆ ಇಸವಿ	ಜನವರಿ	ಡಿಟೋ

ಮೇಲೆ ನಮೂದಿಸಿರುವ ಮೇರಿಗೆ ಯಾವ ಒಂದು ಕಿಸ್ತು ಆದರಾ ಕೊಡಲು ಇಜಾರೆದಾರನು ತಪ್ಪಿದರೆ ಅವನ ಇಜಾರೆ ಹಕ್ಕನ್ನು ಹಿಂದೆ ಕೊಟ್ಟಿರುವ ಮೊಬಲಗು ಸಹಾ ಕಳದುಕೊಳ್ಳುವದಲ್ಲದೆ ಇನ್ನು ಬಾಕಿ ಇರುವ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಕೊಡಲು ಗುರಿಯಾಗುತ್ತಾನೆ. ಸದರಿ ಮೇರಿಗೆ ಬಾಕಿ ಆಗತಕ್ಕ ಮೊಬಲಗು ರೆವಿನ್ಯೂ ಬಾಕಿಯಂತೆ ಸದರಿಯವನಿಂದ ವಸೂಲ್ಮಾಡಲ್ಪಡುವದು.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಷಿಕಿಮಿ ಕಂಟ್ರಾಕ್ಟರೇ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಚಕ್ಕೆ ಜಮಾವಣೆ ನಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಷಿಕ್ಮಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಃಖ್ತೆಯನ್ನು ಕೊಡಬೇಕು.

(III) ತೊಗಟೆ ತೆಗದನಂತರಾ ವುಳಿಯುವ ಆ ಸಂಬಂಧವಾದ ವಿಶಿಷ್ಟ ಸಾಮೆಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(IV) ಇಜಾರೇ ಮೇರಿಗೆ ರಫ್ತು ಮಾಡಲ್ಪಡುವ ಚಕ್ಕೆಯ ಪ್ರಮಾಣ ವಗೈರೆ ತಪಶೀಲು ಕಾಣುವ ಲೆಖ್ಖಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಖವನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆಗೆ ಬಂದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(V) ಚಕ್ಕೆ ಸಾಗಿಸುವದರಲ್ಲಿ ಪ್ರತಿ ಗಾಡಿ ಚಕ್ಕೆ ಸಂಗಡವೂ ಒಂದು ಪ್ಯಾಸ್ ಇರತಕ್ಕದ್ದು. ಸದರಿ ಪ್ಯಾಸ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಸೈನ್ ಮೊಹರ್ ನಿಶಿ ಪಡದ ಅಚ್ಚು ಫಾರಂ ಬುಕ್ಕಿನಿಂದ ಕಂಟ್ರಾಕ್ಟರು ಯಾ ಅವರ ರಿಜಿಸ್ಟರ್ಡ್ ಏಜಂಟ್ ಕೊಡತಕ್ಕದ್ದಾಗಿರುತ್ತೆ. ಸದರಿ ಪ್ರತಿ ಒಂದು ಪ್ಯಾಸ್ ಬುಕ್ಕು ಪೂರೈಸಿದ ಕೂಡ್ಲೆ ಕೌಂಟರ್ ಫಾಯಿಲ್‌ಗಳನ್ನು ಕಂಟ್ರಾಕ್ಟರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿಗೆ ಕಳುಹಿಸತಕ್ಕದ್ದು.

(VI) ಕಂಟ್ರಾಕ್ಟರ್ ಯಾ ಆತನ ಜನಗಳ ಅಜಾಗರೂಕತೆಯಿಂದ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆ ಉಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(VII) 1906ನೆ ಜುಲೈ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ಮಾಯಿದೆಯಲ್ಲಿ ಕಡದು ಜಮಾವಣೀ ಮಾಡಿ ದಾಸ್ತಾನ್ ಮಾಡಿರುವ ಎಲ್ಲಾ ಚಕ್ಕೆಯನ್ನು ಕೋಲಾರ್ ಡಿಸ್ಟ್ರಿಕ್ಟು ಸರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(VIII) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡುತ್ತೆ. ಮತ್ತು ಅದುವರೆಗೂ ಜಮಾಯಿಸಿರುವ ವಿಶಿಷ್ಟ ಚಕ್ಕೆಯನ್ನೂ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುತ್ತೆ. ಅಲ್ಲದೆ ಡೆಪ್ಯುಟಿ ಕಮಿಷನರ್ ಸಾಹೇಬರವರು (1,000) ರೂಪಾಯಿಗೆ ಜಾಸ್ತಿ ಇಲ್ಲದಂತೆ ಜುರ್ಮಾನೆಯನ್ನು ಸಹಾ ವಿಧಿಸಬಹುದು.

ಎಸ್. ಎ. ಬಾಪುರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟು.

ತಾರೀಖು 17ನೆ ಡಿಸೆಂಬರು 1903.

1900ನೆ ಇಸವಿ XIನೆ ನಂಬರ' ಮೈಸೂರು ಸೀನೆಯು ಫಾರೆಸ್ಟು ರೆಗ್ಯುಲೇಷನ್ 18ನೆ ಸೆಕ್‌ಷನಿನ ವಿಧಿಗಳನುಸರಿಸಿ ಈ ಇಸ್ತಿಹಾರಿಗೆ ಜಂಟಿಸಿ ಇರುವ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಚಕ್ಕುಬಂದಿಯುಳ್ಳ ಪ್ರದೇಶವು 1904ನೆ ಜನವರಿ ಗುರ್ರೆ ಲಾಗಾಯತು ಈ ಇಸ್ತಿಹಾರಿನ ಅಡೀಲಿ ವಿವರಿಸಿ ಇರುವ ಹಕ್ಕುಗಳ ಚಲಾವಣೆಗೆ ಬಳಪಟ್ಟು ಸ್ಟೇಟ್ ಫಾರೆಸ್ಟು ಆಗಿರುತ್ತದೆ.

ಷೆಡ್ಯೂಲ್.

ಜಿಲ್ಲೆ.	ತಾಲ್ಲೂಕು.	ಸುಮಾರು ವಿಸ್ತೀರ್ಣ.	ಫಾರೆಸ್ಟಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಹೊಳಲ್ಕೆರೆ.	9½ ಚದರ ಮೈಲಿಗಳು.	ಸಂಜೀವರಾಯನ ಕೋಟೆ.	ಉತ್ತರಕ್ಕೆ.—ಜಾಲಿಪೆಂಟೆಯ ಸರ್ವೆ ನಂ. 7ರ ವಾಯುವ್ಯ ಮೂಲೆಯಿಂದ ಹೊರಟು ಲೈನು ಬಳ್ಳಾರಿ ಡಿಸ್ಟ್ರಿಕ್ಟಿನ ಪ್ರೊವಿನ್ಷಿಯಲ್ ಎಲ್ಲೆಯ ಉದ್ದಕ್ಕೂ ಚಿನ್ನವಾಲದ ಗುಡ್ಡದ ಸರ್ವೆ ನಂ. 2ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಆಗ್ನೇಯ ದಿಕ್ಕಾಗಿಯು ಮತ್ತು ಪೂರ್ವ ದಿಕ್ಕಾಗಿಯು 1 ಮೈಲಿ 1 ಫರ್ಲಾಂಗಿನ ದೂರ ಸರ್ವೆ ನಂ. 13ರ ಮಧ್ಯೆ ಸರ್ವೆ ನಂ. 15ರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ. (ಸೇರಿರುತ್ತೆ). ತರುವಾಯ ಚಿನ್ನವಾಲದ ಗುಡ್ಡದ ಸರ್ವೆ ನಂ. 14ರ (ಸೇರಿರುತ್ತೆ). ವಾಯುವ್ಯ ಮತ್ತು ಈಶಾನ್ಯ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಬೂದೇನಹಳ್ಳಿ ಇನಾಂ ಗ್ರಾಮದ ಪಶ್ಚಿಮ ಎಲ್ಲೆ ಅದರ ನೈರುತ್ಯ ಮೂಲೆ ವರಿವಿಗೆ. ತರುವಾಯ ದಕ್ಷಿಣ ದಿಕ್ಕಾಗಿ 4 ಫರ್ಲಾಂಗುಗಳ ದೂರ ಹೊಸಹಳ್ಳಿಯ ಸರ್ವೆ ನಂ. 32ರ ಮಧ್ಯೆ ಸರ್ವೆ ನಂ. 25ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 25, 26 ವ 27 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 27ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 27, 26, 25 ವ 24 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಆಗ್ನೇಯ ದಿಕ್ಕಾಗಿ 5 ಫರ್ಲಾಂಗುಗಳ ದೂರ ಹೊಸಹಳ್ಳಿಯ ಸರ್ವೆ ನಂ. 19ರ ಮಧ್ಯೆ ಮತ್ತು 1 ಮೈಲಿ 2 ಫರ್ಲಾಂಗುಗಳ ದೂರ ವಡೇರಹಳ್ಳಿಯ ಸರ್ವೆ ನಂ. 22 ವ 21 ಇವುಗಳ ಮಧ್ಯೆ ಸರ್ವೆ ನಂ. 4ರ ಉತ್ತರ ಪಾರ್ಶ್ವದ ಮಧ್ಯಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಸರ್ವೆ ನಂ. 4, 3, 23, 26 ವ 25 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಬಳ್ಳಾರಿ ಡಿಸ್ಟ್ರಿಕ್ಟಿನ ಉದ್ದಕ್ಕೂ ಪ್ರೊವಿನ್ಷಿಯಲ್ ಎಲ್ಲೆ. ಪಶ್ಚಿಮಕ್ಕೆ.—ಪ್ರೊವಿನ್ಷಿಯಲ್ ಎಲ್ಲೆ ಬಳ್ಳಾರಿ ಡಿಸ್ಟ್ರಿಕ್ಟಿನ ಉದ್ದಕ್ಕೂ.

ಷರಾ.—ಹಾದಿಯ ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

(1) ವರುಷವೆಲ್ಲಾ ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಬೂದೇನಹಳ್ಳಿಯಿಂದ ಬೊಮ್ಮಗಟ್ಟಕ್ಕೆ ಹೋಗುವ 8 ಅಡಿ ಅಗಲವುಳ್ಳ ಮತ್ತು 2 ಮೈಲಿ 4 ಫರ್ಲಾಂಗು ದೂರವುಳ್ಳ ಕಾಲಹಾದಿ. ಈ ಹಾದಿಯು ಫಾರೆಸ್ಟನ್ನು ಚಿನ್ನವಾಲದ ಗುಡ್ಡದ ಸರ್ವೆ ನಂ. 2ರ ಪಶ್ಚಿಮ ಪಾರ್ಶ್ವದ ಮಧ್ಯ ಪ್ರದೇಶದಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 13 ಮತ್ತು ಜಾಲಿಪೆಂಟೆಯ ಸರ್ವೆ ನಂ. 21, 22, 20, 14, 1, 3, 4, 5, 6, 10 ವ 9 ಇವುಗಳ ಮಧ್ಯೆ ಹೋಗಿ ಆಖೈರ ನಂಬರಿನ ಪಶ್ಚಿಮ ಪಾರ್ಶ್ವದ ಮಧ್ಯ ಪ್ರದೇಶದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ವರುಷವೆಲ್ಲಾ ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಹೊಸಹಳ್ಳಿಯಿಂದ ಬೊಮ್ಮಗಟ್ಟಕ್ಕೆ ಹೋಗುವ 8 ಅಡಿ ಅಗಲವುಳ್ಳ ಮತ್ತು 2 ಮೈಲಿ 2 ಫರ್ಲಾಂಗು ದೂರವುಳ್ಳ ಕಾಲಹಾದಿ. ಈ ಹಾದಿಯು ಫಾರೆಸ್ಟನ್ನು ಹೊಸಹಳ್ಳಿಯ ಸರ್ವೆ ನಂ. 25ರ ಈಶಾನ್ಯ ಮೂಲೆಯಿಂದ ಸುಮಾರು 1 ಫರ್ಲಾಂಗಿನಲ್ಲಿ ಪ್ರವೇಶಿಸಿ ನೈರುತ್ಯ ದಿಕ್ಕಾಗಿ ಅದೇ ಗ್ರಾಮದ ಸರ್ವೆ ನಂ. 32, 29, 30 ವ 31 ಮತ್ತು ಸಂಜೀವರಾಯನ ಕೋಟೆಯ ಸರ್ವೆ ನಂ. 1, 3, 9, 10 ವ 13 ಇವುಗಳ ಮಧ್ಯೆ ಹೋಗಿ ಆಖೈರ ಗ್ರಾಮದ ಸರ್ವೆ ನಂ. 12ರ ವಾಯುವ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಹೆಚ್. ರಾಮಾನುಜೈಯ್ಯಂಗಾರ್,
ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 25ನೆ ನವಂಬರ 1903ನೆ ಇಸವಿ.

ಕೋಲಾರ ತಾಲ್ಲೂಕು ಹುತ್ತೂರು ಹೋಬಳಿಗೆ ಸೇರಿದ ಮಾರ್ಜಿನ್ನಲ್ಲಿ ನಮೂದಾಗಿ ಇರುವ ಇನಾಂ ಗ್ರಾಮಗಳು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರ್ರ ಕಚೇರಿಯಲ್ಲಿ 1904ನೆ ಇಸವಿ ಜನವರಿ ಮಾಹೆ 5ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(1) ಜೋಡಿ ವಿಟ್ಟಪ್ಪಲ್ಲಿ ಗ್ರಾಮ.
(2) ಜೋಡಿ ವಡಗೂರು ಗ್ರಾಮ.

(ಹೆಚ್ಚು ತಪಸೀಲ್ ಬಗ್ಗೆ 1903ನೆ ಡಿಸೆಂಬರ್ ತಿಂಗಳ 10ನೆ ಮುರ್ಕಾಂ 48ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 581—580ನೆ ನಂಬರು ಪೇಜು ನೋಡತಕ್ಕದ್ದು.

ಎಫ್. ಸಿ. ಕಾರಿ, ಡೆಪ್ಯುಟಿ ಕಮೀಷನರ.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 4ನೆ ಡಿಸೆಂಬರ್ 1903.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಜೋಡಿ ಭಂಡಾರಹಳ್ಳಿ ಗ್ರಾಮವು ಕಂದಾಯ ಬಾಕಿಗಾಗಿ 1904ನೆ ಜನವರಿ (20) ಇಪ್ಪತ್ತನೆ ತಾರೀಖಿನಲ್ಲಿ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಈ ವಿಷಯದಲ್ಲಿ ತಪಶೀಲು ಇಸ್ತಿಹಾರ 1903ನೆ ಡಿಸೆಂಬರ್ ತಿಂಗಳ 10ನೆ ಮುರ್ಕಾಂ 48ನೆ ನಂಬರ್ ಮೈಸೂರು ಗೆಜಿಟ್ ಎರಡನೆ ಭಾಗದ 582ನೆ ಪೇಜಿನಲ್ಲಿ ಛಾಯಿಷಾಗಿಧೆ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 4ನೆ ಡಿಸೆಂಬರ್ 1903.

1. ಕಂದಾಯದ ಬಾಕೀದಾರರಾದ ಭಂಡಾರಹಳ್ಳಿ ಗ್ರಾಮದ ವಿಶ್ವೇಶ್ವರಾರಾಧ್ಯರು ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಕಸಬಾ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ 1904ನೆ ಜನವರಿ 20ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರೆಗೆ 183—11—2 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಆದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟ ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್

ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ನ್ಯೂನತೆಗಳಿಗೆ ಗವರ್ನ್ಮೆಂಟಿನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಅಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಶಿವಮೊಗ್ಗ	ಬೆಂಕಿಪುರ	ಜೋಡಿ ಭಂಡಾರಹಳ್ಳಿ ಗ್ರಾಮ	ವಿಶ್ವೇಶ್ವರ ಆರಾಧ್ಯ ವಗೈರೇರು	...	ರೂ. ಆ. ಪೈ. ..	ಪೂರಾಗ್ರಾಮ ಅಂದಾಜಾ ಕಿಂಮತು 5,000 ರೂ.	ಪರಂಪೋಕು	278	28	17	6	8	188	11	2	ಚಾಲ್ತಿವರಿಗಿನ ಬಡ್ಡಿ ಫೀಸ್ ಸಹ ಬರಬೇಕು
							ಖುಷ್ಕಿ	360	33	166	14	10				
							ತರೀ	281	27	760	7	8				
							ಬಾಗಾಯತು	3	32	4	0	0				
								925	0	948	13	2				
							ಜೋಡಿ	...		94	0	0				

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸಿ. ನಾರಾಯಣರಾವ್, ಫಾರ್ ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟು.

ಸ್ 1903ನೆ ಇಸವಿ ಡಿಸೆಂಬರ ತಾರೀಖು 2.

ಮೆ|| ಜೆ. ಜೆ. ರೆಬೆಲ್ಲೊ ಯವರಿಂದ ಸ್ 1901—1902 ಮತ್ತು 1902—1903 ಈ ಎರಡು ಸಾಲುಗಳ ಕಂದಾಯ ಬಾಕಿ ಬಗ್ಗೆ ಮೂಡಿಗೆರೆ ತಾಲ್ಲೂಕು ಕಳಸದ ಹೋಬಳಿ ಮರಸಣಿಗೆ ಗ್ರಾಮದಲ್ಲಿರುವ ವಟ್ಟು 382 ಎಕರೆ, 37 ಗುಂಟೆ, ವಿಸ್ತೀರ್ಣವುಳ್ಳ ಸರ್ವೆ ನಂಬರುಗಳು 120, 130, 131, 213, 214 ಮತ್ತು 215ನೆ ಜಮೀನುಗಳು ಎರಡನೆ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರ ರೂಬರೂಬ್ ಸ್ 1904ನೆ ಇಸವಿ ಜನವರಿ ತಾರೀಖು 19ನೆ ಮಂಗಳವಾರ ದಿವಸ ದಿವಿ 11 ಘಂಟೆಗೆ ಮೂಡಿಗೆರೆ ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ಜಾಸ್ತಿ ತಪಶೀಲು ಹರಾಜು ಇಸ್ತಿಹಾರನಲ್ಲಿ ನಮೂದಿಸಿರುವದು ನೋಡಲಾಗಿ ತಿಳಿಯಲಾಗುತ್ತೆ.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಡಿಸೆಂಬರ್ 1903, ಚಿಕ್ಕಮಗಳೂರು.

1. ಕಂದಾಯದ ಬಾಕೀದಾರರಾದ ಹಳೆಕೆರೆ ಗ್ರಾಮದ ಮೆ|| ಎ. ಜೆ. ಲೊಬೊಯವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಹಿಡುವಳಿ ಬಾಧ್ಯತೆ ಕಳದುಕ್ಕೊಂಡ ಇದರಡೀ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕು ಕಛೇರಿಯಲ್ಲಿ ಸ್ 1904ನೆ ಇಸವಿ ಜನವರಿ ಶುಕ್ರವಾರ 22ನೆ ತಾರೀಖಿನಲ್ಲಿ ಅಮಲ್‌ದಾರ್ರು ಯಾ ಶಿರಸ್ತೆದಾರ್ರು ರೂಬರೂಬ್ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902-03ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 64—12—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೆ ಯಾ ಏಜಂಟು ಯಾ ಮುಖತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗೆದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್‌ದಾರರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಸ್ಥಳದ ಹೆಸರು.	ಖುಷ್ಕಿ, ತರಿ ಅಥವಾ ಬಾಗಾಯ್ತು.	ವಿಸ್ತೀರ್ಣ.	ಕಂದಾಯ.	ಸರ್ಕಾರಕ್ಕೆ ಬರಬೇಕಾದ ಬಾಕಿ ಹಣದ ಮೊಬಲಗು.
								ಎ. ಗು.	ರೂ. ಆ. ಪೈ.	ರೂ. ಆ. ಪೈ.
ಮೂಡಿಗೆರೆ	ಬಣಕಲ್ಲು	ಹೆಸಗಲ್	ಮಿ|| ಎ. ಬಿ. ಲೋಬೊ ಅವರು	...		59	ಕಾಫಿ	60 0	60 0 0	64 12 0

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಡಿವಿಜನ್ ಡಿಸ್ಟ್ರಿಕ್ಟ್ ಜಡ್ಜಿರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಅರ್ಜೀ ನಂಬರ 202.

ಮೃತಪಟ್ಟ ಕುರುಬರ ಸುಬ್ಬಕ್ಕ ಪುರಫ್ ನಾಗಿ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬಾಗೇಪಲ್ಲಿ ತಾ|| ಮುದ್ದಿರಡ್ಡಿಪಲ್ಲಿಯಲ್ಲಿರುವ 1ನೆ ಗುಮ್ಮಗಾಳಿ ಸುಬ್ಬ, 2ನೆ ವೇಮನ ಮೃತಪಟ್ಟ ಸದರೀ ಕುರುಬರ ಸುಬ್ಬಕ್ಕ ಪುರಫ್ ನಾಗಿ ಎಂಬವರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬಾಗೇಪಲ್ಲಿ ತಾ|| ಹೊಸ ಹುದ್ಯದಲ್ಲಿ ವಾಸಸ್ಥರಾಗಿ ಮೃತಪಟ್ಟ ಕುರುಬರ ಸುಬ್ಬಕ್ಕ ಪುರಫ್ ನಾಗಿ ಎಂಬುವರ ಜೆಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಗುಮ್ಮಗಾಳಿ ಸುಬ್ಬ, 2ನೆ ವೇಮುಗ ಎಂಬುವರ ಅರ್ಜಿಯನ್ನು ಸರ್ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 1ರಲ್ಲು ಕೇಳಿ ಸರಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕುರುಬರ ಸುಬ್ಬಕ್ಕ ಪುರಫ್ ನಾಗಿ ಎಂಬುವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ಡಿಸೆಂಬರು ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸರ್ 1903—1904ನೆ ಇಸವಿ ಅರ್ಜೀ ನಂಬರ 214.

ಮೃತಪಟ್ಟ ಆಲಗಿರಿ ತಿಮ್ಮದಾಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಿಕ್ಕಪುಡ್ಡೈಯ್ಯನ ಪ್ಯಾಟೇಲಿರುವ ಹನುಮಂತಪ್ಪ ಮೂಗ್ಗ, ಗಾರ್ಡಿಯನ್ ಹೆಂಡತಿ ಸಂಕಮ್ಮ, ಮೃತಪಟ್ಟ ಸದರೀ ಆಲಗಿರಿ ತಿಮ್ಮದಾಸಪ್ಪನವರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಆಲಗಿರಿ ತಿಮ್ಮದಾಸಪ್ಪನವರ ಜೆಂದಗಿ ಬಗ್ಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟು ಮೇರಿಗೆ ಸರ್ಟಿಫಿಕೇಟ ಬಗ್ಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹನುಮಂತಪ್ಪ ಮೂಗ್ಗ, ಗಾರ್ಡಿಯನ್ ಹೆಂಡತಿ ಸಂಕಮ್ಮನವರ ಅರ್ಜಿಯನ್ನು ಸರ್ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಆಲಗಿರಿ ತಿಮ್ಮದಾಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ಡಿಸೆಂಬರ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1902—1903ನೆ ಇಸವಿ ಮಿಸ್ ಅರ್ಜೀ ನಂಬರ್ 736.

ಅರ್ಜೀದಾರರು ಬೆಂಗಳೂರು ಲಾಲಬಂದು ಪೇಟೇಲ್ಲಿ ಕೋತಸಾಬಿ ಮರ್ಖಾ ಬಳಿ ಇರುವ ಖಾಸಿಂಬಿ, ಮೈನರಾದ ಬೆಂಗಳೂರು ಲಾಲಬಂದು ಪ್ಯಾಟೆಯಲ್ಲಿರುವ ಅಬ್ದುಲ್‌ರಹಿಮಾನ್ ಮತ್ತು ಅಬ್ದುಲ್ ಬಸೀದು ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಅಬ್ದುಲ್‌ರಹಿಮಾನ್ ಅಬ್ದುಲ್‌ಬಸೀದುಯವರಿಗೆ ಚಿಕ್ಕ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಬೆಂಗಳೂರಲ್ಲಿ ಇರುವ ಗಡವ್‌ಖಾನ್ ಎಂಬವರಿಗೆ ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ ಕೊಡಬೇಕೆಂದು ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಗೆ ಸರ್ 1903ನೆ ಇಸವಿ ಡಿಸೆಂಬರ್ ತಾರೀಖು 18ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ ಕೊಡಲಾಗಿದೆ.

ಸರ್ 1903ನೆ ಇಸವಿ ಡಿಸೆಂಬರು ತಿಂಗಳು 9ನೆ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಪಿ. ರಂಗಾಚಾರ್,
ಸಬ್ ಜಡ್ಜ.

ಅಮೃತಮಹಲ್ ಇಲಾಖಾ.

ನೋಟಿಫಿಕೇಷನ್.

ತಾರೀಖು 10—11ನೆ ಡಿಸೆಂಬರ 1903, ಮೊಕ್ಕಾಂ ಮೈಸೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಮೈಸೂರು ಸೀಮೆಯ ಅಮೃತಮಹಲ್ ಇಲಾಖೆಯ ಕೆಲವು ಗಂಡು ದನಗಳನ್ನು ಮತ್ತು ಕೆಲವು ಹೆಣ್ಣು ದನಗಳನ್ನು ಹಾಸನದ ತಾಲ್ಲೂಕು ನೋವುನಹಳ್ಳಿ ಕಾವಲಿನಲ್ಲಿ ಹರಾಜ್ಮಾಡಿಸುವದೆಂದು ಹೋದವಾರದ ಗೆಜೆಟಿನಲ್ಲಿ ಪ್ರಯಿಷ್ಮಾಡಿರುವದು ಸರಿಯಷ್ಟೆ—ಇದರಂತೆ ಸದರಿ ಹರಾಜನ್ನು ಮಾಡಿಸಲು ಅನುಕೂಲವಿಲ್ಲವಾದ್ದರಿಂದ ಈಗ ಅದನ್ನು ಮನ್ನಾಮಾಡಿರುತ್ತೆ ತಿಳಿಯುವದು.

ಹೆಚ್. ನಂಜುಂಡರಾಜೆ ಅರಸ್,
ಸೂಪರಿಂಟೆಂಡೆಂಟ್.

ಗೌರ್ನಮೆಂಟ ಸೆಂಟ್ರಲ ಬುಕ ಡಿಪೋ—ಬೆಂಗಳೂರ.

ನೋಟಿಸ, ತಾರೀಖು 8ನೆ ಡಿಸೆಂಬರ 1903.

ಈ ಕೆಳಗಡೆ ನಮೂದಿಸಿರುವ ಪುಸ್ತಕಗಳು ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ ನಾಲ್ಕು ಆಣೆ :—

1901ನೆ ಇಸವಿ ಖಾನೆಷುಮಾರಿ ಲೆಖ್ಖದ ಬಾಬತು ಜಾತಿವಾರ ತೋರಿಸುವ ತಖ್ತೆಯುಳ್ಳ ಪುಸ್ತಕ.

ಎಸ. ಅಬ್ದುಲ ಹೈ, ಕ್ಯೂರೇಟರ.

ಮೈಸೂರ ಗೆಜೆಟ ಚಂದಾದಾರು ವಗೈರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ. ರೂ.	ಆ.	ಟಪ್ಪಾಲ ಹಾಸಲ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ. ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಛಹ ಮಾಹೇ ಯಾ ಕ್ವಾರ್ಟರಿಗೆ			ದಾಮಾಷಾಯಿ ಪ್ರಕಾರ ದರಗಳು	
			ರೂ.	ಆ.
ಚಾಲ್ತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷನ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.			0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನ ಇಸವಿ ಜೂನ 21ನೆ ಮರ್ಕಂ 24205—6—ಜಿ. 6200ನೆ ನಂಬರ ಗವರ್ನಮೆಂಟ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

			ರೂ.	ಆ.
ಸಿವಿಲ ಕೋರ್ಟನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಿಸಗಳು :—				
ಮೊದಲನೇ ದಫಾ ಫಾಯಿಷ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ		..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ		..	1	4
ಸಿವಿಲ ಪ್ರೊಸಿಡ್ಯೂರ ಕೋಡಿನ 347ನೆ ಸೆಕ್ಷನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಿಸಗಳಿಗೆ :—				
ಮೊದಲನೇ ಸಲಕ್ಕೆ ..		.. ..	5	
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ		..	2	

ಸಿವಿಲ ಪ್ರೊಸಿಡ್ಯೂರ ಕೋಡಿನ 354ನೆ ಸೆಕ್ಷನ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ ಚಾರ್ಜ ಪ್ರಕಟಿಸಲ್ಪಡುತ್ತವೆ.

			ರೂ.	ಆ.
ಡ್ಯುಪ್ಲಿಕೇಟ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಿಸಗಳಿಗೆ :—				
ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5	0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—				
ಮೊದಲನೇ ದಫಾ ಇಂಗ್ಲೀಷ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0	8
ಎರಡನೇ ದಫಾ ಡಿಟೋ	ಡಿಟೋ		0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	..	..	0	4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತಿ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜುಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ ವ ಇಸ್ತಿಹಾರನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ ಇಲ್ಲ.

ಜೆ. ಹ್ಯೂಂ ರೈಟ,
ಕಂಪೈಲರ, ಮೈಸೂರ ಗೆಜೆಟ.

ಮೈಸೂರ ಗೆಜೆಟ್.

ನಂ. 38.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರು ತಾ|| 24, ಸನ್ 1903.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜೀರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಮೈಸೂರು ಸೀಮೆಯ ವಿದ್ಯಾಭ್ಯಾಸದ ಇಲಾಖಾ.

ನೋಟಿಫಿಕೇಷನ್, ಡಿ. ನಂಬರು 22.

ತಾರೀಖು 19ನೆ ಮಾಹೆ ಡಿಸೆಂಬರ್ ಸನ್ 1903ನೆ ಇಸವಿ.

1. ಮೈಸೂರು ಸೀಮೆಯ ಎಲ್ಲಾ ಗವರ್ನ್ಮೆಂಟ್, ಮ್ಯುನಿಸಿಪಲ್ ಮತ್ತು ಏಡೆಡ್ ಪಾಠಶಾಲೆಗಳ ದೇಶ ಭಾಷೆಯ IIIನೆ ತರಗತಿಯಲ್ಲಿ ಕನ್ನಡ ಓದುವ ಪಾಠ ಪುಸ್ತಕಕ್ಕಾಗಿ ಇಲಾಖಾ ಮಂಜೂರಿನ IIIನೆ ರೀಡರನ್ನಾಗಲಿ ಅಥವಾ ಮ್ಯಾಕ್ಮಿಲನ್‌ರವರ ಕನ್ನಡ III, IVನೆ ರೀಡರ್‌ಗಳೆರಡನ್ನೂ ಆಗಲಿ 1904ನೆ ಇಸವಿ ಜನವರಿ ಗುರ್ರೇ ಲಾಗಾಯಿತು ಉಪಯೋಗಿಸಲು ನಿಯಮಿಸಿರುತ್ತೆ.

2. ಮೈಸೂರು ಸೀಮೆಯ ಎಲ್ಲಾ ಗವರ್ನ್ಮೆಂಟ್, ಮ್ಯುನಿಸಿಪಲ್ ಮತ್ತು ಏಡೆಡ್ ಪಾಠಶಾಲೆಗಳ ದೇಶ ಭಾಷೆಯ IVನೆ ತರಗತಿಯಲ್ಲಿ ದೇಶ ಭಾಷೆಯಲ್ಲಿ ಓದುವ ಪಾಠಕ್ಕಾಗಿ ಇಲಾಖಾ ಮಂಜೂರಿನ IVನೆ ರೀಡರನ್ನಾಗಲಿ ಅಥವಾ ಮ್ಯಾಕ್ಮಿಲನ್‌ರವರ ಕನ್ನಡ V, VIನೆ ರೀಡರ್‌ಗಳೆರಡನ್ನೂ ಆಗಲಿ 1904ನೆ ಇಸವಿ ಜನವರಿ ಗುರ್ರೇ ಲಾಗಾಯಿತು ಉಪಯೋಗಿಸಲು ನಿಯಮಿಸಿರುತ್ತೆ.

ಹೆಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್.

ತಾರೀಖು 22ನೆ ಡಿಸೆಂಬರ್ 1903, ಬೆಂಗಳೂರು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—1901ನೆ ಇಸವಿ ಅಕ್ಟೋಬರ್ 2ನೆ ಮರ್ಕುಂ 245–1300ನೆ ನಂಬರ್ ಗವರ್ನಮೆಂಟ್ ನೋಟಿಫಿಕೇಷನ್ XIIನೆ ರೂಲ್ ಮೇರೆಗೆ ಮತ್ತು 1902ನೆ ಇಸವಿ ಮೇ 5ನೆ ಮರ್ಕುಂ ನೋಟಿಫಿಕೇಷನ್ ಅನುಸರಿಸಿ, ಈ ಕೆಳಗೆ ನಮೂದಿಸಿರುವ ಜನರನ್ನು ಬೆಂಗಳೂರು ಡಿಸ್ಟ್ರಿಕ್ಟ್ ಈ ಕೆಳಗೆ ಕಂಡ ಸ್ಟೇಟ್ ಫಾರೆಸ್ಟ್ ಡಿಸ್ಟ್ರಿಕ್ಟ್ ಫಾರೆಸ್ಟುಗಳು ಮತ್ತು ಫ್ಯೂಯಲ್ ರಿಸರ್ವ್‌ಗಳಲ್ಲಿ ಬಣಸಾದೆ, ಬಿದಿರು ವಗೈರೆಗಳನ್ನು ಕಡಿದು ಸಾಗಿಸಿಕೊಳ್ಳಲು, ತಖ್ತೆಯಲ್ಲಿ ಕಂಡಂತೆ, ಆಯಾಯ ಜನರನ್ನು ಆಯಾಯ ಸ್ಥಳಗಳಲ್ಲಿ ಹಾಸಲು ತೆಗದುಕೊಂಡು ಲೈಸೆನ್ಸ್‌ಗಳನ್ನು ಕೊಡುವದಕ್ಕೂ ಹಾಸಲ್ ಸಂದ ಲೈಸೆನ್ಸ್‌ಗಳನ್ನು ಅಜಮಾಯಿಷಿ ಮಾಡುವದಕ್ಕೂ, ಲೈಸೆನ್ಸ್ ವೆಂಡರ್ ಅಥವಾ ಕಮಿಷನ್ ಏಜಂಟರನ್ನಾಗಿ ನೇಮಕ ಮಾಡಿರುತ್ತೆ :—

ನಂಬರು.	ರೇಂಜಿನ ಹೆಸರು.	ತಾಲ್ಲೂಕಿನ ಹೆಸರು.	ಲೈಸೆನ್ಸ್ ವೆಂಡರಿರುವ ಸ್ಥಳ ಅಥವಾ ಹೆಡ್‌ಕ್ವಾರ್ಟರ್.	ಲೈಸೆನ್ಸ ವೆಂಡರುಗಳ ಹೆಸರು.	ಅಧಿಕಾರ.	ಅಧಿಕಾರ ಚಲಾಯಿಸತಕ್ಕ ಫಾರೆಸ್ಟುಗಳ ಹೆಸರು.	ಷರಾ.
1	ಬೆಂಗಳೂರು.	ದೊಡ್ಡಬಳ್ಳಾಪುರ	ಚಿಲೇನಹಳ್ಳಿ ..	ನರಸಪ್ಪ, (ಶ್ಯಾನುಭೋಗ)	ಬಿದಿರು, ಇಜ್ಜಲು, ಸಾದೆಗಳಿಗೂ ಮತ್ತು ದನಗಳನ್ನು ಮೇಯಿಸುವದಕ್ಕೂ ಲೈಸೆನ್ಸ್‌ಗಳನ್ನು ಕೊಡುವದು	ದೊಡ್ಡಬಳ್ಳಾಪುರದ ಫಾರೆಸ್ಟು ಅಂದರೆ ಉಜೆನಿ, ಹುಲ್ಕುಡ್ಡಿ, ಮಾಕಳಿದುರ್ಗ, ಹಾರೋಹಳ್ಳಿ, ದೇವರಬೆಟ್ಟ, ಮೇಲ್ನಾಯಿಕನಹಳ್ಳಿ	
2	ಡಿಟೋ ..	ಕಾನಕಾನಹಳ್ಳಿ	ಕಗ್ಗಲೀಪುರ ...	ಕೃಷ್ಣಪ್ಪ, (ಶ್ಯಾನುಭೋಗ)	ಡಿಟೋ	ರಾಗೀಹಳ್ಳಿ ಸ್ಟೇಟ್ ಫಾರೆಸ್ಟು, ಬಳ್ಳನಕುಪ್ಪೆ ಮತ್ತು ತಮ್ಮನಾಯ್ಕನಹಳ್ಳಿ ಫ್ಯೂಯಲ್ ರಿಸರ್ವ್‌ಗಳು	
3	ಡಿಟೋ ..	ಆನೆಕಲ್ ..	ತಮ್ಮನಾಯ್ಕನಹಳ್ಳಿ	ಶೇಷಗಿರಿಯಪ್ಪ, (ಶ್ಯಾನುಭೋಗ)	ಡಿಟೋ	ತಮ್ಮನಾಯ್ಕನಹಳ್ಳಿ ಮತ್ತು ಬಳ್ಳನಕುಪ್ಪೆ ಫ್ಯೂಯಲ್ ರಿಸರ್ವ್‌ಗಳು	
4	ಡಿಟೋ ..	ಡಿಟೋ ..	ಬನ್ನೇರುಘಟ್ಟ (ಸಂಪಿಗೇಹಳ್ಳಿ)	ಕೆಂಪೇಗೌಡ, (ಪಟೇಲ್)	ಡಿಟೋ	ರಾಗಿಹಳ್ಳಿ ಸ್ಟೇಟ್ ಫಾರೆಸ್ಟು.	
5	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ	ಕ್ಲೋಸ್‌ಪೇಟೆ .	ಜೀವಣ್ಣರಾವ್, (ಕಸಬಾ ಶ್ಯಾನುಭೋಗ)	ಡಿಟೋ	ಹಂದಿಗೊಂದಿ, ತೆಂಗಿನಕಲ್ ಮತ್ತು ಮಾಕಳಿ ಸ್ಟೇಟ್ ಫಾರೆಸ್ಟುಗಳು, ಮತ್ತು ತಾಲ್ಲೋಕಿನ ಡಿಸ್ಟ್ರಿಕ್ಟ್ ಫಾರೆಸ್ಟುಗಳು	
6	ಡಿಟೋ ..	ಡಿಟೋ ..	ಬಿಡದಿ ...	ರಾಮಕೃಷ್ಣಪ್ಪ, (ಜಮೀನ್ದಾರ್)	ಡಿಟೋ	ಹಂದಿಗೊಂದಿ ಸ್ಟೇಟ್ [illegible] ಸ್ಟು ಮತ್ತು ಡಿಸ್ಟ್ರಿಕ್ಟ್ [illegible] ರೆಸ್ಟುಗಳು	
7	ಡಿಟೋ :	ಚೆನ್ನಪಟ್ಣ ..	ಚೆನ್ನಪಟ್ಣ ...	ಹನುಮಂತರಾವ್, (ಡಿಪೋ ಹೆಡ್‌ಗಾರ್ಡ್)	ಡಿಟೋ	ಮಾಕಳಿ, ತೆಂಗಿನಕಲ್, ಚಿಕ್ಕ ಮತ್ತು ದೊಡ್ಡ ಮಣ್ಣುಗುಡ್ಡೆ ಫಾರೆಸ್ಟುಗಳು	
8	ಡಿಟೋ ..	ಮಾಗಡಿ ...	ವೀರೇಗೌಡನದೊಡ್ಡಿ	ಚಿಕ್ಕವೀರೇಗೌಡ, (ಪಟೇಲ್)	ಡಿಟೋ	ಸಾವನದುರ್ಗ ಮತ್ತು ಸಿದ್ದೇದೇವರಬೆಟ್ಟ ಸ್ಟೇಟ್ ಫಾರೆಸ್ಟುಗಳು, ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟುಗಳು	
9	ಕಾನಕಾನಹಳ್ಳಿ	ಕಾನಕಾನಹಳ್ಳಿ	ಕಾನಕಾನಹಳ್ಳಿ.	ನರಸಪ್ಪ, (ಶ್ಯಾನುಭೋಗ)	ಡಿಟೋ	ಬಿಳಿಕಲ್ ಮತ್ತು ಬಾಣಂತಿಮಾರಿ ಸ್ಟೇಟ್ ಫಾರೆಸ್ಟುಗಳು, ಬೆಟ್ಟಹಳ್ಳಿ ವಾಡೆ ರಿಸರ್ವ್‌ಗಳು	
10	ಡಿಟೋ ..	ಡಿಟೋ ...	ಹನಿಯೂರು ..	ಪುಟ್ಟರಾಮೈಯ್ಯ, (ಶ್ಯಾನುಭೋಗ)	ಡಿಟೋ	ಕಬ್ಬಾಳು ಫಾರೆಸ್ಟು ಮತ್ತು ತೈಲೂರು ರಿಸರ್ವ್‌ಗಳು	
11	ಡಿಟೋ ..	ಡಿಟೋ ..	ಹಾರೋಹಳ್ಳಿ ...	ಶ್ರೀನಿವಾಸೈಯ್ಯ, (ಪಟೇಲ್)	ಡಿಟೋ	ಗಂಗಾಧರನಗುಡ್ಡೆ ರಿಸರ್ವ್, ಹಾರೋಹಳ್ಳಿ ಮತ್ತು ದೇವಸಂದ್ರ ಡಿಸ್ಟ್ರಿಕ್ಟ್ ಜಂಗಲ್‌ಗಳು ಸಹಾ	
12	ಡಿಟೋ ..	ಡಿಟೋ ..	ಮುಳ್ಳಹಳ್ಳಿ ...	ವೆಂಕಟರಾಮೈಯ್ಯ, (ಬನ್ನೀ ಮುಕ್ಕೊಳ್ಳು)	ಡಿಟೋ	ಚಿಲಂದ್ವಾಡಿ ಮತ್ತು ಕ್ಷುಗ್ಗೂರು ಸ್ಟೇಟ್ ಫಾರೆಸ್ಟುಗಳು	
13	ಡಿಟೋ ..	ಮಳವಳ್ಳಿ .	ಹಲಗೂರು ..	ರಾಮಸ್ವಾಮೈಯ್ಯ, (ಹಲಗೂರು ಪಟೇಲ್ ಕೃಷ್ಣಪ್ಪನವರಮಗ)	ಡಿಟೋ	ಬಸವನಬೆಟ್ಟ ಸ್ಟೇಟ್ ಫಾರೆಸ್ಟು	

ಟಿ. ಅಬ್ದುಲ್ ಕರೀಂ,
ಫಾರ್ ಡೆಪ್ಯುಟಿ ಕಮಿಷನರ್, ಬೆಂಗಳೂರು ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 17ನೆ ಡಿಸೆಂಬರ 1903.

ಆದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಾರೀಖು[illegible] ಮತ್ತು ಸ್ಥಳಗಳಲ್ಲಿ—ಶಿವಮೊಗ್ಗ ಡಿಸ್ಟ್ರಿಕ್ಟ್ಸ ಡಿಪೋಗಳ ಬಾಬತು ಚವುಬೀನೆ ಸಾಮಾನು ಮತ್ತು ಪ್ರಸಾರಿ ಜಿನಸಿ ರೇಂಜ್ ಫಾರೆಸ್ಟ್ ಆಫೀಸರು ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರಿಂದ ನೇಮಿಸಲ್ಪಡುವ ಇತರ ಆಫೀಸರಿ[illegible]ರಂಗವಾಗಿ ಹರಾಜು ಮಾಡಲ್ಪಡುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗವಾನಿ ನಾಟಾ.	ಮತ್ತಿ ಮತ್ತು ಇತರ ಜಾತಿ ನಾಟಾ.	ಸಾಗವಾನಿ ಬಲಗು ಮತ್ತು ತುಂಡುಗಳು.	ಜಂಗಲಿ ಬಲಗು ಮತ್ತು ತುಂಡುಗಳು.	ಹೆಬಿದರು.	ಕಿಬಿದರು.	ಸೌದೆ.	[illegible] ಬಲಗು.	ಅಳಲೆಕಾಯಿ.	ಗೋಂದು.	ಶೀಗೆಕಾಯಿ.	ಜೇನುತುಪ್ಪ.	ಜೇನುಮೇಣ.	ಹರಾಜು ಮಾಡಿಸಲ್ಪಡುವ ಆಫೀಸರ ಹೆಸರು.	ಷರಾ.
1	ಮಲಂದೂರು ಫಾರೆಸ್ಟ್.	9—1—1904	..	125	...	...	..	...	...	..	...	...	...	..	...	ಸೊರಬ ರೇಂಜ್ ಆಫೀಸರು.	
2	ಸಾಗರ ಕೋಟೆ ..	11—1—1904	...	..	...	..	..	...	...	..	...	..	...	...	ಹ. ವಾ. 6-56		
3	ಸೊರಬ ...	12—1—1904	..	..	..	65	1100	..	..	..	ಕ್ಯಾ. ಹ. ವಾ. 20 1 22	..	...	...	..		
4	ಚಂದ್ರಗುತ್ತಿ ..	14—1—1904	...	100	...	....	...	...	..	...	0 3 15	...	..	...	..		
5	ಕವಡಿ ..	20—1—1904	..	270	...	...	..	..	....	..	..	..	...	..	..		
6	ಶಿರಾಳಕೊಪ್ಪ ...	21—1—1904	10	130	250	250	...	30	....	..	..	..	...	..	..		
7	ಅನವಟ್ಟಿ	23—1—1904	..	....	276	202	1786	...	...	..	....	...	....	...	..		
8	ತೆಲಗಡ್ಡೆ .	26—1—1904	36	...	4087	...	..	...	...	...	...	..	..	..	...		
9	ಶಕುನವಳ್ಳಿ ..	28—1—1904	..	....	478	..	..	...	...	..	..	...	..	..	..		
10	ಪಟ್ಟದಕೂರ್ಲಿ .	30—1—1904	..	...	..	400	2,000	..	...	..	..	...	..	...	..		
11	ಶಿಕಾರಿಪುರ ..	2—2—1904	...	100	1769	200	333	2155	..	...	27 ಮಣ	10½ ಮಣ	½ ಮಣ	....	..		
	ಜೋಳದಹಾಳು ..	20—1—1904	..	..	267	250	...	..	..		...	...	..	..	..	ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರು ಅಥವಾ ಇತರ ಆಫೀಸರು.	
	ಚನ್ನಗಿರಿ ..	22—1—1904	..	..	1500	300	6	54	..		...	..	...	..	..		
	ಉಬ್ರಾಣಿ ..	25—1—1904	..	..	771	250	165	..	..	..	..	..	..	..	..		
	ಉಂಬಳೆಬೈಲ್ ...	27—1—1904	15	250	.	..	..	...	...	..	...	..	..	..	...		
	ಶಿವಮೊಗ್ಗ ...	29—1—1904	25	75	140	300	500	4300	ಬಂಡಿಬೋಜು 12	22	...	...	....	ಹ. ವಾ. 1-64	..	ಶಿವಮೊಗ್ಗ ರೇಂಜ್ ಆಫೀಸರು.	
	ಆಯನೂರು ...	1—2—1904	94	181	30	..	200	700	..	..	..	..	..	..	..		

ಹರಾಜು ಷರತ್ತು.—15—3—1895ನೆ ಮುರ್ಸ್ಕಿಂ ನಂಬರು 15229—R. F. 155-92ನೆ ಗವರ್ನಮೆಂಟ್ ನೋಟಿಫಿಕೇಷನ್ ಮೇರೆಗೆ.

ಜೆ. ಮಾರ್ಟೈರೂ,
ಫಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಶಿವಮೊಗ್ಗ.

ನೋಟಿಫಿಕೇಷನ್, ತಾರೀಖು 18ನೆ ಡಿಸೆಂಬರ 1903.

ಸನ್ 1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 24ನೆ ಸೆಕ್ಷನ್ ಕ್ಲಾಜು (ಬಿ) ಅನುಸರಿಸಿ ಈ ಕೆಳಗೆ ನಮೂದಿಸಿರುವ ಶಿವಮೊಗ್ಗಾ ಡಿಸ್ಟ್ರಿಕ್ಟಿನ ಸ್ಟೇಟ್ ಫಾರೆಸ್ಟುಗಳನ್ನು ಬೆಂಕಿಯಿಂದ ಕಾಪಾಡಲು ಏರ್ಪಾಡು ಇಟ್ಟಿರುತ್ತೆ. 1903ನೆ ಇಸವಿ 15ನೆ ಜನವರಿ ವಗೈರೆಯಿಂದ ಮೇ 15ರ ವರಿವಿಗೆ ಬೇಟೆಯಾಡತಕ್ಕ ವರಿಗೆ ಸದರಿ ಸ್ಟೇಟ್ ಫಾರೆಸ್ಟುಗಳು ಬಂದು ಮಾಡಲ್ಪಟ್ಟಿರುತ್ತವೆ. ಶಿವಾಯಿ ಯಾವ ಮನುಷ್ಯನು ಮೇಲ್ಕಂಡ ಫಾರೆಸ್ಟುಗಳಲ್ಲಿ ಗೊತ್ತಾದ ದಾರಿಗಳ ವಿನಹ ಕನ್ಸರ್ವೇಟರ ಅಥವಾ ಅಧಿಕಾರ ಹೊಂದಲ್ಪಟ್ಟ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರ ಅಪ್ಪಣೆ ವಿನಹ ಪ್ರವೇಶ ಮಾಡಕೂಡದು. ಅಕ್ರಮಪ್ರವೇಶಿಸುವವರು ಪ್ರಾಸಿಕ್ಯೂಷನ್‌ಗೆ ಒಳಪಡುತ್ತಾರೆ :—

ನಂಬರು.	ಫಾರೆಸ್ಟು ಯಾ ಪ್ಲಾಂಟೇಷನ್ ಹೆಸರು.	ತಾಲ್ಲೂಕು ಹೆಸರು.
1	ಶಂಕರಗುಡ್ಡಾ ಭೂತನಬೈಲು	ಶಿವಮೊಗ್ಗಾ ತೀರ್ಥಹಳ್ಳಿ
2	ಪುರದಾಳು	ಶಿವಮೊಗ್ಗಾ
3	ಕುಂಚೇನಹಳ್ಳಿ	ಡಿಟೋ
4	ಅನಮಿನಗಟ್ಟೆ ಪ್ಲಾಂಟೇಷನ್	ಡಿಟೋ
5	ಸಕ್ರೆಬೈಲು ಫಾರೆಸ್ಟು	ಡಿಟೋ
6	ಡಿಟೋ ಪ್ಲಾಂಟೇಷನ್	ಡಿಟೋ
7	ಚೋರನಡೆಹಳ್ಳಿ	ಡಿಟೋ
8	ಆಯನೂರು ಸಂದಲ ರಿಜರ್ವು	ಡಿಟೋ
9	ಆಲಕೊಳ ಡಿಟೋ	ಡಿಟೋ
10	ಕರಲಕೊಪ್ಪ ಡಿಟೋ	ಡಿಟೋ
11	ಮುಂಬಳಬೈಲು ಹುಣಸೆಕಟ್ಟೆ	ಡಿಟೋ
12	ಆಲದಹಾರ	ಡಿಟೋ
13	ಕುಂಸಿ	ಡಿಟೋ
14	ಮುಸರೂರು	ನಗರ
15	ಕುಕ್ಕವಾಡ ಪುಬ್ಬಣಿ	ಶಿವಮೊಗ್ಗಾ ಚನ್ನಗಿರಿ ಮತ್ತು ತರೀಕೆರೆ
16	ಚನ್ನಗಿರಿ ಸಂದಲ್ ರಿಜರ್ವು	ಚನ್ನಗಿರಿ
17	ತಲಗಡ್ಡೆ ಅರತಲಗಡ್ಡೆ	ಸೊರಬ
18	ಬೆಟ್ಟದಕೂರ್ಲಿ	ಡಿಟೋ
19	ಸಿದ್ದಹಳ್ಳಿ	ಡಿಟೋ
20	ಚಂದ್ರಗುತ್ತಿ	ಡಿಟೋ
21	ಕವಡಿ	ಡಿಟೋ
22	ಕವಲಿ	ಶಿಕಾರಿಪುರ
23	ತೊಗರಸಿ	ಡಿಟೋ
24	ಬಸವನಂದಿಹಳ್ಳಿ ...	ಡಿಟೋ
25	ಕಾಳೇನಹಳ್ಳಿ ಪ್ಲಾಂಟೇಷನ್ ..	ಡಿಟೋ
26	ಗಂಗ್ಯನಸರ ಹಾರೋಕೊಪ್ಪ ಮತ್ತು ಯರೆಕಟ್ಟೆ ಕಾಪಿಸು ಬ್ಲಾಕು.	ಡಿಟೋ ಹೊನ್ನಾಳಿ
27	ಕರಡಿ ಬೆಟ್ಟ	ಶಿಕಾರಿಪುರ
28	ಚಂದ್ರಕಲ	ಡಿಟೋ
29	ಬಳಂದೂರು	ಡಿಟೋ
30	ಮಲಂದೂರು	ಸಾಗರ
31	ಶಿವಮೊಗ್ಗಾ ರೆವಿನ್ಯೂ ಪ್ಲಾಂಟೇಷನ್	ಶಿವಮೊಗ್ಗಾ
32	ಶಿಕಾರಿಪುರ ಡಿಟೋ	ಶಿಕಾರಿಪುರ

ಎಂ. ವೆಂಕಟನಾರಣಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ, ಶಿವಮೊಗ್ಗ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 25ನೆ ನವಂಬರ 1903ನೆ ಇಸವಿ.

ಕೋಲಾರ ತಾಲ್ಲೂಕು ಹುತ್ತೂರು ಹೋಬಳಿಗೆ ಸೇರಿದ ಮಾರ್ಜಿನ್ನಲ್ಲಿ ನಮೂದಾಗಿ ಇರುವ ಇನಾಂ ಗ್ರಾಮಗಳು, ಸರಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ಆ ತಾಲ್ಲೂಕು ಅಮಲ್ದಾರರ ಕಚೇರಿಯಲ್ಲಿ 1904ನೆ ಇಸವಿ ಜನವರಿ ಮಾಹೆ 5ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

(1) ಜೋಡಿ ವಿಟ್ಟಪ್ಪಲ್ಲಿ ಗ್ರಾಮ.
(2) ಜೋಡಿ ವಡಗೂರು ಗ್ರಾಮ.

(ಹೆಚ್ಚಿನ ತಪಸೀಲ್ ಬಗ್ಯೆ 1903ನೆ ಡಿಸೆಂಬರ್ ತಿಂಗಳ 10ನೆ ಮಾರ್ಕಂ 48ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 581—580ನೆ ನಂಬರು ಪೇಜು ನೋಡತಕ್ಕದ್ದು.

ಎಫ್. ಸಿ. ಕಾರ್, ಡೆಪ್ಯುಟಿ ಕಮಿಷನರ.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 4ನೆ ಡಿಸೆಂಬರ 1903.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ಶಿವಮೊಗ್ಗಾ ಡಿಸ್ಟ್ರಿಕ್ಟು ಶಿವಮೊಗ್ಗಾ ತಾಲ್ಲೂಕು ಜೋಡಿ ಭಂಡಾರಹಳ್ಳಿ ಗ್ರಾಮವು ಕಂದಾಯ ಬಾಕಿಗಾಗಿ 1904ನೆ ಜನವರಿ (20) ಇಪ್ಪತ್ತನೆ ತಾರೀಖಿನಲ್ಲಿ ಶಿವಮೊಗ್ಗಾ ತಾಲ್ಲೂಕು ಕಚೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ. ಈ ವಿಷಯದಲ್ಲಿ ತಪಶೀಲು ಇಸ್ತಿಹಾರ 1903ನೆ ಡಿಸೆಂಬರ ತಿಂಗಳ 10ನೆ ಮಾರ್ಚಂ 48ನೆ ನಂಬರ ಮೈಸೂರು ಗೆಜೆಟ ಎರಡನೆ ಭಾಗದ 582ನೆ ಪೇಜಿನಲ್ಲಿ ಛಾಯಿಷಾಗಿದೆ.

ಸಿ. ನಾರಾಯಣರಾವ್, ಛಾರ ಡೆಪ್ಯುಟಿ ಕಮಿಷನರ.

ಕಡೂರು ಡಿಸ್ಟ್ರಿಕ್ಟು.

ಸನ್ 1903ನೆ ಇಸವಿ ಡಿಸೆಂಬರ ತಾರೀಖು 2.

ಮೆ|| ಜೆ. ಜೆ. ರೆಬೆಲ್ಲೊ ಯವರಿಂದ ಸನ್ 1901—1902 ಮತ್ತು 1902—1903 ಈ ಎರಡು ಸಾಲುಗಳ ಕಂದಾಯ ಬಾಕಿ ಬಗ್ಗೆ ಮೂಡಿಗೆರೆ ತಾಲ್ಲೂಕು ಕಳಸದ ಹೋಬಳಿ ಮರಸಣಿಗೆ ಗ್ರಾಮದಲ್ಲಿರುವ ವಟ್ಟು 382 ಎಕರೆ, 37 ಗುಂಟೆ, ವಿಸ್ತೀರ್ಣವುಳ್ಳ ಸರ್ವೆ ನಂಬರುಗಳು 120, 130, 131, 213, 214 ಮತ್ತು 215ನೆ ಜಮೀನುಗಳು ಎರಡನೆ ಅಸಿಸ್ಟೆಂಟ್ ಕಮಿಷನರ ಸಾಹೇಬರವರ ರೂಬರೂಬ್ ಸನ್ 1904ನೆ ಇಸವಿ ಜನವರಿ ತಾರೀಖು 19ನೆ ಮಂಗಳವಾರ ದಿವಸ ದಿವಿ 11 ಘಂಟೆಗೆ ಮೂಡಿಗೆರೆ ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುವದು.

ಜಾಸ್ತಿ ತಪಶೀಲು ಹರಾಜ್ ಇಸ್ತಿಹಾರನಲ್ಲಿ ನಮೂದಿಸಿರುವದು ನೋಡಲಾಗಿ ತಿಳಿಯಲಾಗುತ್ತೆ.

ಸನ್ 1903ನೆ ಇಸವಿ ಡಿಸೆಂಬರ ತಾರೀಖು 7.

ಮೆ|| ಎ. ಜೆ. ಲೊಬೋಯವರಿಂದ ಸನ್ 1902—1903ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಮೂಡಿಗೆರೆ ತಾಲ್ಲೂಕು ಬಣಕಲ್ಲು ಹೋಬಳಿ ಹಳೆಕೆರೆ ಗ್ರಾಮದಲ್ಲಿರುವ ಸರ್ವೆ ನಂ. 59 ಎಕರೆ ವುಳ್ಳ ಕಾಫಿ ಜಮೀನು ಮೂಡಿಗೆರೆ ತಾಲ್ಲೂಕು ಅಮಲ್ದಾರ್ರ್ಯ ಯಾ ಶಿರಸ್ತೆದಾರ್ರ್ಯ ರೂಬರೂಬ್ ಸನ್ 1904ನೆ ಇಸವಿ ಜನವರಿ ತಾರೀಖು 22ನೆ ಶುಕ್ರವಾರ ದಿವಸ ದಿವಿ 11 ಘಂಟೆಗೆ ಮೂಡಿಗೆರೆ ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜ್ ಮಾಡಿಸಲ್ಪಡುವದು. ಜಾಸ್ತಿ ತಪಶೀಲು ಹಿಂದಿನ ವಾರದಲ್ಲಿ ಛಾಯಿಷ್ ಆಗಿರುವ ಹರಾಜ್ ಇಸ್ತಿಹಾರಿನಲ್ಲಿ ನಮೂದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ.

ಶಿವಮೊಗ್ಗಾ ಡಿಸ್ಟ್ರಿಕ್ಟು ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿ|| ಅರ್ಜಿ ನಂಬರ 174.

ಮೃತಪಟ್ಟ ಹೊನ್ನಾಳಿಯಲ್ಲಿದ್ದ ಸುಳ್ಳದ ರಾಮಾಚಾರ ಬಿನ್ ಶೇಷಾಚಾರ್ರ್ಯವರ ಆಸ್ತೀ ವಿಷಯದಲ್ಲಿ —

ಅರ್ಜಿದಾರರು ರಟ್ಟೆಹಳ್ಳಿ ಪುರಾಣದ ಕೃಷ್ಣಾಚಾರ್ಯ ಬಿನ್ ವಿದ್ಯಾಧೀಶಾಚಾರ್ಯ, ಹೊನ್ನಾಳಿವಾಸಿ, ಮೃತಪಟ್ಟ ಸದರೀ ಸುಳ್ಳದ ರಾಮಾಚಾರ್ರ್ಯ ಅರ್ಜಿದಾರನಿಗೆ ಬರಕೊಟ್ಟ ವಿಲ್ಲಿನ ಹಕ್ಕುದಾರಿ ಮೇಲೆ ಹೊನ್ನಾಳಿ ಸ್ಥಳದ ರಟ್ಟೆಹಳ್ಳಿ ಪುರಾಣದ ಕೃಷ್ಣಾಚಾರ್ರ್ಯ ಹೊನ್ನಾಳಿ ವಾಸಸ್ಥರಾಗಿ ಮೃತಪಟ್ಟ ಸುಳ್ಳದ ರಾಮಾಚಾರ್ರ್ಯ ಜಿಂದಗಿ ಬಗ್ಗೆಗೆ ಬರತಕ್ಕ 48—0—0 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ ರಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ ಬಗ್ಗೆ ಈ ಕೋರ್ಟಿಗೆ ಛಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಟ್ಟೆಹಳ್ಳಿ ಪುರಾಣದ ಕೃಷ್ಣಾಚಾರ್ರ್ಯ ಅರ್ಜಿಯನ್ನು ಸನ್ 1904ನೆ ಇಸವಿ ಜನವರಿ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಳ್ಳದ ರಾಮಾಚಾರ್ರ್ಯ ಆಸ್ತಿಗೆ ಹಕ್ಕುದಾರರಾದ ಶಿಷ್ಯರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ್ 1903ನೆ ಇಸವಿ ಡಿಸೆಂಬರು ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಶೇಷಯ್ಯಂಗಾರ್,
ಶಿರಸ್ತೇದಾರ

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಮಿ|| ಅರ್ಜೀ ನಂಬರ 357.

ಅರ್ಜೀದಾರು ಬೆಂಗಳೂರು ಶಿದ್ದಿಕಟ್ಟೆಯಲ್ಲಿ ಇರುವ ಮುತ್ತ್ಯಾ ಶೇತುಮಾಧವಾಚಾರ‍್ರ ಮಗ ಶೇಷಾಚಾರು, ಮೈನರಾದ ಬೆಂಗಳೂರು ಶಿದ್ದಿಕಟ್ಟೆಯಲ್ಲಿ ಇರುವ ಮುತ್ತ್ಯಾ ಶ್ರೀನಿವಾಸಾಚಾರ‍್ರ ಮಕ್ಕಳು 1ನೆ ಕೃಷ್ಣಮೂರ್ತಿ, 2ನೆ ಗಂಗಾಬಾಯಿ ಯವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ 1ನೆ ಕೃಷ್ಣಮೂರ್ತಿ ವಗೈರೇರಿಗೆ ಚಿಕ್ಕತಂದೆ ಆಗಬೇಕೆಂಬ ಹಕ್ಕಿನಮೇಲೆ ಅರ್ಜೆದಾರ ಶೇಷಾಚಾರು, ಸದರೀ ಮೈನರನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸರ್ 1904ನೆ ಇಸವಿ ಜನವರಿ ತಾರೀಖು 8ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಸ್ ಕೊಡೋಣಾಗಿದೆ.

ಸರ್ 1903ನೆ ಇಸವಿ ಡಿಸೆಂಬರ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ಮೊಹರ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಪಿ. ಸಿಂಗ್ರಾಚಾರ್,
ಸಬ್ ಜಡ್ಜ.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸರ್ 1903—1904ನೆ ಇಸವಿ ಅರ್ಜೀ ನಂಬರು 265.

ಮೃತಪಟ್ಟ ನಾರಣೈಯ್ಯಂಗಾರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಈಶ್ವರವಳ್ಳಿಯಲ್ಲಿರುವ ಸೋಮಮ್ಮ ನಾರಣೈಯ್ಯಂಗಾರ ಹೆಂಡತಿ, ಮೈನರ್ ಗಾರ್ಡಿಯನ್ ತಂದೆ ಗೋವಿಂದಾಚಾರ್, ಮೃತಪಟ್ಟ ನಾರಣೈಯ್ಯಂಗಾರ‍್ರಿಗೆ ಸೋಮಮ್ಮ ಹೆಂಡತಿಯು ಮತ್ತು ದತ್ತು ಮಗ ವೆಂಕಟಾಚಾರ ಇವರುಗಳ ಹಕ್ಕುದಾರಿ ಮೇಲೆ ಚಿಕ್ಕಮಗಳೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ನಾರಣೈಯ್ಯಂಗಾರ‍್ರವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸರ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಫಿರ್ಯಾದಿ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೋಮಮ್ಮ, ಮೈನರ್ ಗಾರ್ಡಿಯನ್ ತಂದೆ ಗೋವಿಂದಾಚಾರ್ ಯವರ ಅರ್ಜಿಯನ್ನು ಸರ್ 1904ನೆ ಇಸವಿ ಫೆಬ್ರುವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣೈಯ್ಯಂಗಾರ್ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸರ್ 1903ನೆ ಇಸವಿ ಡಿಸೆಂಬರ್ ತಿಂಗಳು 15ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೂಡನೆ ಕೊಡೋಣಾಗಿದೆ.

ಟಿ. ಪರಮಶಿವ ಆಯ್ಯರ್,
ಸಬ್ ಜಡ್ಜ.

ಚಿತ್ರದುರ್ಗ ಡಿವಿಜನ್.

ನೋಟಿಸ್.

ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ, ಮಿರಾಸಾಬಿ ಹಳ್ಳಿ ತಲಾವ್ ಕಂಟ್ರಾಕ್ಟರ ರಾಮಲಿಂಗಂ ಎಂಬುವರಿಗೆ ಪಾವತಿ ಆಗಬೇಕಾಗಿರುವ ರೂ. 8—9—1 ಪೈ ಬಾಕಿ ನಿಂತಿರುತ್ತೆ. ಈ ತಾರೀಖು ಲಾಗಾಯಿತು 3 ತಿಂಗಳೊಳಗಾಗಿ ಮೇಲ್ಕಂಡ ಕಂಟ್ರಾಕ್ಟುದಾರರೇ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರೇ ಆಗಲಿ ಚಿತ್ರದುರ್ಗ ಡಿವಿಜನ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬರೂಬು ಹಾಜರಾಗಿ ಹಣಾ ತೆಗದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ವೈ. ಶ್ರೀನಿವಾಸರಾವ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೆ ಡಿಸೆಂಬರ್ 1903.

ಇದರಿಂದ ತಿಳಿಯಪಡಿಸುವದೇನಂದರೆ,—ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಯೆ ಸರ್ 1904ನೆ ಇಸವಿ ಫೆಬ್ರುವರಿ ಗುರ್ರೇ ಲಾಗಾಯತು 1905ನೆ ಇಸವಿ ಜನವರಿ 31ನೆ ತಾರೀಖಿನ ವರಿಗೂ ಆ 2 ದಿನಗಳೂ ಸೇರಿ ಕೆಳಗೆ ನಮೂದು ಮಾಡುವ ಜಿನಸುಗಳನ್ನು ಕಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರಿಂದ, ಸರ್ 1904ನೆ ಇಸವಿ ಜನವರಿ ತಾರೀಖು 15ನೆ ಶುಕ್ರವಾರ ಹಗಲು 10 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

2. ಮೇಲೆ ನಮೂದು ಮಾಡಿರುವ ತಾರೀಖಿನ ನಂತರ ಯಾವ ದರಖಾಸ್ತುಗಳೂ ತೆಗದುಕೊಳ್ಳಲ್ಪಡುವದಿಲ್ಲ.

3. ಟೆಂಡರುಗಳಿಗೆ ಈ ಕೆಳಗೆ ನಮೂದು ಮಾಡಿರುವಂತೆ ಬೇರೆಬೇರೆ ಮೇಲ್ ವಿಳಾಸ ಬರೆದು ಇರತಕ್ಕದ್ದು :—

	1ನೆ ಧಾನ್ಯಕ್ಕೆ	ದರಖಾಸ್ತು
	2ನೆ ಮಸಾಲೆ ಜಿನಸುಗಳಿಗೆ ..	ದರಖಾಸ್ತು
	3ನೆ ಇತರ ಆವಶ್ಯಕವಾದ ಪದಾರ್ಥಗಳ ಬಗ್ಯೆ .	ದರಖಾಸ್ತು
4.	ಧಾನ್ಯಕ್ಕೆ	ರೂಪಾಯಿ 200
	ಮಸಾಲೆ ಜಿನಸುಗಳಿಗೆ ..	,, 50
	ಇತರ ಆವಶ್ಯಕವಾದ ಪದಾರ್ಥಗಳಿಗೆ ..	,, 150

ಈ ಮೇರಿಗೆ ನಗದಾಗಿ ಆಗಲಿ, ಕರ್ರೆಸೀನೋಟಾಗಿ ಆಗಲಿ ಠೇವಣಾತಿ ಮೊಬಲಗು ಇಲ್ಲದೆ ಬರುವ ದರಖಾಸ್ತುಗಳು ಅಂಗೀಕರಿಸಲ್ಪಡುವದಿಲ್ಲ.

5. ದರಖಾಸ್ತುಗಳು ಬೆಂಗಳೂರ್ ಸೆಂಟ್ರಲ್ ಜೈಲ್ ಸೂಪರ್ರಿಟೆಂಡೆಂಟರವರಿಂದ ಅವರ ಆಫೀಸಿನಲ್ಲಿ ಆ ಕಾಲದೊಳು ಹಾಜರಾಗಲಿಕ್ಕೆ ಇಷ್ಟವುಳ್ಳ ದರಖಾಸ್ತುದಾರರುಗಳ ರೂಬರೂಬ್ ಮೇಲ್ಕಂಡ ತಾರೀಖು ಮತ್ತು ಘಂಟೆಯಲ್ಲಿ ಖುಲ್ಲಾ ಮಾಡಲ್ಪಡುವವು.

6. ಕೆಳಗೆ ವಿವರಿಸಿರುವ ಜಿನಸುಗಳನ್ನು ಸರಬರಾಯಿ ಮಾಡುವ ದರ ರೂಪಾಯಿ 1ಕ್ಕೆ ಇಷ್ಟು ಪೌಂಡ್ ಎಂತ ದರಖಾಸ್ತುಗಳಲ್ಲಿ ನಮೂದಾಗಬೇಕು. ಮತ್ತು ಜಿನಸುಗಳು ಒಳ್ಳೇದಾಗಿರಬೇಕು.

ಸಂವತ್ಸರಕ್ಕೆ ಬೇಕಾಗಬಹುದಾದ ಜಿನಸುಗಳ ಪಟ್ಟಿ.

1ನೆ ಧಾನ್ಯ.

	ಸುಮಾರು ಬೇಕಾದ್ದು.	
ಅಕ್ಕಿ	56,000	ಪೌಂಡು
ರಾಗಿ ..	240,000	,,
ತೊಗರಿಬ್ಯಾಳೆ ..	11,000	,,
ಅವರೇಬ್ಯಾಳೆ ..	19,000	,,

2ನೆ ಮಸಾಲೆ ಜಿನಸುಗಳು.

* ಖಾರದ ಸಾಮಾನಿಗೆ ಬೇಕಾದ ಜಿನಸುಗಳು		* ಖಾರದ ಸಾಮಾನು ಯಾ ಪುಡಿ	4,200 ಪೌಂಡು
1	ಪೌಂಡ್ ಮೆಣಸಿನಕಾಯಿ	ಈರುಳ್ಳಿ ..	6,000 ,,
12	ಔನ್ಸ್ ಕೊತ್ತುಂಬರೀ ಬೀಜ	ಬೆಳ್ಳುಳ್ಳಿ ..	600 ,,
2	,, ಅರಿಸಿನ	ಹುಣಸೇಹಣ್ಣು ..	6,000 ,,
1	,, ಜೀರಿಗೆ	ಉಪ್ಪು ..	8,400 ,,
6	,, ಮೆಣಸು	ಮೆಣಸು ..	100 ,,
3	,, ಪೋಸ್ತುಕಾಯಿ		
1	,, ಮೆಂಥ್ಯೆ		
1	,, ಸಾಸಿವೆ		
1	,, ಕರಬೇವು ಸೊಪ್ಪು		

3ನೆ ಇತರ ಅವಶ್ಯಕವಾದ ಪದಾರ್ಥಗಳು.

ಮೊಸರು ...	24,000 ಪೌಂಡ.	ರೊಟ್ಟಿ ..	1,000 ಪೌಂಡು.
ಒಳ್ಳೆ ಯಂಣೆ ...	2,400 ,,	ಹಾಲು ...	3,600 ಇಂಪೀರಿಯಲ್ ಪೈಂಟುಗಳು
ತುಪ್ಪ ..	1,200 ,,		
ತರಕಾರಿ ..	72,000 ,,	ಶೀಗೇಕಾಯಿ ..	400 ಪೌಂಡು
ರವೆ ..	200 ,,	ಗೇರುಬೀಜ ..	300 ,,
ಸಕ್ಕರೆ ..	300 ,,	ದೀಪದ ದಂಣೆ ..	350 ,,
ಕಾಫಿ ..	50 ,,	ಪೊರಕೆಗಳು ..	1,500 ಅದದು
ಟೀ ..	10 ,,	ಕೊಬ್ಬರಿ ಎಂಣೆ ..	100 ಪೌಂಡು

ಮೇಲೆ ನಮೂದು ಮಾಡಿರುವ ಜಿನಸಿನ ಮೊತ್ತಗಳು ಇಷ್ಟೇ ತೆಗದುಕೊಳ್ಳುತ್ತೇವೆಂದು ಖಾತರ್ ದೊರೆಯಲಾರದು.

7. ಕಂಟ್ರಾಕ್ಟದಾರನು ಕೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಕೈದಿಗಳಿಗೆ ಕೊಡಲ್ಪಡುವದು. ಹಾಗೆ ಸರಬರಾಯಿ ಆದ ರಾಗಿ ಹಿಟ್ಟಿಗೆ ಸರಿಯಾದ ರಾಗಿ ಇಷ್ಟೆಂದು ಲೆಖ್ಖ ಮಾಡಿ ಆ ರಾಗಿ ದರದ ಮೇಲೆ ಹಣ ಪಾವತಿಯಾದೀತು.

8. ಸೂಪರಿಂಟೆಂಡೆಂಟರವರು ಅತ್ಯಂತ ಕಮ್ಮಿ ದರವನ್ನಾಗಲಿ ಅಥವಾ ಮತ್ತೆ ಯಾವ ದರವನ್ನೇ ಆಗಲಿ ಅಂಗೀಕರಿಸಲು ಬದ್ಧರಾಗಿರುವದಿಲ್ಲ. ಮತ್ತು ಕಾರಣವನ್ನು ಹೇಳದೆ ಬೇಕಾದ ದರಖಾಸ್ತನ್ನು ತಿರಸ್ಕರಿಸಬಹುದು.

9. ಮಂಜೂರಾದ ದರಖಾಸ್ತುದಾರನ ಠೇವಣಿ ಮೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಿದ ತಾರೀಖು ಲಾಗಾಯತು ಒಂದು ವಾರದೊಳಗೆ ಅವರು ಕಂಟ್ರಾಕ್ಟು ಮುಚ್ಚಳಿಕೆ ಬರೆದುಕೊಡುವದಕ್ಕೆ ತಪ್ಪಿದರೆ, ಅಥವಾ ನಗದಾಗಿ ಆಗಲಿ ಗವರ್ನಮೆಂಟ್ ಬಾಂಡ್ ಮೂಲಕವಾಗಿಯಾಗಲಿ ಧಾನ್ಯಕ್ಕೆ 500 ರೂಪಾಯಿ.

ಮಸಾಲೆ ಜಿನಸಿಗೆ .... ರೂ. 100.

ಇತರ ಅವಶ್ಯಕವಾದ ಪದಾರ್ಥಗಳಿಗೆ .... ರೂ. 300.

ಈ ಮೇರೆ ಜಾಮೀನ್ ಕೊಡಲು ತಪ್ಪಿದರೆ ಅಂಥಾ ಠೇವಣಿ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

10. ಕಂಟ್ರಾಕ್ಟದಾರರಿಗೆ ನಗದಾಗ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತು ಪ್ರತಿ ತಿಂಗಳ 1ನೆ ತಾರೀಖು ನಂತರ ಕಂಟ್ರಾಕ್ಟದಾರರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಒಳಗುತ್ತಿಗೆಯಾಗಿ ಕೊಡಬಾರದು.

13. ಕಂಟ್ರಾಕ್ಟದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದೆ ಜುರ್ಮಾನೆ ಹಾಕುವರು ಮತ್ತು ಪದೇ ಪದೇ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದು ಮಾಡಿ ಠೇವಣಾತಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟದಾರನು ಕೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ ತರಕಾರಿಯನ್ನೂ ಮತ್ತು ತೋಟದ ಫಳಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲ್‌ನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಅಂಗೀಕರಿಸಿದ ದರಖಾಸ್ತು ಮೈಸೂರು ದೇಶದ ಜೈಲುಗಳ ಇನ್ಸ್ಪೆಕ್ಟರ್ ಜನರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟುಕೊಂಡಿದಾರೆ.

18. ಕಂಟ್ರಾಕ್ಟದಾರರು ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅಥವಾ ಶಕ್ತಿ ಇಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರಾಕ್ಟದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ವುಂಟಾಗಬಹುದಾದ ನಷ್ಟವನ್ನ ಭರ್ತೀ ಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ನೋಟಿಸ.

ನೋಟಿಸ ಮೂಲಕ ತಿಳಿಯಪಡಿಸುವದೇನಂದರೆ:—1904ನೆ ಇಸವಿ ಫೆಬ್ರುವರಿ ಗುರ್ರೇ ತಾರೀಖು ಲಾಗಾಯತು 1905ನೆ ಇಸವಿ ಜನವರಿ 31ನೆ ತಾರೀಖು ವರಿವಿಗೂ ಜೈಲಿನಲ್ಲಿ ತಯಾರಾಗತಕ್ಕ ಸಾಮಾನುಗಳಿಗೆ ಬೇಕಾದಂಥಾ ಎಲ್ಲಾ ರಖಂ ತುಪಟಗಳೂ ಮತ್ತು ಇತರ ಸಾಮಾನುಗಳನ್ನೂ ಹಾಜರು ಮಾಡಲು ಕಂಟ್ರಾಕ್ಟು ಪಡೆಯಲು ಇಷ್ಟವುಳ್ಳವರಿಂದ ಹಾಜರು ಮಾಡಲ್ಪಡುವ ಸೀಲ್ಡ ಕವರುನಿಸಿ ಇರುವ ದರಖಾಸ್ತುಗಳನ್ನು ಸೆಂಟ್ರಲ್ ಜೈಲ ಸೂಪರಿಂಟೆಂಡೆಂಟರವರು 1904ನೆ ಇಸವಿ ಜನವರಿ 15ನೆ ಶುಕ್ರವಾರ ದಿವಿ 10 ಘಂಟೆ ವರಿವಿಗೂ ಅಂಗೀಕರಿಸುವರು.

2. ನಗದಾಗಿ 250 ರೂಪಾಯಿಗಳೇ ಆಗಲಿ ಅಥವಾ 250 ರೂಪಾಯಿಗಳಿಗೆ ತಕ್ಕ ನಡವಳಿಕೆಯಲ್ಲಿ ಇರುವ ನೋಟುಗಳನ್ನು ಆಗಲಿ ಡಿಪಾಜಿಟ್ ತಾರೀಖು ಹಾಜರು ಮಾಡದೇ ಇರುವಂಥಾ ದರಖಾಸ್ತುಗಳು ಅಂಗೀಕರಿಸಲ್ಪಡಲಾರವು.

3. ದರಖಾಸ್ತುದಾರರಿಂದ ಹಾಜರು ಮಾಡಲ್ಪಡುವ ದರಖಾಸ್ತುಗಳ ಮೇಲ್‌ಭಾಗದಲ್ಲಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ "ಸಾಮಾನುಗಳು ತಯಾರಾಗತಕ್ಕ ಬಗ್ಗೆ ಬೇಕಾಗಿರುವ ಸಾಮಾನುಗಳನ್ನು ಸಪ್ಲೈ ಮಾಡತಕ್ಕ ಬಗ್ಯೆ ಕೊಟ್ಟ ದರಖಾಸ್ತು" ಎಂದು ನಮೂದಿಸಬೇಕು.

4. ಮೇಲ್ಕಂಡ ದಿನದಲ್ಲಿ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರು ತಮ್ಮ ಆಫೀಸಿನಲ್ಲಿ ಹಾಜರಿರುವ ದರಖಾಸ್ತುದಾರ್ರ್ಯಾ ಅವರುಗಳ ಏಜಂಟುಗಳ ರೂಬರೂಬ್ ದರಖಾಸ್ತುಗಳನ್ನು ಒಡದು ನೋಡುವರು.

5. ಯಾವ ದರಖಾಸ್ತನ್ನೇ ಆಗಲಿ ಕಾರಣ ನಮೂದಿಸದೆ ತಿರಸ್ಕರಿಸುವ ಅಧಿಕಾರವನ್ನು ಸೂಪರಿಂಟೆಂಡೆಂಟರವರು ವಹಿಸಿ ಇದ್ದಾರೆ.

6. ಎಲ್ಲಾ ದರಖಾಸ್ತುದಾರರೂ ಇದಕ್ಕೆ ಜಂಟಿಸಿರುವ ಫಾರಮಿನಲ್ಲಿ ಕಂಡಂತೆ ಬಳ್ಳಿ ಸರಕುಗಳನ್ನು ಯಾವ ರೇಟಿನಲ್ಲಿ ಕೊಡುತ್ತಾರೋ ಅವುಗಳನ್ನು ತಮ್ಮ ದರಖಾಸ್ತಿನಲ್ಲಿ ನಮೂದಿಸಬೇಕು.

7. ಕಂಟ್ರಾಕ್ಟು ಯಾರ ಹೆಸರಿಗೆ ಮಂಜೂರಾಗುತ್ತೋ ಅವರಿಂದ ಹಾಜರ್ಮಾಡಲ್ಪಟ್ಟ ಡಿಪಾಜಿಟ ಮೊಬಲಗನ್ನು ವಾಪಸು ಕೊಡುವದಿಲ್ಲ ಮತ್ತು ಸದರೀ ಯವರ ಕಂಟ್ರಾಕ್ಟು ಮಂಜೂರು ಮಾಡಲ್ಪಟ್ಟಿದೆ ಎಂದು ಅವರಿಗೆ ತಿಳಿಸಿದ ಬಂದು ವಾರದೊಳಗಾಗಿ ಕಂಟ್ರಾಕ್ಟು ಬಾಂಡು ಬರದು ಕೊಡದೇ ಹೋದರೂ ಅಥವಾ ಜಾಮೀನ್ ತರೀಕ್ ನಗದು 500 ರೂಪಾಯಿ ಅಥವಾ ಅದಕ್ಕೆ ತಕ್ಕ ಸರಕಾರದ ಬಾಂಡುಗಳನ್ನೇ ಆಗಲಿ ಹಾಜರು ಮಾಡದೇ ಹೋದರೂ ಡಿಟೋ ಡಿಪಾಜಿಟ್ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ.

8. ಯಾವ ಮೊಬಲಗೂ ಅಡ್ವಾನ್ಸ ತರೀಕ್ ಕಂಟ್ರಾಕ್ಟುದಾರನಿಗೆ ಪ್ರತಿ ತಿಂಗಳಲ್ಲೂ ದೊರೆಯಲಾರದು. ಪ್ರತಿ ತಿಂಗಳಲ್ಲೂ ಕಂಟ್ರಾಕ್ಟುದಾರನಿಂದ ಹಾಜರು ಮಾಡಲ್ಪಟ್ಟ ಸಾಮಾನುಗಳ ಕ್ರಯವನ್ನು ಸೂಪರಿಂಟೆಂಡೆಂಟರವರು ಗುರ್ರೇ ತಾರೀಖು ಕಳದ ನಂತರ ಸಾಧ್ಯವಾದ ಮಟ್ಟಿಗೆ ಜಾಗ್ರತೆಯಾಗಿ ಕೊಡುವರು.

9. ಕಂಟ್ರಾಕ್ಟನ್ನು ಶಿಕಮಿ ಕಂಟ್ರಾಕ್ಟಾಗಿ ಕೊಡಕೂಡದು.

10. ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಷರತ್ತು ಪೂರೆ ನಡಿಸುದೇ ತಪ್ಪಿದರೂ ಅಥವಾ ಕಮ್ಮಿ ರಖಂ ಸಾಮಾನುಗಳನ್ನು ಹಾಜರು ಮಾಡಿದರೂ, ಜೈಲ್ ಸೂಪರಿಂಟೆಂಡೆಂಟರವರು ಮುನಾಸಬ್ ಮೇರೆ 30 ರೂಪಾಯಿಗಳ ವರಿಗೂ ಜುರ್ಮಾನೇ ವಿಧಿಸಬಹುದು. ಹೀಗೆ ಪದೇಪದೇ ಮಾಡಿದರೆ ಕಂಟ್ರಾಕ್ಟನ್ನು ವಜಾ ಮಾಡಿ ಜಾಮೀನ್ ತರೀಕ್ ಕೊಟ್ಟ ಮೊಬಲಗನ್ನು ಸರಕಾರಕ್ಕೆ ತೆಗದುಕೊಳ್ಳಲ್ಪಡುವದು.

11. ಕಂಟ್ರಾಕ್ಟುದಾರನು ಷರತ್ತಿಗೆ ವಿರೋಧವಾಗಿ ನಡದುಕೊಂಡರೆ ಆ ವಿಷಯದಲ್ಲಿ ಜೈಲ್ ಸೂಪರಿಂಟೆಂಡೆಂಟರು ಮಾಡುವ ಹುಕುಮೇ ಆಖೈರು ಹುಕುಂ ಆಗಿ ಇಧೆ.

12. ಕಂಟ್ರಾಕ್ಟುದಾರನು ಅಪೇಕ್ಷಿಸಿದ ಪಕ್ಷದಲ್ಲಿ ನಾಶಪಡದೇ ಇರುವಂಥಾ ಪದಾರ್ಥಗಳನ್ನ ಇಟ್ಟುಕೊಳ್ಳಲು ಬಂದು ಕೊಠಡಿ ಕೊಡಲ್ಪಡಬಹುದು. ಅಲ್ಲಿ ಸಾಮಾನು ಇಟ್ಟುಕೊಂಡು ಕೇಳಿದವೇಳೆ ಕೊಡಬಹುದು.

13. ಇನ್ನೂ ಇತರ ಸಂಗತಿಗಳು ವಿಚಾರಿಸಬೇಕಾಗಿದ್ದರೆ ಸೂಪರಿಂಟೆಂಡೆಂಟರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

14. ಇದಕ್ಕೆ ಜಂಟಿಸಿರುವ ಪಟ್ಟಿಯಲ್ಲಿ ಕಂಡ * ಮಾರ್ಕು ಮಾಡಿರುವ ಸಾಮಾನುಗಳ ನಮೂನೇ ಸಹ ದರಖಾಸ್ತು ಜೊತೆಯಲ್ಲಿ ಹಾಜರು ಮಾಡಬೇಕು.

15. ಮೇಲೆ ನಮೂದಿಸಿರುವ ಷರತ್ತುಗಳಿಗೆ ಬಳಪಟ್ಟು ಮತ್ತು 100 ರೂಪಾಯಿ ಡಿಪಾಜಿಟ್ ಕಟ್ಟಿದರೆ ಮೇಲ್ಕಂಡ ತಾರೀಖಿನಲ್ಲಿ ತುಪಟಗಳು ಹಾಜರು ಯಾ ಸಪ್ಲೈ ಮಾಡತಕ್ಕ ಬಗ್ಯೆ ಕೊಡುವ ಅಲಾಹಿದಾ ದರಖಾಸ್ತುಗಳನ್ನು ಅಂಗೀಕರಿಸಲ್ಪಡುವದು.

16. 25 ಪಾಂಡು ತೂಕವುಳ್ಳ ಮಣದ ಮೇಲೆ ದರ ನಮೂದಿಸಬೇಕು.

17. ಈ ಅಂಗೀಕರಿಸಿದ ದರಖಾಸ್ತು ಇನ್ಸ್‌ಪೆಕ್ಟರ ಜನರಲ್ ಆಫ್ ಪ್ರಿಜನ್ಸ ಯವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
ಸ್ಟ್ರೆಕ್ಟು ಗ್ಲೂ, ಯಾನೆ ವಜ್ರ 25 ಪವನಿನ ಮಣಕ್ಕೆ..	200
ಅಳಲೆಕಾಯಿ ಡಿಟೋ ..	275
*ಚಾಳು (ಬಿಲ್ಲೆಯಾಗಿ) ಡಿಟೋ .	1,200
ಅಡಿಕೆ ಡಿಟೋ ...	50
ಕಾಂಚು ಡಿಟೋ ...	50
ಹುಣಸೇಬೀಜ (ರೂಪಾಯಿಗೆ ಇಷ್ಟು ಸೇರೆಂದು)	300 ಸೇರು
ಹರಿದೆ, 25 ಪವನಿನ ಮಣಕ್ಕೆ	200ಪವನು
ತಾಂಬ್ರದ ತಗಡು ನಾನಾತರ ದಪ್ಪದ್ದು ..	600
ಹಿತ್ತಾಳೇ ತಗಡು ಡಿಟೋ ..	50
ಪಟಿಕಾರವು 25 ಪವನಿನ ಮಣಕ್ಕೆ	250
*ಅರಗು ಪೆಪ್ಪರ ಅಥವಾ ರಂಗೂನದು ಕಡ್ಡಿ ಇಲ್ಲದ್ದು	700 ಪವನು
*ಕೆಂಪುಮರ ಸಣ್ಣಗೆ ಸೀಳಿದ್ದು	200ಪವನು
ಬಿಳೀ ಸೀಮೆ ಸುಣ್ಣ ...	20 ಪವನು
*ಅವಲ್ ನೀಲಿ ಅವಲ್, ದುಯ್ಯಂ ಮತ್ತು ಸಿಯ್ಯಂ ರಖಂ	150 ಪವನು
ಅವಲ್ ಟೂರು	6 ಪೀಪಾಯಿ
ಮರದೆಣ್ಣೆ	3 ಮಣ
ಗೋಪಿ	200 ಪವನು
ಅವಲ್ ಕೊಬರಿ ಎಣ್ಣೆ	56 ಪವನು
ಅವಲ್ ಅಚ್ಚೆಳ್ಳೆಣ್ಣೆ	50 ಪವನು
ಅವಲ್ ದೀಪದ ಎಣ್ಣೆ	75 ಪವನು
ಅವಲ ಬಿಳೀ ಚಿತ್ತ 1ನೆ ಕ್ಲಾಸು	350 ಪವನು
ತೊಳದ ದಪ್ಪ ಮತ್ತು ಅಗಲವುಳ್ಳ ಮಲ್‌ಮಲ್ ..	30 ಗಜ
ಅಗಲವಾದ ಮತ್ತು ದಪ್ಪವಾದ ಟರಕಿ ಕೆಂಪು ಬಟ್ಟೆ	30 ಗಜ
ಒಂದು ಅಡಿ ಅಗಲವುಳ್ಳ ಟೆಂಟುಗನಿ (ಚೀಲಕ್ಕೆ) ಗಜಕ್ಕೆ	100 ಗಜ
ನೇವಿ ಕ್ಯಾನವಸ್ ನಂ. 1 ಗಜಕ್ಕೆ ..	30 ಗಜ
ಡಿಟೋ ನಂ. 2 ಡಿಟೋ ..	5 ಗಜ
ಡಿಟೋ ನಂ. 3 ಡಿಟೋ ...	5 ಗಜ
*ಬಾರ್ ಐರನು ಯಾನೆ ಕಬ್ಬಿಣ 25 ಪವನು ಮಣಕ್ಕೆ	200 ಪವನು
ಹೂಪು ಐರನು ಡಿಟೋ ...	200ಪವನು
ಅರ ಒಂದಕ್ಕೆ .	50
ಹಳೇ ಹಿತ್ತಾಳೆ 25 ಪವನು ಮಣಕ್ಕೆ	200ಪವನು
*ಕತ್ತರಿಸಿದ ಪಾಂಡ್ಯದ ಬೀತಪಟ 25ಪವನು ಮಣಕ್ಕೆ 1ನೆ ರಖಂ	500ಪವನು
* ಡಿಟೋ 2ನೆ ರಖಂ	
*1ನೆ ರಖಂ ಕತ್ತರಿಸಿದ ಚಿತ್ರದುರ್ಗದ ತುಪಟ ..	1000ಪವನು
*ಕರಿಮರಿತುಪಟ ಚಿತ್ರದುರ್ಗದ್ದು (ಬ್ಲಾಕು ಕೈವಿಸ್ತ್ರಾ)	2500ಪವನು

ಜಿನಸಿ.	ಈ ವರುಷಕ್ಕೆ ಬೇಕಾಗಿರುವ ಸುಮಾರು ನಿಬಂಧನೆ.
*ಚುನಾಮು ಯಾನೆ ಸ್ಕ್ರೆವ್ಡು ಬ್ಲಾಕು ...	5000ಪವನು
ಡಿಟೋ ಬಿಳೀ ತುಪಟ ...	3000ಪವನು
*ಡಿಟೋ ಮರಿ ತುಪಟ ...	1000ಪವನು
ಡಿಟೋ ಗ್ರೇಯಾನೆ ಬಿಳೀ ತುಪಟ ...	3000ಪವನು
ಕಾರ್ಟ್ ರೀಲ್ ಯಾವತ್ತರಹದ್ದೇ ಆಗಲಿ, ನಂ. 20–30 · 40 ಮತ್ತು ಡರ್ಜ ಒಂದಕ್ಕೆ ...	252
ಹತ್ತಿ ಮಣ ಒಂದಕ್ಕೆ 25 ಪವನು ...	250ಪವನು
ಜೇನುಮೇಣ (ಹಳದಿ) ...	30 ಪವನು
ಹುಣಸೇಹಣ್ಣು (ಕೊಳೆ ಕಲ್ಲು ವಗ್ಯೆರೆ ಇಲ್ಲದ್ದು) 25 ಪವನಿನ ಮಣಕ್ಕೆ	2,000ಪವನು
*ಹಳದಿ ಹೂ ಡಿಟೋ ...	1500ಪವನು
ಬಿಳೀ ಗೋಂದು (ಕೊಳೆ ಇಲ್ಲದ್ದು) ಡಿಟೋ ...	25ಪವನು
ದೋಬಿಸ್ಯಾಂಡು ಯಾನೆ ಮರಳು ಡಿಟೋ ..	200 ಮಣ
ಬೆಸಿಯತ್ತಕ್ಕ ಸೀಸ ಡಿಟೋ ...	75ಪವನು
ಟಂಕವು (ಬಿಳಿಗಾರ) ಡಿಟೋ .	75ಪವನು
ಸಾಲಿಮೊನಿಯಾಕ್ ಡಿಟೋ ...	75ಪವನು
ಆಷಘಾಟಿ ಡಿಟೋ ...	10 ಮಣ
ಭತ್ತದ ಹೊಟ್ಟು ಡಿಟೋ .	100 ಮಣ
ನೀಲೀಬೀಜ ಡಿಟೋ .	600 ಪವನು
ಅವಲ್ ಇದ್ದಲು (ಚೀಲಗಳಲ್ಲಿ) ಚೀಲಕ್ಕೆ ದರ ...	150 ಚೀಲ
ಸೆಣಬಿನದಾರ ಒಂದು ಡರ್ಜ ಉಂಡೆಗೆ	100 ಉಂಡೆ
ತೆಂಗಿನ ನಾರು (ಅವಲ್ ಕಳ್ಳಿಕೋಟೇದು) 25 ಪವನಿನ ಮಣಕ್ಕೆ	10000 ಪ||
ಸವುದೆ (ಸಣ್ಣಗೆ ಸೀಳಿದ್ದು) ...	1200 ಮಣ
ಪುಂಡೀನಾರು (ಬಿಳೀದು) 25 ಪವನು ಮಣಕ್ಕೆ	800 ಪವನು
*ತೂತು ಇಲ್ಲದ ಅವಲ್ ಕೋಣನ ಚಕ್ಕಳ ..	10
ಡಿಟೋ ಹದಮಾಡಿದ ಎತ್ತಿನ ಚಕ್ಕಳ ..	10
ಡಿಟೋ ಡಿಟೋ ಸಾಧಾರಣದ್ದು	5
ದೊಡ್ಡ ಕುರಿಚಕ್ಕಳ ಡಿಟೋ ...	10
ಬೇಯಿಸಿದ ಅಗಸೇಬೀಜದ ಎಣ್ಣೆ $2\frac{1}{2}$ ಸೇರಿನ ಸೀಸೆಕ್ಕೆ	50 ಸೀಸೆ
ಟರ್ಪೆಂಟೈನ್ ಎಣ್ಣೆ ಡಿಟೋ ..	30 ಸೀಸೆ
ಗೋಪಾಲ್ ವಾರ್ನಿಷ್ ಡಿಟೋ ..	10 ಸೀಸೆ
ಬ್ಲಾಕ್ ಜಪಾನ್ ಡಿಟೋ ..	10 ಸೀಸೆ
ಅವಲ ಫ್ರೆಂಚ್ ಪಾಲೀಷ್ ಸೀಸೆಕ್ಕೆ ..	50 ಸೀಸೆ
ಬಣಗಿದ ಕರ್ಪೂರ ಪವನಿಗೆ ...	20ಪವನು
ಷೀಟು ಐರನು ಎಂಬ ಕಬ್ಬಿಣ 25ಪವನು ಮಣಕ್ಕೆ	200ಪವನು
ಸತ್ತು 25 ಪವನು ಮಣಕ್ಕೆ ...	200ಪವನು
*ಹಾಸಿಗ್ಗೆ ಗೌಸ್ ಹಾಕುವ ಬಟ್ಟೆ ಗಜಕ್ಕೆ ..	30 ಗಜ

ತುಪಟವನ್ನು ಕೆಲಸಕ್ಕೆ ಉಪಯೋಗಿಸುವದಕ್ಕೆ ಮುಂಚೆ ಅದು ಹೊಡೆದು ಕ್ಲೀನುಮಾಡಿ ಮತ್ತು ತೊಳದು ಉಪಯೋಗಿಸಲ್ಪಡುತ್ತೆ. ತೇಗದಪುರ, ಹೊನ್ನೇಪುರ, ಕರೀಪುರ ಮತ್ತು "ರೋಸುವುಡ್ಡು" ಮರ ಇವುಗಳ ತೊಲೆಗಳನ್ನು ಅಡಿ ಲೆಖ್ಖದ ಮೇಲೆ ತೆಗೆದುಕೊಳ್ಳುತ್ತೆ.

ಇನ್ನೂ ಇತರ ಚಿಲ್ರೇ ಸರಕುಗಳನ್ನು ಕಂಟ್ರಾಕ್ಟುದಾರನು ಮಾರ್ಕಟ್ಟಿನಲ್ಲಿ ಮಾರುವ ದರದ ಮೇರ ಸಪ್ಲೈ ಮಾಡತಕ್ಕದ್ದು.

ಜಿ. ಹ್ಯೂಂ ರೈಟ್,
ಸೂಪರಿಂಟೆಂಡೆಂಟ್ ಸೆಂಟ್ರಲ್ ಜೈಲ್, ಬೆಂಗಳೂರು.

ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ—ಬೆಂಗಳೂರ್.

ನೋಟಿಸ್, ತಾರೀಖು 8ನೆ ಡಿಸೆಂಬರ 1903.

ಈ ಕೆಳಗಡೆ ನಮೂದಿಸಿರುವ ಪುಸ್ತಕಗಳು ಡಿಪೋವಿನಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ ನಾಲ್ಕು ಆಣೆ :—

1901ನೆ ಇಸವಿ ಖಾನೇಷಮಾರಿ ಲೆಖ್ಖದ ಬಾಬತು ಜಾತಿವಾರ್ ತೋರಿಸುವ ತಖ್ತೆಯುಳ್ಳ ಪುಸ್ತಕ.

ಎಸ್. ಅಬ್ದುಲ್ ಹೈ, ಕ್ಯೂರೇಟರ್.

ಇದರಿಂದ ಸಮಸ್ತ ಜನರಿಗೂ,—

ಹೊನ್ನಾಳಿ ತಾಲ್ಲೂಕು ನ್ಯಾಮತಿ ವಾಸಸ್ಥರಾಗಿ ಮೃತಪಟ್ಟ ನಾಡಿಗ ಸುಬ್ಬಣ್ಣನವರ ದತ್ತು ಮಗ ದಾಸಪ್ಪ ಮೈನರ್, ಈತನ ಕ್ಷೇಮ ಚಿಂತಕ ಹಾಂಗು ಜನಕತಂದೆ ಚಿಲ್ಲೂರು ನಾಡಿಗ ಕ್ರಿಷ್ಣಪ್ಪನು ತಿಳಿಯಪಡಿಸುವದೇನಂದರೆ :—

ಮೈನರ್ ದಾಸಪ್ಪನ ದತ್ತು ತಾಯಿ ಯಮುನವ್ವ ಕೋಂ ಸುಬ್ಬಣ್ಣ ಈಕೆಗೆ ನಮ್ಮ ಕೆಲವು ದ್ವೇಷಿಗಳೂ ಬೋಧಿಸಿ ನಿಷ್ಕಾರಣವಾಗಿ ಪ್ರತಿ ಫಲವಿಲ್ಲದೆ ಮೈನರ್ ದಾಸಪ್ಪನ ಬಾಬತು ಕೆಲವು ಸ್ಥಿರಸ್ವೋತ್ತುಗಳನ್ನ ಅಡವು ಮಾಡಿಸಿಕೊಂಡು ಪತ್ರಗಳೂ ಬರಸಿಕೊಂಡಿರುವಂತೆಯೂ ಇನ್ನೂ ಕೆಲವರು ಖರೀದಿ ಮಾಡಿಕೊಳ್ಳುವದರಲ್ಲಿರುವದಾಗಿಯೂ ಸಮಾಚಾರ ಕೇಳುತ್ತೇನೆ. ಹಾಂಗೆ ಯಾರಾದರೂ ಮೈನರನಿಗೆ ವಿರೋಧವಾಗಿ ಅವನ ಬಾಬತು ಯಾವ ಸ್ಥಿರ ಸೊತ್ತುಗಳನ್ನಾಗಲಿ ಯಾವ ಮೂಲಕವಾಗಿಯಾದರೂ ಸದರಿ ಯಮುನವ್ವನಿಂದಾ ಹೊಂದಕೂಡದು, ಆಕೆ ಹಕ್ಕುದಾರಳಲ್ಲಾ ಆಕೆಗೆ ಹಾಂಗೆ ಮಾಡಲು ಹಕ್ಕಿಲ್ಲಾ ಪಕ್ಷ ಹಾಂಗೇನಾದರೂ ಯಾರಾದರೂ ಯಾವವಿಧವಾಗಿ ಪತ್ರ ಬರಸಿಕೊಂಡಿದ್ರೆ ಅದು ಮಂಜೂರಾಗತಕ್ಕದ್ದಿಲ್ಲ ಎಂಬುವದನ್ನ ಈ ಮೂಲಕ ಕೃತಪಡಿಸಿ ಇಧೇನೆ.

ಕ್ರಿಷ್ಣಪ್ಪ ಚಿಲ್ಲೂರು ನಾಡಿಗ.

ಮೈಸೂರ ಗೆಜೆಟ ಚಂದಾದಾರು ವಗ್ಯೆರೆ.

ಮೈಸೂರ ಗೆಜೆಟ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8

ಚಷ ಮಾಹೇ ಯಾ ಕ್ವಾರ್ಟರಿಗೆ — ದಾಮಾಷಾಯಿ ಪ್ರಕಾರ ದರಗಳು.

	ರೂ.	ಆ.
ಚಾಲತಿ ವರುಷದ ಗೆಜೆಟ ಕಾಪಿ 1ಕ್ಕೆ ರೆಗ್ಯುಲೇಷರ್ಸ ಯಾ ಆಕ್ಟುಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಾರ್ಕಂ 155ನೆ ನಂಬರ ಉಳ್ಳ ಗವರ್ನಮೆಂಟ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಬಂದು ಸರಟಫಿಕೇಟನ್ನ ಪಡೆದು ಹಾಜರ್‍ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮಾರ್ಕಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರಡರ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ ಕೋರ್ಟನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟು ಅನುಸರಿಸಿ ಸರ್ಟಿಫಿಕೇಟ ಬಗ್ಯೆ ನೋಟಸಗಳು :—

		ರೂ.	ಆ.
ಮೊದಲನೇ ದಫಾ ಛಾಪಿಸಿ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ	..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	..	1	4

ಸಿವಿಲ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷರ್ನ ಅನುಸರಿಸಿ ದಿವಾಳಿ ಅಪ್ಲಿಕೇಷನಗಳ ಬಗ್ಯೆ ನೋಟಸಗಳಿಗೆ:—

ಮೊದಲನೇ ಸಲಕ್ಕೆ	..	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	..	2	0

ಸಿವಿಲ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗೆರ್ ಚಾರ್ಜ್ ಪ್ರಕಟಸಲ್ಪಡುತ್ತವೆ.

ಡ್ಯೂಪ್ಲಿಕೇಟ ಕಾಪೀ ಪಟ್ಟೆ ವಗ್ಯೆರ ಕೊಡುವ ಬಗ್ಯೆ ರೆವಿನ್ಯೂ ಆಫಿಸರಗಳು ಕೊಡುವ ನೋಟಸಗಳಿಗೆ:—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10	0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5	0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ ಮಾಡಲ್ಪಡುತ್ತೆ:—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0	8
ಎರಡನೇ ದಫಾ ಡಿಟೋ	ಡಿಟೋ		0	6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		..	0	4

ಷರಾ.—ಚಂದಾ ವಗ್ಯೆರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ ಆರಡರ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೇ ಚಾರ್ಜಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗಜೆಟ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರೆಟರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ ತಲಪಲಿಲ್ಲವೆಂಬ ಫಿರ್ಯಾದಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾಹ್ನ 12 ಘಂಟೆ ಒಳಗಾಗಿ ಕಂಪೈಲರ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟನಲ್ಲಿ ಛಾಪಿಸಲ್ಪಡುತ್ತೆಂಬ ಖಾತರ್ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ.

611

ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಫ್ರಾಯಿಷ್ ಆದ್ದು. [ನಂ. 1.

ಬೆಂಗಳೂರು, ಗುರುವಾರ, ಜನವರಿ ತಾ|| 8, ಸರ್ 1903.

IVನೇ ಭಾಗ.

ಶ್ರೀಮನ್ ಮೈಸೂರ್ ಮಹಾರಾಜರವರ ಸರ್ಕಾರದವರು ಮಾಡೋಣಾದ ನಡವಳಿಕೆ.

ರೆವಿನ್ಯು,—ತಾರೀಖು 17ನೇ ಅಕ್ಟೋಬರ 1902ನೇ ಇಸವಿ.

ಒಂದು ಅಥವ ಹೆಚ್ಚು ತಾಲ್ಲೂಕುಗಳ ಮೇಲಿನ ರೆವಿನ್ಯು ಆಡಳಿತದ ಚಾರ್ಜನ್ನು ಕೊಡಲ್ಪಟ್ಟಿರುವ ಅಸಿಸ್ಟೆಂಟ್ ಕಮಿಷನರು
ಗಳು ಮಾಡಿದ ಆರ್ಡರ್‌ಗಳ ಮೇಲೆ ಡೆಪ್ಯುಟಿ ಕಮಿಷನರುಗಳಿಗೆ ಇರುವ ಅಪೀಲ್ ಅಧಿಕಾರವನ್ನು ಕುರಿತು ಶಿವಮೊಗ್ಗ ಡಿಸ್ಟ್ರಿಕ್ಟ್
ಡೆಪ್ಯುಟಿ ಕಮಿಷನರು ಬರೆಸಿದ 1902ನೇ ಇಸವಿ ಸೆಪಟಂಬರ 19ನೇ ಮುಕ್ಕಾಂ ನಂಬರ 264—200ನೇ ಲೆಟರಂನ ಓದಲಾಯಿತು.

ಸದರ್ಹ ಲೆಟರಿನಮೇಲೆ ಆರ್ಡರ್.

ನಂಬರ ರೆ. 1621—9. ತಾರೀಖು 17ನೇ ಅಕ್ಟೋಬರ 1902ನೇ ಇಸವಿ. ದರಜಾಗಾ ಬೆಂಗಳೂರು.

ರೆವಿನ್ಯು ಕಮಿಷನರಿಗೆ ಅಧಿಕಾರಗಳನ್ನು ಕೊಟ್ಟು ಫ್ರಾಯಿಷ್ ಮಾಡಿರುವ ಇಸ್ತಿಹಾರ್‌ನಾಮೆಯು, ಇತರ ರೆವಿನ್ಯು ಆಫೀಸರುಗ
ಳು ಅಂದರೆ ಡೆಪ್ಯುಟಿ ಕಮಿಷನರುಗಳು ಮತ್ತು ಅಸಿಸ್ಟೆಂಟ್ ಕಮಿಷನರುಗಳು ಇವರುಗಳ ಪರಸ್ಪರ ಅಧಿಕಾರ ಮತ್ತು ಸಂಬಂಧಗ
ಳನ್ನು ಕುರಿತು ರೆವಿನ್ಯು ಕೋಡಿನಲ್ಲಿ ಆಗಲಿ ರೆವಿನ್ಯು ರೂಲ್ಸುಗಳಲ್ಲಿ ಆಗಲಿ ಹೇಳಿರುವ ನಿಬಂಧನೆಗಳನ್ನು ಬದಲಾಯಿಸುವ ಅಥವ ರದ್ದು
ಮಾಡುವ ಫಲಿತಾಂಶವನ್ನುಂಟುಗಿರುವದಕ್ಕಾಗುವದಿಲ್ಲವು. ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಒಬ್ಬ ಅಸಿಸ್ಟೆಂಟ್ ಕಮಿಷನರನ ಮೇ
ಲಿನ ದರ್ಜೆಯ ಅಧಿಕಾರಿಯಾಗಿರತಕ್ಕದ್ದೆಂದು ಲ್ಯಾಂಡ್ ರೆವಿನ್ಯು ರೂಲ್ಸ್ 2ನೇ ರೂಲಿನಲ್ಲಿ ವಿಧಿಸಿರುತ್ತೆ. ಮತ್ತು ಲ್ಯಾಂಡ್ ರೆವಿನ್ಯು
ಕೋಡಿನಲ್ಲಿ ಸಬ್ ಡಿವಿಜನ್ ಆಫೀಸರುಗಳಿಗೂ ಇತರ ಅಸಿಸ್ಟೆಂಟ್ ಕಮಿಷನರುಗಳಿಗೂ ಪ್ರಭೇದವನ್ನು ಹೇಳಿರುವದಿಲ್ಲವಾದ್ದರಿಂದ, ಸಬ್
ಡಿವಿಜನ್ ಎಂಬದಾಗಿ ವಾಡಿಕೆಯಾಗಿ ಹೇಳುವವುಗಳ ಚಾರ್ಜನ್ನು ಉಂಟಾಗಿಯಾದರೂ ಇರಲಿ ಅಥವ ಒಂದು ಡಿಸ್ಟ್ರಿಕ್ಟ್ ಪೈಕಿ ನಮೂ
ದಾದ ಕೆಲವು ತಾಲ್ಲೂಕುಗಳ ಚಾರ್ಜನ್ನು ಉಂಟಾಗಿಯಾದರೂ ಇರಲಿ, ಅಂತು, ಎಲ್ಲಾ ಅಸಿಸ್ಟೆಂಟ್ ಕಮಿಷನರುಗಳ ಮೇಲಿನ ಅಪೀಲ್
ಅಧಿಕಾರಿಯಾಗಿ ಡೆಪ್ಯುಟಿ ಕಮಿಷನರ್ ಯಥಾಪ್ರಕಾರ ಇರುತ್ತಾರೆ.

2. ತಮಗೆ ಇರುವ ಅಧಿಕಾರಗಳ ಪೈಕಿ ಯಾವದನ್ನಾದರೂ ರೆವಿನ್ಯು ಕಮಿಷನರಿಗೆ ಕೊಡುವದಕ್ಕೆ ಮಾತ್ರ ರೆವಿನ್ಯು ಕೋಡಿ
4ನೇ ಸೆಕ್ಷನ್ 2ನೇ ಪ್ಯಾರಾ ಪ್ರಕಾರ ಗೌರ್ನಮೆಂಟಿನವರಿಗೆ ಅಧಿಕಾರವಿರುತ್ತೆ ವಿನಹ, ಡೆಪ್ಯುಟಿ ಕಮಿಷನರುಗಳಿಗೆ ಕೊಟ್ಟಿರುವ ಅಧಿ
ಕಾರಗಳನ್ನು ಆ ಪ್ರಕಾರ ಕೊಡುವದಕ್ಕೆ ಅವಕಾಶವಿರುವದಿಲ್ಲ. ಆದ್ದರಿಂದ, ರೆವಿನ್ಯು ಕೋಡು 1ನೇ ಷೆಡ್ಯೂಲ್ 1ನೇ ಕ್ಲಾಜಿನಂತೆ
ಯ ಇರುವ ಸದರಿ ಇಸ್ತಿಹಾರ್‌ನಾಮೆ (ನಂಬರ 37 ತಾರೀಖು 8ನೇ ಆಗಸ್ಟು, 1902) ಯ 1ನೇ ಕ್ಲಾಜ್, 8ನೇ ಸೆಕ್ಷನ್ 2ನೇ
ಪ್ಯಾರಾ ಪ್ರಕಾರ ಅಸಿಸ್ಟೆಂಟ್ ಕಮಿಷನರುಗಳ ಮೇಲಿನ ಅಪೀಲ್ ಅಧಿಕಾರಿಗಳು ಗೌರ್ನಮೆಂಟಿನವರಾಗಿರುತ್ತಾರಂತು ಸರ್ಕಾರದವರು
ಕಂತೋಕ್ತವಾಗಿ ಹೇಳಬಹುದಾದ ಸಂಭವಗಳಿಗೆ ಮಾತ್ರ ಲಗಾವಾದ್ದೆಂದು ಇಟ್ಟುಕೊಳ್ಳಬೇಕಾದ್ದು. ಆ ಪ್ರಕಾರ ಸರ್ಕಾರದವರು
ಇದುವರೆವಿಗೂ ಅಂತ ಯಾವ ಕಂತೋಕ್ತವಾದ ಪ್ರಕಟನೆಯನ್ನು ಮಾಡಿರುವದಿಲ್ಲವಾದುದರಿಂದ, ಮೇಲೆ ಹೇಳಿದ ಇಸ್ತಿಹಾರ್‌ನಾಮೆ
ಯ ಕ್ಲಾಜ್ ಪ್ರಕೃತದಲ್ಲಿ ಆಚರಣೆಗೋಸ್ಕರ ಕಾರ್ಯಕಾರಿಯಾಗಿರುವದಿಲ್ಲ ಮತ್ತು ಅಂತ ಕಂತೋಕ್ತವಾದ ಪ್ರಕಟನೆಯನ್ನು ಸರ್ಕಾ
ರದವರು ಮಾಡುವ ವರಿವಿಗೂ ಮೇಲೆ ಹೇಳಿದಂತೆಯೆ ಸದರಿ ಕ್ಲಾಜ್ ಇದ್ದುಕೊಂಡಿರುತ್ತೆಂಬದಾಗಿ ತಿಳಿದುಕೊಳ್ಳತಕ್ಕದ್ದು. ಮೇಲೆ
ಹೇಳಿದ ಸಂದರ್ಭಗಳಿಂದ, ಅಸಿಸ್ಟೆಂಟ್ ಕಮಿಷನರುಗಳು ಮಾಡುವ ಅಪ್ಪಣೆಗಳ ಮತ್ತು ತೀರ್ಪುಗಳ ಮೇಲಿನ ಎಲ್ಲ ಅಪೀಲ್‌ಗಳು
ಇದುವರೆವಿಗೂ ಜಾರೀಲಿರುವಂತೆ ಆಯಾಯ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಲ್ಲಿಯೇ ದಾಖಲಾಗತಕ್ಕದ್ದಿದೆ.

ಹೆಚ್. ವಿ. ನಂಜುಂಡಯ್ಯ,
ಗೌರ್ನಮೆಂಟಿಗೆ ಸೆಕ್ರೆಟರಿ,
ಜನರಲ್ ಮತ್ತು ರೆವಿನ್ಯು ಇಲಾಖೆಗಳಲ್ಲಿ.

1. ಮೈಸೂರ್ ಸೀಮೆಯಲ್ಲಿನ ರೆವಿನ್ಯು ಕಮಿಷನರಿಗೆ,
2. ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ,
3. ಇತರ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರಿಗೆ,

Mysore Government Central Press, Bangalore—1902.

ಮೈಸೂರ ಗೆಜೆಟ್.

ನಂ. XXXVIII.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 2.

ಬೆಂಗಳೂರು, ಗುರುವಾರ, ಜನವರಿ ತಾ॥ 15, ಸನ್ 1903.

IVನೇ ಭಾಗ.

ಶ್ರೀಮನ್ ಮೈಸೂರ್ ಮಹಾರಾಜರವರ ಸರ್ಕಾರದವರು ಮಾಡೋಣಾದ ನಡವಳಿಕೆ.

ರೆವಿನ್ಯು,—ತಾರೀಖು 17ನೇ ಅಕ್ಟೋಬರ 1902ನೇ ಇಸವಿ.

ಒಂದು ಅಥವ ಹೆಚ್ಚು ತಾಲ್ಲೂಕುಗಳ ಮೇಲಿನ ರೆವಿನ್ಯು ಆಡಳಿತದ ಚಾರ್ಜನ್ನ ಕೊಡಲ್ಪಟ್ಟಿರುವ ಅಸಿಸ್ಟೆಂಟ್ ಕಮಿಷನರುಗಳು ಮಾಡಿದ ಆರ್ಡರ್‌ಗಳ ಮೇಲೆ ಡೆಪ್ಯುಟಿ ಕಮಿಷನರುಗಳಿಗೆ ಇರುವ ಅಪೀಲ್ ಅಧಿಕಾರವನ್ನು ಕುರಿತು ಶಿವಮೊಗ್ಗ ಡಿಸ್ಟ್ರಿಕ್ಟ್ ಕಮಿಷನರು ಬರೆಸಿದ 1902ನೇ ಇಸವಿ ಸೆಪ್ಟಂಬರ 19ನೇ ಮಕ್ಕಾಂ ನಂಬರ 264—200ನೇ ಲೆಟರಂನ ಓದಲಾಯಿತು.

ಸದರ್ಹ ಲೆಟರಿನಮೇಲೆ ಆರ್ಡರ್.

ನಂಬರ ರೆ. 1621—9. ತಾರೀಖು 17ನೇ ಅಕ್ಟೋಬರ 1902ನೇ ಇಸವಿ. ದರಜಾಗಾ ಬೆಂಗಳೂರು.

ರೆವಿನ್ಯು ಕಮಿಷನರಿಗೆ ಅಧಿಕಾರಗಳನ್ನ ಕೊಟ್ಟು ಪ್ರಾಯಿಷ್ ಮಾಡಿರುವ ಇಸ್ತಿಹಾರ್‌ನಾಮೆಯು, ಇತರ ರೆವಿನ್ಯು ಆಫೀಸರುಗಳು ಅಂದರೆ ಡೆಪ್ಯುಟಿ ಕಮಿಷನರುಗಳು ಮತ್ತು ಅಸಿಸ್ಟೆಂಟ್ ಕಮಿಷನರುಗಳು ಇವರುಗಳ ಪರಸ್ಪರ ಅಧಿಕಾರ ಮತ್ತು ಸಂಬಂಧಗಳನ್ನ ಕುರಿತು ರೆವಿನ್ಯು ಕೋಡಿನಲ್ಲಿ ಆಗಲಿ ರೆವಿನ್ಯು ರೂಲ್ಸುಗಳಲ್ಲಿ ಆಗಲಿ ಹೇಳಿರುವ ನಿಬಂಧನೆಗಳನ್ನ ಬದಲಾಯಿಸುವ ಅಥವ ರದ್ದು ಮಾಡುವ ಫಲಿತಾಂಶವನ್ನುಂಟುಮಾಡುವದಕ್ಕಾಗುವದಿಲ್ಲವು. ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಒಬ್ಬ ಅಸಿಸ್ಟೆಂಟ್ ಕಮಿಷನರನ ಮೇಲಿನ ದರ್ಜೆಯ ಅಧಿಕಾರಿಯಾಗಿರತಕ್ಕದ್ದೆಂದು ಲ್ಯಾಂಡ್ ರೆವಿನ್ಯು ರೂಲ್ಸ್ 2ನೇ ರೂಲಿನಲ್ಲಿ ವಿಧಿಸಿರುತ್ತೆ. ಮತ್ತು ಲ್ಯಾಂಡ್ ರೆವಿನ್ಯು ಕೋಡಿನಲ್ಲಿ ಸಬ್‌ಡಿವಿಜನ್ ಆಫೀಸರುಗಳಿಗೂ ಇತರ ಅಸಿಸ್ಟೆಂಟ್ ಕಮಿಷನರುಗಳಿಗೂ ಪ್ರಭೇದವನ್ನ ಹೇಳಿರುವದಿಲ್ಲವಾದ್ದರಿಂದ, ಸಬ್ ಡಿವಿಜನ್ ಎಂಬದಾಗಿ ವಾಡಿಕೆಯಾಗಿ ಹೇಳುವವುಗಳ ಚಾರ್ಜನ್ನ ಉಂಟಾಗಿಯಾದರೂ ಇರಲಿ ಅಥವ ಒಂದು ಡಿಸ್ಟ್ರಿಕ್ಟ್ ಪೈಕಿ ನಮೂದಾದ ಕೆಲವು ತಾಲ್ಲೂಕುಗಳ ಚಾರ್ಜನ್ನ ಉಂಟಾಗಿಯಾದರೂ ಇರಲಿ, ಅಂತು, ಎಲ್ಲಾ ಅಸಿಸ್ಟೆಂಟ್ ಕಮಿಷನರುಗಳ ಮೇಲಿನ ಅಪೀಲ್ ಅಧಿಕಾರಿಯಾಗಿ ಡೆಪ್ಯುಟಿ ಕಮಿಷನರ್ ಯಥಾಪ್ರಕಾರ ಇರುತ್ತಾರೆ.

2. ತಮಗೆ ಇರುವ ಅಧಿಕಾರಗಳ ಪೈಕಿ ಯಾವದನ್ನಾದರೂ ರೆವಿನ್ಯು ಕಮಿಷನರಿಗೆ ಕೊಡುವದಕ್ಕೆ ಮಾತ್ರ ರೆವಿನ್ಯು ಕೋಡ್ 4ನೇ ಸೆಕ್ಷನ್ 2ನೇ ಪ್ಯಾರಾ ಪ್ರಕಾರ ಗೌರ್ನಮೆಂಟಿನವರಿಗೆ ಅಧಿಕಾರವಿರುತ್ತೆ ವಿನಹ, ಡೆಪ್ಯುಟಿ ಕಮಿಷನರುಗಳಿಗೆ ಕೊಟ್ಟಿರುವ ಅಧಿಕಾರಗಳನ್ನ ಆ ಪ್ರಕಾರ ಕೊಡುವದಕ್ಕೆ ಅವಕಾಶವಿರುವದಿಲ್ಲ. ಆದ್ದರಿಂದ, ರೆವಿನ್ಯು ಕೋಡು 1ನೇ ಷೆಡ್ಯೂಲ್ 1ನೇ ಕ್ಲಾಜಿನಂತೆಯೆ ಇರುವ ಸದರಿ ಇಸ್ತಿಹಾರ್‌ನಾಮೆ (ನಂಬರ 37 ತಾರೀಖು 8ನೇ ಆಗಸ್ಟು, 1902) ಯ 1ನೇ ಕ್ಲಾಜ್, 8ನೇ ಸೆಕ್ಷನ್ 2ನೇ ಪ್ಯಾರಾ ಪ್ರಕಾರ ಅಸಿಸ್ಟೆಂಟ್ ಕಮಿಷನರುಗಳ ಮೇಲಿನ ಅಪೀಲ್ ಅಧಿಕಾರಿಗಳು ಗೌರ್ನಮೆಂಟಿನವರಾಗಿರುತ್ತಾರೆಂತು ಸರ್ಕಾರದವರು ಕಂಠೋಕ್ತವಾಗಿ ಹೇಳಬಹುದಾದ ಸಂಭವಗಳಿಗೆ ಮಾತ್ರ ಲಗಾವಾದ್ದೆಂದು ಇಟ್ಟುಕೊಳ್ಳಬೇಕಾದ್ದು. ಆ ಪ್ರಕಾರ ಸರ್ಕಾರದವರು ಇದುವರೆವಿಗೂ ಅಂತ ಯಾವ ಕಂಠೋಕ್ತವಾದ ಪ್ರಕಟನೆಯನ್ನು ಮಾಡಿರದಿಲ್ಲವಾದುದರಿಂದ, ಮೇಲೆ ಹೇಳಿದ ಇಸ್ತಿಹಾರ್‌ನಾಮೆಯ ಕ್ಲಾಜ್ ಪ್ರಕೃತದಲ್ಲಿ ಆಚರಣೆಗೋಸ್ಕರ ಕಾರ್ಯಕಾರಿಯಾಗಿರುವದಿಲ್ಲ ಮತ್ತು ಅಂತ ಕಂಠೋಕ್ತವಾದ ಪ್ರಕಟನೆಯನ್ನು ಸರ್ಕಾರದವರು ಮಾಡುವ ವರಿವಿಗೂ ಮೇಲೆ ಹೇಳಿದಂತೆಯೆ ಸದರಿ ಕ್ಲಾಜ್ ಇದ್ದಾಗ್ಯೂ ಇರುತ್ತೆಂಬದಾಗಿ ತಿಳಿದುಕೊಳ್ಳತಕ್ಕದ್ದು. ಮೇಲೆ ಹೇಳಿದ ಸಂದರ್ಭಗಳಿಂದ, ಅಸಿಸ್ಟೆಂಟ್ ಕಮಿಷನರುಗಳು ಮಾಡುವ ಅಪ್ಪಣೆಗಳ ಮತ್ತು ತೀರ್ಪುಗಳ ಮೇಲಿನ ಎಲ್ಲ ಅಪೀಲ್‌ಗಳು ಇದುವರೆವಿಗೂ ಜಾರಿಯಲ್ಲಿರುವಂತೆ ಆಯಾಯ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಲ್ಲಿಯೇ ದಾಖಲಾಗತಕ್ಕದ್ದಿದೆ.

ಹೆಚ್. ವಿ. ನಂಜುಂಡಯ್ಯ,
ಗೌರ್ನಮೆಂಟಿಗೆ ಸೆಕ್ರೆಟರಿ,
ಜನರಲ್ ಮತ್ತು ರೆವಿನ್ಯು ಇಲಾಖೆಗಳಲ್ಲಿ.

1. ಮೈಸೂರ ಸೀಮೆಯಲ್ಲಿನ ರೆವಿನ್ಯು ಕಮಿಷನರಿಗೆ.
2. ಶಿವಮೊಗ್ಗಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ.
3. ಇತರ ಡಿಸ್ಟ್ರಿಕ್ಟುಗಳ ಡೆಪ್ಯುಟಿ ಕಮಿಷನರಿಗೆ.

ಮೈಸೂರ ಗೆಜೆಟ್.

ನಂ. XXXVIII.] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 11.

ಬೆಂಗಳೂರು, ಗುರುವಾರ, ಮಾರ್ಚಿ ತಾ|| 19, ಸನ್ 1903.

IVನೇ ಭಾಗ.

ನಂ. 3846—55.

ಇಂಡಿಯಾ ಗವರ್ನಮೆಂಟಿನ ಡೆಪ್ಯುಟಿ ಸೆಕ್ರೆಟರಿಯವರಾದ ಎ. ವಿಲಿಯಮ್ಸ್ ಸಾಹೇಬರವರಿಂದ.

ಒಳದೇಶದ ಗವರ್ನಮೆಂಟು ಮುಂತಾದ ಅಡ್ಮಿನಿಸ್ಟ್ರೇಷರ್‌ಗಳಿಗೆ.

ಕಲಕತ್ತಾ, ತಾರೀಖು 18ನೇ ಡಿಸೆಂಬರ್ 1902.

ಹೋಂ ಡಿಪಾರ್ಟ್‌ಮೆಂಟ್

ಪಬ್ಲಿಕ್.

ಅಯ್ಯಾ,

ಚಿಕಿತ್ಸೆಯ ಬಗ್ಗೆ ಕಸೌಲಿಯಲ್ಲಿರುವ ಪ್ಯಾಸ್ಚ್ಯೂರ್ ವೈದ್ಯಶಾಲೆಗೆ ಹೋಗುವ ಸರ್ಕಾರ ನೌಕರ್ಮಾನೇರಿಗೆ ತೋರಿಸಲ್ಪಡಬೇಕೆಂಬ ಕೆಲವು ರಿಯಾಯತಿಗಳನ್ನು ಕುರಿತ   ವುಳ್ಳ ನಿಮ್ಮ ಲೆಟರಿನ ಯೊಡನೆ ಆಖೈರಾಗುವ ಕರೆಸ್ಪಾಂಡೆನ್ಸಿನ ವಿಷಯವಾಗಿ ಇಂಡಿಯಾ ಗವರ್ನಮೆಂಟಿನ ಇದರಡೀ ಕಂಡ ಹುಕುಮುಗಳನ್ನು ತಿಳಿಸುವಂತೆ ಅಪ್ಪಣೆಯಾಗಿರುತ್ತದೆ.

2. ಸದರೀ ವಿಷಯವಾಗಿ ಆಲೋಚನೆ ಮಾಡಲ್ಪಟ್ಟ ಒಳದೇಶದ ಗವರ್ನಮೆಂಟುಗಳ ಮತ್ತು ಅಡ್ಮಿನಿಸ್ಟ್ರೇಷರ್‌ಗಳ ಅಭಿಪ್ರಾಯಗಳು ಸಭಾ ಸಮೇತರಾದ ಗವರ್ನರ್ ಜನರಲ್ ಯವರ ಜಾಗರೂಕತೆಯುಳ್ಳ ಆಲೋಚನೆಗೆ ತರಲ್ಪಟ್ಟು ಈ ವಿಷಯದಲ್ಲಿ ನಡವಳಿಕೆ ಬಗ್ಗೆ ಇದರಡೀ ಕಂಡ ನಿಬಂಧನೆಗಳನ್ನು ವಿಧಿಸಿರುತ್ತಾರೆ.

I. ಯಾವದಾದರೂ ಸರ್ಕಾರ ಕೆಲಸವನ್ನು ಚಲಾಯಿಸುವಾಗ ಹುಚ್ಚು ಹಿಡಿದ ಮೃಗದಿಂದ ಕಚ್ಚಲ್ಪಡಬಹುದಾದ, ಮಾಹೆಯಾನ 30 ರೂಪಾಯಿಗಳಿಗೆ ಮೀರದ ತಲಬುಳ್ಳ ಯಾವ ಸರ್ಕಾರ ನೌಕರನಿಗೆ, ಮತ್ತು ಪೋಲೀಸು ಇಲಾಖೆಯಲ್ಲಿ ಕೆಲಸ ಮಾಡುತ್ತಲಿರುವ ಮತ್ತು ಮಾಹೆಯಾನ 100 ರೂಪಾಯಿಗಳಿಗೆ ಮೀರದ ತಲಬು ತೆಗೆಯುವ ಯಾವ ಇರೋಪಿಯನ್ ಕಾನ್ಸ್ಟೆಬಲಿಗೆ ಮತ್ತು ಇತರ ಇರೋಪಿಯನ್ನರಿಗೆ,—

(i) ಕಸೌಲಿಗೆ ಹೋಗಿಬರಲಿಕ್ಕೆ ಅವನಿಗೆ ತಗಲುವ ಪ್ರಯಾಣದ ಖರ್ಚು ವೆಚ್ಚಗಳು; ಇಂತಾ ಖರ್ಚುಗಳಲ್ಲಿ ಅವನಿಗೆ ಲಗಾವು ಆಗುವ ನಿಬಂಧನೆಗಳಿಗೆ ಅನುಸಾರವಾಗಿ ಕೆಲಸದ ಮೇಲೆ ಪ್ರಯಾಣ ಮಾಡುವದಕ್ಕೆ ಬಾಧ್ಯನಾಗುವ ಕ್ಲಾಸಿನ ರೈಲ್ವೆ ಮುಖಾಂತರದ ಪ್ರತಿ ಮಾರ್ಗದ ಒಬ್ಬನ ಚಾರ್ಜು, ನಿಬಂಧನೆಗೆ ಒಳಪಡುವ ಮೊಬಲಗ್ಯೆ ಮೀರದ, ಮಾರ್ಗದ ಪ್ರಯಾಣಗಳಿಗೆ ತಗಲುವ ಖರ್ಚು ಖಂಡಿ ಚಾರ್ಜು ಸಹಾ ಸೇರತಕ್ಕದ್ದು; ಚಿಕಿತ್ಸೆ ಪೂರೈಸಿದ ನಂತರ ವಾಪಸು ಬರುವ ಪ್ರಯಾಣದ ಖರ್ಚುಗಳನ್ನು, ಕಸೌಲಿಯಲ್ಲಿ ರೋಗಿಗೆ, ಸದರೀ ವೈದ್ಯಶಾಲೆಯ ಅಧ್ಯಕ್ಷರಿಂದ ಬಿಡಗಡೆ ಸರ್ಟಿಫಿಕೇಟು ಹಾಜರು ಮಾಡಿದ ಮೇಲೆ ಸದರೀ ಸ್ಥಳದಲ್ಲಿರುವ ಟ್ರೆಜರಿ ಆಫೀಸರರು ಕೊಡತಕ್ಕದ್ದು;

(ii) ಒಂದು ತಿಂಗಳಿನ ತಲಬಿನ ಅಡ್ವಾನಸು;

(iii) ಒಂದು ತಿಂಗಳಿನ ಕ್ಯಾಜುಯಲ್ ರಜಾ, ಅದಕ್ಕೆ ಜಾಸ್ತಿಯಾಗಿ ಬೇಕಾಗಿರುವ ಯಾವ ರಜಾವನ್ನಾಗಲಿ ಪ್ರಿವಿಲೇಜ್ ಅಥವಾ ಖಾಯಿಲೆ ರಜಾವಾಗಿ ಎಣಿಸಲ್ಪಡತಕ್ಕದ್ದು.

II. ಕಸೌಲಿಯಲ್ಲಿನ ಪ್ಯಾಸ್ಟ್ಯೋರಿ ವೈದ್ಯಶಾಲೆಯಲ್ಲಿ ಚಿಕಿತ್ಸೆ ಬಗ್ಯೆ ಸಿಫಾರಸು ಮಾಡುವ ಪ್ರೆಸಿಡೆನ್ಸಿ ಅಥವಾ ಸಿವಿಲ್ ಸರ್ಜ್ಜರವರಿಂದ ಮೆಡಿಕಲ್ ಸರ್ಟಿಫಿಕೇಟು ಹಾಜರ್ಮಾಡಿದ ಮೇಲೆ ಮಾತ್ರ ಈ ರಿಯಾಯತಿಗಳು ತೋರಿಸಲ್ಪಡತಕ್ಕದ್ದು.

III. ಮಂಜೂರ್ಮಾಡುವ ಅಧಿಕಾರವು ಸಂಬಂಧಪಟ್ಟ ಇಲಾಖೆಯ ಮುಖ್ಯ ಡಿಸ್ಟ್ರಿಕ್ಟ್ ಆಫೀಸರರಿಗೆ ಇರತಕ್ಕದ್ದು; ಈ ಆಫೀಸರರು ಆ ತಡಾಖಾಯ ತಾವು ಮಾಡಿದ ಮಂಜೂರಿಯನ್ನು ಸಂದರ್ಭವಿರಬಹುದಾದಂತೆ, ಸಿವಿಲ್ ಇಲಾಖೆಯಲ್ಲಿ ಕಮೀಷನರವರಿಗೆ, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರವರಿಗೆ ಅಥವಾ ಇಲಾಖೆಯ ಮೊಖ್ತೇಸರರಿಗೆ, ಆ ಮಂಜೂರಿ ಕಾಯಂ ಆಗಿ ಒಳದೇಶದ ಗವರ್ನಮೆಂಟಿಗೆ ತಿಳಿಸಲ್ಪಡುವ ಬಗ್ಯೆ ರಿಪೋರ್ಟು ಮಾಡತಕ್ಕದ್ದು.

IV. ರೋಗಿಯು ವೈದ್ಯಶಾಲೆಯ ಅಧ್ಯಕ್ಷರಿಂದ ಚಿಕಿತ್ಸೆಯ ಸರ್ಟಿಫಿಕೇಟನ್ನು ತನ್ನೊಂದಿಗೆ ವಾಪಸು ತಂದು ತನ್ನ ಕಚೇರಿಯ ಮೊಖ್ತೇಸರರ ರೂಬರೂ ಹಾಜರ್ಮಾಡತಕ್ಕದ್ದೆಂದು ಅವನಿಗೆ ಆಜ್ಞಾಪಿಸತಕ್ಕದ್ದು.

ಎ. ವಿಲಿಯಮ್ಸ್,
ಇಂಡಿಯಾ ಗವರ್ನಮೆಂಟಿನ ಡೆಪ್ಯುಟಿ ಸೆಕ್ರೆಟರಿ.

Mysore Government Central Press, Bangalore—1903.

ಮೈಸೂರ ಗೆಜೆಟ್.

ನಂ. XXXVIII] ಸರ್ಕಾರದಿಂದ ಪಬ್ಲಿಷ್ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟು ತಾ|| 20, ಸನ 1903.

IIIನೇ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಖೆ.

೧೯೦೩ನೆ ವರುಷದ ೭ನೆ ನಂಬರಿನ ರೆಗ್ಯುಲೇಷನು.

(೧೯೦೩ನೆ ವರುಷದ ಆಗಸ್ಟು ತಿಂಗಳಿನ ೧೪ನೆ ತಾರೀಕಿನಲ್ಲಿ ಮಂಜೂರಾದದ್ದು.)

ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಗೆ ಸರಕಾರದಿಂದ ಕೊಡಲ್ಪಟ್ಟ ಸಾಲಗಳ ವಸೂಲಿಯ ಬಗ್ಗೆ ವಿಧಿಸಲು ಹುಟ್ಟಿದ ರೆಗ್ಯುಲೇಷನು.

ಪೀಠಿಕೆ.

೧೮೯೫ನೇ ವರುಷದ ಮೈಸೂರು ಸೀಮೆಯ ಕಂಪನಿಗಳ ರೆಗ್ಯುಲೇಷನಿನ ಮೇರೆಗೆ ರಿಜಿಸ್ಟರಾದ ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಗೆ ಸರಕಾರದಿಂದ ಕೊಡಲ್ಪಟ್ಟ ಸಾಲಗಳನ್ನು, ಅಂಥಾ ಬ್ಯಾಂಕುಗಳ ಸಂಘಟನೆ ನಿಬಂಧನೆಗಳ ಪೈಕಿ ೩೪ನೆ ನಿಬಂಧನೆಯಲ್ಲಿ ಹೇಳಿರುವ ರೀತಿಯಾಗಿ, ಎಂದರೆ, ಜಮೀನಿನ ಕಂದಾಯದ ಬಾಕಿಗಳಂತೆ, ವಸೂಲು ಮಾಡುವದಕ್ಕೋಸ್ಕರ ವಿಧಿಸೋಣ ಯುಕ್ತವಾದುದರಿಂದ ; ಘನವನ್ನೈದಿದ ಶ್ರೀಮನ್ ಮಹಾರಾಜಾ ಸಾಹೇಬರವರು ಇದರಡಿ ಕಂಡಂತೆ ಕಾನೂನನ್ನು ಏರ್ಪಡಿಸಿರುತ್ತಾರೆ :—

ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಗೆ ಕೊಡಲ್ಪಟ್ಟ ಸಾಲಗಳು ಜಮೀನಿನ ಕಂದಾಯದ ಬಾಕಿಗಳ ಹಾಗೆ ವಸೂಲಾಗತಕ್ಕದ್ದು.

೧. ಈ ರೆಗ್ಯುಲೇಷನು ಮಂಜೂರಾಗುವದಕ್ಕೆ ಮುಂಚೆಯಾಗಲಿ ಅಥವಾ ಅನಂತರವಾಗಲಿ, ಒಂದು ವ್ಯವಸಾಯದ ಬ್ಯಾಂಕಿಗೆ ಸರಕಾರದಿಂದ ಕೊಡಲ್ಪಟ್ಟ ಯಾವ ಸಾಲವಾದರೂ, ಜಮೀನಿನ ಕಂದಾಯದ ಬಾಕಿಯಹಾಗೆ ಅಂಥಾ ಬ್ಯಾಂಕಿನ ಮೆಂಬರುಗಳಿಂದ ಜಂಟಿಯಾಗಿ ಮತ್ತು ಇಸೊವಾರಾಗಿ ಸಹ ವಸೂಲು ಮಾಡಲ್ಪಡತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,

ಮೈಸೂರ್ ಸಂಸ್ಥಾನದ ದಿವಾನರವರು.

616

ಮೈಸೂರ ಗೆಜೆಟ್.

ಸಂ. XXXVIII] ಸರ್ಕಾರದಿಂದ ಪ್ರಾಸಿದ್ಧಪಡಿಸಿದ್ದು. [ಸಂ. 34.

ಬೆಂಗಳೂರು, ಗುರುವಾರ, ಆಗಸ್ಟು ತಾ|| 27, ಸನ 1903.

IIIನೇ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಗವರ್ನಮೆಂಟು.

ಲೆಜಿಸ್ಲೇಟಿವು ಇಲಾಕೆ.

೧೯೦೩ನೆ ವರುಷದ ೭ನೆ ನಂಬರಿನ ರೆಗ್ಯುಲೇಷನು.

(೧೯೦೩ನೆ ವರುಷದ ಆಗಸ್ಟು ತಿಂಗಳಿನ ೧೮ನೆ ತಾರೀಕಿನಲ್ಲಿ ಮಂಜೂರಾದದ್ದು.)

ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಗೆ ಸರಕಾರದಿಂದ ಕೊಡಲ್ಪಟ್ಟ ಸಾಲಗಳ ವಸೂಲಿಯ ಬಗ್ಗೆ ವಿಧಿಸಲು ಹುಟ್ಟಿದ ರೆಗ್ಯುಲೇಷನು.

ಪೀಠಿಕೆ.

೧೮೯೫ನೆ ವರುಷದ ಮೈಸೂರು ಸೀಮಿತ ಕಂಪನಿಗಳ ರೆಗ್ಯುಲೇಷನಿನ ಮೇರೆಗೆ ರಿಜಿಸ್ಟರಾದ ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಗೆ ಸರಕಾರದಿಂದ ಕೊಡಲ್ಪಟ್ಟ ಸಾಲಗಳನ್ನು, ಅಂಥಾ ಬ್ಯಾಂಕುಗಳ ಸಂಘದೇರ್ಪಾಟಿನ ನಿಬಂಧನೆಗಳ ಪೈಕಿ ೩೪ನೆ ನಿಬಂಧನೆಯಲ್ಲಿ ಹೇಳಿರುವ ರೀತಿಯಾಗಿ, ಎಂದರೆ, ಜಮೀನಿನ ಕಂದಾಯದ ಬಾಕಿಗಳಂತೆ, ವಸೂಲು ಮಾಡುವದಕ್ಕೋಸ್ಕರ ವಿಧಿಸೋಣ ಯುಕ್ತವಾದುದರಿಂದ ; ಘನವನ್ನೈದಿದ ಶ್ರೀಮನ್ ಮಹಾರಾಜಾ ಸಾಹೇಬರವರು ಇದರಡಿ ಕಂಡಂತೆ ಕಾನೂನನ್ನು ಏರ್ಪಡಿಸಿರುತ್ತಾರೆ :—

ವ್ಯವಸಾಯ ಸಂಬಂಧವಾದ ಬ್ಯಾಂಕುಗಳಿಗೆ ಕೊಡಲ್ಪಟ್ಟ ಸಾಲಗಳು ಜಮೀನಿನ ಕಂದಾಯದ ಬಾಕಿಗಳ ಹಾಗೆ ವಸೂಲಾಗತಕ್ಕದ್ದು.

೧. ಈ ರೆಗ್ಯುಲೇಷನು ಮಂಜೂರಾಗುವದಕ್ಕೆ ಮುಂಚೆಯಾಗಲಿ ಅಥವಾ ಅನಂತರವಾಗಲಿ, ಒಂದು ವ್ಯವಸಾಯದ ಬ್ಯಾಂಕಿಗೆ ಸರಕಾರದಿಂದ ಕೊಡಲ್ಪಟ್ಟ ಯಾವ ಸಾಲವಾದರೂ, ಜಮೀನಿನ ಕಂದಾಯದ ಬಾಕಿಯಹಾಗೆ ಅಂಥಾ ಬ್ಯಾಂಕಿನ ಮೆಂಬರುಗಳಿಂದ ಜಂಟಿಯಾಗಿ ಮತ್ತು ಇಸಂವಾರಾಗಿ ಸಹ ವಸೂಲು ಮಾಡಲ್ಪಡತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ಸಂಸ್ಥಾನದ ದಿವಾನರವರು.

617

ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಛಾಪಿಸಿ ಆದ್ದು. [ಸಂ. 46.

ಬೆಂಗಳೂರು, ಗುರುವಾರ, ನವಂಬರ್ ತಾ॥ 26, ಸನ್ 1903.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಗವರ್ನ್‌ಮೆಂಟು.

ಲೆಜಿಸ್ಲೆಟಿವು ಇಲಾಕೆ.

ಇಸ್ತಿಹಾರ್, ಸಂ. 848—ಜ್ಯಾ. ತಾರೀಖು 27ನೆ ಅಕ್ಟೋಬರ್ 1903.

ಸನ್1892ನೆ ಇಸವಿಯ IVನೆ ನಂಬರ್ ಮೈಸೂರು ಕಾರ್ಖಾನೆಗಳ ರೆಗ್ಯುಲೇಷನ್ 18ನೆ ಸೆಕ್ಷನಿನ 4ನೆ ಪ್ರಕರಣವನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮೇಲ್ಕಂಡ 18ನೆ ಸೆಕ್ಷನಿನ 2ನೆ ಪ್ರಕರಣದ ಪ್ರಕಾರ ತಮಗಿರುವ ಅಧಿಕಾರ ಚಲಾವಣೆಯಲ್ಲಿಯೂ ಮತ್ತು 1901ನೆ ಇಸವಿ ಜನವರಿ 4ನೆ ತಾರೀಖಿನ ನಂ. 8627—ಲೆಗಿಸ್ 70ನೆ ನೋಟಿಫಿಕೇಷನ್‌ಗೆ ಬದಲಾಗಿಯೂ ಸಹ ಮಾಡಬೇಕೆಂದಿರುವ ಇದರಡಿ ವಿವರಿಸಿರುವ ರೂಲಿನ ಮಸೂದೆಯನ್ನು ಸಕಲ ಜನರಿಗೂ [illegible]ಳುಪಡಿಸುವ ಬಗ್ಯೆ ಪ್ರಕಟಿಸಿರುತ್ತಾರೆ. ಮೈಸೂರು ಗೆಜೆಟ್ಟಿನಲ್ಲಿ ಈ ಇಸ್ತಿಹಾರ್ ಛಾಯಿಷ್ ಆದ ಯರಡು ತಿಂಗಳು ಕಳೆದ ನಂತರ ಈ ಮಸೂದೆಯನ್ನು ಸರ್ಕಾರದವರು ವಿಚಾರಕ್ಕೆ ತೆಗೆದುಕೊಳ್ಳುತ್ತಾರೆ:—

ಕಾರ್ಖಾನೆಗಳ ಸ್ವಾಧೀನದಲ್ಲಿರುವ ಪ್ರತಿ ಒಬ್ಬನೂ ಈ ಕೆಳಗೆ ತೋರಿಸಿರುವ ತಖ್ತೆಗಳನ್ನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು:—

I. ಪ್ರತಿ ವರುಷದ ಜನವರಿ 15ನೆ ತಾರೀಖಿನ ದಿನ ಅಥವಾ ತತ್ಪೂರ್ವ, ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಒಂದು ಸಾಲ್ಯಿಯಾಡಿ ತಖ್ತೆಯನ್ನು:—

ಕಾರ್ಖಾನೆಯು ಹೆಸರು ಮತ್ತೂ ಇರತಕ್ಕ ಸ್ಥಳ.	ಯಜಮಾನನ ಅಥವಾ ಸ್ವಾಧೀನದಾರನ ಹೆಸರು.	ಮ್ಯಾನೇಜರ ಹೆಸರು.	ಕೆಲಸದ ಸ್ವಭಾವ.	ಕೇಸಕ್ಕೆ ಸಹಾಯಕವಾದ ಚಲನಾಶಕ್ತಿ ಮತ್ತು ಅದರ ಸ್ವಭಾವ.	ಸರಾಸರಿ ಪ್ರತಿನಿತ್ಯವೂ ಕೆಲಸ ಮಾಡತಕ್ಕವರ ಸಂಖ್ಯೆ.				ಕಾರ್ಖಾನೆಯಲ್ಲಿ ಬದಲಾಯಿಸಿಕೊಂಡು ಕೆಲಸ ಮಾಡಲ್ಪಡುತ್ತೊ ಅಥವಾ ಆಗಾಗ್ಯೆ ಕೆಲಸ ನಿಲ್ಲಿಸಲ್ಪಡುತ್ತೊ—ಹಾಗೆ ನಿಲ್ಲಿಸಲ್ಪಟ್ಟರೆ ಯಾವಾಗ ಮತ್ತು ದಿನಕ್ಕೆ ಯಷ್ಟು ಹೊತ್ತು ನಿಲ್ಲಿಸಲ್ಪಡುತ್ತೆ.	ಆದಿತ್ಯವಾರವಾಗಲಿ ಅನ್ಯಾವ ವಾರವಾಗಲೀ ಪೂರಾ ರಜಾದಿನಗಳಂತೆ ಅಥವಾ ರೆಗ್ಯುಲೇಷನ್ನಿನ ಸೆಕ್ಷನ್ 5 B (1) ಕ್ಲಾಜ್ (c) ಪ್ರಕಾರ ಕಾರ್ಖಾನೆಯು ಆದಿತ್ಯವಾರದ ದಿನ ಕೆಲಸ ನಡಿಸುವ ವಿಷಯದಲ್ಲಿನ ರೂಲಿನಿಂದ ವಿನಾಯಿಸಲ್ಪಟ್ಟಿರುತ್ತದೆಯೆ.	ಷರಾ.
					ದೊಡ್ಡವರು.		ಹುಡುಗರು.				
					ಗಂಡಸರು.	ಹೆಂಗಸರು.	ಗಂಡಸರು.	ಹೆಂಗಸರು.			

N. B.—ದಿನಂಪ್ರತಿ ಕೆಲಸ ಮಾಡುವ ಹುಡಗರ ಸಂಖ್ಯೆಯನ್ನು ಕಾರ್ಖಾನೆಯಲ್ಲಿಟ್ಟಿರುವ ಹುಡುಗರ ರಿಜಿಸ್ಟರಿನಿಂದ ತೆಗೆದುಕೊಳ್ಳಬೇಕು.

II. ಈ ಕೆಳಗಿನ ನಮೂನೆಯಲ್ಲಿ ಅಳತೆ ಮತ್ತು ವಿಸ್ತೀರ್ಣವನ್ನು ತೋರಿಸುವ ತಖ್ತೆಯನ್ನೂ:—

ಕಾರ್ಖಾನೆಯ ಹೆಸರು ಮತ್ತು ಇರತಕ್ಕ ಸ್ಥಳ.	ಸ್ವಾಧೀನದಲ್ಲಿರುವವರ ಹೆಸರು.	ಕಾರ್ಖಾನೆಯಲ್ಲಿರುವ ಪ್ರತಿ ಒಂದು ಚಿಕ್ಕ ಮನೆಯ ಅಳತೆ ಮತ್ತು ಘನ ಆಕಾರ.	ಹಿಂದಿನ ಕಾಲಂನಲ್ಲಿ ತೋರಿಸಿರುವ ಯಾವದರೊಂದು ಚಿಕ್ಕ ಮನೆಗಳಲ್ಲಿ ಯಂತ್ರಗಳು ಅಥವಾ ಇತರ ಭೂಸ್ಥಾಪಿತ ವಸ್ತುಗಳಿರುವ ಚಿಕ್ಕ ಮನೆಯ ನೆಲದ ಅಳತೆ.	ಷರಾ:

ಮೇಲ್ಕಂಡ ತಖ್ತೆಯು ಪ್ರತಿ ಒಂದು ಕಾರ್ಖಾನೆಯು ರೆಗ್ಯುಲೇಷರ್ಷ ಅನುಸರಿಸಿ ಮೊದಲು ರಿಜಿಸ್ಟರ್ ಆದ ಕೂಡಲೇ ಕಳುಹಿಸಲ್ಪಡತಕ್ಕದ್ದು. ಮತ್ತು ತದನಂತರ ಕಾರ್ಖಾನೆಯಲ್ಲಿ ಅದರ ಯಾವದೊಂದು ಚಿಕ್ಕಮನೆಯ ಅಳತೆ ಅಥವಾ ಘನ ಆಕಾರಗಳು ಅಥವಾ ಯಂತ್ರಗಳು ಅಥವಾ ಇತರ ಭೂಸ್ಥಾಪಿತವಾದ ವಸ್ತುಗಳು ಇರತಕ್ಕ ಚಿಕ್ಕಮನೆಗಳ ಅಳತೆಗಳಿಗೆ ಕುಂದಕವಾಗುವ ಯಾವ ಬದಲಾವಣೆ ಮಾಡಿದಾಗಲೂ ಕಳುಹಿಸಲ್ಪಡತಕ್ಕದ್ದು.

III. ಪ್ರತಿ ಒಂದು ಕ್ಯಾಲೆಂಡರ ತಿಂಗಳ ಆಖೈರಿನೊಳಗಾಗಿ ಮುಂದಿನ ತಿಂಗಳಿನಲ್ಲಿ ಕಾರ್ಖಾನೆಯು ಮುಚ್ಚಲ್ಪಡುವ ಎಲ್ಲಾ ದಿನಗಳನ್ನು ತೋರಿಸುವ ತಖ್ತೆ. ಈ ತಖ್ತೆಯನ್ನು ತಖ್ತೇಲಿ ತೋರಿಸುವ ಹಿಂದಿನ ತಿಂಗಳಲ್ಲಿ ಕಾರ್ಖಾನೆಯಲ್ಲಿ ಕೆಲಸ ನಡೆದರೂ ನಡಿಯದೆ ಇದ್ದರೂ ರವಾನಿಸತಕ್ಕದ್ದು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯರ್
ಫೈನೆನ್ಷಿಯಲ್ ಮತ್ತು ರೆವೆನ್ಯೂ ಇಲಾಖೆಗಳ ಸೆಕ್ರೆಟರಿ.

619

ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ಸ'ಚ. 47.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 3, ಸನ್ 1903.

IIIನೇ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಕೆ.

ಇಸ್ತಿಹಾರ್, ನಂ. 848—ಜ್ಯ. ತಾರೀಖು 27ನೇ ಅಕ್ಟೋಬರ 1903.

ಸನ್ 1892ನೇ ಇಸವಿಯ IVನೇ ನಂಬರ ಮೈಸೂರು ಕಾರ್ಖಾನೆಗಳ ರೆಗ್ಯುಲೇಷನ್ 18ನೇ ಸೆಕ್ಷನ್ನಿನ 4ನೇ ಪ್ರಕರಣವನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮೇಲ್ಕಂಡ 18ನೇ ಸೆಕ್ಷನ್ನಿನ 2ನೇ ಪ್ರಕರಣದ ಪ್ರಕಾರ ತಮಗಿರುವ ಅಧಿಕಾರ ಚಲಾವಣೆಯಲ್ಲಿಯೂ ಮತ್ತು 1901ನೇ ಇಸವಿ ಜನವರಿ 4ನೇ ತಾರೀಖಿನ ನಂ. 8627—ಲೆಗಿಸ್ 70ನೇ ನೋಟಿಫಿಕೇಷನ್‌ಗೆ ಬದಲಾಗಿಯೂ ಸಹ ಮಾಡಬೇಕೆಂದಿರುವ ಇದರಡಿ ವಿವರಿಸಿರುವ ರೂಲಿನ ಮಸೂದೆಯನ್ನು ಸಕಲ ಜನರಿಗೂ ತಿ[redacted]ಡಿಸುವ ಬಗ್ಗೆ ಪ್ರಕಟಿಸಿರುತ್ತಾರೆ. ಮೈಸೂರು ಗೆಜೆಟ್ಟಿನಲ್ಲಿ ಈ ಇಸ್ತಿಹಾರ್ ಪ್ರಾಯಿಷ್ ಆದ ಯರಡು ತಿಂಗಳು ಕಳೆದ ನಂತರ ಈ ಮಸೂದೆಯನ್ನು ಸರ್ಕಾರದವರು ವಿಚಾರಕ್ಕೆ ತೆಗೆದುಕೊಳ್ಳುತ್ತಾರೆ:—

ಕಾರ್ಖಾನೆಗಳ ಸ್ವಾಧೀನದಲ್ಲಿರುವ ಪ್ರತಿ ಒಬ್ಬನೂ ಈ ಕೆಳಗೆ ತೋರಿಸಿರುವ ತಖ್ತೆಗಳನ್ನು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು:—

I. ಪ್ರತಿ ವರುಷದ ಜನವರಿ 15ನೇ ತಾರೀಖಿನ ದಿನ ಅಥವಾ ತತ್ಪೂರ್ವ, ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಒಂದು ಸಾಲ್ಯಿಯಾಡೆ ತಖ್ತೆಯನ್ನೂ:—

ಕಾರ್ಖಾನೆಯ ಹೆಸರು ಮತ್ತೂ ಇರತಕ್ಕ ಸ್ಥಳ.	ಯಜಮಾನನ ಅಥವಾ ಸ್ವಾಧೀನದಾರನ ಹೆಸರು.	ಮ್ಯಾನೇಜರ ಹೆಸರು.	ಕೆಲಸದ ಸ್ವಭಾವ.	ಕೇಸಕ್ಕೆ ಸಹಾಯಕವಾದ ಚಲನಾಶಕ್ತಿ ಮತ್ತು ಅದರ ಸ್ವಭಾವ.	ಸರಾಸರಿ ಪ್ರತಿನಿತ್ಯವೂ ಕೆಲಸ ಮಾಡತಕ್ಕವರ ಸಂಖ್ಯೆ. ದೊಡ್ಡವರು.		ಹುಡುಗರು.		ಕಾರ್ಖಾನೆಯಲ್ಲಿ ಬದಲಾಯಿಸಿಕೊಂಡು ಕೆಲಸ ಮಾಡಲ್ಪಡುತ್ತೋ ಅಥವಾ ಆಗಾಗ್ಯೆ ಕೆಲಸ ನಿಲ್ಲಿಸಲ್ಪಡುತ್ತೋ—ಹಾಗೆ ನಿಲ್ಲಿಸಲ್ಪಟ್ಟರೆ ಯಾವಾಗ ಮತ್ತು ದಿನಕ್ಕೆ ಯಷ್ಟು ಹೊತ್ತು ನಿಲ್ಲಸಲ್ಪಡುತ್ತೆ.	ಆದಿತ್ಯವಾರವಾಗಲಿ ಇನ್ಯಾವ ವಾರವಾಗಲೀ ಪೂರಾ ರಜಾದಿನಗಳಂಟೆ ಅಥವಾ ರೆಗ್ಯುಲೇಷನ್ನಿನ ಸೆಕ್ಷನ್ 5 B (1) ಕ್ಲಾಜ್ (c) ಪ್ರಕಾರ ಕಾರ್ಖಾನೆಯು ಆದಿತ್ಯವಾರದ ದಿನ ಕೆಲಸ ನಡಿಸುವ ವಿಷಯದಲ್ಲಿನ ರೂಲಿನಿಂದ ವಿನಾಯಿಸಲ್ಪಟ್ಟಿರುತ್ತದೆಯೆ.	ಷರಾ.
					ಗಂಡಸರು.	ಹೆಂಗಸರು.	ಗಂಡಸರು.	ಹೆಂಗಸರು.			

N. B.—ದಿನಂಪ್ರತಿ ಕೆಲಸ ಮಾಡುವ ಹುಡುಗರ ಸಂಖ್ಯೆಯನ್ನು ಕಾರ್ಖಾನೆಯಲ್ಲಿಟ್ಟಿರುವ ಹುಡುಗರ ರಿಜಿಸ್ಟರಿನಿಂದ ತೆಗೆದುಕೊಳ್ಳಬೇಕು.

II. ಈ ಕೆಳಗಿನ ನಮೂನೆಯಲ್ಲಿ ಅಳತೆ ಮತ್ತು ವಿಸ್ತೀರ್ಣವನ್ನು ತೋರಿಸುವ ತಖ್ತೆಯನ್ನೂ:—

ಕಾರ್ಖಾನೆಯ ಹೆಸರು ಮತ್ತು ಇರತಕ್ಕ ಸ್ಥಳ.	ಸ್ವಾಧೀನದಲ್ಲಿರುವವರ ಹೆಸರು.	ಕಾರ್ಖಾನೆಯಲ್ಲಿರುವ ಪ್ರತಿ ಒಂದು ಚಿಕ್ಕ ಮನೆಯ ಅಳತೆ ಮತ್ತು ಘನ ಆಕಾರ.	ಹಿಂದಿನ ಕಾಲಂನಲ್ಲಿ ತೋರಿಸಿರುವ ಯಾವದಾದರೊಂದು ಚಿಕ್ಕ ಮನೆಗಳಲ್ಲಿ ಯಂತ್ರಗಳು ಅಥವಾ ಇತರ ಭೂಸ್ಥಾಪಿತ ವಸ್ತುಗಳಿರುವ ಚಿಕ್ಕ ಮನೆಯ ನೆಲದ ಅಳತೆ.	ಷರಾ.

ಮೇಲ್ಕಂಡ ತಖ್ತೆಯು ಪ್ರತಿ ಒಂದು ಕಾರ್ಖಾನೆಯು ರೆಗ್ಯುಲೇಷನ್ ಅನುಸರಿಸಿ ಮೊದಲು ರಿಜಿಸ್ಟರ್ ಆದ ಕೂಡಲೇ ಕಳುಹಿಸಲ್ಪಡತಕ್ಕದ್ದು. ಮತ್ತು ತದನಂತರ ಕಾರ್ಖಾನೆಯಲ್ಲಿ ಅದರ ಯಾವದೊಂದು ಚಿಕ್ಕಮನೆಯ ಅಳತೆ ಅಥವಾ ಘನ ಆಕಾರಗಳು ಅಥವಾ ಯಂತ್ರಗಳು ಅಥವಾ ಇತರ ಭೂಸ್ಥಾಪಿತವಾದ ವಸ್ತುಗಳು ಇರತಕ್ಕ ಚಿಕ್ಕಮನೆಗಳ ಅಳತೆಗಳಿಗೆ ಕುಂದಕವಾಗುವ ಯಾವ ಬದಲಾವಣೆ ಮಾಡಿದಾಗಲೂ ಕಳುಹಿಸಲ್ಪಡತಕ್ಕದ್ದು.

III. ಪ್ರತಿ ಒಂದು ಕ್ಯಾಲೆಂಡರ್ ತಿಂಗಳ ಆಖೈರಿನೊಳಗಾಗಿ ಮುಂದಿನ ತಿಂಗಳನಲ್ಲಿ ಕಾರ್ಖಾನೆಯು ಮುಚ್ಚಲ್ಪಡುವ ಎಲ್ಲಾ ದಿನಗಳನ್ನು ತೋರಿಸುವ ತಖ್ತೆ. ಈ ತಖ್ತೆಯನ್ನು ತಖ್ತೆಲಿ ತೋರಿಸುವ ಹಿಂದಿನ ತಿಂಗಳಲ್ಲಿ ಕಾರ್ಖಾನೆಯಲ್ಲಿ ಕೆಲಸ ನಡೆದರೂ ನಡಿಯದೆ ಇದ್ದರೂ ರವಾನಿಸತಕ್ಕದ್ದು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಫೈನಾನ್ಸ್ ಜನರಲ್ ಮತ್ತು ರೆವೆನ್ಯೂ ಇಲಾಖೆಗಳ ಸೆಕ್ರೆಟರಿ.

(62)

ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 47.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 3, ಸನ್ 1903.

IIIನೆ ಭಾಗ.

ಲೆಜಿಸ್ಲೇಟಿವು ರೆಗ್ಯುಲೇಷನ್ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಗವರ್ನಮೆಂಟು,

ಲೆಜಿಸ್ಲೇಟಿವು ಇಲಾಖೆ.

ಇಸ್ತಿಹಾರ್, ನಂ. 848—ಜ್ಯಾ. ತಾರೀಖು 27ನೆ ಅಕ್ಟೋಬರ್ 1903.

ಸನ್ 1892ನೆ ಇಸವಿಯ IVನೆ ನಂಬರ್ ಮೈಸೂರು ಕಾರ್ಖಾನೆಗಳ ರೆಗ್ಯುಲೇಷನ್ 18ನೆ ಸೆಕ್ಷನಿನ 4ನೆ ಪ್ರಕರಣವನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮೇಲ್ಕಂಡ 18ನೆ ಸೆಕ್ಷನಿನ 2ನೆ ಪ್ರಕರಣದ ಪ್ರಕಾರ ತಮಗಿರುವ ಅಧಿಕಾರ ಚಲಾವಣೆಯಲ್ಲಿಯೂ ಮತ್ತು 1901ನೆ ಇಸವಿ ಜನವರಿ 4ನೆ ತಾರೀಖಿನ ನಂ. 8627—ಲೆಗಿಸ್ 70ನೆ ನೋಟಿಫಿಕೇಷನಗೆ ಬದಲಾಗಿಯೂ ಸಹ ಮಾಡಬೇಕೆಂದಿರುವ ಇದರಡಿ ವಿವರಿಸಿರುವ ರೂಲಿನ ಮಸೂದೆಯನ್ನು ಸಕಲ ಜನರಿಗೂ ತಿಳಿಯಪಡಿಸುವ ಬಗ್ಯೆ ಪ್ರಕಟಿಸಿರುತ್ತಾರೆ. ಮೈಸೂರು ಗೆಜೆಟ್ಟಿನಲ್ಲಿ ಈ ಇಸ್ತಿಹಾರ್ ಪ್ರಾಯಿಷ್ ಆದ ಯರಡು ತಿಂಗಳು ಕಳೆದ ನಂತರ ಈ ಮಸೂದೆಯನ್ನು ಸರ್ಕಾರದವರು ವಿಚಾರಕ್ಕೆ ತೆಗೆದುಕೊಳ್ಳುತ್ತಾರೆ:—

ಕಾರ್ಖಾನೆಗಳ ಸ್ವಾಧೀನದಲ್ಲಿರುವ ಪ್ರತಿ ಒಬ್ಬನೂ ಈ ಕೆಳಗೆ ತೋರಿಸಿರುವ ತಖ್ತೆಗಳನ್ನು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು:—

I. ಪ್ರತಿ ವರುಷದ ಜನವರಿ 15ನೆ ತಾರೀಖಿನ ದಿನ ಅಥವಾ ತತ್ಪೂರ್ವ, ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಒಂದು ಸಾಲ್ಯಿಯಾಡೆ ತಖ್ತೆಯನ್ನೂ:—

ಕಾರ್ಖಾನೆಯ ಹೆಸರು ಮತ್ತೂ ಇರತಕ್ಕ ಸ್ಥಳ.	ಯಜಮಾನನ ಅಥವಾ ಸ್ವಾಧೀನದಾರನ ಹೆಸರು.	ಮ್ಯಾನೇಜರ್ ಹೆಸರು.	ಕೆಲಸದ ಸ್ವಭಾವ.	ಕೆಲಸಕ್ಕೆ ಸಹಾಯಕವಾದ ಚಲನಾಶಕ್ತಿ ಮತ್ತೂ ಅದರ ಸ್ವಭಾವ.	ಸರಾಸರಿ ಪ್ರತಿನಿತ್ಯವೂ ಕೆಲಸ ಮಾಡತಕ್ಕವರ ಸಂಖ್ಯೆ. ದೊಡ್ಡವರು. ಗಂಡಸರು.	ದೊಡ್ಡವರು. ಹೆಂಗಸರು.	ಹುಡುಗರು. ಗಂಡಸರು.	ಹುಡುಗರು. ಹೆಂಗಸರು.	ಕಾರ್ಖಾನೆಯಲ್ಲಿ ಬದಲಾಯಿಸಿಕೊಂಡು ಕೆಲಸ ಮಾಡಲ್ಪಡುತ್ತೊ ಅಥವಾ ಆಗಾಗ್ಯೆ ಕೆಲಸ ನಿಲ್ಲಿಸಲ್ಪಡುತ್ತೊ—ಹಾಗೆ ನಿಲ್ಲಿಸಲ್ಪಟ್ಟರೆ ಯಾವಾಗ ಮತ್ತು ದಿನಕ್ಕೆ ಯಷ್ಟು ಹೊತ್ತು ನಿಲ್ಲಿಸಲ್ಪಡುತ್ತೆ.	ಆದಿತ್ಯವಾರವಾಗಲಿ ಇನ್ಯಾವ ವಾರವಾಗಲೀ ಪೂರಾ ರಜಾದಿನಗಳಂತೆ ಅಥವಾ ರೆಗ್ಯುಲೇಷನ್ನಿನ ಸೆಕ್ಷನ್ 5 B (1) ಕ್ಲಾಜ್ (c) ಪ್ರಕಾರ ಕಾರ್ಖಾನೆಯು ಆದಿತ್ಯವಾರದ ದಿನ ಕೆಲಸ ನಡಿಸುವ ವಿಷಯದಲ್ಲಿನ ರೂಲಿನಿಂದ ವಿನಾಯಿಸಲ್ಪಟ್ಟಿರುತ್ತದೆಯೆ.	ಷರಾ.

N. B.—ದಿನಂಪ್ರತಿ ಕೆಲಸ ಮಾಡುವ ಹುಡುಗರ ಸಂಖ್ಯೆಯನ್ನು ಕಾರ್ಖಾನೆಯಲ್ಲಿಟ್ಟಿರುವ ಹುಡುಗರ ರಿಜಿಸ್ಟರಿನಿಂದ ತೆಗೆದುಕೊಳ್ಳಬೇಕು.

II. ಈ ಕೆಳಗಿನ ನಮೂನೆಯಲ್ಲಿ ಅಳತೆ ಮತ್ತು ವಿಸ್ತೀರ್ಣವನ್ನು ತೋರಿಸುವ ತಖ್ತೆಯನ್ನೂ:—

ಕಾರ್ಖಾನೆಯ ಹೆಸರು ಮತ್ತು ಇರತಕ್ಕ ಸ್ಥಳ.	ಸ್ವಾಧೀನದಲ್ಲಿರುವವರ ಹೆಸರು.	ಕಾರ್ಖಾನೆಯಲ್ಲಿರುವ ಪ್ರತಿ ಒಂದು ಚಿಕ್ಕ ಮನೆಯ ಅಳತೆ ಮತ್ತು ಘನ ಆಕಾರ.	ಹಿಂದಿನ ಕಾಲಂನಲ್ಲಿ ತೋರಿಸಿರುವ ಯಾವದಾದರೊಂದು ಚಿಕ್ಕ ಮನೆಗಳಲ್ಲಿ ಯಂತ್ರಗಳು ಅಥವಾ ಇತರ ಭೂಸ್ಥಾಪಿತ ವಸ್ತುಗಳಿರುವ ಚಿಕ್ಕ ಮನೆಯ ನೆಲದ ಅಳತೆ.	ಷರಾ.

ಮೇಲ್ಕಂಡ ತಖ್ತೆಯು ಪ್ರತಿ ಒಂದು ಕಾರ್ಖಾನೆಯು ರೆಗ್ಯುಲೇಷರ್ಣ ಅನುಸರಿಸಿ ಮೊದಲು ರಿಜಿಸ್ಟರ್ ಆದ ಕೂಡಲೇ ಕಳುಹಿಸಲ್ಪಡತಕ್ಕದ್ದು. ಮತ್ತು ತದನಂತರ ಕಾರ್ಖಾನೆಯಲ್ಲಿ ಅದರ ಯಾವದೊಂದು ಚಿಕ್ಕಮನೆಯ ಅಳತೆ ಅಥವಾ ಘನ ಆಕಾರಗಳು ಅಥವಾ ಯಂತ್ರಗಳು ಅಥವಾ ಇತರ ಭೂಸ್ಥಾಪಿತವಾದ ವಸ್ತುಗಳು ಇರತಕ್ಕ ಚಿಕ್ಕಮನೆಗಳ ಅಳತೆಗಳಿಗೆ ಕುಂದಕವಾಗುವ ಯಾವ ಬದಲಾವಣೆ ಮಾಡಿದಾಗಲೂ ಕಳುಹಿಸಲ್ಪಡತಕ್ಕದ್ದು.

III. ಪ್ರತಿ ಒಂದು ಕ್ಯಾಲೆಂಡರ್ ತಿಂಗಳ ಆಖೈರಿನೊಳಗಾಗಿ ಮುಂದಿನ ತಿಂಗಳನಲ್ಲಿ ಕಾರ್ಖಾನೆಯು ಮುಚ್ಚಲ್ಪಡುವ ಎಲ್ಲಾ ದಿನಗಳನ್ನು ತೋರಿಸುವ ತಖ್ತೆ. ಈ ತಖ್ತೆಯನ್ನು ತಖ್ತೇಲಿ ತೋರಿಸುವ ಹಿಂದಿನ ತಿಂಗಳಲ್ಲಿ ಕಾರ್ಖಾನೆಯಲ್ಲಿ ಕೆಲಸ ನಡೆದರೂ ನಡಿಯದೆ ಇದ್ದರೂ ರವಾನಿಸತಕ್ಕದ್ದು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಅಯ್ಯರ್,
ಚೀಫ್ ಜನರಲ್ ಮತ್ತು ರೆವೆನ್ಯೂ ಇಲಾಖೆಗಳ ಸೆಕ್ರೆಟರಿ.

623

ಮೈಸೂರ ಗೆಜೆಟ್.

ಸಂ. 38] ಸರ್ಕಾರದಿಂದ ಪಬ್ಲಿಷ್ ಆದ್ದು. [ಸಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 10, ಸನ್ 1903.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

1903ನೆ ವರುಷದ IIIನೆ ನಂಬರಿನ ರೆಗ್ಯುಲೇಷನ್.

(1903ನೆ ವರುಷದ ನವಂಬರ್ 4ನೆ ತಾರೀಖಿನಲ್ಲಿ ಮಂಜೂರಾದ್ದು.)

ಮೈಸೂರು ಪಟ್ಟಣವನ್ನು ಉತ್ತಮ ಪಡಿಸುವ ವಿಚಾರದಲ್ಲಿಯು ಮತ್ತು ಅದನ್ನು ಉತ್ತರೋತ್ತರ ವಿಸ್ತಾರ ಪಡಿಸಲು ಸ್ಥಳ ಹೊಂದಿಸುವ ವಿಚಾರದಲ್ಲಿಯು ಆಗಿರುವ ರೆಗ್ಯುಲೇಷನ್.

ಪೀಠಿಕೆ.

ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರವು ಉತ್ತರೋತ್ತರ ವೃದ್ಧಿ ಪಡಿಸುವದಕ್ಕೋಸ್ಕರವು ಮತ್ತು ಮೇಲ್ಕಂಡ ಉದ್ದೇಶಗಳನ್ನು ಜಾರಿ ತರುವ ಬಗ್ಯೆ ಪ್ರತ್ಯೇಕ ತರದ ಅಧಿಕಾರಗಳನ್ನುಳ್ಳ ಒಂದು ಪಾರುಪತ್ಯಗಾರರ ಸಭೆಯನ್ನು (Board of Trustees ಟ್ರಸ್ಟಿಗಳ ಬೋರ್ಡ್) ನೇಮಿಸೋಣ ಯುಕ್ತವಾದುದರಿಂದ ; ಘನವನ್ನೈದಿದ ಶ್ರೀಮನ್ ಮಹಾರಾಜಾ ಸಾಹೇಬರವರು ಇದರಡೀ ಕಂಡಂತೆ ಕಾನೂನನ್ನು ಏರ್ಪಡಿಸಿರುತ್ತಾರೆ :—

1ನೆ ಅಧ್ಯಾಯ.

ಅವತರಣಿಕೆ.

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅಮಲ್ ಷುರು.

1. (1) ಈ ರೆಗ್ಯುಲೇಷನ್ "1903ನೆ ವರುಷದ ಸಿಟಿ ಆಫ್ ಮೈಸೂರು ಇಂಪ್ರುವ್‌ಮೆಂಟ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು ;

(2) ಇದರಲ್ಲಿ ಮುಂದೆ ಅನ್ಯಥಾ ನೇಮಿಸಲ್ಪಟ್ಟ ಹೊರ್ತು, ಇದು ಮೈಸೂರು ಪಟ್ಟಣಕ್ಕೆ ಮಾತ್ರವೆ ವ್ಯಾಪಿಸತಕ್ಕದ್ದು ;

(3) ಇದು ಸರ್ಕಾರಿ ಗೆಜೆಟಿನಲ್ಲಿ ಇಸ್ತಿಹಾರ್ ಮೂಲಕವಾಗಿ ಗವರ್ನಮೆಂಟಿನವರು ವಿಧಿಸಬಹುದಾದ ತಾರೀಕು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

2. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಿಂದಾಗಲಿ ಸಂದರ್ಭದಿಂದಾಗಲಿ ವಿರೋಧವಾದ್ದೇನಾದರು ಇದ್ದರೇನೆ ಶಿವಾಯಿ,—

ಅರ್ಥ ವಿವರಣೆ.

"ಮೈಸೂರುಪಟ್ಣ" ಅಥವಾ "ಪಟ್ಣ" ಅಂದರೆ ಗವರ್ನಮೆಂಟಿನವರು ಮೈಸೂರು ಪಟ್ಣದಲ್ಲಿ ಜಾರಿಯಲ್ಲಿರುವ (ಮತ್ತು ಇದರಲ್ಲಿ "ಮ್ಯುನಿಸಿಪಲ್ ರೆಗ್ಯುಲೇಷರ್" ಎಂದು ಮುಂದೆ ಸೂಚಿಸಲ್ಪಡತಕ್ಕ) 1871ನೆ ವರುಷದ ಮ್ಯುನಿಸಿಪಲ್ ರೆಗ್ಯುಲೇಷರ್ಗಳಿಗೆ ಅನುಸಾರವಾಗಿ ಆಗಿಂದಾಗ್ಗೆ ನೇಮಿಸಿರುವ ಮೈಸೂರು ಪಟ್ಣದ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಅಡಗಿರತಕ್ಕ ಸ್ಥಳ ಎಂಬ ಅರ್ಥ.

"ಪಟ್ಣ"

"ಇಂಪ್ರೂವ್‌ಮೆಂಟ್ ಕಮಿಟಿ" ಅಂದರೆ ಮೈಸೂರು ಪಟ್ಣವನ್ನು ಉತ್ತಮ ಪಡಿಸುವದಕ್ಕಾಗಿ ಒಂದು ಉಪಾಯ ಮಾಡುವ ಉದ್ದೇಶಕ್ಕೋಸ್ಕರ, 1902ನೆ ವರುಷದ ಸೆಪ್ಟಂಬರ್ 16ನೆ ತಾರೀಕಿನ ನಂಬರು 4168-79—L. F. 36—02 ಸರ್ಕಾರಿ ಹುಕುಂನಲ್ಲಿ ನೇಮಿಸಲ್ಪಟ್ಟಿರುವ ಕಮಿಟಿ ಎಂದರ್ಥ.

"ಇಂಪ್ರೂವ್‌ಮೆಂಟ್ ಕಮಿಟಿ."

"ಭೂಮಿ" ಎಂಬ ಮಾತು ಮೇಲ್ಕಟ್ಟಿಡ ಉಳ್ಳ ಅಥವಾ ನೀರಿನಿಂದ ಮುಚ್ಚಲ್ಪಟ್ಟಿರುವ ಭೂಮಿಯನ್ನು ಅಡಗಿಸಿಕೊಳ್ಳುತ್ತೆ.

"ಭೂಮಿ"

"ಬೀದಿ" ಎಂಬದರಲ್ಲಿ ಯಾವದೊಂದು ರಾಜಮಾರ್ಗ, ಒಡ್ಡಿನಮೇಲೆ ಹಾಯುವ ದಾರಿ, ಸೇತುವೆ, ಸಂಕ, ಕವನು, ರಸ್ತೆ, ಸಂದಿ, ಕಾಲುದಾರಿ, ಚೌಕ, ಅಂಗಳ, ಉಪವನದ ಮಾರ್ಗ ಅಥವಾ ದಾರಿ ಬೀದಿಯಾಗಿರಲಿ ಇಲ್ಲದಿರಲಿ; ಇವುಗಳು ಅಡಗಿರುತ್ತವೆ.

"ಬೀದಿ"

ಇತರ ಪದಗಳು, ಮ್ಯುನಿಸಿಪಲ್ ರೆಗ್ಯುಲೇಷರ್ಗಳಲ್ಲಿ ಅದೇ ಪದಗಳಿಗೆ ಯಾವ ಅರ್ಥವನ್ನು ಆರೋಪಿಸಿಧೆಯೋ, ಆ ಅರ್ಥವನ್ನುಂಟಾಗಿರತಕ್ಕದ್ದು.

ಇತರ ಪದಗಳು.

IIನೆ ಅಧ್ಯಾಯ.

ಬೋರ್ಡ್ ಆಫ್ ಟ್ರಸ್ಟೀಸ್ ಕುರಿತು.

3. ಈ ರೆಗ್ಯುಲೇಷನಿನಲ್ಲಿರುವ ನಿಯಮಗಳನ್ನು ಜಾರಿಯಲ್ಲಿ ತರತಕ್ಕ ಕರ್ತವ್ಯವು, ಇದರಲ್ಲಿ ಮುಂದೆ ಇರುವ ವಿದ್ಯಮಾನಗಳಿಗು ಮೇರೆಗಳಿಗು ಒಳಗಾಗಿ, "ಮೈಸೂರು ಪಟ್ಣವನ್ನು ಉತ್ತಮಪಡಿಸುವದಕ್ಕಾಗಿರುವ ಟ್ರಸ್ಟೀಸ್" ಗಳೆಂದು ಕರೆಯಲ್ಪಡುವ ಒಂದು ಬೋರ್ಡ್ ಯಾ ಸಮಾಜಕ್ಕೆ ಸೇರಿರತಕ್ಕದ್ದು. ಆ ಸಮಾಜವು ಇದರಲ್ಲಿ ಮುಂದೆ "ಬೋರ್ಡ್" ಎಂಬದಾಗಿ ಸೂಚಿಸಲ್ಪಡುತ್ತೆ. ಆ ಬೋರ್ಡ್ ಒಂದು ಕೂಡಿಸಿದ ಸಮುದಾಯವಾಗಿಯೂ, ಸ್ಥಿರವಾದ ಪರಂಪರೆಯುಳ್ಳದ್ದಾಗಿಯೂ, ಒಂದು ಸಾಮಾನ್ಯ ಮೊಹರು ಉಳ್ಳದ್ದಾಗಿಯು, ಇರತಕ್ಕದ್ದಲ್ಲದೆ ಅದರ ಸಮುದಾಯದ ಹೆಸರಿನಲ್ಲಿ ಬೋರ್ಡ್ ಅನ್ಯರ ಮೇಲೂ, ಅನ್ಯರು ಆ ಬೋರ್ಡಿನ ಮೇಲೂ, ಧಾವೆ ಮಾಡಬಹುದು.

ಈ ರೆಗ್ಯುಲೇಷನಿನಂತೆ ಬೋರ್ಡಿನವರು ಅಮಲ್‌ಜಾರಿ ಮಾಡುವದು.

4. ಬೋರ್ಡಿಗೆ ಎಂಟು ಟ್ರಸ್ಟಿಗಳು ಇರತಕ್ಕದ್ದು. ಅದು ಹ್ಯಾಗಂದರೆ:—

ಬೋರ್ಡಿನ ಏರ್ಪಾಟು.

ಗವರ್ನಮೆಂಟಿನವರಿಂದ ಮೊಕರರು ಆಗಬೇಕಾದ ಒಂದು ಛೇರ್ಮೆನ್ (ಅಧ್ಯಕ್ಷ);

ಮೈಸೂರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನಿನ ತತ್ಕಾಲದಲ್ಲಿರುವ ವೈಸ್ ಪ್ರಸಿಡೆಂಟರು;

ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದಲ್ಲಿರುವ ಸಿವಿಲ್ ಸರ್ಜನ್;

ಗವರ್ನಮೆಂಟಿನವರಿಂದ ಮೊಕರರು ಆಗಬೇಕಾದ 3 ಟ್ರಸ್ಟಿಗಳು;

38ನೆ ಪ್ರಕರಣ ಪ್ರಕಾರ ಗವರ್ನಮೆಂಟಿನವರು ವಿಧಿಸಬಹುದಾದ ನಿಬಂಧನೆಗಳಿಗೆ ಅನುಸಾರವಾಗಿ ಮೈಸೂರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನರುಗಳು ತಮ್ಮ ಸಂಘದೊಳಗೇನೆ ಚುನಾಯಿಸಬೇಕಾದ 2 ಟ್ರಸ್ಟಿಗಳು; ಆದರೆ ಅವರಿಬ್ಬರುಗಳ ಚುನಾವಣೆಯು ಗವರ್ನಮೆಂಟಿನವರ ಅನುಮತಿಗೆ ಒಳಪಟ್ಟದ್ದಾಗಿರಬೇಕು. ಅಥವಾ ಈರೀತಿಯ ಚುನಾವಣೆಯು ಇಲ್ಲದಿರುವ ಪಕ್ಷದಲ್ಲಿ ಗವರ್ನಮೆಂಟಿನವರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನರುಗಳ ಪೈಕಿ ಆ 2 ಟ್ರಸ್ಟಿಗಳನ್ನು ನೇಮಿಸಬೇಕು;

5. ಯಾವ ಟ್ರಸ್ಟಿಗಳನ್ನು ಗವರ್ನಮೆಂಟಿನವರು ನೇಮಿಸಿರುತ್ತಾರೆಯೋ, ಅಥವಾ ಮ್ಯುನಿಸಿಪಲ್ ಕಮ್ಮಿಷನರುಗಳಿಂದಾದ ಯಾವ ಟ್ರಸ್ಟಿಗಳ ಚುನಾವಣೆಯನ್ನು ಗವರ್ನಮೆಂಟಿನವರು ಒಪ್ಪಿರುತ್ತಾರೆಯೋ, ಅಂಥಾ ಟ್ರಸ್ಟಿಗಳ ಹೆಸರುಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ್ ಮೂಲಕವಾಗಿ ನಿರೂಪಿಸಬೇಕು.

ಟ್ರಸ್ಟಿಗಳ ಹೆಸರುಗಳನ್ನು ಇಸ್ತಿಹಾರ್ ಮೂಲಕ ತಿಳಿಸಬೇಕು.

6. (1) ಗವರ್ನಮೆಂಟಿನವರ ಅಪ್ಪಣೆ ಇರುವವರಿಗೂ ಬೋರ್ಡಿನ ಛೇರ್ಮೆನ್ನು ತಮ್ಮ ಉದ್ಯೋಗದಲ್ಲಿರಬೇಕು.

ಟ್ರಸ್ಟಿಗಳ ಉದ್ಯೋಗದ ವಾಯಿದೆ.

(2) ಉದ್ಯೋಗ ಪ್ರಯುಕ್ತವಾಗಿ ಇಲ್ಲದಿರುವ ಇತರ ಟ್ರಸ್ಟಿಗಳು, ಹಿಂದಿನ ಪ್ರಕರಣದ ಪ್ರಕಾರ ತಮ್ಮ ಹೆಸರುಗಳು ನಮೂದಾಗಿರುವ ಸರ್ಕಾರಿ ಗೆಜೆಟ್ಟಿನ ತಾರೀಕು ಲಾಗಾಯಿತು 2 ವರುಷಗಳ ಪರ್ಯಂತರ, ತಮ್ಮ ಉದ್ಯೋಗದಲ್ಲಿರಬೇಕು.

ಆಕಸ್ಮಿಕವಾದ ಖಾಲಿಗಳು.

7. (1) ಮರಣದಿಂದಾಗಲಿ, ರಾಜೀನಾಮೆಯಿಂದಾಗಲಿ ಅಥವಾ ಅಯೋಗ್ಯತೆಯಿಂದಾಗಲಿ, ಆಕಸ್ಮಿಕವಾಗಿ ಖಾಲಿ ಆಗುವ ಚೇರಮೆನ್ನಲ್ಲದಿರುವ ಟ್ರಸ್ಟಿಯ ಸ್ಥಾನವು, ಟ್ರಸ್ಟಿಗಳ ಪ್ರಥಮ ಚುನಾವಣೆ ಮತ್ತು ಮೊಕರರಾತಿ ನಡೆದ ವಿಧಾನದಲ್ಲಿಯು, ಅವುಗಳನ್ನು ಮಾಡಿದ ಅಧಿಕಾರಿಗಳಿಂದಲು, ಮತ್ತು ಆ ಚುನಾವಣೆ ಮೊಕರರಾತಿಗೆ ಲಗಾವಾಗುವ ನಿಯಮಗಳಿಗೆ ಸಾಧ್ಯವಾದಷ್ಟು ಅನುಸಾರವಾಗಿಯು, ಒಂದು ತಿಂಗಳೊಳಗಾಗಿ ಭರ್ತಿ ಆಗತಕ್ಕದ್ದು: ಆದರೆ ಹಾಗೆ ಚುನಾಯಿಸಲ್ಪಟ್ಟ ಟ್ರಸ್ಟಿಯು, ಉದ್ಯೋಗ ಬಿಡುವ ಟ್ರಸ್ಟಿಯು ತನ್ನ ಉದ್ಯೋಗವನ್ನು ಅಂಥಾ ಖಾಲಿ ಬೀಳದ ಪಕ್ಷದಲ್ಲಿ ಯಾವ ಪರ್ಯಂತರ ಇಟ್ಟುಕೊಳ್ಳಬಹುದಾಗಿತ್ತೋ ಆ ಮಿಯಾದಿ ವರಿಗೆನೇ, ತನ್ನ ಸ್ಥಾನದಲ್ಲಿರತಕ್ಕದ್ದು.

3 ತಿಂಗಳುಗಳಿಗಿಂತ ಅಧಿಕ ಕಾಲಗಳಿಗೆ.

(2) ಚೇರಮೆನ್ನಲ್ಲದೆ ಇರುವ ಟ್ರಸ್ಟಿಯು,—

(a) 3 ತಿಂಗಳಿಗೆ ಅಧಿಕವಾದ ಕಾಲ ಬಾರದೆ ಇರುವ ಅಭಿಪ್ರಾಯವನ್ನು ತಿಳಿಯಪಡಿಸಿ ಪಟ್ಣದಿಂದ ಹೊರಟು ಹೋಗೋಣ ;

(b) 3 ತಿಂಗಳಿಗೆ ಅಧಿಕವಾದ ಕಾಲ ಬೋರ್ಡಿನ ಮೀಟಿಂಗುಗಳಿಗೆ ಬರಲು ಯಾವ ಕಾರಣದಿಂದಾಗಲಿ ಅಶಕ್ತನಾಗಿರೋಣ ;

(c) 3 ತಿಂಗಳಿಗೆ ಅಧಿಕವಾದ ಕಾಲ ಪಟ್ಣದಲ್ಲಿ ಇಲ್ಲದಿರೋಣ ;

ಈ ಪಕ್ಷಗಳಲ್ಲಿ, ಅವನ ಸ್ಥಾನಕ್ಕೆ, ಅವನ ಗೈರುಹಾಜರಿ ಅಥವಾ ಅಶಕ್ತಿ ಇರುವ ಪರ್ಯಂತರ ಅಥವಾ ಅವನು ಟ್ರಸ್ಟಿ ಸ್ಥಾನವನ್ನು ಬಿಡುವ ಪರ್ಯಂತರ, ಮತ್ತೊಬ್ಬ ಮನುಷ್ಯನನ್ನು ಚುನಾಯಿಸಬೇಕು ಯಾ ಮೊಕರರು ಮಾಡಬೇಕು, ಮತ್ತು ಹಾಗೆ ಬದಲಿ ಕೆಲಸ ಮಾಡುವ ಮನುಷ್ಯನನ್ನು ಈ ರೆಗ್ಯುಲೇಷನಿನ ಸಮಸ್ತ ಉದ್ದೇಶಗಳಿಗೋಸ್ಕರ ಒಂದು ಟ್ರಸ್ಟಿ ಆಗಿ ಎಣಿಸಬೇಕು.

3 ತಿಂಗಳೊಳಗೆ ಆವಶ್ಯಕವಾದರೆ ಬದಲಿ ಮೊಕರರಾತಿಯ ಚುನಾವಣೆ ಮಾಡಲು ಅಧಿಕಾರ ಕೊಡುವ ನಿಯಮ.

(3) ಯಾವ ಟ್ರಸ್ಟಿ ಆಗಲಿ ಗೈರು ಹಾಜರು ಆದರೆ, ಗೈರುಹಾಜರಾದ ಟ್ರಸ್ಟಿಯು ಮೊಕರರು ಆಗಿರುವ ಪಕ್ಷದಲ್ಲಿ ಗವರ್ನ್ಮೆಂಟಿನವರ ಅಭಿಪ್ರಾಯದಂತೆಯೋ, ಅಥವಾ ಗೈರುಹಾಜರಾದ ಟ್ರಸ್ಟಿಯು ಚುನಾಯಿಸಲ್ಪಟ್ಟಿರುವ ಪಕ್ಷದಲ್ಲಿ ಮ್ಯುನಿಸಿಪಲ್ ಕಮಿಷನರವರಗಳಿಗೆ ಬೋರ್ಡು ಮನವಿ ಮಾಡಿಕೊಂಡಾಗಲೋ, ಮತ್ತೊಬ್ಬ ಮನುಷ್ಯನನ್ನು 3 ತಿಂಗಳಿಗೆ ಕಮ್ಮಿಯಾದ ಕಾಲಕ್ಕೆ ಟ್ರಸ್ಟಿಯಾಗಿ ಚುನಾಯಿಸಲು ಅಥವಾ ಮೊಕರರು ಮಾಡಲು, ಹಿಂದೆ ಬಂದಿರುವ ಕಡೆ ಉಪಪ್ರಕರಣದ ಯಾವ ನಿಯಮದಿಂದಾಗಲಿ ಅಡ್ಡಿ ಇರುವದಿಲ್ಲ.

ಟ್ರಸ್ಟಿಗಳು ತಮ್ಮ ಸ್ಥಾನವನ್ನು ಖಾಲಿ ಮಾಡಬೇಕಾದ ಕಾರಣಗಳು

8. (1) ಯಾವ ಟ್ರಸ್ಟಿಯಾದರು,

(a) ನಾದಾರ ಆದರೆ ; ಅಥವಾ

(b) 6 ತಿಂಗಳಿಗೆ ಅಧಿಕವಾಗಿ ಕೈದಿನಿಂದ ಶಿಕ್ಷಿಸಲ್ಪಡಬಹುದಾದ ಅಪರಾಧಕ್ಕೆ, ಕೈದಿನಿಂದ ಶಿಕ್ಷಿಸಲ್ಪಟ್ಟರೆ ಅಥವಾ ಗಡಿಪಾರು ದಂಡನೆಗೆ ಶಿಕ್ಷಿಸಲ್ಪಟ್ಟರೆ, ಅಂಥಾ ಶಿಕ್ಷೆಯು ರದ್ದಾದರೇನೆ ಅಥವಾ ಬದಲಾಯಿಸಲ್ಪಟ್ಟರೇನೆ ಹೊರ್ತು ; ಅಥವಾ

(c) ಬೋರ್ಡಿನ ತಾಬೆಯಲ್ಲಿ ಲಾಭ ಸಿಕ್ಕುವ ಉದ್ಯೋಗವನ್ನಾಗಲಿ ಅಥವಾ ಸ್ಥಾನವನ್ನಾಗಲಿ ಸಂಪಾದಿಸಿಕೊಂಡರೆ ; ಅಥವಾ

(d) ಸಾಕ್ಷಾತ್ತಾಗಿಯಾದರೂ ಅಥವಾ ಪರಭಾರೆಯಾಗಿಯಾದರೂ ತನ್ನಿಂದಾಗಲಿ ಅಥವಾ ತನ್ನ ಪಾಲುದಾರನಿಂದಾಗಲಿ ಬೋರ್ಡಿನೊಂದಿಗೆ ಅಥವಾ ಬೋರ್ಡಿನಪರವಾಗಿ ಯಾವ ಉದ್ಯೋಗದಲ್ಲಿಯಾದರು ಅಥವಾ ಯಾವ ಕಂಟ್ರಾಕ್ಟಿನಲ್ಲಿಯಾದರು ಹಿಸ್ಸೆಯೋ ಅಥವಾ ಪ್ರಯೋಜನವೋ, ಈ ಕೆಳಗೆ ಬರುವ ವಿದ್ಯಮಾನಗಳಲ್ಲಿ ಹೊರತು, ಉಂಟಾಗಿದ್ದರೆ :—

(i) ಸ್ಥಿರಸೊತ್ತಿನ ಪಟ್ಟೆ, ವಿಕ್ರಯ, ಬದಲಿಸೋಣ ಅಥವಾ ಕರೀದಿಗೆ ತೆಗದುಕೊಳ್ಳೋಣ ಅಥವಾ ಇದಕ್ಕಾಗಿ ಕರಾರು ಮಾಡೋಣ, ಅಥವಾ

(ii) ಬೋರ್ಡಿನೊಂದಿಗಾಗಲಿ, ಬೋರ್ಡಿನ ಪರವಾಗಿ ಆಗಲಿ, ಬೋರ್ಡಿನಿಂದಾಗಲಿ, ಕಂಟ್ರಾಕ್ಟು ಮಾಡುವ ಅಥವಾ ಕೆಲಸಕ್ಕೆ ಇಟ್ಟುಕೊಳ್ಳಲ್ಪಟ್ಟ ಯಾವ ಜಾಯಿಂಟ್ ಸ್ಟಾಕು ಕಂಪನಿ, ಅಥವಾ

(iii) ಎರಡು ಸಾವಿರ ರೂಪಾಯಿಗಳಿಗೆ ಅಧಿಕವಿಲ್ಲದ ಕ್ರಯವುಳ್ಳ ತಾನೆ ವ್ಯಾಪಾರ ಮಾಡುವ ಯಾವ ಪದಾರ್ಥವನ್ನಾದರು ಯಾವದೊಂದು ಸರ್ಕಾರಿ ಸಂವತ್ಸರದಲ್ಲಾಗಲಿ ಬೋರ್ಡಿಗೆ ಆಗಾಗ್ಯೆ ವಿಕ್ರಯಿಸುವದು : ಇಂಥಾವುಗಳಲ್ಲಿ ಖರೀ ಹಿಸ್ಸೆಯೋ ಅಥವಾ ಪ್ರಯೋಜನವೂ ಉಂಟಾಗಿರೋಣ ವಿನಹ ; ಅಥವಾ

(e) ಅನುಕ್ರಮವಾದ 12 ತಿಂಗಳುಗಳಿಗೆ ಅಧಿಕವಾಗಿ ಬೋರ್ಡಿನ ಮೀಟಿಂಗುಗಳಿಗೆ ಬಾರದೆ ಇದ್ದರೆ ಅಥವಾ ಬರಲು ಅಶಕ್ತನಾಗಿದ್ದರೆ, ಅಥವಾ ಬೋರ್ಡಿನ ಅನುಮತಿಯಿಲ್ಲದೇನೆ ಬೋರ್ಡಿನ ಅನುಕ್ರಮವಾದ ಆರು ಸಾಧಾರಣ ಮೀಟಿಂಗುಗಳಿಗೆ ಬಾರದೆ ಇದ್ದರೆ ; ಅಥವಾ

(*f*) ಇದರ ಮುಂದಿನ ಉಪಪ್ರಕರಣದ ನಿಯಮಗಳಿಗೆ ವಿರೋಧವಾಗಿ ಆಚರಿಸಿದರೆ ; ಅಥವಾ

(*g*) ಚುನಾಯಿಸಲ್ಪಟ್ಟ ಟ್ರಸ್ಟಿ ಆಗಿದ್ದು ಮ್ಯೂನಿಸಿಪಲ್ ಕಮ್ಮಿಷನರ್ ಉದ್ಯೋಗದಿಂದ ನಿವೃತ್ತಿ ಆದಕೂಡ್ಲೆ ಪುನಹ ಮ್ಯೂನಿಸಿಪಲ್ ಕಮ್ಮಿಷನರಾಗಿ ಚುನಾವು ಅಥವಾ ಮೊಕರರಾಗದೆ ಇದ್ದರೆ ;—

ಟ್ರಸ್ಟಿಯು ಉದ್ಯೋಗವನ್ನು ಬಿಡತಕ್ಕದ್ದು ಮತ್ತು ಅವನ ಸ್ಥಾನವು ಖಾಲಿಯಾಗತಕ್ಕದ್ದು.

ಯಾವ ವಿಷಯಗಳಲ್ಲಿ ಟ್ರಸ್ಟಿಗಳು ಬಾಧ್ಯಪಡುತ್ತಾರೊ ಅವುಗಳನ್ನು ಕುರಿತು ವಿಚಾರ ಮಾಡಲು ಅಥವಾ ಸಮ್ಮತಿಕೊಡಲು ಅವರ ಅಧಿಕಾರಗಳಿಗೆ ನಿರ್ಬಂಧಗಳು.

(2) ಮೇಲಿನ (*d*) ಉಪಪ್ರಕರಣದ ಕೊನೆಯಲ್ಲಿ ವಿವರಿಸಿರುವ ಹಿಸ್ಸೆಯನ್ನೊ ಅಥವಾ ಬಾಧ್ಯತೆಯನ್ನೊ ಯಾವ ಟ್ರಸ್ಟಿಯು ಸಾಕ್ಷಾತ್ತಾಗಿ ಅಥವಾ ಪರಭಾರೆಯಾಗಿ ತನ್ನಿಂದಾಗಲಿ ಅಥವಾ ತನ್ನ ಹಿಸ್ಸೆದಾರನಿಂದಾಗಲಿ, ಅಥವಾ ತನ್ನ ವೃತ್ತಿ ಸಂಬಂಧದಿಂದ ತನ್ನ ಕಕ್ಷಿಗಾರನ ಪರವಾಗಿಯೊ ಅಥವಾ ಮತ್ತೊಬ್ಬ ಮನುಷ್ಯನ ಮೊಕ್ತಿಯಾರಾಗಿಯೊ ಯಾವ ವಿಷಯದಲ್ಲಿ ಉಂಟಾಗಿರುತ್ತಾನೆಯೊ, ಅಂಥ ವಿಷಯವಾಗಿ ಬೋರ್ಡಿನ ಅಥವಾ ಬೋರ್ಡಿನ ಕಮಿಟಿಯ ಯಾವ ಮೀಟಿಂಗುನಲ್ಲಿಯಾದರು ನಡೆಯುವ ವಾದದಲ್ಲಿ ಅಂಥ ಟ್ರಸ್ಟಿಯು ಭಾಗಿಯಾಗಕೂಡದು ಅಥವಾ ಸಮ್ಮತಿ ಕೊಡಕೂಡದು.

ಬೋರ್ಡಿನ ನಡವಳಿಕೆಗಳ ಸಮ್ಮಂಧವಾದ ನಿಯಮಗಳು.

9. ಬೋರ್ಡಿನ ನಡವಳಿಕೆಗಳ ಸಮ್ಮಂಧದಲ್ಲಿ ಈ ಕೆಳಗೆ ಬರುವ ನಿಯಮಗಳನ್ನ ಆಚರಿಸಬೇಕು, ಏನಂದರೆ :—

ಸ್ಥಳ ಖಾಲಿಯಾಗಿರೋಣ ನಡವಳಿಕೆಗಳಿಗೆ ಬಾಧಕವಲ್ಲ.

(1) ಬೋರ್ಡಿನಲ್ಲಿ ಯಾವದೊಂದು ಸ್ಥಳ ಖಾಲಿ ಇದ್ದಾಗ್ಯೂ ಉದ್ಯೋಗದಲ್ಲಿರುವ ಟ್ರಸ್ಟಿಗಳು ಅಂಥಾ ಖಾಲಿ ಸ್ಥಳವು ಖಾಲಿಯಾಗಿಲ್ಲವೆಂಬಂತೆ ತಮ್ಮ ನಡವಳಿಕೆಗಳನ್ನು ಚಲಾಯಿಸತಕ್ಕದ್ದು.

ಬೋರ್ಡು ಕೆಲಸ ನಡಿಸುವದಕ್ಕೋಸ್ಕರ ಕೂಡಬೇಕಾದ್ದು ಮತ್ತು ಏರ್ಪಾಟು ಮಾಡಬೇಕಾದ್ದು.

(2) ಬೋರ್ಡು ಒಟ್ಟುಸೇರಿ, ತಮ್ಮ ಮೀಟಿಂಗುಗಳ ಸ್ಥಳ, ದಿವಸ, ಘಂಟೆ, ನೋಟಿಸು, ನಡವಳಿಕೆಗಳ ಚಲಾವಣಿ, ಆ ಮೀಟಿಂಗುಗಳ ನಿಲಕಡೆ, ಮತ್ತು ಕೆಲಸ ನಡಿಸೋಣವನ್ನು ಕುರಿತು ಸಾಧಾರಣವಾಗಿ ತಮಗೆ ಯುಕ್ತವಾಗಿ ತೋರಿಬಂದಂತೆ, ಆಗಿಂದಾಗ್ಗೆ ಏರ್ಪಾಟುಗಳನ್ನು ಮಾಡಬೇಕು ; ಆದರೆ ಅಂಥಾ ಏರ್ಪಾಟುಗಳು ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆಯು ಮತ್ತು ಈ ಕೆಳಗೆ ಬರುವ ನಿಯಮಗಳಿಗೆ ಒಳಪಟ್ಟವುಗಳಾಗಿಯು ಇರತಕ್ಕದ್ದು, ಏನಂದರೆ :—

ತಿಂಗಳಿಗೆ ಒಂದಾವರ್ತಿ ಒಂದು ಸಾಧಾರಣವಾದ ಮೀಟಿಂಗು ಆಗತಕ್ಕದ್ದು.

(*a*) ಪ್ರತಿ ಒಂದು ತಿಂಗಳಲ್ಲಿಯು ಕನಿಷ್ಠಪಕ್ಷದಲ್ಲಿ ಒಂದಾವರ್ತಿಯಾದರು ವಾಡಿಕೆಯಾದ ಮೀಟಿಂಗು ನಡೆಯತಕ್ಕದ್ದು.

ಅಥವಾ ಅಗತ್ಯವಿದ್ದಾಗ್ಗೆಲ್ಲಾ ಒಂದು ವಿಶೇಷ ಮೀಟಿಂಗು.

(*b*) ಚೇರಮೆನ್ನು ತಮಗೆ ಯುಕ್ತವಾಗಿ ತೋರಿಬಂದಾಗ್ಗೆಲ್ಲಾ ಒಂದು ವಿಶೇಷ ಮೀಟಿಂಗ್ ಉಂಟುಮಾಡಬಹುದು ; ಮತ್ತು ಮೂರಕ್ಕೆ ಕಮ್ಮಿ ಇಲ್ಲದ ಸಂಖ್ಯೆಯುಳ್ಳ ಟ್ರಸ್ಟಿಗಳು ಲಿಖಿತಮೂಲಕವಾಗಿ ಪ್ರಾರ್ಥಿಸಿದರೆ ಒಂದು ವಿಶೇಷ ಮೀಟಿಂಗ್ ಉಂಟುಮಾಡಬೇಕು.

ಒಂದು ಮೀಟಿಂಗ್ ನಡಿಸುವದಕ್ಕೆ ನಾಲ್ಕು ಟ್ರಸ್ಟಿಗಳು ಕೋರಂ (Quorum) ಆಗತಕ್ಕದ್ದು.

(*c*) ಯಾವ ಮೀಟಿಂಗ್‌ನಲ್ಲಿಯಾಗಲಿ ಆರಂಭದಿಂದ ಅಂತ್ಯದವರಿಗೂ ಕನಿಷ್ಠಪಕ್ಷದಲ್ಲಿ ನಾಲ್ಕು ಜನ ಟ್ರಸ್ಟಿಗಳು ಹಾಜರು ಇಲ್ಲದಿದ್ದರೆ, ಅಂಥಾ ಮೀಟಿಂಗ್‌ನಲ್ಲಿ ಯಾವ ಕೆಲಸವನ್ನೂ ಜರಿಗಿಸಕೂಡದು.

ಚೇರಮೆನ್ನು ಹಾಜರು ಆಗಿದ್ದರೆ, ಮೀಟಿಂಗಿನಲ್ಲಿ ಅಧ್ಯಕ್ಷನಾಗಿರತಕ್ಕದ್ದು.

(*d*) ಚೇರಮೆನ್ನು ಹಾಜರಾಗಿರುವ ಪ್ರತಿ ಒಂದು ಮೀಟಿಂಗಿನಲ್ಲಿಯು ಅವನೆ ಅಧ್ಯಕ್ಷನಾಗಿರಬೇಕು ; ಅವನ ಗೈರ್‌ಹಾಜರಿಯಲ್ಲಿ ಮೀಟಿಂಗಿನಲ್ಲಿ ಹಾಜರಿರುವ ಟ್ರಸ್ಟಿಗಳ ಪೈಕಿ ಯಾವಾತನು ಚುನಾಯಿಸಲ್ಪಡುತ್ತಾನೊ ಅವನು ಅಧ್ಯಕ್ಷನಾಗಬೇಕು ;

ಎಲ್ಲಾ ವಾದಗಳು ಹೆಚ್ಚಾಗಿರುವ ಅಭಿಪ್ರಾಯಗಳಂತೆ ತೀರ್ಮಾನವಾಗತಕ್ಕದ್ದು.

(*e*) ಮೀಟಿಂಗಿನಲ್ಲಿ ಹಾಜರಾಗಿರುವ ಟ್ರಸ್ಟಿಗಳ ಹೆಚ್ಚಾಗಿರುವ ಅಭಿಪ್ರಾಯಗಳಂತೆ ಎಲ್ಲಾ ವಾದಗಳು ತೀರ್ಮಾನವಾಗತಕ್ಕದ್ದು, ಮೀಟಿಂಗಿನಲ್ಲಿ ಅಭಿಪ್ರಾಯಗಳು ಸಮಭಾಗವಾದರೆ ಯಾವಕಡೆಗಾದರು ಹೆಚ್ಚು ಸಮ್ಮತಿ ಕೊಡೋಣವು ಪ್ರಸಿಡೆಂಟಿಗೆ ಸೇರತಕ್ಕದ್ದು ;

ಮಿನಿಟ್ಸ್‌ಗಳನ್ನು ಇಡತಕ್ಕದ್ದು.

(*f*) ಮೀಟಿಂಗಿನಲ್ಲಿ ಹಾಜರಾಗಿದ್ದ ಟ್ರಸ್ಟಿಗಳ ಹೆಸರುಗಳನ್ನು, ಪ್ರತಿ ಮೀಟಿಂಗಿನಲ್ಲಿಯು ನಡದ ನಡವಳಿಕೆಗಳನ್ನು ಈ ಉದ್ದೇಶಕ್ಕಾಗಿ ಇಡಲ್ಪಟ್ಟ ಒಂದು ಬುಕ್ಕಿನಲ್ಲಿ ರಿಕಾರ್ಡು ಮಾಡಿ ಆ ಬುಕ್ಕಿಗೆ ಅದಕ್ಕಾಚಿನ ಮೀಟಿಂಗಿನಲ್ಲಿ ಅಧ್ಯಕ್ಷರಾಗಿರುವವರು ರುಜು ಮಾಡಬೇಕು ; ಮತ್ತು ಕೆಲಸ ಮಾಡುವ ಕಾಲಗಳಲ್ಲಿ ಯಾವ ಟ್ರಸ್ಟಿ ಆಗಲಿ ಆ ಬುಕ್ಕನ್ನು ನೋಡಬಹುದು.

ಕಮ್ಮಿಟಿಗಳ ಏರ್ಪಾಟು.

(3) ಬೋರ್ಡು ಆಗಿಂದಾಗ್ಯೆ ಕಮ್ಮಿಟಿಗಳನ್ನು ಏರ್ಪಡಿಸಬಹುದು ; ಆ ಕಮ್ಮಿಟಿಗಳಿಗೆ ಚೇರಮೆನ್ನು ಮತ್ತು ಬೋರ್ಡಿನ ಅಭಿಪ್ರಾಯದಲ್ಲಿ ತಕ್ಕವರಾದ ಇತರ ಟ್ರಸ್ಟಿಗಳು ಮೆಂಬರುಗಳಾಗಿರಬೇಕು ; ಮತ್ತು ಬೋರ್ಡು

(*a*) ಈ ರೆಗ್ಯುಲೇಷನಿನ ಉದ್ದೇಶಗಳಿಗೆ ಸಮ್ಮಂಧಪಟ್ಟ ಯಾವ ವಿಷಯವನ್ನಾದರು ಕುರಿತು ವಿಚಾರಿಸಿ ರಿಪೋರ್ಟು ಮಾಡೋಣವನ್ನು ಆ ಕಮ್ಮಿಟಿಗಳಿಗೆ ಒಪ್ಪಿಸಬಹುದು, ಅಥವಾ

(*b*) 39, (1)ನೆ ಪ್ರಕರಣದ (a) ಕಲಮಿನಂತೆ ಮಾಡಿರುವ ಯಾವ ಒಳ ನಿಬಂಧನೆ (By-laws) ಗಳಿಗಾಗಲಿ ಒಳಪಟ್ಟು, ಮತ್ತು ಈ ಪರದಲ್ಲಿ ಒಂದು ಪ್ರತ್ಯೇಕ ತೀರ್ಮಾನ (Resolution) ಮಾಡಿ, ತಮ್ಮ ಅಧಿಕಾರಗಳ ಅಥವಾ ಕರ್ತವ್ಯಗಳ ಯಾವ ಅಂಶವನ್ನಾದರು ಆ ಕಮ್ಮಿಟಿಗಳಿಗೆ ವಹಿಸಿ ಕೊಡಬಹುದು.

ಹೀಗೆ ಏರ್ಪಟ್ಟ ಯಾವ ಕಮ್ಮಿಟಿಯಾಗಲಿ ಆಗಿಂದಾಗ್ಯೆ ಬೋರ್ಡಿನಿಂದ ಕೊಡಲ್ಪಡಬಹುದಾದ ಅಪ್ಪಣೆಗಳಂತೆ ನಡಿಯತಕ್ಕದ್ದು, ಮತ್ತು ಬೋರ್ಡು ಆಗಿಂದಾಗ್ಯೆ ಅಂಥಾ ಕಮ್ಮಿಟಿಯ ಏರ್ಪಾಟನ್ನು ಬದಲಾಯಿಸಬಹುದು ಅಥವಾ ತೆಗದು ಹಾಕಬಹುದು. ಪ್ರತಿಯೊಂದಂಥಾ ಕಮ್ಮಿಟಿಗೆ ಚೇರಮೆನ್ನು ಅಧ್ಯಕ್ಷನಾಗಿರತಕ್ಕದ್ದು.

ನೇಮಲೋಪಗಳಿಂದ ಬೋರ್ಡಿನನಡವಳಿ ಕೆ ಮುಂತಾದವುಗಳು ರದ್ದಾಗತಕ್ಕದ್ದಲ್ಲ.

(4) ಬೋರ್ಡನ್ನಾಗಲಿ, ಕಮ್ಮಿಟಿಯನ್ನಾಗಲಿ, ಅಥವಾ ಟ್ರಸ್ಟಿಯನ್ನಾಗಲಿ ನೇಮಿಸುವದರಲ್ಲಿ ಸ್ವಲ್ಪ ನ್ಯೂನತೆ ಇರುವದೊಂದೇಕಾರಣಕ್ಕಾದರೂ, ಅಥವಾ, ಅವರು, ಯ, ಅವರ ಪೈಕಿ ಯಾರೊಬ್ಬರು ಟ್ರಸ್ಟಿಯು ಸ್ಥಾನಕ್ಕೆ ಅನರ್ಹರಾಗಿರುವ ಕಾರಣಕ್ಕಾಗಲಿ, ಬೋರ್ಡಿನಿಂದಲೋ, ಅಥವಾ ಯಾವ ಕಮ್ಮಿಟಿಯಿಂದಲೋ, ಅಥವಾ ಟ್ರಸ್ಟಿಯಾಗಿ ನಡಿಯುವ ಯಾವ ಮನುಷ್ಯನಿಂದಲೊ ಆಗಿರುವ ಯಾವ ಕಾರ್ಯವೂ ರದ್ದೆಂತ ಭಾವಿಸಕೂಡದು.

ಸಾವಿರ ರೂಪಾಯಿಗಳಿಗೆ ಅಧಿಕವಲ್ಲದ ಮೊಬಲಗಿನ ಗುತ್ತಿಗೆಗಳನ್ನು ನೆರವೇರಿಸುವ ವಿಧಾನ.

10. (1) ಸಾವಿರ ರೂಪಾಯಿಗಳಿಗೆ ಹೆಚ್ಚಲ್ಲದ ಯಾವ ಗುತ್ತಿಗೆ ಅಥವಾ ಕರಾರನ್ನಾಗಲಿ, ಬೋರ್ಡಿನ ಪರವಾಗಿ, ಚೇರಮೆನ್ನು ಮಾಡಬಹುದು. ಅಂಥ ಗುತ್ತಿಗೆಯು ಅಥವಾ ಕರಾರಿನ ವಿಧಾನ ಮತ್ತು ಮಾದ್ರಿಯು, ಆ ಗುತ್ತಿಗೆ ಅಥವಾ ಕರಾರು, ತನ್ನ ಪರವಾಗಿಯೇ ನಡದಿದ್ದರೆ ಹ್ಯಾಗೆ ತತ್ಕಾಲದಲ್ಲಿ ಜಾರಿ ಇರುವ ನಿಬಂಧನೆಯಂತೆ ತನಗೆ ಬದ್ಧಕವಾಗಿರಬಹುದೊ ಹಾಗೆ ಇರತಕ್ಕದ್ದು. ಪ್ರತಿಯೊಂದಂಥ ಗುತ್ತಿಗೆ ಅಥವಾ ಕರಾರನ್ನ ಬೋರ್ಡಿನ ಮಾರಣೆ ವಾಡಿಕೆಯಾದ ಮೀಟಂಗಿನಲ್ಲಿ ರಿಪೋರ್ಟು ಮಾಡಬೇಕು.

ಸಾವಿರ ರೂಪಾಯಿಗಳಿಗೆ ಅಧಿಕವಾದ ಮೊ[illegible]ರೆ.

(2) ಬೋರ್ಡಿನಪರವಾಗಿ ನಡಿಯುವ ಪ್ರತಿಯೊಂದಿತರ ಗುತ್ತಿಗೆ ಅಥವಾ ಕರಾರು ಬೋರ್ಡಿನ ಪೂರ್ವ ಭಾವಿಯಾದ ಅನುಮತಿಯೊಡನೆ ಲಿಖಿತಮೂಲಕವಾಗಿರಬೇಕಲ್ಲದೆ, ಚೇರಮೆನ್ನನ ಮತ್ತು ಇಬ್ಬರು ಇತರ ಟ್ರಸ್ಟಿಗಳ ರುಜುಗಳೊಂದಿಗೂ ಹಿಂದೆ ನೇಮಿಸಲ್ಪಟ್ಟಂತೆ ಇರುವ ಬೋರ್ಡಿನ ಸಾಮಾನ್ಯವಾದ ಮೊಹರಿನಿಂದ ಮೊಹರು ಮಾಡಲ್ಪಟ್ಟದ್ದಾಗಿಯು ಇರಬೇಕು. ಇದರಲ್ಲಿ ನೇಮಿಸಿರುವಂತೆ ನೆರವೇರಿಸಲ್ಪಟ್ಟದ್ದಹೊರ್ತು, ಈ ಉಪ ಪ್ರಕರಣದಲ್ಲಿ ಸೂಚಿಸಿರುವ ಯಾವ ಗುತ್ತಿಗೆ ಅಥವಾ ಕರಾರು ಕೂಡ ಬೋರ್ಡಿಗೆ ಬದ್ಧಕವಾಗಿರುವದಿಲ್ಲ.

ಸಾಮಾನ್ಯ ಮೊಹರಿನ ಸಂರಕ್ಷಣೆ ಮತ್ತು ಉಪಯೋಗ.

(3) ಬೋರ್ಡಿನ ಸಾಮಾನ್ಯ ಮೊಹರು ಚೇರಮೆನ್ನಿನ ಸ್ವಾಧೀನದಲ್ಲಿರತಕ್ಕದ್ದು. ಯಾವ ಗುತ್ತಿಗೆ ಅಥವಾ ದಸ್ತಾವೇಜಿಗಾಗಲಿ, ಇಬ್ಬರು ಟ್ರಸ್ಟಿಗಳ ಸಮಕ್ಷಮದಲ್ಲಿ ಹೊರ್ತು, ಆ ಮೊಹರನ್ನ ಹಾಕಕೂಡದು. ಆ ಗುತ್ತಿಗೆ ಅಥವಾ ದಸ್ತಾವೇಜು ತಮ್ಮ ಸಮಕ್ಷಮದಲ್ಲಿ ಮೊಹರು ಮಾಡಲ್ಪಟ್ಟಿತೆಂಬುವದಕ್ಕೆ ಗುರುತಾಗಿ ಅವರು ಅವುಗಳಿಗೆ ರುಜು ಮಾಡಬೇಕು. ಯಾವದೊಂದಂಥಾ ಗುತ್ತಿಗೆ ಅಥವಾ ದಸ್ತಾವೇಜು ಬರಸಿದ್ದಕ್ಕೆ ಆದ ಸಾಕ್ಷಿಗಳ ರುಜುವುಗಳಿಗೆ ಭೇದ ತೋರಿಸುವಂತೆ ಸದರಿ ಟ್ರಸ್ಟಿಗಳ ರುಜುವುಗಳು ಇರತಕ್ಕದ್ದು.

ಬೋರ್ಡು ಅನ್ಯರ ಮೇಲಿರುವ ತಮ್ಮ ಹಕ್ಕುಗಳನ್ನು ಅಥವಾ ತಮ್ಮ ಮೇಲಿರುವ ಅನ್ಯರ ಹಕ್ಕುಗಳನ್ನು ರಾಜಿ ಮಾಡಿಕೊಳ್ಳಬಹುದು.

11. ಈ ರೆಗ್ಯುಲೇಷನಿನಂತೆ ಮಾಡಿದ ಯಾವ ಗುತ್ತಿಗೆಯಿಂದಾಗಲಿ ಉಂಟಾಗಿರುವ ಯಾವ ಹಕ್ಕು ಅಥವಾ ಬಾಧ್ಯತೆ ಇದರ ಸಮ್ಮಂಧದಲ್ಲಿಯಾದರೂ, ಅಥವಾ, ತಮ್ಮಮೇಲೆ ಅನ್ಯರು ಅಥವಾ ಅನ್ಯರ ಮೇಲೆ ತಾವು ಮಾಡಿರುವ ಯಾವ ದಾವೆಯ ಸಮ್ಮಂಧದಲ್ಲಿಯಾದರು, ತಾವು ಸಾಕೆಂದು ನೆನಿಸುವಷ್ಟು ಮೊಬಲಗಿಗೊ ಅಥವಾ ಪ್ರತಿಫಲಕ್ಕೊ, ಬೋರ್ಡು ರಾಜಿ ಮಾಡಿಕೊಳ್ಳಬಹುದು.

12. ಚೇರಮೆನ್ನು —

ಚೇರಮೆನ್ನಿನ ಕರ್ತವ್ಯಗಳು.

(1) ಆಲಸ್ಯದಿಂದಾಗಲಿ ಅಥವಾ ಇತರ ನ್ಯಾಯವಾದ ಕಾರಣದಿಂದಾಗಲಿ ಅಡ್ಡಿ ಮಾಡಲ್ಪಟ್ಟದ್ದ ಹೊರ್ತು, ಪ್ರತಿ ಒಂದು ಮೀಟಂಗಿನಲ್ಲಿಯು ಹಾಜರಿರಬೇಕು;

(2) ಬೋರ್ಡಿನ ತೀರ್ಮಾನಗಳನ್ನು ಜಾರಿಯಲ್ಲಿ ತರಬೇಕು ;

(3) ಬೋರ್ಡಿನ ಉತ್ತರ ಪ್ರತ್ಯುತ್ತರಗಳನ್ನು ಇಟ್ಟು ನಡಿಸಬೇಕು ;

(4) ಬೋರ್ಡಿನ ಆಡಳಿತಗಳ ಸಂಗತಿಗಳಲ್ಲಿಯು ಮತ್ತು ಬೋರ್ಡಿನ ಲೆಕ್ಕಗಳು ಮತ್ತು ರಿಕಾರ್ಡುಗಳು ಇವುಗಳ ಸಂಗತಿಗಳಲ್ಲಿಯು, ಬೋರ್ಡಿನ ಉದ್ಯೋಗಸ್ಥರ ಮತ್ತು ಸೇವಕರ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡಬೇಕು ; ಮತ್ತು, 35 (1)ನೆ ಪ್ರಕರಣದಲ್ಲಿ ವಿಶೇಷಿಸಿರುವ ಮಟ್ಟಿಗೆ, ಅಂಥ ಉದ್ಯೋಗಸ್ಥರ ಮತ್ತು ಸೇವಕರ ಕೆಲಸ, ಅವರ ಸಂಬಳ, ವಿಶೇಷ ಹಕ್ಕುಗಳು, ಮತ್ತು ಅಲವರ್ನಸುಗಳು, ಇವುಗಳಿಗೆ ಸಮ್ಮಂಧಪಟ್ಟ ಎಲ್ಲಾ ವಿಷಯುಗಳನ್ನು ಫೈಸಲು ಮಾಡಬೇಕು ;

(5) ಬೋರ್ಡಿನ ನಡವಳಿಕೆಗಳ ರಿಕಾರ್ಡಿನ ಒಂದು ನಕಲನ್ನು ಮತ್ತು ಆಗಿಂದಾಗ್ಯೆ ಗವರ್ನಮೆಂಟಿನವರು ಅಪೇಕ್ಷಿಸಬಹುದಾದ ಹಕೀಕತನಾಮೆಗಳು (Returns) ಅಥವಾ ಇತರ ವರ್ತಮಾನವನ್ನು ಗವರ್ನಮೆಂಟಿಗೆ ಹೊಂದಿಸಿ ಕೊಡಬೇಕು.

ಬದಲಿ ಚೇರಮೆನ್ನನ್ನು ನೇಮಿಸುವದು.

13. ಚೇರಮೆನ್ನಿನ ಯಾವ ಗೈರು ಹಾಜರಿಯಲ್ಲಾಗಲಿ ಗವರ್ನಮೆಂಟಿನವರು ಮತ್ತೊಬ್ಬ ಮನುಷ್ಯನನ್ನು ಬದಲಿ ಚೇರಮೆನ್ನಾಗಿ ನೊಕರರು ಮಾಡಬಹುದು, ಮತ್ತು ಹಾಗೆ ನೊಕರರಾದ ಮನುಷ್ಯನು, ಯಾವ ಮನುಷ್ಯನಿಗೆ ಬದಲಿಯಾಗಿ ತಾನು ನೇಮಿಸಲ್ಪಟ್ಟಿದ್ದಾನೊ ಆ ಮನುಷ್ಯನಿಗೆ ಈ ರೆಗ್ಯುಲೇಷನಿನಂತೆ ಕೊಡಲ್ಪಟ್ಟ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು, ತಾನು ಆಚರಿಸುವದಲ್ಲದೆ, ಸದರಿ ಮನುಷ್ಯನು ಯಾವ ಜವಾಬ್ದಾರಿಗಳಿಗು, ನಿರ್ಬಂಧಗಳಿಗು, ಮತ್ತು ಷರತ್ತುಗಳಿಗು ಒಳಪಟ್ಟು ಇರುತ್ತಾನೆಯೊ, ಅವುಗಳಿಗೆಲ್ಲ ತಾನೂ ಒಳಪಟ್ಟಿರಬೇಕು.

III ನೆ ಅಧ್ಯಾಯವು.

ಕರ್ತವ್ಯಗಳು ಮತ್ತು ಅಧಿಕಾರಗಳು.

ಉತ್ತಮ ಪಡಿಸುವ ಉಪಾಯಗಳು.

ಗವರ್ನಮೆಂಟಿನವರು ಮಾಡಿದ ನೇಮಕಗಳ ಆಧಾರದಮೇಲೆ ಬೋರ್ಡು ಉತ್ತಮ ಪಡಿಸುವ ಉಪಾಯಗಳನ್ನು ಮಾಡಬೇಕು.

14. (1) ಇಂಪ್ರುವ್‌ಮೆಂಟ ಕಮ್ಮಿಟಿಯವರು ಅನುಮೋದಿಸುವಂತೆಯಾಗಲಿ ಅಥವಾ ಇತರ ವಿಧದಲ್ಲಾಗಲಿ ಗವರ್ನಮೆಂಟಿನವರು ಕೊಟ್ಟಿರುವ ಅಥವಾ ಇನ್ನು ಮುಂದೆ ಕೊಡಬಹುದಾದ ನೇಮಕಗಳಿಗೆ ತಕ್ಕ ಮಟ್ಟಿಗೆ ದೃಷ್ಟಿ ಕೊಟ್ಟು ಮತ್ತು ಆ ನೇಮಕಗಳ ಆಧಾರದ ಮೇಲೆ, ಪಟ್ಟಣದ ಅನೇಕ ಭಾಗಗಳನ್ನು ಉತ್ತಮಪಡಿಸುವದಕ್ಕಾಗಿಯೂ ಅಥವಾ ಅಭಿವೃದ್ಧಿಪಡಿಸುವದಕ್ಕಾಗಿಯೂ ಅಥವಾ ಇವೆರಡು ಉದ್ದೇಶಗಳಿಗೋಸ್ಕರವಾದರು, ಬೋರ್ಡು, ಈ ರೆಗ್ಯುಲೇಷನಿನಂತೆ ಏರ್ಪಟ್ಟ ಬಳಿಕ, ಸಾಧ್ಯವಾದಷ್ಟು ತ್ವರೆಯಾಗಿ, (ಇದರಲ್ಲಿ ಮುಂದೆ ಇಂಪ್ರುವ್‌ಮೆಂಟಸ್ಕೀಂಸ — ಉತ್ತಮ ಪಡಿಸುವ ಉಪಾಯಗಳು ಎಂದು ಸೂಚಿಸಲ್ಪಡುವ) ಉಪಾಯಗಳನ್ನು ವಿವರವಾಗಿ ತಯಾರ್ಮಾಡಬೇಕು.

ಅಗತ್ಯ ಬಿದ್ದಾಗ ಅಧಿಕವಾದ ಉಪಾಯಗಳನ್ನು ಮಾಡಬಹುದು.

(2) ಬೋರ್ಡು, ಆಗಿಂದಾಗ್ಗೆ ಮತ್ತು ತಮ್ಮ ದ್ರವ್ಯಾನುಕೂಲತೆಯು ಬೇಕಾದ ಮಟ್ಟಿಗೆ ಇದೆ ಎಂಬ ನಂಬಿಕೆ ಉಂಟಾಗಿರುವ ಪಕ್ಷದಲ್ಲಿ, ತಾವು [illegible]ವೆಂದು ಎಣಿಸಬಹುದಾದ ಯಾವ ಹೆಚ್ಚಾದ ಉತ್ತಮ ಪಡಿಸುವ ಉಪಾಯಗಳನ್ನಾದರು ಮಾಡಬಹುದು.

ಉತ್ತಮ ಪಡಿಸುವ ಉಪಾಯದಲ್ಲಿ ಇರಬೇಕಾದ ವಿವರಗಳು.

15. 14ನೆ ಪ್ರಕರಣದಂತಾದ ಪ್ರತಿ ಒಂದು ಉತ್ತಮ ಪಡಿಸುವ ಉಪಾಯವು ಹ್ಯಾಗಿರಬೇಕಂದರೆ—

(1) ಆ ಉಪಾಯದಲ್ಲಿ ಅಡಗಿರುವ ಸ್ಥಳದ ಹದ್ದುಗಳೊಳಗೆ ಇದರಡಿ ಬರುವ ವಿದ್ಯಮಾನಗಳನ್ನು ಆಗಗೊಡಿಸತಕ್ಕದ್ದಾಗಿರಬೇಕು :—

(*a*) ಬೋರ್ಡಿನ ಅಭಿಪ್ರಾಯದಲ್ಲಿ ಯಾವ ಭೂಮಿಯು ಆ ಉಪಾಯದ ನೆರವೇರಿಕೆಯಿಂದ ಬದಲಾವಣೆಗೆ ಒಳಪಡುತ್ತದೊ, ಅಥವಾ ಆ ಉಪಾಯದ ನೆರವೇರಿಕೆಗೋಸ್ಕರ ಬೇಕಾಗುತ್ತದೊ, ಅಂಥಾ ಭೂಮಿಯ ಸಂಪಾದ್ಯ,

(*b*) ಯಾವ ಭೂಮಿಯನ್ನಾಗಲಿ ಅಥವಾ ಎಲ್ಲಾ ಭೂಮಿಯನ್ನಾಗಲಿ ಪುನಹ ವರಿಸೆಯಾಗಿಟ್ಟು ಸರಿಮಾಡುವದಲ್ಲದೆ ಕಟ್ಟಡಗಳನ್ನು ಹೊಸದಾಗಿ ಮತ್ತು ಪುನಹ ಉಂಟುಮಾಡೋಣ ಮತ್ತು ಬೀದಿಗಳನ್ನು ಕಟ್ಟೋಣ ಮತ್ತು ಬದಲಾಯಿಸೋಣ,

(*c*) ಹಾಗೆ ಕಟ್ಟಲ್ಪಟ್ಟ ಅಥವಾ ಬದಲಾಯಿಸಲ್ಪಟ್ಟ ಬೀದಿಗಳಲ್ಲಿ ನೀರು ಹರಿಯುವ ಬಚ್ಚಲುಗಳನ್ನು ಕಟ್ಟೋಣ ಮತ್ತು ಬೆಳಕು ಮಾಡೋಣ ;

(2) ಸದರಿ ಹದ್ದುಗಳೊಳಗೆ ಇದರಡಿಬರುವ ವಿದ್ಯಮಾನಗಳನ್ನು ಆಗಗೊಡಿಸತಕ್ಕದ್ದಾಗಿರಬಹುದು ;

(*a*) ಆ ಪ್ರದೇಶದಲ್ಲಿ ನೀರು ಹರಿಯುವದನ್ನು ಉತ್ತಮ ಪಡಿಸುವದಕ್ಕೋಸ್ಕರ ಯಾವ ಭೂಮಿಯನ್ನಾಗಲಿ ಎತ್ತರಿಸುವದು ಯುಕ್ತವೆಂದು ಬೋರ್ಡು ಎಣಿಸುವ ಪಕ್ಷದಲ್ಲಿ ಅಂಥಾ ಭೂಮಿಯನ್ನು ಎತ್ತರಿಸೋಣ,

(*b*) ಆ ಉಪಾಯದಲ್ಲಡಗಿರುವ ಸ್ಥಳದಲ್ಲಾಗಲಿ ಅಥವಾ ಅದಕ್ಕೆ ತಗಲಿರುವ ಸ್ಥಳದಲ್ಲಾಗಲಿ ಗಾಳಿ ಆಡುವದನ್ನು ಉತ್ತಮ ಪಡಿಸುವದಕೋಸ್ಕರ ಬೈಲು ಭೂಮಿಯನ್ನು ಬಿಡೋಣ,

(c) ಬೇಕಾಗಿರುವ ಆರೋಗ್ಯ ರಕ್ಷಣಸಮ್ಮಂಧವಾದ ಏರ್ಪಾಟುಗಳಲ್ಲವಾಗಲಿ ಅಥವಾ ಅವುಗಳ ಯಾವ ಭಾಗವೆ ಆಗಲಿ,

(d) ಮಾರ್ಕೆಟ್ಟುಗಳು ಮತ್ತು ಇತರ ಸಾರ್ವಜನಿಕ ಅಗತ್ಯಗಳು ಅಥವಾ ಅನುಕೂಲಗಳು ಇವುಗಳನ್ನು ಸ್ಥಾಪಿಸೋಣ ಅಥವಾ ಏರ್ಪಡಿಸೋಣ ; ಮತ್ತು

(3) ಸದರಿ ಹದ್ದುಗಳೊಳಗಾಗಲಿ ಅಥವಾ ಹೊರಗಾಗಲಿ, ಬಡವರಾದ ಮತ್ತು ಕೂಲಿ ಮಾಡುವ ಜನಗಳಿಗೂ, ಆ ಉಪಾಯವನ್ನು ನೆರವೇರಿಸುವದರಲ್ಲಿ ಸ್ಥಳ ತಪ್ಪಿಸಲ್ಪಡಬೇಕಾದ ಬಡ ಮತ್ತು ಕೂಲಿಜನರೆಲ್ಲರಿಗೂ ಅಥವಾ ಕೆಲವರಿಗೂ, ವಾಸ ಮಾಡುವದಕ್ಕೋಸ್ಕರ ಕಟ್ಟಡಗಳನ್ನು ಏರ್ಪಡಿಸೋಣ ; ಇದನ್ನು ಆಗಗೊಡಿಸತಕ್ಕದ್ದಾಗಿರಬಹುದು. ಅಂಥಾ ಕಟ್ಟಡಗಳಲ್ಲಿ ಅಂಗಡಿಗಳು ಅಡಗಿರುವದಾಗಿ ಎಣಿಸತಕ್ಕದ್ದು.

ಉಪಾಯವು ಸಂಪೂರ್ಣವಾದ ನಂತರ ನಡಿಯಬೇಕಾದ ರೀತಿ.

16. (1) ಒಂದು ಉತ್ತಮ ಪಡಿಸುವ ಉಪಾಯ ಮುಗಿದ ನಂತರ, ಬೋರ್ಡು, ಒಂದು ಇಸ್ತಿಹಾರನ್ನು ತಯಾರ್ಮಾಡಬೇಕು ; ಆ ಇಸ್ತಿಹಾರಿನಲ್ಲಿ ಯಾವದಾದರು ಒಂದು ಉಪಾಯಮಾಡಿರೋಣವನ್ನು ಮತ್ತು ಅದರಲ್ಲಡಗಿರುವ ಪ್ರದೇಶದ ಹದ್ದುಗಳನ್ನು ತಿಳಿಸುವದಲ್ಲದೆ, ಆ ಉಪಾಯದ ವಿವರಗಳು ಅದರಲ್ಲಡಗಿರುವ ಪ್ರದೇಶದ ಮ್ಯಾಪು ಮತ್ತು ಸಂಪಾದಿಸಬೇಕೆಂದು ನಿಶ್ಚಯಿಸಿರುವ ಭೂಮಿಯ ವಿವರ ಇವುಗಳನ್ನು ಸರಿಯಾದ ಕಾಲಗಳಲ್ಲಿ ಎಲ್ಲಾ ನೋಡಬಹುದಾದ ಒಂದು ಸ್ಥಳವನ್ನು ನಮೂದು ಮಾಡಿರಬೇಕು ; ಮತ್ತು

ಉಪಾಯದ ಇಸ್ತಿಹಾರಿನ ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗು ಕಳುಹಿಸಬೇಕು.

(a) ಅಂಥಾ ಇಸ್ತಿಹಾರಿನ ಒಂದು ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗೆ ಕಳುಹಿಸತಕ್ಕದ್ದು, ಆ ಪ್ರೆಸಿಡೆಂಟರು, ಸದರಿ ಇಸ್ತಿಹಾರು ತಮಗೆ ಮುಟ್ಟಿದ ತಾರೀಕಿನಿಂದ ಮೂವತ್ತು ದಿವಸಗಳೊಳಗಾಗಿ ಮ್ಯುನಿಸಿಪಲ್ ಕಮ್ಮಿಷನರುಗಳು ಆ ಉಪಾಯವನ್ನು ಕುರಿತು ಏನನ್ನು ತಿಳಿಸತಕ್ಕದ್ದುಚಿತವೆಂದು ಎಣಿಸಬಹುದೊ ಅದನ್ನು ಗವರ್ನಮೆಂಟಿನವರಿಗೆ ಸಮರ್ಪಿಸುವದಕ್ಕೋಸ್ಕರ ಬೋರ್ಡಿಗೆ ಕಳುಹಿಸಬೇಕು ;

ಇಸ್ತಿಹಾರನ್ನು ಪ್ರಕಟಿಸ ಮಾಡೋಣ.

(b) ಬೋರ್ಡು, ಸದರಿ ಇಸ್ತಿಹಾರಿನ ಒಂದು ನಕಲನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಅನುಕ್ರಮವಾಗಿ ಮೂರು ವಾರಗಳ ಪರ್ಯಂತರ ಛಾಪಿಸಬೇಕಲ್ಲದೆ, ತಮ್ಮ ಕಚೇರಿಯೊಳಗೆ ದೃಷ್ಟಿಗೋಚರವಾದ ಪ್ರದೇಶದಲ್ಲಿಯೂ, ಡೆಪ್ಯುಟಿ ಕಮ್ಮಿಷನರವರ ಕಚೇರಿಯಲ್ಲಿಯೂ, ಮ್ಯುನಿಸಿಪಲ್ ಕಮ್ಮಿಷನಿನ ಕಚೇರಿಯಲ್ಲಿಯೂ ಮತ್ತು ಬೋರ್ಡು ಅಗತ್ಯವೆಂದು ಎಣಿಸಬಹುದಾದ ಇತರ ಸ್ಥಳಗಳಲ್ಲಿಯೂ ಹಚ್ಚಿಸಬೇಕು.

ಉಪಾಯವನ್ನು ಜಾರಿ ತರೋಣದರಲ್ಲಿ ಸಂಪಾದಿಸಬೇಕಾದ ಸ್ವತ್ತಿನ ಮಾಲೀಕರಿಗೆ ನೋಟಿಸುಗಳನ್ನು ಜಾರಿ.

(2) ಸರ್ಕಾರಿ ಗೆಜೆಟ್ಟಿನಲ್ಲಿ ಸದರಿ ಇಸ್ತಿಹಾರು ಛಾಪಿಸಲ್ಪಟ್ಟ ಮೊದಲನೆ ದಿನದಿಂದ ಮುವ್ವತ್ತು ದಿವಸಗಳೊಳಗಾಗಿ ಬೋರ್ಡು, ಉತ್ತಮ ಪಡಿಸುವ ಉದ್ದೇಶಕ್ಕೋಸ್ಕರ ಸಂಪಾದಿಸತಕ್ಕದ್ದೆಂದು ಎಣಿಸಲ್ಪಟ್ಟಿರುವ ಯಾವ ಕಟ್ಟಡದ ಅಥವಾ ಭೂಮಿಯ ಮೇಲೆ, ಮ್ಯುನಿಸಿಪಲ್ ರೆಗ್ಯುಲೇಷನಗಳಂತೆ ಸ್ವತ್ತು ತೆರಿಗೆಗಳನ್ನೂ ಅಥವಾ ಲ್ಯಾಂಡು ರೆವಿನ್ಯು ಕೂಡಿ ನಂತೆ ನೆಲ ಕಂದಾಯವನ್ನೂ ಕೊಡಬೇಕಾದ ಮುಖ್ಯ ಜವಾಬ್ದಾರಿಯುಳ್ಳವನೆಂದು, ಯಾವ ಮನುಷ್ಯನ ಹೆಸರು ಮ್ಯುನಿಸಿಪಲ್ ತೆರಿಗೆ ಬುಕ್ಕಿನಲ್ಲಿಯಾಗಲಿ ಅಥವಾ ಲ್ಯಾಂಡ್ ರೆವಿನ್ಯು ರಿಜಿಸ್ತರಗಳಲ್ಲಿಯಾಗಲಿ ನಮೂದಾಗಿರುತ್ತೊ, ಆ ಮನುಷ್ಯನಿಗೆ ಒಂದು ನೋಟೀಸನ್ನು ಜಾರಿ ಮಾಡತಕ್ಕದ್ದು. ಆ ನೋಟೀಸಿನಲ್ಲಿ, ಉತ್ತಮ ಪಡಿಸುವ ಉಪಾಯದ ನೆರವೇರಿಕೆಗೋಸ್ಕರ ಅಂಥಾ ಭೂಮಿ ಅಥವಾ ಕಟ್ಟಡ ಸಂಪಾದಿಸಲು ಬೋರ್ಡು ನಿಶ್ಚಯಿಸಿರೋಣವನ್ನು ವ್ಯಕ್ತಪಡಿಸಬೇಕು, ಮತ್ತು ಆ ಭೂಮಿಯ ಅಥವಾ ಕಟ್ಟಡದ ಸಂಪಾದನೆಗೆ ಸದರಿ ಮನುಷ್ಯನು ಸಮ್ಮತಿಸುತ್ತಾನೆಯೊ ಇಲ್ಲವೊ, ಸಮ್ಮತಿಸದಿದ್ದರೆ ಅದರ ಕಾರಣಗಳು—ಇದನ್ನೆಲ್ಲಾ ನೋಟೀಸು ಜಾರಿಯಾದ ಮುವ್ವತ್ತು ದಿನಗಳೊಳಗಾಗಿ ವಿವರಿಸಿ ಜವಾಬು ಕೊಡಬೇಕೆಂದು ಆ ಮನುಷ್ಯನಿಗೆ ತಾಕೀದು ಮಾಡಬೇಕು.

ನೋಟೀಸ್ ಜಾರಿಯ ಕ್ರಮ.

(3) ಅಂಥಾ ನೋಟೀಸು ಚೇರಮ್ಯಾನಿನ ರುಜುವಿನಿಂದಾಗಲಿ ಅಥವಾ ಅವನ ಹುಕುಮಿನಿಂದಾಗಲಿ ಇರಬೇಕು ;

(a) ಮತ್ತು ಆ ನೋಟೀಸನ್ನು ಯಾವ ಮನುಷ್ಯನಿಗೆ ಜಾರಿ ಆಗತಕ್ಕದ್ದೊ ಅವನಿಗೆ ಖುದ್ದಾಗಿ ಕೈಯಲ್ಲಿ ಕೊಡಬೇಕು ; ಆ ಮನುಷ್ಯನು ಇಲ್ಲದಿದ್ದರೆ ಯಾ ಸಿಕ್ಕದೇ ಹೋದರೆ ಅವನ ಏಜಂಟಿಗೆ ಖುದ್ದಾಗಿ ಕೊಡಬೇಕು ಅಥವಾ ಅವನ ಏಜಂಟು ಸಿಕ್ಕದೆ ಇರುವ ಪಕ್ಷದಲ್ಲಿ ಆ ಭೂಮಿಗಾಗಲಿ ಅಥವಾ ಕಟ್ಟಡಕ್ಕಾಗಲಿ ಹಚ್ಚಬೇಕು ; ಅಥವಾ

(b) ಅಂಥಾ ಮನುಷ್ಯನ ವಾಡಿಕೆಯಾದ ಅಥವಾ ಕಡೇಸಾರಿ ತಿಳಿಯಬಂದ ನಿವಾಸಸ್ಥಾನದಲ್ಲಿಯಾಗಲಿ ಅಥವಾ ಅವನು ಕೆಲಸ ಮಾಡತಕ್ಕ ಸ್ಥಳದಲ್ಲಿಯಾಗಲಿ ಆ ನೋಟೀಸನ್ನು ಕೊಡಬೇಕು ; ಅಥವಾ

(c) ಅಂಥಾ ಮನುಷ್ಯನ ವಾಡಿಕೆಯಾದ ಅಥವಾ ಕಡೇಸಾರಿ ತಿಳಿಯಬಂದ ನಿವಾಸಸ್ಥಾನಕ್ಕಾಗಲಿ ಅಥವಾ ಕೆಲಸ ಮಾಡತಕ್ಕ ಸ್ಥಳಕ್ಕಾಗಲಿ ಟಪಾಲು ಮೂಲಕವಾಗಿ ಆ ನೋಟೀಸನ್ನು ಆತನಿಗೆ ಜಾರಿ ಮಾಡಬೇಕು.

17. (1) ನೋಟೀಸುಗಳ ಪ್ರಕಟನ ಮತ್ತು ಜಾರಿ ವಿಷಯವಾಗಿರುವ ಮೇಲ್ಕಂಡ ನಿಯಮಗಳಂತೆ ನಡಿಸಿದ ತರುವಾಯ ಬೋರ್ಡು, 16ನೆ ಪ್ರಕರಣದಂತೆ ತಾವು ಹೊಂದಿರುವ ಯಾವ ಜವಾಬೂ ಅಥವಾ ಅರಿಕೆಯೊ ಅದನ್ನ ಆಲೋಚಿಸಿ, ಮತ್ತು ತಾವು ಯುಕ್ತವೆಂದು ಎಣಿಸಬಹುದಾದ ಯಾವ ಬದಲಾವಣೆಗಳನ್ನಾದರೂ ಆ ಉಪಾಯಕ್ಕೆ ಸೇರಿಸಿದ ನಂತರ, ಆ ಉಪಾಯ ಮಂಜೂರಾಗುವ ಬಗ್ಗೆ ಗವರ್ನಮೆಂಟನವರನ್ನು ಕೋರತಕ್ಕದ್ದು.

ಬಳಿಕ ಗವರ್ನಮೆಂಟನವರು ಒಪ್ಪತಕ್ಕ ಬಗ್ಗೆ ಆ ಉಪಾಯವನ್ನು ಕಳುಹಿಸತಕ್ಕದ್ದು.

ಅರ್ಜಿ ಕೇರ್ಷ ಜೊತೆಯಲ್ಲಿ ಕಳುಹಿಸಬೇಕಾದ ಕಾಗದಗಳು.

(2) (3) ನೆ ಉಪಪ್ರಕರಣದಲ್ಲಿ ನೇಮಿಸಿರುವ ವಿಷಯದಲ್ಲಿ ಹೊರ್ತು, ಮಂಜೂರಾತಿಬಗ್ಯೆ ಮಾಡುವ ಕೋರಿಕೆಯೊಡನೆ—

(a) ಆ ಉಪಾಯದ ಎಲ್ಲಾ ತಪಶೀಲುಗಳ ವಿವರ ಮತ್ತು ಅದರಲ್ಲಿ ಮಾಡಿರುವ ಬದಲಾವಣೆಗಳ ಕಾರಣಗಳು;

(b) ಆ ಉಪಾಯದ ನೆರವೇರಿಕೆಗೆ ಬೇಕಾದ ಕರ್ಚಿನ ಎಸ್ಟಿಮೇಟುಗಳು ಮತ್ತು ಸಂಪೂರ್ಣವಾದ ಪ್ಲಾನುಗಳು;

(c) ಸಂಪಾದಿಸಬೇಕೆಂದು ಯೋಚಿಸಲ್ಪಟ್ಟ ಜಮೀನನ್ನು ವಿವರಿಸುವ ಒಂದು ಸ್ಟೇಟುಮೆಂಟು;

(d) 16ನೆ ಪ್ರಕರಣದ (1) ನೆ ಉಪ ಪ್ರಕರಣದಂತೆ ಹೊಂದಲ್ಪಟ್ಟ ಯಾವದಾದರು ಅರಿಕೆ;

(e) (c) ಕಲಂನಲ್ಲಿ ಕಂಡ ಸ್ಟೇಟ್ಮೆಂಟಿನಲ್ಲಿ ವಿವರಿಸಲ್ಪಟ್ಟ ಎಲ್ಲಾ ಭೂಮಿಯ ನೆಲಕಂದಾಯವನ್ನು, ಅಥವಾ ಆ ಭೂಮಿಗೆ ಸಮ್ಮಂಧವಾದ ಇಸ್ತಿಹಾರು 16ನೆ ಪ್ರಕರಣದಂತೆ ಪ್ರಕಟಣೆಯಾದ ತಾರೀಕಿನಲ್ಲಿ ಮ್ಯುನಿಸಿಪಲ್ ತೆರಿಗೆ ಬುಕ್ಕಿನಲ್ಲಿ ನಮೂದಾಗಿರುವ ಅದರ ದಾಮಾಷೆಯನ್ನು ತೋರಿಸುವ ಒಂದು ಪಟ್ಟಿ; ಮತ್ತು

(f) ಗವರ್ನಮೆಂಟನವರು ವಿಧಿಸಬಹುದಾದ ಇತರ ಅಧಿಕ ವಿವರಗಳು,

ಇವುಗಳನ್ನೆಲ್ಲ ಕಳುಹಿಸಬೇಕು.

(3) ಯಾವ ಉತ್ತಮಪಡಿಸುವ ಉಪಾಯದಂತಾಗಲಿ ಅತಿ ಬಡವರಿಗು ಮತ್ತು ಕೂಲಿ ಮಾಡುವರಿಗು ಮನೆಗಳನ್ನು ಕಟ್ಟಿಸೋಣ ನಿಶ್ಚಯಿಸಲ್ಪಟ್ಟಿರುವದಾದರೆ, ಬೋರ್ಡು, 16ನೆ ಪ್ರಕರಣದ ನಿಯಮಗಳನ್ನಾಚರಿಸಿದ ತರುವಾಯ, ಅಂಥ ಮನೆಗಳನ್ನು ಕಟ್ಟುವದಕ್ಕೋಸ್ಕರವಾದ ಪ್ಲಾನುಗಳನ್ನು ಎಸ್ಟಿಮೇಟುಗಳನ್ನು ಸಹ ಗವರ್ನಮೆಂಟನವರಿಗೆ ಮಂಜೂರಾತಿ ಬಗ್ಯೆ ಕೂಡಲೆ ಒಪ್ಪಿಸತಕ್ಕದ್ದು; ಮತ್ತು, ಅಂಥ ಮಂಜೂರಾತಿಯು ಮುಟ್ಟಿದ ನಂತರ, 18ನೆ ಪ್ರಕರಣದ ನಿಯಮಗಳು, ಅವಶ್ಯವಿರುವ ಎಲ್ಲಾ ಬದಲಾವಣೆಗಳೊಡನೆ, ಸದರಿ ಮನೆಗಳನ್ನು ಕಟ್ಟಿಸಲು ಆ ಉಪಾಯದ ಯಾವ ಅಂಶದಲ್ಲಿ ನಿಶ್ಚಯಿಸಿರುತ್ತೊ ಆ ಅಂಶಕ್ಕೆ, ಆ ಅಂಶವೆ ಆ ಉಪಾಯವೆಂದು ಭಾವಿಸಲ್ಪಟ್ಟಂತೆ, ಪ್ರಯೋಗವಾಗತಕ್ಕದ್ದು.

ಅತಿ ಬಡವರಾದವರಿಗು ಮತ್ತು ಕೂಲಿ ಮಾಡುವವರಿಗು ಮನೆಗಳನ್ನು ಕಟ್ಟಿಸಲು ಅವಕಾಶ ಉಂಟುಮಾಡುವ ಉಪಾಯದ ಸಂದರ್ಭದಲ್ಲಿ ನಡಿಸುವ ರೀತಿ.

18. (1) (a) ಗವರ್ನಮೆಂಟನವರ ಮಂಜೂರಾತಿಯು ಮುಟ್ಟಿದನಂತರ, ಜೇರ್ಮೆನ್ನು, ಸದರಿ ಮಂಜೂ... ಆಗಿರುತ್ತೆಂಬುವದನ್ನು ಮತ್ತು ಆ ಉಪಾಯದ ಉದ್ದೇಶಗಳಿಗೋಸ್ಕರ ಬೋರ್ಡಿನಿಂದ ನಿಶ್ಚಯಿಸಲ್ಪಟ್ಟ ಆ ಜಮೀನು ಸಂಪಾಧನೆಯು ಒಂದು ಸರಕಾರಿ ಕೆಲಸಕ್ಕೋಸ್ಕರ ಬೇಕಾಗಿರುತ್ತೆಂಬುವದನ್ನು ಕುರಿತು ಒಂದು ಪ್ರಸಿದ್ಧಿ ಪತ್ರವನ್ನು ಗವರ್ನಮೆಂಟಿನ ಒಬ್ಬ ಸೆಕ್ರೆಟರಿಯ ದಸ್ತುನಿಶಿಯಾಗಿ ಪ್ರಕಟಿಸಲ್ಪಡುವದಕ್ಕೋಸ್ಕರ ಕಳುಹಿಸತಕ್ಕದ್ದು.

ಮಂಜೂರಾತಿಯು ಮುಟ್ಟಿದನಂತರ ಸಂಪಾದಿಸಬೇಕಾದ ಭೂಮಿಯ ವಿವರಗಳನ್ನು ತೋರಿಸುವ ಪ್ರಸಿದ್ಧಿ ಪತ್ರವನ್ನು ಪ್ರಕಟಿಸಬೇಕು.

(b) ಆ ಪ್ರಸಿದ್ಧಿಪತ್ರವು ಸರಕಾರ ಗೆಜೆಟ್ಟಿನಲ್ಲಿ ಛಾಪಿಸಲ್ಪಡಬೇಕಲ್ಲದೆ, ಅದರಲ್ಲಿ, ಸಂಪಾದಿಸಲು ನಿಶ್ಚಯಿಸಲ್ಪಟ್ಟ ಜಮೀನು ಇರುವ ಸರಹದ್ದುಗಳನ್ನು, ಅದು ಬೇಕಾಗಿರುವ ಉದ್ದೇಶವನ್ನು, ಅದರ ಸುಮಾರಾದ ವಿಸ್ತೀರಣವನ್ನು, ಮತ್ತು ಆ ಜಮೀನಿನ ಪ್ಲಾನನ್ನು ನೋಡಬಹುದಾದ ಸ್ಥಳವನ್ನು ತಿಳಿಸಬೇಕು

(c) ಆ ಜಮೀನು ಒಂದು ಸರಕಾರ ಉದ್ದೇಶಕ್ಕೋಸ್ಕರ ಬೇಕಾಗಿರುತ್ತೆಂಬುವದಕ್ಕೆ ಸದರಿ ಪ್ರಸಿದ್ಧಿ ಪತ್ರವೇ ನಿರುತ್ತರವಾದ ನಿದರ್ಶನವಾಗಿರತಕ್ಕದ್ದು, ಮತ್ತು ಬೋರ್ಡು, ಸದರಿ ಪ್ರಸಿದ್ಧಿಪತ್ರವು ಪ್ರಕಟನೆ ಮಾಡಲ್ಪಟ್ಟ ತರುವಾಯ, ಆ ಉಪಾಯವನ್ನು ಜಾರಿ ಮಾಡಲು ಉದ್ಯುಕ್ತರಾಗತಕ್ಕದ್ದು.

ಅಂಥ ಪ್ರಕಟನೆಯ ನಂತರ ಬೋರ್ಡು ಆ ಉಪಾಯನ್ನು ನೆರವೇರಿಸತಕ್ಕದ್ದು.

(2) (a) ಆ ಉಪಾಯದ ಯಾವ ಅಂಶದಲ್ಲಾಗಲಿ ಗುಣವೃದ್ಧಿ ಮಾಡಲಿಕ್ಕಾಗುತ್ತೆಂಬುವದು ಯಾವ ಕಾಲದಲ್ಲಾಗಲಿ ಬೋರ್ಡಿಗೆ ತೋರಿಬಂದಲ್ಲಿ ಅಂಥ ಗುಣವೃದ್ಧಿ ಮಾಡುವ ಉದ್ದೇಶಕ್ಕೋಸ್ಕರ ಬೋರ್ಡು ಆ ಉಪಾಯವನ್ನು ಬದಲಾಯಿಸಬಹುದು, ಮತ್ತು ಹಾಗೆ ಬದಲಾಯಿಸಲ್ಪಟ್ಟಂತೆ ಆ ಉಪಾಯವನ್ನು ಕೂಡಲೆ ಜಾರಿ ಮಾಡಲು ಬೋರ್ಡು, ಈ ಉಪಪ್ರಕರಣದ ಮೂರಣೆಯ ಎರಡು ಕಲಂಗಳಿನ ನಿಯಮಗಳಿಗೊಳಪಟ್ಟು, ಉದ್ಯುಕ್ತರಾಗತಕ್ಕದ್ದು.

ಆ ಉಪಾಯದ ಯಾವ ಅಂಶವನ್ನಾಗಲಿ ಬದಲಾಯಿಸುವ ಅಧಿಕಾರವು ಬೋರ್ಡಿಗೆ ಇರತಕ್ಕದ್ದು.

(b) ಮಂಜೂರಾದ ಉಪಾಯವನ್ನು ಜಾರಿಗೆ ತರಲು ಅಂದಾಜು ಮಾಡಿದ ಐನು ಕರ್ಚಿಗೆ, ಬದಲಾಯಿಸಲ್ಪಟ್ಟ ಉಪಾಯವನ್ನು ಜಾರಿಗೆ ತರಲು ಅಂದಾಜು ಮಾಡಿದ ಐನು ಕರ್ಚು ರೂ. 2,500 ಗಳಿಗೆ ಮೇಲ್ಪಟ್ಟು ಅಧಿಕವಾಗುವದಾದರೆ, ಗವರ್ನ್‍ಮೆಂಟಿನವರ ಪೂರ್ವಭಾವಿಯಾದ ಮಂಜೂರಾತಿಯನ್ನು ಪಡದಹೊರತು, ಬೋರ್ಡು ಬದಲಾಯಿಸಲ್ಪಟ್ಟ ಉಪಾಯವನ್ನು ಜಾರಿಗೆ ತರಲು ಉದ್ಯುಕ್ತರಾಗಕೂಡದು.

(c) 17ನೆ ಪ್ರಕರಣದ (2) (a) ಕಲಮಿನಂತಿರುವ ಉಪಾಯವನ್ನೊಡಗೂಡಿದ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಜಮೀನಲ್ಲದ ಇತರ ಯಾವ ಜಮೀನನ್ನಾಗಲಿ, ಕರಾರುದೆಶೆಯಿಂದಲ್ಲದ ಇತರ ವಿಧಾನದಲ್ಲಿ ಸಂಪಾದಿಸಬೇಕಾದ್ದು, ಬದಲಾಯಿಸಲ್ಪಟ್ಟ ಉಪಾಯದಲ್ಲಿ ಅಗತ್ಯವಾಗಿರುವ ಪಕ್ಷಕ್ಕೆ, 16, 17ನೆ ಪ್ರಕರಣಗಳ ಮತ್ತು (1)ನೆ ಉಪ ಪ್ರಕರಣವಾದ ನಿಯಮಗಳು ಆ ಉಪಾಯದ ಬದಲಾಯಿಸಲ್ಪಟ್ಟ ಭಾಗಕ್ಕೆ, ಆ ಭಾಗವೆ ಆ ಉಪಾಯವೆಂದು ಭಾವಿಸಲ್ಪಟ್ಟಂತೆ, ಪ್ರಯೋಗವಾಗತಕ್ಕದ್ದು.

ಸಾಧಾರಣ ವಿಷಯಗಳು.

ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಟ್ಟ ಭೂಮಿಯು ಬೀದಿಯನ್ನು ಮಾಡುವದಕ್ಕಾಗಲಿ ಅಥವಾ ಬದಲಾಯಿಸುವದಕ್ಕಾಗಲಿ ಬೋರ್ಡಿಗೆ ಬೇಕಾಗಿದ್ದರೆ ಬೋರ್ಡಿಗೆ ಹಂಗಾಮಿಯಾಗಿ ಕೊಡತಕ್ಕದ್ದು.

19. ಯಾವದಾದರೊಂದು ಉತ್ತಮಪಡಿಸುವ ಉಪಾಯದಂತೆ, ಯಾವ ಬೀದಿಯನ್ನು ರೂಪಿಸಲು, ಬದಲಾಯಿಸಲು, ಅಗಲ ಮಾಡಲು, ತಿರುಗಿಸಲು, ಎತ್ತರಿಸಲು, ಪುನಹ ಕ್ರಮಪಡಿಸಲು, ಅಥವಾ ಪುನಹ ಕಟ್ಟಿಸಲು, ಬೋರ್ಡಿಗೆ ಕರ್ತವ್ಯವಾಗಿರುತ್ತದೆಯೊ ಆ ಬೀದಿಯ ಯಾವದೊಂದಾದರು ಭಾಗದ ಸ್ಥಳದಲ್ಲಿ, ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಟ್ಟರುವ ಸದ್ಯದಲ್ಲಿರತಕ್ಕ ಸಾರ್ವಜನಿಕ ಬೀದಿಯ ಅಥವಾ ಇತರ ಜಮೀನಿನ ಎಲ್ಲವಾಗಲಿ ಅಥವಾ ಯಾವ ಭಾಗವಾಗಲಿ, ಯಾವಾಗಲಾದರು ಅಡಗಿಕೊಂಡಿರುವ ಸಂದರ್ಭದಲ್ಲಿ ; ಸದ್ಯದಲ್ಲಿರುವ ಅಂಥ ಬೀದಿಯ ಅಥವಾ ಇತರ ಜಮೀನಿನ (ಇಲ್ಲಿ ಮುಂದೆ "ಬೇಕಾದ ಭಾಗ" ವೆಂದು ಕರಿಯಲ್ಪಟ್ಟ) ಎಲ್ಲವಾಗಲಿ ಅಥವಾ ಒಂದು ಭಾಗವಾಗಲಿ, ಹ್ಯಾಗೆ ವಿದ್ಯಮಾನವಿರುತ್ತಿಯೊ ಹಾಗೆ, ಮೇಲ್ಕಂಡಂತೆ ತಾವು ನಡಿಸತಕ್ಕದ್ದಾದ ಬೀದಿಯ ಭಾಗವಾಗಿರೋಣದರಿಂದ ತಮಗೆ ಬೇಕಾಗಿರುತ್ತೆಂದು ಬೋರ್ಡು, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ನೋಟಿಸನ್ನು ಜಾರಿ ಮಾಡಬೇಕು ; ಅದರ ಮೇಲೆ 21ನೆ ಪ್ರಕರಣದ (1)ನೆ ಉಪ ಪ್ರಕರಣದ ನಿಯಮಗಳಿಗೊಳಪಟ್ಟು ಆ ಬೇಕಾದ ಭಾಗವು ಬೋರ್ಡಿಗೆ ಕೊಡಲ್ಪಡತಕ್ಕದ್ದು: ಆದರೆ ಯಾವ ಮ್ಯುನಿಸಿಪಲ್ ಬಚ್ಚಲು ಅಥವಾ "ವಾಟರ್ ವರ್ಕ" ನ ಮೇಲೆಯಾಗಲಿ ಮ್ಯುನಿಸಿಪಲ್ ರೆಗ್ಯುಲೇಷನುಗಳನುಸರಿಸಿ ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಇರುವ ಹಕ್ಕುಗಳಿಗಾಗಲಿ ಅಥವಾ ಅಧಿಕಾರಗಳಿಗಾಗಲಿ ಈ ಪ್ರಕರಣದಲ್ಲಿರುವ ನಿಯಮದಿಂದ ಕುಂದಕವಾಗುತ್ತೆಂದು ಎಣಿಸಕೂಡದು.

ಬೀದಿಗಳ ಸಮ್ಮಂಧದಲ್ಲಿ ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಇರುವ ಕೆಲವು ಅಧಿಕಾರಗಳನ್ನು ಬೋರ್ಡು, ತಮಗೆ ಕೊಡಲ್ಪಟ್ಟ ಜಮೀನನ್ನು ಕುರಿತು ಜಾರಿ ಯಲ್ಲಿ ಇಡಬಹುದು.

20. ಬೀದಿಗಳನ್ನು ಕುರಿತು ಇರುವ ಮ್ಯುನಿಸಿಪಲ್ ರೆಗ್ಯುಲೇಷನುಗಳ ಪ್ರಕರಣಗಳು 94ಇಂದ 101ವರಿಗೆ, 113 ಇಂದ 115ವರಿಗೆ, 118ಇಂದ 124ವರಿಗೆ, 126ಇಂದ 128ವರಿಗೆ, 130, 131, 136, 171, 172 ಮತ್ತು 175ಇಂದ 178ವರಿಗೆ, ಇವುಗಳ ನಿಯಮಗಳು ಈ ರೆಗ್ಯುಲೇಷನಿನ ಅಭಿಪ್ರಾಯಕ್ಕೆ ಅನುಗುಣವಾಗಿರುವವರೆಟ್ಟಿಗು, ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿಗೆ ಕೊಡಲ್ಪಟ್ಟರುವ ಬೀದಿಗಳಿಗಾಗಲಿ ಅಥವಾ ಅವುಗಳ ಭಾಗಗಳಿಗಾಗಲಿ ಪ್ರಯೋಗವಾಗತಕ್ಕದ್ದು ; ಮತ್ತು ಮ್ಯುನಿಸಿಪಲ್ ಕಮ್ಮಿಷನರುಗಳಿಗಾಗಲಿ ಅಥವಾ ಇತರ ಮ್ಯುನಿಸಿಪಲ್ ಅಧಿಕಾರಿಗಾಗಲಿ ಸದರಿ ನಿಯಮಗಳಲ್ಲಿರುವ ದಾಖಲೆಗಳನ್ನೆಲ್ಲ ಬೋರ್ಡಿಗೆ ಸಮ್ಮಂಧಪಟ್ಟ ದಾಖಲೆಗಳೆಂದು ಅನ್ವಯಿಸತಕ್ಕದ್ದು.

ಬೀದಿಗಳು ತಯಾರಾದ ಬಳಿಕ ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಡುವದಲ್ಲದೆ ಅವರುಗಳ ನಿಗಾವಣೆಯಲ್ಲಿರಬೇಕು.

21. (1) ಗವರ್ನ್‍ಮೆಂಟಿನವರಿಂದ ಮಂಜೂರಾದಂಥ ಯಾವದೊಂದಾದರು ಉಪಾಯದ ಪ್ಲಾನುಗಳಲ್ಲಿ ಕಂಡ ರೀತಿಯಂತೆ ಬೋರ್ಡಿನಿಂದ ರೂಪಿಸಲ್ಪಟ್ಟ ಯಾವದೊಂದು ಬೀದಿಯಾದರೂ ತಕ್ಕಹಾಗೆ ಸಮಪಡಿಸಲ್ಪಟ್ಟು, ಪರಸ್ಪಂದಿ ಮಾಡಲ್ಪಟ್ಟು, (metalled) ಕಲ್ಲು ಚೂರುಗಳು ಹಾಕಲ್ಪಟ್ಟು, (flagged) ಹಾಸಿಗೆ ಕಲ್ಲುಗಳು ಹಾಸಲ್ಪಟ್ಟು, ಕಾಲಿವೆಗಳು ಕಟ್ಟಲ್ಪಟ್ಟು, ಬಚ್ಚಲುಗಳು ಇಡಲ್ಪಟ್ಟು, ಗ್ರಾಮಸಾರದ ಮೊಹರಿಗಳು ಹೊಂದಿಸಲ್ಪಟ್ಟು ಇರುತ್ತೆಂಬುವದರಲ್ಲಿಯು, ಮತ್ತು ಆ ಬೀದಿಯಲ್ಲಿ ದೀಪ ಮುಟ್ಟಿಸಲು ತಮ್ಮ (ಪ್ರೆಸಿಡೆಂಟರ) ಅಭಿಪ್ರಾಯದಲ್ಲಿ ಅಗತ್ಯವಾದ್ದೆಂದಿರುವದಲ್ಲದೆ ಬೋರ್ಡಿನಿಂದ ಒದಗಿಸಲ್ಪಡಬೇಕಾದ್ದಾಗಿರುವ ದೀಪಗಳನ್ನು, ದೀಪದ ಕಂಬಗಳನ್ನು ಮತ್ತು ಇತರ ಉಪಕರಣಗಳನ್ನು ಬೋರ್ಡು ಸಿದ್ಧಪಡಿಸಿರುತ್ತಾರೆಂಬುವದರಲ್ಲಿಯು ಮನವರಿಕೆಯಾದ ತರುವಾಯ, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು ಅಂಥ ಬೀದಿಯು ಒಂದು ಸಾರ್ವಜನಿಕವಾದ ಬೀದಿಯೆಂದು ಪ್ರಕಟಿಸತಕ್ಕದ್ದು ; ಮತ್ತು ಅದರ ಮೇಲೆ ಅಂಥ ಬೀದಿಯನ್ನು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನಕ್ಕೆ ಒಪ್ಪಿಸಬೇಕು ಅಥವಾ ಪುನಹ ಒಪ್ಪಿಸಬೇಕು, ಹ್ಯಾಗೆ ವಿದ್ಯಮಾನ ವಿರುತ್ತದೊ ಹಾಗೆ ; ಮತ್ತು ಮ್ಯುನಿಸಿಪಲ್ ಕಮ್ಮಿಷನರುಗಳು ಅದು ಮೊದಲ್ಗೊಂಡು ಆ ಬೀದಿಯನ್ನು ಜೀರ್ಣೋದ್ಧಾರ ಮಾಡಬೇಕಾದ್ದಲ್ಲದೆ ಮರಾಮತ್ತು ಮಾಡುತ್ತಾ ಚೊಕ್ಕ ಮಾಡುತ್ತಾ ಚೊಕ್ಕಟಪಡಿಸುತ್ತಾ ಇರಬೇಕು.

ಗಾಳಿ ಬೀಸುವದಕ್ಕೋಸ್ಕರ ಉಳಿಸಿಕೊಂಡ ಬೈಲು ಭೂಮಿಗಳು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನ ಮತ್ತು ಸಂರಕ್ಷಣೆಯಲ್ಲಿರಬೇಕು.

(2) ಪಟ್ಟಣದ ಯಾವ ಭಾಗದಲ್ಲಿಯಾಗಲಿ ಗಾಳಿ ಬೀಸುವದಕ್ಕೋಸ್ಕರ ಉಳಿಸಿಕೊಂಡಿರಲ್ಪಟ್ಟ ಮತ್ತು ಗವರ್ನ್‍ಮೆಂಟಿನವರಿಂದ ಮಂಜೂರಾಗಿರುವ ಯಾವದಾದರೂ ಒಂದು ಉತ್ತಮ ಪಡಿಸುವ ಉಪಾಯಕ್ಕೆ ಸೇರಿದ ಭಾಗವೆಂದು ಬೋರ್ಡಿನಿಂದ ನಿಶ್ಚಯಿಸಲ್ಪಟ್ಟು ಇರುವ ಯಾವ ಬೈಲುಭೂಮಿಯನ್ನಾಗಲಿ ಪೂರಯಿಸಿದ ತರುವಾಯ ಮ್ಯುನಿಸಿಪಲ್ ಕಮ್ಮಿಷನರುಗಳ ಕರ್ಚಿನಲ್ಲಿ ಸಂರಕ್ಷಿಸಲ್ಪಡುವದಕ್ಕೋಸ್ಕರ ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರ ವಶಕ್ಕೆ ಒಪ್ಪಿಸಬೇಕು, ಮತ್ತು ಅದು ಮೊದಲ್ಗೊಂಡು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನದಲ್ಲಿರಬೇಕು.

ಈ ಪ್ರಕರಣದಲ್ಲಿ ಉಂಟಾಗುವ ವ್ಯಾಜ್ಯಗಳನ್ನು ಗವರ್ನಮೆಂಟಿನವರು ಫೈಸಲು ಮಾಡಬೇಕು.

(3) ಈ ಪ್ರಕರಣದ ಯಾವ ನಿಯಮಗಳನ್ನು ಕುರಿತಾಗಲಿ ಬೋರ್ಡಿಗೂ ಮತ್ತು ಮ್ಯುನಿಸಿಪಲ್ ಕಮಿಷನಿನ ಪ್ರೆಸಿಡೆಂಟರಿಗೂ ಬೀಳುವ ಯಾವ ವ್ಯಾಜ್ಯವನ್ನಾದರೂ ಗವರ್ನಮೆಂಟಿನವರು ಫೈಸಲು ಮಾಡಬೇಕು. ಅಂಥ ಫೈಸಲೆ ಕಡೇ ಫೈಸಲಾಗಿರತಕ್ಕದ್ದು.

ಜಮೀನು ಸಂಪಾದನೆ.

ಕರಾರು ಮೂಲಕ ಜಮೀನು ಸಂಪಾದಿಸಲು ಬೋರ್ಡಿಗೆ ಅಧಿಕಾರವಿರತಕ್ಕದ್ದು.

22. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿಗೆ ಬೇಕಾಗಿದ್ದು, ಪಟ್ಟಣದ ಒಳಗಾಗಲಿ ಹೊರಗಾಗಲಿ ಇರತಕ್ಕ ಯಾವ ಭೂಮಿಯನ್ನಾದರೂ ಅಥವಾ ಅದರಲ್ಲಿನ ಬಾಧ್ಯತೆಯನ್ನಾದರೂ ಉಳ್ಳವರೊಂದಿಗೆ ಸದರಿ ಭೂಮಿಯನ್ನಾಗಲಿ ಅದರಲ್ಲಿನ ಬಾಧ್ಯತೆಯನ್ನಾಗಲಿ ಕ್ರಯಕ್ಕೆ ತೆಗದುಕೊಳ್ಳುವದಕ್ಕೋಸ್ಕರ ಕರಾರು ಮಾಡಲು, ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಬೋರ್ಡಿಗೆ ನ್ಯಾಯವಾಗಿರತಕ್ಕದ್ದು.

ಕರಾರು ಮೂಲಕವಲ್ಲದ ಇತರ ವಿಧಾನದಲ್ಲಿ ಭೂಸಂಪಾದನೆಯನ್ನು ಮಾಡುವದಕ್ಕೆ ಪ್ರಯೋಗವಾಗತಕ್ಕ ನಿಯಮಗಳು.

23. ಪಟ್ಟಣದ ಒಳಗಾಗಲಿ ಹೊರಗಾಗಲಿ ಭೂಮಿಯನ್ನು ಕರಾರು ಮೂಲಕವಲ್ಲದೆ ಇತರ ವಿಧಾನದಲ್ಲಿ ಈ ರೆಗ್ಯುಲೇಷನಿನಂತೆ ಸಂಪಾದಿಸೋಣವು, 189 ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಎಷ್ಟುಮಟ್ಟಿಗೆ ಪ್ರಯೋಗವಾಗಬಹುದೊ ಅಷ್ಟುಮಟ್ಟಿಗೆ ಆ ನಿಯಮಗಳಿಂದಲೂ, ಮತ್ತು ಈ ಕೆಳಗೆ ಬರುವ ಅಧಿಕ ನಿಯಮಗಳಿಂದಲೂ ಕ್ರಮಪಡಿಸಲ್ಪಡತಕ್ಕದ್ದು. ಆ ಅಧಿಕ ನಿಯಮಗಳು ಯಾವವೆಂದರೆ :—

(1) ಯಾವ ಪ್ರದೇಶವನ್ನು ಕುರಿತಾಗಲಿ ಒಂದು ಉತ್ತಮಪಡಿಸುವ ಉಪಾಯವು 14ನೆ ಪ್ರಕರಣದಂತೆ ಅವಶ್ಯವಿರುತ್ತೆಂದು ಬೋರ್ಡು ನಿರ್ಣಯಿಸಿದ ತರುವಾಯ, ಭೂಸಂಪಾದನೆ ವಿಷಯದ ರೆಗ್ಯುಲೇಷನಿನ 4 (2) ಉಪಪ್ರಕರಣದಂತೆ ನಡಿಯುವ ಬಗ್ಗೆ ಗವರ್ನಮೆಂಟಿನವರಿಂದ ತಕ್ಕಹಾಗೆ ಅಧಿಕಾರ ಕೊಡಲ್ಪಟ್ಟ ಒಬ್ಬ ಉದ್ಯೋಗಸ್ಥನಿಗಾದರೂ ಅವನ ಸೇವಕರಿಗಾದರೂ ಕೂಲಿಯವರಿಗಾದರೂ ಅದಕ್ಕನುಸಾರವಾಗಿ ಯಾವ ಕಾರ್ಯಗಳನ್ನು ಮಾಡುವದು ನ್ಯಾಯವಾಗಿರುತ್ತೆಯೊ ಅಂಥಾ ಎಲ್ಲಾ ಕಾರ್ಯಗಳನ್ನು, ಬೋರ್ಡಿನಿಂದ ಇದರ ಪರದಲ್ಲಿ ಸಾಧಾರಣವಾಗಿಯಾಗಲಿ ವಿಶೇಷವಾಗಿಯಾಗಲಿ ಅಧಿಕಾರ ಕೊಡಲ್ಪಟ್ಟ ಯಾವ ಮನುಷ್ಯನಿಗಾದರೂ ಅವನ ಸೇವಕರಿಗಾದರೂ ಕೂಲಿಯವರಿಗಾದರೂ ಆ ಪ್ರದೇಶದಲ್ಲಿರುವ ಭೂಮಿಯ ಸಮ್ಮಂಧವಾಗಿ ಮಾಡುವದು ನ್ಯಾಯವಾಗಿರತಕ್ಕದ್ದು; ಮತ್ತು ಸದರಿ ರೆಗ್ಯುಲೇಷನಿನ 5ನೆ ಪ್ರಕರಣದಲ್ಲಿರುವ ನಿಯಮವು, ಮೇಲೆ ನಮೂದಾಗಿರುವ ಯಾವ ಕಾರ್ಯಗಳ ದೆಶೆಯಿಂದಾಗಲಿ ಉಂಟಾದ ನಷ್ಟದ ವಿಷಯಕ್ಕೆ ಅದೇ ರೀತಿಯಲ್ಲಿ ಪ್ರಯೋಗವಾಗತಕ್ಕದ್ದು.

(2) 13ನೆ ಪ್ರಕರಣದಂತೆ ಮಾಡಲ್ಪಟ್ಟ ಪ್ರಕಟಣೆಯು, ಭೂಸಂಪಾದನೆಯ ವಿಷಯದ ರೆಗ್ಯುಲೇಷನಿನ 6ನೆ ಪ್ರಕರಣದಂತೆ ಮಾಡಲ್ಪಟ್ಟ ಪ್ರಕಟಣೆಯಾಗಿ ಎಣಿಸಲ್ಪಡತಕ್ಕದ್ದು.

(3) ಭೂಸಂಪಾದನೆಯ ವಿಷಯದ ರೆಗ್ಯುಲೇಷನಿನ 50 (2)ನೆ ಪ್ರಕರಣದ ಉದ್ದೇಶಗಳಿಗೋಸ್ಕರ ಬೋರ್ಡು, ಸಮ್ಮಂಧಪಟ್ಟ ಸ್ಥಳಿಕ ಅಧಿಕಾರಸ್ಥರಾಗಿ ಎಣಿಸಲ್ಪಡತಕ್ಕದ್ದು.

(4) ಭೂಸಂಪಾದನೆಯ ವಿಷಯದ ರೆಗ್ಯುಲೇಷನಿನ 16ನೆ ಪ್ರಕರಣದಂತೆ ಭೂಮಿಯು ಗವರನ್ಮೆಂಟಿನವರ ವಶವಾದ ತರುವಾಯ, ಡೆಪ್ಯುಟಿ ಕಮಿಷನರವರು, ಆ ಸಂಪಾದನೆಯ ಖರ್ಚು ಪಾವತಿಯಾದಬಳಿಕ ಮತ್ತು ಆ ಸಂಪಾದನೆಗಾಗಿ ಮಾಡಲ್ಪಡಬಹುದಾದ ಯಾವ ಅಧಿಕ ಖರ್ಚನ್ನಾಗಲಿ ಪಾವತಿ ಮಾಡಲು ಬೋರ್ಡು ಒಪ್ಪಿಕೊಂಡ ಬಳಿಕ, ಬೋರ್ಡಿನ ವಶಕ್ಕೆ ಆ ಭೂಮಿಯನ್ನು ಕೊಡತಕ್ಕದ್ದು, ಮತ್ತು ಅದರಮೇಲೆ ಆ ಭೂಮಿಯು ಬೋರ್ಡಿಗೆ ಸೇರಿರತಕ್ಕದ್ದು.

IV ನೆ ಅಧ್ಯಾಯ ಸ್ವತ್ತು ಮತ್ತು ನಗದಿ.

ತಮಗಾಗಲಿ ಮ್ಯುನಿಸಿಪಲ್ ಕಮಿಷನರುಗಳಿಗಾಗಲಿ ಸೇರಿದ ಭೂಮಿಗಳನ್ನು ಬೋರ್ಡಿಗೆ ಕೊಡಲು ಗವರ್ನಮೆಂಟಿನವರಿಗಿರುವ ಅಧಿಕಾರ.

24. ಗವರ್ನಮೆಂಟಿನವರು ವಿಧಿಸಬಹುದಾದ ವಿನಾಯಿತಿಗಳಿಗೂ ಷರತ್ತುಗಳಿಗೂ ಮತ್ತು ಇದರಲ್ಲಿ ಮುಂದೆ ಬರುವ ನಿಯಮಗಳಿಗೂ ಒಳಪಟ್ಟು ಗವರ್ನಮೆಂಟಿನವರು ತಮಗಾಗಲಿ ಅಥವಾ ಮ್ಯುನಿಸಿಪಲ್ ಕಮಿಷನರುಗಳಿಗಾಗಲಿ ಸೇರಿರುವ ಯಾವ ಭೂಮಿಯನ್ನಾದರೂ ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರವಾಗಿ ಆಗಿಂದಾಗ್ಗೆ ಬೋರ್ಡಿಗೆ ಒಪ್ಪಿಸಿಕೊಡಬಹುದು.

ಸಾರ್ವಜನಿಕ ಉದ್ದೇಶಕ್ಕೋಸ್ಕರ ಬೇಕಾದ ಭೂಮಿಗಳನ್ನು ತಿರಿಗಿ ತೆಕ್ಕೊಳ್ಳುವ ವಿಷಯದ ನಿಯಮ.

ಆದರೆ ಯಾವ ಭೂಮಿಯು ಬೋರ್ಡಿನಿಂದ ಆಗಲೆ ವಶಕ್ಕೆ ಕೊಡಲ್ಪಡದೆ ಇದ್ದು, ಅಥವಾ ವಶಕ್ಕೆ ಕೊಡಲು ಕರಾರು ಮಾಡಲ್ಪಡದೆ ಇದ್ದು, ಗವರ್ನಮೆಂಟಿನವರಿಗಾಗಲಿ ಅಥವಾ ಮ್ಯುನಿಸಿಪಲ್ ಕಮಿಷನರುಗಳಿಗಾಗಲಿ ಒಂದು ಸಾರ್ವಜನಿಕ ಉದ್ದೇಶಕ್ಕೋಸ್ಕರ ಅಗತ್ಯವಿರುತ್ತೆಯೊ ಆ ಭೂಮಿಯು, ಗವರ್ನಮೆಂಟಿನವರಿಂದಲೊ ಅಥವಾ ಗವರ್ನಮೆಂಟಿನವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆದು ಮ್ಯುನಿಸಿಪಲ್ ಕಮಿಷನರುಗಳಿಂದಲೊ, ಹ್ಯಾಗೆ ಸಂದರ್ಭವೊ ಹಾಗೆ, ಗವರ್ನಮೆಂಟಿನವರು ಅಪ್ಪಣೆ ಕೊಡಿಸಬಹುದಾದ ಶರ್ತುಗಳಂತೆ, ಯಾವ ಕಾಲದಲ್ಲಾಗಲಿ, ಪುನಹಾ ಸ್ವಾಧೀನಕ್ಕೆ ತೆಗದುಕೊಳ್ಳಬಹುದು.

25. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ, ಪಟ್ಟಣದ ಒಳಗಾಗಲಿ ಅಥವಾ ಹೊರಗಾಗಲಿ ಚರ ಮತ್ತು ಸ್ಥಿರ ಸ್ವತ್ತನ್ನು ಸಂಪಾದಿಸಲು ಮತ್ತು ಇಟ್ಟುಕೊಳ್ಳಲು ಬೋರ್ಡಿಗೆ ಅಧಿಕಾರವಿರತಕ್ಕದ್ದು; ಮತ್ತು ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಈ ಕೆಳಗೆ ಬರುವ ಕಾರ್ಯಗಳಿಗಾಗಿಯೂ ಕೂಡ ಅಧಿಕಾರವಿರತಕ್ಕದ್ದು: ಏನಂದರೆ—

ಸ್ವತ್ತನ್ನು ಸಂಪಾದಿಸಲು ಮತ್ತು ಇಟ್ಟುಕೊಳ್ಳಲು ಬೋರ್ಡಿಗೆ ಇರುವ ಅಧಿಕಾರ.

ಗುತ್ತಿಗೆ ಕೊಡೋಣ.

(1) ತಮ್ಮಿಂದ ಸಂಪಾದಿಸಲ್ಪಟ್ಟ ಅಥವಾ ತಮಗೆ ಕೊಡಲ್ಪಟ್ಟ ಯಾವ ಚರ ಅಥವಾ ಸ್ಥಿರ ಸೊತ್ತನ್ನಾಗಲಿ ಬಾಡಿಗೆಗೆ ಅಥವಾ ಗುತ್ತಿಗೆಗೆ ಕೊಡೋಣ ;

ಕ್ರಯಕ್ಕೆ ಮತ್ತು ಇತರ ವಿಧದಲ್ಲಿ ಕೊಡುವದು.

(2) ತಮಗೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಯಾವ ಚರ ಅಥವಾ ಸ್ಥಿರ ಸ್ವತ್ತನ್ನಾಗಲಿ ಯಾವ ಶರ್ತುಗಳೊಂದಿಗಾದರು ಅಥವಾ ಯಾವ ಶರ್ತುಗಳಿಲ್ಲದೇಯೂ ಕ್ರಯಕ್ಕೆ ಮತ್ತು ಇತರ ವಿಧದಲ್ಲಿಯು ಕೊಡೋಣ ;

ತಮಗೆ ಕೊಡಲ್ಪಟ್ಟಿರುವ ಭೂಮಿಗಳನ್ನು ಉತ್ತಮಪಡಿಸುವ ಉಪಾಯಗಳ ಉದ್ದೇಶಗಳಿಗೋಸ್ಕರ ಪ್ರಯೋಗಿಸುವದು.

(3) ತಮಗೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಎಲ್ಲಾ ಭೂಮಿಗಳನ್ನಾಗಲಿ ಅಥವಾ ಅವುಗಳ ಯಾವ ಅಂಶವನ್ನಾಗಲಿ, ಬೈಲು ಪ್ರದೇಶಗಳನ್ನು ಮಾಡುವದಕ್ಕಾದರೂ, ಕಟ್ಟುವ ಉದ್ದೇಶಗಳಿಗೋಸ್ಕರವಾದರು, ಅಥವಾ ಯಾವ ಉತ್ತಮಪಡಿಸುವ ಉಪಾಯದ ಉದ್ದೇಶಗಳಿಗೋಸ್ಕರ ಯಾವ ವಿಧಾನದಲ್ಲಿಯಾದರು, ಉಪಯೋಗಿಸೋಣ ಅಥವಾ ಪ್ರಯೋಗಿಸೋಣ.

ಉತ್ತಮಪಡಿಸುವ ವಿಷಯದ ಫಂಡು ಮತ್ತು ಅದರ ಜಮೆಗೆ ಬರತಕ್ಕ ಬಾಬುಗಳು.

26. (1) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿಗೆ ಕೊಡಲ್ಪಟ್ಟ, ಕೊಡಬೇಕಾಗಿರುವ, ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸಮಸ್ತ ಭೂಮಿಗಳ, ಕಟ್ಟಡಗಳ ಮತ್ತು ಇತರ ಸ್ವತ್ತುಗಳ, ಬಾಡಿಗೆಗಳು, ಆದಾಯಗಳು ಮತ್ತು ಕ್ರಯದ ಹುಟ್ಟುವಳಿಗಳು "ಮೈಸೂರು ಪಟ್ಟಣದ ಇಂಪ್ರೂವ್‌ಮೆಂಟ್ ಫಂಡ" ಎಂದು ಕರೆಯಲ್ಪಡಬೇಕಾದ ಒಂದು ಫಂಡಿನ ಜಮೆಗೆ ಬರತಕ್ಕದ್ದು.

(2) ಸದರಿ ಫಂಡಿನ ಜಮೆಗೇನೆ ಬರತಕ್ಕ ಇತರ ಬಾಬುಗಳ್ಯಾವವೆಂದರೆ—

(*a*) ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರವಾಗಿ ಬೋರ್ಡಿನ ವಶಕ್ಕೆ ಗವರ್ನಮೆಂಟಿನವರಿಂದ ಆಗಿಂದಾಗ್ಗೆ ಕೊಡಲ್ಪಡಬಹುದಾದ ಮೊಬಲಗುಗಳು; ಮತ್ತು

(*b*) ಬೋರ್ಡಿನವರಿಂದ ಹಿಡಿಯಲ್ಪಟ್ಟ ಉತ್ತಮ ಪಡಿಸುವ ಉಪಾಯಗಳಿಂದ ಮ್ಯುನಿಸಿಪಲ್ ದ್ರವ್ಯಕ್ಕೆ ಪರಿಣಮಿಸಿದ ಅಥವಾ ಪರಿಣಮಿಸುವಂತೆ ಕಾಣುವ ವೃದ್ಧಿಯನ್ನಾಗಲಿ ಅಥವಾ ಸಹಾಯವನ್ನಾಗಲಿ ಗವರ್ನಮೆಂಟಿನವರು ಆಲೋಚಿಸಿ, ಮ್ಯೂನಿಸಿಪಲ್ ಫಂಡಿನಿಂದ ಯಾವ ಮೊಬಲಗುಗಳನ್ನು ಕೊಡಬೇಕೆಂಗು ಮ್ಯುನಿಸಿಪಲ್ ಕಮ್ಮಿಷನರುಗಳನ್ನು ಆಗಿಂದಾಗ್ಗೆ ಆಜ್ಞಾಪಿಸುತ್ತಾರೊ ಆ ಮೊಬಲಗುಗಳು.

ಇಂಪ್ರೂವ್‌ಮೆಂಟ್ ಫಂಡಿನ ಪ್ರಯೋಗ.

27. (1) ಸದರಿ ಫಂಡು ಬೋರ್ಡಿನ ವಶದಲ್ಲಿರತಕ್ಕದ್ದು ; ಮತ್ತು, ಸಾಮಾನ್ಯವಾಗಿಯಾದರು ಅಥವಾ ಪ್ರತ್ಯೇಕವಾಗಿಯಾದರು ಗವರ್ನಮೆಂಟಿನವರಿಂದ ವಿಧಿಸಲ್ಪಟ್ಟ ಆಜ್ಞೆಗಳಿಗೆ ಒಳಪಟ್ಟು, ಈ ರೆಗ್ಯುಲೇಷನಿನ ಉದ್ದೇಶಗಳನ್ನು ಜಾರಿಗೆ ತರೋಣದರಲ್ಲಿ ಸಂಭವಿಸುವ ಕರ್ಚುಗಳಿಗೆ ಬೋರ್ಡಿನಿಂದ ಉಪಯೋಗಿಸಲ್ಪಡತಕ್ಕದ್ದು.

(2) ಅಂಥಾ ಕರ್ಚುಗಳಲ್ಲಿ, ಇತರ ಬಾಬುಗಳ ಪೈಕಿ, ಅಡಗಿರುವವುಗಳು, ಏನಂದರೆ:—

(*a*) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನ ವಶಕ್ಕೆ ಬಂದಿರುವ ಅಥವಾ ಬರುವ ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸ್ವತ್ತಿನ ಬಾಡಿಗೆಗಳು ಆದಾಯಗಳು ಮತ್ತು ಇತರ ಹುಟ್ಟುವಳಿಗಳು ಇವುಗಳನ್ನು ವಸೂಲ್ಮಾಡುವದಕ್ಕೋಸ್ಕರ ಉದ್ಯೋಗಸ್ಥರು ಮತ್ತು ಸೇವಕರನ್ನು ಇಟ್ಟುಕೊಳ್ಳುವ ಕರ್ಚು ;

(*b*) ಫೇರಿಸ್ತು ಆದ ಸಿಬ್ಬಂದಿಯ ಭಾಗವಲ್ಲದೆ ಇದ್ದು, ಸ್ವತ್ತುಗಳ ನಿಗಾವಣಿಗಾಗಲಿ ಅಥವಾ ಇತರ ಹುಟ್ಟುವಳಿ ಉದ್ದೇಶಗಳಿಗಾಗಲಿ ಅವಶ್ಯಕವಾಗಿರುವ ಚಿಕ್ಕ ಮತ್ತು ಇತರ ಸಿಬ್ಬಂದಿಯ ಕರ್ಚು;

(*c*) ಫೇರಿಸ್ತು ಆದ ಸಿಬ್ಬಂದಿಯ ಸಂಬಳ ಮತ್ತು ಅಲರ್ವನುಗಳು ಮತ್ತು ಆಕಸ್ಮಿಕವಾದ ಕರ್ಚುಗಳು ಸೇರಿ ಕೆಲಸದ ಚಲಾವಣಿಗಾಗಿ ಆಗುವ ಕರ್ಚು ;

(*d*) ಬೋರ್ಡಿಗೆ ಕೊಡಲ್ಪಟ್ಟು ಮತ್ತು ವಿನಾಯಿತಿಗೆ ಒಳಪಡದೆ ಇರುವ ಭೂಮಿಗಳ ಮೇಲೂ, ಕಟ್ಟಡಗಳ ಮೇಲೂ, ಮ್ಯೂನಿಸಿಪಲ್ ರೆಗ್ಯುಲೇಷನ್‌ಗಳಂತೆ ವಸೂಲ್ಮಾಡಲ್ಪಡುವ ತೆರಿಗೆಗಳ ಮತ್ತು ಕಂದಾಯಗಳ ವಿಷಯದಲ್ಲಿ ಬೋರ್ಡಿನಿಂದ ಕೊಡಲ್ಪಡುವ ಎಲ್ಲಾ ಹಣಗಳು.

(3) ಮನೆಗಳನ್ನಾಗಲಿ ಅಥವಾ ಇತರ ವಸತಿಗಳನ್ನಾಗಲಿ ಹೊಂದಿಸಿಕೊಳ್ಳಲು, ಸರಕಾರದ ನವಕರುಗಳಲ್ಲದ ಜನಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶಕ್ಕೋಸ್ಕರ, 38ನೆ ಪ್ರಕರಣದಂತೆ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನೇಮಗಳಿಗೆ ಅನುಸಾರವಾಗಿ, ಬೋರ್ಡು ಆಗಿಂದಾಗ್ಗೆ ಸದರಿ ಫಂಡಿನಿಂದ ಮುಂಗಡಗಳನ್ನು ಕೊಡಬಹುದು.

634

ಜಮಾ ಖರ್ಚಿನ ಸಾಲಿಯಾನಾ ಅಂದಾಜು ಚೇರಮನ ನಮಾಡತಕ್ಕದ್ದು.

28. (1) ಪ್ರತಿ ವರುಷದ ಮೇ (May) ಗುರ್ರ್ರ್ ತಾರೀಖಿಗೆ ಮೀರದೆ ಇರುವ ದಿನದಲ್ಲಿ ಮಾಡಲ್ಪಡಬೇಕಾಗಿರುವ ಒಂದು ವಿಶೇಷವಾದ ಮೀಟಂಗಿನಲ್ಲಿ ಚೇರಮನನ್ನು, ಬೋರ್ಡು ಆಗಿಂದಾಗ್ಗೆ ವಿಧಿಸುವ ತಪಶೀಲುನಲ್ಲಿಯೂ ಮತ್ತು ನಮೂನೆಯಂತೆಯೂ, ಮಾರನೆ ಜುಲೈ (July) ಗುರ್ರ್ರ್ ತಾರೀಖಿನಿಂದ ಆರಂಭಿಸುವ ವರುಷಕ್ಕೆ ಬೋರ್ಡಿನ ಜಮಾ ಖರ್ಚಿನ ಅಂದಾಜನ್ನು ಬೋರ್ಡಿಗೆ ಒಪ್ಪಿಸತಕ್ಕದ್ದು.

(2) ಅಂಥಾ ಅಂದಾಜು, ಈ ರೆಗ್ಯುಲೇಷನಿನ ಚಲಾವಣೆಯು ಕಾರ್ಯ ಸಾಧಕವಾಗಿರುವದಕ್ಕೆ ಬೇಕಾದ ಅನುಕೂಲವನ್ನುಂಟುಮಾಡತಕ್ಕದ್ದು ಮತ್ತು ಸಂಪೂರ್ಣವಾಗಿರತಕ್ಕದ್ದು. ಆ ಅಂದಾಜಿನ ಒಂದು ನಕಲನ್ನು, ಪ್ರತಿ ಒಬ್ಬ ಟ್ರಸ್ಟಿಗೂ, ಯಾವ ಮೀಟಂಗಿನಲ್ಲಿ ಆ ಅಂದಾಜನ್ನು ಒಪ್ಪಿಸಬೇಕೋ ಅದಕ್ಕೆ ಕನಿಷ್ಟಪಕ್ಷದಲ್ಲಿ ಹತ್ತು ದಿನಗಳ ಮುಂಚೆ, ಟಪಾಲುಮೂಲಕವಾಗಲಿ, ಇತರ ವಿಧದಲ್ಲಿ ಆಗಲಿ, ಕಳುಹಿಸತಕ್ಕದ್ದು.

ಬೋರ್ಡು ಆ ಅಂದಾಜನ್ನು ಮಂಜೂರ್ಮಾಡತಕ್ಕದ್ದು ಅಥವಾ ತಿದ್ದುಪಡಿ ಮಾಡತಕ್ಕದ್ದು.

29. ಬೋರ್ಡು ಹಾಗೆ ತಮಗೆ ಒಪ್ಪಿಸಲ್ಪಟ್ಟ ಅಂದಾಜನ್ನು ಆಲೋಚನೆಗೆ ತೆಗೆದುಕೊಳ್ಳತಕ್ಕಪ್ಪಲ್ಲದೆ, ತಿದ್ದುಪಾಟು ಇಲ್ಲದೆಯಾಗಲಿ, ತಮಗೆ ಉಚಿತವಾಗಿ ತೋರಿಬಂದ ತಿದ್ದುಪಾಟಿನಿಂದಾಗಲಿ ಅದನ್ನು ಮಂಜೂರ್ಮಾಡತಕ್ಕದ್ದು.

ಮಂಜೂರಾತಿ ಬಗ್ಗೆ ಗವರ್ನಮೆಂಟಿನವರಿಗೆ ಅಂದಾಜುಗಳು ಒಪ್ಪಿಸಲ್ಪಡತಕ್ಕದ್ದು.

30. ಆ ಅಂದಾಜನ್ನು ಬೋರ್ಡು ಮಂಜೂರುಮಾಡಿರುವಂತೆ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು. ಗವರ್ನಮೆಂಟಿನವರು, ತಾವು ಯುಕ್ತವೆಂದೆಣಿಸುವ ಪಕ್ಷದಲ್ಲಿ, ಆ ಅಂದಾಜನ್ನಾಗಲಿ ಅದರ ಯಾವ ಭಾಗವನ್ನಾಗಲಿ, ಅಂಗೀಕರಿಸದೆ, ತಿದ್ದುಪಾಟಿಗಾಗಿ, ವಾಪಸು ಕಳುಹಿಸಬಹುದು. ಹಾಗೆ ಗವರ್ನಮೆಂಟಿನವರಿಂದ ಆ ಅಂದಾಜು ತಿರಿಗಿ ಕಳುಹಿಸಲ್ಪಡುವ ಸಂದರ್ಭದಲ್ಲಿ, ಬೋರ್ಡು, ಆ ಅಂದಾಜನ್ನು ತಿದ್ದುಪಡಿ ಮಾಡಲು ಕೂಡಲೆ ಉದ್ಯುಕ್ತರಾಗತಕ್ಕದ್ದು; ಮತ್ತು ಹಾಗೆ ತಿದ್ದುಪಡಿಯಾದ ಆ ಅಂದಾಜನ್ನು ಗವರ್ನಮೆಂಟಿನವರಿಗೆ ಪುನಹ ಒಪ್ಪಿಸತಕ್ಕದ್ದು. ಆ ಅಂದಾಜಿನ ಒಂದು ನಕಲನ್ನು ಮ್ಯೂನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸಿಕೊಡತಕ್ಕದ್ದು.

ಅಗತ್ಯವಿದ್ದಾಗ್ಗೆ ಉಪಭಾಗವಾಗಿರುವ ಅಂದಾಜುಗಳನ್ನು ತಯಾರ್ಮಾಡಿ ಒಪ್ಪಿಸಬಹುದು.

31. ಬೋರ್ಡು, ಯಾವ ವರುಷಕ್ಕೆ ಅಂಥಾ ಯಾವ ಅಂದಾಜು ಮಂಜೂರ್ಮಾಡಲ್ಪಟ್ಟು ಇದೆಯೊ ಆ ವರು[illegible]ಯಾವ ಕಾಲದಲ್ಲಿಯಾದರೂ, ಒಂದು ಉಪಭಾಗವಾಗಿರುವ ಅಂದಾಜನ್ನು ತಯಾರ್ಮಾಡಿಸಿ ತಮಗೆ ಒಪ್ಪಿಸಲ್ಪಡಿಸಬಹುದು. ಪ್ರತಿ ಒಂದಂಥಾ ಉಪಭಾಗವಾಗಿರುವ ಅಂದಾಜನ್ನು ಬೋರ್ಡು ಆಲೋಚನೆಗೆ ತೆಗೆದುಕೊಳ್ಳತಕ್ಕದ್ದಲ್ಲದೆ, ಮಂಜೂರ್ಮಾಡಿ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು; ಮತ್ತು, ಒಂದು ನಕಲನ್ನು, ಅದು ಮೂಲ ಸಾಲಿಯಾನಾ ಅಂದಾಜಾಗಿದ್ದರೆ ಯಾವರೀತಿಯಲ್ಲಿ ಕಳುಹಿಸಲ್ಪಡುತ್ತಿತ್ತೊ ಅದೇರೀತಿಯಲ್ಲಿ, ಮ್ಯೂನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸತಕ್ಕದ್ದು.

ಕರ್ಚಿನ ವಿಷಯವಾದ ನಿಯಮಗಳು.

32. ಗವರ್ನಮೆಂಟಿನವರಿಂದ ಕಡೆಗೆ ಮಂಜೂರ್ಮಾಡಲ್ಪಟ್ಟು ತತ್ಕಾಲದೊಳಗೆ ಜಾರಿಯಲ್ಲಿರುವ ಯಾವದೊಂದು ಅಂದಾಜಿನಲ್ಲಾಗಲಿ, ಅಥವಾ ಕೋರ್ಟಿನ ಡಿಕ್ರಿ ಯಾ ಫೈಸಲಂತೆ ಬೋರ್ಡಿನಿಂದ ಕೊಡಲ್ಪಡಬೇಕಾಗಿರುವ ಮೊಬಲಗಿನಲ್ಲಾಗಲಿ, ಅಡಗಿದ್ದರೇನೆ ಶಿವಾಯಿ, ಯಾವ ಹಣವು ಕೂಡಾ ಬೋರ್ಡಿನಿಂದ ಅಥವಾ ಬೋರ್ಡಿನಪರವಾಗಿ ಕರ್ಚು ಮಾಡಲ್ಪಡಕೂಡದು. ಆದರೆ ಕೇವಲ ಅವಸರವಾದ ಅನುಪತ್ಯದಲ್ಲಿ ಎರಡುಸಾವಿರದ ಐನೂರು ರೂಪಾಯಿಗಳಿಗೆ ಮೀರದಂತೆ, ಹಣವನ್ನು ಹಾಗೆ ಅದು ಅಡಗದೆ ಇದ್ದಾಗ್ಯೂ, ಕರ್ಚು ಮಾಡಬಹುದಲ್ಲದೆ, ಚೇರಮನನು, ಆ ವಿದ್ಯಮಾನಗಳನ್ನು ಮತ್ತು ಯಾವ ವಿಧದಲ್ಲಿ ಈ ವಿಶೇಷವಾದ ಕರ್ಚನ್ನು ತೇಲಿಸಲು ಬೋರ್ಡು ಯೋಚಿಸಿರುತ್ತಾರೊ ಅದರ ವಿವರವನ್ನು, ಕೂಡಲೆ ಗವರ್ನಮೆಂಟಿನವರಿಗೆ ತಿಳಿಸತಕ್ಕದ್ದು.

ಕಂಟ್ರೋಲರು ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡಿ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು.

33. ಸರ್ಕಾರಿ ಡಿಪಾರ್ಟಮೆಂಟುಗಳ ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡುವ ವಿಧಾನದಲ್ಲಿ, ಕಂಟ್ರೋಲರು ಬೋರ್ಡಿನ ಜಮಾಕರ್ಚಿನ ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡತಕ್ಕದ್ದು. ಸದರಿ ಲೆಕ್ಕಗಳು ಪ್ರತಿ ವರುಷದಲ್ಲಿ ಎರಡಾವರ್ತಿ ಗವರ್ನಮೆಂಟಿನವರಿಗೆ ಒಪ್ಪಿಸಲ್ಪಡಬೇಕು. ತನಿಖೆ ಮಾಡಲ್ಪಟ್ಟ ಪ್ರತಿ ವರುಷದ ಲೆಕ್ಕಗಳ ಗೋಷ್ವಾರೆಯು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸಲ್ಪಡಬೇಕು.

V ನೆ ಅಧ್ಯಾಯ.—ಬೋರ್ಡಿನ ಉದ್ಯೋಗಸ್ಥರು ಮತ್ತು ಸೇವಕರು.

ಗವರ್ನಮೆಂಟಿನವರ ಮಂಜೂರಾತಿ ಬಗ್ಗೆ ಉದ್ಯೋಗಸ್ಥರ ಮತ್ತು ಸೇವಕರ ಪಟ್ಟಿಯನ್ನು ಒಪ್ಪಿಸಬೇಕು.

34. ಬೋರ್ಡು, ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಯಾವ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಇಟ್ಟುಕೊಳ್ಳೋಣವು ಅಗತ್ಯವಾಗಿಯು ಯುಕ್ತವಾಗಿಯು ಇದೆಯೆಂದು ಎಣಿಸುತ್ತಾರೊ ಅವರುಗಳ ಒಂದು ಪಟ್ಟಿಯನ್ನು ಆಗಿಂದಾಗ್ಗೆ ತಯಾರ್ಮಾಡುವದಲ್ಲದೆ ಗವರ್ನಮೆಂಟಿನವರ ಮಂಜೂರಾತಿ ಬಗ್ಗೆ ಒಪ್ಪಿಸತಕ್ಕದ್ದು. ಪ್ರತಿ ಒಂದಂಥಾ ಉದ್ಯೋಗಸ್ಥನಿಗು ಸೇವಕನಿಗು ಯಾವ ಸಂಬಳಗಳು, ಫೀಜುಗಳು ಮತ್ತು ಅಲವರ್ನ್ಸುಗಳು ಕೊಡಲು ಬೋರ್ಡು ಅಭಿಪ್ರಾಯ ಪಡುತ್ತಾರೊ, ಅವುಗಳ ಮೊಬಲಗು ಮತ್ತು ಸ್ವಭಾವವನ್ನು ಸದರಿ ಪಟ್ಟಿಯಲ್ಲಿ ನಮೂದು ಮಾಡಿರಬೇಕು. ಗವರ್ನಮೆಂಟಿನವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆದ ಹೊರ್ತು, ಮಂಜೂರ್ಮಾಡಲ್ಪಟ್ಟ ಆ ಪಟ್ಟಿಯಲ್ಲಿ ಯಾವ ಬದಲಾವಣೆಯನ್ನು ಮಾಡಕೂಡದು.

ನೇಮಕಗಳು ಮುಂತಾದವುಗಳು ಯಾರಿಂದ ಮಾಡಲ್ಪಡಬೇಕಾದ್ದು.

35. (1) ಸರ್ಕಾರದ ನವಕರರಾಗಿ ಬೋರ್ಡಿನ ತಾಬೆಯಲ್ಲಿರುವವರು ಶಿವಾಯಿ, ನೂರು ರೂಪಾಯಿಗಳಿಗೆ ಹೆಚ್ಚಾದ ಇರುವ ತಿಂಗಳಗಟ್ಲೆಯ ಸಂಬಳವುಳ್ಳ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ನೇಮಕ, ಬಡ್ತಿ, ಸಸ್ಪೆಂಡು, ಬರತರಫು, ಜುಲ್ಮಾನೆ, ಕಂಪಲ್ರಾ ಮಾಡುವ ಅಥವಾ ಅವರುಗಳಿಗೆ ರಜಾ ಕೊಡುವ ಅಧಿಕಾರವು ಚೇರ್‌ಮನ್ನಿಂದಲು, ಮತ್ತು ಪ್ರತಿ ಒಂದಿತರ ಸಂದರ್ಭದಲ್ಲಿ ಅಂಥಾ ಅಧಿಕಾರವು ಬೋರ್ಡಿನಿಂದಲು, 39 (1) ನೆ ಪ್ರಕರಣದ (c) ಕಲಮಿನಂತೆ ಮಾಡಲ್ಪಟ್ಟ ಒಳ ನಿಬಂಧನೆಗಳ ನಿಯಮಗಳಿಗೂ ಮತ್ತು 34ನೆ ಪ್ರಕರಣದಂತೆ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟ ತತ್ಕಾಲದಲ್ಲಿ ಜಾರಿಯಲ್ಲಿರುವ ಪಟ್ಟಿಯ ನಿಯಮಗಳಿಗೂ ಒಳಪಟ್ಟು, ನಡಿಸಲ್ಪಡತಕ್ಕದ್ದು.

(2) ಸರ್ಕಾರದ ನವಕರನಾಗಿ ಬೋರ್ಡಿನ ತಾಬೆಯಲ್ಲಿರುವವನು ಶಿವಾಯಿ, ಬೋರ್ಡಿನ ಯಾವ ಉದ್ಯೋಗಸ್ಥನನ್ನಾಗಲಿ ಸೇವಕನನ್ನಾಗಲಿ, ಅಂಥಾ ಉದ್ಯೋಗಸ್ಥನ ಅಥವಾ ಸೇವಕನ ಸ್ವಂತ ದುರ್ನಡತೆಯ ದೆಸೆಯಿಂದಲ್ಲದ ಇತರ ಕಾರಣಕ್ಕಾಗಿ, ಕೆಲಸದಿಂದ ತೆಗದುಹಾಕುವದಕ್ಕೂ, ಅಥವಾ ಅಂಥಾ ಯಾವ ಉದ್ಯೋಗಸ್ಥನನ್ನಾಗಲಿ ಸೇವಕನನ್ನಾಗಲಿ, ಪೆನ್ಷನ್, ಗ್ರಾಂಟು, ಅಥವಾ ಅಲವರ್ನಸು ಕೊಟ್ಟು ಉದ್ಯೋಗದಿಂದ ನಿವೃತ್ತನಾಗಿಸುವದಕ್ಕೂ, ಅಧಿಕಾರವು, ಮೇಲ್ಕಂಡ ನಿಯಮಗಳಿಗೊಳಪಟ್ಟು, ಬೋರ್ಡಿಗೇನೆ ಇರತಕ್ಕದ್ದು.

ಬೋರ್ಡಿನ ತಾಬೆಯಲ್ಲಿರುವ ಸರ್ಕಾರದ ನವಕರ ವಿಷಯ.

36. ಗವರ್ನಮೆಂಟಿನವರಿಂದ ಆಗಿಂದಾಗ್ಗೆ ಮಾಡಲ್ಪಡಬಹುದಾದ ನೇಮಗಳ ಅಥವಾ ವಿಧಿಗಳಂತಿರುವ ಸಂದರ್ಭ ಹೊರ್ತು, ಬೋರ್ಡಿನ ತಾಬೆಯಲ್ಲಿರುವ ಸರ್ಕಾರದ ನವಕರುಗಳು, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳಲ್ಲಿ ಈ ಪರವಾಗಿ ಇರುವ ನಿಯಮಗಳಿಗೆ ಒಳಪಟ್ಟು ಇರತಕ್ಕದ್ದು.

VIನೆ ಅಧ್ಯಾಯ—ಬೋರ್ಡಿನ ಅಗಲಿಕೆ.

ಬೋರ್ಡಿನ ನೇಮಕದ ಉದ್ದೇಶ ಪೂರ್ತಿಯಾದಾಗ ಗವರ್ನಮೆಂಟಿನವರು ಅವರನ್ನ ಅಗಲಿಸಬಹುದು.

37. (1) ಗವರ್ನಮೆಂಟಿನವರ ಅಭಿಪ್ರಾಯದಲ್ಲಿ ಬೋರ್ಡಿನಿಂದ ನೆರವೇರಿಸಲ್ಪಡುವದಕ್ಕೋಸ್ಕರ ಗವರ್ನಮೆಂಟಿನವರು ಆಗಿಂದಾಗ್ಗೆ ಮಂಜೂರ್ಮಾಡಿದ ಉತ್ತಮಪಡಿಸುವ ಉಪಾಯಗಳೆಲ್ಲವು ವಾಸ್ತವಿಕವಾದ ಪೂರ್ಣತ್ವವನ್ನು ಹೊಂದಿರುತ್ತವೆಂದು, ಮತ್ತು ಪಟ್ಟಣವನ್ನು ಉತ್ತಮಪಡಿಸುವದಕ್ಕಾಗಿ ಇತಃಪರ ಸದ್ಯದಲ್ಲಿ ಅವಶ್ಯಕವಿರುವ ಇತರ ಕಾರ್ಯಭಾಗಗಳು, ಜಾರಿಯಲ್ಲಿರುವ ಮ್ಯುನಿಸಿಪಲ್ ಕಾನೂನಿನ ಸಾಮಾನ್ಯ ನಿಯಮಗಳ ಪ್ರಕಾರ ಸುಲಭವಾಗಿ ನಡಿಸಲ್ಪಡಬಹುದೆಂದು ಕಂಡುಬಂದರೆ, ಗವರ್ನಮೆಂಟಿನವರು, ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡಬೇಕಾದ ಒಂದು ನೇಮಕದ ದ್ವಾರಾ, ಆ ನೇಮಕದಲ್ಲಿ ಗೊತ್ತುಮಾಡಲ್ಪಡಬೇಕಾದ ಒಂದು ತಾರೀಕಿನಿಂದ ಬೋರ್ಡಿನ ಸಂಘವು ಅಗಲಿಸಲ್ಪಡತಕ್ಕದ್ದೆಂದು ಪ್ರಕಟನೆ ಮಾಡಬಹುದು.

ಅಗಲಿಸತಕ್ಕ ನೇಮಕದಲ್ಲಿ ವಿವರಿಸಲ್ಪಡಬೇಕಾದ ವಿಷಯಗಳು.

(2) ಆ ನೇಮಕದಲ್ಲಿ, ಬೋರ್ಡಿನ ಸ್ವತ್ತುಗಳು ಮತ್ತು ಸಾಲಗಳು ಯಾರಿಗೆ ಒಪ್ಪಿಸಲ್ಪಡಬೇಕೆಂಬುವದಕ್ಕೂ, ಬೋರ್ಡಿನ ವಶ ಮಾಡಲ್ಪಟ್ಟ ಸ್ವತನ್ನು ನಿರ್ವಹಿಸುವದಕ್ಕೂ ಅಥವಾ ಕೊಟ್ಟುಬಿಡುವದಕ್ಕೂ, ಅಪೂರ್ಣವಾದ ಕಾರ್ಯಗಳನ್ನು ಪೂರಯಿಸುವದಕ್ಕೂ, ಮತ್ತು ಬೋರ್ಡಿನ ಅಗಲುವಿಕೆಗೆ ಮತ್ತು ಅವರ ಸಂಗತಿಗಳು ಬಗೆಹರಿಸುವದಕ್ಕೆ ಸಮ್ಮಂಧಪಡುವ ಎಲ್ಲಾ ಇತರ ವಿಷಯಗಳಿಗೂ, ಅವಕಾಶಕೊಡುವ ತಕ್ಕ ಏರ್ಪಾಟನ್ನು ಮಾಡಿರಬೇಕು.

ಸ್ಥಿರಸ್ವತ್ತು ವಶಪಡಿಸುವದು.

ಆದರೆ ಬೋರ್ಡಿನ ಅಗಲುವಿಕೆಯ ತಾರೀಕಿನಲ್ಲಿ ಅವರ ವಶಕ್ಕೆ ಕೊಡಲ್ಪಟ್ಟು, ಮತ್ತು ಸದರಿ ನೇಮಕದಲ್ಲಿ ಗವರ್ನಮೆಂಟಿನವರಿಗೆ ಸ್ಪಷ್ಟವಾಗಿ ಇಡಲ್ಪಡದೆ ಇರುವ, ಎಲ್ಲಾ ಸ್ಥಿರ ಸ್ವತ್ತುಗಳು ಆ ಬಳಿಕ ಮ್ಯುನಿಸಿಪಲ್ ಕಮ್ಮಿಷನರುಗಳ ವಶಕ್ಕೆ ಕೊಡಲ್ಪಡತಕ್ಕದ್ದು.

VIIನೆ ಅಧ್ಯಾಯ.—ನೇಮಗಳು ಮತ್ತು ಒಳ ನಿಬಂಧನೆಗಳು.

ದಂಡನೆಗಳು ಮುಂತಾದವುಗಳು.

ನೇಮಗಳನ್ನು ಮಾಡಲು ಗವರ್ನಮೆಂಟಿನವರಿಗೆ ಅಧಿಕಾರ.

38. ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆ ಗವರ್ನಮೆಂಟಿನವರು ಈ ಕೆಳಗೆ ಬರುವ ವಿಷಯಗಳನ್ನು ಕುರಿತು ಆಗಿಂದಾಗ್ಗೆ ನೇಮಗಳನ್ನು ಮಾಡಬಹುದು :—

(*a*) ಈ ರೆಗ್ಯುಲೇಷನಿನ ಚಲಾವಣೆಯ ಸಮ್ಮಂಧವಾದ ವಿಷಯಗಳಲ್ಲಾಗಲಿ ಇದರಲ್ಲಿ ಕಂಠೋಕ್ತವಾಗಿ ಏರ್ಪಡಿಸದೆ ಇರುವ ಸಂದರ್ಭಗಳಲ್ಲಾಗಲಿ, ಬೋರ್ಡು, ಮ್ಯುನಿಸಿಪಲ್ ಕಮ್ಮಿಷನರುಗಳು, ಸರ್ಕಾರಿ ಉದ್ಯೋಗಸ್ಥರು ಮತ್ತು ಎಲ್ಲಾ ಇತರ ಜನಗಳು-ಇವರುಗಳ ಉಪದೇಶಕ್ಕೋಸ್ಕರ, ಮತ್ತು

(*b*) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರ.

ಒಳ ನಿಬಂಧನೆಗಳನ್ನು ಮಾಡಲು ಬೋರ್ಡಿಗೆ ಅಧಿಕಾರ.

39. (1) ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆಯು ಅಥವಾ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನೇಮಗಳಿಗೆ ವಿರೋಧವಿಲ್ಲದಂತೆಯು, ಬೋರ್ಡು ಆಗಿಂದಾಗ್ಗೆ ಒಳ ನಿಬಂಧನೆಗಳನ್ನು ಈ ಕೆಳಗೆ ಬರುವ ಸಂಗತಿಗಳ ಪರವಾಗಿ ಮಾಡಬಹುದು :—

(*a*) ಬೋರ್ಡಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಕಮ್ಮಿಟಿಗಳಿಗೆ ಒಪ್ಪಿಸಿಕೊಡೋಣವನ್ನು ಕ್ರಮಪಡಿಸುವದಕ್ಕೋಸ್ಕರ ;

(*b*) ಈ ರೆಗ್ಯುಲೇಷನಿನ ಪ್ರಕಾರ ಅವರಿಂದ ಕೆಲಸಕ್ಕೆ ಇಟ್ಟುಕೊಳ್ಳಲ್ಪಟ್ಟ ಜನಗಳ ಉಪದೇಶಕ್ಕೋಸ್ಕರ ;

(*c*) ಸರ್ಕಾರದ ನವಕರರಾಗಿ ಬೋರ್ಡಿನ ತಾಬೆಯಲ್ಲಿರುವವರು ಹೊರ್ತು ಬೋರ್ಡಿನ ಉದ್ಯೋಗಸ್ಥರ ಮತ್ತು ಸೇವಕರುಗಳ ವಿಷಯವಾಗಿ, ರಜಾ, ರಜಾ ಅಲವರ್ನಸುಗಳು, ಪೆನ್ಷನುಗಳು ಮತ್ತು ಗ್ರ್ಯಾಂಟುಗಳು-ಇವುಗಳನ್ನು ಕೊಡೋಣವನ್ನು ಮತ್ತು ಇತರ ವಿಷಯಗಳನ್ನು ಕ್ರಮಪಡಿಸುವದಕ್ಕೋಸ್ಕರ ;

(*d*) ಯಾವ ಉಪಾಯದಂತಾಗಲಿ, ಕೇವಲ ಬಡವರಾಗಿರುವ ಅಥವಾ ಕೂಲಿ ಮಾಡುವ ಜನಗಳಿಗೋಸ್ಕರ ಕಟ್ಟಲ್ಪಟ್ಟ ಮನೆಗಳನ್ನು ನಿರ್ವಹಿಸುವದು, ಉಪಯೋಗಿಸುವದು ಮತ್ತು ಕ್ರಮಪಡಿಸುವದು ಇವುಗಳಿಗೋಸ್ಕರ ;

(*e*) ಈ ಕೆಳಗೆ ಬರುವ ವಿಷಯಗಳನ್ನು ಕುರಿತು, ಕಟ್ಟಡಗಳನ್ನು ಕಟ್ಟಿಸೋಣವನ್ನ ಮತ್ತು ಪುನಹ ಕಟ್ಟಿಸೋಣವನ್ನ ಕ್ರಮ ಪಡಿಸುವದಕ್ಕೋಸ್ಕರ : ಏನಂದರೆ, ಕಟ್ಟುವದಕ್ಕೆ ಮುಂಚೆ ಕೊಡಬೇಕಾದ ನೋಟೀಸು, ಒಪ್ಪಿಸಲ್ಪಡಬೇಕಾದ ಪ್ಲಾನುಗಳು, ಹತ್ತಿರದಲ್ಲಿರುವ ಕಟ್ಟಡಗಳ ಪಂಕ್ತಿಯಲ್ಲಿರಬೇಕಾದ ಮುಂಭಾಗ, ಕಟ್ಟಡದ ಸುತ್ತಲು ಬಿಡಬೇ[illegible]ಖಾಲಿ ಪ್ರದೇಶ, ಅಸ್ತಿವಾರದ ಅಗಲ ಮತ್ತು ಮಟ್ಟ, ಕಟ್ಟಡದ ಗಟ್ಟಿತನ, ಉಪಯೋಗಿಸಬೇಕಾದ ಪದಾರ್ಥಗಳು, ಮತ್ತು ಗಾಳಿ ಬೀಸುವದಕ್ಕೂ ಮತ್ತು ನೀರು ಹರಿಯುವದಕ್ಕೂ ಮಾಡಬೇಕಾದ ಅವಕಾಶ; ಮತ್ತು

(*f*) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರ.

(2) ಗವರ್ನಮೆಂಟಿನವರಿಂದ ಒಪ್ಪಲ್ಪಡುವ ತನಕ ಯಾವ ಒಳ ನಿಬಂಧನೆಯು ಜಾರಿಗೆ ಬರಕೂಡದು, ಮತ್ತು ಅವಿಚ್ಛಿನ್ನವಾಗಿ ಮೂರು ವಾರಗಳ ಪರ್ಯಂತರ ಸರ್ಕಾರಿ ಗೆಜೆಟ್ಟಿನಲ್ಲಿ ಆ ಒಳ ನಿಬಂಧನೆಯು ಪ್ರಕಟಿಸಲ್ಪಟ್ಟರೇನೆ ಹೊರ್ತು ಅದು ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಡಕೂಡದು.

(3) ಈ ಪ್ರಕರಣದಂತೆ ಮಾಡಿ ಪ್ರಕಟಿಸಲ್ಪಟ್ಟ ಯಾವ ಒಳ ನಿಬಂಧನೆಯನ್ನಾಗಲಿ ಯಾವ ಕಾಲದಲ್ಲಿಯಾದರೂ ರದ್ದು ಮಾಡಲು ಗವರ್ನಮೆಂಟಿನವರಿಗೆ ನ್ಯಾಯವಾಗಿರತಕ್ಕದ್ದು.

ನೇಮಗಳ ಮತ್ತು ಒಳ ನಿಬಂಧನೆಗಳ ಲೋಪಕ್ಕೆ ದಂಡನೆಗಳು.

40. 38 ಮತ್ತು 39ನೆ ಪ್ರಕರಣಗಳಂತೆ ಬೇರೆ ಬೇರೆಯಾಗಿ ಮಾಡಲ್ಪಟ್ಟ ನೇಮಗಳಲ್ಲಿಯೂ ಮತ್ತು ಒಳ ನಿಬಂಧನೆಗಳಲ್ಲಿಯೂ, ಅವುಗಳ ಲೋಪಕ್ಕಾಗಿ ತಮಗೆ ಯುಕ್ತವೆಂದು ತೋರಿಬರುವ ದಂಡನೆಗಳನ್ನು, ಗವರ್ನಮೆಂಟಿನವರು, ಮತ್ತು ಗವರ್ನಮೆಂಟಿನವರ ಅನುಮತಿಯಿಂದ ಬೋರ್ಡು, ವಿಧಿಸಬಹುದು ; ಆದರೆ ಒಂದು ನೇಮ ಅಥವಾ ಒಳ ನಿಬಂಧನೆಯ ಯಾವದೊಂದು ಲೋಪಕ್ಕಾದರು ನೂರು ರೂಪಾಯಿಗಳಿಗೆ ಮೇಲ್ಪಟ್ಟ ದಂಡನೆಯಾಗಕೂಡದು, ಮತ್ತು ನಿಲ್ಲದೆ ನಡಿಯುವ ಲೋಪದ ವಿಷಯದಲ್ಲಿ, ಬೋರ್ಡಿನಿಂದ ತಪ್ಪಿತಸ್ಥನಿಗೆ ಆ ಲೋಪವನ್ನು ಕುರಿತು ನೋಟೀಸು ಕೊಡಲ್ಪಟ್ಟ ತರುವಾಯ, ಪ್ರತಿ ಒಂದು ದಿವಸಕ್ಕೋಸ್ಕರ ಕೊಡುವ ದಂಡನೆಯು ಐವತ್ತು ರೂಪಾಯಿಗಳಿಗೆ ಹೆಚ್ಚದಂತೆ ಇರತಕ್ಕದ್ದು.

ನೇಮಗಳು ಮತ್ತು ಒಳ ನಿಬಂಧನೆಗಳು ತೋರಿಸಲ್ಪಡಬೇಕು.

41. ಸದರಿ ನೇಮಗಳು ಮತ್ತು ಒಳ ನಿಬಂಧನೆಗಳು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಮುದ್ರಿಸಲ್ಪಟ್ಟು ಅನುಕೂಲವಾದ ಸ್ಥಳಗಳಲ್ಲಿ ತಗಲಹಾಕಲ್ಪಟ್ಟಿರಬೇಕು.

ಬೋರ್ಡಿನೊಂದಿಗೆ ಇರುವ ಗುತ್ತಿಗೆಗಳಲ್ಲಿ ಬಾಧ್ಯತೆಯನ್ನುಂಟಾಗಿರುವದಕ್ಕೆ ದಂಡನೆ.

42. ಬೋರ್ಡೊಂದಿಗಾಗಲಿ, ಬೋರ್ಡಿನಿಂದಾಗಲಿ, ಬೋರ್ಡಿನ ಪರವಾಗಿಯಾಗಲಿ ಯಾವ ಗುತ್ತಿಗೆ ಅಥವಾ ಉದ್ಯೋಗದಲ್ಲಾದರೂ ಯಾವ ಭಾಗವನ್ನೊ ಅಥವಾ ಬಾಧ್ಯತೆಯನ್ನೊ, ಯಾವ ಮನುಷ್ಯನಾದರು ಬಂದು ಟ್ರಸ್ಟಿಯಾಗಿದ್ದು ಅಥವಾ ಬೋರ್ಡಿನ ಬಂದು ಉದ್ಯೋಗಸ್ಥ ಅಥವಾ ಸೇವಕನಾಗಿದ್ದು, ಪ್ರತ್ಯಕ್ಷವಾಗಿ ಅಥವಾ ಪರಭಾರೆಯಾಗಿ ಸಂಪಾದಿಸಿದ್ದಲ್ಲಿ, ಇಂಡಿಯನ್ ಪೀನಲ್ ಕೋಡಿನ 168ನೆ ಪ್ರಕರಣದಲ್ಲಿ ದಂಡನೆಗೆ ಗುರಿಮಾಡಲ್ಪಟ್ಟ ಅಪರಾಧವನ್ನು ಮಾಡಿರುತ್ತಾನೆಂಬದಾಗಿ ಎಣಿಸಲ್ಪಡತಕ್ಕದ್ದು;

ನಿಯಮ.

ಆದರೆ 8 (1) (d) ಪ್ರಕರಣದ (i), (ii) ಮತ್ತು (iii) ಮರಿ ಕಲಂಗಳಲ್ಲಿ ಹೇಳಲ್ಪಟ್ಟ ಯಾವದೊಂದು ವಿಷಯದಲ್ಲಾದರು ಒಬ್ಬ ಮನುಷ್ಯನು ಬಂದು ಭಾಗವನ್ನಾಗಲಿ ಅಥವಾ ಬಾಧ್ಯತೆಯನ್ನಾಗಲಿ ಉಂಟಾಗಿರೋಣವರ ಮಾತ್ರದಿಂದಲೇನೆ ಅಂಥಾ ಗುತ್ತಿಗೆಯು ಅಥವಾ ಉದ್ಯೋಗದಲ್ಲಿ ಭಾಗವನ್ನೊ ಅಥವಾ ಬಾಧ್ಯತೆಯನ್ನೊ ಉಂಟಾಗಿರುತ್ತಾನೆಂದು ಅವನು ಎಣಿಸಲ್ಪಡಕೂಡದು.

ಅನ್ಯಾಯವಾದ ಇನಾಂ ಅಥವಾ ಲಂಚವನ್ನು ತೆಗದುಕೊಳ್ಳುವದಕ್ಕೆ ದಂಡನೆ.

43. ಯಾವ ಮನುಷ್ಯನೆ ಆಗಲಿ ಈ ರೆಗ್ಯುಲೇಷನಿನಂತೆ ಉದ್ಯೋಗದಲ್ಲಿಡಲ್ಪಟ್ಟು, ಇಂಡಿಯನ್ ಪೀನಲ್ ಕೋಡಿನ 21ನೆ ಪ್ರಕರಣದ ಅರ್ಥದಲ್ಲಿ ಸರ್ಕಾರದ ಸೇವಕನಾಗಿಲ್ಲದೆ—ಯಾವ ಸರ್ಕಾರಿ ಕೆಲಸವನ್ನು ಮಾಡುವದಕ್ಕಾಗಿ ಯಾ ಮಾಡದೆ ಇರುವದಕ್ಕಾಗಿ, ಅಥವಾ ತನ್ನ ಸರ್ಕಾರಿ ಕೆಲಸಗಳನ್ನು ನಡಿಸುವದರಲ್ಲಿ ಯಾವ ಮನುಷ್ಯನಿಗಾದರೂ ಉಪಕಾರವನ್ನಾಗಲಿ ಯಾ ನಿಗ್ರಹವನ್ನಾಗಲಿ ಮಾಡುವದಕ್ಕಾಗಿ, ಅಥವಾ ಬೋರ್ಡೊಂದಿಗೊ ಯಾ ಸರ್ಕಾರದ ಸೇವಕನಂತೆ ಒಬ್ಬ ಸರ್ಕಾರದ ಸೇವಕನೊಂದಿಗೊ ಯಾ ಗವರ್ನಮೆಂಟಿನವರೊಂದಿಗೊ ಯಾವ ಮನುಷ್ಯನಿಗಾದರೂ ಯಾವ ಉಪಕಾರವನ್ನಾಗಲಿ ಯಾ ವಿರೋಧವನ್ನಾಗಲಿ ಮಾಡುವದಕ್ಕಾಗಿ ಯಾ ಮಾಡಲು ಯತ್ನಿಸುವದಕ್ಕಾಗಿ, ತನಗೇನೊ ಯಾ ಇತರ ಮನುಷ್ಯನಿಗೇನೊ, ನ್ಯಾಯವಾದ ಇಷ್ಟಾಪೂರ್ತಿ ವಿನಹ, ಯಾವ ಪ್ರತಿ ಫಲವನ್ನಾಗಲಿ ಬಂದು ಬಹುಮಾನದಹಾಗೆ, ಯಾವ ಇತರ ಮನುಷ್ಯನಿಂದಲಾದರೂ, ಅಂಗೀಕರಿಸುತ್ತಾನೊ ಯಾ ಸಂಪಾದಿಸುತ್ತಾನೊ, ಅಥವಾ ಅಂಗೀಕರಿಸಲು ಒಪ್ಪುತ್ತಾನೊ ಯಾ ಸಂಪಾದಿಸಲು ಯತ್ನಿಸುತ್ತಾನೊ— ಅವನು, ಬಂದು ಸರ್ಕಾರದ ಸೇವಕನು ಅಂಥಾ ಅಪರಾಧವನ್ನೇ ಮಾಡಿರುವದಕ್ಕೆ ಇಂಡಿಯನ್ ಪೀನಲ್ ಕೋಡಿನಲ್ಲಿ ಯಾವ ದಂಡನೆಗೆ ಗುರಿಮಾಡಲ್ಪಡುತ್ತಾನೊ ಅದೆ ದಂಡನೆಗೆ ಗುರಿಯಾಗಿರತಕ್ಕದ್ದು.

ಅಪರಾಧಗಳನ್ನು ಹಿಡಿಯೋಣ.

44. (1) ಈ ರೆಗ್ಯುಲೇಷನಿಗೆ ವಿರೋಧವಾಗಿಯಾಗಲಿ ಅಥವಾ ಅದರಂತೆ ಮಾಡಲ್ಪಟ್ಟ ಯಾವ ನೇಮಕ್ಕೆ ಅಥವಾ ಒಳನಿಬಂಧನೆಗೆ ವಿರೋಧವಾಗಿಯಾಗಲಿ ಇರುವ ಎಲ್ಲಾ ಅಪರಾಧಗಳು ಸಕಿಂಡ್ ಕ್ಲಾಸ್ ಮ್ಯಾಜಿಸ್ಟ್ರೇಟಿನ ಅಧಿಕಾರಗಳಿಗೆ ಕಮ್ಮಿ ಇಲ್ಲದ ಅಧಿಕಾರಗಳುಳ್ಳ ಯಾವ ಮ್ಯಾಜಿಸ್ಟ್ರೇಟನಿಂದಾಗಲಿ ಹಿಡಿಯಲ್ಪಡತಕ್ಕದ್ದು.

ಜುಲುಮಾನೆ ವಸೂಲಿಗಳು ಇಂಪ್ರೂವ್ಮೆಂಟ್ ಫಂಡಿನ ಜಮೆಗೆ ಬರತಕ್ಕದ್ದು.

(2) ಅಪರಾಧಿಯಿಂದ ವಸೂಲ್ಮಾಡಲ್ಪಟ್ಟ ಎಲ್ಲಾ ಜುಲುಮಾನೆ ಹಣಗಳು ಸಿಟಿ ಆಫ್ ಮೈಸೂರು ಇಂಪ್ರೂವ್ಮೆಂಟ್ ಫಂಡಿನ ಜಮೆಗೆ ಬರತಕ್ಕದ್ದು.

ಇಂಪ್ರೂವ್ಮೆಂಟ್ ಫಂಡಿಗೆ ಸಲ್ಲತಕ್ಕ ಹಣಗಳ ವಸೂಲಿ.

45. ಬೋರ್ಡಿಗೆ ಕೊಡಲ್ಪಟ್ಟ ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸ್ವತ್ತಿನ ಬಾಡಿಗೆಗಳು, ಆದಾಯಗಳು, ಅಥವಾ ಕ್ರಯ ಹುಟ್ಟುವಳಿಗಳು, ಇವುಗಳಿಗೋಸ್ಕರವಾಗಿಯಾಗಲಿ, ಅಥವಾ ಇತರ ಯಾವ ವಿಧವಾಗಿಯಾಗಲಿ, ಯಾವ ಮನುಷ್ಯನಿಂದಲಾದರೂ ಸಲ್ಲತಕ್ಕದ್ದಾಗಿದ್ದು, ಮತ್ತು ಚೇರ್ಮೆನ್ನಿನ ತಗಾದೆ ನೋಟಿಸು ಅಂಥಾ ಮನುಷ್ಯನ ಮೇಲೆ ಜಾರಿಯಾದ ತಾರೀಖಿನಿಂದ 15 ದಿವಸಗಳಾದ ಬಳಿಕ ಬಾಕಿಯಲ್ಲಿರುವ ಎಲ್ಲಾ ಹಣಗಳನ್ನು ಈ ಕೆಳಗೆ ಬರುವ ಮಾರ್ಗಗಳ ಪೈಕಿ ಯಾವದೊಂದು ಮಾರ್ಗದಿಂದಾಗಲಿ ಅಥವಾ ಅಧಿಕ ಮಾರ್ಗಗಳಿಂದಾಗಲಿ ವಸೂಲು ಮಾಡಲ್ಪಡಬಹುದು, ಏನಂದರೆ — (1) ಯಾವ ಡಿಸ್ಟ್ರಿಕ್ಟಿನಲ್ಲಿ ವ್ಯವಹಾರ ನಡಿಸಬೇಕಾಗಿದೆಯೊ ಅಲ್ಲಿನ ಡೆಪ್ಯುಟಿ ಕಮಿಷನರಿಗೆ ಚೇರಮೆನ್ನು ಬರಹಮೂಲಕ ಎಪ್ಲಿಕೇಷನು ಮಾಡಿದ ನಂತರ, ನೆಲಕಂದಾಯದ ನಿಲುವಿನೋಪಾದಿಯಲ್ಲಿ; (2) ಚೇರಮೆನ್ನಿನಿಂದಾಗಲೀ ಚೇರ್ಮೆನ್ನಿನ ಹುಕುಮಿನಂತಾಗಲೀ ಅಂಥಾ ಮನುಷ್ಯನ ಚರಸ್ವತ್ತಿನ ಜಫ್ತಿ, ಮಾರಾಟ, ಇವುಗಳಿಂದ; (3) ಅಂಥಾ ಮನುಷ್ಯನ ಮೇಲೆ ಚೇರಮೆನ್ನು ಸಿವಿಲ್ ದಾವೆ ಮಾಡುವದರಿಂದ.

ದಾವೆಸ್ಗಳಿಗೆ ಲಿಮಿಟೇಷನ್.

46. (1) ಈ ರೆಗ್ಯುಲೇಷನ್ಪ್ರಕಾರ, ಅಥವಾ ಅದರಂತೆ ಆದ ಬಂದು ನಿಯಮ ಯಾ ಒಳನಿಬಂಧನೆಯ ಪ್ರಕಾರ, ಮಾಡಲ್ಪಟ್ಟ ಅಥವಾ ಮಾಡಲ್ಪಟ್ಟದ್ದಾಗಿ ಭಾವವಾಗುವ ಯಾವದಕ್ಕೋಸ್ಕರವಾಗಿಯಾದರೂ ಯಾರಮೇಲೆ ವ್ಯವಹಾರವೊ ಅಂಥಾ ಮನುಷ್ಯನಿಗೆ, ಉದ್ದೇಶಿಸಲ್ಪಟ್ಟ ವ್ಯಾಜ್ಯವನ್ನು ಮತ್ತು ವ್ಯಾಜ್ಯಕಾರಣವನ್ನು ಕುರಿತು ಬರಹಮೂಲಕವಾದ ನೋಟಿಸ್ ಜಾವತಿ ಮಾಡಿದ ತರುವಾಯ ಬಂದು ತಿಂಗಳು ಕಳೆದ ಹೊರ್ತು, ಅಥವಾ ಅಂಥಾ ವ್ಯಾಜ್ಯಕಾರಣ ಹುಟ್ಟಿದ ಆರು ತಿಂಗಳ ಬಳಿಕ, ಅಥವಾ ಸಾಕಾದ ನಷ್ಟ ಪರಿಹಾರದ್ರವ್ಯ ಕೊಡಲ್ಪಟ್ಟ ಬಳಿಕ, ಅಂಥಾ ಮನುಷ್ಯನ ಮೇಲೆ ಯಾವ ವ್ಯವಹಾರವು ತರಲ್ಪಡಲಾಗದು.

(2) ಬೋರ್ಡಿನಮೇಲಾಗಲಿ, ಯಾವ ಟ್ರಸ್ಟಿಯಮೇಲಾಗಲಿ ಅಥವಾ ಬೋರ್ಡಿನ ಉದ್ಯೋಗಸ್ಥ ಯಾ ಸೇವಕನಮೇಲಾಗಲಿ, ಈ ರೆಗ್ಯುಲೇಷನ್ ಪ್ರಕಾರವಾಗಿಯಾದರೂ ಅಥವಾ ಅದರಂತೆಯಾದ ಯಾವ ನೇಮದ ಯಾ ಬಳ ನಿಬಂಧನೆಯ ಪ್ರಕಾರವಾಗಿಯಾದರೂ ಅವನಿಂದಲೊ ಯಾ ಅವರಿಂದಲೊ, ಶ್ರದ್ಧೆಯಿಂದಲೂ ಮತ್ತು ಲಕ್ಷ್ಯದಿಂದಲೂ ಮಾಡಲ್ಪಟ್ಟ ಯಾವ ಕಾರ್ಯಕ್ಕೋಸ್ಕರವೂ ಕೂಡ ನಷ್ಟಕ್ಕೆ ವ್ಯವಹಾರವು ತರಲ್ಪಡಲಾಗದು.

ನಷ್ಟಪರಿಹಾರದ್ರವ್ಯಗಳಿಗಾಗಿ ದಾವೆ ಮಾಡಲು ಅಡ್ಡಿ ಇರುವ ಸಂದರ್ಭಗಳು.

ಪಿ. ಎನ್. ಕೃಷ್ಣಮೂರ್ತಿ,

ಮೈಸೂರು ಸೀಮೆಯ ದಿವಾನ್.

ಈ ರೆಗ್ಯುಲೇಷನಿನ ಉದ್ದೇಶಗಳು ಮತ್ತು ಕಾರಣಗಳು—ಇವುಗಳ ವಿವರ.

G. O. No. 4168–79—L. F. 36–02, dated 18th September 1902.

1902ನೆ ವರುಷದ ಸೆಪ್ಟಂಬರ್ ತಿಂಗಳಲ್ಲಿ ಗವರ್ನಮೆಂಟನವರು ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕೋಸ್ಕರ ಒಂದು ಉಪಾಯವನ್ನು ಮಾಡುವದಕ್ಕಾಗಿ ಒಂದು ಕಮಿಟಿಯನ್ನು ಏರ್ಪಡಿಸಿ, ಅದರ ಕಾರಣಗಳನ್ನು ತಮ್ಮ ನೇಮಕದಲ್ಲಿ ಈರೀತಿಯಾಗಿ ವ್ಯಕ್ತಪಡಿಸಿದರು :—

"ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಬಹಳ ಹಣಗಳು ಖರ್ಚುಮಾಡಲ್ಪಟ್ಟಾಗ್ಯೂ ಅದು, ಪರಂಪರೆಯಾಗಿ ಬರುವ ಪ್ರತಿ ಒಂದು ವರುಷದಲ್ಲಿಯೂ ಪ್ಲೇಗ್ ಉಪಾಧಿಗೆ ಇನ್ನೂ ಗುರಿಯಾಗಿರುವದು, ದುರ್ದಶೆಯಾಗಿದೆ. ಆ ಸ್ಥಳದ ಆರೋಗ್ಯವನ್ನು ಸ್ಥಿರಪಡಿಸುವದಕ್ಕೆ, ಆರೋಗ್ಯ ರಕ್ಷಣಕರವಾದ ತಿದ್ದುಪಾಟುಗಳನ್ನು ಶ್ರದ್ಧೆಯಿಂದ ಆಲೋಚಿಸಿ, ಅವಿಚ್ಛಿನ್ನವಾದ ಪ್ರಯತ್ನಗಳಪೂರ್ವಕ ಅವಲಂಬಿಸುವದು ವಿನಹ ಬೇರೆ ಯಾವ ಉಪಾಯವೂ ಇಲ್ಲವೆಂದು, ಗವರ್ನಮೆಂಟನವರು ಅಭಿಪ್ರಾಯ ಪಡುತ್ತಾರೆ. ಕೇವಲ ವತ್ತಾಗಿ ವಸಿಸಲ್ಪಟ್ಟ ಪ್ರದೇಶಗಳನ್ನು ಬೈಲು ಮಾಡುವದರಲ್ಲಿ ಮನೆಗಳನ್ನು ಕೆಡವುವುದು ಜನಗಳನ್ನು ಆಸರೆ ಇಲ್ಲದೆ ತಿರುಗುವಹಾಗೆ ಮಾಡುವದುಮಾತ್ರವೆ ಅಲ್ಲದೆ, ಪಟ್ಟಣವನ್ನು ಸರಿಯಾಗಿ ವಿಸ್ತರಿಸಿ ಮನೆಗಳನ್ನು ಕಟ್ಟುವದಕ್ಕೆ ಅನುಕೂಲಗಳನ್ನು ಹೊಂದಿಸಿ ಕೊಡುವದೂ ಸಹ ಆಗಬೇಕಾಗಿದೆ. ಆ ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಅವಶ್ಯಕವಿರುವ ಹಣವನ್ನೆಲ್ಲಾ ಮ್ಯೂನಿಸಿಪಾಲಿಟಿಯವರು ಒದಗಿಸುವದು ಅಸಾಧ್ಯವಾಗಿ ಕಾಣಬರುತ್ತೆ. ದೇಶಕ್ಕೆಲ್ಲಾ ಪ್ರಧಾನಪಟ್ಟಣವಾಗಿರುವದರಿಂದ ಅದಕ್ಕೆ ಉಂಟಾದ ಮಹತ್ವವನ್ನು ಆಲೋಚನೆಗೆ ತೆಗೆದುಕೊಂಡು, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರು, ಅಂಥಾ ವಿಶೇಷ ಧನವ್ಯಯದಲ್ಲಿ ಅಧಿಕಾಂಶವು ದೇಶಕ್ಕೆಲ್ಲಾ ಸೇರುವದು ಉಚಿತವೆಂದು ಎಣಿಸುತ್ತಾರೆ. ಅಗತ್ಯವಾಗಿರುವ ಖರ್ಚಿಗೋಸ್ಕರ ಎಷ್ಟುಮಟ್ಟಿಗೆ ಮ್ಯೂನಿಸಿಪಲ್ ಉಪಪತ್ತಿಗಳಿಂದ ಸಹಾಯವು ನ್ಯಾಯವಾಗಿ ನಿರೀಕ್ಷಿಸಲ್ಪಡಬಹುದಾದ್ದನ್ನು ಗೊತ್ತು ಮಾಡುವದು, ವ್ಯಯಮಾಡಬೇಕಾದ ಒಟ್ಟು ಹಣವೇನೆಂಬುವದನ್ನು ಸುಮಾರಾಗಿ ತಿಳಿದಮೇಲೇನೆ, ಶಕ್ಯವಾಗುತ್ತೆ."

"ಆ ಉಪಾಯವು ಪುನರ್ವಿಚಾರವಿಲ್ಲದಂತೆ ಈಗಲೇನೆ ಸಂಪೂರ್ಣವಾಗಿ ಆಲೋಚಿಸಲ್ಪಟ್ಟು ಪಕ್ವಪಡಿಸಲ್ಪಡಬಹುದು. ಬೇಕಾದ ಹಣವನ್ನೆಲ್ಲಾ ಒಂದೇ ಕಾಲದಲ್ಲಿ ಒದಗಿಸುವದು ಸರ್ಕಾರಕ್ಕೂ ಕೂಡ ಅಶಕ್ಯವಾಗಿರುವದು ; ಆದರೆ ಅದರ ವ್ಯಯವು ಕೆಲವು ವರುಷಗಳಕಾಲಕ್ಕೆಲ್ಲಾ ಪ್ರವರ್ತಿಸುವಂತೆ ಮಾಡಬಹುದು."

"ತಿದ್ದುಪಾಟುಗಳು ಪ್ರಯೋಜನಕರವಾಗಿ ಉದ್ದೇಶಿಸಲ್ಪಡತಕ್ಕಂಥಾ ಸಾಧಾರಣರೀತಿ ಏನಂದರೆ :—ಪಟ್ಟಣದ ಹೊಲೆಗೇರಿಗಳನ್ನು ಎಲ್ಲೆಲ್ಲಿದ್ದರೂ ಮೊದಲು ಉತ್ತಮಪಡಿಸುವದರಲ್ಲಿ, ಆರೋಗ್ಯ ಹಾನಿಕರವಾದ ಕಟ್ಟಡಗಳನ್ನೆಲ್ಲಾ ಕೆಡವಿ, ಮಿತಿಮೀರಿ ಗುಂಪುಗುಂಪಾಗಿರೋಣವನ್ನು ನಿಷೇಧಿಸಿ, ಕೆಟ್ಟ ಬಚ್ಚಲುಗಳನ್ನ ಇರದಂತೆ ಮಾಡಿ ಮತ್ತು ಅಪೂರ್ಣವಾಗಿರುವ ಆರೋಗ್ಯ ರಕ್ಷಣೆಯನ್ನು ಪೂರಯಿಸಬೇಕು. ಅಂಥಾ ಪ್ರದೇಶಗಳಿಂದ ಹೊರಡಿಸಲ್ಪಟ್ಟ ಹೆಚ್ಚು ಜನಗಳಿಗೆ ಸರಿಯಾದ ಸ್ಥಳಗಳನ್ನು ಒದಗಿಸಿಕೊಡಬೇಕು ; ಮತ್ತು ಬಡವರಿಗೆ ಸರಿಯಾದಮನೆಗಳನ್ನು ಕಟ್ಟಿಕೊಳ್ಳುವದಕ್ಕೋಸ್ಕರ, ಸಾಧ್ಯವಾದ ಮತ್ತು ತಕ್ಕಮಟ್ಟಿಗೆ ಉಪಯೋಗಕರವಾದ ಸಹಾಯವನ್ನು ಮಾಡಬೇಕು. ಸರಿಯಾಗಿ ನೀರು ಹರಿಯತಕ್ಕ ಬಚ್ಚಲು ಸಮುದಾಯವನ್ನು ಕುರಿತು ಒಂದು ವಿಪುಲವಾದ ಉಪಾಯವನ್ನು ಕಲ್ಪಿಸಬೇಕಾಗಿರುತ್ತೆ. ಆದರೆ ಈ ಪ್ರಯತ್ನದಲ್ಲಿ ಪಟ್ಟಣದ ಅಗತ್ಯಗಳನ್ನು ತಕ್ಕಷ್ಟು ಮಟ್ಟಿಗೆ ಹೊಂದಿಸಿಕೊಡುವದು ಪ್ರಧಾನವಾಗಿರಬೇಕೇ ಹೊರ್ತು, ಭಾವಕಲ್ಪಿತವಾಗಿದ್ದಾಗ್ಯೂ ಅಪ್ರಯೋಜಕವಾಗಿರುವ ಲೋಪರಹಿತತ್ವವನ್ನು ಅವಶ್ಯವಾಗಿ ಸಾಧಿಸಬೇಕಾದ್ದೇನು ಇಲ್ಲ.

"ಇವುಗಳೆಲ್ಲಾ ಸಾಮಾನ್ಯವಾದ ನಿರೂಪಣೆಗಳು ; ಆದರೆ ಗವರ್ನಮೆಂಟಿನವರು ಏರ್ಪಡಿಸಬೇಕೆಂದು ಸಂಕಲ್ಪಿಸಿರುವ ಕಮಿಟಿಯವರಿಗೆ, ಈ ವಿಷಯದ ಶಾಸ್ತ್ರೋಕ್ತವಾಗಿಯೂ ಅಭ್ಯಾಸಸಿದ್ಧವಾಗಿಯೂ ಇರುವ ವಿವಿಧಾಕೃತಿಗಳನ್ನೆಲ್ಲಾ ಚೆನ್ನಾಗಿಯೋಚಿಸಿ, ತಕ್ಕಷ್ಟು ವಿವರವಾಗಿ ಒಂದು ಉಪಾಯವನ್ನು ಗವರ್ನಮೆಂಟಿನವರ ಆಲೋಚನೆ ಬಗ್ಗೆ ಮಾಡುವದು, ಕರ್ತವ್ಯವಾಗಿರುತ್ತೆ. ಕೆಳಗೆ ಹೆಸರು ಹೇಳಲ್ಪಟ್ಟ ಪ್ರೆಸಿಡೆಂಟರು ಮತ್ತು ಮೆಂಬರುಗಳು, ಸಾಧ್ಯವಾದಷ್ಟು ತ್ವರಿಯವಾಗಿ ಈ ಕೆಲಸದಲ್ಲಿ ಪ್ರವರ್ತಿಸಿ ತಮ್ಮ ಅಭಿಪ್ರಾಯಗಳನ್ನೂ, ಬಹುಮಟ್ಟಿಗೆ ತಪ್ಪಿಲ್ಲದಿರುವ ವೆಚ್ಚದ ಮದಿಪನ್ನೂ ಸಹ ಒಪ್ಪಿಸಬೇಕೆಂದು ಗವರ್ನಮೆಂಟಿನವರು ಕೋರುತ್ತಾರೆ. ಯಾವ ಕ್ರಮದಲ್ಲಿ, ಯಾವ ವಿಧಾನದಲ್ಲಿ, ಆ ಉಪಾಯವನ್ನ ನೆರವೇರಿಸುವದು ತಮ್ಮ ಅಭಿಪ್ರಾಯದಲ್ಲಿ ಉತ್ತಮವಾಗಿ ತೋರಬರುವದನ್ನ ಕೂಡ ಅವರು ಸೂಚಿಸಬೇಕು."

ಅದೇ ಪ್ರಕಾರ, ಪಟ್ಟಣದ ಅನೇಕ ಭಾಗಗಳಲ್ಲಿ ಮಾಡಬೇಕಾದ್ದೆಂದು ತಾವು ಅಭಿಪ್ರಾಯಪಟ್ಟಿರುವ ತಿದ್ದುಪಾಟುಗಳನ್ನೆಲ್ಲಾ ತೋರಿಸಿ ವಿಸ್ತಾರವಾದ ಭಾವಗಳನ್ನನುಸರಿಸಿರತಕ್ಕ ಕೆಲವು ಉಪಾಯಗಳನ್ನು, ಕಮಿಟಿಯವರು ಒಪ್ಪಿಸಿರುತ್ತಾರೆ. ಆ ಉಪಾಯಗಳು ಈಗ ಗವರ್ನಮೆಂಟಿನವರ ವಿಚಾರಣೆಯಲ್ಲಿ ಇವೆ.

ಆ ಒಟ್ಟು ಉಪಾಯವನ್ನು ಯೋಚಿಸಿದರೆ ಅದರಲ್ಲಿ,—ಹೊಸ ಬೀದಿಗಳನ್ನು ಮಾಡುವದು, ಇರುವ ಬೀದಿಗಳನ್ನು ಬದಲಾಯಿಸುವದು, ಅನಾರೋಗ್ಯವಾದ ಕಟ್ಟಡಗಳನ್ನು ತೆಗದುಹಾಕುವದು ಅಥವಾ ಬದಲಾಯಿಸುವದು, ಸರಿಯಾದ ಬೆಚ್ಚಲುಗಳನ್ನು ಮತ್ತು ಹೆಚ್ಚಾಗಿ ಗಾಳಿಬೀಸುವದಕ್ಕೂ ವಿಹಾರ ವಿಶ್ರಮಕ್ಕೂ ಬೇಕಾದ ಬೈಲುಭೂಮಿಗಳನ್ನು ಏರ್ಪಡಿಸುವದು, ಆ ಉಪಾಯವನ್ನು ನೆರವೇರಿಸುವದರಲ್ಲಿ ಸ್ಥಳ ತಪ್ಪಿಸಲ್ಪಟ್ಟ ಕೇವಲ ಬಡವರಿಗೂ ಕೂಲಿ ಮಾಡುವ ಜನಗಳಿಗೂ ಆರೋಗ್ಯರಕ್ಷಕವಾದ ಮನೆಗಳನ್ನು ಕಟ್ಟಿಸುವದು—ಇವುಗಳೆಲ್ಲಾ ಅಡಗಿರುತ್ತವೆ.

ಆ ಉಪಾಯವನ್ನು ಜಾರಿಗೆ ತರುವದಕ್ಕಾಗಿ ಅನೇಕ ಗತ್ಯಂತರಗಳು ತೋರಿಬರುತ್ತವೆ. ಆ ಕೆಲಸವನ್ನು ಕೆಳಗೆ ಬರುವ ಯಾವ ಅಧಿಕಾರಿಗಳಿಗಾಗಲಿ, ಅಥವಾ ಅವರ ಪೈಕಿ ಜೊತೆ ಮಾಡಲ್ಪಟ್ಟ ಕೆಲವರಿಗಾಗಲಿ ಕೊಡಬಹುದು : ಯಾತಂದರೆ, ಡೆಪ್ಯುಟಿ ಕಮಿಷನರು, ಡಿಸ್ಟ್ರಿಕ್ಟು ಆಫಿಸರುಗಳು, ಸಿಟಿ ಮ್ಯುನಿಸಿಪಾಲಿಟಿಯವರು, ಆ ಉದ್ದೇಶಕಾಗಿ ಪ್ರತ್ಯೇಕವಾಗಿ ನೇಮಿಸಲ್ಪಟ್ಟ ಒಬ್ಬ ಆಫೀಸರು, ಅಥವಾ ಪಬ್ಲಿಕ್ ವರ್ಕ್ಸಿ ಡಿಪಾರ್ಟುಮೆಂಟಿನವರು. ಪರಂತು ಈ ಯಾವ ಸಂದರ್ಭದಲ್ಲಾಗಲಿ ಇವರನ್ನು ಪ್ರತ್ಯೇಕವಾಗಿ ಅಥವಾ ಜೊತೆಯಾಗಿ ಈ ಕೆಲಸದಲ್ಲಿ ಬಿಡುವದಕ್ಕೆ ಅಭ್ಯಂತರಗಳು ಇರುತ್ತವೆ. ಮ್ಯುನಿಸಿಪಲ್ ಸಿಬ್ಬಂದಿಗೆ ತಾವು ವಾಡಿಕೆಯಾಗಿ ಮಾಡುವ ಉದ್ಯೋಗವೇ ಸಂಪೂರ್ಣವಾಗಿದೆ. ಮ್ಯುನಿಸಿಪಲ್ ಕಮಿಷನರುಗಳು ಪುರ್ಸತಾಗಿರುವ ಕಾಲವು ಕೇವಲ ಸಂಕೋಚವಾಗಿರುವದರಿಂದ, ಅವರಿಗೆ ಅಧಿಕ ಕಾರ್ಯವನ್ನುಂಟುಮಾಡುವದು ಅನುಚಿತವಾಗಿರುತ್ತೆ. ಡೆಪ್ಯುಟಿ ಕಮಿಷನರ ವಿಷಯದಲ್ಲಿಯೂ, ಅವರ ಅಸಿಸ್ಟೆಂಟರುಗಳ ವಿಷಯದಲ್ಲಿಯೂ, ಇದೇ ಅಭ್ಯಂತರಗಳು ಇನ್ನು ಅಧಿಕವಾಗಿ ಪ್ರಯೋಗವಾಗುತ್ತವೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನವರು ಆ ಉಪಾಯದ ಇಂಜನೀರಿನ ಭಾಗವೆಲ್ಲಾ ಸುಧಾರಿಸಿಕೊಳ್ಳಬಹುದು. ಆದರೆ ಆ ಇಂ[illegible]ರಿನ ಭಾಗವು ಅತ್ಯಂತ ಕಷ್ಟವಾದ್ದಾಗಿಯೇ ಆಗಲಿ ಅಥವಾ ಕೇವಲ ವಿಶೇಷವಾದ್ದಾಗಿಯೇ ಆಗಲಿ ಇರುವದಿಲ್ಲಾ. ಆಲೋಚಿಸತಕ್ಕದ್ದಾಗಿರುವ ಕಾರ್ಯಭಾರಿಕ ವಿಷಯಗಳಲ್ಲದೆ ಅರ್ಥನಿರ್ವಾಹ ಕ್ರಮ ಸಮ್ಮಂಧಪಟ್ಟ ಸಂಗತಿಗಳು ಕೂಡ ಸರ್ಕಾರಿ ಮತ್ತು ಖಾಸಗಿ ಹಕ್ಕುಗಳನ್ನು ಬಹಳವಾಗಿ ನಿರ್ವಹಿಸೋಣದರಲ್ಲಿ ಅನಂತವಾಗಿ, ಅಡಗಿಕೊಂಡಿವೆ. ಅಂಥಾ ವಿಚಾರಗಳನ್ನು ನಡಿಸುವದು ಮಾತ್ರವಲ್ಲದೆ ಜನಗಳನ್ನು ಆರೋಗ್ಯ ರಕ್ಷಣಾಧಿಕ್ಯವುಳ್ಳಪ್ರದೇಶಗಳಲ್ಲಿ ವಸಿಸುವ ಹಾಗೆ ಮಾಡುವದು ಕೂಡ ಆಗಬೇಕಾಗಿದೆ. ಪ್ರತ್ಯೇಕವಾಗಿ ನೇಮಕವಾದ ಒಬ್ಬ ಉದ್ಯೋಗಸ್ಥನಿಗೆ ಅಂಥಾ ಭಾರವನ್ನ ವಹಿಸುವದು ಅಪೇಕ್ಷಿಸತಕ್ಕದ್ದಾಗಿಲ್ಲ. ಈ ಪ್ರಯತ್ನದ ಕಾರ್ಯಸಿದ್ಧಿಗಾಗಿ, ಸಾಕ್ಷಾತ್ತಾಗಿ ಸಮ್ಮಂಧಪಡುವವರು ಮಾತ್ರವಲ್ಲದೆ ಸರ್ವಜನರು ಕೂಡ ಸಾಧ್ಯವಿರುವ ಮಟ್ಟಿಗೆ ಏಕೀಭವಿಸಿರಬೇಕಾದ್ದು ಅವಶ್ಯವಾಗಿದೆ. ಅಂಥಾ ಸಹಾನುಭವವು ಬರೀ ಸರ್ಕಾರಿ ಕರ್ತೃತ್ವದಿಂದ ಸಾಧಿಸಲಶಕ್ಯವು. ಅದೂ ಅಲ್ಲದೆ, ಕಾರ್ಯಸಾಧಕವಾದ ಆಡಳಿತವು, ತೀವ್ರವಾಗಿ ನಡಿಸತಕ್ಕ ಚರ್ಯೆಯು, ಬೇಕಾಗಿರುವದರಿಂದ, ಒಪ್ಪಿಸಲ್ಪಟ್ಟ ಕೆಲಸದಲ್ಲಿ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಲು ತಕ್ಕಷ್ಟು ಅವಕಾಶವುಳ್ಳ ಬೇರೆ ಒಂದು ಸಿಬ್ಬಂದಿಯೊಡನೆ ಒಂದು ಪ್ರತ್ಯೇಕ ಪಾರುಪತ್ಯವನ್ನ ಏರ್ಪಡಿಸುವದು ವಿಧಿರೂಪವಾಗಿ ತೋರುತ್ತೆ.

ಇಂಥಾ ವಿದ್ಯಮಾನಗಳಲ್ಲಿ, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು, ಬೊಂಬಾಯಿ ಗವರ್ನಮೆಂಟಿನವರು ಅವಲಂಬಿಸಿರುವ ಮಾರ್ಗವನ್ನೇ ಉದಾಹರಣೆಯಾಗಿ ತೆಗದುಕೊಂಡು, "ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರವಾದ ಟ್ರಸ್ಟೀಗಳ ಬೋರ್ಡು" ಎಂದು ಕರಿಯಲ್ಪಡಬೇಕಾದ ಒಂದು ಚಿಕ್ಕ ಪಾರುಪತ್ಯವನ್ನ, ಅವರ ವಶಕ್ಕೆ ಕೊಡಲ್ಪಟ್ಟ ಹಣಗಳನ್ನು ಉಪಯೋಗಿಸುವದಕ್ಕೂ, ಸ್ವತ್ತನ್ನ ಸಂಪಾದಿಸಿ ನಿರ್ವಹಿಸುವದಕ್ಕೂ, ಮತ್ತು ಅವಶ್ಯವಾದ ಉತ್ತಮಪಡಿಸುವ ಕೆಲಸಗಳನ್ನು ನೆರವೇರಿಸುವದಕ್ಕೂ ಪ್ರತ್ಯೇಕ ಅಧಿಕಾರಗಳನ್ನುಳ್ಳದ್ದಾಗಿ ಏರ್ಪಡಿಸಲು, ನಿಶ್ಚಯಿಸಿರುತ್ತಾರೆ. ಚಲಾವಣೆ ಬಗ್ಗಾಗಿ ಬೇಕಾದ ಅಧಿಕಾರಗಳೆಲ್ಲ ಇದರೊಂದಿಗಿರುವ ರೆಗ್ಯುಲೇಷನಿನಲ್ಲಿ ನಮೂದಾಗಿರುತ್ತವೆ. ಈ ರೆಗ್ಯುಲೇಷನು ಸಾಧಾರಣವಾಗಿ 1898ನೆ ವರುಷದ 4ನೆ ನಂಬರಿನ ಬೊಂಬಾಯಿ ಚಿಕ್ಕನ್ನು ಹೆಚ್ಚು ಕಮ್ಮಿಯಾಗಿ ಅನುಸರಿಸುವದಲ್ಲದೆ, ಕೆಲವು ವಿಶೇಷವಾದ ವಿಚಾರಗಳಲ್ಲಿ ಅದಕ್ಕೆ ವ್ಯತ್ಯಾಸವಾಗಿಯು ಇದೆ. ಅದು ಹ್ಯಾಗೆಂದರೆ, ನಡಿಸುವ ರೀತಿಯು ಎಲ್ಲೆಲ್ಲಿ ಸಾಧ್ಯವಿದೆಯೊ [illegible]ಲ್ಲಿ ಸುಲಭಮಾಡಿರುತ್ತೆ ; ನಗದಿಯಾತಿಗೆ ಸಮ್ಮಂಧಪಡುವ ನಿಯಮಗಳು (ಸಂದರ್ಭಕ್ಕೆ ತಕ್ಕಹಾಗಿರಬೇಕಾದ್ದರಿಂದ) ಸಂಪೂರ್ಣವಾಗಿ ಬೇರೆ ಮಾರ್ಗವನ್ನು ಅವಲಂಬಿಸುತ್ತವೆ ; ಮತ್ತು, ಒಂದು ಪಕ್ಷದಲ್ಲಿ ಗವರನ್ಮೆಂಟಿನವರು ಬೋರ್ಡಿನ ಮೇಲಿ ಸಾಧಾರಣವಾದ ಮೇಲ್ವಿಚಾರಣೆಯನ್ನು ಅಧಿಕವಾಗಿ ಮಾಡಬಹುದಾದ ಸ್ಥಿತಿಯಲ್ಲಿರುವದಲ್ಲದೆ, ಮತ್ತೊಂದುಪಕ್ಷದಲ್ಲಿ ಬೋರ್ಡಿನ ಅಧಿಕಾರಗಳನ್ನೆಲ್ಲ ಕೆಲವು ಪ್ರಕರಣಗಳಲ್ಲಿ ಹೆಚ್ಚಿಸಿರುತ್ತೆ. (ಕಟ್ಟಡಗಳ ನಿರ್ಮಾಣವನ್ನು ಕ್ರಮಪಡಿಸೋಣ, ಮನೆ ಕಟ್ಟುವದ

ಕ್ಕೆ ಮುಂಗಡಗಳನ್ನು ಕೊಡೋಣ, ಸಲ್ಲತಕ್ಕ ಹಣಗಳನ್ನು ವಸೂಲ್ ಮಾಡೋಣ, ಇವುಗಳೇ ಮುಂತಾದ ಪ್ರಕರಣಗಳು) ಬೋರ್ಡಿನ ಅಗಲಿಕೆಯು ಸಂಭವಿಸುವದನ್ನು ಕೂಡಾ ಯೋಚಿಸಿರುವದಲ್ಲದೆ ಅದಕ್ಕೆ ಉಪಾಯವನ್ನು ಮಾಡಿರುತ್ತೆ.

ಆಮೇಲೆ ಈ ರೆಗ್ಯುಲೇಷನಿನ ತಪಸೀಲುಗಳನ್ನು ಕುರಿತು :

Iನೆ ಅಧ್ಯಾಯ (1 ಮತ್ತು 2ನೆ ಪ್ರಕರಣಗಳು) ಅವತರಣಿಕೆ : ಇವರ ವಿವರ ಬೇಕಾಗಿಲ್ಲ.

IIನೆ ಅಧ್ಯಾಯವು (ಪ್ರಕರಣಗಳು 3ನಿಂದ 13ವರೆಗೆ). ಟ್ರಸ್ಟಿಗಳ ಬೋರ್ಡಿನ ಏರ್ಪಾಟನ್ನೂ, ಅವರ ನಡವಳಿಕೆಗಳನ್ನೂ ಮತ್ತು ಚೇರಮೆನ್‌ನಿನ ಕರ್ತವ್ಯಗಳನ್ನೂ ಕುರಿತು ಇದೆ. 4ನೆ ಪ್ರಕರಣದಲ್ಲಿ, ಆ ಟ್ರಸ್ಟಿಗಳ ಬೋರ್ಡಿನಂತಿರುವ ಒಂದು ಚಿಕ್ಕ ಪಾರುಪತ್ಯವನ್ನು, ಸಾಧ್ಯವಿರುವ ಮಟ್ಟಿಗೂ, ಎಲ್ಲಾ ಬಗೆಯಾದ ಸ್ವಾರ್ಥಗಳನ್ನು ಅವರ ಪ್ರತಿನಿಧಿಯಾಗಿರುವ ಹಾಗೆ, ಏರ್ಪಡಿಸಿರುತ್ತೆ.

IIIನೆ ಅಧ್ಯಾಯವು (ಪ್ರಕರಣಗಳು 14ರಿಂದ 23ವರೆಗೆ) ಬೋರ್ಡಿನ ಕರ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ಕುರಿತು ಇದೆ. ಇಂಪ್ರೂವ್‌ಮೆಂಟ್ ಕಮ್ಮಿಟಿಯವರಿಂದ ಆಗಿಂದಾಗ್ಗೆ ಒಪ್ಪಿಸಲ್ಪಟ್ಟ ಆಲೋಚನೆಗಳನ್ನೆಲ್ಲ ಮುಖ್ಯವಾಗಿ ಅನುಸರಿಸಿ ಉತ್ತಮಪಡಿಸುವ ಉಪಾಯಗಳ ತಪಶೀಲುಗಳನ್ನು ಪರಿಷ್ಕಾರ ಮಾಡುವದಲ್ಲದೆ, ಗವರ್ನಮೆಂಟಿನವರ ಮಂಜೂರಾತಿಯಾದ ಬಳಿಕ ಆ ವಿವರಿಸಲ್ಪಟ್ಟ ಉತ್ತಮಪಡಿಸುವ ಉಪಾಯಗಳನ್ನ ಜಾರಿಗೆ ತರುವದು, ಬೋರ್ಡಿನ ಪ್ರಥಮ ಕರ್ತವ್ಯವಾಗಿರುತ್ತೆ. ಅಗತ್ಯ ಬಿದ್ದಾಗ್ಯೆ ಮತ್ತು ಹಣವಿದ್ದರೆ ಅಧಿಕ ಉಪಾಯಗಳನ್ನ ಕೂಡ ಬೋರ್ಡು ಒಪ್ಪಿಸಬಹುದು. ಜಮೀನುಗಳ ಮತ್ತು ಕಟ್ಟಡಗಳ ಬಲತ್ಕಾರವಾದ ಸಂಪಾದನೆಯನ್ನು ಕುರಿತು (ಪ್ರಕರಣ 23,) 1894ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಪ್ರಯೋಗವಾಗುವಮಟ್ಟಿಗೆ ಅವುಗಳನ್ನು ಅನುಸರಿಸತಕ್ಕದ್ದು; ಮತ್ತು ಆ ರೆಗ್ಯುಲೇಷನಿನೊಳಗಿಲ್ಲದ ವಿಷಯಗಳನ್ನು ಕುರಿತು ಕೆಲವು ಅಧಿಕ ನಿಯಮಗಳು ಇದಕ್ಕೆ ಸೇರಿಸಲ್ಪಟ್ಟಿರುತ್ತವೆ. ಹೆಚ್ಚಾದ ತ್ವರೆಯಿಂದಲೂ ಮತ್ತು ಅಧಿಕ ಫಲೋತ್ಪಾದಕವಾಗಿಯೂ ಹಕ್ಕುಗಳು ಮುಂತಾದವುಗಳನ್ನ ಗೊತ್ತಿಗೆ ತರುವ ಬಗ್ಗಾಗಿ, ಬೋರ್ಡಿನ ಚೇರ್ಮೆನ್ನಿಗೆ, ಭೂಸಂಪಾದನೆ ವಿಷಯದ ರೆಗ್ಯುಲೇಷನಿನಂತೆ ಒಬ್ಬ ಡೆಪ್ಯುಟಿ ಕಮ್ಮಿಷನರು ಉಂಟಾಗಿರುವ ಅಧಿಕಾರಗಳನ್ನ ಕೊಡಲು ಯೋಚಿಸಿರುತ್ತೆ; ಆದರೆ ಇದು ಒಂದು ಪ್ರತ್ಯೇಕವಾದ ಇಸ್ತಿಹಾರುಮೂಲಕ ಮಾಡಲ್ಪಡುತ್ತೆ.

IVನೆ ಅಧ್ಯಾಯವು (ಪ್ರಕರಣಗಳು 24ರಿಂದ 33ವರೆಗೆ) ಸ್ವತ್ತು ಮತ್ತು ನಗದಿಗೆ ಸಮ್ಮಂಧಪಟ್ಟಿರುತ್ತೆ. ಗವರನಮೆಂಟಿನವರ ಅಥವಾ ಮ್ಯೂನಿಸಿಪಲ್ ಕಮಿಷನರುಗಳ ಸ್ವಾಧೀನದಲ್ಲಿರುವ ಭೂಮಿಯನ್ನು ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿನ ವಶದಲ್ಲಿರತಕ್ಕದ್ದೆಂದು ಗವರನಮೆಂಟಿನವರು ಹುಕುಂ ಮಾಡಬಹುದು. ಸ್ವತ್ತನ್ನು ಸಂಪಾದಿಸಿ ಇಟ್ಟುಕೊಳ್ಳುವವರ ಸಮ್ಮಂಧವಾಗಿಯೂ, ತಮ್ಮ ವಶಕ್ಕೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಸ್ವತ್ತನ್ನ ವಿಲೇವಾರಿ ಮಾಡುವವರ ಸಮ್ಮಂಧವಾಗಿಯೂ ಇರುವ ಬೋರ್ಡಿನ ಅಧಿಕಾರಗಳು 25ನೆ ಪ್ರಕರಣದಲ್ಲಿ ತಪಶೀಲಾಗಿ ಹೇಳಲ್ಪಟ್ಟಿರುತ್ತವೆ. 26ನೆ ಪ್ರಕರಣದಲ್ಲಿ ಇಂಪ್ರೂವ್‌ಮೆಂಟ್ ಫಂಡಿನ ಬಾಬುಗಳೆಲ್ಲಾ ಸೂಚಿಸಲ್ಪಟ್ಟಿರುತ್ತವೆ. ಮೈಸೂರು ಪಟ್ಟಣದ ಟ್ರಸ್ಟಿಗಳ ಬೋರ್ಡಿಗೆ ಸಾಲ ತೆಗದುಕೊಳ್ಳುವ ಅಧಿಕಾರಗಳಿಲ್ಲದಿರುವದು, ಮತ್ತು ಆ ಕಾರಣದಿಂದ ಹಣ ವಾಪಸು ಮಾಡುವ ಜವಾಬುದಾರಿಯೂ ಇಲ್ಲದಿರುವದು – ಈ ಸಂಗತಿಯು ಗಮನಿಸತಕ್ಕದ್ದಾಗಿದೆ; ಪರಂತು 26ನೆ ಪ್ರಕರಣದಂತೆ ಗವರ್ನಮೆಂಟಿನವರಿಂದಲೂ ಮ್ಯೂನಿಸಿಪಲ್ ಕಮ್ಮಿಷನಿನಿಂದಲೂ ಆಗಿಂದಾಗ್ಗೆ ಅವರ (ಬೋರ್ಡಿನ) ವಶಕ್ಕೆ ಕೊಡಲ್ಪಟ್ಟ ಹಣವನ್ನ ಸುಮ್ಮನೆ ಉಪಯೋಗಿಸುವದು ಬೋರ್ಡಿನ ಕೆಲಸವಾಗಿರುತ್ತೆ. ಆ ಫಂಡಿನ ಪ್ರಯೋಗದ ಸಮ್ಮಂಧವಾಗಿ ಹೇಳಬಹುದಾದ್ದೇನಂದರ,—ಗವರ್ನಮೆಂಟಿನವರಿಂದ ಮಾಡಲ್ಪಡಬೇಕಾಗಿರುವ ನೇಮಗಳಿಗೆ ಅನುಸಾರವಾಗಿ ಮುಂಗಡಗಳನ್ನ ಮನೆಕಟ್ಟುವ ಉದ್ದೇಶಗಳಿಗೋಸ್ಕರ, ಸರಿಯಾದ ಸಂದರ್ಭಗಳಲ್ಲಿ ಕೊಡುವ ಅಧಿಕಾರವು 27 (3)ನೆ ಪ್ರಕರಣದಂತೆ ಬೋರ್ಡಿಗೆ ಇರುವದಾಗುತ್ತೆ. ಲೆಕ್ಕಗಳನ್ನು ಮತ್ತು ಅವುಗಳ ತನಿಖೆ ಮಾಡುವದನ್ನು ಕುರಿತು ಇರುವ ನಿಯಮಗಳು ಸುಲಭ ಮಾಡಲ್ಪಟ್ಟಿರುತ್ತವೆ.

Vನೆ ಅಧ್ಯಾಯವು (ಪ್ರಕರಣಗಳು 34ರಿಂದ 36ವರೆಗೆ) ಗವರ್ನಮೆಂಟಿನವರಿಂದ ಬೋರ್ಡಿನ ತಾಬೆಗಾಗಿ ಕೊಡಲ್ಪಟ್ಟವರೊಂದಿಗಿರುವ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಕುರಿತು ಇದೆ.

VIನೆ ಅಧ್ಯಾಯವು (37ನೆ ಪ್ರಕರಣ) ಯಾವ ವಿದ್ಯಮಾನಗಳಲ್ಲಿ ಬೋರ್ಡನ್ನ ಅಗಲಿಸಬೇಕಾದ್ದು ಅವಶ್ಯವಾಗುತ್ತೊ ಅವುಗಳನ್ನು ಕುರಿತು ಇದೆ. (ಹಾಗಂದರೆ, ಅವರಿಂದ ನೆರವೇರಿಸಲ್ಪಡುವದಕ್ಕೋಸ್ಕರ ಮಂಜೂರಾದ ಉತ್ತಮಪಡಿಸುವ ಉಪಾಯಗಳೆಲ್ಲಾ ವಾಸ್ತವಿಕವಾಗಿ ಪೂರಯಿಸಲ್ಪಟ್ಟಾಗ;) ಮತ್ತು ಬೋರ್ಡಿನ ಆಸ್ತಿ ಮತ್ತು ಸಾಲಗಳಿಗೆ ಯಾರು ಉತ್ತರಾಧಿಕಾರಿ ಆಗಬೇಕೆಂಬುವದು, ಸ್ವತ್ತಿನ ವಿಲೇವಾರಿ ಮತ್ತು ನಿರ್ವಾಹ, ಅಪೂರ್ಣವಾಗಿರುವ ಕೆಲಸಗಳನ್ನ ಪೂರಯಿಸುವದು, ಇವುಗಳೇ ಮುಂತಾದ ಸಂದರ್ಭವಶವಾದ ವಿವಿಧ ಸಂಗತಿಗಳಿಗು ಕೂಡ ಇದರಲ್ಲಿ ಏರ್ಪಡಿಸಿರುತ್ತೆ.

VIIನೆ ಅಧ್ಯಾಯವು (ಪ್ರಕರಣಗಳು 38ರಿಂದ 46 ವರೆಗೆ) ನೇಮಗಳು, ಒಳ ನಿಬಂಧನೆಗಳು, ದಂಡನೆಗಳು ಮುಂತಾದ್ದನ್ನು ಕುರಿತು ಇದೆ. ಇದರಲ್ಲಿರುವ ಪದ್ಧತಿಪ್ರಕಾರವಾದ ನಿಯಮಗಳಿಗೆ ಪ್ರತ್ಯೇಕವಾದ ಸ್ಪಷ್ಟೀಕರಣವು ಅಗತ್ಯವಿರುವದಿಲ್ಲ. ಪರಂತು, ಮನೆ ಕಟ್ಟುವ ವಿಷಯದಲ್ಲಿ ಸರಿಯಾದ ನೇಮಗಳನ್ನ ಮಾಡುವದಕ್ಕಾಗಿ ಬೋರ್ಡಿಗೆ ಅಧಿಕಾರ ಕೊಡುವ 39 (1)ನೆ ಪ್ರಕರಣದ (e) ಕಲಮು ಮತ್ತು ಬೋರ್ಡಿಗೆ ಸಲ್ಲತಕ್ಕ ಹಣಗಳನ್ನು ವಸೂಲು ಮಾಡುವ ವಿವಿಧ ವಿಧಾನಗಳ ವಿಷಯವಾಗಿರುವ 45ನೆ ಪ್ರಕರಣವು,—ಇವೆರಡೂ ಅವಧಾನಯೋಗ್ಯವಾಗಿರುತ್ತವೆ.

ಇಷ್ತಿಹಾರ್, ನಂ. 848—ಜ್ಯು. ತಾರೀಖು 27ನೆ ಅಕ್ಟೋಬರ 1903.

ಸನ 1892ನೆ ಇಸವಿಯ IVನೆ ನಂಬರು ಮೈಸೂರು ಕಾರ್ಖಾನೆಗಳ ರೆಗ್ಯುಲೇಷನ್ 18ನೆ ಸೆಕ್ಷನ್ನಿನ 4ನೆ ಪ್ರಕರಣವನ್ನು ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮೇಲ್ಕಂಡ 18ನೆ ಸೆಕ್ಷನ್ನಿನ 2ನೆ ಪ್ರಕರಣದ ಪ್ರಕಾರ ತಮಗಿರುವ ಅಧಿಕಾರ ಚಲಾವಣೆಯಲ್ಲಿಯೂ ಮತ್ತು 1901ನೆ ಇಸವಿ ಜನವರಿ 4ನೆ ತಾರೀಖಿನ ನಂ. 8627—ಲೆಗಿಸ್ 70ನೆ ನೋಟಿಫಿಕೇಷನ್‌ಗೆ ಬದಲಾಗಿಯೂ ಸಹ ಮಾಡಬೇಕೆಂದಿರುವ ಇದರಡಿ ವಿವರಿಸಿರುವ ರೂಲಿನ ಮಸೂದೆಯನ್ನು ಸಕಲ ಜನರಿಗೂ ತಿಳಿಯಪಡಿಸುವ ಬಗ್ಯೆ ಪ್ರಕಟಿಸಿರುತ್ತಾರೆ. ಮೈಸೂರು ಗೆಜೆಟ್ಟಿನಲ್ಲಿ ಈ ಇಷ್ತಿಹಾರ್ ಪ್ರಾಯಿಷ್ ಆದ ಯರಡು ತಿಂಗಳು ಕಳೆದ ನಂತರ ಈ ಮಸೂದೆಯನ್ನು ಸರ್ಕಾರದವರು ವಿಚಾರಕ್ಕೆ ತೆಗೆದುಕೊಳ್ಳುತ್ತಾರೆ:—

ಕಾರ್ಖಾನೆಗಳ ಸ್ವಾಧೀನದಲ್ಲಿರುವ ಪ್ರತಿ ಒಬ್ಬನೂ ಈ ಕೆಳಗೆ ತೋರಿಸಿರುವ ತಖ್ತೆಗಳನ್ನು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರಿಗೆ ರವಾನಿಸತಕ್ಕದ್ದು:

I. ಪ್ರತಿ ವರುಷದ ಜನವರಿ 15ನೆ ತಾರೀಖಿನ ದಿನ ಅಥವಾ ತತ್ಪೂರ್ವ, ಈ ಕೆಳಗೆ ತೋರಿಸಿರುವ ನಮೂನೆಯಲ್ಲಿ ಒಂದು ಸಾಲ್‌ಝಾಡೆ ತಖ್ತೆಯನ್ನೂ:—

ಕಾರ್ಖಾನೆಯು ಹೆಸರು ಮತ್ತೂ ಇರತಕ್ಕ ಸ್ಥಳ.	ಯಜಮಾನನ ಅಥವಾ ಸ್ವಾಧೀನದಾರನ ಹೆಸರು.	ಮ್ಯಾನೇಜರಿ ಹೆಸರು.	ಕೆಲಸದ ಸ್ವಭಾವ.	ಕೇಸಕ್ಕೆ ಸಹಾಯಕವಾದ ಚಲನಾಶಕ್ತಿ ಮತ್ತು ಅದರ ಸ್ವಭಾವ.	ಸರಾಸರಿ ಪ್ರತಿನಿತ್ಯವೂ ಕೆಲಸ ಮಾಡತಕ್ಕವರ ಸಂಖ್ಯೆ.				ಕಾರ್ಖಾನೆಯಲ್ಲಿ ಬದಲಾಯಿಸಿಕೊಂಡು ಕೆಲಸ ಮಾಡಲ್ಪಡುತ್ತೊ ಅಥವಾ ಆಗಾಗ್ಯೆ ಕೆಲಸ ನಿಲ್ಲಿಸಲ್ಪಡುತ್ತೊ—ಹಾಗೆ ನಿಲ್ಲಿಸಲ್ಪಟ್ಟರೆ ಯಾವಾಗ ಮತ್ತು ದಿನಕ್ಕೆ ಯಷ್ಟು ಹೊತ್ತು ನಿಲ್ಲಿಸಲ್ಪಡುತ್ತೆ.	ಆದಿತ್ಯವಾರವಾಗಲಿ ಅನ್ಯಾವ ವಾರವಾಗಲೀ ಪೂರಾ ರಜಾದಿನಗಳುಂಟೆ ಅಥವಾ ರೆಗ್ಯುಲೇಷನ್ನಿನ ಸೆಕ್ಷನ್ 5 B (1) ಕ್ಲಾಜ್ (c) ಪ್ರಕಾರ ಕಾರ್ಖಾನೆಯು ಆದಿತ್ಯವಾರದ ದಿನ ಕೆಲಸ ನಡಿಸುವ ವಿಷಯದಲ್ಲಿನ ರೂಲಿನಿಂದ ವಿನಾಯಿಸಲ್ಪಟ್ಟಿರುತ್ತದೆಯೆ.	ಷರಾ.
					ದೊಡ್ಡವರು.		ಹುಡುಗರು.				
					ಗಂಡಸರು.	ಹೆಂಗಸರು.	ಗಂಡಸರು.	ಹೆಂಗಸರು.			

N. B.—ದಿನಂಪ್ರತಿ ಕೆಲಸ ಮಾಡುವ ಹುಡುಗರ ಸಂಖ್ಯೆಯನ್ನು ಕಾರ್ಖಾನೆಯುಲ್ಲಿಟ್ಟಿರುವ ಹುಡುಗರ ರಿಜಿಸ್ಟರಿನಿಂದ ತೆಗೆದುಕೊಳ್ಳಬೇಕು.

II. ಈ ಕೆಳಗಿನ ನಮೂನೆಯಲ್ಲಿ ಅಳತೆ ಮತ್ತು ವಿಸ್ತೀರ್ಣವನ್ನು ತೋರಿಸುವ ತಖ್ತೆಯನ್ನೂ:—

ಕಾರ್ಖಾನೆಯು ಹೆಸರು ಮತ್ತು ಇರತಕ್ಕ ಸ್ಥಳ.	ಸ್ವಾಧೀನದಲ್ಲಿರುವವರ ಹೆಸರು.	ಕಾರ್ಖಾನೆಯುಲ್ಲಿರುವ ಪ್ರತಿ ಒಂದು ಚಿಕ್ಕಮನೆಯು ಅಳತೆ ಮತ್ತು ಘನ ಆಕಾರ.	ಹಿಂದಿನ ಕಾಲಂನಲ್ಲಿ ತೋರಿಸಿರುವ ಯಾವದಾವದರೊಂದು ಚಿಕ್ಕ ಮನೆಗಳಲ್ಲಿ ಯಂತ್ರಗಳು ಅಥವಾ ಇತರ ಭೂಸ್ಥಾಪಿತ ವಸ್ತುಗಳಿರುವ ಚಿಕ್ಕ ಮನೆಯು ನೆಲದ ಅಳತೆ.	ಷರಾ.

ಮೇಲ್ಕಂಡ ತಖ್ತೆಯು ಪ್ರತಿ ಒಂದು ಕಾರ್ಖಾನೆಯು ರೆಗ್ಯುಲೇಷನ್ ಅನುಸರಿಸಿ ಮೊದಲು ರಿಜಿಸ್ಟರ್ ಆದ ಕೂಡಲೇ ಕಳುಹಿಸಲ್ಪಡತಕ್ಕದ್ದು. ಮತ್ತು ತದನಂತರ ಕಾರ್ಖಾನೆಯಲ್ಲಿ ಅದರ ಯಾವದೊಂದು ಚಿಕ್ಕಮನೆಯ ಅಳತೆ ಅಥವಾ ಘನ ಆಕಾರಗಳು ಅಥವಾ ಯಂತ್ರಗಳು ಅಥವಾ ಇತರ ಭೂಸ್ಥಾಪಿತವಾದ ವಸ್ತುಗಳು ಇರತಕ್ಕ ಚಿಕ್ಕಮನೆಗಳ ಅಳತೆಗಳಿಗೆ ಕುಂದಕವಾಗುವ ಯಾವ ಬದಲಾವಣೆ ಮಾಡಿದಾಗಲೂ ಕಳುಹಿಸಲ್ಪಡತಕ್ಕದ್ದು.

III. ಪ್ರತಿ ಒಂದು ಕ್ಯಾಲೆಂಡರ್ ತಿಂಗಳ ಆಖೈರಿನೊಳಗಾಗಿ ಮುಂದಿನ ತಿಂಗಳಿನಲ್ಲಿ ಕಾರ್ಖಾನೆಯು ಮುಚ್ಚಲ್ಪಡುವ ಎಲ್ಲಾ ದಿನಗಳನ್ನು ತೋರಿಸುವ ತಖ್ತೆ. ಈ ತಖ್ತೆಯನ್ನು ತಖ್ತೇಲಿ ತೋರಿಸುವ ಹಿಂದಿನ ತಿಂಗಳಲ್ಲಿ ಕಾರ್ಖಾನೆಯಲ್ಲಿ ಕೆಲಸ ನಡೆದರೂ ನಡಿಯದೆ ಇದ್ದರೂ ರವಾನಿಸತಕ್ಕದ್ದು.

ಹುಕುಂ ಬಮೋಜಿಬ್,
ಕೆ. ಎಸ್. ಚಂದ್ರಶೇಖರ ಐಯರ್,
ಫಾರ್ ಜನರಲ್ ಮತ್ತು ರೆವೆನ್ಯೂ ಇಲಾಖೆಗಳ ಸೆಕ್ರೆಟರಿ.

Mysore Government Central Press, Bangalore—1903.

ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಛಾಪಿಸ್ ಆದ್ದು. [ನಂ. 4.

ಬೆಂಗಳೂರು, ಗುರುವಾರ, ಜನವರಿ ತಾ॥ 29, ಸನ 1903.

IVನೇ ಭಾಗ.

ಶ್ರೀಮತ್ ಮೈಸೂರ್ ಮಹಾರಾಜರವರ ಸರ್ಕಾರದವರು ಮಾಡೋಣಾದ ನಡವಳಿಕೆ.

ನಂ. 970—979.

ಇಂಡಿಯಾ ಗವರ್ನ್ಮೆಂಟಿನ ಅಂಡರ್ ಸೆಕ್ರೆಟರಿ ಯವರಾದ ಡಬ್ಲ್ಯು. ಎಸ್. ಮ್ಯಾರಿಸ್ ಸಾಹೇಬರವರಿಂದ.

ಒಳದೇಶದ ಗವರ್ನ್ಮೆಂಟು ಮುಂತಾದವುಗಳಿಗೆ.

ಸಿಮ್ಲಾ, 28ನೇ ಜುಲೈ 1902.

ಹೋಂ ಡಿಪಾರ್ಟ್ಮೆಂಟ್

ಮೆಡಿಕಲ್.

ಅಯ್ಯಾ,

ಮೊಂಷಿಯರ್ ಪ್ಯಾಸ್ಟ್ಯೂರ್ ಯವರ ವಿಧಾನದ ಮೇರಿಗೆ ಹುಚ್ಚು ಹಿಡಿದ ಮೃಗಗಳು ಕಚ್ಚಿದ್ದರಿಂದ ಸಂಕಟಪಡುವ ಜನಗಳಿಗೆ ಚಿಕಿತ್ಸೆ ನಡೆಯಲು ಈ ದೇಶದಲ್ಲಿ ಒಂದು ವೈದ್ಯಶಾಲೆ ಇರುವ ಅಂಶವನ್ನು ನಾನಾ ಸೀಮೆಗಳಲ್ಲಿರುವ ಸರ್ವ ನೇಟಿವ್ ಜನರು ಸಾಕಾದಂತೆ ಅರಿತವರಾಗಿ ಇಲ್ಲವೆಂದು ಎಣಿಸಲು ಇಂಡಿಯಾ ಗವರ್ನ್ಮೆಂಟಿನವರಿಗೆ ಕಾರಣವಿರುತ್ತದೆ.

ಹಾಗೆ ಅರಿಯದೆ ಇರೋಣದರಿಂದ ತಪ್ಪಿಸಿಕೊಳ್ಳಬಹುದಾದಂಥ ಸಂಕಟ ಮತ್ತು ಸಾವು ಬಹುಶಃ ಸಂಭವಿಸುತ್ತಿದೆಯೆಂದು ಇಂಡಿಯಾ ಗವರ್ನ್ಮೆಂಟಿನವರಿಗೆ ತೋರುತ್ತದೆ. ____________________ ಗೆ ಆಕ್ಷೇಪಣೆ ಇಲ್ಲವಾದರೆ, ಅಂಥಾ ಬಾಧೆಗಳನ್ನು ಅನುಭವಿಸುವ ರೋಗಿಗಳಿಗೆ 1900ನೇ ವರುಷದ ಆಗಸ್ಟು ತಿಂಗಳಲ್ಲಿ ಕಸೌಲಿಯಲ್ಲಿ ಸ್ಥಾಪಿತವಾಗಿರುವ ಪ್ಯಾಸ್ಟ್ಯೂರ್ ವೈದ್ಯಶಾಲೆಯಲ್ಲಿ ನಡೆಯುವ ಸದರೀ ಪೈತ್ಯನಿವಾರಕ ಚಿಕಿತ್ಸೆಯ ಪ್ರಯೋಜನಗಳನ್ನು ತಿಳಿಸುವದಕ್ಕೆ ತಕ್ಕ ಪ್ರತಿ ಅವಕಾಶವನ್ನು ಅವಲಂಬಿಸಬೇಕೆಂದು ____________________ ಲ್ಲಿರುವ ಪರಸ್ಥಳದ ಆಸ್ಪತ್ರೆಗಳ ಚಾರ್ಜನ್ನು ಉಳ್ಳ ಎಲ್ಲಾ ಮೆಡಿಕಲ್ ಸಬ್ಆರ್ಡಿನೇಟುಗಳಿಗೂ (ವೈದ್ಯರಿಗೂ) ಅಗತ್ಯವಾದ ಹುಕುಂಗಳನ್ನು ಕೊಡಬೇಕೆಂದು ಅಪ್ಪಣೆಯಾಗಿರುತ್ತದೆ.

ಇಂಡಿಯಾ ಗವರ್ನ್ಮೆಂಟಿನವರ ಅಪ್ಪಣೆ ಮೇರಗೆ,

ಡಬ್ಲ್ಯು. ಎಸ್. ಮ್ಯಾರಿಸ್,

ಅಂಡರ್ ಸೆಕ್ರೆಟರಿ.

Mysore Government Central Press, Bangalore—1903.

ಮೈಸೂರು ಗೆಜೆಟ್.

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 15, ಸನ್ 1903.

☞ ಭಾಗವನ್ನು ಪ್ರತ್ಯೇಕಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

೪ನೇ ಭಾಗ.

ಸರ್ಕಾರಿ ಕಾಗದ ಪತ್ರಗಳು.

ಶ್ರೀಮನ್ಮಹಾರಾಜರವರು ಪ್ರಜಾಪ್ರತಿನಿಧಿಸಭೆಯವರನ್ನು ಕುರಿತು ಅಪ್ಪಣೆ ಕೊಡಿಸಿದ ಮಾತುಗಳು.

ನಾವು ರಾಜ್ಯಭಾರವನ್ನು ವಹಿಸಿಕೊಂಡ ಬಳಿಕ ನಮ್ಮ ಸಂಸ್ಥಾನದ ಮುಖಂಡರಾದ ರೈತರು ವರ್ತಕರು ಮತ್ತು ಸ್ಥಳೀಯಸಂಘಗಳ ಪ್ರತಿನಿಧಿಗಳೂ ಆದ ನಿಮ್ಮನ್ನು ಪ್ರಥಮತಃ ನೋಡಲು ಈಗ ಅವಕಾಶವುಂಟಾದ್ದಕ್ಕಾಗಿ ಸಂತೋಷಪಡುತ್ತೇವೆ. ಕಳೆದ ವರ್ಷದಲ್ಲಿ ಪ್ಲೇಗ್ ರೋಗವು ಬಹಳ ಪ್ರಬಲವಾಗಿದ್ದದ್ದು, ಅದು ಇಳಿದು ಹೋಗಬಹುದೆಂದು ಎಷ್ಟುದೂರ ನಿರೀಕ್ಷಿಸಿದರೂ ಕಡಿಮೆಯಾಗದ ಪ್ರಯುಕ್ತ ಸಭೆಯನ್ನು ನಿಲ್ಲಿಸುವಂತೆ ಬಹಳ ಅಸಮಾಧಾನದಿಂದ ಅಪ್ಪಣೆ ಮಾಡಬೇಕಾಯಿತು. ಹಾಗಿಲ್ಲದಿದ್ದರೆ ನಿಮ್ಮನ್ನೆಲ್ಲಾ ಹೋದವರ್ಷವೇ ನೋಡಬೇಕೆಂದಿದ್ದ ನಮ್ಮ ಕುತೂಹಲವು ನೆರವೇರುತ್ತಿತ್ತು. ನಮ್ಮ ಪೂಜ್ಯರಾದ ತೀರ್ಥರೂಪುಗಳವರ ಆಜ್ಞಾನುಸಾರವಾಗಿ, ದಿವಾನ್ ರಂಗಾಚಾರ್ಯರು ಈ ಸಭೆಯ ಪ್ರಥಮ ಸಂವತ್ಸರದ ನಡವಳಿಕೆಗಳನ್ನುಪಕ್ರಮಿಸಿ ಇಲ್ಲಿಗೆ 22 ವರ್ಷಗಳಾಗಿವೆ. ಈ ಸಭೆಯನ್ನು ಸ್ಥಾಪಿಸಿದ ಉದ್ದೇಶವು ಪ್ರಜೆಗಳ ಅಭ್ಯುದಯಕ್ಕೋಸ್ಕರ ಸರ್ಕಾರದವರು ನಡಿಸುವ ನಡವಳಿಕೆಗಳೂ ಅವರ ಅಭಿಪ್ರಾಯಗಳೂ, ದೇಶದ ಜನರಿಗೆ ಸರಿಯಾಗಿ ತಿಳಿಯಬಂದು ಅವರು ತಮಗುಂಟಾಗುವ ಲಾಭವನ್ನು ತಕ್ಕಹಾಗೆ ಗ್ರಹಿಸಿಕೊಳ್ಳುವಂತೆ ಮಾಡುವುದು. ಹೀಗೆ ಪ್ರಜೆಗಳು ಗವರ್ನಮೆಂಟಿನವರೊಡನೆ ಆಗಾಗ್ಗೆ ಸೇರಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರೆ, ಸರ್ಕಾರದ ಆಡಳಿತಗಳು ಇರಾದೆಗಳು ಇವರಿಗೆ ಚೆನ್ನಾಗಿ ತಿಳಿದು ಅವುಗಳ ವಿಷಯದಲ್ಲಿರುವ ಸಂದೇಹ ನಿವೃತ್ತಿಯಾಗುವುದರಿಂದ, ಪ್ರಜೆಗಳ ಅಭ್ಯುದಯವೂ ಸರ್ಕಾರದವರ ಫಾಯಿದೆಯೂ ಒಂದೇ ಆಗಿರುವುದೆಂಬುವುದು ಜನರಿಗೆ ನಿದರ್ಶನವಾಗುವುದು.

ರಾಜ್ಯಭಾರವನ್ನು ಸರಿಯಾಗಿ ನಿರ್ವಹಿಸಿ ಅದರ ಆಡಳಿತಗಳನ್ನೆಲ್ಲಾ ಧರ್ಮಾನುಸಾರವಾಗಿ ನಡಿಸುವ ಭಾರವು ನಮ್ಮನ್ನು ಹೊಂದಿರುವುದರಿಂದ ಆ ವಿಷಯಗಳಲ್ಲಿ ನಿಮ್ಮ ಸಭೆಯಲ್ಲಿ ಸೇರಿರುವವರಿಗೆ ಈ ಕರ್ತವ್ಯದ ಯಾವ ಅಂಶವನ್ನು ವಹಿಸಲು ಆಗಲಾರದೆಂಬುವದನ್ನು ನಿಮಗೆ ತಿಳಿಸತಕ್ಕ ಅವಶ್ಯಕವೇ ಇಲ್ಲವಷ್ಟೆ. ಇಂಥಾ ಸಭೆಯು ಅದಕ್ಕೆ ಯುಕ್ತವಾದ ನಿರ್ಬಂಧಗಳಿಗೆ ಒಳಪಟ್ಟೇ ಇರಬೇಕು. ಇದುವರೆಗೆ ನೀವು ಸಭೆಯಲ್ಲಿ ನಡಿಸಿದ ಜಿಜ್ಞಾಸಗಳನ್ನೆಲ್ಲಾ, ಮಿತಿಮೀರದೆಯೂ, ವಿವೇಕದೊಡನೆಯೂ, ಉಚಿತವಾದ

644

ಲೌಕಿಕಜ್ಞಾನದೊಡನೆಯೂ ನಡೆಸಿಕೊಂಡು ಬಂದಿರುವಿರೆಂದು ಇದುವರಿಗಿನ ನಡವಳಿಕೆಗಳಿಂದ ತಿಳಿಯಲು ಸಂತೋಷಪಡುತ್ತೇವೆ. ಈ ಸಭೆಯಿಂದುಂಟಾದ ಮುಖ್ಯಫಲವು ಜನರಿಗೂ ಸರ್ಕಾರದವರಿಗೂ ಒಂದೇ ಉದ್ದೇಶವೂ ಪ್ರಯೋಜನವೂ ಸಾಮಾನ್ಯವಾಗಿರುವುದೆಂಬ ಸಂಗತಿಯು ದೃಢವಾಗಿ ತಿಳಿಯಬಂದಿರುವುದು.

ನಮ್ಮ ಪ್ರಜೆಗಳು ತಮ್ಮ ಕೊರತೆಗಳನ್ನೂ ಆಶೋತ್ತರಗಳನ್ನೂ ಕಷ್ಟಗಳನ್ನೂ ತಿಳಿಯಪಡಿಸಿಕೊಳ್ಳುವುದಕ್ಕೆ ಸುಲಭವಾದ ಮಾರ್ಗವನ್ನು ಕಲ್ಪಿಸಿಕೊಡುವುದರಲ್ಲಿಯೂ, ನಮ್ಮ ಸರ್ಕಾರದವರು ಹಿಂದಿನವರ್ಷ ಮಾಡಿದ ಕಾರ್ಯಗಳನ್ನೂ ಮುಂದೆ ಮಾಡಲು ಉದ್ದೇಶಿಸಿರುವ ಕಾರ್ಯಗಳನ್ನೂ ತಿಳಿಪಡಿಸುವದಕ್ಕೆ ಅವಕಾಶವನ್ನು ಉಂಟುಮಾಡಿಕೊಡುವುದರಲ್ಲಿಯೂ, ಸರ್ಕಾರವೂ ಪ್ರಜೆಗಳೂ ಒಬ್ಬರಮನೋಗತವನ್ನೊಬ್ಬರು ಚೆನ್ನಾಗಿ ತಿಳಿದುಕೊಂಡು, ತನ್ಮೂಲಕ ಸರ್ಕಾರದ ಆಡಳಿತಗಳ ವಿಷಯವಾಗಿ ಎಲ್ಲಾ ವಿಧವಾದ ತಪ್ಪುತಿಳುವಳಿಕೆಗಳನ್ನೂ ಹೋಗಲಾಡಿಸಿಕೊಡುವುದರಲ್ಲಿಯೂ, ಈ ಸಭೆಯ ನಡವಳಿಕೆಯು ಸಹಾಯವನ್ನುಂಟುಮಾಡುವ ಪಕ್ಷದಲ್ಲಿ ಹೀಗೆ ಪ್ರತಿವರ್ಷವೂ ಸಭೆಸೇರುವುದು ನಮ್ಮ ಸರ್ಕಾರಕ್ಕೆ ನಿಜವಾಗಿಯೂ ಅಮೂಲ್ಯವಾದ ಉಪಾಂಗವಾಗಿ ನಮಗೆ ಅತ್ಯಂತಹರ್ಷಕ್ಕೆ ಕಾರಣವಾಗುವ ಪ್ರಜೆಗಳ ಸಂತುಷ್ಟಿಯನ್ನೂ ಕ್ಷೇಮವನ್ನೂ ಅಭಿವೃದ್ಧಿಪಡಿಸುವುದೆಂದು ನಾವು ದೃಢವಾಗಿ ನಂಬುತ್ತೇವೆ.

ಈ ಆಶಯಗಳನ್ನೂ ಉದ್ದೇಶಗಳನ್ನೂ ನೆರವೇರಿಸುತ್ತಿರುವವರೆಗೂ ಈ ಸಭೆಗೆ ನಾವು ಮನಃಪೂರ್ವಕವಾಗಿಯೂ ಸಹಾಯವನ್ನೂ ಪ್ರೋತ್ಸಾಹವನ್ನೂ ಕೊಡುವೆವೆಂದು ನೀವು ದೃಢವಾಗಿ ನಂಬಬಹುದು. ಈ ಸಭೆಗೆ ಸೇರುವುದು ಒಂದು ವಿಶೇಷವಾದ ಗೌರವವೆಂದು ಭಾವಿಸಲ್ಪಟ್ಟಿರುವುದಾಗಿ ತಿಳಿಯಬರುತ್ತದೆ. ಈ ಗೌರವವನ್ನು, ನಿಮ್ಮ ಮಿತಪ್ರವರ್ತನದಿಂದಲೂ ವಿವೇಕವಾದ ಸಲಹೆಗಳಿಂದಲೂ, ನೀವೂ ನಿಮ್ಮ ಅನಂತರ ಬರುವ ಸಭಿಕರೂ ವಿಶೇಷವಾಗಿ ಹೆಚ್ಚಿಸಿಕೊಳ್ಳುವಿರೆಂದು ನಂಬುತ್ತೇವೆ.

ಸಭಿಕರಿರಾ, ಇನ್ನು ನಮ್ಮ ದಿವಾನರು ಸರ್ ಕೃಷ್ಣಮೂರ್ತಿಗಳವರು ನಮ್ಮ ರಾಜ್ಯಭಾರದ ಪ್ರಥಮವರ್ಷದ ಆಡಳಿತಗಳನ್ನು ನಿಮಗೆ ತಿಳಿಸಿ, ಎಂದಿನಂತೆ ನಿಮ್ಮ ಸಭೆಯ ಅಗ್ರಾಸನವನ್ನು ವಹಿಸುವರು. ನಾವು ಮಾಡಿದ ಪ್ರಯತ್ನಗಳನ್ನೆಲ್ಲಾ ತಿರಸ್ಕರಿಸಿ ದುರದೃಷ್ಟವಶಾತ್ ಪ್ಲೇಗು ರೋಗವು ಇನ್ನೂ ಈ ಪಟ್ಟಣದಲ್ಲಿ ಹರಡಿಕೊಂಡಿದ್ದಾಗ್ಯೂ, ನೀವು ಈ ಕಾಲದಲ್ಲಿ ಇಲ್ಲಿಗೆ ಬಂದು, ನಿಮ್ಮ ಸ್ವಕ್ಷೇಮಚಿಂತನೆಗಿಂತ ಇದೇ ನಿಮಗೆ ಶ್ರೇಷ್ಠವಾದ ಕರ್ತವ್ಯವೆಂಬ ಭಾವವನ್ನು ನೀವು ವ್ಯಕ್ತಪಡಿಸಿರುವುದನ್ನು ನೋಡಿ ಸಂತೋಷಿಸುತ್ತೇವೆ. ಇಲ್ಲಿ ನೀವು ಸುಖವಾಗಿಯೂ ನಿರಪಾಯವಾಗಿಯೂ ಇರುವದಕ್ಕೋಸ್ಕರ ಮಾಡಿದ ಏರ್ಪಾಟುಗಳು ನಿಮಗೆ ತೃಪ್ತಿಕರವಾಗಿವೆಯೆಂದು ನಂಬಿದ್ದೇವೆ.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದಿವಾನ್‌ರವರು ಮಾಡಿದ ಉಪನ್ಯಾಸ.

1903ನೆಯ ಇಸವಿ ಅಕ್ಟೋಬರ ತಾರೀಖು 5ನೆಯ ಸೋಮವಾರ.

ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ್ದು.

ಶ್ರೀಮನ್ಮಹಾರಾಜರವರು, ಹೋದ ವರ್ಷ ತಾವು ರಾಜ್ಯಭಾರವನ್ನು ವಹಿಸಿದ ಆರು ದಿವಸಗಳಲ್ಲಿಯೆ ಎಂದರೆ ಆಗಸ್ಟು 14ನೆಯ ತಾರೀಖಿನಲ್ಲಿ—ತತ್ಕಾಲವಿಶೇಷಕ್ಕಾಗಿ ಸೇರಿದ ತಮ್ಮ ಮಂತ್ರಾಲೋಚನಾ ಸಭೆಯ ಅಗ್ರಾಸನಾಧಿಪತ್ಯವನ್ನು ವಹಿಸಿದ್ದ ಕಾಲದಲ್ಲಿ "ಮೈಸೂರು ಸಂಸ್ಥಾನದಲ್ಲಿ ನಾವು ಪುನಃ ಹೊತ್ತಿರುವದು ಹೊಸ ಏರ್ಪಾಡನ್ನು ಉಪಕ್ರಮಿಸಿದೇವೆ." ಎಂಬದಾಗಿ ಅಪ್ಪಣೆಕೊಡಿಸಿದರು. ರಾಜ್ಯಭಾರವನ್ನು ವಹಿಸಿದ ಮಹೋತ್ಸವ ನಡೆದ ದಿವಸ ಶ್ರೀವೈಸರಾಯರವರು ಇಲ್ಲಿಯ ಪೂರ್ವಸ್ಥಿತಿಯ ವಿಷಯವಾಗಿ ಪ್ರಸ್ತಾಪಿಸುವ ಕಾಲದಲ್ಲಿ, ನಮ್ಮ ಮಹಾರಾಜರವರ ವಂಶೀಯರೂ ಮತ್ತು ರಾಜಭಕ್ತರೂ ದೇಶಾಭಿಮಾನಿಗಳೂ ಆದ ಇಲ್ಲಿಯ ಮಂತ್ರಿಗಳೂ ಈ ಸಂಸ್ಥಾನವನ್ನು ತೃಪ್ತಿಕರವಾಗಿ ಪರಿಪಾಲಿಸುತ್ತ ಬಂದ ಅಂಶವನ್ನು ದೃಢೀಕರಿಸಿದರು. ನಮ್ಮ ಹಿಂದಿನ ಮಹಾರಾಜರು ತಮ್ಮ ಉತ್ತಮಗುಣಗಳಿಂದಲೂ ದೇಶಕ್ಕೆ ಹಿತಕರವಾದ ತಮ್ಮ ರಾಜ್ಯಭಾರದಿಂದಲೂ ಪ್ರಜೆಗಳ ಪ್ರೀತಿಗೂ ಕೃತಜ್ಞತೆಗೂ ಪಾತ್ರರಾಗಿದ್ದರು. ಅವರು ಸ್ವರ್ಗಸ್ಥರಾದ ನಂತರ, ಅವರ ಧರ್ಮಪತ್ನಿಗಳಾದ ಶ್ರೀಮನ್ಮಹಾರಾಣಿಯವರು ರೀಜಂಟರಾಗಿ ರಾಜ್ಯಭಾರವನ್ನು ಕೈಕೊಂಡು, ನಮ್ಮ ಮಹಾರಾಜರವರು ಪ್ರಾಪ್ತವಯಸ್ಕರಾಗುವವರೆಗೆ ರಾಜ್ಯವನ್ನು ಎಂಟುವರ್ಷಗಳಕಾಲ ಸರ್ವರೂ ಶ್ಲಾಘಿಸುವಂತೆ ಪರಿಪಾಲಿಸಿದರು. ಈರೀತಿಯಾಗಿ ಪ್ರಖ್ಯಾತವಾದ ಎರಡು ನಿದರ್ಶನಗಳಿರುವಲ್ಲಿ ನಮ್ಮ ಮಹಾರಾಜರವರು ತಮ್ಮ ಮಂತ್ರಾಲೋಚನ ಕೌನ್ಸಿಲ್ಲಿನಲ್ಲಿ ಪ್ರಥಮತಃಮಾಡಿದ ಉಪನ್ಯಾಸದಲ್ಲಿ ವಿಶೇಷವಾಗಿ ವಿನಯವನ್ನುತೋರಿಸಿ ತಮ್ಮ ರಾಜ್ಯಕಾರ್ಯನಿರ್ವಹಣ ಸಾಮರ್ಥ್ಯದಲ್ಲಿ ಸಂಕೋಚವನ್ನು ವ್ಯಕ್ತಪಡಿಸಿದ್ದು ಏನೂ ಆಶ್ಚರ್ಯವಲ್ಲ. ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿ ಈಗ ಒಂದು ವರ್ಷಕಾಲ ಕಳೆಯಿತು. ಈ ಕಾಲದಲ್ಲಿ ಅವರಲ್ಲಿ ಕಂಡುಬಂದ ಕಾರ್ಯನಿರ್ವಹಣಾಸಕ್ತಿಯನ್ನೂ ಏಕರೂಪವಾದ ವಾತ್ಸಲ್ಯವನ್ನೂ ನೋಡಿದರೆ ಈ ಸದ್ಗುಣಗಳು ಇವರ ಮಹನೀಯರಾದ ಮಾತಾಪಿತೃಗಳಲ್ಲಿ ಹೇಗೆ ನೆಲೆಗೊಂಡಿದ್ದವೋ ಹಾಗೆಯೇ ಇವರಲ್ಲಿಯೂ ಸಂಪೂರ್ಣವಾಗಿ ನೆಲೆಗೊಂಡಿವೆಯೆಂಬಂಶವನ್ನು, ಇವರ ಮುಖ್ಯ ಮಂತ್ರಿಯಾದಪ್ರಯುಕ್ತ, ನಾನು ಅನುಭವಪೂರ್ವಕವಾಗಿ ತಿಳಿಸಬಲ್ಲೆನು.

ರಾಜ್ಯಕ್ರಮ.—ಮಹಾರಾಜರವರು ಸ್ವತಃ ಅಪ್ಪಣೆ ಕೊಡಿಸಿದಂತೆ, 'ಹೊಸರಾಜ್ಯಭಾರಕ್ರಮವು ವಿಶೇಷ ಕಾಲವಿಳಂಬ ವಿಲ್ಲದೆ ತನ್ನ ಸ್ಥಿತಿಯನ್ನು ಕಾರ್ಯತಃ ಪ್ರಕಟಪಡಿಸಲೆಂಬ' ಉದ್ದೇಶದಿಂದಲೂ ಮತ್ತು 'ಸಾಧ್ಯವಾದಷ್ಟು ಕ್ಷಿಪ್ರದಲ್ಲಿಯೇ ದಿವಾನರವರು ಕೌನ್ಸಿಲರವರು ಇವರುಗಳನ್ನು ಅವರು ನಿರ್ವಹಿಸುವ ರಾಜ್ಯಕಾರ್ಯಗಳಲ್ಲಿ ಏಕಮುಖವಾಗಿ ಸೇರಿಸಿ ತಾವು ಪ್ರತ್ಯಕ್ಷವಾಗಿ ಪರಾಂಬರಿಸಬೇಕೆಂಬ'

ಉದ್ದೇಶದಿಂದಲೂ ಆಗ ಸಭೆ ಸೇರಿಸಿದರು. 1881 ರಲ್ಲಿ ಮೈಸೂರು ಸಂಸ್ಥಾನದ ರಾಜ್ಯಭಾರ ಕ್ರಮವನ್ನು ಪ್ರಥಮತಃ ಏರ್ಪಡಿಸಿದವರ ಉದ್ದೇಶಗಳು ಏನಾದರೂ ಆಗಿರಲಿ; ಹಿಂದಿನ ಮಹಾರಾಜರವರು ಸ್ವರ್ಗಸ್ಥರಾಗುವದಕ್ಕೆ ಮುಂಚೆ ಇದ್ದ ರಾಜ್ಯಭಾರಸ್ಥಿತಿಯು ಈರೀತಿಯಲ್ಲಿ ಇದ್ದುದಾಗಿ ಹಿಂದಿನ ದಿವಾನರು ಸರ್ ಕೆ. ಶೇಷಾದ್ರಿಐಯ್ಯರವರು ಹೇಳಿರುವರು; ಅದೇನೆಂದರೆ :—ರಾಜ್ಯಭಾರದ ಕಾರ್ಯನಿರ್ವಹಣವಿಷಯದಲ್ಲಿ ದಿವಾನರು ಮಹಾರಾಜರವರಿಗೆ ಜವಾಬ್ದಾರರಾಗಿರುವರು. 1881ನೆಯ ಜುಲೈ ತಿಂಗಳಲ್ಲಿ ಹುಟ್ಟಿದ ಸನಂದುಗಳಲ್ಲಿ ಕ್ಲಿಪ್ತಪಡಿಸಿದ ರಾಜ್ಯಭಾರಕ್ಕೆ ಸಂಬಂಧಪಟ್ಟ ಅತಿಶಯವಾದ ವಿಷಯಗಳನ್ನು ಕುರಿತು ಮಂತ್ರಾಲೋಚನೆಯನ್ನು ಹೇಳುವದರಲ್ಲಿ ದಿವಾನರವರೂ ಕೌನ್ಸಿಲರವರೂ ಒಟ್ಟಾಗಿ ಮಹಾರಾಜರವರಿಗೆ ಜವಾಬ್ದಾರರಾಗಿರುವರು. ದಿವಾನರವರು ಕೌನ್ಸಿಲರವರಿಗೆ ವಹಿಸಿರುವ ರಾಜ್ಯಭಾರಕಾರ್ಯಗಳನ್ನು ಕ್ರಮವಾಗಿ ನಿರ್ವಹಿಸುವ ವಿಷಯದಲ್ಲಿ ಕೌನ್ಸಿಲರವರು ದಿವಾನರವರಿಗೂ, ದಿವಾನರವರು ಮಹಾರಾಜರವರಿಗೂ, ಜವಾಬ್ದಾರರಾಗಿರುವರು.—ಎಂಬುದೇ.

1895ನೆಯ ವರ್ಷದಲ್ಲಿ ರೀಜನ್ಸಿರಾಜ್ಯಭಾರಕ್ಕೆ ಅಪ್ಪಣೆಕೊಡುವ ಕಾಲದಲ್ಲಿ ಇಂಡಿಯಾ ಗವರ್ನಮೆಂಟಿನವರು, ತಮ್ಮ ಉದ್ದೇಶಾನುಸಾರವಾಗಿ ಹಿಂದಿನ ಕೌನ್ಸಿಲರುಗಳು ಏಕೀಭಾವದಿಂದ ನಡಿಸತಕ್ಕ ಕಾರ್ಯಗಳನ್ನು ಸಮರ್ಪಕವಾಗಿ ನಡಿಸದೆ ಹೋದದ್ದನ್ನು ಪರ್ಯಾಲೋಚಿಸಿ, ಅಲ್ಲಿಂದ ಮುಂದೆ ರಾಜ್ಯಕಾರ್ಯ ನಿರ್ವಾಹವಿಷಯದಲ್ಲಿ ಸಭೆಯು ಕೇವಲ ಹೆಸರುಮಾತ್ರಕ್ಕೇ ಅಲ್ಲದೆ ವಾಸ್ತವವಾಗಿಯೂ ಭಾಗವನ್ನು ನಿರ್ವಹಿಸುವಂತೆ ಮಾಡುವದು ಅವಶ್ಯಕವೆಂದು ಭಾವಿಸಿ, ಅದಕ್ಕಾಗಿಯೇ ಮೂರುಮಂದಿ ಕೌನ್ಸಿಲರುಗಳನ್ನು ನಿಯಮಿಸಿ ಅವರು ಮಾಡತಕ್ಕ ಕೆಲಸಗಳನ್ನೂ ಗೊತ್ತುಮಾಡಿ ಅವರು ದಿವಾನರನ್ನು ಪ್ರಧಾನರನ್ನಾಗಿಟ್ಟುಕೊಂಡು ರಾಜ್ಯಕಾರ್ಯನಿರ್ವಾಹದಲ್ಲಿ ಭಾಗಿಗಳಾಗಿರಬೇಕೆಂದು ಅಪ್ಪಣೆಮಾಡಿದರು. ಈ ರಾಜ್ಯಭಾರದ ಏರ್ಪಾಡು ಶ್ರೀಮನ್ಮಹಾರಾಣಿಯವರು ರೀಜಂಟರಾಗಿದ್ದ 8 ವರ್ಷ ಕಾಲ ನಡೆಯಿತು. ಈ ರಾಜ್ಯಭಾರದ ಉಪಕ್ರಮದಿಂದಲೂ ನಾನು, ಕೆಲವು ಕಾಲ ದಿವಾನ್ ಸರ್. ಕೆ. ಶೇಷಾದ್ರಿಐಯ್ಯರವರ ಸಂಗಡ ಕೌನ್ಸಿಲರಾಗಿಯೂ, ಅವರನಂತರ ದಿವಾನ್ ಅಧಿಕಾರದಲ್ಲಿಯೂ, ರೀಜನ್ಸಿ ಕೌನ್ಸಲಿನ ಕಾರ್ಯದಲ್ಲಿ ಭಾಗಿಯಾಗಿದ್ದು ನೋಡಿದ್ದರಲ್ಲಿ ಆ ಏರ್ಪಾಡು ಪ್ರಾಯಶಃ ಉದ್ದೇಶವನ್ನು ಸಮರ್ಪಕವಾಗಿಯೇ ನೆರವೇರಿಸಿತೆಂದು ನಾನು ಅಭಿಪ್ರಾಯಪಡುತ್ತೇನೆ. ಆದರೂ ಅದು ತಾತ್ಕಾಲಿಕಮಾತ್ರವಾದ್ದಾಗಿತ್ತು. ಬಳಿಕ ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ಕೂಡಲೆ ನೂತನವಾದ ಈಗಿನ ರಾಜ್ಯಭಾರಕ್ರಮವುಪ್ರಾರಂಭವಾಯಿತು. ಈ ರಾಜ್ಯಭಾರದ ಕ್ರಮವನ್ನು ಏರ್ಪಡಿಸುವದರಲ್ಲಿ ನನ್ನ ಸಲಹೆಯೂ ವಿಶೇಷವಾಗಿ ಸೇರಿರುವದರಿಂದಲೂ, ಈ ಒಂದು ವರ್ಷದ ಅನುಭವದಿಂದ ನೋಡುವಲ್ಲಿಯೂ, ಈ ರಾಜ್ಯಭಾರಕ್ರಮವು ಮುಂದೆ ಸರಿಯಾಗಿ ನಡೆಯುವುದು ಎಂಬ ವಿಷಯವನ್ನು ಸೂಚಿಸುವ ಅನೇಕ ಉತ್ತಮವಾದ ಅಂಶಗಳು ಇದರಲ್ಲಿ ಕಂಡು ಬಂದಿವೆ ಎಂದು ನಿಸ್ಸಂದೇಹವಾಗಿ ಹೇಳಬಹುದು.

ಮುಖ್ಯವಾದ ವಿಷಯಗಳೆಲ್ಲಾ ಶ್ರೀಮನ್ಮಹಾರಾಜರವರಿಂದಲೇ ತೀರ್ಮಾನವಾಗತಕ್ಕವಾದ್ದರಿಂದ ಇದಕ್ಕೆ ವಿರೋಧವಿಲ್ಲದಂತೆಯೂ, ಕೌನ್ಸಿಲ್ಲಿನ ಪ್ರಯೋಜನಕ್ಕೆ ಕುಂದಕವಿಲ್ಲದಂತೆಯೂ, ಕೌನ್ಸಿಲರುಗಳಲ್ಲಿ ಕಾರ್ಯೋತ್ಸಾಹವನ್ನುಂಟುಮಾಡಿ ಅವರು ಸಹಕಾರಿಗಳಾಗಿರುವಂತೆ ಮಾಡುವದು ಈ ಹೊಸ ಏರ್ಪಾಡುಗಳ ಮುಖ್ಯೋದ್ದೇಶವಾಗಿತ್ತು. ಆದಕಾರಣ ಮಹಾರಾಜರವರು ರಾಜ್ಯವನ್ನು ವಹಿಸಿಕೊಂಡ ಬಳಿಕಲೂ, ಆ ಹಿಂದೆ ಇದ್ದ ಕೌನ್ಸಿಲನ್ನೇ ಇಟ್ಟುಕೊಳ್ಳುವದು ಸರಿಯಲ್ಲವಾದ್ದರಿಂದ, ಅದನ್ನು ಮಂತ್ರಾಲೋಚಕವಾಗಿ ಏರ್ಪಡಿಸುವದು ಅವಶ್ಯಕವಾಯಿತು. ಇದಕ್ಕಾಗಿ ಕೌನ್ಸಿಲರುಗಳ ಪರ್ಯಾಲೋಚನೆಗೆ ಬರತಕ್ಕವಿಷಯಗಳ ಸಂಖ್ಯೆಯನ್ನು ವಿಮರ್ಶೆಯಿಂದ ಹೆಚ್ಚಿಸಲಾಯಿತು. ಈಗ ರಾಜ್ಯದ ಆಡಳಿತದ ಎಲ್ಲ ಇಲಾಖೆಗಳಲ್ಲಿಯೂ ಕಾರ್ಯಗಳು ಸಮರ್ಪಕವಾಗಿ ನಡೆಯುವದಕ್ಕೆ ದಿವಾನರವರೇ ಮಹಾರಾಜರವರಿಗೆ ಜವಾಬ್ದಾರರಾದ ಅಧಿಕಾರಿಗಳಾಗಿರುತ್ತಾರೆ. ಮಹಾರಾಜರವರ ಬಳಿಗೆ ಹೋಗಿ ಬರುವ ಎಲ್ಲಾ ವಿಷಯಗಳೂ ಇವರ ಮೂಲಕವಾಗಿಯೆ ಹೋಗಿಬರಬೇಕು. ಆದರೂ ಕೌನ್ಸಿಲರುಗಳಿಗೆ ಆಯಾ ಇಲಾಖೆಗಳ ಆಡಳಿತಗಳ ಪೂರ್ವಾಪರ ತಿಳುವಳಿಕೆಯನ್ನೂ ಅವುಗಳಲ್ಲಿ ಆಸಕ್ತಿಯನ್ನೂ ಉಂಟುಮಾಡುವದಕ್ಕಾಗಿ, ಅವರಿಗೆ ಸರಕಾರದ ತೀರ್ಮಾನಕ್ಕೆ ಹೋಗಬೇಕಾದ ಆಯಾ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ಕೊಡುವಂತೆ ಅಧಿಕಾರವನ್ನೂ ಕೊಟ್ಟು, ಇಲಾಖೆಗಳು ಹಂಚಲ್ಪಟ್ಟಿವೆ.

ಮೇಲೆ ವಿವರಿಸಿದ ಈ ರಾಜ್ಯಕ್ರಮವು 1902ನೆಯ ಆಗಸ್ಟ್ 6ನೆಯ ತಾರೀಖಿನಿಂದ ನಡೆಯುತ್ತಾ ಇದೆ. ಈ ಪಕ್ಕದ ಪಟ್ಟಿಯು, ಇನ್ನೂ ತೀರ್ಮಾನವಾಗದ ವಿಷಯಗಳು ವಿನಾ, ಕಳೆದ ವರ್ಷದಲ್ಲಿಯೂ ರೀಜನ್ಸಿಯ ಕಡೆಯ ವರ್ಷದಲ್ಲಿಯೂ ನಡೆದ ಕೆಲಸಗಳನ್ನು ಹೋಲಿಸಿ ತೋರಿಸುತ್ತದೆ. ಮಹಾರಾಜರವರ ತೀರ್ಮಾನಕ್ಕೆ ಕಳುಹಿಸಿದ ವಿಷಯಗಳು 800ಕ್ಕಿಂತ ಹೆಚ್ಚಾಗಿದ್ದವು. ಮಹಾರಾಜರವರಿಂದ ತೀರ್ಮಾನವಾಗಿ ಬಂದ ವಿಷಯಗಳು ಅರ್ಜಿಗಳು ಸಹಿತವಾಗಿ 900ಕ್ಕಿಂತ ಹೆಚ್ಚಾಗಿದ್ದವು. ಕೇವಲ ಪರಿಮಾಣವನ್ನೇ ನೋಡಿದರೂಕೂಡ ಮಹಾರಾಜರವರು ರಾಜ್ಯಕಾರ್ಯದಲ್ಲಿ ಬಹಳ ಭಾಗವನ್ನು ನಿರ್ವಹಿಸಿರುವುದು ವ್ಯಕ್ತವಾಗುತ್ತದೆ. ಮಹಾರಾಜರವರು ತೀರ್ಮಾನ ಮಾಡಿದ ಬೇರೆ ಬೇರೆ ವಿಷಯಗಳು ಯಾವವೆಂದರೆ:— ರಾಜ್ಯದಲ್ಲಿ ನಡೆಯತಕ್ಕ ಅತಿಶಯವಾದ ಸಂಗತಿಗಳನ್ನೆಲ್ಲಾ, ಶ್ರೀಮನ್ಮಹಾರಾಜರವರಿಂದ ತೀರ್ಮಾನ ಹೊಂದಬೇಕಾದುದರಿಂದ, ನಾನಾ ವಿಧವಾದ ಅನೇಕ ಸಂಗತಿಗಳು ಅವರ ಪರಾಮರಿಕೆಗೆ ಹೋದವೆಂದು ಹೇಳಬೇಕಾದುದೇ ಇಲ್ಲ.

ವ್ಯವಸ್ಥೆಯಾದ ವಿಷಯಗಳ ಸಂಖ್ಯೆ.

		1901-02.	1902-03.
ರೆವಿನ್ಯು	..	2,941	2,652
ಜನರಲ್	..	2,802	3,529
ಪೊಲಿಟಿಕಲ್ ಪೆನ್ಷನ್	..	90	97
ವಿದ್ಯಾಭ್ಯಾಸ	..	344	467
ಜ್ಯುಡಿಷಿಯಲ್	...	1,735	1,740
ಲೆಜಿಸ್ಲೇಟಿವ್	..	76	53
ಲೋಕಲ್ ಫಂಡ್	..	550	445
ಲೋಕಲ್ ಬೋರ್ಡ್	...	1,283	765
ಮ್ಯುನಿಸಿಪಲ್ ಫಂಡ್	..	1,546	1,368
ಫೈನಾನ್ಷಲ್	...	1,037	1,322
ಅಬ್ಕಾರಿ	..	646	433
ಅರ್ಜಿ	...	3,063	2,780
ಜಂಗಲು	...	566	443
ಸೈನ್ಯ	...	81	173
ಮುಜರಾಯಿ	...	1,450	1,606
ಮರಮ್ಮತ್ (ಜನರಲ್)	...	800	963
,, ರೇಲ್ವೆ	..	307	320
ಜಿಯೊಲಾಜಿಕಲ್	..	343	431
ಒಟ್ಟು	..	19,660	19,584

ಡಿಲ್ಲಿ ದರ್ಬಾರ್.—ಶ್ರೀಮಚ್ಚಕ್ರವರ್ತಿಗಳವರು ಪ್ರಬಲವಾದ ಖಾಯಿಲೆಯಿಂದ ಗುಣಹೊಂದಿದ್ದೂ ನಮ್ಮ ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ಮಾರನೆಯ ದಿವಸ ಚಕ್ರವರ್ತಿಗಳವರಿಗೆ ಲಂಡನ್ ಪಟ್ಟಣದಲ್ಲಿ ಪಟ್ಟಾಭಿಷೇಕಮಹೋತ್ಸವವಾದ್ದೂ ಸರ್ವಸಾಮಾನ್ಯವಾಗಿ ಬ್ರಿಟಿಷ್ ರಾಷ್ಟ್ರಕ್ಕೇ ಆನಂದಕರವಾದ ವಿಷಯಗಳಾಗಿವೆ. ಈ ವರ್ಷದ ಜನವರಿ ಮೊದಲನೆಯ ತಾರೀಖಿನಲ್ಲಿ, ಮಹಾರಾಜರವರು, ಹಿಂದೂ ದೇಶದ ಚರಿತ್ರದಲ್ಲಿ ಸ್ಮರಣೀಯವಾದ ಡಿಲ್ಲಿಯ ಮಹಾದರ್ಬಾರಿನಲ್ಲಿ ಅನ್ವಯಿಸಿದ್ದು ತಮಗೆಲ್ಲಾ ವೇದ್ಯವಾಗಿಯೇ ಇದೆ. ಆಕಾಲದಲ್ಲಿ ಮೈಸೂರು ಸಂಸ್ಥಾನದ ಎಲ್ಲಾ ಡಿಸ್ಟ್ರಿಕ್ಟ್ ಹೆಡ್ಕ್ವಾರ್ಟರುಗಳಲ್ಲಿಯೂ ಇತರ ಸ್ಥಳಗಳಲ್ಲಿಯೂ ಅಲ್ಲಲ್ಲಿ ದರ್ಬಾರುಗಳನ್ನು ನಡಿಸಿ ಆ ಸಭೆಗಳಲ್ಲಿ ಚಕ್ರವರ್ತಿಯವರ ಸಿಂಹಾಸನಾರೋಹಣ ಶುಭಸಮಾಚಾರವನ್ನು ಪ್ರಕಟಿಸುವ ಇಂಗ್ಲಿಷ್ ಮತ್ತು ಕನ್ನಡಭಾಷೆಯ ಪತ್ರಿಕೆಗಳನ್ನು ಓದಲಾಯಿತು. ಆ ದಿವಸ, ವಿದ್ಯಾರ್ಥಿಗಳ ವಿನೋದಾರ್ಥವಾದ ಆಟಗಳೂ, ದೀಪೋತ್ಸವಗಳೂ, ಬಾಣಗಳೂ ಎಲ್ಲೆಲ್ಲಿಯೂ ನಡೆದವು. ಎಲ್ಲಾ ದೇವಸ್ಥಾನಗಳಲ್ಲಿಯೂ ಮಸೀತಿಗಳಲ್ಲಿಯೂ ಪೂಜೆಗಳು ನಡೆದವು. ಎಲ್ಲಾ ಜಾತಿಯ ದೀನಾನಾಥರಿಗೂ ಅನ್ನದಾನ ಮಾಡಲಾಯಿತು. ಆ ಮಹೋತ್ಸವದ ಗೌರವಾರ್ಥವಾಗಿ ಅನೇಕ ಬಂದಿವಾನರನ್ನು ಸೆರೆಯಿಂದ ಬಿಡುಗಡೆ ಮಾಡಲಾಯಿತು. ಆ ಕಾಲದಲ್ಲಿ ಈ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಪ್ರಜೆಗಳು ಉತ್ಸಾಹಪುರಸ್ಸರವಾಗಿ ಮಾಡಿದ ಸಹಾಯವೂ ತೋರಿಸಿದ ರಾಜಭಕ್ತಿಯೂ ವಿಶೇಷವಾಗಿ ಆಹ್ಲಾದಕರವಾಗಿದ್ದವು. ಮೈಸೂರು ರಾಷ್ಟ್ರಸಾಹಾಯಕ ಸೈನ್ಯದವರು, ಡಿಲ್ಲಿಯಲ್ಲಿ ಪಟ್ಟಾಭಿಷೇಕಮಹೋತ್ಸವ ಕಾಲದಲ್ಲಿ ನಡೆದ ಕವಾಯತಿನಲ್ಲಿ ಸೇರಿ, ತಮ್ಮ ಸುಲಕ್ಷಣವಾದ ಉಡುಪುಗಳಿಂದಲೂ ಶಿಪಾಯಿಗಳಿಗೆ ಉಚಿತವಾದ ತಮ್ಮ ಧೀರಸ್ವಭಾವದಿಂದಲೂ ಶ್ರಮಕರವಾದ ಸಂದರ್ಭಗಳಲ್ಲಿಯೂ ಕೂಡ ಶ್ಲಾಘ್ಯವಾಗಿದ್ದ ತಮ್ಮ ನಡತೆಯಿಂದಲೂ ಬ್ರಿಟಿಷ್ ಮಿಲಿಟರಿ ಇಲಾಖೆಯವರ ಶ್ಲಾಘನೆಗೆ ಪಾತ್ರರಾದರು. ಆಗ ಶ್ಲಾಘಾರೂಪವಾಗಿ ಬಂದ ಅನೇಕ ಹುಕುಂಗಳನ್ನು ಶ್ರೀಮನ್ಮಹಾರಾಜರವರ ಆಜ್ಞಾನುಸಾರವಾಗಿ ಹಿಂದೂಸ್ಥಾನಿಗೆ ತರ್ಜುಮೆ ಮಾಡಿ ಕವಾಯತ್ ಕಾಲದಲ್ಲಿ ಸೈನಿಕರಿಗೆ ಓದಿ ಹೇಳಲಾಯಿತು.

ಡಿಲ್ಲಿಯಲ್ಲಿ ಆ ಮಹೋತ್ಸವವನ್ನು ಕಣ್ಣಾರನೋಡುವ ಭಾಗ್ಯವನ್ನು ಪಡೆದಿದ್ದವರಿಗೆ ಆದರ್ಬಾರು ವಿಶೇಷಾರ್ಥಸೂಚಕವಾಗದೆ ಇರಲಿಲ್ಲ. ಯದ್ಯಪಿ ಆರೀತಿಯಾದ ಸಾರ್ವಭೌಮತ್ವದ ಸೂಚನೆಗಳು ಹಿಂದೆ ಈ ದೇಶದಲ್ಲಿ ನಡೆಯದಿರಲಿಲ್ಲ; ಆದರೂ ಪ್ರಕೃತದಲ್ಲಿ ನಡೆದ ಉತ್ಸವವು ಅದ್ವಿತೀಯವಾದದ್ದು;

ಪೂರ್ವದಲ್ಲಿ ಹಿಂದೂಗಳ ಉಚ್ಛ್ರಾಯಸ್ಥಿತಿಯಲ್ಲಿಯೂ ಮಹಮ್ಮದೀಯರ ಪ್ರಾಬಲ್ಯದಶೆಯಲ್ಲಿಯೂ ಈ ದೇಶದ ಬೇರೆಬೇರೆ ರಾಜರುಗಳ ಮೇಲೆ ಸಾರ್ವಭೌಮತ್ವವನ್ನು ಒಬ್ಬೊಬ್ಬ ಪ್ರಬಲನಾದ ಪುರುಷನು ತನ್ನ ಚಿತ್ತಸ್ಥೈರ್ಯದಿಂದ ಸ್ಥಾಪಿಸಿದ್ದುಂಟು. ಅಂಥಾವನ ಕಾಲಾನಂತರ ರಾಜ್ಯವು ಬಹುಮುಖವಾಗಿ ಒಡೆದು ಹೋಗಿ, ಪರಾಕ್ರಮಿಯಾದ ಒಬ್ಬ ರಾಜನು ಪುನಃ ಒಂದುಗೂಡಿ ಕಟ್ಟುವವರೆಗೂ ಅನಾಯಕವಾಗಿರುತ್ತಿತ್ತು. ಆದರೆ ಮನುಷ್ಯಬುಧ್ಯಾ ಆಲೋಚಿಸುವಲ್ಲಿ, ಈಗಿನ ಇಂಗ್ಲಿಷ್ ಸಾರ್ವಭೌಮತ್ವವು, ಅಂಥ ಶೋಚನೀಯವಾದ ಯಾವ ವಿಚ್ಛಿತ್ತಿಗಳೂ ಇಲ್ಲದೆ, ಚಿರಸ್ಥಾಯಿಯಾಗಿ ನೆಲಸುವುದಕ್ಕೆ ಬೇಕಾದ ಅಂಶಗಳುಳ್ಳದ್ದಾಗಿದೆ ಎಂದು ಕಾಣುತ್ತದೆ. ಪ್ರಬಲರಾದ ಇಂಗ್ಲಿಷರವರ ನಿರಂತರವಾದ ಪಾಲನೆಯನ್ನೂ ಹಿಂದೂ ದೇಶದೊಳಗೆ ಅಪ್ರತಿಹತವಾದ ಅವರ ಸಾರ್ವಭೌಮತ್ವವನ್ನೂ ಈ ದೇಶೀಯರು ತಮ್ಮ ಪ್ರಯೋಜನಕ್ಕೋಸ್ಕರವೇ ಉಂಟಾದ ವಿಷಯಗಳೆಂದು ಭಾವಿಸಬೇಕು. ಹೀಗೆ ಭಾವಿಸಿ ನೋಡಿದಲ್ಲಿ, ಡಿಲ್ಲಿಯಲ್ಲಿ ಸೇರಿದ ಮಹಾಜನಸಮುದಾಯವು ಹಿಂದೂದೇಶದ ಚರಿತ್ರದಲ್ಲಿ ಒಂದು ಮುಖ್ಯತಮವಾದ ವಿಷಯವಾಗಿದೆ. ಇದು ವಿಸ್ತಾರವಾದ ಈ ರಾಜ್ಯದ ಎಲ್ಲಾ ಭಾಗದ ರಾಜರುಗಳನ್ನೂ ಪ್ರಜೆಗಳನ್ನೂ ಮೈತ್ರೀಭಾವದಲ್ಲಿ ಒಂದುಗೂಡಿಸಿದ್ದು ಮಾತ್ರವೇ ಅಲ್ಲದೆ, ನಿರಪಾಯವಾದ ರಾಜ್ಯ ಕ್ಷೇಮಾಭಿವೃದ್ಧಿಗೆ ಈ ರೀತಿಯಾದ ಭರವಸೆಯಿರುವುದು ಎಷ್ಟೊಂದು ಪ್ರಯೋಜನಕರವೆಂಬಂಶವನ್ನೂ ಕೂಡ ಎಲ್ಲರ ಮನಸ್ಸಿನಲ್ಲಿಯೂ ಚೆನ್ನಾಗಿ ನಿಶ್ಚಿತವಾಗುವಂತೆಯೂ ಮಾಡಿತು.

ಪ್ರಜಾಸಂಖ್ಯೆ.—ಈ ಕಳೆದ ಹತ್ತು ವರ್ಷಗಳಲ್ಲಿ ಆದಿಭಾಗದಲ್ಲಿ ಕಾಲರಾಉಪದ್ರವದಿಂದಲೂ ಅಂತ್ಯಭಾಗದಲ್ಲಿ ಪ್ಲೇಗಿನ ಹಾವಳಿಯಿಂದಲೂ ಅನೇಕ ಮರಣಗಳು ಸಂಭವಿಸಿದಾಗ್ಯೂ ಕಳೆದ ವರ್ಷ ಪ್ರಕಟಿತವಾದ ಸೆನ್ಸಸ್ ರಿಪೋರ್ಟಿನಪ್ರಕಾರ ಪ್ರಜಾಸಂಖ್ಯೆಯು ಆದಿಯಲ್ಲಿ 48·4 ಲಕ್ಷವಿದ್ದುದ್ದು ಕೊನೆಗೆ 54·5 ಲಕ್ಷಕ್ಕೆ—ಎಂದರೆ ಸೇಕಡ 12½ ಯಷ್ಟು—ಏರಿತು. ಒಟ್ಟು ಜನಸಂಖ್ಯೆಯಲ್ಲಿ ಸೇಕಡ 5ರಂತೆ ಪರಸ್ಥಳದವರು ಎಂದರೆ ಪರಸ್ಥಳದಲ್ಲಿ ಹುಟ್ಟಿ ಇಲ್ಲಿಗೆ ಬಂದವರಾಗಿದ್ದರು. 1891ರಲ್ಲಿ ಈ ಸಂಸ್ಥಾನದ ಅನೇಕ ಭಾಗಗಳಲ್ಲಿದ್ದ ಇಂಥವರ ಸಂಖ್ಯೆಯು 166,688 ಇದ್ದದ್ದು, 1901ರಲ್ಲಿ 2,81,526ಕ್ಕೆ—ಎಂದರೆ ಸೇಕಡ 69ರಂತೆ—ಏರಿತು. ಹೀಗೆ ಪರಸ್ಥಳದಿಂದ ಬಂದವರಸಂಖ್ಯೆಯು ಹೆಚ್ಚಿದ್ದು ಇಲ್ಲಿಯ ಒಟ್ಟು ಪ್ರಜಾಸಂಖ್ಯೆಯು ಹೆಚ್ಚಿಗೆಯಲ್ಲಿ ಆರನೆಯ ಭಾಗದ ಹೆಚ್ಚಿಗೆ ಕಾರಣವಾಯಿತು. ಕೋಲಾರದ ಚಿನ್ನದಗಣಿಗಳು ಮತ್ತು ಮರಮ್ಮತ್ ಇಲಾಖೆಯ ಭಾರಿಕಾಂಗಾರಿಗಳು ಪರಸ್ಥಳದವರನ್ನು ಹೆಚ್ಚಾಗಿ ಇಲ್ಲಿಗೆ ಆಕರ್ಷಿಸುವುದಕ್ಕೆ ಕಾರಣವಾಗಿವೆ. ಇಲ್ಲಿಂದ ಪರಸ್ಥಳಗಳಿಗೆಹೋಗಿ ನೆಲಸಿದವರಸಂಖ್ಯೆಯು ಹಿಂದಿನ ಸೆನ್ಸಸ್ಸಿನ ಪ್ರಕಾರ 1,43,553 ಇದ್ದದ್ದು, ಈ ಸೆನ್ಸಸ್ಸಿನಲ್ಲಿ 132,342ಕ್ಕೆ ಇಳಿಯಿತೆಂದು,ದೇಶದ ಇತರಭಾಗಗಳ ಸೆನ್ಸಸ್ ಲೆಕ್ಕಗಳಿಂದ ತಿಳಿದುಬರುತ್ತದೆ. ಹತ್ತು ವರ್ಷ ವಯಸ್ಸಾಗದ ಹೆಣ್ಣುಮಕ್ಕಳಲ್ಲಿ ಮದುವೆಯಾದವರ ಸಂಖ್ಯೆಯೂ ಸಂಸಾರ ತಪ್ಪಿಹೋದವರ ಸಂಖ್ಯೆಯೂ 1891ರಲ್ಲಿದ್ದದ್ದಕ್ಕಿಂತ ಕಡಮೆಯಾಯಿತು—ಎಂದರೆ ಹತ್ತು ವರ್ಷ ವಯಸ್ಸಾಗದ ಹೆಣ್ಣುಮಕ್ಕಳಲ್ಲಿ ಮದುವೆಯಾದವರ ಸಂಖ್ಯೆಯು 1891ನೆಯ ವರ್ಷದ ಸೆನ್ಸಸ್ಸಿನಪ್ರಕಾರ 18,072 ಇದ್ದದ್ದು ಈ ಸೆನ್ಸಸ್ಸಿನಲ್ಲಿ 7,130ಕ್ಕೂ, ಸಂಸಾರತಪ್ಪಿದವರ ಸಂಖ್ಯೆಯು 257 ಇದ್ದದ್ದು 91ಕ್ಕೂ ಇಳಿದವು. ಹತ್ತು ವರ್ಷ ವಯಸ್ಸಾಗದ ಗಂಡು ಹುಡುಗರಲ್ಲಿ ಮದುವೆಯಾದವರ ಸಂಖ್ಯೆಯು 1891ರಲ್ಲಿ 705 ಇದ್ದದ್ದು 1901ರಲ್ಲಿ 235ಕ್ಕೆ ಇಳಿಯಿತು. ಹುಚ್ಚರು, ಮೂಗರು, ಹುಟ್ಟುಕುರುಡರು, ಕುಷ್ಠ ಜಾಡ್ಯದವರು, ಇವರ ಸಂಖ್ಯೆಯು 1891ರಲ್ಲಿದ್ದದ್ದಕ್ಕಿಂತ ಕಡಿಮೆಯಾಯಿತು, ಎಂದರೆ ಕುರುಡರಲ್ಲಿ ಸೇಕಡ 23 ರಂತೆಯೂ ಕುಷ್ಠರೋಗಿಗಳಲ್ಲಿ ಸೇಕಡ 18ರಂತೆಯೂ ಕಿವುಡ ಮೂಗರಲ್ಲಿ ಸೇಕಡ 11ರಂತೆಯೂ ಹುಚ್ಚರಲ್ಲಿ ಸೇಕಡ 4ರಂತೆಯೂ ಕಡಿಮೆಯಾಯಿತು. ಬೇರೆ ಬೇರೆ ಪಂಗಡದವರು ಮಾತನಾಡುತ್ತಿದ್ದ ಭಾಷೆಗಳ ಸಂಖ್ಯೆಯು ಹಿಂದಿನ ಸೆನ್ಸಸ್ಸಿನಪ್ರಕಾರ 51 ಇದ್ದದ್ದು, ಈಗಿನ ಸೆನ್ಸಸ್ಪ್ರಕಾರ 56ಕ್ಕೆ ಹೆಚ್ಚಿದ್ದಾಗಿ ತಿಳಿಯಬರುತ್ತದೆ. ವಿದ್ಯಾಭ್ಯಾಸದ ವಿಷಯದಲ್ಲಿ ಯಾವದಾದರೂ ಒಂದು ಭಾಷೆಯನ್ನು ಓದುವದಕ್ಕೂ ಬರೆಯುವದಕ್ಕೂ ಬಂದರೆ ಸಾಕೆಂದು ಪರಿಗಣಿಸುವ ಸೆನ್ಸಸ್ಸಿನ ವಿದ್ಯಾಭ್ಯಾಸದ ಪರಿಮಾಣವೇ ಬಹಳ ಮಿತವಾದದ್ದು. ಆ ರೀತಿಯಲ್ಲಿ ನೋಡಿದಾಗ್ಗೂ ಕೂಡ, ಓದು ಬರಹ ತಿಳಿದವವರ ಸಂಖ್ಯೆಯು, ಒಟ್ಟು ಪ್ರಜಾಸಂಖ್ಯೆಯಲ್ಲಿ ಸೇಕಡ ಖರಷ್ಟೂ ಕೂಡ ಇರಲಿಲ್ಲ—ಎಂದರೆ ಗಂಡಸರಲ್ಲಿ ಸೇಕಡ 8·8ರಂತೆಯೂ ಹೆಂಗಸರಲ್ಲಿ ಸೇಕಡ 0.6ರಂತೆಯೂ ಇತ್ತು.

ಋತುಧರ್ಮ ಮತ್ತು ಪ್ರಜಾರೋಗ್ಯ.—ಶ್ರೀಮನ್ಮಹಾರಾಜರವರ ಆಳ್ವಿಕೆಯ ಈ ಪ್ರಥಮವರ್ಷದಲ್ಲಿ ಮಳೆಯು ಸಮೃದ್ಧಿಯಾಗಿ ಬಿತ್ತು, ಋತುಗಳು ಸೌಮ್ಯವಾಗಿದ್ದವು. ಫಸಲುಗಳು ಚೆನ್ನಾಗಿ ಆದವು, ವ್ಯವಸಾಯದ ಸ್ಥಿತಿಯು ಒಟ್ಟು ಬಹಳ ತೃಪ್ತಿಕರವಾಗಿತ್ತು, ಆಹಾರಕ್ಕೆ ಉಪಯೋಗಿಸುವ ದವಸಧಾನ್ಯಗಳೆಲ್ಲಾ ಹಿಂದಿನ ವರ್ಷಕ್ಕಿಂತ ಅಗ್ಗವಾಗಿದ್ದವು.

ಆದಾಗ್ಯೂ ಪ್ರಜೆಗಳ ಆರೋಗ್ಯಾಭಿವೃದ್ಧಿಯ ವಿಷಯದಲ್ಲಿ ಒಟ್ಟು ಅನೇಕ ಕೊರತೆಗಳಿದ್ದವು. ಕಳೆದ ವರ್ಷ ಕಾಲರಾತಗುಲಿದವರ ಸಂಖ್ಯೆಯು 202ಮಾತ್ರವೇ ಆದ್ದರಿಂದಲೂ ಹಿಂದಿನವರ್ಷ ಅದಕ್ಕಿಂತಲೂ ಹನ್ನೆರಡರಷ್ಟು ಹೆಚ್ಚಾಗಿದ್ದದ್ದರಿಂದಲೂ ಕಳೆದ ವರ್ಷ ಕಾಲರಾ ಜಾಡ್ಯವು ಇರಲೇ ಇಲ್ಲವೆಂದು ಹೇಳಬಹುದು. ಸಿಡುಬು ತಗುಲಿದವರ ಸಂಖ್ಯೆಯೂ ಬಹಳ ಮಟ್ಟಿಗೆ ಕಡಿಮೆಯಾಯಿತು—ಎಂದರೆ ಹಿಂದಿನ ವರ್ಷ 7,032 ಇದ್ದದ್ದು ಕಳೆದ ವರ್ಷ 4,213 ಕ್ಕೆ ಇಳಿಯಿತು. ಜ್ವರ ಪ್ಲೇಗು ಈ ರೋಗ ವಿಷಯದಲ್ಲಿ ಹೀಗೆ ಹೇಳಲಾಗಲಿಲ್ಲವಲ್ಲಾ ಎಂದು ವಿಷಾದಿಸುತ್ತೇನೆ. ಜ್ವರತಗುಲಿದವರ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ಕಳೆದ ವರ್ಷ 3,000 ಹೆಚ್ಚಾಯಿತು ; ಈ ವ್ಯಾಧಿಯಿಂದ 47,047 ಮಂದಿ ಮೃತಪಟ್ಟರು. ಪ್ಲೇಗು ತಗುಲಿದವರ ಸಂಖ್ಯೆಯೂ ಪ್ಲೇಗಿನಿಂದ ಸತ್ತವರ ಸಂಖ್ಯೆಯೂ ಹಿಂದಿನ ವರ್ಷಕ್ಕಿಂತ ಹೆಚ್ಚಾಗಿದ್ದವು. ಕಳೆದ ವರ್ಷ ಸಂಸ್ಥಾನದಲ್ಲಿ ಜಾಡ್ಯತಗುಲಿದವರ ಒಟ್ಟು ಸಂಖ್ಯೆ 35,480 ಆಗಿಯೂ ಮರಣಸಂಖ್ಯೆ 6,155 ಆಗಿಯೂ ಇದ್ದವು. ತುಮಕೂರು ಚಿತ್ರದುರ್ಗದ ಡಿಸ್ಟ್ರಿಕ್ಟುಗಳುವಿನಾ ಉಳಿದ ಎಲ್ಲಾ ಭಾಗಗಳಲ್ಲಿಯೂ ಕಳೆದ ವರ್ಷ ಈ ಜಾಡ್ಯವು ಮೊದಲಿಗಿಂತ ಹೆಚ್ಚಿತ್ತು.

ಈ ಜಾಡ್ಯವನ್ನು ಪರಿಹರಿಸುವದಕ್ಕಾಗಿ ಗುಡಿಸಲು ಹಾಕುವ ಸಾಮಾನುಗಳನ್ನು ಬಡವರಿಗೆ ಧರ್ಮಾರ್ಥವಾಗಿಯೂ ಇತರರಿಗೆ ಅಸಲು ಖರೀದಿಗೂ ಕೊಟ್ಟು ಸರ್ಕಾರ ನೌಕರರು ರೋಗಪೀಡಿತವಾದ ಊರಹೊರಗೆ ಗುಡಿಸಲುಗಳನ್ನು ಕಟ್ಟಿಕೊಳ್ಳುವಂತೆ ಅವರಿಗೆ ಅಲ್ಪಸ್ವಲ್ಪ ಮೊಬಲಗನ್ನು ಮುಂಗಡವಾಗಿಕೊಟ್ಟು, ಸಾಧ್ಯವಾದಮಟ್ಟಿಗೆ ಜನಗಳಿಗೆ ಸಹಾಯಮಾಡುತ್ತಾ ಬರಲಾಯಿತು. ಹೊಸರಸ್ತೆಗಳನ್ನು ಹಾಕುವುದು, ಸೀನೀರು ಬಾವಿಗಳನ್ನು ತೆಗಿಸುವುದು, ಚರಂಡಿ ಕಟ್ಟಿಸುವುದು ಇವೇಮೊದಲಾದ ಅನೇಕ ಆರೋಗ್ಯಾಭಿವರ್ಧಕ ಕಾರ್ಯಗಳನ್ನು ಕೂಡ ಮಾಡಿಸಲಾಯಿತು. ರಸಾಯನ ಪದಾರ್ಥಗಳ ಪ್ರಯೋಗದಿಂದಲೂ ತೇವವನ್ನು ಹೋಗಲಾಡಿಸುವದರಿಂದಲೂ (Dessiccation) ರೋಗದ ಸೋಂಕನ್ನು ಮುರಿಯುವ ಪ್ರಯತ್ನ ಮಾಡಿತು. ಗೋರೀಬಿದನೂರು ತಾಲ್ಲೂಕಿನಲ್ಲಿ ಚರಕನಹಳ್ಳಿ ಯೆಂಬಗ್ರಾಮದಲ್ಲಿ ಮನೆಗಳು ಅನಾರೋಗ್ಯಕರವಾಗಿಯೂ ಒತ್ತೊತ್ತಾಗಿಯೂ ಇದ್ದುದರಿಂದ ಆ ಗ್ರಾಮವನ್ನು ಸರಿಯಾದ ಸ್ಥಳದಲ್ಲಿ ಹೊಸದಾಗಿ ಕಟ್ಟಿಸಲಾಯಿತು. ಪ್ಲೇಗುರೋಗದ ನಿವಾರಣೆಗಾಗಿ ಇದುವರೆಗೂ ಒಟ್ಟು 18 ಲಕ್ಷಕ್ಕೆ ಮೀರಿ ಖರ್ಚುಮಾಡಲಾಗಿದೆ.

ಮೈಸೂರುಪಟ್ಟಣವು ಸಂಸ್ಥಾನದ ರಾಜಧಾನಿಯಾದಕಾರಣ ಅದರ ಪ್ರಾಮುಖ್ಯತೆಯನ್ನು ಪರ್ಯಾಲೋಚಿಸಿ, ಮಹಾರಾಜರವರು, ಊರಿನಲ್ಲಿ ಜನಗಳು ಅತಿನಿಬಿಡವಾಗಿ ವಾಸಮಾಡತಕ್ಕಂತೆ ಕಟ್ಟುಮಾಡಿ ಕಟ್ಟಿಚರಂಡಿಯೇ ಮೊದಲಾದ ಅನಾರೋಗ್ಯಕರವಾದ ದೋಷಗಳ ನಿವಾರಣೆಗೆ ಬೇಕಾದ ಸಂಪೂರ್ಣವಾದ ಏರ್ಪಾಡುಗಳನ್ನು ಮಾಡುವುದಕ್ಕಾಗಿ ಒಂದು ಸಂಘವನ್ನು ನಿಯಮಿಸಿ, ಅವರ ಸಹಾಯಕ್ಕೆ ಒಬ್ಬ ಅಸಿಸ್ಟೆಂಟ್ ಇಂಜನಿಯರನ್ನೂ ಇವರ ಕೈಕೆಳಗೆ ಸರ್ವೆಯರ್ ಮೊದಲಾದವರನ್ನೂ ಇಡುವಂತೆ ಅಪ್ಪಣೆ ದಯಪಾಲಿಸಿದರು. ಈ ಕಮಿಟಿಯವರು ತಮ್ಮ ಕೆಲಸವನ್ನು ಪೂರ್ತಿಮಾಡಿದ್ದಾರೆ. ಅವರ ಪ್ರಾಥಮಿಕಸಲಹೆಗಳನ್ನು ಕೂಡಲೆ ಜಾರಿಗೆ ತರುವಂತೆ ಉದ್ದೇಶಿಸಿದೆ. ಅವು ಯಾವವೆಂದರೆ—(1) ಅತಿನಿಬಿಡವಾದ ಭಾಗಗಳಲ್ಲಿ ಮನೆಗಳನ್ನು ತೆಗೆದುಹಾಕಿ ಬಿಡುವಾಗಿ ಮಾಡುವುದು. (2) ಅನಾರೋಗ್ಯಕರವಾದ ಕಟ್ಟಡಗಳನ್ನು ತೆಗೆದುಹಾಕುವುದು. (3) ಇಂಥ ಭಾಗಗಳಿಂದ ಹೊರಟುಹೋದ ಹೆಚ್ಚು ಜನರ ನಿವಾಸಕ್ಕಾಗಿ ಹೊಸಬಡಾವಣೆಗಳನ್ನು ಮಾಡಿಸುವುದು. (4) ಚರಂಡಿಮೊದಲಾದವುಗಳನ್ನು ಕಟ್ಟಿಸುವುದು, ಇವೇ. ಈ ಕಾರ್ಯಗಳನ್ನು ನಡಿಸುವದಕ್ಕಾಗಿ ಸರ್ಕಾರದವರು 1903–4ನೆಯ ವರ್ಷದ ಖರ್ಚಿಗೆ 3 ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದಾರೆ. ಬೆಂಗಳೂರಿನ ಅಭಿವೃದ್ಧಿಗಾಗಿ 1,07,500 ರೂಪಾಯಿಯ ಭಾರಿಮೊಬಲಗನ್ನು ಮುಂಜೂರ್ಮಾಡಿದಾರೆ. ರೋಗ ತಗುಲಿದ ಇತರ ಸ್ಥಳಗಳಲ್ಲಿಯೂ ಆರೋಗ್ಯಾಭಿವೃದ್ಧಿಗಾಗಿ ಮಿತವಾದ ಅನೇಕ ಏರ್ಪಾಡುಗಳನ್ನು ಮಾಡುತ್ತಾ ಇದೆ. ಬರುವ ವರ್ಷದಲ್ಲಿ ಈ ಘೋರವಾದ ಜಾಡ್ಯವು ಬಹಳಮಟ್ಟಿಗೆ ಕಡಿಮೆಯಾಗಲೆಂದು ಹಾರೈಸುತ್ತೇವೆ.

ಆದಾಯವ್ಯಯ.—ರೀಜನ್ಸಿಕಾಲದ ಲೆಕ್ಕಗಳನ್ನೆಲ್ಲಾ ಮ|| ಕೀರ್ನಾಂಡರವರು ಪರೀಕ್ಷಿಸಿ ಮುಗಿಸಿದ್ದೇ ಈ ವರ್ಷ ನಡೆದ ಮುಖ್ಯವಾದ ಕೆಲಸವಾಗಿದೆ. ಅವರ ರಿಪೋರ್ಟು, ಸರ್ಕಾರದ 1903ನೆಯ ಫೆಬ್ರವರಿ 7ನೆಯ ತಾರೀಖಿನ ಪ್ರೊಸೀಡಿಂಗ್ಸ್ ನಂಬರು Fl. 1150-1192—18ರಲ್ಲಿ ರಿವ್ಯು ಆಗಿದೆ. ಅವರ ರಿಪೋರ್ಟನ್ನನುಸರಿಸಿ, ಹಿಂದೆ ಕ್ಲಿಪ್ತವಾದ ನಿಯಮಗಳಿಗೆ ಒಳಪಡದಿದ್ದ ಈ ಬಾಬಿಗೆ ಸೇರಿದ ಅನೇಕ ವಿಷಯಗಳನ್ನು ಕ್ರಮವಾಗಿಯೂ ಏತದುದ್ದೇಶವಾಗಿ ನಿಯಮಿತವಾದ ವಿಧಿಗನುಸಾರವಾಗಿಯೂ ವ್ಯವಸ್ಥೆ ಮಾಡುವಂತೆ ಹುಕುಂ ಮಾಡಲಾಯಿತು. ಹೊಗದಿಯ ಮೊಬಲಗು, ಸಾಧಾರಣ ವ್ಯಯ, ಕಾವೇರೀ ವೈದ್ಯುತಶಕ್ತಿಸಾಹೋಪಾಯ, ಮತ್ತು ಇತರವಿಷಯಗಳು ಇವುಗಳಿಗಾಗಿ ವಿಶೇಷವಾಗಿ ಖರ್ಚು ಹೆಚ್ಚಾದರೂ ಕೂಡ

1894—95 ನೆಯ ವರ್ಷದಿಂದ ಈ ಸಂಸ್ಥಾನದ ಸುವರ್ಣಾದಾಯವು ಉತ್ತಮಸ್ಥಿತಿಯಲ್ಲಿರುವದಾಗಿ ಮಿ॥ ಕೀರ್ನಾಂಡರವರು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಖರ್ಚು ಹೆಚ್ಚಿದ್ದರಿಂದ ಖಜಾನೆಯಲ್ಲಿದ್ದ ನಗದೂ ಸರ್ಕಾರಿ ಪತ್ರಗಳೂ ಕಡಿಮೆಯಾಗಿ, 1,13,22,723 ರೂಪಾಯಿ ಉಳಿದಿದ್ದವು. ಈ ಮೊಬಲಗಿನಲ್ಲಿ ಸರ್ಕಾರದಿಂದ ಪಾವತಿಯಾಗತಕ್ಕ ಸೇವಿಂಗ್ಸ್ ಬ್ಯಾಂಕ್‌ ಠೇವಣಿ ಸುಮಾರು 60 ಲಕ್ಷ ರೂಪಾಯೂ, ಸರ್ಕಾರಿ ಭೀಮಾ ಫಂಡ್ 8 ಲಕ್ಷ ರೂಪಾಯೂ, ಸಾವಕಾರಿ ಧರ್ಮಫಂಡ್ 3,26,600 ರೂಪಾಯೂ ಸೇರಿವೆ.

ಈ ವರ್ಷದ ಆದಾಯ ವ್ಯಯಗಳು, ಮೊದಲು ಮಾಡಿದ್ದ ಅಂದಾಜಿನ ಆದಾಯವ್ಯಯದ ಪಟ್ಟಿಗೆ (Budget) ಬಹಳಮಟ್ಟಿಗೆ ಸರಿಹೋಲುತ್ತವೆ ಎಂದು ತಿಳಿಸಲು ಸಂತೋಷವಾಗಿದೆ. ಎಲ್ಲಾ ಬಾಬುಗಳಿಂದಲೂ ಆದ ಒಟ್ಟು ಸುವರ್ಣಾದಾಯವು 2,07,24,127 ರೂಪಾಯಿ, ಎಂದರೆ ಆದಾಯವ್ಯಯದ ಅಂದಾಜು ಪಟ್ಟಿಯಲ್ಲಿ ಕಾಣಿಸಿದ್ದಕ್ಕಿಂತ 57,127 ರೂಪಾಯಿ ಮಾತ್ರ ಹೆಚ್ಚಾಗಿತ್ತು. ಒಟ್ಟು ವ್ಯಯವು 2,01,09,277 ರೂಪಾಯಿ ಅಂದಾಜು ಪಟ್ಟಿಯಲ್ಲಿ ಕಾಣಿಸಿದ್ದದ್ದು 2,01,00,000 ರೂಪಾಯಿ.

ಸಂಸ್ಥಾನದ ಸಾಧಾರಣಾದಾಯವು 1,72,48,412 ರೂಪಾಯಿ, ಸರ್ಕಾರಿ ಠೇವಣಾತಿಯಿಂದ ಬಂದ ಬಡ್ಡಿ 2,52,231 ರೂಪಾಯಿ, ರೈಲ್ವೆಯಿಂದ ಆದದ್ದು 5,27,237 ರೂಪಾಯಿ, ಕಾವೇರೀ ಪ್ರಪಾತದ ವೈದ್ಯುತಶಕ್ತಿಯ ಮಾರಾಟದಿಂದ ಉತ್ಪತ್ತಿಯಾದ್ದು 11,85,148 ರೂಪಾಯಿ, ಚಿನ್ನದಗಣಿಗಳಿಂದ ಹುಟ್ಟುವಳಿಯಾದ್ದು 15,32,099 ರೂಪಾಯಿ.

ಚಿನ್ನದ ಗಣಿಗಳಿಗಾಗಿ ಖರ್ಚಾದ ಚಿಲ್ಲರೆ ಮೊಬಲಗು 13,245 ರೂಪಾಯೂ ಸೇರಿ ಸಾಧಾರಣವ್ಯಯವು 1,87,72,002, ರೂಪಾಯಿ ರೈಲ್ವೆಯಲ್ಲಿ ಆದ ಖರ್ಚು 5,69,641 ರೂಪಾಯಿ, ಕಾವೇರೀಪ್ರಪಾತದ ವಿದ್ಯುಚ್ಛಕ್ತಿಯ ಸಿಬ್ಬಂದಿಖರ್ಚು 7,67,634 ರೂಪಾಯಿ.

ಒಟ್ಟು ಫಲಿತಾಂಶವೇನೆಂದರೆ—ಹಿಂದಿನ ವರ್ಷದಲ್ಲಿ ಆದಾಯಕ್ಕಿಂತ ವ್ಯಯವು 22,65,249 ರೂಪಾಯಿ ಹೆಚ್ಚಾಗಿದ್ದದ್ದು (ಆದಾಯಗಳು 1,91,95,773 ರೂಪಾಯಿ, ವ್ಯಯ 2,14,61,022 ರೂ.) ಈ ವರ್ಷ ಜುಖೈ ಗುರ್ತಿಯಲ್ಲಿ ಖರ್ಚುಕಳೆದು 6,14,850 ರೂಪಾಯಿಯಷ್ಟು ಶಿಲ್ಕು ಉಳಿಯಿತು.

ತಮಗೆ ಕೊಟ್ಟಿರುವ ಪಟ್ಟಿಯನ್ನು ನೋಡಿದರೆ, ಕಳೆದ ವರ್ಷದಲ್ಲಿಯೂ ಹಿಂದಿನ ವರ್ಷದಲ್ಲಿಯೂ ಬೇರೆಬೇರೆ ಬಾಬುಗಳಲ್ಲಿ ಆದ ಆದಾಯವ್ಯಯಗಳ ವ್ಯತ್ಯಾಸವು ವ್ಯಕ್ತವಾಗುತ್ತದೆ. ಕಳೆದ ವರ್ಷ ಜಮೀನು ಕಂದಾಯ, ಆಬ್ಕಾರಿ, ಮತ್ತು ಜಂಗಲು ಈ ಬಾಬುಗಳಲ್ಲಿ ಹೆಚ್ಚು ಉತ್ಪತ್ತಿಯಾಗಿದೆ. ಜಮೀನು ಕಂದಾಯವನ್ನೂ ಚಿಲ್ಲರೆ ಇನಾಮುಗಳ ಮೇಲಿನ ಕ್ವಿಟ್‌ರೆಂಟನ್ನೂ ಚೆನ್ನಾಗಿ ವಸೂಲ್ಮಾಡಿದ್ದರಿಂದಲೂ, ಸಾಗುವಳಿಯನ್ನು ಹೆಚ್ಚಿಸಿದ್ದರಿಂದಲೂ, ಜಮೀನು ಬಾಬಿನಲ್ಲಿ ಹೆಚ್ಚು ಉತ್ಪತ್ತಿಯಾಯಿತು. ಸಾರಾಯದ ಕುಡಿತವು ಹೆಚ್ಚಾದ್ದರಿಂದಲೂ, ಸೇಂದಿ ಅಂಗಡಿಗಳ ಬಾಡಿಗೆ ಹೆಚ್ಚಿದ್ದರಿಂದಲೂ, ಈ ದೇಶದ ಬಿಯರಿನಮೇಲಿನ ತೆರಿಗೆಯಿಂದಲೂ, ಆಬ್ಕಾರಿ ಬಾಬಿನಲ್ಲಿ ಸುಮಾರು 2 ಲಕ್ಷ ರೂಪಾಯಿ ಹೆಚ್ಚು ಉತ್ಪತ್ತಿಯಾಯಿತು. ಜಮೀನು ಕಂದಾಯ, ಆಬ್ಕಾರಿ ಈ ಎರಡು ಬಾಬುಗಳಲ್ಲಿ ಆದ ಗತವರ್ಷದ ಉತ್ಪತ್ತಿಯು ಹಿಂದಿನ ಎಲ್ಲಾ ವರ್ಷಗಳ ಉತ್ಪತ್ತಿಗಿಂತಲೂ ಹೆಚ್ಚಾಗಿತ್ತು. ಜಂಗಲ್‌ಬಾಬಿನಲ್ಲಿ ಸುಮಾರು $\frac{3}{4}$ ಲಕ್ಷದಷ್ಟು ನಿವ್ವಳಹುಟ್ಟುವಳಿ ಅಧಿಕವಾಯಿತು. ಈ ಪೈಕಿ ರಾಜ್ಯಭಾರವಹನ ಕಾಲದಲ್ಲಿ ನಡೆದ ಖೆಡ್ಡಾವಿನಲ್ಲಿ ಹಿಡಿಯಲ್ಪಟ್ಟ ಆನೆಗಳ ಮಾರಾಟದಿಂದ ಬಂದ 27,504 ರೂಪಾಯೂ ಒಂದು ವಿಶೇಷವಾದ ಬಾಬಾಗಿದೆ. ಗಂಧದಮರದ ಬಾಬಿನಲ್ಲಿ ಗಿರಾಕಿ ಕಡಿಮೆಯಾದ್ದರಿಂದ ಹುಟ್ಟುವಳಿ ಕಡಿಮೆಯಾದಾಗ್ಯೂ ಇತರ ಬಾಬುಗಳಿಂದ 85,000 ರೂಪಾಯಿನಷ್ಟು ಹೆಚ್ಚು ಹುಟ್ಟುವಳಿಯಾಯಿತು. ಚಿನ್ನದ ಗಣಿಯಲ್ಲಿ ಹಿಂದಿನ ವರ್ಷಕ್ಕಿಂತ ಗತವರ್ಷದಲ್ಲಿ 73 ಲಕ್ಷ ರೂಪಾಯಿ ಬೆಲೆಬಾಳುವ ಚಿನ್ನವು ಹೆಚ್ಚಾಗಿ ಉತ್ಪತ್ತಿಯಾಗಿ ಸುಮಾರು 4 ಲಕ್ಷ ರೂಪಾಯಿನಷ್ಟು ಹೆಚ್ಚು ರಾಜಾಯವು ಬಂದದ್ದರಿಂದ ಈ ಬಾಬಿನಲ್ಲಿ ಹಿಂದಿನ ವರ್ಷಕ್ಕಿಂತ ಕಡಿಮೆಯಾಯಿತೆಂದು ತೋರಿಸಿರುವ 74,403 ರೂಪಾಯಿಯು ನಿಜವಾದ ಕಮ್ಮಿಯೆಂದು ಹೇಳಲಾಗದು. ವರ್ಷಾಂತ್ಯದೊಳಗಾಗಿ ಹನ್ನೊಂದು ಗಣಿಗಳ ಪೈಕಿ ನಾಲ್ಕು ಗಣಿಗಳ ಲೆಕ್ಕವು ಬಾರದೆ ಇದ್ದದ್ದರಿಂದ ಮೇಲೆಕಂಡ ಮೊಬಲಗನ್ನು ಲೆಕ್ಕಕ್ಕೆ ಜಮೆಕಟ್ಟುವದಕ್ಕೆ ಆಗಲಿಲ್ಲ. ಕಾವೇರೀವಿದ್ಯುಚ್ಛಕ್ತಿಯ ಬಾಬಿನಲ್ಲಿ ಈಸಲ ಪ್ರಥಮತಃ 12 ಲಕ್ಷ ರೂಪಾಯಿ ಜಮೆಯಾದ್ದು ತಮಗೆಲ್ಲಾ ಸಂತೋಷಕರವಾಗಿರುವದು. ಇತರ ಬಾಬುಗಳಿಂದ ಆದ ಹುಟ್ಟುವಳಿಯ ಹೆಚ್ಚುಕಡಿಮೆಗಳ ವಿಷಯದಲ್ಲಿ ಪಟ್ಟಿಯಲ್ಲಿ ತೋರಿಸಿರುವದಕ್ಕಿಂತ ಹೆಚ್ಚಾಗಿ ಹೇಳಬೇಕಾದ್ದಿಲ್ಲ.

ರಾಜ್ಯಭಾರವನ್ನು ವಹಿಸಿದ ಉತ್ಸವದ ಖರ್ಚು 3,83,671 ರೂಪಾಯೂ ದೇಹಲಿಪ್ರಯಾಣದ ಖರ್ಚು 3,46,204 ರೂಪಾಯೂ, ಖರ್ಚು ಬಾಬಿನಲ್ಲಿ ಮುಖ್ಯವಾದ ಅಂಶಗಳಾಗಿವೆ. ಈ ಹೆಚ್ಚು ಬಾಬುಗಳಾಗಿಯೂ ಇತರ ಚಿಲ್ಲರೆ ಬಾಬುಗಳಾಗಿಯೂ 7½ ಲಕ್ಷ ರೂಪಾಯಿ ಹೆಚ್ಚು ಖರ್ಚು ಆಗದಿದ್ದಲ್ಲಿ ಈಗ ಉಳಿದಿರುವ ಶಿಲ್ಕು 6,14,850 ರೂಪಾಯಿಗೆ ಬದಲಾಗಿ 13⅓ ಲಕ್ಷಕ್ಕಿಂತ ಹೆಚ್ಚಾಗಿ ಉಳಿಯುತ್ತಿತ್ತು. 1902ನೆಯ ಆಗಸ್ಟು ತಿಂಗಳಲ್ಲಿ ಪಾವತಿಯಾಗಬೇಕಾಗಿದ್ದ ಮೈಸೂರು ರೇಲ್ವೆ ಸಾಲದ ಬಾಬತು 20 ಲಕ್ಷ ರೂಪಾಯಿ ತೀರಿಸಲ್ಪಟ್ಟು ತತ್ಪ್ರಯುಕ್ತವಾದ ಸಾಲದ ಭಾರವು ನಿವೃತ್ತಿಯಾಯಿತು.

ಈ ವರ್ಷದ ಜುಲೈ ಮೊದಲನೆಯ ತಾರೀಖಿನಲ್ಲಿ 1,25,44,246 ರೂಪಾಯಿ ಶೇಷವು ಉಳಿದಿತ್ತು. ಈ ಪೈಕಿ 42,87,700 ರೂಪಾಯಿ ಸರ್ಕಾರಿ ಪತ್ರರೂಪವಾಗಿತ್ತು. ಮದ್ರಾಸ್ ಬ್ಯಾಂಕಿನಲ್ಲಿ ನಗದು 45,26,083 ರೂಪಾಯಿ ಉಳಿದಿತ್ತು. ಸರ್ಕಾರಿ ಖಜಾನೆಗಳಲ್ಲಿ 36,67,783 ರೂಪಾಯೂ ಬೇರೆಬೇರೆ ಇಲಾಖೆ ಉದ್ಯೋಗಸ್ಥರಲ್ಲಿ 62,680 ರೂಪಾಯಿಗಳೂ ಇದ್ದವು. ಈ ಪೈಕಿ ಖರ್ಚು ಜಾತಾ ಶಿಲ್ಕು 51,01,320 ರೂಪಾಯಿಗಳು ಉಳಿದಿದ್ದವು.

ಈ ವರ್ಷಕ್ಕೆ ಮಂಜೂರಾಗಿರುವ ಆದಾಯವ್ಯಯದ ಪಟ್ಟಿಯಲ್ಲಿ; ಸಾಮಾನ್ಯಾದಾಯವು 1,68,94,000 ರೂಪಾಯಿ ಬಡ್ಡಿ 2,86,000 ರೂಪಾಯಿ, ರೇಲ್ವೆ ಹುಟ್ಟುವಳಿ 5,15,000 ರೂಪಾಯಿ, ಕಾವೇರೀ ವೈದ್ಯುತಶಕ್ತಿ 13,64,000 ರೂಪಾಯಿ, ಚಿನ್ನದಗಣಿಯ ರಾಜಾಯ 16,00,000 ಒಟ್ಟು 2,06,59,000 ರೂಪಾಯು ಎಂದು ನಮೂದಾಗಿದೆ.

ಮರಮ್ಮತ್ ಇಲಾಖೆಯ ಖರ್ಚು 38,28,000 ರೂಪಾಯೂ ಸೇರಿ ಸಾಮಾನ್ಯ ಬಾಬುಗಳ ಖರ್ಚು 1,96,25,000 ರೂಪಾಯಿ ಎಂದೂ, ಬಂಡವಾಳದ ಖರ್ಚು 1,83,000 ಸೇರಿ ರೇಲ್ವೆ ಖರ್ಚು 9,05,000 ರೂಪಾಯಿ ಎಂದೂ ಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಮಂಜೂರಾಗಿರುವ 7,50,000 ರೂಪಾಯಿ ಸೇರಿ ಕಾವೇರಿ ವೈದ್ಯುತ ಶಕ್ತಿಗಾಗಿ ಖರ್ಚು 10,03,000 ರೂಪಾಯಿ ಎಂದೂ ಅಂದಾಜಾಗಿದೆ. ಹೀಗೆ ಅಂದಾಜಾದ ಒಟ್ಟು ಖರ್ಚು 2,15,33,000 ರೂಪಾಯಿಯಾಗುತ್ತದೆ. ಇದರಿಂದ ಆದಾಯಕ್ಕಿಂತ 9 ಲಕ್ಷ ದಷ್ಟು ಅಧಿಕವಾಗಿ ವ್ಯಯವಾದಂತಾಗುತ್ತದೆ. ಆದರೆ ಇವುಗಳಲ್ಲಿ ವೈದ್ಯುತಶಕ್ತಿಯ ಕೆಲಸಗಳಾಗಿಯೂ ಭಾರಿ ಮರಮ್ಮತ್ ಕೆಲಸಗಳಿಗಾಗಿಯೂ ಇತರ ಹೆಚ್ಚು ಬಾಬುಗಳ ಖರ್ಚಿಗಾಗಿಯೂ ಆಗುವ ಖರ್ಚು ಫಲಾಪೇಕ್ಷೆಯಿಂದ ಮಾಡುವ ಖರ್ಚಾಗಿದೆ. ಅವುಗಳನ್ನು ಕೆಳಗೆ ತೋರಿಸಿದೆ:—

		ರೂ.
(a)	ರಾಷ್ಟ್ರೀಯ ಯುದ್ಧಸಾಮಗ್ರಿವಾಹಕ ಸೈನ್ಯಕ್ಕೆ ಲೈನುಗಳು ...	15,000
(b)	ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ	60,000
(c)	ಮೈಸೂರಿನಲ್ಲಿ ಅರಮನೆಯ ಕಟ್ಟಡ	3,50,000
(d)	ಮೈಸೂರು ನಗರಾಭಿವೃದ್ಧಿ	3,00,000
(e)	ಬೆಂಗಳೂರು ಬಡಾವಣೆ	1,07,500
(f)	ಕೋಲಾರದ ಚಿನ್ನದ ಗಣಿಗಳಿಗೆ ನೀರುಸರಬರಾಯಿ	6,34,000
(g)	ಸ್ವರ್ಗಸ್ಥರಾದ ಮಹಾರಾಜರವರ ಜ್ಞಾಪಕಾರ್ಥವಾಗಿ ಶ್ರೀರಂಗ ಪಟ್ಟಣದಲ್ಲಿಯೂ ಕಲ್ಕತ್ತಾದಲ್ಲಿಯೂ ಕಟ್ಟಿಸುವ ಕಟ್ಟಡಗಳು ...	49,000
(h)	ಚಿಕ್ಕದೇವರಾಯ ಸಾಗರದ ಅಣೆಕಟ್ಟನ್ನು ಪುನಃ ಕಟ್ಟುವದು ...	60,000
(i)	ಮಾರಿಕಣಿವೆ ಕೆರೆ	3,00,000
(j)	ಅಚ್ಚು ಯಂತ್ರಗಳು	30,000
(k)	ರಾಜ್ಯಭಾರವಹನಮಹೋತ್ಸವದ ಮತ್ತು ದೇಹಲಿ ಪ್ರಯಾಣದ ಖರ್ಚುಗಳು...	1,63,000
(l)	ಕಲ್ಕತ್ತಾವಿನಲ್ಲಿ ಚಕ್ರವರ್ತಿನಿಯವರ ಸ್ಮಾರಕಕಾರ್ಯಕ್ಕಾಗಿ ಕೊಟ್ಟ ಹೆಚ್ಚು ಚಂದಾ	1,50,000
(m)	ಪ್ಲೇಗು ಖರ್ಚು	1,00,000
	ಒಟ್ಟು ...	23,18,500

ಲೋಕಲ್‌ಫಂಡುಗಳ ನಾನಾಬಾಬುಗಳ ಆದಾಯವ್ಯಯಗಳನ್ನು ಇದಕ್ಕೆ ಸೇರಿಸಿರುವ ಪಟ್ಟಿಯಲ್ಲಿ ತೋರಿಸಿದೆ. ಅವುಗಳ ವಿಷಯವಾಗಿ ಇಲ್ಲಿ ಏನೂ ಹೇಳತಕ್ಕ ಪ್ರಕೃತವಿಲ್ಲ.

ಮೈಸೂರು ಸಂಸ್ಥಾನದ ಒಟ್ಟು ಆದಾಯ ವ್ಯಯವನ್ನು ನೋಡುವಲ್ಲಿ, ಮಹಾರಾಜರವರು ಪ್ರಾಪ್ತ ವಯಸ್ಕರಾಗುವದಕ್ಕೆ ಪೂರ್ವ 7 ವರ್ಷ ಕಾಲವಲ್ಲಿ, ಮೆ|| ಕೀನಾಂಕರವರ ಲೆಕ್ಕದ ಪ್ರಕಾರ, ನಿವ್ವಳ ಆದಾಯವು 8 ಲಕ್ಷದಷ್ಟಾಯಿತು. ರೀಜನ್ಸಿಯ ಕಡೆಯ ವರ್ಷಾಂತ್ಯದವರೆಗೆ ಕಾವೇರೀ ವಿದ್ಯುಚ್ಛಕ್ತಿ ಸ್ಥಾಪನೆಗಾಗಿ ಆದ 26 ಲಕ್ಷ ರೂಪಾಯಿ ಖರ್ಚಿಲ್ಲದೆ ಸಾಮಾನ್ಯ ವ್ಯಯವು ಸುಮಾರು 21 ಲಕ್ಷದಷ್ಟು ಹೆಚ್ಚಾಯಿತು. ಬ್ರಿಟಿಷ್ ಸರ್ಕಾರಕ್ಕೆ ಪ್ರತಿ ವರ್ಷವೂ ಸಲ್ಲತಕ್ಕ $10\frac{1}{2}$ ಲಕ್ಷ ರೂಪಾಯಿ ಹೆಚ್ಚು ಪೊಗದಿಯನ್ನು 1881—82 ರಿಂದ 1895—96 ನೆಯ ವರ್ಷದವರೆಗೆ--ಎಂದರೆ 15 ವರ್ಷಕಾಲ--ಬ್ರಿಟಿಷ್ ಸರ್ಕಾರದವರು ತೆಗೆದುಕೊಳ್ಳದೆ ಮನ್ನಿಸಿದ್ದರಿಂದ, ರೀಜನ್ಸಿಗೆ ಪೂರ್ವ, ಮೈಸೂರು ಸರ್ಕಾರದಲ್ಲಿ ಭಾರಿ ಶಿಲ್ಕು ಉಳಿಯುವದಕ್ಕೆ ಕಾರಣವಾಯಿತು. ಪ್ರಕೃತ ಸ್ಥಿತಿಯಲ್ಲಿ ಸಾಮಾನ್ಯ ಬಾಬುಗಳಿಂದ ಹುಟ್ಟುವಳಿಯಾಗುವ ವಾರ್ಷಿಕಾದಾಯವು, ಕಂದಾಯದ ವಸೂಲಾತಿಗಾಗಿ ಆಗುವ $26\frac{1}{2}$ ಲಕ್ಷ ರೂಪಾಯಿ ಖರ್ಚೂ ಸೇರಿ, ಅತ್ಯುತ್ತ ಮಪಕ್ಷ ಸುಮಾರು 180 ಲಕ್ಷದಷ್ಟಾಗುತ್ತದೆ. ಇದಕ್ಕೆ ಪ್ರತಿಯಾಗಿ 1881ನೆಯ ವರ್ಷದಲ್ಲಿ ಸಾಮಾನ್ಯಾದಾಯವು $107\frac{1}{2}$ ಲಕ್ಷವಾಗಿಯೂ ವಸೂಲಾತಿ ಖರ್ಚು 17 ಲಕ್ಷವಾಗಿಯೂ ಇದ್ದವು.

	1903	1881
ಜಮೀನ್ ಕಂದಾಯ	18,13,000	14,01,966
ಜಂಗಲು	4,86,000	2,23,071
ಆಬ್ಕಾರಿ	3,22,000	31,000
ಸಾಯರು	15,000	15,260
ಸ್ಟಾಂಪು	27,000	14,083
ಒಟ್ಟು...	26,63,000	16,85,985

ಇನ್ನುಮುಂದೆ, ಜಮೀನ್ ಕಂದಾಯದ ಬಾಬಿನಲ್ಲಿ ತರಿ ಮತ್ತು ಖುಷ್ಕಿ ವ್ಯವಸಾಯಗಳು ಹೆಚ್ಚುವದರಿಂದಲೂ, ಮಾಯಿದೆ ಕಳೆದ್ದರಿಂದ ಪುನಃ ಮಾಡಬೇಕಾಗಿಬಂದ ಸರ್ವೆ ಸೆಟಲ್‌ಮೆಂಟಿನಿಂದಲೂ, ಸರ್ಕಾರದ ಹುಟ್ಟುವಳಿಯು ಸ್ವಲ್ಪಮಟ್ಟಿಗೆ ಹೆಚ್ಚಬಹುದಾದರೂ, ಈ ಬಾಬಿನಲ್ಲಿ ಮುಖ್ಯತಮವಾದ ಜಮೀನ್ ಕಂದಾಯದ ಹುಟ್ಟುವಳಿಯು ಕೆಲವು ಕಾಲದವರೆಗೆ ವಿಶೇಷವಾಗಿ ಹೆಚ್ಚುವ ಸಂಭವವಿಲ್ಲ. ಇದಕ್ಕೆ ಎರಡನೆಯದಾದ ಆಬ್ಕಾರಿ ಹುಟ್ಟುವಳಿಯೂಕೂಡ ಈಗ್ಗೆ ಕೆಲವು ಕಾಲದಿಂದ ಹೆಚ್ಚುತ್ತ ಬಂದು ಜಮೀನ್ ಕಂದಾಯದ ಹುಟ್ಟುವಳಿಯಂತೆಯೇ ಸುಮಾರಾಗಿ ಒಂದು ಸ್ತಿಮಿತಕ್ಕೆ ಬಂದಿದೆ. ಈ ಇಲಾಖೆಯನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡು ಈ ಬಾಬಿನ ಉತ್ಪತ್ತಿಯನ್ನು ಇಷ್ಟಕ್ಕೆ ನಿಲ್ಲಿಸಿಕೊಂಡರೇ ಸಾಕಾಗಿರುತ್ತದೆ. ಇನ್ನು ಜಂಗಲ್, ಸ್ಟಾಂಪು ಇವೇ ಇಲ್ಲಿ ವಿಚಾರಿಸತಕ್ಕ ಉಳಿದ ಆದಾಯದ ಬಾಬುಗಳಾಗಿವೆ. ಕಂದಾಯದ ಹುಟ್ಟುವಳಿಯಂತೆಯೇ ಸ್ಟಾಂಪಿನ ಹುಟ್ಟುವಳಿಯೂ ಕೂಡ ವ್ಯವಸಾಯದಿಂದ ಉಂಟಾಗುವ ಫಲಕ್ಕೆ ಅನುರೂಪವಾಗಿರುವದರಿಂದ, ಈ ಹುಟ್ಟುವಳಿಯೂ ಪ್ರಾಯಶಃ ಕ್ಲಿಪ್ತವಾಗಿದೆಯೆಂದು ಭಾವಿಸಬಹುದು. ಜಂಗಲ್‌ಬಾಬಿನಲ್ಲಿ ಮುಖ್ಯತಮವಾದ ಭಾಗವು ಗಂಧದ ಮರದಿಂದ ಉತ್ಪತ್ತಿಯಾಗುತ್ತದೆ. ಈ ಹುಟ್ಟುವಳಿಯು, ಚೀನಾ ದೇಶಕ್ಕೂ ಜಪಾನಿಗೂ ಯುದ್ಧವಾದಕಾಲದಲ್ಲಿ ಕಂಡುಬಂದಹಾಗೆ, ಯೂರೋಪಿನಲ್ಲಿಯೂ ಚೀನಾದಲ್ಲಿಯೂ ಗಂಧದ ಮರಕ್ಕೆ ಗಿರಾಕಿ ಬಂದಹಾಗೆಲ್ಲಾ ವ್ಯತ್ಯಾಸವಾಗುತ್ತದೆ. ಗಂಧದಮರವಲ್ಲದೆ ಚಾಕಬೀನಿಯೇ ಮೊದಲಾದ ಇತರ ಜಂಗಲುತ್ಪತ್ತಿಗಳಿಂದ ಆಗುವ ಹುಟ್ಟುವಳಿಯನ್ನು ಕ್ರಮವಾಗಿ ಅಭಿವೃದ್ಧಿ ಪಡಿಸುವದಕ್ಕೂ ಈಗ ಇರುವ ಜಂಗಲ ಸಂಪತ್ತು ಪೋಲಾಗದಂತೆ ನೋಡಿಕೊಂಡು ಮುಂದೆ ಅದನ್ನು ಅಭಿವೃದ್ಧಿ ಮಾಡುವದಕ್ಕೂ ಪ್ರಕೃತದಲ್ಲಿ ಕ್ರಮವಾದ ಪ್ರಯತ್ನಗಳನ್ನು ಮಾಡುತ್ತಿರುವದರಿಂದ ಜಂಗಲಿನ ಹುಟ್ಟುವಳಿಯು ಈಗ ಇರುವ ಸ್ಥಿತಿಯಲ್ಲಿಯೇ ನಿಲ್ಲಬಹುದು.

ಚಿನ್ನದ ಗಣಿಗಳಿಂದ ಉತ್ಪತ್ತಿಯಾಗುವ ರಾಜಾಯವು ಅಲ್ಲಿನ ಅದುರನಲ್ಲಿ ದೊರಕುವ ಚಿನ್ನಕ್ಕೆ ಅನುಗುಣವಾಗಿರುತ್ತದೆ. ಗಣಿಗಳ ಸಂಗತಿಯನ್ನು ತಿಳಿದವರು ಮಾಡಿದ ಅಂದಾಜು ಸರಿಯಾದ ಪಕ್ಷಕ್ಕೆ, ಈ ಬಾಬಿನ ವರಮಾನವು ಕನಿಷ್ಠಪಕ್ಷ ಇನ್ನು ಕೆಲವು ವರ್ಷಗಳವರೆಗಾದರೂ ಕಡಿಮೆಯಾಗದೆ ಇರಬಹುದು. ಆದರೆ, ನಾನು ಕಳೆದ ಉಪನ್ಯಾಸದಲ್ಲಿ ಸೂಚಿಸಿದಂತೆ, ಅದುರಿನ ಗುಣವು ಇನ್ನೂ ಕ್ಷೀಣಸ್ಥಿತಿಯಲ್ಲಿಯೇ ಇದೆ. ಆದರೂ ಹಿಂದಿನ ವರ್ಷಕ್ಕಿಂತ ಹೆಚ್ಚಾಗಿ ಅದುರನ್ನು ಉಪಯೋಗಿಸಿದ್ದೇ 1902-03 ರಲ್ಲಿ ಹೆಚ್ಚು ಬೆಲೆಬಾಳುವ ಚಿನ್ನದ ಉತ್ಪತ್ತಿಗೆ ಕಾರಣವಾಗಿದೆ. ಕಾವೇರೀ ವಿದ್ಯುಚ್ಛಕ್ತಿಯಿಂದ ವರ್ಷವೊಂದಕ್ಕೆ 12 ಲಕ್ಷಕ್ಕೆ ಕಡಿಮೆಯಿಲ್ಲದೆ ಹುಟ್ಟುವಳಿಯಾಗುತ್ತದೆ. 1905ರಲ್ಲಿ ಎರಡನೆಯ ಶಕ್ತಿಸ್ಥಾಪನೆಯು ಮುಗಿಯುವ ಕಾರಣ ಅಲ್ಲಿಂದ ಮುಂದೆ ಈ ವರಮಾನವು 17 ಲಕ್ಷಕ್ಕೆ ಏರುತ್ತದೆ.

ವ್ಯಯದ ವಿಷಯವಾಗಿ ವಿಚಾರವಾಡುವಲ್ಲಿ, ಅವಶ್ಯಕಬಿದ್ದಾಗ ಕಡಿಮೆಮಾಡುವುದಕ್ಕಾಗದ ಮತ್ತು ನಿಯತವ್ಯಯವೆಂದು ಪರಿಗಣಿಸಬಹುದಾದ ವ್ಯಯವು, 1881ರಲ್ಲಿ ಸುಮಾರು 58 ಲಕ್ಷವಿದ್ದದ್ದು ಈಗ 95½ ಲಕ್ಷದಷ್ಟಾಗಿದೆಯೆಂದು ತಿಳಿಯಬರುತ್ತದೆ. ಈ ಹೆಚ್ಚು ವ್ಯಯವು ಸ್ವಲ್ಪಮಟ್ಟಿಗೆ ಪೊಗದಿ, ಇತರ ಅಲೋವೆರ್ನಸುಗಳು, ಅರಮನೆ ಖರ್ಚು ಮೊದಲಾದವುಗಳ ಆಧಿಕ್ಯದಿಂದಲೂ ಸ್ವಲ್ಪ ಮಟ್ಟಿಗೆ ಜಮೀನ್ ಕಂದಾಯದ ವಸೂಲಿ ಖರ್ಚಿನ ಅಧಿಕ್ಯದಿಂದಲೂ, ಉಂಟಾಗಿದೆ. 8 ಲಕ್ಷ ರೂಪಾಯಿಗಿಂತ ಸಲ್ಪ ಹೆಚ್ಚಾಗಿ ಆಗುತ್ತಿರುವ ಈ ವಸೂಲಿಖರ್ಚನ್ನು, 1881ರಲ್ಲಿ ಆಗುತ್ತಿದ್ದ ವಸೂಲಿ ಖರ್ಚಿನೊಡನೆ ಹೋಲಿಸಿ ನೋಡಿದರೆ, ಒಟ್ಟು ವರವಾನವು 72 ಲಕ್ಷ ಹೆಚ್ಚಿದ್ದರೂ ಇದು ಅದಕ್ಕೆ ಅನುಗುಣವಾಗಿ ಹೆಚ್ಚಿಲ್ಲವೆಂಬುದು ವ್ಯಕ್ತವಾಗುತ್ತದೆ.

	1881.	1903.
ಪೊಗದಿ	24,50,000	35,00,000
ಅರಮನೆಯ ಖರ್ಚು ..	10,38,986	14,00,000
ರಾಜಬಂಧುಗಳಿಗೆ ಪೆನ್ಷನ್ ..	..	2,40,000
ಪೊಲಿಟಿಕಲ್ ಪೆನ್ಷನ್ ..	58,933	86,515
ನೀರುಸರದಿ ಮತ್ತು ಇತರ ಖಾಯಂ ಬಾಬುಗಳು ..		2,44,737
ಜಮೀನ್ ಕಂದಾಯ ..	14,01,966	17,11,534
ಸ್ಟಾಂಪು	1	27,400
ಅಬ್ಕಾರಿ	31,605	3,26,312
ಸಾಯರು	15,260	14,146
ಜಂಗಲು .. .	2,23,071	4,80,137
ಮುಜರಾಯಿ	2,69,763	3,25,094
ವಯಸ್ಸುಕಳೆದವರಿಗೆ ಪೆನ್ಷನ್ ..	2,65,456	3,66,026
ಸದರ್ನ್ ಮರಾಟ ರೇಲ್ವೆ ಕಂಪೆನಿಯವರಿಂದ ತೆಗೆದುಕೊಂಡಿರುವ ಸಾಲದ ಬಡ್ಡಿ ..	..	7,00,000
ಜುಮ್ಲಾ....	57,69,123	95,21,701

ಅತ್ಯವಶ್ಯಕವಾದಾಗ ಕಡಿಮೆ ಮಾಡಬಹುದಾದ ಇತರ ಬಾಬುಗಳ ಒಟ್ಟು ಖರ್ಚು 1881ರಲ್ಲಿ ಸುಮಾರು 39 ಲಕ್ಷವಿದ್ದದ್ದು ಈಗ ಸುಮಾರು 88ಲಕ್ಷದಷ್ಟಾಗಿದೆ. ಈ ವಿಶೇಷವಾದ ಖರ್ಚುಗಳು ಪ್ರಜೆಗಳಿಗೆ ಅತ್ಯುಪಯುಕ್ತವಾದ ವೈದ್ಯ, ವಿದ್ಯಾಭ್ಯಾಸ, ಮರಮ್ಮತ್ತು, ಪೊಲೀಸು, ಲಾ ಮತ್ತು ಜಸ್ಟಿಸ್ ಇಂಥವುಗಳಿಗೆ ಸಂಬಂಧಪಟ್ಟವೆ. ಈ ಇಲಾಖೆಗಳಲ್ಲಿ ಆಗುವ ಖರ್ಚನ್ನು ಕಡಿಮೆ ಮಾಡಿದರೆ, ಇದುವರೆಗೂ ಆಗಿರುವ ದೇಶಾಭಿವೃದ್ಧಿಗೆ ಪ್ರಬಲವಾದ ಪ್ರತಿ ಬಂಧಕವನ್ನುಂಟು ಮಾಡಿದಂತಾಗುತ್ತದೆ. ಮಿಲಿಟರಿ ಇಲಾಖೆಯ ಖರ್ಚು ಅನೇಕವಾಗಿ ರಾಷ್ಟ್ರೀಯ ಸಹಾಯ ಸೈನ್ಯಕ್ಕೂ ಯುದ್ಧ ಸಾಮಗ್ರಿವಾಹಕ ಸೈನ್ಯಕ್ಕೂ ಸಂಬಂಧಪಟ್ಟಿರುವದರಿಂದ ಈ ಬಾಬಿನಲ್ಲಿ ಖರ್ಚನ್ನು ಕಡಿಮೆ ಮಾಡಲಾಗುವ ವಿಷಯವು ಸಂದೇಹಾಸ್ಪದವಾಗಿದೆ. ಆದಕಾರಣ ಒಟ್ಟು ಖರ್ಚನ್ನು ಕಡಿಮೆ ಮಾಡಬಹುದಾದ ಭಾಗವು ಅತಿಮಿತವಾಗಿಯೇ ಇದೆ. ಯದ್ಯಪಿ ಮಳೆಗಳು ಸರಿಯಾಗಿ ನಡೆಯದೆ ಸಂಸ್ಥಾನದ ಹುಟ್ಟುವಳಿಯು ಕಡಿಮೆಯಾದಾಗ ಮಾತ್ರವೇ ಈ ಇಲಾಖೆಗಳ ಖರ್ಚನ್ನು ಹೀಗೆ ಕಡಿಮೆ ಮಾಡಬೇಕಾಗುತ್ತದೆ.

	1881.	1902—03.
[illegible]ಪೆನ್ಷನ್ ...	23,528	78,916
ರಾಜ್ಯಭಾರದ ಮೇಲ್ವಿಚಾರಣೆ		
ಸಿಬ್ಬಂದಿ ...	4,35,151	4,97,113
ಲಾ ಮತ್ತು ಜಸ್ಟಿಸ್ ..	5,35,582	10,14,234
ಪೊಲೀಸು ..	4,44,549	10,11,377
ವಿದ್ಯಾಭ್ಯಾಸ ..	1,35,628	6,90,288
ವೈದ್ಯ ..	1,45,407	4,92,447
ಶಾಸ್ತ್ರೀಯ ..	89,659	2,85,825
ಮರಮ್ಮತ್ ಇಲಾಖೆ ...	10,70,702	26,87,725
ಸೈನ್ಯ ..	7,59,850	14,42,522
ಅಮೃತಮಹಲ್ ..	..	31,799
ಚಿನ್ನದ ಗಣಿ ..	...	13,245
ಇತರ ಬಾಬುಗಳು ..	2,37,911	5,59,118
ಒಟ್ಟು....	38,77,967	88,04,609

ಹಾಗೆ ಕಡಿಮೆ ಮಾಡಿದಲ್ಲಿ, ಅಂಥ ಅವಶ್ಯಕತೆಯು ತಪ್ಪಿ ಹೋದಮೇಲೆಯೂ ಕೂಡ, ಅನೇಕ ಕಾಲದವರೆಗೂ, ಆಯಾ ಇಲಾಖೆಗಳ ಕಾರ್ಯ ನಿರ್ವಾಹ ಸಾಮರ್ಥ್ಯವು ಕುಗ್ಗಿ ಹೋಗಿ ಬಹಳ ಹಾನಿಗೆ ಕಾರಣವಾಗುತ್ತದೆ.

ಶೇಕದಾರಿಯನ್ನು ಉತ್ತಮಸ್ಥಿತಿಗೆ ತರಬೇಕಾದ್ದು ಅತ್ಯವಶ್ಯಕವಾಗಿರುವದರಿಂದ ಲಾಂಡ್ ರೆವಿನ್ಯು ಇಲಾಖೆಯಲ್ಲಿ ಆಗಬೇಕಾದ ಕೆಲವು ಹೆಚ್ಚು ಖರ್ಚುಗಳನ್ನು ಬಹಳಕಾಲ ತಳ್ಳುವುದಕ್ಕಾಗುವದಿಲ್ಲವೆಂಬ ವಿಷಯವನ್ನು ನೆನಪಿನಲ್ಲಿಡಬೇಕು. ಒಂದೆರಡು ಇತರ ಇಲಾಖೆಗಳಲ್ಲಿಯೂ ಕೂಡ ಇದೇ ರೀತಿಯಾಗಿ ಅಭಿವೃದ್ಧಿ ಮಾಡಬೇಕಾಗಿದೆ. ಕಳೆದ ವರ್ಷದ ಉಪನ್ಯಾಸದಲ್ಲಿ ನಾನು ಸೂಚಿಸಿದ ಇರ್ರಿ

ಗೇಷನ್ ಕಮಿಟಿಯವರ ಕೆಲಸವು ಪೂರ್ತಿಯಾಗಿ ಅವರ ರಿಪೋರ್ಟು ಸರ್ಕಾರದವರ ಪರ್ಯಾಲೋಚ ನೆಯಲ್ಲಿರುವದರಿಂದ ಕೆರೆಯೇ ಮೊದಲಾದ ನೀರಾವರಿ ಕೆಲಸಗಳ ರಕ್ಷಣೆಗಾಗಿ ಹೆಚ್ಚು ಹಣವನ್ನು ಕೊಡಬೇಕಾದ ಅವಶ್ಯಕತೆಯೂ ಕ್ಷಿಪ್ರದಲ್ಲಿಯೇ ಪ್ರಾಪ್ತವಾಗುತ್ತದೆ. ಮಲೆನಾಡು ಅಡಕೆಯ ಮೇಲಿನ ಸಾಯರ್ ಕಂದಾಯವು ಬಹಳ ಹಿಂಸೆಯನ್ನು ಮಾಡುವದೆಂದು ಫಿರ್ಯಾದು ಬಂದಿದ್ದಾಗ್ಯೂ ಅವರ ವಿಷಯದಲ್ಲಿ ಸದ್ಯಃ ಏನು ಮಾಡಲು ಸಾಧ್ಯವೋ ಅದನ್ನು ಪ್ರಕೃತದಲ್ಲಿ ತಿಳಿಸುವದು ಸೂಕ್ತವಾಗಿ ತೋರು ವದಿಲ್ಲ. ಈಗಿರುವ ತೆರಿಗೆಯನ್ನು ಕಡಿಮೆ ಮಾಡಬೇಕಾದ್ದು ಅವಶ್ಯಕವೆಂದು ತಿಳಿಸುವದಕ್ಕಾಗಿ, ಮಾತ್ರವೇ ಇಲ್ಲಿ ಅದರ ವಿಷಯವಾಗಿ ಪ್ರಸ್ತಾಪಿಸಲಾಯಿತು. ಮುಂದೆ ವಿವರಿಸುವಮೇರೆ ವಿದ್ಯಾಭ್ಯಾಸಕ್ಕೂ ಕೂಡ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಪಾಳು ನಿವೇಶನಗಳು ಮತ್ತು ಮನೆ ಕಟ್ಟದೆ ನಿಂತಿರುವ ನಿವೇಶನಗಳು ಇವುಗಳ ತೆರಿಗೆಯ ವಿಷಯವು ವ್ಯವಸ್ಥೆಯಾದ ಬಳಿಕ ಆ ಬಾಬಿನ ಹುಟ್ಟುವಳಿಯು ಸ್ವಲ್ಪ ಕಡಿಮೆಯಾಗುತ್ತದೆ.

ಈ ಸನ್ನಿವೇಶದಲ್ಲಿ, ಸಾಧಾರಣವಾದ ಖರ್ಚುಗಳಲ್ಲಿ ಯಥೋಚಿತವಾಗಿ ಮಿತವಾಗಿದ್ದುಕೊಂಡು, ಹೆಚ್ಚು ಖರ್ಚಿನ ಬಾಬುಗಳಿಗೆ ವಿಶೇಷಜಾಗರೂಕತೆಯಿಂದ ಪ್ರವೇಶಮಾಡುವದೇ ಅತ್ಯುತ್ತಮವಾದ ಮಾರ್ಗವೆಂದು ತೋರುತ್ತದೆ. ಪ್ರಕೃತದಲ್ಲಿ ನಡೆಯುತ್ತಿರುವ ಭಾರಿ ಕೆಲಸಗಳು ಪೂರ್ತಿಯಾದತರು ವಾಯ, ಚಿನ್ನದಗಣಿಯ ರಾಜಾಯ, ವೈದ್ಯುತಶಕ್ತಿಯ ವಿಕ್ರಯ, ಚಿನ್ನದಗಣಿಯ ನೀರುಸರಬರಾಯಿ ಇವೇ ಮೊದಲಾದ ನಿಯುತವಲ್ಲದ ಬಾಬುಗಳಿಂದ ಉತ್ಪತ್ತಿಯಾಗುವ ಹಣವನ್ನು, ಸಂಸ್ಥಾನಕ್ಕೆ ನಿಯತ ವಾಗಿ ಹೆಚ್ಚು ಹುಟ್ಟುವಳಿಯನ್ನು ಕೊಡುವ ಕಾರ್ಯಗಳಲ್ಲಿ ವಿನಿಯೋಗಿಸುವದೇ ನಮ್ಮ ಉದ್ದೇ ಶವಾಗಿರಬೇಕು. ಸಾಲ ತೆಗೆದುಕೊಳ್ಳುವ ಶಕ್ತಿಯು ನಮಗೆ ಬಹು ಮಿತವಾಗಿದೆಯೆಂಬ ಅಂಶವು ನಮಗೆ ಲ್ಲರಿಗೂ ತಿಳಿದೇ ಇದೆ. ಹೊಸತೆರಿಗೆ ಹಾಕುವ ವಿಷಯದಲ್ಲಿ, ಸಾಮಾನ್ಯವರ್ಷಗಳಲ್ಲಿ ನಾವು ಪ್ರಯ ತ್ನಿಸದಿರುವದೇ ಬಳ್ಳೆಯದು; ಕ್ಷಾಮಪ್ರಾಪ್ತವಾದ ಕಾಲದಲ್ಲಾದರೂ ಅದನ್ನು ಶುದ್ಧಾಂಗವಾಗಿ ಬಿಟ್ಟೇ ಬಿಡಬೇಕು. ಅವಪ್ರಯುಕ್ತ, ಇಂಡಿಯಾದೇಶದ ಇತರ ಭಾಗಗಳಲ್ಲಿ ಪ್ರಾಪ್ತವಾಗುವಂತೆಯೇ, ಇಲ್ಲಿ ಯೂ ಅಡಿಗಡಿಗೆ ಪ್ರಾಪ್ತವಾಗುತ್ತಿರುವ ಕ್ಷಾಮ ಮತ್ತು ಪ್ಲೇಗು ಮೊದಲಾದ ಕಷ್ಟಗಳನ್ನು ನಿವಾ ರಣೆಮಾಡುವದಕ್ಕಾಗಿ, ಯಾವವಿಧವಾದ ಸಾಲಕ್ಕೂ ಈಡಾಗದೆಯೂ ಸುಮಾರು ಒಂದುಕೋಟಿಗೆ ಕಡಮೆ ಯಾಗದೆಯೂ ಇರುವ ಮೂಲಧನವೂ, ವರ್ಷಾದಿಯಲ್ಲಿ ಖರ್ಚಿಗೆ ಬದಗುವಹಾಗೆ 75 ಲಕ್ಷರೂ[illegible] ಸಿಲ್ಕು ಇದ್ದರೆ, ನಮ್ಮ ಸಂಸ್ಥಾನದ ಆದಾಯವ್ಯಯವು ನಿರಪಾಯವಾದ ದೃಢವಾದ ಸ್ಥಿತಿಯಲ್ಲಿ ನಿಲ್ಲುವುದು.

ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರ.—ಈವರ್ಷ ಮಹಾರಾಜರವರ ಪರಾಂಬರಿಕೆಗೆ ತಂದ ಮುಖ್ಯ ವಿಷಯಗಳು ಯಾವವೆಂದರೆ—ಸರ್ವೆಸೆಟಲ್ಮೆಂಟಿನ ಪುನರ್ವಿಮರ್ಶೆ, ಕಾಫೀ ವ್ಯವಸಾಯದ ಪುನರುಜ್ಜೀ ವನ ವ್ಯವಸಾಯಬ್ಯಾಂಕುಗಳ ಅತೃಪ್ತಿಕರವಾದ ಆಡಳಿತ, ಕೃಷಿರಸಾಯನಜ್ಞರನ್ನು ಇನ್ನು ಕೆಲವು ಕಾಲ ಇಟ್ಟುಕೊಂಡದ್ದು, ರೇಷ್ಮೆ ಪೈರಿನ ಅಭಿವೃದ್ಧಿ—ಇವೇ.

ರಿವಿಜನ್ ಸೆಟಲ್‌ಮೆಂಟ್.—ಅನೇಕ ತಾಲ್ಲೂಕುಗಳಲ್ಲಿ ಮೂವತ್ತು ವರ್ಷದ ವಾಯಿದೆ ಕಳೆದುಹೋದ್ದರಿಂದ ಪುನಃ ಸೆಟಲ್ಮೆಂಟನ್ನು ಉಪಕ್ರಮಿಸಬೇಕೆಂದು 1900 ರಲ್ಲಿ ಹುಕುಂ ಮಾಡಲಾಯಿತು. ಹೀಗೆ ಪುನಃ ಆರಂಭಿಸಿದ ಸರ್ವೆಯಲ್ಲಿ ಬಹಳ ಕೆಲಸ ನಡೆದಿದೆ. ಕಳೆದ ವರ್ಷದಲ್ಲಿ 1,778 ಚದರಮೈಲಿ ಅಳತೆಯ 60,000 ಜಮೀನುಗಳುಳ್ಳ 830 ಗ್ರಾಮಗಳನ್ನು ಸರ್ವೆ ಮಾಡಲಾಯಿತು—ಎಂದರೆ ಚಳ್ಳಕೆರೆ, ಮೊಳಕಾಲ್ಮೂ ರು, ಮಾಜಿ ಬೂದಿಹಾಳು ತಾಲ್ಲೂಕುಗಳಲ್ಲಿ ಪೂರ್ತಿಯಾಗಿಯೂ, ಚೆನ್ನಗಿರಿ ತಾಲ್ಲೂಕಿನಲ್ಲಿ ಬಹಳ ಭಾಗದ ಲ್ಲಿಯೂ, ಸೊರಬ ಪಾವಗಡ ಮತ್ತು ಸೀರಾ ತಾಲ್ಲೂಕುಗಳಲ್ಲಿ ಕೆಲವು ಭಾಗಗಳಲ್ಲಿಯೂ, ಪುನಃ ಸರ್ವೆ ನಡೆಯಿತು.

ದಾವಣಗೆರೆ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ಕಂದಾಯದ ಹೊಸದರಗಳನ್ನು ಮುಂದಿನ ಚಳಿಗಾ ಲದಲ್ಲಿ ಪ್ರಕಟಿಸುವುದಾಗಿ ಸರ್ಕಾರದವರು ಮಂಜೂರ್ಮಾಡಿದಾರೆ. ಮೊದಲಸಲದ ಸರ್ವೆ ಜಮಾಬಂದಿಯಲ್ಲಿ ಮಾಡಿದ ಜಮೀನಿನ ತರಗತಿಯ ವಿಭಾಗವೇ ಬಹಳ ತೃಪ್ತಿಕರವಾಗಿದ್ದದ್ದರಿಂದ ಪುನಃ ತರಗತಿ ವಿಭಾಗದ ಅವ ಶ್ಯಕತೆಯಿಲ್ಲದೇ ಇದ್ದದ್ದು ವಿಶೇಷವಿಷಯವಾಗಿದೆ. ಈ ಸಂಗತಿಯು ಸರ್ಕಾರದವರಿಗೆ ತೃಪ್ತಿಕರವಾ ಗಿಯೂ ಕರ್ನಲ್ ಗ್ರಾಂಟ್ ಸಾಹೇಬರವರಿಗೆ ಯಶಸ್ಕರವಾಗಿಯೂ ಇದೆ. ಕರ್ನಲ್ ಗ್ರಾಂಟ್ ಸಾಹೇ ಬರವರು ಪ್ರಥಮಸೆಟಲ್ಮೆಂಟಿನಲ್ಲಿ ಅನ್ವಯಿಸಿದ್ದು, 30 ವರ್ಷಗಳಿಗೆ ಮೀರಿದಷ್ಟು ದೀರ್ಘಕಾಲಾನಂತರ ಈಗ ರಿವಿಜನ್‌ಗೆ ಸಲಹೆಗಳನ್ನು ಕಳುಹಿಸಿದ್ದು ಈಗಿನ ಇಂಡಿಯಾ ದೇಶದ ಸೆಟಲ್ಮೆಂಟ್ ಚರಿತ್ರದಲ್ಲಿ ಅಪೂರ್ವವಾದ ಸಂಗತಿಯಾಗಿದೆ.

ಬ್ರೇಜಿಲ್ನಲ್ಲೀ ಕಾಫಿ ಪೋಟಾಪೋಟಿಯಿಂದಲೂ ಇತರ ಕಾರಣಗಳಿಂದಲೂ ಕಾಫೀ ವ್ಯಾಪಾರವು ಕ್ಷೀಣಸ್ಥಿತಿಗೆ ಬಂದದ್ದರಿಂದ, ಹಿಂದೂ ದೇಶದಲ್ಲೆಲ್ಲಾ ಕಾಫೀ ವ್ಯವಸಾಯಕ್ಕೆ ಕುಂದಕವುಂಟಾಗಿರುವಂಶವು ಎಲ್ಲರಿಗೂ ತಿಳಿದೇ ಇದೆ. ಮೈಸೂರು ಸಂಸ್ಥಾನದಲ್ಲಿ ಕಾಫಿ ವ್ಯವಸಾಯವಾಗುತ್ತಿದ್ದ ಭೂಮಿಯಲ್ಲಿ ಒಟ್ಟು 20,000 ಎಕರೆಯಷ್ಟು ವಿಸ್ತಾರ ಪ್ರದೇಶವು ಕಡಿಮೆಯಾಯಿತು. ಈ ಪೈಕಿ ಈ ವರ್ಷ ಕಡಿಮೆಯಾದ್ದು 2,500 ಎಕರೆಗಳು. ಆದಕಾರಣವೇ, ಉತ್ತರ ಮತ್ತು ದಕ್ಷಿಣ ಮೈಸೂರು ಪ್ಲಾಂಟರ್ ಸಂಘದವರು ಸಭೆಸೇರಿ, ಈ ವಿಷಯವನ್ನು ಚರ್ಚಿಸುವದಕ್ಕಾಗಿ ಮೈಸೂರು ಸರ್ಕಾರದವರ ಪರವಾಗಿ ಒಬ ಅಧಿಕಾರಿಯನ್ನು ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳಲು, ಸರ್ಕಾರದವರು ಮನಃಪೂರ್ವಕವಾಗಿ ಒಪ್ಪಿಕೊಂಡು, ಆದಕ್ಕಾಗಿ ಅಲ್ಲಿ ಮಾಡಬೇಕಾದ ಕೆಲಸಗಳನ್ನು ತಿಳಿಸಿ, ಮೆ|| ಮಾಧವರಾವ್, ಸಿ. ಐ. ಇ., ಯವರನ್ನು ಕಳುಹಿಸಿಕೊಟ್ಟರು. ಇವರು ಮೆ|| ಗ್ರಾಹಂ ಆಂಡರ್ಸನ್ ಸಿ. ಐ. ಇ., ಯವರನ್ನೂ ಇತರ ಮುಖಂಡರಾದ ಪ್ಲಾಂಟರುಗಳನ್ನೂ ಕಂಡು, ಕಾಫೀ ವ್ಯವಸಾಯಕ್ಕೆ ಮುಖ್ಯಪ್ರದೇಶಗಳಾದ ಮೂಡಗೆರೆಯಲ್ಲಿಯೂ ಸಕಲೇಶಪುರದಲ್ಲಿಯೂ ಸಭೆಸೇರಿ, ಕಾಫೀ ವ್ಯವಸಾಯದ ಪ್ರಕೃತ ಸ್ಥಿತಿಯನ್ನು ಕುರಿತು ಅವರ ಸಂಗಡ ಪರ್ಯಾಲೋಚನೆ ಮಾಡಿದರು. ಅಲ್ಲಿ ಪರ್ಯಾಲೋಚಿಸಿದ ಮುಖ್ಯ ಸಂಗತಿಗಳು ಯಾವವೆಂದರೆ:— ಪ್ಲಾಂಟರ ಹಕ್ಕುಗಳನ್ನು ರಿಜಸ್ಟರ್ ಮಾಡುವದು, ಕಾಫಿ ತೆರಿಗೆಯ ವಸೂಲಿ, ಕಾಫೀ ಕಲಪಟವಾಗದಿರುವಂತೆ ಮಾಡುವ ಉಪಾಯಗಳು, ಇನ್ನು ಕೆಲವು ಇತರ ವಿಷಯಗಳು—ಇವೇ. ಅಲ್ಲಿ, ಕಾಫೀ ಕಳವಿನ ಆಕ್ಟು, ಕೂಲಿಯವರಿಗೆ ಸಂಬಂಧಪಟ್ಟ ಕಾನೂನು, ಇವೂಕೂಡ ಯಥಾಯೋಗ್ಯವಾಗಿ ಆಲೋಚಿಸಲ್ಪಟ್ಟವು. ತಮ್ಮ ಕೃಷಿಯಿಂದ ಈ ಸಂಸ್ಥಾನಕ್ಕೆ ವಿಶೇಷ ಪ್ರಯೋಜನವನ್ನುಂಟುಮಾಡಿದ ಸಾಹಸಿಗಳಾದ ಈ ಕಾಫೀ ಪ್ಲಾಂಟರುಗಳ ಸಂಘದ ವಿಷಯದಲ್ಲಿ ಸರ್ಕಾರದವರು ತಾವು ಅಭಿಮಾನವಿಟ್ಟಿರುವದಾಗಿಯೂ ತಮ್ಮಿಂದಾಗುವ ಸಹಾಯವನ್ನು ಮಾಡುವದಾಗಿಯೂ ಸಂಪೂರ್ಣವಾದ ಭರವಸೆ ಕೊಟ್ಟಿದಾರೆ. 1904ನೆಯ ವರ್ಷದಲ್ಲಿ ಲೂಯಿಸಾನ ಎಂಬಲ್ಲಿ ನಡೆಯುವ ಪರ್ಚೆಸ್ ಎಕ್ಸ್ಪೊಸಿಷನ್ ಎಂಬಸಂತೆಯಲ್ಲಿ ಇಲ್ಲಿಯ ಕಾಫೀ ಮತ್ತು ಏಲಕ್ಕಿಗಳನ್ನು ಪ್ರದರ್ಶನಮಾಡಲು ಸಹಾಯಮಾಡುವದಕ್ಕಾಗಿಸರ್ಕಾರದವರು ಪ್ಲಾಂಟರುಗಳ ಸಂಘಕ್ಕೆ 5,000 ರೂಪಾಯಿ ಕೊಡುವಂತೆ ಈಚೆಗೆ ಮಂಜೂರ್ಮಾಡಿದಾರೆ.

ವ್ಯವಸಾಯದ ಬ್ಯಾಂಕುಗಳು.—ವ್ಯವಸಾಯದ ಬ್ಯಾಂಕುಗಳು ಅತೃಪ್ತಿಕರವಾದ ಸ್ಥಿತಿಯು ಹಿಂದಿನ ಉಪ[illegible]ಸಗಳಲ್ಲಿ ವಿವರಿಸಿದೆ. ಈ ವರ್ಷ, ಸರ್ಕಾರಕ್ಕೆ ಬರಬೇಕಾದ ಕಿಸ್ತುಗಳನ್ನು ಪಾವತಿ ಮಾಡುವದಕ್ಕಾಗಿ ಕ್ಲಿಪ್ತಕಾಲಗಳನ್ನು ವಿಧಿಸಿ, ಹುಕುಂ ಕೊಡಲಾಯಿತು. ಈ ಪ್ರಕಾರ 58,780 ರೂಪಾಯಿ ವಸೂಲಾಯಿತು. ಎಲ್ಲಾ ಬ್ಯಾಂಕುಗಳಿಂದಲೂ ಸರ್ಕಾರಕ್ಕೆ, ಒಟ್ಟು 12,99,523 ರೂಪಾಯಿ ಬಾಕಿ ಬರಬೇಕಾಗಿದೆ. ಚಿಕ್ಕಮಗಳೂರಿನ ಮತ್ತು ಸಕಲೇಶಪುರದ ಕಾಫಿ ಬ್ಯಾಂಕುಗಳಿಗೆ ಆಧಾರವಾಗಿರುವ ಕಾಫಿತೋಟಗಳು ಇತೋಪ್ಯಧಿಕವಾದ ಹೀನಸ್ಥಿತಿಗೆ ಬಾರದಂತೆ ನೋಡಿಕೊಳ್ಳುವದಕ್ಕೋಸ್ಕರ ಮಾಡಬೇಕಾದ ಅಂಶಗಳನ್ನು ಸರ್ಕಾರಕ್ಕೆ ತಿಳಿಸುವದಕ್ಕಾಗಿ ಕಳೆದ ವರ್ಷ ಒಬ್ಬ ಇನ್ಸ್ಪೆಕ್ಟರನ್ನು ನೇಮಿಸಿತು. ಈ ಇನ್ಸ್ಪೆಕ್ಟರವರ ಶಿಫಾರಸ್ಸಿನಮೇರೆ ಅವಶ್ಯಕವಾದ ಮುಂಗಡಗಳನ್ನು ಕೊಡುವದಕ್ಕಾಗಿ 1,10,000 ರೂಪಾಯಿ ಮಂಜೂರ್ಮಾಡಲಾಯಿತು. ಈ ಮೊಬಲಗಿನ ಸರಿಯಾದ ವಿನಿಯೋಗವನ್ನು ನೋಡಿಕೊಳ್ಳುವ ಭಾರವೂ ಕೂಡ ಈ ಇನ್ಸ್ಪೆಕ್ಟರಿಗೇ ಸೇರಿದೆ.

ಈಕೆಲಸಕ್ಕಾಗಿ ಬೇರೆ ಒಬ್ಬ ಅಧಿಕಾರಿಯನ್ನು ನಿಯಮಿಸಲಾಗಿ ಈ ಬ್ಯಾಂಕುಗಳ ಅಭಿವೃದ್ಧಿವಿಷಯದಲ್ಲಿ ಸ್ಥಳೀಯಾಧಿಕಾರಿಗಳಿಗೆ ಅಭಿಮಾನಕಡಿಮೆಯಾಗುವಂತೆ ಕಾಣಬಂದದ್ದರಿಂದ ಶ್ರೀಮನ್ಮಹಾರಾಜರವರ ಸರ್ಕಾರದವರು ವ್ಯವಸಾಯಬ್ಯಾಂಕ್ ಇನ್ಸ್ಪೆಕ್ಟರ್ ಕೆಲಸವನ್ನು ವಜಾಮಾಡಿರುತ್ತಾರೆ.

ಈ ಬ್ಯಾಂಕುಗಳು ದುರದೃಷ್ಟವಶದಿಂದ ಅಭಿವೃದ್ಧಿಗೆ ಬರಲಿಲ್ಲ. ಪ್ರಥಮತಃ ಜನಗಳಲ್ಲಿ ಏಕೀಭವಿಸಿ ಕಾರ್ಯಮಾಡುವ ಗುಣವಿಲ್ಲದ್ದರಿಂದಲೂ ಸಾಲ ತೆಗೆದುಕೊಂಡ ಹಣದ ವಿನಿಯೋಗದ ವಿಷಯದಲ್ಲಿ ಬ್ಯಾಂಕು ಏರ್ಪಡಿಸಿದವರು ಸರಿಯಾಗಿ ನೋಡಿಕೊಳ್ಳದೆ ಹೋದ್ದರಿಂದಲೂ, ಇದುವರೆಗೂ ನೋಡಿದ್ದಲ್ಲಿ, [illegible]ರ್ಪಾಡು ಸಫಲವಾಗಲಿಲ್ಲವೆಂದು ಹೇಳಬೇಕಾದ್ದಾಗಿದೆ. ಈ ಬ್ಯಾಂಕುಗಳಿಗೆ ಬೇಕಾದ ಎಲ್ಲಾ ಹಣವನ್ನೂ ಸರ್ಕಾರದವರೇ ನೇರಾಗಿ ಕೊಟ್ಟಪ್ರಯುಕ್ತ, ಜನಗಳಲ್ಲಿ, ಸ್ವಸಹಾಯಬುದ್ಧಿಯೂ ಏಕೀಭವಿಸಿ ಕಾರ್ಯಮಾಡುವ ಶಕ್ತಿಯೂ ಕಡಿಮೆಯಾಗುವುದಕ್ಕೆ ಕಾರಣವಾಗಿರಬಹುದು. ಆದಕಾರಣ ಸರ್ಕಾರದವರು ಈ ಬ್ಯಾಂಕುಗಳಿಗೆ ಹೆಚ್ಚು ಮೊಬಲಗನ್ನು ಸಾಲಕೊಡುವ ಸಾಮರ್ಥ್ಯವುಳ್ಳವರಾಗಿದ್ದರೂ ಕೂಡ ಹಾಗೆ ಕೊಡುವುದು ಸೂಕ್ತವಾಗಿ ತೋರುವುದಿಲ್ಲ. ಇದಕ್ಕೆ ಪ್ರತಿಯಾಗಿ ಸರ್ಕಾರದವರು ಕೆಲವು ಗೊತ್ತಾದ ಸಂದ

ರ್ಥಗಳಲ್ಲಿ ಸಾವಕಾರಿ ಲೇವದೇವಿಗಳಿಗೆ ತಾವೇ ಜವಾಬ್ದಾರರಾಗಿ ನಿಂತು ಬಾಕಿ ವಸೂಲಾತಿಯಲ್ಲಿಯೂ ಜಮೀನುಗಳ ಬೆಲೆ ಗೊತ್ತುಮಾಡುವುದರಲ್ಲಿಯೂ ಸಾಲ ತೆಗೆದುಕೊಂಡ ಮೊಬಲಗಿನ ಉದ್ದೇಶಾನುಸಾರವಾದ ವಿನಿಯೋಗದಲ್ಲಿಯೂ ಸಾಲಗಾರರ ಮೇಲೆ ಬ್ಯಾಂಕಿಗಿರುವ ಹಕ್ಕನ್ನು ಕ್ಷಿಪ್ರದಲ್ಲಿಯೇ ತೀರ್ಮಾನಮಾಡುವ ಮಾರ್ಗವನ್ನು ಹುಡುಕುವುದರಲ್ಲಿಯೂ ಸಹಾಯಮಾಡಿದಬಳಿಕಲಾದರೂ ಈ ವ್ಯವಸ್ಥೆಗಳು ಸಾವಕಾರಿ ಲೇವದೇವಿಗಳನ್ನೂ ವ್ಯವಸಾಯ ಕಾರ್ಯಕ್ಕಾಗಿ ಮುಂಗಡದ ಮೊಬಲಗನ್ನೂ ಆಕರ್ಷಿಸುವಪಕ್ಷಕ್ಕೆ ಈ ಬ್ಯಾಂಕುಗಳು ಇಲ್ಲಿಯ ಜನರಲ್ಲಿ ಮಿತವ್ಯಯವನ್ನೂ ಪರಸ್ಪರ ನಂಬಿಕೆಯನ್ನೂ ಸಾಲತೀರಿಸುವ ಶಕ್ತಿಯನ್ನೂ ಪರಸ್ಪರ ಸಹಾಯಮಾಡುವ ಬುದ್ಧಿಯನ್ನೂ ವೃದ್ಧಿಪಡಿಸುವವೆಂದು ಹೇಳಬಹುದು. ಇದು ಬಹಳ ಗೌರವವಾದ ವಿಷಯವಾಗಿದೆ. ಆದ್ದರಿಂದ ಈಗಿರುವ ಬ್ಯಾಂಕುಗಳು ಸಾಧ್ಯವಾದ ಮಟ್ಟಿಗೆ ಒಳ್ಳೆಯ ಸ್ಥಿತಿಗೆ ಬಂದ ಅನಂತರದಲ್ಲಿಯೇ ಮೇಲೆ ವಿವರಿಸಿದ ರೀತಿಯಲ್ಲಿ ಕೆಲಸವನ್ನು ಉಪಕ್ರಮಿಸಬೇಕಾಗುತ್ತದೆ. ಹಣವನ್ನು ಭೂಮಿಯಮೇಲೆಯೂ ಇತರ ಪದಾರ್ಥಗಳ ಮೇಲೆಯೂ ಹಾಕಿ ಮಳೆಬೆಳೆಗಳು ಸರಿಯಾಗಿ ನಡೆಯದಾಗ ಕಷ್ಟಕ್ಕೆ ಸಿಕ್ಕುವ ರೈತರಿಗೆ ಸುಲಭವಾದ ಬಡ್ಡಿಗೆ ಸಾಲವನ್ನು ದೊರಕಿಸಿಕೊಡುವದು ಅತ್ಯವಶ್ಯಕವೆಂಬುದರಲ್ಲಿ ಸಂದೇಹವೇ ಇಲ್ಲ.

ಸಾಮಾನ್ಯ ವ್ಯವಸಾಯಾಭಿವೃದ್ಧಿ.—ರಾಜ್ಯವನ್ನು ವಹಿಸಿಕೊಂಡಂದಿನಿಂದ ರೈತರ ಸ್ಥಿತಿಯು ಏಕರೀತಿಯಾಗಿ ಅಭಿವೃದ್ಧಿಗೆ ಬರುತ್ತಿರುವದರಲ್ಲಿ ಸಂದೇಹವಿಲ್ಲ. ಆದರೂ ಈವಿಷಯದಲ್ಲಿ ಇನ್ನೂ ಮಾಡತಕ್ಕ ಕಾರ್ಯಗಳು ಅನೇಕವಾಗಿವೆ. ರಾಜ್ಯವನ್ನು ವಹಿಸಿಕೊಂಡದ್ದಕ್ಕೆ ಪೂರ್ವ 1875—76ರಲ್ಲಿ ಸರ್ಕಾರದ ಭೂಮಿಯ ಪೈಕಿ ರೈತರ ಹಿಡುವಳಿಯಲ್ಲಿದ್ದ ಜಮೀನಿನ ವಿಸ್ತಾರವು ಹಿಂದಿನವರ್ಷಗಳಲ್ಲಿದ್ದದ್ದಕ್ಕಿಂತ ಬಹಳ ಹೆಚ್ಚಾಗಿತ್ತು—ಎಂದರೆ 42,31,826 ಎಕರೆಯಷ್ಟಿತ್ತು. ಬಳಿಕ ಕ್ಷಾಮದದೆಸೆಯಿಂದ ಹಿಡುವಳಿಯು ಕಡಿಮೆಯಾಗುತ್ತ ಬಂದು 1881—82 ರಲ್ಲಿ, ಕಾಫಿಜಮೀನ್ಹೊರ್ತಾ, 42,13,505 ಎಕರೆಗಳು ಮಾತ್ರ ಹಿಡುವಳಿಯಲ್ಲಿದ್ದವು. ಅಲ್ಲಿಂದೀಚೆ, ವ್ಯವಸಾಯವಾಗುವ ಜಮೀನುಗಳು ಏಕರೀತಿಯಾಗಿ ಹೆಚ್ಚುತ್ತಾ ಬಂದಿವೆ. ಈವರ್ಷದ ಜುಲೈ ಗುರ್ರೆಯಲ್ಲಿ ವ್ಯವಸಾಯದಲ್ಲಿದ್ದ ಜಮೀನನ್ನು ಈ ... ಯಲ್ಲಿ ತೋರಿಸಿದೆ.

		1881.
ತರಿ	ಎಕರೆಗಳು.	5,54,554
ಖುಷ್ಕಿ	,,	35,20,687
ಬಾಗಾಯಿತು	,,	1,38,264
	ಒಟ್ಟು...	42,13,505

	1903.
	ಎಕರೆಗಳು.
ಖುಷ್ಕಿ	55'57,331
ತರಿ	7,98,904
ಬಾಗಾಯಿತು	2,43,866
ಒಟ್ಟು..	66,00,101

ರಾಜ್ಯವನ್ನು ವಹಿಸಿದಂದಿನಿಂದೀಚೆ ವ್ಯವಸಾಯದ ಜಮೀನಿನ ವಿಸ್ತಾರವು ನೂರಕ್ಕೆ 56ರಂತೆ ಹೆಚ್ಚಿದೆ. ಕಳೆದವರ್ಷ 98,387 ರೂಪಾಯಿ ಕಂದಾಯವುಳ್ಳ 11,291 ಎಕರೆಗಳು ಹೊಸದಾಗಿ ವ್ಯವಸಾಯಕ್ಕೆ ಬಂದವು. 22,830 ರೂಪಾಯಿ ಕಂದಾಯವುಳ್ಳ 23,428 ಎಕರೆ ಜಮೀನುಗಳು ರಾಜೀನಾಮೆ ಕೊಡಲ್ಪಟ್ಟವು. ಖುಷ್ಕಿಜಮೀನಿನ ನಿವ್ವಳ ಹುಟ್ಟುವಳಿಯು ಎಕರೆ ಒಂದಕ್ಕೆ 12 ರೂಪಾಯಿಯಂತೆಯೂ ತರೀಜಮೀನಿನದು 50 ರೂಪಾಯಿಯಂತೆಯೂ ಬಾಗಾಯತ್ತಿನದು 80 ರೂಪಾಯಿಯಂತೆಯೂ ಆಗುವದಾಗಿ ಪರಿಗಣಿಸಲ್ಪಟ್ಟಿದೆ. ಈ ಅಂದಾಜು ಪ್ರಾಯಶಃ ಸರಿಯಾದ್ದೆಂದು ಇಟ್ಟುಕೊಂಡು, ಸರಿಸುಮಾರಾಗಿ ಫಸಲು ಬಂದ 1902—3 ನೆಯ ವರ್ಷದ ಬೆಳೆಗೆ ಬೆಲೆಕಟ್ಟಿದರೆ ಆ ವರ್ಷದ ಒಟ್ಟು ಫಸಲಿನ ಬೆಲೆಯು 55,57,331 × 12 + 7,98,904 × 50 + 2,43,866 × 80 ರೂಪಾಯಿ ಎಂದರೆ 12½ ಲಕ್ಷಕ್ಕೆ ಸ್ವಲ್ಪ ಹೆಚ್ಚಾಗಿ ಆಗುತ್ತದೆ. ರಾಜ್ಯವನ್ನು ವಹಿಸಿಕೊಂಡ ಕಾಲದಿಂದೀಚೆ ವ್ಯವಸಾಯಕ್ರಮದಲ್ಲಿ ಯಾವ ಅಭಿವೃದ್ಧಿಯೂ ಇಲ್ಲದೆ ಹೆಚ್ಚು ಜಮೀನುಮಾತ್ರ ಕೃಷಿಗೆ ಬಂದಿರುವದರಿಂದ, ಎಕರೆ ಒಂದಕ್ಕೆ ಆಗುವ ಉತ್ಪತ್ತಿಯಲ್ಲಿ ಏನೂ ವ್ಯತ್ಯಾಸವಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದ್ದರಿಂದ 1903ನೆಯ ವರ್ಷದ ಹುಟ್ಟುವಳಿಯ ಬೆಲೆಯಿಂದಲೇ 1881ನೆಯ ವರ್ಷದ ಫಸಲಿನ ಒಟ್ಟು ಬೆಲೆಯನ್ನೂ ನಿಶ್ಚಯಿಸಬಹುದು. ಹೀಗೆ ನಿಶ್ಚಯಿಸಿದಲ್ಲಿ ಇದು 35,20,687 × 12, +

5,54×50,+1,38,264×80 ರೂಪಾಯಿಗಳು ಎಂದರೆ ಸುಮಾರು 9½ ಕೋಟಿಗಿಂತ ಸ್ವಲ್ಪ ಹೆಚ್ಚಾಗುತ್ತದೆ. 1903ನೆಯ ವರ್ಷದ ಅತ್ಯಧಿಕವಾದ ಬೆಲೆಗಳನ್ನೇ 1881ನೆಯ ವರ್ಷದ ಫಸಲುಗಳಿಗೂ ಕಟ್ಟಿರುವದರಿಂದ ಈ ಗಣನೆಯಲ್ಲಿ ಏನಾದರೂ ತಪ್ಪಿದ್ದರೂ ಕೂಡ ಅದು ಆ ವರ್ಷದ ಲೆಕ್ಕಕ್ಕೇ ಅನುಕೂಲವಾಗಿ ಇದೆ.

1901ನೆಯ ಸೆನ್ಸಸಿನ ಪ್ರಕಾರ ರೈತರ ಒಟ್ಟು ಸಂಖ್ಯೆ 36½ ಲಕ್ಷವಾದ್ದರಿಂದ ಈ ವರಮಾನವು, ತಲೆ ಒಂದಕ್ಕೆ 35 ರೂಪಾಯಂತೆ ಆಗುತ್ತದೆ. ರೈತರ ಸಂಖ್ಯೆ 33 ಲಕ್ಷವಾಗಿದ್ದ 1881ರಲ್ಲಿ ತಲೆಗೆ ಸುಮಾರು 24½ ರೂಪಾಯಂತೆ ಬಿತ್ತು.

ಆದ್ದರಿಂದ ಒಟ್ಟು ಸಾಗುವಳಿ ಜಮೀನು ಹೆಚ್ಚಿದ್ದರಿಂದಲೂ ತರೀ ಸಾಗುವಳಿ ಹೆಚ್ಚಿದ್ದರಿಂದಲೂ ಬೆಲೆಗಳು ಹೆಚ್ಚಿದ್ದರಿಂದಲೂ ದೇಶದ ವ್ಯವಸಾಯಸಂಪತ್ತು ಹೆಚ್ಚಾಯಿತೆನ್ನುವದರಲ್ಲಿ ಸಂದೇಹವಿಲ್ಲ. ಒಟ್ಟಿನಲ್ಲಿ ನೋಡಿದರೆ ರೈತರ ಸ್ಥಿತಿಯು ಒಂದೇರೀತಿಯಾಗಿ ಅಭಿವೃದ್ಧಿಗೆ ಬರುತ್ತಿದೆಯೇ ಹೊರತು ಅದಕ್ಕೆ ಯಾವ ಪ್ರಬಲವಾದ ಪ್ರತಿಬಂಧಕವೂ ಇರುವ ಹಾಗೆ ಕಾಣುವದಿಲ್ಲ. ಕಳೆದ ಹತ್ತು ವರ್ಷದ ಜಮೀನ್ ವರ್ಗಾವರ್ಗಿಯ ಲೆಕ್ಕಗಳೇನೆಂದರೆ :—

	ಕೋರ್ಟು ಮೂಲಕ.		ಸ್ವಂತ ವಿಕ್ರಯದ ಮೂಲಕ.	
	ಜಮೀನ್ ಸಂಖ್ಯೆ.	ವಿಸ್ತಾರ.	ಜಮೀನ್ ಸಂಖ್ಯೆ.	ವಿಸ್ತಾರ.
ಮೊದಲೈದು ವರ್ಷಗಳಲ್ಲಿ	1,400	7,220 ಎಕರೆ	16,279	86,218 ಎಕರೆ
ಕಡೆಯ ಐದುವರ್ಷಗಳಲ್ಲಿ	589	3,451 ,,	16,084	83,133 ,,

ಈ ಎರಡು ಪಂಚಕಗಳಲ್ಲಿಯೂ ಸ್ವಂತ ವಿಕ್ರಯದಿಂದುಂಟಾದ ವರ್ಗಾವರ್ಗಿಗಳಲ್ಲಿ ವಿಶೇಷ ವ್ಯತ್ಯಾಸ ಕಾಣದಿದ್ದರೂ ಕೋರ್ಟು ಮೂಲಕವಾಗಿ ಆದ ವರ್ಗಾವರ್ಗಿ ಕಡಿಮೆಯಾಗಿದೆ. ಕೋರ್ಟಿನ ನಿರ್ಬಂಧದಿಂದ ರೈತರ ಕೈಬಿಟ್ಟುಹೋಗುವ ಜಮೀನಿನ ಸಂಖ್ಯೆಯು ಕಡಿಮೆಯಾದ್ದನ್ನು ನೋಡಿದರೆ ಸಾಮಾನ್ಯ ರೈತನು ವಿಶೇಷ ಪುಷ್ಟನಾಗದೆ ಹೋದಾಗ್ಗ್ಯೂ ತನ್ನ ಆಸ್ತಿಯನ್ನು ಉಳಿಸಿಕೊಳ್ಳುವ ಹಾಗಾದರೂ ಇದ್ದಾನೆಂಬುದಕ್ಕೆ ಒಳ್ಳೆ ಪ್ರಮಾಣವಾಗಿದೆ. ಈ ಅಭಿಪ್ರಾಯವೇ ಸರಿಯಾದ್ದೆಂಬುದಕ್ಕೆ, ಭೋಗ್ಯಾಧಾರಗಳ ರಿಜಿಸ್ಟ್ರೇಷನ್ ಲೆಕ್ಕಗಳೂ ಕೂಡ ಸಾಕ್ಷಿಗಳಾಗಿವೆ. ಸ್ಥಿರಸ್ವತ್ತಿನ ಆಧಾರದಿಂದ ಪಡೆದ ಸಾಲದ ಒಟ್ಟು ಮೊಬಲಗನ್ನು ಹೋಲಿಸಿ ನೋಡಿದರೆ 1901—02ಕ್ಕೆ ಮುಗಿದ ಪಂಚಕದಲ್ಲಿದ್ದದ್ದಕ್ಕಿಂತ ಸುಮಾರು 1½ ಲಕ್ಷ ರೂಪಾಯಷ್ಟು ಕಡಿಮೆಯಾಗಿದೆ. ಈ ಸಾಲದಲ್ಲಿ ಇಷ್ಟೇ ಭಾಗ ಮನೆಗೆ ಸಂಬಂಧಪಟ್ಟದ್ದು, ಇಷ್ಟೇ ಭಾಗ ಜಮೀನಿಗೆ ಸಂಬಂಧಪಟ್ಟದ್ದು ಎಂದು ನಿಷ್ಕರ್ಷಿಸಿ ಹೇಳಲಾಗುವದಿಲ್ಲ. ಆದರೆ ಹಳ್ಳಿಗಾಡುಗಳಲ್ಲಿ ಭೋಗ್ಯಾಧಾರಗಳ ವಿಷಯದಲ್ಲಿ ಮನೆಗಿಂತಲೂ ಜಮೀನಿನಲ್ಲಿ ಅಪೇಕ್ಷೆ ಹೆಚ್ಚೆಂಬ ಅಂಶವು ಅನುಭವಸಿದ್ಧವಾಗಿದೆ. ಮನೆಗಳ ಸಂಖ್ಯೆಯು ಜಮೀನುಗಳ ಸಂಖ್ಯೆಗಿಂತ ಕಡಿಮೆಯಾಗಿರುವದರಿಂದ ಸ್ಥಿರಾಧಾರಸಾಲದ ಮೊಬಲಗು ವಿಶೇಷವಾಗಿ ಜಮೀನಿಗೇ ಸಂಬಂಧಪಟ್ಟಿರಬೇಕು. ಈ ಸಾಲದ ಮೊಬಲಗನ್ನು ಈ ದೇಶದ ರೈತರುಗಳ ಒಟ್ಟು ವರಮಾನದೊಡನೆ ಹೋಲಿಸಿ ನೋಡಿದರೆ ಅದು ಅತ್ಯಲ್ಪವಾಗಿಯೇ ಇದೆ. ಈಚೆಗೆ ಹೆಚ್ಚು ಜಮೀನು ವ್ಯವಸಾಯಕ್ಕೆ ಬಂದದ್ದನ್ನು ಜ್ಞಾಪಕದಲ್ಲಿಟ್ಟುಕೊಂಡು, ಅಲ್ಪವಾದ ಈ ಸಾಲವೂ ಕೂಡ ಎರಡನೆಯ ಪಂಚಕದಲ್ಲಿ ಕಡಿಮೆಯಾದ್ದನ್ನು ನೋಡಿದರೆ, ರೈತರ ಸ್ಥಿತಿಯು ಏಕರೀತಿಯಾಗಿ ಅಭಿವೃದ್ಧಿಗೆ ಬರುತ್ತಿದೆಯೆಂಬುದಕ್ಕೆ ಒಂದು ಪ್ರಬಲವಾದ ನಿದರ್ಶನವಾಗಿದೆ. 1893ರಿಂದ 1897 ರವರೆಗಿನ ಐದುವರ್ಷಗಳಲ್ಲಿದ್ದ ಪ್ರತಿಒಂದು ಹಿಡುವಳಿಯ ಸರಾಸರಿ ವಿಸ್ತೀರ್ಣವು 4·8 ಎಕರೆ ಇದ್ದದ್ದು ಎರಡನೆಯ ಪಂಚಕದಲ್ಲಿ 7·22 ಎಕರೆಗೆ ಏರಿತು ; ಹಾಗೆಯೇ ಪ್ರತಿಒಂದು ಹಿಡುವಳಿಯ ಕಂದಾಯವೂ ಕೂಡ 6·3 ಇದ್ದದ್ದು 9·62ಕ್ಕೆ ಏರಿತು. ವ್ಯವಸಾಯದ ಲೆಕ್ಕಗಳ ಆಜಮಾಯಿಷಿಯಿಂದ ನಮಗೆ ತಿಳಿದುಬಂದ ಸಂಗತಿಗಳನ್ನೇ, ಹಿರಿಯೂರು ಮತ್ತು ದಾವಣಗೆರೆ ತಾಲೂಕುಗಳ ರಿವಿಷನ್ ಸೆಟಲ್ಮೆಂಟು ಸಂಬಂಧದಲ್ಲಿ ಕರ್ನಲ್ ಗ್ರಾಂಟಸಾಹೇಬರವರು ಮಾಡಿದ ವಿಚಾರಗಳೂ ದೃಢೀಕರಿಸುತ್ತವೆಯೆಂಬುದು, ತೃಪ್ತಿಕರವಾದ ವಿಷಯವಾಗಿದೆ.

		ರೂ.
[illegible]ಯ ಪಂಚಕ	...	50,94,535
ಎರಡನೆಯ ಪಂಚಕ	...	49,34,546
ವ್ಯತ್ಯಾಸ	...	1,59,988

ಮೊದಲನೆಯ ಸೆಟಲ್ಮೆಂಟಿನಿಂದ ಈಚೆಗೆ, ದಾವಣಗೆರೆ ತಾಲೂಕಿನಲ್ಲಿ 58,000 ಎಕರೆಗಳೂ ಹಿರಿಯೂರು ತಾಲೂಕಿನಲ್ಲಿ ಸುಮಾರು 41,000 ಎಕರೆಗಳೂ ಹೊಸದಾಗಿ ಸಾಗುವಳಿಗೆ ಬಂದಂತೆ ಈ ವಿಚಾರಗಳಿಂದ ತಿಳಿಯಬರುತ್ತದೆ. ರೇಲ್ವೆ ಹಾಕಿದ್ದರಿಂದಲೂ ದೇಶಾಟನಕ್ಕೆ ಬೇಕಾದ ಇತರ ಅನುಕೂಲ್ಯಗಳನ್ನು ಉಂಟುಮಾಡಿದ್ದರಿಂದಲೂ ಇಲ್ಲಿಯ ಧಾನ್ಯಗಳು ಹೊಸಸ್ಥಳಗಳಿಗೆ ರಫ್ತಾಗುವದಕ್ಕೆ ಅನುಕೂಲವಾಯಿತು. ಮೊದಲ ಸೆಟಲ್ಮೆಂಟಿನಿಂದೀಚೆ ಮುಖ್ಯವಾದ ಆಹಾರಧಾನ್ಯಗಳ ಬೆಲೆಗಳು, ಸೇಕಡ 30ರಿಂದ 40ಕ್ಕೆ ಏರಿದವು. ಜಮೀನುಗಳ ಭೋಗ್ಯದ ಮತ್ತು ಕ್ರಯದ ಮೊಬಲಗು ಕಂದಾಯದ 33ರಷ್ಟು ಇದ್ದದ್ದು 40ರಷ್ಟಕ್ಕೆ ಏರಿತು. 1881ರಲ್ಲಿ ದಾವಣಗೆರೆಯ ಪ್ರಜಾಸಂಖ್ಯೆ 94,560 ಇದ್ದದ್ದು 1901

ರಲ್ಲಿ 1,08,546ಕ್ಕೆ ಏರಿತು: ಹಿರಿಯೂರಿನಲ್ಲಿ 54,307 ರಿಂದ 66,290ಕ್ಕೆ ಏರಿತು. ಮನೆ, ಬ ನೇಗಿಲು ಇವುಗಳ ಸಂಖ್ಯೆಯೂ ಬಹಳವಾಗಿ ಹೆಚ್ಚಿತು. ಕಾಲ್ನಡೆಗಳ ಸಂಖ್ಯೆಮಾತ್ರ ಕಡಿಮೆಯಾಯಿತು. ಆದರೆ ಗಾಡಿಗಳೂ ನೇಗಿಲುಗಳೂ ಹೆಚ್ಚಾದ್ದರಿಂದ ದೊಡ್ಡಪ್ರಾಣಿಗಳ ಸಂಖ್ಯೆ ಬೇರೆ ಕಡಿಮೆಯಾಗಿರಲಾರದು.

ಮೇಲೆ ವಿವರಿಸಿದ ರೈತರ ಸ್ಥಿತಿಯು, ಅಭಿವೃದ್ಧಿಸೂಚಕವಾಗಿದ್ದಾಗ್ಯೂ ಇಷ್ಟುಮಾತ್ರಕ್ಕೇ ನಾವು ತೃಪ್ತರಾಗಿ ಉದಾಸೀನಭಾವವನ್ನು ವಹಿಸಕೂಡದು. ಮುಂದೆ ಸುಭಿಕ್ಷಕಾಲದಲ್ಲಿ ಜನಸಂಖ್ಯೆಯು ವಿಶೇಷವಾಗಿ ಹೆಚ್ಚಾಗಿ ಆಹಾರಸಮೃದ್ಧಿಯು ಕಡಿಮೆಯಾಗಬಹುದು. ಇದೂ ಅಲ್ಲದೆ ರೈತನು ಕೇವಲದರಿದ್ರನಾಗಿಲ್ಲದಿದ್ದರೂ ಅವನ ವರಮಾನವು ಇತರರ ವರಮಾನಕ್ಕಿಂತಲೂ ಅಲ್ಪವಾಗಿರುವದರಿಂದ ಅವನ ಸ್ಥಿತಿಯನ್ನು ಇನ್ನೂ ಅಭಿವೃದ್ಧಿಗೆ ತರತಕ್ಕದ್ದಾಗಿದೆ. ಒಂದುಹುಲ್ಲುಗರಿ ಬೆಳೆಯುವಕಡೆ ಸಾಧ್ಯವಾದರೆ ಎರಡನ್ನು ಬೆಳಸುವದು ವಿವೇಕವೆಂಬ ವಿಷಯದಲ್ಲಿ ಯಾರೂ ಆಕ್ಷೇಪಿಸಲಾರರು. ಆದ್ದರಿಂದ ಈ ದೇಶದ ಈಗಿನ ಸ್ಥಿತಿಯಲ್ಲಿ ವ್ಯವಸಾಯವನ್ನು ಯಾವವಿಧವಾಗಿ ಅಭಿವೃದ್ಧಿಮಾಡಲು ಯತ್ನಿಸಬೇಕೆಂಬುದೇ ವಿಚಾರಣೀಯವಾದ ವಿಷಯವಾಗಿದೆ.

ಫಸಲಿನ ಅಜಮಾಯಿಷಿಕ್ರಮ.—ಫಸಲಿನ ಅಜಮಾಯಿಷಿಕ್ರಮವನ್ನು ಕೆಲವು ಮಾರ್ಗಗಳಲ್ಲಿ ಅಭಿವೃದ್ಧಿಪಡಿಸಬಹುದು. ಪ್ರಕೃತದಲ್ಲಿ ರೈತರಿಗೆ ಅಂತಹ ಕೆಲಸಗಳಲ್ಲಿ ಅಭಿರುಚಿಯಿಲ್ಲ. ಆದ್ದರಿಂದ ತಾಲೂಕುಗಳ ಸಮೀಪದಲ್ಲಿರುವ ಗ್ರಾಮಗಳಲ್ಲಿ ಬುದ್ಧಿವಂತರಾದ ಒಬ್ಬೊಬ್ಬರೈತರನ್ನು ಗೊತ್ತುಮಾಡಿ ಅವರಿಗೆ ಒಳ್ಳೆ ಬಿತ್ತನೆ ಕಾಳನ್ನೂ ಗೊಬ್ಬರವನ್ನೂ ಕೊಂಡುಕೊಳ್ಳುವದಕ್ಕೆ ಸಹಾಯಮಾಡಿ ಅವರ ಜಮೀನಿನ ಒಂದೆರಡು ತಾಕುಗಳಲ್ಲಿ ಸರಿಯಾದ ಕಾಲದಲ್ಲಿ ಪೈರು ಮಾಡುವಂತೆ ಏರ್ಪಾಡು ಮಾಡಬಹುದು. ಬೇರೆಬೇರೆ ತಾಲ್ಲೂಕುಗಳಲ್ಲಿ ಆದ ಬೆಳೆಯನ್ನು ಪ್ರತಿವರ್ಷವೂ ಆಯಾ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲಿ ಮಿಂತವಾಗಿ ಪ್ರದರ್ಶನ ಮಾಡುವಂತೆ ಏರ್ಪಡಿಸಿ ಉತ್ತಮವಾದವುಗಳಿಗೆ ಬಹುಮಾನಗಳನ್ನು ಕೊಡಬಹುದು. ಈ ಕಾರ್ಯಕ್ಕಾಗಿ ಸರಕಾರದವರುಸ್ವಲ್ಪ ಹಣವನ್ನು ಖರ್ಚುಮಾಡಿದಲ್ಲಿ ರೈತರುಗಳಲ್ಲಿ ಪರಸ್ಪರ ಪೋಟಾಪೋಟಿಯುಂಟಾಗಿ ಅವರಿಗೆ ಅನೇಕ ಉಪಯುಕ್ತವಾದ ಅಂಶಗಳು ತಿಳಿಯುವದಕ್ಕೆ ಕಾರಣವಾಗುವದು. ಈ ಪ್ರದರ್ಶನಗಳಿಗೆ, ದನಗಳನ್ನೂ ಅವುಗಳಿಂದುಂಟಾಗುವ ಹಾಲು ಬೆಣ್ಣೆ ಮೊದಲಾದವುಗಳನ್ನೂ ಕೂಡ ಸೇರಿಸಬಹುದು.

ವ್ಯವಸಾಯ ವಿದ್ಯಾಭ್ಯಾಸ.—ಇದರ ಮೇಲೂ ವ್ಯವಸಾಯ ವಿದ್ಯಾಭ್ಯಾಸ ವಿಷಯದಲ್ಲಿ ಈಗಲೇ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗಿದೆ. ಈ ವಿಷಯದಲ್ಲಿ ಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆದು ಅದನ್ನು ಸ್ಕೂಲುಗಳಲ್ಲಿ ಪಾಠ ಹೇಳಿಸುವ ಏರ್ಪಾಡು ಮಾಡಿದ್ದು ಒಂದು ಹೊರತು ಇನ್ನೇನೂ ಹೆಚ್ಚಾಗಿ ಮಾಡಿಲ್ಲ. ಮದ್ರಾಸ್ ಸೈದಾಪೇಟೆ ವ್ಯವಸಾಯ ಪಾಠಶಾಲೆಯಲ್ಲಿ ಶಿಕ್ಷಿತರಾದ ಮೈಸೂರು ವಿದ್ಯಾರ್ಥಿಗಳಿಂದ ಇಲ್ಲಿಯರೈತರಿಗೆ ವಿಶೇಷಪ್ರಯೋಜನವೇನೂ ಆದಹಾಗೆ ಕಾಣುವದಿಲ್ಲ. ಯದ್ಯಪಿ ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ವ್ಯಾಸಂಗಮಾಡುವ ಉಪಾಧ್ಯಾಯರುಗಳಿಗೆ ವ್ಯವಸಾಯವನ್ನು ಕಾರ್ಯತಃ ಕಲಿಸುತ್ತಾರೆ. ಆದರೆ ಈ ಉಪಾಧ್ಯಾಯರಲ್ಲಿ ಯಾರಿಗೂ, ತಮ್ಮ ಪಾಠಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ವ್ಯವಸಾಯ ವಿಷಯದಲ್ಲಿ ಉಪಯುಕ್ತಾಂಶಗಳನ್ನು ಬೋಧಿಸುವದಕ್ಕೆ ತಕ್ಕ ಉತ್ಸಾಹವೂ ಇಲ್ಲ ಉಪಪತ್ತಿಯೂ ಇಲ್ಲ, ಇದೂಅಲ್ಲದೆ ಆ ಉಪಾಧ್ಯಾಯರಿಗ ವ್ಯವಸಾಯವನ್ನು ಬೋಧನೆಮಾಡುವ ಕ್ರಮದಲ್ಲಿಯೇ ತಿದ್ದುಪಾಟುಮಾಡತಕ್ಕ ಅಂಶಗಳಿವೆ. ಈ ಉದ್ದೇಶದಿಂದಲೇ, ಆ ಉಪಾಧ್ಯಾಯರುಗಳ ತಿಳಿವಳಿಕೆಯು ಹೆಚ್ಚಿ ಕಾರ್ಯತಃ ಉಪಯೋಗವಾಗುವಂತೆ ಮಾಡುವದಕ್ಕಾಗಿ ಅವರು ವ್ಯಾಸಂಗ ಮಾಡುವ ಕಾಲವನ್ನು ಇನ್ನೂ ಸ್ವಲ್ಪ ಹೆಚ್ಚಿಸಬೇಕೆಂದು ಆಲೋಚಿಸಿದೆ. ಮೇಲೆಯೂ ಮುಖ್ಯವಾದ ಗ್ರಾಮಗಳಲ್ಲಿರುವ ಪಾಠಶಾಲೆಗಳಿಗೆ ಸಣ್ಣ ಸಣ್ಣ ತಾಕುಗಳನ್ನೂ, ಒಳ್ಳೇಬೀಜವನ್ನೂ ಗೊಬ್ಬರವನ್ನೂ ಕೊಂಡುಕೊಳ್ಳುವದಕ್ಕಾಗಿ ಸ್ವಲ್ಪ ಮೊಬಲಗನ್ನೂ, ಕೊಟ್ಟರೆ ಪ್ರಯೋಜನಕಾರಿಯಾಗುವದು. ಈ ತಾಕುಗಳಲ್ಲಿ ಪೈರುಮಾಡುವ ಕೆಲಸವನ್ನು, ಉಪಾಧ್ಯಾಯರು, ತಮ್ಮ ಮೇಲ್ವಿಚಾರಣೆಯಿಂದ, ಹುಡುಗರಿಂದಲೇ ಮಾಡಿಸಬೇಕು. ಒಂದೊಂದು ತಾಲೂಕಿಗೆ ಸೇರಿದ ಪಾಠಶಾಲೆಗಳ ಬೆಳೆಗಳಪ್ರದರ್ಶನವನ್ನು ಆಯಾ ತಾಲೂಕು ಹೆಡ್‌ಕ್ವಾರ್ಟರುಗಳಲ್ಲಿ ನಡಿಸಿ ಉತ್ತಮವಾದವುಗಳಿಗೆ ಬಹುಮಾನಗಳನ್ನುಕೊಟ್ಟರೆ ಹಾಗೆ ಬಹುಮಾನವನ್ನು ಪಡೆದ ಹುಡುಗರ ತಂದೆಗಳಿಗೆ ಈ ವಿಷಯದಲ್ಲಿ ಆಸಕ್ತಿಯುಂಟಾಗುವದು ಸಹಜವಾಗಿಯೇ ಇದೆ.

ಸಾಮಾನ್ಯ ವ್ಯವಸಾಯಾಭಿವೃದ್ಧಿ.—ಇತರ ವಿಷಯಗಳಲ್ಲಿಯೂ ಕೂಡ ತಕ್ಕಪ್ರಯತ್ನಗಳನ್ನು ಮಾಡಬೇಕಾಗಿದೆ. ರಾಜ್ಯವನ್ನು ವಹಿಸಿಕೊಂಡ ತರುಣದಲ್ಲಿ ನಮ್ಮ ರೈತರಿಗೆ ಮೇಲುಪಂಕ್ತಿಯಾಗಿರಬಹುದೆಂದು ನಿರೀಕ್ಷಿಸಿ ಯೂರೋಪಿಯನ್‌ಜನರ ವ್ಯವಸಾಯಕ್ಕಾಗಿ ಮಾಡಿಕೊಟ್ಟ ವಸತಿಗಳು ಸಫಲವಾಗದೆಹೋದವು. ಇಂಡಿಯಾದೇಶದ ಇತರ ಭಾಗಗಳಲ್ಲಿರುವ ರೈತರಂತೆಯೇ ಮೈಸೂರು ರೈತನೂ ತನ್ನ ಹಳೆಪದ್ಧತಿಯನ್ನು ಜಾಗ್ರತೆ

ಯಾಗಿ ಬಿಡತಕ್ಕವನಲ್ಲವಾದರೂ ಕಾರ್ಯತಃ ಸುಲಭವಾದ ಮಾರ್ಗವನ್ನು ತೋರಿಸಿಕೊಟ್ಟಲ್ಲಿ ತನ್ನ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವದಕ್ಕೆ ಸಿದ್ಧನಾಗಿದ್ದಾನೆ. ಕಬ್ಬಿಣದಲ್ಲಿಮಾಡಿದ ಉತ್ತಮವಾದ ಕಬ್ಬಿನ ಗಾಣಗಳನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳುತ್ತಿರುವದೇ ಇದಕ್ಕೆ ದೃಷ್ಟಾಂತವಾಗಿದೆ. ಹೊಸ ನೇಗಿಲುಗಳನ್ನೂ ಇತರವಾದ ವ್ಯವಸಾಯದ ಉಪಕರಣಗಳನ್ನೂ ಇಲ್ಲಿ ಬಳಕೆಯಲ್ಲಿ ತರುವದಕ್ಕಾಗಿ ಹಿಂದೆ ಮಾಡಿದ ಪ್ರಯತ್ನಗಳು ವಿಶೇಷವಾಗಿ ಫಲಕಾರಿಗಳಾಗಲಿಲ್ಲ. ಸಣ್ಣಸಣ್ಣ ಹಿಡುವಳಿಗಳಿರುವ ಇಂಥ ದೇಶದಲ್ಲಿ ಉತ್ತಮವಾದ ಯಂತ್ರಗಳನ್ನು ಬಳಕೆಯಲ್ಲಿ ತರುವದಕ್ಕೆ ವಿಶೇಷ ಅವಕಾಶವಿಲ್ಲವೆಂಬುದನ್ನು ಜ್ಞಾಪಕದಲ್ಲಿಡಬೇಕು. ಪ್ರಕೃತಸ್ಥಿತಿಯಲ್ಲಿ ಉತ್ತಮ ಯಂತ್ರಗಳನ್ನು ಬಳಕೆಯಲ್ಲಿ ತರಲವಕಾಶವಿಲ್ಲವೆಂಬಂಶವನ್ನು, ಮೆ|| ಎ. ವೊಲೆಕ್ಕರವರು, ಇಂಡಿಯಾ ವ್ಯವಸಾಯಾಭಿವೃದ್ಧಿಯ ವಿಷಯವಾಗಿ ಬರೆದಿರುವ ತಮ್ಮ ರಿಪೋರ್ಟಿನಲ್ಲಿ ಹೇಳಿದ್ದಾರೆ. ಆಕಾರಣ ಸಾಮಾನ್ಯ ರೈತನ ಶಕ್ತಿಗೆ ಮೀರಿದ ಬೆಲೆಯುಳ್ಳ ಅನ್ಯದೇಶದ ಯಂತ್ರಗಳನ್ನು ತಂದು ಅಜಮಾಯಿಷಿ ಮಾಡುವದಕ್ಕಿಂತಲೂ ಇಲ್ಲಿ ಪ್ರಕೃತದಲ್ಲಿ ಉಪಯೋಗದಲ್ಲಿರುವ ವ್ಯವಸಾಯದ ಮುಟ್ಟುಗಳನ್ನೇ ಅಭಿವೃದ್ಧಿಪಡಿಸುವದು ಉತ್ತಮವಾಗಿ ತೋರುತ್ತದೆ. 1901ನೆಯ ವರ್ಷದ ಫಾರ್ಮಿಕಮಿಷನ್ ರಿಪೋರ್ಟಿನಿಂದ ತೆಗೆದು ಕೆಳಗೆ ಬರೆದಿರುವ ಅಂಶವು, ಸರ್ಕಾರೀ ವ್ಯವಸಾಯದ ಇಲಾಖೆಯಿಂದನಡೆಯಬೇಕಾದ ಕಾರ್ಯಗಳನ್ನು ಸರಿಯಾಗಿ ವಿವರಿಸುತ್ತದೆ ಎಂದು ನನಗೆ ತೋರುತ್ತದೆ. ಅದೇನೆಂದರೆ—“ಹಿಂದೂದೇಶದ ರೈತನಿಗೆ ಆರಂಭ ಮಾಡುವದು ತಿಳಿಯದೆಂದು ನಾವು ಎಂದಿಗೂ ಯೋಚಿಸಲಾರೆವು. ಕೇವಲ ವ್ಯವಸಾಯದ ವಿಷಯದಲ್ಲಿ, ವ್ಯವಸಾಯದ ಇಲಾಖೆಯವರು ರೈತರಿಂದ ಕಲಿಯತಕ್ಕ ಭಾಗವೇ ಬಹಳವಾಗಿದೆ. ಆದರೆ ಹಿಂದೂದೇಶದ ರೈತನು ತನಗೆ ತಲೆತಲಾಂತರದಿಂದ ಬಂದ ಜಾಣತನವನ್ನು ಉಪಯೋಗಿಸಿಕೊಳ್ಳುವದರಲ್ಲಿಯೂ ಬೆಳೆಮಾಡುವದಕ್ಕೆ ಬೇಕಾದ ಸಾಮಗ್ರಿಗಳನ್ನು ಮಿತವಾಗಿ ಬಳಸುವದರಲ್ಲಿಯೂ ಒಂದಾಗಿ ಸೇರಿ ಕೆಲಸಗಳನ್ನು ನೆರವೇರಿಸಿಕೊಳ್ಳುವದರಲ್ಲಿಯೂ ತಿಳಿವಳಿಕೆಯಿಲ್ಲದವನಾಗಿಯೂ ಹಿಂದಾಳಾಗಿಯೂ ಇದ್ದಾನೆ. ಈ ಕುಂದಕಗಳನ್ನು ತಪ್ಪಿಸುವ ವಿಷಯದಲ್ಲಿಮಾತ್ರ ವ್ಯವಸಾಯ ಇಲಾಖೆಯವರಿಗೆ ಅವಕಾಶವಿದೆ. ಈ ಇಲಾಖೆಯವರು ಸಫಲವಾಗಿ ಕೆಲಸಮಾಡಬಹುದಾದ ಎಲ್ಲಾ ವಿಷಯಗಳನ್ನೂ ಇಲ್ಲಿ ಹೇಳಿ ಮುಗಿಸುವ ದುರಭಿಮಾನವನ್ನು ಬಿಟ್ಟು ಈಕೆಳಗೆ ಬರೆದಿರುವ ಅಂಶಗಳನ್ನು ಮಾತ್ರ ಹೇಳುತ್ತೇನೆ. ಅವು ಯಾವವೆಂದರೆ—ಮೇಲುತರದ ಜನರಿಗೆವ್ಯವಸಾಯದ ಉತ್ತಮ ಮಾರ್ಗವನ್ನು ಬೋಧಿಸುವದು, ಅನ್ಯೋನ್ಯ ಸಹಾಯಕ ಸಂಘಗಳನ್ನು ಪ್ರೋತ್ಸಾಹ ಗೊಳಿಸುವದು, ವ್ಯವಸಾಯಕ್ಕೆ ಸಂಬಂಧಪಟ್ಟ ವಿಚಾರ ಮತ್ತು ಪರೀಕ್ಷೆ, ಉಳುಮೆ, ಗೊಬ್ಬರ ಇವುಗಳ ವಿಚಾರ, ಬೆಳೆಗಳಿಗೆ ತಗಲುವ ರೋಗಗಳ ಮತ್ತು ಪ್ರತಿ ಕ್ರಿಯೆಗಳ ವಿಚಾರ, ಒಳ್ಳೆ ಬೀಜಗಳನ್ನು ಒದಗಿಸಿ ಕೊಡುವದು, ಹೊಸ ಆಹಾರ ಧಾನ್ಯಗಳನ್ನು ಬಳಕೆಗೆ ತರುವದು, ದನಗಳ ತಳಿಯನ್ನು ಅಭಿವೃದ್ಧಿ ಮಾಡುವದು, ದನ ಕರುಗಳ ರೋಗವಿಚಾರ, ಅವುಗಳ ಮೇಪಿನ ಅಭಿವೃದ್ಧಿ—ಇವೇ.

ಈ ವಿಷಯಗಳಲ್ಲಿ ಕೆಲವಕ್ಕೆ ಈ ವರೆಗೆ ಅವಧಾನವನ್ನು ಕೊಟ್ಟಿದೆ. ಅವು ಯಾವವೆಂದರೆ—ಬಿತ್ತದಿಂದ ಕಬ್ಬು ಬೆಳೆಯುವದು, ಅನ್ಯದೇಶದ ಒಳ್ಳೆ ಹತ್ತಿಯ ಬೀಜವನ್ನುತಂದು ಹತ್ತಿಯ ಪೈರನ್ನು ಅಭಿವೃದ್ಧಿ ಮಾಡುವದು, ಹೊಸ ಹಣ್ಣಿನಗಿಡಗಳನ್ನು ಬೆಳೆಸುವದು, ಮೈದಾನಗಳಲ್ಲಿ ಕಾಫಿ ಪೈರು ಮಾಡುವದು, ಇವೆ. ಆದರೆ ಈ ಪ್ರಯತ್ನಗಳು ಇನ್ನೂ ವಿಚಾರಸ್ಥಿತಿಯಲ್ಲಿಯೇ ಇವೆ. ವ್ಯವಸಾಯ ವಿಷಯದಲ್ಲಿ, ಪಂಡಿತರಾದವರ ವಿಚಾರವು ಅತ್ಯವಶ್ಯಕವೆಂಬುದು ವ್ಯಕ್ತವಾಗಿಯೇ ಇದೆ. ಆದಕಾರಣ ಡಾಕ್ಟರ್ ಲಿಮೆನ್ಸರವರನ್ನು ಕೃಷಿರಸಾಯನ ಕಾರ್ಯದಲ್ಲಿ ಇನ್ನೂ 5 ವರ್ಷಕಾಲ ಇಟ್ಟುಕೊಂಡದ್ದು ಯುಕ್ತವಾದ ಕೆಲಸವಾಗಿದೆ. ಡಾಕ್ಟರ್ ಲಿಮೆಸ್ನರವರು ಈ ದೇಶದ ವ್ಯವಸಾಯದ ಮತ್ತು ಕೈಗಾರಿಕೆಗಳ ವಿದ್ಯಮಾನವನ್ನು ತಿಳಿದುಕೊಳ್ಳುವದಕ್ಕೂ ಕೃಷಿರಸಾಯನ ಪರೀಕ್ಷಾಲಯವನ್ನು ಅಣಿಮಾಡಿಕೊಳ್ಳುವದಕ್ಕೂ ಇಷ್ಟು ಕಾಲ ಹಿಡಿಯಿತು. ಈಗ ಅವರು, ಇಲ್ಲಿಯ ರೈತರುಗಳ ಉದ್ದೇಶಗಳನ್ನೂ ಕೊರತೆಗಳನ್ನೂ ಕಷ್ಟಗಳನ್ನೂ ತಿಳಿದುಕೊಂಡಿರಬಹುದು. ಅವರು ಮಾಡುವ ಪರೀಕ್ಷೆಗಳು ಸಫಲವಾಗಬೇಕಾದರೆ, ರೈತನಿಗೆ ಉಪಯುಕ್ತವಾದ ಅಂಶಗಳನ್ನು ತಿಳಿಸುವದಕ್ಕಾಗಿಯೇ ಮಾಡಬೇಕು. ಅವರು ಸಂಸ್ಥಾನದ ಎಲ್ಲಾ ಭಾಗಗಳ ಭೂಗುಣಗಳನ್ನೂ ಕ್ರಮವಾಗಿ ಪರೀಕ್ಷಿಸುವದಕ್ಕೂ ಯಾವ ಯಾವ ಭೂಮಿಗೆ ಯಾವ ಯಾವ ವಿಧದ ಗೊಬ್ಬರ ಬೇಕೆಂಬುದನ್ನು ನಿರ್ಣಯಿಸುವದಕ್ಕೂ ಪೈರಿಗೆ ಅಪಾಯಮಾಡುವ ಹುಳುಗಳೇ ಮೊದಲಾದವುಗಳನ್ನು ತಪ್ಪಿಸುವದಕ್ಕೆ ತಕ್ಕ ವಿಧಾನಗಳನ್ನು ಕಲ್ಪಿಸುವದಕ್ಕೂ ಸಾಮಾನ್ಯವಾಗಿ ಉತ್ತಮ ವ್ಯವಸಾಯ ಕ್ರಮಗಳನ್ನು ಬಳಕೆಗೆ ತರುವದಕ್ಕೂ ಮತ್ತು ಇವಕ್ಕೆ ಸಂಬಂಧಪಟ್ಟ ಇತರ ಉದ್ದೇಶಗಳನ್ನು ನೆರವೇರಿಸುವದಕ್ಕೂ ಸಹ ಪ್ರಯತ್ನಿಸಬೇಕು. ಒಬ್ಬ ಕ್ರಿಮಿ ಶಾಸ್ತ್ರಜ್ಞನ ಸಹಾಯವೂ ಈ ಇಲಾಖೆಗೆ ಆವಶ್ಯಕವೆಂದು ಭಾವಿಸಿ ಕೃಷಿರಸಾಯನಜ್ಞರು ಬರೆದ ಅರ್ಜಿಯು ಸರ್ಕಾರದವರ ಪರ್ಯಾಲೋಚನೆಯಲ್ಲಿದೆ.

ಕೈಗಾರಿಕೆಪದಾರ್ಥಗಳು ಕಡಿಮೆಯಾದ್ದು.—ರಸ್ತೆಗಳನ್ನೂ ರೇಲ್ವೆಗಳನ್ನೂ ಹೆಚ್ಚಿಸಿದ್ದು, ಹೆಚ್ಚು ಜಮೀನನ್ನು ಸಾಗುವಳಿಗೆ ತಂದು ಆ ಮೂಲಕ ಉತ್ಪತ್ತಿಯನ್ನು ಹೆಚ್ಚಿಸಿದರೂ ಅದೇ ಈ

ದೇಶದ ಕೈಗಾರಿಕೆಯ ಏಳಿಗೆಗೆ ಪ್ರತಿಬಂಧಕವಾಗಿ ಪರಿಣಮಿಸಿತು. ಈ ದೇಶದ ಕೈಗಾರಿಕೆಯ ಕೆಲಸದವರು, ಹಿಂದೂದೇಶದ ಇತರ ಭಾಗಗಳಲ್ಲಿರುವವರಂತೆಯೇ, ಸಾಮಾನ್ಯವಾಗಿ ತಮ್ಮತಮ್ಮ ಮನೆಗಳಲ್ಲಿ ತಮ್ಮತಮ್ಮ ಉದ್ಯೋಗವನ್ನು ಮಾಡಿಕೊಂಡು ನೆರೆಹೊರೆಯವರಿಗೋ ಅಥವಾ ಸ್ವಲ್ಪ ದೂರದಲ್ಲಿರುವವರಿಗೋ ತಾವು ಮಾಡಿದ ಪದಾರ್ಥಗಳನ್ನು ಮಾರುತ್ತಾರೆ. ಪದಾರ್ಥಗಳನ್ನು ಸುಲಭವಾಗಿ ಸಾಗಹಾಕುವುದಕ್ಕೆ ಮಾಡಿಕೊಟ್ಟ ಅನುಕೂಲ್ಯವು, ಇಲ್ಲಿನ ದವಸಧಾನ್ಯಗಳ ಮಾರಾಟಕ್ಕೆ ಬತ್ತಾಸೆಯಾದರೂ, ಅದೇ, ಹೊರಗಿನಿಂದ ಅಗ್ಗವಾದ ಸಾಮಾನುಗಳು ನಮ್ಮ ದೇಶಕ್ಕೆ ಬರುವುದಕ್ಕೂ ತನ್ಮೂಲಕ ಇಲ್ಲಿನ ಕೈಗಾರಿಕೆ ಬಹಳ ಮಟ್ಟಿಗೆ ಕಡಿಮೆಯಾಗುವುದಕ್ಕೂ ಕಾರಣವಾಯಿತು. 1890 ರಿಂದ 1900 ರವರೆಗಿನ ಹತ್ತು ವರ್ಷಗಳಲ್ಲಿ ರೈಲುಗಳ ಮೂಲಕ ಸಾಗಿದ ಪದಾರ್ಥಗಳ ಲೆಕ್ಕವನ್ನು ನೋಡಿದರೆ, ಭತ್ತ, ಅಕ್ಕಿ, ಉದ್ದು, ಹೆಸರು ಮೊದಲಾದವು, ಚರ್ಮಗಳು, ಕೊಂಬುಗಳು, ಎಣ್ಣೆ ಬೀಜಗಳು, ಹಸಿಯರೇಷ್ಮೆ ಇತರ ಹಸಿಯಪದಾರ್ಥಗಳು—ಇವುಗಳು ಇಲ್ಲಿಂದ ರಫ್ತಾಗುತ್ತ ಬರುವುದಾಗಿಯೂ ಚರ್ಮದಿಂದಾದ ಪದಾರ್ಥಗಳು, ಹತ್ತಿಯ ಬಟ್ಟೆಗಳು, ಯೂರೋಪಿನ ಮದ್ಯಗಳು, ಎಣ್ಣೆಗಳು, ಉಪ್ಪು ಮತ್ತು ಇತರ ಪದಾರ್ಥಗಳು ಇಲ್ಲಿಗೆ ಆಮದಾಗುವವಾಗಿಯೂ ತಿಳಿಯಬರುತ್ತದೆ. ಇಲ್ಲಿಯ ಕೈಗಾರಿಕೆಯವರು ಇತರ ದೇಶದ ಕೈಗಾರಿಕೆಯವರೊಡನೆ ಯಾವ ವಿಧವಾದ ಸಂಬಂಧವನ್ನೂ ಇನ್ನೂ ಬೆಳಸದೆ ಬೇರೆಯಾಗಿಯೇ ಇದ್ದಾರೆ. ಕೈಗಾರಿಕೆಯವನು ಇನ್ನೂ ತನಗೆ ಇಷ್ಟಬಂದಂತೆ ಇದ್ದುಕೊಂಡು ರೈತನ ಹಾಗೆಯೇ ಇತರರ ಸಂಗಡ ಏಕೀಭವಿಸಿ ತನ್ನ ಗುಂಪಿಗೆ ಪ್ರಯೋಜನಕರವಾದ ಯಾವ ಕೆಲಸವನ್ನು ಮಾಡಿಕೊಳ್ಳುವುದಕ್ಕೂ ಅಸಮರ್ಥನಾಗಿದ್ದಾನೆ. ಈಗಿನ ಸೆನ್ಸಸ್ಸಿನ ಲೆಕ್ಕದಿಂದ, ಈ ದೇಶದ ಕೈಗಾರಿಕೆ ಕೆಲಸದವರ ಸಂಖ್ಯೆಯು ವಿಶೇಷವಾಗಿ ಹೆಚ್ಚಿದಂತೆ ತಿಳಿಯಬರುವುದಿಲ್ಲ. ಇದರಂತೆಯೇ ರಾಜ್ಯವನ್ನು ವಹಿಸಿಕೊಂಡಕಾಲದಲ್ಲಿದ್ದ ಕೈಗಾರಿಕೆ ಕೆಲಸಗಳು ವಿಶೇಷವಾಗಿ ವೃದ್ಧಿಯಾಗದೆ ಈಗಲೂ ಏಕರೀತಿಯಾಗಿರುತ್ತವೆ. ಅವು ಯಾವವೆಂದರೆ—ಲೋಹಕಾರರು, ಕುಂಬಾರರು, ಮರಗೆಲಸದವರು, ನೆಯ್ಗೆಯವರು ಈ ಮುಂತಾದವರ ಕಸಬುಗಳೇ. ರಾಜ್ಯವನ್ನು ವಹಿಸಿಕೊಂಡ ಈಚೆಗೆ ಕೆಲವು ಕಾರ್ಖಾನೆಗಳು—ಎಂದರೆ ಬೆಂಗಳೂರಲ್ಲಿ ಕಂಬಳಿ ಕಾರ್ಖಾನೆ, ಹತ್ತಿ ನೂಲು ಬಟ್ಟೆ ಇವುಗಳ ಕಾರ್ಖಾನೆ, ಹೆಂಚಿನ ಕಾರ್ಖಾನೆ, ಕಬ್ಬಿಣದ ಕಾರ್ಖಾನೆ; ಗೋರೀ ಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ—ಇವು ಏರ್ಪಾಡಾದವು. ಆದರೆ ಇವುಗಳು ಅನೇಕವಾಗಿ ಯೂರೋಪಿಯನರ ಮೇಲ್ವಿಚಾರಣೆಯಲ್ಲಿರುವುದರಿಂದ ಇವುಗಳಿಂದ ಇಲ್ಲಿಯವರಲ್ಲಿ ಕೈಗಾರಿಕೆಯ ತಿಳಿವಳಿಕೆ ಹೆಚ್ಚಿತೆಂದಾಗಲಿ ಸಂಘವಾಗಿ ಸೇರುವ ಸಾಮರ್ಥ್ಯವು ಹೆಚ್ಚಿತೆಂದಾಗಲಿ ತಿಳಿಯುವದಿಲ್ಲ. ಕಾಗದ ತಯಾರ್ಮಾಡುವದು, ಪ್ರಬಲವಾದ ಕಬ್ಬಿಣದ ಕಾರ್ಖಾನೆಗಳನ್ನು ಏರ್ಪಡಿಸುವುದು, ಯಂತ್ರದಿಂದ ರೇಷ್ಮೆಯನ್ನು ನೂತು ಕಂಟಿಗೆಯಾಗಿ ಸುತ್ತುವುದು, ಇವೇ ಮೊದಲಾದ ಕೈಗಾರಿಕೆಗಳಿಗೆ ಕೊಟ್ಟ ಪ್ರೋತ್ಸಾಹದಿಂದಲೂ ಏನೂ ಪ್ರಯೋಜನವಾಗಲಿಲ್ಲ.

ಈ ಕಾರಣಗಳಿಂದ, ಇಲ್ಲಿಯವರ ಪ್ರಕೃತಸ್ಥಿತಿಯಲ್ಲಿ, ಭಾರಿ ಬಂಡವಾಳವೂ ಬಹಳ ಜನಗಳ ಐಕಮತ್ಯವೂ ಬೇಕಾಗುವ ಕೆಲಸಕ್ಕೆ ಉಪಕ್ರಮಿಸಿದರೆ ಅದು ಬಂದುವೇಳೆ ಸುತರಾಂ ಕೆಟ್ಟುಹೋಗದೆ ನಡೆದರೂ ಅದರಿಂದ ಖಂಡಿತವಾಗಿಯೂ ಆಶಾಭಂಗವಾಗುವದೆಂದು ತೋರುತ್ತದೆ. ಕೆಲಸಗಳಿಗೆ ಬರುವ ಕೈಗಾರಿಕೆ ಪದಾರ್ಥಗಳನ್ನೂ ಮತ್ತು ಅವುಗಳನ್ನು ಉಪಯೋಗವಾಗುವಂತೆ ಮಾಡುವ ಸಾಧನಗಳ ತಿಳಿವಳಿಕೆಯನ್ನೂ ನಾವು ಮೊದಲು ವಿಶೇಷವಾಗಿ ಅಭಿವೃದ್ಧಿ ಮಾಡಿಕೊಳ್ಳಬೇಕು. ಸಾವಕಾರಿ ಕಂಪೆನಿಗಳಲ್ಲಿ ಜನಗಳಿಗಿರುವ ನಂಬಿಕೆಯನ್ನು ನೋಡಿದರೆ ಪ್ರಕೃತದಲ್ಲಿ ಭಾರಿ ಬಂಡವಾಳವನ್ನು ಸೇರಿಸಲಾಗುವಂತಿಲ್ಲ; ಬಂದುವೇಳೆ ಸೇರಿಸಿದರೂ ಬಂದೆರಡು ಕಡೆಯಲ್ಲಿ ಮಾತ್ರವೇ ಸಾಧ್ಯವಾಗಬಹುದು. ವಸ್ತುತಃ ಇಂಥ ಕೆಲಸಗಳನ್ನು ಉಪಕ್ರಮಿಸುವವರು ನಷ್ಟಕ್ಕೆ ಹಿಂಜರಿಯದಿರಬೇಕು. ಮೈಸೂರಿನಲ್ಲಿರುವ ಸಾವಕಾರರು ವಿಶೇಷ ಬಂಡವಾಳವುಳ್ಳವರಲ್ಲ; ಅವರು ತಮಗೆ ಖಂಡಿತವಾಗಿಯೂ ಲಾಭಬರುವದೆಂದು ತಿಳಿದಹೊರತು, ಯಾವಕೆಲಸಗಳಿಗೂ ತಮ್ಮ ಬಂಡವಾಳದ ಸ್ವಲ್ಪಭಾಗವನ್ನೂ ಕೂಡ ಹಾಕುವದಿಲ್ಲ. ಈ ವಿಷಯವು ಎಲ್ಲರಿಗೂ ಗೊತ್ತೇ ಇದೆ. ಕೋಲಾರದ ಚಿನ್ನದಗಣಿಯ ಕೆಲಸವೇ ಇದಕ್ಕೆ ಸಾಕಾದ ದೃಷ್ಟಾಂತವಾಗಿದೆ. 1883 ರಲ್ಲಿ ಮೈಸೂರು ಕಂಪೆನಿಯವರ ಬಂಡವಾಳವೆಲ್ಲಾ ಮುಗಿದು ಹೋಗಿ 13,000 ಪೌನಿನಷ್ಟು ಮಾತ್ರ ಉಳಿದಿತ್ತು. ಆಕಾಲದಲ್ಲಿ ಆ ಮೊಬಲಗನ್ನು ಷೇರುದಾರರುಗಳಿಗೆ ಹಂಚಬೇಕೆ ಇಲ್ಲವೇ ಲಾಭನಷ್ಟಗಳಿಗೆ ಹೆದರದೆ ಅದನ್ನು ಗಣಿಯ ಕೆಲಸಕ್ಕೇ ಉಪಯೋಗಿಸಬೇಕೇ ಎಂಬದಾಗಿ ವಿಚಾರವುಂಟಾಯಿತು. ಆಗ ಕೆಲಧೈರ್ಯಶಾಲಿಗಳ ಅಭಿಪ್ರಾಯವನ್ನೇ ಅಂಗೀಕರಿಸಿ ನಡಿಸಿದ ವಿಷಯವು ಎಲ್ಲರಿಗೂ ತಿಳಿದೇ ಇದೆ. ಇಲ್ಲಿಯ ಧನಸಂಪತ್ತಿನ ಸ್ಥಿತಿಯನ್ನು ನೋಡಿದರೆ, ಲಾಭನಷ್ಟಗಳು ಗೊತ್ತಿಲ್ಲದ ಇಂಥ ಕಾರ್ಯಗಳನ್ನು ಕೈಕೊಳ್ಳುವದು ಪ್ರಕೃತದಲ್ಲಿ ಸಾಧ್ಯವಲ್ಲ. ಆದುದರಿಂದ ನಮ್ಮ ಆಶೋತ್ತರಗಳನ್ನೆಲ್ಲಾ ಕೈಗಾರಿಕೆಯ ವಿದ್ಯಾಭ್ಯಾಸದಲ್ಲಿ ಅಡಕ ಮಾಡಿದ್ದೇ ವಿವೇಕವಾಯಿತೆಂದು ತೋರುತ್ತದೆ. ಈ ವಿದ್ಯಾಭ್ಯಾಸದ ಏರ್ಪಾಡನ್ನು ಶ್ರೀಮನ್ಮಹಾರಾಜರವರು ಕಳೆದ ಏಪ್ರಿಲ್ ತಿಂಗಳಲ್ಲಿ ಮಂಜೂರ್ಮಾಡಿದ್ದಾರೆ.

ಕೈಗಾರಿಕೆ ವಿದ್ಯಾಭ್ಯಾಸ.—"ಈ ಕೈಗಾರಿಕೆ ವಿದ್ಯಾಭ್ಯಾಸವನ್ನು ಏರ್ಪಡಿಸಿದ್ದು ಕೇವಲ ಶಾಸ್ತ್ರೀಯ ವಿಷಯಗಳನ್ನಾಗಲಿ ಕೇವಲ ವಿಚಾರಭಾಗಗಳನ್ನಾಗಲಿ ಕಲಿಸುವ ಉದ್ದೇಶದಿಂದ ಮಾಡಿದ್ದಲ್ಲ; ಮತ್ತೇನೆಂದರೆ ಪ್ರಜೆಗಳಿಗೆ ಈಗ ಬೇಕಾದ ಸಾಮಗ್ರಿಗಳನ್ನು ಒದಗಿಸಿಕೊಡುವದಕ್ಕಾಗಿ, ಮರಗೆಲಸ, ನೆಯ್ಗೆ ಕೆಲಸ, ರೇಶ್ಮೆಪೈರುಮಾಡುವುದು, ಕಬ್ಬಿಣದಕೆಲಸ, ಚಿತ್ತದಕೆಲಸ, ಬಣ್ಣಗಾರಿಕೆ ಇವೇ ಮೊದಲಾದ ಕೆಲಸಗಳನ್ನೂ ವ್ಯಾಪಾರಗಳನ್ನೂ ಉತ್ತಮವಾದ ಮಾರ್ಗದಲ್ಲಿ ಕಲಿಸುವ ಉದ್ದೇಶದಿಂದಲೂ ಪ್ರತಿ ವರ್ಷದಲ್ಲೂ ಕೆಲವು ಹುಡುಗರಿಗೆ ತಮ್ಮ ಜೀವನೋಪಾಯವನ್ನು ಸಂಪಾದಿಸಿಕೊಳ್ಳುವಂತೆ ಕಸಬನ್ನೂ ಕಲಿಸುವ ಉದ್ದೇಶದಿಂದಲೂ ಏರ್ಪಾಡುಮಾಡಿದೆ.'' ಈ ಕೈಗಾರಿಕೆಯ ಪಾಠಶಾಲೆಗಳನ್ನು, ಕಾರ್ಖಾನೆಗಳಂತೆ, ಬಹಳಮಟ್ಟಿಗೆ ಲಾಭದಮೇಲೆ ದೃಷ್ಟಿಯಿಟ್ಟು ನಡಿಸಬೇಕು. ಇದಕ್ಕೆ ಅಂಕುರಪ್ರಾಯವಾಗಿ ಮೊದಲು ಚೆನ್ನಪಟ್ಟಣ, ಸಾಗರ, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ ಈ ಸ್ಥಳಗಳಲ್ಲಿ ಕೈಗಾರಿಕೆ ಪಾಠಶಾಲೆಗಳನ್ನು ಇಡುವಂತೆ ಮಾಡಿದೆ. ಯಾವಯಾವ ಪಾಠಶಾಲೆಗಳಲ್ಲಿ ಮರಗೆಲಸವೂ ಕಬ್ಬಿಣಗೆಲಸವೂ ನಡೆಯುತ್ತವೆಯೋ ಅಲ್ಲಲ್ಲಿ ಇತರ ಪದಾರ್ಥಗಳನ್ನು ಮಾಡುವದಲ್ಲದೆ, ಸುಲಭಕ್ರಯಕ್ಕೆ ದೊರಕುವ ಹಳ್ಳಿಯ ಬಂಡಿಗಳು, ಒಳ್ಳೆ ನೇಗಿಲಗಳು ಇವೇ ಮೊದಲಾದ ಉತ್ತಮವಾದ ವ್ಯವಸಾಯದ ಮುಟ್ಟುಗಳನ್ನೂ ತಯಾರುಮಾಡಲಾಗುತ್ತದೆ. ಹೀಗೆ ಅಭಿವೃದ್ಧಿಗೆ ತಂದ ಮುಟ್ಟುಗಳನ್ನು ಉಪಯೋಗಿಸಿ ಕಾರ್ಯತಃ ಪರೀಕ್ಷಿಸಿ ನೋಡಿ ಅವುಗಳು ಇಲ್ಲಿಯ ಸನ್ನಿವೇಶಗಳಿಗೆ ತಕ್ಕವಾಗಿ ಕಂಡು ಬಂದಲ್ಲಿ ಅವುಗಳ ಮಾದಿರಿಗಳನ್ನು ಇಂಥ ತರಗತಿಗಳಿರುವ ಎಲ್ಲಾ ಕೈಗಾರಿಕೆಯ ಪಾಠಶಾಲೆಗಳಿಗೂ ಕಳುಹಿಸಿ ಕೊಡಲಾಗುತ್ತದೆ. ಈ ಸಂಸ್ಥಾನದಲ್ಲಿ ಕಲಿಸಲು ಅನುಕೂಲವಿಲ್ಲದ ಕೈಗಾರಿಕೆಗಳನ್ನು ಅನ್ಯತ್ರ ಕಲಿಸುವದಕ್ಕಾಗಿ ತಿಂಗಳಿಗೆ ತಲಾ 20 ರೂಪಾಯಂತೆ 20 ವಿದ್ಯಾರ್ಥಿ ವೇತನಗಳನ್ನು ಕೊಡಲಾಗುತ್ತದೆ. ಈ ವಿದ್ಯಾರ್ಥಿಗಳು ಮದ್ರಾಸಿನ ಅಥವಾ ಬೊಂಬಾಯಿನ ಕಲಾಪಾಠಶಾಲೆಯಲ್ಲಾಗಲಿ, ಇಲ್ಲವೇ ಬೊಂಬಾಯಿ ವಿಕ್ಟೋರಿಯಾ ಜ್ಯೂಬಿಲಿ ಇನ್ಸ್ಟಿಟ್ಯೂಟ್ ಎಂಬ ಪಾಠಶಾಲೆಯಲ್ಲಾಗಲಿ ಅಥವಾ ಇಂಥ ಕೈಗಾರಿಕೆಗಳನ್ನು ಕಲಿಸುವ ಇತರ ಪಾಠಶಾಲೆಗಳಲ್ಲಾಗಲಿ ಓದಬೇಕು.

ಹೊಳೆ ನರಸೀಪುರ, ದೊಡ್ಡಬಳ್ಳಾಪುರ, ಚಿಕ್ಕನಾಯಕನಹಳ್ಳಿ, ಮೊಳಕಾಲ್ಮುರು ಈ ಸ್ಥಳಗಳಲ್ಲಿ ನೆಯ್ಗೆ ಪಾಠಶಾಲೆಗಳನ್ನು ಇಡುವದಕ್ಕೂ ಅವುಗಳಿಗೆ ಸೇರಿದಹಾಗೆ ಮರಗೆಲಸವನ್ನೂ ಚಿತ್ರದ ಕೆಲಸವನ್ನೂ ಕಲಿಸುವ ತರಗತಿಯನ್ನು ಇಡುವದಕ್ಕೂ ಅಪ್ಪಣೆ ಕೊಟ್ಟಿದೆ. ನಾಡು ಮಗ್ಗಗಳಲ್ಲಿ, ತಾನಾಗಿ ಹಾರುವ ಲಾಳಿಯನ್ನು (fly shuttle) ಉಪಯೋಗಿಸಿ ಈ ಮಗ್ಗಗಳಲ್ಲಿ ನಾನಾತರದ ಬಟ್ಟೆಗಳ ನೆಯ್ಗೆಯನ್ನು ಈ ದೇಶದ ಹುಡುಗರಿಗೆ ಕಲಿಸುವದೇ ಈ ನೆಯ್ಗೆ ಪಾಠಶಾಲೆಗಳಲ್ಲಿ ನಡೆಯುವ ವಿಶೇಷ ವಿಷಯವಾಗಿದೆ. ಈ ನೆಯ್ಗೆ ಪಾಠಶಾಲೆಗಳು ಒಂದು ಕ್ರಮಕ್ಕೆ ಬಂದು ಕೆಲಸಕ್ಕೆ ಮೊದಲು ಮಾಡಿದಬಳಿಕ ಅವುಗಳಿಗೆ ಸೇರಿದಹಾಗೆ ಬಣ್ಣಹಾಕುವ ತರಗತಿಗಳನ್ನೂ ಇಡಲಾಗುತ್ತದೆ.

ಬೆಂಗಳೂರಲ್ಲಿ ಮೆ|| ತಾತಾಯವರ ಪರೀಕ್ಷಾಕ್ಷೇತ್ರದಲ್ಲಿ ಹಿಪ್ಪಲ್ನೇರಲೆಯನ್ನು ಚೆನ್ನಾಗಿ ಬೆಳೆಯುವ ಕ್ರಮವನ್ನೂ, ರೇಶ್ಮೆಹುಳು ಸಾಕುವದನ್ನೂ, ರೇಶ್ಮೆದಾರದ ಕಂಟಿಗೆ ಸುತ್ತುವದನ್ನೂ ಕಲಿಯುವದಕ್ಕಾಗಿ, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕೆಲವರು ಉಪಾಧ್ಯಾಯರುಗಳನ್ನು ಆರಿಸಿಕೊಂಡು ಪರೀಕ್ಷಾರ್ಥವಾಗಿ ಅವರನ್ನು ಮೂರು ಮೂರು ತಿಂಗಳುಕಾಲ ಅಲ್ಲಿಗೆ ಕಳುಹಿಸಿಕೊಡಲಾಗುತ್ತದೆ. ಈ ಉಪಾಧ್ಯಾಯರು ಜಪಾನ್ ದೇಶದಲ್ಲಿರುವ ಸ್ಪೆಷಲ್ ಇನ್ಸ್ಪೆಕ್ಟರುಗಳ ಹಾಗೆಯೇ, ಸೂಕ್ಷ್ಮದರ್ಶಕಗಳ ಸಹಾಯದಿಂದ ರೋಗವಿದ್ದ ಹುಳುಗಳನ್ನು ತೆಗೆದುಹಾಕಿ ಸರ್ವದಾ ಒಳ್ಳೇ ಹುಳುಗಳನ್ನೇ ಪೈರು ಮಾಡುವದಕ್ಕೆ ಸಹಾಯವಾಗುವಂತೆ, ಅವರಿಗೆ ವಿದ್ಯೆಯನ್ನು ಕಲಿಸುವದೇ ಈ ಏರ್ಪಾಡಿನ ಮುಖ್ಯೋದ್ದೇಶವಾಗಿದೆ.

ಈ ಕಾರ್ಯಗಳಿಗಾಗಿಯೂ ಇದೇ ರೀತಿಯಾಗಿ ಕೆಲಸ ಮಾಡುತ್ತಿರುವ ಸಾಹ್ಕಾರಿ ಪಾಠಶಾಲೆಗಳಿಗೆ ಸಹಾಯ ಮಾಡುವದಕ್ಕಾಗಿಯೂ ಶ್ರೀಮನ್ಮಹಾರಾಜರವರು ಕಳೆದ ಏಪ್ರಿಲ್ ತಿಂಗಳಲ್ಲಿ ಲೋಕಲ್ಫಂಡ್ ಜನರಲ್ ಬಾಬಿನಿಂದ ವರ್ಷಕ್ಕೆ 30,000 ರೂಪಾಯನ್ನು ಕೊಡುವಂತೆ ಅಪ್ಪಣೆ ಮಾಡಿದ್ದಾರೆ.

ಇನ್ನು ಕೆಲವು ವರ್ಷಗಳವರೆಗೆ ಈಗಿರುವ ಕೈಗಾರಿಕೆ ಕೆಲಸಗಳನ್ನು ಪ್ರಕೃತದಲ್ಲಿ ಸಾಧ್ಯವಾಗಿರುವದಕ್ಕಿಂತಲೂ ವಿಶೇಷವಾಗಿ ಕ್ರಮಪಡಿಸಿ ಅಭಿವೃದ್ಧಿಗೆ ತಂದರೆ ಸಾಕಾಗಿರುವದೆಂದು ನನಗೆ ತೋರುತ್ತದೆ. ಇದಕ್ಕಾಗಿ ಇಲ್ಲಿಯ ಕೈಗಾರಿಕೆ ಕೆಲಸದವರ ತಿಳವಳಿಕೆಯನ್ನು ಬಲಪಡಿಸುವದು ಅತ್ಯವಶ್ಯಕವಾಗಿದೆ. ಕೈಗಾರಿಕೆ ಕೆಲಸದವರಿಗೆ ತಮ್ಮ ಕಸಬುಗಳ ವಿಷಯವಾಗಿ ಸಮಂಜಸವಾಗಿಯೂ ಕ್ರಮವಾಗಿಯೂ ಪರ್ಯಾಲೋಚನೆ ಮಾಡುವಂತೆ ಕಲಿಸಿದರೆ ಬಹಳ ಕೆಲಸ ಮಾಡಿದಂತಾಗುತ್ತದೆ. ಕೈಗಾರಿಕೆಯ ಪಾಠಶಾಲೆಗಳಿಗೆ ಹುಡುಗರನ್ನು ಸೇರಿಸಿಕೊಳ್ಳುವ ವಿಷಯದಲ್ಲಿ ಅವರ ತಾಯಿತಂದೆಗಳ ಕಸಬುಗಳಿಗೆ ವಿಶೇಷವಾಗಿ ಗಮನವನ್ನು ಕೊಡುವದು ಮಾತ್ರವೇ ಅಲ್ಲದೆ ಈ ಹುಡುಗರು ಅಲ್ಲಿಯ ಓದಿನಿಂದ ಪ್ರಯೋಜನಹೊಂದಿ ಅಲ್ಲಿ ಉಪಯೋಗಿ

ಸುವ ಶ್ರೇಷ್ಠವಾದ ಉಪಕರಣಗಳ ಪ್ರಯೋಜನವನ್ನು ತಿಳಿದುಕೊಳ್ಳುವಷ್ಟು ಜಾಣತನವುಳ್ಳವರೇ ಎಂಬದನ್ನು ವಿಚಾರಿಸುವದೂ ಅವಶ್ಯಕವಾಗಿದೆ. ಇದೂ ಅಲ್ಲದೆ, ಆ ಹುಡುಗರಿಗೆ, ಸಂಘೀಭವಿಸಿ ಕೆಲಸಮಾಡುವದರಿಂದ ಉಂಟಾಗುವ ಪ್ರಯೋಜನವನ್ನು ಚೆನ್ನಾಗಿ ಮುಂಪಟ್ಟು ಮಾಡಿಕೊಡಬೇಕು. ಇದರಿಂದ ಅವರು ಮುಂದೆ ತಮ್ಮ ಕಸಬನ್ನು ಕೈಕೊಂಡಾಗ ಒಬ್ಬೊಬ್ಬರೆ ಬೇರೆ ಬೇರೆಯಾಗಿ ಕೆಲಸ ಮಾಡಿಕೊಂಡು ತಮ್ಮ ಬುದ್ಧಿಯನ್ನೂ ಸಾಮರ್ಥ್ಯವನ್ನೂ ವೃಥಾ ಪೋಲುಮಾಡದೆ ಸಂಘೀಭವಿಸಿ ವಿಶೇಷ ಪ್ರಯೋಜನವನ್ನು ಹೊಂದುವಂತೆ ಆಗಬೇಕು. ನೆಯ್ಗೆಯವರ ಪ್ರಯೋಜನಕ್ಕಾಗಿ ಅನ್ಯೋನ್ಯ ಸಹಾಯಕ ಸಂಘಗಳನ್ನು ಏರ್ಪಡಿಸಬೇಕೆಂದು ಮ॥ ಭಾಭಾಸಾಹೇಬರವರು ಕೊಟ್ಟ ಸಲಹೆಗಳ ವಿಷಯವಾಗಿ ಅಭಿಪ್ರಾಯ ಕೊಡುವಂತೆ, ಡೆಪ್ಯುಟಿಕಮಿಷನರುಗಳಿಗೆ ಕಳುಹಿಸಿದೆ. ವ್ಯವಸಾಯಗಾರರಿಗೆ ವ್ಯವಸಾಯದ ಬ್ಯಾಂಕುಗಳು ಹೇಗೆ ಅವಶ್ಯಕವಾಗಿವೆಯೋ ಹಾಗೆಯೇ ಎಲ್ಲಾ ತರದ ಕೈಗಾರಿಕೆ ಕೆಲಸದವರಿಗೂ ಅಂಥ ಸಂಘಗಳು ಅವಶ್ಯಕವಾಗಿವೆ.

ಕೈಗಾರಿಕೆಯವರ ಸಾಮರ್ಥ್ಯವನ್ನೂ ಅವರ ಉಪಕರಣಗಳನ್ನೂ ಅಭಿವೃದ್ಧಿಗೆ ತರುವದಲ್ಲದೆ ಅವರ ಕಸುಬುಗಳಿಗೂ ಗೌರವವನ್ನು ಉಂಟುಮಾಡಬೇಕು. ಈಗ ಅವುಗಳಿಗೆ ವಿಶೇಷ ಗೌರವವಿರುವದಿಲ್ಲವಾದ್ದರಿಂದ ಮೇಲುದರ್ಜೆಗೆ ಸೇರಿದ ಜನರು, ಅವುಗಳಿಗೆ ಗೌರವವಿದ್ದಲ್ಲಿ ಎಷ್ಟು ಧಾರಾಳವಾಗಿ ಪ್ರವೇಶಿಸುತ್ತಿದ್ದರೊ ಅಷ್ಟು ಧಾರಾಳವಾಗಿ ಪ್ರವೇಶಿಸುವದಿಲ್ಲ. ಈ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ಕೆಲವು ಕಸುಬುಗಳನ್ನು ಕಲಿಸಿಕೊಡುವದು ಒಳ್ಳೆಯದೆಂದು ತೋರುತ್ತದೆ. ಇದರಿಂದ ಅವರಿಗೆ ಆ ಕಸಬಿನಲ್ಲಿ ಪಾಂಡಿತ್ಯವನ್ನು ಉಂಟುಮಾಡಬೇಕಾದ್ದಿಲ್ಲ; ಆಯಾ ಕಸಬುಗಳ ಅಭಿವೃದ್ಧಿಯಲ್ಲಿ ಅವರಿಗೆ ಕುತೂಹಲವುಂಟಾಗುವಂತೆ ಮಾಡಿದರೆ ಸಾಕಾಗಿರುತ್ತದೆ. ಮತ್ತೂ ಮೇಲುದರ್ಜೆಯ ಜನರಲ್ಲಿ ಕೈಗಾರಿಕೆ ಕಲೆಗಳ ತಿಳಿವಳಿಕೆಯನ್ನು ಹೆಚ್ಚಿಸುವದಕ್ಕಾಗಿ ಅನ್ಯದೇಶಗಳಲ್ಲಿ ಕೆಲವು ಉಪಯುಕ್ತವಾದ ಕೈಗಾರಿಕೆಗಳನ್ನು ಕಲಿತುಕೊಂಡು ಬರುವಂತೆ ಕೆಲ ವಿದ್ಯಾರ್ಥಿಗಳನ್ನು ಕಳುಹಿಸಿದರೆ ಬಹಳ ಪ್ರಯೋಜನವುಂಟು. ಪ್ರಕೃತದಲ್ಲಿ ಮೂರುಮಂದಿ ಮೈಸೂರು ವಿದ್ಯಾರ್ಥಿಗಳು ಷಿನಕ್ಟಾಡಿ ಎಂಬಲ್ಲಿ ಜನರಲ್ ಇಲೆಕ್ಟ್ರಿಕ್ ಕಂಪೆನಿಯವರ ಕಾರ್ಯಾಲಯದಲ್ಲಿ ವಿದ್ಯುಚ್ಛಕ್ತಿ ಇಂಜನಿಯರಿಂಗ್ ಕೆಲಸವನ್ನೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಕಲಿಯುತ್ತಿದ್ದಾರೆ. ಈವರ್ಷ, ಭೂಗರ್ಭಶಾಸ್ತ್ರದ ಪ್ರೌಢಭಾಗಗಳನ್ನು ಕಲಿಯುವದಕ್ಕಾಗಿ ಜಿಯೊಲಾಜಿಕಲ್ ಇಲಾಖೆಯ ಮ॥ ಬಿ. ಜಯರಾಮ್ ಎಂಬವರನ್ನು ಶ್ರೀಮನ್[illegible] ರಾಜರವರು ಇಂಗ್ಲೆಂಡಿಗೆ ಕಳುಹಿಸಿಕೊಟ್ಟಿದ್ದಾರೆ. ಆದರೆ ಆ ವಿದ್ಯಾರ್ಥಿಗಳು ಹಿಂತಿರುಗಿ ಇಲ್ಲಿಗೆ ಬಂದಾಗ ಕೆಲಸ ದೊರೆಯದೆ ನಿರಾಶರಾಗಿ ಹೋಗದಂತೆ ನೋಡಿಕೊಳ್ಳುವದಕ್ಕಾಗಿ, ವಿದ್ಯಾರ್ಥಿಗಳನ್ನು ಆರಿಸುವಾಗಲೇ, ಮೊದಲೇ ಯಾವದಾದರೂ ಕಸುಬಿನಲ್ಲಿದ್ದವರಲ್ಲಾಗಲಿ ಇತರ ವಿಧವಾದ ಯೋಗ್ಯತೆಯುಳ್ಳವರಲ್ಲಾಗಲಿ ನಮ್ಮ ಕೆಲಸಗಳಿಗೆ ಎಷ್ಟುಮಂದಿ ಪ್ರಕೃತವೊ ಅಷ್ಟಕ್ಕೆ ಮೀರದಂತೆ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳಬೇಕು.

ಸಾಮಾನ್ಯ ವಿದ್ಯಾಭ್ಯಾಸ.—ಈ ವರ್ಷವಿದ್ದ ಸರಕಾರಿ ಪಾಠಶಾಲೆಗಳ ಸಂಖ್ಯೆ 2,232; ಇವುಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆ 92,959 ಸರ್ಕಾರಿಯಲ್ಲದ ಪಾಠಶಾಲೆಗಳ ಸಂಖ್ಯೆ 1,646, ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 19,105. ಈ ವಿದ್ಯಾರ್ಥಿಗಳ ಸಂಖ್ಯೆಯು ಹಿಂದಿನ ವರ್ಷಕ್ಕಿಂತ ಕಡಿಮೆಯಾಗಿದೆ. ಓದುವ ಗಂಡುಹುಡುಗರ ಸಂಖ್ಯೆ 95,278 ಹೆಣ್ಣುಹುಡುಗರ ಸಂಖ್ಯೆಯು 16,786.

ಅಲಿಘರ್ನಲ್ಲಿ ಸರ್ ಸಯ್ಯದ್ ಅಹಮದ್ಖಾನರವರಿಂದ ಸ್ಥಾಪಿಸಲ್ಪಟ್ಟ ಪ್ರಖ್ಯಾತವಾದ ಪಾಠಶಾಲೆಯಲ್ಲಿ ಓದುವದಕ್ಕೆಹೋದ ಇಬ್ಬರು ಮಹಮ್ಮದೀಯ ವಿದ್ಯಾರ್ಥಿಗಳಿಗೆ ಪ್ರಥಮತಃ ಈ ವರ್ಷ ಎರಡು ವಿದ್ಯಾರ್ಥಿ ವೇತನಗಳು ಕೊಡಲ್ಪಟ್ಟವು. ಸ್ಕೂಲಿಗೆ ಹೋಗುವ ವಯಸ್ಸಿನ ಮಹಮ್ಮದೀಯ ಹುಡುಗರ ಒಟ್ಟು ಸಂಖ್ಯೆ ಸುಮಾರು 35,000. ಈಪೈಕಿ ನೂರಕ್ಕೆ 42 ಕ್ಕಿಂತ ಹೆಚ್ಚಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದರೂ ಇವರಲ್ಲಿ 123 ಮಂದಿಮಾತ್ರವೇ 1902 ನೆಯ ವರ್ಷದಲ್ಲಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದದ್ದನ್ನು ನೋಡಿದರೆ ಇವರನ್ನು ಇನ್ನೂ ಪ್ರೋತ್ಸಾಹಪಡಿಸುವದು ಉಚಿತವಾಗಿ ಕಾಣುತ್ತದೆ.

ಮಹಾರಾಣಿಯವರ ಮೈಸೂರು ಕಾಲೇಜು, ಫಸ್ಟ್‌ಗ್ರೇಡ್ ಕಾಲೇಜಾಗಿ, ಮದರಾಸ್ ಯೂನಿವರ್ಸಿಟಿಗೆ ಸೇರಿಸಲ್ಪಟ್ಟಿತು. ಒಬ್ಬ ವಿದ್ಯಾರ್ಥಿನಿಯು ಬಿ. ಎ. ಪರೀಕ್ಷೆಯಲ್ಲಿ ಎರಡು ಭಾಗಗಳಲ್ಲಿಯೂ ಮತ್ತೊಬ್ಬಳು ಒಂದುಭಾಗದಲ್ಲಿಯೂ ಉತ್ತೀರ್ಣರಾದರು. ಇನ್ನೊಬ್ಬಳು ಎಫ್. ಎ. ಪರೀಕ್ಷೆಯಲ್ಲಿ ಗೆದ್ದಳು. ಈ ಕಾಲೇಜಿಗೆ ಸತ್ಕುಲ ಪ್ರಸೂತರಾದ ನೇಟಿವ್ ಕ್ರಿಶ್ಚಿಯನ್ ವಿದ್ಯಾರ್ಥಿನಿಯರನ್ನು ಸೇರಿಸುವದಾಗಿ ಹೊಸದಾದ ಒಂದು ಏರ್ಪಾಡು ಮಾಡಲಾಯಿತು. ಆದಿಭಾಗದಲ್ಲಿ ಜಾತಿ ನಿಯಮಗಳಿಗೆ ಒಳಪಟ್ಟವರಿಗೆಮಾತ್ರ ವಿದ್ಯಾಭ್ಯಾಸ ಮಾಡಿಸುತ್ತಿದ್ದ ಈ ಕಾಲೇಜು ಈ ಕಾಲದ ಸನ್ನಿವೇಶಕ್ಕೆ ಅನುಸಾರವಾಗಿ ಕ್ರಮ ಕ್ರಮವಾಗಿ ಆ ನಿರ್ಬಂಧಗಳನ್ನು ಬಿಡುತ್ತ ಬಂದು ಇತರರ ವಿದ್ಯಾಭ್ಯಾಸಕ್ಕೂ ಅವಕಾಶವನ್ನು ಉಂಟುಮಾಡಿದೆ.

ವೈದ್ಯ ಮತ್ತು ಇಂಜನಿಯರಿಂಗ್ ವಿದ್ಯಾರ್ಥಿಗಳ ವೇತನಕ್ಕೆ ಸಂಬಂಧಪಟ್ಟ ನಿಬಂಧನೆಗಳನ್ನೂ ತಿದ್ದುಪಾಟುಮಾಡಲಾಯಿತು. ಮೈಸೂರಿನಲ್ಲಿ ಹೊಸದಾಗಿ ಸ್ಥಾಪಿಸಿದ ಕಿವುಡು ಮೂಗರ ಪಾಠಶಾಲೆಗೆ ಹೊಸದಾಗಿ ಗ್ರಾಂಟುಕೊಡಲಾಯಿತು. ಕಳೆದ ಜ್ಯೂನ್ 15ರಿಂದ ಮೈಸೂರಿನಲ್ಲಿ ಒಂದು ಪ್ರತ್ಯೇಕವಾದ ಇಂಜನಿಯರಿಂಗ್ ಪಾಠಶಾಲೆಯನ್ನೂ ಇಡಲಾಯಿತು. ಎಡಿಂಬರೊ ಇಂಡಿಯನ್ ಅಸೋಸಿಯೇಷನ್ ಎಂಬ ಸಂಘಕ್ಕಾಗಿ ಈವರ್ಷ ಶ್ರೀಮನ್ಮಹಾರಾಜರವರು 200 ಗಿನಿ ಚಂದಾವನ್ನು ಕೊಡಿಸಿದರು.

ರಾಜ್ಯವನ್ನು ವಹಿಸಿಕೊಂಡಂದಿನಿಂದೀಚೆಗೆ ಜನರ ಸಾಮಾನ್ಯವಿದ್ಯಾಭ್ಯಾಸವು ಬಹಳಮಟ್ಟಿಗೆ ಅಭಿವೃದ್ಧಿಗೆ ಬಂದಿದ್ದಾಗ್ಯೂ, ಪ್ರಜೆಗಳಲ್ಲಿ, ಇನ್ನೂ ಜ್ಞಾನವೆಂಬ ಬೆಳಕು ಸೋಕದ, ಅಪಾರವಾದ ಅಜ್ಞಾನಾಂಧಕಾರವು ನೆಲೆಗೊಂಡಿದೆ. 55 ಲಕ್ಷಪ್ರಜೆಗಳಲ್ಲಿ 2,62,092 ಮಂದಿ ಮಾತ್ರವೇ, ಎಂದರೆ ನೂರಕ್ಕೆ 4·8ರಷ್ಟು ಮಾತ್ರ—ಓದುಬರಹ ತಿಳಿದವರೆಂದು—ಎಂದರೆ ನೂರಕ್ಕೆ 95·2ರಂತೆ ಏನೂ ತಿಳಿಯದವರೆಂದು—1901 ನೆಯ ವರ್ಷದ ಸೆನ್ಸಸಿನಿಂದ ಗೊತ್ತಾಗುತ್ತದೆ. ಓದುಬರಹ ಬರುವ ಪುರುಷರ ಮತ್ತು ಸ್ತ್ರೀಯರ ಸಂಖ್ಯೆಯನ್ನು ಪ್ರತ್ಯೇಕವಾಗಿ ನೋಡುವಲ್ಲಿ ಪುರುಷರಲ್ಲಿ 2,46,886 ಮಂದಿ ಎಂದರೆ ನೂರಕ್ಕೆ 8·8 ರಂತೆಯೂ ಸ್ತ್ರೀಯರಲ್ಲಿ 17,206 ಮಂದಿ ಎಂದರೆ ನೂರಕ್ಕೆ ·6 ರಂತೆಯೂ ಓದುಬರಹ ಬಲ್ಲವರೆಂದು ತಿಳಿಯಬರುತ್ತದೆ. ಸ್ಕೂಲಿಗೆ ಹೋಗುವ ವಯಸ್ಸಿನ ಹುಡುಗರ ಲೆಕ್ಕವನ್ನು ನೋಡಿದಾಗಲೂ ಇದೇ ರೀತಿಯಾದ ಅಸಮಾಧಾನ ವುಂಟಾಗುತ್ತದೆ. ಓದುವ ಗಂಡುಹುಡುಗರ ಸಂಖ್ಯೆಯು ನೂರಕ್ಕೆ 23·9 ರಂತೆಯೂ ಹೆಣ್ಣು ಹುಡುಗಿಯರ ಸಂಖ್ಯೆಯು 4·15 ರಂತೆಯೂ ಎಂದರೆ ಹೆಣ್ಣು ಗಂಡು ಒಟ್ಟುಸಂಖ್ಯೆಯಲ್ಲಿ ನೂರಕ್ಕೆ 13·62 ರಂತೆ ಆಗುತ್ತದೆ. ಪಟ್ಟಣಗಳು ಹಳ್ಳಿಗಳು ಇವುಗಳ ಒಟ್ಟು ಸಂಖ್ಯೆಯನ್ನೂ ಪಾಠಶಾಲೆಗಳ ಒಟ್ಟು ಸಂಖ್ಯೆಯನ್ನೂ ಹೋಲಿಸಿನೋಡಿದರೆ ನೂರಕ್ಕೆ 23·29 ಪಾಠಶಾಲೆಗಳಿದ್ದಂತೆ ಆಗುತ್ತದೆ. ಆದಪ್ರಯುಕ್ತ ಕ್ಷಿಪ್ರದಲ್ಲಿಯೇ ಈ ಭಯಂಕರವಾದ ಅಜ್ಞಾನಾಂಧಕಾರವನ್ನು ತೊಲಗಿಸಿ ಸಾಮಾನ್ಯವಿದ್ಯಾಭಿವೃದ್ಧಿಗೆ ಸಹಾಯಮಾಡಿ, ಬುದ್ಧಿ ಸಂಸ್ಕಾರವನ್ನೂ ಉಂಟುಮಾಡಿ ಮುಖ್ಯವಾಗಿ ಕೈಗಾರಿಕೆಯಲ್ಲಿಯೂ ವ್ಯಾಪಾರದಲ್ಲಿಯೂ ಇತೋಪ್ಯಧಿಕವಾದ ತಿಳುವಳಿಕೆಯನ್ನು ಉಂಟುಮಾಡುವದು ಸುಲಭಸಾಧ್ಯವಾಗಿ ಕಾಣುವದಿಲ್ಲ. ಬಾಲ್ಯಪಾಠಶಾಲೆಗಳಲ್ಲಿಯೂ ಮಧ್ಯಪಾಠಶಾಲೆಗಳಲ್ಲಿಯೂ ನಡೆಯುವ ವಿದ್ಯಾಭ್ಯಾಸವನ್ನು ಇನ್ನೂ ವಿಸ್ತರಿಸಿ ಅವುಗಳನ್ನು ಬಲಪಡಿ[illegible]ದಕ್ಕಾಗಿ ವಿದ್ಯಾಭ್ಯಾಸದ ಇಲಾಖೆಗೆ, ಈಗ ನಮಗೆ ಇರುವ ಶಕ್ತಿಗೆ ಮೀರಿ, ಹಣವನ್ನು ಕೊಡಬೇಕಾಗುತ್ತದೆ. ಪ್ರಕೃತದಲ್ಲಿ ಲೋಕಲ್‌ಫಂಡ್ಸ್ ಜನರಲಿಂದ ವಿದ್ಯಾಭ್ಯಾಸಕ್ಕಾಗಿ ಸಲ್ಲುತ್ತಿದ್ದ ಹಣವನ್ನು ಶೇಕಡ 25ರಿಂದ 33 ಕ್ಕೆ ಹೆಚ್ಚಿಸಿ, ಈ ಕೆಲಸವನ್ನು ನೆರವೇರಿಸಲು ಯಥೋಚಿತವಾಗಿ ಪ್ರಯತ್ನಮಾಡಿದೆ.

ರೆವಿನ್ಯು ಇಲಾಖೆಯ ಹೊಸಏರ್ಪಾಡು.—1887ರಲ್ಲಿ ಇಲಾಖಾಧಿಕಾರಿಗಳನ್ನು ಬೇರೆಬೇರೆಯಾಗಿ ವಿಭಾಗಮಾಡುವ ಉದ್ದೇಶದಿಂದ ಆರಂಭಿಸಿದ ಕಾರ್ಯವು, ರೆವಿನ್ಯೂ ಇಲಾಖೆಯ ಮುಖ್ಯಾಧಿಕಾರಿಯಾಗಿ ಒಬ್ಬ ರೆವಿನ್ಯೂಕಮಿಷನರನ್ನು ನೇಮಿಸಿದ್ದರಲ್ಲಿ ಪೂರ್ತಿಗೆ ಬಂದಿದೆ. ಇನ್ನು ಮೇಲೆ ಈ ಏರ್ಪಾಡಿನಿಂದ ಆ ಇಲಾಖೆಯ ನಡವಳಿಕೆಗಳು ಸ್ಥಳಭೇದವಿಲ್ಲದೆ ಒಂದೇ ರೀತಿಯಾಗಿ ನಡೆದು ತಕ್ಕಷ್ಟು ಮೇಲ್ವಿಚಾರಣೆಗೆ ಸಹಾಯವಾಗುವದೆಂದು ನಿರೀಕ್ಷಿಸಿದೆ. ರೆವಿನ್ಯೂ ಅಸಿಸ್ಟೆಂಟು ಕಮಿಷನರುಗಳ ಕೆಲಸವನ್ನೂ ಅಧಿಕಾರವನ್ನೂ ಕ್ಲಿಪ್ತಮಾಡಿದೆ. ಅವರಿಂದ ಆಗುವ ಪ್ರಯೋಜನಗಳನ್ನು ಹೆಚ್ಚಿಸುವ ಉದ್ದೇಶದಿಂದ ಅವರನ್ನು ತರಬಿಯತ್ತು ಮಾಡುವದಕ್ಕಾಗಿ ಕೆಲವು ಏರ್ಪಾಡುಗಳನ್ನೂ ಮಾಡಿದೆ. ಹೀಗೆಯೇ ಅಮಲ್ದಾರರಿಗೆ ಚೆನ್ನಾಗಿ ಸವಾರಿ ಬರುವದು ಒಂದು ಅವಶ್ಯಕವಾದ ಯೋಗ್ಯತೆ ಎಂದು ಗೊತ್ತುಮಾಡಿದೆ.

ಅಬ್ಕಾರಿ.—ಸಾರಾಯಿಮಾಡಿ ಸರಬರಾಯಿಮಾಡುವ ಹೊಸಕಂಟ್ರಾಕ್ಟಿನಪ್ರಕಾರ ಗ್ಯಾಲನ್‌ಒಂದಕ್ಕೆ $6\frac{1}{3}$ ಆಣೆಗೆ ಬದಲಾಗಿ $8\frac{1}{2}$ ಆಣೆಯ ಹೆಚ್ಚು ದರಕ್ಕೆ ಕೊಡಲಾಯಿತು. ಡಿಸ್ಟಿಲರಿಯಿಂದ ಮಾರಾಟಕ್ಕೆ ಕಳುಹಿಸಿದ್ದು 330,800 ಗ್ಯಾಲನ್ ಸಾರಾಯಿ. ಇದು ಹಿಂದಿನ ವರ್ಷಕ್ಕಿಂತ 20,000 ಗ್ಯಾಲೆನ್ನಷ್ಟು ಹೆಚ್ಚಾಗಿದೆ. ಕಳ್ಳತನದಿಂದ ಸಾರಾಯಿ ಮಾಡುವದನ್ನೂ ಕಳ್ಳತನದಿಂದ ಒಟ್ಟೆ ಇಳಿಸುವುದನ್ನೂ ಕಂಡು ಹಿಡಿದು ಅರವತ್ತೇಳಕ್ಕಿಂತ ಹೆಚ್ಚಾದ ಮೊಕದ್ದಮೆಗಳಲ್ಲಿ ಅಪರಾಧಿಗಳಿಗೆ ಶಿಕ್ಷೆ ಮಾಡಿಸಲಾಯಿತು.

ಹಿಂದಿನ ವರ್ಷ ಖರ್ಚಾದ ಸಾರಾಯೊಡನೆ ಹೋಲಿಸಿ ನೋಡಿದಾಗ ಮಾತ್ರ ಕಳೆದ ವರ್ಷದ ಖರ್ಚು ಹೆಚ್ಚಾಗಿ ಕಾಣುತ್ತದೆ. ಚಿಲ್ಲರೆ ಮಾರಾಟದ ದರವನ್ನು ಡ್ರಾಂ ಒಂದಕ್ಕೆ 1 ಆಣೆ 6ಪೈಯಿಂದ 2 ಆಣೆಗೆ ಹೆಚ್ಚುಮಾಡಿದ್ದರಿಂದ 1896—97ನೆಯ ವರ್ಷದಲ್ಲಾಗಾಯಿತು ಸಾಮಾನ್ಯವಾಗಿ ಕುಡಿಯೋಣವು ಬಹಳ ಕಡಿಮೆಯಾಗಿದೆ. ಕಳೆದ ವರ್ಷಕ್ಕೆ ಹಿಂದಿನ 5 ವರ್ಷಗಳಲ್ಲಿ, ವರ್ಷ ಒಂದಕ್ಕೆ ಸರಾಸರಿ 410,136 ಗ್ಯಾಲನ್‌ಗಳು ಖರ್ಚಾಗುತ್ತಿದ್ದವು. ಇದು ಕಳೆದ ವರ್ಷದ ಖರ್ಚಿಗಿಂತ 79,136 ಗ್ಯಾಲನ್‌ನಷ್ಟು ಹೆಚ್ಚಾಗಿದೆ. ಇದರಿಂದ, ಸಾರಾಯಿನ ತೆರಿಗೆಯನ್ನೂ ಚಿಲ್ಲರೆ ಮಾರಾಟದ ದರವನ್ನೂ ಹೆಚ್ಚಿಸುವದರ ಮೂಲಕ, ಕುಡಿತ

664

ಆಹಾರದ ಧಾನ್ಯಗಳು ಅಗ್ಗವಾಗಿದ್ದದ್ದೇ ಹೀಗೆ ಎಲ್ಲಾ ಕಡೆಯಲ್ಲಿಯೂ ಕುಡಿತ ಹೆಚ್ಚುವದಕ್ಕೆ ಕಾರಣವಾಯಿತು.

4,46,748 ಮರಗಳಿಂದ ಸೇಂದಿ ಇಳಿಸಲ್ಪಟ್ಟಿತು. ಇದು ಹಿಂದಿನ ವರ್ಷಕ್ಕಿಂತ ಸುಮಾರು 12,000 ಹಷ್ಟು ಕಡಿಮೆಯಾಯಿತು. ಸರಾಸರಿ 6 ಗ್ರಾಮಗಳಿಗೊಂದು ಅಂಗಡಿಯಾಗುವಂತೆ, 2,890 ಸೇಂದಿ ಅಂಗಡಿಗಳಿದ್ದವು. ಅಕ್ಕಿಬೋಜವನ್ನು ಮಾರುವ ಅಂಗಡಿಗಳಿಗೆ ಲೈಸನ್ಸು ಕೊಡುವ ಪದ್ಧತಿಯು ಹೊಸದಾಗಿ ಜಾರಿಗೆ ತರಲ್ಪಟ್ಟಿತು.

ಸೇಂದಿ ಮರಗಳಿರುವ ಜಮೀನುಗಳು ಆಬ್ಕಾರಿ ಇಲಾಖೆಗೆ ಬೇಕಾದಪಕ್ಷದಲ್ಲಿ ಅವುಗಳನ್ನು ಸಂಪೂರ್ಣವಾಗಿ ಉಳಿಸಿಕೊಳ್ಳ ಬೇಕೆಂದೂ ಮರಗಳನ್ನುಮಾತ್ರ ಉಳಿಸಿಕೊಂಡು ಅಂಥ ಜಮೀನುಗಳನ್ನು ಸಾಗುವಳಿಗೆ ಕೊಡುತ್ತಿದ್ದ ಪದ್ಧತಿಯನ್ನು ತಪ್ಪಿಸಿ ಬಿಡಬೇಕೆಂದೂ ಶ್ರೀಮನ್ಮಹಾರಾಜರವರು ಆಜ್ಞಾಪಿಸಿದ್ದಾರೆ.

ಮರಗಳನ್ನು ಮಾತ್ರ ಉಳಿಸಿಕೊಳ್ಳುವದರಿಂದ ರೈತರಿಗೆ ಉಂಟಾಗಬಹುದಾದ ತೊಂದರೆಯನ್ನು ತಪ್ಪಿಸುವದಕ್ಕೋಸ್ಕರ ಹೀಗೆ ಮಾಡಲಾಯಿತು. ಹೀಗೆ ಸರಕಾರದವರು ಮಾಡಿಕೊಟ್ಟ ಸಹಾಯವು ರೈತರಿಗೆ ಅನುಕೂಲವಾಗಿರುವದೆಂದೂ ಇದರಿಂದ ಹಿಡುವಳಿದಾರರ ಜಮೀನುಗಳಲ್ಲಿರುವ ಮರಗಳೂ ಪೋಲಾಗದೆ ಉಳಿದು, ಮರದೆರಿಗೆಯೇರ್ಪಾಡಿನ ಪ್ರಕಾರ, ಅವರ ಮರಗಳ ಮೇಲೆ ಮರವಳಿಯುತ್ಪತ್ತಿಯಾಗಿ ಅವರಿಗೆ ನಿರಂತರವಾದ ಲಾಭವುಂಟಾಗುವದೆಂದೂ ನಂಬಿದೆ.

ಜಂಗಲು—ಈ ಇಲಾಖೆಯ ನಿಬಂಧನೆಗಳ ಕಾನೂನು ಬಹಳ ಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿತ್ತು. ಇದರಲ್ಲಿ ಲೆಕ್ಕಕ್ಕೆ ಸಂಬಂಧಪಟ್ಟ ಮೊದಲನೆಯ ಭಾಗವು 1902ನೆಯ ಇಸವಿ ಸೆಪ್ಟಂಬರು ಗುರ್ರೀಲಾಗಾಯಿತು ಜಾರಿಗೆ ತರಲ್ಪಟ್ಟಿತು. ಡಿಸ್ಟ್ರಿಕ್ಟು ಜಂಗಲುಗಳಿಂದ ತರಲ್ಪಡುವ ಸೌದೆಯ ತಲೆಹೊರೆಗಳಿಗೆ ಸುಂಕ ವಸೂಲ್ಮಾಡುವದನ್ನು ನಿಲ್ಲಿಸಿಬಿಟ್ಟಿತು. ಸ್ವಂತಹಿಡುವಳಿಯಲ್ಲಿರುವ ಗಂಧದಮರಗಳಿಗೆ ಸಂಭವಿಸುವ ನಷ್ಟವನ್ನು ಸರ್ಕಾರದವರಿಗೆ ತಿಳಿಸದೆ ತಪ್ಪಿದರೆ, ಕ್ರಿಮಿನಲ್ ಶಿಕ್ಷೆಯಾಗಬಹುದೆಂದು ಜಂಗಲಿ ಕಾನೂನಿನ 76 ನೆಯ ಪ್ರಕರಣಕ್ಕೆ ಅನುಸಾರವಾಗಿ ಮಾಡಲ್ಪಟ್ಟಿದ್ದ ನಿಬಂಧನೆಯನ್ನು ಗತವರ್ಷದಲ್ಲಿ ರದ್ದುಮಾಡಲಾಯಿತು.

ಸ್ಟೇಟ್ ಫಾರೆಸ್ಟಿಗೆ ಈಸಲ ಯಾವಪ್ರದೇಶವನ್ನೂ ಹೊಸದಾಗಿ ಸೇರಿಸಲಿಲ್ಲ; 329 ಚದರು ವೆ[illegible]ಷ್ಟು ವಿಸ್ತೀರ್ಣವಾದ ಹೆಚ್ಚು ಭೂಮಿಯನ್ನು ಜಂಗ್ಲಿಗೋಸ್ಕರ ಉಳಿಸಿಕೊಂಡಿತು. ಸುಮಾರು 20 ಜಂಗ್ಲುಗಳ ಸೆಟಲ್ಮೆಂಟ್ ಪೂರ್ತಿಯಾಯಿತು. 311 ಮೈಲಿಗಳಷ್ಟು ಜಂಗಲಿ ಎಲ್ಲೆಮಾರ್ಗಗಳು ಗುರುತುಮಾಡಲ್ಪಟ್ಟವು. 800 ಮೈಲಿಯಷ್ಟು ಹಳೆಮಾರ್ಗಗಳಲ್ಲಿದ್ದ ಕಾಡು ಕಡಿಯಲ್ಪಟ್ಟಿತು. ಮುಖ್ಯವಾಗಿ ಶಿವಮೊಗ್ಗ, ತುಮಕೂರು, ಕೋಲಾರ ಡಿಸ್ಟ್ರಿಕ್ಟುಗಳಲ್ಲಿ 196 ಚದರಮೈಲಿಯಷ್ಟು ಕಾಡನ್ನು ಸರ್ವೆಮಾಡಲಾಯಿತು.

ಮರಮ್ಮತ್ಕಾಂಗಾರಿಗಳು ಕಟ್ಟಡಗಳು.—ಮುಖ್ಯವಾದ ಕಟ್ಟಡದ ಕೆಲಸಗಳಲ್ಲಿ ಮೈಸೂರು ಹೊಸ ಅರಮನೆಯನ್ನು ಕಟ್ಟುವ ಕೆಲಸವು ಬಹಳ ತೃಪ್ತಿಕರವಾಗಿ ನಡೆಯಿತು. ಇದಕ್ಕಾಗಿ ಈ ವರ್ಷ 2,60,000 ರೂಪಾಯಿ ಖರ್ಚಾಯಿತು. ದಸರಾ ದರ್ಬಾರ್ ಹಜಾರ, ಒಳತೊಟ್ಟಿ, ಕಲ್ಯಾಣಮಂಟಪ, ಹೊರಬಾಗಿಲ ಮುಂದುಗಡೆಯ ಮೊಗಸಾಲೆ ,ಉತ್ತರದಕ್ಷಿಣದ ಮಹಡಿ ಮೆಟ್ಟಲುಗಳು, ಸರಸ್ವತೀಭಂಡಾರದ ಕಟ್ಟಡ, ಇವು ಮೊದಲನೆಯ ಅಂತಸ್ತಿನ ಮಾಳಿಗೆಯವರೆಗೆ ಸುಮಾರಾಗಿ ಮುಗಿದಿದ್ದವು.

4,63,582 ರೂಪಾಯಿ ಅಂದಾಜಾಗಿದ್ದ ಬೆಂಗಳೂರಲ್ಲಿರುವ ರಾಷ್ಟ್ರೀಯ ಯುದ್ಧಸಾಮಗ್ರಿವಾಹಕ ಸೈನ್ಯಗಳ (ಇಂಪೀರಿಯಲ್ ಸರ್ವಿಸ್ ಟ್ರಾನ್ಸ್ಪೋರ್ಟ್) ಲೈನುಗಳು ತೃಪ್ತಿಕರವಾಗಿ ಮುಗಿದು ವಾಸಕ್ಕಾಗಿ ಮಿಲಿಟರಿ ಇಲಾಖೆಯವರಿಗೆ ಕೊಡಲ್ಪಟ್ಟವು.

ಬೆಂಗಳೂರಿನಲ್ಲಿರುವ ಹೊಸರೆವಿನ್ಯೂ ಸರ್ವೆ ಮತ್ತು ಲ್ಯಾಂಡ್ ರಿಕಾರ್ಡ್ಸ್ಆಫೀಸು, ಶಿವಮೊಗ್ಗೆ ಆಂಗ್ಲೋವರ್ನಾಕ್ಯುಲರ್ ಸ್ಕೂಲ್, ಶ್ರೀನಿವಾಸಪುರದ ಹೊಸ ತಾಲೂಕು ಕಚೇರಿ, ಈ ಕಟ್ಟಡಗಳು ಕಾರ್ಯತಃ ಮುಗಿದವು.

ನೀರುಸರಬರಾಯಿ:—ಈ ಬಾಬಿಗೆ ಸಂಬಂಧಪಟ್ಟ ಮುಖ್ಯ ಕಾರ್ಯಗಳು ಯಾವವೆಂದರೆ—ಬೇತಮಂಗಲ, ಹೊಳಲಿ ಈಕೆರೆಗಳಿಂದ ಕೋಲಾರದ ಚಿನ್ನದ ಗಣಿಗೆ ನೀರು ಸರಬರಾಯ್ಮಾಡುವದಕ್ಕಾಗಿ 11ಲಕ್ಷ ಅಂದಾಜು ಮುಂಜೂರಾಗಿ ಈವರ್ಷದಲ್ಲಿ ಕಲಸವನ್ನು ಚೆನ್ನಾಗಿ ಆರಂಭಿಸಲಾಯಿತು. ಇದರಿಂದ, ಬಂಡವಾಳದ ಮೇಲೆ, ಮೊದಲು 5 ವರ್ಷಕಾಲ ಸೇಕಡ 27 ರಂತೆಯೂ, ಆಮೇಲೆ 5 ವರ್ಷಕಾಲ ಸೇಕಡ 15 ರಂತೆಯೂ, ಉತ್ಪತ್ತಿಯಾಗುವ ಕಾರಣ ಈ ಕೆಲಸವು ಪೂರ್ತಿಯಾದಾಗ ಸರಕಾರಕ್ಕೆ ವಿಶೇಷ ಲಾಭಕರವಾಗಿರುವದು.

ನೀರಾವರಿ ಕಾಂಗಾರಿ.—ಮಾರಿಕಣವೆಯಲ್ಲಿ ನಡೆದ ಕೆಲಸವು ಪರಿಮಾಣದಲ್ಲಿಯೂ ಗುಣದಲ್ಲಿಯೂ ಎಂದಿನಂತೆ ತೃಪ್ತಿಕರವಾಗಿತ್ತು. ಈವರ್ಷದಲ್ಲಿ ಸುಮಾರು 12,28,000 ಸಲೆಅಡಿ ಕಲ್ಲುಕೆಲಸವು ನಡೆಯಿತು.

ಇದರಿಂದ ಕೆರೆಕಟ್ಟೆಯ ಎತ್ತರವು 50 ಅಡಿಯಿಂದ 86·75 ಅಡಿಗೆ ಹೆಚ್ಚಿತು. ಇಂಗ್ಲೆಂಡಿನಿಂದ ತರಿಸಿದ ತೂಬಿನ ಮುಚ್ಚಳಗಳು ಇಡಲ್ಪಟ್ಟವು. ತೂಬಿನ ಕಾಲುವೆಗಳೂ ಹಿಂದಿನ ತೊಟ್ಟಿಗಳೂ ಕಟ್ಟಿ ಮುಗಿದವು. ಮುಂದೆ ಪ್ರಕೃತಬಿದ್ದರೆ ಕೈಗಾರಿಕೆಯ ಕೆಲಸಗಳಿಗಾಗಿ ಜಲಪಾತದಿಂದ ವೈದ್ಯುತಶಕ್ತಿಯನ್ನು ಉಂಟುಮಾಡುವದಕ್ಕೋಸ್ಕರ ಕೀಳುಮಟ್ಟದ ಕಾಲುವೆಗಳನ್ನು ಕಟ್ಟುವ ವಿಷಯದಲ್ಲಿ ಆಖೈರ್ ತೀರ್ಮಾನ ಮಾಡಲಾಯಿತು. ಈ ಕಾಲುವೆಗಳ ಸರ್ವೆಯೂ ಮುಗಿಯಿತು. ಹಿಂದಿನ ವರ್ಷ ಇದ್ದ 46 ಅಡಿ ನೀರಿಗೆ ಬದಲಾಗಿ ಕಳೆದ ವರ್ಷ 71 ಅಡಿ ನೀರು ಸೇಕರಿಸಲ್ಪಟ್ಟಿತು. ಈ ಕಾಂಗಾರಿಯಲ್ಲಿ ಮೆ॥ ದಳ್ವಾಳರವರು ಮಾಡಿದ ಕೆಲಸದಿಂದ ಸಂತುಷ್ಟರಾಗಿ ಶ್ರೀಮನ್ಮಹಾರಾಜರವರು ಅವರನ್ನು ಸೂಪರಿಂಟೆಂಡಿಂಗ್ ಇಂಜನಿಯರ್ ಕೆಲಸದಲ್ಲಿ ಖಾಯಂಮಾಡಿದ್ದಾರೆ.

ಮುಂದೆ ಹೇಳುವ ಕಾಂಗಾರಿಗಳು ಈ ವರ್ಷ ಕಾರ್ಯತಃ ಮುಗಿದಹಾಗೆ ತಿಳಿಯಬರುತ್ತವೆ. ಅವು ಯಾವವೆಂದರೆ :—ತುಂಕೂರು ಡಿಸ್ಟ್ರಿಕ್ಟಿನಲ್ಲಿ ಸಂತನಪುರದ ಅಣೆಕಟ್ಟುವದು, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹುಲ್ಲಹಳ್ಳಿನಾಲೆಯನ್ನು ವಿಸ್ತರಿಸಿ ಅಭಿವೃದ್ಧಿ ಮಾಡುವದು, ಕಲ್ಲಹಳ್ಳಿ ಅಣೆಯನ್ನು ಪುನಃ ಕಟ್ಟುವದು, ಕಂಪಸಾಗರ, ಕೋಟೆ ಬೆಟ್ಟ, ಕಿರುಗಾವಲು, ಮರಕಾಲು, ಹೊನ್ನಾವಾರ, ಇಲ್ಲಿಯ ಕೆರೆಗಳ ದುರಸ್ತು, ಇವೇ. ಅರಕಲ್ಗೂಡು ತಾಲೂಕಿನಲ್ಲಿ 1902 ನೆಯ ಜುಲೈ ತಿಂಗಳಲ್ಲಿ ಒಡೆದುಹೋದ ಕೃಷ್ಣರಾಜ ಅಣೆಕಟ್ಟು ದುರಸ್ತಾಯಿತು. ಅದರ ಎಡಪಾರ್ಶ್ವದ ತೊಳೆಯುವ ತೂಬನ್ನು ಕಟ್ಟಲಾಯಿತು. ಈ ಅಣೆಕಟ್ಟಿನ ಕೆಳಗೆ ಉತ್ಪತ್ತಿಯಾಗುವ ಭಾರಿ ಹುಟ್ಟುವಳಿಯನ್ನು ಭದ್ರಪಡಿಸಿಕೊಳ್ಳುವದಕ್ಕಾಗಿ ಈ ಎರಡು ಕೆಲಸಗಳನ್ನೂ ತೀವ್ರವಾಗಿ ನಡಿಸಲಾಯಿತು.

ದುರ್ಭಿಕ್ಷ ಪರಿಹಾರದ ಕೆಲಸಗಳು.—ದುರ್ಭಿಕ್ಷ ಪರಿಹಾರಾರ್ಥವಾದ ಕೆಲಸಗಳಲ್ಲಿ ಗೊತ್ತಾದ 49 ನೀರಾವರಿ ಕಾರ್ಯಗಳ ವಿಷಯವಾಗಿ ಅಂದಾಜನ್ನು ತಯಾರುಮಾಡುವದಕ್ಕೋಸ್ಕರವೇ ನೇಮಿಸಿದ ಸೂಪರಿಂಟೆಂಡಿಂಗ್ ಇಂಜನಿಯರವರು ಅನೇಕ ಕಾಂಗಾರಿಗಳ ಅಂದಾಜನ್ನು ಮುಗಿಸಿ ಉಳಿದ ಕಾಂಗಾರಿಗಳ ವಿಷಯದಲ್ಲಿ (Field work) ಸ್ಥಳೀಯ ಕಾರ್ಯಗಳನ್ನು ಪೂರ್ತಿಮಾಡಿದ್ದಾರೆ. ಈ ಪೈಕಿ 49 ಲಕ್ಷ ರೂಪಾಯಿಂದಾಜಿನ 11 ಕಾರ್ಯಗಳನ್ನು ಈ ವರೆಗೆ ಮಂಜೂರ್ಮಾಡಲಾಯಿತು ; ಲಾಭಕರವಲ್ಲವೆಂದು ಎಂಟನ್ನು ಬಿಟ್ಟುಬಿಡಲಾಯಿತು ; ಮಿಕ್ಕವು ಪರ್ಯಾಲೋಚನೆಯಲ್ಲಿವೆ. ಇದೂ ಅಲ್ಲದೆ ಬಹುಕಾಲದಿಂದ ಸರ್ಕಾರದವರ ಪರ್ಯಾಲೋಚನೆಯಲ್ಲಿದ್ದ ಬಟ್ಟು ಸಂಸ್ಥಾನದ ಕೆರೆಗಳ ನಕ್ಷೆಗಳನ್ನು ತಯಾರುಮಾಡುವ ಕೆಲಸವನ್ನು ಈಚೆಗೆ ಈ ಸೂಪರಿಂಟೆಂಡಿಂಗ್ ಇಂಜನಿಯರವರಿಗೇ ಕೊಟ್ಟಿದೆ.

ಕಾವೇರೀಪ್ರಪಾತದ ವೈದ್ಯುತಶಕ್ತಿಯನ್ನು ಹೆಚ್ಚಿಸುವದು.—$12\frac{3}{4}$ ಲಕ್ಷರೂಪಾಯಿ ಮುಟ್ಟಿಸಿ 2,000 ಅಶ್ವಶಕ್ತಿ ಹುಟ್ಟುವ ಎರಡನೆಯ ಸ್ಥಾಪನೆಗೆ ಬೇಕಾದ ಏರ್ಪಾಡುಗಳನ್ನು ಮಾಡಿ ಕೆಲಸವನ್ನು ಉಪಕ್ರಮಿಸಿ ಈ ವರ್ಷದಲ್ಲಿ ಅದಕ್ಕಾಗಿ 97,644 ರೂಪಾಯಿ ಖರ್ಚು ಮಾಡಲಾಯಿತು.

ರೇಲ್ವೆಗಳ ಹುಟ್ಟುವಳಿ.—ಬಂಡವಾಳದ ಮೇಲೆ ಉತ್ಪತ್ತಿಯಾದ ನಿವ್ವಳನಫೆಯ ಸೇಕಡೆ ದರಗಳು ಯಾವವೆಂದರೆ :—

	1903	1902
ಕೋಲಾರದ ಚಿನ್ನದಗಣಿ ರೇಲ್ವೆ	6·73	8·71
ಮೈಸೂರು ಹರಿಹರ ,,	3·64	2·92
ಬೆಂಗಳೂರು ಹಿಂದೂಪುರ ,,	3·50	2·60
ನಂಜನಗೂಡು ಶಾಖೆ ,,	1·79	1·42
ಬೀರೂರು ಶಿವಮೊಗ್ಗ ,,	0·95	0·89

ಮುಜರಾಯಿ.—ಗತ ವರ್ಷದಲ್ಲಿ 44,882 ರೂಪಾಯಿ ಮುಟ್ಟಿಸಿ 108 ಕಟ್ಟಡಗಳನ್ನು ದುರಸ್ತು ಮಾಡಲಾಯಿತು. ಈ ಮೊಬಲಗಿನಲ್ಲಿ ಕೆಲಭಾಗವು ಆಯಾಯ ಕಟ್ಟಡಗಳ ಫಂಡಿನಿಂದಲೂ ಕೆಲಭಾಗವು ಭಕ್ತಾದಿಗಳು ಕೊಟ್ಟ ಹಣದಿಂದಲೂ ಬಂದವು. ದೇವಸ್ಥಾನಾದಿಗಳ ವಿಚಾರಣೆಯಬಗ್ಗೆ ಹತ್ತು ಸ್ಥಳೀಯ ಸಂಘಗಳು ನೇಮಿಸಲ್ಪಟ್ಟವು. ವ್ಯಾಸರಾಯಸ್ವಾಮಿಗಳವರ ಮಠದ ಆಡಳಿತವು ಅತೃಪ್ತಿಕರವಾಗಿದ್ದದ್ದರಿಂದ ಅವರ ಅಪೇಕ್ಷೆಯಮೇರೆ ಆ ಮಠಕ್ಕೆ ಸೇರಿದ ವಿಶಿಷ್ಟ ಇನಾಮು ಜಮೀನುಗಳನ್ನೂ ಗ್ರಾಮಗಳನ್ನೂ ಸರಕಾರದ ವಿಚಾರಣೆಗೆ ತೆಗೆದು ಕೊಳ್ಳಲಾಯಿತು. ಅಧಿಕಾರವಿಲ್ಲದೆ ಪರಾಧೀನಮಾಡಿದ್ದ ಉತ್ತರಾದಿಮಠದ ಒಂದು ಗ್ರಾಮವನ್ನೂ 7 ದೇವಸ್ಥಾನಗಳಿಗೆ ಸೇರಿದ ಜಮೀನುಗಳನ್ನೂ 1877 ನೆಯ ವರ್ಷದ ನಿಬಂಧನೆಗಳಪ್ರಕಾರ ಸರ್ಕಾರಕ್ಕೆ ಸ್ವಾಧೀನಪಡಿಸಿಕೊಳ್ಳಲಾಯಿತು. ಸರ್ವೆ ಸೆಟಲ್‌ಮೆಂಟ್ ಕಾಲದಲ್ಲಿ ಶಿಥಿಲವಾಗಿದ್ದಪ್ರಯುಕ್ತ ನೆಲಮಂಗಲದ ತಾಲುಕು ಮಲ್ಲೇನಹಳ್ಳಿ ಗ್ರಾಮದಲ್ಲಿರುವ ಶ್ರೀ ಆಂಜನೇಯಸ್ವಾಮಿಯವರ ದೇವಸ್ಥಾನ ಮತ್ತು ಹೊಸಕೋಟೆ ತಾಲ್ಲೂಕು ಸೂಲಿಬೆಲೆ ಗ್ರಾಮದಲ್ಲಿರುವ ಶ್ರೀ ಕಾಶೀ ವಿಶ್ವೇಶ್ವರಸ್ವಾಮಿ ದೇವಸ್ಥಾನ ಇವುಗಳ ಇನಾಂ ಜಮೀನುಗಳನ್ನು ಸರ್ಕಾರದವರು ಸ್ವಾಧೀನಕ್ಕೆ ತೆಗೆದುಕೊಂಡಿದ್ದರು. ಈಗ

ಆ ದೇವಸ್ಥಾನಗಳು ದುರಸ್ತಾಗಿ ಸೇವೆ ಸರಿಯಾಗಿ ನಡೆಯುತ್ತಿರುವದರಿಂದ, ಅವುಗಳನ್ನು ಆಯಾ ದೇವಸ್ಥಾನಗಳಿಗೆ ವಾಪಸ್ಸು ಕೊಡಲಾಯಿತು. ಅರಕಲ್ಗೂಡು ತಾಲೂಕಿನಲ್ಲಿ ಕೆಲವರ್ಷಗಳ ಹಿಂದೆ ಸರ್ಕಾರದವರು ಸುಫರ್ದು ಮಾಡಿಕೊಂಡ, ಶ್ರೀ ಅಗಸ್ತ್ಯೇಶ್ವರ ಸ್ವಾಮಿಯವರ ದೇವಸ್ಥಾನಕ್ಕೆ ಸೇರಿದ, ಇನಾಂ ಗ್ರಾಮಕ್ಕೆ ಬದಲಾಗಿ 120 ರೂಪಾಯಿ ನಗದಿಯಾತು ಇನಾಮನ್ನು ಮಂಜೂರ್ಮಾಡಲಾಯಿತು.

ಈ ವರ್ಷ 11 ಗಣಿಗಳಲ್ಲಿ ಕೆಲಸವು ನಡೆಯುತ್ತಿತ್ತು. ದಕ್ಷಿಣ ಅಂಬ್ಳೆ (ಹೊಸ ಕೆಂಪಿನಕೋಟೆ ಚಿನ್ನದ ಗಣಿ ಲಿಮಿಟೆಡ್) ಅಜ್ಜಂಪುರ (ಕಡೂರು ಮೈಸೂರು ಲಿಮಿಟೆಡ್) ಮತ್ತು ಹೊನ್ನೆಹಟ್ಟಿ (ಮೈಸೂರು ನಗರದ ಗಣಿ ಲಿಮಿಟೆಡ್) ಎಂಬ 3 ಗಣಿಗಳಲ್ಲಿ ಕೆಲಸವು ನಿಂತು ಹೋಯಿತು. ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಬೆಳ್ಳಾರದ ಪ್ರದೇಶದಲ್ಲಿಯೂ ಮತ್ತು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಬೋಡಿಮಾರಿ ಪ್ರದೇಶದಲ್ಲಿಯೂ ಖನಿಜಗಳನ್ನು ಹುಡುಕುವದಕ್ಕೆ ಲೈಸೆನ್ಸುಗಳು ಕೊಡಲ್ಪಟ್ಟವು. ಇಂಡಿಯನ್ ಮೈನ್ಸ್ ಡೆವಲೆಪ್ಮೆಂಟ್ ಸಿಂಡಿಕೇಟ್ ಸಂಘದವರಿಂದ ಈ ಎರಡು ಸ್ಥಲಗಳಲ್ಲಿಯೂ ಕೆಲಸವು ಉಪಕ್ರಮಿಸಲ್ಪಟ್ಟಿತು.

ಗಣಿಗಳಲ್ಲಿ ಇನ್ಸ್ಪೆಕ್ಷನ್ ಕೆಲಸ ಹೆಚ್ಚುತ್ತಿರುವದರಿಂದ ಹೊಸದಾಗಿ ಮತ್ತೊಬ್ಬ ಗಣಿಗಳ ಇನ್ಸ್ಪೆಕ್ಟರನ್ನು ನೇಮಿಸಬೇಕಾಯಿತು.

ಎಲ್ಲಾ ಗಣಿಗಳಿಂದ ಒಟ್ಟು 330 ಲಕ್ಷಕ್ಕೆ ಮೀರಿ ಬೆಲೆ ಬಾಳತಕ್ಕ ಚಿನ್ನವು ಉತ್ಪತ್ತಿಯಾಯಿತು. ಹಿಂದಿನವರ್ಷ 277 ಲಕ್ಷ ಬಾಳತಕ್ಕ ಚಿನ್ನಮಾತ್ರ ಉತ್ಪತ್ತಿಯಾಗಿತ್ತು.

ವ್ಯವಹಾರವಿಷಯ (Judicial).— ಕಳೆದವರ್ಷದ ಉಪನ್ಯಾಸದಲ್ಲಿ ಸೂಚಿಸಿದಂತೆ ಕೋರ್ಟುಗಳಲ್ಲಿ ವ್ಯವಸ್ಥೆಯಾಗದೆ ನಿಂತಿರುವ ಸಿವಿಲ್ ಕಾರ್ಯಗಳಿಂದುಂಟಾದ ಅನಾನುಕೂಲ್ಯವನ್ನು ತಪ್ಪಿಸುವದಕ್ಕಾಗಿ ಈವರ್ಷ ಕೆಲವು ಬದಲಾವಣೆಗಳು ಜಾರಿಯಲ್ಲಿ ತರಲ್ಪಟ್ಟವು. 1898 ನೆಯ ವರ್ಷದಲ್ಲಿ ಚೀಫ್‌ಕೋರ್ಟಿಗೆ ವಹಿಸಿದ ಬೆಂಗಳೂರು, ಕೋಲಾರ, ತುಮಕೂರು ಡಿಸ್ಟ್ರಿಕ್ಟುಗಳ ಸಿವಿಲ್ ಮತ್ತು ಕ್ರಿಮಿನಲ್ ಒರಿಜನಲ್ ಅಧಿಕಾರವು ವಾಪಸ್ಸು ತೆಗೆದುಕೊಂಡು ಬೆಂಗಳೂರಿನಲ್ಲಿ ಒಂದು ಡಿಸ್ಟ್ರಿಕ್ಟು ಮತ್ತು ಸೆಷನ್ಸ್‌ಕೋರ್ಟನ್ನು ಪುನಃ ಸ್ಥಾಪಿಸಿ 1903 ನೆಯ ಜನವರಿ ತಿಂಗಳಿಂದ ಮೇಲ್ಕಂಡ ಮೂರು ಡಿಸ್ಟ್ರಿಕ್ಟುಗಳ ಅಧಿಕಾರವನ್ನೂ ಆ ಕೋರ್ಟಿಗೆ ಕೊಟ್ಟಿತು. ಅದೇತಾರೀಖಿನಿಂದ ಹಾಸನ, ಚಿಕ್ಕಮಗಳೂರು, ಚಿತ್ರದುರ್ಗಗಳಲ್ಲಿ ಮೂರು ಸಬಾರ್ಡಿನೇಟ್ ಜಡ್ಜಿ ಕೋರ್ಟುಗಳನ್ನು ಸ್ಥಾಪಿಸಿ ಅವುಗಳಿಗೆ 10,000 ರೂಪಾಯಿವರೆಗೂ ಒರಿಜನಲ್ ಅಧಿಕಾರವನ್ನೂ 300 ರೂಪಾಯಿನವರೆಗೂ ಸ್ಮಾಲ್‌ಕಾಸ್ ಅಧಿಕಾರವನ್ನೂ ಕೊಟ್ಟು ಆ ಸ್ಥಳಗಳಲ್ಲಿದ್ದ ಮುನಿಸೀಫ್ ಕೋರ್ಟುಗಳನ್ನು ತೆಗೆದುಹಾಕಲಾಯಿತು. ಸಬ್‌ಜಡ್ಜಿಗಳಿಗೆ ಅಸಿಸ್ಟೆಂಟ್ ಸೆಷನ್ಸ್ ಜಡ್ಜಿಗಳ ಅಧಿಕಾರವನ್ನು ಕೊಟ್ಟು, ಜಡ್ಜಿಗಳು ನ್ಯಾಯವ್ಯವಸ್ಥೆಗಾಗಿ ಸಂಚಾರ ಹೋಗುವ ಪದ್ಧತಿಯನ್ನು ಪುನಃ ಉಪಕ್ರಮಿಸಲಾಯಿತು. ಈಚೆಗೆ ಅವರಿಗೆ, ಇನ್‌ಸಾಲ್ವೆನ್ಸಿ ಮೊಕದ್ದಮೆಗಳಲ್ಲಿಯೂ, ವಾರಸ್ ಸರ್ಟಿಫಿಕೇಟು ರೆಗ್ಯುಲೇಷನ್ ಮತ್ತು ಮೈನರ್ ರೂಲ್ಸುಗಳಿಗನುಸಾರವಾಗಿ ಬರುವ ಅರ್ಜಿಗಳ ವಿಷಯದಲ್ಲಿಯೂ ಡಿಸ್ಟ್ರಿಕ್ಟ್‌ಕೋರ್ಟಿನ ಅಧಿಕಾರವನ್ನು ಕೊಡಲಾಯಿತು. ಬೆಂಗಳೂರು ಸಬ್‌ಜಡ್ಜಿಯ ಸ್ಮಾಲ್‌ಕಾಸ್ ಅಧಿಕಾರವನ್ನು 300 ರೂಪಾಯಿಗಳಿಗೆ ಹೆಚ್ಚಿಸಲಾಯಿತು.

ಕಳೆದ ಜನವರಿಯಲ್ಲಿ ಜುಡಿಷಿಯಲ್ ಇಲಾಖೆ ಅಧಿಕಾರಿಗಳ ಸಂಬಳದ ಪಟ್ಟಿಯು ಪುನಃ ವಿಮರ್ಶಿಸಲ್ಪಟ್ಟಿತು. ಸಬ್‌ಜಡ್ಜಿಗಳು 600, 500, 450 ರೂಪಾಯಿ ಸಂಬಳಗಳುಳ್ಳ ಮೂರು ತರಗತಿಗಳಾಗಿ ವಿಭಾಗಿಸಲ್ಪಟ್ಟಿದಾರೆ. ಚೀಫ್‌ಕೋರ್ಟು ರಿಜಸ್ಟ್ರಾರೂ ಸಬ್‌ಜಡ್ಜಿಗಳ ಪಟ್ಟಿಗೆ ಸೇರಿದ್ದಾರೆ. ಮುನಿಸೀಫರುಗಳು 350ರೂ, 300ರೂ, 250ರೂ, ಮತ್ತು 150ರಿಂದ 200ರೂ, ಈಮೇರೆಗೆ ಸಂಬಳಗಳುಳ್ಳ ನಾಲ್ಕುತರಗತಿಗಳಾಗಿ ವಿಭಾಗಿಸಲ್ಪಟ್ಟಿದಾರೆ. ಮೊದಲನೆಯ ಮತ್ತು ಎರಡನೆಯ ತರಗತಿಯ ಮುನಸೀಫರುಗಳು ಗ್ರೇಡೆಡ್ ಆಫೀಸರುಗಳ ತರಗತಿಗೆ ಸೇರಿರುತ್ತಾರೆ.

ಸ್ಮಾಲ್‌ಕಾಸ್‌ಮೊಕದ್ದಮೆಗಳೂ ಸೇರಿ ಸಿವಿಲ್ ಮೊಕದ್ದಮೆಗಳ ಸಂಖ್ಯೆಯು ಹಿಂದಿನವರ್ಷ 20,602 ಇದ್ದದ್ದು ಗತವರ್ಷದಲ್ಲಿ 18,532ಕ್ಕೆ ಇಳಿದಿದ್ದರಿಂದ ಸಿವಿಲ್ ವ್ಯಾಜ್ಯವು ಬಹಳಮಟ್ಟಿಗೆ ಕಡಿಮೆಯಾಯಿತು. ಫೈಸಲಾದ ಮೊಕದ್ದಮೆಗಳ ಸಂಖ್ಯೆ 18,424. ಇದು ಹಿಂದಿನವರ್ಷದ ಸಂಖ್ಯೆಗಿಂತ 2,057ರಷ್ಟು ಕಡಿಮೆಯಾಗಿಯೂ ದಾಖಲ್ಮಾಡಿದ ಮೊಕದ್ದಮೆಗಳ ಸಂಖ್ಯೆಗಿಂತ 8 ಕಡಿಮೆಯಾಗಿಯೂ ಇದೆ. ಕ್ರಿಮಿನಲ್ ಮೊಕದ್ದಮೆಗಳು ಕೂಡ 14,457 ರಿಂದ 13,375ಕ್ಕೆ ಇಳಿದವು.

ಚೀಫ್‌ಕೋರ್ಟಿನ ಮುಖ್ಯವಾದ ತೀರ್ಮಾನಗಳನ್ನೂ ನಿಬಂಧನೆಗಳನ್ನೂ ಸಂಗ್ರಹಿಸಿ ಪ್ರತಿವರ್ಷವೂ ಪ್ರಕಟಿಸುವದಕ್ಕಾಗಿ ಒಬ್ಬ ಲಾರಿಪೋರ್ಟರನ್ನು ಮೊಕರರ್ಮಾಡಲಾಯಿತು.

ಪೋಲೀಸು.— ಹೊಸದಾಗಿ ಏರ್ಪಾಡುಮಾಡಿದ ಹೊಸದುರ್ಗದ ತಾಲೂಕಿಗೆ ಒಬ್ಬ ಇನ್ಸ್ಪೆಕ್ಟರನ್ನೂ ಚಿಕ್ಕಬಳ್ಳಾಪುರಕ್ಕೆ ಇಬ್ಬರು ದಫೇದಾರರನ್ನೂ 12 ಮಂದಿ ಕಾನ್ಸ್ಟೆಬಲರನ್ನೂ ಇಟ್ಟದ್ದರಿಂದ ಪೋಲೀಸ್ ಸ್ಥೈನ್ಯವು ಸ್ವಲ್ಪ ಜಾಸ್ತಿಯಾದಹಾಗಾಯಿತು.

ಗತವರ್ಷದಲ್ಲಿ ಪೊಲೀಸಿನವರಿಗೆ ತಿಳಿಸಿದ ಕಾರ್ಯಗಳ ಸಂಖ್ಯೆಯು 6,082 ಆಗಿತ್ತು—ಎಂದರೆ ಹಿಂದಿನ ವರ್ಷಕ್ಕಿಂತ 503 ಕಡಮೆಯಾಗಿತ್ತು. ಪೊಲೀಸಿನವರಲ್ಲಿ ಬಾಕಿ ಇದ್ದದ್ದು ಸೇರಿ ಫೈಸಲಾತಿಗೆ ನಿಂತಿದ್ದ ಒಟ್ಟು 9,386 ಕಾರ್ಯಗಳಲ್ಲಿ 6,063 ಕಾರ್ಯಗಳು ಫೈಸಲಾದವು. ಈಪೈಕಿ 2,636 ರಲ್ಲಿ ಎಂದರೆ ಸೇಕಡ 28ರಲ್ಲಿ ತಪ್ಪು ಸಾಬೀತಾಯಿತು. ಇದು ಹಿಂದಿನವರ್ಷದ ಸೇಕಡ ದರಕ್ಕಿಂತ 3 ಕಡಿಮೆಯಾಯಿತು. 6,483 ಜನರು—ಎಂದರೆ ಹಿಂದಿನ ವರ್ಷಕ್ಕಿಂತ ಸುಮಾರು 400 ಕಡಿಮೆಯಾಗಿ— ದಸ್ತಗಿರಿ ಮಾಡಲ್ಪಟ್ಟರು. ಅವರಲ್ಲಿ ಸೇಕಡ 58 (ಹಿಂದಿನವರ್ಷದಲ್ಲಿ ಸೇಕಡ 61) ರಮೇಲೆ ಅಪರಾಧ ನಿರ್ಣಯವಾಯಿತು.

ಕಳವಾದ ಸೊತ್ತುಗಳ ಪೈಕಿ ಸಿಕ್ಕಿತೆಂದು ರಿಪೋರ್ಟಾದವುಗಳ ಶೇಕಡದರವೂ ಸ್ವಲ್ಪ ಕಡಿಮೆಯಾಯಿತು.

ಲೆಜಿಸ್ಲೇಷನ್ (ವಿಧಿಪ್ರಕಲ್ಪನೆ).—ಈವರ್ಷ ಮಂಜೂರಾದ ಕಾನೂನುಗಳು ಯಾವವೆಂದರೆ :—ಅಳತೆ ಮತ್ತು ತೂಕದ ಸಾಧನಗಳ ರೆಗ್ಯುಲೇಷನ್ (1902ನೆಯ 3), ಎಕ್ಸೈಸ್‌ರೆಗ್ಯುಲೇಷನ್ನು ತಿದ್ದುಪಾಟು (1902ನೆಯ4) ಬ್ಯಾಂಕು ಬುಕ್ಕುಗಳ ವಿಷಯವಾಗಿ ಸಾಕ್ಷಿಯ ಕಾನೂನಿನ ತಿದ್ದುಪಾಟು ಮಾಡುವ ರೆಗ್ಯುಲೇಷನ್ (1902ನೆಯ 5) ಮತ್ತು ತಿದ್ದುಪಾಟಾದ ರಿಜಿಸ್ಟ್ರೇಷನ್ ರೆಗ್ಯುಲೇಷನ್ (1903ನೆಯ 1), ಇವೇ.

ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಬ್ರಿಟಿಷ್ ಕಾನೂನುಗಳಲ್ಲಿ ಆದ ತಿದ್ದುಪಾಟುಗಳನ್ನೆಲ್ಲಾ ಒಳಕೊಂಡಿರುವ ಪೀನಲ್ ಮತ್ತು ಕ್ರಿಮಿನಲ್ ಪ್ರೊಸಿಜರ್ ಕೋಡೂ ವಿಪ್ಪಿಂಗ್ ಆಕ್ಟುಗಳ ಪುನರ್ವಿಮರ್ಶೆಯೂ ಚೀಫ್‌ಕೋರ್ಟು ರೆಗ್ಯುಲೇಷನ ತಿದ್ದುಪಾಟೂ ತಯಾರಾಗಿ ಪರ್ಯಾಲೋಚಿಸಲ್ಪಟ್ಟಿವೆ. ಇವು ಕ್ಷಿಪ್ರದಲ್ಲಿಯೇ ಜಾರಿಗೆ ಬರುತ್ತವೆ.

ಲೋಕಲ್‌ಬೋರ್ಡು ರೆಗ್ಯುಲೇಷನಿಗೆ ಅನುಸಾರವಾದ ನಿಬಂಧನೆಗಳು ಸಂಪೂರ್ಣವಾಗಿ ಪರಿಷ್ಕರಿಸಲ್ಪಟ್ಟು ಈಗತಾನೆ ಮಂಜೂರಾಗಿವೆ. ಇವುಗಳಲ್ಲಿ ರೆಗ್ಯುಲೇಷನಿಗೆ ಒಳಪಡದ ಎಲ್ಲಾ ಮ್ಯುನಿಸಿಪಾಲಿಟಿಗಳನ್ನು ಸಂಘಗಳನ್ನಾಗಿ (Unions) ಮಾಡುವದಕ್ಕೂ ಪ್ರತಿ ಒಂದು ರೆವಿನ್ಯೂ ಡಿಸ್ಟ್ರಿಕ್ಟಿನಲ್ಲಿಯೂ ಒಂದೊಂದು ಡಿಸ್ಟ್ರಿಕ್ಟ್ ಮೇಲ್ವಿಚಾರಣೆ ಸಂಘವನ್ನು ಏರ್ಪಡಿಸುವದಕ್ಕೂ ಪ್ರತಿ ಒಂದು ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿಯೂ ತಾಲ್ಲೂಕು ಮೇಲ್ವಿಚಾರಣೆ ಸಂಘಗಳನ್ನು ಏರ್ಪಡಿಸುವದಕ್ಕೂ ಪ್ರತಿ ಒಂದು ಸಂಘಕ್ಕೂ ಒಂದು ಪಂಚಾಯಿತರ ಸಭೆಯನ್ನು ಏರ್ಪಡಿಸುವದಕ್ಕೂ ಅವಕಾಶವನ್ನು ಕಲ್ಪಿಸಿದೆ. ಈ ಮೇಲ್ವಿಚಾರಣೆ ಸಂಘಗಳ ಮತ್ತು ಪಂಚಾಯಿತರ ಸಭೆಯ ಅಧಿಕಾರಗಳನ್ನೂ ಕರ್ತವ್ಯಗಳನ್ನೂ ಸರಿಯಾಗಿ ನಿಶ್ಚಯಿಸಿದೆ. ಈ ಸಭೆಗಳನ್ನು ಉತ್ತಮಸ್ಥಿತಿಗೆ ತರಬೇಕೆಂದು 1883 ರಲ್ಲಿ ಪ್ರಥಮತಃ [illegible]ಸಿದ ಕಾರ್ಯವು ಈಗ ತೀರ್ಮಾನವಾಯಿತು. ಈ ಸಭೆಗಳು ಈಗ ಮಾಡಿರುವ ಏರ್ಪಾಡುಗಳಿಂದ, ಮುಂದೆ ವಿಶೇಷೋತ್ಸಾಹ ವುಳ್ಳವುಗಳಾಗಿ ಕೆಲಸ ಮಾಡುವವೆಂದು ಕೋರುತ್ತೇವೆ.

ಇದೇ ಶ್ರೀಮನ್ಮಹಾರಾಜರವರ ಆಳ್ವಿಕೆಯ ಪ್ರಥಮ ವರ್ಷದ ವೃತ್ತಾಂತವು. ಈ ಕಾಲದಲ್ಲಿ ನಮ್ಮ ಅವಧಾನಕ್ಕೆ ಬಂದ ವಿಷಯಗಳ ಮನನದಿಂದ ಈ ಸಂಸ್ಥಾನದ ಪ್ರಕೃತಸ್ಥಿತಿಯನ್ನು ಸಂಗ್ರಹವಾಗಿ ಪರೀಕ್ಷಿಸಿ, ಅದು ಮುಂದೆ ಎಂದರೆ ಕೊನೆಯ ಪಕ್ಷ ಸ್ವಲ್ಪಕಾಲದವರೆಗಾದರೂ ಹೇಗಾಗಬಹುದೆಂದು ವಿಶದವಾಗಿ ತಿಳಿದುಕೊಳ್ಳುವದಕ್ಕೋಸ್ಕರ, ಶ್ರೀಮನ್ಮಹಾರಾಜರವರ ರಾಜ್ಯಭಾರ ವರ್ಣನಾಪ್ರಕರಣದಲ್ಲಿ ನನ್ನ ಸ್ವಾನುಭವಗಳನ್ನು ಅಲ್ಲಲ್ಲಿ ಸೂಚಿಸುವದು ಉಚಿತವೆಂದು ಭಾವಿಸಿ ಹಾಗೆ ಮಾಡಿದ್ದೇನೆ. ಸಭಾಸ್ತರರೇ, ಈ ಮೈಸೂರು ದೇಶವನ್ನೂ ಅದರ ಆಡಳಿತಗಳನ್ನೂ ಕೂಲಂಕಷವಾಗಿ ತಿಳಿದುಕೊಳ್ಳಲು ಅಸದೃಶವಾದ ಅವಕಾಶವನ್ನು ಪಡೆದವರಾಗಿಯೂ ಪರಪ್ರಯೋಜನಕರವಾದ ತಮ್ಮ ದೀರ್ಘಕಾಲೋದ್ಯೋಗದಿಂದ ನಿವೃತ್ತರಾಗಿ ತಮ್ಮ ನ್ಯಾಯಾರ್ಜಿತವಾದ ವಿಶ್ರಾಂತಿ ಸುಖವನ್ನು ಅನುಭವಿಸಲು ಸ್ವದೇಶಕ್ಕೆ ತೆರಳುವವರಾಗಿಯೂ ಇರುವ ಸರ್ ಡೊನಾಲ್ಡ್ ರಾಬರ್ಟ್‌ಸನ್ ಸಾಹೇಬರವರು, ತಮ್ಮ ಹೆಸರನ್ನು ಶಾಶ್ವತಗೊಳಿಸುವ ರಾಬರ್ಟ್‌ಸನ್ ಪೇಟೆಯಲ್ಲಿ ಸ್ವಲ್ಪಕಾಲಕ್ಕೆ ಮುಂಚೆ ಆಶ್ಚರ್ಯಯುಕ್ತರಾಗಿ ವಿವರಿಸಿದಂತೆ, ರಾಜಭಕ್ತಿಯುಕ್ತರಾದ ನಾವೂ ಕೂಡ, ಶ್ರೀಮನ್ಮಹಾರಾಜರವರ ರಾಜ್ಯಭಾರೋಪಕ್ರಮ ಮಾರ್ಗವನ್ನೂ ಮುಂದೆ ಮಹಾರಾಜರವರ ಆಳ್ವಿಕೆಯಲ್ಲಿ ಈ ಸಂಸ್ಥಾನಕ್ಕೆ ಉಂಟಾಗಬಹುದಾದ ಶುಭೋದರ್ಕವನ್ನು ಸೂಚಿಸುವವೊ ಎಂಬಂತಿರುವ ಅವರ ರಾಜ್ಯಕಾರ್ಯದ ಆದರಾತಿಶಯವನ್ನೂ ನೋಡಿ ಆಶ್ಚರ್ಯಭರಿತರಾಗಿ ಶ್ಲಾಘಿಸುವದು ಯೋಗ್ಯವಾಗಿಯೇ ಇದೆ.

ಮೈಸೂರು,
5ನೇ ಅಕ್ಟೋಬರ್ 1903.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ಸಂಸ್ಥಾನದ ದಿವಾನರವರು.

ಆದಾಯ

ಆಯಗಳ ವಿವರಗಳು.	ನಿಶ್ಚಿತ, 1901-02.	ಪ್ರಾಥಮಿಕ, 1902-03.
	ರೂ.	ರೂ.
ಜಮೀನು ಕಂದಾಯ	97,70,946	100,37,326
ಉಪ್ಪಿನ ಮೋಳೆ	17,276	21,704
ಸ್ಟ್ಯಾಂಪು	7,48,376	7,15,387
ಆಬ್ಕಾರಿ—(ಎ) ಸಾರಾಯಿ	16,76,543	18,15,987
(ಬಿ) ಹೆಂಡ	16,74,227	17,05,174
(ಸಿ) ವಿವಿಧ ವಿಷಯಗಳು	1,00,525	1,30,575
ಆಬ್ಕಾರಿಯ ಒಟ್ಟು......	34,51,295	36,51,736
ಸಾಯರು	3,53,011	4,00,810
ಮೊಹತರ್ಫ	2,10,306	2,04,634
ಜಂಗಲು—(ಎ) ಗಂಧದ ಮರ	10,15,116	9,82,384
(ಬಿ) ನಾಟು ಮತ್ತು ಸಾದೆ	1,57,810	1,85,782
(ಸಿ) ಇತರ ಜಂಗಲಿನ ಬಾಬುಗಳು	2,60,186	3,18,091
(ಡಿ) ಖಡ್ಡ	1,816	27,531
ಜಂಗಲು ಒಟ್ಟು......	14,34,928	15,13,788
ರಿಜಿಸ್ಟ್ರೇಷನ್	1,17,191	1,07,272
ಅಮೃತ ಮಹಾಲ್	31,302	46,527
ನ್ಯಾಯವಿಮರ್ಶೆ— ಕೋರ್ಟುಗಳು	53,153	56,290
ನ್ಯಾಯವಿಮರ್ಶೆ— ಬಂದಿಖಾನೆಗಳು	25,032	32,232
ನ್ಯಾಯ ವಿಮರ್ಶೆಯ ಒಟ್ಟು.....	78,185	88,522
ಪೋಲೀಸು	33,507	8,946
ವಿದ್ಯಾಭ್ಯಾಸ	92,749	1,10,040
ವೈದ್ಯ...	31,930	41,327
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	9,974	9,864
ರಾಜ್ಯದ ಮೇಲ್ವಿಚಾರಣೆಯ ಶಿಬ್ಬಂದಿ—		
ಲೇಖನಸಾಧನಗಳು ಮತ್ತು ಅಚ್ಚು ಹಾಕುವುದು	6,311	5,946
ಗವರ್ನ್ಮೆಂಟ್ ಬಂಗಲೆಗಳ ವರಮಾನಗಳು	2,137	4,004
ಮರಹಮ್ಮತ್ತು ಇಲಾಖೆ	30,655	24,926
ಇತರಬಾಬುಗಳು	1,98,748	2,43,653
ಒಟ್ಟು......	166,18,827	1,72,27,412
ರಾಜ್ಯದ ಅರ್ಥಪ್ರಯೋಗ ಮತ್ತು ಬ್ಯಾಂಕಿನಲ್ಲಿಟ್ಟಿರುವ ಹಣಗಳು—		
(ಎ) ಗವರ್ನ್ಮೆಂಟ್ ಪತ್ರಗಳ ಮೇಲಿನ ಬಡ್ಡಿ	2,95,820	1,90,332
(ಬಿ) ಮದರಾಸ್ ಬ್ಯಾಂಕಿನಲ್ಲಿಟ್ಟಿರುವ ಹಣದಮೇಲಿನ ಬಡ್ಡಿ ...	...	...
(ಸಿ) ಇಂಡಿಯಾ ಗವರ್ನ್ಮೆಂಟ್ ಪತ್ರ ವಿಕ್ರಯದಿಂದ ಬಂದ ಲಾಭ ..	...	491
ಸಾಲಗಳ ಮತ್ತು ಕಂದಾಯದ ಬಾಕಿಗಳ ಬಡ್ಡಿ	84,519	61,489
ಒಟ್ಟು.....	3,80,339	2,52,231
ರಾಜ್ಯದ ಲೋಹಮಾರ್ಗ (ರೇಲ್ವೆ) ಗಳು—		
ರೆವಿನ್ಯೂ ಲೆಕ್ಕ	5,90,105	5,27,237
ಒಟ್ಟು	5,90,105	5,27,237
ಕಾವೇರಿ ಪ್ರಪಾತದ ವೈದ್ಯುತ ಶಕ್ತಿ ವಾಹೋಪಾಯ	...	11,85,149
ಚಿನ್ನದಗಣಿ—(ಎ) ನೂರಕ್ಕೆ 5 ರಂತೆ ರಾಜಾಯ	15,30,398	14,93,786
(ಬಿ) ಖನಿಜಾನ್ವೇಷಣದ ಲೈಸೆನ್ಸುಗಳು ಮತ್ತು ಹೊಸಗುತ್ತಿಗೇ ಖರಾರುಗಳತೆರಿಗೆ..	76,104	38,313
ಒಟ್ಟು......	16,06,502	15,32,099
ದೊಡ್ಡ ಒಟ್ಟು.....	25,76,946	34,96,715
ದೊಡ್ಡ ಒಟ್ಟು (ರಾಜದ ಲೋಹಮಾರ್ಗಗಳೂ ಸೇರಿ)......	1,91,95,773	207,24,127

669

ಗಳು.

ವ್ಯತ್ಯಾಸ.	ಷರಾ.
ರೂ.	
+2,66,380	ಮುಖ್ಯವಾಗಿ ಜಮೀನ್ ಕಂದಾಯದ ಬಾಕಿ ವಸೂಲಾತಿಯಿಂದ 2,82,981 ರೂಪಾಯೂ ಕ್ವಿಟ್ರೆಂಟುಗಳಿಂದ 33,259. ರೂಪಾಯೂ ಉತ್ಪತ್ತಿಯಾಯಿತು. ಈ ಪೈಕಿ ಚಿಲ್ಲರೆ ಬಾಬುಗಳಲ್ಲಿ ಕಡಿಮೆಯಾದ 49,860 ರೂಪಾಯಿ ಹೋಗ ಲಾಗಿ ನಿವ್ವಳ ಹೆಚ್ಚು [illegible],66,380 ರೂಪಾಯಿ.
+ [illegible],428	
−32,989	
+1,39,444	ಕೋಲಾರದ ಚಿನ್ನದ ಗಣಿಯಲ್ಲಿ ಸಾರಾಯ ಕುಡಿತ ಹೆಚ್ಚಿದ್ದರಿಂದಲೂ ಅಲ್ಲಿ ಈ ದೇಶದ ಬಿಯರಿನಮೇಲೆ ಸುಂಕಬಂದದ್ದರಿಂದಲೂ ಸೇಂದಿವನಗಳ ಬಿಕರಿಯಲ್ಲಿ ಜಾಸ್ತಿ ಹುಟ್ಟುವಳಿಯಾದ್ದರಿಂದಲೂ 2,00,441 ರೂಪಾಯಿ ಹೆಚ್ಚಾಯಿತು.
+30,947	
+30,050	
+2,00,441	
+47,799	
−5,677	
−32,732	ಚಾಬೀನಿ ಮತ್ತು ಸಾದೆ ಬಾಬಿನಲ್ಲಿ ಸುಮಾರು 30,000 ರೂಪಾಯಿ ಜಂಗಲ್ ಉತ್ಪತ್ತಿಯಲ್ಲಿ 50,000 ರೂಪಾಯೂ ಚಿಲ್ಲರೆ, ರಾಜ್ಯಭಾರವಹನಕಾಲದಲ್ಲಿ ಖೆಡ್ಡಾದಲ್ಲಿ ಹಿಡಿದ ಆನೆಗಳ ಮಾರಾಟದಿಂದ 25,000 ರೂಪಾಯೂ ಚಿಲ್ಲರೆ ; ಇವುಗಳಲ್ಲಿ ಗಂಧದ ಮರದ ಮಾರಾಟದಲ್ಲಿ ಕಮ್ಮಿಬಂದ ಸುಮಾರು 33,000 ರೂಪಾಯಿ ಹೋಗುತ ನಿವ್ವಳ ಹೆಚ್ಚು 78,860 ರೂಪಾಯಿ.
+27,972	
+57,905	
+25,715	
+78,860	
−9,919	
+15,225	ದನಗಳ ಹೆಚ್ಚು ಮಾರಾಟದಿಂದಲೂ ಕಾವಲತೆರಿಗೆ ಮುಂತಾದ್ದು ಹೆಚ್ಚಾಗಿ ವಸೂಲಿಯಾದ್ದರಿಂದಲೂ ಹೆಚ್ಚು 15,225 ರೂ
+3,137	
+7,200	
+10,337	
−24,561	ದಕ್ಷಿಣ ಮಹಾರಾಷ್ಟ್ರ ರೇಲ್ವೆಕಂಪೆನಿಯಿಂದ ರೇಲ್ವೆ ಪೋಲೀಸ್ ಖರ್ಚಿಗಾಗಿ ಹಿಂದಿನವರ್ಷ ಹೆಚ್ಚಾಗಿ ಬಂದ 18,000 ರೂಪಾಯಿ ಬಂದು ವಿಶೇಷವಾದ ಜಮೆಬಾಬಾದ್ದರಿಂದ ಗತವರ್ಷದಲ್ಲಿ ಕಡಿಮೆ 24,561 ರೂಪಾಯಿ.
+8,291	
+9,[illegible]	
−110	
−365	
+1,867	
−5,729	
+44,905	23 ಮಿಸಲೇನಿಯಸ್ ಬಾಬಿಗೆ ಖರ್ಚು ಬಿದ್ದಿದ್ದ 1902 ನೆಯ ಜೂನ್ ಆಖೈರ್‌ವರೆಗೆ ಬಸವನಗುಡಿ ಮತ್ತು ಮಲ್ಲೇಶ್ವರ ಶಾಖೆಗಳಿಗಾಗಿ ಖರ್ಚಾದ 1,01,780 ರೂಪಾಯಿಗಳನ್ನು 1901—2 ನೆಯ ವರ್ಷದ ಲೆಕ್ಕದಲ್ಲಿ ಬೆಂಗಳೂರು ಮ್ಯುನಿಸಿಪಾಲಿಟಿಗೆ ಸಾಲವಾಗಿ ಖರ್ಚು ಹಾಕಿ ಆ ಮೊಬಲಗನ್ನು ಸಂಸ್ಥಾನದ ಆದಾಯ ವ್ಯಯದ ಪಟ್ಟಿಯಲ್ಲಿ ಜಮೆಯಾಗಿ ತೋರಿಸಿದೆ. ತರಗುಪೇಟೆ, ಮಲ್ಲೇಶ್ವರ ಮತ್ತು ಬಸವನ ಗುಡಿ ಶಾಖೆಗಳಲ್ಲಿ ವಸೂಲಾದ ನಿವೇಶನಗಳ ಕ್ರಯದ ಮೊಬಲಗನ್ನೂ ಕುಣಿಗಿಲು ಫಾರಂನಲ್ಲಿ ಮಾರಾಟದಿಂದ ಉತ್ಪತ್ತಿಯಾದ ಮೊಬಲಗನ್ನೂ ಮೇಲ್ಕಂಡ ಮೊಬಲಗಿನಿಂದ ವಜಾ ಮಾಡಿ ಈ ಬಾಬಿನಲ್ಲಿ 44,905 ರೂಪಾಯಿಗಳನ್ನು ನಿವ್ವಳ ಹೆಚ್ಚಾಗಿ ತೋರಿಸಿದೆ.
+6,08,585	
−1,05,488	ಮುಖ್ಯವಾಗಿ, ರೇಲ್ವೆ ಲೋನ್ ಸಾಲವನ್ನು ತೀರಿಸುವದಕ್ಕಾಗಿಯೂ ಇತರ ಕೆಲಸಗಳಿಗಾಗಿಯೂ ಮಾರಬೇಕಾಗಿಬಂದ 21,69,700 ರೂಪಾಯಿನ ಬೆಲೆಬಾಳುವ ಸರ್ಕಾರಿ ಪತ್ರಗಳು ಕಡಿಮೆಯಾದ್ದರಿಂದ 1,05,488 ರೂಪಾಯಿ ಕಡಿಮೆಯಾಯಿತು.
...	
+491	
−23,111	ಸರ್ಕಾರದಿಂದ ಸಾಲಪಡೆದುಕೊಂಡಿರುವ ಜಹಗೀರುದಾರರಿಂದಲೂ ವ್ಯವಸಾಯದ ಬ್ಯಾಂಕುಗಳಿಂದಲೂ ಬಡ್ಡಿ ಬಾರದೆ ಹೋದದ್ದು ಒಂದು ಮ್ಯುನಿಸಿಪಲ್ ಸಾಲದ ಬಡ್ಡಿಯು ಗತವರ್ಷದ ಲೆಕ್ಕದಲ್ಲಿ ವ್ಯವಸ್ಥೆಯಾಗದ್ದು ಒಂದು ಈ ಎರಡು ಕಾರಣಗಳಿಂದಲೂ 23,111 ರೂಪಾಯಿ ಕಡಿಮೆಯಾಯಿತು.
−1,28,108	
−62,868	1881—82 ನೆಯ ವರ್ಷದಲ್ಲಿ ಕೋಲಾರದ ಚಿನ್ನದ-ಗಣಿ ರೇಲ್ವೆ ಹುಟ್ಟುವಳಿಯನ್ನು ಮೂರು ಭಾಮ್ಮಾಹೆಗೆ ಕಟ್ಟಿ 1902—03 ರಲ್ಲಿ ಎರಡು ಭಾಮ್ಮಾಹೆಗೆ ಕಟ್ಟಿದ್ದರಿಂದ 62,868 ರೂಪಾಯಿ ಕಡಿಮೆಯಾಯಿತು.
−62,868	
+11,85,148	
−36,612	ಕಳೆದ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತ ಬಹಳ ಹೆಚ್ಚಾಗಿ ಗಣಿಗಳಲ್ಲಿ ಚಿನ್ನ ಉತ್ಪತ್ತಿಯಾಗಿದ್ದಾಗ್ಯೂ ಏಪ್ರಿಲ್ ಮೆ ಜೂನ್ ತಿಂಗಳುಗಳಿಗೆ ಉರಿಗಂ, ಛಾಂಪಿಯನ್‌ರೀಫ್ ಮತ್ತು ಬಾಲಗಾಟ್ ಗಣಿಗಳಲ್ಲಿ ಉತ್ಪತ್ತಿಯಾದ ರಾಜಾಯವು ಮೆ ಮತ್ತು ಜೂನ್ ಗಳಿಗೆ ಇತರ ಮೂರು ಗಣಿಗಳ ರಾಜಾಯವು ವರ್ಷಾಂತ್ಯದೊಳಗಾಗಿ ಪಾವತಿಯಾಗದೆ ಇದ್ದದ್ದರಿಂದ 74,403 ರೂಪಾಯಿ ಕಡಿಮೆಯಾಯಿತು.
−37,791	
−64,403	
+9,19,762	
+15,28,354	

670

ವ್ಯಯ

ವ್ಯಯದ ವಿವರ.	ನಿಶ್ಚಿತ, 1900-01.	ಪ್ರಾಥಮಿಕ, 1901-02.
ಪೊಗದಿ	35,00,000	35,00,000
ಅರಮನೆ ವ್ಯಯ	14,00,000	14,00,000
ರಾಜವಂಶೀಯರ ಪೆನ್ಷನ್ ವೇತನಗಳು	2,40,000	2,40,000
ರಾಜಕೀಯ ಪೆನ್ಷನ್ ವೇತನಗಳು (ಜಹಗೀರಿಗಳಿಗೆ ಬದಲಾಗಿ ಕೊಟ್ಟುವವುಗಳು ಸೇರಿ)	81,718	86,315
ಒಟ್ಟು ...	52,21,718	52,26,315
ಹಿಂದಕ್ಕೆ ಬಂದ ಆದಾಯಗಳು—ಲಾಂಡ್ ರೆವೆನ್ಯುವಿನಲ್ಲಿ ಸೇರಿ ಹೋಗಿರುವ ಇರಿಗೇಷನ್ ಸೆಸ್	1,56,444	1,56,444
ಇತರ ಅಂಶಗಳು	69,054	88,293
ಒಟ್ಟು ...	2,25,498	2,44,737
ಭೂಮಿಯ ಆಯಕ್ಕಾಗಿ ಆದ ವ್ಯಯಗಳು—ಡೆಪ್ಯುಟಿ ಕಮಿಷನರುಗಳೂ ಸಿಬ್ಬಂದಿಗಳೂ	1,90,483	1,89,474
ಸಬ್ ಡಿವಿಜನ್ ಅಧಿಕಾರಿಗಳೂ ಸಿಬ್ಬಂದಿಗಳೂ	27,185	24,062
ಅಸಿಸ್ಟೆಂಟ್ ಕಮಿಷನರುಗಳೂ ಸಿಬ್ಬಂದಿಗಳೂ	89,339	85,331
ತಾಲ್ಲೂಕು ಸಿಬ್ಬಂದಿಗಳು	3,94,834	4,00,587
ಸರ್ವೆ ಮತ್ತು ಸೆಟ್ಲಮೆಂಟ್	1,62,550	1,67,343
ಇನಾಂ ...	8,941	7,908
ಗ್ರಾಮಾಧಿಕಾರಿಗಳ ಕಚ್ಚಾ ಮತ್ತು ಪಕ್ಕಾ ಪೋಟಗಿಗಳು	7,08,710	7,80,229
ವಿವಿಧ ವಿಷಯಗಳು	47,478	56,600
ಒಟ್ಟು ...	16,29,514	17,11,534
ಸ್ಟಾಂಪು	35,455	27,400
ಅಬ್ಕಾರಿ	2,90,420	3,26,312
ಸಾಯರು	14,800	14,146
ಜಂಗಲುಗಳು (ಖಡ್ಡಾ ಸೇರಿ)	4,67,087	4,80,137
ರಿಜಿಸ್ಟ್ರೇಷನ್	75,233	78,916
ಅಮೃತ ಮಹಲ್	32,632	31,799
ಒಟ್ಟು ಹಿಂದಕ್ಕೆ ಬಂದ ಆದಾಯಗಳು, ಜಮಾ ಕಂದಾಯಗಳಿಗಾಗಿ ಆದ ವ್ಯಯಗಳೂ ಸೇರಿ ...	27,70,648	29,14,981
ರಾಜ್ಯದ ಮೇಲ್ವಿಚಾರಣೆ ಶಿಬ್ಬಂದಿ	4,91,325	4,97,113
ನ್ಯಾಯವಿಮರ್ಶೆ { ಕೋರ್ಟುಗಳು	9,04,865	9,06,526
ನ್ಯಾಯವಿಮರ್ಶೆ { ಬಂದೀಖಾನೆಗಳು	1,09,819	1,07,708
ಪೊಲೀಸು	9,62,957	10,11,377
ವಿದ್ಯಾಭ್ಯಾಸ	6,86,655	6,90,288
ಮುಜರಾಯಿ	3,27,930	3,25,094
ವೈದ್ಯ	4,88,566	4,92,447
ಗವರ್ನಮೆಂಟ್ ಮನೆಗಳು	78,391	96,114
ವಿಜ್ಞಾನಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು ...	3,30,230	2,85,825
ಒಟ್ಟು ...	43,80,738	44,12,492
ವಿವಿಧ ಖರ್ಚುಗಳು—ವಯೋಧಿಕಕ್ಕಾಗಿ ಕೊಟ್ಟ ಪೆನ್ಷನ್ ಮತ್ತು ಗ್ರಾಟ್ಯೂಟಿ ವೇತನಗಳು	3,70,596	3,66,026
ಲೇಖನ ಸಾಧನಗಳು ಮತ್ತು ಅಚ್ಚು ಹಾಕುವುದು	1,82,524	1,48,395
ಇಂಡಿಯಾ ಗವರ್ನಮೆಂಟ್ ಪತ್ರಗಳನ್ನು ಕೊಂಡದ್ದಕ್ಕಾಗಿ ಕೊಟ್ಟ ರುಸುಂ ವಗೈರೆ...	1,00,465	57,303
ಇತರ ಅಂಕಗಳು	3,03,478	10,83,620
ಒಟ್ಟು ...	9,60,065	16,55,344
ಪ್ಲೇಗು	1,64,277	97,494
ಕ್ಷಾಮಪರಿಹಾರ	4,460	7,245
ಮರಹಮ್ಮತ್ತು, ಆರೋಗ್ಯಾಭಿವೃದ್ಧಿಯೂ ಸೇರಿ	25,31,441	26,87,725
ಸೈನ್ಯ	14,09,028	14,42,522
ಒಟ್ಟು ..	174,42,375	184,44,118
ಬಡ್ಡಿ—ಮೈಸೂರು ಡಿಬೆಂಚರ್ ಸಾಲ 20 ಲಕ್ಷದ ಮೇಲಿನ ಬಡ್ಡಿ ...	1,07,950	56,801
ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿರುವ ಹಣದ ಬಡ್ಡಿ	1,76,542	2,14,870
ಧರ್ಮದ ಹಣದ ಬಡ್ಡಿ	14,855	16,910
ಬೀಮಾ ಹಣದ ಬಡ್ಡಿ	22,109	26,058
ವಾಪಸು ಜಮಾ	35	...
ಒಟ್ಟು ...	3,21,491	3,14,639
ರಾಜ್ಯದ ಲೋಹಮಾರ್ಗಗಳು—ಮೈಸೂರು–ಹರಿಹರ ಮಾರ್ಗದ ಮೂಲಧನದಲ್ಲಿ ವ್ಯಯವಾದ ಭಾಗದಬಡ್ಡಿ	8,81,676	5,29,893
ಇತರ ಲೋಹಮಾರ್ಗಗಳ ಮೂಲಧನದ ಲೆಕ್ಕ	2,34,975	39,748
ಒಟ್ಟು ...	11,16,651	5,69,641
ಕಾವೇರಿ ಪ್ರವಾಹದ ವೈದ್ಯುತಶಕ್ತಿ ಮಹೋಪಾಯ	25,67,309	7,67,634
ಚಿನ್ನದ ಗಣಿ	13,196	13,245
ಒಟ್ಟು ...	40,18,647	16,65,159

ವ್ಯತ್ಯಾಸ.	ಷರಾ.
...	
...	
...	
[illegible] 4,597	
+ 4,597	
...	
+1[illegible],239	
+19,239	
—1,009	
—3,123	
—3,999	
+5,753	
+4,793	
—4,036	
+71,519	
+3,122	
+82,020	ಮುಖ್ಯವಾಗಿ ಪಟೇಲ ಶಾನುಭೋಗರಿಗೆ ಪೋಟಿಗೆ ಬಾಕಿಯನ್ನೂ ಸರ್ಕಾರದ ರೆವಿನ್ಯೂ ಕೆಲಸಗಳಿಗಾಗಿ ತೆಗೆದುಕೊಂಡ ಜಮೀನುಗಳ ಕ್ರಯಕ್ಕೋಸ್ಕರ ಹೆಚ್ಚು ಮೊಬಲಗನ್ನೂ ಕೊಟ್ಟದ್ದರಿಂದ 82,020 ರೂಪಾಯಿ ನಿವ್ವಳ ಹೆಚ್ಚಾಯಿತು.
—8,055	
+35,883	ಬಾಂಡೆಡ್ ಡಿಪೋಗಳಿಗೆ ಸಾರಾಯನ್ನು ಸಾಗಿಸುವದಕ್ಕಾಗಿ ಕಂಟ್ರಾಕ್ಟರುಗಳಿಗೆ ಕೊಟ್ಟ ರುಸುಂ 12,000 ರೂಪಾಯಿಯೂ ನಾಕರರ ಉಡುಪುಗಳಿಗಾಗಿ 12,000 ರೂಪಾಯಿಯೂ ಇತರ ಚಿಲ್ಲರ ಬಾಬುಗಳೂ ಸೇರಿ ಒಟ್ಟು 35,883 ರೂಪಾಯಿ ಹೆಚ್ಚಾಯಿತು.
—654	
+13,050	ಮುಖ್ಯವಾಗಿ ಜಂಗಲಿ ಲಾಖೆಯ ಕೆಳಗಿನ ನಾಕರರ ಮತ್ತು ಡಿಪೋ ಸಿಬ್ಬಂದಿಗಳ ಪುನರ್ವಿಮರ್ಶೆಯಿಂದ ಆದ ಹೆಚ್ಚು ರೂಪಾಯಿ 13,050.
+3,683	
—833	
+1,44,333	
+5,788	
—1,661	
—2,111	
+48,4[illegible]	ಪೋಲೀಸಿನವರಿಗೆ ಬೇಕಾದ ಉಪಕರಣಗಳು, ಉಡುಪು ಇವುಗಳಿಗಾಗಿ 36,000 ರೂಪಾಯಿ ಮತ್ತು ಕೋಲಾರದ ಚಿನ್ನದ ಗಣಿ ಪೋಲೀಸ್ ಸಿಬ್ಬಂದಿಯ ಪುನರ್ವಿಮರ್ಶೆ, ಇವುಗಳಿಂದಾದ ಹೆಚ್ಚು 48,420 ರೂಪಾಯಿ.
+3,[illegible]63	
—2,836	
+3,881	
+17,723	
—44,405	
+31,754	
—4,570	
+37,131	
—43,162	
+7,80,142	
+6,95,279	
—66,783	
+2,785	
+1,56,284	
+33,494	ಮುಖ್ಯವಾಗಿ ಹೇಸರಗತ್ತೆಗಳನ್ನು ಕೊಂಡುದ್ದಕ್ಕಾಗಿಯೂ ರಾಷ್ಟ್ರೀಯ ಯುದ್ಧ ಸಾಮಗ್ರಿವಾಹಕ ಸೈನ್ಯಕ್ಕಾಗಿಯೂ ಆದ ಹೆಚ್ಚು ಖರ್ಚು 1,45,000 ರೂಪಾಯಿ. ಇದಕ್ಕೆ ಪ್ರತಿಯಾಗಿ ಕುದುರೆ ರಾತೀಬಿನ ಬಾಬಿನಲ್ಲಿ (16,000 ರೂ.) ಧಾನ್ಯ ತಗ್ಗಿದ್ದಕ್ಕಾಗಿ ಸೈನಿಕರಿಗೆ ಕೊಟ್ಟ ಸಹಾಯದ್ರವ್ಯ (20,000 ರೂಪಾಯಿ) ಹೊಸ ಕುದುರೆಗಳನ್ನು ಕೊಂಡದ್ದಕ್ಕಾಗಿ (13,000 ರೂಪಾಯಿ) ಅರಮನೆ ಸೈನಿಕರ ಸಿಬ್ಬಂದಿ (69,000 ರೂಪಾಯಿ) ಮತ್ತು ಇತರ ಚಿಲ್ಲರೆ ಬಾಬುಗಳು ಇವುಗಳಿಗಾಗಿ ಒಂದು ಲಕ್ಷಕ್ಕಿಂತ ಹೆಚ್ಚಾಗಿ ಕಡಿಮೆಯಾದ್ದರಿಂದ ನಿವ್ವಳ ಹೆಚ್ಚು 33,494 ರೂಪಾಯಿ.
+10,01,743	
—51,149	
*+38,328	
— 2,055	
+ 3,949	*ಸೇವಿಂಗ ಬ್ಯಾಂಕುಗಳಲ್ಲಿ ಠೇವಣಿ ಹೆಚ್ಚಿದ್ದರಿಂದ ಕೊಡಬೇಕಾದ ಬಡ್ಡಿ 38,000 ರೂಪಾಯಿ ಆಯಿತು. ಇದಕ್ಕೆ ಪ್ರತಿಯಾಗಿ ಮೈಸೂರು ರೇಲ್ವೆ ಸಾಲದಲ್ಲಿ ಬಹಳ ಭಾಗವನ್ನು ತೀರಿಸಿ ಬಿಟ್ಟದ್ದರಿಂದ 51,000 ರೂಪಾಯಿ ಉಳಿಯಿತು. ಆದ್ದರಿಂದ ನಿವ್ವಳ ಕಡಿಮೆ 6,852 ರೂಪಾಯಿ.
— [illegible]	
— 6,852	
—3,51,786	ಸದರ್ನ ಮರಾಟ ರೇಲ್ವೆಗೆ ಕೊಡತಕ್ಕ ಬಡ್ಡಿಯನ್ನು ಹಿಂದಿನ ವರ್ಷದಲ್ಲಿ 15 ತಿಂಗಳಿಗೂ ಕಳೆದ ವರ್ಷದಲ್ಲಿ 9 ತಿಂಗಳಿಗೆ ಮಾತ್ರವೂ ಕೊಟ್ಟದ್ದರಿಂದ $3\frac{1}{3}$ ಲಕ್ಷ ರೂಪಾಯಿ ಭಾರಿ ಮೊಬಲಗು ಉಳಿಯಿತು. ಕಟ್ಟಡದ ಬಾಬಿನಲ್ಲಿ 1884-85ನೆಯ ವರ್ಷದಿಂದ ಫೈಸಲಾಗದಿದ್ದ ಮೈಸೂರು ಹರಿಹರ ರೇಲ್ವೆಗಾಗಿ ಖರ್ಚಾದ 1,55,020 ರೂಪಾಯಿ ಹಿಂದಿನ ವರ್ಷದ ಲೆಕ್ಕದಲ್ಲಿ ಸೇರಿತ್ತು. ಕಳೆದ ವರ್ಷದಲ್ಲಿ ಬೀರೂರು ಶಿವಮೊಗ್ಗಾ ರೇಲ್ವೆ ಖರ್ಚಿನಲ್ಲಿ 38,000 ರೂಪಾಯಿಯೂ ಪಶ್ಚಿಮತೀರದ ರೇಲ್ವೆ ಸರ್ವೆಯಲ್ಲಿ 23,000 ರೂಪಾಯಿಯೂ ಮಿಕ್ಕವು. ಇವುಗಳಿಂದಲೂ ಇತರ ಚಿಲ್ಲರೆ ಬಾಬುಗಳಲ್ಲಿ ಮಿಕ್ಕ ಹಣದಿಂದಲೂ ಕೋಲಾರದ ಚಿನ್ನದ ಗಣಿ ಬಂಡವಾಳದ ಖರ್ಚಿಗಾಗಿ ಮುಟ್ಟಿರುವ 29,000 ರೂಪಾಯನ್ನು ವಜಾ ಮಾಡಲಾಗಿ ಈ ಬಾಬಿನಲ್ಲಿ ಒಟ್ಟು ಮಿಕ್ಕ ಮೊಬಲಗು 5,47,000 ರೂಪಾಯಿಗಳು.
—1,95,227	
—5,47,010	
—17,99,675	
+ 49	
—23,53,488	

ಬಾಬುಗಳು.	ಆದಾಯ.			ವ್ಯಯ.		
	1901-02. ನಿಶ್ಚಿತ.	1902-03. ಪ್ರಾಥಮಿಕ.	ವ್ಯತ್ಯಾಸ.	1901-02. ನಿಶ್ಚಿತ.	1902-03. ಪ್ರಾಥಮಿಕ.	ವ್ಯತ್ಯಾಸ.
ಡಿಸ್ಟ್ರಿಕ್ಟ್‌ಫಂಡ್ ...	6,10,194	6,57,713	+ 47,519	5,85,436	5,85,382	— 54
ಶೇಷ	2,65,528	2,90,286	+ 14,758	2,90,286	3,62,617	+ 72,331
ಒಟ್ಟು......	8,75,722	9,47,999	+ 72,277	8,75,722	9,47,999	+ 72,277
ಲೋಕಲ್ ಫಂಡ್ ಜನರಲ್ ...	1,07,414	1,07,712	+ 298	99,378	49,964	— 49,414
ಶೇಷ	2,35,964	2,44,000	+ 8,036	2,44,000	3,01,748	— 57,748
ಒಟ್ಟು......	3,43,378	3,51,712	+ 8,334	3,43,378	3,51,712	— 8,334
ಗ್ರಾಮಪಾಠಶಾಲೆಗಳ ಫಂಡ್ ...	2,00,149	2,24,422	+ 24,273	2,43,742	2,66,281	+ 22,532
ಶೇಷ	2,41,377	1,97,784	— 43,593	1,97,784	1,55,925	— 41,859
ಒಟ್ಟು......	4,41,526	4,22,206	— 19,320	4,41,526	4,22,206	— 19,320
ಮ್ಯುನಿಸಿಪಲ್‌ಫಂಡ್ ...	7,79,162	7,49,284	— 29,878	7,63,344	7,05,131	— 58,213
ಶೇಷ	3,15,233	3,31,051	+ 15,818	3,31,051	3,75,204	+ 44,153
ಒಟ್ಟು......	10,94,35	10,80,335	— 14,060	10,94,395	10,80,335	— 14,060

1902-03ನೆಯ ವರ್ಷದ ಆದಾಯವ್ಯಯದ ಪಟ್ಟಿ (ಬಡ್ಜೆಟ್). 673.

ಆದಾಯಗಳ ವಿವರ.	1901-02. ನಿಶ್ಚಿತ ಲೆಖ್ಖಗಳು	1902-03. ಪುನರ್ವಿಮರ್ಶೆ ಆದ ಅಂದಾಜು.	1903-04. ಬಡ್ಜೆಟ್ ಅಂದಾಜು.
	ರೂ.	ಪ್ರಾಥಮಿಕ. ರೂ.	ರೂ.
ಆದಾಯದ ಮುಖ್ಯಬಾಬುಗಳು—			
1. ಜಮೀನ್ ಕಂದಾಯ..	97,70,946	1,00,58,000	98,64,000
2. ಜಂಗಲುಗಳು ..	14,34,928	14,85,000	15,16,000
3. ಆಬ್ಕಾರಿ ..	34,51,295	36,48,000	35,65,000
4. ತೆರಿಗೆಗಳು ..	2,10,306	2,15,000	2,16,000
5. ಸಾಯರು ತೆರಿಗೆ ..	3,53,011	4,01,000	3,47,000
6. ಉಪ್ಪಿನ ಮೋಳೆ ..	17,276	17,000	17,000
7. ಸ್ಟಾಂಪು ..	7,48,376	6,92,000	7,93,000
8. ರಿಜಿಸ್ಟ್ರೇಷನ್ ..	1,17,191	1,02,000	1,22,000
9. ಟಂಕಸಾಲೆ ..	..	...	..
ಇಲಾಖೆ ವರಮಾನ—			
ಮೇಲ್ವಿಚಾರಣೆಸಿಬ್ಬಂದಿ	8,448	6,000	5,000
11. ನ್ಯಾಯ ವಿಮರ್ಶೆ { ಕೋರ್ಟು	53,153	57,500	50,700
{ ಜೈಲುಗಳು	25,032	24,500	51,300
12. ಪೊಲೀಸು ...	33,507	13,000	15,000
13. ವಿದ್ಯಾಭ್ಯಾಸ ...	92,749	98,000	1,00,000
14. ವೈದ್ಯ ...	31,930	34,000	14,000
15. ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	41,276	51,000	44,000
ವಿವಿಧವಾದವು—			
16. ವಯೋಧಿಕಕ್ಕಾಗಿ ಕೊಡುವ ಪೆನ್ಷನಿಗಾಗಿ ಬಂದದ್ದು...	3,676	3,000	3,000
17. ವಿವಿಧ ವಾದವುಗಳು.	1,61,948	1,19,000	1,21,000
18. ಸೈನ್ಯ ..	33,124	11,000	21,000
19. ಮರಹಮ್ಮತ್ತು ..	30,655	20,000	24,000
ಬಡ್ಡಿ—			
20. ಬಡ್ಡಿ ...	84,519	77,000	1,12,000
21. ಲಾಭಅಥವಾ ನಷ್ಟ	2,95,820	2,05,000	1,74,000
22. ಸರ್ಕಾರಿ ಲೋಹಮಾರ್ಗಗಳು ಹುಟ್ಟುವಳಿಯ ಲೆಕ್ಕ ..	5,90,105	5,81,000	5,15,000
23. ಕಾವೇರೀ ಪ್ರಪಾತದ ವೈದ್ಯುತ ಶಕ್ತಿ ಷಾಹೋಪಾಯ.	...	11,75,000	13,64,000
24. ಗಣಿಗಳ ರಾಜಾದಾಯ ಮತ್ತು ಗುತ್ತಿಗೆಗಳು	16,06,502	16,10,000	16,00,000
ಒಟ್ಟು ಆದಾಯಗಳು ..	1,91,95,773	2,06,83,000	2,06,59,000

ವ್ಯಯಗಳ ವಿವರ.	1901-02. ನಿಶ್ಚಿತ ಲೆಖ್ಖಗಳು.	1902-03. ಪುನರ್ವಿಮರ್ಶೆ ಆದ ಅಂದಾಜು.	1903-. ಬಡ್ಜೆಟೆಅಂ
	ರೂ.	ರೂ.	ರೂ
ಆದಾಯಕ್ಕಾಗಿಯೇ ಆಗುವ ವ್ಯಯಗಳು—			
1. ವಾಪಸ್ ಜಮಾ ...	68,054	1,00,000	2,3
ವಸೂಲಿ ಖರ್ಚು—			
2. ಜಮೀನ್ ಕಂದಾಯ	17,85,958	18,13,000	17,4
3 ಜಂಗಲುಗಳು ...	4,67,087	4,86,00 0	5,2
4. ಆಬ್ಕಾರಿ ..	2,90,129	3,26,000	3,3
5. ತೆರಿಗೆಗಳು ...	...	...	..
6. ಸಾಯರು ...	14,800	15,000	1
7. ಉಪ್ಪಿನ ಮೋಳೆ ...	...	...	..
8. ಸ್ಟಾಂಪು	35,155	27,000	2
9. ರಿಜಿಸ್ಟ್ರೇಷನ್ ...	75,233	79,000	8
10. ಟಂಕಸಾಲೆ ..	...	...	..
ಸಿವಿಲ್ ಇಲಾಖೆಗಳ ಸಂಬಳಗಳು—			
11 ಮೇಲ್ವಿಚಾರಣೆಸಿಬ್ಬಂದಿ	7,55,242	7,55,000	7,5
12. ಅರಮನೆ ಖರ್ಚು..	14,00,00 0	14,00,000	14,0
13. ನ್ಯಾಯ ವಿಮರ್ಶೆ { ಕೋರ್ಟು	9,04,865	8,99,000	9,4
{ ಜೈಲುಗಳು	1,09,819	1,15,000	1,2
14. ಪೊಲೀಸು ...	9,62,957	9,44,000	10,4
15. ವಿದ್ಯಾಭ್ಯಾಸ ..	6,99,616	7,02,000	7,9
16. ಮುಜರಾಯಿ ...	3,27,930	3,30,000	3,2
17. ವೈದ್ಯ ..	4,88,566	4,83,000	5,3
18. ಶಾಸ್ತ್ರೀಯ, ಇತರ ಸಣ್ಣ ಇಲಾಖೆಗಳು	3,49,901	3,04,000	3,0
ವಿವಿಧವಾದ ಸಿವಿಲ್ ಖರ್ಚು			
19. ಫರ್ಲೊ ಅಲೋವೆನ್ಸು	31,387	...	.
20. ಖರಾರುಗಳ ಪ್ರಕಾರ ಕೊಡತಕ್ಕ ಡಿ. ವಗೈರೆ	38,21,718	38,27,000	38,
21. ವಯೋಧಿಕಕ್ಕಾಗಿ ಅಲೋವೆನ್ಸುಗಳು ಮತ್ತು ಪೆನ್ಷನುಗಳು ..	3,70,596	3,38,000	3,6
22. ವಿವಿಧವಾದ ಖರ್ಚುಗಳು ...	4,54,044	11,29,000	6,9
23. ಸೈನ್ಯ ..	14,09,028	14,37,000	14,7
24. ಕ್ಷಾಮ ಪರಿಹಾರ ...	...	...	
25. ಮರಹಮ್ಮತ್ತು ...	25,31,441	28,20,000	38,2
ಬಡ್ಡಿ—			
26. ಸಾಮಾನ್ಯ ಸಾಲದ ಬಡ್ಡಿ ...	1,07,950	57,000	1
27. ಇತರ ಬಡ್ಡಿ ..	2,13,451	2,28,000	2,
28. ಲಾಭ ಅಥವಾ ನಷ್ಟ	1,00,465	58,000	
29. ಸರ್ಕಾರಿ ಲೋಹಮಾರ್ಗಗಳು ..	11,16,651	7,38,000	9,0
30. ಕಾವೇರೀ ಪ್ರಪಾತದ ವೈದ್ಯುತ ಶಕ್ತಿ ಷಾಹೋಪಾಯ. ...	25,67,309	8,80,000	10,0
ಒಟ್ಟು ವ್ಯಯ...	2,14,61,622	2,02,86,000	2,15,

Government Branch Press Mysore.—1903.

674

ಮೈಸೂರ ಗೆಜೆಟ್.

ಸಂ.XXXVIII.] ಸರ್ಕಾರದಿಂದ ಪಬ್ಲಿಷ್ ಆದ್ದು [ನಂ. 46.

ಬೆಂಗಳೂರು, ಗುರುವಾರ, ನವಂಬರು ತಾ|| 26, ಸನ್ 1903.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

ಮೈಸೂರು ಸರಕಾರಕ್ಕೆ ಸೇರಿದ ವ್ಯವಸಾಯದ ಇಲಾಖೆಯು (The Department of Agriculture)
1901—2ನೆಯ ವರ್ಷದ ವಾರ್ಷಿಕ ರಿಪೋರ್ಟು.

ಸಿಬ್ಬಂದಿ.

ಪ್ಲಾಟ್ ಎಕ್ಸ್ಪೆರಿಮೆಂಟ್ (Plot experiment) ಎಂಬ ಮಾದರಿ ವ್ಯವಸಾಯದ ಕೆಲಸದಲ್ಲಿಯೂ ಇಲಾಖೆಯು ಬೇರೆ ಕೆ[illegible]ಲ್ಲಿಯೂ ಸಹಾಯವಾಗಿರುವದಕ್ಕಾಗಿ ಸೈದಾಪೇಟೆಯ ವ್ಯವಸಾಯ ಪಾಠಶಾಲೆಯಲ್ಲಿ ತೇರ್ಗಡೆಹೊಂದಿದ ಬಬ್ಬರನ್ನು ಹೆಚ್ಚಾಗಿ ನೇಮಕಮಾಡಿಕೊಂಡದ್ದೊಂದೆ ಈ ಬಾಬಿನಲ್ಲಿ ನಡೆದ ವಿಶೇಷ ಸಂಗತಿಯಾಗಿದೆ. ನಮ್ಮ ಇಲಾಖೆಯವರೆಲ್ಲರೂ ಮನಃಪೂರ್ತಿಯಾಗಿಯೂ ಸಂತೋಷವಾಗಿಯೂ ಸಹಾಯಮಾಡಿದ್ದಕ್ಕಾಗಿ ಅವರೆಲ್ಲರಿಗೂ ನಾನುಕೃತಜ್ಞನಾಗಿರುತ್ತೇನೆ. ಅದರಲ್ಲಿಯೂ 'ಅಸಿಸ್ಟೆಂಟ್ ಕೆಮಿಸ್ಟ'ರಾದ ಮೆ|| ಬಿ. ವೆಂಕಟರಾಯರೂ 'ಚೀಫ್ ಕ್ಲಾರ್ಕ್' ಕೆ. ವಿ. ಕೃಷ್ಣಸ್ವಾಮಿ ಐಯರೂ ಮಾಡಿದ ಸಹಾಯವು ವಿಶೇಷವಾಗಿ ಶ್ಲಾಘನೀಯವಾದ್ದರಿಂದ ಅವರ ಹೆಸರನ್ನು ಇಲ್ಲಿ ಪುನಃ ಹೇಳಲು ಅಪೇಕ್ಷಿಸುತ್ತೇನೆ.

ಇಲಾಖೆಯ ಕೆಲಸ.

ಈ ವರ್ಷ ನಡೆದ ಇಲಾಖೆಯ ಕೆಲಸಗಳನ್ನು ಈ ಕೆಳಗೆ ವಿವರಿಸಿರುವ ಮೇರೆ ಐದು ವಿಭಾಗ ಮಾಡಬಹುದು :—

(*a*) (Analytical work) ರಸಾಯನ ಶಾಸ್ತ್ರರೀತ್ಯಾ ಪದಾರ್ಥಗಳ ವಿಭಾಗ.

(*b*) (Tours) ಸಂಚಾರ.

(*c*) ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳ ಪ್ರಚಾರ.

(*d*) (Experiments) ವ್ಯವಸಾಯಕ್ಕೆ ಸಂಬಂಧಪಟ್ಟ ಪರೀಕ್ಷೆಗಳು.

(*e*) ರಸಾಯನಾಲಯದಲ್ಲಿ (Laboratory) ಉಳಿದಿದ್ದ ಭಾಗದಲ್ಲಿ ಸಾಮಾನುಗಳನ್ನು ಜೋಡಿಸುವುದು. ಇವುಗಳಲ್ಲಿ ಕಡೆಯ ಬಾಬಿನ ವಿಷಯಕ್ಕಾಗಿಯೇ (Agricultural Chemist) ಕೃಷಿ ರಸಾಯನಿಕರ ಕಾಲದಲ್ಲಿ ಹೆಚ್ಚು ಭಾಗವು ವ್ಯಯವಾದರೂ ಆದರ ವಿಷಯವಾಗಿ ಇಲ್ಲಿ ವಿಶೇಷ ಹೇಳತಕ್ಕ ಅವಶ್ಯಕವಿರುವದಿಲ್ಲ. ರಸಕಾರ್ಯಸ್ಥಾನವನ್ನು ಅಣಿಮಾಡುವದಕ್ಕಾಗಿ ಬೇಕಾದ ವಿವರವನ್ನೆಲ್ಲಾ (ವ್ಯಕ್ತವಾಗಿ) ಬರೆದ (plan) ನಕ್ಷೆಗಳನ್ನು ಸಿದ್ಧಮಾಡಿದ ಮೇಲೂ ಕೂಡ ಆ ಕೆಲಸವನ್ನು ತೃಪ್ತಿಕರವಾಗಿ ನೆರವೇರಿಸುವ ಕೆಲಸಗಾರನೊಬ್ಬನೂ ಬೆಂಗಳೂರಲ್ಲಿ ದೊರೆಯದೆ ಹೋದನು. ಇಂಥ ಕೆಲಸಗಳಲ್ಲಿ ಹೀಗಾಗುವದು ಸ್ವಾಭಾವಿಕವಾಗಿಯೇ ಇದೆ. ಕಳೆದ ವರ್ಷ ಕೆಲಸಗಾರನಿಗೆ ಮುಗುವಳಿಯಾಗಿ ವಹಿಸಿದ ಕೆಲಸವು ಸ್ವಲ್ಪವೂ ಚೆನ್ನಾಗಿರಲಿಲ್ಲವಾದಕಾರಣ (ಅಗ್ರಿಕಲ್ಚರ್ ಕೆಮಿಸ್ಟರೂ) ಕೃಷಿ ರಸಾಯನಿಕರೂ ಅವರ ಕೈಯಕೆಳಗಿನ ಅಧಿಕಾರಿಗಳೂ ಆ ಕೆಲಸದ ಹೆಚ್ಚು ಭಾಗವನ್ನೆ[illegible] ಪುನಃ ತೆಗಿಸಿಬಿಡಬೇಕಾಯಿತು. ಅಸಿಸ್ಟೆಂಟ್ ಆಸ್ಸೆಯರ್ ಎಂಬ ಅಧಿಕಾರಿಯು ಈ ಕೆಲಸದಲ್ಲಿ ತರಬಿಯತ್ತಾದ ಬಳಿಕ ಆದನ್ನು ಬಲು ಚೆನ್ನಾಗಿಯೇ ಮಾಡಿದನು, ಆದರೂ ಸರ್ವದಾ ಮೇಲೆ ನೋಡಿಕೊಳ್ಳುವವರು ಇದ್ದೇ ಇರಬೇಕಾಯಿತು. ಮರ್ರಗೆ ಲಸದಲ್ಲಿ ಹೆಚ್ಚು ಭಾಗವನ್ನು ಮುಗುವಳಿಯಾಗಿಯೇ ಮಾಡಿಸಿತು. ಮುಗುವಳಿದಾರನು ಚೆನ್ನಾಗಿಯೇ ಕೆಲಸವನ್ನು ಮಾಡಿಕೊಟ್ಟನು. ಅದರಲ್ಲಿಯೂ ನಮಗೆ ಬೇಕಾದ್ದು ಇಂತಹದೇ ಎಂದು ತಿಳಿದ ಬಳಿಕಲಂತೂ ಬಹಳ ಚೆನ್ನಾಗಿ ಮಾಡಿಕೊಟ್ಟನು ಆದರೂ

(ಆ ಕೆಮಿಸ್ಟರೇ) ಕೃಷಿ ರಸಾಯನಿಕರೇ ಪ್ರತಿಯೊಂದು ಕೆಲಸಕ್ಕೂ ವಿವರವಾಗಿ ನಕ್ಷೆ ಬರೆಯಬೇಕಾಯಿತು. ಪ್ರಕೃತದಲ್ಲಿ ಕಾರ್ಯಸ್ಥಾನವು (Laboratory) ಕಾರ್ಯತಃ ಪೂರ್ತಿಯಾಗಿರುವದರಿಂದ ಅದನ್ನು ಇಲ್ಲಿ ಸಂಗ್ರಹವಾಗಿ ವಿವರಿಸುವದು ಅಪ್ರಕೃತವಾಗಲಾರದು. ಆದರಲ್ಲಿಯೂ ಈ ಕಾರ್ಯಸ್ಥಾನವೇ ಕಾರ್ಯತಃ ಹಿಂದೂ ದೇಶದಲ್ಲಿ ಈ ಜಾತೀಯ ಕಾರ್ಯಸ್ಥಾನಗಳಿಗೆಲ್ಲಾ ಮೊದಲನೆಯದಾದ್ದರಿಂದಲೂ ಇತರ ದೇಶಗಳಲ್ಲಿರುವ ಸಾಮಾನ್ಯ ಕೃಷಿ ರಸಾಯನ ಕಾರ್ಯಸ್ಥಾನಗಳಿಗೆ ಸರಿಸಮಾನವಾಗಿರುವದರಿಂದಲೂ ಇದರ ವರ್ಣನೆಯು ಎಷ್ಟುಮಾತ್ರಕ್ಕೂ ಅನವಶ್ಯಕವಾಗಲಾರದು.

ಕಾರ್ಯಸ್ಥಾನ (Laboratory)

ಇದಕ್ಕೆ ಸಂಬಂಧಿಸಿರುವ ತಳದ ನಕ್ಷೆಯನ್ನು ನೋಡಿದರೆ ಸ್ಥಳದ ಹಂಚಿಕೆಯನ್ನೂ ಬೇರೆಬೇರೆ ಕೊಟಡಿಗಳ ಅಳತೆಯನ್ನೂ ತಿಳಿಯಬಹುದು. ಸಾಮಾನ್ಯ ಕಾರ್ಯಸ್ಥಾನಕ್ಕೆ ಬೇಕಾದ ಬೆಳಕೆಲ್ಲಾ ಕಟ್ಟಡದ ನಟ್ಟನಡುವೆ ಇರುವ ಅಂಗಳದಿಂದಲೇ ವಿಶೇಷವಾಗಿ ಬರುತ್ತದೆ. ಅದಕ್ಕೆ ಬೆಳಕು ಸಾಲದೆ ಎಲ್ಲಿ ಕತ್ತಲೆಯಾಗಿ ಹೋಗಿಬಿಡುವದೋ ಎಂಬದಾಗಿ ಒಂದು ಕಾಲದಲ್ಲಿ ಸ್ವಲ್ಪ ಭೀತಿ ಇತ್ತು. ಆದರೆ ಈಗ ಅಲ್ಲಿಗೆ ಬೇಕಾದಷ್ಟು ಬೆಳಕು ಬರುತ್ತದೆ. ಈ ಕಟ್ಟಡದೊಳಗೆಲ್ಲಾ ಈ ಕೊಟಡಿಯೇ ಬಲು ತಣ್ಣಗಿದೆ; ಬಿಸಿಲಿಗೆ ಮರೆಯಾಗಿ ಇದರ ಪೂರ್ವ ಪಶ್ಚಿಮ ದಕ್ಷಿಣ ಭಾಗಗಳಲ್ಲಿ ಕೊಟ್ಟಡಿಗಳಿರುವದೇ ಇದು ಹೀಗೆ ತಣ್ಣಗಿರುವದಕ್ಕೆ ಕಾರಣವಾಗಿರಬಹುದು. ಈ ಕೊಟಡಿಯ ಮೇಲು ಹೊದಿಕೆಯು ಒಳಮೈಗೆ ಹಲಗೆಗಳನ್ನು ಹಾಸಿ ಹೊರಮೈಗೆ ಹೆಂಚು ಹೊದಿಸಿದೆ. ಇದರ ಹಲಿಗೆಯ ಮೇಲು ಹೊದಿಕೆಯೇ ಅನೇಕ ಕೊಟಡಿಗಳಿಗೂ ಮೇಲು ಹೊದಿಕೆಯಾಗಿರುವದರಿಂದ ಹದಿನೆಂಟಡಿ ಉದ್ದವಾದ ಗೋಡೆಗಳುಳ್ಳ ಆ ಕೊಟಡಿಗಳು ಎತ್ತರವು ಮತ್ತಷ್ಟು ಹೆಚ್ಚಾಗಿದೆ. ಮುಖ್ಯ ಕಾರ್ಯಸ್ಥಾನದ ನಡುವೆ (ಪರೀಕ್ಷೆಯ) ಕೆಲಸಕ್ಕಾಗಿ, ಹನ್ನೊಂದು ಅಡಿ ನೀಳವಾಗಿಯೂ ಐದು ಅಡಿ ಅಗಲವಾಗಿಯೂ ಇರುವ ಮೂರು ಕಾಲು ಮಣೆಗಳು (benches) ಹಾಕಿವೆ. ಅವುಗಳ ಒಂದೊಂದು ತುದಿಯಲ್ಲಿಯೂ ಒಂದೊಂದು ಚೀನಾ ಗಾಜಿನ ಬಾನೆಗಳಿವೆ. ಒಂದೊಂದು ಬೆಂಚಿನ ಮಧ್ಯದಲ್ಲಿಯೂ ದ್ರಾವಕಾದಿಗಳನ್ನು ಇಟ್ಟುಕೊಳ್ಳುವದಕ್ಕಾಗಿ ಒಂದೊಂದು ಜಗಕಟ್ಟಿದೆ (shelf). ಇವುಗಳ ಕೆಳಗೆ ಹನ್ನೆರಡು ಹನ್ನೆರಡು ವಾಯುದೀಪದ ಬಾಯಿಬಿರಡೆಗಳಿವೆ (taps). ಬೆಂಚುಗಳ ಮೇಲೆ ಅಡ್ಡಲಾಗಿರುವ ಯಾವ ಸಾಮಾನುಗಳ ಗೋಜಿಗೂ ಹೋಗದೆ, ಈ ಬಾಯಿಬಿರಡೆಗಳ ಮೂಲಕ ವಾಯುದೀಪಕ್ಕೆ ಹೋಗುವ ವಾಯುವನ್ನು ಬೇಕಾದ ಹಾಗೆ ತಿರುವಿಕೊಳ್ಳಲು ಅನುಕೂಲವಾಗುವಂತೆ ತಿರುಪು ಹಿಡಿಗಳನ್ನೆಲ್ಲಾ ಬೆಂಚುಗಳ ಮುಂದುಗಡೆಯೇ ಇಡಿಸಿದೆ. (ಹಿಂದೆ ಹೇಳಿದ) ಗಾಜಿನ ಬಾನೆಗಳ ಮೇಲುಗಡೆಯಲ್ಲಿ ಬೆಂಚುಗಳ ಒಂದೊಂದು ತುದಿಯಲ್ಲಿಯೂ ಮೂರು ಮುಖವಿರುವ ನೀರಿನ ಬಾಯಿಬಿರಡೆಗಳು (taps) ಒಂದೊಂದು ಇದೆ. ಈ ಕಾಲುಮಣೆಗಳು ಐದೈದು ಅಡಿ ದೂರದಲ್ಲಿವೆ. ಈ ಕಾರ್ಯಸ್ಥಾನದ ಒಂದು ಪಕ್ಕದ ಗೋಡೆಯುದ್ದಕ್ಕೂ ಮತ್ತೊಂದು ಬೆಂಚು ಇದೆ. ಇದರಲ್ಲಿ ಏಳೇಳು ಅಡಿ ದೂರಕ್ಕೆ ಒಂದೊಂದರ ಮೇರೆ, ನೀರುಕೋಳಿಯ ಕೊರಳಿನಂತಿರುವ ನೀರು ನಲ್ಲಿಯ ಬಾಯ್ಬಿರಡೆಗಳೂ (taps) ಇಪ್ಪತ್ತೆರಡು ಅಂಗುಲ ದೂರಕ್ಕೆ ಒಂದೊಂದರಮೇರೆ ವಾಯು ದೀಪದ ಬಾಯ್ಬಿರಡೆಗಳೂ ಇವೆ. ಎಲ್ಲಾ ಬೆಂಚುಗಳೂ ಮೂರು ಮೂರು ಅಡಿ ಎತ್ತರವಾಗಿವೆ. ಇವುಗಳ ಮೇಲುಕಡೆಯಿಂದ ಹಿಡಿದು ಒಂದು ಅಡಿಯಷ್ಟು ಭಾಗದಲ್ಲಿ ಬೇರೆಬೇರೆ ಅಳತೆಯ ಹಲವು (drawers) ಖಾನೆಗಳಿವೆ; ಇವುಗಳ ಕೆಳಗಿನ ಎರಡು ಅಡಿಯಷ್ಟು ಭಾಗಗಳಿಗೆ ಪದ್ಧತಿ[illegible]ಕಾರ ಕದಗಳನ್ನಿಟ್ಟು ಕಬ್ಬೋರ್ಡುಗಳ ಹಾಗೆ ಉಪಯೋಗಿಸಿಕೊಳ್ಳುವಂತೆ ಮಾಡಿದೆ. ಕಾರ್ಯಸ್ಥಾನದ ಒಂದು ಕೊನೆಯಲ್ಲಿ ಇನ್ನೊಂದು ತರಹದ ಬೆಂಚು ಹಾಕಿದೆ. ಇದರಲ್ಲಿ ತೊಳೆಯುವದಕ್ಕಾಗಿ ಒಂದು ಸೀಸದ ತೊಟ್ಟಿಯನ್ನು ಕಟ್ಟಿ, ತೊಳೆಯುವದಕ್ಕೆ ಬೇಕಾದ ಬಿಸಿನೀರು ತಣ್ಣೀರುಗಳನ್ನೂ, ತೊಳೆದ ಪಾತ್ರೆಗಳಿಂದ ಬಸಿಯುವ ನೀರು ಇಳಿದು ಹೋಗುವಂತೆ ಜಲದಾರಿಗಳಿರುವ ಹಲಿಗೆಗಳನ್ನೂ, ಕೊಳೆಯಾದ ಗ್ಲಾಸು ಪಾತ್ರೆಗಳನ್ನು ಇರಿಸುವದಕ್ಕಾಗಿ ಸ್ಥಳವನ್ನೂ ಏರ್ಪಡಿಸಿದೆ. ಇನ್ನೊಂದು ತುದಿಯಲ್ಲಿ ಕೆಟ್ಟ ಹೊಗೆಗಳು ಆಚೆಗೆ ಹೋಗುವಂತೆ ಚಿಮಣಿಗಳುಳ್ಳ ಕಬ್ಬೋರ್ಡುಗಳಿವೆ. ಈ ಕಬ್ಬೋರ್ಡುಗಳಲ್ಲಿ (ಪದಾರ್ಥಗಳನ್ನು ಹುದುಗಿಡುವದಕ್ಕೆ ಅನುಕೂಲವಾಗುವ ಹಾಗೆ) ನೀರನ್ನೂ ಮರಳನ್ನೂ ತುಂಬಿದ ಭಾಂಡಗಳನ್ನೂ ಇಟ್ಟಿವೆ. ಇದೇ ಕಡೆಯಲ್ಲಿ ಒಂದು ಚಿಕ್ಕ ಬೆಂಚನ್ನೂ, ಬೇಕಾದಷ್ಟು ಶುದ್ಧ ನೀರನ್ನೂ ಒದಗಿಸುವದಕ್ಕೆ ಒಂದು ಭಟ್ಟಿಯನ್ನೂ ಏರ್ಪಡಿಸಿದೆ. ಉಳಿದ ಪಕ್ಕದ ಗೋಡೆಯಲ್ಲಿ ಹಲವು ಬಾಗಿಲುಗಳಿವೆ. ಇವುಗಳ ನಡುನಡುವೆ ನಿಂತ ಗೋಡೆಗಳಲ್ಲಿ ಬೀರೂಗಳನ್ನು ಇಡಿಸಿದೆ. ಇವುಗಳು ಸಾಧಾರಣವಾಗಿ ಬಳಸುವ ಸಾಮಗ್ರಿಗಳನ್ನೂ ದ್ರಾವಕಾದಿಗಳನ್ನೂ (Standard solutions) ಎಂಬುವುಗಳನ್ನೂ, ರಸಾಯನ ಶಾಸ್ತ್ರ ರೀತ್ಯಾ ವಿಭಾಗಿಸುವದಕ್ಕಾಗಿ ಸಿದ್ಧಪಡಿಸಿದ ಪದಾರ್ಥಗಳನ್ನೂ ಇಡುವದಕ್ಕೆ ಉಪಯೋಗಿಸುತ್ತವೆ. ಮರಗೆಲಸವನ್ನೆಲ್ಲಾ ತೇಗದ ಮರದಲ್ಲಿಯೇ ಮಾಡಿಸಿ ಅದರ ಹುಟ್ಟು ಬಣ್ಣದಲ್ಲಿಯೇ ನಿಲ್ಲಿಸಿದೆ; ಗೋಲುಗಳನ್ನು ಮಾತ್ರ ಕರಿ ಮರದಲ್ಲಿ ಮಾಡಿಸಿ ಹಾಕಿಸಿದೆ. ಕೆಲಸ ಮಾಡತಕ್ಕ ಕಾಲುಮಣೆಗಳು ಕ್ಷಾರಗಳಿಂದಲೂ, ಧೃತಿಗಳಿಂದಲೂ ತಿಂದು ಹೋಗದಂತಿರುವದಕ್ಕಾಗಿ ಅವುಗಳಿಗೆಲ್ಲಾ 'ಪೆರಾಫೀನ್' ಎಂಬ ಎಣ್ಣೆಯನ್ನು ಕುಡಿಸಿದೆ. ಕೊಳವೆಗಳು ನೆಲದ ಕೆಳಗೆ ಬಚ್ಚಲುಗಳಲ್ಲಿಯೂ ಕೆಲಸದ ಬೆಂಚುಗಳ ಮರೆಯಲ್ಲಿಯೂ ಇವೆ. ಆದರೂ ಅವು ಯಾವಾಗ ಬೇಕಾದರೂ ಸುಲಭವಾಗಿ ಸಿಕ್ಕುವಂತೆ ಹಾಕಿವೆ. ಇವುಗಳನ್ನು ಹಾಕತಕ್ಕ ಕೆಲಸಗಾರನೊಬ್ಬನೂ ಸಿಕ್ಕದೆ ಹೋದಕಾರಣ ಈ ಕೆಲಸವನ್ನು ಅನೇಕವಾಗಿ ಕೃಷಿರಸಾಯನಕರೂ ಅವರ ಕೈಯ ಕೆಳಗಿನ ಉದ್ಯೋಗಸ್ಥರೂ ತಾವೇ ಮಾಡಬೇಕಾಯಿತು. (fittings) ನಲ್ಲಿಯ ತಿರುಪುಗಳು, ಬಾಯಿಗಳು ಇವನ್ನೆಲ್ಲಾ ಹೊರಮೈಗೆ ನಿಕ್ಕಲ್ ಎಂಬ ಲೋಹದಿಂದ ಮುಲಾಮು ಮಾಡಿದ-ಹಿತ್ತಾಳೆಯ ತಗಡಿನಿಂದ ಮಾಡಿದೆ. 'Nitrogen' ನೈಟ್ರೋಜನ್ ಮತ್ತು 'Potash' ಪೊಟಾಷ್ ಇವುಗಳ ಕೊಟ್ಟಡಿಯೂ ಸ್ವಂತ ಕಾರ್ಯಸ್ಥಾನವೂ ಒಂದೆರಡು ಸಣ್ಣಸಣ್ಣ ವ್ಯತ್ಯಾಸಗಳಲ್ಲಿ ವಿನಾ ಮಿಕ್ಕ ಎಲ್ಲಾ ಭಾಗಗಳಲ್ಲಿಯೂ ದೊಡ್ಡ ಕಾರ್ಯಸ್ಥಾನವನ್ನೇ ಕಿರಿದಾಗಿ ಕಟ್ಟಿದಂತಿವೆ. ಸಾಮಗ್ರಿಗಳನ್ನು ಇರಿಸುವದಕ್ಕಾಗಿ ಕಟ್ಟಿರುವ ಕೊಟಡಿಯನ್ನು ಕೂಡ ಬೇಕಾದಾಗ ಕಾರ್ಯಸ್ಥಾನವಾಗಿ ತಿರುಗಿಸಿಕೊಳ್ಳಲು ಅನುಕೂಲವಾಗುವಂತೆ ಕಟ್ಟಿಸಿದೆ. ಮುಖ್ಯವಾದ ಕಿಟಕಿಗಳ ಕದಗಳಿಗೆಲ್ಲಾ ಕನ್ನಡಿಯನ್ನು ಹಾಕಿ ಆ ಕದಗಳನ್ನು ಬೇಕಾದ ಕಡೆ ನಿಲ್ಲಿಸಿಕೊಳ್ಳುವಂತೆ ಮಾಡಿಸಿದೆ. ಸ್ವಲ್ಪಭಾಗ ವಿನಾ ಉಳಿದ ಎಲ್ಲಾಕಡೆಯಲ್ಲಿಯೂ ನೆಲಕ್ಕೆ ಮೆರಗಿಲ್ಲದ ಒಂದುತರದ ಗಟ್ಟಿ ಮಣ್ಣಿನ ಬಿಲ್ಲೆಗಳನ್ನು ಹಾಸಿದೆ. ಕಟ್ಟಡವನ್ನು ಒಂದು ವಿಧವಾದ ಬೂದುಬಣ್ಣದ ಗ್ರಾನೈಟ್ (granite) ಎಂಬ ಕಲ್ಲಿನಿಂದ ಕಟ್ಟಿದೆ. ಅದು ಸುಖಾವಹವಾಗಿಯೂ ನೋಟಕ್ಕೆ ಅಂದವಾಗಿಯೂ ಇದೆ.

Analytical Work.

ರಸಾಯನ ಶಾಸ್ತ್ರರೀತ್ಯಾ ಪದಾರ್ಥ ವಿಭಾಗ.

ಈ ವರ್ಷ ೧೦೫ 'ಮಾದರಿ ಪದಾರ್ಥ' ಗಳನ್ನು ವಿಭಾಗಿಸಲಾಯಿತು. ಇವುಗಳಲ್ಲಿ ಅರ್ಧಭಾಗ ಎಂದರೆ ೫೪ ಪದಾರ್ಥಗಳು ಭೂತತ್ವ ಶೋಧನೆ (Geological) ಇಲಾಖೆಯ ಮೂಲಕ ಬಂದವು. ಇವುಗಳ ವಿಭಾಗವೇ ಇಬ್ಬರು 'ಅಸಿಸ್ಟೆಂಟ್' ಎಂಬ ಸಹಾಯಕರಿಗೂ ಸಾಕ್ಷಾದ್ದಷ್ಟು ಕೆಲಸವಾಯಿತು. ಈ ಮಾದರಿಗಳು—ಚಿನ್ನದ ಅದರು, ಖನಿಜ, ಬಾರ್‌ಗೋಲ್ಡ್ ಎಂಬ ಚಿನ್ನದ ಗಟ್ಟಿ, ಸ್ಪಂಜ್ ಗೋಲ್ಡ್ ಎಂಬ ಚಿನ್ನದಪುಡಿ—ಇವುಗಳನ್ನು ಒಳಕೊಂಡಿದ್ದವು. ಚಿನ್ನದ ಅದುರುಗಳಲ್ಲಿ ಬಹುಭಾಗವು ಪ್ರೈವೇಟ್ ಎಂದರೆ ಸಾಹುಕಾರಿ ಜನರಿಗೆ ಸೇರಿದ್ದವು. ಅಂಥವುಗಳ ಮೇಲೆ ಸ್ವಲ್ಪಹಣವು ವಸೂಲ್ ಮಾಡಲ್ಪಟ್ಟಿತು. ಆ ಹಣವನ್ನು ಭೂತತ್ವ ಶೋಧನದ ಇಲಾಖೆಯವರು ವಸೂಲ್ ಮಾಡಿದರು. ಚಿನ್ನದ ಗಟ್ಟಿಯನ್ನೂ ಪುಡಿಯನ್ನೂ ವಸ್ತುತಃ ಪೊಲೀಸ್—ಇಲಾಖೆಗೋಸ್ಕರವೇ ಪರೀಕ್ಷಿಸಿದಂತಾಯಿತು. ಇವು ಭೂತತ್ವ ಶೋಧನದ ಇಲಾಖೆಯ ಮೂಲಕವಾಗಿ ಮಾತ್ರ ಬಂದವು. ಗೋಲ್ಡ್‌ಫೀಲ್ಡ್ಸ್–ಎಂಬ ಚಿನ್ನದ ಗಣಿಗಳಿಂದ ಕಳವಾದವೆಂಬ ಶಂಕೆಯಿಂದ ಪರೀಕ್ಷಾರ್ಥವಾಗಿ ಕಳುಹಿಸುತ್ತಿರುವ ಮಾದರಿಗಳ ಸಂಖ್ಯೆಯು ದಿನೇದಿನೇ ಹೆಚ್ಚುತ್ತಿದೆ. ಇವುಗಳ ಪರೀಕ್ಷಾರ್ಥವಾಗಿ ಮಾಡಬೇಕಾದ ಕೆಲಸವೂ ಹೆಚ್ಚಾಗಿಯೇ ಇದೆ. ಆದರೂ ಕೋಲಾರದ ಚಿನ್ನವು ಇಂಥದೆ ಎಂದು ನಿರ್ಣಯಿಸುವದಕ್ಕೆ ರಸಾಯನ ಶಾಸ್ತ್ರರೀತ್ಯಾ ಮಾಡುವ ಪರೀಕ್ಷೆಯೊಂದೇ ಕಾರ್ಯತಃ ಸಾಧನವಾಗಿರುವದರಿಂದಲೂ ಈ ಸಂಸ್ಥಾನದ ಭೂತತ್ವ ಶಾಸ್ತ್ರಜ್ಞರ (ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳಬೇಕಾದ) ಸಾಹಸದಿಂದ ಕೋಲಾರದ ಚಿನ್ನದಲ್ಲಿ ಕೆಲವನ್ನು ಪರೀಕ್ಷೆಯ ಮೂಲಕ ನಿಸ್ಸಂದೇಹವಾಗಿ ನಿರ್ಧರಿಸಬಹುದಾದುದರಿಂದಲೂ ಚಿನ್ನದ ಗಣಿಯ ಕೈಗಾರಿಕೆಯು ಇಷ್ಟೊಂದು ಪ್ರಬಲವಾಗಿರುವ ಇಂಥ ಸಂಸ್ಥಾನಗಳಲ್ಲಿ ಈ ವಿಧವಾದ ಪರೀಕ್ಷಾ ಕಾರ್ಯಗಳಿಗೆ ಪ್ರೋತ್ಸಾಹವನ್ನು ಕೊಡುವದು ಉಚಿತವಾಗಿದೆ. ಭೂತತ್ವದ ಇಲಾಖೆಯ ಮೂಲಕ ಬಂದ ಮಾದರಿ ಪದಾರ್ಥಗಳ ಪರೀಕ್ಷೆಯಿಂದ ಫಲಿತವಾದ ಅಂಶವು ಆ ಇಲಾಖೆಯ (Memoirs) ಮೆಮೋಯರ್ಸ್ ಎಂಬ ಸಂಚಿಕೆಗಳಲ್ಲಿ ವಿವರಿಸಲ್ಪಡುತ್ತವೆ. ಉಳಿದ ವಸ್ತುಗಳ - ಎಂದರೆ ೫೧ ವಸ್ತುಗಳ—ಪರೀಕ್ಷೆಯು ಈ ಇಲಾಖೆಗೋಸ್ಕರವೇ ನಡೆಯಿತು. ಈ ಕೆಲಸವು ಮುಖ್ಯವಾಗಿ ಹಂಗಾಮಿಯಾಗಿ ನಿಯಮಿತರಾಗಿರುವ ಸಹಾಯಕರಿಂದಲೂ (Probationary Assistant)ನನ್ನಿಂದಲೂ ನಿರ್ವಾಹವಾಯಿತು.

ಸಂಚಾರ.

ಈ ವರ್ಷದಲ್ಲೆಲ್ಲಾ ಒಟ್ಟು ಹತ್ತುವೇಳೆ ಸಂಚಾರ ಹೋಗಿರಲಾಯಿತು. ಇವುಗಳು ನಾಲ್ಕಾರು ದಿವಸ ಮೊದಲುಗೊಂಡು ಒಂದೊಂದುವೇಳೆ ಒಂದು ತಿಂಗಳ ದಿವಸಕ್ಕೆ ಕೂಡ ಮೀರಿದ್ದವು. ಒಂದೆರಡು ದಿವಸದ ಪ್ರಯಾಣವನ್ನು ಸಂಚಾರವೆಂದು ಭಾವಿಸಿಲ್ಲ. ಈ ಸಂಚಾರಗಳನ್ನು ಬೇರೆಬೇರೆ ಉದ್ದೇಶಗಳಿಗಾಗಿ ಎಂದರೆ—ನಾನಾ ವಿಧವಾದ ಉದ್ದೇಶಗಳಿಗಾಗಿ ನಾನಾ ವಿಧವಾದ ಭೂಮಿಗಳ ಪರೀಕ್ಷೆ, ಕಬ್ಬಿನ ಕೈಗಾರಿಕೆಯ ಪರೀಕ್ಷೆ, ಹುಳುಬಿದ್ದ ಪೈರುಗಳ ಪರೀಕ್ಷೆ, ಪ್ಲಾಂಟರುಗಳು ಪರೀಕ್ಷಾರ್ಥವಾಗಿ ನಡಿಸುವ ಮಾದರಿ ಕ[illegible] ಪರೀಕ್ಷೆ, ಇಂಡಿಯಾದೇಶದ ಇತರ ಭಾಗಗಳಲ್ಲಿ—ಎಂದರೆ ಕೊಡಗು, ಶಿವರಾಯಿ ಬೆಟ್ಟ ಮೊದಲಾದ ಕಡೆ—ನಡೆಯುವ ಕಾಫಿ [illegible]ವ್ಯವಸಾಯದ ಪರೀಕ್ಷೆ ಇವೇ ಮೊದಲಾದ ಉದ್ದೇಶಗಳಿಗಾಗಿ - ಮಾಡಲಾಯಿತು. ಕೊಡಗಿಗೆ ಸಂಚಾರ ಹೋಗಿದ್ದ ಕಾಲದಲ್ಲಿ ಸಂಗ್ರಹಿಸಿದ ವಿಷಯಗಳೆಲ್ಲಾ ಈ ಇಲಾಖೆಯ IIನೆಯ 'ಬುಲ್ಲೆಟಿನ್' ಎಂಬ ಸಂಚಿಕೆಯಲ್ಲಿ ಕೆಲವುಟ್ಟಿಗೆ ಹಿಂದೆಯೇ ಪ್ರಕಟಿತವಾಗಿವೆ. ಶಿವರಾಯಿಬೆಟ್ಟದಲ್ಲಿ ಮ॥ ಲೀಮಿಂಗ್ ಎಂಬವರು ತಮ್ಮ ಕಾಫಿ ತೋಟದಲ್ಲಿ ಒಂದನ್ನು ಬಿಟ್ಟು ಒಂದರ ಮೇರೆ ಕಾಫಿ ಗಿಡಗಳನ್ನೆಲ್ಲಾ ಕಡಿಸಿ ಹಾಕಿಸುತ್ತಾರೆ. ಇದರಿಂದುಂಟಾಗುವ ಫಲಿತಾಂಶವೇನು–ಎಂದು ನೋಡಿ ತಿಳಿಯುವದಕ್ಕಾಗಿ ಅಲ್ಲಿಗೆ ಸಂಚಾರ ಹೋಗಲಾಯಿತು. ಈ ಸಾಹಸಿಗರಾದ ಪ್ಲಾಂಟರ್ರೇ ಪ್ರಥಮತಃ ಹೀಗೆ ಗಿಡಗಳನ್ನು ಕಡಿದು ಈ ಕ್ರಮವನ್ನು ಪರಿಗ್ರಾಹ್ಯವೆಂದು ಪ್ರಚುರಗೊಳಿಸಿದವರು.

ಲೀಮಿಂಗರವರ ಕ್ರಮ.

ದಕ್ಷಿಣ ಹಿಂದೂಸ್ಥಾನದಲ್ಲಿ ಸಾಮಾನ್ಯವಾಗಿ ಕಾಫಿ ಪೈರನ್ನು ಮೊದಲನೆಯಾವೃತ್ತಿ ನೋಡುವ ಪ್ರತಿ ವ್ಯವಸಾಯ ಶಾಸ್ತ್ರಜ್ಞನಿಗೂ ಇಲ್ಲಿಯ ಗಿಡಗಳು ಬಹಳ ಒತ್ತೊತ್ತಾಗಿವೆ ಎಂಬುದಾಗಿ ತೋಚದೆ ಹೋಗುವದಿಲ್ಲ. ಹೀಗೆ ಒತ್ತೊತ್ತಾಗಿ ಪೈರು ಮಾಡುವದು ಅವಶ್ಯಕವೇ ಅಲ್ಲವೆ ? ಹೀಗೆ ಒತ್ತೊತ್ತಾಗಿ ಪೈರು ಮಾಡದಿದ್ದಾಗ ಕಾಫಿಯು ಚೆನ್ನಾಗಿ ಬೆಳೆದು ಒಂದೊಂದು ಎಕರಿಗೂ ಹಿಂದೆ ಕೊಡುತ್ತಿದ್ದಷ್ಟು ಫಲವನ್ನು ಕೊಡುತ್ತದೆಯೋ ಇಲ್ಲವೆ ? ಗಿಡಗಳು ಅಷ್ಟೊಂದು ಒತ್ತೊತ್ತಾಗಿ ಇಲ್ಲದಿದ್ದಾಗ ನೆಲವು ಹಿಂದೆ ಇದ್ದಷ್ಟು ಉಳುಮೆಯುಲ್ಲಿರಬಹುದೆ ಅಥವಾ ಇನ್ನೂ ಉತ್ತಮ ಸ್ಥಿತಿಗೆ ಬರಬಹುದೆ ಎಂಬ ವಿಷಯದಲ್ಲಿ ಕೊನೆ ಮೊದಲಿಲ್ಲದೆ ವಿವಾದ ಮಾಡಬಹುದು. ಇವುಗಳಲ್ಲಿ ಪ್ರತಿಯೊಂದಕ್ಕೂ ಸಾಧಕ ಬಾಧಕಗಳಾದ ಎಷ್ಟೋ ವಿಚಾರಗಳಿವೆ. ಈ ಸಾಧಕ ಬಾಧಕಗಳಲ್ಲಿ ಯಾವದು ಯಾವದಕ್ಕಿಂತ ಎಷ್ಟು ಮಟ್ಟಿಗೆ ಹೆಚ್ಚಾಗಿದೆಯೆಂಬಂಶವು ಕಾರ್ಯತಃ ಪರೀಕ್ಷೆಯಿಂದ ನಿರ್ಣಯಿಸಲ್ಪಡತಕ್ಕದ್ದಾಗಿದೆ. ಏಕಂದರೆ ಕಾಫಿಯ ಗಿಡವನ್ನು ಒತ್ತೊತ್ತಾಗಿ ಬೆಳೆಯುವದು ಒಳ್ಳೆಯದೆಂದು ಹೇಳಿದರೆ ಮೇಲೆ ಮೇಲೆ ನೋಡಿಕೊಂಡು ಹೋಗುವ ಅನನುಭವಶಾಲಿಗಳಿಗೆ ಹಾಸ್ಯಾಸ್ಪದವಾಗಿ ತೋರಬಹುದು. ಆದರೂ ಕೂಡಾ ಹೀಗೆ ಒತ್ತೊತ್ತಾಗಿ ಬೆಳೆಯುವುದು ಉತ್ತಮವಾದುದೆಂಬುದಕ್ಕೆ ಸಾಧಕವಾದ ಕೆಲವಂಶಗಳು ಇದ್ದೇಯಿವೆ.

ಕಾಫಿ ಗಿಡಗಳನ್ನು ಎಷ್ಟೆಷ್ಟು ದೂರದಲ್ಲಿ ನೆಡಬೇಕು - ಇತರ ಗಿಡಗಳ ಹಾಗೆಯೇ ಕಾಫೀ ಗಿಡಗಳನ್ನೂ ಒಂದಕ್ಕೊಂದಕ್ಕೆ ತಕ್ಕಷ್ಟು ದೂರದಲ್ಲೇನೋ ಬೆಳೆಸಬೇಕು. ಆದರೂ ಭೂಮಿಯೂ ಹವವೂ ಒಂದೇ ಆಗಿದ್ದರೂ ಗಿಡಕ್ಕೂ ಗಿಡಕ್ಕೂ ನಡುವೆ ಇರಬೇಕಾದ ದೂರವನ್ನು ಇತರ ಗಿಡಗಳ ವಿಷಯದಲ್ಲಿ ಹೇಗೆಯೋ ಕಾಫೀಯ ವಿಷಯದಲ್ಲಿಯೂ ಹಾಗೆಯೇ ಸ್ವಲ್ಪಮಟ್ಟಿಗೆ ಹೆಚ್ಚು ಕಡಿಮೆ ಮಾಡಿಕೊಳ್ಳಬಹುದು. ಇದಕ್ಕೆ ನಿದರ್ಶನವೇನೆಂದರೆ :—ನ್ಯೂ ಆರ್ಲಿಯನ್ಸಿನ ಎಕ್ಸ್ಪೆರಿಮೆಂಟಲ್ ಸ್ಟೇಷನ್ ಎಂಬ ಪರೀ

ಕ್ಷಾರ್ಥವಾದ ಭೂಮಿಯಲ್ಲಿ ಕಬ್ಬನ್ನು ಮೂರು ಮೂರು ಅಡಿ ದೂರದಲ್ಲಿ ನಟ್ಟಿದ್ದಾಗ ಎಕರೆ ಒಂದಕ್ಕೆ ಎಷ್ಟು ವರಮಾನವಾಯಿತೋ ಆರಾರು ಅಡಿ ದೂರದಲ್ಲಿ ನಟ್ಟಾಗಲೂ ಅಷ್ಟೇ ವರಮಾನ ಬಂದಿತು. ಈ ಎರಡು ಅಳತೆಗೂ ಒಳಪಟ್ಟ ಇನ್ನೆಷ್ಟು ದೂರದಲ್ಲಿ ನಟ್ಟಾಗಲೂ ಎಕರೆ ಒಂದಕ್ಕೆ ಪ್ರಾಯಶಃ ಅಷ್ಟೇ ವರಮಾನ ದೊರಕೀತು; ಆದ ಪ್ರಯುಕ್ತ ಈ ವಿಷಯದಲ್ಲಿ 4½ ಅಡಿ ದೂರವೇ ಸರಿಯಾದ ಅಂತರವೆಂದು ಹೇಳಬಹುದು. ಆದರೂ ಸರಿಯಾದ ದೂರಕ್ಕಿಂತ ಒಂದೂವರೆ ಅಡಿ ಹೆಚ್ಚು ಕಡಿಮೆಯಾದರೂ ಎಕರೆ ಒಂದಕ್ಕೆ ಬರುವ ವರಮಾನವು ಕಾರ್ಯತಃ ಒಂದೇ ಆಗಿತ್ತು. ಇದೇ ಮೇರೆಗೆ ಕಾಫಿಯನ್ನು ನೆಡುವದಕ್ಕೂ ಸರಿಯಾದ ದೂರವಿಷ್ಟೇ ಎಂದು ನಮಗೆ ಗೊತ್ತಾದರೆ ಗಿಡಗಳನ್ನು ಇನ್ನು ಸ್ವಲ್ಪ ಒತ್ತಾಗಿಯಾಗಲಿ ಇನ್ನು ಸ್ವಲ್ಪ ಹಕ್ಕಲಾಗಿಯಾಗಲಿ ನೆಟ್ಟರೆ ಅದರಿಂದ ಎಕರೆ ಒಂದಕ್ಕೆ ಬರುವ ಫಲದಲ್ಲಿ ವಿಶೇಷ ಹೆಚ್ಚುಕಡಿಮೆ ಯಾಗುವದಿಲ್ಲವೆಂದು ನಮಗೆ ಗೊತ್ತಾಗಬಹುದು. ಆದರೆ ಒಂದು ಭೂಮಿಗೆ ಯಾವದು ಸರಿಯಾದ ದೂರವೋ ಅದು ಇನ್ನೊಂದು ಭೂಮಿಗೆ ಸರಿಯಾದ ದೂರವಾಗದಿರಬಹುದು. ನಾನು ನೋಡಿದ ಒಂದು ಭೂಮಿಯಲ್ಲಿ ಆರಾರು ಅಡಿ ದೂರದಲ್ಲಿ ಕಾಫೀ ಗಿಡಗಳನ್ನು ನೆಟ್ಟಿದ್ದಂತೆ ಕಾಣಬಂದರೂ ಅಲ್ಲಿಯ ಕಾಫಿಯು ಎಷ್ಟು ಮಾತ್ರವೂ ಒತ್ತಾಗಿದ್ದಂತೆ ಕಾಣಬರಲಿಲ್ಲ. ಅದೇ ಡಿಸ್ಟ್ರಿಕ್ಟಿನಲ್ಲಿ ಕಾರ್ಯತಃ ಅಷ್ಟೇ ದೂರದಲ್ಲಿ ನೆಟ್ಟಿದ್ದ ಮತ್ತೊಂದು ಕಾಫೀ ತೋಟದಲ್ಲಿ ಕಾಫೀಗಿಡಗಳು ಅತಿ ನಿಬಿಡವಾಗಿದ್ದುದರಲ್ಲಿ ಸಂದೇಹವೇ ಇಲ್ಲ. ಕಾಫಿಯು ಒತ್ತೊತ್ತಾಗಿ ಬೆಳೆದಿದ್ದ ಸಂದರ್ಭದಲ್ಲಿ ಇದಕ್ಕೆ ಪ್ರತೀಕಾರವಾಗಿ ಗಿಡದ ಕೊಂಬೆಗಳನ್ನು ಹೆಚ್ಚಾಗಿ ಕೊಯ್ದು ಹಾಕುವದುಂಟು. ಕೆಲವು ಮಟ್ಟಿಗೆ ಹೀಗೆ ಮಾಡುವದರಿಂದ ಪ್ರಯೋಜನವುಂಟು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಹೀಗೆ ಕೊಯ್ದಿಡುವದಕ್ಕಾಗಿ ಹೆಚ್ಚು ಕೆಲಸ ಮಾಡಬೇಕಾಗುತ್ತದೆ; ಮತ್ತು ಇದರಿಂದ ಗಿಡಗಳ ಶಕ್ತಿಯೂ ಸಸ್ಯಾಹಾರವೂ ವ್ಯರ್ಥ ಪೋಲಾಗುತ್ತವೆ. ಈ ಎರಡು ಕಾರಣಗಳಿಂದಲೂ ಇದು ಖಂಡಿತವಾಗಿಯೂ ನಷ್ಟಕರವೆನ್ನಬಹುದು. ಇದೂ ಅಲ್ಲದೆ ಕೆಲವು ಸಮಯಗಳಲ್ಲಿ ಗಿಡಗಳು ಮಿತಿಮೀರಿ ಒತ್ತೊತ್ತಾಗಿ ಹೋಗುವದರಿಂದ ಎಷ್ಟೆಷ್ಟು ಹೆಚ್ಚಾಗಿ ಕೊಯ್ದಿಟ್ಟರೂ ಕೂಡ ಒದಗುವಷ್ಟು ಸ್ಥಳಕ್ಕೇ ಅವುಗಳನ್ನು ಅಡಗಿಸಿ ನಿಲ್ಲಿಸಲಾಗುವದಿಲ್ಲ. ಗಿಡಗಳು ಫಲ ಬಿಡುವದಕ್ಕೆ ಪ್ರತಿಯಾಗಿ ಮರವಾಗತೊಡಗುತ್ತವೆ. ಆಳವಾಗಿ ಅಗತೆಮಾಡಿ ಬೇರುಗಳನ್ನು ಅನೇಕವಾಗಿ ಕತ್ತರಿಸಿ ಗಿಡದ ಶಕ್ತಿಯನ್ನು ಕುಂದಿಸುವದರ ಮೂಲಕ ಅದು ಮರವಾಗುವ ಸಂಭವವನ್ನು ಕೆಲವು ಮಟ್ಟಿಗೆ ತಡೆಯಬಹುದು. ಆದರೂ ಕೆಲವು ಭೂಮಿಗಳಲ್ಲಿ ಈ ತಡೆಯೂ ಕೂಡ ಗಿಡಗಳನ್ನು ಎಷ್ಟುಬೇಕೋ ಅಷ್ಟೇ ಸ್ಥಳದಲ್ಲಿ ಅಡಗಿಸಲಾರದೆ ಹೋಗಿದೆ. ಗಿಡಗಳು ಫಲ ಬಿಡುವದಕ್ಕೆ ಪ್ರತಿಯಾಗಿ ಮರವಾಗುತ್ತಾ ಬಂದವು. ಈಗಿರುವ ಅನುಭವದಿಂದ, ಕುಡಲನ್ನು (knife) ಬಹು ಮಿತವಾಗಿ ಉಪಯೋಗಿಸಬೇಕೆಂಬದಾಗಿಯೂ ಎಲ್ಲೆಲ್ಲಿ ಗಿಡಗಳು ಹೆಚ್ಚಾಗಿ ಕೊಯ್ಸಿಕೊಳ್ಳುತ್ತವೆಯೋ ಅಲ್ಲಲ್ಲಿ ಅವು ಅತಿ ಒತ್ತೊತ್ತಾಗಿವೆ ಎಂಬದಾಗಿಯೂ ನಂಬಿಕೆ ಉಂಟಾಗಿದೆ. ಅಕ್ಕಪಕ್ಕದ ಗಿಡಗಳ ಕೊಂಬೆಗಳು ಒಂದಕ್ಕೊಂದು ತಗಲಿಕೊಳ್ಳದಂತೆ ಎಷ್ಟರ ಮಟ್ಟಿಗೆ ಬಿಟ್ಟಿರಬೇಕು ಎಂಬ ವಿಷಯದಲ್ಲಿ ಈಗ ಏನು ಹೇಳುವದೂ ಪ್ರಯಾಸವಾಗಿದೆ. ಈ ವಿಚಾರವು ಗಿಡಗಳಿಗೆ ಯಾವದು ಬಹಳ ಒಳ್ಳೆಯದು ಎಂಬ ವಿಚಾರವನ್ನು ಒಳಕೊಂಡಿರುವದು ಮಾತ್ರವೇ ಅಲ್ಲದೆ ಭೂಮಿಯ ಮೇಲ್ಮೆಗೆ ಯಾವದು ಒಳ್ಳೆಯದು ಎಂಬ ವಿಚಾರವನ್ನೂ—ಒಳಕೊಂಡಿದೆ. ಭೂಮಿಯ ಸ್ಥಿತಿಯನುಗುಣವಾಗಿ ಬೆಳೆಯ ಸ್ಥಿತಿಯು ಹೆಚ್ಚುಕಡಿಮೆಯಾಗುವದು ವಿದಿತವಾಗಿಯೇ ಇದೆ. ಗಿಡಗಳ ವಿಷಯದಲ್ಲಿ ನೋಡಿದರೆ ನೆರೆಹೊರೆ ಗಿಡಗಳ ಕೊಂಬೆಗಳು ಸೋಕದಂತೆ ದೂರ ದೂರವಾಗಿರುವದೇ ಅವುಗಳಿಗೆ ಬಹುಶಃ ಒಳ್ಳೆಯದೆಂದು ತೋರುತ್ತದೆ. ನೆಲದ ಲಗು ಬಿಗಿಯು (Mechanical Condition) ವಿಷಯದಲ್ಲಿ ನೋಡಿದರೆ ಗಿಡಗಳು ಎಷ್ಟೆಷ್ಟು ಒತ್ತೊತ್ತಾಗಿದ್ದರೆ ಅಷ್ಟು ಅಷ್ಟು ಒಳ್ಳೆಯದೆಂದು ಖಂಡಿತವಾಗಿಯೇ ಹೇಳಬಹುದಾಗಿ ಕಾಣುತ್ತದೆ. ಅವು ಒತ್ತಾಗಿದ್ದರೆ ನೆಲಕ್ಕೆ ಹೆಚ್ಚು ನೆರಳೂ ದೊರಕುತ್ತದೆ; ಹೆಚ್ಚು ತರಗು ಹೊದಿಕೆಯೂ ಸಿಕ್ಕುತ್ತದೆ; ಗರಿಕೆ ಹುಲ್ಲಿನ ಕಾಟವೂ ಕೂಡಿದಮಟ್ಟಿಗೆ ಕಡಮೆಯಾಗುತ್ತದೆ. ಈ ಕೊನೆಯಲ್ಲಿ ಹೇಳಿದ ವಿಷಯಗಳಿಂದ ಉಂಟಾಗುವ ಪ್ರಯೋಜನವನ್ನು (ಜನರು) ಇನ್ನೂ ಸಂಪೂರ್ಣವಾಗಿ ತಿಳಿದುಕೊಂಡಿಲ್ಲ. ಆದರೂ ಅವುಗಳಿಂದಾಗುವ ಪ್ರಯೋಜನವನ್ನು ಅಷ್ಟಿಷ್ಟೆಂದು ಹೇಳಲಾಗುವದಿಲ್ಲ. ಗಿಡಗಳ ಸಂಖ್ಯೆಯು ಹೇಗೆ ಹೇಗೆ ಕಡಿಮೆಯಾಗುತ್ತಾ ಬರುವದೋ ಹಾಗೆ ಹಾಗೆ ಗಿಡದ ಫಲವೂ ಹೆಚ್ಚುತ್ತಾ ಬಂದರಲ್ಲವೆ ಒಂದು ಎಕರೆ ನೆಲದ ಉತ್ಪತ್ತಿಯು ಒಂದೇ ಸಮವಾಗಿರಬಹುದು. ಒಂದು ಭೂಮಿಯಲ್ಲಿ ಅತ್ಯುತ್ತಮವಾದ ಪ್ರತಿ ಫಲವುಂಟಾಗುವಂತೆ ಗಿಡಗಳನ್ನು ನೆಡಲು ಸರಿಯಾದ ದೂರವೇನು ಎಂಬ ವಿಷಯವು, (ಅದಕ್ಕೆ ಸಂಬಂಧಪಟ್ಟ ವಿಷಯವನ್ನೆಲ್ಲಾ ಪರ್ಯಾಲೋಚನೆ ಮಾಡುವಲ್ಲಿ) ಪರೀಕ್ಷೆಗಳಿಂದಲೇ ವ್ಯಕ್ತವಾಗತಕ್ಕದಾಗಿದೆ. ಕೆಲವು ಸ್ಥಳಗಳಲ್ಲಿ ಕಾಫಿಯು ಅತಿಯಾಗಿ ಒತ್ತೊತ್ತಾಗಿದೆ ಎಂಬುದನ್ನು ಅವು ವ್ಯಕ್ತಪಡಿಸಿವೆ. ಆದರೆ ಇಷ್ಟು ಮಾತ್ರದಿಂದಲೇ ಕಾಫಿಯು ಎಲ್ಲಾ ಕಡೆಗಳಲ್ಲಿಯೂ ಅತಿ ಒತ್ತೊತ್ತಾಗಿದೆಯೆಂದು ಭಾವಿಸುವದು ಅಪಾಯಕರವಾದ ಪ್ರಮಾದವು. ಯಾಕೆಂದರೆ ಕಾಫಿಯು ಸರ್ವಮಾನ್ಯವಾಗಿ ಅತಿ ಒತ್ತೊತ್ತಾಗಿದೆ ಎಂದು ಸಹ ಅವು ದೃಢಪಡಿಸಿಲ್ಲ, ಒಟ್ಟೇನು; ಮರವನ್ನು ಕಡಿದುಹಾಕುವದಕ್ಕಿಂತ ಬೆಳಸುವದು ಕಷ್ಟ; ಆದ್ದರಿಂದ ಈ ವಿಧವಾದ ಪರೀಕ್ಷೆಯನ್ನು ಮಿತಿಮೀರಿ ನಡಿಸುವದು ವಿವೇಕವಲ್ಲವೆಂದು ಕಾಣುತ್ತದೆ.

ತೂತು ಕೊರೆಯುವ ಹುಳುಗಳು.—ಗಿಡಗಳು ಸಾಧಾರಣವಾಗಿ ಈಗಿರುವದಕ್ಕಿಂತಲೂ ಹೆಚ್ಚು ದೂರದಲ್ಲಿದ್ದರೆ ಓಟೆ ಹುಳುಗಳಿಂದ ಅವುಗಳಿಗೆ ಹೆಚ್ಚು ಅಪಾಯವಾಗುವ ಭೀತಿಯುಂಟೆಂದು ಅನೇಕರು ಅಭಿಪ್ರಾಯ ಪಡುತ್ತಾರೆ. ಗಿಡಗಳನ್ನು ಕಿತ್ತು ಹಾಕಿದ ತರುಣದಲ್ಲಿ ಹೀಗಾದರೂ ಆಗಬಹುದು. ಆದರೆ (ಗಿಡಗಳು ಬಲವಾಗಿ ಬೆಳೆದು ಅವುಗಳನ್ನು ಹಕ್ಕಲಾಗಿಸುವದು ಅವಶ್ಯಕವೆಂದು ತಿಳಿದುಬಂದು ಹಾಗೆ ಮಾಡಿದ ಬಳಿಕ) ಅವುಗಳು ಹಾಗೆ ಒಂದೆರಡು ವರ್ಷ ಕಾಲ ಬೆಳೆದಮೇಲೆ ಅವು ತಮ್ಮ ತಾಳುಗಳಿಗೆ ಈ ಹುಳುಗಳಿಂದ (ಈಗ ಎಲ್ಲರೂ ಒಪ್ಪಿಕೊಂಡಿರುವಂತೆ ನಮಗೆ ತಿಳಿದಿರುವ ಈ ಹುಳುಗಳ ಜೀವನ ವೃತ್ತಾಂತವು ನಿಜವಾದ ಪಕ್ಷದಲ್ಲಿ) ಯಾವ ಬಾಧೆಯೂ ಉಂಟಾಗದಂತೆ ನೆಲಕ್ಕೆ ಸೋಕುವಹಾಗೆ ಬೆಳೆಯುವ ತಮ್ಮ ರೆಂಬೆಗಳಿಂದ ರಕ್ಷಿಸಿಕೊಳ್ಳುತ್ತವೆ. ಪಕ್ಕದ ಗಿಡವನ್ನು ಕಿತ್ತುಹಾಕಿದರೂ ಕೂಡ ಗಿಡದ ತಾಳು ತನ್ನ ರೆಂಬೆಗಳಿಂದ ತನ್ನನ್ನು ಮೊದಲಿಗಿಂತಲೂ ಚೆನ್ನಾಗಿ ಮುಚ್ಚಿಕೊಂಡು ರಕ್ಷಿಸಿಕೊಳ್ಳುತ್ತದೆ.

ಗೊಬ್ಬರಗಳು, ಉಳುಮೆ, ಜೀರುಗಳು, ರಂಪೆಗಳು.—ಕಾಫಿಯನ್ನು ದೂರ ದೂರವಾಗಿ ಪೈರು ಮಾಡುವ ವಿಚಾರದೊಡನೆ ಇವುಗಳನ್ನೂ ಇತರ ವಿಷಯಗಳನ್ನೂ ಹಲವುವೇಳೆ ವಿಚಾರ ಮಾಡುತ್ತಾರೆ. ಈ ಪ್ರಸ್ತಾಪದಲ್ಲಿ ಇವುಗಳ ವಿಷಯವಾಗಿ ಗೌರವಾರ್ಹವಾದ ಯಾವದಾದರು ಅಭಿಪ್ರಾಯವನ್ನು ಹೇಳುವದಕ್ಕೆ ಮೊದಲು ಈಗ ನಡದಿರುವದಕ್ಕಿಂತಲೂ ವಿಶೇಷವಾಗಿ ಪರೀಕ್ಷೆಯನ್ನು ನಡಿಸಬೇಕು. ಒಂದು ಎಕರೆ ಭೂಮಿಯಲ್ಲಿ ಮೊದಲಿನಷ್ಟ ಕಾಫಿಯು ಉತ್ಪತ್ತಿಯಾಗಬೇಕೆಂದು ನಿರೀಕ್ಷಣೆ ಇದ್ದಲ್ಲಿ ಅದಕ್ಕೆ ಹಾಕಬೇಕಾದ ಗೊಬ್ಬರಕ್ಕೂ ಅದರಲ್ಲಿ ನೆಟ್ಟಿರುವ ಕಾಫಿಗಿಡಗಳೊಂದೊಂದಕ್ಕೆ ನಡುವೆ ಇರುವ ದೂರಕ್ಕೂ ಏನು ಸಂಬಂಧವೋ ನನಗೆ ತಿಳಿಯದು. ಗಿಡಗಳು ದೂರ ದೂರವಾಗಿದ್ದಲ್ಲಿ ಕೊತ್ತುವದು ಒಂದು ವಿಧದಲ್ಲಿ ಸುಲಭವಾದರೂ ಅವುಗಳ ಕೊಂಬೆಗಳು ಹೆಚ್ಚು ಹೆಚ್ಚಾಗಿ ನೆಲಕ್ಕೆ ಬಾಗಿಕೊಳ್ಳುವದರಿಂದ ಮತ್ತೊಂದು ವಿಧದಲ್ಲಿ ಕೊತ್ತುವುದು ಹೆಚ್ಚು ಶ್ರಮವಾಗುತ್ತದೆ. ಇದೂ ಅಲ್ಲದೆ ಕಾಫೀ ಗಿಡಗಳು ನೆಲವನ್ನು ಮುಚ್ಚಿಕೊಳ್ಳುವಷ್ಟು ಒತ್ತೊತ್ತಾಗಿದ್ದರೆ ಕೆಳಗಿನಲ್ಲಿ ನಿರೂಪಣೆಯಾದಂತೆ, (ಕನಿಷ್ಟಪಕ್ಷ) ನೆಲವನ್ನು ಕೊತ್ತುವದಾದರೂ ಕೂಡ ಅನವಶ್ಯಕವಾಗುತ್ತದೆ. ಜಿಗಳು ತೆಗಿಯುವದರಿಂದ ವಿಶೇಷವಾದ ಪ್ರಯೋಜನ ಉಂಟಾಗಿದೆ ಎಂದರೆ ಮೇಲೆ ತೆಗೆದು ಹಾಕಿದ ಮಣ್ಣು ತರಗಿನ ಹೊದಿಕೆಯಂತೆಯೇ ಕೆಲಸ ಮಾಡಿರಬಹುದೆಂದು ಹೇಳಬಹುದೇವಿನಾ ಜಿಗಳಿಂದ ಇಂಥ ಪ್ರಯೋಜನವೇ ಉಂಟಾಗಿದೆ ಎಂದು ಹೇಳುವದು ಸುಲಭಸಾಧ್ಯವಲ್ಲ. ಜಿಗಳಿನ ಮಣ್ಣು, ಮೇಲು ಹೊದಿಕೆಯಂತೆ ಇದ್ದುಕೊಂಡು ಕೆಲಸ ಮಾಡಿ ಹೀಗಾಯಿತೆಂದು ಹೇಳುವ ಪಕ್ಷಕ್ಕೆ ಅಲ್ಲಿ ಒಂದು ವೇಳೆ ಸ್ವಭಾವವಾದ ತರಗು ಹೊದಿಕೆ ದೊರೆತಲ್ಲಿ ಅದು ಜಿಗಳಿನಿಂದ ತೆಗೆದುಹಾಕಿದ ಮಣ್ಣಿಗಿಂತಲೂ ಉತ್ತಮವಾಗಿ ಕೆಲಸ ಮಾಡುವದೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಹೀಗೆ ಜಿಗಳು ತೆಗೆಯುವದರಿಂದ ಪ್ಲಾಂಟರು ತತ್ಕಾಲದಲ್ಲಿ ಇದ್ದ ತರಗು ಹೊದಿಕೆಯನ್ನು ಕಳದುಕೊಳ್ಳುವದು ಮಾತ್ರವೇ ಅಲ್ಲದೆ ನೆಲನನ್ನು ಹಳ್ಳ ತಿಟ್ಟಾಗಿ ಮಾಡಿ ತನ್ಮೂಲಕ ಕೆಲವು ಕಾಲದವರೆಗೂ ತರಗು ಹೊದಿಕೆಯು ಒಂದೇ ಸಮವಾಗಿ ಹರಡಿಕೊಳ್ಳುವದನ್ನು (ಹೀಗೆ ಇರುವದು ಬಹು ಅವಶ್ಯಕ) ತಪ್ಪಿಸುತ್ತಾನೆ. ನೆಲದಮೇಲೆ ನೀರಿನ ಪ್ರವಾಹದಿಂದ ಹೊಡದುಕೊಂಡುಹೋಗುವ ಎಕ್ಕಲನ್ನು ತಡೆಯುವಂತೆ ಹೀಗೆ ಜಿಗಳು ತೆಗೆದರೆ ಅವುಗಳಿಂದುಂಟಾಗುವ ಪ್ರಯೋಜನಗಳನ್ನು ಸುಲಭವಾಗಿ ವ್ಯಕ್ತ ಪಡಿಸಬಹುದು. ಪ್ರಕೃತಸ್ಥಿತಿಯಲ್ಲಿ ಯಾವದಾದರೂ ಒಂದು ತೋಟದಲ್ಲಿ ಜಿಗಳಿನಿಂದ ವಾಸ್ತವವಾಗಿಯೂ ಪ್ರಯೋಜನ ಉಂಟಾಗುತ್ತಿದ್ದರೆ ಉತ್ತಮವೇ ಆಯಿತು. ಈ ಪ್ರಯೋಜನದ ಕಾರಣವನ್ನು ಕಂಡು ಹಿಡಿದು ತನ್ಮೂಲಕ ವಿವೇಕವಾಗಿ ಜಿಗಳನ್ನು ಉಪಯೋಗಿಸಿಕೊಳ್ಳುವ ಮಾರ್ಗವನ್ನು ನಾವು ಕಂಡು ಹಿಡಿಯುವದು ಸಾಧ್ಯವಾದೀತೆಂದು ಮನಃಪೂರ್ವಕವಾಗಿ ಹಾರೈಸುತ್ತೇನೆ. ಯಾಕಂದರೆ ಎಲ್ಲಾ ಸನ್ನಿವೇಶಗಳಲ್ಲಿಯೂ ಸಫಲವಾಗುವಂತೆ ಜಿಗಳನ್ನು ತೆಗೆಯುವದು ಸಾಧ್ಯವಲ್ಲವೆಂದು ತೋರುತ್ತದೆ.

ಫಲವತ್ತಾಗಿ ಮಾಡುವ ಗೊಬ್ಬರ ಮುಂತಾದ ಪದಾರ್ಥಗಳು.—ಮೈಸೂರು ಸೀಮೆಯ ರೈತನು ತನಗೆ ಗೊಬ್ಬರದಿಂದ ಬಹಳ ಪ್ರಯೋಜನ ಉಂಟೆಂಬ ಅಂಶವನ್ನು ಚೆನ್ನಾಗಿ ಬಲ್ಲನು. ಅವನು ದನದ ಗೊಬ್ಬರವನ್ನು ಬಹಳ ಮೇಲಾದ ಗೊಬ್ಬರವೆಂದು ತಿಳಿದುಕೊಂಡಿದ್ದಾನೆ; ಮೇಲೆಯೂ ಹೊಂಗೆ ಯಲೆ ಹೊಂಗೆ ಹೂ ಮೊದಲಾದ ಸ್ವಾಭಾವಿಕವಾದ ಕೆಲವು ವಸ್ತುಗಳನ್ನು ಗೊಬ್ಬರಕ್ಕಾಗಿ ಸೇಖರ ಮಾಡುತ್ತಾನೆ. ಅವನು ಉತ್ತನೆಯಾದ ತನ್ನ ಗದ್ದೆಗಳಿಗೆ (ಮುಖ್ಯವಾಗಿ ಅಡಕೆ ಪೈರುಗಳಿಗೆ) ಒಳ್ಳೆಯ ಗೊಬ್ಬರವಾಗುವದೆಂಬ ನಂಬಿಕೆಯಿಂದಲೂ ಉರುಳಿದ ನೀರಿನಿಂದ ಮಣ್ಣು ಕೊಚ್ಚಿಹೋದ ಅಡಿಕೆ ಸಸಿಯ ಬೇರುಗಳನ್ನು ಮುಚ್ಚುವದಕ್ಕೆ ಒದಗುತ್ತದೆಯಂದೂ (ಎಣಿಸಿ) ಕಾಡಿನಲ್ಲಿ ದೊರಕುವ ಗೋಡನ್ನಾಗಲಿ ಅಥವಾ ಬಿಟ್ಟಿಯಾಗಿ ಸಿಕ್ಕುವ ಬೇರೆ ಗೋಡನ್ನಾಗಲಿ ಸಾಗಹಾಕುತ್ತಾನೆ. ಇನ್ನು ಸ್ವಲ್ಪ ಹೆಚ್ಚು ತಿಳುವಳಿಕೆ ಯುಳ್ಳವನಾಗಿಯೂ ಇನ್ನು ಸ್ವಲ್ಪ ಪುಷ್ಟನಾಗಿಯೂ ಇರುವ ರೈತನು ನಾನಾ ವಿಧವಾದ ಹಿಂಡಿಗಳನ್ನು ಅವುಗಳಿಗಿಂತ ಸ್ವಲ್ಪ ಮಿತವಾಗಿ ಮೂಳೆಯ ಪುಡಿಯನ್ನೂ ಗೊಬ್ಬರವಾಗಿ ಉಪಯೋಗಿಸುತ್ತಾನೆ. ಪ್ಲಾಂಟರುಗಳು ವಿನಾ ಇತರರು ಮಾರಾಟದಲ್ಲಿರುವ ಬೇರೆ ಗೊಬ್ಬರಗಳ ಸಂಗತಿಯನ್ನೇ ಅರಿಯರೆನ್ನಬಹುದು. ಕೊನೆಯಪಕ್ಷ ಅವುಗಳನ್ನು ಸುತರಾಂ ಉಪಯೋಗಿಸುವದಿಲ್ಲವೆಂದಾದರೂ ಹೇಳಬಹುದು.

ಸಸ್ಯಾದಿಗಳಿಗೂ (ಗಿಡ ಗಂಟಿಗಳಿಗೂ) ಜೀವಿಗಳ ಹಾಗೆಯೇ ಆಹಾರಬೇಕು; ಆದರೆ ಅವುಗಳ ಆಹಾರದ ಜಾತಿ ಮಾತ್ರ ಬೇರೆ. ನೆಲವು, ಬೇರೆ ಎಷ್ಟೋ ವಿಧವಾದ ಆಶ್ರಯವಾಗಿರುವದಲ್ಲದೆ ಸಸ್ಯಾಹಾರದ ಉಗ್ರಾಣವಾಗಿಯೂ ಇದೆ. ಈ ಉಗ್ರಾಣದಿಂದ ತೆಗೆದುಕೊಂಡ ಸಸ್ಯಾಹಾರಕ್ಕೆ ಪ್ರತಿಯಾಗಿ ಸಸ್ಯಾಹಾರವನ್ನು ಪುನಃ ತಂದು ತುಂಬದಿದ್ದರೆ ಇತರ ಉಗ್ರಾಣಗಳಂತೆಯೇ ಇದೂ ಕೆಲವು ಕಾಲಕ್ಕೆ ಬರಿದಾಗಿ ಹೋಗುತ್ತದೆ. ಹೀಗೆ ತಂದು ತುಂಬುವ ಸಸ್ಯಾಹಾರಕ್ಕೆ ಗೊಬ್ಬರವೆಂದು ಹೆಸರು. ಹಲವು ಜಾತಿಯ ಗೊಬ್ಬರಗಳಲ್ಲಿ ಎಲ್ಲಿಯೋ ಒಂದೆರಡು ಜಾತಿಯವು ಮಾತ್ರ ಸಸ್ಯದ ಬೆಳವಣಿಗೆಗೆ ಬೇಕಾದ ಎಲ್ಲಾ ವಿಧವಾದ ಆಹಾರ ಸಾಮಗ್ರಿಯನ್ನು ಒಳಕೊಂಡಿರುತ್ತವೆ. ಅನೇಕವಾಗಿ ಭೂಮಿಗಳು ಸಸ್ಯಗಳಿಗೆ ಅಲ್ಪ ಸ್ವಲ್ಪವಾಗಿ ಬೇಕಾಗಿರುವ ಕಬ್ಬಿಣವೇ ಮೊದಲಾದ ಪದಾರ್ಥಗಳನ್ನು ವಿಶೇಷವಾಗಿ-ಎಂದರೆ ಕಾರ್ಯತಃ ಅಪರಮಿತವಾಗಿ-ಒಳಕೊಂಡಿರುವದರಿಂದ ನಾವು ಗೊಬ್ಬರದ ವಿಷಯವಾಗಿ ಮಾತನಾಡುವಾಗ ಈ ವಿಧವಾದ ಸಸ್ಯಾಹಾರದ ವಿಷಯವಾಗಿ ಪ್ರಸ್ತಾಪಿಸಬೇಕಾದುದೇ ಇಲ್ಲ. ಸಾಮಾನ್ಯವಾಗಿ ಎರಡು ಮೂರು ಜಾತಿಯ ಸಸ್ಯಾಹಾರಗಳು ಭೂಮಿಯಲ್ಲಿ ಬಹಳ ಮಿತಿಯಾಗಿ ದೊರಕುತ್ತವೆ; ಇವುಗಳನ್ನು ಮಾತ್ರ ಅವಶ್ಯಕ ಬಿದ್ದಾಗ ಗೊಬ್ಬರದ ರೂಪವಾಗಿ ಹಾಕಲು ನಾವು ಸಿದ್ಧವಾಗಿರಬೇಕು. ನೈಟ್ರೋಜನ್, ಫಾಸ್ಫರಿಕ್ ಆಸಿಡ್, ಪೊಟಾಷ್, ಸುಣ್ಣ ಎಂಬುವೇ ಈ ಪದಾರ್ಥಗಳು. ಇವುಗಳನ್ನು ರಸಾಯನ ಶಾಸ್ತ್ರಜ್ಞರು (Chemists) ನೆಲದಿಂದಲೂ ಗೊಬ್ಬರದಿಂದಲೂ ಬೇರ್ಪಡಿಸಬಲ್ಲರು; ಆದುದರಿಂದ ಇವರು ಭೂಮಿಯಲ್ಲಿ ಯಾವ ಪದಾರ್ಥ ಸಾಲದು; ಒಳ್ಳೆಫಲ ಬರಬೇಕಾದರೆ ಯಾವ ವಿಧವಾದ ಗೊಬ್ಬರವನ್ನು ಹಾಕಬೇಕು ಎಂಬುದನ್ನು ಸ್ವಲ್ಪಮಟ್ಟಿಗೆ ನಮಗೆ ತಿಳಿಸಬಲ್ಲರು. ಯಾಕಂದರೆ ಎಲ್ಲಾ ಭೂಮಿಯು ಒಂದೇವಿಧವಾಗಿಲ್ಲಾ; ಒಂದು ನೆಲದಲ್ಲಿ ಯಾವ ಸಸ್ಯಾಹಾರವಿಲ್ಲವೊ ಅದೇ ಸಸ್ಯಾಹಾರವು ಇನ್ನೊಂದು ತಾಕು ನೆಲದಲ್ಲಿ ತತ್ಕಾಲದ ಉಪಯೋಗಕ್ಕೆ ಸಾಕಾದಷ್ಟು ಇರಬಹುದು. ಗೊಬ್ಬರಗಳೂ ಕೂಡ ಈ ಪದಾರ್ಥಗಳನ್ನೆಲ್ಲಾ ಒಂದೇಸಮವಾಗಿ ಒಳಕೊಂಡಿಲ್ಲ. ಒಂದು

ಜಾತಿಯ ಗೊಬ್ಬರವು ಒಂದು ವಿಧವಾದ ಸಸ್ಯಾಹಾರವನ್ನು ಸಮೃದ್ಧಿಯಾಗಿ ಒದಗಿಸಬಹುದು ; ಇನ್ನೊಂದು ಇನ್ನೊಂದು ವಿಧವಾದ ಆಹಾರವನ್ನು ಒದಗಿಸಬಹುದು ಒಂದು ವಿಧವಾದ ಗೊಬ್ಬರವು ಒಂದು ಭೂಮಿಯಲ್ಲಿಲ್ಲದಿದ್ದ ಸಸ್ಯಾಹಾರವನ್ನು ಒದಗಿಸಿ ಅಲ್ಲಿನ ಪೈರು ಹುಲುಸಾಗುವಂತೆ ಮಾಡಬಹುದು. ಅದೇ ಗೊಬ್ಬರವನ್ನು ಬೇರೆ ಸಸ್ಯಾಹಾರ ಬೇಕಾದ ಇನ್ನೊಂದು ಭೂಮಿಗೆ ಎಷ್ಟು ಸಮೃದ್ಧಿಯಾಗಿ ಹಾಕಿದರೂ ಕೂಡ ಅದು ಅಲ್ಲಿಯ ಪೈರನ್ನು ಹುಲುಸಾಗಿ ಮಾಡಲಾರದೆ ಹೋಗಬಹುದು. ಇದರಿಂದಲೂ ಇನ್ನೂ ಇತರ ಕಾರಣಗಳಿಂದಲೂ, ಎಲ್ಲೆಲ್ಲಿ ಕೃಷಿರಸಾಯನಿಕರು ಕೆಲಸ ಮಾಡಿಲ್ಲವೋ ಆಯಾ ದೇಶಗಳಲ್ಲೆಲ್ಲಾ, ಈ ರೀತಿಯಾದ ವಿಜಾತೀಯವಾದ ಗೊಬ್ಬರಗಳ ಉಪಯೋಗವು ವಿಶೇಷವಾಗಿ ಬಳಕೆಯಲ್ಲಿಲ್ಲ. ಅಂತಹ ದೇಶಗಳಲ್ಲಿ, ಯಾವ ಗೊಬ್ಬರವು ಸಾಮಾನ್ಯವಾದ ಭೂಮಿಯಲ್ಲಿಲ್ಲದಿರಬಹುದಾದ ಸಸ್ಯಾಹಾರಗಳನ್ನೆಲ್ಲಾ ಒದಗಿಸತಕ್ಕದ್ದೋ ಆ ಗೊಬ್ಬರವೇ ಎಲ್ಲರಿಗೂ ಇಷ್ಟವಾದ್ದಾಗಿರುತ್ತದೆ. ಹೀಗೆ ಎಲ್ಲಾ ವಿಧವಾದ ಸಸ್ಯಾಹಾರವನ್ನೂ ಒದಗಿಸುವ ಗೊಬ್ಬರಗಳನ್ನು ಒಂದು ಅಥವಾ ಎರಡು ವಿಧವಾದ ಸಸ್ಯಾಹಾರಗಳನ್ನು ಮಾತ್ರ ಒದಗಿಸುವ ಗೊಬ್ಬರಗಳಿಂದ ಬೇರ್ಪಡಿಸುವದಕ್ಕಾಗಿ ಅವುಗಳಿಗೆ (ಅಂದರೆ ಎಲ್ಲಾ ವಿಧವಾದ ಸಸ್ಯಾಹಾರಗಳನ್ನು ಒದಗಿಸುವ ಗೊಬ್ಬರಗಳಿಗೆ) 'ಸಂಪೂರ್ಣವಾದ ಗೊಬ್ಬರ' ಗಳೆಂದು ಹೆಸರಿಡಬಹುದು. ಅನೇಕವಾಗಿ ದನ ಕರು ಕುರಿ ಮೊದಲಾದವುಗಳ ಗೊಬ್ಬರವೇ ಸಂಪೂರ್ಣವಾದ ಗೊಬ್ಬರಗಳು. ಇಂಥವುಗಳಲ್ಲಿ ಸಸ್ಯಾಹಾರಕ್ಕೆ ಬೇಕಾದ ಎಲ್ಲಾ ಪದಾರ್ಥಗಳೂ ಪ್ರಾಯಶಃ ಅಲ್ಪ ಸ್ವಲ್ಪವಾಗಿ ಇದ್ದೇ ಇರುತ್ತವೆ. ಆದರೆ ಅವುಗಳೆಲ್ಲಾ ಯಾವದಾದರೂ ಒಂದು ಹೊಲದ ಪೈರಿಗೆ ಯಾವ ಯಾವ ಪ್ರಮಾಣದಲ್ಲಿ ಬೇಕೋ ಅದೇ ಪ್ರಮಾಣದಲ್ಲಿಯೇ ಸರ್ವದಾ ಇರುವದಿಲ್ಲ. ಆದಪ್ರಯುಕ್ತ ಇಂಥಾ ಸಂಪೂರ್ಣವಾದ ಗೊಬ್ಬರಕ್ಕೆ ಅಸಂಪೂರ್ಣವಾದ ಗೊಬ್ಬರಗಳನ್ನು ಅಲ್ಪ ಸ್ವಲ್ಪವಾಗಿ ಸೇರಿಸುವದರಿಂದ ವಿಶೇಷವಾಗಿ ಪ್ರಯೋಜನವಾಗಬಹುದು. ಅದು ಹೇಗೆಂದರೆ :—ಒಂದು ತಾಕು ಭೂಮಿಯಲ್ಲಿ ರಂಜಕ ಧೃತಿ (Phosphoric acid) ಯು ವಿಶೇಷವಾಗಿ ಕಡಿಮೆಯಾಗಿದ್ದರೆ ಅದಕ್ಕೆ ಸೇಕಡ 20 ರಷ್ಟು ರಂಜಕ ಧೃತಿಯುಳ್ಳದ್ದಾಗಿರುವ ಒಂದು ಪೌನು ತೂಕ ಮೂಳೆ ಪುಡಿಯನ್ನು ಹಾಕಿದರೆ ಆ ಪುಡಿಯು ಸೇಕಡ ·4 ರಷ್ಟು ರಂಜಕ ಧೃತಿಯುಳ್ಳ ದನದ ಗೊಬ್ಬರಕ್ಕಿಂತ ಐವತ್ತರಷ್ಟು ಪ್ರಯೋಜನಕಾರಿಯಾಗಿರುತ್ತದೆ. ಅಥವಾ ಒಂದು ತಾಕು ಭೂಮಿಯಲ್ಲಿ ಪೊಟಾಷ್ ಎಂಬ ಕ್ಷಾರವು (Potash) ವಿಶೇಷವಾಗಿ ಕಡಿಮೆಯಾಗಿದ್ದರೆ ಅದಕ್ಕೆ ಸೇಕಡ 5 ರಷ್ಟು ಪೊಟಾಷ್ ಉಳ್ಳ ಒಂದು ಪೌನುತೂಕ ಬೂದಿಯನ್ನು ಹಾಕಿದರೆ ಆ ಬೂದಿಯು ಸೇಕಡ ·2 ರಷ್ಟು ಪೊಟಾಷೊಡನೆ ·4 ರಷ್ಟು ರಂಜಕ ಧೃತಿಯನ್ನೂ ·5 ನೈಟ್ರೊಜನನ್ನೂ ಉಳ್ಳ ಗೊಬ್ಬರದ 25 ಪೌನಿನಷ್ಟು ಪ್ರಯೋಜನಕಾರಿಯಾಗುತ್ತದೆ ; ಯಾಕೆಂದರೆ ಕೊನೆಯವು ಭೂಮಿಗೆ ಅನವಶ್ಯಕವಾದ್ದರಿಂದ ಅವು ಇದ್ದರೂ ಕಾರ್ಯತಃ ನಿಷ್ಪ್ರಯೋಜನವಾಗಿವೆ. ಹೀಗಲ್ಲದೆ ಭೂಮಿಯು ರಂಜಕ ಧೃತಿ, ಪೊಟಾಷಗಳಲ್ಲಿ ಹೇಗೋ ಹಾಗೆಯೇ ನೈಟ್ರೊಜನಲ್ಲಿಯೂ ಕಡಿಮೆಯಾಗಿದ್ದರೆ ಬರೀ ಬೂದಿಯನ್ನಾಗಲೀ ಬರೀ ಮೂಳೆಯ ಪುಡಿಯನ್ನೇ ಆಗಲಿ ಎಷ್ಟುಹಾಕಿದರೂ ಪ್ರಯೋಜನವಿಲ್ಲದೆ ಹೋಗುತ್ತದೆ. ಅಂಥ ಭೂಮಿಗೆ ಬೂದಿಯನ್ನು ಮೂಳೆ ಪುಡಿಯನ್ನೂ ಹಾಕುವುದುಮಾತ್ರವಲ್ಲದೆ ಹಿಂಡಿಯನ್ನೂ ಹಾಕಬೇಕು. ಇಂಥ ಸಂದರ್ಭದಲ್ಲಿ ಒಂದು ಪೌನು ತೂಕ ಮೂಳೆಯ ಪುಡಿಯನ್ನೂ ಎರಡು ಪೌನು ತೂಕ ಬೂದಿಯನ್ನೂ ನಾಲ್ಕು ಪೌನು ತೂಕ ಹಿಂಡಿಯನ್ನೂ ಸೇರಿಸಿದರೆ ಹಿಂದೆ ಹೇಳಿದ ಪದಾರ್ಥಗಳ 50 ಪೌನು ತೂಕ ದನದ ಗೊಬ್ಬರದಲ್ಲಿ ಎಷ್ಟು ಸಸ್ಯಾಹಾರವಿದೆಯೋ ಇವುಗಳಲ್ಲಿಯೂ ಅಷ್ಟು ಸಸ್ಯಾಹಾರ[illegible]ದೆ. ಆದ್ದರಿಂದ ದನದ ಗೊಬ್ಬರದಿಂದೊದಗುವ ಸಸ್ಯಾಹಾರವೆಲ್ಲಾ ಭೂಮಿಯಲ್ಲಿ ಕಡಿಮೆಯಾಗಿದ್ದಾಗಲೂ ಕೂಡ ನಾವು ಇಷ್ಟಬಂದರೆ ಬಹಳ ಮಟ್ಟಿಗೂ ದನದ ಗೊಬ್ಬರಕ್ಕೆ ಪ್ರತಿಯಾಗಿ ಇವುಗಳನ್ನೇ ಉಪಯೋಗಿಸಬಹುದು. ಇಲ್ಲವೇ ದನದ ಗೊಬ್ಬರದ ಕೂಡ ಮೇಲೆ ಹೇಳಿದ ಪದಾರ್ಥಗಳನ್ನು ಸೇರಿಸುವುದರಿಂದ ಹೆಚ್ಚಾಗಿ ಫಲವನ್ನು ಹೊಂದಬಹುದು. ಮೇಲೆ ಹೇಳಿದ ಗೊಬ್ಬರಗಳಿಗೆ ಪ್ರತಿಯಾಗಿ ಉಪಯೋಗಿಸಬಹುದಾದ ಇತರ ವಿಶೇಷ ಗೊಬ್ಬರಗಳು ಇವೆ ಎಂಬುದು ಗೊತ್ತೇ ಇದೆಯಷ್ಟೆ. ಬೂದಿಗೂ ಕೆಲವು ವೇಳೆ ಹಿಂಡಿಗೂ ಪ್ರತಿಯಾಗಿ ಕಡ್ಡಿಯುಪ್ಪನ್ನು (Salt petre ಪೆಟ್ಲುಪ್ಪು) ಉಪಯೋಗಿಸಬಹುದು. ಹಿಂಡಿಗೂ ಕೆಲವು ವೇಳೆ ಮೂಳೆಯ ಪುಡಿಗೂ ಪ್ರತಿಯಾಗಿ ಮೀನು ಗೊಬ್ಬರವನ್ನು ಉಪಯೋಗಿಸಬಹುದು. ಆದರೆ ಮೀನು ಗೊಬ್ಬರದಲ್ಲಿ ಮೂಳೆಯ ಪುಡಿಯಲ್ಲಿರುವಷ್ಟು ರಂಜಕ ಧೃತಿ ಇಲ್ಲ. ಹಿಂಡಿಗೆ ಪ್ರತಿಯಾಗಿ ರಕ್ತದ ಗೊಬ್ಬರವನ್ನು ಉಪಯೋಗಿಸಬಹುದು ; ಇದು ಹಿಂಡಿಗಿಂತಲೂ ಸಾರವಾದ್ದು. ಇವುಗಳೂ ಅಲ್ಲದೆ ಪರದೇಶದಿಂದ ಸಾಗಿಸಿತಂದ ಎಷ್ಟೋ ಗೊಬ್ಬರಗಳಿವೆ. ಅವುಗಳನ್ನೂ ಉಪಯೋಗಿಸಬಹುದು. ಹೀಗೆ ರೈತನು ತನಗೆ ಹೆಚ್ಚು ಗೊಬ್ಬರಬೇಕೆಂದು ಅಪೇಕ್ಷಿಸಿದರೆ ತನ್ನ ದನ ಕರುಗಳಿಂದ ಆಗುವ ಗೊಬ್ಬರ ಮಾತ್ರವೇ ಅಲ್ಲದೆ ಕ್ರಯಕ್ಕೆ ಸಿಕ್ಕುವ ಅನೇಕವಿಧವಾದ ಗೊಬ್ಬರಗಳೂ ದೊರಕುತ್ತವೆ ; ಇವುಗಳನ್ನು ಕೊಳ್ಳುವದಕ್ಕಾಗಿ ಹಣವನ್ನು ವೆಚ್ಚಮಾಡುವದು ಸಫಲವಾದ ವೆಚ್ಚವೇ ಸರಿ. ಆದರೂ ರೈತನು ಗೊಬ್ಬರವನ್ನು ಕೊಳ್ಳುವಾಗ ತಾನು ಇಂಥಾ ಗೊಬ್ಬರವನ್ನೇ ಕೊಳ್ಳುತ್ತೇನೆಂದು ತಿಳಿದಿರಬೇಕು ; ಯಾಕೆಂದರೆ ಒಂದೇ ಜಾತಿಯ ಗೊಬ್ಬರಗಳು ಕೂಡ ಗುಣದಲ್ಲಿ ಬಹುಮಟ್ಟಿಗೆ ಬೇರೆ ಬೇರೆಯಾಗಿರುತ್ತವೆ. ಈಯಂಶವು ಪರಿಶಿಷ್ಟದಲ್ಲಿ ರಸಾಯನಶಾಸ್ತ್ರ ರೀತ್ಯಾ ವಿಭಾಗ ಮಾಡಿಕೊಟ್ಟಿರುವ ಗೊಬ್ಬರಗಳ ಪಟ್ಟಿಯಲ್ಲಿ ನೋಡಿದರೆ ವಿಶದವಾಗಿ ಕಂಡು ಬರುತ್ತದೆ. (ಹೀಗೆ ಗೊಬ್ಬರಗಳು ಭಿನ್ನವಾಗುವ) ಕಾರಣ ರೈತನು ಗೊಬ್ಬರಕ್ಕೆ ಹಣ ಹಾಕುವಾಗಲೆಲ್ಲಾ ಅದರಲ್ಲಿರುವ ಅದರ ಗುಣ ನಿರ್ಧಾರಕವಾದ ಪದಾರ್ಥಗಳ ವಿಷಯದಲ್ಲಿ ಜಮೀನನ್ನು ತೆಗೆದುಕೊಳ್ಳಬೇಕು. (ಈ ದೇಶದ) ರೈತನು ಮೈಮುರಿಯ ದುಡಿದು ಗಳಿಸಿದ ಹಣವನ್ನು ಗೊಬ್ಬರಕ್ಕೆ ಹೆಚ್ಚಾಗಿ ಹಾಕುವಹಾಗಿಲ್ಲ. ಗೊಬ್ಬರವು ಇತರ ದೇಶದ ರೈತರಲ್ಲಿರುವದಕ್ಕಿಂತ ಇವನಲ್ಲಿ ಕಡಿಮೆಯಾಗಿಯೇ ಇರುತ್ತದೆ. ಇಲ್ಲಿನ ರೈತನು ದನ ಕರುಗಳ ಗೊಬ್ಬರವೇ ಬಲು ಮೇಲಾದ ಗೊಬ್ಬರವೆಂದೆಣಿಸಿಕೊಂಡಿದ್ದರೂ, ಮತ್ತು (ಒಂದು ಕಾಸೂ ಕೊಡದೆ ಸಿಕ್ಕುವ) ಹೊಂಗೆ ಯಲೆ ಹೊಂಗೆ ಹೂ ಮೊದಲಾದ ಕೆಲವು ಜಾತಿ ಗೊಬ್ಬರಗಳನ್ನು ಕೂಡ ಹಾಕಿದರೂ ಇವನು ಗೊಬ್ಬರಕ್ಕೆ ಇತರ ದೇಶದ ರೈತರು ಕಟ್ಟುವಷ್ಟು ಬೆಲೆ ಕಟ್ಟುವದು ಇಲ್ಲ. ಮೇಲೆಯೂ ಇವನು ದನ ಕರುಗಳ ಗೊಬ್ಬರಕ್ಕೆ ವಿಶೇಷವಾಗಿ ಬೆಲೆ ಕಟ್ಟಿದರೂ ಇವನು ಇದಕ್ಕೆ ಸಾಕಾದಷ್ಟು ಗಮನ ಕೊಡುವುದಿಲ್ಲ.

ದನ ಕರುಗಳ ಗೊಬ್ಬರ.—ಮೈಸೂರು ದೇಶದಲ್ಲಿ ಗೊಬ್ಬರವನ್ನು ಎರಡು ವಿಧವಾಗಿ ಸೇಖರ ಮಾಡುವ ಬಳಕೆ ಇದೆ. ಒಂದು ಪದ್ಧತಿಯ ಪ್ರಕಾರ ದನ ಕರುಗಳ ಕೊಟ್ಟಿಗೆಯ ಗೊಬ್ಬರವನ್ನು ದಿನವಹಿ ಎತ್ತಿ ಒಂದುಕಡೆ ಕೂಡಿಡುತ್ತಾರೆ ; ಇನ್ನೊಂ

ದು ಪದ್ಧತಿಯು ಮೇಲೆ ದನ ಕರುಗಳ ಕೊಟ್ಟಿಗೆಯು ಗೊಬ್ಬರವನ್ನು ಅಲ್ಲಿಯೇ ಬಿಟ್ಟಿರುತ್ತಾರೆ. ಈ ಎರಡು ಪದ್ಧತಿಯಲ್ಲಿಯೂ ದನಕರುಗಳಿಗೆ ವಿಶೇಷವಾಗಿ ಹುಲ್ಲನ್ನು ಹಾಕುವದಿಲ್ಲವಾದಕಾರಣ ಅವುಗಳ ಗಂಜಲವು ನೀರ ಪೋಲಾಗದಿದ್ದರೂ ಅನೇಕವಾಗಿ ಪೋಲಾಗಿ ಹೋಗುತ್ತದೆ. ಸಗಣಿ ಗಂಜಲಗಳ ಪರಿಮಾಣವೂ ಗುಣವೂ ಮೇವಿಗನುಗುಣವಾಗಿ ಭೇದವಾಗುವದು ಸಹಜವಾಗಿಯೇ ಇದೆ. ಆದರೆ ಸರಿಸುಮಾರಾಗಿ ನೋಡಿದರೆ ಬಳ್ಳಿ ಮೇವು ಮೇಯುವ ದನಗಳ ಗಂಜಳದಲ್ಲಿರುವ ಸಸ್ಯಾಹಾರವು ಮಿ॥ ಮಣ ಡ್ರಿಗ್ಗಾಡ್ ಎಂಬುವರು ನಾರ್ಮಂಡಿಯಲ್ಲಿ ಪರೀಕ್ಷಿಸಿ ನಿರ್ಣಯಿಸಿದಂತೆ ಸಗಣಿಯಲ್ಲಿರುವ ಸಸ್ಯಾಹಾರದಷ್ಟೆ ಇರುತ್ತದೆ. ಆದ್ದರಿಂದ ಗಂಜಳವನ್ನು ಕೂಡ ಹಾಕದೆ ಬಿಟ್ಟರೆ ಅರೆವಾಸಿ ಸಸ್ಯಾಹಾರವನ್ನೇ ಪೋಲು ಮಾಡಿದಂತಾಗುತ್ತದೆ; ವಸ್ತುತಃ ಅರೆವಾಸಿಗಿಂತಲೂ ಹೆಚ್ಚಾಗಬಹುದೆಂದು ಕಾಣುತ್ತದೆ. ಗುಣದ ವಿಷಯದಲ್ಲಿ ನೋಡಿದರೆ ಈ ನಷ್ಟವು ಇನ್ನೂ ಹಲವು ಮಡಿ ಹೆಚ್ಚಾಗಿರುತ್ತದೆ. ಬಳ್ಳಿ ಬಲಿತ ದನಗಳ ಗಂಜಳವನ್ನು ಹದವರಿತು (ನೀರು) ಬೆರಸಿ ಗೊಬ್ಬರದಂತೆ ಬಳಸಿದರೆ ಅದರ ಗುಣವು ಸಗಣಿಗೆ ನಾಕುಪಾಲು ಹೆಚ್ಚಾಗಿರುತ್ತದೆ. ಯಾಕಂದರೆ ಗಂಜಳದಲ್ಲಿರುವ ನೈಟ್ರೊಜನು ಸಸ್ಯಾದಿಗಳಿಗೆ ನೇರಾಗಿ ಸುಲಭವಾಗಿ ದೊರೆಯುತ್ತದೆ. ಸಗಣಿಯಲ್ಲಿ ಸ್ವಲ್ಪ ಬಳಸವಾಗಿ ಸಿಕ್ಕುತ್ತದೆ. ಗಂಜಳವನ್ನು ಕೂಡಹಾಕುವ ವಿಷಯದಲ್ಲಿ ಅನುಭವಸಿದ್ಧವಾದ ಒಂದು ಉದಾಹರಣೆಯನ್ನು ಕೊಟ್ಟರೆ ಈ ವಿಷಯವು ಮನಸ್ಸಿಗೆ ಚೆನ್ನಾಗಿ ನಾಟಬಹುದು. ನನಗೆ ಚೆನ್ನಾಗಿ ತಿಳಿದ ಒಂದು ಹೊಲದಲ್ಲಿ ಹಿಂದೆ ಅನೇಕವಾಗಿ ಪೋಲು ಮಾಡುತ್ತಿದ್ದ ಗಂಜಳವನ್ನೆಲ್ಲಾ ದನದ ಕೊಟ್ಟಿಗೆಗಳಲ್ಲಿ ಚೆನ್ನಾಗಿ ಕೂಡಿಹಾಕಿ ಗೊಬ್ಬರದಂತೆ ಉಪಯೋಗಿಸಿದ ಕಾರಣ ವ್ಯವಸಾಯಕ್ಕಾಗಿ ಒಂದು ಕಾಸು ಹೆಚ್ಚು ವೆಚ್ಚವಿಲ್ಲದೆಯೆ ಕಳೆದ ಹತ್ತು ವರ್ಷದ ಸರಾಸರಿ ಫಸಲು ಅದಕ್ಕೆ ಮುಂಚಿನ ಫಸಲಿನಗಿಂತಲೂ ಶೇಕಡಾ ಮುನ್ನೂರರಷ್ಟು ಹೆಚ್ಚಾಗಿದೆ. ಗಂಜಳವನ್ನು ಕೂಡಹಾಕುವದಕ್ಕೆ ಎರಡು ವಿಧವಾದ ಏರ್ಪಾಡು ಮಾಡಬಹುದು :— ನೀರು ನೆಲಕ್ಕೆ ಇಳಿದುಹೋಗದಂತೆ ದನ ಕರುಗಳ ಕೊಟ್ಟಿಗೆಯ ನೆಲವನ್ನು ಗಟ್ಟಿಮಾಡಿ ಗಂಜಳವನ್ನೆಲ್ಲಾ ಬಾನೆಗಳಿಗಾಗಲಿ ಅಥವಾ ನೀರು ಉನಿಯದಿರುವ ಹಳ್ಳಗಳಿಗಾಗಲಿ ಹರಿದುಬರುವಂತೆ ಮಾಡಿ ಕೂಡಿಡುವದು ಒಂದು ವಿಧ— ಇಲ್ಲವೆ ಈ ಗಂಜಳವನ್ನೆಲ್ಲಾ ಹೀರಿಕೊಳ್ಳುವಹಾಗೆ ನೆಲಕ್ಕೆ ಹುಲ್ಲು ಸೊಪ್ಪುಗಳನ್ನು ಹಾಸುವದು ಒಂದು ವಿಧ. ಮೊದಲನೆಯ ವಿಧವು ಯುರೋಪ್ ಖಂಡದ ಕೆಲವು ಭಾಗಗಳಲ್ಲಿ ಪ್ರಚಾರದಲ್ಲಿದ್ದರೂ ಇಲ್ಲಿಯ ಹವಾಕ್ಕೆ ಸರಿಹೋಗಲಾರದೆಂದು ತೋರುತ್ತದೆ. ಎರಡನೆ ವಿಧಾನರೀತ್ಯಾ ಗಂಜಳ ಹೀರುವದಕ್ಕಾಗಿ ನಾನಾ ವಿಧವಾದ ಪದಾರ್ಥಗಳನ್ನು ಎಂದರೆ— ಹುಲ್ಲು, ಒಣಮಣ್ಣು, ತರಗು, ಅಥವಾ ಒಣಕಡ್ಡಿ (Ferns) ಇವುಗಳನ್ನು ಉಪಯೋಗಿಸಬಹುದು. ಈಗ ಬದಗುವದಕ್ಕಿಂತಲೂ ಹೆಚ್ಚಾಗಿ ಮೇವು ಬಡಗುವವರೆಗೂ ಮೈಸೂರು ಸೀಮೆಯಲ್ಲಿ ದೊರಕುವ ಹುಲ್ಲುಕಡ್ಡಿಗಳು ಮುಖ್ಯವಾಗಿ ಮೇವಿಗಾಗಿಯೇ ಬೇಕಾಗುತ್ತವೆಯೇ ಹೊರತು ಬೇರೆ ಕೆಲಸಕ್ಕೆ ಸಾಲುವದಿಲ್ಲ. ಆದರೆ ಮಲನಾಡು ಪ್ರಾಂತ್ಯದ ಹಲವು ಬೆಟ್ಟದ ತುದಿಗಳು ಹೊರವಾಗಿ ಬೆಳೆದ ಒಂದು ವಿಧವಾದ ಹುಲ್ಲು ಹೊದಿಕೆಯಿಂದ ಮುಚ್ಚಿಹೋಗಿವೆ. ಈಗ ಅಡಿಗಡಿಗೆ ಮಾಡುವಂತೆ ಆ ಹುಲ್ಲನ್ನು ಸುಟ್ಟು ಹಾಕದೆ ಸಾಹಸಗಾರರಾದ ರೈತರು ಅದನ್ನು ಸೇಖರಿಸಿ ದನದ ಕೊಟ್ಟಿಗೆಯ ನೆಲಕ್ಕೆ ಹಾಸುವದಕ್ಕೆ ಉಪಯೋಗಿಸಿದರೆ ಬಹಳ ಒಳ್ಳೆಯದು. ಬೆಟ್ಟ ಸೀಮೆಗಳಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ಪದ್ಧತಿಯ ಮೇರೆ ಹುಲ್ಲನ್ನು ಹೊರೆ ಕಟ್ಟಿ ಅವುಗಳನ್ನು ಕೆಳಕ್ಕೆ ಉರುಳಿಸಬಹುದು. ಚೆ... ಒಣಗಿದ ಕಾಡು ಗೋಡನ್ನು ಕೂಡ ಹೀಗೆ ಉಪಯೋಗಿಸಬಹುದು. ಆದರೆ ಅದು ತೇವವಾಗಿದ್ದರೆ ಸ್ವಲ್ಪವೂ ಪ್ರಯೋಜನಕ್ಕೆ ಬರುವದಿಲ್ಲವೆಂಬುದು ಗೊತ್ತೇ ಇದೆ. ತೇವವಾಗದಂತೆ ಇಡಬೇಕಾದರೆ ಅದನ್ನು ಭೂಮಿಯ ಮಟ್ಟದಿಂದ ಆರು ಅಥವಾ ಹನ್ನೆರಡಂಗುಲ ಎತ್ತರದಲ್ಲಿರುವ ಚಪ್ಪರದಲ್ಲಿ ಇಡಬೇಕು. ಮಲೆನಾಡಿನಲ್ಲಿ ಕೆಲವು ಕಡೆ ಉಪಯೋಗಿಸುವಂತೆ ಹಸು ರೆಲೆಗಳನ್ನೂ ಕಡ್ಡಿಗಳನ್ನೂ ಉಪಯೋಗಿಸಿದರೆ ಅವುಗಳಿಂದ ನಿತ್ಯವೂ ಕಾಲುಕಸಬಳಿಯದ ಕೊಟ್ಟಿಗೆಗಳಲ್ಲಿ ಕಟ್ಟುವ ದನಗಳಿಗೆ ನಿಜವಾಗಿಯೂ ಅಲ್ಪಸ್ವಲ್ಪ ಸುಖ ಉಂಟಾಗುತ್ತದೆಯೇ ಹೊರತು ಅವುಗಳಿಂದ ದನ ಕರುಗಳ ಗಂಜಳವನ್ನು ಹೀರಿಕೊಳ್ಳುವ ಕೆಲಸವು ಏಷ್ಟುಮಾತ್ರವೂ ಸಾಗುವದಿಲ್ಲ. ತರಗುಗಳು ಗಂಜಳವನ್ನು ಹೀರಿಕೊಳ್ಳುವದರಲ್ಲಿ ಬಹಳ ಉಪಯೋಗವಾಗಿರುವದೂ ಅಲ್ಲದೆ ಹುಲ್ಲುಕಡ್ಡಿಗಳಂತೆ ಗೊಬ್ಬರಕ್ಕೆ ಬೇಕಾದ ಕೆಲವು ಪದಾರ್ಥಗಳನ್ನೂ ಒದಗಿಸುತ್ತವೆ. ಹಾಸನ ಡಿಸ್ಟ್ರಿಕ್ಟಿನಲ್ಲಿ ಮರದಿಂದುದುರಿದ ಮೇಲೆ ಕೂಡಿಹಾಕಿದ ತರಗೆಲೆಗಳನ್ನು ರಸಾಯನ ಶಾಸ್ತ್ರರೀತ್ಯಾ ವಿಭಾಗ ಮಾಡಿದ ಪಟ್ಟಿಯನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. ಈ ತರಗುಗಳು ಗಂಜಳವನ್ನು ಹೀರಿಕೊಳ್ಳಬೇಕಾದರೆ ಕೊಟ್ಟಿಗೆಗೆ ಹಾಸುವ ಇತರ ಪದಾರ್ಥಗಳಂತೆಯೇ ಚೆನ್ನಾಗಿ ಒಣಗಿರಬೇಕು.

ಗೊಬ್ಬರವು ಎಷ್ಟೆಷ್ಟು ಒಳ್ಳೆಯದಾದರೆ ಅದರ ವಿಷಯದಲ್ಲಿ ಅಷ್ಟಷ್ಟು ಎಚ್ಚರಿಕೆ ತೆಗೆದುಕೊಳ್ಳಬೇಕು. ನೀರಿನಲ್ಲಿ ಕರಗದ ಸಸ್ಯಾಹಾರವುಳ್ಳ ಗೊಬ್ಬರವು ಮಳೆನೀರಿನಲ್ಲಿ ತೋದುಹೋಗರೂ ಏನೂ ನಷ್ಟವಿಲ್ಲ. ಹಾಗಲ್ಲದೆ ವಿಶೇಷವಾಗಿ ನೀರಿನಲ್ಲಿ ಕರಗುವ ಸಸ್ಯಾಹಾರವುಳ್ಳ ಗೊಬ್ಬರವು ಮಳೆಯಲ್ಲಿ ತೋದುಹೋದರೆ ವಿಶೇಷವಾಗಿ ನಷ್ಟವಾಗುತ್ತದೆ. ತುಂಬಾ ಕಾಲ್ಲ ಸದೊಡನೆಯಾಗಲಿ ಅಥವಾ ಸೊಪ್ಪುಸದೆಗಳೊಡನೆಯಾಗಲಿ ಕಲೆತಿರುವ ಗೊಬ್ಬರಕ್ಕೆ ಅದರಲ್ಲಿಯೂ ಮುಖ್ಯವಾಗಿ ಹುಲ್ಲುಕಡ್ಡಿಗಳೊಡನೆ ಕಲೆತಿರುವ ಒಳ್ಳೆ ಗೊಬ್ಬರಕ್ಕೆ ಮೈಸೂರು ದೇಶದಲ್ಲಿ ಮಳೆಯ ನೆನೆತಕ್ಕಿಂತಲೂ ಮುಗ್ಗಿನಿಂದ (Fermentation) ಅಪಾಯ ಹೆಚ್ಚು. ಆದ್ದರಿಂದ ಗಂಜಳವನ್ನು ಕೂಡಿಡಬೇಕಾದರೆ ಅದನ್ನೆಲ್ಲಾ ಚೆನ್ನಾಗಿ ಹೀರಿಕೊಳ್ಳುವದಕ್ಕೂ ದನಕರುಗಳು ಸುಖವಾಗಿ ಮಲಗಿಕೊಳ್ಳಲು ಅನುಕೂಲವಾಗುವದಕ್ಕೂ ಸಾಕಾಗುವಹಾಗೆ ಒಣಗಿದ ಎಲೆ ಹುಲ್ಲು ಮೊದಲಾದವನ್ನು ತುಂಬ ಹಾಸಿ ಅವುಗಳನ್ನೆಲ್ಲಾ ಬಿಟ್ಟಿಗೆ ಬಂದೇತಡವೆ ಭೂಮಿಗೆ ಕೊಂಡುಹೋಗಿ ಬೇಕಾದಕಡೆ ಹರಡುವವರೆಗೂ ಕೊಟ್ಟಿಗೆಯನ್ನು ಗುಡಿಸದೆ ಇರುವದೇ ಸಮಂಜಸವಾದ ಪದ್ಧತಿಯೆಂದು ತೋರುತ್ತದೆ. ಯಾಕಂದರೆ ಒಳ್ಳೆ ಗೊಬ್ಬರವನ್ನು ಪೊಳ್ಳಾಗಿ ಗುಡ್ಡೆ ಹಾಕಿದರೆ ಅದು ಮುಗ್ಗುವದರಿಂದ ಸಸ್ಯಾಹಾರವು ವಿಶೇಷವಾಗಿ ನಷ್ಟವಾಗುತ್ತದೆ.

(Fermentation) ಮುಗ್ಗುವಿಕೆ ಎಂಬುದು ಮುಗ್ಗುವ ಪದಾರ್ಥಗಳಲ್ಲಿರುವ 'ಬಾಕ್ಟೀರಿಯ' ಎಂಬ ಸೂಕ್ಷ್ಮವಾದ ಸಸ್ಯವಿಶೇಷಗಳಿಂದ ಉಂಟಾಗುತ್ತದೆ. ಗೊಬ್ಬರದಲ್ಲಿ ವಿಶೇಷವಾಗಿ ಕಾವನ್ನು ಉಂಟುಮಾಡಿ ಗೊಬ್ಬರದ ಗುಣವನ್ನು ಕೆಡಿಸುವ ಈ ಸಸ್ಯಗಳು ಚೆನ್ನಾಗಿ ಬಲಿಯಬೇಕಾದರೆ ಸಮೃದ್ಧಿಯಾಗಿ ವಾಯುವಿರಬೇಕು. ವಾಯು ಸೇರದಂತೆಮಾತ್ರ ತಪ್ಪಿಸಿದರೆ ಮುಗ್ಗುವದನ್ನು ಕಮ್ಮಿಮಾಡಿದಹಾಗಾಗುವುದು. ಹೀಗೆ ವಾಯು ಸೇರದಂತೆ ಮಾಡಬೇಕಾದರೆ ಗೊಬ್ಬರವನ್ನೆಲ್ಲಾ ತೇವವಾಗಿಟ್ಟು

ಅದರ ನಡುವೆ ವಾಯುವಿಗೆ ಪ್ರತಿಯಾಗಿ ನೀರು ತುಂಬಿಕೊಂಡಿರುವಂತೆ ಮಾಡುವದು ಒಂದು ಕ್ರಮ, ಇಲ್ಲವೆ ಗೊಬ್ಬರದ ನಡುವೆ ವಾಯುವು ಸ್ವಲ್ಪವೂ ಸೇರಲವಕಾಶವಾಗದಂತೆ ಗೊಬ್ಬರವನ್ನು ಒತ್ತಾಗಿ ಬಿಗಿಯಾಗಿ ಅದಿಮಿ ಇಡುವದು ಒಂದು ಕ್ರಮ, ಕೊಟ್ಟಿಗೆಯಿಂದ ಗೊಬ್ಬರವನ್ನು ಸಾಗಿಸದೆ ಹಾಗೆಯೇ ಬಿಟ್ಟಿದ್ದರೆ ದನಕರುಗಳ ತುಳಿದಾಟದಿಂದ ಗೊಬ್ಬರವು ಅದಮಿಹೋಗಿ ಅದರಲ್ಲಿ ವಾಯು ನಿಲ್ಲುವದಕ್ಕೆ ಅವಕಾಶವು ವಿಶೇಷವಾಗಿ ಕಡಿಮೆಯಾಗುವದು. ಇಷ್ಟುಮಾತ್ರವಲ್ಲದೆ ಮಿಕ್ಕ ಕಡೆಗಳಲ್ಲೆಲ್ಲಾ ಗಂಜಳವು ಚೆನ್ನಾಗಿ ಊರಿ ತುಂಬಿಕೊಳ್ಳುವದರಿಂದ ಆ ಅವಕಾಶವು ಇನ್ನೂ ಕಡಿಮೆಯಾಗಿ ಮುಗ್ಗು ಹತ್ತುವ (to ferment) ಸನ್ನಿವೇಶವು ಬಹು ಮಿತವಾಗುತ್ತದೆ. ಹಾಗಲ್ಲದೆ ಗಂಜಳವನ್ನು ಹೀರಿಕೊಳ್ಳುವದಕ್ಕೆ ಬೇಕಾದಷ್ಟು ಸೊಪ್ಪುಸದೆಗಳನ್ನು ಹಾಸಿ ಪ್ರತಿದಿನವೂ ಕೊಟ್ಟಿಗೆಯನ್ನು ಗುಡಿಸಿ ಆ ಕಾಲುಕಸವನ್ನೆಲ್ಲಾ ಸಾಗಿಸಿ ಗುಡ್ಡೆ ಹಾಕಿದರೆ ಈ ಗುಡ್ಡೆಗಳು ಪೊಳ್ಳಾಗಿರುವದರಿಂದ ಅವುಗಳ ಸಂದುಗಳಲ್ಲಿ ವಾಯುವು ಸರಾಗವಾಗಿ ಒಳಗೆ ನುಗ್ಗಿ ಮುಗ್ಗನ್ನು ಉಂಟುಮಾಡುತ್ತದೆ. ಇದರಿಂದ ನೈಟ್ರೋಜನ್ ಎಂಬುದು ವಿಶೇಷವಾಗಿ ನಷ್ಟವಾಗುತ್ತದೆ. ಗೊಬ್ಬರದ ಗುಡ್ಡೆಗಳು ಹೆಚ್ಚು ಪೊಳ್ಳು ಆದಹಾಗೆಲ್ಲಾ, ಮಳೆಯನೀರು ಅವುಗಳಿಗೆ ಹೋಗದಂತೆ ಹೆಚ್ಚಾಗಿ ಅಡ್ಡೀ ಮಾಡಿದಹಾಗೆಲ್ಲಾ ಮತ್ತು ಹವೆಯ ಶಖೆಯು ಹೆಚ್ಚಾದಹಾಗೆಲ್ಲಾ, ನೈಟ್ರೋಜನ್ ನಾಶವೂ ಹೆಚ್ಚುವುದು.

ಗೊಬ್ಬರದ ಗುಣವು ಕಡಿಮೆಯಾಗುವದಕ್ಕೆ ಕೊನೆಯಪಕ್ಷ ಎರಡುಮಾರ್ಗವಿದೆಯೆಂದು ತಿಳಿದಿದೆಯಷ್ಟೆ :—ಇವುಗಳಲ್ಲಿ ಮೊದಲನೆಯದು ಮಿತಿಮೀರಿದ ಮುಗ್ಗಿನಿಂದ ಉಂಟಾಗುತ್ತದೆ, ಎರಡನೇದು ಮಳೆನೀರಿನ ತೊಳೆತದಿಂದುಂಟಾಗುತ್ತದೆ. ಹೊಳ್ಳು ಗೊಬ್ಬರದ ಮೇಲೆ ಮಳೆನೀರು ಬೀಳದಂತೆ ನೋಡಿಕೊಳ್ಳುವದರಮೂಲಕ ನೀರಿನ ತೊಳೆತದಿಂದುಂಟಾಗುವ ನಷ್ಟವನ್ನು ಕಡಿಮೆ ಮಾಡಬಹುದು ; ಆದರೆ ಮಿತಿಮೀರಿದ ಮುಗ್ಗು ಉಂಟಾಗಿ ಅದರಿಂದ ಹೆಚ್ಚಾಗಿ ನಷ್ಟವಾಗಬಹುದು. ಅಂಥ ಹೊಳ್ಳುಗುಡ್ಡೆಗಳ ಮೇಲೆ ಮಳೆನೀರು ಬಿದ್ದು ಊನಿಯದಂತೆ ಇಟ್ಟಿದ್ದರೆ ಬಹುಶಃ ಅಷ್ಟೊಂದು ನಷ್ಟವಾಗಲಾರದು. ಯದ್ಯಪಿ ಮಳೆಯ ನೀರಿನಿಂದ ಸ್ವಲ್ಪ ನಷ್ಟವೇನೋ ಆಗುತ್ತದೆ ; ಆದರೂ ಮಿತಿಮೀರಿದ ಮುಗ್ಗಿನಿಂದ ಉಂಟಾಗುವ ನಷ್ಟವು ಬಹುಮಟ್ಟಿಗೆ ಕಡಿಮೆಯಾಗುತ್ತದೆ. ಆದರೆ ಅತಿಯಾದ ಮಳೆಯಿಂದ ಕೆಡುಕು ಹೆಚ್ಚಾಗುವದೇಹೊರತು ಒಳ್ಳೆಯದಾಗಲಾರದು. ಇಲ್ಲಿಯ ಹವಾವಿನಲ್ಲಿ ಗೊಬ್ಬರವನ್ನು ಹೊಳ್ಳಾಗಿ ಗುಡ್ಡೆ ಹಾಕಿಡಬೇಕಾದರೆ ಮೇಲಿನ ಪ್ರಶ್ನೆಗಳನ್ನು ಜಾಗರೂಕತೆಯಿಂದ ವಿಚಾರ ಮಾಡಬೇಕು. ಕಾಲುಕಸದ ಗೊಬ್ಬರವನ್ನು ಎತ್ತದೆ ಕೊಟ್ಟಿಗೆಯಲ್ಲಿಯೇ ಬಿಟ್ಟಿದ್ದರೆ ಈ ಎರಡು ವಿಧವಾದ ನಷ್ಟವೂ ಒಂದುವೇಳೆ ಸಂಪೂರ್ಣವಾಗಿ ನಿವಾರಣೆಯಾಗದಿದ್ದರೂ ಬಲುಮಟ್ಟಿಗಾದರೂ ನಿವಾರಣೆಯಾಗುತ್ತವೆ. ಹಿಂದೆ ಹೇಳಿದಂತೆ ದನಕರುಗಳು ನಿರಂತರವೂ ತುಳಿದು ತುಳಿದು ಗೊಬ್ಬರವನ್ನು ಬಹಳವಾಗಿ ಅದುಮಿ ಒಳಗಡೆ ಹೆಚ್ಚಾಗಿ ವಾಯು ನಿಲ್ಲದಂತೆ ಅಮುಕಿಡುತ್ತವೆ. ಈ ಪದ್ಧತಿಯು ಜರ್ಮನಿ ದೇಶದಲ್ಲಿಯೂ ಕನಡಾ ದೇಶದಲ್ಲಿ ಯಾವ ಯಾವ ಭಾಗದಲ್ಲಿ ಚೆನ್ನಾಗಿ ಪರೀಕ್ಷಿಸಿ ನೋಡಿದರೊ ಅಲ್ಲಿಯೂ ಬಹಳ ಸಮರ್ಪಕವಾದುದೆಂದು ಗೊತ್ತಾಗಿದೆ ; ಕನಡಾದೇಶದಲ್ಲಿ ಬಿಸಿಲುಕಾಲದ ಸೆಕೆಯು ಒಂದೊಂದುವೇಳೆ ಒಂದೆರಡು ಗಂಟೆಯಕಾಲ ಮೈಸೂರು ದೇಶದ ಬಿಸಿಲುಕಾಲದ ಸರಾಸರಿ ಸೆಕೆಗೆ ಅಲ್ಪಸ್ವಲ್ಪ ಕಡಿಮೆಯಾಗಿರುವದರಿಂದ ಇಲ್ಲಿಯೂ ಸರಿಯಾದ ಕೊಟ್ಟಿಗೆ ಹಾಸಿಕೆಯನ್ನು ಉಪಯೋಗಿಸಿದಲ್ಲಿ ಆ ವಿಧಾನವು ಈ ದೇಶದಲ್ಲಿಯೂ ಸಮರ್ಪಕವಾಗಬಹುದೆಂದು ನಂಬಲು ಸಾಕಾದಷ್ಟು ಕಾರಣ[illegible]. ಅನುಕೂಲವಾದ ಸಮಯ ಒದಗಿದ ಕೂಡಲೆ ಗಂಜಳವನ್ನು ಹೀರುವ ಮತ್ತು ಹಾಸಿಗೆಗೆ ಉಪಯೋಗಿಸಬಹುದಾದ [illegible] ಪದಾರ್ಥಗಳನ್ನು ದನಗಳ ಕೊಟ್ಟಿಗೆಗೆ ಹಾಸಿ ಪರೀಕ್ಷೆ ನೋಡಬೇಕೆಂಬದಾಗಿ ಇಲಾಖೆಯವರಿಗೆ ಉದ್ದೇಶವಿದೆ.

ಹಾಸನ ಡಿಸ್ಟ್ರಿಕ್ಟಿನ ಹಳ್ಳಿ ದನದ ಗೊಬ್ಬರವನ್ನು ಎರಡುವೇಳೆ ಪರೀಕ್ಷಿಸಿ ಅದರ ಫಲಿತಾಂಶವನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. (ಅವುಗಳಲ್ಲಿ) 34ನೆಯ ಸಂಖ್ಯೆಯದು ಇನ್ನೊಂದಕ್ಕಿಂತ ಹೊಸದು, 35ನೆಯ ಸಂಖ್ಯೆಯದು ಕೆಲವರ್ಷಕಾಲ ಗಾಳಿ ಮಳೆಯಲ್ಲಿದ್ದ ಗೊಬ್ಬರದ ಗುಡ್ಡೆಯದು. ಇವೆರಡರಲ್ಲೂ ಕೊಟ್ಟಿಗೆಯ ಕಾಲುಕಸವು ಬೆರೆಕೆಯಾಗಿರಲಿಲ್ಲ ; ಎರಡರಲ್ಲೂ ಗಂಜಳವೂ ವಿಶೇಷವಾಗಿ ಕೂಡಿರಲಿಲ್ಲ. ಇವೆರಡರಲ್ಲಿ ಯಾವದೂ ಮುಗ್ಗಿನಿಂದ ವಿಶೇಷವಾಗಿ ಕೆಟ್ಟಿರಲಾರದು, ಯಾಕಂದರೆ ಅವುಗಳಲ್ಲಿ ಸೊಪ್ಪುಸದೆಗಳಿಲ್ಲದಿದ್ದರಿಂದ ಅವು ಬಿಗಿಯಾಗಿದ್ದು ಒಳಗೆ ಗಾಳಿ ಹೋಗುವದಕ್ಕೆ ಸ್ಥಳ ಕೊಟ್ಟಿರಲಾರವು. ಇದೂ ಅಲ್ಲದೆ ಅವುಗಳಲ್ಲಿ ಹೆಚ್ಚಾಗಿ ಕಲೆತಿದ್ದ ಮರಳೂ ಅವುಗಳಲ್ಲಿ ಮುಗ್ಗು ಹೆಚ್ಚಾಗಿ ಬೇಗನೆ ತಲೆ ಯೆತ್ತಲು ಅವಕಾಶವಿಲ್ಲದಂತೆ ತಡೆದಿರಬಹುದು. ಇಲ್ಲಿಗೆ ಬಂದ ಈ ಮಾದರಿಗಳಲ್ಲಿ ನೂರಕ್ಕೆ 61·33 ರಂತೆಯೂ 72·59ರಂತೆಯೂ ಮರಳೂ ಕಲ್ಲೂ ಸೇರಿದ್ದವು. ಇವುಗಳಲ್ಲಿ ನೂರಕ್ಕೆ 27·5ರಷ್ಟೂ 33·9ರಷ್ಟೂ ಕಲ್ಲನ್ನು ಸೋದಿಸಿ ಗೊಬ್ಬರದಿಂದ ತೆಗೆದುಹಾಕಲಾಯಿತು. ಈ ಪೈಕಿ ದನಕರುಗಳ ಹೊಟ್ಟೆಯಿಂದ ಬಂಧ ಮರಳೆಷ್ಟು ; ದಿನವಹಿ ಕೊಟ್ಟಿಗೆಯ ನೆಲವನ್ನು ಕೆರೆದು ಗೊಬ್ಬರ ಎತ್ತುವಾಗ ಕಲೆತ ಮರಳೆಷ್ಟು ಎಂದು ತಿಳಿಯಲು ಸಾಧ್ಯವಾಗಿದ್ದರೆ ಚೆನ್ನಾಗಿರುತ್ತಿತ್ತು. ಹಳೆಯ ಗೊಬ್ಬರದಲ್ಲಿ ಭಾರವು ವಿಶೇಷವಾಗಿ ಕಡಿಮೆಯಾಗಿ ಹೋಗಿರಬೇಕು. ಆದಿಯಲ್ಲಿ ಎರಡು ವಿಧವಾದ ಗೊಬ್ಬರದ ಗುಣವೂ ಒಂದೇಸಮವಾಗಿದ್ದವೆಂದು ಇಟ್ಟುಕೊಂಡರೂ ಕೂಡ ಇದರ ಭಾರದಲ್ಲಿ ಆದ ನಷ್ಟವು ಅದರ (ಹಳೆಯದರ) ಗುಣದಿಂದುಂಟಾದ ಲಾಭದಿಂದ ನಿವಾರಿತವಾಗಲಿಲ್ಲ. ಯಾಕೆಂದರೆ ಹಳೆಯ ಗೊಬ್ಬರದಲ್ಲಿದ್ದ ಹೆಚ್ಚು ಮರಳಿಗಾಗಿಯೂ ಒಣಗಿಹೋದ ಪ್ರಯುಕ್ತ ಅದರಲ್ಲಿ ಕಡಿಮೆಯಾದ ಜಲಾಂಶಕ್ಕಾಗಿಯೂ ತಕ್ಕಷ್ಟು ಬಿಟ್ಟುಕೊಟ್ಟಮೇಲೆಯೂ ಕೂಡ ಹಳೆಯ ಗೊಬ್ಬರವನ್ನು ಸೇರಿಗೆ ಸೇರು ಹೊಸಗೊಬ್ಬರದೊಡನೆ ಹೋಲಿಸಿದರೆ ಅದು ಮುಕ್ಕಾಲು ಗುಣವುಳ್ಳದ್ದಾಗಿತ್ತು. ಆದ್ದರಿಂದ ಹೊಸದಾಗಿರುವಾಗಲೇ ಗೊಬ್ಬರವನ್ನು ಬೇಕಾದ ಭೂಮಿಗೆ ಹಾಕುವದು ಒಳ್ಳೆಯದು ಎಂಬ ಮಾತು (ನನಗೆ ಈಗ ತಿಳಿದಿರುವ ಮಟ್ಟಿಗೂ) ಅಮೆರಿಕಾ ದೇಶದಲ್ಲಿ ಹೇಗೋ ಇಂಡಿಯಾದೇಶದಲ್ಲಿಯೂ ಹಾಗೆಯೇ ಅನ್ವಯಿಸುವಂತಿದೆ.

ಹಿಂಡಿ.—ಹರಳಿನ ಬಿಳಿ ಹಿಂಡಿ ಹೊಂಗೆಹಿಂಡಿ ಇವೆರಡು ಹಿಂಡಿಗಳನ್ನೂ ರಸಾಯನ ಶಾಸ್ತ್ರರೀತ್ಯಾ ವಿಭಾಗಿಸಿ ಫಲಿತಾಂಶವನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. ಇಲ್ಲಿ ತೆಗೆದುಕೊಂಡ ಹರಳುಹಿಂಡಿಯು, ತೂಕಕ್ಕೆ ತೂಕ ಹೊಂಗೆಹಿಂಡಿಗಿಂತ ಎರಡರಷ್ಟು ಗುಣವುಳ್ಳದ್ದಾಗಿತ್ತು. ಇದನ್ನು ಉಪಯೋಗಿಸಬೇಕಾದರೆ ಹೆಚ್ಚು ಖರ್ಚು ಮುಟ್ಟುವದೇನೋ ನಿಜ. ಆದರೆ ಆ ವಿಚಾರವನ್ನು ಮಾತ್ರ ಬಿಟ್ಟು ನೋಡಿದರೆ ಮೇಲೆ ಹೇಳಿದ ಉತ್ತಮತರದ ದನದ ಗೊಬ್ಬರಕ್ಕಿಂತ ಇದು ಕನಿಷ್ಠಪಕ್ಷ ಹತ್ತುಪಾಲು ಹೆಚ್ಚು

ಗುಣವುಳ್ಳದ್ದು, ಮೇಲೂ ದನದ ಗೊಬ್ಬರದಲ್ಲಿರುವ ನೈಟ್ರೋಜನು ಹಿಂಡಿಯಲ್ಲಿರುವ ನೈಟ್ರೋಜನನಷ್ಟು ಸಸ್ಯಗಳ ಉಪಯೋಗಕ್ಕೆ ಅರ್ಹವಾದ ಸ್ಥಿತಿಯಲ್ಲಿಲ್ಲದಿರುವಂಶವನ್ನು ನೆನಪಿನಲ್ಲಿಟ್ಟು ನೋಡಿದರೆ ಹಿಂಡಿಯು ಹಿಂದೆ ಹೇಳಿದ್ದಕ್ಕಿಂತ ಇನ್ನೂ ಹೆಚ್ಚಿನ ಗುಣವುಳ್ಳದ್ದೆಂದು ಊಹಿಸಬೇಕಾಗುತ್ತದೆ.

ಮೂಳೆಯಪುಡಿ.—ಮೂಳೆಪುಡಿಯ ಎರಡು ಮಾದರಿಗಳನ್ನು ವಿಭಾಗಿಸಲಾಯಿತು. ಫಲಿತಾಂಶವನ್ನು ಪರಿಶಿಷ್ಟದಲ್ಲಿ ಕೊಟ್ಟಿದೆ. 11ನೆಯ ಸಂಖ್ಯೆಯದು ನೈಟ್ರೋಜನ್, ಫಾಸ್ಫಾರಿಕ್ ಆಸಿಡ್ ಎಂಬ ಎರಡು ಪದಾರ್ಥಗಳ ವಿಷಯದಲ್ಲಿಯೂ ಸಾಧಾರಣವಾದ ಗೊಬ್ಬರಕ್ಕಿಂತಲೂ ನಿಕೃಷ್ಟವಾಗಿದೆ. ಅದನ್ನು ಇಂಡಿಯಾ ದೇಶದಲ್ಲಿ ಮೂಳೆಪುಡಿಯೆಂಬದಾಗಿ ಮಾರಿದರೂ ಅದನ್ನು ಯೂರೋಪಿನಲ್ಲಿಯೂ ಅಮೇರಿಕಾದಲ್ಲಿಯೂ ಧಿಕ್ಕಾರಮಾಡುವರೇಹೊರತು ಮೂಳೆಪುಡಿಯೆಂದು ಯಾರೂ ಒಪ್ಪಲಾರರು. 12ನೆಯ ಸಂಖ್ಯೆಯದು ದ್ರಾವಕಾದಿಗಳಿಂದ ಮಾರ್ಪಾಟು ಮಾಡಲ್ಪಡದೇ ಇದ್ದ ಸಹಜವಾದ (Untreated) ಒಳ್ಳೆ ಮೂಳೆಪುಡಿ. ಎರಡನೆಯ ಜಾತಿಯ ಗೊಬ್ಬರವು (ಈ ಎರಡು ಜಾತಿಯ ಗೊಬ್ಬರಗಳಲ್ಲಿ ಯಾವದು ಹೆಚ್ಚು ಪುಡಿಯಾಗಿದೆ ಎಂಬ ಅಂಶವನ್ನು ಲೆಕ್ಕಕ್ಕೆ ತಾರದೆ) ಟನ್ ಒಂದಕ್ಕೆ 51 ರೂಪಾಯಿ ಬೆಲೆ ಬಾಳುವದೆಂದು ಇಟ್ಟುಕೊಂಡರೆ ಮೊದಲನೆಯ ಜಾತಿಯ ಮೂಳೆಪುಡಿ ಟನ್ನಿಗೆ 37 ರೂಪಾಯಿ ಬೆಲೆಬಾಳುತ್ತದೆ. ಮೂಳೆ ಪುಡಿಯನ್ನು ಪ್ಲಾಂಟರುಗಳು ಒಳ್ಳೆ ಗೊಬ್ಬರವೆಂದು ಉಪಯೋಗಿಸಿದರೂ ಬಯಲನಾಡಿನ ರೈತರು ಅದಕ್ಕೆ ಯೋಗ್ಯವಾದಷ್ಟು ಗೌರವ ಕೊಟ್ಟಿಲ್ಲ. ಉತ್ತರದೇಶದ ಪರೀಕ್ಷಾರ್ಥವಾದ ಭೂಮಿಯಲ್ಲಿ (Experimental farms) ಈ ಗೊಬ್ಬರವು ಅಷ್ಟೊಂದು ಪ್ರಯೋಜನಕಾರಿಯಾಗಲಿಲ್ಲವೆಂದು ಕೇಳಿದ್ದೇನೆ. ಆದರೆ ನನಗೀಗಿರುವ ಅನುಭವದಲ್ಲಿ ನೋಡಿದರೆ ಮೂಳೆಪುಡಿಯಲ್ಲಿರುವ ಸಸ್ಯಾಹಾರವು ಮೈಸೂರು ಭೂಮಿಯಲ್ಲಿ ಬಹುಮಿತವಾಗಿದೆಯೆಂದು ತೋರುತ್ತದೆ. ಈ ಸಸ್ಯಾಹಾರವನ್ನು ಒದಗಿಸುವದಕ್ಕೆ ಮೂಳೆಪುಡಿಗಿಂತಲೂ ಅಗ್ಗವಾದ್ದು ಯಾವದೂ ಇಲ್ಲ. ಇಲ್ಲಿನ ಭೂಮಿಯಲ್ಲಿ ಕಬ್ಬಿಣ ಹೆಚ್ಚಾಗಿರುವದನ್ನು ಗಮನಿಸಿ ನೋಡಿದರೆ ಇದಕ್ಕಿಂತಲೂ ಒಳ್ಳೆಯ ರೂಪದಲ್ಲಿ ಗೊಬ್ಬರವನ್ನು ಉಪಯೋಗಿಸಲಾಗುವದಿಲ್ಲ; ಅದರಲ್ಲಿಯೂ ಭೂಮಿಯಲ್ಲಿ ಸಾವಯವ ವಸ್ತುಗಳು ಸಮೃದ್ಧವಾಗಿದ್ದಲ್ಲಿ ಇದೇ ಸರ್ವೋತ್ತಮವಾದ್ದು. ಯದ್ಯಪಿ ಜರ್ಮನಿಯಲ್ಲಿ ಫಾಸ್ಫರಿಕ್ ಆಸಿಡ್ ಬೇಕಾಗಿದ್ದ ಭೂಮಿಗೂ ಸಹ ಮೂಳೆಪುಡಿಯನ್ನು ಹಾಕಿದಾಗ ಅಸಮರ್ಪಕವಾದ ಫಲಿತಾಂಶ ಬಂದದ್ದೇನೋ ಸತ್ಯ. ಆದರೆ ಸ್ವಲ್ಪ ಹೆಚ್ಚು ಕಡಿಮೆಯಾಗಿ ಮೈಸೂರಿನಂತೆ ಸನ್ನಿವೇಶವುಳ್ಳ ಜರ್ಮಾದೇಶದಲ್ಲಿ ಇದರಿಂದಾದ ಪ್ರಯೋಜನವು ತೃಪ್ತಿಕರವಾಗಿತ್ತು. ಆದಪ್ರಯುಕ್ತ ಮೈಸೂರಿನಲ್ಲಿಯೂ ಇದು ಅದೇಮೇರೆ ಸಫಲವಾಗಬಹುದೆಂದು ತೋರುತ್ತದೆ; ತಥಾಪಿ ನೆಲದಲ್ಲಿ ಸಾವಯವ ಪದಾರ್ಥಗಳು ಸಮೃದ್ಧವಾಗಿದ್ದಲ್ಲಿ ಮತ್ತೂ ವಿಶೇಷ ಮೂಳೆಗಳನ್ನು ಪುಡಿಮಾಡುವದು ಕಷ್ಟವಾದ್ದರಿಂದಲೂ ಪುಡಿಮಾಡದೆ ಉಪಯೋಗಿಸಿದಲ್ಲಿ ಸುತರಾಂ ಪ್ರಯೋಜನವಿಲ್ಲದ್ದರಿಂದಲೂ ಇದನ್ನು ಇಲ್ಲಿ ವಿಶೇಷವಾಗಿ ಉಪಯೋಗಿಸದಿರಬಹುದು. ಮೂಳೆಯನ್ನು ಗೊಬ್ಬರವಾಗಿ ಉಪಯೋಗಿಸಬೇಕಾದರೆ ಅದನ್ನು ಇದಕ್ಕೋಸ್ಕರವಾಗಿಯೇ ಮಾಡಿರುವ ಯಂತ್ರದಲ್ಲಿ ಪುಡಿ ಮಾಡಿಸುವದೇ ಸುಲಭೋಪಾಯ. ಆದರೆ ಇದು ತುಂಬಾ ಮೂಳೆಗಳನ್ನು ಪುಡಿಮಾಡುವ ಸಂದರ್ಭದಲ್ಲಿವಿನಾ ಇತರ ಸಮಯಗಳಲ್ಲಿ ದುಬಾರಿ ಖರ್ಚು ಮಾಡಿಸುತ್ತದೆ. ಮೂಳೆಗಳನ್ನು ಸುತ್ತಿಗೆಯಲ್ಲಿ ಚಚ್ಚಿ ಒಡಿಸಿದಬಳಿಕ ಗಂಧಕದ್ರಾವಕ ಸಹಾಯದಿಂದ ಪುಡಿಮಾಡಿಸೋಣವೆಂದರೆ ಇಂಡಿಯಾದೇಶದಲ್ಲಿ ಗಂಧಕ ದ್ರಾವಕವು ಸುಲಭ ಕ್ರಯಕ್ಕೆ ದೊರಕುವದಿಲ್ಲವಾದಕಾರಣ ಈ ಪದಾರ್ಥವೂ ಹೆಚ್ಚು ಖರ್ಚಿಗೆ ಅವಕಾಶ ಕೊಡುತ್ತದೆ; ಇದೂ ಅಲ್ಲದೆ ಇದನ್ನೆಲ್ಲ ಮಾಡಬೇಕಾದರೆ ಸಾಮಾನ್ಯ ರೈತರು ಈಗಿರುವದಕ್ಕಿಂತಲೂ ಹೆಚ್ಚು ಜಾಣತನವನ್ನೂ ಅಭ್ಯಾಸವನ್ನೂ ಪಡೆದುಕೊಳ್ಳಬೇಕಾಗುತ್ತದೆ. ಅದರಿಂದ ಇವುಗಳಲ್ಲದೆ ಬೇರೆ ವಿಧಾನಗಳನ್ನೂ ಅನೇಕವಾಗಿ ಮುಂದಿಟ್ಟಿದ್ದಾರೆ. ಅವುಗಳಲ್ಲಿ ಮೈಸೂರಿನಲ್ಲಿ ಪ್ರಯೋಜನಕಾರಿಯಾಗತಕ್ಕದ್ದು ಯಾವದೆಂದರೆ: ಸುತ್ತಿಗೆಯಿಂದ ಮೂಳೆಯನ್ನು ಒಡೆದು ಆ ಚೂರುಗಳನ್ನೂ ಅದೇ ಅಳತೆಯ ಬೂದಿಯನ್ನೂ ಒಂದು ಪದರದಮೇಲೆ ಇನ್ನೊಂದು ಪದರದಂತೆ ಗುಡ್ಡೆ ಹಾಕಿ ಅವು ಚೆನ್ನಾಗಿ ತೋಯುವಂತೆಯೂ ನೀರು ಮಾತ್ರ ಹೊರಗೆ ಹರಿದು ಹೋಗದಂತೆಯೂ ಅವುಗಳಮೇಲೆ ಹವಣಾಗಿ ನೀರು ಚೆಲ್ಲಿ ಅವುಗಳನ್ನು ಅನೇಕ ವಾರಗಳವರೆಗೂ—ಅವಶ್ಯಕವಾದಲ್ಲಿ ಎರಡು ತಿಂಗಳವರೆಗೂ—ತೇವಮಾರದಂತೆ ಇಟ್ಟಿರುವದು. ಇದರಿಂದ ಅತ್ಯಂತ ಪ್ರಯೋಜನವಾಗಬೇಕಾದರೆ ಈ ಗುಪ್ಪೆಗೆ ಅತಿಮಿತ ವಾಸ ಹೊರಮೈ ಇರುವಂತೆ ಗುಪ್ಪೆಯ ಉದ್ದ, ಅಗಲ, ಎತ್ತರ—ಇವು ಮೂರು ಒಂದೇ ಅಳತೆಯದಾಗಿರುವಂತೆ ರಾಸಿ ಹಾಕಬೇಕು. ಅದರ ಕೆಳಗೂ ಮೇಲೂ ಸುತ್ತಲೂ ಬೂದಿಯ ಪದರು ಇದ್ದೇ ಇರಬೇಕು. ಹೀಗೆ ಕೂಡಿಸಿದ ಮೂಳೆಯು ಬಹುಪ್ರಯೋಜನಕರವಾದುದೆಂದು ತಿಳಿಯಬರುವದರಿಂದ ಇದು ಪರೀಕ್ಷಾರ್ಹವಾಗಿದೆ. ಇನ್ನೊಂದು ಕ್ರಮವೇನಂದರೆ ಒಡೆದ ಮೂಳೆಯ ಚೂರುಗಳನ್ನು ಗೊಬ್ಬರದ ಹಳ್ಳದಲ್ಲಿ ಹಾಕುವದು. ಈ ಗೊಬ್ಬರದಲ್ಲಿ ತುಂಬ ಗಂಜಳವೂ ಬೇಕಾದ ಹಾಗೆ ದನದ ಕಾಲು ಕಸವೂ ಸ್ವಲ್ಪ ಕುದುರೆ ಗೊಬ್ಬರವೂ ಇದ್ದಲ್ಲಿ ಈ ಕ್ರಮದಿಂದ ಇನ್ನೂ ಹೆಚ್ಚು ಪ್ರಯೋಜನವುಂಟು. ಆದರೆ ಮೈಸೂರು ದೇಶದ ಸಾಧಾರಣ ರೈತನ ಗೊಬ್ಬರದ ಹಳ್ಳದಲ್ಲಿ ಇದು ತೃಪ್ತಿಕರವಾಗಿ ಆಗುವದೋ ಇಲ್ಲವೋ ಸಂದೇಹಾಸ್ಪದವಾಗಿದೆ. ಆದರೂ ಇದು ಪರೀಕ್ಷಿಸಿ ನೋಡಲು ಯೋಗ್ಯವಾದ ವಿಷಯವಾಗಿದೆ.

ಮೀನುಗೊಬ್ಬರ – ಈ ಗೊಬ್ಬರವನ್ನು ಸಮುದ್ರ ತೀರದಲ್ಲಿರುವ ರೈತರು ಉಪಯೋಗಿಸಿದರೂ ಇದನ್ನು ಮೈಸೂರು ದೇಶದಲ್ಲಿ ಮುಖ್ಯವಾಗಿ ಪ್ಲಾಂಟರುಗಳೇ ಉಪಯೋಗಿಸುತ್ತಾರೆ. ಅವರಲ್ಲಿಯೂ ಮೂರೂಮುಕ್ಕಾಲುವಾಸಿ ಎಲ್ಲಾ ಯೂರೋಪಿಯನ್ ಪ್ಲಾಂಟರುಗಳೇ. ಪರಿಶಿಷ್ಟದಲ್ಲಿ ಈ ಗೊಬ್ಬರದ ನಾಲ್ಕು ಮಾದರಿಗಳ ವಿಭಾಗವನ್ನು ಕೊಟ್ಟಿದೆ; ಅವುಗಳಲ್ಲಿ ನೈಟ್ರೋಜನ್ ನೂರಕ್ಕೆ 3·96 ಮೊದಲುಗೊಂಡು 8·72 ವರೆಗೂ, ಫಾಸ್ಫಾರಿಕ್ ಆಸಿಡ್ಡು ನೂರಕ್ಕೆ 1·72 ಮೊದಲುಗೊಂಡು 6·12ರ ವರೆಗೂ ವ್ಯತ್ಯಾಸವಾಗುತ್ತವೆ. ಈ ನಾಲ್ಕು ಬಗೆಯ ಗೊಬ್ಬರಗಳಲ್ಲಿ ಅತ್ಯುತ್ತಮವಾದ ಗೊಬ್ಬರಕ್ಕೆ ಟನ್ ಒಂದಕ್ಕೆ 52 ರೂಪಾಯಿ ಬಿದ್ದರೆ ಅತ್ಯಧಮವಾದ್ದಕ್ಕೆ ಟನ್ ಒಂದಕ್ಕೆ 22 ರೂಪಾಯಿ ಬೀಳಬೇಕು—ಎಂದರೆ ಅತಿ ಹೀನವಾದ್ದು ಅತ್ಯುತ್ತಮವಾದ್ದರ ಅರ್ಧ ಕ್ರಯಕ್ಕಿಂತಲೂ ಕಡಮೆ ಬೆಲೆ ಬಾಳುತ್ತದೆ. ಮೂಳೆ ಪುಡಿಯ ವಿಷಯದಲ್ಲಿಯೂ ಮೀನುಗೊಬ್ಬರದ ವಿಷಯದಲ್ಲಿಯೂ ಹೇಳಿದ ಮಾತುಗಳೇ ಸ್ವಲ್ಪ ಹೆಚ್ಚು ಕಡಿಮೆಯಾಗಿ ಎಲ್ಲಾ ಗೊಬ್ಬರಗಳಿಗೂ ಅನ್ವಯಿಸುತ್ತವೆ. ಮತ್ತೂ ಗೊಬ್ಬರಗಳ ವಿಷಯದಲ್ಲಿ ಅವುಗಳ ಗುಣ ಅಳತೆ ಎರಡನ್ನೂ ದೃಷ್ಟಿಯಲ್ಲಿ ಇಡಬೇಕೆಂದೂ ಸೂಚಿಸುತ್ತೇವೆ. (ದನದ ಗೊಬ್ಬರವೇ ಮೊದ

ಲಾದ) ಭೂಮಿಯಮೇಲೆ ದೊರಕುವ ಗೊಬ್ಬರವನ್ನೇ ಉಪಯೋಗಿಸಿದರೂ ಸರಿಯೆ ಇಲ್ಲವೇ ಮೂಳೆ, ಹಿಂಡಿ, ಮೀನು ಈ ವಿಧವಾದ ಗೊಬ್ಬರವನ್ನೇ ಉಪಯೋಗಿಸಿದರೂ ಸರಿಯೆ ಈ ಗೊಬ್ಬರಗಳೊಂದೊಂದರಲ್ಲಿಯೂ ಗುಣಗಳು ನಾನಾವಿಧವಾಗಿ ಭೇದಿಸುತ್ತವೆ ಎಂಬುದನ್ನು ಮಾತ್ರ ನೆನಪಿನಲ್ಲಿಟ್ಟುಕೊಂಡು, ನಾವು ಕೊಡತಕ್ಕ ಬೆಲೆಗೆ ಯಾವದು ಸಾಧ್ಯವಾದ ಮಟ್ಟಿಗೂ ಶ್ರೇಷ್ಠತಮವೆಂಧು ತಿಳಿದು ಅದನ್ನೇ ಸ್ವೀಕರಿಸಲು ಎತ್ನಿಸಬೇಕು. ಗೊಬ್ಬರಗಳಲ್ಲಿ ತಾರತಮ್ಯವನ್ನು ಗೊತ್ತು ಮಾಡಬೇಕಾದರೆ ಅವು ನೀರಿನಲ್ಲಿ ಕರಗುತ್ತವೆಯೇ? ಅವು ಗಟ್ಟಿಯಾಗಿವೆಯೆ ಪುಡಿಯಾಗಿವೆಯೆ ಎಂಬಿವೇ ಮೊದಲಾದ ಅನೇಕ ವಿಷಯಗಳನ್ನು ಪರ್ಯಾಲೋಚಿಸಿ ತೆಗೆದುಕೊಳ್ಳಬೇಕು. ಅಲ್ಲದೆ ಫಾಸ್ಫಾರಿಕ್ ಆಸಿಡನ್ನು ನೈಟ್ರೋಜಸಿಗಾಗಲಿ ಪೊಟಾಷಿಗಾಗಲಿ ಪ್ರತಿಯಾಗಿ ಉಪಯೋಗಿಸಲಾಗುವದಿಲ್ಲ, ಇವುಗಳನ್ನೂ ಅದಕ್ಕೆ ಪ್ರತಿಯಾಗಿ ಉಪಯೋಗಿಸಲಾಗುವದಿಲ್ಲ ಎಂಬೀ ವಿಷಯವನ್ನೂ ಮತ್ತು ಒಂದೊಂದು ವಿಧವಾದ ಸಸ್ಯಾಹಾರವೂ ಸಾಮಾನ್ಯತಃ ಒಂದೊಂದೇ ವಿಧವಾದ ಕೆಲಸವನ್ನು ಮಾಡುತ್ತದೆಯಾದ್ದರಿಂದ ಇತರ ವಿಧವಾದ ಸಸ್ಯಾಹಾರಗಳಿಗೆ ಪ್ರತಿಯಾಗಿ ಕೆಲಸ ಮಾಡಲಾರದೆಂಬ ವಿಷಯವನ್ನೂ ನೆನಪಿನಲ್ಲಿಡಬೇಕು. ಇವುಗಳಿಗಾಗಿ ಬಿಡತಕ್ಕದ್ದನ್ನೆಲ್ಲಾ ಬಿಟ್ಟಮೇಲೆ ನೋಡಿದರೆ ನೈಟ್ರೋಜನ್ನು ಎಂಬುವದಕ್ಕೆ ಫಾಸ್ಫಾರಿಕ್ ಆಸಿಡ್ ಮತ್ತು ಪೊಟಾಷ್ ಎಂಬಿವುಗಳೊಂದೊಂದಕ್ಕಿಂತಲೂ ಮೂರುವರೆಯಷ್ಟು ಹೆಚ್ಚು ಖರ್ಚು ಮುಟ್ಟುತ್ತದೆ.

ಮೀನು ಗೊಬ್ಬರಗಳ ವಿಭಾಗದ ಪಟ್ಟಿಯಲ್ಲಿ ಬಲುಮಟ್ಟಿಗೆ ಮೀನುಗೊಬ್ಬರಕ್ಕೆ ಸರಿಹೋಲುವ ಪ್ರಾನ್ ಎಂಬ ಒಂದು ಜಾತಿ ಪ್ರಾಣಿಯ ಗೊಬ್ಬರದ ವಿಭಾಗವೂ ಕೊಟ್ಟಿದೆ.

ಸಕ್ಕರೆಗಳು.—ಕಬ್ಬಿನ ರಸದ ಹದಿನೈದು ಮಾದರಿಗಳ ವಿಭಾಗವೂ ಸಕ್ಕರೆ ಗೆಣಸಿನ (Beet root) ರಸದ ನಾಲ್ಕು ಮಾದರಿಗಳ ವಿಭಾಗವೂ ಬೆಲ್ಲದ ಹನ್ನೆರಡು ಮಾದರಿಗಳ ವಿಭಾಗವೂ ಪರಿಶಿಷ್ಟದಲ್ಲಿ ಕೊಟ್ಟಿವೆ. 167ನೆಯ ಸಂಖ್ಯೆ ಮೊದಲು 195ನೆಯ ಸಂಖ್ಯೆಯ ವರೆಗೆ ಎಂದರೆ ಇವೆರಡನ್ನೂ ಒಳಕೊಂಡ ಸಂಖ್ಯೆಯಷ್ಟು ಮಾದರಿಗಳು ಸೂಳೆಕೆರೆಯ ಕೆಳಗಿನವು. ವಿಸ್ತಾರವಾದ ಸೂಳೆಕೆರೆಯ ಕೆಳಗೆ ಒಂದೇ ತಾಕಾಗಿರುವ ಸಾವಿರಾರು ಎಕರೆ ಭೂಮಿಯಲ್ಲಿ ಕಬ್ಬಿನ ಪೈರು ಮಾಡಬಹುದೆ ಎಂದು ವಿಚಾರಮಾಡಿ ಅದು ಸಾಧ್ಯವಾದರೆ ಅಲ್ಲಿ ಈಗಿನ ರೀತಿಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಇಡಲು ಪ್ರೋತ್ಸಾಹ ಮಾಡಬೇಕೆಂಬ ಉದ್ದೇಶದಿಂದ ಪ್ರಥಮತಃ ಅಲ್ಲಿಯ ಕಬ್ಬನ್ನು ತೆಗದುಕೊಂಡು ಈ ದೇಶದಲ್ಲಿ ಪೈರಾಗುವ ಬೇರೆ ಬೇರೆ ಕಬ್ಬುಗಳೊಡನೆ ಹೋಲಿಸಿ ನೋಡಲಾಯಿತು. ಆದರೆ ದುರದೃಷ್ಟಕ್ಕೆ ಸರಿಯಾಗಿ ಅಲ್ಲಿನ ಕಬ್ಬು ಹದಕ್ಕೆ ಬಂದಾಗ ಕೊಯ್ಲಿಗೆ ಆಳು ಸಿಕ್ಕದೆ ಪೈರು ಬಲಿತು ಹೋಗಿತ್ತು. ಆದರೂ ಎಲ್ಲಿಯೋ ಕೆಲಕೆಲವು ಸೂನಂಗಿಗಳು ಮಾತ್ರ ಕಾಣಬರುತಿತ್ತು. ಅಲ್ಲಲ್ಲಿ ಕೆಲವು ಕಬ್ಬುಗಳಲ್ಲಿ ಮೊಳೆಕೆಗಳು ಬಂದಿದ್ದವು. ಕಬ್ಬು ಹೊರವಾಗಿ ಬೆಳೆದಿರಲಿಲ್ಲ. ಅನೇಕ ಸ್ಥಳಗಳಲ್ಲಿ ಜಲ್ಲೆಗಳು ಒಣಗಿಹೋಗಿ ಕೊರಟು ಬಿದ್ದುಹೋಗಿದ್ದವು. ಒಣಗಿ ಕೊರಟಾದ್ದು ಬಹುಶಃ ಚೌಳಿನಿಂದಾಗಿರಬಹುದು; ಆ ಕೆರೆಯ ಕೆಳಗಿನ ಭೂಮಿಯಲ್ಲಿ ಅನೇಕ ಭಾಗಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿ ಚೌಳಾಗಿರುವಂತೆ ತೋರುತ್ತದೆ. ಕೆಲವು ಕಡೆಯಲ್ಲಂತೂ ಅತಿಯಾಗಿ ಚೌಳಿದ್ದದ್ದರಿಂದ ಅಲ್ಲಿ ಯಾವದೂ ಬೆಳೆದೇ ಇರಲಿಲ್ಲ; ಇತರ ಭಾಗಗಳಲ್ಲಿದ್ದ ಚೌಳು ಅಲ್ಲಿನ ಕಬ್ಬಿನ ಪೈರನ್ನು ಬಹಳ ಮಟ್ಟಿಗೆ ಕೆಡಿಸಿಬಿಟ್ಟಿತೆಂಬುದು ಅಲ್ಲಿನ ತೊರಟಾದ ಒಣ ಪೈರಿನಿಂದಲೂ ಸತ್ತ ಕಬ್ಬಿನಿಂದಲೂ ವ್ಯಕ್ತವಾಗುತ್ತಿತ್ತು. [illegible] ಕೆಲವು ಕಡೆ ಗೊಬ್ಬರ ಸಾಲದ್ದರಿಂದ ಹೀಗಾಗಿರಬೇಕು. ಆದರೂ ಚೌಳಿನಿಂದಲೂ ಬಹಳವಾಗಿ ಪೈರು ಕೆಟ್ಟುಹೋಯಿತೆಂಬುವದರಲ್ಲಿ ಸಂದೇಹವಿಲ್ಲ.

ಇಲ್ಲಿನ ಕಬ್ಬಿನಲ್ಲಿ ದೊರಕುವ ಸಕ್ಕರೆಯ ಅಂಶವನ್ನೂ ಈ ಸಂಸ್ಥಾನದ ಬೇರೇ ಕಡೆ ಬೆಳೆಯುವ ಕಬ್ಬಿನಲ್ಲಿನ ಸಕ್ಕರೆಯ ಅಂಶವನ್ನೂ (ಈ ಇಲಾಖೆಯ ಎರಡನೆಯ ವಾರ್ಷಿಕ ರಿಪೋರ್ಟು ನೋಡು) ಹೋಲಿಸಿ ನೋಡಿದರೆ ಇಲ್ಲಿ ದೊರಕುವದು ಬಲು ಕಡಿಮೆಯೆಂದು ತಿಳಿಯಬರುತ್ತದೆ. ಇದು ಪ್ರಾಯಶಃ ಅನೇಕವಾಗಿ (ಕನಿಷ್ಠಪಕ್ಷ ಬಲುಮಟ್ಟಿಗಾದರೂ) ನೆಲದಲ್ಲಿರುವ ಚೌಳಿನಿಂದ ಹೀಗಾಗಿರಬೇಕು. ಸೂಳೆಕೆರೆ ಕಬ್ಬಿನ ಹದಿನಾಲ್ಕು ಮಾದರಿ ಹಾಲುಗಳಲ್ಲಿ ಸರಾಸರಿ ನೂರಕ್ಕೆ 15½ ಗಿಂತ ಸ್ವಲ್ಪ ಹೆಚ್ಚಾಗಿ (Sucrose) ಶುದ್ಧ ಸಕ್ಕರೆ ಇತ್ತು; ಇವುಗಳಲ್ಲಿ ಅತ್ಯುತ್ತಮವಾದ್ದರಲ್ಲಿ 16·3 ಕ್ಕಿಂತ ಹೆಚ್ಚು ಶುದ್ಧ ಸಕ್ಕರೆ (ಸೂಕ್ರೋಜ್) ಇರಲಿಲ್ಲ. ಆದರೆ ಹೋದವರ್ಷ ಈ ದೇಶದ ಬೇರೆ ಬೇರೆ ಭಾಗಗಳಿಂದ ತಂದ ಕಬ್ಬಿನ ರಸದ ಮುವತ್ತು ಮೂರು ಮಾದರಿಗಳಲ್ಲಿ ಮೂರು ಮಾದರಿಗಳಲ್ಲಿ ಮಾತ್ರ ಸೂಳೆಕೆರೆಯ ಅತ್ಯುತ್ತಮವಾದ ಮಾದರಿಯಲ್ಲಿ ದೊರೆತಷ್ಟು ಕಡಿಮೆಯಾಗಿ ಶುದ್ಧ ಸಕ್ಕರೆ ದೊರೆಯಿತು; ಅದರಲ್ಲಿಯೂ ಈ ಮೂರರಲ್ಲಿ ಒಂದು ಮಾದರಿಯು ಸುತರಾಂ ಬಲು ಎಳಸಾಗಿತ್ತು. ಈ ಮುವತ್ತುಮೂರು ಮಾದರಿಗಳಲ್ಲಿನ ಸರಾಸರಿ ಶುದ್ಧ ಸಕ್ಕರೆಯ ಅಂಶವು ಸೂಳೆಕೆರೆಯ ಕಬ್ಬಿನಲ್ಲಿನ ಸರಾಸರಿ ಅಂಶಕ್ಕಿಂತಲೂ ನೂರಕ್ಕೆ 2½ ಯಂತೆ ಹೆಚ್ಚಾಗಿತ್ತು (ಎಂದರೆ ನೂರಕ್ಕೆ 18 ಚಿಲ್ಲರೆಯಾಗಿಯೂ; ಅತ್ಯುತ್ತಮವಾದ್ದರಲ್ಲಿ ಸೂಳೆಕೆರೆಯಲ್ಲಿ ಆದ್ದಕ್ಕಿಂತಲೂ, ನೂರಕ್ಕೆ 5½ ಎಷ್ಟು ಹೆಚ್ಚಾಗಿ ಎಂದರೆ 21·6 ರಷ್ಟಾಗಿಯೂ ಇತ್ತು). ಇದೂ ಅಲ್ಲದೆ ಸೂಳೆಕೆರೆ ಕಬ್ಬಿನಲ್ಲಿ (Glucose) "ಗ್ಲುಕೋಜ್" ಎಂಬುದು ಇತರ ಭಾಗದ ಕಬ್ಬುಗಳಲ್ಲಿರುವದಕ್ಕೆ ಎರಡರಷ್ಟು ಇತ್ತು. ಆದಕಾರಣ ಈ ಕಬ್ಬಿನಲ್ಲಿ ಇಳಿಯುವ ಶುದ್ಧ ಸಕ್ಕರೆಯ ಭಾಗವೂ ಅವಶ್ಯಕವಾಗಿ ಬಲುಕಡಿಮೆಯಾಗಿರಬೇಕು. ಸಾಲದ್ದಕ್ಕೆ ಇಲ್ಲಿಯ ಬೆಲ್ಲದಲ್ಲಿ ನೀರಿನಲ್ಲಿ ಕರಗಬಹುದಾದ ಬೂದಿಯು ಹೆಚ್ಚಾಗಿಯೇ ಕಲೆತು ಕೊಂಡಿತ್ತು. ಹೋಲಿಸಿ ನೋಡೋಣವೆಂದರೆ ಈ ಸಂಸ್ಥಾನದ ಇತರ ಪ್ರಾಂತದ ಬೆಲ್ಲದಲ್ಲಿ ಕಲೆತಿರುವ ಬೂದಿಯ ಅಳತೆಯನ್ನು ತೋರಿಸುವ ಪಟ್ಟಿ ಇಲ್ಲವಾಗಿದೆ. ಸಕ್ಕರೆಯನ್ನು ಹಳುಕು ಕಟ್ಟದಂತೆ ತಡೆಮಾಡುವ ವಿಷಯದಲ್ಲಿ ಕರಗುವ ಬೂದಿಯು ಗ್ಲೂಕೋಜ್ ಎಂಬ ಪದಾರ್ಥಕ್ಕಿಂತಲೂ ಪ್ರಬಲವಾದ್ದು. ಆದ್ದರಿಂದ ಸಕ್ಕರೆ ಮಾಡುವ ವಿಷಯದಲ್ಲಿ "ಗ್ಲೂಕೋಜ್" ಹೆಚ್ಚಾಗಿ ಇರುವ ಹಾಲಿಗಿಂತಲೂ ಕರಗುವ ಬೂದಿ ಹೆಚ್ಚಾಗಿರುವ ಹಾಲನ್ನು ವಿಶೇಷವಾಗಿ ಅಲ್ಲಗಳೆದು ಬಿಡುತ್ತಾರೆ. ~~ವಸ್ತುತಃ 188ನೆಯ 195ನೆಯ ಸಂಖ್ಯೆಯ ರಸಗಳಲ್ಲಿ ತುಂಬ ಗ್ಲೂಕೋಜಿನೊಂದಿಗೆ~~ ಅತ್ಯಧಿಕವಾಗಿ ಕರಗುವ 'ಬೂದಿಯೂ' ಇದ್ದುದರಿಂದ ಸಕ್ಕರೆಗೆ ಹಳಕು ಕಟ್ಟುವದಕ್ಕೆ ಸುತರಾಂ ಅವಕಾಶ ದೊರೆಯಲಿಲ್ಲ. ಆ ರಸಗಳಿಂದ ಅಂಟಾಗಿಯೂ ನಾರಾಗಿಯೂ ಇರುವ ಒಂದು ತರಹವಾದ ಗಟ್ಟಿಯಾಗದ ಪಾಕವನ್ನು ಮಾಡಬಹುದಾಯಿತೇ ಹೊರತು ಬೇರೆ ವಿಧವಾಗಿ ಮಾಡಲು

ಪ್ರಯತ್ನಿಸಿದ ಕಾರ್ಯವು ಎಳ್ಳಷ್ಟೂ ಸಫಲವಾಗಲಿಲ್ಲ. ಈ ಸಂದರ್ಭಗಳಿಂದ ಸೂಳೆಕೆರೆಯು ಪ್ರಥಮತಃ ಸಕ್ಕರೆ ಕಾರ್ಖಾನೆ ಇಡುವದಕ್ಕೆ ಸರಿಯಾದ ಪ್ರದೇಶವೆಂದು ಭಾವಿಸಲಾಗುವದಿಲ್ಲ. ಮೇಲೆ ಸೂಚಿಸಿದ 195ನೆಯ ಸಂಖ್ಯೆಯು ರಸದಲ್ಲಿ ಗ್ಲೂಕೋಜ್ ಅತ್ಯಧಿಕವಾಗಿತ್ತು. ಮೊದಲೇ ಬೇಕಾದಷ್ಟು ಸುಣ್ಣವನ್ನು ಬೆರಸಿದ್ದಾಗ್ಯೂ ಅದನ್ನು ಕುದಿಸುವಾಗ ಶೇಕಡಾ ಹತ್ತರಷ್ಟು ಗ್ಲೂಕೋಜ್ ಕಾಣಿಸಿಕೊಂಡಿತು. ಕಳೆದ ವರ್ಷದಲ್ಲಿ ಆದ ಫಲಿತಾಂಶವನ್ನು ಇಟ್ಟುಕೊಂಡು ನೋಡಿದರೆ ಈ ಗ್ಲೂಕೋಜಿನಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವು ಕಡುಗಾಸಲಿನಿಂದ ಉಂಟಾಗಿರಲಾರದೆಂದು ನನಗೆ ನಂಬಿಕೆ ಇದೆ. ಉಳಿದ ಭಾಗವು ಯಾವ ಕಾರಣಗಳಿಂದ ಉಂಟಾಯಿತೋ ಈಗ ತಿಳಿದು ಹೇಳಲು ಸಾಧ್ಯವಲ್ಲ. ಪುಣ್ಯ ವಶದಿಂದ ಈ ವಿಧವಾದ ಸಂಗತಿ ಯಾವದೂ ಈ ಸಂಸ್ಥಾನದ ಇತರ ಭಾಗಗಳಲ್ಲಿ ದೃಷ್ಟಿಗೆ ಬೀಳಲಿಲ್ಲ. 195ನೆಯದನ್ನು ತೆಗೆದುಕೊಂಡ ತಾಕಿನಿಂದಲೇ 188ನೆಯದನ್ನೂ ತೆಗೆದುಕೊಂಡಿತು; ಇದರ ಗುಣಗಳು ಅವೇ ಜಾತೀಯವಾಗಿದ್ದರೂ ಅದೇ ಪರಿಮಾಣದಲ್ಲಿರಲಿಲ್ಲ. ಇದರಲ್ಲಿ ಕರಗುವ ಬೂದಿಯೂ ಕರಗುವ ಕಾರ್ಬೋನೇಟುಗಳೂ (Carbonates) 195ನೆಯದರಲ್ಲಿದ್ದದ್ದಕ್ಕಿಂತಲೂ ಹೆಚ್ಚಾಗಿದ್ದವು. ಅದಕ್ಕೆ ಹುಳಿ ಹೋಗುವಷ್ಟು ಸುಣ್ಣ ಬೆರಸಿರಲಿಲ್ಲವೋ ಎಂಬದಾಗಿ ಸ್ವಲ್ಪ ಸಂದೇಹವಿದೆ. ಕಾಯಿಸಿ ಬೆಲ್ಲ ಮಾಡುವಾಗ ಎಲ್ಲಾ ರಸಗಳಲ್ಲಿನ ಶುದ್ಧ ಸಕ್ಕರೆಯು "ಸೂಕ್ರೋಜ್" ಕೆಟ್ಟು (Inversion) "ಗ್ಲೂಕೋಜ್" ಆಗಿತ್ತು. ಹೀಗೆ ಕೆಟ್ಟು ಹೋದುದು 189 ಮೊದಲು ಗೊಂಡು 195 ಸಂಖ್ಯೆಯವರಿಗಿನ ಎಲ್ಲಾ ರಸಗಳಿಗೆ ಸರಿಯಾಗಿ ಸುಣ್ಣ ಹಾಕದ್ದರಿಂದಲೇ ಆಯಿತೆಂದು ಹೇಳಲಾಗುವದಿಲ್ಲ. ಈ ಬಾಬಿನಲ್ಲಿ ಚೌಳಿನ ವಿಷಯವಾಗಿ ಇಷ್ಟು ಹೇಳಿದ ಬಳಿಕ ಇನ್ನೊಂದು ವಿಷಯವನ್ನು ಇಲ್ಲಿ ತಿಳಿಸಬಹುದಾಗಿ ತೋರುತ್ತದೆ—ಅದೇನೆಂದರೆ—ಸೂಳೆಕೆರೆ ಕೆಳಗೆ ಬಲು ಚೌಳಾಗಿ ಕೆಟ್ಟುಹೋಗಿದ್ದ ಒಂದು ತಾಕಿನಲ್ಲಿ ನನ್ನ ಹೇಳಿಕೆ ಮೇರೆ ಅದರ ಮೇಲೆ ನೀರು ಟೆಂಕೆಯಾಗಿ ನಿಲ್ಲದಂತೆ ಆಚೆಗೂ ಕೆಳಗೂ ಹರಿದು ಹೋಗುವಂತೆ ಮಾಡಿದರು; ಅವರಿಂದ ಬಹಳಮಟ್ಟಿಗೆ ಒಳ್ಳೆದಾಯಿತು. ಈ ವರ್ಷ ಅಲ್ಲಿ ನೆಲದಮೇಲೆ ಎಂದಿನಂತೆ ಚೌಳು ಉಕ್ಕಲಿಲ್ಲ, ಹೀಗೆಯೇ ಮಾಡುತ್ತ ಬಂದರೆ ಕಾಲಕ್ರಮೇಣ ಭೂಮಿಯು ಉತ್ತಮ ಸ್ಥಿತಿಗೆ ಬರಬಹುದು. ಈ ಅಪ್ರಸ್ತುತವಾದ ಸಂದರ್ಭದಲ್ಲಿಯೇ ಇನ್ನೂ ಒಂದು ಸಂಗತಿಯನ್ನು ಹೇಳಬಹುದಾಗಿದೆ. ಅದೇನೆಂದರೆ—ಇಲ್ಲಿ ಕಬ್ಬಿನ ಗದ್ದೆಗೂ ಕೂಡ ಬಲುಮಟ್ಟಿಗೆ ಬತ್ತದ ಗದ್ದೆಗೆ ಹೇಗೋ ಹಾಗೆ ನೀರು ಹಾಯಿಸುತ್ತಾರೆ. ಇತರ ದೇಶದ ಅನುಭವ ರೀತ್ಯಾ ಹೀಗೆ ಮಾಡುವದು ಕಬ್ಬಿಗೆ ವಿರೋಧವೆಂದು ತೋರುತ್ತದೆ. ಸಾಧಾರಣವಾಗಿ ಇಲ್ಲಿನ ಕಬ್ಬು ಗುಣದಲ್ಲೇನೋ ಬಹಳ ಒಳ್ಳೆಯದು. ಆದರೆ ಅದನ್ನು ಪೈರು ಮಾಡುವ ವಿಷಯದಲ್ಲಿಯೂ ಅದರಿಂದ ಸಕ್ಕರೆ ಮಾಡುವ ಕೈಗಾರಿಕೆಯ ವಿಷಯದಲ್ಲಿಯೂ ಇನ್ನೂ ಕಲಿತುಕೊಳ್ಳಬೇಕಾದ ಸಂಗತಿಗಳು ಅನೇಕವಾಗಿವೆ. ಈ ವಿಷಯದಲ್ಲಿ ಎಷ್ಟುಮಟ್ಟಿಗೆ ಅಭಿವೃದ್ಧಿ ಮಾಡುವದು ಸಾಧ್ಯವೆಂಬ ವಿಚಾರಕ್ಕೆ ಹಾವೇಯಿ ದ್ವೀಪದ ಕಬ್ಬಿನ ತೋಟಗಳೇ ನಿದರ್ಶನಗಳಾಗಿವೆ. ನೂರು ಎಕರೆ ಚದರಳತೆಯುಳ್ಳ ಅಲ್ಲಿನ ಒಂದು ಕಬ್ಬಿನ ತೋಟದಲ್ಲಿ ಸರಾಸರಿ ಎಕರೆಗೆ ಹತ್ತು ಟನ್ ಸಕ್ಕರೆಯ ಮೇರೆಗೆ ಉತ್ಪತ್ತಿಯಾಯಿತು.

ಸಕ್ಕರೆ ಗೆಣಸನ್ನು (Beet-root ಬೀಟ್ ರೂಟ್) ಅದರ ಬೆಳವಣಿಗೆಯ ಬೇರೆಬೇರೆಯವಸ್ಥೆಯಲ್ಲಿ ತೆಗೆದುಕೊಂಡು ವಿಭಾಗಮಾಡಿದ ಫಲಿತಾಂಶವನ್ನು ಸಹ ಪರಿಶಿಷ್ಟದಲ್ಲಿ ಕೊಟ್ಟಿದೆ. ಇವುಗಳನ್ನು ಮೆ॥ ಜಿ. ಎಲ್. ಚೆಂಬರ್ಸ್ ಎಂಬವರು ಕಳೆದ [illegible] ಜುಲೈ 15ರಲ್ಲಿ ಬೆಂಗಳೂರಿನಲ್ಲಿ ತಮ್ಮ ಮನೆಯ ಅಂಗಳದಲ್ಲಿ ನಟ್ಟಿದ್ದರು. ಅವು 7½ ತಿಂಗಳ ಕಾಲ ಬೆಳದಮೇಲೆ ಅಂದರೆ ಈ ವರ್ಷ ಮಾರ್ಚಿ 21ರಲ್ಲಿ ಅವುಗಳಲ್ಲಿನ ಪದಾರ್ಥಗಳನ್ನು ವಿಭಾಗಿಸಿ ನೋಡಲಾಗಿ ಅವು ಇತರ ದೇಶದಲ್ಲಿರುವ 'ಬೀಟ್ ರೂಟ್' ಗೆಡ್ಡೆಗಳಿಗೆ ಹೋಲಿಕೆಯಾಗಿದ್ದವು. ಆದರೂ ಕೂಡ ಬೀಟ್ ರೂಟಿನ ಕಿಂತಲೂ ಉತ್ತಮ ತರವಾದ ಕಬ್ಬಿನ ಸಾಗುವಳಿಗೆ ವಿಶೇಷವಾದ ಸೌಕರ್ಯವಿರುವ ಈ ಸಂಸ್ಥಾನದಲ್ಲಿ ಸಕ್ಕರೆಗಾಗಿ ಬೀಟು ರೂಟನ್ನು ವ್ಯವಸಾಯ ಮಾಡುವ ವಿಷಯದಲ್ಲಿ ಪರ್ಯಾಲೋಚನೆ ಮಾಡತಕ್ಕದ್ದಿಲ್ಲ. ಯಥಾ ಕಥಂಚಿತ್ ಮೈಸೂರು ದೇಶದಲ್ಲಿ ಪ್ರಕೃತದಲ್ಲಿ ಸಕ್ಕರೆಮಾಡುತ್ತಿರುವ ವಿಧಾನವನ್ನು ಸುತರಾಂ ಬೇರೆ ವಿಧವಾಗಿ ಮಾರ್ಪಾಟು ಮಾಡುವವರೆಗಾದರೂ ಬೀಟರೂಟಿನ ವಿಷಯದಲ್ಲಿ ಯೋಚನೆ ಮಾಡಬೇಕಾದ್ದಿಲ್ಲ.

ಪೈರಿಗೆ ಬೀಳುವ ಕ್ರಿಮಿಕೀಟಗಳು.

ಕ್ರಿಮಿಶಾಸ್ತ್ರವೂ ರಸಾಯನಶಾಸ್ತ್ರವೂ ಬಹುದೂರ ಭೇದಿಸಿ ಹೋಗುವ ಶಾಸ್ತ್ರಗಳಾದ್ದರಿಂದ ಇವೆರಡರಲ್ಲಿ ಯಾವದೊಂದರಲ್ಲಾದರೂ ಸಫಲವಾಗಿ ಕೃಷಿ ಮಾಡಬೇಕೆಂಬ ಅಪೇಕ್ಷೆಯುಳ್ಳ ಮನುಷ್ಯನು ಎರಡನ್ನೂ ಅಭ್ಯಾಸ ಮಾಡಲಾರನು. ಆದಪ್ರಯುಕ್ತ ಕ್ರಿಮಿ ಶಾಸ್ತ್ರದ ವಿಷಯದಲ್ಲಿ ವಿಶೇಷವಾಗಿ ಗಮನ ಕೊಟ್ಟಿಲ್ಲ. ಆದರೂ ವ್ಯವಸಾಯ ಶಾಸ್ತ್ರದ ಒಂದು ಮುಖ್ಯಾಂಗವಾದ ಆ ಶಾಸ್ತ್ರ ವಿಚಾರವನ್ನು ಪ್ರಕೃತದಲ್ಲಿ ಕೈಕೊಳ್ಳುವವರು ಯಾರೂ ಇಲ್ಲವಾದ್ದರಿಂದ ಅದಕ್ಕಾಗಿ ಸ್ವಲ್ಪ ಕಾಲವನ್ನು ವಿನಿಯೋಗಿಸಿ ಈಗಿನ ಸಂದರ್ಭಗಳಲ್ಲಿ ಎಷ್ಟುಮಟ್ಟಿಗೆ ಅನುಕೂಲಿಸುತ್ತದೆಯೋ ಅಷ್ಟುಮಟ್ಟಿಗೆ ವಿಚಾರವನ್ನು ನಡಿಸಬೇಕಾಯಿತು. ಕ್ರಿಮಿಗಳನ್ನು ನಿರ್ಮೂಲ ಮಾಡುವ ವಿಷಯದಲ್ಲಿ ಸಲಹೆಗಳನ್ನೂ ಸಹಾಯವನ್ನೂ ಅಪೇಕ್ಷಿಸಿ ಬರೆದುಕೊಂಡ ಲೇಖನಗಳು ಅನೇಕವಾಗಿವೆ. ಆದರೆ ಹುಳುಗಳು ಬಿದ್ದ ಸಂಗತಿಯು ಎಂದಿನಂತೆಯೇ ಕಾಲ ಮೀರಿದ ಮೇಲೆ ತಿಳಿಯಬಂದಿದೆ. ಹುಳುಗಳು ಬಿದ್ದ ಕೆಲವು ತಿಂಗಳು ಕಾಲ ಸುಮ್ಮಗೆ ಬಿಟ್ಟಿರುತ್ತಾರೆ. ಆ ವೇಳೆಗೆ ಅವು ಪೈರನ್ನು ಹಾಳುಮಾಡಿಬಿಟ್ಟು, ಪೂರ್ಣವಾಗಿ ಬೆಳೆದು ಕಣ್ಮರೆಯಾಗಿ ಹೋಗಿರುತ್ತವೆ.

ಈ ಕ್ರಿಮಿಗಳು ಬಲಿಯುತ್ತಾ ಬಂದು ಹರಯಕ್ಕೆ ಬರುವವರೆಗೂ ಅವುಗಳ ಹಸಿವೂ ಹೆಚ್ಚುತ್ತಾ ಬಂದು ಪೈರುಗಳಿಗೆ ದಿನದಿನಕ್ಕೆ ಹೆಚ್ಚು ನಷ್ಟವಾಗುತ್ತ ಬಂದಿರಬೇಕು. ಒಂದನೆಯ ಬುಲ್ಲೆಟಿನ್ ಎಂಬ ಸಂಚಿಕೆಯಲ್ಲಿ ಹೇಳಿರುವಂತೆ, ಪೈರಿಗೆ ಕೇಡು ಮಾಡುವ ಲಾರ್ವಿ—ಎಂದರೆ ಕೋಶಸ್ಥಿತಿಯಲ್ಲಿರುವ ಹುಳು ಚೆನ್ನಾಗಿ ಬಲಿತಮೇಲೆ ತಟಸ್ಥಿತಿಯನ್ನು (Pupa) ಅನುಭವಿಸುವದಕ್ಕಾಗಿ ಸುರಕ್ಷಿತವಾದ ಸ್ಥಳಗಳಿಗೆ ಸ್ವಾಭಾವಿಕವಾಗಿ ಹರಿದು ಹೋಗುತ್ತವೆ. ಹುಳುಗಳು ಈ ಸ್ಥಿತಿಗೆ ಬರುವದಕ್ಕೆ ಸ್ವಲ್ಪ

ಮುಂಚೆ ಇಲ್ಲಿಗೆ ಸಮಾಚಾರಬಂತು ; ಅವುಗಳಿಗೆ ಯಾವ ಪ್ರತೀಕಾರವನ್ನೂ ಮಾಡುವದಕ್ಕೆ ಮುಂಚೆಯೇ ಅವು ತಾವಾಗಿಯೇ ಕಣ್ಮರೆಯಾಗಿ ಹೋದವು. ಆದರೆ ರೈತರು ಸಾಮಾನ್ಯವಾಗಿ ಊಹಿಸಿಕೊಂಡಿರುವಂತೆ ಅವು ಸತ್ತುಹೋಗಿಲ್ಲ ; ಮುಂದಿನ ವರ್ಷ ಅದೇ ಋತುವಿನಲ್ಲಿಯೇ ಇಲ್ಲವೇ ಒಂದೆರಡು ವರುಷಗಳ ಬಳಿಕಲೊ ಪುನಃ ಯಾವಚ್ಛಕ್ತಿಯಿಂದಲೂ ತಲೆಹಾಕಲು ಸಿದ್ಧವಾಗಿ ಬೇರೊಂದು ಅವಸ್ಥೆಯಲ್ಲಿವೆ. ಮಳೆಗೆ ಈ ಕ್ರಿಮಿಗಳೆಲ್ಲಾ ಸತ್ತುಹೋಗುತ್ತವೆ ಎಂದು ಭಾವಿಸಿಕೊಳ್ಳುವದು ಬಹು ಸುಖವಾದ ಭಾವನೆಯಾಗಿರಬಹುದು, ಆದರೆ ಮಾತ್ರ ಬಲು ತಪ್ಪಾದುದಾಗಿದೆ.

ಹರಳು ಗಿಡಕ್ಕೆ ಬೀಳುವ ಹುಳ — ದಾವಣಗೆರೆಯಲ್ಲಿ ಹರಳು ಗಿಡಗಳಿಗೆ ಕಂಬಳಿ ಹುಳಾ ಬಿದ್ದು ಪೈರು ಬಹಳವಾಗಿ ಕೆಡುತ್ತಿರುವದಾಗಿ ಕಳೆದ ವರ್ಷ ರಿಪೋರ್ಟು ಬಂತು. ಒಡನೆ " ಪಾರಿಸ್ ಗ್ರೀನ್ " ಎಂಬ ಪದಾರ್ಥವನ್ನು ಉಪಯೋಗಿಸಹೇಳಿ ಸಲಹೆ ಕೊಟ್ಟಿತು. ಅದಕ್ಕೆ ಪ್ರತ್ಯುತ್ತರವಾಗಿ ಅಲ್ಲಿಂದಾಚೆ ಬಳ್ಳಿ ಮಳೆಬಿದ್ದು ಕಂಬಳಿ ಹುಳುಗಳೆಲ್ಲಾ ಸತ್ತುಹೋಯಿತೆಂದೂ ಮಾದರಿಗಾಗಿ ಕಳುಹಿಸುವದಕ್ಕೆ ಕೂಡ ಒಂದು ಹುಳುವೂ ಸಿಕ್ಕುವದಿಲ್ಲವೆಂದೂ ಸಮಾಚಾರ ಬಂತು. ಈ ವರ್ಷವೂ ದಾವಣಗೆರೆಯಿಂದ ಅದೇ ಜಾತೀಯವಾದ ಸಮಾಚಾರವೇ ಅಪೇತರದ ಫಲಿತಾಂಶದೊಡನೆ ಬೇರೆ ಮಾರ್ಗವಾಗಿ ಬಂತು. ಕಂಬಳಿಹುಳು ಬಿದ್ದ ಸಮಾಚಾರವು ಬಂದು ಮುಟ್ಟುವುದಕ್ಕೆ ಅತಿ ವಿಳಂಬವಾಗಿ ಹೋದುದರಿಂದ ಪಾರಿಸ್ ಗ್ರೀನನ್ನು ಉಪಯೋಗಿಸಲಾಗಲಿಲ್ಲ. ಮಳೆಯಿಂದ ದೊಡ್ಡ ಕಂಬಳೀ ಹುಳುಗಳೇನೋ ಸತ್ತಿರಬಹುದು. ಆದರೆ ಮಳೆ ಬಿದ್ದ ಬಳಿಕ ಸತ್ತಾಗಲಿ ಜೀವದೊರಸೆಯಾಗಲಿ ಗೋಚರವಾಗದ ಕಾರಣ ಎಲ್ಲವೂ ಮಳೆಯಿಂದ ಸತ್ತುಹೋದವೆಂದು ಈಗ ಭಾವಿಸಲ್ಪಡುತ್ತಿರುವ ಈ ಹುಳುಗಳ ಮರಿಗಳು ಹಿಂದಿನ ವರ್ಷಗಳಲ್ಲಿ ನಡೆದಂತೆಯೇ ಮುಂದಿನ ವರ್ಷವೂ ಆ ಡಿಸ್ಟ್ರಿಕ್ಟಿನಲ್ಲಿ ಫಸಲನ್ನು ಸ್ವಲ್ಪಭಾಗ ಹಾಳುಮಾಡಲು ಬಹುಶಃ ಸಿದ್ಧವಾಗಿರಬಹುದು. ಹುಳುಗಳು ಬಹು ಕ್ಷಿಪ್ರವಾಗಿ ಹೆಚ್ಚಿಕೊಳ್ಳುತ್ತವೆ. ಅವುಗಳನ್ನು (ಅನೇಕವಾಗಿ ತಟಸ್ಥಿತಿ (Pupa) ಯಲ್ಲಿರುವಾಗಲೇ) ಧ್ವಂಸಮಾಡುವ ಅನೇಕ ಶತ್ರುಗಳು ಮಾತ್ರ ಇಲ್ಲದಿದ್ದರೆ ಅವು ಅಪರಿಮಿತವಾಗಿ ಹೆಚ್ಚಿಹೋಗಿ ಎಲ್ಲಾವಿಧವಾದ ವ್ಯವಸಾಯವೂ ಕಾರ್ಯತಃ ಅಸಾಧ್ಯವಾಗಿ ಹೋಗುತ್ತಿತ್ತು. ಮೇಲೆ ಹೇಳಿದ ಸಂಚಿಕೆಯಲ್ಲಿ ನಿರೂಪಿಸಿದಂತೆ ನಾವು ಪ್ರಕೃತಿಗೆ ಸಹಾಯಮಾಡಿ ನಮ್ಮ ಉಪಯೋಗಕ್ಕಾಗಿ ಹೆಚ್ಚು ಬೆಳೆಯನ್ನು ಹೇಗೆ ಬೆಳೆದುಕೊಳ್ಳುತ್ತೇವೆಯೋ ಹಾಗೆಯೇ ಆ ಪೈರುಗಳಿಗೆ ಹುಳುಗಳಿಂದ ಬಾಧೆಯಾಗದಂತೆಯೂ ನೋಡಿಕೊಳ್ಳಬೇಕು. ಫಸಲುಗಳನ್ನು ನಾವು ಕೊಯ್ದುಕೊಳ್ಳಬೇಕು, ಸಾಧ್ಯವಾದಮಟ್ಟಿಗೂ ಹುಳುಗಳಿಗೆ ಕೊಡದಿರಬೇಕು. ಈ ಹುಳುಗಳಲ್ಲಿ ಯಾವದನ್ನೂ ನಿಶ್ಶೇಷವಾಗಿ ಧ್ವಂಸ ಮಾಡುವದು ಸಾಧ್ಯವಲ್ಲ. ಆದರೂ ಅವುಗಳಿಂದ ಆಗಬಹುದಾದ ನಷ್ಟವನ್ನು ಬಹಳಮಟ್ಟಿಗೆ ತಪ್ಪಿಸುವದು ನಮ್ಮ ಕೈಯಲ್ಲಿದೆ. ಎಲೆ ತಿನ್ನುವ ಹುಳುಗಳಿಂದಾಗುವ ಕೇಡನ್ನು ಹೀಗೆ ತಪ್ಪಿಸಬೇಕಾದರೆ ಪ್ಯಾರಿಸ್ ಗ್ರೀನ್ ಎಂಬ ವಿಷದ ಪ್ರಯೋಗವೇ ಸರ್ವೋತ್ತಮವಾದ ಉಪಾಯವು ಈ ವಿಷಯವನ್ನು ಹಿಂದೆ ಏತದುದ್ದೇಶವಾಗಿಯೇ ಬರೆದ ಒಂದು 'ಬುಲ್ಲೆಟಿನ್' ಎಂಬ ಸಂಚಿಕೆಯಲ್ಲಿ ಸೂಚಿಸಿದೆ.

(Date Palm Pest) ಈಚಲುಮರಕ್ಕೆ ಬೀಳುವ ದುಂಬಿ—ಮಿ॥ ಎ. ಎಸ್. ಕರನ್ಸ್ ಎಂಬುವರು ಮೈಸೂರು ಸರ್ಕಾರದ ಉದ್ಯೋಗದಿಂದ ಹಿಂದಿರುಗುವುದಕ್ಕೆ ಸ್ವಲ್ಪಮುಂಚೆ ಎರಡುಜಾತಿಯ ದುಂಬಿಗಳನ್ನು (Beetles) ಕಳುಹಿಸಿಕೊ[illegible]. ಈ ಜಾತೀಯ ಹುಳುಗಳು ಮೈಸೂರು ಸರ್ಕಾರದ ಅಬ್ಕಾರಿ ಇಲಾಖೆಗೆ ಸೇರಿದ ರಿಸರ್ವ್ ಎಂಬ ಸರ್ಕಾರಿ ಈಚಲು ಕಾಡುಗಳಲ್ಲಿ ಮರಗಳನ್ನು ಹಾಳುಮಾಡುತ್ತಿದ್ದವು. ಇವುಗಳಲ್ಲಿ ಒಂದು ಎಡಸಾರಿಕೆ ಗಾತ್ರವಾಗಿ ಕರಿ ಚುಕ್ಕೆಗಳುಳ್ಳದ್ದಾಗಿಯೂ ನೀಳವಾದ ಮೂತಿಯುಳ್ಳದ್ದಾಗಿಯೂ ಇತ್ತು. ಈ ವಿಜಾತೀಯವಾದ ಮೂತಿಯು ಈ ಬಗೆಯ ದುಂಬಿಗೇ ಸಹಜವಾದ್ದರಿಂದ ಈ ಜಾತಿಗೆ 'ಮೂಗಿನ ದುಂಬಿ' (Snout beetles) ಎಂಬ ಹೆಸರಿಟ್ಟಾಗಿದೆ. ಇನ್ನೊಂದು ದುಂಬಿಯು ಇನ್ನು ಸ್ವಲ್ಪ ದೊಡ್ಡದಾಗಿಯೂ ಕಪ್ಪು ಮಿಶ್ರವಾದ ಬೂದುಬಣ್ಣವಾಗಿಯೂ ಬೆನ್ನಿನಲ್ಲಿ ಉಬ್ಬಾಗಿಯೂ ಇತ್ತು. ಮೊದಲನೆಯದು ನಾಶಕರವಾದ ಕೀಟಗಳಿಗೆ ಪ್ರಖ್ಯಾತವಾದ ಒಂದು ಕೀಟವ್ರಜಕ್ಕೆ (Family of insects) ಸೇರಿದ್ದು. ಎರಡನೆಯದು (Tumbling bug) 'ಉರುಳುವ ತಿಗಣೆ' ಎಂದು ಪ್ರಸಿದ್ಧವಾದ ಹುಳುಗಳ ಗುಂಪಿಗೆ ಸೇರಿದ್ದು. ಮೊದಲನೆಯದು ತನ್ನ (Larval stage) ಕೋಶಸ್ಥಿತಾವಸ್ಥೆಯಲ್ಲಿ ಈಚಲಿನ ಸುಳಿಯನ್ನೇ ಕೊರೆದು ಅದನ್ನು ತಪ್ಪದೆ ಹಾಳುಮಾಡುತ್ತವೆ ; ಸಾಕಾದಷ್ಟು ಹುಳುಗಳಿದ್ದರೆ ಕೊನೆಗೆ ಮರವನ್ನೇ ಒಣಗಿಸಿಬಿಡುತ್ತವೆ. ಇದಕ್ಕೆ ಕರ್ನ್ಸ್ ಎಂಬುವರು ಹಿಂದೆ ಹೇಳಿದ ಪ್ರತೀಕಾರವನ್ನೇ ನಾನು ಹೇಳುತ್ತೇನೆ— ಅದೇನೆಂದರೆ ಅಂಥ ಮರಗಳನ್ನು ಸುಡಬೇಕು. ಕಲ್ಕತ್ತಾವಿನಲ್ಲಿ 'ಇಂಡಿಯನ್ ಮ್ಯೂಸಿಯಮ್' ಎಂಬಲ್ಲಿಗೆ ಅಧ್ಯಕ್ಷರಾದ (Superintendent) ಆಲ್ಕಾಕ್ I. M. S. ಅವರು ದಯವಿಟ್ಟು ಈ ಹುಳುಗಳು ಇಂಥವೆಂದು ಗೊತ್ತುಮಾಡಿ ಹೀಗೆ ಬರೆದಿದ್ದಾರೆ—" ನಿಮ್ಮ 195ನೆಯ ಸಂಖ್ಯೆಯ (ಕಾಗದದೊಡನೆ) ಕಳುಹಿಸಿದ ದುಂಬಿಗಳು " ಪಾಂ " ಜಾತಿಯ ಗಿಡಕ್ಕೆ ಸಾಧಾರಣವಾಗಿ ಬೀಳುವ ದುಂಬಿಗಳು. ಇವುಗಳಲ್ಲಿ ಉದ್ದಮೂತಿಯದು Rhynchophophorus ferrugineus, Olio ಎಂಬ ಜಾತಿಯುದು. ಇನ್ನೊಂದು Oryctes rhinoceros, Linn ಎಂಬ ಜಾತಿಯದು. ಈ ಹುಳುಗಳಿರುವ ಮರಗಳನ್ನೆಲ್ಲಾ ಕಡಿದು ಸುಡುವದೊಂದೇ (ಸರಿಯಾದ) ಪ್ರತೀಕಾರವಾಗಿ ನನಗೆ ತೋರುತ್ತದೆ. " ಈ ಹುಳುಗಳು (Larvea) ದನದ ಗೊಬ್ಬರದಲ್ಲಿ ಬೆಳೆಯುತ್ತವೆ ಎಂಬದಾಗಿ ಹೇಳಿಕೊಳ್ಳುವ ಅಭಿಪ್ರಾಯಕ್ಕೆ ಯಾವ ಆಧಾರವೂ ಇಲ್ಲವೆಂದು ನಂಬುತ್ತೇನೆ. ಆದುದರಿಂದ ಈಚಲು ಕಾಡಿಗೆ ದನಕರುಗಳು ಬಾರದಂತೆ ತಡೆ ಮಾಡಬೇಕೆಂದು ಹೇಳುವ ಮಾತು ನನಗೆ ತಿಳಿದಮಟ್ಟಿಗೂ ಈ (ದುಂಬಿಗಳ ವಿಷಯವಾದ) ಪ್ರಶ್ನೆಯನ್ನು ಯಾವಪಕ್ಷವಾಗಿಯೂ ತಿರುಗಿಸಲಾರದು.

ಕಾಫಿಗೆ ಬೀಳುವ ಹುಳು : Green bug (ಹಸರು ತಿಗಣೆ) ಈ (1901-02) ವರ್ಷದ ಆದಿಭಾಗದಲ್ಲಿ ಮದ್ರಾಸ್ ಮೆಯಿಲ್ ಮತ್ತು ಪ್ಲಾಂಟಿಂಗ್ ಒಪಿನಿಯನ್ ಎಂಬ ವೃತ್ತಾಂತ ಪತ್ರಿಕೆಗಳಲ್ಲಿ ಕೆಲವು ಲೇಖನಗಳು ಪ್ರಸಿದ್ಧವಾದವು. ಅವುಗಳಲ್ಲಿ ಕೆಲವು ಹುಳುಗಳು ಕಾಫಿ ಗಿಡಗಳ ನೆರಳಿಗಾಗಿ ಬೆಳೆಯುವ ಅತ್ತಿಯ ಜಾತಿಗೆ ಸೇರಿದ ಬಸರಿ ಮುಂತಾದ ಗಿಡಗಳನ್ನು ವಿಶೇಷವಾಗಿ ಆಕ್ರಮಿಸಿಕೊಂಡು ತನ್ಮೂಲಕ ಕಾಫಿ ಗಿಡಗಳಿಗೂ ಅವುಗಳ ನೆರೆಹೊರೆಯ ಕಾಡುಗಿಡು (Weeds) ಗಳಿಗೂ

ಬಿದ್ದುದಾಗಿ ಬರೆದಿದ್ದವು. ಆ ಲೇಖನಗಳು, ಮೈಸೂರು ಸಂಸ್ಥಾನದಲ್ಲೆಲ್ಲಾ ಸರ್ವೋತ್ತಮವಾದ ಕಾಫಿ ಬೆಳೆಯುವ (Santaveri) ಸಂತವೇರಿ ಎಂಬ ಸ್ಥಳದಿಂದ ಕಳುಹಿಸಿದವು. ನಾವು ಅಲ್ಲಿಗೆ ಹೋಗಿ ನೋಡಲಾಗಿ ಆ ಜಾತಿಯ ಹುಳುವು ಬಾಬಾಬುಡರ್‌ಬೆಟ್ಟಕ್ಕೆ ಸಮೀಪವಾಗಿ ಬಯಲುಸೀಮೆಯಲ್ಲಿ ಯಾವುದೋ ಒಂದು ಮರದಲ್ಲಿಮಾತ್ರ ಇರುತ್ತಿದ್ದಂತೆ ತಿಳಿದಿದ್ದಹಾಗೂ ಆ ಡಿಸ್ಟ್ರಿಕ್ಟಿನಲ್ಲಿ ಅದಕ್ಕೆ ಪೂರ್ವ ಕಾಫಿ ತೋಟಗಳಲ್ಲಿ ಕಾಣಿಸಿಕೊಳ್ಳದಿದ್ದಹಾಗೂ ಆದರೆ ಆವರ್ಷ ಹಟಾತ್ತಾಗಿ ಕಾಣಿಸಿಕೊಂಡು ಭಯಂಕರವಾಗಿ ಅತಿಕ್ಷಿಪ್ರದಲ್ಲಿಯೇ ಹರಡಿಕೊಂಡಹಾಗೂ ತಿಳಿಯಬಂದಿತು. ಅನೇಕ ಅತ್ತಿಯ ಗಿಡಗಳು (ficus glomerata) ಹುಳುಗಳಿಂದ ತುಂಬಿಹೋಗಿದ್ದವು; ಈ ಗಿಡಗಳ ಕೆಲವು ಕೊಂಬೆಗಳು ಆಗಲೇ ಸತ್ತುಹೋಗಿದ್ದವು. ಆ ಹುಳು ಬಿದ್ದ ಪ್ರದೇಶ ಸ್ಥಳಗಳಾಗಿ ಹುಳುವಿಲ್ಲದ ಒಂದು ಮರಕೂಡ ಕಣ್ಣಿಗೆ ಬೀಳಲಿಲ್ಲ. ಕಾಫಿಗಿಡವೂ ಕೂಡ ಬಲವಾಗಿ ನೊಂದಿತ್ತು. ನಾನು ಅಲ್ಲಿಗೆ ಹೋಗುವದಕ್ಕೆ ಮುಂಚೆ (Kerosine Emulsion) ಕೆರೋಸಿನ್ ಎಮಲ್ಷನ್ ಎಂಬುದನ್ನು ಪ್ರಯೋಗಿಸುವಹಾಗೆ ಹೇಳಿದ್ದೆನು. ಆದರೆ ಅದನ್ನು ಉಪಯೋಗಿಸಬೇಕಾದ ಪ್ರದೇಶದ ವಿಸ್ತಾರವನ್ನೂ ಹುಳುಬಿದ್ದ ಗಿಡಗಳ ಎತ್ತರವನ್ನೂ ಪ್ರತ್ಯಕ್ಷವಾಗಿ ನೋಡಿದ ಬಳಿಕ ಆರೀತಿಯಿಂದ ಪ್ರಯೋಗವು ಪ್ರಾಯಶಃ ಅಸಾಧ್ಯವೆಂಬದಾಗಿಯೂ ಅದಕ್ಕಾಗಿ ತಗಲುವ ವೆಚ್ಚವನ್ನು ನೋಡಿದರೆ ಸರ್ವಥಾ ಮಿತಿಮೀರಿದ್ದಾಗಿಯೂ ವ್ಯಕ್ತವಾಯಿತು. ಒಂದು ಸ್ಥಳದಲ್ಲಿ ಅನೇಕ ವರ್ಷಗಳಿಂದ ಅತಿಮಿತವಾಗಿ ಅಡಗಿದ್ದು ಅದೇ ಸ್ಥಳದಲ್ಲಿ ಈಗ ಹುಳುಗಳು ಹಟಾತ್ತಾಗಿ ಹೆಚ್ಚಲು ಕಾರಣವೇನು ಎಂದು ನಿಷ್ಕರ್ಷಿಸುವದಕ್ಕೆ ಸಾಧ್ಯವಾದಕೂಡಲೇ ಯಾವದಾದರೂ ಕಾರ್ಯಕಾರಿಯಾದ ಪ್ರತಿಕ್ರಿಯೆಯು ತೋರಿದರೂ ತೋರಬಹುದು. ಆದರೆ ಈ ಕಾರ್ಯವು ಅದಕ್ಕೋಸ್ಕರಲೇ ಸಂಸ್ಕೃತನಾಗಿಯೂ ಅದರ ವಿಚಾರಕ್ಕೂ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳ ವಿಚಾರಕ್ಕೂ ತನ್ನ ಕಾಲವನ್ನೆಲ್ಲಾ ವಿನಿಯೋಗಿಸತಕ್ಕವನಾಗಿಯೂ ಇರುವವನಿಗೆ ಮಾತ್ರವೇ ಸಾಧ್ಯವೆಂಬುದು ವ್ಯಕ್ತವಾಗಿಯೇ ಇದೆ.

ಇಂಡಿಯಾ ಸರಕಾರದ (Entomologist) ಕೀಟಶಾಸ್ತ್ರಜ್ಞರಾದ ಮಾಜಿ ಮೆ॥ ಲಯೊನೆಲ್ ಡಿ. ನೈಸಿವಿಲ್ಲೆ ಎಂಬವರಿಗೆ ಕೆಲವು ಮಾದರಿಗಳನ್ನು ಕಳುಹಿಸಲಾಯಿತು. ಈ ಹುಳುಗಳನ್ನು ನಿರ್ಮೂಲನ ಮಾಡಲು ಕೆಲವು ಪ್ರತೀಕಾರಗಳನ್ನು ತಿಳಿಸಬೇಕೆಂದೂ ಅವರನ್ನು ಕೇಳಿಕೊಳ್ಳಲಾಯಿತು ಮತ್ತು ಈ ಹುಳುಗಳು ಆ ಕೆಟ್ಟಹೆಸರಿನ 'ಹಸುರು ತಿಗಣೆಗಳು' ಎಂದು ನನಗೆ ಅನುಮಾನ ವುಂಟಾಗಿದ್ದರಿಂದಲೂ, ಅವುಗಳನ್ನು ತಿಂದು ಇವುಗಳ ಹಾವಳಿಯನ್ನು ಪರಿಹರಿಸುವ ಹುಳುಗಳು ಯಾವದಾದರೂ ಇರಬಹುದೆಂಬ ಭ್ರಾಂತಿಯಿಂದ 'ಲೇಡಿಬರ್ಡ್ಸ್' ಎಂಬ ಹುಳುಗಳನ್ನು ಆಸ್ಟ್ರೇಲಿಯಾ ದೇಶದಿಂದ ತರಿಸುವದಕ್ಕಾಗಿ ಅನೇಕನಾಗಿ ಧನವ್ಯಯವಾಗಿದ್ದರಿಂದಲೂ, ಈವಿಧವಾದ ಪ್ರಯತ್ನವು ನಿಷ್ಫಲವೆಂದು ನನಗೆ ಅಭಿಪ್ರಾಯವಿದ್ದದ್ದರಿಂದಲೂ, ಈ ವಿಷಯವಾಗಿಯೂ ಅಭಿಪ್ರಾಯ ಕೊಡಬೇಕೆಂದು ಅವರನ್ನು ಪ್ರಾರ್ಥಿಸಿದೆನು. ಅದಕ್ಕೆ ಅವರು ಹೀಗೆ ಪ್ರತ್ಯುತ್ತರ ಕೊಟ್ಟರು :—

ನಿಮ್ಮ 23ನೆ ತಾರೀಖಿನ 58ನೆಯ ಸಂಖ್ಯೆಯ ಕಾಗದಕ್ಕೆ ಪ್ರತ್ಯುತ್ತರವೇನೆಂದರೆ—ಕಾಫೀ ಗಿಡಗಳನ್ನೂ ಅದರ ನೆರಳು ಮರಗ[illegible] ನಾಶಮಾಡಿದವೆಂದು ನೀವು ಕಳುಹಿಸಿದ (Scale insects) ಪರೆ ಹುಳುಗಳು Lecanium viride, green ಎಂಬ[illegible]ಗಳು. ಈ ಹುಳುವು ಕಾಫಿ ಪೈರಿಗೆ ಬಹಳ ಹಾನಿಕರವಾದ್ದೆಂದು ಕಳೆದ ಹಲವು ವರ್ಷಗಳಿಂದ ತಿಳಿದಿದೆ. ಕಳುಹಿಸಿಕೊಟ್ಟ ಹುಳುಗಳ ಮೈಮೇಲಿನ ಹಿಟ್ಟಿನ ಬಣ್ಣವು ಹುಳುವಿನ ಮೈಯಿಂದ ಹೊರಡುವ ರಸವಲ್ಲ ಅದು ಒಂದು ಜಾತಿಯ ಬೂಟು. ಈ ಬೂಜು ಶೀತಕಾಲದಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುತ್ತದೆ.

ಔಷಧಗಳ ವಿಷಯದಲ್ಲಿಯೋ ಎಂದರೆ ಇದನ್ನು ಓಡಿಸುವದಕ್ಕೆ ಕೆರೋಸಿನ್ ಎಮಲ್ಷನ್ ಎಂಬುದೊಂದೇ ಕಾರ್ಯಕಾರಿಯಾದ್ದೆಂದು ಕಾಣುತ್ತದೆ. ಇದೇ ಬಹಳ ಅಗ್ಗವಾದ್ದೆಂದೂ ಗೊತ್ತಾಗುವದು. ದಕ್ಷಿಣ ಹಿಂದೂಸ್ಥಾನದ ಪ್ಲಾಂಟರುಗಳು ಆಸ್ಟ್ರೇಲಿಯದಿಂದ ಲೇಡಿ ಬರ್ಡ್ಸ್ ಎಂಬ ಹುಳುಗಳನ್ನು ತರುವದರ ಮೂಲಕ ಈ ಹುಳುಗಳನ್ನು ನಿರ್ಮೂಲ ಮಾಡುವದು ಸಾಧ್ಯವೆ ಎಂಬ ವಿಷಯದಲ್ಲಿ ಅಭಿಪ್ರಾಯ ಕೊಡುವದಕ್ಕೆ ನನ್ನಲ್ಲಿ ಯಾವ ಆಧಾರವಿಲ್ಲವಾದಕಾರಣ ನಾನು ಸದ್ಯಃ ಅಭಿಪ್ರಾಯ ಕೊಡುವ ಸ್ಥಿತಿಯಲ್ಲಿಲ್ಲ. ಆದರೂ ಆಸ್ಟ್ರೇಲಿಯದಿಂದ "ಲೇಡಿ ಬರ್ಡ್ಸ್" ಹುಳುಗಳನ್ನು ತರುವದು ನಿಷ್ಫಲವೆಂದು ನನಗೆ ತೋರುತ್ತದೆ. ಯಾಕೆಂದರೆ ಎಲ್ಲಾ ಹುಳುಗಳನ್ನೂ ತಿನ್ನುವ ಕೆಲವು ಜಾತಿಯ ಹುಳುಗಳ ವಿನಾ ಇನ್ನೊಂದೂ 'ಹಸರು ತಿಗಣೆ' ಯನ್ನು ತಿನ್ನುವ ಸಂಭವವಿಲ್ಲ. ಆದ್ದರಿಂದ ಪ್ರಕೃತದಲ್ಲಿ ಮಾಡಬೇಕಾದ್ದೇನೆಂದರೆ ಈ ಹುಳುಗಳ ಜನ್ಮಭೂಮಿ ಯಾವದೆಂದು ಮೊದಲು ಕಂಡುಹಿಡಿದು ಆ ಬಳಿಕ ಇವುಗಳನ್ನು ತಿನ್ನುವ ಲೇಡಿ ಬರ್ಡ್ಸನ್ನು ತಿಳಿದು [ಆ ಹುಳುಗಳ ವೈರಿಗಳು ಕೂಡ ಬಂದು ಬಿಡದಂತೆ ನೋಡಿಕೊಂಡು] ಅದನ್ನು ಮಾತ್ರ ತರಬೇಕು. Icerya purchasi ಎಂಬ ಹುಳುವನ್ನು ನಾಶಮಾಡುವದಕ್ಕಾಗಿ vadenia cardinalis ಎಂಬ ಹುಳುವನ್ನು ತಂದದ್ದು ಸಫಲವಾದ್ದಕ್ಕೆ ಕಾರಣವೇನೆಂದರೆ ಇವೆರಡೂ ಆಸ್ಟ್ರೇಲಿಯಾ ಖಂಡದವು ಅಲ್ಲಿಂದ ಈ ಹುಳುವನ್ನು ಕಾಲಿಫೋರ್ನಿಯವಿಗೆ ತಂದರು. ಆದಪ್ರಯುಕ್ತವೇ ಮೆ॥ ಕೊಬಲರವರು Icerya purchasi ಯ ಶತ್ರುವನ್ನು ಹುಡುಕುವದಕ್ಕೆ ಆಸ್ಟ್ರೇಲಿಯಾ ಕಡೆ ಕಣ್ಣಿಟ್ಟರು. ಈ ಪ್ರಯತ್ನವು ಸಫಲವಾದ ಮಾತ್ರಕ್ಕೇನೆ ನಾವು ಸರಿಯಾದ ಕಾರಣವಿಲ್ಲದೆ; Scale insects ಪರೆ ಹುಳುಗಳನ್ನು ಕೊಲ್ಲುವದಕ್ಕಾಗಿ ಆಸ್ಟ್ರೇಲಿಯದಿಂದ ಲೇಡಿ ಬರ್ಡ್ಸನ್ನು ತರುವದು ಯುಕ್ತವಲ್ಲ. ಯಾಕೆಂದರೆ ಈ ಹುಳುಗಳು ಈ ಪ್ರಪಂಚದ ಬೇರೆ ಭಾಗದಿಂದ ಬಂದಿದ್ದರೂ ಬಂದಿರಬಹುದು.

L. viride ಎಂಬುದು ಸಿಂಹಳದ್ವೀಪದಲ್ಲಿ ನಾನಾವಿಧವಾದ ಲೇಡಿ ಬರ್ಡ್ಸ್ ಎಂಬ ಹುಳುಗಳಿಂದಲೂ, ಉಪಜೀವಿಯಾದ Hymenoptera ಎಂಬುದರಿಂದಲೂ; Sachinid flies ಎಂಬ ನೊಣಗಳಿಂದಲೂ Lace-wring flies (ಸಲ್ಲಿಗೆ ರಕ್ಕೆ ನೊಣಗಳಿಂದಲೂ) ಇತರ ಜೀವಿಗಳಿಂದಲೂ ತಿನ್ನಲ್ಪಡುತ್ತದೆ. ಆದರೆ ಇವೂ ಕೂಡ ಇವುಗಳ ಶತ್ರುಗಳಿಂದ ಅಡಗಿಸಲ್ಪಟ್ಟವೆಯಾದಕಾರಣ ನನಗೆ ತಿಳಿದಮಟ್ಟಿಗೂ ಇವುಗಳಿಂದ ವಿಶೇಷ ಪ್ರಯೋಜನವಾದಂತೆ ಕಾಣುವದಿಲ್ಲ. ಸಾಕ್ಷಾತ್ತಾಗಿ ಸ್ಥಳಕ್ಕೆ ಹೋಗಿ ಪರೀಕ್ಷೆ ಮಾಡಿದಲ್ಲದೆ ಬರಿ ಊಹೆಗಿಂತ ಮೇಲ್ಪಟ್ಟ ಸಂಗತಿಗೆ ಹೋಗುವದು ಶ್ರಮಕರವಾಗಿದೆ.

ರಾಗಿಗೆ ಬೀಳುವ ಹುಳು - ಹುಳುಗಳು ಅನೇಕ ವಿಧವಾದ ಪೈರುಗಳ ಬೇರಿಗೆ ಬೀಳುವದಾಗಿ ಹಲವು ರಿಪೋರ್ಟುಗಳು ಬಂದಿವೆ. ಆದರೆ ನನಗೆ ಮಾದರಿಗಳು ಬರಲಿಲ್ಲವಾದ್ದರಿಂದಲೂ ಕೋಲಾರದಲ್ಲಿ ಹುಳು ಬಿದ್ದಿರುವದಾಗಿ ರಿಪೋರ್ಟು ಬಂದು ನಾನು ಹೋದ ಕಾಲದಲ್ಲಿ ಹುಳುಗಳಿಲ್ಲವೂ ಹೋಗಿದ್ದವಾದ್ದರಿಂದಲೂ ಅವುಗಳ ವಿಷಯದಲ್ಲಿ ಮುಂದಿನ ವಾಕ್ಯಕ್ಕಿಂತಲೂ ಹೆಚ್ಚಾಗಿ ಏನೂ ಹೇಳಲಾಗುವದಿಲ್ಲ: — ಅನೇನೆಂದರೆ ಈ ರಿಪೋರ್ಟುಗಳ ಹೇಳಿಕೆಯಂತೆ ಹುಳುಗಳು ರಾಗಿಯೇ ಮೊದಲಾದ ಹಲವು ಪೈರುಗಳ ಬೇರಿಗೆ ಬೀಳುವದು ನಿಜವಾದ ಪಕ್ಷಕ್ಕೆ ಅವುಗಳಿಗೆ ತಕ್ಕ ಪ್ರತೀಕಾರವನ್ನು ತಿಳಿಯುವದು ಸುಲಭಸಾಧ್ಯವಲ್ಲ.

ಕಾಫಿಗೆ ಬೀಳುವ ಹುಳು — (ಹಿಟ್ಟಿನ ಬಣ್ಣದ ತಿಗಣೆ Mealy pest) (ಪೈರುಗಳ) ಬೇರಿಗೆ ಬೀಳುವ ಹುಳುಗಳಲ್ಲಿ ನಾನು ಸಾಕ್ಷಾತ್ತಾಗಿ ನೋಡಿರುವದು ಒಂದೇ ಒಂದು ಜಾತಿಯ ಹುಳು. ಅದು ಕೊಡಗಿನಲ್ಲಿ ಕಾಫಿ ಗಿಡಗಳ (ಬೇರುಗಳಿಗೆ) ಬೀಳುತ್ತದೆ. ಅದೇ (Mealy bugs) ಎಂಬ ಹುಳುಗಳು. ಆ ಸೀಮೆಯ ತೋಟಗಳಲ್ಲಿ ನೆರಳಿಗಾಗಿ ಹಾಕಿರುವ ಮರಗಳಿಗೂ ಸುತ್ತುಮುತ್ತಲೂ ಬೆಳೆಯುವ ಕಾಡು ಗಿಡಗಳಿಗೂ (Weeds) ಕೂಡ ಬೀಳುತ್ತವೆ. ಆದರೆ ಅದರ ಹಾವಳಿಯು ಇನ್ನೂ ಮಿತವಾದ ಕೆಲವು ಪ್ರದೇಶಗಳಲ್ಲಿಯೇ ಅಡಕವಾಗಿದೆ. ಅದರ ಹಾವಳಿಯಿಂದ ಸಂಕಟಪಡುವ ಕೆಲವು ಪ್ಲಾಂಟರುಗಳು ತಮಗೆ ಶ್ರಮ ಕೊಡುತ್ತಿರುವ ಕೀಟಗಳೆಲ್ಲಾ ಇದೇ ಅತಿ ಕ್ರೂರವಾದ್ದೆಂದು ಭಾವಿಸಿದರೂ ಅದರ ಬಾಧೆಗೆ ಸಿಕ್ಕದ ಪ್ಲಾಂಟರುಗಳು ಅದನ್ನು ಬಹು ಅಲಕ್ಷ್ಯವಾಗಿ ನೋಡುತ್ತಾರೆ. ಈ ಹುಳು ಮೈಸೂರು ಸಂಸ್ಥಾನದಲ್ಲಿ ರಾಗಿ ಪೈರಿಗೆ ಬೀಳುತ್ತದೆ ಎಂದೂ ಇಲ್ಲಿಂದ ಗೊಬ್ಬರದ ಮೂಲಕ ಅಲ್ಲಿಗೆ ಸಾಗಿಬಂದಿದೆಯೆಂದೂ ಹೇಳಿಕೊಳ್ಳುತ್ತಾರೆ. ಈ ಹುಳುವು ಈ ಸಂಸ್ಥಾನದಲ್ಲಿ ರಾಗಿ ಪೈರಿಗೆ ಬೀಳುವದೆಂದು ಬಂದುವೇಳೆ ತಿಳಿಯಬಂದ ಸಂದರ್ಭದಲ್ಲಿಯೂ ಕೂಡ ಹುಳುಗಳು ಮೇಲೆ ಹೇಳಿದ ರೀತಿಯಲ್ಲಿಯೇ ಬಂದಿವೆಯೆಂದು ನಿರೂಪಿಸಲು ಕಷ್ಟವಾಗುವದು. ಈ ಹುಳು ಸಾಮಾನ್ಯಕಾಲದಲ್ಲಿ ಪ್ರಸಿದ್ಧವಾದ Mealy bug — ಎಂಬ ಹುಳುವನ್ನು ಹೋಲುತ್ತದೆ; ಸುಮಾರು ಒಂದು ಅಂಗುಲದ ಎಂಟರಲ್ಲಿ ಒಂದು ಪಾಲಷ್ಟು ಉದ್ದವಾಗಿದೆ; ಇದು ಮೇಲೆ ಹೇಳಿದಂತೆ ಮುಖ್ಯವಾಗಿ ಕಾಫಿ ಗಿಡಗಳ ಬೇರುಗಳಿಗೆ ಬೀಳುತ್ತದೆ ಕದಾಚಿತ್ ಗಿಡಗಳ ತಾಳಿನಮೇಲೆಯೂ ಕಾಣಿಸುವದುಂಟು. ಇದು ಬಲಿತ ಗಿಡಗಳಿಗಿಂತಲೂ ಎಳೆಯ ಗಿಡಗಳಲ್ಲಿ ಹೆಚ್ಚು ಆಸೆಯುಳ್ಳದ್ದು; ಮುಖ್ಯವಾಗಿ ಗಿಡಗಳ ಬಟ್ಟಿಲುಗಳಿಗೂ ಹೊಸದಾಗಿ ನಾಟುಮಾಡಿದ ಕಾಫಿಗಳಿಗೂ ಬಹಳ ಕೇಡು ಮಾಡುತ್ತದೆ. ಕಾಫಿಯೊಡನೆ ಬೆಳೆಯುವ ಕೆಲವು ಕಾಡು ಗಿಡಗಳಿಂ (Weeds) ದ ಮಾದರಿಗಾಗಿ ಒಂದು ಹುಳುವನ್ನು ತೆಗೆದು ಅದು ಇಂಥದ್ದೆಂದು ನಿರ್ಣಯಿಸುವದಕ್ಕಾಗಿ ಮೆ॥ ಡಿ. ನೆಸವಿಲ್ಲ ಎಂಬವರಿಗೆ ಕಳುಹಿಸಲಾಯಿತು. ಅವರ ಪ್ರತ್ಯುತ್ತರವೇನೆಂದರೆ:—" ಕಳೆದ ತಿಂಗಳು 27ನೆಯ ತೇದಿಯ ತಮ್ಮ ಕಾಗದಕ್ಕೆ ಪ್ರತ್ಯುತ್ತರವಾಗಿ ವಿಜ್ಞಾಪಿಸುವದೇನೆಂದರೆ :— ಕಾಫಿಗೆ ವಿಶೇಷವಾಗಿ ಕೇಡುಮಾಡುವ Mealy bugs ಎಂಬ ಹುಳು ಬಿದ್ದಿರುವದಾಗಿ ಹೇಳಿ ನೀವು ಕೊಡಗಿನ ಕಾಫಿ ತೋಟದಲ್ಲಿ ಬೆಳೆಯುವ ಕಾಡು ಗಿಡಗಳನ್ನು ಕಳುಹಿಸಿಕೊಟ್ಟದ್ದು ಸರಿಯಷ್ಟೆ. ಅವುಗಳನ್ನು ಪರೀಕ್ಷಿಸಿ ನೋಡುವಲ್ಲಿ ಅವುಗಳಲ್ಲಿ Dactyliopus ಎಂಬ ಜಾತಿಗೆ ಸೇರಿದ ಆರೆ ಬಲಿತ ಎರಡುಮೂರು ಹೆಣ್ಣು ಹುಳುಗಳು ಮಾತ್ರ ಕಾಣಬಂದವು. ಇನ್ನೂ ಚನ್ನಾಗಿ ಗೊತ್ತು ಮಾಡುವದಕ್ಕೆ ಚೆನ್ನಾಗಿ ಬಲಿತ ಹೆಣ್ಣು ಹುಳುಗಳು ಬೇಕಾಗುವದರಿಂದ ಆ ಕೆಲಸಕ್ಕೆ ನೀವು ಕಳುಹಿಸಿದ ಸಾಮಗ್ರಿಯು ಸಾಲದು. ಈ ಹುಳುವಿನ ಜೀವನ ವಿಚಾರವು ನನಗೆ ಸುತರಾಂ ತಿಳಿಯದು. ಹಾಗೆ ಸ್ವಲ್ಪವೂ ತಿಳಿವಳಿಕೆ [illegible] ಅದಕ್ಕೆ ಪ್ರತೀಕಾರವನ್ನು ಸೂಚಿಸುವದು ಅಸಾಧ್ಯ; ಪ್ರಯೋಜನಕಾರಿಯೂ ಅಲ್ಲ. ಆದರೂ ನಾನು ಕ್ಷಿಪ್ರದಲ್ಲಿಯೇ ದ[illegible]ಂದು ಸ್ಥಾನವನ್ನು ಬಂದು ನೋಡಬಹುದೆಂಬ ಭರವಸೆಯಿಟ್ಟುಕೊಂಡಿದ್ದೇನೆ. ಆದ್ದರಿಂದ ಆ ಕಾಲದಲ್ಲಿ ಆ ಸ್ಥಳಕ್ಕೆ ಹೋಗಿ ಕಾಫಿಯಗಿಡಕ್ಕೆ ಬೀಳುವ ಈ ಹುಳುವಿನ ಮತ್ತು ಇತರ ಹುಳುಗಳ ವಿಷಯವಾಗಿ ವಿಚಾರ ಮಾಡಲಾಪೆನು."

ಭತ್ತದ ಪೈರಿಗೆ ಬೀಳುವ ಹುಳು (Cecidomia Oryzæ) ಈ ವರ್ಷ ನಾನು ವಿಶೇಷವಾಗಿ ಗಮನ ಕೊಟ್ಟು ನೋಡಲು ಸಾಧ್ಯವಾದ ಹುಳು ಯಾವದೆಂದರೆ ಮೈಸೂರು ಡಿಸ್ಟ್ರಿಕ್ಟು ತಿರುಮಕೂಡ್ಲು ನರಸೀಪುರದ ತಾಲ್ಲೂಕಿನಲ್ಲಿ ಭತ್ತಕ್ಕೆ ಬಿದ್ದ ಹುಳುವೊಂದೇ ಕಣ್ಣಿಗೆ ಕಾಣಿಸುವ ವರೆಗೂ ಗದ್ದೆಗಳು ಒಂದರ ಮಗ್ಗುಲಲ್ಲಿ ಒಂದರ ಮೇರೆ ಅಪಾರವಾಗಿ ವಿಸ್ತರಿಸಿಕೊಂಡಿರುವ ಆ ಪ್ರದೇಶದಲ್ಲಿ (ನೆಲ್ಲು ಪೈರಿಗೆ ಹುಳುಬಿದ್ದು) ಹಲವು ಚದರ ಮೈಲಿಗಳಷ್ಟು ಭಾಗಗಳಲ್ಲಿ ಪೈರನ್ನೆಲ್ಲಾ ತೀರ ಹಾಳುಮಾಡಿದ್ದಾಗಿ ಸಮಾಚಾರ ಬಂತು. ವಸ್ತುತಃ ಹೇಳಿಕೊಂಡಷ್ಟು ನಷ್ಟವಾಗಿರಲಿಲ್ಲ. ಯಾಕೆಂದರೆ ದಾರಿಯುದ್ದಕ್ಕೂ ಅನೇಕ ಮೈಲಿಗಳ ಪರ್ಯಂತರ ಹುಳುಗಳು ಬಿದ್ದಿದ್ದರೂ ನಾವು ನೋಡಿದ ಭಾಗಗಳಲ್ಲಿ ಭತ್ತವು ಸಂಪೂರ್ಣವಾಗಿ ಬೇರೆ ನಷ್ಟವಾಗಿರಲಿಲ್ಲ; ಬಹುಶಃ ಮಧ್ಯ ಭಾಗಗಳಲ್ಲಿ ಹುಳುಬಿದ್ದ ಕಡೆಯೂ ಕೂಡ ನಿಶ್ಚಯವಾದ ಸ್ಥಿತಿಯು ಪ್ರಾಯಶಃ ಇದೇ ಮೇರೆಯೇ ಇರಬಹುದು. ಆದರೂ ಹುಳುಗಳ ಹಾವಳಿಯು ಪ್ರಬಲವಾಗಿಯೇ ಇತ್ತು; ರೈತರಿಗಾದ ಬಟ್ಟು ನಷ್ಟವು ಅಪರಿಮಿತವಾಗಿರಬೇಕು.

ಹುಳುಬಿದ್ದ ನೆಲ್ಲು ಪೈರಿನಲ್ಲಿ ತೆನೆ ಇಲ್ಲದಿದ್ದದ್ದೇ ನಮಗೆ ತೋರಿದ ವಿಶೇಷಾಂಶವಾಗಿದೆ. ಅಂಥ ಪೈರಿನ ಕಡ್ಡಿಗಳು ಸರಿಯಾದ ಕಡ್ಡಿಗಳಿಗಿಂತಲೂ ಗಿಡ್ಡವಾಗಿದ್ದದ್ದಲ್ಲದೆ ತಲೆಯನ್ನು ಕತ್ತರಿಸಿ ಬಿಟ್ಟ ಹಾಗೆ ಮೊಟಕಾಗಿಯೂ ಕೆಲವುವೇಳೆ ಬಾಗಿ ಕೊರಟು ಬಿದ್ದು ಮೊನೆಯಾದ ತಲೆಯುಳ್ಳದ್ದಾಗಿಯೂ ಇತ್ತು. ಪೈರು ಸುಳಿ ಇಕ್ಕುವುದಕ್ಕೆ ಮುಂಚೆ ಗರ್ಭಗತ ತೆನೆಯನ್ನು ಹುಳುವು ತಿಂದ ಪ್ರಯುಕ್ತ ಬೆಳೆಯಲವಕಾಶವಿಲ್ಲದೇ ಹೋದ ಕಡ್ಡಿಯು ಹೀಗೆ ಮೊನೆಯಾದ ತಲೆಯುಳ್ಳದ್ದಾಗಿರುತ್ತದೆ. ಹೀಗೆ ವಿಪಾಕವಾಗಿ ತಿರುಗಿದ ಕಡ್ಡಿಯ ತುದಿಯು ವಿಕಾರವಾಗಿ ಗಂಟುಕಟ್ಟಿ ಮುಚ್ಚಿ ಹೋಗಿತ್ತು. ಈ ಗಂಟು ಸ್ವಲ್ಪ ಮಟ್ಟಿಗೆ ಗಿಣ್ಣುಗಳಂತೆ ಕಂಡು ಬಂದರೂ ವಾಸ್ತುತಃ ಅದಕ್ಕೂ ಸಹಜವಾದ ಗಿಣ್ಣುಗಳಿಗೂ ಯಾವ ಸಂಬಂಧವೂ ಇಲ್ಲ. ಕಡ್ಡಿಗಳಲ್ಲಿ ಗಿಣ್ಣುಗಳಿರಲಿಲ್ಲ. (ಇಂಥ ಸಂದರ್ಭದಲ್ಲಿ) ನಿರೀಕ್ಷಿಸಬಹುದಾದ ರೀತಿಯಲ್ಲಿಯೇ ಹುಳುಬಿದ್ದ ಪೈರುಗಳು ಕೆಟ್ಟುಹೋದ ದೊಡ್ಡ ಕಡ್ಡಿಗೆ ಪ್ರತಿಯಾಗಿ ಅದರ ಪಕ್ಕದಲ್ಲಿ ಅನೇಕ ಹೊಸ ಸುಳಿಗಳನ್ನು ಇಕ್ಕಿದ್ದವು. ಈ ಹೊಸ ಸುಳಿಗಳೂ ಸಹ ಹುಳುಗಳ ಹಾವಳಿಗೆ ಒಳಪಟ್ಟಿದ್ದವು. ಕಾಲ ಮೀರಿದ ಮೇಲೆ ಬಿತ್ತಿದ ನೆಲ್ಲೇ ವಿಶೇಷವಾಗಿ ಹೀಗೆ ನೊಂದು ಹೋದಂತೆ ಕಾಣಬಂದಿತು. ನನಗೆ ನೋಡುವದಕ್ಕೆ ಎಷ್ಟು ಮಟ್ಟಿಗೆ ಸಮಯ ದೊರಗಿತೋ ಅಷ್ಟು ಮಟ್ಟಿಗೆ ನೋಡುವಲ್ಲಿ ಯಾವ ಯಾವ ಗದ್ದೆಗಳಲ್ಲಿ ಉಳುಮೆಯೂ ಗೊಬ್ಬರವೂ ತೃಪ್ತಿಕರವಾಗಿರಲಿಲ್ಲವೋ ಆಯಾ ಗದ್ದೆಗಳಲ್ಲಿ ಈ ಹುಳುವಿನ ಹಾವಳಿ ಬಹಳ ಬಲವಾಗಿದ್ದಂತೆ ಕಾಣಬಂದಿತು. ವಿಚಾರಿಸು

ವಲ್ಲಿ ಆ ಪ್ರದೇಶದಲ್ಲಿ ಹೀಗಾಗುವದಕ್ಕೆ ಇದೇ ಮೊದಲೆಂದು ತಿಳಿಯಬಂತು. ಯದ್ಯಪಿ ಈ ವರ್ಷ ಏಳು ಮೈಲಿಗಳಷ್ಟು ವಿಸ್ತಾರವಾದ ಭಾಗದಲ್ಲಿ ಹಾವಳಿ ಮಾಡಬೇಕಾದರೆ ಹುಳುಗಳು ಆ ಭಾಗದಲ್ಲಿ ಹಿಂದಿನಿಂದಲೂ ಸ್ವಲ್ಪ ಮಟ್ಟಿಗೆ ಇದ್ದಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಈ ವಿಷಯವನ್ನು ಈಗ ನಾನು ವಿಚಾರಮಾಡಲು ಎಷ್ಟು ಸಾಧ್ಯವಾಯಿತೋ ಅದಕ್ಕಿಂತಲೂ ವಿಶೇಷವಾಗಿ ವಿಚಾರ ಮಾಡಿದ ಹೊರತು ಈ ಹುಳು ಹಟಾತ್ತಾಗಿ ವ್ಯಾಪಿಸಿಕೊಳ್ಳುವದಕ್ಕೆ ಇಂತಹದೇ ಕಾರಣವೆಂದು ತಿಳಿದು ಹೇಳಲಾಗುವದಿಲ್ಲ. ಆದರೂ ಕೆಲವು ಕಾರಣಗಳನ್ನು ಸೂಚಿಸಬಹುದು. ಅವುಗಳಲ್ಲಿ ಎರಡನ್ನು ಮುಂದೆ ಸೂಚಿಸುವೆನು.

ಈ ಹುಳುಗಳು ಹಳದಿ ಮಿಶ್ರವಾದ ಬಿಳಿಯ ಬಣ್ಣದ ಪುಳುವುಗಳಾಗಿ ಕೀಡೆಗಳಂತಿರುವ ಮರಿಗಳು ನೆಲ್ಲು ಪೈರಿನಲ್ಲಿ ಗಿಣ್ಣು ಮಧ್ಯ ಪ್ರದೇಶಗಳು ಬಲಿಯುವದಕ್ಕೆ ಮೊದಲೇ ಅಂದರೆ ಭತ್ತವು ತೆನೆಯೊಡೆಯುವದಕ್ಕೆ ಮುಂಚೆಯೇ ಕಾಳನ್ನು ಕೊರೆಯ ತೊಡಗುತ್ತವೆ. ಈ ಮರಿಗಳು ಸಾಮಾನ್ಯವಾಗಿ ನೆಲ್ಲಿನ ಬೇರಿನ ಮೇಲುಗಡೆ ಕಾಳು ಹೊರಡುವ ಬಳಿ ಇರುತ್ತವೆ. ಸಾಮಾನ್ಯವಾಗಿ ಹುಳುಬಿದ್ದ ಕಾಳಿನಲ್ಲಿ ಎರಡು ಮೂರು ಹುಳುಗಳು ಕೂಡ ಇರುವದುಂಟು. ಇವು ತಾಳಿನ ಮಧ್ಯಭಾಗವನ್ನು ಮಾತ್ರ ಕೊರೆದು ಸುತ್ತಲಿನ ಭಾಗವನ್ನು ಹಾಗೆಯೇ ಉಳಿಸುತ್ತವೆ. ಇಂಥ ನೂರಾರು ತಾಳುಗಳನ್ನು ಪರೀಕ್ಷಿಸಿ ನೋಡಿದರೂ ಎಲ್ಲಿಯೋ ಎರಡು ಹುಳುವಿನ ಮೊಟ್ಟೆಗಳು ಮಾತ್ರ ಸಿಕ್ಕಿದವು. ಇವುಗಳಲ್ಲಿ ಒಂದು, ತಾಳನ್ನು ಸೀಳುವಾಗ ಕೊಲ್ಲಲ್ಪಟ್ಟಿತು. ಇನ್ನೊಂದು, ಹುಳು ಬಲಿತ ಮೇಲೆ ಹೊರಟು ಹೋಗುವಾಗ ಕಳೆಚಿದ ಎರಿ ತೊಗಲಾಗಿತ್ತು. ಈ ಸಂಗತಿಯನ್ನು ನೋಡಿದರೆ ಬಹುಶಃ ಹುಳುಗಳು ಸಹಜವಾಗಿ ಹೊರಗಡೆಯಲ್ಲೇ ತಟಸ್ಥಿತಿಯನ್ನನುಭವಿಸುವುದಾಗಿ ನನಗೆ ತೋರುತ್ತದೆ. ಮರಿಗಳು ಚೆನ್ನಾಗಿ ಬಲಿತಂತೆ ತೋರುವಾಗ ಅವು ಸುಮಾರು ಮೂರು ವೀಸ ಮೊದಲುಗೊಂಡು ಕಾಲಂಗುಲದಷ್ಟು ನೀಳವಾಗಿರುತ್ತವೆ. ಮೊಳಕೆಯೊಡೆಯುತ್ತಿದ್ದ (Shooting) ಪೈರಿನಲ್ಲಿ ಮಾತ್ರ ಇವು ಒಂದು ಸಲವಾದರೂ ಸಿಕ್ಕಲಿಲ್ಲ. ಇಂಥ ಸಾವಿರಾರು ಪೈರುಗಳಲ್ಲಿಯೂ ಏನೇನೂ ಸಿಕ್ಕಲೇ ಇಲ್ಲ. ಹುಳು ಬಿದ್ದ ಬಲಿತ ಹುಲ್ಲುಗಳು ತುದಿಯವರೆಗೂ ಒಣಗಿಹೋಗಿದ್ದವು. ಇನ್ನೂ ಎಳೆಸಾದ ಪೈರುಗಳು ಹಚ್ಚಗಿದ್ದು ತಲೆಯ ಬಳಿಯಲ್ಲಿ ಮಾತ್ರ (ಗಿಣ್ಣಿನಂತೆ) ಮುಚ್ಚಿ ಹೋಗಿದ್ದವು. ತಲೆಗೆ ಸ್ವಲ್ಪ ಕೆಳಗೆ ಪಕ್ಕದಲ್ಲಿ ಒಂದೊಂದು ತೂತು ಬಿದ್ದಿತ್ತು. ಹುಳು ಬಲಿತ ಮೇಲೆ ಈ ತೂತುಗಳ ಮೂಲಕ ಹೊರಟು ಹೋಗಿರಬೇಕೆಂಬುದು ವ್ಯಕ್ತವಾಗಿಯೇ ಇದೆ. ಈ ಹಸುರಾದ ಪೈರುಗಳ ಪೈಕಿ ಎಳಸಾಗಿಯೂ ಹೊಸದಾಗಿಯೂ ಇದ್ದವುಗಳಲ್ಲಿ ನೂರಕ್ಕೆ ಎಪ್ಪತ್ತೈದರಷ್ಟರಲ್ಲಿ ಮೊಟ್ಟೆಯಂತಿದ್ದ ಸಣ್ಣ ಪದಾರ್ಥಗಳು (ಬಹುಶಃ ತಟಸ್ಥಿತಿಯಲ್ಲಿದ್ದ ಹುಳುಗಳು ಆಗಿರಬಹುದು) 10 ರಿಂದ 30ರ ವರೆಗೆ ಬಾದಾಮಿಯಾಕಾರವಾಗಿ ಹೊಂದಿಕೊಂಡಿದ್ದವು. ಇವುಗಳಿಗೆ ಪರೆಯಂತೆ ಯಾವ ಮೇಲು ಹೊದಿಕೆಯೂ ಇದ್ದಂತೆ ನನಗೆ ಕಂಡು ಬರಲಿಲ್ಲವಾದರೂ, ನೆಲ್ಲಿಗೆ ಬೀಳುವ ಹುಳುಗಳ ವೈರಿಗಳು ಈ ಪ್ರಕಾರ ತಮ್ಮ ತಟಸ್ಥಿತಿಯಲ್ಲಿದ್ದವೆಂತಲೂ ಮತ್ತು ಈ ವೈರಿಗಳು ಆ ನೆಲ್ಲು ಹುಳುಗಳನ್ನು ಕೊಲ್ಲತಕ್ಕವೆಂದೂ ನಾನು ಭಾವಿಸುತ್ತೇನೆ. ಈ ಮೊಟ್ಟೆಗಳು ಬಲಿತು ಒಡೆದ ಮೇಲೆ ಸಣ್ಣ ಕರಿ ನೊಣದಂತಿರುವ ಪ್ರಾಣಿಗಳು ಹೊರಗೆ ಬಂದವು. ಇವು ಬಹುಶಃ Proctotrupids ಎಂಬ ಜಾತಿಗಳಲ್ಲಿ ಒಂದಾಗಿರಬಹುದು. ತಲೆಯ ಬಳಿಯಲ್ಲಿ ತೂತಿಲ್ಲದಿದ್ದ ಕೆಲವು ನೆಲ್ಲು ಪೈರುಗಳಲ್ಲಿ ಈ ಕರಿಯ ನೊಣಗಳಿದ್ದವು, ಕೆಲವು ತಾಳುಗಳಲ್ಲಿ ಸತ್ತು ಹೋಗಿದ್ದವು, ಕೆಲವುಗಳಲ್ಲಿ ಇನ್ನೂ ಜೀವದೊಡನಿದ್ದವು. 1880ರಲ್ಲಿ ಬಿಹಾರಿನಲ್ಲಿ (ಹೀಗೆ ಹುಳು ಬಿದ್ದಿದ್ದಾಗಿ) ಮೆ॥ ವುಡ್ಮೇಸನ್ ಎಂಬಾತನು ಇಂಡಿಯನ್ ಮ್ಯೂಸಿಯಂ ನೋಟ್ಸ್ ಎಂಬುದರಲ್ಲಿ ಬರೆದಿರುವದೊಂದೇ ಈ ಜಾತಿಯಾಗಿ ಹುಳು ಬಿದ್ದ ಸಂಗತಿಯನ್ನು ಸೂಚಿಸುವ ಲೇಖನವು. ಇದೊಂದೇ ನನಗೆ ದೊರೆತ ಈತೆರದ ಲೇಖನವು ಸಹ. ಆತನು ಆ ಹುಳುಗಳಿಗೆ Cecydomia Oryzæ ಎಂಬ ತತ್ಕಾಲೋಪಯೋಗಿಯಾದ ಒಂದು ಹೆಸರು ಕೊಟ್ಟನು. ಅವುಗಳ ವಿಷಯವಾಗಿ ಮತ್ತೇನೂ ತಿಳಿದಂತೆ ಕಾಣುವದಿಲ್ಲ. ಮೆ॥ ಲಾಯೋನೆಲ್ ಡಿ ನೈಸಿವಿಲ್ಲ ಯವರಿಗೆ ಒಂದು ಮಾದರಿ ಹುಳುವನ್ನು ಕಳುಹಿಸಲಾಯಿತು. ಇದು ಹೋಗಿ ತಲುಪುವಾಗ್ಗೆ ಅವರು ರೋಗದಿಂದ ನರಳುತ್ತಿದ್ದರು. ಅವರು ಇಂಡಿಯಾ ಸರಕಾರದ ಕ್ರಿಮಿ ಶಾಸ್ತ್ರಜ್ಞರ ಕಾರ್ಯವನ್ನು ವಹಿಸಲು ಅನುಮತಿ ಪಡೆದ ಸ್ವಲ್ಪ ಕಾಲದೊಳಗೆಯೇ ನನಗೆ ಮಾಡಿದ ಅನೇಕ ಸಹಾಯಕ್ಕಾಗಿ ಅವರಿಗೆ ವಿಶೇಷವಾಗಿ ಋಣಿಯಾಗಿದ್ದೇನೆ. ಅವರ ಮರಣದಿಂದುಂಟಾದ ನಷ್ಟವನ್ನು ಕುರಿತು ಎಷ್ಟು ದುಃಖಪಟ್ಟರೂ ತೀರದು.

ಈ ಹುಳುಗಳು ಹಟಾತ್ತಾಗಿ ಕಾಣಿಸಿಕೊಂಡದ್ದಕ್ಕೆ ಕಳೆದ ವರ್ಷ ಆ ಪ್ರದೇಶದಲ್ಲಿ ನೆಲ್ಲು ಗದ್ದೆಗೆ ನೀರು ಸಾಲದ್ದೇ ಒಂದು ಕಾರಣವಾಗಿರಬಹುದು. (ನೀರು ಸಾಲದ್ದರಿಂದ) ನೆಲ್ಲಿಗೆ ಎಷ್ಟುಬೇಕೋ ಅಷ್ಟು ನೀರನ್ನು ಒದಗಿಸಲಾಗಲಿಲ್ಲ. ಆದಕಾರಣ ಬಹುಶಃ ಈ ಹುಳುಗಳು ನಿರಪಾಯವಾಗಿ ಮೊಟ್ಟೆ ಇಡಲು ಅನುಕೂಲವಾಗಿದ್ದಿರಬಹುದು. ಇದಕ್ಕೆ ಇನ್ನೊಂದು ಕಾರಣವನ್ನು ಹೇಳಬಹುದು. ಮೇಲೆ ಹೇಳಿದ ಇವುಗಳ ವೈರಿಗಳಲ್ಲಿ ಹಿಂದಿನ ವರ್ಷ ಒಂದು ಜಾತಿ ವ್ಯಾಧಿ ಕಂಡು ಅವು ನಷ್ಟವಾಗಿ ಹೋಗಿ ಈ ಹುಳುಗಳು ಬೇಕಾದಹಾಗೆ ಮೊಟ್ಟೆ ಇಟ್ಟಿರಬಹುದು. ಈ ಮೊಟ್ಟೆಗಳೊಡೆದು ಈ ವರ್ಷ ಮರಿಯಾಗಿರಬಹುದು. ಈ ಹುಳುಗಳ ಹಾವಳಿಯು ಪುನಃ ಉಂಟಾದರೆ ಇವುಗಳ ಹಾವಳಿಯನ್ನು ತಪ್ಪಿಸುವದಕ್ಕಾಗಿ ಒಬ್ಬ ಶಾಸ್ತ್ರಜ್ಞನು ಇದನ್ನು ಚೆನ್ನಾಗಿ ಪರೀಕ್ಷಿಸಿ ಇದರ ನಿವಾರಣಾರ್ಥವಾಗಿ ಪ್ರಯೋಗಗಳನ್ನು ಕಂಡು ಹಿಡಿಯುವದು ಅತ್ಯಾವಶ್ಯಕ. ನಾನು ಸೂಚಿಸುವ ಪ್ರತಿಕ್ರಿಯಗಳು ಏನಂದರೆ – ಎಷ್ಟು ಮುಂಚೆ ಸಾಧ್ಯವೋ ಅಷ್ಟು ಮುಂಚೆ ಭತ್ತವನ್ನು ಬಿತ್ತಬೇಕು, ಎಷ್ಟು ಮಟ್ಟಿಗೆ ಅನುಕೂಲವಾಗುತ್ತದೆಯೋ ಅಷ್ಟುಮಟ್ಟಿಗೂ ಚೆನ್ನಾಗಿ ಉತ್ತು ಗೊಬ್ಬರವನ್ನು ಹಾಕಬೇಕು. ಈ ರೀತಿಯಾದ ಪ್ರತಿ ಕ್ರಿಯೆಗಳು ಕೆಲವು ವಿಷಯದಲ್ಲಿ ಈ ಹುಳುಗಳನ್ನು ಹೋಲುವ Hessian fly ಎಂಬ ಹುಳುಗಳ ವಿಷಯದಲ್ಲಿ ಬಹಳ ಪ್ರಯೋಜನಕರವಾಗಿದ್ದವು.

ಮಾವಿಗೆ ಬೀಳುವ ಹುಳುಗಳು. – (Euproctis lunata) ತುಮಕೂರು ಡಿಸ್ಟ್ರಿಕ್ಟಿನ ಈಶಾನ್ಯ ಭಾಗದಲ್ಲಿ ಮಾವಿನ ತೋಟಗಳಿಗೆ ಒಂದು ಜಾತಿ ಹುಳುಗಳು ಗುಂಪು ಗುಂಪಾಗಿ ಬೀಳುವಂತೆ ಈ ವರ್ಷ ಮೇ ತಿಂಗಳಲ್ಲಿ ಸಮಾಚಾರ (Report) ಬಂತು. ಈ ಹುಳುಗಳು ಮೊದಲು ಮೊದಲು ಗೊಬ್ಬಳಿ ಜಾಲಿ ಮೊದಲಾದ ಮರಗಳ ಮೇಲೆಯೇ ಇಳಿಯುತ್ತಿದ್ದು ಅವುಗಳಲ್ಲಿ ಅನೇಕ ಮರಗಳ ಎಲೆಗಳನ್ನೆಲ್ಲಾ ಬರಿದು ಮಾಡಿದ ಬಳಿಕ ಮಾವಿನ ತೋಟಗಳಿಗೆ ದಂಡು ದಂಡಾಗಿ ಬಿದ್ದು ಮರದಿಂದ ಮರಕ್ಕೆ

ಮತ್ತು ತ್ತ ಕಾರ್ಯತಃ ಹಣ್ಣುಗಳನ್ನೆಲ್ಲಾ ನಾಶಮಾಡಿ ಮುಕ್ಕಾಲುಪಾಲು ಎಲೆಗಳನ್ನೂ ಚಿಗುರುಗಳನ್ನೂ ಹಾಳುಮಾಡಿ ಬಿಟ್ಟಿವೆ. ಮದ್ದಗಿರಿ ಅಮಲ್ದಾರ್ರ ರಿಪೋರ್ಟಿನ ಮೇರೆ ಮೂವತ್ತರಿಂದ ಐವತ್ತು ಚದರ ಮೈಲಿ ವರೆಗೆ ಈ ಹುಳುಗಳು ಹಾವಳಿ ಮಾಡಿವಂತೆ ತಿಳಿಯಬರುತ್ತದೆ. ಹೋದ ವರುಷದಲ್ಲಿ ನನಗೆ ಸಮಾಚಾರ ಬರಲಿಲ್ಲವಾದರೂ ಆಗ ಅವುಗಳ ಹಾವಳಿಯು ಇನ್ನೂ ಹೆಚ್ಚಾಗಿದ್ದಂತೆ ತೋರುತ್ತದೆ. ಇದಕ್ಕೆ ಪ್ರತೀಕಾರವಾಗಿ ಮರಗಳಿಗೆಲ್ಲಾ ಪ್ಯಾರಿಸ್ ಗ್ರೀನ್ ಎಂಬ ವಿಷವನ್ನು ಎರಚಬೇಕೆಂಬುದೊಂದೇ ನನಗೆ ತೋರಿದ ಔಷಧವು. ಈ ಕಾರ್ಯವನ್ನು ಸುಲಭವಾಗಿಯೂ ಸಾರ್ಥಕವಾಗುವಂತೆಯೂ ಮಾಡಬೇಕಾದರೆ ಇದಕ್ಕಾಗಿಯೇ ಒಂದು ಜಾತಿ ಪಂಪು ಅವಶ್ಯಕವಾಗಿದೆ. ಈ ಯಂತ್ರವು ಮದ್ರಾಸಿನಲ್ಲಿಯೂ ದೊರೆಯಲಿಲ್ಲ. ನನ್ನಲ್ಲಿಯೂ ಇಲ್ಲ. ಆದಕಾರಣ ಮರಕ್ಕೆ ಹತ್ತಿ ಆ ವಿಷವನ್ನು ಅದ್ದಿ ಹಳೆಯ ಬರಲಿನಿಂದ ಎಲ್ಲಾ ಕಡೆಗೂ ಎರಚುವದೊಂದೇ ಮಾರ್ಗವುಳ್ಳಿಯಿತು. ಇದು ಕಷ್ಟ ಕೆಲಸ; ಅಪಾಯಕರವೂ ಹೌದು; ತೃಪ್ತಿಕರವಾಗಿ ನಡಿಯತಕ್ಕದ್ದೂ ಅಲ್ಲ. ಒಂದೆರಡು ಮಾದರಿಗಳನ್ನು ಸಿಂಹಳ ದ್ವೀಪದ (Ceylon) ಸರ್ಕಾರಿ ಕ್ರಿಮಿ ಶಾಸ್ತ್ರಜ್ಞರಾದ ಮಿ॥ ಗ್ರೀನರವರಿಗೆ ಕಳುಹಿಸಲಾಯಿತು. ಅವರ ಪ್ರತ್ಯುತ್ತರವೇನೆಂದರೆ:— ಈ ಕಂಬಳಿ ಹುಳುಗಳು Euproclis lunata ಎಂಬವುಗಳ ಮರಿಗಳು ಯಥಾವದಾದರೂ ಶಂಖ ಪಾಷಾಣ (Arsenic) ಮಿಶ್ರವಾದ ಔಷಧವನ್ನು ಎಲೆಗಳ ಮೇಲೆ ಹನಿಸಿದರೆ ಕಂಬಳಿ ಹುಳುಗಳು ಸಾಯಬಹುದೇ ಹೊರತು ಬೇರೆ ಯಾತರಿಂದಲೂ ಏನೂ ಆಗಲಾರದೆಂದು ಶಂಕಿಸುತ್ತೇನೆ. ಕೊಂಬೆಗಳನ್ನು ಅಲುಗಿಸಿ ಕೆಳಗೆ ಬೀಳುವ ಹುಳುಗಳನ್ನು ಕೊಲ್ಲುವದರಿಂದಲೂ ಸ್ವಲ್ಪಮಟ್ಟಿಗೆ ಅವುಗಳನ್ನು ಅಡಗಿಸಬಹುದು. ಇವು ಹಾರುವ ಹುಳುಗಳಾಗಿ ಪರಿಣಮಿಸಿ ಹೊರಗೆ ಹೊರಡುವಾಗ ಒಂದು ಪಾತ್ರೆಗೆ ತಣ್ಣೀರು ಹಾಕಿ ಅದರಮೇಲೆ ಸ್ವಲ್ಪ ಸೀಮೆ ಎಣ್ಣೆಯನ್ನು ತೇಲಿಬಿಟ್ಟು ನಡುವೆ ಒಂದು ದೀಪವನ್ನು ಹತ್ತಿಸಿಡುವದರಿಂದ ಅವುಗಳನ್ನು ನಿರ್ಮೂಲ ಮಾಡಬಹುದು. ಮಿ॥ ವೆರ್ಮೊರೈಲ್ ಮತ್ತು ಕಂಪನಿಯವರು ಇದಕ್ಕಾಗಿಯೇ ಅತ್ಯುಪಯುಕ್ತವಾದ ಒಂದು ಅಸಿಟಲೀನ್ ಎಂಬ ವಾಯುವಿನಿಂದ ಉರಿಯುವ ದೀಪವನ್ನು ಮಾಡಿದ್ದಾರೆ. ಅದು ಜಲಪಾತ್ರೆ ಮೊದಲಾದ್ದು ಸಹಿತ ಮಾರ್ಸೇಲೀಸ್ ಎಂಬಲ್ಲಿ 16 ಫ್ರಾಂಕಿಗೆ ದೊರೆಯುತ್ತದೆ.

ಉಪಸಂಹಾರ:— ಇಂಡಿಯಾದೇಶದ ವ್ಯವಸಾಯಗಾರನಿಗೆ ಹುಳುಗಳ ಈತಿ ಬಾಧೆ ಇಲ್ಲವೆಂದು ಅನೇಕಕಡೆಯಲ್ಲಿ ಅಭಿಪ್ರಾಯವಿದೆ. ಇದಕ್ಕಿಂತಲೂ ತಪ್ಪಾದ ಅಭಿಪ್ರಾಯ ಯಾವದೂ ಇಲ್ಲ. ನಾನು ಮೇಲೆ ಹೇಳಿದ ಹುಳುಗಳು ಈ ವರ್ಷ ನಾನು ನೋಡಿದ ಹುಳುಗಳಲ್ಲಿ ಏಕಾಂಶಮಾತ್ರವಾಗಿವೆ. ನಾನು ನೋಡಿದ ಹುಳುಗಳೂ ಸಹ ನಿಜವಾಗಿಯೂ ಇರುವ ಒಟ್ಟು ಹುಳುಗಳಲ್ಲಿ ಅಲ್ಪಾಂಶವಾಗಿಯೇ ಇರಬೇಕು. ಕೆಲವು ಪ್ರಾಂತ್ಯಗಳಲ್ಲಿ "ಜೋಲ್ ವರ್ಮ" ಎಂಬ ಹುಳುವಿನ ಹಾವಳಿಯಿಂದ ಯಾವ ವಿಧವಾದ ಹತ್ತಿಯೂ ಬೆಳೆಯಲವಕಾಶವಿಲ್ಲದೆ ಇದೆ. ಆದರೂ ಉಕ್ತವಾದ ಕೀಟಗಳಿಂದ ಆದ ನಷ್ಟವನ್ನು ಲೆಕ್ಕಿಸಿ ನೋಡಿದರೆ ಇದೇ ಅಪಾರವಾಗಿರುವದು. ವ್ಯವಸಾಯದ ಪರವಾಗಿ ಹಿಂದೂದೇಶದ ಈ ಪ್ರಾಂತ್ಯಕ್ಕೆ ಯಾರಾದರೂ ಒಬ್ಬ ಕ್ರಿಮಿ ಶಾಸ್ತ್ರಜ್ಞರು ಬರಬೇಕೆಂದು ನಾನು ಪುನಃಪೂರ್ವಕವಾಗಿಯೂ ಕೋರುತ್ತೇನೆ. ಇಲ್ಲಿ ಅಂಥಾ ಶಾಸ್ತ್ರಜ್ಞರ ಸಹಾಯವು ಅತ್ಯವಶ್ಯಕವಾಗಿ ಬೇಕಾಗಿದೆ.

ವ್ಯವಸಾಯಕ್ಕೆ ಸಂಬಂಧಪಟ್ಟ ಪರೀಕ್ಷೆಗಳು.

ಮೈಸೂರು ದೇಶದ ರೈತನಿಗೆ ಅವಶ್ಯಕವಾಗಿ ಬೇಕಾದ್ದೇನೆಂದು ಕಳೆದ ಮೂರು ವರ್ಷಗಳಿಂದ ನೋಡಿದರೂ ಅವರ ಕರುಗಳಿಗೆ ಮುಖ್ಯವಾಗಿ ಬಿಸಲು ಕಾಲದಲ್ಲಿ ಒಳ್ಳೆ ಮೇವನ್ನು ಒದಗಿಸುವುದು ಅತ್ಯವಶ್ಯಕವೆಂಬ ಅಭಿಪ್ರಾಯವೇ ನನಗೆ ಇನ್ನೂ ಇದ್ದೇ ಇದೆ. ಇಲ್ಲಿ ವಿಸ್ತಾರವಾದ ಬಂಜರು ಭೂಮಿಗಳೂ ಗ್ರಾಮಗಳಿಗೆ ಸೇರಿದ ಗೋಮಾಳಗಳೂ ಅನೇಕವಾಗಿವೆ. ಇವುಗಳಿಂದ ರೈತರು ತಮ್ಮ ದನ ಕರುಗಳಿಗೆ ಮೇವನ್ನು ಒದಗಿಸಿಕೊಳ್ಳಬೇಕಾಗಿದೆ. ಇಲ್ಲಿಯ ರೈತರು ತಮ್ಮ ದನ ಕರುಗಳು ಮೇಯುವ ಉದ್ದಿಶ್ಯ ತಮ್ಮ ಭೂಮಿಯನ್ನು ಬಿಟ್ಟಿರುವುದು ಬಲು ಅಪರೂಪ. ಬಿಟ್ಟಿಯಾಗಿ ಮೇಯಿಸುವ ಹಕ್ಕುಳ್ಳ ಕಡೆಯಲ್ಲಿ ರೈತನು ತನ್ನ ದನ ಕರುಗಳನ್ನು ಮೇಯಿಸಿಯಾನೇ ಹೊರತು, ತೆರಿಗೆ ಕೊಡತಕ್ಕ ಭೂಮಿಯಲ್ಲಿ ಸ್ವಲ್ಪ ಭೂಮಿಯನ್ನು ದನಗಳು ಮೇಯುವ ಉದ್ದಿಶ್ಯ ಬಿಡಲಾರನು. ರೈತನು ಈ ಸಾರ್ವಜನೋಪಯೋಗವಾದ ಪ್ರದೇಶಗಳಿಂದ ತನ್ನ ದನ ಕರುಗಳಿಗೆ ಬಿಟ್ಟಿ ಮೇವನ್ನು ಸಂಪಾದಿಸಿಕೊಳ್ಳುವದು ಮಾತ್ರವೇ ಅಲ್ಲದೆ ತನ್ನ ಭೂಮಿಯನ್ನು ಫಲವತ್ತಾಗಿ ಮಾಡುವದಕ್ಕಾಗಿ ಅಲ್ಪ ಸ್ವಲ್ಪ ಗೊಬ್ಬರವನ್ನು ಶೇಖರ ಮಾಡುವ ಆಶೋತ್ತರವನ್ನೂ ಇಟ್ಟುಕೊಂಡಿರುತ್ತಾನೆ. ಅಂಥಾ ಸನ್ನಿವೇಶಗಳಲ್ಲಿ ಅಲ್ಲಿ ದೊರಕುವ ಮೇವು ಅತಿ ನಿಕೃಷ್ಟವಾಗಿರಬೇಕೆಂಬುದು ಸಹಜವಾಗಿಯೇ ಇದೆ. ಅಲ್ಲಿಯ ಹುಲ್ಲು ಒರಟಾಗಿಯೂ ನಿಸ್ಸಾರವಾಗಿಯೂ ಇರುವದಲ್ಲದೆ ಸಾಮಾನ್ಯವಾಗಿ ನೆಲವನ್ನೆಲ್ಲಾ ಮುಚ್ಚಿಕೊಂಡೂ ಇರುವದಿಲ್ಲ. ಮೇಲೆಯೂ ಬೀಳು ನೆಲಗಳಲ್ಲಿ ಹೆಚ್ಚು ಭಾಗಗಳಲ್ಲಿ ಪೊದರುಗಳೂ ಮುಳ್ಳು ಗಿಡಗಳೂ ಬೆಳೆದುಕೊಂಡಿರುತ್ತವೆ. ಒಂದೊಂದು ವೇಳೆ ಒಳ್ಳೇ ಭೂಮಿಯಲ್ಲಿ ಕೂಡ ಮಳೆಯಿಂದ ಮೇಲುಮಣ್ಣು ಕೊಚ್ಚಿಹೋದ ಕಡೆಗಳಲ್ಲಿ ಕಾಣಿಸಿಕೊಳ್ಳುವ ನೆಲವು ಬೆಂದುಹೋಗಿ ಬಿಗಿಬಂದು ಯಾವ ಸಸಿ ಬೆಳೆಯುವದಕ್ಕೂ ಅವಕಾಶ ಕೊಡದಂತೆ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಈ ಬಿಟ್ಟಿ ಮೇವಿನ ಸ್ಥಳಗಳಲ್ಲಿ ಬೆಳೆಯುವ ಹುಲ್ಲನ್ನು ಮೇಯಿಸದೆ ಬಿಟ್ಟರೆ ಒಳ್ಳೆ ಒಣ ಹುಲ್ಲನ್ನು ಒದಗಿಸಿಕೊಡುತ್ತದೆ (Crop of hay) ವಸ್ತುತಃ ಮಲೆನಾಡಿನ ಹಲವು ಬೆಟ್ಟಗಳಮೇಲೆ ಒಂದು ಜಾತಿಯ ಒರಟುಹುಲ್ಲು ಒತ್ತೊತ್ತಾಗಿ ಹೊರವಾಗಿ ಬೆಳೆದುಕೊಂಡಿರುತ್ತದೆ. ಆದರೆ ದನಕರುಗಳು ಮೇಯುವ ನೆಲದಲ್ಲಿ ಹುಲ್ಲು ಸಾಮಾನ್ಯವಾಗಿ ಹಕ್ಕಲು ಹಕ್ಕಲಾಗಿಯೂ ಇರುತ್ತದೆ, ಬೇಗನೆಯೂ ಬೆಳೆಯುವದಿಲ್ಲ.

ಅಮೇರಿಕಾ ದೇಶದಲ್ಲಿ ತಕ್ಕಲು ಬಿದ್ದ ಹಳೇ ಹುಲ್ಲುಗಾವಲನ್ನು ಚೆನ್ನಾಗಿ ಉತ್ತು, ಬಿಗಿಯಾಗಿ ಹಿಂಟೆ ಕಟ್ಟಿಕೊಂಡಿದ್ದ ನೆಲವನ್ನು ಒಡೆದು, ಹೆಣೆದುಕೊಂಡಿದ್ದ ಕಾಡು ಹುಲ್ಲಿನ ಬೇರುಗನ್ನೆಲ್ಲಾ ಗೊಬ್ಬರಮಾಡಿ, ಈ ನಿಸ್ಸಾರವಾದ ಕಾಡುಹುಲ್ಲಿಗೆ ಪ್ರತಿಯಾಗಿ ಒಳ್ಳೆ ರಸವತ್ತಾದ ಗೊತ್ತಾದ ಹುಲ್ಲನ್ನು ಬೆಳೆಸುವದರಿಂದುಂಟಾದ ಅತ್ಯದ್ಭುತವಾದ ಮಾರ್ಪಾಟುಗಳನ್ನು ನೋಡಿನೋಡಿ ಅಭ್ಯಾಸವಾಗಿರುವದರಿಂದ ಇಲ್ಲಿಯೂ ಆರೀತಿಯಾದ ಕಾರ್ಯವನ್ನು ಕೈಕೊಂಡರೆ ತತ್ಸಜಾತೀಯವಾದ ಪ್ರತಿಫಲ ವುಂಟಾಗಬಹುದೆಂದು ಊಹಿಸುವದು ನನಗೆ ಸಹಜವಾಗಿಯೇ ಇದೆ. ಈ ಕಾರ್ಯಸ್ಥಾನದ ಪಕ್ಕದಲ್ಲಿ ಕಣ್ಣಿಗೆ ಬಹಳ ಸೊಗಸಾಗಿದ್ದ ಒಂದು ತಾಕು

690

ಬಂಜರು ಭೂಮಿಯನ್ನು ಚೆನ್ನಾಗಿ ಉಳಿಸಿ ಎಚ್ಚರಿಕೆಯಾಗಿ ಕೃಷಿಮಾಡಿ ಅದನ್ನು $\frac{1}{200}$ ಎಕರೆ ಯಷ್ಟು ಅಳತೆಯುಳ್ಳ ಪಾತಿಗಳಾಗಿ ವಿಂಗಡಿಸಿ ಅವುಗಳಲ್ಲಿ ಈ ಕೆಳಗೆ ವಿವರಿಸುವ ಹುಲ್ಲುಗಳನ್ನೂ Clover ಕ್ಲೋವರ್ ಎಂಬುವುಗಳನ್ನೂ ಬಿತ್ತಲಾಯಿತು.

	Elymus Canadensis.
	Bromus Schraederi.
	Bromus inermis from U. S. A.
	Do England.
Orchard grass (ತೋಟದ ಹುಲ್ಲು)	Dactylis glomerata.
Tall oat grass (ಉದ್ದವಾದ ಜವೆ ಗೋಧಿಯ ಹುಲ್ಲು) ...	Avena elatior.
Timothy (ಟಿಮೊತಿ ಹುಲ್ಲು)	Phleum pratense.
	Bouteloua oligastachya.
Italian eye grass(ಇಟಲಿ ದೇಶದ ಚಿಕ್ಕ ಗೋಧಿಯ ಹುಲ್ಲು).	Lolium Italicum.
	Lycurus Phleoides.
	Paspalum dilatatum.
Berumuda grass (ಬರುಮುಡ ದೇಶದ ಗರಿಕೆ ಹುಲ್ಲು)...	Cynodon Dactylon from U. S. A.
Hariali grass (ಗರಿಕೆ ಹುಲ್ಲು)	Cynodon Dactylon Native.
Giant hybrid cow clover (ಜೈಯಂಟ್ ಹೈಬ್ರಿಡ್ ಕೌ ಕ್ಲೋವರ್)	Trifolium Pratense.
Sutton's perennial red clover (ಸಟ್ಟನ್ಸ ಪೆರೆನಿಯಲ್ ರೆಡ ಕ್ಲೋವರ್).	ditto
Provence Lucerne (ಪ್ರೊವೆನ್ಸ ಲ್ಯೂಸರ್ನ್) ...	Medicago sativa.
American Lucerne (ಅಮೇರಿಕ ಖಂಡದ ಲ್ಯೂಸರ್ನ್) ...	ditto
Indian Lucerne (ಇಂಡಿಯ ದೇಶದ ಲ್ಯೂಸರ್ನ್) ...	ditto
Turkestan Lucerne (ತುರ್ಕಿಸ್ಥಾನದ ಲ್ಯೂಸರ್ನ್) ...	ditto
Giant sainfoin (ಜೈಯಂಟ ಸೇನ್‌ಫಾಯಿನ್) ...	Onobrychis sativa.
Japon clover (ಜಪಾನ್ ಕ್ಲೋವರ್) ...	Lespedeza striata.
Bokhara (ಬುಖಾರ ಕ್ಲೋವರ್) ...	ditto

ಮೇಲೆ ಹೇಳಿದವುಗಳಲ್ಲಿ ಅನೇಕ ಬೀಜಗಳನ್ನು ಅಮೇರಿಕಾದೇಶದ ಯೂನೈಟೆಡ್ ಸ್ಟೇಟ್ಸಿನ ವ್ಯವಸಾಯ ಇಲಾಖೆಯವರು ... ಪಿಟ್ಟು ಕಳುಹಿಸಿಕೊಟ್ಟರು. ಜಲಕ್ಷಾಮದಲ್ಲಿಯೂ ಸಾಯದಿರುವ ಕೆಲಜಾತಿಯ ಹುಲ್ಲು ಇಲ್ಲಿಗೆ ಅವಶ್ಯಕವಾಗಿ ಬೇಕಾಗಿರುವದರಿಂದ ಇವುಗಳನ್ನು ಮೈಸೂರಿನ ಉಪಯೋಗಕ್ಕಾಗಿಯೇ ಆಯ್ದು ಹುಡಿಕಿ ತರಿಸಿತು. ಉಳಿದವುಗಳಲ್ಲಿ ಹಲವು ಬಿತ್ತುಗಳು ಇಂಗ್ಲೆಂಡಿನಿಂದ ಬಂದವು. ಬೇರೆಬೇರೆ ಜಾತಿಯ ಉತ್ಪನ್ನ, ಕೃಷಿ, ಇವುಗಳಿಂದಾಗುವ ಫಲಿತಾಂಶವನ್ನು ಪರೀಕ್ಷಿಸುವದಕ್ಕಾಗಿ ಒಂದೇಜಾತಿಯ ಬೀಜಗಳನ್ನು ಎರಡುಮೂರು ಪಾತಿಗಳಲ್ಲಿ ಬೆಳೆಯಲಾಯಿತು.

ನಿದರ್ಶನಾರ್ಥವಾಗಿ:—ಹರಿಯಾಲಿ ಹುಲ್ಲಿನ ಬೀಜವನ್ನು ಒಂದು ತಾಕಿನಲ್ಲಿ ಬಿತ್ತಿತು; ಇನ್ನು ಮೂರು ತಾಕುಗಳಲ್ಲಿ ಕತ್ತರಿಸಿ ಗಿಣ್ಣುಗಳನ್ನು ನೆಡಲಾಯಿತು. (Reproduced by cuttings) ಒಂದು ಪಾತಿಯಲ್ಲಿ ಇವುಗಳನ್ನು ನೇಗಿಲ ಸಾಲಿನಲ್ಲಿ ನೆಟ್ಟು ಮೇಲುಮಣ್ಣು ಕವಿಚಿಕೊಳ್ಳುವಂತೆ ಮಗ್ಗುಲಲ್ಲಿ ಉತ್ತನೆ ಮಾಡಲಾಯಿತು. ಇನ್ನೊಂದರಲ್ಲಿಯೂ ಹಾಗೆಯೇ ಮಾಡಿದರೂ ಅವುಗಳ ತಲೆಮಾತ್ರ ಮೇಲೆ ಕಾಣುವಂತೆ ಮಣ್ಣು ಮುಚ್ಚಿತು. ಮೂರನೆಯ ಪಾತಿಯಲ್ಲಿ ಹರಿಯಾಲಿ ಹುಲ್ಲನ್ನು ಎರಡು ಅಂಗುಲ ಮೊದಲುಗೊಂಡು ನಾಲ್ಕಂಗುಲದಷ್ಟರವರೆಗೆ ತುಂಡುತುಂಡಾಗಿ ಕತ್ತರಿಸಿ ಅದನ್ನು ಹಿಡಿಹಿಡಿಯಾಗಿ ಎರಚಿ ಬಿದ್ದಕಡೆಯೇ ಅವುಗಳನ್ನು ನಿಲ್ಲಿಸುವದಕ್ಕಾಗಿ ಅವುಗಳಮೇಲೆ ಮರಳನ್ನು ಚೆಲ್ಲಲಾಯಿತು. ಕೊನೆಗೆ ಎಲ್ಲಾ ಪಾತಿಗಳಲ್ಲಿಯೂ ಬೆಳೆಯು ಸರಿಸುಮಾರಾಗಿ ಚೆನ್ನಾಗಿಯೇ ಆಯಿತು. ನೆಲದಮೇಲೆ ಎರಚಿದ್ದು ಮೊದಲು ಬೆಳೆದು ಆದಿಯಲ್ಲಿಯೇ ಒಂದೇಮಟ್ಟವಾಗಿ ನಿಂತಿತು; ತಲೆಯಮೇಲೆ ಮಣ್ಣು ಕವಚಿಕೊಳ್ಳದಂತೆ ಉತ್ತ ಪಾತಿಯಲ್ಲಿಯ ಪೈರೇ ಮೇಲೆ ಬರುವದಕ್ಕೆ ಎರಡನೆಯದಾಯಿತು. ತಲೆ ಮುಚ್ಚಿಹೋಗಿದ್ದುದೇ ಮಟ್ಟವಾಗಿ ಕಾಣಿಸಿಕೊಳ್ಳುವದರಲ್ಲಿ ಮೂರನೆಯದಾಯಿತು. ಬಿತ್ತಿದ್ದು ಮೊಳಕೆ ಹೊರಡಿಸಲೇ ಇಲ್ಲ.

ಲ್ಯೂಸರ್ನಿನಲ್ಲಿ ಅನೇಕ ಭೇದಗಳಿವೆ. ಅವುಗಳೆಲ್ಲಾ ಚೆನ್ನಾಗಿ ಗೊತ್ತೂ ಇಲ್ಲ. ಅದನ್ನು ಚೆನ್ನಾಗಿ ಗುರುತಿಸಿಯೂ ಇಲ್ಲ. ಹಿಂದುದೇಶದಲ್ಲಿ ಪೈರು ಮಾಡುವ ಲೂಸರ್ನನ್ನು ನೀರುಹಾಯಿಸಿ ಪೈರು ಮಾಡುತ್ತಾರೆ. ಕಾಲಿಫೋರ್ನಿಯಾದಲ್ಲಿ ಅದೇ ಪೈರು (ಅದಕ್ಕೆ ಅಲ್ಲಿ ಲೂಸರ್ನ್ ಅಥವಾ ಅಲ್ಫಾಲ್ಫ ಎಂದು ಹೆಸರು) ನೀರಿನ ಬರಕ್ಕೂ ಅಂಜದ ಪೈರೆಂದು ಹೆಸರಾಗಿದೆ. ಅಮೇರಿಕಾ ದೇಶದಲ್ಲಿ ಅದನ್ನು ತಳಗೆ ಮರಳಿರುವ ಪ್ರದೇಶದಲ್ಲಿ ಬಹಳವಾಗಿ ಬಿತ್ತುತ್ತಾರೆ. ಅಂಥ ಭೂಮಿಗಳಲ್ಲಿ ಅದರ ಬೇರು ಕೆಲವು ಸಮಯಗಳಲ್ಲಿ ಹತ್ತು ಅಡಿಗಳಿಗೆ ಮೀರಿ ಕೆಳಕ್ಕೆ ಇಳಿದುದಾಗಿ ಪರೀಕ್ಷಿಸಿ ನೋಡಿದ್ದಾರೆ. ಈ ಹುಲ್ಲುಗಳನ್ನೂ ಕ್ಲೋವರುಗಳನ್ನೂ (Clovers) ಉಳಿದ ಗೊಬ್ಬರ ಹಾಕದ ಸಾಮಾನ್ಯವಾದ ಬಂಜರು ಭೂಮಿಗಳಲ್ಲಿ ಬಿತ್ತಿದರೆ ಹೇಗಾಗುವುದೆಂದು ನೋಡುವದೇ ಈ ಪರೀಕ್ಷೆಯ ಉದ್ದೇಶವಾದ್ದರಿಂದ ಇವುಗಳಿಗಾಗಲಿ ಬೇರೆ ಪಾತಿಗಳಿಗಾಗಲಿ ಗೊಬ್ಬರ ಹಾಕಲಿಲ್ಲ. ಇವುಗಳಿಗೆ ನೀರು ಹಾಯಿಸಿ ನೀರಿನ ಕಷ್ಟವಿಲ್ಲದಂತೆ ನೋಡಿಕೊಂಡಿದ್ದರೂಕೂಡ ನೆಲವು ಸಾರವಿಲ್ಲದ್ದರಿಂದ ಈ ಪೈರು ಯಾವ ಪಾತಿಯಲ್ಲಿಯೂ ತೃಪ್ತಿಕರವಾಗಿ ಬೆಳೆಯಲಿಲ್ಲ. ಇವುಗಳ ಬೆಳವಣಿಗೆಯಲ್ಲಿ ತೋರಿದ ಅಲ್ಪಸ್ವಲ್ಪ ವ್ಯತ್ಯಾಸವು ಈ ದೇಶದ ಹವಾವಿಗೆ ಒಗ್ಗಿದ ಬಿತ್ತುಗಳ ವಿಷಯದಲ್ಲಿ ಸ್ವಲ್ಪ ಅನುಕೂಲವಾಗಿ ಕಂಡಿತು. ಇಲ್ಲಿಯ ಹವಾವಿಗೆ ಒಗ್ಗಿದ Clover ನ್ನು ಹಾಕಿದ ಪಾತಿಯಲ್ಲಿ ಅದನ್ನು ನಾಲ್ಕುವೇಳೆ

ಕೊಯ್ಯಲಾಯಿತು. ೨೧೦ ಎಕರೆಯಷ್ಟು ಹೊಲದಲ್ಲಿ 51 ಪೌನು ಚಿಲ್ಲರ್ವಾತ ತೂಕ Clover ಸಿಕ್ಕಿತು. ಅದೇ ಆಕಾರದ ಇತರ ಪಾತಿಗಳನ್ನು ಪರೀಕ್ಷೆಯ ಕೊನೆಯಲ್ಲಿ ಒಂದೇಸಲ ಕೊಯ್ಯಲಾಯಿತು. ಅವುಗಳಲ್ಲಿ 7ರಿಂದ 10 ಪೌನು ತೂಕದಷ್ಟು ಉತ್ಪತ್ತಿಯಾಯಿತು. ಭೂಮಿಯೆಲ್ಲಾ ಮೇಲುಗಡೆ ಹೆಂಟೆ ಸೆಟ್ಟುಕೊಂಡು ಬಿಗಿದುಕೊಳ್ಳುವ ಸ್ವಭಾವವುಳ್ಳದ್ದಾಗಿತ್ತು. ಭೂಮಿಯು ಈ ವಿಧವಾದ ಸ್ವಭಾವದಿಂದಲೇ ಬೆಳೆ ಹುಲುಸಾಗಿ ಆಗಲಿಲ್ಲವೆಂದು ಮೊದಲು ಊಹಿಸಲಾಯಿತು. ಅನಂತರ ಜೋಡಿಜೋಡಿಯಾಗಿ ಹಲವು ಪಾತಿಗಳನ್ನು ಮಾಡಿ ಅವುಗಳು ಬಿಗಿ ಕಟ್ಟಿಕೊಳ್ಳದಂತೆ ಕೆಲವನ್ನು ಅಗೆದೂ ಕೆಲವಕ್ಕೆ ತರಗು ಹೊದಿಕೆ ಹೊದಿಸಿಯೂ (Mulch) ಮತ್ತೆ ಕೆಲವಕ್ಕೆ ಸುಣ್ಣವನ್ನು ಬೆರಸಿಯೂ ನೋಡಿತು. ಆದರೂ ಭೂಮಿಯು ನಿಸ್ಸಾರವಾಗಿದ್ದದರಿಂದ ಇವು ಯಾವವೂ ಫಲಕಾರಿಯಾಗದಂತಾಯಿತು. ಸಸಿಗಳು ನಾಲ್ಕಂಗುಲದಿಂದ ಎಂಟಂಗುಲದಷ್ಟು ಬೆಳೆದಮೇಲೆ ಮುಂದಿನ ಬೆಳವಣಿಗೆಯು ಎಲ್ಲಾ ಪಾತಿಗಳಲ್ಲಿಯೂ ಒಂದೇರೀತಿಯಾಗಿ ಕಾರ್ಯತಃ ನಿಂತೇಹೋಯಿತು.

ಉಳಿದ Clover ಮತ್ತು ಹುಲ್ಲುಗಳಿಂದ ಉಂಟಾದ ಪ್ರತಿಫಲವು ಮೇಲೆ ವಿವರಿಸಿದ ಲ್ಯೂಸರ್ನನಿಂದ ಉಂಟಾದುದಕ್ಕಿಂತಲೂ ಹೆಚ್ಚು ಅತೃಪ್ತಿಕಾರವಾಗಿತ್ತು. (Clover) ಈ ಪೈರಿನಿಂದ ಊಹಿಸಬಹುದಾದ ಫಲಿತಾಂಶವನ್ನು ದೃಢಪಡಿಸುವಂತಿತ್ತು. ಎಂದರೆ ಸಂಸ್ಥಾನದ ಬಂಜರು ಭೂಮಿಯಲ್ಲಾ ಈಗ ಪರೀಕ್ಷಿಸಿದ ಬಂಜರು ಭೂಮಿಯು ಹಾಗೆಯೇ ಇದ್ದಪಕ್ಷಕ್ಕೆ ಬರೀ ಉಳುಮೆಯೇ ದನಕರುಗಳ ಮೇವಿನ ಸರಪರಾಯನ್ನು ಅಭಿವೃದ್ಧಿಗೆ ತರುವ ವಿಷಯದಲ್ಲಿ ಸಾಕಾಗುವದಿಲ್ಲವೆಂಬ ಅಭಿಪ್ರಾಯವನ್ನು ದೃಢಪಡಿಸಿತು. ಭೂಮಿಗೆ ಯಾವದಾದರೂ ಒಂದು ರೀತಿಯಲ್ಲಿ ಗೊಬ್ಬರವನ್ನು ಹಾಕಿದಹೊರತು ಹೊಸಹೊಸತರದ ಬಳ್ಳಿ ಹುಲ್ಲನ್ನು ತಂದರೂ ಏನೂ ಪ್ರಯೋಜನವಿಲ್ಲವೆಂಬುದೂ ದೃಢವಾಯಿತು. ಆದರೆ ಈಗ ಪರೀಕ್ಷಿಸಿದ ಬಂಜರು ಭೂಮಿಯು ಆ ಜಾತಿಯ ಭೂಮಿಗಳಿಗೆಲ್ಲಾ ನಿಜವಾಗಿಯೂ ಸರಿಯಾದ ಭೂಮಿಯೇ ಎಂಬದನ್ನು ಇತರ ಬಂಜರು ಭೂಮಿಗಳಲ್ಲಿ ಪೈರು ಮಾಡುವದರ ಮೂಲಕ ಪರೀಕ್ಷಿಸಿ ನಿರ್ಣಯ ಮಾಡಬೇಕು. ಈಗ ಪರೀಕ್ಷಿಸಿದ ಭೂಮಿಯನ್ನು ನೋಡಿದರೆ ಇದು ಅಂತಹ ಸಾಧಾರಣ ಭೂಮಿಗೆ ಒಂದುಕೈ ಹೆಚ್ಚಾಗಿರುವಂತಿದೆಯೇಹೊರತು ಬೀಳಾಗಿರುವಂತೆ ಕಾಣುವದಿಲ್ಲ. ಆದರೂ ಈ ವಿಷಯದಲ್ಲಿ ನಾವು ಸೋಟದಿಂದ ಮೋಸಹೋದವೆಂದಾದರ ಸಾಕೆಂದು ಮನಃಪೂರ್ವಕವಾಗಿಯೂ ಹಾರೈಸುತ್ತೇನೆ. (ಈಪರೀಕ್ಷೆಯಲ್ಲಿ) ಭೂಮಿಯಲ್ಲಿ ಸಾರವಿಲ್ಲದ್ದರಿಂದಮಾತ್ರವೇ ಅಲ್ಲದೆ ನಾನಾವಿಧವಾದ (ಸಸಿಗೆ ಬರುವ) ರೋಗಗಳಿಂದಲೂ ಹುಳುಗಳ ಕಷ್ಟದಿಂದಲೂ ತಪ್ಪಿಸಿಕೊಳ್ಳಬೇಕಾಯಿತು. ಯಾಕೆಂದರೆ ಸ್ವಲ್ಪ ಹಿಂದೆಯೋ ಮುಂದೆಯೋ ಸ್ವಲ್ಪಹೆಚ್ಚಾಗಿಯೋ ಕಡಿಮೆಯಾಗಿಯೋ ಯಾವದಾದರೂ ಒಂದು ರೋಗಕ್ಕೆ ಒಳಗಾಗದಿದ್ದ ಪಾತಿಯೇ ಇರಲಿಲ್ಲ. ಇದು ಹುಲ್ಲಿನವಿಷಯದಲ್ಲಂತೂ ವಿಶೇಷವಾಗಿ ನಿಜವಾಯಿತು. ಹಲವು ಪಾತಿಗಳಲ್ಲಿ ಹುಲ್ಲುಗಳ ಬೆಳವಣಿಗೆ ನಿಂತುಹೋದ ಕೂಡಲೆ ಹುಲ್ಲೆಲ್ಲಾ ನಿಶ್ಶೇಷವಾಗಿ ಸತ್ತುಹೋಗಿ ವರ್ಷದ ಕೊನೆಯ ವೇಳೆಗೆ ಹೊಸದಾಗಿ ತಂದ ಆ ಹುಲ್ಲುಗಳ ಮಾದರಿಗಾಗಿ ಎಲ್ಲೋ ಕೆಲಕೆಲವು ಜೀವಿಸಿಕೊಂಡಿದ್ದವು. ಈ ನಷ್ಟಕ್ಕೆ ಭೂಮಿಯ ಅಸಾರತೆಯೇ ಪ್ರಧಾನಕಾರಣವಾಗಿರಬೇಕು. ಈ ಹುಲ್ಲುಗಳಿಗೆ ಬಂದ ರೋಗಗಳಲ್ಲಿ ಕೆಲವನ್ನು ನಿರ್ಧರಿಸಲು ಪ್ರಯತ್ನ ಮಾಡಿತು. ಆದರೆ ಆ ರೋಗಗಳೊಂದೂ ಸಾಮಾನ್ಯವಾಗಿ ಸಸ್ಯಗಳಿಗೆ ಬರುವ ಪ್ರಸಿದ್ಧವಾದ ರೋಗಗಳಾಗಿರಲಿಲ್ಲ. ಅವುಗಳನ್ನು ಕೂಲಂಕಷವಾಗಿ ವಿಚಾರ ಮಾಡಬೇಕಾದರೆ ಆ ವಿಷಯದಲ್ಲಿ ಪಾಂಡಿತ್ಯವುಳ್ಳವನಿಗೇನೇ ಅನೇಕ ವರ್ಷಗಳಕಾಲ ಬೇಕಾಗುತ್ತದೆ.

ಹುಲ್ಲುಗಳಲ್ಲೆಲ್ಲಾ ಅತ್ಯುತ್ತಮವಾದ ಪ್ರತಿಫಲವುಂಟಾದ್ದು ಹರಿಯಾಳಿ ಹುಲ್ಲೊಂದರಿಂದಲೇ ಅದು (ಪಾತಿಯ) ನೆಲವನ್ನೆಲ್ಲಾ ಚೆನ್ನಾಗಿ ವ್ಯಾಪಿಸಿಕೊಂಡಿದ್ದಲ್ಲದೆ ಸುಮಾರಾಗಿ ಚೆನ್ನಾಗಿಯೂ ಬೆಳೆದದ್ದರಿಂದ ವರ್ಷದ ಕೊನೆಯಲ್ಲಿ 5 ಪೌನಷ್ಟು ಮಿತವಾಗಿ ಎಂದರೆ ಎಕರೆಗೆ 1,000 ಪೌನಿನಷ್ಟು ತೂಕ ಹುಲ್ಲು ಕೊಟ್ಟಿತು. ಅದಕ್ಕೂ ಕೂಡ ಒಂದುಜಾತಿ ರೋಗ ಬಂತು. ಈ ರೋಗವು ಗೋಧಿಗೂ ಜವೆಗೋಧಿಗೂ ಬರುವ 'Rust' ಎಂಬ ರೋಗದಂತೆ ನೋಟಕ್ಕೆ ಕಾಣಿಸುತ್ತಿತ್ತು. ಆದರೆ ಸೂಕ್ಷ್ಮದರ್ಶಕದ ಮೂಲಕ ನೋಡುವಲ್ಲಿ ಬೇರೆ ರೋಗವಾಗಿ ಕಾಣಿಸಿತು. ನೂರಾರು ಸೂಕ್ಷ್ಮತಮ ಸಸ್ಯಬೀಜ (Spores) ಗಳು ಕಂಡುಬಂದವು. ಅವುಗಳೆಲ್ಲಾ ಬೇರೆಬೇರೆ ಜಾತಿಯವುಗಳಾದ್ದರಿಂದ ಅವು ಎಷ್ಟುಮಾತ್ರಕ್ಕೂ ಈ ರೋಗಕ್ಕೆ ಕಾರಣವಾದವುಗಳಲ್ಲ. ಇಂಡಿಯಾ ಸರ್ಕಾರಕ್ಕೆ (Cryptogamic Botanist) ಕ್ರಿಪ್ಟೊಗ್ಯಾಮಿಕ್ ಬಾಟನಿಸ್ಟರಾದ ಡಾಕ್ಟರ್ ಬಟ್ಲರ್ ಎಂಬವರ ... ರೋಗಗಳೆಂದು ಊಹಿಸಲ್ಪಟ್ಟವುಗಳು (ರೋಗಗಳಲ್ಲವೆಂದೂ), ಗಾಲ್ ಇನ್ಸೆಕ್ಟ (Gall insect) ಎಂಬ ಒಂದು ಜಾತಿಯ ...ರದ ತೂತುಗಳೆಂದೂ ತರುವಾಯ ಗೊತ್ತು ಮಾಡಿದರು. ಬರ್ಲಿಂಪಟ್ಟಣದ ಪ್ರೊಫೆಸರ್ ಮ್ಯಾಗ್ನಸ್ ಎಂಬ ಪಂಡಿತರಿಂದ ...ರ್ವಕವಾಗಿ ನಿರ್ಣಯಿಸಲ್ಪಟ್ಟವರೆಗೂ ಈ ಹುಳುಗಳು ವೃಕ್ಷಾಯುರ್ವೇದಜ್ಞರಿಗೆ ಚಿರಕಾಲ ವಿಶೇಷವಾಗಿ ಶ್ರಮಕ...

ಹರಿಯಾಳಿ ಹುಲ್ಲಿನ ವಿಷಯದಲ್ಲಿ ಹಿಂದೂದೇಶದಲ್ಲಿ ನಂಬಿಕೆಯಿರುವದಕ್ಕಿಂತಲೂ ಸುಲಭವಾಗಿ ಅದನ್ನು ...ದೂ ಇತರ ವಿಧವಾದ ಹುಲ್ಲುಗಳು ಬೆಳೆಯದೆ ಸತ್ತುಹೋಗುವ ಭೂಮಿಗಳಲ್ಲಿಯೂ ಅದು ಜೀವಿಸಲಾಪದೆಂದೂ ಸೂಚಿಸುತ್ತವೆ. ಮಳೆಗಾಲದಲ್ಲಿಯಾಗಲಿ ಅಥವಾ ಸ್ವಲ್ಪ ಮುಂದೆಯಾಗಲಿ ಅವುಗಳನ್ನು ಬಿತ್ತಿದರೆ ಈಗ ಮೈಸೂರ... ವಿಶೇಷವಾಗಿ ಬಳಕೆಯಲ್ಲಿರುವಂತೆ ಅವುಗಳ ಕಡ್ಡಿಗಳನ್ನು ಹೂಳುವ ಕೆಲಸಕ್ಕಾಗಿ ಹಣ ಖರ್ಚುಮಾಡಬೇಕಾದ ಅವಶ್ಯಕ... ಲವರು ಬೋಧಿಸುವಂತೆ ಅವುಗಳನ್ನು ಕತ್ತರಿಸಿ ದನದ ಗೊಬ್ಬರದೊಂದಿಗೂ ಇತರ ಪದಾರ್ಥಗಳೊಂದಿಗೂ ಬೆರಸ... ವಸ್ತುತಃ ಕತ್ತರಿಸಿದ ಹುಲ್ಲನ್ನು ಬಿತ್ತಿ ಅದು ಒಂದೇ ಕಡೆ ನಿಲ್ಲುವಂತೆ ಅದರ ಮೇಲೆ ಮರಳನ್ನು ಎರಚುವ ಪದ್ಧ...ವಾದ್ದು: ಇದರಿಂದಲಾಗುವಷ್ಟು ಪ್ರಯೋಜನವು ಮೇಲೆ ಹೇಳಿದ ಪದ್ಧತಿಯಿಂದಾಗುವದು ಸಂದೇಹಾಸ್ಪದವಾಗಿದೆ. (... ಅವುಗಳ) ಮೇಲುಗಡೆ ಸ್ವಲ್ಪ ಗೊಬ್ಬರವನ್ನು ಎರಚಿದರೆ ಬಹಳ ಒಳ್ಳೆಯದು. ಆದರೆ ಹೀಗೆ ಮೊದಲೇ ಗೊಬ್ಬರವನ್ನು ...ವದು ಒಳ್ಳೇದೆ ಇಲ್ಲವೆ ಹುಲ್ಲು ಬೇರುಬಿಟ್ಟಮೇಲೆ ಎರಚುವದು ಒಳ್ಳೇದೇ ಎಂಬುವನ್ನು ಪರೀಕ್ಷಿಸಿ ನೋಡಿ ನಿರ್ಣಯಿಸಬೇಕಾಗಿ...

ಕಾರ್ಯಸ್ಥಾನದ ಪಕ್ಕದ ತಾಕಿನಲ್ಲಿ ಇತರವಿಧವಾದ ಸಸ್ಯಗಳನ್ನೂ ಪೈರುಮಾಡಿ ನೋಡಲಾಯಿತು. ಇವುಗಳಲ್ಲಿ ಕಡಲೆ, ಹುರುಳಿ, ರಾಗಿ, ಜೋಳ, ಗಾಂಜಾ, ಬ್ಲೂಲ್ಯೂಪೈನ್ಸ್ (Blue lupines), ಉರುಳಗೆಡ್ಡೆ ಇವುಗಳೂ ಸೇರಿದ್ದವು.

ಇವು ಮಾವವಕ್ಕೂ ಗೊಬ್ಬರ ಹಾಕಲಿಲ್ಲ. ವೆಚಸ್ (Vecthes) ಜಾತಿಯವು ಚೆನ್ನಾಗಿ ಮೊಳಕೆಯೇನೋ ಬಿಟ್ಟವು ಆದರೆ ತಮ್ಮ ಬಿತ್ತಗಳಲ್ಲಿದ್ದ ಸಾರದಿಂದ ಎಷ್ಟುಮಟ್ಟಿಗೆ ಬೆಳೆಯುವದು ಸಾಧ್ಯವೋ ಅಷ್ಟುಮಟ್ಟಿಗೆ ಬೆಳೆದವೇ ಹೊರತು ಅದಕ್ಕೆ ಮೀರಿ ಬೆಳೆಯಲಿಲ್ಲ. ಲ್ಯೂಪೈನ್ಸ್ ಜಾತಿಯ (Lupines) ಸಸ್ಯಗಳು ಸುಮಾರು ಹದಿನೆಂಟಂಗುಲದಷ್ಟೆತ್ತರ ಬೆಳೆದವು. ಆದರೂ ಯಾವಾಗಲೂ ಬಾಡಿಕೊಂಡು ಬಡವಾಗಿ ಕಾಣುತ್ತಿದ್ದವು. ಅವುಗಳಲ್ಲಿ ಮೇಲಿನ ಎಲೆಗಳು ಹೊರತಹಾಗೆಲ್ಲ ಕೆಳಗಿನ ಎಲೆಗಳು ಒಣಗಿ ಬೀಳುತ್ತಿದ್ದವು. ಫಸಲನ್ನು ಕೊಯ್ದಾಗ ತೂಕದಲ್ಲಿ 10 ಪೌಂಗೆ ಸ್ವಲ್ಪ ಕಡಿಮೆಯಾಗಿತ್ತು. ಈ ಪಾತಿಯು ಹಿಂದೆ ಹೇಳಿದ ಬೇರೆ ಪಾತಿಗಳಂತೆಯೇ $\frac{1}{200}$ ಎಕರೆಯಷ್ಟಿತ್ತು.

ಗಾಂಜಾವೂ ಸರಿಸುಮಾರಾಗಿ ಲ್ಯೂಪೈನ್ Lupine ಎಂಬುದರ ಹಾಗೆಯೇ ಬೆಳೆಯಿತು. ಅದೂ ರೋಗವುಳ್ಳ ಹಾಗೆಯೇ ಕಾಣುತ್ತಿತ್ತು. ಅವುಗಳ ಎತ್ತರವೂ ಒಂದೇ ಸಮವಾಗಿರಲಿಲ್ಲ. (ಗಾಂಜಾದ ವಿಷಯದಲ್ಲಿ ಎಲ್ಲರೂ) ಸಾಮಾನ್ಯವಾಗಿ ಮಾಡುವಂತೆಯೇ ಮೊದಲು ಗಂಡು ಗಿಡಗಳನ್ನು ತೆಗೆದುಬಿಡಲಾಯಿತು. ಸುಮಾರು 11 ಔನ್ಸ ತೂಕದಷ್ಟು ಅದುಮಿದಹಲ್ಲೆ (Pressed cakes) ಗಾಂಜಾ ಸಿಕ್ಕಿತು. ಆದರೂ ಇದರ ಪಾತಿಯು ಸ್ವಲ್ಪ ಕಡಿಮೆ $\frac{1}{100}$ ಎಕರೆಯಷ್ಟಿತ್ತು.

ಉರುಳಿಗೆಡ್ಡೆಯ ಪಾತಿ ಮಾತ್ರ ಬೇರೆ ಪಾತಿಗಳಿಗೆ ಎರಡರಷ್ಟು ದೊಡ್ಡದಾಗಿತ್ತು. ಉರುಳಿಗೆಡ್ಡೆಗೆ ರೋಗವು ಬಾರದಂತೆ ತಪ್ಪಿಸುವದಕ್ಕಾಗಿ ಆಗಾಗ್ಗೆ 'ಬೋರ್ಡೊಮಿಕ್ಸ್ಚರ್.' (Bordeaux mixture) ಎಂಬುದನ್ನು ಉಪಯೋಗಿಸಿತು. ಇತರ ಪಾತಿಗಳಂತೆಯೇ ಈ ಪಾತಿಗಳನ್ನೂ ಕ್ರಮವಾಗಿ ಕೆದಕಲಾಯಿತು. ಬೇಕಾದಷ್ಟು ನೀರನ್ನೂ ಹಾಕಿಸಲಾಯಿತು ಆದಾಗ್ಯೂ ಬಂದ ಫಸಲು ಬಿತ್ತಿದ ಬೀಜಕ್ಕಿಂತಲೂ ಕಡಿಮೆಯಾಗಿತ್ತು.

ಉಳಿದ ಪೈರುಗಳ ಬೆಳೆವಣಿಗೆಯೂ ಕಡಿಮೆಯಾಗಿಯೂ ಬಹಳ ಹೀನವಾಗಿಯೂ ಇತ್ತು. ಆದರೂ ಮೇಲೆ ವಿವರಿಸಿದ ಹುಲ್ಲಿನ ಮತ್ತು ಇತರ ಸಸ್ಯಗಳ ಬೆಳೆವಣಿಗೆಯಿಂದ ಎಷ್ಟು ಆಗಬಹುದೆಂದು ಊಹಿಸಲಾಗುವದೂ ಅದಕ್ಕಿಂತಲೂ ಖಂಡಿತವಾಗಿಯೂ ಹೆಚ್ಚಾಗಿಯೇ ಇತ್ತು. ಕಡಲೆಯು (Bengal gram) 10 ಔನ್ಸ ತೂಕ ಕಾಳನ್ನೂ ಸ್ವಲ್ಪ ಕಡಿಮೆ $1\frac{1}{2}$ ಪೌಂ ತೂಕ ಕಡ್ಡಿಯನ್ನೂ ಕೊಟ್ಟಿತು. ಹುರುಳಿಯಿಂದ ಕಡ್ಡಿ ಕಾಳು ಸಹಿತವಾಗಿ $29\frac{1}{2}$ ಪೌಂ ತೂಕದಷ್ಟು ಹುಟ್ಟುವಳಿಯಾಯಿತು. ರಾಗಿಯ ಕಾಳನ್ನು ಹಕ್ಕಿಗಳು ತಿಂದು ಬಿಟ್ಟುವು. ಮಿಕ್ಕ ಅಲ್ಪ ಸ್ವಲ್ಪ ಕಾಳು ಹುಲ್ಲೂ ಸೇರಿ 9 ಪೌಂ ತೂಕದಷ್ಟಿದ್ದವು. ಅವರೆಯು (Cow gram) ಪಾತಿಯ ಹಿಂದುಭಾಗದಲ್ಲಿ ಚೆನ್ನಾಗಿ ಬೆಳೆಯಿತು. ಅದನ್ನು ಹಸುರಾಗಿರುವಾಗಲೇ ಕೊಯ್ಯಿತು. ಅದು ಒಟ್ಟು 57 ಪೌಂ ತೂಕವಾಯಿತು. ಜೋಳದ ಪೈರನ್ನು ತೊಂಡು ದನಗಳು, ಕತ್ತೆಗಳು ಇವೇ ಮೊದಲಾದವು ಅನೇಕವೇಳೆ ಮೇದುಬಿಟ್ಟವು. ಉಳಿದ ಕಡ್ಡಿಗಳನ್ನೂ ನಿಂತಿದ್ದ ತೆನೆಗಳನ್ನೂ ಕೊಯ್ದಾಗ $32\frac{1}{2}$ ಪೌಂ ತೂಕದಷ್ಟಾದವು. ಪಾತಿಗಳೆಲ್ಲಾ $\frac{1}{200}$ ಎಕರೆಯಷ್ಟಿದ್ದವು.

ಈ ಪರೀಕ್ಷೆಗಳಿಂದ ಗೊತ್ತಾಗುವ ಒಟ್ಟು ಫಲಿತಾರ್ಥವೇನಂದರೆ :—ರೈತರು ಸಾಮಾನ್ಯವಾಗಿ ಪೈರುಮಾಡುವ ಸಸ್ಯಗಳೆಲ್ಲಾ ಸಾರವಿಲ್ಲದ ಭೂಮಿಯಲ್ಲಿಯೂ ಕೂಡ, ಈ ವರ್ಷ ಪರೀಕ್ಷೆಯ ಭೂಮಿಯಲ್ಲಿ ಬೆಳೆದ ಹುಲ್ಲು ಕ್ಲೋವರ್ ಉರುಳಿಗೆಡ್ಡೆ ಮೊದಲಾದವುಗಳಿಗಿಂತಲೂ, ಚೆನ್ನಾಗಿ ಬೆಳೆಯುತ್ತವೆ. ಇದರಿಂದ ತಿಳಿಯಬಹುವ ಮತ್ತೊಂದು ಅಂಶವೇನೆಂದರೆ—ಭೂಮಿಯಲ್ಲಿ ಏನೋ ಪ್ರಬಲವಾದ ದುರ್ಗುಣವಿದೆ ಎಂಬುದೇ. ಬಹುಶಃ ಭೂಮಿಯು ಮಧ್ಯಸ್ಥವಾದ ಬೆಳೆ ಕೊಡುವಷ್ಟು ಕೂಡ ಸಾರವಾಗಿರಲಾರದು, ಇಲ್ಲವೇ ಅನೇಕ ವರ್ಷಗಳಿಂದಲೂ ಮೇಲೆ ಯಾವ ಹಸರೂ ಬೆಳೆಯದ ಬೇಗೆಯಲ್ಲಿ ಬೆಂದು ಹೇಗೋ ಅದರ ಸಾರವು ಕೆಟ್ಟುಹೋಗಿರಬೇಕು. ಇದು ಹೇಗಾದರೂ ಇರಲಿ. ನಮ್ಮ ಪರೀಕ್ಷೆಯ ಮುಖ್ಯೋದ್ದೇಶದ ವಿಷಯದಲ್ಲಿ ಎಂದರೆ ದನಕರುಗಳಿಗೆ ಹೆಚ್ಚು ಮೇವನ್ನು ಒದಗಿಸುವ ವಿಷಯದಲ್ಲಿ ಮೇಲೆ ಸೂಚಿಸಿದಂತೆ ಬರೀ ಉಳುವಿಕೆಯಿಂದಲೇ ರೈತನು ತನ್ನ ದನಕರುಗಳಿಗೆ ಒಳ್ಳೇ ಮೇವನ್ನು ಒದಗಿಸುತ್ತಾನೆಂಬುದು ಬಹಳ ಸಂದೇಹಾಸ್ಪದವಾಗಿದೆ. ಗೊಬ್ಬರದ ಸಹಾಯವು ಖಂಡಿತವಾಗಿರಬೇಕು. ಈ ...ರ್ಷನ ಬೇರೊಂದು ಭಾಗದಲ್ಲಿ ಸೂಚಿಸಿದ ಮೇರೆ ರೈತನು ಇನ್ನು ಸ್ವಲ್ಪ ಎಚ್ಚರಿಕೆ ಸಾಹಸ ಇವುಗಳನ್ನು ಪಯೋಗಿಸಿ ಗೊಬ್ಬ...ನ್ನು ಸಮೃದ್ಧಿಯಾಗಿ ಒದಗಿಸಿಕೊಳ್ಳಬಹುದು.

ಕಾಫಿಗೆ ನೆರಳು.

ಮೈಸೂರು ಪ್ಲಾಂಟರುಗಳಲ್ಲಿ ಮುಖಂಡರಾದ ಕೆಲವರ ಕೋರಿಕೆಯ ಮೇರೆ ಸರ್ವೋತ್ತಮವಾದ ಕೆಲವು ನೆರಳುಗಿಡಗಳದೆಂದು ತಿಳಿದುಬಂದ ಹನ್ನೆರಡು ಮಾದರಿ ಎಲೆಗಳನ್ನು ಪೃಥಕ್ಕರಿಸಿ ನೋಡಲಾಯಿತು. ಈ ಎಲೆಗಳು ಗ್ರಹಾಮ್ ಆನ್ಡರ್ಸನ್ ಎಸ್ಕ್ವೈರ್ C. I. E. ಯವರಿಂದ ಸೇಖರಿಸಲ್ಪಟ್ಟು ಇಂಥಂಥವುಗಳೆಂದು ಹೆಸರಿಡಲ್ಪಟ್ಟವಾದ್ದರಿಂದ ಈ ಎಲೆಗಳು ತಪ್ಪದೆ ಆಯಾ ಹೆಸರಿನ ಎಲೆಗಳೇ ಎಂಬ ವಿಷಯದಲ್ಲಿ ಇದಕ್ಕಿಂತಲೂ ಮೇಲಾದ ಹೊಣೆ ದೊರಕಲಾರದು. ಇವುಗಳೊಳಗೆ ಕೆಲವುಗಳಲ್ಲಿರುವ 'ಪೊಟಾಷ್' ಇಷ್ಟೆಂದು ಇನ್ನೂ ನಿರ್ಧರಿಸಲ್ಪಟ್ಟಿಲ್ಲವಾಗಿ ಅವುಗಳ 'ಪೃಥಕ್ಕರಣವು' ಇನ್ನೂ ಸಮಗ್ರವಾಗಿ ನೆಡೆದಿಲ್ಲ. ಇದೂ ಅಲ್ಲದೆ ಈ ಪರೀಕ್ಷೆಯ ಫಲಿತಾಂಶವನ್ನು ವಿಮರ್ಶೆಯೊಡನೆ ವಿಚಾರಮಾಡುವದಕ್ಕೆ ಮೊದಲು, ಹೋಲಿಸಿ ನೋಡುವದಕ್ಕಾಗಿ, ಕೆಟ್ಟನೆರಳು ಮರಗಳೆಂದು ಹೆಸರುವಾಸಿಗೆ ಬಂದಿರುವ ಕೆಲವು ಮರಗಳ ಎಲೆಯ ಮಾದರಿಗಳನ್ನು ಪರೀಕ್ಷಿಸಿ ನೋಡಬೇಕು. ಆದಕಾರಣ ಆ ಫಲಿತಾಂಶದ ವಿಷಯವಾಗಿ ಯೇನನ್ನೂ ವಿವರಿಸದೆ, ಈ ಮಾದರಿ ಎಲೆಗಳು ಸಹಜವಾಗಿ ಹಣ್ಣಾಗಿ ಮರದಿಂದ ಬಿದ್ದವಾದಾಗ್ಯೂ ಸಾಮಾನ್ಯವಾಗಿ ಎಲೆಗಳು ಉದುರುವದಕ್ಕೆ ಮೊದಲೇ ಅವುಗಳಲ್ಲಿರುವ ಪ್ರೊಟೊಪ್ಲಾಸಂ ಎಂಬ ಪದಾರ್ಥವು ಪುನಃ ಹಿಂದಕ್ಕೆ ಹೋಗಿ ಅನೇಕವಾಗಿ ಮರದಲ್ಲಿ ಐಕ್ಯವಾಗುವದು ಸ್ವಾಭಾವಿಕವಾದಾಗ್ಯೂ ಈ ಎಲೆಗಳಲ್ಲಿ ನಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ನೈಟ್ರೋಜನ್ ದೊರೆಯಿತೆಂಬಂಶವನ್ನು ಮಾತ್ರ ಸೂಚಿಸಿ-ಫಲಿತಾಂಶವನ್ನು ಯಥಾವತ್ತಾಗಿ ಕೊಟ್ಟಿದ್ದೇನೆ.

ಕಾಫಿಗೆ ಗೊಬ್ಬರದಿಂದಾಗುವ ಪ್ರಯೋಜನದ ಪರೀಕ್ಷೆ.

ಹನ್ನೆರಡು ಬೇರೆ ಬೇರೆ ಕಾಫಿ ತೋಟಗಳಲ್ಲಿ ಗೊಬ್ಬರ ಹಾಕಿ ಪರೀಕ್ಷಿಸುವದಕ್ಕಾಗಿ ಹನ್ನೆರಡು ಬೇರೆ ಬೇರೆ ತಾಕುಗಳನ್ನು ಆರಿಸಿಕೊಳ್ಳಲಾಯಿತು. ಒಟ್ಟಿನಲ್ಲಿ ಪ್ಲಾಂಟರ ಕಾಫಿ ತೋಟಕ್ಕೂ ಯಾವ ವಿಧವಾದ ಸಸ್ಯಾಹಾರವು ಅತ್ಯವಶ್ಯಕವಾಗಿದೆಯೆಂಬುದನ್ನೂ ಮತ್ತು ಕಾಫಿ ಗಿಡಕ್ಕೆ (ಸರ್ವಸಾಮಾನ್ಯವಾಗಿ) ಯಾವ ಬಗೆಯ ಸಸ್ಯಾಹಾರವು ವಿಶೇಷವಾಗಿ ಬೇಕಾಗಿದೆ ಯೆಂಬುದನ್ನೂ ತಿಳಿಸಬೇಕೆಂಬ ಈ ಎರಡು ವಿಧವಾದ ಉದ್ದೇಶದೊಡನೆ ಈ ಪರೀಕ್ಷೆಯನ್ನು ನಡಿಸಲಾಯಿತು. ಒಂದು ಜಾತಿಯ ಪೈರಿಗೆ ಒಂದು ಜಾತಿಯ ಸಸ್ಯಾಹಾರವು ವಿಶೇಷವಾಗಿ ಬೇಕಾಗುತ್ತದೆ ಯೆಂಬುದೂ ಮತ್ತೊಂದು ಜಾತಿಯ ಪೈರಿಗೆ ಮತ್ತೊಂದು ಜಾತಿಯ ಗೊಬ್ಬರವನ್ನೂ ಹೆಚ್ಚಾಗಿ ಹಾಕುವದು ಸೂಕ್ತವೆಂಬುದೂ ಸರ್ವ ವಿದಿತವಾಗಿಯೇ ಇದೆ. ಹೇಗೆಂದರೆ:—ಗೋಧಿ ಮೊದಲಾದ ಶೂಕಧಾನ್ಯಗಳಿಗೆ (Grains) ನೈಟ್ರೋಜನ್ ವಿಶೇಷವಾಗಿರುವ ಗೊಬ್ಬರವನ್ನು ಹಾಕಿದರೆ ಹುಲುಸಾಗುತ್ತವೆ ಹುರುಳಿ ... ಮುಂತಾದ ಶಿಂಬಿಧಾನ್ಯಗಳಿಗೆ ಪ್ರಾಯಶಃ ಕ್ಷಾರವೂ ರಂಜಕದ ದ್ರಾವಿಯೂ (Potash and Phosphoric acid) ವಿಶೇಷವಾಗಿ ಕಲೆತಿರುವ ಗೊಬ್ಬರವೇ ಬೇಕಾಗುತ್ತದೆ. ಸಾಧಾರಣ ಭೂಮಿಗಳಲ್ಲಿ ಕಾಫಿಗೆ ಯಾವ ವಿಧವಾದ ಸಸ್ಯಾಹಾರವು ಅವಶ್ಯಕವೆಂಬ ವಿಷಯವಾಗಿ ಏನೂ ತಿಳಿದಿಲ್ಲ. ಆದಕಾರಣ ಈ ಪರೀಕ್ಷೆಗಳನ್ನು ಮುಖ್ಯವಾಗಿ ಆಯಾ ತೋಟದ ಭೂಗುಣವನ್ನು ತಿಳಿದುಕೊಳ್ಳುವ ಉದ್ದೇಶದಿಂದಲೇ ನಡಿಸಿತು ; ಆದ ಪ್ರಯುಕ್ತ ಇವು ಯಾವ ಭೂಮಿಯಲ್ಲಿ ಪರೀಕ್ಷೆ ನಡೆಯಿತೋ ಆ ಭೂಮಿಗೆ ಮಾತ್ರವೇ ಅನ್ವಯಿಸುತ್ತವೆ. ಕಾಫಿಗೆ ಗೊಬ್ಬರವನ್ನು ಉಪಯೋಗಿಸುವ ವಿಷಯದಲ್ಲಿ ಕೆಲವು ಸಾಮಾನ್ಯ ನಿಯಮಗಳನ್ನು ಕಂಡು ಹಿಡಿಯಬೇಕೆಂಬ ನಮ್ಮ ಎರಡನೆಯ ಉದ್ದೇಶವು ಸರ್ವಸಾಮಾನ್ಯವಾಗಿ ಆದರಣೀಯವಾದ್ದು

ಮತ್ತು ಬಹಳ ಮುಖ್ಯವಾದ್ದು ಹೌದು. ಈ ಎರಡನೆಯ ವಿಚಾರದ ವಿಷಯವಾಗಿ ಏನಾದರೂ ಸಂಗತಿಯನ್ನು ತಿಳಿದುಕೊಳ್ಳಬೇಕಾದರೆ ನಾವು ಪರೀಕ್ಷೆಯನ್ನು ನಡಿಸಿದ ಭೂಮಿಯಲ್ಲಿ ಸೇರಿರುವ ಪದಾರ್ಥಗಳು ಇವಿವೇ ಎಂಬದಾಗಿ ಸಾಧ್ಯವಾದ ಮಟ್ಟಿಗೆ ಚೆನ್ನಾಗಿ ತಿಳಿದುಕೊಳ್ಳುವದು ಅವಶ್ಯಕ. ಹಿಂದಿನ ವರ್ಷ ರಿಪೋರ್ಟು ಮಾಡಿದ ಪ್ರಕಾರ ವಿಶೇಷ ಜಾಗರೂಕತೆಯಿಂದ ಈ ಭೂಮಿಗಳ ಮಾದರಿಗಳನ್ನು ಆಯ್ದುಕೊಳ್ಳಲಾಯಿತು. ಒಂದೊಂದು ಪಾತಿಯಿಂದಲೂ ಎರಡೆರಡು ಮಾದರಿಗಳನ್ನು ತೆಗೆದುಕೊಳ್ಳಲಾಯಿತು. ಇವುಗಳಲ್ಲಿ ಒಂದು ಮೇಲುಗಡೆಯ ಒಂದು ಅಡಿ ಭೂಮಿಗೆ ಮಾದರಿಯಾಗಿಯೂ ಎರಡನೆಯದು ಅಲ್ಲಿಂದ ಕೆಳಗಿನ ಎಂದರೆ ಎರಡನೆಯ ಅಡಿಯ ಭೂಮಿಗೆ ಮಾದರಿಯಾಗಿಯೂ ಇದ್ದವು. ಈ ಒಂದೊಂದು ಪಾತಿಯಲ್ಲಿಯೂ ಒಂದಕ್ಕೊಂದಕ್ಕೆ ಸಮ ದೂರದಲ್ಲಿರುವಂತೆ 10 ತೂತು ಮೊದಲುಗೊಂಡು 25 ತೂತುಗಳ ವರೆಗೆ ಕೊರೆದು ಈ ಮಾದರಿ ಮಣ್ಣುಗಳನ್ನು ತೆಗೆಯಲಾಯಿತು. ಆದರೆ ಈ ಪರೀಕ್ಷೆಯನ್ನು ಕೈಕೊಂಡ ಅನೇಕ ಪ್ಲಾಂಟರುಗಳಿಗೆ ಅದನ್ನು ನೆರವೇರಿಸುವದು ದುರದೃಷ್ಟದಿಂದ ಅಸಾಧ್ಯವೆಂದು ಆ ಹಿಂದೆ ತಿಳಿಯಿತು. ಕಾಫಿ ಪೈರು ಸುತರಾಂ ನಷ್ಟವಾಗಿ ಹೋದ ಕಾರಣ ಸಂಪೂರ್ಣವಾಗಿ ನಡಿಸಿದ ಪರೀಕ್ಷೆಗಳೂ ಕೂಡ ಈ ವರ್ಷ ಕಾರ್ಯತಃ ನಿಷ್ಫಲವಾಗಿ ಹೋದವು. ಭೂಮಿಯಲ್ಲಿ ಸಾರವಿಲ್ಲದ್ದರಿಂದ ಪೈರು ಕೆಟ್ಟುಹೋಯಿತೆಂದು ಹೇಳುವದಕ್ಕೆ ಆಗುವದಿಲ್ಲ. ಅಲ್ಲದೆ ಭೂಮಿಗೆ ಹಾಕಿದ ಗೊಬ್ಬರವು (Fertelozer) ಈ ವರ್ಷದ ಅಲ್ಪ ಫಲಕ್ಕೆ ಎಷ್ಟುಮಾತ್ರವೂ ಕಾರಣವಾಗಲಾರದು. ಆದರೂ ಫಸಲಿನಲ್ಲಿ ಉಂಟಾದ ಈ ವ್ಯತ್ಯಾಸಕ್ಕೆ ಗೊಬ್ಬರವೇ ಕಾರಣವೆಂದು ಹೇಳುವಪಕ್ಷಕ್ಕೆ ಈ ಸಲದ ಪರೀಕ್ಷೆಯಿಂದುಂಟಾದ ಫಲಿತಾಂಶವು ಬಹಳ ಭ್ರಮೆಗೆ ಅವಕಾಶವನ್ನು ಕೊಡುವದು. ಆದ ಪ್ರಯುಕ್ತ ಪರೀಕ್ಷೆಗಳ ಫಲಿತಾಂಶವನ್ನು ಇಲ್ಲಿ ಕೊಟ್ಟಿಲ್ಲ. ಈ ಪರೀಕ್ಷೆಗಳ ಫಲಿತಾಂಶವನ್ನು ವಿಚಾರ ಮಾಡುವ ವಿಷಯದಲ್ಲಿ ಆ ಪಾತಿಗಳಿಂದ ತೆಗೆದ ಮಾದರಿ ಮಣ್ಣುಗಳನ್ನು ರಸಾಯನ ಶಾಸ್ತ್ರರೀತ್ಯಾ ಪೃಥಕ್ಕರಿಸಿದ ಫಲಿತಾಂಶವೂ ಕಾರ್ಯತಃ ನಿಷ್ಪ್ರಯೋಜನವಾದಕಾರಣ, ಆ ವಿಭಾಗಕ್ಕೆ ಸಂಬಂಧಪಟ್ಟ ಕಾರ್ಯಗಳು ಅರೆವಾಸಿಗೆ ಮೇಲೆ ನಡೆದಿದ್ದಾಗ್ಗೂ ಕೂಡ ಅವುಗಳನ್ನು ಕೊಡಲಿಲ್ಲ.

ಪತ್ರವ್ಯವಹಾರ.

ಇಲ್ಲಿಗೆ ಬಂದ ಒಟ್ಟು ಕಾಗದಗಳ ಸಂಖ್ಯೆ 762 ಇಲ್ಲಿಂದ ಹೊರಕ್ಕೆ ಕಳುಹಿಸಿದ್ದರ ಸಂಖ್ಯೆ 751 ಇವುಗಳೆಲ್ಲಾ ಇಲಾಖೆಯ ದಿನಗಟ್ಟಳೆಯ ಕೆಲಸಕ್ಕೆ ಸಂಬಂಧಿಸಿದ್ದ ಪಕ್ಷದಲ್ಲಿ ಇವುಗಳ ವಿಷಯವಾಗಿ ಮಾತನಾಡತಕ್ಕ ಪ್ರಕೃತವೇ ಇರುತ್ತಿರಲಿಲ್ಲ. ಯದ್ಯಪಿ ಇವುಗಳಲ್ಲಿ ಅನೇಕ ಕಾಗದಗಳು ಇಲಾಖೆಯ ನಡೆವಳಿಕೆಗೆ ಸಂಬಂಧಪಟ್ಟವೇ ಆದರೂ ಅನೇಕ ಲೇಖನಗಳು ಕೃಷಿಶಾಸ್ತ್ರದ ಯಾವದಾದರೂ ಒಂದು ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಉತ್ತರ ರೂಪವಾಗಿದ್ದವು. ಕಾಗದ ಬರೆದುಕೊಂಡವರಿಗೆ ಬೇಕಾದ ಸಂಗತಿಗಳನ್ನು ಹುಡುಕಿ ತೆಗೆದು ಪ್ರತ್ಯುತ್ತರ ಬರೆಯುವದಕ್ಕಾಗಿ ಕಳೆದ ಕಾಲವು ಅಲ್ಪಸ್ವಲ್ಪವಾಗಿರಲಿಲ್ಲ. ಅದಕ್ಕೆ ಸಂಬಂಧಿಸಿದ ಕೆಲಸವೆಲ್ಲವನ್ನೂ ಸ್ವಲ್ಪ ಹೆಚ್ಚೂಕಡಿಮೆಯಾಗಿ ಕೃಷಿ ರಸಾಯನಜ್ಞರೇ ನಿರ್ವಹಿಸಬೇಕಾಯಿತು. ಅನೇಕವೇಳೆ ಒಂದೊಂದು ದಿವಸವೆಲ್ಲಾ ಈ ಕಾರ್ಯದಲ್ಲಿ ಕಳೆದು ಹೋಗಿದೆ. ಈ ರೀತಿಯಾದ ಪ್ರತ್ಯುತ್ತರಗಳು ಒಬ್ಬೊಬ್ಬರ ಸ್ವಂತ ಉಪಯೋಗಾರ್ಥಕ್ಕಾಗಿಯೇ ಉದ್ದೇಶಿಸಲ್ಪಟ್ಟಿದ್ದರೂ ಒಂದೊಂದು ವಿಷಯಕ್ಕಾಗಿಯೇ ಬರೆಯಲ್ಪಟ್ಟಿದ್ದರೂ ಅವುಗಳನ್ನು ಸಂತೋಷವಾಗಿ ಕೊಡಲಾಗುತ್ತದೆ. ಈ ಪ್ರತ್ಯುತ್ತರಗಳಂತೆ ರೈತರು ಕಾರ್ಯತಃ ನಡೆಸುವ ಕಾರಣ ಇವು ಸರ್ವಸಾಮಾನ್ಯವಾಗಿ ಹೇಳಿಕೊಡುವ ವಿ ಯಗಳಿಗಿಂತ ಉತ್ತಮವಾದ್ದರಿಂದಲೂ ತದ್ದ್ವಾರಾ ಈ ರೀತಿಯಾದ ಪತ್ರವ್ಯವಹಾರದಲ್ಲಿ ಇಲ್ಲಿ ವಿವರಿಸಲನವಶ್ಯಕವಾದ ಅನೇ ಯೋಜನಗಳಿರುವದರಿಂದಲೂ ಈ ಪತ್ರವ್ಯವಹಾರವು ವಿಶೇಷ ಪ್ರಯೋಜನವುಳ್ಳದ್ದೆಂದೂ ಮುಖ್ಯವಾದ್ದೆಂದೂ ಭಾವಿಸಲ್ಪಟ್ಟಿದೆ. ಹುಳುಗಳ ಪೀಡೆ ಮತ್ತು ಸಸ್ಯಾದಿಗಳ ಜಾಡ್ಯ ಇವುಗಳ ವಿಷಯವಾಗಿ ಪತ್ರವ್ಯವಹಾರಗಳು ವಿಶೇಷವಾಗಿ ವಿಚಾರ ಮಾಡುವಂತೆ ಕಾಣಬರುತ್ತದೆ. ಈ ಬಾಬಿನಲ್ಲಿ 93 ಲೇಖನಗಳು ಬಂದು ಅವುಗಳಿಗೆಲ್ಲಾ ಪ್ರತ್ಯುತ್ತರ ಕೊಟ್ಟಿದೆ. ಇದಾದಮೇಲೆ ರಸಾಯನ ವಿಭಾಗಕ್ಕಾಗಿ 92 ಲೇಖನಗಳು ಬಂದಿವೆ. ತರುವಾಯ ಕ್ರಮವಾಗಿ ಕಾಫಿ ಪರೀಕ್ಷೆಗಳು, ಸಕ್ಕರೆ ಕೈಗಾರಿಕೆ, ಸಾಮಾನ್ಯ ಕೃಷಿ ಸಂಬಂಧವಾದ ಪರೀಕ್ಷೆ, ನಾರುಗಳ ಕೈಗಾರಿಕೆ—ಇವುಗಳ ವಿಷಯವಾದ್ದು ಬಂದವು. ಅನೇಕರು ಕಾಗದ ಬರೆಯುವದಕ್ಕೆ ಪ್ರತಿಯಾಗಿ ತಾವೇ ಸಾಕ್ಷಾತ್ತಾಗಿ ಕಾರ್ಯಸ್ಥಾನಕ್ಕೆ ಬಂದು ತಮಗೆ ಬೇಕಾದ ಸಂಗತಿಯನ್ನು ಕೇಳಿ ತಿಳಿದುಕೊಂಡು ಹೋದರು. ಈ ವಿಧವಾಗಿ ವಿಚಾರಮಾಡಿದವರ ಸಂಖ್ಯೆಯನ್ನು ಬರೆದು ಇಟ್ಟಿಲ್ಲ. ಹೀಗೆ ಬಂದವರಲ್ಲಿ (Depulation) ರೈತರ ಪ್ರತಿನಿಧಿಗಳೋ ಇಲ್ಲವೇ ಪ್ರತಿನಿಧಿಗಳಂತೆ ಕಾಣುತ್ತಿದ್ದವರೋ ಕೆಲವರು ಸೇರಿದ್ದರು.

ಯಂತ್ರಗಳು ಉಪಕರಣಗಳು.

ಹೀಗೆ ಬಂದಿದ್ದವರಲ್ಲನೇಕರು ವ್ಯವಸಾಯಕ್ಕೆ ಬೇಕಾದ ಯಂತ್ರಗಳು, ಎಂದರೆ ನೇಗಿಲುಗಳು, ಹಲಿಬೆಗಳು (Cultivators) ಕೂರಿಗೆಗಳು (drills) ಭತ್ತ ಕುಟ್ಟುವ ಯಂತ್ರಗಳು (Rice hulling machines ಇವೇ ಮೊದಲಾದವುಗಳ ಉಪಯೋಗವೇನು, ಅವುಗಳಿಗೆ ಮುಟ್ಟುವ ಖರ್ಚೇನು, ಎಂದು ಮೊದಲಾಗಿ ಕೇಳಿದರು. ಸರ್ವಸಾಮಾನ್ಯವಾಗಿ ಇಲ್ಲಿ ಚೆನ್ನಾಗಿ ಕೆಲಸ ಮಾಡುವದಕ್ಕೆ ಯೋಗ್ಯವಾಗಿಯೂ ಬಹಳ ಚಿಕ್ಕದಾಗಿಯೂ ಹಗುರವಾಗಿಯೂ ಇರುವ ಯಂತ್ರಗಳ ವಿಷಯವಾಗಿಯೇ ವಿಶೇಷವಾಗಿ ವಿಚಾರಮಾಡಿದರು; ಒಂದು ತಡವೆ ಮಾತ್ರ ಯಾರೋ ಒಬ್ಬರು ಹೊಗೆ ನೇಗಿಲಿನ ವಿಷಯವಾಗಿ ತಿಳಿಯಲಪೇಕ್ಷಿಸಿದರು, ಇದು ಈಗಿನ ಸಸ್ಸಿವೇಶದಲ್ಲಿ ಇಲ್ಲಿಯ ಸಣ್ಣ ಸಣ್ಣ ಭತ್ತದ ಗದ್ದೆಯ ಪಾತಿಗಳಿಗೆ ತಕ್ಕದ್ದಲ್ಲವೆಂದು ಹೇಳಬೇಕಾದ್ದೇ ಇಲ್ಲ. ಸಕ್ಕರೆ ಮಾಡಲು ಬೇಕಾದ ಯಂತ್ರೋಪಕರಣಗಳ ವಿಷಯವಾಗಿಯೂ ಅನೇಕರು ತಿಳಿಯಬೇಕೆಂದು ಕೋರಿದರು. ಕೆಲವರು ಸಣ್ಣ ಸಕ್ಕರೆ ಕಾರ್ಖಾನೆಗೆ ಬೇಕಾದ ಎಲ್ಲಾ ಯಂತ್ರಗಳ ವಿಷಯವಾಗಿಯೂ ತಿಳಿಯಬೇಕೆಂದು ಇಚ್ಛಿಸಿದರು. ಆದರೆ ಅಂಥ ಸಂದರ್ಭಗಳಲ್ಲೆಲ್ಲಾ ಕೇಳಿದವರಲ್ಲಿ ಆಯಾ ಕಾರ್ಯಗಳಿಗೆ ಬೇಕಾಗುವಷ್ಟು ಹಣವಿರಲಿಲ್ಲ. ಅಂಥ ಯಂತ್ರಗಳನ್ನೂ ಉಪಕರಣಗಳನ್ನೂ ಪರೀಕ್ಷಿಸಿ ನೋಡಿ ಇಲ್ಲಿಯ ರೈತರುಗಳಿಗೂ ವ್ಯವಸಾಯಕಾರರಿಗೂ ಉಪಯುಕ್ತವಾದ್ದಾಗಿ ಕಂಡುಬರುವ ಉತ್ತಮವಾದ ಯಂತ್ರಗಳನ್ನು ಇಲ್ಲಿಗೆ ತರಿಸಿ ಇಲ್ಲಿ ಎಲ್ಲರೂ ನೋಡುವದಕ್ಕೆ ಅನುಕೂಲವಾಗುವಂತೆ ಒಂದುಕಡೆ ನಿಯತವಾಗಿ ಇರಿಸಲು ಕ್ಷಿಪ್ರದಲ್ಲಿಯೇ ಸಾಧ್ಯವಾಗುವದೆಂದು ನಾನು ಅಂತರ್ಯವಾಗಿ ಹಾರೈಸುತ್ತೇನೆ.

ರಿಪೋರ್ಟು ಮುಂತಾದವು—ಒಂದು ರಿಪೋರ್ಟು ಎರಡು ಬುಲ್ಲೆಟಿನ್‌ಗಳೂ ಅಚ್ಚು ಹಾಕಲ್ಪಟ್ಟು ಈ ಸಂಸ್ಥಾನದಲ್ಲಿ ಅಪೇಕ್ಷಿಸಿದವರಿಗೆಲ್ಲಾ ಕಳುಹಿಸಲ್ಪಟ್ಟವು. ಅವುಗಳೊಂದೊಂದನ್ನೂ ಇಂಗ್ಲೀಷಿನಲ್ಲಿ ಒಂದು ಸಾವಿರ ಪ್ರತಿ, ಕನ್ನಡದಲ್ಲಿ _,000 ಪ್ರತಿ ಈ ಮೇರೆ ಛಾಪಿಸಿತು. ಇವುಗಳಲ್ಲಿ ಇನ್ನೂರು ಮುನ್ನೂರು ಪ್ರತಿಗಳುವಿನಾ ಉಳಿದವುಗಳೆಲ್ಲಾ ಅಪೇಕ್ಷಿಸಿದವರಿಗೆ ಕೊಟ್ಟೇ ಮುಗಿದು ಹೋದವು.

 694

ಸೂಳೇಕೆರೆ ಕೆಳಗಿನ ಕಬ್ಬಿನಿಂದ ಆದ ಹಾಲು ಮತ್ತು ಅದನ್ನು ಕಾಯಿಸುವದರಿಂದ ಆದ ಬೆಲ್ಲಗಳು.

ನಂಬರು.	ಪದಾರ್ಥ.	ಸೇಕಡ ಎಷ್ಟು ಜಲಾಂಶ.	ಗ್ಲುಕೋಸ ಎಂಬ ವಸ್ತು.		ಒಟ್ಟು ಘನ ಪದಾರ್ಥಗಳು ಸೇಕಡ.	ಕರಗುವ ಬೂದಿ ಸೇಕಡ.	ಕರಗುವ ಕಾರ್ಬೊನೇಟ ಎಂಬ ಪದಾರ್ಥಗಳು ಸೇಕಡ	ಸೂಕ್ರೋಜ (ಶುದ್ಧ ಸಕ್ಕರೆ) ಸೇಕಡ.	(ಇನ್ವರ್ಷನ)ನಿಂದ ಆಗುವ ಶುದ್ಧ ಸಕ್ಕರೆಯ ನಷ್ಟ ಸೇಕಡ.
			ಒಟ್ಟು ಸೇಕಡ	ಇನ್ವರ್ಷನ ಎಂಬುದರಿಂದ ಆದದ್ದು.					
167	ರಸ	..	·97	..	17·9	..	..	16·3	...
182	ಬೆಲ್ಲ	6·13	6·67	1·9	..	2·74	·75	79·7	5·7
168	ರಸ	..	·98	..	15·6	..	...	14·2	...
183	ಬೆಲ್ಲ	4·50	11·1	5·9	..	3·56	1·04	74·1	17·7
169	ರಸ	..	·92	..	17·6	..	..	16·2	..
184	ಬೆಲ್ಲ	2·95	10·6	6·2	...	2·63	1·02	76·8	18·6
170	ರಸ	..	·90	..	17·1	...	..	15·8	..
171	ರಸ	..	·91	..	17·6	..	..	16·2	...
186	ಬೆಲ್ಲ	3·55	8·70	4·3	..	3·24	1·02	78·4	12·9
172	ರಸ	..	·72	..	17·7	..	....	16·3	..
187	ಬೆಲ್ಲ	5·45	13·9	10·9	..	2·99	·96	76·7	32·7
173	ರಸ	..	·96	..	17·5	..	..	16·0	...
188	ಬೆಲ್ಲ	9·45	13·5	9·9	..	3·80	1·37	59·2	29·7
175	ರಸ	..	1·19	..	16·6	...	..	14·3	..
189	ಬೆಲ್ಲ	4·80	6·25	4·5	...	3·02	1·27	80·1	13·5
176	ರಸ	..	1·16	..	16·1	...	..	14·9	..
190	ಬೆಲ್ಲ	6·25	11·10	5·2	...	3·42	·96	75·7	15·6
177	ರಸ	..	1·10	..	17·6	...	...	15·7	..
178	ರಸ	..	1·02	...	17·5	..	...	15·8	...
179	ರಸ	..	1·00	..	17·4	....	...	16·1	..
193	ಬೆಲ್ಲ	3·82	10·6	5·9	..	3·20	·93	75·0	17·7
180	ರಸ	..	·76	...	17·2	..	..	14·8	...
194	ಬೆಲ್ಲ	5·42	12·50	9·2	..	2·95	·95	65·6	27·6
181	ರಸ	..	1·04	..	17·2	..	..	15·8	..
195	ಬೆಲ್ಲ	9·57	15·6	11·0	...	3·38	1·20	70·0	33·0

695

1901ನೆ ಇಸವಿ ಆಗಸ್ಟು 15ರಲ್ಲಿ ನೆಟ್ಟದ್ದು ಆಸ್ಟ್ರಿಯಾ ದೇಶದ ಸಕ್ಕರೆ ಗೆಣಸಿನ (Sugar Beets) ರಸ.

ನಂಬರು.	ಎಷ್ಟು ದಿವಸ ಬೆಳೆದ ಗೆಣಸು.	ಎಲೆಗಳ ತೂಕ ಎಷ್ಟು ಗ್ರಾಮಗಳು.	ಗೆಣಸಿನ ತೂಕ ಎಷ್ಟು ಗ್ರಾಮಗಳು.	ಘನ ಪದಾರ್ಥಗಳ ಒಟ್ಟು.	ಶೂಕ್ರೋಸ್ (ಶುದ್ಧ ಸಕ್ಕರೆ).	ಎಷ್ಟು ಮಟ್ಟಿಗೆ ಶುದ್ಧವಾಗುತ್ತದೆ.	ಷರಾ.
...	..	..	..	...	3·7	..	
164	94	642	344	9·9	7·6	77	
164 (*a*)	118	304	478	10·4	7·0	67	
165	228	146	496	18·3	14·7	80	

ಸಕಲೇಶಪುರದ ಕಬ್ಬಿನ ಹಾಲು ಅದನ್ನು ಕಾಯಿಸಿದ ಬೆಲ್ಲ.

ನಂಬರು.	ಪದಾರ್ಥ.	ಗ್ಲೂಕೋಸ್.	ಘನಪದಾರ್ಥಗಳ ಒಟ್ಟು.	ಶೂಕ್ರೋಸ್ (ಶುದ್ಧ ಸಕ್ಕರೆ)	ಷರಾ.
196	ರಸ	5·55	22·6	16·7	ಕಾರ್ಯಸ್ಥಾನಕ್ಕೆ ಕಳುಹಿಸುವದಕ್ಕೆ 15 ದಿವಸ ಮುಂಚೆಯೇ ಕಬ್ಬನ್ನು ಕತ್ತರಿಸಿದ್ದರಿಂದ ಅದು ಬರುವ ವ್ಯಾಳೆಗೆ ಒಣಗಿ ಸುಕ್ಕು ಬಿದ್ದುಹೋಗಿತ್ತು.
197	ಬೆಲ್ಲ	11·8	..	78·2	

ಮೈಸೂರ ಗೆಜೆಟ್.

ಸಂ. XXXVIII.] ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು. [ನಂ. 46.

ಬೆಂಗಳೂರು, ಗುರುವಾರ, ಡಿಶಂಬರು ತಾ|| 3, ಸನ್ 1903.

VIನೆ ಭಾಗ.

ಮೈಸೂರು ಮಹಾರಾಜರವರ ಗೌರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

1903ನೆ ವರುಷದ IIIನೆ ನಂಬರಿನ ರೆಗ್ಯುಲೇಷನ್.

ಮೈಸೂರು ಪಟ್ಣವನ್ನು ಉತ್ತಮವಡಿಸುವ ವಿಚಾರದಲ್ಲಿಯು ಮತ್ತು ಅದನ್ನು ಉತ್ತರೋತ್ತರ ವಿಸ್ತಾರ ಪಡಿಸಲು ಸ್ಥಳ ಹೊಂದಿಸುವ ವಿಚಾರದಲ್ಲಿಯು ಆಗಿರುವ ರೆಗ್ಯುಲೇಷನ್.

ಪೀಠಿಕೆ.

ಮೈಸೂರು ಪಟ್ಣವನ್ನು ಉತ್ತಮಪಡಿಸುವದಕ್ಕೋಸ್ಕರವು ಉತ್ತರೋತ್ತರ ವೃದ್ಧಿ ಪಡಿಸುವದಕ್ಕೋಸ್ಕರವು ಮತ್ತು ಮೇಲ್ಕಂಡ ಉದ್ದೇಶಗಳನ್ನು ಜಾರಿ ತರುವ ಬಗ್ಗೆ ಪ್ರತ್ಯೇಕ ತರದ ಅಧಿಕಾರಗಳನ್ನುಳ್ಳ ಒಂದು ಪಾರುಪತ್ಯಗಾರರ ಸಭೆಯನ್ನು (Board of Trustees ಟ್ರಸ್ಟಿಗಳ ಬೋರ್ಡ್) ನೇಮಿಸೋಣ ಯುಕ್ತವಾದುದರಿಂದ ; ಘನವನ್ನೈದಿದ ಶ್ರೀಮನ್ ಮಹಾರಾಜಾ ಸಾಹೇಬರವರು ಇದರಡೀ ಕಂಡಂತೆ ಕಾನೂನನ್ನು ಏರ್ಪಡಿಸಿರುತ್ತಾರೆ :—

1ನೆ ಅಧ್ಯಾಯ.

ಅವತರಣಿಕೆ.

ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಅಮಲ್ ಷುರು.

1\. (1) ಈ ರೆಗ್ಯುಲೇಷನ್ "1903ನೆ ವರುಷದ ಸಿಟಿ ಆಫ್ ಮೈಸೂರು ಇಂಪ್ರುವಮೆಂಟ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು ;

(2) ಇದರಲ್ಲಿ ಮುಂದೆ ಅನ್ಯಥಾ ನೇಮಿಸಲ್ಪಟ್ಟ ಹೊರ್ತು, ಇದು ಮೈಸೂರು ಪಟ್ಣಕ್ಕೆ ಮಾತ್ರವೆ ವ್ಯಾಪಿಸತಕ್ಕದ್ದು ;

(3) ಇದು ಸರ್ಕಾರಿ ಗೆಜೆಟನಲ್ಲಿ ಇಸ್ತಿಹಾರ್ ಮೂಲಕವಾಗಿ ಗವರ್ನಮೆಂಟನವರು ವಿಧಿಸಬಹುದಾದ ತಾರೀಕು ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

 697

ಅರ್ಥ ವಿವರಣೆ.

2. ಈ ರೆಗ್ಯುಲೇಷನಿನಲ್ಲಿ ಪ್ರಮೇಯದಿಂದಾಗಲಿ ಸಂದರ್ಭದಿಂದಾಗಲಿ ವಿರೋಧವಾದ್ದೇನಾದರು ಇದ್ದರೇನೆ ಶಿವಾಯಿ,—

“ಪಟ್ಣ”

“ಮೈಸೂರುಪಟ್ಣ” ಅಥವಾ “ಪಟ್ಣ” ಅಂದರೆ ಗವರ್ನಮೆಂಟಿನವರು ಮೈಸೂರು ಪಟ್ಣದಲ್ಲಿ ಜಾರಿಯಲ್ಲಿರುವ (ಮತ್ತು ಇದರಲ್ಲಿ “ಮ್ಯುನಿಸಿಪಲ್ ರೆಗ್ಯುಲೇಷನ್” ಎಂದು ಮುಂದೆ ಸೂಚಿಸಲ್ಪಡತಕ್ಕ) 1871ನೆ ವರುಷದ ಮ್ಯುನಿಸಿಪಲ್ ರೆಗ್ಯುಲೇಷನ್‌ಗಳಿಗೆ ಅನುಸಾರವಾಗಿ ಆಗಿಂದಾಗ್ಗೆ ನೇಮಿಸಿರುವ ಮೈಸೂರು ಪಟ್ಣದ ಮ್ಯುನಿಸಿಪಲ್ ಸರಹದ್ದುಗಳಲ್ಲಿ ಅಡಗಿರತಕ್ಕ ಸ್ಥಳ ಎಂಬ ಅರ್ಥ.

“ಇಂಪ್ರೂವ್‌ಮೆಂಟ್ ಕಮಿಟಿ.”

“ಇಂಪ್ರೂವ್‌ಮೆಂಟ್ ಕಮಿಟಿ” ಅಂದರೆ ಮೈಸೂರು ಪಟ್ಣವನ್ನು ಉತ್ತಮ ಪಡಿಸುವದಕ್ಕಾಗಿ ಒಂದು ಉಪಾಯ ಮಾಡುವ ಉದ್ದೇಶಕ್ಕೋಸ್ಕರ, 1902ನೆ ವರುಷದ ಸೆಪ್ಟಂಬರ್ 18ನೆ ತಾರೀಕಿನ ನಂಬರು 4168—79—L. F. 36—02 ಸರ್ಕಾರಿ ಹುಕುಂನಲ್ಲಿ ನೇಮಿಸಲ್ಪಟ್ಟಿರುವ ಕಮಿಟಿ ಎಂದರ್ಥ.

“ಭೂಮಿ”

“ಭೂಮಿ” ಎಂಬ ಮಾತು ಮೇಲ್ಕಟ್ಟಡ ಉಳ್ಳ ಅಥವಾ ನೀರಿನಿಂದ ಮುಚ್ಚಲ್ಪಟ್ಟಿರುವ ಭೂಮಿಯನ್ನು ಅಡಗಿಸಿಕೊಳ್ಳುತ್ತೆ.

“ಬೀದಿ”

“ಬೀದಿ” ಎಂಬದರಲ್ಲಿ ಯಾವದೊಂದು ರಾಜಮಾರ್ಗ, ಒಡ್ಡಿನಮೇಲೆ ಹಾಯುವ ದಾರಿ, ಸೇತುವೆ, ಸಂಕ, ಕಮಾನು, ರಸ್ತೆ, ಸಂದಿ, ಕಾಲುದಾರಿ, ಚೌಕ, ಅಂಗಳ, ಉಪವನದ ಮಾರ್ಗ ಅಥವಾ ದಾರಿ ಬೀದಿಯಾಗಿರಲಿ ಇಲ್ಲದಿರಲಿ, ಇವುಗಳು ಅಡಗಿರುತ್ತವೆ.

ಇತರ ಪದಗಳು.

ಇತರ ಪದಗಳು, ಮ್ಯುನಿಸಿಪಲ್ ರೆಗ್ಯುಲೇಷನ್‌ಗಳಲ್ಲಿ ಅದೇ ಪದಗಳಿಗೆ ಯಾವ ಅರ್ಥವನ್ನು ಆರೋಪಿಸಿಧೆಯೋ, ಆ ಅರ್ಥವನ್ನುಂಟಾಗಿರತಕ್ಕದ್ದು.

IIನೆ ಅಧ್ಯಾಯ.

ಬೋರ್ಡ್ ಆಫ್ ಟ್ರಸ್ಟೀಸ್ ಕುರಿತು.

ಈ ರೆಗ್ಯುಲೇಷನಿನಂತೆ ಬೋರ್ಡಿನವರು ಅಮಲ್‌ಜಾರಿ ಮಾಡುವದು.

3. ಈ ರೆಗ್ಯುಲೇಷನಿನಲ್ಲಿರುವ ನಿಯಮಗಳನ್ನು ಜಾರಿಯಲ್ಲಿ ತರತಕ್ಕ ಕರ್ತವ್ಯವು, ಇದರಲ್ಲಿ ಮುಂದೆ ಇರುವ ವಿಧ್ಯಮಾನಗಳಿಗು ಮೇರೆಗಳಿಗು ಒಳಗಾಗಿ, “ಮೈಸೂರು ಪಟ್ಣವನ್ನು ಉತ್ತಮಪಡಿಸುವದಕ್ಕಾಗಿರುವ ಟ್ರಸ್ಟೀಸ್” ಗಳೆಂದು ಕರಿಯಲ್ಪಡುವ ಒಂದು ಬೋರ್ಡು [illegible] ಸಮಾಜಕ್ಕೆ ಸೇರಿರತಕ್ಕದ್ದು. ಆ ಸಮಾಜವು ಇದರಲ್ಲಿ ಮುಂದೆ “ಬೋ[illegible]” ಎಂಬದಾಗಿ ಸೂಚಿಸಲ್ಪಡುತ್ತೆ. ಆ ಬೋರ್ಡು ಒಂದು ಕೂಡಿಸಿದ ಸಮುದಾಯವಾಗಿಯೂ, ಸ್ಥಿರವಾದ ಪರಂಪರೆಯುಳ್ಳದ್ದಾಗಿಯೂ, ಒಂದು ಸಾಮಾನ್ಯ ಮೊಹರು ಉಳ್ಳದ್ದಾಗಿಯು, ಇರತಕ್ಕದ್ದಲ್ಲದೆ ಅದರ ಸಮುದಾಯದ ಹೆಸರಿನಲ್ಲಿ ಬೋರ್ಡು ಅನ್ಯರ ಮೇಲೂ, ಅನ್ಯರು ಆ ಬೋರ್ಡಿನ ಮೇಲೂ, ದಾವೆ ಮಾಡಬಹುದು.

ಬೋರ್ಡಿನ ಏರ್ಪಾಟು.

4. ಬೋರ್ಡಿಗೆ ಎಂಟು ಟ್ರಸ್ಟಿಗಳು ಇರತಕ್ಕದ್ದು. ಅದು ಹ್ಯಾಗಂದರೆ :—

ಗವರ್ನಮೆಂಟಿನವರಿಂದ ನೊಕರರು ಆಗಬೇಕಾದ ಒಂದು ಚೇರ್‌ಮೆನ್ (ಅಧ್ಯಕ್ಷ) ;

ಮೈಸೂರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನಿನ ತತ್ಕಾಲದಲ್ಲಿರುವ ವೈಸ್ ಪ್ರೆಸಿಡೆಂಟರು ;

ಮೈಸೂರು ಡಿಸ್ಟ್ರಿಕ್ಟಿನ ತತ್ಕಾಲದಲ್ಲಿರುವ ಸಿವಿಲ್ ಸರ್ಜನ್ ;

ಗವರ್ನಮೆಂಟಿನವರಿಂದ ನೊಕರರು ಆಗಬೇಕಾದ 3 ಟ್ರಸ್ಟಿಗಳು ;

38ನೆ ಪ್ರಕರಣ ಪ್ರಕಾರ ಗವರ್ನಮೆಂಟಿನವರು ವಿಧಿಸಬಹುದಾದ ನಿಬಂಧನೆಗಳಿಗೆ ಅನುಸಾರವಾಗಿ ಮೈಸೂರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನರುಗಳು ತಮ್ಮ ಸಂಘದೊಳಗೇನೆ ಚುನಾಯಿಸಬೇಕಾದ 2 ಟ್ರಸ್ಟಿಗಳು ; ಆದರೆ ಅವರಿಬ್ಬರುಗಳ ಚುನಾವಣಿಯು ಗವರ್ನಮೆಂಟಿನವರ ಅನುಮತಿಗೆ ಒಳಪಟ್ಟದ್ದಾಗಿರಬೇಕು. ಅಥವಾ ಈರೀತಿಯ ಚುನಾವಣಿಯು ಇಲ್ಲದಿರುವ ಪಕ್ಷದಲ್ಲಿ ಗವರ್ನಮೆಂಟಿನವರು ಪಟ್ಣದ ಮ್ಯುನಿಸಿಪಲ್ ಕಮ್ಮಿಷನರುಗಳ ಪೈಕಿ ಆ 2 ಟ್ರಸ್ಟಿಗಳನ್ನು ನೇಮಿಸಬೇಕು ;

ಟ್ರಸ್ಟಿಗಳ ಹೆಸರುಗಳನ್ನು ಇಸ್ತಿಹಾರ ಮೂಲಕ ತಿಳಿಸಬೇಕು.

5. ಯಾವ ಟ್ರಸ್ಟಿಗಳನ್ನು ಗವರ್ನಮೆಂಟಿನವರು ನೇಮಿಸಿರುತ್ತಾರೆಯೋ, ಅಥವಾ ಮ್ಯುನಿಸಿಪಲ್ ಕಮ್ಮಿಷನರುಗಳಿಂದಾದ ಯಾವ ಟ್ರಸ್ಟಿಗಳ ಚುನಾವಣೆಯನ್ನು ಗವರ್ನಮೆಂಟಿನವರು ಒಪ್ಪಿರುತ್ತಾರೆಯೋ, ಅಂಥಾ ಟ್ರಸ್ಟಿಗಳ ಹೆಸರುಗಳನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಇಸ್ತಿಹಾರ ಮೂಲಕವಾಗಿ ನಿರೂಪಿಸಬೇಕು.

ಟ್ರಸ್ಟಿಗಳ ಉದ್ಯೋಗದ ವಾಯಿದೆ.

6. (1) ಗವರ್ನಮೆಂಟಿನವರ ಅಪ್ಪಣೆ ಇರುವವರಿಗೂ ಬೋರ್ಡಿನ ಚೇರಮೆನ್ನು ತಮ್ಮ ಉದ್ಯೋಗದಲ್ಲಿರಬೇಕು.

(2) ಉದ್ಯೋಗ ಪ್ರಯುಕ್ತವಾಗಿ ಇಲ್ಲದಿರುವ ಇತರ ಟ್ರಸ್ಟಿಗಳು, ಹಿಂದಿನ ಪ್ರಕರಣದ ಪ್ರಕಾರ ತಮ್ಮ ಹೆಸರುಗಳು ನಮೂದಾಗಿರುವ ಸರ್ಕಾರಿ ಗೆಜೆಟ್ಟಿನ ತಾರೀಕು ಲಾಗಾಯಿತು 2 ವರುಷಗಳ ಪರ್ಯಂತರ, ತಮ್ಮ ಉದ್ಯೋಗದಲ್ಲಿರಬೇಕು.

ಆಕಸ್ಮಿಕವಾದ ಖಾಲಿಗಳು.

7. (1) ಮರಣದಿಂದಾಗಲಿ, ರಾಜೀನಾಮೆಯಿಂದಾಗಲಿ ಅಥವಾ ಅಯೋಗ್ಯತೆಯಿಂದಾಗಲಿ, ಆಕಸ್ಮಿಕವಾಗಿ ಖಾಲಿ ಆಗುವ ಚೇರಮೆನ್ನಲ್ಲದಿರುವ ಟ್ರಸ್ಟಿಯ ಸ್ಥಾನವು, ಟ್ರಸ್ಟಿಗಳ ಪ್ರಥಮ ಚುನಾವಣೆ ಮತ್ತು ನೊಕರರಾತಿ ನಡೆದ ವಿಧಾನದಲ್ಲಿಯು, ಅವುಗಳನ್ನ ಮಾಡಿದ ಅಧಿಕಾರಿಗಳಿಂದಲು, ಮತ್ತು ಆ ಚುನಾವಣಿ ನೊಕರರಾತಿಗೆ ಲಗಾವಾಗುವ ನಿಯಮಗಳಿಗೆ ಸಾಧ್ಯವಾದಷ್ಟು ಅನುಸಾರವಾಗಿಯು, ಒಂದು ತಿಂಗಳೊಳಗಾಗಿ ಭರ್ತಿ ಆಗತಕ್ಕದ್ದು: ಆದರೆ ಹಾಗೆ ಚುನಾಯಿಸಲ್ಪಟ್ಟ ಟ್ರಸ್ಟಿಯು, ಉದ್ಯೋಗ ಬಿಡುವ ಟ್ರಸ್ಟಿಯು ತನ್ನ ಉದ್ಯೋಗವನ್ನು ಅಂಥಾ ಖಾಲಿ ಬೀಳದ ಪಕ್ಷದಲ್ಲಿ ಯಾವ ಪರ್ಯಂತರ ಇಟ್ಟುಕೊಳ್ಳಬಹುದಾಗಿತ್ತೊ ಆ ವಾಯಿದೆ ವರಿಗೆನೇ, ತನ್ನ ಸ್ಥಾನದಲ್ಲಿರತಕ್ಕದ್ದು.

3 ತಿಂಗಳುಗಳಿಗಿಂತ ಅಧಿಕ ಕಾಲಗಳಿಗೆ.

(2) ಚೇರಮೆನ್ನಲ್ಲದೆ ಇರುವ ಟ್ರಸ್ಟಿಯು,—

(*a*) 3 ತಿಂಗಳಿಗೆ ಅಧಿಕವಾದ ಕಾಲ ಬಾರದೆ ಇರುವ ಅಭಿಪ್ರಾಯವನ್ನು ತಿಳಿಯಪಡಿಸಿ ಪಟ್ಟಣದಿಂದ ಹೊರಟು ಹೋಗೋಣ;

(*b*) 3 ತಿಂಗಳಿಗೆ ಅಧಿಕವಾದ ಕಾಲ ಬೋರ್ಡಿನ ಮೀಟಿಂಗುಗಳಿಗೆ ಬರಲು ಯಾವ ಕಾರಣದಿಂದಾಗಲಿ ಅಶಕ್ತನಾಗಿರೋಣ;

(*c*) 3 ತಿಂಗಳಿಗೆ ಅಧಿಕವಾದ ಕಾಲ ಪಟ್ಟಣದಲ್ಲಿ ಇಲ್ಲದಿರೋಣ;

ಈ ಪಕ್ಷಗಳಲ್ಲಿ, ಅವನ ಸ್ಥಾನಕ್ಕೆ, ಅವನ ಗೈರುಹಾಜರಿ ಅಥವಾ ಅಶಕ್ತಿ ಇರುವ ಪರ್ಯಂತರ ಅಥವಾ ಅವನು ಟ್ರಸ್ಟಿ ಸ್ಥಾನವನ್ನು ಬಿಡುವ ಪರ್ಯಂತರ, ಮತ್ತೊಬ್ಬ ಮನುಷ್ಯನನ್ನು ಚುನಾಯಿಸಬೇಕು ಯಾ ನೊಕರರು ಮಾಡಬೇಕು, ಮತ್ತು ಹಾಗೆ ಬದಲಿ ಕೆಲಸ ಮಾಡುವ ಮನುಷ್ಯನನ್ನು ಈ ರೆಗ್ಯುಲೇಷನಿನ ಸಮಸ್ತ ಉದ್ದೇಶಗಳಿಗೋಸ್ಕರ ಒಂದು ಟ್ರಸ್ಟಿ ಆಗಿ ಎಣಿಸಬೇಕು.

3 ತಿಂಗಳೊಳಗೆ ಅವಶ್ಯಕವಾದರೆ ಬದಲಿ ನೊಕರರಾತಿಯ ಚುನಾವಣಿ ಮಾಡಲು ಅಧಿಕಾರ ಕೊಡುವ ನಿಯಮ.

(3) ಯಾವ ಟ್ರಸ್ಟಿ ಆಗಲಿ ಗೈರು ಹಾಜರು ಆದರೆ, ಗೈರುಹಾಜರಾದ ಟ್ರಸ್ಟಿಯು ನೊಕರರು ಆಗಿರುವ ಪಕ್ಷದಲ್ಲಿ ಗವರ್ನಮೆಂಟಿನವರ ಅಭಿಪ್ರಾಯದಂತೆಯೋ, ಅಥವಾ ಗೈರುಹಾಜರಾದ ಟ್ರಸ್ಟಿಯು ಚುನಾಯಿಸಲ್ಪಟ್ಟಿರುವ ಪಕ್ಷದಲ್ಲಿ ಮ್ಯುನಿಸಿಪಲ್ ಕಮಿಷನರವರಿಗೆ ಬೋರ್ಡು ಮನವಿ ಮಾಡಿಕೊಂಡಾಗಲೋ, ಮತ್ತೊಬ್ಬ ಮನುಷ್ಯನನ್ನು 3 ತಿಂಗಳಿಗೆ ಕಮ್ಮಿಯಾದ ಕಾಲಕ್ಕೆ ಟ್ರಸ್ಟಿಯಾಗಿ ಚುನಾಯಿಸಲು ಅಥವಾ ನೊಕರರು ಮಾಡಲು, ಹಿಂದೆ ಬಂದಿರುವ ಕಡೆ ಉಪಪ್ರಕರಣದ ಯಾವ ನಿಯಮದಿಂದಾಗಲಿ ಅಡ್ಡಿ ಇರುವದಿಲ್ಲ.

ಟ್ರಸ್ಟಿಗಳು ತಮ್ಮ ಸ್ಥಾನವನ್ನು ಖಾಲಿ ಮಾಡಬೇಕಾದ ಕಾರಣಗಳು.

8. (1) ಯಾವ ಟ್ರಸ್ಟಿಯಾದರು,

(*a*) ನಾಬಾಲ ಆದರೆ; ಅಥವಾ

(*b*) 6 ತಿಂಗಳಿಗೆ ಅಧಿಕವಾಗಿ ಕೈದಿನಿಂದ ಶಿಕ್ಷಿಸಲ್ಪಡಬಹುದಾದ ಅಪರಾಧಕ್ಕೆ ಕೈದಿನಿಂದ ಶಿಕ್ಷಿಸಲ್ಪಟ್ಟರೆ ಅಥವಾ ಗಡಿಪಾರು ದಂಡನೆಗೆ ಶಿಕ್ಷಿಸಲ್ಪಟ್ಟರೆ, ಅಂಥಾ ಶಿಕ್ಷೆಯು ರದ್ದಾದರೇನೆ ಅಥವಾ ಬದಲಾಯಿಸಲ್ಪಟ್ಟರೇನೆ ಹೊರ್ತು; ಅಥವಾ

(*c*) ಬೋರ್ಡಿನ ತಾಬೆಯಲ್ಲಿ ಲಾಭ ಸಿಕ್ಕುವ ಉದ್ಯೋಗವನ್ನಾಗಲಿ ಅಥವಾ ಸ್ಥಾನವನ್ನಾಗಲಿ ಸಂಪಾದಿಸಿಕೊಂಡರೆ; ಅಥವಾ

(*d*) ಸಾಕ್ಷಾತ್ತಾಗಿಯಾದರೊ ಅಥವಾ ಪರಭಾರೆಯಾಗಿಯಾದರೊ ತನ್ನಿಂದಾಗಲಿ ಅಥವಾ ತನ್ನ ಪಾಲುದಾರನಿಂದಾಗಲಿ ಬೋರ್ಡಿನೊಂದಿಗೆ ಅಥವಾ ಬೋರ್ಡಿನಪರವಾಗಿ ಯಾವ ಉದ್ಯೋಗದಲ್ಲಿಯಾದರು ಅಥವಾ ಯಾವ ಕಂಟ್ರಾಕ್ಟಿನಲ್ಲಿಯಾದರು ಹಿಸ್ಸೆಯೋ ಅಥವಾ ಪ್ರಯೋಜನವೋ, ಈ ಕೆಳಗೆ ಬರುವ ವಿದ್ಯಮಾನಗಳಲ್ಲಿ ಹೊರತು, ಉಂಟಾಗಿದ್ದರೆ:—

(i) ಸ್ಥಿರಸೊತ್ತಿನ ಪಟ್ಟೆ, ವಿಕ್ರಯ, ಬದಲಿಸೋಣ ಅಥವಾ ಕರೀದಿಗೆ ತೆಗದುಕೊಳ್ಳೋಣ ಅಥವಾ ಇದಕ್ಕಾಗಿ ಕರಾರು ಮಾಡೋಣ, ಅಥವಾ

(ii) ಬೋರ್ಡಿನೊಂದಿಗಾಗಲಿ, ಬೋರ್ಡಿನ ಪರವಾಗಿ ಆಗಲಿ, ಬೋರ್ಡಿನಿಂದಾಗಲಿ, ಕಂಟ್ರಾಕ್ಟು ಮಾಡುವ ಅಥವಾ ಕೆಲಸಕ್ಕೆ ಇಟ್ಟುಕೊಳ್ಳಲ್ಪಟ್ಟ ಯಾವ ಜಾಯಿಂಟ ಸ್ಟಾಕು ಕಂಪೆನಿ, ಅಥವಾ

(iii) ಎರಡು ಸಾವಿರ ರೂಪಾಯಿಗಳಿಗೆ ಅಧಿಕವಿಲ್ಲದ ಕ್ರಯವುಳ್ಳ ತಾನೆ ವ್ಯಾಪಾರ ಮಾಡುವ ಯಾವ ಪದಾರ್ಥವನ್ನಾದರು ಯಾವದೊಂದು ಸರ್ಕಾರಿ ಸಂವತ್ಸರದಲ್ಲಾಗಲಿ ಬೋರ್ಡಿಗೆ ಆಗಾಗ್ಯೆ ವಿಕ್ರಯಿಸುವದು: ಇಂಥಾವುಗಳಲ್ಲಿ ಬರೀ ಹಿಸ್ಸೆಯೋ ಅಥವಾ ಪ್ರಯೋಜನವೊ ಉಂಟಾಗಿರೋಣ ವಿನಹ; ಅಥವಾ

(*e*) ಅನುಕ್ರಮವಾದ 12 ತಿಂಗಳುಗಳಿಗೆ ಅಧಿಕವಾಗಿ ಬೋರ್ಡಿನ ಮೀಟಿಂಗುಗಳಿಗೆ ಬಾರದೆ ಇದ್ದರೆ ಅಥವಾ ಬರಲು ಅಶಕ್ತನಾಗಿದ್ದರೆ, ಅಥವಾ ಬೋರ್ಡಿನ ಅನುಮತಿಯಿಲ್ಲದೇನೆ ಬೋರ್ಡಿನ ಅನುಕ್ರಮವಾದ ಆರು ಸಾಧಾರಣ ಮೀಟಿಂಗುಗಳಿಗೆ ಬಾರದೆ ಇದ್ದರೆ; ಅಥವಾ

 699

(*f*) ಇದರ ಮುಂದಿನ ಉಪಪ್ರಕರಣದ ನಿಯಮಗಳಿಗೆ ವಿರೋಧವಾಗಿ ಆಚರಿಸಿದರೆ ; ಅಥವಾ

(*g*) ಚುನಾಯಿಸಲ್ಪಟ್ಟ ಟ್ರಸ್ಟಿ ಆಗಿದ್ದು ಮ್ಯೂನಿಸಿಪಲ್ ಕಮ್ಮಿಷನರ ಉದ್ಯೋಗದಿಂದ ನಿವೃತ್ತಿ ಆದಕೂಡ್ಲೆ ಪುನಹ ಮ್ಯೂನಿಸಿಪಲ್ ಕಮ್ಮಿಷನರಾಗಿ ಚುನಾವು ಅಥವಾ ಮೊಕರರಾಗದೆ ಇದ್ದರೆ ;—

ಟ್ರಸ್ಟಿಯ ಉದ್ಯೋಗವನ್ನು ಬಿಡತಕ್ಕದ್ದು ಮತ್ತು ಅವನ ಸ್ಥಾನವು ಖಾಲಿಯಾಗತಕ್ಕದ್ದು.

ಯಾವ ವಿಷಯಗಳಲ್ಲಿ ಟ್ರಸ್ಟಿಗಳು ಬಾಧ್ಯಪಡುತ್ತಾರೊ ಅವುಗಳನ್ನು ಕುರಿತು ವಿಚಾರ ಮಾಡಲು ಅಥವಾ ಸಮ್ಮತಿಕೊಡಲು ಅವರ ಅಧಿಕಾರಗಳಿಗೆ ನಿರ್ಬಂಧಗಳು.

(2) ಮೇಲಿನ (*d*) ಉಪಪ್ರಕರಣದ ಕೊನೆಯಲ್ಲಿ ವಿವರಿಸಿರುವ ಹಿಸ್ಸೆಯನ್ನೊ ಅಥವಾ ಬಾಧ್ಯತೆಯನ್ನೊ ಯಾವ ಟ್ರಸ್ಟಿಯು ಸಾಕ್ಷಾತ್ತಾಗಿ ಅಥವಾ ಪರಭಾರೆಯಾಗಿ ತನ್ನಿಂದಾಗಲಿ ಅಥವಾ ತನ್ನ ಹಿಸ್ಸೆದಾರನಿಂದಾಗಲಿ, ಅಥವಾ ತನ್ನ ವೃತ್ತಿ ಸಂಬಂಧದಿಂದ ತನ್ನ ಕಕ್ಷಿಗಾರನ ಪರವಾಗಿಯೊ ಅಥವಾ ಮತ್ತೊಬ್ಬ ಮನುಷ್ಯನ ಮೊಕ್ತಿಯಾರಾಗಿಯೊ ಯಾವ ವಿಷಯದಲ್ಲಿ ಉಂಟಾಗಿರುತ್ತಾನೆಯೊ, ಅಂಥ ವಿಷಯವಾಗಿ ಬೋರ್ಡಿನ ಅಥವಾ ಬೋರ್ಡಿನ ಕಮಿಟಿಯ ಯಾವ ಮೀಟಿಂಗುನಲ್ಲಿಯಾದರು ನಡೆಯುವ ವಾದದಲ್ಲಿ ಅಂಥ ಟ್ರಸ್ಟಿಯು ಭಾಗಿಯಾಗಕೂಡದು ಅಥವಾ ಸಮ್ಮತಿ ಕೊಡಕೂಡದು.

ಬೋರ್ಡಿನ ನಡವಳಿಕೆಗಳ ಸಮ್ಮಂಧವಾದ ನಿಯಮಗಳು.

9. ಬೋರ್ಡಿನ ನಡವಳಿಕೆಗಳ ಸಮ್ಮಂಧದಲ್ಲಿ ಈ ಕೆಳಗೆ ಬರುವ ನಿಯಮಗಳನ್ನ ಆಚರಿಸಬೇಕು, ಏನಂದರೆ :—

ಸ್ಥಳ ಖಾಲಿಯಾಗಿರೋಣ ನಡವಳಿಕೆಗಳಿಗೆ ಬಾಧಕವಲ್ಲ.

(1) ಬೋರ್ಡಿನಲ್ಲಿ ಯಾವದ್ದೊಂದು ಸ್ಥಳ ಖಾಲಿ ಇದ್ದಾಗ್ಯೂ ಉದ್ಯೋಗದಲ್ಲಿರುವ ಟ್ರಸ್ಟಿಗಳು ಅಂಥಾ ಖಾಲಿ ಸ್ಥಳವು ಖಾಲಿಯಾಗಿಲ್ಲವೆಂಬಂತೆ ತಮ್ಮ ನಡವಳಿಕೆಗಳನ್ನು ಚಲಾಯಿಸತಕ್ಕದ್ದು.

ಬೋರ್ಡು ಕೆಲಸ ನಡಿಸುವದಕ್ಕೋಸ್ಕರ ಕೂಡಬೇಕಾದ್ದು ಮತ್ತು ಏರ್ಪಾಟು ಮಾಡಬೇಕಾದ್ದು.

(2) ಬೋರ್ಡು ಒಟ್ಟುಸೇರಿ, ತಮ್ಮ ಮೀಟಿಂಗುಗಳ ಸ್ಥಳ, ದಿವಸ, ಘಂಟೆ, ನೋಟಿಸ್ಸು, ನಡವಳಿಕೆಗಳ ಜಲ್ಲಾವಣೆ, ಆ ಮೀಟಿಂಗುಗಳ ನಿಲಕಡೆ, ಮತ್ತು ಕೆಲಸ ನಡಿಸೋಣವನ್ನು ಕುರಿತು ಸಾಧಾರಣವಾಗಿ, ತಮಗೆ ಯುಕ್ತವಾಗಿ ತೋರಿಬಂದಂತೆ, ಆಗಿಂದಾಗ್ಗೆ ಏರ್ಪಾಟುಗಳನ್ನು ಮಾಡಬೇಕು ; ಆದರೆ ಅಂಥಾ ಏರ್ಪಾಟುಗಳು ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆಯು ಮತ್ತು ಈ ಕೆಳಗೆ ಬರುವ ನಿಯಮಗಳಿಗೆ ಒಳಪಟ್ಟವುಗಳಾಗಿಯು ಇರತಕ್ಕದ್ದು, ಏನಂದರೆ :—

ತಿಂಗಳಿಗೆ ಒಂದಾವರ್ತಿ ಒಂದು ಸಾಧಾರಣವಾದ ಮೀಟಿಂಗು ಆಗತಕ್ಕದ್ದು.

(*a*) ಪ್ರತಿ ಒಂದು ತಿಂಗಳಲ್ಲಿಯು ಕನಿಷ್ಠಪಕ್ಷದಲ್ಲಿ ಒಂದಾವರ್ತಿಯಾದರು ವಾಡಿಕೆಯಾದ ಮೀಟಿಂಗು ನಡಿಯತಕ್ಕದ್ದು.

ಅಥವಾ ಅಗತ್ಯವಿದ್ದಾಗ್ಗೆಲ್ಲಾ ಒಂದು ವಿಶೇಷ ಮೀಟಿಂಗು.

(*b*) ಚೇರಮೆನ್ನು ತಮಗೆ ಯುಕ್ತವಾಗಿ ತೋರಿಬಂದಾಗ್ಗೆಲ್ಲಾ ಒಂದು ವಿಶೇಷ ಮೀಟಿಂಗ್ ಉಂಟುಮಾಡಬಹುದು ; ಮತ್ತು ಮೂರಕ್ಕೆ ಕಮ್ಮಿ ಇಲ್ಲದ ಸಂಖ್ಯೆಯುಳ್ಳ ಟ್ರಸ್ಟಿಗಳು ಲಿಖಿತಮೂಲಕವಾಗಿ ಪ್ರಾರ್ಥಿಸಿದರೆ ಒಂದು ವಿಶೇಷ ಮೀಟಿಂಗ್ ಉಂಟುಮಾಡಬೇಕು.

ಒಂದು ಮೀಟಿಂಗ ನಡಿಸುವದಕ್ಕೆ ನಾಲ್ಕು ಟ್ರಸ್ಟಿಗಳು ಕೋರಂ (Quorum) ಆಗತಕ್ಕದ್ದು.

(*c*) ಯಾವ ಮೀಟಿಂಗನಲ್ಲಿಯಾಗಲಿ ಆರಂಭದಿಂದ ಅಂತ್ಯದವರಿಗೂ ಕನಿಷ್ಠಪಕ್ಷದಲ್ಲಿ ನಾಲ್ಕು ಜನ ಟ್ರಸ್ಟಿಗಳು ಹಾಜರು ಇಲ್ಲದಿದ್ದರೆ, ಅಂಥಾ ಮೀಟಿಂಗನಲ್ಲಿ ಯಾವ ಕೆಲಸವನ್ನೂ ಜರಿಗಿಸಕೂಡದು.

ಚೇರಮೆನ್ನು ಹಾಜರು ಆಗಿದ್ದರೆ, ಮೀಟಿಂಗಿನಲ್ಲಿ ಅಧ್ಯಕ್ಷನಾಗಿರತಕ್ಕದ್ದು.

(*d*) ಚೇರಮೆನ್ನು ಹಾಜರಾಗಿರುವ ಪ್ರತಿ ಒಂದು ಮೀಟಿಂಗಿನಲ್ಲಿಯು ಅವನೆ ಅಧ್ಯಕ್ಷನಾಗಿರಬೇಕು ; ಅವನ ಗೈರಹಾಜರಿಯಲ್ಲಿ ಮೀಟಿಂಗಿನಲ್ಲಿ ಹಾಜರಿರುವ ಟ್ರಸ್ಟಿಗಳ ಪೈಕಿ ಯಾವಾತನು ಚುನಾಯಿಸಲ್ಪಡುತ್ತಾನೊ ಆವನು ಅಧ್ಯಕ್ಷನಾಗಬೇಕು ;

ಎಲ್ಲಾ ವಾದಗಳು ಹೆಚ್ಚಾಗಿರುವ ಅಭಿಪ್ರಾಯಗಳಂತೆ ತೀರ್ಮಾನವಾಗತಕ್ಕದ್ದು.

(*e*) ಮೀಟಿಂಗಿನಲ್ಲಿ ಹಾಜರಾಗಿರುವ ಟ್ರಸ್ಟಿಗಳ ಹೆಚ್ಚಾಗಿರುವ ಅಭಿಪ್ರಾಯಗಳಂತೆ ಎಲ್ಲಾ ವಾದಗಳು ತೀರ್ಮಾನವಾಗತಕ್ಕದ್ದು, ಮೀಟಿಂಗಿನಲ್ಲಿ ಅಭಿಪ್ರಾಯಗಳು ಸಮಭಾಗವಾದರೆ ಯಾವಕಡೆಗಾದರು ಹೆಚ್ಚು ಸಮ್ಮತಿ ಕೊಡೋಣವು ಪ್ರಸಿಡೆಂಟಿಗೆ ಸೇರತಕ್ಕದ್ದು ;

ಮಿನಿಟ್ಸಗಳನ್ನು ಇಡತಕ್ಕದ್ದು.

(*f*) ಮೀಟಿಂಗಿನಲ್ಲಿ ಹಾಜರಾಗಿದ್ದ ಟ್ರಸ್ಟಿಗಳ ಹೆಸರುಗಳನ್ನು, ಪ್ರತಿ ಮೀಟಿಂಗಿನಲ್ಲಿಯು ನಡದ ನಡವಳಿಕೆಗಳನ್ನು ಈ ಉದ್ದೇಶಕ್ಕಾಗಿ ಇಡಲ್ಪಟ್ಟ ಒಂದು ಬುಕ್ಕಿನಲ್ಲಿ ರಿಕಾರ್ಡು ಮಾಡಿ ಆ ಬುಕ್ಕಿಗೆ ಅದಕ್ಕಾಚಿನ ಮೀಟಿಂಗಿನಲ್ಲಿ ಅಧ್ಯಕ್ಷರಾಗಿರುವವರು ರುಜು ಮಾಡಬೇಕು ; ಮತ್ತು ಕೆಲಸ ಮಾಡುವ ಕಾಲಗಳಲ್ಲಿ ಯಾವ ಟ್ರಸ್ಟಿ ಆಗಲಿ ಆ ಬುಕ್ಕನ್ನು ನೋಡಬಹುದು.

ಕಮ್ಮಿಟಿಗಳ ಏರ್ಪಾಟು.

(3) ಬೋರ್ಡು ಆಗಿಂದಾಗ್ಯೆ ಕಮ್ಮಿಟಿಗಳನ್ನು ಏರ್ಪಡಿಸಬಹುದು ; ಆ ಕಮ್ಮಿಟಿಗಳಿಗೆ ಚೇರಮೆನ್ನು ಮತ್ತು ಬೋರ್ಡಿನ ಅಭಿಪ್ರಾಯದಲ್ಲಿ ತಕ್ಕವರಾದ ಇತರ ಟ್ರಸ್ಟಿಗಳು ಮೆಂಬರುಗಳಾಗಿರಬೇಕು ; ಮತ್ತು ಬೋರ್ಡು

(*a*) ಈ ರೆಗ್ಯುಲೇಷನಿನ ಉದ್ದೇಶಗಳಿಗೆ ಸಮ್ಮಂಧಪಟ್ಟ ಯಾವ ವಿಷಯವನ್ನಾದರು ಕುರಿತು ವಿಚಾರಿಸಿ ರಿಪೋರ್ಟು ಮಾಡೋಣವನ್ನು ಆ ಕಮ್ಮಿಟಿಗಳಿಗೆ ಒಪ್ಪಿಸಬಹುದು, ಅಥವಾ

(*b*) 39, (1)ನೆ ಪ್ರಕರಣದ (a) ಕಲಮಿನಂತೆ ಮಾಡಿರುವ ಯಾವ ಒಳ ನಿಬಂಧನೆ (By-laws) ಗಳಿಗಾಗಲಿ ಒಳಪಟ್ಟು, ಮತ್ತು ಈ ಪರದಲ್ಲಿ ಒಂದು ಪ್ರತ್ಯೇಕ ತೀರ್ಮಾನ (Resolution) ಮಾಡಿ, ತಮ್ಮ ಅಧಿಕಾರಗಳ ಅಥವಾ ಕರ್ತವ್ಯಗಳ ಯಾವ ಅಂಶವನ್ನಾದರು ಆ ಕಮ್ಮಿಟಿಗಳಿಗೆ ವಹಿಸಿ ಕೊಡಬಹುದು.

ಹೀಗೆ ಏರ್ಪಟ್ಟ ಯಾವ ಕಮ್ಮಿಟಿಯಾಗಲಿ ಆಗಿಂದಾಗ್ಯೆ ಬೋರ್ಡಿನಿಂದ ಕೊಡಲ್ಪಡಬಹುದಾದ ಅಪ್ಪಣೆಗಳಂತೆ ನಡಿಯತಕ್ಕದ್ದು, ಮತ್ತು ಬೋರ್ಡು ಆಗಿಂದಾಗ್ಯೆ ಅಂಥಾ ಕಮ್ಮಿಟಿಯ ಏರ್ಪಾಟನ್ನು ಬದಲಾಯಿಸಬಹುದು ಅಥವಾ ತೆಗದು ಹಾಕಬಹುದು. ಪ್ರತಿಯೊಂದಂಥಾ ಕಮ್ಮಿಟಿಗೆ ಚೇರಮೆನ್ನು ಅಧ್ಯಕ್ಷನಾಗಿರತಕ್ಕದ್ದು.

ನೇಮಲೋಪಗಳಿಂದ ಬೋರ್ಡಿನನಡವಳಿಕೆ ಮುಂತಾದವುಗಳು ರದ್ದಾಗತಕ್ಕದ್ದಲ್ಲ.

(4) ಬೋರ್ಡನ್ನಾಗಲಿ, ಕಮ್ಮಿಟಿಯನ್ನಾಗಲಿ, ಅಥವಾ ಟ್ರಸ್ಟಿಯನ್ನಾಗಲಿ ನೇಮಿಸುವದರಲ್ಲಿ ಸ್ವಲ್ಪ ನ್ಯೂನತೆ ಇರುವದೊಂದೇಕಾರಣಕ್ಕಾದರೂ, ಅಥವಾ, ಅವರು, ಯ, ಅವರ ಪೈಕಿ ಯಾರೊಬ್ಬರು ಟ್ರಸ್ಟಿಯು ಸ್ಥಾನಕ್ಕೆ ಅನರ್ಹರಾಗಿರುವ ಕಾರಣಕ್ಕಾಗಲಿ, ಬೋರ್ಡಿನಿಂದಲೋ, ಅಥವಾ ಯಾವ ಕಮ್ಮಿಟಿಯಿಂದಲೋ, ಅಥವಾ ಟ್ರಸ್ಟಿಯಾಗಿ ನಡಿಯುವ ಯಾವ ಮನುಷ್ಯನಿಂದಲೂ ಆಗಿರುವ ಯಾವ ಕಾರ್ಯವೂ ರದ್ದೆಂತ ಭಾವಿಸಕೂಡದು.

ಸಾವಿರ ರೂಪಾಯಿಗಳಿಗೆ ಅಧಿಕವಲ್ಲದ ಮೊಬಲಗಿನ ಗುತ್ತಿಗೆಗಳನ್ನು ನೆರವೇರಿಸುವ ವಿಧಾನ.

10. (1) ಸಾವಿರ ರೂಪಾಯಿಗಳಿಗೆ ಹೆಚ್ಚಿಲ್ಲದ ಯಾವ ಗುತ್ತಿಗೆ ಅಥವಾ ಕರಾರನ್ನಾಗಲಿ, ಬೋರ್ಡಿನ ಪರವಾಗಿ, ಚೇರಮೆನ್ನು ಮಾಡಬಹುದು. ಅಂಥ ಗುತ್ತಿಗೆಯ ಅಥವಾ ಕರಾರಿನ ವಿಧಾನ ಮತ್ತು ಮಾದ್ರಿಯು, ಆ ಗುತ್ತಿಗೆ ಅಥವಾ ಕರಾರು, ತನ್ನ ಪರವಾಗಿಯೇ ನಡದಿದ್ದರೆ ಹ್ಯಾಗೆ ತತ್ಕಾಲದಲ್ಲಿ ಜಾರಿ ಇರುವ ನಿಬಂಧನೆಯಂತೆ ತನಗೆ ಬದ್ಧಕವಾಗಿರಬಹುದೊ ಹಾಗೆ ಇರತಕ್ಕದ್ದು. ಪ್ರತಿಯೊಂದಂಥ ಗುತ್ತಿಗೆ ಅಥವಾ ಕರಾರನ್ನ ಬೋರ್ಡಿನ ಮಾರಣೆ ವಾಡಿಕೆಯಾದ ಮೀಟಿಂಗಿನಲ್ಲಿ ರಿಪೋರ್ಟು ಮಾಡಬೇಕು.

[ಸಾವಿರ] ರೂಪಾಯಿಗಳಿಗೆ ಅಧಿಕವಾದ ಮೊ[ಬಲಗಾ]ದರೆ.

(2) ಬೋರ್ಡಿನಪರವಾಗಿ ನಡಿಯುವ ಪ್ರತಿಯೊಂದಿತರ ಗುತ್ತಿಗೆ ಅಥವಾ ಕರಾರು ಬೋರ್ಡಿನ ಪೂರ್ವ ಭಾವಿಯಾದ ಅನುಮತಿಯೊಡನೆ ಲಿಖಿತಮೂಲಕವಾಗಿರಬೇಕಲ್ಲದೆ, ಚೇರಮೆನ್ನನ ಮತ್ತು ಇಬ್ಬರು ಇತರ ಟ್ರಸ್ಟಿಗಳ ರುಜುಗಳೊಂದಿಗೂ ಹಿಂದೆ ನೇಮಿಸಲ್ಪಟ್ಟಂತೆ ಇರುವ ಬೋರ್ಡಿನ ಸಾಮಾನ್ಯವಾದ ಮೊಹರಿನಿಂದ ಮೊಹರು ಮಾಡಲ್ಪಟ್ಟದ್ದಾಗಿಯು ಇರಬೇಕು. ಇದರಲ್ಲಿ ನೇಮಿಸಿರುವಂತೆ ನೆರವೇರಿಸಲ್ಪಟ್ಟರ್ದಹೊರ್ತು, ಈ ಉಪ ಪ್ರಕರಣದಲ್ಲಿ ಸೂಚಿಸಿರುವ ಯಾವ ಗುತ್ತಿಗೆ ಅಥವಾ ಕರಾರು ಕೂಡ ಬೋರ್ಡಿಗೆ ಬದ್ಧಕವಾಗಿರುವದಿಲ್ಲ.

ಸಾಮಾನ್ಯ ಮೊಹರಿನ ಸಂರಕ್ಷಣೆ ಮತ್ತು ಉಪಯೋಗ.

(3) ಬೋರ್ಡಿನ ಸಾಮಾನ್ಯ ಮೊಹರು ಚೇರಮೆನ್ನಿನ ಸ್ವಾಧೀನದಲ್ಲಿರತಕ್ಕದ್ದು. ಯಾವ ಗುತ್ತಿಗೆ ಅಥವಾ ದಸ್ತಾವೇಜಿಗಾಗಲಿ, ಇಬ್ಬರು ಟ್ರಸ್ಟಿಗಳ ಸಮಕ್ಷಮದಲ್ಲಿ ಹೊರ್ತು, ಆ ಮೊಹರನ್ನ ಹಾಕಕೂಡದು. ಆ ಗುತ್ತಿಗೆ ಅಥವಾ ದಸ್ತಾವೇಜು ತಮ್ಮ ಸಮಕ್ಷಮದಲ್ಲಿ ಮೊಹರು ಮಾಡಲ್ಪಟ್ಟಿತೆಂಬುವದಕ್ಕೆ ಗುರುತಾಗಿ ಅವರು ಅವುಗಳಿಗೆ ರುಜು ಮಾಡಬೇಕು. ಯಾವದೊಂದಂಥಾ ಗುತ್ತಿಗೆ ಅಥವಾ ದಸ್ತಾವೇಜು ಬರೆಸಿದ್ದಕ್ಕೆ ಆದ ಸಾಕ್ಷಿಗಳ ರುಜುವುಗಳಿಗೆ ಭೇದ ತೋರಿಸುವಂತೆ ಸದರಿ ಟ್ರಸ್ಟಿಗಳ ರುಜುವುಗಳು ಇರತಕ್ಕದ್ದು.

ಬೋರ್ಡು ಅನ್ಯರ ಮೇಲಿರುವ ತಮ್ಮ ಹಕ್ಕುಗಳನ್ನು ಅಥವಾ ತಮ್ಮ ಮೇಲಿರುವ ಅನ್ಯರ ಹಕ್ಕುಗಳನ್ನು ರಾಜಿ ಮಾಡಿಕೊಳ್ಳಬಹುದು.

11. ಈ ರೆಗ್ಯುಲೇಷನಿನಂತೆ ಮಾಡಿದ ಯಾವ ಗುತ್ತಿಗೆಯಿಂದಾಗಲಿ ಉಂಟಾಗಿರುವ ಯಾವ ಹಕ್ಕು ಅಥವಾ ಬಾಧ್ಯತೆ ಇದರ ಸಮ್ಮಂಧದಲ್ಲಿಯಾದರೂ, ಅಥವಾ, ತಮ್ಮಮೇಲೆ ಅನ್ಯರು ಅಥವಾ ಅನ್ಯರ ಮೇಲೆ ತಾವು ಮಾಡಿರುವ ಯಾವ ದಾವೆಯ ಸಮ್ಮಂಧದಲ್ಲಿಯಾದರು, ತಾವು ಸಾಕೆಂದು ನೆನಿಸುವಷ್ಟು ಮೊಬಲಗಿಗೂ ಅಥವಾ ಪ್ರತಿಫಲಕ್ಕೂ, ಬೋರ್ಡು ರಾಜಿ ಮಾಡಿಕೊಳ್ಳಬಹುದು.

12. ಚೇರಮೆನ್ನು—

ಚೇರಮೆನ್ನಿನ ಕರ್ತವ್ಯಗಳು.

(1) ಆಲಸ್ಯದಿಂದಾಗಲಿ ಅಥವಾ ಇತರ ನ್ಯಾಯವಾದ ಕಾರಣದಿಂದಾಗಲಿ ಅಡ್ಡಿಮಾಡಲ್ಪಟ್ಟದ್ದ ಹೊರ್ತು, ಪ್ರತಿ ಒಂದು ಮೀಟಿಂಗಿನಲ್ಲಿಯು ಹಾಜರಿರಬೇಕು;

(2) ಬೋರ್ಡಿನ ತೀರ್ಮಾನಗಳನ್ನು ಜಾರಿಯಲ್ಲಿ ತರಬೇಕು ;

(3) ಬೋರ್ಡಿನ ಉತ್ತರ ಪ್ರತ್ಯುತ್ತರಗಳನ್ನು ಇಟ್ಟು ನಡಿಸಬೇಕು ;

(4) ಬೋರ್ಡಿನ ಆಡಳಿತಗಳ ಸಂಗತಿಗಳಲ್ಲಿಯು ಮತ್ತು ಬೋರ್ಡಿನ ಲೆಕ್ಕಗಳು ಮತ್ತು ರಿಕಾರ್ಡುಗಳು ಇವುಗಳ ಸಂಗತಿಗಳಲ್ಲಿಯು, ಬೋರ್ಡಿನ ಉದ್ಯೋಗಸ್ಥರ ಮತ್ತು ಸೇವಕರ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡಬೇಕು ; ಮತ್ತು, 35 (1)ನೆ ಪ್ರಕರಣದಲ್ಲಿ ವಿಶೇಷಿಸಿರುವ ಮಟ್ಟಿಗೆ, ಅಂಥ ಉದ್ಯೋಗಸ್ಥರ ಮತ್ತು ಸೇವಕರ ಕೆಲಸ, ಅವರ ಸಂಬಳ, ವಿಶೇಷ ಹಕ್ಕುಗಳು, ಮತ್ತು ಅಲವರ್ನ್ಸುಗಳು, ಇವುಗಳಿಗೆ ಸಮ್ಮಂಧಪಟ್ಟ ಎಲ್ಲಾ ವಿಷಯಗಳನ್ನು ಫೈಸಲು ಮಾಡಬೇಕು ;

(5) ಬೋರ್ಡಿನ ನಡವಳಿಕೆಗಳ ರಿಕಾರ್ಡಿನ ಒಂದು ನಕಲನ್ನು ಮತ್ತು ಆಗಿಂದಾಗ್ಯೆ ಗವರ್ರ್ನಮೆಂಟಿನವರು ಅಪೇಕ್ಷಿಸಬಹುದಾದ ಹಕೀಕತನಾಮೆಗಳು (Returns) ಅಥವಾ ಇತರ ವರ್ತಮಾನವನ್ನು ಗವರ್ರ್ನಮೆಂಟಿಗೆ ಹೊಂದಿಸಿ ಕೊಡಬೇಕು.

ಬದಲಿ ಚೇರಮೆನ್ನನ್ನು ನೇಮಿಸುವದು.

13. ಚೇರಮೆನ್ನಿನ ಯಾವ ಗೈರು ಹಾಜರಿಯಲ್ಲಾಗಲಿ ಗವರ್ರ್ನಮೆಂಟಿನವರು ಮತ್ತೊಬ್ಬ ಮನುಷ್ಯನನ್ನು ಬದಲಿ ಚೇರಮೆನ್ನಾಗಿ ನೌಕರರು ಮಾಡಬಹುದು, ಮತ್ತು ಹಾಗೆ ನೌಕರರಾದ ಮನುಷ್ಯನು, ಯಾವ ಮನುಷ್ಯನಿಗೆ ಬದಲಿಯಾಗಿ ತಾನು ನೇಮಿಸಲ್ಪಟ್ಟಿದ್ದಾನೊ ಆ ಮನುಷ್ಯನಿಗೆ ಈ ರೆಗ್ಯುಲೇಷನಿನಂತೆ ಕೊಡಲ್ಪಟ್ಟ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು, ತಾನು ಆಚರಿಸುವದಲ್ಲದೆ, ಸದರಿ ಮನುಷ್ಯನು ಯಾವ ಜವಾಬ್ದಾರಿಗಳಿಗು, ನಿರ್ಬಂಧಗಳಿಗು, ಮತ್ತು ಷರತ್ತುಗಳಿಗು ಒಳಪಟ್ಟು ಇರುತ್ತಾನೆಯೊ, ಅವುಗಳಿಗೆಲ್ಲ ತಾನೂ ಒಳಪಟ್ಟಿರಬೇಕು.

III ನೆ ಅಧ್ಯಾಯ.

ಕರ್ತವ್ಯಗಳು ಮತ್ತು ಅಧಿಕಾರಗಳು.

ಉತ್ತಮ ಪಡಿಸುವ ಉಪಾಯಗಳು.

ಗವರ್ರ್ನಮೆಂಟಿನವರು ಮಾಡಿದ ನೇಮಕಗಳ ಆಧಾರದಮೇಲೆ ಬೋರ್ಡು ಉತ್ತಮ ಪಡಿಸುವ ಉಪಾಯಗಳನ್ನು ಮಾಡಬೇಕು.

14. (1) ಇಂಪ್ರುವ್‌ಮೆಂಟ್ ಕಮ್ಮಿಟಿಯವರು ಅನುಮೋದಿಸುವಂತೆಯಾಗಲಿ ಅಥವಾ ಇತರ ವಿಧದಲ್ಲಾಗಲಿ ಗವರ್ರ್ನಮೆಂಟಿನವರು ಕೊಟ್ಟಿರುವ ಅಥವಾ ಇನ್ನು ಮುಂದೆ ಕೊಡಬಹುದಾದ ನೇಮಕಗಳಿಗೆ ತಕ್ಕ ಮಟ್ಟಿಗೆ ದೃಷ್ಟಿ ಕೊಟ್ಟು ಮತ್ತು ಆ ನೇಮಕಗಳ ಆಧಾರದ ಮೇಲೆ, ಪಟ್ಟಣದ ಅನೇಕ ಭಾಗಗಳನ್ನು ಉತ್ತಮಪಡಿಸುವದಕ್ಕಾಗಿಯೂ ಅಥವಾ ಅಭಿವೃದ್ಧಿಪಡಿಸುವದಕ್ಕಾಗಿಯೂ ಅಥವಾ ಇವೆರಡು ಉದ್ದೇಶಗಳಿಗೋಸ್ಕರವಾದರು, ಬೋರ್ಡು, ಈ ರೆಗ್ಯುಲೇಷನಿನಂತೆ ಏರ್ಪಟ್ಟ ಬಳಿಕ, ಸಾಧ್ಯವಾದಷ್ಟು ತ್ವರೆಯಾಗಿ, (ಇದರಲ್ಲಿ ಮುಂದೆ ಇಂಪ್ರುವ್‌ಮೆಂಟ್‌ಸ್ಕೀಂಸ್—ಉತ್ತಮ ಪಡಿಸುವ ಉಪಾಯಗಳು ಎಂದು ಸೂಚಿಸಲ್ಪಡುವ) ಉಪಾಯಗಳನ್ನು ವಿವರವಾಗಿ ತಯಾರ್ಮಾಡಬೇಕು.

ಅಗತ್ಯ ಬಿದ್ದಾಗ ಅಧಿಕವಾದ ಉಪಾಯಗಳನ್ನು ಮಾಡಬಹುದು.

(2) ಬೋರ್ಡು, ಆಗಿಂದಾಗ್ಯೆ ಮತ್ತು ತಮ್ಮ ದ್ರವ್ಯಾನುಕೂಲತೆಯು ಬೇಕಾದ ಮಟ್ಟಿಗೆ ಇದೆ ಎಂಬ ನಂಬಿಕೆ ಉಂಟಾಗಿರುವ ಪಕ್ಷದಲ್ಲಿ, ತಾವು ಅ[illegible]ದು ಎಣಿಸಬಹುದಾದ ಯಾವ ಹೆಚ್ಚಾದ ಉತ್ತಮ ಪಡಿಸುವ ಉಪಾ[illegible]ನ್ನಾದರು ಮಾಡಬಹುದು.

ಉತ್ತಮ ಪಡಿಸುವ ಉಪಾಯದಲ್ಲಿ ಇರಬೇಕಾದ ವಿವರಗಳು.

15. 14ನೆ ಪ್ರಕರಣದಂತಾದ ಪ್ರತಿ ಒಂದು ಉತ್ತಮ ಪಡಿಸುವ ಉಪಾಯವು ಹ್ಯಾಗಿರಬೇಕೆಂದರೆ—

(1) ಆ ಉಪಾಯದಲ್ಲಿ ಅಡಗಿರುವ ಸ್ಥಳದ ಹದ್ದುಗಳೊಳಗೆ ಇದರಡಿ ಬರುವ ವಿದ್ಯಮಾನಗಳನ್ನು ಆಗಗೊಡಿಸತಕ್ಕದ್ದಾಗಿರಬೇಕು :—

(*a*) ಬೋರ್ಡಿನ ಅಭಿಪ್ರಾಯದಲ್ಲಿ ಯಾವ ಭೂಮಿಯು ಆ ಉಪಾಯದ ನೆರವೇರಿಕೆಯಿಂದ ಬದಲಾವಣೆಗೆ ಒಳಪಡುತ್ತದೊ, ಅಥವಾ ಆ ಉಪಾಯದ ನೆರವೇರಿಕೆಗೋಸ್ಕರ ಬೇಕಾಗುತ್ತದೊ, ಅಂಥಾ ಭೂಮಿಯ ಸಂಪಾದ್ಯ,

(*b*) ಯಾವ ಭೂಮಿಯನ್ನಾಗಲಿ ಅಥವಾ ಎಲ್ಲಾ ಭೂಮಿಯನ್ನಾಗಲಿ ಪುನಹ ಫರಿಸೆಯಾಗಿಟ್ಟು ಸರಿಮಾಡುವದಲ್ಲದೆ ಕಟ್ಟಡಗಳನ್ನು ಹೊಸದಾಗಿ ಮತ್ತು ಪುನಹ ಉಂಟುಮಾಡೋಣ ಮತ್ತು ಬೀದಿಗಳನ್ನು ಕಟ್ಟೋಣ ಮತ್ತು ಬದಲಾಯಿಸೋಣ,

(*c*) ಹಾಗೆ ಕಟ್ಟಲ್ಪಟ್ಟ ಅಥವಾ ಬದಲಾಯಿಸಲ್ಪಟ್ಟ ಬೀದಿಗಳಲ್ಲಿ ನೀರು ಹರಿಯುವ ಬಚ್ಚಲುಗಳನ್ನು ಕಟ್ಟೋಣ ಮತ್ತು ಬೆಳಕು ಮಾಡೋಣ ;

(2) ಸದರಿ ಹದ್ದುಗಳೊಳಗೆ ಇದರಡಿಬರುವ ವಿದ್ಯಮಾನಗಳನ್ನು ಆಗಗೊಡಿಸತಕ್ಕದ್ದಾಗಿರಬಹುದು ;

(*a*) ಆ ಪ್ರದೇಶದಲ್ಲಿ ನೀರು ಹರಿಯುವದನ್ನು ಉತ್ತಮ ಪಡಿಸುವದಕ್ಕೋಸ್ಕರ ಯಾವ ಭೂಮಿಯನ್ನಾಗಲಿ ಎತ್ತರಿಸುವದು ಯುಕ್ತವೆಂದು ಬೋರ್ಡು ಏಣಿಸುವ ಪಕ್ಷದಲ್ಲಿ ಅಂಥಾ ಭೂಮಿಯನ್ನು ಎತ್ತರಿಸೋಣ,

(*b*) ಆ ಉಪಾಯದಲ್ಲಡಗಿರುವ ಸ್ಥಳದಲ್ಲಾಗಲಿ ಅಥವಾ ಅದಕ್ಕೆ ತಗಲಿರುವ ಸ್ಥಳದಲ್ಲಾಗಲಿ ಗಾಳಿ ಆಡುವದನ್ನು ಉತ್ತಮ ಪಡಿಸುವದಕ್ಕೋಸ್ಕರ ಬೈಲು ಭೂಮಿಯನ್ನು ಬಿಡೋಣ,

(c) ಬೇಕಾಗಿರುವ ಆರೋಗ್ಯ ರಕ್ಷಣಾಸಮ್ಮಂಥವಾದ ಏರ್ಪಾಟುಗಳಲ್ಲವಾಗಲಿ ಅಥವಾ ಅವುಗಳ ಯಾವ ಭಾಗವೇ ಆಗಲಿ,

(d) ಮಾರ್ಕೆಟ್ಟುಗಳು ಮತ್ತು ಇತರ ಸಾರ್ವಜನಿಕ ಅಗತ್ಯಗಳು ಅಥವಾ ಅನುಕೂಲಗಳು ಇವುಗಳನ್ನು ಸ್ಥಾಪಿಸೋಣ ಅಥವಾ ಏರ್ಪಡಿಸೋಣ; ಮತ್ತು

(3) ಸದರಿ ಹದ್ದುಗಳೊಳಗಾಗಲಿ ಅಥವಾ ಹೊರಗಾಗಲಿ, ಬಡವರಾದ ಮತ್ತು ಕೂಲಿ ಮಾಡುವ ಜನಗಳಿಗೂ, ಆ ಉಪಾಯವನ್ನು ನೆರವೇರಿಸುವದರಲ್ಲಿ ಸ್ಥಳ ತಪ್ಪಿಸಲ್ಪಡಬೇಕಾದ ಬಡ ಮತ್ತು ಕೂಲಿಜನರೆಲ್ಲರಿಗೂ ಅಥವಾ ಕೆಲವರಿಗೂ, ವಾಸ ಮಾಡುವದಕ್ಕೋಸ್ಕರ ಕಟ್ಟಡಗಳನ್ನು ಏರ್ಪಡಿಸೋಣ; ಇದನ್ನು ಅಗಗೊಡಿಸತಕ್ಕದ್ದಾಗಿರಬಹುದು. ಅಂಥಾ ಕಟ್ಟಡಗಳಲ್ಲಿ ಅಂಗಡಿಗಳು ಅಡಗಿರುವದಾಗಿ ಎಣಿಸತಕ್ಕದ್ದು.

ಉಪಾಯವು ಸಂಪೂರ್ಣವಾದ ನಂತರ ನಡಿಯಬೇಕಾದ ರೀತಿ.

16. (1) ಒಂದು ಉತ್ತಮ ಪಡಿಸುವ ಉಪಾಯವು ಮುಗಿದ ನಂತರ, ಬೋರ್ಡು, ಒಂದು ಇಸ್ತಿಹಾರನ್ನು ತಯಾರ್ಮಾಡಬೇಕು; ಆ ಇಸ್ತಿಹಾರಿನಲ್ಲಿ ಯಾವದಾದರು ಒಂದು ಉಪಾಯಮಾಡಿರೋಣವನ್ನು ಮತ್ತು ಅದರಲ್ಲಡಗಿರುವ ಪ್ರದೇಶದ ಹದ್ದುಗಳನ್ನು ತಿಳಿಸುವದಲ್ಲದೆ, ಆ ಉಪಾಯದ ವಿವರಗಳು ಅದರಲ್ಲಡಗಿರುವ ಪ್ರದೇಶದ ವ್ಯಾಪ್ತಿ ಮತ್ತು ಸಂಪಾದಿಸಬೇಕೆಂದು ನಿಶ್ಚಯಿಸಿರುವ ಭೂಮಿಯ ವಿವರ ಇವುಗಳನ್ನು ಸರಿಯಾದ ಕಾಲಗಳಲ್ಲಿ ಎಲ್ಲಾ ನೋಡಬಹುದಾದ ಒಂದು ಸ್ಥಳವನ್ನು ನಮೂದು ಮಾಡಿರಬೇಕು; ಮತ್ತು

ಉಪಾಯದ ಇಸ್ತಿಹಾರಿನ ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗು ಕಳುಹಿಸಬೇಕು.

(a) ಅಂಥಾ ಇಸ್ತಿಹಾರಿನ ಒಂದು ನಕಲನ್ನು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗೆ ಕಳುಹಿಸತಕ್ಕದ್ದು, ಆ ಪ್ರೆಸಿಡೆಂಟರು, ಸದರಿ ಇಸ್ತಿಹಾರು ತಮಗೆ ಮುಟ್ಟಿದ ತಾರೀಕಿನಿಂದ ಮೂವತ್ತು ದಿವಸಗಳೊಳಗಾಗಿ ಮ್ಯುನಿಸಿಪಲ್ ಕಮ್ಮಿಷನರುಗಳು ಆ ಉಪಾಯವನ್ನ ಕುರಿತು ಏನನ್ನು ತಿಳಿಸತಕ್ಕದ್ದುಚಿತವೆಂದು ಎಣಿಸಬಹುದೊ ಅದನ್ನು ಗವರ್ನ್‌ಮೆಂಟಿನವರಿಗೆ ಸಮರ್ಪಿಸುವದಕ್ಕೋಸ್ಕರ ಬೋರ್ಡಿಗೆ ಕಳುಹಿಸಬೇಕು;

ಇಸ್ತಿಹಾರನ್ನು ಪ್ರಕಟಣೆ ಮಾಡೋಣ.

(b) ಬೋರ್ಡು, ಸದರಿ ಇಸ್ತಿಹಾರಿನ ಒಂದು ನಕಲನ್ನು ಸರ್ಕಾರಿ ಗೆಜೆಟ್ಟಿನಲ್ಲಿ ಅನುಕ್ರಮವಾಗಿ ಮೂರು ವಾರಗಳ ಪರ್ಯಂತರ ಛಾಪಿಸಬೇಕಲ್ಲದೆ, ತಮ್ಮ ಕಚೇರಿಯೊಳಗೆ ದೃಷ್ಟಿಗೋಚರವಾದ ಪ್ರದೇಶದಲ್ಲಿಯೂ, ಡೆಪ್ಯುಟಿ ಕಮ್ಮಿಷನರವರ ಕಚೇರಿಯಲ್ಲಿಯೂ, ಮ್ಯುನಿಸಿಪಲ್ ಕಮ್ಮಿಷನಿನ ಕಚೇರಿಯಲ್ಲಿಯೂ ಮತ್ತು ಬೋರ್ಡು ಅಗತ್ಯವೆಂದು ಎಣಿಸಬಹುದಾದ ಇತರ ಸ್ಥಳಗಳಲ್ಲಿಯೂ ಹಚ್ಚಿಸಬೇಕು.

ಉಪಾಯವನ್ನು ಜಾರಿ ತರೋಣದರಲ್ಲಿ ಸಂಪಾದಿಸಬೇಕಾದ ಸ್ವತ್ತಿನ ಮಾಲೀಕರಿಗೆ ನೋಟೀಸುಗಳನ್ನು ಜಾರಿ.

(2) ಸರ್ಕಾರಿ ಗೆಜೆಟ್ಟಿನಲ್ಲಿ ಸದರಿ ಇಸ್ತಿಹಾರು ಛಾಪಿಸಲ್ಪಟ್ಟ ಮೊದಲನೆ ದಿನದಿಂದ ಮುವ್ವತ್ತು ದಿವಸಗಳೊಳಗಾಗಿ ಬೋರ್ಡು, ಉತ್ತಮ ಪಡಿಸುವ ಉದ್ದೇಶಕ್ಕೋಸ್ಕರ ಸಂಪಾದಿಸತಕ್ಕದ್ದೆಂದು ಎಣಿಸಲ್ಪಟ್ಟಿರುವ ಯಾವ ಕಟ್ಟಡದ ಅಥವಾ ಭೂಮಿಯ ಮೇಲೆ, ಮ್ಯುನಿಸಿಪಲ್ ರೆಗ್ಯುಲೇಷನಗಳಂತೆ ಸ್ವತ್ತು ತೆರಿಗೆಗಳನ್ನೂ ಅಥವಾ ಲ್ಯಾಂಡು ರೆವಿನ್ಯೂ ಕೋಡಿನಂತೆ ನೆಲ ಕಂದಾಯವನ್ನೂ ಕೊಡಬೇಕಾದ ಮುಖ್ಯ ಜವಾಬ್ದಾರಿಯುಳ್ಳವನೆಂದು ಯಾವ ಮನುಷ್ಯನ ಹೆಸರು, ಮ್ಯುನಿಸಿಪಲ್ ತೆರಿಗೆ ಬುಕ್ಕಿನಲ್ಲಿಯಾಗಲಿ ಅಥವಾ ಲ್ಯಾಂಡ್ ರೆವಿನ್ಯು ರಿಜಿಸ್ಟರಗಳಲ್ಲಿಯಾಗಲಿ ನಮೂದಾಗಿರುತ್ತೊ, ಆ ಮನುಷ್ಯನಿಗೆ ಒಂದು ನೋಟೀಸನ್ನು ಜಾರಿ ಮಾಡತಕ್ಕದ್ದು. ಆ ನೋಟೀಸಿನಲ್ಲಿ, ಉತ್ತಮ ಪಡಿಸುವ ಉಪಾಯದ ನೆರವೇರಿಕೆಗೋಸ್ಕರ ಅಂಥಾ ಭೂಮಿ ಅಥವಾ ಕಟ್ಟಡ ಸಂಪಾದಿಸಲು ಬೋರ್ಡು ನಿಶ್ಚಯಿಸಿರೋಣವನ್ನು ವ್ಯಕ್ತಪಡಿಸಬೇಕು, ಮತ್ತು ಆ ಭೂಮಿಯ ಅಥವಾ ಕಟ್ಟಡದ ಸಂಪಾದನೆಗೆ ಸದರಿ ಮನುಷ್ಯನು ಸಮ್ಮತಿಸುತ್ತಾನೆಯೊ ಇಲ್ಲವೊ, ಸಮ್ಮತಿಸದಿದ್ದರೆ ಅದರ ಕಾರಣಗಳು—ಇದನ್ನೆಲ್ಲಾ ನೋಟೀಸು ಜಾರಿಯಾದ ಮುವ್ವತ್ತು ದಿನಗಳೊಳಗಾಗಿ ವಿವರಿಸಿ ಜವಾಬು ಕೊಡಬೇಕೆಂದು ಆ ಮನುಷ್ಯನಿಗೆ ತಾಕೀದು ಮಾಡಬೇಕು.

ನೋಟೀಸ್ ಜಾರಿಯ ಕ್ರಮ.

(3) ಅಂಥಾ ನೋಟೀಸು ಚೇರಮ್ಯಾನಿನ ರುಜುವಿನಿಂದಾಗಲಿ ಅಥವಾ ಅವನ ಹುಕುಮಿನಿಂದಾಗಲಿ ಇರಬೇಕು;

(a) ಮತ್ತು ಆ ನೋಟೀಸನ್ನು ಯಾವ ಮನುಷ್ಯನಿಗೆ ಜಾರಿ ಆಗತಕ್ಕದ್ದೊ ಅವನಿಗೆ ಖುದ್ದಾಗಿ ಕೈಯಲ್ಲಿ ಕೊಡಬೇಕು; ಆ ಮನುಷ್ಯನು ಇಲ್ಲದಿದ್ದರೆ ಯಾ ಸಿಕ್ಕದೇ ಹೋದರೆ ಅವನ ಏಜಂಟಿಗೆ ಖುದ್ದಾಗಿ ಕೊಡಬೇಕು ಅಥವಾ ಅವನ ಏಜಂಟು ಸಿಕ್ಕದೆ ಇರುವ ಪಕ್ಷದಲ್ಲಿ ಆ ಭೂಮಿಗಾಗಲಿ ಅಥವಾ ಕಟ್ಟಡಕ್ಕಾಗಲಿ ಹಚ್ಚಬೇಕು; ಅಥವಾ

(b) ಅಂಥಾ ಮನುಷ್ಯನ ವಾಡಿಕೆಯಾದ ಅಥವಾ ಕಡೇಸಾರಿ ತಿಳಿಯಬಂದ ನಿವಾಸಸ್ಥಾನದಲ್ಲಿಯಾಗಲಿ ಅಥವಾ ಅವನು ಕೆಲಸ ಮಾಡತಕ್ಕ ಸ್ಥಳದಲ್ಲಿಯಾಗಲಿ ಆ ನೋಟೀಸನ್ನು ಕೊಡಬೇಕು; ಅಥವಾ

(c) ಅಂಥಾ ಮನುಷ್ಯನ ವಾಡಿಕೆಯಾದ ಅಥವಾ ಕಡೇಸಾರಿ ತಿಳಿಯಬಂದ ನಿವಾಸಸ್ಥಾನಕ್ಕಾಗಲಿ ಅಥವಾ ಕೆಲಸ ಮಾಡತಕ್ಕ ಸ್ಥಳಕ್ಕಾಗಲಿ ಟಪಾಲು ಮೂಲಕವಾಗಿ ಆ ನೋಟೀಸನ್ನು ಅತನಿಗೆ ಜಾರಿ ಮಾಡಬೇಕು.

17. (1) ನೋಟೀಸುಗಳ ಪ್ರಕಟನ ಮತ್ತು ಜಾರಿ ವಿಷಯವಾಗಿರುವ ಮೇಲ್ಕಂಡ ನಿಯಮಗಳಂತೆ ನಡಿಸಿದ ತರುವಾಯ ಬೋರ್ಡ್, 16ನೆ ಪ್ರಕರಣದಂತೆ ತಾವು ಹೊಂದಿರುವ ಯಾವ ಜವಾಬೊ ಅಥವಾ ಅರಿಕೆಯೊ ಅದನ್ನ ಆಲೋಚಿಸಿ, ಮತ್ತು ತಾವು ಯುಕ್ತವೆಂದು ಎಣಿಸಬಹುದಾದ ಯಾವ ಬದಲಾವಣೆಗಳನ್ನಾದರೂ ಆ ಉಪಾಯಕ್ಕೆ ಸೇರಿಸಿದ ನಂತರ, ಆ ಉಪಾಯ ಮಂಜೂರಾಗುವ ಬಗ್ಯೆ ಗವರ್ರ್ನಮೆಂಟನವರನ್ನು ಕೋರತಕ್ಕದ್ದು.

ಬಳಿಕ ಗವರ್ರ್ನಮೆಂಟನವರು ಒಪ್ಪತಕ್ಕಬಗ್ಗೆ ಆ ಉಪಾಯವನ್ನು ಕಳುಹಿಸತಕ್ಕದ್ದು.

(2) (3) ನೆ ಉಪಪ್ರಕರಣದಲ್ಲಿ ನೇಮಿಸಿರುವ ವಿಷಯದಲ್ಲಿ ಹೊರ್ತು, ಮಂಜೂರಾತಿಬಗ್ಯೆ ಮಾಡುವ ಕೋರಿಕೆಯೊಡನೆ—

ಅಪ್ಲಿಕೇಷನ್ ಜೊತೆಯಲ್ಲಿ ಕಳುಹಿಸಬೇಕಾದ ಕಾಗದಗಳು.

(a) ಆ ಉಪಾಯದ ಎಲ್ಲಾ ತಪಶೀಲುಗಳ ವಿವರ ಮತ್ತು ಅದರಲ್ಲಿ ಮಾಡಿರುವ ಬದಲಾವಣೆಗಳ ಕಾರಣಗಳು;

(b) ಆ ಉಪಾಯದ ನೆರವೇರಿಕೆಗೆ ಬೇಕಾದ ಕರ್ಚಿನ ಎಸ್ಟಿಮೇಟುಗಳು ಮತ್ತು ಸಂಪೂರ್ಣವಾದ ಪ್ಲಾನುಗಳು;

(c) ಸಂಪಾದಿಸಬೇಕೆಂದು ಯೋಚಿಸಲ್ಪಟ್ಟ ಜಮೀನನ್ನು ವಿವರಿಸುವ ಒಂದು ಸ್ಟೇಟ್‌ಮೆಂಟು;

(d) 16ನೆ ಪ್ರಕರಣದ (1) ನೆ ಉಪ ಪ್ರಕರಣದಂತೆ ಹೊಂದಲ್ಪಟ್ಟ ಯಾವದಾದರು ಅರಿಕೆ;

(e) (c) ಕಲಂನಲ್ಲಿ ಕಂಡ ಸ್ಟೇಟ್ಮೆಂಟಿನಲ್ಲಿ ವಿವರಿಸಲ್ಪಟ್ಟ ಎಲ್ಲಾ ಭೂಮಿಯ ನೆಲಕಂದಾಯವನ್ನು, ಅಥವಾ ಆ ಭೂಮಿಯ ಸಮ್ಮಂಧವಾದ ಇಸ್ತಿಹಾರು 16ನೆ ಪ್ರಕರಣದಂತೆ ಪ್ರಕಟಣೆಯಾದ ತಾರೀಕಿನಲ್ಲಿ ಮ್ಯುನಿಸಿಪಲ್ ತೆರಿಗೆ ಬುಕ್ಕಿನಲ್ಲಿ ನಮೂದಾಗಿರುವ ಅದರ ದಾಮ್ಮಾಷೆಯನ್ನು ತೋರಿಸುವ ಒಂದು ಪಟ್ಟಿ; ಮತ್ತು

(f) ಗವರ್ರ್ನಮೆಂಟನವರು ವಿಧಿಸಬಹುದಾದ ಇತರ ಅಧಿಕ ವಿವರಗಳು,
ಇವುಗಳನ್ನೆಲ್ಲ ಕಳುಹಿಸಬೇಕು

(3) ಯಾವ ಉತ್ತಮಪಡಿಸುವ ಉಪಾಯದಂತಾಗಲಿ ಅತಿ ಬಡವರಿಗು ಮತ್ತು ಕೂಲಿ ಮಾಡುವರಿಗು ಮನೆಗಳನ್ನು ಕಟ್ಟಿಸೋಣ ನಿಶ್ಚಯಿಸಲ್ಪಟ್ಟಿರುವದಾದರೆ, ಬೋರ್ಡ್, 16ನೆ ಪ್ರಕರಣದ ನಿಯಮಗಳನ್ನಾಚರಿಸಿದ ತರುವಾಯ, ಅಂಥ ಮನೆಗಳನ್ನು ಕಟ್ಟುವದಕ್ಕೋಸ್ಕರವಾದ ಪ್ಲಾನುಗಳನ್ನು ಎಸ್ಟಿಮೇಟುಗಳನ್ನು ಸಹ ಗವರ್ರ್ನಮೆಂಟನವರಿಗೆ ಮಂಜೂರಾತಿ ಬಗ್ಯೆ ಕೂಡಲೆ ಒಪ್ಪಿಸತಕ್ಕದ್ದು; ಮತ್ತು, ಅಂಥ ಮಂಜೂರಾತಿಯು ಮುಟ್ಟಿದ ನಂತರ, 18ನೆ ಪ್ರಕರಣದ ನಿಯಮಗಳು, ಅವಶ್ಯವಿರುವ ಎಲ್ಲಾ ಬದಲಾವಣೆಗಳೊಡನೆ, ಸದರಿ ಮನೆಗಳನ್ನು ಕಟ್ಟಿಸಲು ಆ ಉಪಾಯದ ಯಾವ ಅಂಶದಲ್ಲಿ ನಿಶ್ಚಯಿಸಿರುತ್ತೊ ಆ ಅಂಶಕ್ಕೆ, ಆ ಅಂಶವೆ ಆ ಉಪಾಯವೆಂದು ಭಾವಿಸಲ್ಪಟ್ಟಂತೆ, ಪ್ರಯೋಗವಾಗತಕ್ಕದ್ದು.

ಅತಿ ಬಡವರಾದವರಿಗು ಮತ್ತು ಕೂಲಿ ಮಾಡುವವರಿಗು ಮನೆಗಳನ್ನು ಕಟ್ಟಿಸಲು ಅವಕಾಶ ಉಂಟುಮಾಡುವ ಉಪಾಯದ ಸಂದರ್ಭದಲ್ಲಿ ನಡಿಸುವ ರೀತಿ.

18. (1) (a) ಗವರ್ರ್ನಮೆಂಟನವರ ಮಂಜೂರಾತಿಯು ಮುಟ್ಟಿದನಂತರ, ಛೇರ್ಮನ್ನು, ಸದರಿ ಮಂಜೂರಾತಿಯು ಆಗಿರುತ್ತೆಂಬುವದನ್ನು ಮತ್ತು ಆ ಉಪಾಯದ ಉದ್ದೇಶಗಳಿಗೋಸ್ಕರ ಬೋರ್ಡಿನಿಂದ ನಿಶ್ಚಯಿಸಲ್ಪಟ್ಟ ಆ ಜಮೀನು ಸಂಪಾಧನೆಯು ಒಂದು ಸರಕಾರಿ ಕೆಲಸಕ್ಕೋಸ್ಕರ ಬೇಕಾಗಿರುತ್ತೆಂಬುವದನ್ನು ಕುರಿತು ಒಂದು ಪ್ರಸಿದ್ಧಿ ಪತ್ರವನ್ನು ಗವರ್ರ್ನಮೆಂಟಿನ ಒಬ್ಬ ಸೆಕ್ರೆಟೆರಿಯ ದಸ್ಕತುನಿಶಿಯಾಗಿ ಪ್ರಕಟಿಸಲ್ಪಡುವದಕ್ಕೋಸ್ಕರ ಕಳುಹಿಸತಕ್ಕದ್ದು.

ಮಂಜೂರಾತಿಯು ಮುಟ್ಟಿದನಂತರ ಸಂಪಾದಿಸಬೇಕಾದ ಭೂಮಿಯ ವಿವರಗಳನ್ನು ತೋರಿಸುವ ಪ್ರಸಿದ್ಧಿ ಪತ್ರವನ್ನು ಪ್ರಕಟಿಸಬೇಕು.

(b) ಆ ಪ್ರಸಿದ್ಧಿಪತ್ರವು ಸರಕಾರ ಗೆಜೆಟ್ಟಿನಲ್ಲಿ ಛಾಪಿಸಲ್ಪಡಬೇಕಲ್ಲದೆ, ಅದರಲ್ಲಿ, ಸಂಪಾದಿಸಲು ನಿಶ್ಚಯಿಸಲ್ಪಟ್ಟ ಜಮೀನು ಇರುವ ಸರಹದ್ದುಗಳನ್ನು, ಅದು ಬೇಕಾಗಿರುವ ಉದ್ದೇಶವನ್ನು, ಅದರ ಸುಮಾರಾದ ವಿಸ್ತೀರಣವನ್ನು, ಮತ್ತು ಆ ಜಮೀನಿನ ಪ್ಲಾನನ್ನು ನೋಡಬಹುದಾದ ಸ್ಥಳವನ್ನು ತಿಳಿಸಬೇಕು

(c) ಆ ಜಮೀನು ಒಂದು ಸರಕಾರ ಉದ್ದೇಶಕ್ಕೋಸ್ಕರ ಬೇಕಾಗಿರುತ್ತೆಂಬುವದಕ್ಕೆ ಸದರಿ ಪ್ರಸಿದ್ಧಿ ಪತ್ರವೇ ನಿರುತ್ತರವಾದ ನಿದರ್ಶನವಾಗಿರತಕ್ಕದ್ದು, ಮತ್ತು ಬೋರ್ಡ್, ಸದರಿ ಪ್ರಸಿದ್ಧಿಪತ್ರವು ಪ್ರಕಟನೆ ಮಾಡಲ್ಪಟ್ಟ ತರುವಾಯ, ಆ ಉಪಾಯವನ್ನು ಜಾರಿ ಮಾಡಲು ಉದ್ಯುಕ್ತರಾಗತಕ್ಕದ್ದು.

ಅಂಥ ಪ್ರಕಟನೆಯ ನಂತರ ಬೋರ್ಡ್ ಆ ಉಪಾಯನ್ನು ನೆರವೇರಿಸತಕ್ಕದ್ದು.

(2) (a) ಆ ಉಪಾಯದ ಯಾವ ಅಂಶದಲ್ಲಾಗಲಿ ಗುಣವೃದ್ಧಿ ಮಾಡಲಿಕ್ಕಾಗುತ್ತೆಂಬುವದು ಯಾವ ಕಾಲದಲ್ಲಾಗಲಿ ಬೋರ್ಡಿಗೆ ತೋರಿಬಂದಲ್ಲಿ ಅಂಥ ಗುಣವೃದ್ಧಿ ಮಾಡುವ ಉದ್ದೇಶಕ್ಕೋಸ್ಕರ ಬೋರ್ಡು ಆ ಉಪಾಯವನ್ನು ಬದಲಾಯಿಸಬಹುದು, ಮತ್ತು ಹಾಗೆ ಬದಲಾಯಿಸಲ್ಪಟ್ಟಂತೆ ಆ ಉಪಾಯವನ್ನು ಕೂಡಲೆ ಜಾರಿ ಮಾಡಲು ಬೋರ್ಡ್, ಈ ಉಪಪ್ರಕರಣದ ಮೂರನೆಯ ಎರಡು ಕಲಂಗಳಿನ ನಿಯಮಗಳಿಗೊಳಪಟ್ಟು, ಉದ್ಯುಕ್ತರಾಗತಕ್ಕದ್ದು.

ಆ ಉಪಾಯದ ಯಾವ ಅಂಶವನ್ನಾಗಲಿ ಬದಲಾಯಿಸುವ ಅಧಿಕಾರವು ಬೋರ್ಡಿಗೆ ಇರತಕ್ಕದ್ದು.

ಮಂಜೂರಾದ ಉಪಾಯವನ್ನು ಜಾರಿಗೆ ತರಲು ಅಂದಾಜು ಮಾಡಿದ ಐನು ಕರ್ಚಿಗೆ, ಬದಲಾಯಿಸಲ್ಪಟ್ಟ ಉ ...ರಿಗೆ ತರಲು ಅಂದಾಜು ಮಾಡಿದ ಐನು ಕರ್ಚು ರೂ. 2,500 ಗಳಿಗೆ ಮೇಲ್ಪಟ್ಟು ಅಧಿಕವಾಗುವದಾದರೆ, ಗವ...ರ ಪೂರ್ವಭಾವಿಯಾದ ಮಂಜೂರಾತಿಯನ್ನು ಪಡೆದಹೊರ್ತು, ಬೋರ್ಡು ಬದಲಾಯಿಸಲ್ಪಟ್ಟ ಉಪಾಯವನ್ನು ...ು ಉದ್ಯುಕ್ತರಾಗಕೂಡದು.

(c) 17ನೆ ಪ್ರಕರಣದ (2) (e) ಕಲಮಿನಂತಿರುವ ಉಪಾಯವನ್ನೊಡಗೂಡಿದ ಪಟ್ಟಿಯಲ್ಲಿ ವಿವರಿಸಲ್ಪಟ್ಟ ಜ... ಇತರ ಯಾವ ಜಮೀನನ್ನಾಗಲಿ, ಕರಾರುದೆಶೆಯಿಂದಲ್ಲದ ಇತರ ವಿಧಾನದಲ್ಲಿ ಸಂಪಾದಿಸಬೇಕಾದ್ದು, ಬದಲಾಯಿಸಲ್ಪಟ್ಟ ಉಪಾಯದಲ್ಲಿ ಆಗರ್ಭವಾಗಿರುವ ಪಕ್ಷಕ್ಕೆ. 16, 17ನೆ ಪ್ರಕರಣಗಳ ಮತ್ತು (1)ನೆ ಉಪ ಪ್ರಕರಣವಾದ ನಿಯಮಗಳು ಆ ಉಪಾಯದ ಬದಲಾಯಿಸಲ್ಪಟ್ಟ ಭಾಗಕ್ಕೆ, ಆ ಭಾಗವೆ ಆ ಉಪಾಯವೆಂದು ಭಾವಿಸಲ್ಪಟ್ಟಂತೆ, ಪ್ರಯೋಗವಾಗತಕ್ಕದ್ದು.

ಸಾಧಾರಣ ವಿಷಯಗಳು.

ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಟ್ಟ ಭೂಮಿಯು ಬೀದಿಯನ್ನು ಮಾಡುವದಕ್ಕಾಗಲಿ ಅಥವಾ ಬದಲಾಯಿಸುವದಕ್ಕಾಗಲಿ ಬೋರ್ಡಿಗೆ ಬೇಕಾಗಿದ್ದರೆ ಬೋರ್ಡಿಗೆ ಹಂಗಾಮಿಯಾಗಿ ಕೊಡತಕ್ಕದ್ದು.

19. ಯಾವದಾದರೊಂದು ಉತ್ತಮಪಡಿಸುವ ಉಪಾಯದಂತೆ, ಯಾವ ಬೀದಿಯನ್ನು ರೂಪಿಸಲು, ಬದಲಾಯಿಸಲು, ಅಗಲ ಮಾಡಲು, ತಿರುಗಿಸಲು, ಎತ್ತರಿಸಲು, ಪುನಹ ಕ್ರಮಪಡಿಸಲು, ಅಥವಾ ಪುನಹ ಕಟ್ಟಿಸಲು ಬೋರ್ಡಿಗೆ ಕರ್ತವ್ಯವಾಗಿರುತ್ತದೆಯೊ ಆ ಬೀದಿಯ ಯಾವದೊಂದಾದರು ಭಾಗದ ಸ್ಥಳದಲ್ಲಿ, ಮ್ಯೂನಿಸಿಪಲ್ ಕಮ್ಮಿಷನರುಗಳಿಗೆ ಕೊಡಲಟ್ಟಿರುವ ಸದ್ಯದಲ್ಲಿರತಕ್ಕ ಸಾರ್ವಜನಿಕ ಬೀದಿಯ ಅಥವಾ ಇತರ ಜಮೀನಿನ ಎಲ್ಲವಾಗಲಿ ಅಥವಾ ಯಾವ ಭಾಗವಾಗಲಿ, ಯಾವಾಗಲಾದರು ಅಡಗಿಕೊಂಡಿರುವ ಸಂದರ್ಭದಲ್ಲಿ ; ಸದ್ಯದಲ್ಲಿರುವ ಅಂಥ ಬೀದಿಯು ಅಥವಾ ಇತರ ಜಮೀನಿನ (ಇಲ್ಲಿ ಮುಂದೆ "ಬೇಕಾದ ಭಾಗ" ವೆಂದು ಕರಿಯಲ್ಪಟ್ಟ) ಎಲ್ಲವಾಗಲಿ ಅಥವಾ ಒಂದು ಭಾಗವಾಗಲಿ, ಹ್ಯಾಗೆ ವಿದ್ಯಮಾನವಿರುತ್ತೆಯೊ ಹಾಗೆ, ಮೇಲ್ಕಂಡಂತೆ ತಾವು ನಡಿಸತಕ್ಕದ್ದಾದ ಬೀದಿಯ ಭಾಗವಾಗಿರೋಣದರಿಂದ ತಮಗೆ ಬೇಕಾಗಿರುತ್ತೆಂದು ಬೋರ್ಡು, ಮ್ಯೂನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರಿಗೆ ನೋಟಿಸನ್ನು ಜಾರಿ ಮಾಡಬೇಕು ; ಅದರ ಮೇಲೆ 21ನೆ ಪ್ರಕರಣದ (1)ನೆ ಉಪ ಪ್ರಕರಣದ ನಿಯಮಗಳಿಗೊಳಪಟ್ಟು ಆ ಬೇಕಾದ ಭಾಗವು ಬೋರ್ಡಿಗೆ ಕೊಡಲ್ಪಡತಕ್ಕದ್ದು: ಆದರೆ ಯಾವ ಮ್ಯೂನಿಸಿಪಲ್ ಬಚ್ಚಲು ಅಥವಾ "ವಾಟರ್ ವರ್ಕ್" ನ ಮೇಲೆಯಾಗಲಿ ಮ್ಯೂನಿಸಿಪಲ್ ರೆಗ್ಯುಲೇಷನುಗಳನುಸರಿಸಿ ಮ್ಯೂನಿಸಿಪಲ್ ಕಮ್ಮಿಷನರುಗಳಿಗೆ ಇರುವ ಹಕ್ಕುಗಳಿಗಾಗಲಿ ಅಥವಾ ಅಧಿಕಾರಗಳಿಗಾಗಲಿ ಈ ಪ್ರಕರಣದಲ್ಲಿರುವ ನಿಯಮದಿಂದ ಕುಂದಕವಾಗುತ್ತೆಂದು ಎಣಿಸಕೂಡದು.

ಬೀದಿಗಳ ಸಮ್ಮಂಧದಲ್ಲಿ ಮ್ಯೂನಿಸಿಪಲ್ ಕಮ್ಮಿ[illegible]ನರುಗಳಿಗೆ ಇರುವ ಕೆಲವು ಅಧಿಕಾ[illegible]ನ್ನು ಬೋರ್ಡು, ತಮಗೆ ಕೊಡಲ್ಪಟ್ಟಿರುವ ಜಮೀನನ್ನು ಕುರಿತು ಜಾರಿಯಲ್ಲಿ ತರಬಹುದು.

20. ಬೀದಿಗಳನ್ನು ಕುರಿತು ಇರುವ ಮ್ಯೂನಿಸಿಪಲ್ ರೆಗ್ಯುಲೇಷನುಗಳ ಪ್ರಕರಣಗಳು 94ಇಂದ 101ವರಿಗೆ, 113ಇಂದ 115ವರಿಗೆ, 118ಇಂದ 124ವರಿಗೆ, 126ಇಂದ 128ವರಿಗೆ, 130, 131, 136, 171, 172 ಮತ್ತು 175ಇಂದ 178ವರಿಗೆ, ಇವುಗಳ ನಿಯಮಗಳು ಈ ರೆಗ್ಯುಲೇಷನಿನ ಅಭಿಪ್ರಾಯಕ್ಕೆ ಅನುಗುಣವಾಗಿರುವಷ್ಟಿಗು, ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿಗೆ ಕೊಡಲ್ಪಟ್ಟಿರುವ ಬೀದಿಗಳಿಗಾಗಲಿ ಅಥವಾ ಅವುಗಳ ಭಾಗಗಳಿಗಾಗಲಿ ಪ್ರಯೋಗವಾಗತಕ್ಕದ್ದು ; ಮತ್ತು ಮ್ಯೂನಿಸಿಪಲ್ ಕಮ್ಮಿಷನರುಗಳಿಗಾಗಲಿ ಅಥವಾ ಇತರ ಮ್ಯೂನಿಸಿಪಲ್ ಅಧಿಕಾರಿಗಾಗಲಿ ಸದರಿ ನಿಯಮಗಳಲ್ಲಿರುವ ದಾಖಲೆಗಳನ್ನೆಲ್ಲ ಬೋರ್ಡಿಗೆ ಸಮ್ಮಂಧಪಟ್ಟ ದಾಖಲೆಗಳೆಂದು ಅನ್ವಯಿಸತಕ್ಕದ್ದು.

ಬೀದಿಗಳು ತಯಾರಾದ ಬಳಿಕ ಮ್ಯುನಿಸಿಪಲ್ ಕಮ್ಮಿಷನರುಗಳಿಗೆ ಕೊಡಲ್ಪಡುವದಲ್ಲದೆ ಅವರುಗಳ ನಿಗಾವಣೆಯಲ್ಲಿರಬೇಕು.

21. (1) ಗವರ್ನಮೆಂಟಿನವರಿಂದ ಮಂಜೂರಾದಂಥ ಯಾವದೊಂದಾದರು ಉಪಾಯದ ಪ್ಲಾನುಗಳಲ್ಲಿ ಕಂಡ ರೀತಿಯಂತೆ ಬೋರ್ಡಿನಿಂದ ರೂಪಿಸಲ್ಪಟ್ಟ ಯಾವದೊಂದು ಬೀದಿಯಾದರೂ ತಕ್ಕಹಾಗೆ ಸಮಪಡಿಸಲ್ಪಟ್ಟು, ಪರಸ್ಥಂದಿ ಮಾಡಲ್ಪಟ್ಟು, (metalled) ಕಲ್ಲು ಚೂರುಗಳು ಹಾಕಲ್ಪಟ್ಟು, (flagged) ಹಾಸಿಗೆ ಕಲ್ಲುಗಳು ಹಾಸಲ್ಪಟ್ಟು, ಕಾಲಿವೆಗಳು ಕಟ್ಟಲ್ಪಟ್ಟು, ಬಚ್ಚಲುಗಳು ಇಡಲ್ಪಟ್ಟು, ಗ್ರಾಮಸಾರದ ಮೊಹರಿಗಳು ಹೊಂದಿಸಲ್ಪಟ್ಟು ಇರುತ್ತೆಂಬುವದರಲ್ಲಿಯು, ಮತ್ತು ಆ ಬೀದಿಯಲ್ಲಿ ದೀಪ ಮುಟ್ಟಿಸಲು ತಮ್ಮ (ಪ್ರೆಸಿಡೆಂಟರ) ಅಭಿಪ್ರಾಯದಲ್ಲಿ ಅಗತ್ಯವಾದ್ದೆಂದಿರುವದಲ್ಲದೆ ಬೋರ್ಡಿನಿಂದ ಒದಗಿಸಲ್ಪಡಬೇಕಾದ್ದಾಗಿರುವ ದೀಪಗಳನ್ನು, ದೀಪದ ಕಂಬಗಳನ್ನು ಮತ್ತು ಇತರ ಉಪಕರಣಗಳನ್ನು ಬೋರ್ಡು ಸಿದ್ಧಪಡಿಸಿರುತ್ತಾರೆಂಬುವದರಲ್ಲಿಯು ಮನವರಿಕೆಯಾದ ತರುವಾಯ, ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರು ಅಂಥ ಬೀದಿಯು ಒಂದು ಸಾರ್ವಜನಿಕವಾದ ಬೀದಿಯೆಂದು ಪ್ರಕಟಿಸತಕ್ಕದ್ದು ; ಮತ್ತು ಅದರ ಮೇಲೆ ಅಂಥ ಬೀದಿಯನ್ನು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನಕ್ಕೆ ಒಪ್ಪಿಸಬೇಕು ಅಥವಾ ಪುನಹ ಒಪ್ಪಿಸಬೇಕು, ಹ್ಯಾಗೆ ವಿದ್ಯಮಾನ ವಿರುತ್ತದೊ ಹಾಗೆ ; ಮತ್ತು ಮ್ಯುನಿಸಿಪಲ್ ಕಮ್ಮಿಷನರುಗಳು ಅದು ಮೊದಲ್ಗೊಂಡು ಆ ಬೀದಿಯನ್ನು ಜೀರ್ಣೋದ್ಧಾರ ಮಾಡಬೇಕಾದ್ದಲ್ಲದೆ ಮರಾಮತ್ತು ಮಾಡುತ್ತಾ ಬೆಳಕು ಮಾಡುತ್ತಾ ಚೊಕ್ಕಟಪಡಿಸುತ್ತಾ ಇರಬೇಕು.

ಗಾಳಿ ಬೀಸುವದಕ್ಕೋಸ್ಕರ ಉಳಿಸಿಕೊಂಡ ಬೈಲು ಭೂಮಿಗಳು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನ ಮತ್ತು ಸಂರಕ್ಷಣೆಯಲ್ಲಿರಬೇಕು.

(2) ಪಟ್ಟಣದ ಯಾವ ಭಾಗದಲ್ಲಿಯಾಗಲಿ ಗಾಳಿ ಬೀಸುವದಕ್ಕೋಸ್ಕರ ಉಳಿಸಿಕೊಂಡಿರಲ್ಪಟ್ಟ ಮತ್ತು ಗವರ್ನಮೆಂಟಿನವರಿಂದ ಮಂಜೂರಾಗಿರುವ ಯಾವದಾದರೂ ಒಂದು ಉತ್ತಮ ಪಡಿಸುವ ಉಪಾಯಕ್ಕೆ ಸೇರಿದ ಭಾಗವೆಂದು ಬೋರ್ಡಿನಿಂದ ನಿಶ್ಚಯಿಸಲ್ಪಟ್ಟು ಇರುವ ಯಾವ ಬೈಲುಭೂಮಿಯನ್ನಾಗಲಿ ಪೂರಯಿಸಿದ ತರುವಾಯ ಮ್ಯುನಿಸಿಪಲ್ ಕಮ್ಮಿಷನರುಗಳ ಕರ್ಚಿನಲ್ಲಿ ಸಂರಕ್ಷಿಸಲ್ಪಡುವದಕ್ಕೋಸ್ಕರ ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟರ ವಶಕ್ಕೆ ಒಪ್ಪಿಸಬೇಕು, ಮತ್ತು ಅದು ಮೊದಲ್ಗೊಂಡು ಮ್ಯುನಿಸಿಪಲ್ ಕಮ್ಮಿಷನರುಗಳ ಸ್ವಾಧೀನದಲ್ಲಿರಬೇಕು.

705

ಈ ಪ್ರಕರಣದಲ್ಲಿ ಉಂಟಾಗುವ ವ್ಯಾಜ್ಯಗಳನ್ನು ಗವರ್ನಮೆಂಟಿನವರು ಫೈಸಲು ಮಾಡಬೇಕು.

(3) ಈ ಪ್ರಕರಣದ ಯಾವ ನಿಯಮಗಳನ್ನು ಕುರಿತಾಗಲಿ ಬೋರ್ಡಿಗೂ ಮತ್ತು ಮ್ಯುನಿಸಿಪಲ್ ಪ್ರೆಸಿಡೆಂಟರಿಗೂ ಬೀಳುವ ಯಾವ ವ್ಯಾಜ್ಯವನ್ನಾದರೂ ಗವರ್ನಮೆಂ ಸಲು ಮಾಡಬೇಕು. ಅಂಥ ಫೈಸಲೆ ಕಡೇ ಫೈಸಲಾಗಿರತಕ್ಕದ್ದು.

ಜಮೀನು ಸಂಪಾದನೆ.

ಕರಾರು ಮೂಲಕ ಜಮೀನು ಸಂಪಾದಿಸಲು ಬೋರ್ಡಿಗೆ ಅಧಿಕಾರವಿರತಕ್ಕದ್ದು.

22. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿಗೆ ಬೇಕಾಗಿದ್ದು, ಪಟ್ಟಣದ ಒಳಗಾಗಲಿ ಹೊರಗಾಗಲಿ ಯಾವ ಭೂಮಿಯನ್ನಾದರೂ ಅಥವಾ ಅದರಲ್ಲಿನ ಬಾಧ್ಯತೆಯನ್ನಾದರೂ ಮ ವರೊಂದಿಗೆ ಸದರಿ ಭೂಮಿಯನ್ನಾಗಲಿ ಅದರಲ್ಲಿನ ಬಾಧ್ಯತೆಯನ್ನಾಗಲಿ ಕ್ರಯಕ್ಕೆ ತೆಗದುಕೊಳ್ಳುವದಕ್ಕೋಸ್ಕರ ಕರಾರು ಮಾಡಲು, ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಬೋರ್ಡಿಗೆ ನ್ಯಾಯವಾಗಿರತಕ್ಕದ್ದು.

ಕರಾರು ಮೂಲಕವಲ್ಲದ ಇತರ ವಿಧಾನದಲ್ಲಿ ಭೂ ಸಂಪಾದನೆಯನ್ನು ಮಾಡುವದಕ್ಕೆ ಪ್ರಯೋಗವಾಗತಕ್ಕ ನಿಯಮಗಳು.

23. ಪಟ್ಟಣದ ಒಳಗಾಗಲಿ ಹೊರಗಾಗಲಿ ಭೂಮಿಯನ್ನು ಕರಾರು ಮೂಲಕವಲ್ಲದ ಇತರ ವಿಧಾನದಲ್ಲಿ ಈ ರೆಗ್ಯುಲೇಷನಿನಂತೆ ಸಂಪಾದಿಸೋಣವು, 1894ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಎಷ್ಟುಮಟ್ಟಿಗೆ ಪ್ರಯೋಗವಾಗಬಹುದೋ ಅಷ್ಟುಮಟ್ಟಿಗೆ ಆ ನಿಯಮಗಳಿಂದಲೂ, ಮತ್ತು ಈ ಕೆಳಗೆ ಬರುವ ಅಧಿಕ ನಿಯಮಗಳಿಂದಲೂ ಕ್ರಮಪಡಿಸಲ್ಪಡತಕ್ಕದ್ದು. ಆ ಅಧಿಕ ನಿಯಮಗಳು ಯಾವವೆಂದರೆ:—

(1) ಯಾವ ಪ್ರದೇಶವನ್ನು ಕುರಿತಾಗಲಿ ಒಂದು ಉತ್ತಮಪಡಿಸುವ ಉಪಾಯವು 14ನೆ ಪ್ರಕರಣದಂತೆ ಅವಶ್ಯವಿರುತ್ತದೆಂದು ಬೋರ್ಡು ನಿರ್ಣಯಿಸಿದ ತರುವಾಯ, ಭೂ ಸಂಪಾದನೆ ವಿಷಯದ ರೆಗ್ಯುಲೇಷನಿನ 4 (2) ಉಪಪ್ರಕರಣದಂತೆ ನಡಿಯುವ ಬಗ್ಗೆ ಗವರ್ನಮೆಂಟಿನವರಿಂದ ತಕ್ಕಹಾಗೆ ಅಧಿಕಾರ ಕೊಡಲ್ಪಟ್ಟ ಒಬ್ಬ ಉದ್ಯೋಗಸ್ಥನಿಗಾದರೂ ಅವನ ಸೇವಕರಿಗಾದರೂ ಕೂಲಿಯವರಿಗಾದರೂ ಅದಕ್ಕನುಸಾರವಾಗಿ ಯಾವ ಕಾರ್ಯಗಳನ್ನು ಮಾಡುವದು ನ್ಯಾಯವಾಗಿರುತ್ತದೆಯೋ ಅಂಥಾ ಎಲ್ಲಾ ಕಾರ್ಯಗಳನ್ನು, ಬೋರ್ಡಿನಿಂದ ಇದರ ಪರದಲ್ಲಿ ಸಾಧಾರಣವಾಗಿಯಾಗಲಿ ವಿಶೇಷವಾಗಿಯಾಗಲಿ ಅಧಿಕಾರ ಕೊಡಲ್ಪಟ್ಟ ಯಾವ ಮನುಷ್ಯನಿಗಾದರೂ ಅವನ ಸೇವಕರಿಗಾದರೂ ಕೂಲಿಯವರಿಗಾದರೂ ಆ ಪ್ರದೇಶದಲ್ಲಿರುವ ಭೂಮಿಯ ಸಮ್ಮಂಧವಾಗಿ ಮಾಡುವದು ನ್ಯಾಯವಾಗಿರತಕ್ಕದ್ದು; ಮತ್ತು ಸದರಿ ರೆಗ್ಯುಲೇಷನಿನ 5ನೆ ಪ್ರಕರಣದಲ್ಲಿರುವ ನಿಯಮವು, ಮೇಲೆ ನಮೂದಾಗಿರುವ ಯಾವ ಕಾರ್ಯಗಳ ದೆಶೆಯಿಂದಾಗಲಿ ಉಂಟಾದ ನಷ್ಟದ ವಿಷಯಕ್ಕೆ ಅದೇ ರೀತಿಯಲ್ಲಿ ಪ್ರಯೋಗವಾಗತಕ್ಕದ್ದು.

(2) 18ನೆ ಪ್ರಕರಣದಂತೆ ಮಾಡಲ್ಪಟ್ಟ ಪ್ರಕಟಣೆಯು, ಭೂ ಸಂಪಾದನೆಯ ವಿಷಯದ ರೆಗ್ಯುಲೇಷನಿನ 6 ಪ್ರಕರಣದಂತೆ ಮಾಡಲ್ಪಟ್ಟ ಪ್ರಕಟಣೆಯಾಗಿ ಎಣಿಸಲ್ಪಡತಕ್ಕದ್ದು.

(3) ಭೂ ಸಂಪಾದನೆಯ ವಿಷಯದ ರೆಗ್ಯುಲೇಷನಿನ 50 (2) ನೆ ಪ್ರಕರಣದ ಉದ್ದೇಶಗಳಿಗೋಸ್ಕರ, ಬೋರ್ಡು, ಸಂಮಂಧಪಟ್ಟ ಸ್ಥಳಿಕ ಅಧಿಕಾರಸ್ತರಾಗಿ ಎಣಿಸಲ್ಪಡತಕ್ಕದ್ದು.

(4) ಭೂಸಂಪಾದನೆಯ ವಿಷಯದ ರೆಗ್ಯುಲೇಷನಿನ 16ನೆ ಪ್ರಕರಣದಂತೆ ಭೂಮಿಯು ಗವರನ್ಮೆಂಟಿನವರ ವಶವಾದ ತರುವಾಯ, ಡೆಪ್ಯುಟಿ ಕಮಿಷನರವರು, ಆ ಸಂಪಾದನೆಯ ಖರ್ಚು ಪಾವತಿಯಾದಬಳಿಕ ಮತ್ತು ಆ ಸಂಪಾದನೆಗಾಗಿ ಮಾಡಲ್ಪಡಬಹುದಾದ ಯಾವ ಅಧಿಕ ಖರ್ಚನ್ನಾಗಲಿ ಪಾವತಿ ಮಾಡಲು ಬೋರ್ಡು ಒಪ್ಪಿಕೊಂಡ ಬಳಿಕ, ಬೋರ್ಡಿನ ವಶಕ್ಕೆ ಆ ಭೂಮಿಯನ್ನು ಕೊಡತಕ್ಕದ್ದು, ಮತ್ತು ಅದರಮೇಲೆ ಆ ಭೂಮಿಯು ಬೋರ್ಡಿಗೆ ಸೇರಿರತಕ್ಕದ್ದು.

IV ನೆ ಅಧ್ಯಾಯ ಸ್ವತ್ತು ಮತ್ತು ನಗದಿ.

ತಮಗಾಗಲಿ ಮ್ಯೂನಿಸಿಪಲ್ ಕಮಿಷನರುಗಳಿಗಾಗಲಿ ಸೇರಿದ ಭೂಮಿಗಳನ್ನು ಬೋರ್ಡಿಗೆ ಕೊಡಲು ಗವರ್ನಮೆಂಟಿನವರಿಗಿರುವ ಅಧಿಕಾರ.

24. ಗವರ್ನಮೆಂಟಿನವರು ವಿಧಿಸಬಹುದಾದ ವಿನಹಾಯಿತಿಗಳಿಗೂ ಷರತ್ತುಗಳಿಗೂ ಮತ್ತು ಇದರಲ್ಲಿ ಮುಂದೆ ಬರುವ ನಿಯಮಗಳಿಗೂ ಒಳಪಟ್ಟು ಗವರ್ನಮೆಂಟಿನವರು ತಮಗಾಗಲಿ ಅಥವಾ ಮ್ಯುನಿಸಿಪಲ್ ಕಮಿಷನರುಗಳಿಗಾಗಲಿ ಸೇರಿರುವ ಯಾವ ಭೂಮಿಯನ್ನಾದರೂ ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರವಾಗಿ ಆಗಿಂದಾಗ್ಗೆ ಬೋರ್ಡಿಗೆ ಒಪ್ಪಿಸಿಕೊಡಬಹುದು.

ಸಾರ್ವಜನಿಕ ಉದ್ದೇಶಕ್ಕೋಸ್ಕರ ಬೇಕಾದ ಭೂಮಿಗಳನ್ನು ತಿರಿಗಿ ತೆಕ್ಕೊಳ್ಳುವ ವಿಷಯದ ನಿಯಮ.

ಆದರೆ ಯಾವ ಭೂಮಿಯು ಬೋರ್ಡಿನಿಂದ ಆಗಲಿ ವಶಕ್ಕೆ ಕೊಡಲ್ಪಡದೆ ಇದ್ದು, ಅಥವಾ ವಶಕ್ಕೆ ಕೊಡಲು ಕರಾರು ಮಾಡಲ್ಪಡದೆ ಇದ್ದು, ಗವರ್ನಮೆಂಟಿನವರಿಗಾಗಲಿ ಅಥವಾ ಮ್ಯುನಿಸಿಪಲ್ ಕಮ್ಮಿಷನರುಗಳಿಗಾಗಲಿ ಒಂದು ಸಾರ್ವಜನಿಕ ಉದ್ದೇಶಕ್ಕೋಸ್ಕರ ಅಗತ್ಯವಿರುತ್ತೆಯೊ ಆ ಭೂಮಿಯು, ಗವರ್ನಮೆಂಟಿನವರಿಂದಲೊ ಅಥವಾ ಗವರ್ನಮೆಂಟಿನವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆದು ಮ್ಯೂನಿಸಿಪಲ್ ಕಮ್ಮಿಷನರುಗಳಿಂದಲೊ, ಹ್ಯಾಗೆ ಸಂದರ್ಭವೊ ಹಾಗೆ, ಗವರ್ನಮೆಂಟಿನವರು ಅಪ್ಪಣೆ ಕೊಡಿಸಬಹುದಾದ ಶರ್ತುಗಳಂತೆ, ಯಾವ ಕಾಲದಲ್ಲಾಗಲಿ, ಪುನಹಾ ಸ್ವಾಧೀನಕ್ಕೆ ತೆಗದುಕೊಳ್ಳಬಹುದು.

ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ, ಪಟ್ಟಣದ ಒಳಗಾಗಲಿ ಅಥವಾ ಹೊರಗಾಗಲಿ ಚರ ಮತ್ತು ಸ್ಥಿರ ಸ್ವತ್ತನ್ನು ಸಂಪಾದಿಸಲು ಮತ್ತು ಇಟ್ಟುಕೊಳ್ಳಲು ಬೋರ್ಡಿಗೆ ಅಧಿಕಾರವಿರತಕ್ಕದ್ದು; ಮತ್ತು ಈ ರೆಗ್ಯುಲೇಷನಿನ ನಿಯಮಗಳಿಗೆ ಒಳಪಟ್ಟು, ಈ ಕೆಳಗೆ ಬರುವ ಕಾರ್ಯಗಳಿಗಾಗಿಯೂ ಕೂಡ ಅಧಿಕಾರವಿರತಕ್ಕದ್ದು: ಏನೆಂದರೆ—

ಸಂಪಾದಿಸಲು ಮತ್ತು ಇಟ್ಟು ಬೋರ್ಡಿಗೆ ಇರುವ ಅಧಿಕಾರ.

ತ್ತಿಗೆ ಕೊಡೋಣ.

(1) ತಮ್ಮಿಂದ ಸಂಪಾದಿಸಲ್ಪಟ್ಟ ಅಥವಾ ತಮಗೆ ಕೊಡಲ್ಪಟ್ಟ ಯಾವ ಚರ ಅಥವಾ ಸ್ಥಿರ ಸೊತ್ತನ್ನಾಗಲಿ ಬಾಡಿಗೆಗೆ ಅಥವಾ ಗುತ್ತಿಗೆಗೆ ಕೊಡೋಣ ;

ಕ್ರಯಕ್ಕೆ ಮತ್ತು ಇತರ ವಿಧದಲ್ಲಿ ಕೊಡುವದು.

(2) ತಮಗೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಯಾವ ಚರ ಅಥವಾ ಸ್ಥಿರ ಸ್ವತ್ತನ್ನಾಗಲಿ ಯಾವ ಶರ್ತುಗಳೊಂದಿಗಾದರು ಅಥವಾ ಯಾವ ಶರ್ತುಗಳಿಲ್ಲದೇಯೂ ಕ್ರಯಕ್ಕು ಮತ್ತು ಇತರ ವಿಧದಲ್ಲಿಯು ಕೊಡೋಣ ;

ತಮಗೆ ಕೊಡಲ್ಪಟ್ಟಿರುವ ಭೂಮಿಗಳನ್ನು ಉತ್ತಮಪಡಿಸುವ ಉಪಾಯಗಳ ಉದ್ದೇಶಗಳಿಗೋಸ್ಕರ ಪ್ರಯೋಗಿಸುವದು.

(3) ತಮಗೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಎಲ್ಲಾ ಭೂಮಿಗಳನ್ನಾಗಲಿ ಅಥವಾ ಅವುಗಳ ಯಾವ ಅಂಶವನ್ನಾಗಲಿ, ಬೈಲು ಪ್ರದೇಶಗಳನ್ನು ಮಾಡುವದಕ್ಕಾದರೂ, ಕಟ್ಟುವ ಉದ್ದೇಶಗಳಿಗೋಸ್ಕರವಾದರು, ಅಥವಾ ಯಾವ ಉತ್ತಮಪಡಿಸುವ ಉಪಾಯದ ಉದ್ದೇಶಗಳಿಗೋಸ್ಕರ ಯಾವ ವಿಧಾನದಲ್ಲಿಯಾದರು, ಉಪಯೋಗಿಸೋಣ ಅಥವಾ ಪ್ರಯೋಗಿಸೋಣ.

ಉತ್ತಮಪಡಿಸುವ ವಿಷಯದ ಫಂಡು ಮತ್ತು ಅದರ ಜಮೆಗೆ ಬರತಕ್ಕ ಬಾಬುಗಳು.

26. (1) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿಗೆ ಕೊಡಲ್ಪಟ್ಟ, ಕೊಡಬೇಕಾಗಿರುವ, ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸಮಸ್ತ ಭೂಮಿಗಳ, ಕಟ್ಟಡಗಳ ಮತ್ತು ಇತರ ಸ್ವತ್ತುಗಳ, ಬಾಡಿಗೆಗಳು, ಆದಾಯಗಳು ಮತ್ತು ಕ್ರಯದ ಹುಟ್ಟುವಳಿಗಳು "ಮೈಸೂರು ಪಟ್ಟಣದ ಇಂಪ್ರೂವಮೆಂಟ್ ಫಂಡ" ಎಂದು ಕರೆಯಲ್ಪಡಬೇಕಾದ ಒಂದು ಫಂಡಿನ ಜಮೆಗೆ ಬರತಕ್ಕದ್ದು.

(2) ಸದರಿ ಫಂಡಿನ ಜಮೆಗೇನೆ ಬರತಕ್ಕ ಇತರ ಬಾಬುಗಳ್ಯಾವವೆಂದರೆ —

(*a*) ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರವಾಗಿ ಬೋರ್ಡಿನ ವಶಕ್ಕೆ ಗವರ್ನಮೆಂಟಿನವರಿಂದ ಆಗಿಂದಾಗ್ಗೆ ಕೊಡಲ್ಪಡಬಹುದಾದ ಮೊಬಲಗುಗಳು; ಮತ್ತು

(*b*) ಬೋರ್ಡಿನವರಿಂದ ಹಿಡಿಯಲ್ಪಟ್ಟ ಉತ್ತಮ ಪಡಿಸುವ ಉಪಾಯಗಳಿಂದ ಮ್ಯುನಿಸಿಪಲ್ ದ್ರವ್ಯಕ್ಕೆ ಪರಿಣಮಿಸಿದ ಅಥವಾ ಪರಿಣಮಿಸುವಂತೆ ಕಾಣುವ ವೃದ್ಧಿಯನ್ನಾಗಲಿ ಅಥವಾ ಸಹಾಯವನ್ನಾಗಲಿ ಗವರ್ನಮೆಂಟಿನವರು ಆಲೋಚಿಸಿ, ...ಸಿಪಲ್ ಫಂಡಿನಿಂದ ಯಾವ ಮೊಬಲಗುಗಳನ್ನು ಕೊಡಬೇಕೆಂಗು ಮ್ಯುನಿಸಿಪಲ್ ಕಮೀಷನರುಗಳನ್ನು ಆಗಿಂದಾಗ್ಗೆ ಆಜ್ಞಾಪಿಸುತ್ತಾರೊ ಆ ಮೊಬಲಗುಗಳು.

ಇಂಪ್ರೂವಮೆಂಟ್ ಫಂಡಿನ ಪ್ರಯೋಗ.

27. (1) ಸದರಿ ಫಂಡು ಬೋರ್ಡಿನ ವಶದಲ್ಲಿರತಕ್ಕದ್ದು ; ಮತ್ತು, ಸಾಮಾನ್ಯವಾಗಿಯಾದರು ಅಥವಾ ಪ್ರತ್ಯೇಕವಾಗಿಯಾದರು ಗವರ್ನಮೆಂಟಿನವರಿಂದ ವಿಧಿಸಲ್ಪಟ್ಟ ಆಜ್ಞೆಗಳಿಗೆ ಒಳಪಟ್ಟು, ಈ ರೆಗ್ಯುಲೇಷನಿನ ಉದ್ದೇಶಗಳನ್ನು ಜಾರಿಗೆ ತರೋಣದರಲ್ಲಿ ಸಂಭವಿಸುವ ಕರ್ಚುಗಳಿಗೆ ಬೋರ್ಡಿನಿಂದ ಉಪಯೋಗಿಸಲ್ಪಡತಕ್ಕದ್ದು.

(2) ಅಂಥಾ ಕರ್ಚುಗಳಲ್ಲಿ, ಇತರ ಬಾಬುಗಳ ಪೈಕಿ, ಅಡಗಿರುವವುಗಳು ಏನಂದರೆ:—

(*a*) ಈ ರೆಗ್ಯುಲೇಷನಿನ ಪ್ರಕಾರ ಬೋರ್ಡಿನ ವಶಕ್ಕೆ ಬಂದಿರುವ ಅಥವಾ ಬರುವ ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸ್ವತ್ತಿನ ಬಾಡಿಗೆಗಳು ಆದಾಯಗಳು ಮತ್ತು ಇತರ ಹುಟ್ಟುವಳಿಗಳು ಇವುಗಳನ್ನು ವಸೂಲ್ಮಾಡುವದಕ್ಕೋಸ್ಕರ ಉದ್ಯೋಗಸ್ಥರು ಮತ್ತು ಸೇವಕರನ್ನು ಇಟ್ಟುಕೊಳ್ಳುವ ಕರ್ಚು ;

(*b*) ಫೇರಿಸ್ತು ಆದ ಸಿಬ್ಬಂದಿಯ ಭಾಗವಲ್ಲದೆ ಇದ್ದು, ಸ್ವತ್ತುಗಳ ನಿಗಾವಣಿಗಾಗಲಿ ಅಥವಾ ಇತರ ಹುಟ್ಟುವಳಿ ಉದ್ದೇಶಗಳಿಗಾಗಲಿ ಅವಶ್ಯಕವಾಗಿರುವ ಚಿಕ್ಕ ಮತ್ತು ಇತರ ಸಿಬ್ಬಂದಿಯ ಕರ್ಚು;

(*c*) ಫೇರಿಸ್ತು ಆದ ಸಿಬ್ಬಂದಿಯ ಸಂಬಳ ಮತ್ತು ಅಲವನ್ಸುಗಳು ಮತ್ತು ಆಕಸ್ಮಿಕವಾದ ಕರ್ಚುಗಳು ಸೇರಿ ಕೆಲಸದ ಚಲಾವಣಿಗಾಗಿ ಆಗುವ ಕರ್ಚು ;

(*d*) ಬೋರ್ಡಿಗೆ ಕೊಡಲ್ಪಟ್ಟು ಮತ್ತು ವಿನಾಯಿತಿಗೆ ಒಳಪಡದೆ ಇರುವ ಭೂಮಿಗಳ ಮೇಲೂ, ಕಟ್ಟಡಗಳ ಮೇಲೂ, ಮ್ಯುನಿಸಿಪಲ್ ರೆಗ್ಯುಲೇಷನ್ಗಳಂತೆ ವಸೂಲ್ಮಾಡಲ್ಪಡುವ ತೆರಿಗೆಗಳ ಮತ್ತು ಕಂದಾಯಗಳ ವಿಷಯದಲ್ಲಿ ಬೋರ್ಡಿನಿಂದ ಕೊಡಲ್ಪಡುವ ಎಲ್ಲಾ ಹಣಗಳು.

(3) ಮನೆಗಳನ್ನಾಗಲಿ ಅಥವಾ ಇತರ ವಸತಿಗಳನ್ನಾಗಲಿ ಹೊಂದಿಸಿಕೊಳ್ಳಲು, ಸರ್ಕಾರದ ನವಕರುಗಳಲ್ಲದ ಜನಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶಕ್ಕೋಸ್ಕರ, 38ನೆ ಪ್ರಕರಣದಂತೆ ಗವರ್ನಮೆಂಟಿನವರಿಂದ ಮಾಡಲ್ಪಟ್ಟ ನೇಮಗಳಿಗೆ ಅನುಸಾರವಾಗಿ, ಬೋರ್ಡು ಆಗಿಂದಾಗ್ಗೆ ಸದರಿ ಫಂಡಿನಿಂದ ಮುಂಗಡಗಳನ್ನು ಕೊಡಬಹುದು.

ಜಮಾ ಖರ್ಚಿನ ಸಾಲಿಯಾನಾ ಅಂದಾಜು ಚೇರ್‌ಮೆನ್ ಮಾಡತಕ್ಕದ್ದು.

28. (1) ಪ್ರತಿ ವರುಷದ ಮೇ (May) ಗುರ್ರೆ ತಾರೀ... ಇರುವ ದಿನದಲ್ಲಿ ಮಾಡಲ್ಪಡಬೇಕಾಗಿರುವ ಒಂದು ವಿಶೇಷವಾದ ... ಚೇರ್‌ಮೆನ್ನು, ಬೋರ್ಡು ಆಗಿಂದಾಗ್ಗೆ ವಿಧಿಸುವ ತಪಶೀಲುನಲ್ಲಿಯೂ ... ನಮೂನೆಯಂತೆಯೂ, ಮಾರಣೆ ಜುಲೈ (July) ಗುರ್ರೆ ತಾರೀಖಿನಿಂದ ಆರಂಭಿಸುವ ವರುಷಕ್ಕೆ ಬೋರ್ಡಿನ ಜಮಾ ... ಅಂದಾಜನ್ನು ಬೋರ್ಡಿಗೆ ಒಪ್ಪಿಸತಕ್ಕದ್ದು.

(2) ಅಂಥಾ ಅಂದಾಜು, ಈ ರೆಗ್ಯುಲೇಷನಿನ ಚಲಾವಣೆಯು ಕಾರ್ಯ ಸಾಧಕವಾಗಿರುವದಕ್ಕೆ ಬೇಕಾದ ಅನುಕೂಲವನ್ನುಂಟಾಗಿರತಕ್ಕದ್ದು ಮತ್ತು ಸಂಪೂರ್ಣವಾಗಿರತಕ್ಕದ್ದು. ಆ ಅಂದಾಜಿನ ಒಂದು ನಕಲನ್ನು, ಪ್ರತಿ ಒಬ್ಬ ಟ್ರಸ್ಟಿಗೂ, ಯಾವ ಮೀಟಿಂಗಿನಲ್ಲಿ ಆ ಅಂದಾಜನ್ನು ಒಪ್ಪಿಸಬೇಕೊ ಅದಕ್ಕೆ ಕನಿಷ್ಟಪಕ್ಷದಲ್ಲಿ ಹತ್ತು ದಿನಗಳ ಮುಂಚೆ, ಟಪಾಲುಮೂಲಕವಾಗಲಿ, ಇತರ ವಿಧದಲ್ಲಿ ಆಗಲಿ, ಕಳುಹಿಸತಕ್ಕದ್ದು.

ಬೋರ್ಡು ಆ ಅಂದಾಜನ್ನು ಮಂಜೂರ್ಮಾಡತಕ್ಕದ್ದು ಅಥವಾ ತಿದ್ದುಪಡಿ ಮಾಡತಕ್ಕದ್ದು.

29. ಬೋರ್ಡು ಹಾಗೆ ತಮಗೆ ಒಪ್ಪಿಸಲ್ಪಟ್ಟ ಅಂದಾಜನ್ನು ಆಲೋಚನೆಗೆ ತೆಗೆದುಕೊಳ್ಳತಕ್ಕದ್ದಲ್ಲದೆ, ತಿದ್ದುಪಾಟು ಇಲ್ಲದೆಯಾಗಲಿ, ತಮಗೆ ಉಚಿತವಾಗಿ ತೋರಿಬಂದ ತಿದ್ದುಪಾಟಿನಿಂದಾಗಲಿ ಅದನ್ನು ಮಂಜೂರ್ಮಾಡತಕ್ಕದ್ದು.

ಮಂಜೂರಾತಿ ಬಗ್ಗೆ ಗವರ್ನಮೆಂಟಿನವರಿಗೆ ಅಂದಾಜುಗಳು ಒಪ್ಪಿಸಲ್ಪಡತಕ್ಕದ್ದು.

30. ಆ ಅಂದಾಜನ್ನು ಬೋರ್ಡು ಮಂಜೂರುಮಾಡಿರುವಂತೆ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು. ಗವರ್ನಮೆಂಟಿನವರು, ತಾವು ಯುಕ್ತವೆಂದೆಣಿಸುವ ಪಕ್ಷದಲ್ಲಿ, ಆ ಅಂದಾಜನ್ನಾಗಲಿ ಅದರ ಯಾವ ಭಾಗವನ್ನಾಗಲಿ, ಅಂಗೀಕರಿಸದೆ, ತಿದ್ದುಪಾಟಿಗಾಗಿ, ವಾಪಸು ಕಳುಹಿಸಬಹುದು. ಹಾಗೆ ಗವರ್ನಮೆಂಟಿನವರಿಂದ ಆ ಅಂದಾಜು ತಿರಿಗಿ ಕಳುಹಿಸಲ್ಪಡುವ ಸಂದರ್ಭದಲ್ಲಿ, ಬೋರ್ಡು, ಆ ಅಂದಾಜನ್ನು ತಿದ್ದುಪಡಿ ಮಾಡಲು ಕೂಡ್ಲೆ ಉದ್ಯುಕ್ತರಾಗತಕ್ಕದ್ದು; ಮತ್ತು ಹಾಗೆ ತಿದ್ದುಪಡಿಯಾದ ಆ ಅಂದಾಜನ್ನು ಗವರ್ನಮೆಂಟಿನವರಿಗೆ ಪುನಹ ಒಪ್ಪಿಸತಕ್ಕದ್ದು. ಆ ಅಂದಾಜಿನ ಒಂದು ನಕಲನ್ನು ಮ್ಯೂನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸಿಕೊಡತಕ್ಕದ್ದು.

ಆಗತ್ಯವಿದ್ದಾಗ್ಗೆ ಉಪಭಾಗವಾಗಿರುವ ಅಂದಾಜುಗಳನ್ನು ತಯಾರ್ಮಾಡಿ ಒಪ್ಪಿಸಬಹುದು.

31. ಬೋರ್ಡು, ಯಾವ ವರುಷಕ್ಕೆ ಅಂಥಾ ಯಾವ ಅಂದಾಜು ಮಂಜೂರ್ಮಾಡಲ್ಪಟ್ಟು ಇದೆಯೊ ಆ ವರುಷದಲ್ಲಿ ... ಕಾಲದಲ್ಲಿಯಾದರೂ, ಒಂದು ಉಪಭಾಗವಾಗಿರುವ ಅಂದಾಜನ್ನು ತಯಾರ್ಮಾಡಿಸಿ ತಮಗೆ ಒಪ್ಪಿಸಲ್ಪಡಿಸಬಹುದು. ಪ್ರತಿ ಒಂದಂಥಾ ಉಪಭಾಗವಾಗಿರುವ ಅಂದಾಜನ್ನು ಬೋರ್ಡು ಆಲೋಚನೆಗೆ ತೆಗೆದುಕೊಳ್ಳತಕ್ಕದ್ದಲ್ಲದೆ, ಮಂಜೂರ್ಮಾಡಿ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು; ಮತ್ತು, ಒಂದು ನಕಲನ್ನು, ಅದು ಮೂಲ ಸಾಲಿಯಾನಾ ಅಂದಾಜಾಗಿದ್ದರೆ ಯಾವರೀತಿಯಲ್ಲಿ ಕಳುಹಿಸಲ್ಪಡುತ್ತಿತ್ತೊ ಆದೇರೀತಿಯಲ್ಲಿ, ಮ್ಯೂನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸತಕ್ಕದ್ದು.

ಕರ್ಚಿನ ವಿಷಯವಾದ ನಿಯಮಗಳು.

32. ಗವರ್ನಮೆಂಟಿನವರಿಂದ ಕಡೆಗೆ ಮಂಜೂರ್ಮಾಡಲ್ಪಟ್ಟು ತತ್ಕಾಲದೊಳಗೆ ಜಾರಿಯಲ್ಲಿರುವ ಯಾವದೊಂದು ಅಂದಾಜಿನಲ್ಲಾಗಲಿ, ಅಥವಾ ಕೋರ್ಟಿನ ಡಿಕ್ರಿ ಯಾ ಫೈಸಲಂತೆ ಬೋರ್ಡಿನಿಂದ ಕೊಡಲ್ಪಡಬೇಕಾಗಿರುವ ಮೊಬಲಗಿನಲ್ಲಾಗಲಿ, ಅಡಗಿದ್ದರೇನೆ ಶಿವಾಯಿ, ಯಾವ ಹಣವು ಕೂಡಾ ಬೋರ್ಡಿನಿಂದ ಅಥವಾ ಬೋರ್ಡಿನಪರವಾಗಿ ಕರ್ಚು ಮಾಡಲ್ಪಡಕೂಡದು. ಆದರೆ ಕೇವಲ ಅವಸರವಾದ ಅನುಪತ್ಯದಲ್ಲಿ ಎರಡುಸಾವಿರದ ಐನೂರು ರೂಪಾಯಿಗಳಿಗೆ ಮೀರದಂತೆ, ಹಣವನ್ನು ಹಾಗೆ ಅದು ಅಡಗದೆ ಇದ್ದಾಗ್ಯೂ, ಕರ್ಚು ಮಾಡಬಹುದಲ್ಲದೆ, ಚೇರ್‌ಮೆನ್ನು, ಆ ವಿದ್ಯಮಾನಗಳನ್ನು ಮತ್ತು ಯಾವ ವಿಧದಲ್ಲಿ ಈ ವಿಶೇಷವಾದ ಕರ್ಚನ್ನು ತೀಲಿಸಲು ಬೋರ್ಡು ಯೋಚಿಸಿರುತ್ತಾರೊ ಅದರ ವಿವರವನ್ನು, ಕೂಡ್ಲೆ ಗವರ್ನಮೆಂಟಿನವರಿಗೆ ತಿಳಿಸತಕ್ಕದ್ದು.

ಕಂಟ್ರೋಲರು ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡಿ ಗವರ್ನಮೆಂಟಿನವರಿಗೆ ಒಪ್ಪಿಸತಕ್ಕದ್ದು.

33. ಸರ್ಕಾರಿ ಡಿಪಾರ್ಟಮೆಂಟುಗಳ ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡುವ ವಿಧಾನದಲ್ಲಿ, ಕಂಟ್ರೋಲರು ಬೋರ್ಡಿನ ಜಮಾಕರ್ಚಿನ ಲೆಕ್ಕಗಳನ್ನು ಸರಿನೋಡಿ ತನಿಖೆ ಮಾಡತಕ್ಕದ್ದು. ಸದರಿ ಲೆಕ್ಕಗಳು ಪ್ರತಿ ವರುಷದಲ್ಲಿ ಎರಡಾವರ್ತಿ ಗವರ್ನಮೆಂಟಿನವರಿಗೆ ಒಪ್ಪಿಸಲ್ಪಡಬೇಕು. ತನಿಖೆ ಮಾಡಲ್ಪಟ್ಟ ಪ್ರತಿ ವರುಷದ ಲೆಕ್ಕಗಳ ಗೋಷ್ವಾರೆಯು ಮ್ಯುನಿಸಿಪಲ್ ಕಮ್ಮಿಷನಿನ ಪ್ರೆಸಿಡೆಂಟ್ರಿಗೆ ಕಳುಹಿಸಲ್ಪಡಬೇಕು.

V ನೆ ಅಧ್ಯಾಯ.—ಬೋರ್ಡಿನ ಉದ್ಯೋಗಸ್ಥರು ಮತ್ತು ಸೇವಕರು.

ಗವರ್ನಮೆಂಟಿನವರ ಮಂಜೂರಾತಿ ಬಗ್ಗೆ ಉದ್ಯೋಗಸ್ಥರ ಮತ್ತು ಸೇವಕರ ಪಟ್ಟಿಯನ್ನು ಒಪ್ಪಿಸಬೇಕು.

34. ಬೋರ್ಡು, ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಯಾವ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಇಟ್ಟುಕೊಳ್ಳೋಣವು ಅಗತ್ಯವಾಗಿಯೂ ಯುಕ್ತವಾಗಿಯೂ ಇದೆಯೆಂದು ಎಣಿಸುತ್ತಾರೊ ಅವರುಗಳ ಒಂದು ಪಟ್ಟಿಯನ್ನು ಆಗಿಂದಾಗ್ಗೆ ತಯಾರ್ಮಾಡುವದಲ್ಲದೆ ಗವರ್ನಮೆಂಟಿನವರ ಮಂಜೂರಾತಿ ಬಗ್ಗೆ ಒಪ್ಪಿಸತಕ್ಕದ್ದು. ಪ್ರತಿ ಒಂದಂಥಾ ಉದ್ಯೋಗಸ್ಥನಿಗು ಸೇವಕನಿಗು ಯಾವ ಸಂಬಳಗಳು, ಫೀಜುಗಳು ಮತ್ತು ಅಲವರ್ನುಗಳು ಕೊಡಲು ಬೋರ್ಡು ಅಭಿಪ್ರಾಯ ಪಡುತ್ತಾರೊ, ಅವುಗಳ ಮೊಬಲಗು ಮತ್ತು ಸ್ವಭಾವವನ್ನು ಸದರಿ ಪಟ್ಟಿಯಲ್ಲಿ ನಮೂದು ಮಾಡಿರಬೇಕು. ಗವರ್ನಮೆಂಟಿನವರ ಮಂಜೂರಾತಿಯನ್ನು ಪೂರ್ವಭಾವಿಯಾಗಿ ಪಡೆದ ಹೊರ್ತು, ಮಂಜೂರ್ಮಾಡಲ್ಪಟ್ಟ ಆ ಪಟ್ಟಿಯಲ್ಲಿ ಯಾವ ಬದಲಾವಣೆಯನ್ನು ಮಾಡಕೂಡದು.

ನೇಮಕಗಳು ಮುಂತಾದವುಗಳು ಯಾರಿಂದ ಮಾಡಲ್ಪಡಬೇಕಾದ್ದು.

35. (1) ಸರ್ಕಾರದ ನವಕರರಾಗಿ ಬೋರ್ಡಿನ ತಾಬೆಯಲ್ಲಿರುವವರು ಶಿವಾಯಿ, ನೂರು ರೂಪಾಯಿಗಳಿಗೆ ಹೆಚ್ಚದೆ ಇರುವ ತಿಂಗಳುಗಟ್ಲೆಯ ಸಂಬಳವುಳ್ಳ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ನೇಮಕ, ಬಡ್ತಿ, ಸಸ್ಪೆಂಡು, ಬರತರಫು, ಜುಲ್ಮಾನೆ, ಕೆಂಪರಾ ಮಾಡುವ ಅಥವಾ ಅವರುಗಳಿಗೆ ರಜಾ ಕೊಡುವ ಅಧಿಕಾರವು ಚೇರ್ಮೆನ್ನಿಂದಲು, ಮತ್ತು ಪ್ರತಿ ಒಂದಿತರ ಸಂದರ್ಭದಲ್ಲಿ ಅಂಥಾ ಅಧಿಕಾರವು ಬೋರ್ಡಿನಿಂದಲು, 39 (1) ನೆ ಪ್ರಕರಣದ (c) ಕಲಮಿನಂತೆ ಮಾಡಲ್ಪಟ್ಟ ಬಳ ನಿಬಂಧನೆಗಳ ನಿಯಮಗಳಿಗೂ ಮತ್ತು 34ನೆ ಪ್ರಕರಣದಂತೆ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟ ತತ್ಕಾಲದಲ್ಲಿ ಜಾರಿಯಲ್ಲಿರುವ ಪಟ್ಟಿಯ ನಿಯಮಗಳಿಗೂ ಬಳಪಟ್ಟು, ನಡಿಸಲ್ಪಡತಕ್ಕದ್ದು.

(2) ಸರ್ಕಾರದ ನವಕರನಾಗಿ ಬೋರ್ಡಿನ ತಾಬೆಯಲ್ಲಿರುವವನು ಶಿವಾಯಿ, ಬೋರ್ಡಿನ ಯಾವ ಉದ್ಯೋಗಸ್ಥನನ್ನಾಗಲಿ ಸೇವಕನನ್ನಾಗಲಿ, ಅಂಥಾ ಉದ್ಯೋಗಸ್ಥನ ಅಥವಾ ಸೇವಕನ ಸ್ವಂತ ದುರ್ನಡತೆಯ ದೆಶೆಯಿಂದಲ್ಲದ ಇತರ ಕಾರಣಕ್ಕಾಗಿ, ಕೆಲಸದಿಂದ ತೆಗೆದುಹಾಕುವದಕ್ಕೂ, ಅಥವಾ ಅಂಥಾ ಯಾವ ಉದ್ಯೋಗಸ್ಥನನ್ನಾಗಲಿ ಸೇವಕನನ್ನಾಗಲಿ, ಪೆನ್ಷನ್, ಗ್ರಾಂಟು ಅಥವಾ ಅಲವರ್ನ್ಸು ಕೊಟ್ಟು ಉದ್ಯೋಗದಿಂದ ನಿವೃತ್ತನಾಗಿಸುವದಕ್ಕೂ, ಅಧಿಕಾರವು, ಮೇಲ್ಕಂಡ ನಿಯಮಗಳಿಗೊಳಪಟ್ಟು, ಬೋರ್ಡಿಗೇನೆ ಇರತಕ್ಕದ್ದು.

ಬೋರ್ಡಿನ ತಾಬೆಯಲ್ಲಿರುವ ಸರ್ಕಾರದ ನವಕರ ವಿಷಯ.

36. ಗವರ್ನಮೆಂಟಿನವರಿಂದ ಆಗಿಂದಾಗ್ಗೆ ಮಾಡಲ್ಪಡಬಹುದಾದ ನೇಮಗಳ ಅಥವಾ ವಿಧಿಗಳಂತಿರುವ ಸಂದರ್ಭ ಹೊರ್ತು, ಬೋರ್ಡಿನ ತಾಬೆಯಲ್ಲಿರುವ ಸರ್ಕಾರದ ನವಕರುಗಳು, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳಲ್ಲಿ ಈ ಪರವಾಗಿ ಇರುವ ನಿಯಮಗಳಿಗೆ ಬಳಪಟ್ಟು ಇರತಕ್ಕದ್ದು.

VIನೆ ಅಧ್ಯಾಯ.—ಬೋರ್ಡಿನ ಅಗಲಿಕೆ.

ಬೋರ್ಡಿನ ನೇಮಕದ ಉದ್ದೇಶ ಪೂರ್ತಿಯಾದಾಗ ಗವರ್ನಮೆಂಟಿನವರು ಅವರನ್ನು ಅಗಲಿಸಬಹುದು.

37. (1) ಗವರ್ನಮೆಂಟಿನವರ ಅಭಿಪ್ರಾಯದಲ್ಲಿ ಬೋರ್ಡಿನಿಂದ ನೆರವೇರಿಸಲ್ಪಡುವದಕ್ಕೋಸ್ಕರ ಗವರ್ನಮೆಂಟಿನವರು ಆಗಿಂದಾಗ್ಗೆ ಮಂಜೂರ್ಮಾಡಿದ ಉತ್ತಮಪಡಿಸುವ ಉಪಾಯಗಳೆಲ್ಲವು ವಾಸ್ತವಿಕವಾದ ಪೂರ್ಣತ್ವವನ್ನು ಹೊಂದಿರುತ್ತವೆಂದು, ಮತ್ತು ಪಟ್ಣವನ್ನು ಉತ್ತಮಪಡಿಸುವದಕ್ಕಾಗಿ ಇತಃಪರ ಸದ್ಯದಲ್ಲಿ ಅವಶ್ಯಕವಿರುವ ಇತರ ಕಾರ್ಯಭಾಗಗಳು, ಜಾರಿಯಲ್ಲಿರುವ ಮ್ಯುನಿಸಿಪಲ್ ಕಾನೂನಿನ ಸಾಮಾನ್ಯ ನಿಯಮಗಳ ಪ್ರಕಾರ ಸುಲಭವಾಗಿ ನಡಿಸಲ್ಪಡಬಹುದೆಂದು – ಕಂಡುಬಂದರೆ, ಗವರ್ನಮೆಂಟಿನವರು, ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟಿಸಲ್ಪಡಬೇಕಾದ ಒಂದು ನೇಮಕದ ದ್ವಾರಾ, ಆ ನೇಮಕದಲ್ಲಿ ಗೊತ್ತುಮಾಡಲ್ಪಡಬೇಕಾದ ಒಂದು ತಾರೀಕಿನಿಂದ ಬೋರ್ಡಿನ ಸಂಘವು ಅಗಲಿಸಲ್ಪಡತಕ್ಕದ್ದೆಂದು ಪ್ರಕಟನೆ ಮಾಡಬಹುದು.

ಅಗಲಿಸತಕ್ಕ ನೇಮಕದಲ್ಲಿ ವಿವರಿಸಲ್ಪಡಬೇಕಾದ ವಿಷಯಗಳು.

(2) ಆ ನೇಮಕದಲ್ಲಿ, ಬೋರ್ಡಿನ ಸ್ವತ್ತುಗಳು ಮತ್ತು ಸಾಲಗಳು ಯಾರಿಗೆ ಒಪ್ಪಿಸಲ್ಪಡಬೇಕೆಂಬುವದಕ್ಕೂ, ಬೋರ್ಡಿನ ವಶ ಮಾಡಲ್ಪಟ್ಟ ಸ್ವತನ್ನು ನಿರ್ವಹಿಸುವದಕ್ಕೂ ಅಥವಾ ಕೊಟ್ಟುಬಿಡುವದಕ್ಕೂ, ಅಪೂರ್ಣವಾದ ಕಾರ್ಯಗಳನ್ನು ಪೂರಯಿಸುವದಕ್ಕೂ, ಮತ್ತು ಬೋರ್ಡಿನ ಅಗಲುವಿಕೆಗೆ ಮತ್ತು ಅವರ ಸಂಗತಿಗಳು ಬಗೆಹರಿಸುವದಕ್ಕೆ ಸಮ್ಮಂಧಪಡುವ [illegible] ಇತರ ವಿಷಯಗಳಿಗೂ, ಅವಕಾಶಕೊಡುವ ತಕ್ಕ ಏರ್ಪಾಟನ್ನು ಮಾಡಿರಬೇಕು.

ಸ್ಥಿರಸ್ವತ್ತು ವಶಪಡಿಸುವದು.

ಆದರೆ ಬೋರ್ಡಿನ ಅಗಲುವಿಕೆಯ ತಾರೀಕಿನಲ್ಲಿ ಅವರ ವಶಕ್ಕೆ ಕೊಡಲ್ಪಟ್ಟು, ಮತ್ತು ಸದರಿ ನೇಮಕದಲ್ಲಿ ಗವರ್ನಮೆಂಟಿನವರಿಗೆ ಸ್ಪಷ್ಟವಾಗಿ ಇಡಲ್ಪಡದೆ ಇರುವ, ಎಲ್ಲಾ ಸ್ಥಿರ ಸ್ವತ್ತುಗಳು ಆ ಬಳಿಕ ಮ್ಯುನಿಸಿಪಲ್ ಕಮ್ಮಿಷನರುಗಳ ವಶಕ್ಕೆ ಕೊಡಲ್ಪಡತಕ್ಕದ್ದು.

VIIನೆ ಅಧ್ಯಾಯ.—ನೇಮಗಳು ಮತ್ತು ಒಳ ನಿಬಂಧನೆಗಳು.

ದಂಡನೆಗಳು ಮುಂತಾದವುಗಳು.

ನೇಮಗಳನ್ನು ಮಾಡಲು ಗವರ್ನಮೆಂಟನವರಿಗೆ ಅಧಿಕಾರ.

38. ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆ ಗವರ್ನಮೆಂಟನವರು ಈ ಕೆಳಗೆ ಬರುವ ವಿಷಯಗಳನ್ನು ಕುರಿತು ಆಗಿಂದಾಗ್ಗೆ ನೇಮಗಳನ್ನು ಮಾಡಬಹುದು :—

(*a*) ಈ ರೆಗ್ಯುಲೇಷನಿನ ಚಲಾವಣೆಯ ಸಮ್ಮಂಧವಾದ ವಿಷಯಗಳಲ್ಲಾಗಲಿ ಇದರಲ್ಲಿ ಕಂಠೋಕ್ತವಾಗಿ ಏರ್ಪಡಿಸದೆ ಇರುವ ಸಂದರ್ಭಗಳಲ್ಲಾಗಲಿ, ಬೋರ್ಡುಗ, ಮ್ಯುನಿಸಿಪಲ್ ಕಮ್ಮಿಷನರುಗಳು, ಸರ್ಕಾರಿ ಉದ್ಯೋಗಸ್ಥರು ಮತ್ತು ಎಲ್ಲಾ ಇತರ ಜನಗಳು—ಇವರುಗಳ ಉಪದೇಶಕ್ಕೋಸ್ಕರ, ಮತ್ತು

(*b*) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರ.

ಒಳ ನಿಬಂಧನೆಗಳನ್ನು ಮಾಡಲು ಬೋರ್ಡಿಗೆ ಅಧಿಕಾರ.

39. (1) ಈ ರೆಗ್ಯುಲೇಷನಿಗೆ ವಿರೋಧವಿಲ್ಲದಂತೆಯು ಅಥವಾ ಗವರ್ನಮೆಂಟನವರಿಂದ ಮಾಡಲ್ಪಟ್ಟ ನೇಮಗಳಿಗೆ ವಿರೋಧವಿಲ್ಲದಂತೆಯು, ಬೋರ್ಡು ಆಗಿಂದಾಗ್ಗೆ ಒಳ ನಿಬಂಧನೆಗಳನ್ನು ಈ ಕೆಳಗೆ ಬರುವ ಸಂಗತಿಗಳ ಪರವಾಗಿ ಮಾಡಬಹುದು :—

(*a*) ಬೋರ್ಡಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಕಮ್ಮಿಟಿಗಳಿಗೆ ಒಪ್ಪಿಸಿಕೊಡೋಣವನ್ನು ಕ್ರಮಪಡಿಸುವದಕ್ಕೋಸ್ಕರ ;

(*b*) ಈ ರೆಗ್ಯುಲೇಷನಿನ ಪ್ರಕಾರ ಅವರಿಂದ ಕೆಲಸಕ್ಕೆ ಇಟ್ಟುಕೊಳ್ಳಲ್ಪಟ್ಟ ಜನಗಳ ಉಪದೇಶಕ್ಕೋಸ್ಕರ ;

(*c*) ಸರ್ಕಾರದ ನವಕರರಾಗಿ ಬೋರ್ಡಿನ ತಾಬೆಯಲ್ಲಿರುವರು ಹೊರ್ತು ಬೋರ್ಡಿನ ಉದ್ಯೋಗಸ್ಥರ ಮತ್ತು ಸೇವಕರುಗಳ ವಿಷಯವಾಗಿ, ರಜಾ, ರಜಾ ಅಲವನ್ಸುಗಳು, ಪೆನ್ಷನುಗಳು ಮತ್ತು ಗ್ರ್ಯಾಂಟುಗಳು—ಇವುಗಳನ್ನು ಕೊಡೋಣವನ್ನು ಮತ್ತು ಇತರ ವಿಷಯಗಳನ್ನು ಕ್ರಮಪಡಿಸುವದಕ್ಕೋಸ್ಕರ ;

(*d*) ಯಾವ ಉಪಾಯದಂತಾಗಲಿ, ಕೇವಲ ಬಡವರಾಗಿರುವ ಅಥವಾ ಕೂಲಿ ಮಾಡುವ ಜನಗಳಿಗೋಸ್ಕರ ಕಟ್ಟಲ್ಪಟ್ಟ ಮನೆಗಳನ್ನು ನಿರ್ವಹಿಸುವದು, ಉಪಯೋಗಿಸುವದು ಮತ್ತು ಕ್ರಮಪಡಿಸುವದು ಇವುಗಳಿಗೋಸ್ಕರ ;

(*e*) ಈ ಕೆಳಗೆ ಬರುವ ವಿಷಯಗಳನ್ನು ಕುರಿತು, ಕಟ್ಟಡಗಳನ್ನು ಕಟ್ಟಿಸೋಣವನ್ನು ಮತ್ತು ಪುನಹ ಕಟ್ಟಿಸೋಣವನ್ನು ಕ್ರಮ ಪಡಿಸುವದಕ್ಕೋಸ್ಕರ : ಏನಂದರೆ, ಕಟ್ಟುವದಕ್ಕೆ ಮುಂಚೆ ಕೊಡಬೇಕಾದ ನೋಟೀಸು, ಒಪ್ಪಿಸಲ್ಪಡಬೇಕಾದ ಪ್ಲಾನುಗಳು, ಹತ್ತರದಲ್ಲಿರುವ ಕಟ್ಟಡಗಳ ಪಂಕ್ತಿಯಲ್ಲಿರಬೇಕಾದ ಮುಂಭಾಗ, ಕಟ್ಟಡದ ಸುತ್ತಲು ಬಿಡಬೇಕಾದ ಪ್ರದೇಶ, ಅಸ್ತಿವಾರದ ಅಗಲ ಮತ್ತು ಮಟ್ಟ, ಕಟ್ಟಡದ ಗಟ್ಟಿತನ, ಉಪಯೋಗಿಸಬೇಕಾದ ಪದಾರ್ಥಗಳು, ಮತ್ತು ಗಾಳಿ ಆಡುವದಕ್ಕೂ ಮತ್ತು ನೀರು ಹರಿಯುವದಕ್ಕೂ ಮಾಡಬೇಕಾದ ಅವಕಾಶ; ಮತ್ತು

(*f*) ಸಾಮಾನ್ಯವಾಗಿ ಈ ರೆಗ್ಯುಲೇಷನಿನ ಉದ್ದೇಶಗಳನ್ನು ನೆರವೇರಿಸುವದಕ್ಕೋಸ್ಕರ.

(2) ಗವರ್ನಮೆಂಟನವರಿಂದ ಒಪ್ಪಲ್ಪಡುವ ತನಕ ಯಾವ ಒಳ ನಿಬಂಧನೆಯು ಜಾರಿಗೆ ಬರಕೂಡದು, ಮತ್ತು ಅವಿಚ್ಛಿನ್ನವಾಗಿ ಮೂರು ವಾರಗಳ ಪರ್ಯಂತರ ಸರ್ಕಾರಿ ಗೆಜೆಟ್ಟಿನಲ್ಲಿ ಆ ಒಳ ನಿಬಂಧನೆಯು ಪ್ರಕಟಸಲ್ಪಟ್ಟರೇನೆ ಹೊರ್ತು ಅದು ಗವರ್ನಮೆಂಟನವರಿಂದ ಮಂಜೂರ್ಮಾಡಲ್ಪಡಕೂಡದು.

(3) ಈ ಪ್ರಕರಣದಂತೆ ಮಾಡಿ ಪ್ರಕಟಸಲ್ಪಟ್ಟ ಯಾವ ಒಳ ನಿಬಂಧನೆಯನ್ನಾಗಲಿ ಯಾವ ಕಾಲದಲ್ಲಿಯಾದರೂ ರದ್ದು ಮಾಡಲು ಗವರ್ನಮೆಂಟನವರಿಗೆ ನ್ಯಾಯವಾಗಿರತಕ್ಕದ್ದು.

ನೇಮಗಳ ಮತ್ತು ಒಳ ನಿಬಂಧನೆಗಳ ಲೋಪಕ್ಕೆ ದಂಡನೆಗಳು.

40. 38 ಮತ್ತು 39ನೆ ಪ್ರಕರಣಗಳಂತೆ ಬೇರೆ ಬೇರೆಯಾಗಿ ಮಾಡಲ್ಪಟ್ಟ ನೇಮಗಳಲ್ಲಿಯೂ ಮತ್ತು ಒಳ ನಿಬಂಧನೆಗಳಲ್ಲಿಯೂ, ಅವುಗಳ ಲೋಪಕ್ಕಾಗಿ ತಮಗೆ ಯುಕ್ತವೆಂದು ತೋರಿಬರುವ ದಂಡನೆಗಳನ್ನು, ಗವರ್ನಮೆಂಟನವರು, ಮತ್ತು ಗವರ್ನಮೆಂಟನವರ ಅನುಮತಿಯಿಂದ ಬೋರ್ಡು, ವಿಧಿಸಬಹುದು ; ಆದರೆ ಒಂದು ನೇಮ ಅಥವಾ ಒಳ ನಿಬಂಧನೆಯ ಯಾವದೊಂದು ಲೋಪಕ್ಕಾದರು ನೂರು ರೂಪಾಯಿಗಳಿಗೆ ಮೇಲ್ಪಟ್ಟು ದಂಡನೆಯಾಗಕೂಡದು, ಮತ್ತು ನಿಲ್ಲದೆ ನಡಿಯುವ ಲೋಪದ ವಿಷಯದಲ್ಲಿ, ಬೋರ್ಡಿನಿಂದ ತಪ್ಪಿತಸ್ಥನಿಗೆ ಆ ಲೋಪವನ್ನು ಕುರಿತು ನೋಟೀಸು ಕೊಡಲ್ಪಟ್ಟ ತರುವಾಯ, ಪ್ರತಿ ಒಂದು ದಿವಸಕ್ಕೋಸ್ಕರ ಕೊಡುವ ದಂಡನೆಯು ಐವತ್ತು ರೂಪಾಯಿಗಳಿಗೆ ಹೆಚ್ಚದಂತೆ ಇರತಕ್ಕದ್ದು.

ನೇಮಗಳು ಮತ್ತು ಒಳ ನಿಬಂಧನೆಗಳು ತೋರಿಸಲ್ಪಡಬೇಕು.

41. ಸದರಿ ನೇಮಗಳು ಮತ್ತು ಒಳ ನಿಬಂಧನೆಗಳು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಮುದ್ರಿಸಲ್ಪಟ್ಟು ಅನುಕೂಲವಾದ ಸ್ಥಳಗಳಲ್ಲಿ ತಗಲಹಾಕಲ್ಪಟ್ಟಿರಬೇಕು.

42. ಬೋರ್ಡಿನೊಂದಿಗಾಗಲಿ, ಬೋರ್ಡಿನಿಂದಾಗಲಿ, ಬೋರ್ಡಿನ ಪರವಾಗಿಯಾಗಲಿ ಯಾವ ಗುತ್ತಿಗೆ ಅಥವಾ ಉದ್ಯೋಗದಲ್ಲಾದರೂ ಯಾವ ಭಾಗವನ್ನೋ ಅಥವಾ ಬಾಧ್ಯತೆಯನ್ನೋ, ಯಾವ ಮನುಷ್ಯನಾದರು ಬಂದು ಟ್ರಸ್ಟಿಯಾಗಿದ್ದು ಅಥವಾ ಬೋರ್ಡಿನ ಬಂದು ಉದ್ಯೋಗಸ್ಥ ಅಥವಾ ಸೇವಕನಾಗಿದ್ದು, ಪ್ರತ್ಯಕ್ಷವಾಗಿ ಅಥವಾ ಪರಭಾರೆಯಾಗಿ ಸಂಪಾದಿಸಿದ್ದಲ್ಲಿ, ಇಂಡಿಯನ್ ಪೀನಲ್ ಕೋಡಿನ 168ನೆ ಪ್ರಕರಣದಲ್ಲಿ ದಂಡನೆಗೆ ಗುರಿಮಾಡಲ್ಪಟ್ಟ ಅಪರಾಧವನ್ನು ಮಾಡಿರುತ್ತಾನೆಂಬದಾಗಿ ಎಣಿಸಲ್ಪಡತಕ್ಕದ್ದು;

ಬೋರ್ಡಿನೊಂದಿಗೆ ಇರುವ ಗುತ್ತಿಗೆಗಳಲ್ಲಿ ಬಾಧ್ಯತೆಯನ್ನುಂಟಾಗಿರುವದಕ್ಕೆ ದಂಡನೆ.

ಆದರೆ 8 (1) (d) ಪ್ರಕರಣದ (i), (ii) ಮತ್ತು (iii) ಮರಿ ಕಲಂಗಳಲ್ಲಿ ಹೇಳಲ್ಪಟ್ಟ ಯಾವದೊಂದು ವಿಷಯದಲ್ಲಾದರು ಒಬ್ಬ ಮನುಷ್ಯನು ಬಂದು ಭಾಗವನ್ನಾಗಲಿ ಅಥವಾ ಬಾಧ್ಯತೆಯನ್ನಾಗಲಿ ಉಂಟಾಗಿರೋಣದರ ಮಾತ್ರದಿಂದಲೇನೆ ಅಂಥಾ ಗುತ್ತಿಗೆಯು ಅಥವಾ ಉದ್ಯೋಗದಲ್ಲಿ ಭಾಗವನ್ನೋ ಅಥವಾ ಬಾಧ್ಯತೆಯನ್ನೋ ಉಂಟಾಗಿರುತ್ತಾನೆಂದು ಅವನು ಎಣಿಸಲ್ಪಡಕೂಡದು.

ನಿಯಮ.

43. ಯಾವ ಮನುಷ್ಯನೆ ಆಗಲಿ ಈ ರೆಗ್ಯುಲೇಷನಿನಂತೆ ಉದ್ಯೋಗದಲ್ಲಿಡಲ್ಪಟ್ಟು, ಇಂಡಿಯನ್ ಪೀನಲ್ ಕೋಡಿನ 21ನೆ ಪ್ರಕರಣದ ಅರ್ಥದಲ್ಲಿ ಸರ್ಕಾರದ ಸೇವಕನಾಗಿಲ್ಲದೆ—ಯಾವ ಸರ್ಕಾರಿ ಕೆಲಸವನ್ನು ಮಾಡುವದಕ್ಕಾಗಿ ಯಾ ಮಾಡದೆ ಇರುವದಕ್ಕಾಗಿ, ಅಥವಾ ತನ್ನ ಸರ್ಕಾರಿ ಕೆಲಸಗಳನ್ನು ನಡಿಸುವದರಲ್ಲಿ ಯಾವ ಮನುಷ್ಯನಿಗಾದರೂ ಉಪಕಾರವನ್ನಾಗಲಿ ಯಾ ನಿಗ್ರಹವನ್ನಾಗಲಿ ಮಾಡುವದಕ್ಕಾಗಿ, ಅಥವಾ ಬೋರ್ಡಿನೊಂದಿಗೊ ಯಾ ಸರ್ಕಾರದ ಸೇವಕನಂತೆ ಒಬ್ಬ ಸರ್ಕಾರದ ಸೇವಕನೊಂದಿಗೊ ಯಾ ಗವರ್ನಮೆಂಟಿನವರೊಂದಿಗೊ ಯಾವ ಮನುಷ್ಯನಿಗಾದರೂ ಯಾವ ಉಪಕಾರವನ್ನಾಗಲಿ ಯಾ ವಿರೋಧವನ್ನಾಗಲಿ ಮಾಡುವದಕ್ಕಾಗಿ ಯಾ ಮಾಡಲು ಯತ್ನಿಸುವದಕ್ಕಾಗಿ, ತನಗೇನೊ ಯಾ ಇತರ ಮನುಷ್ಯನಿಗೇನೊ, ನ್ಯಾಯವಾದ ಇಷ್ಟಾಪೂರ್ತಿ ವಿನಹ, ಯಾವ ಪ್ರತಿ ಫಲವನ್ನಾಗಲಿ ಬಂದು ಬಹುಮಾನದಹಾಗೆ, ಯಾವ ಇತರ ಮನುಷ್ಯನಿಂದಲಾದರೂ, ಅಂಗೀಕರಿಸುತ್ತಾನೊ ಯಾ ಸಂಪಾದಿಸುತ್ತಾನೊ, ಅಥವಾ ಅಂಗೀಕರಿಸಲು ಒಪ್ಪುತ್ತಾನೊ ಯಾ ಸಂಪಾದಿಸಲು ಯತ್ನಿಸುತ್ತಾನೊ—ಅವನು, ಬಂದು ಸರ್ಕಾರದ ಸೇವಕನು ಅಂಥಾ ಅಪರಾಧವನ್ನೇ ಮಾಡಿರುವದಕ್ಕೆ ಇಂಡಿಯನ್ ಪೀನಲ್ ಕೋಡಿನಲ್ಲಿ ಯಾವ ದಂಡನೆಗೆ ಗುರಿಮಾಡಲ್ಪಡುತ್ತಾನೊ ಅದೆ ದಂಡನೆಗೆ ಗುರಿಯಾಗಿರತಕ್ಕದ್ದು.

ಅನ್ಯಾಯವಾದ ಇನಾಂ ಅಥವಾ ಲಂಚವನ್ನು ತೆಗದುಕೊಳ್ಳುವದಕ್ಕೆ ದಂಡನೆ.

44. (1) ಈ ರೆಗ್ಯುಲೇಷನಿಗೆ ವಿರೋಧವಾಗಿಯಾಗಲಿ ಅಥವಾ ಅದರಂತೆ ಮಾಡಲ್ಪಟ್ಟ ಯಾವ ನೇಮಕ್ಕೆ ಅಥವಾ ಬಳನಿಬಂಧನೆಗೆ ವಿರೋಧವಾಗಿಯಾಗಲಿ ಇರುವ ಎಲ್ಲಾ ಅಪರಾಧಗಳು ಸಕೆಂಡ ಕ್ಲಾಸ ಮ್ಯಾಜಿಸ್ಟ್ರೇಟನ ಅಧಿಕಾರಗಳಿಗೆ ಕಮ್ಮಿ ಇಲ್ಲದ ಅಧಿಕಾರಗಳುಳ್ಳ ಯಾವ ಮ್ಯಾಜಿಸ್ಟ್ರೇಟನಿಂದಾಗಲಿ ಹಿಡಿಯಲ್ಪಡತಕ್ಕದ್ದು.

ಅಪರಾಧಗಳನ್ನು ಹಿಡಿಯೋಣ.

(2) ಅಪರಾಧಿಯಿಂದ ವಸೂಲ್ಮಾಡಲ್ಪಟ್ಟ ಎಲ್ಲಾ ಜುಲುಮಾನೆ ಹಣಗಳು ಸಿಟಿ ಆಫ್ ಮೈಸೂರು ಇಂಪ್ರೂವ್ಮೆಂಟ್ ಫಂಡಿನ ಜಮೆಗೆ ಬರತಕ್ಕದ್ದು.

ಜುಲುಮಾನೆ, ವಸೂಲಿಗಳು ಇಂಪ್ರೂವ್ಮೆಂಟ್ ಫಂಡಿನ ಜಮೆಗೆ ಬರತಕ್ಕದ್ದು.

45. ಬೋರ್ಡಿಗೆ ಕೊಡಲ್ಪಟ್ಟ ಅಥವಾ ಬೋರ್ಡಿನಿಂದ ಸಂಪಾದಿಸಲ್ಪಟ್ಟ ಸ್ವತ್ತಿನ ಬಾಡಿಗೆಗಳು, ಆದಾಯಗಳು, ಅಥವಾ ಕ್ರಯ ಹುಟ್ಟುವಳಿಗಳು, ಇವುಗಳಿಗೋಸ್ಕರವಾಗಿಯಾಗಲಿ, ಅಥವಾ ಇತರ ಯಾವ ವಿಧವಾಗಿಯಾಗಲಿ, ಯಾವ ಮನುಷ್ಯನಿಂದಲಾದರೂ ಸಲ್ಲತಕ್ಕದ್ದಾಗಿದ್ದು, ಮತ್ತು ಚೇರ್‌ಮೆನ್ನಿನ ತಗಾದೆ ನೋಟಸು ಅಂಥಾ ಮನುಷ್ಯನ ಮೇಲೆ ಜಾರಿಯಾದ ತಾರೀಖಿನಿಂದ 15 ದಿವಸಗಳಾದ ಬಳಿಕ ಬಾಕಿಯುಲ್ಲಿರುವ ಎಲ್ಲಾ ಹಣಗಳನ್ನು ಈ ಕೆಳಗೆ ಬರುವ ಮಾರ್ಗಗಳ ಪೈಕಿ ಯಾವದೊಂದು ಮಾರ್ಗದಿಂದಾಗಲಿ ಅಥವಾ ಅಧಿಕ ಮಾರ್ಗಗಳಿಂದಾಗಲಿ ವಸೂಲು ಮಾಡಲ್ಪಡಬಹುದು, ಏನಂದರೆ—(1) ಯಾವ ಡಿಸ್ಟ್ರಿಕ್ಟನಲ್ಲಿ ವ್ಯವಹಾರ ನಡಿಸಬೇಕಾಗಿದೆಯೊ ಅಲ್ಲಿನ ಡೆಪ್ಯುಟಿ ಕಮಿಷನರಿಗೆ ಚೇರಮೆನ್ನು ಬರಹಮೂಲಕ ಎಪ್ಲಿಕೇಷನು ಮಾಡಿದ ನಂತರ, ನೆಲಕಂದಾಯದ ನಿಲುವಿನೋಪಾದಿಯಲ್ಲಿ; (2) ಚೇರಮೆನ್ನಿನಿಂದಾಗಲೀ ಚೇರಮೆನ್ನಿನ ಹುಕುಮಿನಂತಾಗಲೀ ಅಂಥಾ ಮನುಷ್ಯನ ಚರಸ್ವತ್ತಿನ ಜಫ್ತಿ, ಮಾರಾಟ, ಇವುಗಳಿಂದ; (3) ಅಂಥಾ ಮನುಷ್ಯನ ಮೇಲೆ ಚೇರಮೆನ್ನು ಸಿವಿಲ್ ದಾವೆ ಮಾಡುವದರಿಂದ.

ಇಂಪ್ರೂವ್ಮೆಂಟ್ ಫಂಡಿಗೆ ಸಲ್ಲತಕ್ಕ ಹಣಗಳ ವಸೂಲಿ.

46. (1) ಈ ರೆಗ್ಯುಲೇಷನ್ ಪ್ರಕಾರ, ಅಥವಾ ಅದರಂತೆ ಆದ ಬಂದು ನಿಯಮ ಯಾ ಬಳನಿಬಂಧನೆಯ ಪ್ರಕಾರ, ಮಾಡಲ್ಪಟ್ಟ ಅಥವಾ ಮಾಡಲ್ಪಟ್ಟದ್ದಾಗಿ ಭಾವವಾಗುವ ಯಾವದಕ್ಕೋಸ್ಕರವಾಗಿ ಯಾದರೂ ಯಾರಮೇಲೆ ವ್ಯವಹಾರವೊ ಅಂಥಾ ಮನುಷ್ಯನಿಗೆ, ಉದ್ದೇಶಿಸಲ್ಪಟ್ಟ ವ್ಯಾಜ್ಯವನ್ನು ಮತ್ತು ವ್ಯಾಜ್ಯಕಾರಣವನ್ನು ಕುರಿತು ಬರಹಮೂಲಕವಾದ ನೋಟಿಸ್ ಪಾವತಿ ಮಾಡಿದ ತರುವಾಯ ಬಂದು ತಿಂಗಳು ಕಳೆದ ಹೊರ್ತು, ಅಥವಾ ಅಂಥಾ ವ್ಯಾಜ್ಯಕಾರಣ ಹುಟ್ಟಿದ ಆರು ತಿಂಗಳ ಬಳಿಕ, ಅಥವಾ ಸಾಕಾದ ನಷ್ಟ ಪರಿಹಾರದ್ರವ್ಯ ಕೊಡಲ್ಪಟ್ಟ ಬಳಿಕ, ಅಂಥಾ ಮನುಷ್ಯನ ಮೇಲೆ ಯಾವ ವ್ಯವಹಾರವುತರಲ್ಪಡಲಾಗದು.

ದಾವೆಗಳ ಲಿಮಿಟೇಷನ್.

(2) ಬೋರ್ಡಿನಮೇಲಾಗಲಿ, ಯಾವ ಟ್ರಸ್ಟಿಯಮೇಲಾಗಲಿ ಅಥವಾ ಬೋರ್ಡಿನ ಉದ್ಯೋಗಸ್ಥ ಯಾ ಸೇವಕನಮೇಲಾಗಲಿ, ಈ ರೆಗ್ಯುಲೇಷನ್ ಪ್ರಕಾರವಾಗಿಯಾದರೂ ಅಥವಾ ಅದರಂತೆಯಾದ ಯಾವ ನೇಮದ ಯಾ ಒಳ ನಿಬಂಧನೆಯ ಪ್ರಕಾರವಾಗಿಯಾದರು ಅವನಿಂದಲೊ ಯಾ ಅವರಿಂದಲೊ, ಶ್ರದ್ಧೆಯಿಂದಲೂ ಮತ್ತು ಲಕ್ಷ್ಯದಿಂದಲೂ ಮಾಡಲ್ಪಟ್ಟ ಯಾವ ಕಾರ್ಯಕ್ಕೋಸ್ಕರವೂ ಕೂಡ ನಷ್ಟಕ್ಕೆ ವ್ಯವಹಾರವು ತರಲ್ಪಡಲಾಗದು.

ನಷ್ಟಪರಿಹಾರದ್ರವ್ಯಗಳಿಗಾಗಿ ದಾವೆ ಮಾಡಲು ಅಡ್ಡಿ ಇರುವ ಸಂದರ್ಭಗಳು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ಸೀಮೆಯ ದಿವಾನರು.

ಈ ರೆಗ್ಯುಲೇಷನಿನ ಉದ್ದೇಶಗಳು ಮತ್ತು ಕಾರಣಗಳು—ಇವುಗಳ ವಿವರ.

G. O. No. 4168–79—L. F. 36–02, dated 18th September 1902.

1902ನೆ ವರುಷದ ಸೆಪ್ಟಂಬರ್ ತಿಂಗಳಲ್ಲಿ ಗವರ್ನಮೆಂಟನವರು ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕೋಸ್ಕರ ಒಂದು ಉಪಾಯವನ್ನು ಮಾಡುವದಕ್ಕಾಗಿ ಒಂದು ಕಮ್ಮಿಟಿಯನ್ನು ಏರ್ಪಡಿಸಿ, ಅದರ ಕಾರಣಗಳನ್ನು ತಮ್ಮ ನೇಮಕದಲ್ಲಿ ಈರೀತಿಯಾಗಿ ವ್ಯಕ್ತಪಡಿಸಿದರು :—

"ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಬಹಳ ಹಣಗಳು ಖರ್ಚುಮಾಡಲ್ಪಟ್ಟಾಗ್ಯು ಅದು, ಪರಂಪರೆಯಾಗಿ ಬರುವ ಪ್ರತಿ ಒಂದು ವರುಷದಲ್ಲಿಯೂ ಪ್ಲೇಗ್ ಉಪಾಧಿಗೆ ಇನ್ನೂ ಗುರಿಯಾಗಿರುವದು, ದುರ್ದಶೆಯಾಗಿದೆ. ಆ ಸ್ಥಳದ ಆರೋಗ್ಯವನ್ನು ಸ್ಥಿರಪಡಿಸುವದಕ್ಕೆ, ಆರೋಗ್ಯ ರಕ್ಷಣಾಕರವಾದ ತಿದ್ದುಪಾಟುಗಳನ್ನು ಶ್ರದ್ಧೆಯಿಂದ ಆಲೋಚಿಸಿ, ಅವಿಚ್ಛಿನ್ನವಾದ ಪ್ರಯತ್ನಗಳಪೂರ್ವಕ ಅವಲಂಬಿಸುವದು ವಿನಹ ಬೇರೆ ಯಾವ ಉಪಾಯವೂ ಇಲ್ಲವೆಂದು, ಗವರ್ನಮೆಂಟನವರು ಅಭಿಪ್ರಾಯ ಪಡುತ್ತಾರೆ. ಕೇವಲ ವತ್ತಾಗಿ ವಸಿಸಲ್ಪಟ್ಟ ಪ್ರದೇಶಗಳನ್ನು ಬೈಲು ಮಾಡುವದರಲ್ಲಿ ಮನೆಗಳನ್ನು ಕೆಡವುವುದು ಜನಗಳನ್ನು ಆಸರೆ ಇಲ್ಲದೆ ತಿರುಗುವಹಾಗೆ ಮಾಡುವದುಮಾತ್ರವೆ ಅಲ್ಲದೆ, ಪಟ್ಟಣವನ್ನು ಸರಿಯಾಗಿ ವಿಸ್ತರಿಸಿ ಮನೆಗಳನ್ನು ಕಟ್ಟುವದಕ್ಕೆ ಅನುಕೂಲಗಳನ್ನು ಹೊಂದಿಸಿ ಕೊಡುವದು ಸಹ ಆಗಬೇಕಾಗಿದೆ. ಆ ಪಟ್ಟಣವನ್ನು ಉತ್ತಮಪಡಿಸುವದಕ್ಕೋಸ್ಕರ ಅವಶ್ಯಕವಿರುವ ಹಣವನ್ನೆಲ್ಲಾ ಮ್ಯೂನಿಸಿಪಾಲಿಟಿಯವರು ಒದಗಿಸುವದು ಅಸಾಧ್ಯವಾಗಿ ಕಾಣಬರುತ್ತೆ. ದೇಶಕ್ಕೆಲ್ಲಾ ಪ್ರಧಾನಪಟ್ಟಣವಾಗಿರುವದರಿಂದ ಅದಕ್ಕೆ ಉಂಟಾದ ಮಹತ್ವವನ್ನು ಆಲೋಚನೆಗೆ ತೆಗದುಕೊಂಡು, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರು, ಅಂಥಾ ವಿಶೇಷ ಧನವ್ಯಯದಲ್ಲಿ ಅಧಿಕಾಂಶವು ದೇಶಕ್ಕೆಲ್ಲಾ ಸೇರುವದು ಉಚಿತವೆಂದು ಎಣಿಸುತ್ತಾರೆ. ಅಗತ್ಯವಾಗಿರುವ ಖರ್ಚಿಗೋಸ್ಕರ ಎಷ್ಟುಮಟ್ಟಿಗೆ ಮ್ಯೂನಿಸಿಪಲ್ ಉಪಪತ್ತಿಗಳಿಂದ ಸಹಾಯವು ನ್ಯಾಯವಾಗಿ ನಿರೀಕ್ಷಿಸಲ್ಪಡಬಹುದಾದ್ದನ್ನು ಗೊತ್ತು ಮಾಡುವದು, ವ್ಯಯಮಾಡಬೇಕಾದ ಒಟ್ಟು ಹಣವೇನೆಂಬುವದನ್ನು ಸುಮಾರಾಗಿ ತಿಳದಮೇಲೇನೆ, ಶಕ್ಯವಾಗುತ್ತೆ."

"ಆ ಉಪಾಯವು ಪುನರ್ವಿಚಾರವಿಲ್ಲದಂತೆ ಈಗಲೇನೆ ಸಂಪೂರ್ಣವಾಗಿ ಆಲೋಚಿಸಲ್ಪಟ್ಟು ಪಕ್ವಪಡಿಸಲ್ಪಡಬಹುದು. ಬೇಕಾದ ಹಣವನ್ನೆಲ್ಲಾ ಒಂದೇ ಕಾಲದಲ್ಲ ಒದಗಿಸುವದು ಸರ್ಕಾರಕ್ಕೂ ಕೂಡ ಅಶಕ್ಯವಾಗಿರುವದು ; ಆದರೆ ಅದರ ವ್ಯಯವು ಕೆಲವು ವರುಷಗಳಕಾಲಕ್ಕೆಲ್ಲಾ ಪ್ರವರ್ತಿಸುವಂತೆ ಮಾಡಬಹುದು."

"ತಿದ್ದುಪಾಟುಗಳು ಪ್ರಯೋಜನಕರವಾಗಿ ಉದ್ದೇಶಿಸಲ್ಪಡತಕ್ಕಂಥಾ ಸಾಧಾರಣರೀತಿ ಏನಂದರೆ :—ಪಟ್ಟಣದ ಹೊಲೆಗೇರಿಗಳನ್ನು ಎಲ್ಲೆಲ್ಲಿದ್ದರೂ ಮೊದಲು ಉತ್ತಮಪಡಿಸುವದರಲ್ಲಿ, ಆರೋಗ್ಯ ಹಾನಿಕರವಾದ ಕಟ್ಟಡಗಳನ್ನೆಲ್ಲಾ ಕೆಡವಿ, ಮಿತಿಮೀರಿ ಗುಂಪುಗುಂಪಾಗಿರೋಣವನ್ನು ನಿಷೇಧಿಸಿ, ಕೆಟ್ಟ ಬಚ್ಚಲುಗಳನ್ನ ಇರದಂತೆ ಮಾಡಿ ಮತ್ತು ಅಪೂರ್ಣವಾಗಿರುವ ಆರೋಗ್ಯ ರಕ್ಷಣೆಯನ್ನು ಪೂರಯಿಸಬೇಕು. ಅಂಥಾ ಪ್ರದೇಶಗಳಿಂದ ಹೊರಡಿಸಲ್ಪಟ್ಟ ಹೆಚ್ಚು ಜನಗಳಿಗೆ ಸರಿಯಾದ ಸ್ಥಳಗಳನ್ನು ಒದಗಿಸಿಕೊಡಬೇಕು ; ಮತ್ತು ಬಡವರಿಗೆ ಸರಿಯಾದಮನೆಗಳನ್ನು ಕಟ್ಟಿಕೊಳ್ಳುವದಕ್ಕೋಸ್ಕರ, ಸಾಧ್ಯವಾದ ಮತ್ತು ತಕ್ಕಮಟ್ಟಿಗೆ ಉಪಯೋಗಕರವಾದ ಸಹಾಯವನ್ನು ಮಾಡಬೇಕು. ಸರಿಯಾಗಿ ನೀರು ಹರಿಯತಕ್ಕ ಬಚ್ಚಲು ಸಮುದಾಯವನ್ನ ಕುರಿತು ಒಂದು ವಿಪುಲವಾದ ಉಪಾಯವನ್ನು ಕಲ್ಪಿಸಬೇಕಾಗಿರುತ್ತೆ, ಆದರೆ ಈ ಪ್ರಯತ್ನದಲ್ಲಿ ಪಟ್ಟಣದ ಅಗತ್ಯಗಳನ್ನು ತಕ್ಕಷ್ಟುಮಟ್ಟಿಗೆ ಹೊಂದಿಸಿಕೊಡುವದು ಪ್ರಧಾನವಾಗಿರಬೇಕೇ ಹೊರ್ತು, ಭಾವಕಲ್ಪಿತವಾಗಿದ್ದಾಗ್ಯೂ ಅಪ್ರಯೋಜಕವಾಗಿರುವ ಲೋಪರಹಿತತ್ವವನ್ನು ಅವಶ್ಯವಾಗಿ ಸಾಧಿಸಬೇಕಾದ್ದೇನು ಇಲ್ಲ.

"ಇವುಗಳೆಲ್ಲಾ ಸಾಮಾನ್ಯವಾದ ನಿರೂಪಣೆಗಳು ; ಆದರೆ ಗವರ್ರ್ನಮೆಂಟಿನವರು ಏರ್ಪಡಿಸಬೇಕೆಂದು ಸಂಕಲ್ಪಿಸಿರುವ ಕಮ್ಮಿಟಿಯವರಿಗೆ, ಈ ವಿಷಯದ ಶಾಸ್ತ್ರೋಕ್ತವಾಗಿಯೂ ಅಭ್ಯಾಸಸಿದ್ಧವಾಗಿಯೂ ಇರುವ ವಿವಿಧಾಕೃತಿಗಳನ್ನೆಲ್ಲಾ ಚನ್ನಾಗಿಯೋಚಿಸಿ, ತಕ್ಕಷ್ಟು ವಿವರವಾಗಿ ಒಂದು ಉಪಾಯವನ್ನು ಗವರ್ರ್ನಮೆಂಟಿನವರ ಆಲೋಚನೆ ಬಗ್ಗೆ ಮಾಡುವದು, ಕರ್ತವ್ಯವಾಗಿರುತ್ತೆ. ಕೆಳಗೆ ಹೆಸರು ಹೇಳಲ್ಪಟ್ಟ ಪ್ರೆಸಿಡೆಂಟರು ಮತ್ತು ಮೆಂಬರುಗಳು, ಸಾಧ್ಯವಾದಷ್ಟು ತ್ವರಿಯವಾಗಿ ಈ ಕೆಲಸದಲ್ಲಿ ಪ್ರವರ್ತಿಸಿ ತಮ್ಮ ಅಭಿಪ್ರಾಯಗಳನ್ನೂ, ಬಹುಮಟ್ಟಿಗೆ ತಪ್ಪಿಲ್ಲದಿರುವ ವೆಚ್ಚದ ಮದಿಪನ್ನೂ ಸಹ ಒಪ್ಪಿಸಬೇಕೆಂದು ಗವರ್ರ್ನಮೆಂಟಿನವರು ಕೋರುತ್ತಾರೆ. ಯಾವ ಕ್ರಮದಲ್ಲಿ, ಯಾವ ವಿಧಾನದಲ್ಲಿ, ಆ ಉಪಾಯವನ್ನ ನೆರವೇರಿಸುವದು ತಮ್ಮ ಅಭಿಪ್ರಾಯದಲ್ಲಿ ಉತ್ತಮವಾಗಿ ತೋರಿಬರುವದನ್ನು ಕೂಡ ಅವರು ಸೂಚಿಸಬೇಕು."

ಅದೇ ಪ್ರಕಾರ, ಪಟ್ಟಣದ ಅನೇಕ ಭಾಗಗಳಲ್ಲಿ ಮಾಡಬೇಕಾದ್ದೆಂದು ತಾವು ಅಭಿಪ್ರಾಯಪಟ್ಟಿರುವ ತಿದ್ದುಪಾಟುಗಳನ್ನೆಲ್ಲಾ ತೋರಿಸಿ ವಿಸ್ತಾರವಾದ ಭಾವಗಳನ್ನನುಸರಿಸಿರತಕ್ಕ ಕೆಲವು ಉಪಾಯಗಳನ್ನು, ಕಮ್ಮಿಟಿಯವರು ಒಪ್ಪಿಸಿರುತ್ತಾರೆ. ಆ ಉಪಾಯಗಳು ಈಗ ಗವರ್ರ್ನಮೆಂಟಿನವರ ವಿಚಾರಣೆಯಲ್ಲಿ ಇವೆ.

ಆ ಒಟ್ಟು ಉಪಾಯವನ್ನು ಯೋಚಿಸಿದರೆ ಅದರಲ್ಲಿ,—ಹೊಸ ಬೀದಿಗಳನ್ನು ಮಾಡುವದು, ಇರುವ ಬೀದಿಗಳನ್ನು ಬದಲಾಯಿಸುವದು, ಅನಾರೋಗ್ಯವಾದ ಕಟ್ಟಡಗಳನ್ನು ತೆಗದುಹಾಕುವದು ಅಥವಾ ಬದಲಾಯಿಸುವದು, ಸರಿಯಾದ ಬಚ್ಚಲುಗಳನ್ನು ಮತ್ತು ಹೆಚ್ಚಾಗಿ ಗಾಳಿಬೀಸುವದಕ್ಕೂ ವಿಹಾರ ವಿಶ್ರಮಕ್ಕೂ ಬೇಕಾದ ಬೈಲುಭೂಮಿಗಳನ್ನು ಏರ್ಪಡಿಸುವದು, ಆ ಉಪಾಯವನ್ನು ನೆರವೇರಿಸುವದರಲ್ಲಿ ಸ್ಥಳ ತಪ್ಪಿಸಲ್ಪಟ್ಟ ಕೇವಲ ಬಡವರಿಗೂ ಕೂಲಿ ಮಾಡುವ ಜನಗಳಿಗೂ ಆರೋಗ್ಯರಕ್ಷಕವಾದ ಮನೆಗಳನ್ನು ಕಟ್ಟಿಸುವದು—ಇವುಗಳೆಲ್ಲಾ ಅಡಗಿರುತ್ತವೆ.

ಆ ಉಪಾಯವನ್ನು ಜಾರಿಗೆ ತರುವದಕ್ಕಾಗಿ ಅನೇಕ ಗತ್ಯಂತರಗಳು ತೋರಿಬರುತ್ತವೆ. ಆ ಕೆಲಸವನ್ನು ಕೆಳಗೆ ಬರುವ ಯಾವ ಅಧಿಕಾರಿಗಳಿಗಾಗಲಿ, ಅಥವಾ ಅವರ ಪೈಕಿ ಜೊತೆ ಮಾಡಲ್ಪಟ್ಟ ಕೆಲವರಿಗಾಗಲಿ ಕೊಡಬಹುದು : ಯಾತಂದರೆ, ಡೆಪ್ಯುಟಿ ಕಮ್ಮಿಷನರು, ಡಿಸ್ಟ್ರಿಕ್ಟು ಆಫಿಸರುಗಳು, ಸಿಟಿ ಮ್ಯೂನಿಸಿಪಾಲಿಟಿಯವರು, ಆ ಉದ್ದೇಶಕಾಗಿ ಪ್ರತ್ಯೇಕವಾಗಿ ನೇಮಿಸಲ್ಪಟ್ಟ ಒಬ್ಬ ಆಫೀಸರು, ಅಥವಾ ಪಬ್ಲಿಕ್ ವರ್ಕ್ಸ ಡಿಪಾರ್ಟುಮೆಂಟಿನವರು. ಪರಂತು ಈ ಯಾವ ಸಂದರ್ಭದಲ್ಲಾಗಲಿ ಇವರನ್ನು ಪ್ರತ್ಯೇಕವಾಗಿ ಅಥವಾ ಜೊತೆಯಾಗಿ ಈ ಕೆಲಸದಲ್ಲಿ ಬಿಡುವದಕ್ಕೆ ಅಭ್ಯಂತರಗಳು ಇರುತ್ತವೆ. ಮ್ಯುನಿಸಿಪಲ್ ಸಿಬ್ಬಂದಿಗೆ ತಾವು ವಾಡಿಕೆಯಾಗಿ ಮಾಡುವ ಉದ್ಯೋಗವೇ ಸಂಪೂರ್ಣವಾಗಿದೆ. ಮ್ಯುನಿಸಿಪಲ್ ಕಮ್ಮಿಷನರುಗಳು ಪುರ್ಸತಾಗಿರುವ ಕಾಲವು ಕೇವಲ ಸಂಕೋಚವಾಗಿರುವದರಿಂದ, ಅವರಿಗೆ ಅಧಿಕ ಕಾರ್ಯವನ್ನುಂಟುಮಾಡುವದು ಅನುಚಿತವಾಗಿರುತ್ತೆ. ಡೆಪ್ಯುಟಿ ಕಮ್ಮಿಷ[illegible] ವಿಷಯದಲ್ಲಿಯೂ, ಅವರ ಅಸಿಸ್ಟೆಂಟರುಗಳ ವಿಷಯದಲ್ಲಿಯೂ, ಇದೇ ಅಭ್ಯಂತರಗಳು ಇನ್ನು ಅಧಿಕವಾಗಿ ಪ್ರಯೋಗವಾಗು[illegible] ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನವರು ಆ ಉಪಾಯದ ಇಂಜನೀರಿನ ಭಾಗವೆಲ್ಲಾ ಸುದಾರಿಸಿಕೊಳ್ಳಬಹುದು. ಆದರೆ [illegible]ಂಜನೀರಿನ ಭಾಗವು ಅತ್ಯಂತ ಕಷ್ಟವಾದ್ದಾಗಿಯೇ ಆಗಲಿ ಅಥವಾ ಕೇವಲ ವಿಶೇಷವಾದ್ದಾಗಿಯೇ ಆಗಲಿ ಇರುವದಿಲ್ಲಾ. [illegible]ಯೋಚಿಸತಕ್ಕದ್ದಾಗಿರುವ ಕಾರ್ಯಭಾರಿಕ ವಿಷಯಗಳಲ್ಲದೆ ಅರ್ಥನಿರ್ವಾಹ ಕ್ರಮ ಸಮ್ಮಂಧಪಟ್ಟ ಸಂಗತಿಗಳು ಕೂಡ, ಸರ್ಕಾರಿ ಮತ್ತು ಖಾಸಗಿ ಹಕ್ಕುಗಳನ್ನು ಬಹಳವಾಗಿ ನಿರ್ವಹಿಸೋಣದರಲ್ಲಿ ಅನಂತವಾಗಿ, ಅಡಗಿಕೊಂಡಿವೆ. ಅಂಥಾ ವಿಚಾರಗಳನ್ನು ನಡಿಸುವದು ಮಾತ್ರವಲ್ಲದೆ ಜನಗಳನ್ನು ಆರೋಗ್ಯ ರಕ್ಷಣಾಧಿಕ್ಯವುಳ್ಳಪ್ರದೇಶಗಳಲ್ಲಿ ವಸಿಸುವ ಹಾಗೆ ಮಾಡುವದು ಕೂಡ ಆಗಬೇಕಾಗಿದೆ. ಪ್ರತ್ಯೇಕವಾಗಿ ನೇಮಕವಾದ ಒಬ್ಬ ಉದ್ಯೋಗಸ್ಥನಿಗೆ ಅಂಥಾ ಭಾರವನ್ನ ವಹಿಸುವದು ಅಪೇಕ್ಷಿಸತಕ್ಕದ್ದಾಗಿಲ್ಲ. ಈ ಪ್ರಯತ್ನದ ಕಾರ್ಯಸಿದ್ಧಿಗಾಗಿ, ಸಾಕ್ಷಾತ್ತಾಗಿ ಸಮ್ಮಂಧಪಡುವವರು ಮಾತ್ರವಲ್ಲದೆ ಸರ್ವಜನರು ಕೂಡ ಸಾಧ್ಯವಿರುವ ಮಟ್ಟಿಗೆ ಏಕೀಭವಿಸಿರಬೇಕಾದ್ದು ಆವಶ್ಯವಾಗಿದೆ. ಅಂಥಾ ಸಹಾನುಭವವು ಬರೀ ಸರ್ಕಾರಿ ಕರ್ತೃತ್ವದಿಂದ ಸಾಧಿಸಲಶಕ್ಯವು. ಅದೂ ಅಲ್ಲದೆ, ಕಾರ್ಯಸಾಧಕವಾದ ಆಡಳಿತವು; ತೀವ್ರವಾಗಿ ನಡಿಸತಕ್ಕ ಚರ್ಯೆಯು, ಬೇಕಾಗಿರುವದರಿಂದ, ಒಪ್ಪಿಸಲ್ಪಟ್ಟ ಕೆಲಸದಲ್ಲಿ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಲು ತಕ್ಕಷ್ಟು ಅವಕಾಶವುಳ್ಳ ಬೇರೆ ಒಂದು ಸಿಬ್ಬಂದಿಯೊಡನೆ ಒಂದು ಪ್ರತ್ಯೇಕ ಪಾರುಪತ್ಯವನ್ನ ಏರ್ಪಡಿಸುವದು ವಿಧಿರೂಪವಾಗಿ ತೋರುತ್ತೆ.

ಇಂಥಾ ವಿದ್ಯಮಾನಗಳಲ್ಲಿ, ಘನವನ್ನು ಹೊಂದಿದ ಶ್ರೀಮನ್ಮ ಮಹಾರಾಜರವರ ಗವರ್ರ್ನಮೆಂಟಿನವರು, ಬೊಂಬಾಯಿ ಗವರ್ರ್ನಮೆಂಟಿನವರು ಅವಲಂಬಿಸಿರುವ ಮಾರ್ಗವನ್ನೇ ಉದಾಹರಣೆಯಾಗಿ ತೆಗದುಕೊಂಡು, "ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕೋಸ್ಕರವಾದ ಟ್ರಸ್ಟೀಗಳ ಬೋರ್ಡು" ಎಂದು ಕರಿಯಲ್ಪಡಬೇಕಾದ ಒಂದು ಚಿಕ್ಕ ಪಾರುಪತ್ಯವನ್ನ, ಅವರ ವಶಕ್ಕೆ ಕೊಡಲ್ಪಟ್ಟ ಹಣಗಳನ್ನು ಉಪಯೋಗಿಸುವದಕ್ಕೂ, ಸ್ವತ್ತನ್ನ ಸಂಪಾದಿಸಿ ನಿರ್ವಹಿಸುವದಕ್ಕೂ, ಮತ್ತು ಅವಶ್ಯವಾದ ಉತ್ತಮಪಡಿಸುವ ಕೆಲಸಗಳನ್ನು ನೆರವೇರಿಸುವದಕ್ಕೂ ಪ್ರತ್ಯೇಕ ಅಧಿಕಾರಗಳನ್ನುಳ್ಳದ್ದಾಗಿ ಏರ್ಪಡಿಸಲು, ನಿಶ್ಚಯಿಸಿರುತ್ತಾರೆ. ಚಲಾವಣೆ ಬಗ್ಗಾಗಿ ಬೇಕಾದ ಅಧಿಕಾರಗಳೆಲ್ಲ ಇದರೊಂದಿಗಿರುವ ರೆಗ್ಯುಲೇಷನಿನಲ್ಲಿ ನಮೂದಾಗಿರುತ್ತವೆ. ಈ ರೆಗ್ಯುಲೇಷನು ಸಾಧಾರಣವಾಗಿ 1898ನೆ ವರುಷದ 4ನೆ ನಂಬರಿನ ಬೊಂಬಾಯಿ ಆಕ್ಟನ್ನು ಹೆಚ್ಚುಕಮ್ಮಿಯಾಗಿ ಅನುಸರಿಸುವದಲ್ಲದೆ, ಕೆಲವು ವಿಶೇಷವಾದ ವಿಚಾರಗಳಲ್ಲಿ ಅದಕ್ಕೆ ವ್ಯತ್ಯಾಸವಾಗಿಯು ಇದೆ. ಅದು ಹ್ಯಾಗೆಂದರೆ, ನಡಿಸುವ ರೀತಿಯು ಎಲ್ಲೆಲ್ಲಿ ಸಾಧ್ಯವಿದೆಯೊ ಅಲ್ಲಿ ಸುಲಭಮಾಡಿರುತ್ತೆ ; ನಗದಿಯಾತಿಗೆ ಸಮ್ಮಂಧಪಡುವ ನಿಯಮಗಳು (ಸಂದರ್ಭಕ್ಕೆ ತಕ್ಕಹಾಗಿರಬೇಕಾದ್ದರಿಂದ) ಸಂಪೂರ್ಣವಾಗಿ ಬೇರೆ ಮಾರ್ಗವನ್ನು ಅವಲಂಬಿಸುತ್ತವೆ ; ಮತ್ತು, ಒಂದು ಪಕ್ಷದಲ್ಲಿ ಗವರನ್ಮೆಂಟಿನವರು ಬೋರ್ಡಿನ ಮೇಲೆ ಸಾಧಾರಣವಾದ ಮೇಲ್ವಿಚಾರಣೆಯನ್ನು ಅಧಿಕವಾಗಿ ಮಾಡಬಹುದಾದ ಸ್ಥಿತಿಯುಳ್ಳಿರುವದಲ್ಲದೆ, ಮತ್ತೊಂದುಪಕ್ಷದಲ್ಲಿ ಬೋರ್ಡಿನ ಅಧಿಕಾರಗಳನ್ನೆಲ್ಲ ಕೆಲವು ಪ್ರಕರಣಗಳಲ್ಲಿ ಹೆಚ್ಚಿಸಿರುತ್ತೆ. (ಕಟ್ಟಡಗಳ ನಿರ್ಮಾಣವನ್ನು ಕ್ರಮಪಡಿಸೋಣ, ಹೊಸ ಕಟ್ಟುವದ

ಕ್ಕೆ ಮುಂಗಡಗಳನ್ನು ಕೊಡೋಣ, ಸಲ್ಲತಕ್ಕ ಹಣಗಳನ್ನು ವಸೂಲ್ ಮಾಡೋಣ, ಇವುಗಳೇ ಮುಂತಾದ ಪ್ರಕರಣಗಳು) ಬೋರ್ಡಿನ ಅಗಲಿಕೆಯು ಸಂಭವಿಸುವದನ್ನು ಕೂಡಾ ಯೋಚಿಸಿರುವದಲ್ಲದೆ ಅದಕ್ಕೆ ಉಪಾಯವನ್ನು ಮಾಡಿರುತ್ತೆ.

ಆಮೇಲೆ ಈ ರೆಗ್ಯುಲೇಷನಿನ ತಪಸೀಲುಗಳನ್ನು ಕುರಿತು:

Iನೆ ಅಧ್ಯಾಯ (1 ಮತ್ತು 2ನೆ ಪ್ರಕರಣಗಳು) ಅವತರಣಿಕೆ: ಇದರ ವಿವರ ಬೇಕಾಗಿಲ್ಲ.

IIನೆ ಅಧ್ಯಾಯವು (ಪ್ರಕರಣಗಳು 3ನಿಂದ 13ವರೆಗೆ). ಟ್ರಸ್ಟಿಗಳ ಬೋರ್ಡಿನ ಏರ್ಪಾಟನ್ನೂ, ಅವರ ನಡವಳಿಕೆಗಳನ್ನೂ ಮತ್ತು ಚೇರಮೆನ್‌ನಿನ ಕರ್ತವ್ಯಗಳನ್ನೂ ಕುರಿತು ಇದೆ. 4ನೆ ಪ್ರಕರಣದಲ್ಲಿ, ಆ ಟ್ರಸ್ಟಿಗಳ ಬೋರ್ಡಿನಂತಿರುವ ಒಂದು ಚಿಕ್ಕ ಪಾರುಪತ್ಯವನ್ನು, ಸಾಧ್ಯವಿರುವ ಮಟ್ಟಿಗೂ, ಎಲ್ಲಾ ಬಗೆಯಾದ ಸ್ವಾರ್ಥಗಳನ್ನುಳ್ಳವರ ಪ್ರತಿನಿಧಿಯಾಗಿರುವ ಹಾಗೆ, ಏರ್ಪಡಿಸಿರುತ್ತೆ.

IIIನೆ ಅಧ್ಯಾಯವು (ಪ್ರಕರಣಗಳು 14ರಿಂದ 23ವರೆಗೆ) ಬೋರ್ಡಿನ ಕರ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ಕುರಿತು ಇದೆ. ಇಂಪ್ರೂವ್‌ಮೆಂಟ್ ಕಮ್ಮಿಟಿಯವರಿಂದ ಆಗಿಂದಾಗ್ಗೆ ಒಪ್ಪಿಸಲ್ಪಟ್ಟ ಆಲೋಚನೆಗಳನ್ನೆಲ್ಲ ಮುಖ್ಯವಾಗಿ ಅನುಸರಿಸಿ ಉತ್ತಮಪಡಿಸುವ ಉಪಾಯಗಳ ತಪಶೀಲುಗಳನ್ನ ಪರಿಷ್ಕಾರ ಮಾಡುವದಲ್ಲದೆ, ಗವರ್ನಮೆಂಟಿನವರ ಮಂಜೂರಾತಿಯಾದ ಬಳಿಕ ಆ ವಿವರಿಸಲ್ಪಟ್ಟ ಉತ್ತಮಪಡಿಸುವ ಉಪಾಯಗಳನ್ನ ಜಾರಿಗೆ ತರುವದು, ಬೋರ್ಡಿನ ಪ್ರಥಮ ಕರ್ತವ್ಯವಾಗಿರುತ್ತೆ. ಅಗತ್ಯ ಬಿದ್ದಾಗ್ಯೆ ಮತ್ತು ಹಣವಿದ್ದರೆ ಅಧಿಕ ಉಪಾಯಗಳನ್ನ ಕೂಡ ಬೋರ್ಡು ಒಪ್ಪಿಸಬಹುದು. ಜಮೀನುಗಳ ಮತ್ತು ಕಟ್ಟಡಗಳ ಬಲತ್ಕಾರವಾದ ಸಂಪಾದನೆಯನ್ನು ಕುರಿತು (ಪ್ರಕರಣ 23,) 1894ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಪ್ರಯೋಗವಾಗುವಮಟ್ಟಿಗೆ ಅವುಗಳನ್ನು ಅನುಸರಿಸತಕ್ಕದ್ದು; ಮತ್ತು ಆ ರೆಗ್ಯುಲೇಷನಿನೊಳಗಿಲ್ಲದ ವಿಷಯಗಳನ್ನು ಕುರಿತು ಕೆಲವು ಅಧಿಕ ನಿಯಮಗಳು ಇದಕ್ಕೆ ಸೇರಿಸಲ್ಪಟ್ಟಿರುತ್ತವೆ. ಹೆಚ್ಚಾದ ತ್ವರೆಯಿಂದಲೂ ಮತ್ತು ಅಧಿಕ ಫಲೋತ್ಪಾದಕವಾಗಿಯೂ ಹಕ್ಕುಗಳು ಮುಂತಾದವುಗಳನ್ನ ಗೊತ್ತಿಗೆ ತರುವ ಬಗ್ಗೆ, ಬೋರ್ಡಿನ ಚೇರ್ಮೆನ್ನಿಗೆ, ಭೂಸಂಪಾದನೆ ವಿಷಯದ ರೆಗ್ಯುಲೇಷನಿನಂತೆ ಒಬ್ಬ ಡೆಪ್ಯುಟಿ ಕಮ್ಮಿಷನರು ಉಂಟಾಗಿರುವ ಅಧಿಕಾರಗಳನ್ನ ಕೊಡಲು ಯೋಚಿಸಿರುತ್ತೆ; ಆದರೆ ಇದು ಒಂದು ಪ್ರತ್ಯೇಕವಾದ ಇಸ್ತಿಹಾರುಮೂಲಕ ಮಾಡಲ್ಪಡುತ್ತೆ.

IVನೆ ಅಧ್ಯಾಯವು (ಪ್ರಕರಣಗಳು 24ರಿಂದ 33ವರೆಗೆ) ಸ್ವತ್ತು ಮತ್ತು ನಗದಿಗೆ ಸಮ್ಮಂಧಪಟ್ಟಿರುತ್ತೆ. ಗವರನಮೆಂಟಿನವರ ಅಥವಾ ಮ್ಯೂನಿಸಿಪಲ್ ಕಮಿಷನರುಗಳ ಸ್ವಾಧೀನದಲ್ಲಿರುವ ಭೂಮಿಯನ್ನು ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿನ ವಶದಲ್ಲಿರತಕ್ಕದ್ದೆಂದು ಗವರನಮೆಂಟನವರು ಹುಕುಂ ಮಾಡಬಹುದು. ಸ್ವತ್ತನ್ನು ಸಂಪಾದಿಸಿ ಇಟ್ಟುಕೊಳ್ಳುವದರ ಸಮ್ಮಂಧವಾಗಿಯೂ, ತಮ್ಮ ವಶಕ್ಕೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಸ್ವತ್ತನ್ನ ವಿಲೇವಾರಿ ಮಾಡುವ ಸಮ್ಮಂಧವಾಗಿಯೂ ಇರುವ ಬೋರ್ಡಿನ ಅಧಿಕಾರಗಳು 25ನೆ ಪ್ರಕರಣದಲ್ಲಿ ತಪಶೀಲಾಗಿ ಹೇಳಲ್ಪಟ್ಟಿರುತ್ತವೆ. 26ನೆ ಪ್ರಕರಣದಲ್ಲಿ ಇಂಪ್ರೂವ್‌ಮೆಂಟ್ ಫಂಡಿನ ಬಾಬುಗಳೆಲ್ಲಾ ಸೂಚಿಸಲ್ಪಟ್ಟಿರುತ್ತವೆ ಮೈಸೂರು ಪಟ್ಟಣದ ಟ್ರಸ್ಟಿಗಳ ಬೋರ್ಡಿಗೆ ಸಾಲ ತೆಗೆದುಕೊಳ್ಳುವ ಅಧಿಕಾರಗಳಿಲ್ಲದಿರುವದು, ಮತ್ತು ಆ ಕಾರಣದಿಂದ ಹಣ ವಾಪಸು ಮಾಡುವ ಜವಾಬುದಾರಿಯೂ ಇಲ್ಲದಿರುವದು — ಈ ಸಂಗತಿಯು ಗಮನಿಸತಕ್ಕದ್ದಾಗಿದೆ; ಪರಂತು 26ನೆ ಪ್ರಕರಣದಂತೆ ಗವರ್ನಮೆಂಟಿನವರಿಂದಲೂ ಮ್ಯೂನಿಸಿಪಲ್ ಕಮ್ಮಿಷನಿನಿಂದಲೂ ಆಗಿಂದಾಗ್ಗೆ ಅವರ (ಬೋರ್ಡಿನ) ವಶಕ್ಕೆ ಕೊಡಲ್ಪಟ್ಟ ಹಣವನ್ನ ಸುಮ್ಮನೆ ಉಪಯೋಗಿಸುವದು ಬೋರ್ಡಿನ ಕೆಲಸವಾಗಿರುತ್ತೆ. ಆ ಫಂಡಿನ ಪ್ರಯೋಗದ ಸಮ್ಮಂಧವಾಗಿ ಹೇಳಬಹುದಾದ್ದೇನಂದರೆ,— ಗವರ್ನಮೆಂಟಿನವರಿಂದ ಮಾಡಲ್ಪಡಬೇಕಾಗಿರುವ ನೇಮಗಳಿಗೆ ಅನುಸಾರವಾಗಿ ಮುಂಗಡಗಳನ್ನ ಮನೆಕಟ್ಟುವ ಉದ್ದೇಶಗಳಿಗೋಸ್ಕರ, ಸರಿಯಾದ ಸಂದರ್ಭಗಳಲ್ಲಿ ಕೊಡುವ ಅಧಿಕಾರವು 27 (3)ನೆ ಪ್ರಕರಣದಂತೆ ಬೋರ್ಡಿಗೆ ಇರುವದಾಗುತ್ತೆ. ಲೆಕ್ಕಗಳನ್ನು ಮತ್ತು ಅವುಗಳ ತನಿಖೆ ಮಾಡುವದನ್ನು ಕುರಿತು ಇರುವ ನಿಯಮಗಳು ಸುಲಭ ಮಾಡಲ್ಪಟ್ಟಿರುತ್ತವೆ.

Vನೆ ಅಧ್ಯಾಯವು (ಪ್ರಕರಣಗಳು 34ರಿಂದ 36ವರೆಗೆ) ಗವರ್ನಮೆಂಟಿನವರಿಂದ ಬೋರ್ಡಿನ ತಾಬೆಗಾಗಿ ಕೊಡಲ್ಪಟ್ಟವರೊಂದಿಗಿರುವ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಕುರಿತು ಇದೆ.

VIನೆ ಅಧ್ಯಾಯವು (37ನೆ ಪ್ರಕರಣ) ಯಾವ ವಿದ್ಯಮಾನಗಳಲ್ಲಿ ಬೋರ್ಡನ್ನ ಅಗಲಿಸಬೇಕಾದ್ದು ಅವಶ್ಯವಾಗುತ್ತೊ ಅವುಗಳನ್ನು ಕುರಿತು ಇದೆ. (ಹಾಗಂದರೆ, ಅವರಿಂದ ನೆರವೇರಿಸಲ್ಪಡುವದಕ್ಕೋಸ್ಕರ ಮಂಜೂರಾದ ಉತ್ತಮಪಡಿಸುವ ಉಪಾಯಗಳೆಲ್ಲಾ ವಾಸ್ತವಿಕವಾಗಿ ಪೂರಯಿಸಲ್ಪಟ್ಟಾಗ;) ಮತ್ತು ಬೋರ್ಡಿನ ಆಸ್ತಿ ಮತ್ತು ಸಾಲಗಳಿಗೆ ಯಾರು ಉತ್ತರಾಧಿಕಾರಿ ಆಗಬೇಕೆಂಬುವದು, ಸ್ವತ್ತಿನ ವಿಲೇವಾರಿ ಮತ್ತು ನಿರ್ವಾಹ, ಅಪೂರ್ಣವಾಗಿರುವ ಕೆಲಸಗಳನ್ನ ಪೂರಯಿಸುವದು, ಇವುಗಳೇ ಮುಂತಾದ ಸಂದರ್ಭವಶವಾದ ವಿವಿಧ ಸಂಗತಿಗಳಿಗು ಕೂಡ ಇದರಲ್ಲಿ ಏರ್ಪಡಿಸಿರುತ್ತೆ.

VIIನೆ ಅಧ್ಯಾಯವು (ಪ್ರಕರಣಗಳು 38ರಿಂದ 46 ವರೆಗೆ) ನೇಮಗಳು, ಒಳ ನಿಬಂಧನೆಗಳು, ದಂಡನೆಗಳು ಮುಂತಾದ್ದನ್ನು ಕುರಿತು ಇದೆ. ಇದರಲ್ಲಿರುವ ಪದ್ಧತಿಪ್ರಕಾರವಾದ ನಿಯಮಗಳಿಗೆ ಪ್ರತ್ಯೇಕವಾದ ಸ್ಪಷ್ಟೀಕರಣವು ಅಗತ್ಯವಿರುವದಿಲ್ಲ. ಪರಂತು, ಮನೆ ಕಟ್ಟುವ ವಿಷಯದಲ್ಲಿ ಸರಿಯಾದ ನೇಮಗಳನ್ನ ಮಾಡುವದಕ್ಕಾಗಿ ಬೋರ್ಡಿಗೆ ಅಧಿಕಾರ ಕೊಡುವ 39 (1)ನೆ ಪ್ರಕರಣದ (*e*) ಕಲಮು ಮತ್ತು ಬೋರ್ಡಿಗೆ ಸಲ್ಲತಕ್ಕ ಹಣಗಳನ್ನು ವಸೂಲು ಮಾಡುವ ವಿವಿಧ ವಿಧಾನಗಳ ವಿಷಯವಾಗಿರುವ 45ನೆ ಪ್ರಕರಣವು,— ಇವೆರಡೂ ಅವಧಾನಯೋಗ್ಯವಾಗಿರುತ್ತವೆ.

"ಇವುಗಳೆಲ್ಲಾ ಸಾಮಾನ್ಯವಾದ ನಿರೂಪಣೆಗಳು; ಆದರೆ ಗವರ್ನಮೆಂಟಿನವರು ಏರ್ಪಡಿಸಬೇಕೆಂದು ಸಂಕಲ್ಪಿಸಿರುವ ಕಮಿಟಿಯವರಿಗೆ, ಈ ವಿಷಯದ ಶಾಸ್ತ್ರೋಕ್ತವಾಗಿಯೂ ಅಭ್ಯಾಸಸಿದ್ಧವಾಗಿಯೂ ಇರುವ ವಿವಿಧಾಕೃತಿಗಳನ್ನೆಲ್ಲಾ ಚೆನ್ನಾಗಿಯೋಚಿಸಿ, ತಕ್ಕಷ್ಟು ವಿವರವಾಗಿ ಒಂದು ಉಪಾಯವನ್ನು ಗವರ್ನಮೆಂಟಿನವರ ಆಲೋಚನೆ ಬಗ್ಗೆ ಮಾಡುವದು, ಕರ್ತವ್ಯವಾಗಿರುತ್ತೆ. ಕೆಳಗೆ ಹೆಸರು ಹೇಳಲ್ಪಟ್ಟ ಪ್ರೆಸಿಡೆಂಟರು ಮತ್ತು ಮೆಂಬರುಗಳು, ಸಾಧ್ಯವಾದಷ್ಟು ತ್ವರಿಯವಾಗಿ ಈ ಕೆಲಸದಲ್ಲಿ ಪ್ರವರ್ತಿಸಿ ತಮ್ಮ ಅಭಿಪ್ರಾಯಗಳನ್ನೂ, ಬಹುಮಟ್ಟಿಗೆ ತಪ್ಪಲ್ಲದಿರುವ ವೆಚ್ಚದ ಮದಿಪನ್ನೂ ಸಹ ಒಪ್ಪಿಸಬೇಕೆಂದು ಗವರ್ನಮೆಂಟಿನವರು ಕೋರುತ್ತಾರೆ. ಯಾವ ಕ್ರಮದಲ್ಲಿ, ಯಾವ ವಿಧಾನದಲ್ಲಿ, ಆ ಉಪಾಯವನ್ನ ನೆರವೇರಿಸುವದು ತಮ್ಮ ಅಭಿಪ್ರಾಯದಲ್ಲಿ ಉತ್ತಮವಾಗಿ ತೋರಿಬರುವದನ್ನ ಕೂಡ ಅವರು ಸೂಚಿಸಬೇಕು."

ಅದೇ ಪ್ರಕಾರ, ಪಟ್ಟಣದ ಅನೇಕ ಭಾಗಗಳಲ್ಲಿ ಮಾಡಬೇಕಾದ್ದೆಂದು ತಾವು ಅಭಿಪ್ರಾಯಪಟ್ಟಿರುವ ತಿದ್ದುಪಾಟುಗಳನ್ನೆಲ್ಲಾ ತೋರಿಸಿ ವಿಸ್ತಾರವಾದ ಭಾವಗಳನ್ನನುಸರಿಸಿರತಕ್ಕ ಕೆಲವು ಉಪಾಯಗಳನ್ನು, ಕಮಿಟಿಯವರು ಒಪ್ಪಿಸಿರುತ್ತಾರೆ. ಆ ಉಪಾಯಗಳು ಈಗ ಗವರ್ನಮೆಂಟಿನವರ ವಿಚಾರಣೆಯಲ್ಲಿ ಇವೆ.

ಆ ಒಟ್ಟು ಉಪಾಯವನ್ನು ಯೋಚಿಸಿದರೆ ಅದರಲ್ಲಿ,—ಹೊಸ ಬೀದಿಗಳನ್ನು ಮಾಡುವದು, ಇರುವ ಬೀದಿಗಳನ್ನು ಬದಲಾಯಿಸುವದು, ಅನಾರೋಗ್ಯವಾದ ಕಟ್ಟಡಗಳನ್ನು ತೆಗದುಹಾಕುವದು ಅಥವಾ ಬದಲಾಯಿಸುವದು, ಸರಿಯಾದ ಚಚ್ಚಲುಗಳನ್ನು ಮತ್ತು ಹೆಚ್ಚಾಗಿ ಗಾಳಿಬೀಸುವದಕ್ಕೂ ವಿಹಾರ ವಿಶ್ರಮಕ್ಕೂ ಬೇಕಾದ ಬೈಲುಭೂಮಿಗಳನ್ನು ಏರ್ಪಡಿಸುವದು, ಆ ಉಪಾಯವನ್ನು ನೆರವೇರಿಸುವದರಲ್ಲಿ ಸ್ಥಳ ತಪ್ಪಿಸಲ್ಪಟ್ಟ ಕೇವಲ ಬಡವರಿಗೂ ಕೂಲಿ ಮಾಡುವ ಜನಗಳಿಗೂ ಆರೋಗ್ಯರಕ್ಷಕವಾದ ಮನೆಗಳನ್ನು ಕಟ್ಟಿಸುವದು—ಇವುಗಳೆಲ್ಲಾ ಅಡಗಿರುತ್ತವೆ.

ಆ ಉಪಾಯವನ್ನು ಜಾರಿಗೆ ತರುವದಕ್ಕಾಗಿ ಅನೇಕ ಗತ್ಯಂತರಗಳು ತೋರಿಬರುತ್ತವೆ. ಆ ಕೆಲಸವನ್ನು ಕೆಳಗೆ ಬರುವ ಯಾವ ಅಧಿಕಾರಿಗಳಿಗಾಗಲಿ, ಅಥವಾ ಅವರ ಪೈಕಿ ಜೊತೆ ಮಾಡಲ್ಪಟ್ಟ ಕೆಲವರಿಗಾಗಲಿ ಕೊಡಬಹುದು: ಯಾರೆಂದರೆ, ಡೆಪ್ಯುಟಿ ಕಮಿಷನರು, ಡಿಸ್ಟ್ರಿಕ್ಟು ಆಫಿಸರುಗಳು, ಸಿಟಿ ಮ್ಯೂನಿಸಿಪಾಲಿಟಿಯವರು, ಆ ಉದ್ದೇಶಕಾಗಿ ಪ್ರತ್ಯೇಕವಾಗಿ ನೇಮಿಸಲ್ಪಟ್ಟ ಒಬ್ಬ ಆಫೀಸರು, ಅಥವಾ ಪಬ್ಲಿಕ್ ವರ್ಕ್ಸ್ ಡಿಪಾರ್ಟುಮೆಂಟಿನವರು. ಪರಂತು ಈ ಯಾವ ಸಂದರ್ಭದಲ್ಲಾಗಲಿ ಇವರನ್ನು ಪ್ರತ್ಯೇಕವಾಗಿ ಅಥವಾ ಜೊತೆಯಾಗಿ ಈ ಕೆಲಸದಲ್ಲಿ ಬಿಡುವದಕ್ಕೆ ಅಭ್ಯಂತರಗಳು ಇರುತ್ತವೆ. ಮ್ಯೂನಿಸಿಪಲ್ ಸಿಬ್ಬಂದಿಗೆ ತಾವು ವಾಡಿಕೆಯಾಗಿ ಮಾಡುವ ಉದ್ಯೋಗವೇ ಸಂಪೂರ್ಣವಾಗಿದೆ. ಮ್ಯೂನಿಸಿಪಲ್ ಕಮಿಷನರುಗಳು ಪುರ್ಸತಾಗಿರುವ ಕಾಲವು ಕೇವಲ ಸಂಕೋಚಕವಾಗಿರುವದರಿಂದ, ಅವರಿಗೆ ಅಧಿಕ ಕಾರ್ಯವನ್ನುಂಟುಮಾಡುವದು ಅನುಚಿತವಾಗಿರುತ್ತೆ. ಡೆಪ್ಯುಟಿ ಕಮಿಷನರ ವಿಷಯದಲ್ಲಿಯೂ, ಅವರ ಅಸಿಸ್ಟೆಂಟರುಗಳ ವಿಷಯದಲ್ಲಿಯೂ, ಇದೇ ಅಭ್ಯಂತರಗಳು ಇನ್ನು ಅಧಿಕವಾಗಿ ಪ್ರಯೋಗವಾಗುತ್ತವೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟುಮೆಂಟಿನವರು ಆ ಉಪಾಯದ ಇಂಜನೀರಿನ ಭಾಗವೆಲ್ಲಾ ಸುದಾರಿಸಿಕೊಳ್ಳಬಹುದು. ಆದರೆ ಆ ಇಂಜನೀರಿನ ಭಾಗವು ಅತ್ಯಂತ ಕಷ್ಟವಾದ್ದಾಗಿಯೇ ಆಗಲಿ ಅಥವಾ ಕೇವಲ ವಿಶೇಷವಾದ್ದಾಗಿಯೇ ಆಗಲಿ ಇರುವದಿಲ್ಲಾ. ಆಲೋಚಿಸತಕ್ಕದ್ದಾಗಿರುವ ಕಾರ್ಯಭಾರಿಕ ವಿಷಯಗಳಲ್ಲದೆ ಅರ್ಥನಿರ್ವಾಹ ಕ್ರಮ ಸಮ್ಮಂಧಪಟ್ಟ ಸಂಗತಿಗಳು ಕೂಡ, ಸರ್ಕಾರಿ ಮತ್ತು ಖಾಸಗಿ ಹಕ್ಕುಗಳನ್ನು ಬಹಳವಾಗಿ ನಿರ್ವಹಿಸೋಣದರಲ್ಲಿ ಅನಂತವಾಗಿ, ಅಡಗಿಕೊಂಡಿವೆ. ಅಂಥಾ ವಿಚಾರಗಳನ್ನು ನಡಿಸುವದು ಮಾತ್ರವಲ್ಲದೆ ಜನಗಳನ್ನು ಆರೋಗ್ಯ ರಕ್ಷಣಾಧಿಕ್ಯವುಳ್ಳಪ್ರದೇಶಗಳಲ್ಲಿ ವಸಿಸುವ ಹಾಗೆ ಮಾಡುವದು ಕೂಡ ಆಗಬೇಕಾಗಿದೆ. ಪ್ರತ್ಯೇಕವಾಗಿ ನೇಮಕವಾದ ಒಬ್ಬ ಉದ್ಯೋಗಸ್ಥನಿಗೆ ಅಂಥಾ ಭಾರವನ್ನು ವಹಿಸುವದು ಅಪೇಕ್ಷಿಸತಕ್ಕದ್ದಾಗಿಲ್ಲ. ಈ ಪ್ರಯತ್ನದ ಕಾರ್ಯಸಿದ್ಧಿಗಾಗಿ, ಸಾಕ್ಷಾತ್ತಾಗಿ ಸಮ್ಮಂಧಪಡುವವರು ಮಾತ್ರವಲ್ಲದೆ ಸರ್ವಜನರು ಕೂಡ ಸಾಧ್ಯವಿರುವ ಮಟ್ಟಿಗೆ ಏಕೀಭವಿಸಿರಬೇಕಾದ್ದು ಆವಶ್ಯವಾಗಿದೆ. ಅಂಥಾ ಸಹಾನುಭವವು ಬರೀ ಸರ್ಕಾರಿ ಕರ್ತೃತ್ವದಿಂದ ಸಾಧಿಸಲಶಕ್ಯವು. ಅದೂ ಅಲ್ಲದೆ, ಕಾರ್ಯಸಾಧಕವಾದ ಆಡಳಿತವು, ತೀವ್ರವಾಗಿ ನಡಿಸತಕ್ಕ ಚರ್ಯೆಯು, ಬೇಕಾಗಿರುವದರಿಂದ, ಒಪ್ಪಿಸಲ್ಪಟ್ಟ ಕೆಲಸದಲ್ಲಿ ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಉಪಯೋಗಿಸಲು ತಕ್ಕಷ್ಟು ಅವಕಾಶವುಳ್ಳ ಬೇರೆ ಒಂದು ಸಿಬ್ಬಂದಿಯೊಡನೆ ಒಂದು ಪ್ರತ್ಯೇಕ ಪಾರುಪತ್ಯವನ್ನ ಏರ್ಪಡಿಸುವದು ವಿಧಿರೂಪವಾಗಿ ತೋರುತ್ತೆ.

ಇಂಥಾ ವಿದ್ಯಮಾನಗಳಲ್ಲಿ, ಘನವನ್ನು ಹೊಂದಿದ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು, ಬೊಂಬಾಯಿ ಗವರ್ನಮೆಂಟಿನವರು ಅವಲಂಬಿಸಿರುವ ಮಾರ್ಗವನ್ನೇ ಉದಾಹರಣೆಯಾಗಿ ತೆಗದುಕೊಂಡು, "ಮೈಸೂರು ಪಟ್ಟಣವನ್ನು ಉತ್ತಮಪಡಿಸುವದಕೋಸ್ಕರವಾದ ಟ್ರಸ್ಟಿಗಳ ಬೋರ್ಡು" ಎಂದು ಕರಿಯಲ್ಪಡಬೇಕಾದ ಒಂದು ಚಿಕ್ಕ ಪಾರುಪತ್ಯವನ್ನ, ಅವರ ವಶಕ್ಕೆ ಕೊಡಲ್ಪಟ್ಟ ಹಣಗಳನ್ನು ಉಪಯೋಗಿಸುವದಕ್ಕೂ, ಸ್ವತ್ತನ್ನ ಸಂಪಾದಿಸಿ ನಿರ್ವಹಿಸುವದಕ್ಕೂ, ಮತ್ತು ಅವಶ್ಯವಾದ ಉತ್ತಮಪಡಿಸುವ ಕೆಲಸಗಳನ್ನು ನೆರವೇರಿಸುವದಕ್ಕೂ ಪ್ರತ್ಯೇಕ ಅಧಿಕಾರಗಳನ್ನುಳ್ಳದ್ದಾಗಿ ಏರ್ಪಡಿಸಲು, ನಿಶ್ಚಯಿಸಿರುತ್ತಾರೆ. ಚಲಾವಣೆ ಬಗ್ಗಾಗಿ ಬೇಕಾದ ಅಧಿಕಾರಗಳೆಲ್ಲ ಇದರೊಂದಿಗಿರುವ ರೆಗ್ಯುಲೇಷನಿನಲ್ಲಿ ನಮೂದಾಗಿರುತ್ತವೆ. ಈ ರೆಗ್ಯುಲೇಷನು ಸಾಧಾರಣವಾಗಿ 1898ನೆ ವರುಷದ 4ನೆ ನಂಬರಿನ ಬೊಂಬಾಯಿ ಆಕ್ಟನ್ನು ಹೆಚ್ಚುಕಮ್ಮಿಯಾಗಿ ಅನುಸರಿಸುವದಲ್ಲದೆ, ಕೆಲವು ವಿಶೇಷವಾದ ವಿಚಾರಗಳಲ್ಲಿ ಅದಕ್ಕೆ ವ್ಯತ್ಯಾಸವಾಗಿಯು ಇದೆ. ಅದು ಹ್ಯಾಗೆಂದರೆ, ನಡಿಸುವ ರೀತಿಯು ಎಲ್ಲೆಲ್ಲಿ ಸಾಧ್ಯವಿದೆಯೊ ಅಲ್ಲಿ ಸುಲಭಮಾಡಿರುತ್ತೆ; ನಗದಿಯಾತಿಗೆ ಸಮ್ಮಂಧಪಡುವ ನಿಯಮಗಳು (ಸಂದರ್ಭಕ್ಕೆ ತಕ್ಕಹಾಗಿರಬೇಕಾದ್ದರಿಂದ) ಸಂಪೂರ್ಣವಾಗಿ ಬೇರೆ ಮಾರ್ಗವನ್ನು ಅವಲಂಬಿಸುತ್ತವೆ; ಮತ್ತು, ಒಂದು ಪಕ್ಷದಲ್ಲಿ ಗವರನ್ಮೆಂಟಿನವರು ಬೋರ್ಡಿನ ಮೇಲೆ ಸಾಧಾರಣವಾದ ಮೇಲ್ವಿಚಾರಣೆಯನ್ನು ಅಧಿಕವಾಗಿ ಮಾಡಬಹುದಾದ ಸ್ಥಿತಿಯಲ್ಲಿರುವದಲ್ಲದೆ, ಮತ್ತೊಂದುಪಕ್ಷದಲ್ಲಿ ಬೋರ್ಡಿನ ಅಧಿಕಾರಗಳನ್ನೆಲ್ಲ ಕೆಲವು ಪ್ರಕರಣಗಳಲ್ಲಿ ಹೆಚ್ಚಿಸಿರುತ್ತೆ. (ಕಟ್ಟಡಗಳ ನಿರ್ಮಾಣವನ್ನು ಕ್ರಮಪಡಿಸೋಣ, ಮನೆ ಕಟ್ಟುವದ

ಕ್ಕೆ ಮುಂಗಡಗಳನ್ನು ಕೊಡೋಣ, ಸಲ್ಲತಕ್ಕ ಹಣಗಳನ್ನು ವಸೂಲ್ ಮಾಡೋಣ, ಇವುಗಳೇ ಮುಂತಾದ ಪ್ರಕರಣಗಳು) ಬೋರ್ಡಿನ ಅಗಲಿಕೆಯು ಸಂಭವಿಸುವದನ್ನು ಕೂಡಾ ಯೋಚಿಸಿರುವದಲ್ಲದೆ ಅವಕ್ಕೆ ಉಪಾಯವನ್ನು ಮಾಡಿರುತ್ತೆ.

ಆಮೇಲೆ ಈ ರೆಗ್ಯುಲೇಷನಿನ ತಪಸೀಲುಗಳನ್ನು ಕುರಿತು :

Iನೆ ಅಧ್ಯಾಯವು (1 ಮತ್ತು 2ನೆ ಪ್ರಕರಣಗಳು) ಅವತರಣಿಕೆ : ಇದರ ವಿವರ ಬೇಕಾಗಿಲ್ಲ.

IIನೆ ಅಧ್ಯಾಯವು (ಪ್ರಕರಣಗಳು 3ನಿಂದ 13ವರಿಗೆ). ಟ್ರಸ್ಟಿಗಳ ಬೋರ್ಡಿನ ಏರ್ಪಾಟನ್ನೂ, ಅವರ ನಡವಳಿಕೆಗಳನ್ನೂ ಮತ್ತು ಚೇರಮೆನ್ನಿನ ಕರ್ತವ್ಯಗಳನ್ನೂ ಕುರಿತು ಇದೆ. 4ನೆ ಪ್ರಕರಣದಲ್ಲಿ, ಆ ಟ್ರಸ್ಟಿಗಳ ಬೋರ್ಡಿನಂತಿರುವ ಒಂದು ಚಿಕ್ಕ ಪಾರುಪತ್ಯವನ್ನು, ಸಾಧ್ಯವಿರುವ ಮಟ್ಟಿಗೂ, ಎಲ್ಲಾ ಬಗೆಯಾದ ಸ್ವಾರ್ಥಗಳನ್ನುಳ್ಳವರ ಪ್ರತಿನಿಧಿಯಾಗಿರುವ ಹಾಗೆ, ಏರ್ಪಡಿಸಿರುತ್ತೆ.

IIIನೆ ಅಧ್ಯಾಯವು (ಪ್ರಕರಣಗಳು 14ರಿಂದ 23ವರಿಗೆ) ಬೋರ್ಡಿನ ಕರ್ತವ್ಯಗಳನ್ನು ಮತ್ತು ಅಧಿಕಾರಗಳನ್ನು ಕುರಿತು ಇದೆ. ಇಂಪ್ರೂವ್‌ಮೆಂಟ್ ಕಮ್ಮಿಟಿಯವರಿಂದ ಆಗಿಂದಾಗ್ಗೆ ಒಪ್ಪಿಸಲ್ಪಟ್ಟ ಆಲೋಚನೆಗಳನ್ನೆಲ್ಲ ಮುಖ್ಯವಾಗಿ ಅನುಸರಿಸಿ ಉತ್ತಮಪಡಿಸುವ ಉಪಾಯಗಳ ತಪಶೀಲುಗಳನ್ನು ಪರಿಷ್ಕಾರ ಮಾಡುವದಲ್ಲದೆ, ಗವರ್ನಮೆಂಟಿನವರ ಮಂಜೂರಾತಿಯಾದ ಬಳಿಕ ವಿವರಿಸಲ್ಪಟ್ಟ ಉತ್ತಮಪಡಿಸುವ ಉಪಾಯಗಳನ್ನು ಜಾರಿಗೆ ತರುವದು, ಬೋರ್ಡಿನ ಪ್ರಥಮ ಕರ್ತವ್ಯವಾಗಿರುತ್ತೆ. ಅಗತ್ಯವಿದ್ದಾಗ್ಯೆ ಮತ್ತು ಹಣವಿದ್ದರೆ ಅಧಿಕ ಉಪಾಯಗಳನ್ನು ಕೂಡ ಬೋರ್ಡು ಒಪ್ಪಿಸಬಹುದು. ಜಮೀನುಗಳ ಮತ್ತು ಕಟ್ಟಡಗಳ ಬಲತ್ಕಾರವಾದ ಸಂಪಾದನೆಯನ್ನು ಕುರಿತು. (ಪ್ರಕರಣ 23,) 1894ನೆ ವರುಷದ ಭೂಸಂಪಾದನೆ ವಿಷಯದ ರೆಗ್ಯುಲೇಷನಿನ ನಿಯಮಗಳು ಪ್ರಯೋಗವಾಗುವಮಟ್ಟಿಗೆ ಅವುಗಳನ್ನು ಅನುಸರಿಸತಕ್ಕದ್ದು ; ಮತ್ತು ಆ ರೆಗ್ಯುಲೇಷನಿನೊಳಗಿಲ್ಲದ ವಿಷಯಗಳನ್ನು ಕುರಿತು ಕೆಲವು ಅಧಿಕ ನಿಯಮಗಳು ಇದಕ್ಕೆ ಸೇರಿಸಲ್ಪಟ್ಟಿರುತ್ತವೆ. ಹೆಚ್ಚಾದ ತ್ವರೆಯಿಂದಲೂ ಮತ್ತು ಅಧಿಕ ಫಲೋತ್ಪಾದಕವಾಗಿಯೂ ಹಕ್ಕುಗಳು ಮುಂತಾದವುಗಳನ್ನು ಗೊತ್ತಿಗೆ ತರುವ ಬಗ್ಗಾಗಿ, ಬೋರ್ಡಿನ ಚೇರ್ಮೆನ್ನಿಗೆ, ಭೂಸಂಪಾದನೆ ವಿಷಯದ ರೆಗ್ಯುಲೇಷನಿನಂತೆ ಒಬ್ಬ ಡೆಪ್ಯುಟಿ ಕಮ್ಮಿಷನರು ಉಂಟಾಗಿರುವ ಅಧಿಕಾರಗಳನ್ನು ಕೊಡಲು ಯೋಚಿಸಿರುತ್ತೆ ; ಆದರೆ ಇದು ಒಂದು ಪ್ರತ್ಯೇಕವಾದ ಇಸ್ತಿಹಾರುಮೂಲಕ ಮಾಡಲ್ಪಡುತ್ತೆ.

IVನೆ ಅಧ್ಯಾಯವು (ಪ್ರಕರಣಗಳು 24ರಿಂದ 33ವರಿಗೆ) ಸ್ವತ್ತು ಮತ್ತು ನಗದಿಗೆ ಸಮ್ಮಂಧಪಟ್ಟಿರುತ್ತೆ. ಗವರನಮೆಂಟಿನವರ ಅಥವಾ ಮ್ಯುನಿಸಿಪಲ್ ಕಮಿಷನರುಗಳ ಸ್ವಾಧೀನದಲ್ಲಿರುವ ಭೂಮಿಯನ್ನು ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ ಬೋರ್ಡಿನ ವಶದಲ್ಲಿರತಕ್ಕದ್ದೆಂದು ಗವರನಮೆಂಟಿನವರು ಹುಕುಂ ಮಾಡಬಹುದು. ಸ್ವತ್ತನ್ನು ಸಂಪಾದಿಸಿ ಇಟ್ಟುಕೊಳ್ಳುವದರ ಸಮ್ಮಂಧವಾಗಿಯೂ, ತಮ್ಮ ವಶಕ್ಕೆ ಕೊಡಲ್ಪಟ್ಟ ಅಥವಾ ತಮ್ಮಿಂದ ಸಂಪಾದಿಸಲ್ಪಟ್ಟ ಸ್ವತ್ತನ್ನು ವಿಲೇವಾರಿ ಮಾಡುವದರ ಸಮ್ಮಂಧವಾಗಿಯೂ ಇರುವ ಬೋರ್ಡಿನ ಅಧಿಕಾರಗಳು 25ನೆ ಪ್ರಕರಣದಲ್ಲಿ ತಪಶೀಲಾಗಿ ಹೇಳಲ್ಪಟ್ಟಿರುತ್ತವೆ. 26ನೆ ಪ್ರಕರಣದಲ್ಲಿ ಇಂಪ್ರೂವ್‌ಮೆಂಟ್ ಫಂಡಿನ ಬಾಬುಗಳೆಲ್ಲಾ ಸೂಚಿಸಲ್ಪಟ್ಟಿರುತ್ತವೆ ಮೈಸೂರು ಪಟ್ಟಣದ ಟ್ರಸ್ಟಿಗಳ ಬೋರ್ಡಿಗೆ ಸಾಲ ತೆಗದುಕೊಳ್ಳುವ ಅಧಿಕಾರಗಳಿಲ್ಲದಿರುವದು, ಮತ್ತು ಆ ಕಾರಣದಿಂದ ಹಣ ವಾಪಸು ಮಾಡುವ ಜವಾಬುದಾರಿಯೂ ಇಲ್ಲದಿರುವದು — ಈ ಸಂಗತಿಯು ಗಮನಿಸತಕ್ಕದ್ದಾಗಿದೆ ; ಪರಂತು 26ನೆ ಪ್ರಕರಣದಂತೆ ಗವರ್ನಮೆಂಟಿನವರಿಂದಲೂ ಮ್ಯುನಿಸಿಪಲ್ ಕಮ್ಮಿಷನಿನಿಂದಲೂ ಆಗಿಂದಾಗ್ಗೆ ಅವರ (ಬೋರ್ಡಿನ) ವಶಕ್ಕೆ ಕೊಡಲ್ಪಟ್ಟ ಹಣವನ್ನು ಸುಮ್ಮನೆ ಉಪಯೋಗಿಸುವದು ಬೋರ್ಡಿನ ಕೆಲಸವಾಗಿರುತ್ತೆ. ಆ ಫಂಡಿನ ಪ್ರಯೋಗದ ಸಮ್ಮಂಧವಾಗಿ ಹೇಳಬಹುದಾದ್ದೇನಂದರೆ, — ಗವರ್ನಮೆಂಟಿನವರಿಂದ ಮಾಡಲ್ಪಡಬೇಕಾಗಿರುವ ನೇಮಗಳಿಗೆ ಅನುಸಾರವಾಗಿ ಮುಂಗಡಗಳನ್ನು ಮನೆಕಟ್ಟುವ ಉದ್ದೇಶಗಳಿಗೋಸ್ಕರ, ಸರಿಯಾದ ಸಂದರ್ಭಗಳಲ್ಲಿ ಕೊಡುವ ಅಧಿಕಾರವು 27 (3)ನೆ ಪ್ರಕರಣದಂತೆ ಬೋರ್ಡಿಗೆ ಇರುವದಾಗುತ್ತೆ. ಲೆಕ್ಕಗಳನ್ನು ಮತ್ತು ಅವುಗಳ ತನಿಖೆ ಮಾಡುವದನ್ನು ಕುರಿತು ಇರುವ ನಿಯಮಗಳು ಸುಲಭ ಮಾಡಲ್ಪಟ್ಟಿರುತ್ತವೆ.

Vನೆ ಅಧ್ಯಾಯವು (ಪ್ರಕರಣಗಳು 34ರಿಂದ 36ವರಿಗೆ) ಗವರ್ನಮೆಂಟಿನವರಿಂದ ಬೋರ್ಡಿನ ತಾಬೆಗಾಗಿ ಕೊಡಲ್ಪಟ್ಟವರೊಂದಿಗಿರುವ ಬೋರ್ಡಿನ ಉದ್ಯೋಗಸ್ಥರನ್ನು ಮತ್ತು ಸೇವಕರನ್ನು ಕುರಿತು ಇದೆ.

VIನೆ ಅಧ್ಯಾಯವು (37ನೆ ಪ್ರಕರಣ) ಯಾವ ವಿದ್ಯಮಾನಗಳಲ್ಲಿ ಬೋರ್ಡನ್ನು ಅಗಲಿಸಬೇಕಾದ್ದು ಅವಶ್ಯವಾಗುತ್ತೋ ಅವುಗಳನ್ನು ಕುರಿತು ಇದೆ. (ಹಾಗಂದರೆ, ಅವರಿಂದ ನೆರವೇರಿಸಲ್ಪಡುವದಕ್ಕೋಸ್ಕರ ಮಂಜೂರಾದ ಉತ್ತಮಪಡಿಸುವ ಉಪಾಯಗಳೆಲ್ಲಾ ವಾಸ್ತವಿಕವಾಗಿ ಪೂರಯಿಸಲ್ಪಟ್ಟಾಗ ;) ಮತ್ತು ಬೋರ್ಡಿನ ಆಸ್ತಿ ಮತ್ತು ಸಾಲಗಳಿಗೆ ಯಾರು ಉತ್ತರಾಧಿಕಾರಿ ಆಗಬೇಕೆಂಬುವದು, ಸ್ವತ್ತಿನ ವಿಲೇವಾರಿ ಮತ್ತು ನಿರ್ವಾಹ, ಅಪೂರ್ಣವಾಗಿರುವ ಕೆಲಸಗಳನ್ನು ಪೂರಯಿಸುವದು, ಇವುಗಳೇ ಮುಂತಾದ ಸಂದರ್ಭವಶವಾದ ವಿವಿಧ ಸಂಗತಿಗಳಿಗು ಕೂಡ ಇದರಲ್ಲಿ ಏರ್ಪಡಿಸಿರುತ್ತೆ.

VIIನೆ ಅಧ್ಯಾಯವು (ಪ್ರಕರಣಗಳು 38ರಿಂದ 46 ವರಿಗೆ) ನೇಮಗಳು, ಒಳನಿಬಂಧನೆಗಳು, ದಂಡನೆಗಳು ಮುಂತಾದ್ದನ್ನು ಕುರಿತು ಇದೆ. ಇದರಲ್ಲಿರುವ ಪದ್ಧತಿಪ್ರಕಾರವಾದ ನಿಯಮಗಳಿಗೆ ಪ್ರತ್ಯೇಕವಾದ ಸ್ಪಷ್ಟೀಕರಣವು ಅಗತ್ಯವಿರುವದಿಲ್ಲ. ಪರಂತು, ಮನೆ ಕಟ್ಟುವ ವಿಷಯದಲ್ಲಿ ಸರಿಯಾದ ನೇಮಗಳನ್ನು ಮಾಡುವದಕ್ಕಾಗಿ ಬೋರ್ಡಿಗೆ ಅಧಿಕಾರ ಕೊಡುವ 39 (1)ನೆ ಪ್ರಕರಣದ (*e*) ಕಲಮು ಮತ್ತು ಬೋರ್ಡಿಗೆ ಸಲ್ಲತಕ್ಕ ಹಣಗಳನ್ನು ವಸೂಲು ಮಾಡುವ ವಿವಿಧ ವಿಧಾನಗಳ ವಿಷಯವಾಗಿರುವ 45ನೆ ಪ್ರಕರಣವು, — ಇವೆರಡೂ ಅವಧಾನಯೋಗ್ಯವಾಗಿರುತ್ತವೆ.